
ಸಾಹಿತ್ಯ ಪರಿಚಾರಕ

ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಅಭಿನಂದನಾ ಗ್ರಂಥ

ಪ್ರಧಾನ ಸಂಪಾದಕರು : **ಡಾ. ಟಿ.ವಿ. ರಾಜು**
ಸಂಪಾದಕರು : **ಬಿ.ಕೆ. ಗೋಪಣ್ಣ**



ಸಾಹಿತ್ಯ ಪರಿಚಾರಕ

ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಅಭಿನಂದನಾ ಗ್ರಂಥ

ಪ್ರಧಾನ ಸಂಪಾದಕರು :

ಡಾ. ಟಿ. ವಿ. ರಾಜು

ಸಂಪಾದಕರು :

ಪ್ರೊ. ಬಿ. ಕೆ. ಗೋಪಣ್ಣ

ಪ್ರಕಾಶಕರು :

ಸಾಹಿತ್ಯ ಪರಿಚಾರಕ ಪ್ರೊ. ಜಿ. ಅಶ್ವತ್ಥನಾರಾಯಣ ಅಭಿನಂದನಾ ಸಮಿತಿ

ನಂ. ೬೩೭, 16ನೇ ಎ ಮುಖ್ಯರಸ್ತೆ, ೬ನೇ ಟಿ ಬ್ಲಾಕ್, ಜಯನಗರ

ಬೆಂಗಳೂರು ೫೬೦೦೪೧

'Sahithya Paricharaka' Pro. G. Ashwathanarayana Felicitation volume

Chief Editor	:	**Dr. T.V. Raju**
Editor	:	**Pro. B. K. Gopanna**
Published by	:	**Pro. G. Ashwathanarayana Felicitation committee**
		No. 436, 16th A Main , 4th T Block Jayanagar, Bengaluru 560041

'ಸಾಹಿತ್ಯ ಪರಿಚಾರಕ' ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಅಭಿನಂದನಾ ಗ್ರಂಥ

ಪ್ರಧಾನ ಸಂಪಾದಕರು	:	**ಡಾ. ಟಿ.ವಿ. ರಾಜು**
ಸಂಪಾದಕರು	:	**ಪ್ರೊ. ಬಿ. ಕೆ. ಗೋಪಣ್ಣ**
ಪ್ರಕಾಶಕರು	:	**ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಅಭಿನಂದನಾ ಸಮಿತಿ,**
		ನಂ. 436, 16ನೇ ಎ ಮುಖ್ಯರಸ್ತೆ, ೪ನೇ ಟಿ ಬ್ಲಾಕ್, ಜಯನಗರ,
		ಬೆಂಗಳೂರು-೫೬೦೦೪೧
ಪ್ರಥಮ ಮುದ್ರಣ	:	2026
ಪ್ರತಿಗಳು	:	600
ಪುಟಗಳು	:	**xii + 548**
ಬಳಸಿದ ಕಾಗದ	:	೭೦ ಜಿ.ಎಸ್.ಎಂ. ಎನ್.ಎಸ್. ಮ್ಯಾಪ್‌ಲಿಥೋ
ಹಕ್ಕುಸ್ವಾಮ್ಯ	:	ಕಾಯ್ದಿರಿಸಿದೆ.
ಅಳತೆ	:	ಕ್ರೌನ್ ೧/೪
ಬೆಲೆ	:	೧೦೦೦/ – ರೂ.ಗಳು
ರಕ್ಷಾಪುಟ	:	**ರಾಘವೇಂದ್ರ ನಾದೂರು**
First Edition	:	2026
Copies	:	600
Pages	:	**xii + 548**
Price	:	Rs. 1000/–
Paper Used	:	70 GSM NS Maplitho
Size	:	Crown 1/4
Copy Rights	:	Reserved
Cover Paege design	:	**Raghavendra Nadur**
ಮುದ್ರಕರು	:	**ದೀಪ್ತಿ ಪ್ರಿಂಟರ್ಸ್**
		ನಂ. 15, ಕನಕ ಕಾಂಪ್ಲೆಕ್ಸ್ , ಬನಶಂಕರಿ ಮೊದಲ ಹಂತ
		ಶ್ರೀನಿವಾಸನಗರ, ಬೆಂಗಳೂರು ೫೬೦೦೧೭
		ಇ–ಅಂಚೆ :deepthiprinters@yahoo.co.in
		ದೂರವಾಣಿ : 9980 34493

‘ಸಾಹಿತ್ಯ ಪರಿಚಾರಕ; ಪ್ರೊ. ಜಿ. ಅಶ್ವತ್ಥನಾರಾಯಣ ಅಭಿನಂದನಾ ಸಮಿತಿ

ಪೂಜ್ಯ ಸ್ವಾಮಿ ವೀರೇಶಾನಂದ ಸರಸ್ವತಿ
ಗೌರವ ಮಾರ್ಗದರ್ಶಕರು

ಡಾ॥ ನಾಡೋಜ ವೂಡೇ ಪಿ. ಕೃಷ್ಣ
ಅಧ್ಯಕ್ಷರು

ಡಾ॥ ಟಿ. ವಿ. ರಾಜು
ಉಪಾಧ್ಯಕ್ಷರು

ಪ್ರೊ. ಬಿ. ಕೆ. ಗೋಪಣ್ಣ
ಉಪಾಧ್ಯಕ್ಷರು

ಸದಸ್ಯರು

ಡಾ॥ ಟಿ.ಆರ್. ಅನಂತರಾಮು
ಡಾ॥ ಕೆ. ಶೇಷಮೂರ್ತಿ
ಶ್ರೀ ಎನ್. ರಾಮನಾಥ್
ಶ್ರೀ ಜಿ.ಪಿ. ರಾಮಣ್ಣ
ಶ್ರೀ ಬಿ.ಕೆ. ನಾಗೇಶ್
ಡಾ॥ ವಿ. ಗಾಯತ್ರಿ
ಡಾ. ರುಕ್ಮಿಣಿ ರಘುರಾಂ
ಶ್ರೀಮತಿ ಜಮುನಾ ರಮೇಶ್
ಶ್ರೀ ಎಚ್. ಕರಣ್ ಕುಮಾರ್
ಡಾ॥ ಎಸ್. ಗುರುಮೂರ್ತಿ
ಶ್ರೀ ಎಚ್. ಫಲ್ಗುಣ
ಶ್ರೀ ಎಸ್. ಮುರಳಿ ಮೋಹನ್
ಶ್ರೀ ರವಿಶಂಕರ್ ಸುರೇಶ್
ಡಾ॥ ಕ್ಷಮಾ ಅಶ್ವತ್ಥ
ಶ್ರೀಮತಿ ಶೀಲಾದೇವಿ ಎಸ್. ಮಳೀಮಠ್

'ಸಾಹಿತ್ಯ ಪರಿಚಾರಕ' ಪ್ರೊ. ಜಿ. ಅಶ್ವತ್ಥನಾರಾಯಣ ಅಭಿನಂದನಾಗ್ರಂಥ ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

ಡಾ. ಟಿ. ವಿ. ರಾಜು

ಸಂಪಾದಕರು

ಪ್ರೊ. ಬಿ. ಕೆ. ಗೋಪಣ್ಣ

ಸದಸ್ಯರು

ಶ್ರೀ ಬಿಳಿಗಿರಿವಾಸನ್ ಎಸ್.

ಪ್ರೊ. ಬಿ. ಶಂಕರಲಿಂಗೇಗೌಡ

ಶ್ರೀ ನರಸಿಂಹಮೂರ್ತಿ ಟಿ.ಜಿ.

ಡಾ. ಮಂಜುನಾಥ್ ಎಸ್ ಎಲ್

ಶ್ರೀ ಚಂದ್ರಶೇಖರ ನಾದೂರ್

ಡಾ. ಗೌರೀಶ್

ಡಾ. ಶಾಂತರಾಜು

ಶ್ರೀ ನರಸಿಂಹಮೂರ್ತಿ ಜಿ.ಎನ್.

ಸಂಪಾದಕೀಯ

"ಕಾನನದಿ ಮಲ್ಲಿಗೆಯು ಮೌನದಿಂ ಬಿರಿದು ನಿಜ ಸೌರಭವ ಸೂಸುವಂತೆ" ಎಂಬ ಡಿ. ವಿ. ಗುಂಡಪ್ಪನವರ ಮಾತಿನಂತೆ ಕನ್ನಡ ಸಾರಸ್ವತ ಲೋಕದಲ್ಲಿ ಎಲೆಮರೆಯ ಕಾಯಿಯಂತೆ ಅರ್ಧ ಶತಮಾನಕ್ಕೂ ಮಿಗಿಲಾಗಿ ಕನ್ನಡ ಸಾಹಿತ್ಯ ಕೃಷಿ ಮಾಡುತ್ತಿರುವವರೇ ಪ್ರೊಫೆಸರ್ ಜಿ. ಅಶ್ವತ್ಥನಾರಾಯಣ. ಅವರು ಕಲುಷಿತವಾಗದ ಸಾಮಾಜಿಕ ವಾತಾವರಣ ಇದ್ದ ಚಾಮರಾಜಪೇಟೆಯಲ್ಲಿ ಗೆಳೆಯರ ಸತ್ಸಂಗದಲ್ಲಿ ಬಾಲ್ಯವನ್ನು ಕಳೆದವರು. ಬಡಾವಣೆಯಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತು ಅವರ ಆಡುಂಬೊಲವಾಯಿತು. ಸಾಹಿತ್ಯದ ಮೇರು ಶಿಖರಗಳಾದ ಡಿವಿಜಿ, ಮಾಸ್ತಿ, ವಿ. ಸೀ., ದೇವುಡು ಮೊದಲಾದವರ ಹಿತವಾದ ಮಾತುಗಳು ಅಶ್ವತ್ಥನಾರಾಯಣ ಅವರನ್ನು ಕನ್ನಡ ಸಹಿತ್ಯದ ಕಿಂಕರನನ್ನಾಗಿ ರೂಪಿಸಿತು. ವಿದ್ಯಾಭ್ಯಾಸದ ಜೊತೆ ಜೊತೆಯಲ್ಲಿಯೇ ಕನ್ನಡಪರ ಹೋರಾಟ ಮಾಡಬೇಕೆಂಬ ಕಿಚ್ಚು ಮೈದಾಳಿತು.

ಕನ್ನಡ ಉಪನ್ಯಾಸಕರಾಗಬೇಕೆಂಬ ಅನಾಜಿಯವರ ಮಹದಾಸೆ ಒಂದು ಹೋರಾಟಕ್ಕೆ ನಾಂದಿಯಾಯಿತು. ಅವರು ಉಪನ್ಯಾಸಕರಾಗಿ ಅಸಂಖ್ಯಾತ ಶಿಷ್ಯರನ್ನು ಸಂಪಾದಿಸಿದ್ದಾರೆ. ಕನ್ನಡಕ್ಕಾಗಿ ಮನ ಮಿಡಿಯುವ ಯುವ ಪಡೆಯನ್ನೇ ಕಟ್ಟಿದ್ದಾರೆ. ಸದ್ದಿಲ್ಲದೆ ನಡೆಯುವ ಇವರ ಸೇವೆ ಬಹುಮುಖವಾದುದು. ಆದ್ದರಿಂದಲೇ ಇವರ ಸಾಹಿತ್ಯ ಗರಡಿಯಲ್ಲಿ ಪಳಗಿ ಬೆಳೆದವರು ಇಂದು ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಆಡಳಿತ ಹಾಗೂ ವೈಜ್ಞಾನಿಕ ಕ್ಷೇತ್ರಗಳಲ್ಲಿ ಹೆಸರು ಮಾಡಿದ್ದಾರೆ. ವಿದೇಶಗಳಲ್ಲಿಯೂ ತಮ್ಮ ಬಾಹುಳ್ಯವನ್ನು ಪಸರಿಸಿದ್ದಾರೆ. ಇವೆಲ್ಲ ನೋಡುತ್ತಿದ್ದರೆ ಅಶ್ವತ್ಥನಾರಾಯಣ ಅವರು ಶಿಕ್ಷಕರಾಗಿ ಮುವ್ವತ್ತು ವಸಂತಗಳ ಸಾರ್ಥಕ ಬದುಕಿನೊಡನೆ ನಿವೃತ್ತರಾದ ನಂತರ ಮತ್ತೆ ಮೂರು ದಶಕಗಳು ಕನ್ನಡ ತಾಯಿ ಭುವನೇಶ್ವರಿಯ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡು ಹಲವಾರು ಮೈಲಿಗಲ್ಲುಗಳನ್ನು ನಿರ್ಮಿಸಿದ್ದಾರೆ.

ಈ ಎಲ್ಲಾ ಸಾಧನೆಗಳ ಹಿಂದೆ ಕಹಿಯಾದ ಅನುಭವಗಳು ಆಗಿರುವುದು ದಿಟವಾದರೂ ಅವು ಯಾವುವೂ ಬೆಳಕಿಗೆ ಬರಲಿಲ್ಲ. ಅವರ ಸಾಧನೆಗೆ ಸರ್ಕಾರ ಸಂಘ–ಸಂಸ್ಥೆಗಳಿಂದ ದೊರೆಯಬೇಕಾಗಿದ್ದ ಗೌರವ ದೊರೆಯದಿರುವುದು ವಿಷಾದನೀಯ. ಎಷ್ಟು ಮಂದಿ ಅನಾಜಿ ಎಂಬ ಆಯಸ್ಕಾಂತದ ಪ್ರಭಾವಕ್ಕೆ ಸಿಲುಕಿ ತಾವು ಮಾಡಬೇಕೆಂದಿದ್ದ ಸಾಹಿತ್ಯ ಸಾಧನೆಗಳನ್ನು ಅತಿ ಸುಲಭವಾಗಿ ಮಾಡಿಕೊಂಡಿದ್ದಾರೆ. ಸಮಾಜದಲ್ಲಿ, ಸೇವಾ ಕ್ಷೇತ್ರದಲ್ಲಿ ಉನ್ನತ ಸ್ಥಾನ ಪಡೆದಿದ್ದಾರೆ. ಆದರೆ ಅನಾಜಿ ಅವರು ಮಾತ್ರ ಯಾವ ಬದಲಾವಣೆಯನ್ನೂ ನಿರೀಕ್ಷಿಸದೆ ತದೇಕಚಿತ್ತದಿಂದ ಎಂದಿನಂತೆ ಕಾರ್ಯಪ್ರವೃತ್ತರಾಗಿ ಮುಂದುವರಿದಿದ್ದಾರೆ. ಮತ್ತೊಂದು ಸಂತೋಷದ ವಿಷಯವೆಂದರೆ ಇವರ ಪ್ರಭಾವಕ್ಕೆ ಒಳಗಾದ ಸಮಾನಮನಸ್ಕರಾದ ಗೆಳೆಯರು, ಹಿತೈಷಿಗಳು ಹಾಗೂ ವಿದ್ಯಾರ್ಥಿಗಳು ಸೇರಿ ಅನಾಜಿ ಅವರಿಗೆ ಒಂದು ಅಭಿನಂದನಾ ಸಮಾರಂಭ ಏರ್ಪಡಿಸಿ ಒಂದು ಗೌರವ ಗ್ರಂಥವನ್ನು ಅರ್ಪಿಸುವ ತೀರ್ಮಾನವನ್ನು ಮಾಡಿದರು. ಅನಾಜಿ ಅವರ ಒಪ್ಪಿಗೆಯ ಮೇರೆಗೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು.

ಪ್ರಧಾನ ಸಂಪಾದಕರಾದ ಡಾ. ಟಿ. ವಿ. ರಾಜು ಅವರ ಅಧ್ಯಕ್ಷತೆಯಲ್ಲಿ ನಡೆದ ಮೊದಲ ಸಭೆಯಲ್ಲಿಯೇ ಅಭಿನಂದನಾ ಗ್ರಂಥದ ರೂಪರೇಷೆಗಳ ಬಗ್ಗೆ ಚರ್ಚಿಸಿ ತೀರ್ಮಾನ ಮಾಡಲಾಯಿತು.

ನಾಡಿನ ಪ್ರಖ್ಯಾತ ಸಾಹಿತಿಗಳಿಂದ, ಅನಾಜಿ ಅವರ ಒಡನಾಡಿಗಳಿಂದ, ಹಿತೈಷಿಗಳಿಂದ, ವಿದ್ಯಾರ್ಥಿಗಳಿಂದ ಹಾಗೂ ಕುಟುಂಬವರ್ಗದವರಿಂದ ಲೇಖನಗಳು ತಂಡೋಪತಂಡವಾಗಿ ಬರತೊಡಗಿದವು. ಸ್ವೀಕರಿಸಿದ ಲೇಖನಗಳನ್ನು ವ್ಯಕ್ತಿತ್ವ, ಕೃತಿಸಮೀಕ್ಷೆ, ಕುಟುಂಬ ಹಾಗೂ ಸಂದರ್ಶನಗಳೆಂಬ ವಿಭಾಗಗಳಲ್ಲಿ ಅಳವಡಿಸಿದೆ. ಜೊತೆಗೆ ಚಿತ್ರ ಸಂಪುಟವೂ ಸೇರಿ ಈ ಗ್ರಂಥದಲ್ಲಿ ಐದು ವಿಭಾಗಗಳನ್ನು ಕಾಣಬಹುದು.

ವ್ಯಕ್ತಿತ್ವ ವಿಭಾಗದ ಲೇಖನಗಳು ಗೆಳೆಯರು ವಿದ್ಯಾರ್ಥಿಗಳು ಸಹೋದ್ಯೋಗಿಗಳು ಹಾಗೂ ಹಿತೈಷಿಗಳಿಂದ ಬಂದವು. ಲೇಖನಗಳನ್ನು ಓದುತ್ತಿದ್ದರೆ ಒಂದೊಂದು ಸಲ ಚರ್ವಿತ ಚರ್ವಣ ಎನಿಸಬಹುದು. ಆದರೆ ಅವರ ಅನಿಸಿಕೆಗಳು ಪ್ರೀತಿ ವಿಶ್ವಾಸ ಗೌರವಗಳಿಂದ ಮೂಡಿಬಂದಿವೆ. ಶಿಷ್ಯರಿಗೆ ಗುರುಗಳಾಗಿ, ಸಂಶೋಧಕರಿಗೆ ಮಾರ್ಗದರ್ಶಕರಾಗಿ, ಪ್ರಕಾಶಕರಿಗೆ ಸಂಪಾದಕರಾಗಿ, ಲೇಖಕರಿಗೆ ವಿಮರ್ಶಕರಾಗಿದ್ದಂತಹ ಹಲವು ಸಂದರ್ಭಗಳ ಒಡಟನಾಟ, ಸಂಬಂಧಿಸಿದವರಲ್ಲಿ ಮೂಡಿಸಿದ ಆತ್ಮೀಯ ಭಾವನೆಗಳು ಇಲ್ಲಿ ಬರಹಗಳ ರೂಪ ತಾಳಿವೆ.

ಕೃತಿ ವಿಮರ್ಶೆ ಕುರಿತ ಲೇಖನಗಳಲ್ಲಿ ರಚನಕಾರರ ಮನದಾಳದ ಮಾತು ಲಿಪಿಯ ರೂಪ ಪಡೆದು ಅರಳಿ ನಿಂತಿದೆ. ಒಂದೆರಡು ಕೃತಿಗಳ ಬಗ್ಗೆ ಹಲವಾರು ಲೇಖಕರ ಅಭಿಪ್ರಾಯಗಳೂ ಇಲ್ಲಿವೆ. ಜೈನ, ಬೌದ್ಧ, ದಾಸಸಾಹಿತ್ಯಗಳ ಹಾಗೂ ವೀರಶೈವ ಸನಾತನ ಧರ್ಮದ ಕುರಿತಾದ ಸಾಹಿತ್ಯ ಕೃತಿಗಳ ಬಗ್ಗೆ ಬರೆದಿರುವ ವಿಮರ್ಶಾತ್ಮಕ ಬರಹಗಳು ಮೂಲ ಕೃತಿಗಳನ್ನು ಓದಲು ಪ್ರೇರೇಪಿಸುವಂತೆ ಇವೆ. ಕುಟುಂಬವನ್ನು ಪ್ರತಿನಿಧಿಸುವ ಲೇಖನಗಳಲ್ಲಿ ಅವರ ಧರ್ಮಪತ್ನಿ ಪ್ರೊಫೆಸರ್ ಲಕ್ಷ್ಮೀದೇವಿ, ಮಗಳು ಕ್ಷಮಾ ಅವರ ಲೇಖನಗಳು ಸೇರಿವೆ. ಅನಾಜಿಯವರ ಶ್ರೀಮತಿಯವರು 'ಬಾಳ ಸಖನೊಡನೆ ಅರ್ಧ ಶತಮಾನ' ಎಂಬ ಲೇಖನದಲ್ಲಿ ಅನಾಜಿ ಅವರ ದಿನನಿತ್ಯದ ಕಾರ್ಯಕ್ರಮಗಳನ್ನು ನಿರೂಪಿಸಿದಂತೆ ಭಾಸವಾಗುತ್ತದೆ. ಸಾಹಿತಿಗಳಾಗಿ ಅತ್ತೆಯ ಮನೆ ಪ್ರವೇಶಿಸಿದ ಅನಾಜಿ ಅವರು, ಆ ಮನೆಯ ಅಳಿಯಂದಿರಾದ ಪ್ರಸಂಗವನ್ನು ತುಂಬಾ ಚೆನ್ನಾಗಿ ತಿಳಿಸಿದ್ದಾರೆ. ದಂಪತಿಗಳಿಬ್ಬರೂ ಕನ್ನಡ ಉಪನ್ಯಾಸಕರಾಗಿದ್ದು ದೂರದ ಅಮೆರಿಕದಲ್ಲಿ ಕನ್ನಡ ಹಬ್ಬವನ್ನು ಆಚರಿಸಿದ್ದಾರೆ. ಭಗವಂತ ಸರಸ್ವತಿ ರೂಪದಲ್ಲಿ ತಮ್ಮ ಮನೆಯಲ್ಲಿರುವುದನ್ನು ಹಾಸ್ಯ ಲೇಪನ ಮಾಡಿ ಹೇಳಿರುವುದು ಮನೋಹರವಾಗಿದೆ. ಮಗಳಾದ ಕ್ಷಮಾ ಬಾಲ್ಯದಲ್ಲಿ ತಂದೆ ತಾಯಿಯ ಪ್ರೀತಿಯ ಅಪ್ಪುಗೆಯಲ್ಲಿ ಬೆಳೆದ ಬಗೆ ದೂರದ ಅಮೆರಿಕದಲ್ಲಿ ನನಗೆ ಯಾವ ರೀತಿ ಸಹಾಯ ಮಾಡಿತು ಎಂಬುದನ್ನು ಮನಮುಟ್ಟುವಂತೆ ವಿವರಿಸಿದ್ದಾಳೆ. ಕುಟುಂಬದ ವರ್ಗದ ಇತರ ಲೇಖನಗಳನ್ನು ಕಣ್ಣಾಡಿಸಿದಾಗ ಮದುವೆಯಾಗುವ ಮೊದಲು ಅತ್ತೆ ಅವರಿಗೆ ಮಾತ್ರ ಸಾಹಿತಿಗಳಾಗಿದ್ದು ಅನಂತರ ಕುಟುಂಬದ ಸದಸ್ಯರಿಗೆಲ್ಲ ಸಾಹಿತಿಯಾಗಿದ್ದಾರೆ ಎಂಬ ಅಭಿಪ್ರಾಯ ಓದುಗರಲ್ಲಿ ಮೂಡದೆ ಇರುವುದಿಲ್ಲ.

ಈ ಗ್ರಂಥದಲ್ಲಿ ಮೂರು ಸಂದರ್ಶನಗಳನ್ನು ಕಾಣಬಹುದು. ಅವುಗಳಲ್ಲಿ ಶ್ರೀ ಎಂ. ಕೆ. ಗೋಪಿನಾಥ್ ಅವರು ಅನಾಜಿ ಪುಸ್ತಕ ಲೋಕ, ಮಂಜುನಾಥ್ ಅವರೊಡನೆ ಶಿಕ್ಷಣ ಒಂದು ಸಂವಾದ, ಚಿಂತನ ಹಾಗೂ ಶ್ರೀ ಜಿ. ಪಿ. ರಾಮಣ್ಣ ಅವರ ಪತ್ರಿಕಾ ವರದಿಗಳನ್ನು ಕಾಣಬಹುದು. ಅನಾಜಿ ಅವರ ಜೀವನದ ವಿವಿಧ ಘಟ್ಟಗಳಲ್ಲಿ ಚಿತ್ರಿತವಾಗಿರುವ ಆಪ್ಯಾಯಮಾನ ಚಿತ್ರ ಸಂಪುಟವನ್ನು ಕಾಣಬಹುದು.

ಸದ್ದಿಲ್ಲದ ಸಾಧಕನ ಕನ್ನಡ ನುಡಿ ಸೇವೆಯನ್ನು ಅಭಿಮಾನಿಗಳು ಹಿತೈಷಿಗಳು ಎಲ್ಲರೂ ತುಂಬು ಹೃದಯದಿಂದ ಆಸ್ವಾದಿಸುತ್ತೀರಿ ಎಂಬ ಅನಿಸಿಕೆ ನಮ್ಮದು.

ಸಂಪಾದಕ ಮಂಡಲಿ

ಪರಿವಿಡಿ

ವ್ಯಕ್ತಿತ್ವ

ಆಪ್ತ ಮಿತ್ರರು

ಕೃತಿ ಸಮೀಕ್ಷೆ

ಕುಟುಂಬ

ಸಂದರ್ಶನ

ಚಿತ್ರ ಸಂಪುಟ

ವ್ಯಕ್ತಿತ್ವ

॥ಶ್ರೀ ರಾಮಕೃಷ್ಣ ಪ್ರಸನ್ನ॥

ಹೃದಯಾಂತರಾಳದ ನುಡಿಗಳು

11-12-2025

ಶ್ರೀಮಾತೆ ಶ್ರೀಶಾರದಾದೇವಿ ಜಯಂತಿ

ಸಹೃದಯರಾದ ಪ್ರೊ॥ ಜಿ. ಅಶ್ವತ್ಥನಾರಾಯಣರವರ ಕುರಿತಾದ 'ಅಭಿನಂದನಾ ಗ್ರಂಥ'ವು ಲೋಕಾರ್ಪಣೆಗೊಳ್ಳುತ್ತಿರುವುದು ಸ್ತುತ್ಯರ್ಹ ಸಂಗತಿ. ಆರು ದಶಕಗಳಿಗೂ ಮೀರಿದ ಶ್ರೀಯುತರ ಸಾಹಿತ್ಯಕೃಷಿ ಕಾರ್ಯವು ನಿರೀಕ್ಷೆ ದಾಟಿ ಸಾರ್ಥಕ್ಯ ಕಂಡಿದೆ, ಧನ್ಯತೆಯ ಶ್ರೀಮಂತಿಕೆ ಅವರ ಅಂತರಂಗವನ್ನು ಸ್ಪರ್ಷಿಸಿದೆ.

ಚತುರ್ಮುಖ ಬ್ರಹ್ಮನ ಸ್ವರೂಪದಂತೆ ಶ್ರೀ ಅಶ್ವತ್ಥನಾರಾಯಣರದ್ದು ವೇದಾಂತ ಸಾಹಿತ್ಯ, ದಾಸ ಸಾಹಿತ್ಯ, ಜೈನ ಸಾಹಿತ್ಯ ಹಾಗೂ ವಚನ ಸಾಹಿತ್ಯದ ಕ್ಷೇತ್ರಗಳಲ್ಲಿ ವೈಶಿಷ್ಟ್ಯಪೂರ್ಣ ಸೇವೆ ಎಂದೆನಿಸಿದೆ. ಗೌರವಾನ್ವಿತರಾದ ಕೀರ್ತಿಶೇಷ ಬಿ. ಎಂ. ಶ್ರೀ.ರವರು ಹೇಳಿದ್ದುಂಟು: 'ಜನರಿಗೆ ಹಿರಿಯರಿಂದ ಬರುವ ಆಸ್ತಿಗಳಲ್ಲಿ ಭಾಷೆಯೂ ಒಂದು; ಅದು ಚೆನ್ನಾಗಿದ್ದಷ್ಟೂ ಭೂಷಣ'. ಪ್ರಸ್ತುತ ಸಮಾಜವನ್ನು ಅವಲೋಕಿಸಿದಾಗ, ಭಾಷಾಶ್ರೀಮಂತಿಕೆಯ ಮಾತಂತಿರಲಿ, ಶುದ್ಧ ಬರವಣಿಗೆ, ಸ್ಪಷ್ಟ ಉಚ್ಚಾರ – ಮುಂತಾದ ವಿಚಾರಗಳು 'ತುಟ್ಟಿ' ಆಗಿರುವ ಸಂದರ್ಭದಲ್ಲಿ ಕನ್ನಡ ಸಾರಸ್ವತ ಲೋಕಕ್ಕೆ ಪ್ರೊ॥ ಅಶ್ವತ್ಥನಾರಾಯಣರು ಬಾಯಾರಿ ಬಳಲಿ ಬೇಡಾದದರ ಪಾಲಿಗೆ ಮರಳು ಕಾಡಿನಲ್ಲಿ ದೊರೆತ ಓಯಸಿಸ್ ಇದ್ದಂತೆ!

ಶ್ರೀಯುತರು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ-ಸಂಸ್ಕೃತಿ ಇಲಾಖೆಗೆ ನೀಡಿದ ಸೇವೆ ಅಪೂರ್ವವಾದದ್ದು. ನಮ್ಮೆಲ್ಲರ ಹೆಮ್ಮೆಯ ಸಂಸ್ಥೆಗಳಿಂದ ಕರ್ನಾಟಕ ಗಾನಕಲಾ ಪರಿಷತ್ ಮತ್ತು ಗಮಕಕಲಾ ಪರಿಷತ್ತಿನ ಸ್ಥಾಪಕ ಸದಸ್ಯರಾಗಿ ಶ್ರಮಿಸಿ ಅಂಬೆಗಾಲಿಡುತ್ತಿದ್ದ ಸಂಸ್ಥೆಗಳಿಗೆ 'ಸ್ವತಂತ್ರ ನಡಿಗೆ'ಯ ಸಾಮರ್ಥ್ಯ ದೊರಕಿಸಿ ಕೊಟ್ಟ ಮಹಾತ್ಮರು.

ಶ್ರೀಯುತರು ಕನ್ನಡ ಭಾಷಾಶಾಸ್ತ್ರ, ಸಮಾಜಶಾಸ್ತ್ರ, ಶಾಸನಶಾಸ್ತ್ರಗಳಷ್ಟೇ ಅಲ್ಲದೆ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲೂ ನುರಿತ ನರ್ತಕರು! ತಮ್ಮ ಕಾರ್ಯಕ್ಷೇತ್ರದಲ್ಲಿ ಎಂದೂ ತಪ್ಪು ಹೆಜ್ಜೆ ಹಾಕಿದವರಲ್ಲ!!

ಶ್ರೀಯುತರು ನೀಡಿದ ಸಾಹಿತ್ಯ ಸೇವೆ ವಿಭಿನ್ನ ಹಾಗೂ ಅಪೂರ್ವ ಕನ್ನಡ ಸಾಹಿತ್ಯ ದಿಗ್ಗಜರು ಮೊದಲ್ಗೊಂಡು 'ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು' ಮೊದಲಾದ ಗ್ರಂಥಗಳಲ್ಲಿ 'ನನಗೆ ಸಾಹಿತಿಗಳ ಸವಿನೆನಪುಗಳು ನಿಮಗೆ ರಸಪ್ರಸಂಗಗಳು' ಎಂದೆನಿಸಿವೆ. 'ವಿದ್ಯಾರ್ಥಿಗಳಿಗಾಗಿ ಡಿವಿಜಿ ಕಗ್ಗದ

ಪದ್ಯಗಳು', 'ಎಲ್ಲರಿಗೂ ಬೇಕಾದ ಗಾದೆಗಳು' ಮೊದಲಾದವು ಸಾಮಾನ್ಯ ಬದುಕನ್ನು ವಿಶೇಷವಾಗಿಸುವಲ್ಲಿ ಅವರ ಅಪೂರ್ವ ಪ್ರಯತ್ನ ಎಂದೆನಿಸಿದೆ. 'ಗೀತೆಯ ತಿರುಳು' ಮತ್ತು 'ಸೌಂದರ್ಯಲಹರಿ ದೀಪಿಕೆ' ಎಂಬ ಪುಸ್ತಕಗಳೊಂದಿಗೆ ಓದುಗರಿಗೆ ಊರುಗೋಲಿನಂತೆ ಬುಕ್ಕಾಂಬುಧಿ ಪ್ರಾದೇಶಿಕ ಕನ್ನಡ – ಇಂಗ್ಲಿಷ್ ಪದಕೋಶ ಮತ್ತು ಭಗವದ್ಗೀತೆಯ ಶಬ್ದಕೋಶವನ್ನೂ ನೀಡಿ ಮಹದುಪಕಾರ ಗೈದಿದ್ದಾರೆ.

ಪ್ರೊ|| ಅಶ್ವತ್ಥನಾರಾಯಣರಿಗೆ ಕನ್ನಡ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರೊ|| ಟಿ. ವಿ. ವೆಂಕಟಾಚಲಶಾಸ್ತ್ರೀ ವಿದ್ವತ್ ಪ್ರಶಸ್ತಿ, ಕುವೆಂಪು ಪ್ರಶಸ್ತಿ ಮೊದಲಾದವು ದೊರೆತಿರುವುದು ಕನ್ನಡ ಸಾರಸ್ವತ ಲೋಕಕ್ಕೆ ಧನ್ಯತೆಯನ್ನು ತಂದಿದೆ.

ಪ್ರಶಸ್ತಿಗಳ ವಿಷಯದಲ್ಲಿ ಸಾಧನಾ ಪಥದಲ್ಲಿ ಸಾಗುವ ಯೋಗ್ಯರು ತಲೆಕೆಡಿಸಿಕೊಳ್ಳುವುದಿಲ್ಲ! ಐತಿಹಾಸಿಕ ದೃಷ್ಟಾಂತದ ಉಲ್ಲೇಖ ಇಲ್ಲಿದೆ: A. E. Housman, the great scholar of Greek and Latin, a great poet, once failed in the papers on those very languages at the oxford university. His biographer Richards Comments, ''The Nightingale got a prize at the poultry show''.

ಪ್ರೊ|| ಅಶ್ವತ್ಥನಾರಾಯಣರ ಒಡನಾಟವು ನನಗೆ ಕಳೆದ ಸುಮಾರು ಎರಡು ದಶಕಗಳಿಂದಿದೆ. ಅದರೊಂದಿಗೆ ಕಳೆದ ಸಮಯವು ನನ್ನ ಬದುಕಿನಲ್ಲಿ ಸಾರ್ಥಕ ಕ್ಷಣಗಳಷ್ಟೇ ಅಲ್ಲದೆ ನನಗದು ಧನ್ಯತೆಯನ್ನಿತ್ತಿದೆ.

ಶ್ರೀಯುತರ ಸಾಹಿತ್ಯ ಕೃಷಿಯು ನೂರ್ಮಡಿಗೊಳ್ಳಲಿ, ಅದಕ್ಕೆ ಅತ್ಯವ್ಯಶಕವಾದ 'ಆರೋಗ್ಯಪೂರ್ಣ ಆಯಸ್ಸ'ನ್ನು ಭಗವಾನ್ ಶ್ರೀರಾಮಕೃಷ್ಣರು ಅನುಗ್ರಹಿಸಲೆಂದು ಹಾರೈಸುತ್ತೇನೆ.

ಪ್ರೀತಿಪೂರ್ವಕ ಶುಭಾಶಯಗಳು

ಇಂತಿ
ಶ್ರೀರಾಮಕೃಷ್ಣಸ್ಮರಣೆಗಳೊಂದಿಗೆ
ಸ್ವಾಮಿ ವೀರೇಶಾನಂದ

******

ಕವಿತೆ ೧- ಆದರಣೀಯ ಅನಾಜಿ

ಶತಾವಧಾನಿ ಆರ್.ಗಣೇಶ್
ಚರವಾಣಿ : ೯೪೪೯೦೮೯೪೯೮

ಹೆಗಲ ಮೇಗಡೆ ಚೀಲ; ಮೊಗದಲೆಲ್ಲೆಡೆ ಲೋಲ
ಮೈತ್ರಿಮೆರೆಯುವ ಹಾಸ, ಭಾಸ: ವಿಪುಲ
ನುಡಿಯೊಳಕ್ಕದೆ ಸಕ್ಕರೆಯ ಹರಳು, ಹಲ್ಲೆಗಳು
ಕಣ್ಣಲ್ಲಿ ಕನ್ನಡದ ಕೋಲ್ಮಿಂಚು ಬಳುಕು ॥ ೧ ॥

ಯಾವ ಕಾಲದ ಯಾವುದೇ ಹೊತ್ತಗೆಯ ಹಾಡು
ಹೊಮ್ಮುವುದು ಲಯ ತಪ್ಪದಂತೆ ಬೇಗ
ಕೇಳುಗರ ಮನದಣಿಗೆಯ ಮಾಹಿತಿಯ ವರಸೆಗಳು
ಸಂಗತಿ-ಸ್ವರಕಲ್ಪನೆಗಳು, ರಾಗ ॥ ೨ ॥

ಸಂಶೋಧನೆಯ ಕಾಡಿನಲ್ಲಿ ತಟ್ಪಾಡುವರ
ಕೈಹಿಡಿದು ನಡೆಯಿಸುವ ಕಾವಲು ಬಲ
ಗ್ರಂಥಗಳ ಹತ್ತಾರು ಆವೃತ್ತಿಗಳ ಸುತ್ತಿ
ಮತ್ತ ಮನೆ ಸೇರಿಸುವ ಮಾರ್ಗದರ್ಶಿ ॥ ೩ ॥

ಹಳೆಬೆಂಗಳೂರ ಹಳಿಗಳ ಮೇಲೆ ಕೇಳುಗರ
ಬಗೆಯ ಬೋಗಿಗಳನ್ನು ಸುತ್ತಿಸುತ್ತ
ನೆನಪುಗಳ ಹಸುರು ಬಾವುಟವನ್ನು ಬೀಸುತ್ತ
ಶಿಳ್ಳೆ ಹಾಕುವ, ವೇಳೆ ತಪ್ಪದೆಂಜಿನ್ ॥ ೪ ॥

ನಾರಣಪ್ಪನ ಷಟ್ಪದಿಗಳ ಪಾಠದ ಶುದ್ಧಿ,
ಹರಿದಾಸಗೀತೆಗಳ ಪಾಠಾಂತರ,
ಜೈನಕಥೆಗಳ ಹಾಸು-ಬೀಸುಗಳ ರಹದಾರಿ-
ಎಲ್ಲಕ್ಕೂ ಅಶ್ವತ್ಥಕಟ್ಟೆ ಹರಟೆ. ॥ ೫ ॥

ಪರಿಷತ್ತು, ಸಾಹಿತ್ಯ ಸಮ್ಮೇಳನ, ವಿಚಾರ-
ಗೋಷ್ಠಿ, ಬಿ.ಎಂ.ಶ್ರೀ ಪ್ರತಿಷ್ಠಾನ_ಹೀಗೆ

ಹತ್ತಾರು ಕನ್ನಡದ ಚಾವಡಿಗಳಲ್ಲಿ ನಗೆ-
ಮೊಗ ಮಿನುಗೆ ಮೆರೆಯುವ ಪಟೇಲಿಕೆ ಬಗೆ ॥ ೬ ॥

ಬಿಂಕ-ಬಿಗುಮಾನಗಳ ಬಿಸಿಯೆ ಸೋಕದ ತಂಪು
ಕೊಂಕು-ಕೊಸರಾಟವಿಲ್ಲದ ಕಾಳಜಿ
ತನ್ನದೆಂಬುವ ಹಮ್ಮು-ಬಿಮ್ಮುಗಳ ಕಹಳೆಯನು
ಎಂದಿಗೂ ಊದದ ಸಹೃದಯ ಶ್ರೋತೃ ॥ ೭ ॥

ಚಿಟ್ಟೆಕತೆಗಳ ಕಣಜ, ದಂತಕತೆಗಳ ಸಂತೆ,
ಜೋಕುಜೋಕಾಲಿಯಲಿ ಕುಳಿತ ಜೀವ
ಎಷ್ಟೆಷ್ಟು ಶಿಶಿರಗಳು ಮೇಲೆದ್ದು ಬಂದರೂ
ಚಿಗುರಿ ನಳನಳಿಸುತಿದೆ ಮರಳಿ ಅರಳಿ ॥ ೮ ॥

****

ಕವಿತೆ ೨- ಆಧುನಿಕ ಆಗಸ್ತ್ಯರಿಗೆ

ದೊಡ್ಡರಂಗೇಗೌಡ
ಚರವಾಣಿ : ೯೩೪೨೫೮೬೩೩೬೩

[ವಿನಯ್ ಫೌಂಡೇಶನ್, ಬೆಂಗಳೂರು ಇವರು ೧೧-೩-೨೦೧೮ರಂದು (ಭಾನುವಾರ) ಆರ್.ವಿ.ಎಂ. ಕಾಲೇಜಿನಲ್ಲಿ ನಡೆದ ಪ್ರಶಸ್ತಿ ಸಮಾರಂಭದಲ್ಲಿ ಅನಾಜಿ ಅವರಿಗೆ ವಿನಯಶ್ರೀ ಪ್ರಶಸ್ತಿ (೨೦೧೭) ನೀಡಿದಾಗ ಅಧ್ಯಕ್ಷತೆವಹಿಸಿದ ದೊಡ್ಡರಂಗೇಗೌಡರು ಅಲ್ಲೇ ರಚಿಸಿ ಅರ್ಪಿಸಿದ ಕವನ.]

ಹಗಲಿರುಳು ಕನ್ನಡದ-
ಒಡನಾಟ ಮಾಡಿದ ಗುರುವೇ,
ಅಭಿಜಾತ ಕಾವ್ಯಗಳ ಆಂತರ್ಯ ಬಗೆದ
ತನಿತನಿ ತಿರುಳ, ರಸಿಕರಿಗೆ
ಉಣ ಬಡಿಸಿದ ಅಧ್ವರ್ಯುವೇ...

ಸಾವಿರದ ಉಪನ್ಯಾಸ ನೀಡಿ
ಕನ್ನಡದ ಪರಿಚಾರಿಕೆ ಮಾಡಿ-
ನಾಡು ನುಡಿ ಚರಿತೆಯ ನಾಡಿ-
ಮಿಡಿದ, ನಾಡ ಗುಡಿ ಎತ್ತಿ ಹಿಡಿದ,
ಅಗಣಿತ ಸಂಸ್ಥೆಗಳ ಸಂಪರ್ಕ ಸೇತುವಾಗಿ
ಸಂಪನ್ನ ಸಂಪಾದಕರಾಗಿ
ತಾಯ್ನುಡಿಯ ಸೇವೆಗೆ
ಚಂದನದಂತೆ ಬದುಕ ಸವೆಸಿದ
ಸಾಧಕರೇ, ಬೋಧಕರೇ

ಹೊಸತನ ಶೋಧಕರೇ
ಪಾಂಡಿತ್ಯದ ಮಧುವ್ರತರೇ
ಕಾವ್ಯ ಕಡಲ ಈಂಟಿದ
ಆಧುನಿಕ ಅಗಸ್ತ್ಯರೇ...
ನಿಮ್ಮ ಹಿರಿತನಕೆ ನಮನ
ನಿನ್ನ ಸಜ್ಜನಿಕೆಗಿದೋ-
ನನ್ನ ಹೃನ್ಮನದ ಕವನ.

ನೀವೊಂದು ಪಾಂಡಿತ್ಯದ ಪವಾಡ
ಶುದ್ಧ ಕನ್ನಡದ ಕರ್ತಿಯ ಪಾವುಡ
ನಾ ನಿಮಗೆ ಋಣಿ
ನೀವು ನಮ್ಮೊಡನೆ ನಗು ನಗುತಿರುವ
ವಾಙ್ಮಯದ ಗಣಿ!

****

ವಿಶ್ವಕುಟುಂಬಿ

ಪ್ರೊ. ಅ.ರಾ.ಮಿತ್ರ
ಚರವಾಣಿ : ೯೭೪೨೪೯೮೮೮೦

ನಾನು ಅಶ್ವತ್ಥನಾರಾಯಣನನ್ನು ಏನೆಂದು ಕರೆಯಲಿ ಎಂದು ತಿಳಿಯುತ್ತಿಲ್ಲ. ಶಿಷ್ಯ ಎಂದು ಕರೆಯಲೇ? ಹೌದು ಅವನು ಅದೂ ಆಗಿದ್ದಾನೆ. ಗುರು ಎಂದು ಕರೆಯಲೇ?... ಕೆಲವು ಸಂದರ್ಭಗಳಲ್ಲಿ ಅದೂ ಆಗಿದ್ದಾನೆ. ಸಹೋದ್ಯೋಗಿ ಎಂದು ಕರೆಯಲೇ? ಅವನು ಆ ಕೆಲಸವನ್ನು ಬಹಳ ಅದ್ಭುತವಾಗಿ ಮಾಡಿದ್ದಾನೆ. ನನಗಂತೂ ಆತ ತುಂಬ ಆತ್ಮೀಯ ಎಂದು ಹೇಳಬಹುದು. ಸುಮಾರು ೬೦ ವರ್ಷಗಳಷ್ಟು ಸ್ನೇಹ ನಮಿಬ್ಬರದ್ದು. ಅದಕ್ಕೆ ಯಾವತ್ತೂ ರಿಟೈರ್ಮೆಂಟ್ ಇಲ್ಲ, ಪ್ರತಿ ವರ್ಷ ಅದು ಬಡ್ತಿ ಪಡೆಯುತ್ತಾ ಸಾಗಿದೆ.

ಶ್ರೀ ಟಿ.ಎಂ.ಎ. ಪೈ ಅವರು ಒಂದು ಸಾರಿ ನನಗೆ ಮತ್ತು ಇನ್ನೂ ಕೆಲವರಿಗೆ ಭಾಷಣ ಕಲೆಯ ಬಗ್ಗೆ ಒಂದು ತರಬೇತಿ ನೀಡಲು ಕೋರಿದ್ದರು. ಆ ತರಬೇತಿಗೆ ಪ್ರತಿನಿತ್ಯ ಹಾಜರಾಗಿ ನಮಗೆಲ್ಲಾ ಹತ್ತಾರು ಪ್ರಶ್ನೆಗಳನ್ನು ಕೇಳುತ್ತಿದ್ದ ಏಕೈಕ ವ್ಯಕ್ತಿ ಅಶ್ವತ್ಥನಾರಾಯಣ. ಆದ್ದರಿಂದಲೇ ನಾನು ಅವನನ್ನು ಶಿಷ್ಯ ಎಂದು ಕರೆದಿದ್ದು. ಅವನು ಕೇಳುತ್ತಿದ್ದ ಪ್ರಶ್ನೆಗಳಿಗೆ ಕೆಲವರು ತಡಬಡಾಯಿಸುತ್ತಿದ್ದರು. ಯಾವುದೇ ಸಮಾಧಾನಕರ ಉತ್ತರ ನೀಡಿದರೂ ಮತ್ತೆ ಒಳ ಪ್ರಶ್ನೆ ಕೇಳಿ ಪೇಚಿಗೆ ಸಿಕ್ಕಿಸುತ್ತಿದ್ದ. ಅನೇಕ ಬಾರಿ ನನ್ನ ಉಪನ್ಯಾಸಗಳಿಗೂ ಬಂದು ನನ್ನ ಜೊತೆ ಅನೇಕ ವಿಷಯಗಳನ್ನು ಆಳವಾಗಿ ಚರ್ಚಿಸುತ್ತಿದ್ದ. ಹೀಗೆ ಚರ್ಚೆಯನ್ನು ಸಜೀವವಾಗಿ ಉಳಿಸಿದ ಕೀರ್ತಿ ಆತನಿಗೆ ಸಲ್ಲುತ್ತದೆ.

ಆತ ವಿದ್ಯಾರ್ಥಿ ದಿನಗಳಲ್ಲಿ ತಾನೇ ಕಷ್ಟಪಟ್ಟು ಓದಿ ಮುಂದೆ ಬಂದವನು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ. ಮಾಡಿಕೊಂಡ. ಆ ಕಾಲದಲ್ಲಿ ನಾವೆಲ್ಲ ದುಡ್ಡಿಲ್ಲದೆ ಒದ್ದಾಡುತ್ತಿದೆವು. ಆ ಸಮಯದಲ್ಲಿ ಅವನು ಬೇರೆ ಊರಿಗೆ ಹೋಗಿ ಅಲ್ಲಿ ಓದಿಕೊಂಡು ಬಂದವನು. ಅಲ್ಲಿ ಅವನು ಸ್ನೇಹಿತರ ಪಡೆಯನ್ನೇ ಕಟ್ಟಿದ. ಆತ ನಿಜವಾಗಿ ಯಂತ್ರಜ್ಞ ವಿದ್ಯಾರ್ಥಿ. ಆದರೆ ಅವನು ಎಲ್ಲ ವರ್ಗಗಳಲ್ಲಿ ಸ್ನೇಹಿತರನ್ನು ಸಂಪಾದಿಸಿದ್ದಾನೆ. ಅವನ ಮತ್ತೊಂದು ವಿಶಿಷ್ಟವಾದ ಗುಣ ಎಂದರೆ ಆತನ ಕಕ್ಷೆಗೆ ಬರುವವರೆಲ್ಲ ಅವನ ಸ್ನೇಹಿತರಾಗಿ ಉಳಿದುಬಿಡುತ್ತಾರೆ. ಅಲ್ಲದೆ, ಅವರೆಲ್ಲ ಇವನಿಗೆ ಜೀವ ಕೊಡಲು ಸಿದ್ಧರಾದ ಗೆಳೆಯರು. ಹೀಗೆ ಸ್ನೇಹವನ್ನು ಪಡೆಯುವುದರಲ್ಲಿ, ಅದನ್ನು ಗಟ್ಟಿಗೊಳಿಸುವಲ್ಲಿ ಮತ್ತು ಅದನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಆತ ನಿಸ್ಸೀಮ. ಈಗಲೂ ಎಲ್ಲರೊಡನೆ ಸಂಪರ್ಕದಲ್ಲಿ ಇದ್ದಾನೆ. ಆತನಿಗೆ ಇರುವಷ್ಟು ಗೆಳೆಯರನ್ನು ನಾನೆಲ್ಲೂ ಕಂಡಿಲ್ಲ. ಸ್ನೇಹಿತರೊಂದಿಗೆ ಯಾವಾಗಲು ಬಹಳ ಆಪ್ತನಾಗಿರುತ್ತಾನೆ.

ತನ್ನ ಸಂಪರ್ಕಕ್ಕೆ ಬಂದವರ ಜ್ಞಾನವನ್ನು ಹೆಚ್ಚಿಸುವ ಮಹತ್ತರವಾದ ಗುಣ ಅವನಲ್ಲಿ ಇದೆ. ಈ ಗುಣವನ್ನು ನಾನು ಬೇರಾರಲ್ಲೂ ಕಂಡಿಲ್ಲ. ನಾವು ಮಾತ್ರ ಬೆಳೆಯಬೇಕು ಎಂದುಕೊಳ್ಳುವ

ಜನರ ನಡುವೆ ಇವನು ಅಪರೂಪವಾದವನು. ಬಂದವರು ಏನನ್ನು ಬಯಸುತ್ತಾರೆ, ಯಾತಕ್ಕಾಗಿ ಈ ಮಾತನ್ನು ಕೇಳುತ್ತಿದ್ದಾರೆ ಎಂದು ವಿಚಾರ ಮಾಡಿ ಅವರಿಗೆ ಸ್ಪಂದಿಸುತ್ತಾನೆ. ಕನ್ನಡದಲ್ಲಿ ಪ್ರಚೋದನೆ ಅಂತ ಹೇಳುತ್ತೇವೆ. ಅಂದರೆ ಕೇವಲ ತಾನು ಮಾಡುವುದಷ್ಟೇ ಅಲ್ಲ, ಬೇರೆಯವರಿಂದ ಕೂಡ ಅದನ್ನು ಮಾಡಿಸುವ ಗುಣ. ಹೀಗೆ ಅವನು ಹೋದಲ್ಲೆಲ್ಲಾ ತನ್ನ ಯೋಗ್ಯತೆಯನ್ನು ಅಳೆಯುವ ವಸ್ತುವನ್ನು ಕಂಡುಕೊಳ್ಳುತ್ತಿದ್ದ, ಅದನ್ನು ಪರೀಕ್ಷೆ ಮಾಡಲು ಅವಕಾಶವನ್ನು ಹುಡುಕುತ್ತಿದ್ದ ಮತ್ತು ಸ್ನೇಹಿತರನ್ನು ಹುರಿದುಂಬಿಸುತ್ತಿದ್ದ. ಎಷ್ಟೋ ಜನರಿಗೆ ಇದನ್ನು ಬರೆಯಿರಿ, ನಿಮಗೆ ಇದು ಸಾಧ್ಯ ಎಂದು ಹೇಳಿ ಪುಸ್ತಕಗಳನ್ನು ಬರೆಸಿದ್ದಾನೆ.

ನನ್ನ ಹಾಗೂ ಅವನ ಗೆಳೆತನಕ್ಕೆ ಮಿತಿಯೇ ಇಲ್ಲ ಎಂದು ಹೇಳಬೇಕು. ಅವನ ಮನೆಯವರೆಲ್ಲ ನಮ್ಮ ಮನೆಯವರಿಗೆ ಪರಿಚಿತರು. ಇಂತಹ ದಂಪತಿಗಳು ಬಹಳ ಅಪರೂಪ ಎನ್ನಬಹುದು. ಇಬ್ಬರೂ ಅಧ್ಯಾಪಕರಾಗಿದ್ದವರು. ಇಬ್ಬರೂ ಉಪನ್ಯಾಸಕರಾಗಿ ಪ್ರಸಿದ್ಧಿ ಪಡೆದವರು.

ಅವನ ಅಣ್ಣ ನಂಜುಂಡಯ್ಯ ಕೂಡ ನನ್ನ ಗೆಳೆಯ. ನಾವಿಬ್ಬರೂ ಶ್ರೀ ಎನ್. ಡಿ. ಕೃಷ್ಣಮೂರ್ತಿ ಅವರ ಜೊತೆಗೂಡಿ ಅಮೇರಿಕನ್ ಪೀಸ್ ಕೋರ್ ಎಂಬಲ್ಲಿ ಒಟ್ಟಿಗೆ ಕೆಲಸ ಮಾಡಿದ್ದೇವೆ. ಅವರೂ ಕೂಡ ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದರು. ಅಮೇರಿಕದವರಿಗೆ ಕನ್ನಡವನ್ನು ಕಲಿಸಲು ನಾವೆಲ್ಲಾ ಸೇರಿ ಹಲವಾರು ಯೋಜನೆಗಳನ್ನು ಹಾಕುತ್ತಿದ್ದವು.

ಅಶ್ವತ್ಥನಾರಾಯಣ ಮಹಾರಾಣಿ ಕಾಲೇಜಿನಲ್ಲಿ ನನ್ನ ಸಹ ಅಧ್ಯಾಪಕನಾಗಿದ್ದ. ಅವನ ಅಧ್ಯಯನದ ಪರಿಕಲ್ಪನೆ ಏನು ಎಂಬುದು ನನಗೆ ಆಗ ತಿಳಿಯಿತು. ಯಾವುದೇ ಪಠ್ಯ ಕೊಟ್ಟರೂ ಅದನ್ನು ಮಾಡುತ್ತಿದ್ದ. ಒಂದು ವೇಳೆ ಅದರಲ್ಲಿ ಏನಾದರೂ ಸಂದೇಹಗಳು ಇದ್ದರೆ ಆಗ ಅ ಪಠ್ಯ ಬರೆದವರನ್ನು ಭೇಟಿಮಾಡಿ, ಅವರೊಂದಿಗೆ ಚರ್ಚಿಸಿ ತನ್ನ ಸಂದೇಹಗಳನ್ನು ಬಗೆಹರಿಸಿಕೊಳ್ಳುತ್ತಿದ್ದ. ಅಂತಹ ಗುಣ ಅವನಲ್ಲಿದೆ.

ಅನೇಕ ಸಂದರ್ಭಗಳಲ್ಲಿ ಆತನ ಗೊಡವೆ ಕಟ್ಟಿಕೊಳ್ಳುವುದು ಕಷ್ಟ ಎನಿಸುತ್ತದೆ. ಏಕೆಂದರೆ ಆತ ಕಟು ವಿಚಾರವಾದಿ. ತುಂಬ ವಾದಿ ಕೂಡ. 'ಪ್ರತಿವಾದಿ ಭಯಂಕರ' ಅಂತ ಕರೆಯಬಹುದು. ಯಾವುದನ್ನೂ ಸುಲಭವಾಗಿ ಒಪ್ಪುವವನಲ್ಲ. ಹಿಡಿದ ವಸ್ತುವನ್ನು ಅದರ ತಳಮಟ್ಟದ ವರೆಗೆ ಶೋಧಿಸಿ ಅದರಲ್ಲಿನ ಟೊಳ್ಳುತನ ಅಥವಾ ಒಳ್ಳೆಯತನವನ್ನು ಪೂರ್ಣವಾಗಿ ಪರೀಕ್ಷೆ ಮಾಡುವ ಬುದ್ಧಿ ಇವನಿಗೆ ಮೊದಲಿನಿಂದಲೂ ಬಂದಿದೆ. ಹೀಗೆ ಅಶ್ವತ್ಥನಾರಾಯಣ ಅಂದರೆ ಎಲ್ಲರೊಂದಿಗೆ ಸುಖವಾಗಿ ಬೆರೆಯುವ, ಸ್ನೇಹಶೀಲ, ಸ್ವಲ್ಪವೂ ಬೇಸರವಿಲ್ಲದೆ ಲಕ್ಷ್ಯಮಾಡದೆ ತನಗೆ ಅನ್ನಿಸುವ ವಿಚಾರವನ್ನು ನಿರ್ದಾಕ್ಷಿಣ್ಯವಾಗಿ ನೇರವಾಗಿ ದಿಟ್ಟವಾಗಿ ಹೇಳುವ, ಬೇಕಾದಾಗ ಅವರ ಹುಳುಕುಗಳನ್ನೂ ಕೂಡ ಎತ್ತಿ ತೋರಿಸುವ ವ್ಯಕ್ತಿ. ತೆಲುಗಿನಲ್ಲಿ ಇದನ್ನು ದುಗುಡ ಸ್ವಭಾವ ಅನ್ನುತ್ತಾರೆ, ಅಂದರೆ ಮುನ್ನುಗ್ಗುವ ಸ್ವಭಾವ ಅವನಲ್ಲಿದೆ.

ಅಶ್ವತ್ಥನಾರಾಯಣ ಒಂದು ರೀತಿ ಪ್ರಾಪಂಚಿಕವಾಗಿ ಇದ್ದುಕೊಂಡೇ ಪ್ರತ್ಯೇಕವಾಗಿ ಉಳಿದುಕೊಳ್ಳುವ ವ್ಯಕ್ತಿ. ಆತನಿಗೆ ಎಲ್ಲರೂ ಬೇಕು. ಆದರೆ ಅವನು ಯಾರಿಗೂ ಬಗ್ಗುವಂತಹ ಮನುಷ್ಯ ಅಲ್ಲ. ಅದನ್ನು ಹಠ ಎಂದು ಕರೆಯಬಹುದು, ಆದರೆ ನಾನು ಅದನ್ನು ಆತನ ಸ್ವಭಾವ ಎನ್ನುತ್ತೇನೆ. ಎಲ್ಲಿ ವಿದ್ವತ್ತು ಇದೆಯೋ ಅಲ್ಲಿ ಅಂತಹವರಿಗೆ ಗೌರವ ಕೊಡುತ್ತಿದ್ದ, ಆದರೆ, ನಮಗೆ ಎಲ್ಲ ತಿಳಿದಿದೆ ಎಂದು ಸೋಗು ಹಾಕಿಕೊಂಡು ಭಾಷಣ ಮಾಡುವವರ ಕಾಲು ಎಳೆಯುತ್ತಿದ್ದ. ಅವನು ಸಭೆಗಳಲ್ಲಿ ಭಾಷಣಗಳನ್ನು ಮಾಡಿರುವುದಕ್ಕಿಂತ ಹೆಚ್ಚು ಸಂಖ್ಯೆ ಭಾಷಣಗಳನ್ನು ಕೇಳಿದ್ದಾನೆ. ಒಬ್ಬ ಮನುಷ್ಯ ತನ್ನನ್ನು ತಾನು ಒಂದು

ಮಟ್ಟಕ್ಕೆ ಏರಿಸಿಕೊಳ್ಳಬೇಕಾದರೆ ಏನೆಲ್ಲಾ ಸಾಧನೆ ಮಾಡಬೇಕೋ ಅವೆಲ್ಲವನ್ನೂ ಅವನು ಮಾಡಿದ್ದಾನೆ. ಅದರಲ್ಲೂ ಸಾಹಿತ್ಯ ಅಲ್ಲದೆ ಬೇರೆ ಬೇರೆ ಕ್ಷೇತ್ರಗಳಲ್ಲೂ ಅವನು ಕಾರ್ಯ ನಿರ್ವಹಿಸಿದ್ದಾನೆ.

ಆತನ ಸಂಘಟನಾ ಶಕ್ತಿ ಕೂಡ ಮೆಚ್ಚಬೇಕಾದದ್ದು. ಮುಂದು ನಿಂತು ಕಾರ್ಯಕ್ರಮ ನಡೆಸುತ್ತಾನೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾನೆ. ಒಮ್ಮೆ ಅವನು ಹಾಸನದಲ್ಲಿ ಇದ್ದಾಗ ಅವನು ಪಾಠ ಮಾಡುತ್ತಿದ್ದ ಕಾಲೇಜಿನಲ್ಲಿ ಉಪನ್ಯಾಸ ಮಾಡುವುದಕ್ಕೆ ನಾನು ಅಡಿಗರೊಂದಿಗೆ ಹೋಗಿದ್ದೆ. ಅವನೇ ಎಲ್ಲ ಏರ್ಪಾಡು ಮಾಡಿದ್ದ. ಅಲ್ಲಿನ ವಿದ್ಯಾರ್ಥಿಗಳಿಗೆ ಅಡಿಗರ ಬಗ್ಗೆ ಹೆಚ್ಚು ತಿಳಿದಿರದಿದ್ದ ಕಾರಣ ಅವರ ಬಗ್ಗೆ ತಿಳಿಸಿ ಅಡಿಗರನ್ನು ಎಲ್ಲರಿಗೂ ಪರಿಚಯ ಮಾಡಿಸುವ ಸಲುವಾಗಿ ಈ ಕಾರ್ಯಕ್ರಮ ಏರ್ಪಾಡು ಮಾಡಿದ್ದ.

ಹಾಗೆಯೇ ಕನ್ನಡ ಚಳುವಳಿಗಳಲ್ಲಿ ಪ್ರಧಾನವಾಗಿ ಭಾಗವಹಿಸುತ್ತಿದ್ದ. ಅ. ನ. ಕೃಷ್ಣರಾಯರ ಭಾಷಣ ಯಾವುದೇ ಊರಿನಲ್ಲಿ ಇರಲಿ, ಆತ ಅಲ್ಲಿ ಇರುತ್ತಿದ್ದ. ದೊಡ್ಡ ದೊಡ್ಡ ಕನ್ನಡದ ಬಗೆಗಿನ ಹೋರಾಟಗಳಲ್ಲಿ ಆತ ಭಾಗವಹಿಸಿದ್ದಾನೆ. ಸಾಹಿತ್ಯ ಪರಿಷತ್ತಿನ ಬಾಗಿಲಲ್ಲೇ ನಿಂತು ಅಧ್ಯಕ್ಷರನ್ನು ತಡೆದು ನಿಲ್ಲಿಸಿ ಪ್ರಶ್ನೆ ಕೇಳುತ್ತಿದ್ದ ವ್ಯಕ್ತಿ ಎಂದರೆ ಆತ. ಒಂದು ರೀತಿಯಲ್ಲಿ ಉದ್ಧಟತನದ ವ್ಯಕ್ತಿಯಾಗಿ ಕಂಡರೂ ಅವನ ಮನಸ್ಸು ತುಂಬ ನಿರ್ಮಲವಾದದ್ದು, ಶಂಕಾಶೀಲವಾದದ್ದಲ್ಲ. ಅವನ ಮನಸ್ಸಿನಲ್ಲಿ ಕಲ್ಮಷ ಇಲ್ಲದ ಕಾರಣ ಯಾರೂ ಅವನನ್ನು ತಪ್ಪು ತಿಳಿಯುತ್ತಿರಲಿಲ್ಲ. ಮಾತು ಸ್ವಲ್ಪ ಒರಟು ಎನ್ನಬಹುದು. ನಿಜ, ಮಾತು ತುಂಬ ಗಡಸು, ಆದರೆ ಹೃದಯದಲ್ಲಿ ಬಹಳ ಮೃದು. ಇಂತಹ ಬೇರಾವ ವ್ಯಕ್ತಿಯನ್ನೂ ನಾನು ಕಂಡಿಲ್ಲ.

ಆತ ಅನೇಕ ಭಾಷೆಗಳನ್ನು ಬಲ್ಲವನು. ಕನ್ನಡದಲ್ಲಿ ಅವನು ಓದಿರುವಷ್ಟು ಪುಸ್ತಕಗಳನ್ನು ಬೇರೆ ಯಾರೂ ಓದಿರಲಾರರು ಎಂದು ನನ್ನ ಅನಿಸಿಕೆ. ನಾನೇ ಒಬ್ಬ ಓದುಗಾರನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಆತನಿಗೆ ಪುಸ್ತಕಗಳಲ್ಲಿ ತುಂಬ ಹೆಚ್ಚಿನ ಆಸಕ್ತಿ, ಮತ್ತು ಆ ಪುಸ್ತಕಗಳ ಬಗ್ಗೆ ಎಲ್ಲರೊಡನೆ ಚರ್ಚೆ ಕೂಡ ಮಾಡುತ್ತಾನೆ. ಆತನ ವೈಶಿಷ್ಟ್ಯ ಎಂದರೆ ತಾನು ಹೇಳುವುದಕ್ಕಿಂತ ನೀವು ಏನು ಕೇಳುತ್ತೀರೋ ಅದರ ಬಗ್ಗೆ ಮಾತನಾಡುವುದು. ನೀವು ಯಾವ ವಿಷಯವನ್ನಾದರೂ ಕೇಳಿ ಅದರ ಬಗ್ಗೆ ತಯಾರಿ ಮಾಡಿಕೊಂಡು ಬಂದು ಮಾತನಾಡಬಲ್ಲವನು.

'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆಯಂತೆ ಅಶ್ವತ್ಥನಾರಾಯಣ ಸಾಹಿತ್ಯದ ಪ್ರಕಾರಗಳಲ್ಲಿ ಮೇಯದೆ ಬಿಟ್ಟ ವಸ್ತು ಯಾವುದೂ ಇಲ್ಲ. ಶಾಸ್ತ್ರ ಆಗಿರಬಹುದು, ಸಾಹಿತ್ಯ ಆಗಿರಬಹುದು, ಭಾಷಾ ಶಾಸ್ತ್ರ ಆಗಿರಬಹುದು, ವಸ್ತು ನಿಷ್ಠ ಅಧ್ಯಯನವಾಗಿರಬಹುದು, ಎಲ್ಲದರಲ್ಲೂ ಪರಿಣತಿ ಹೊಂದಿದ್ದಾನೆ.

ವಿದ್ಯಾರ್ಥಿಗಳಿಗೆ ಅದರಲ್ಲೂ ವಿದ್ಯಾರ್ಥಿನಿಯರಿಗೆ ಅವನನ್ನು ಕಂಡರೆ ತುಂಬ ಇಷ್ಟ, ಆಸಕ್ತಿಯಿಂದ ಅವನ ತರಗತಿಗಳಿಗೆ ಹಾಜರಾಗುತ್ತಿದ್ದರು. ವಿಚಾರ ಬೋಧೆಯನ್ನು ಮಕ್ಕಳಿಗೆ ತಲುಪಿಸುವಲ್ಲಿ ನಿಸ್ಸೀಮ ಅವನು. ಹಾಗಾಗಿ ಅವನನ್ನು ಕಂಡರೆ ಎಲ್ಲರಿಗೂ ಅಕ್ಕರೆ. ಅವನು ಕೊಳ್ಳೆಗಾಲದ ಕಾಲೇಜಿನಲ್ಲಿ ಇದ್ದಾಗ ಅಲ್ಲಿನ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಾಗಿದ್ದ. ಅಲ್ಲಿನ ಹಲವಾರು ಅಧ್ಯಾಪಕರು ಅವನ ಸಹಾಯದಿಂದ ಥೀಸಿಸ್ ಕೂಡ ಬರೆದಿದ್ದಾರೆ. ಸಹಾಯ ಅಂದರೆ ಉತ್ತೇಜನ..ಮಾಡು..ಮಾಡು ಎಂದು. ಬೇಕಾದ ಪುಸ್ತಕಗಳನ್ನು ಒದಗಿಸುತ್ತಿದ್ದ. ಅವನು ಬಹುಶಃ ಪುಸ್ತಕದ ಅಂಗಡಿಗೆ ಹೋಗದೆ ಇರುವ ದಿನವೇ ಇಲ್ಲ ಎನ್ನಿಸುತ್ತದೆ.

ಒಮ್ಮೆ ನಾನು ಹಾಗು ಶ್ರೀ ಸಾ.ಕೃ. ರಾಮಚಂದ್ರ ರಾಯರು ಪುರಂದರ ಸಾಹಿತ್ಯದ ಬಗ್ಗೆ ಹಲವಾರು ಪುಸ್ತಕಗಳು ಮಾಡಬೇಕಾಯಿತು. ಅದಕ್ಕಾಗಿ ಸಂಗ್ರಹ ಮಾಡಬೇಕಾದಾಗ ಪುರಂದರದಾಸ

ಎನ್ನುವ ನಾಮಾಂಕಿತ ಹೊಂದಿರುವ ಅನೇಕ ಕೀರ್ತನೆಗಳು ವಾಸ್ತವವಾಗಿ ಅವರ ರಚನೆಗಳಲ್ಲ ಎಂಬ ಅಂಶ ತಿಳಿಯಿತು. ಈ ಸಂದರ್ಭದಲ್ಲಿ ನಮಗೆ ಸಹಾಯ ಮಾಡಿದವನು ಅಶ್ವತ್ಥನಾರಾಯಣ. ನಿರ್ದಾಕ್ಷಿಣ್ಯವಾಗಿ ಇದು 'ಪುರಂದರ ಸಾಹಿತ್ಯ ಅಲ್ಲ'-ಎಂದು ತಿಳಿಸುತ್ತಿದ್ದ. ನಮಗೆ ಪುರಂದರ ದಾಸರ ವಿವಿಧ ಪುಸ್ತಕಗಳು ಬೇಕಾದಾಗ ಅವನ ಬಳಿ ಇದ್ದ ೭೦ ಕ್ಕೂ ಹೆಚ್ಚಿನ ಪುಸ್ತಕಗಳನ್ನು ನಮಗೆ ಕಳುಹಿಸಿದ್ದ. ಅದನ್ನು ನಾವು ಆಮೇಲೆ ಹಿಂತಿರುಗಿಸಿದೆವು. ಅಂದರೆ ಸಾಹಿತಿಗಳಿಗೆ ಸಹಾಯ ಮಾಡುವುದು, ಸಾಹಿತಿಗಳಿಂದ ವಿಚಾರಗಳನ್ನು ಪಡೆದುಕೊಳ್ಳುವುದು, ಅವರ ಕಷ್ಟ ಸುಖಗಳಿಗೆ ಸ್ಪಂದಿಸುವುದು ಅವನ ಗುಣ.

ಲೋಕದಲ್ಲಿ ಆಸಕ್ತಿಯನ್ನು ಹೊಂದಿ, ಪುಸ್ತಕಗಳಲ್ಲಿ ಅಷ್ಟೇ ಪ್ರೀತಿ ಇಟ್ಟುಕೊಂಡು ಬಂದಿರುವ ಅವನು ಎಲ್ಲ ದೊಡ್ಡ ದೊಡ್ಡ ಸಾಹಿತಿಗಳ ಜೊತೆ ಸಂಪರ್ಕ ಹೊಂದಿದ್ದ. ಕೃಷ್ಣರಾಯರು, ದೇವುಡು ಮತ್ತು ಹಲವಾರು ಕನ್ನಡದ ಲೇಖಕರೊಂದಿಗೆ ಸಂಪರ್ಕ ಇಟ್ಟುಕೊಂಡ ಆತ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಅವನನ್ನು ಬಿಟ್ಟಿರಲಾಗದು ಎಂಬಷ್ಟು ದೊಡ್ಡ ವ್ಯಕ್ತಿಯಾಗಿ ಬೆಳೆದಿದ್ದಾನೆ.

ವಯಸ್ಸಿನಲ್ಲಿ ನನಗಿಂತ ಸ್ವಲ್ಪ ಚಿಕ್ಕವನಾದ ಅವನನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುವುದು ನನಗೆ ಸಂತೋಷದ ವಿಷಯ. ಅವನ ಪ್ರಜ್ಞಾವಂತಿಕೆ ಕಳೆದ ಇಪ್ಪತ್ತು ಅಥವಾ ಮೂವತ್ತು ವರ್ಷಗಳ ಹಿಂದೆ ಹೇಗೆ ಇತ್ತೋ ಇಂದಿಗೂ ಹಾಗೆ ಮುಂದುವರೆದಿದೆ. ವಿದ್ಯಾರ್ಜನೆಯ ಸಂಕಲ್ಪ, ಬಾಯಾರಿಕೆ ಮತ್ತು ಅದನ್ನು ಪೂರೈಸಿಕೊಳ್ಳಬೇಕು ಎಂಬ ಹಠ ಈಗಲೂ ಇದೆ. ಆಪ್ತರು, ಸ್ನೇಹಿತರು ಎಲ್ಲಿದ್ದರೂ ಅವರನ್ನು ಬರಮಾಡಿಕೊಳ್ಳುವುದು, ಅವರೊಡನೆ ಬೆರೆಯುವುದು, ಅವರ ಕಷ್ಟ ಸುಖಗಳನ್ನು ವಿಚಾರಿಸುವುದು, ಇದು ಅವನ ಹುಟ್ಟು ಗುಣ. ಇಂತಹ ಒಬ್ಬ ಸ್ನೇಹಿತ ನನಗಿದ್ದಾನೆ ಎಂಬ ಸಂತೋಷ ನನಗೆ. ಇನ್ನೂ ಹೀಗೆ ಹೆಚ್ಚು ಕಾಲ ಬದುಕಿ ಇನ್ನೂ ಹೆಚ್ಚಿನ ಜನರಿಗೆ ಸಹಾಯ ಮಾಡಲಿ ಎಂಬುದು ನನ್ನ ಆಶಯ. ಅವನನ್ನು 'ವಿಶ್ವಕುಟುಂಬಿ' ಎಂದು ಕರೆದರೆ ಒಳ್ಳೆಯದು.

*****

ಪ್ರೀತಿಯ ಅನಾಜಿ ಪದುಳದಿಂದ ಬಾಳ್ಗೆ

ಹಂಪನಾ
ಚರವಾಣಿ : ೯೯೬೪೫೩೭೧೫೯೬

'ಅನಾಜಿ' ಎಂಬ ಕಾವ್ಯನಾಮದಿಂದ ಮತ್ತು ಅದಕ್ಕಿಂತಲೂ ಹೆಚ್ಚಾಗಿ ತಾಯಿತಂದೆ ಇಟ್ಟ ಹೆಸರಿನಿಂದಲೇ ಹೆಸರುವಾಸಿ ಆಗಿರುವ ಜಿ. ಅಶ್ವತ್ಥನಾರಾಯಣ ನನ್ನ ಆಪ್ತರು. ಆತ್ಮೀಯರು. ವಯಸ್ಸಿನಲ್ಲಿ ನನಗಿಂತ ಕೇವಲ ಎರಡು ವರ್ಷ ಚಿಕ್ಕವನೆಂಬ ಲೌಕಿಕ ಲೆಕ್ಕಾಚಾರವನ್ನು ಪಕ್ಕಕ್ಕೆ ಇಟ್ಟರೆ ನಾವಿಬ್ಬರೂ ಒಂದೇ ವಾರಿಗೆಯ ಗೆಳೆಯರು.

ವಿದ್ವತ್ ವಲಯದಲ್ಲೂ, ಸಾರ್ವಜನಿಕ ಕ್ಷೇತ್ರದಲ್ಲೂ ಯಥೇಚ್ಛವಾದ ಪ್ರೀತಿ ಗೌರವವನ್ನು ಗಳಿಸಿರುವ ಅವರನ್ನು ಕುರಿತು ಗೌರವಗ್ರಂಥವನ್ನು ಹೊರತರುತ್ತಿರುವುದು ಶ್ಲಾಘನೀಯವೂ ಸಂತೋಷಪ್ರದವೂ ಆದ ವಿಚಾರ.

ಈ ಅಭಿನಂದನ ಕೃತಿಯಲ್ಲಿ ಸಹಜವಾಗಿಯೇ ಅನಾಜಿಯ ಜೀವನ ಸಾಧನೆ ಬರಹಗಳು ಮತ್ತು ಕುಟುಂಬ ಕುರಿತು ಲೇಖನಗಳು ಸೇರಿರುತ್ತವೆ. ಅದರಿಂದ ನಾನು ನಮ್ಮಿಬ್ಬರ ಪಯಣದಲ್ಲಿ ಪಡೆದ ಕೆಲವು ಅನುಭವಗಳನ್ನು ಮೆಲುಕುಹಾಕುತ್ತೇನೆ.

ಅನಾಜಿ ಆರೇಳು ದಶಕಗಳ ಜೀವನಾನುಭವ ಇರುವ ಕಣಜ. ಜಿಗುಟಾದ ಸ್ಮರಣಶಕ್ತಿ ಆತನಿಗಿರುವ ದೊಡ್ಡವರ ತಾನು ಓದಿದ ಲೇಖನ ಪುಸ್ತಕಗಳು. ನೋಡಿದ ಊರುಕೇರಿ ವ್ಯಕ್ತಿಗಳು ಕುರಿತು ಸರಿಹೊತ್ತಿನಲ್ಲಿ ಎಬ್ಬಿಸಿ ಕೇಳಿದರೂ ಕರಾರುವಾಕ್ಕಾಗಿ ಲೀಲಾಜಾಲವಾಗಿ ಹೇಳಬಲ್ಲ ಘನಂದಾರ.

ಉಪನ್ಯಾಸಕ್ಕೆ ನಿಂತರೆ ವೇದಿಕೆ ಹತ್ತಿ ಮೈಕಿನ ಮುಂದೆ ನಿಲ್ಲುವುದೆ ತಡ, ಅಡೆತಡೆಗಳಿಲ್ಲದೆ ಭಾಷಣ ಮಾಡುವ ಚತುರ. ಈ ಮಹಾನ್ ವಾಚಾಳಿಗೆ ಭಾಷಣ ಮಾಡುವುದೆಂದರೆ ಖುಷಿ, ಇಷ್ಟ. ವಿದ್ಯಾರ್ಥಿಯಾಗಿದ್ದಾಗಲೇ ಹುಟ್ಟಿದ ಅಥವಾ ಅಂಟಿಕೊಂಡ ಚಟ ಮುಪ್ಪಿನಲ್ಲೂ ಬಿಟ್ಟಿಲ್ಲ ಎಂಬುದು ಸಂತೋಷವೇ. ಯಾಕೆಂದರೆ ಅನಾಜಿಯ ಭಾಷಣದಲ್ಲಿ ಮಾಹಿತಿಗಳು ತುಂಬಿರುತ್ತವೆ ಜತೆಗೆ ಶಬ್ದಾಡಂಬರದ ಚಮತ್ಕಾರ, ಪ್ರಾಸಾನುಪ್ರಾಸದ ಸೊಗಸು, ಜೋಗದ ಜಲಪಾತದಂತೆ ಉಚ್ಛೃಧ್ವನಿಯಿಂದ ಹೊಮ್ಮುವ ಉಸಿರಾಡಲೂ ಪುರುಸೊತ್ತು ಕೊಡದ ಓತಪ್ರೋತ ವಾಗ್ಝರಿ.

ಉಪಮೆಗಳ ಬಳಕೆ, ಕನ್ನಡನುಡಿಯ ಬೆಡಗು ಮೊದಲಾದವುಗಳ ಮಸಾಲೆಯಿಂದ ಪ್ರೇಕ್ಷಕರು ತಲೆದೂಗುತ್ತಿದ್ದರು. ಅನಾಜಿ ಇಂಜಿನಿಯರಿಂಗ್ ಡಿಪ್ಲೋಮಾ ಪಡೆದರೂ ಕನ್ನಡಕ್ಕೆ ಒಲಿದು ಧಾರವಾಡದಲ್ಲಿ ಇದ್ದು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಓದಿ ಗೆದ್ದು ಬಂದ ಗಟ್ಟಿಗ. ಅಧ್ಯಾಪಕನಾದ ಮೇಲೆ ಬೆಂಗಳೂರು ಮಂಡ್ಯ, ಹಾಸನ, ಕೊಳ್ಳೇಗಾಲ ಅಂತ ಸುತ್ತಾಡಿ ತರಗತಿಗಳಲ್ಲಿ ಪಾಠಮಾಡಿ ಸುಸ್ತಾಗದೆ ನಾನಾ ಸಭೆ ಸಮಾರಂಭಗಳಲ್ಲಿ ಉಪನ್ಯಾಸ ಮಾಡುತ್ತಿದ್ದ ಈ ಹುರುಪು ಎಣೆಯಿಲ್ಲದ್ದು.

ಅನಾಜಿಯ ಅಧ್ಯಯನ ವ್ಯಾಪ್ತಿ ದೊಡ್ಡದು. ಮಹಾವೀರ ತೀರ್ಥಂಕರ ೨೫೦೦ನೇ ನಿರ್ವಾಣೋತ್ಸವ ಆಚರಣೆಯ ವರ್ಷದಲ್ಲಿ ಅನಾಜಿಯ ಭಾಷಣದ ಬಂಪರ್ ಬೆಳೆ. ನಮ್ಮಿಬ್ಬರ ಜೋಡಿ ಹೆಪ್ಪುಗಟ್ಟಿದ್ದು ಆ ಅವಧಿಯಲ್ಲಿ ನಾವು ಅನೇಕ ಕಡೆ ಲಕ್ಕವಳ್ಳಿಯಿಂದ ಹರಪನಹಳ್ಳಿ, ಹೂವಿನ ಹಡಗಲಿ ಮೊದಲುಗೊಂಡು ಭಾಷಣ ಮಾಡಿದ್ದು ಮರೆಯಲಾಗದ ಅನುಭವ. ಅಲ್ಲೆಲ್ಲಾ ಹೆಚ್ಚು ಚಪ್ಪಾಳೆ ಗಿಟ್ಟಿಸಿದ್ದು ಅನಾಜಿಯೇ.

ಸ್ನೇಹವಲ್ಲರಿ ಹೀಗೆ ಹಬ್ಬುತ್ತಾ ದಾಂಗುಡಿಯಿಡಲು ನಮ್ಮೊಂದಿಗೆ ಬೆರೆತು ಜಾನಪದ ಮತ್ತು ಜೈನ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿರುವ ಜಯಚಂದ್ರ ಮತ್ತು ಅನಾಜಿ ಸಮಾನ ಮನೋಧರ್ಮದ ಸ್ನೇಹಿತರು.

ವ್ಯತ್ಯಾಸವೆಂದರೆ ಜಯಚಂದ್ರ ಮಿತಭಾಷಿ, ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಗೆ ಸ್ಪರ್ಧಿಸಿ ಕಣಕ್ಕೆ ಇಳಿದಾಗ ಈ ಇಬ್ಬರು ಮಿತ್ರರು ಮತದಾರರನ್ನು ಸಂಪರ್ಕಿಸಲು ಸಂಚಾರ ಕೈಗೊಂಡಾಗ ಇವರಿಬ್ಬರೂ ಜತೆಗೂಡಿದರು. ನನಗೆ ಆನೆಬಲ ತಂದರು. ಅವರ ಈ ಉದಾರತೆ ಮತ್ತು ಬದ್ಧತೆ ನಾನು ಮರೆಯಲಾಗದ್ದು.

ಅದರಂತೆ ಅನಾಜಿಯವರ ಮಡದಿ ಪ್ರೊ. ಲಕ್ಷ್ಮೀದೇವಿ ಅವರೂ ಸಹಕರಿಸಿದರು. 'ಅವರಿತ್ತ ಅಂಬೊಡೆ, ರಸಂ ಉಪ್ಪಿಟ್ಟು ಘಮಘಮ ಕಾಫಿ ಮರೆತೇನೆಂದರೆ ಮರೆಯಲಿ ಹ್ಯಾಂಗ!'

ಪರಿಷತ್ತಿನ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಗೊಂಡ ಮೇಲೆ ಅನಾಜಿ ಅವರು ಕಾರ್ಯದರ್ಶಿಯಾಗಿರಲು ಒಪ್ಪಿದರು. ಜಯಚಂದ್ರ ನನಗೆ ಉಪಯುಕ್ತ ಯೋಜನೆಗಳನ್ನು ರೂಢಿಸಿಕೊಟ್ಟರು. ಈ ಅವಧಿಯಲ್ಲಿ ಪರಿಷತ್ತಿನ ಪ್ರಕಟನ ವಿಭಾಗವನ್ನು ಚೈತನ್ಯಗೊಳಿಸಿ ನೂರಾರು ಉತ್ತಮಗ್ರಂಥಗಳನ್ನು ಅದರಲ್ಲಿಯೂ ಪ್ರಮುಖವಾಗಿ ಪಿ.ಎಚ್.ಡಿ. ಥೀಸೀಸ್ ಮತ್ತು ಜನಪದ ಸಾಹಿತ್ಯ ಕುರಿತ ಪುಸ್ತಕಗಳನ್ನು ಪ್ರಕಟಿಸಿ ಪ್ರಶಂಸೆಗೆ ಪಾತ್ರನಾದೆ. ಈ ಮೆಚ್ಚುಗೆಯ ಶ್ರೇಯಸ್ಸು ಜಯಚಂದ್ರರಿಗೂ ಅನಾಜಿಗೂ ಸಲ್ಲುತ್ತದೆ.

ಬೆಂಗಳೂರು ಸರಕಾರಿ ವಿಜ್ಞಾನ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಅನಾಜಿಯವರು ಹಾಸನ ಕಾಲೇಜಿಗೆ ವರ್ಗವಾದ ಕಾರಣ ಅವರ ಸಹಾಯಕ – ಪರಿಷತ್ತಿನ ಕಾರ್ಯದರ್ಶಿಯ ರೂಪದಲ್ಲಿ ಹೆಚ್ಚು ಪಡೆಯಲಾಗದಿದ್ದರೂ ವಿಚಾರ ವಿನಿಮಯ ರೂಪದಲ್ಲಿ ಅದು ಇಂದಿಗೂ ಮುಂದುವರಿದಿದೆ.

ಅನಾಜಿಯವರ ಕಾಯಕ ಬತ್ತದೆ ನಿರಂತರವಾಗಿ ಇಂದಿನವರೆಗೂ ಉಳಿದಿರುವುದಕ್ಕೆ ಅವರ ಅಧ್ಯಯನದ ತನ್ಮಯತೆ ಮುಖ್ಯ ಕಾರಣ

ಅವರ ಪುಸ್ತಕ ಪ್ರೀತಿ ಕೇವಲ ಸಂಗ್ರಹಕ್ಕೆ ಸೀಮಿತವಾದುದಲ್ಲ. ಅದು ವ್ಯಾಸಂಗನಿಷ್ಠೆಗೆ ಮೀಸಲಾದುದು. ಅವರು ಓದಾಳಿ. ಮೂಲ ಆಕರಗಳ ಅನ್ವೇಷಕ ಮಾಹಿತಿಕೋಶ. ಅನೇಕ ಲೇಖಕರಿಗೆ ದಾಖಲೆಗಳನ್ನು ಪ್ರತಿಫಲಾಪೇಕ್ಷೆಯಿಲ್ಲದೆ ಒದಗಿಸಿರುವ ಪರೋಪಕಾರಿ.

ಪ್ರೀತಿಯ ಅನಾಜಿ ಪದುಳದಿಂದ ಬಾಳ್ಗೆ

******

'ಅನಾಜಿ' ಎಂಬ ಛಲದಂಕಮಲ್ಲ

ಡಾ॥ ಬಾಬು ಕೃಷ್ಣಮೂರ್ತಿ
ಚರವಾಣಿ : ೯೨೪೨೧೯೦೪೨೧

ಇದು ಆರು ದಶಕಗಳ ಹಿಂದಿನ ಮಾತು. ಸುಮಾರು ೧೯೬೩ ಇರಬಹುದು. ಬೆಂಗಳೂರಿನ ಕೆ.ಆರ್. ವೃತ್ತದಲ್ಲಿರುವ ವಿಶ್ವೇಶ್ವರಾಯ ಕಾಲೇಜ್ ಆಫ್ ಇಂಜಿನಿಯರಿಂಗ್ ಸಭಾಂಗಣ. ವಿದ್ಯಾರ್ಥಿಗಳ ಚರ್ಚಾಸ್ಪರ್ಧೆ. ನಾನೂ ಒಬ್ಬ ವಿದ್ಯಾರ್ಥಿ ಸಭಿಕ. ಎಲ್ಲ ಸ್ಪರ್ಧಿಗಳದ್ದು ಸಾಮಾನ್ಯ ಚರ್ವಿತ ಚರ್ವಣ ಭಾಷಣಗಳು. ಕತ್ತಲಾಗುತ್ತಿದ್ದರೂ ಚರ್ಚೆ ಮುಗಿದಿರಲಿಲ್ಲ. ಸಭೆ ನಿದ್ರಾವಸ್ಥೆಗೆ ಹೋಗುವ ಸ್ಥಿತಿ ತಲಪಿತ್ತು. ಆಗೊಂದು ಕಂಚಿನ ಕಂಠ ಮೊಳಗಿತು! ನಿರುತ್ಸಾಹದಿಂದ ಕುಳಿತಿದ್ದ ಸಭಿಕರನ್ನು ಬಡಿದೆಬ್ಬಿಸಿದಂತಹ ವಾಗ್ಝರಿ! ಅಬ್ಬಾ! ಅದೇನು ವಾಕ್ಪ್ರವಾಹ! ಸುಮಾರು ಐದು ನಿಮಿಷದ ಆ ಭಾಷಣ ಸಭೆಯನ್ನು ಥರಗುಟ್ಟಿಸಿದ್ದಂತೂ ನಿಜ.

ನಾನಂತೂ ನಿಬ್ಬೆರಗಾಗಿಬಿಟ್ಟೆ. ಕನ್ನಡದಲ್ಲಿ ಹೀಗೂ ಮಾತನಾಡಬಹುದೇ! ಒಂದೇ ಸಮನೆ ಹೊರಹೊಮ್ಮುತ್ತಿದ್ದ ಆದಿಪ್ರಾಸದ ಪದಗಳ ದಾಳಿ ಇಡೀ ಸಭೆಯನ್ನು ಎದ್ದು ಕೂರುವಂತೆ ಮಾಡಿತ್ತು. ಅಂದು ತಮ್ಮ ವಾಗ್ವೈಭವದ ಮೂಲಕ ಕನ್ನಡ ಭಾಷೆಯ ಶ್ರೀಮಂತಿಕೆಯನ್ನು, ಸೌಂದರ್ಯವನ್ನು ಪರಿಚಯಿಸಿ ಮೊದಲನೆ ಬಹುಮಾನ ಗಿಟ್ಟಿಸಿದವರು ನರಸಿಂಹರಾಜ ಕಾಲೋನಿಯ ಆಚಾರ್ಯ ಪಾಠಶಾಲೆಯ ವಿದ್ಯಾರ್ಥಿ. ಹೆಸರು ಜಿ. ಅಶ್ವತ್ಥನಾರಾಯಣ.

ಇಂದು ಸಾಹಿತ್ಯ, ಶಿಕ್ಷಣ, ಸಾಮಾಜಿಕ ರಂಗಗಳಲ್ಲಿ ಬೆಂಗಳೂರಿನಲ್ಲಿ ಹೆಸರಾಂತ ವಿದ್ವಾಂಸ. ವರ್ಷ ಎಂಬತ್ತೇಳಾದರೂ ಇಂದಿಗೂ ಅದೇ ಆಕರ್ಷಣೆಯ ಭಾಷಣಕಾರ. ನಗರದ ಎಲ್ಲ ಮುಖ್ಯ ಸಾಹಿತ್ಯ ಕಾರ್ಯಕ್ರಮಗಳಲ್ಲೂ ಇವರ ಭಾಷಣ ಇರಬೇಕು. ಯಾವುದೇ ಗಣ್ಯವ್ಯಕ್ತಿಗಳ ಸನ್ಮಾನ ಪತ್ರ ರಚನೆಯಾಗಬೇಕಾದರೂ ಇವರ ಮನೆ ಬಾಗಿಲಿಗೆ ದೌಡಾಯಿಸಬೇಕು. ಕನ್ನಡ ಪ್ರಾಚೀನ ಗ್ರಂಥಗಳನ್ನು ಕುರಿತು ಯಾವುದೇ ಮಾಹಿತಿ ಬೇಕಾದರೂ ಇವರನ್ನೇ ಸಂಪರ್ಕಿಸಬೇಕು. ಯಾವುದೇ ಕನ್ನಡ ಪ್ರಾಚೀನ ಗ್ರಂಥದ ಸಂಪಾದನೆಯಾಗಬೇಕಾದರೂ ಇವರನ್ನೇ ಮೊರೆಹೋಗಬೇಕು. ಕನ್ನಡದ ಕರೆ ಬಂದರೆ ಮಧ್ಯರಾತ್ರಿಯಾದರೂ ಇವರು ಹೊರಡಲು ಸಿದ್ಧ. ಇವರು ಸಾಹಿತ್ಯ ಪರಿಚಾರಕರೂ ಹೌದು. ಸಾಂಸ್ಕೃತಿಕ ರಾಯಭಾರಿಯೂ ಹೌದು. ಕನಿಷ್ಠ ಸುಮಾರು ಏಳು ದಶಕಗಳ ಕನ್ನಡ ಸಾಕ್ಷಿಪ್ರಜ್ಞೆಯೂ ಹೌದು. ಒಂದು ಕಾಲಖಂಡದ ಕನ್ನಡ ಸಾಹಿತ್ಯ ದಿಗ್ಗಜರ ಛತ್ರಛಾಯೆಯಲ್ಲಿ ದುಡಿದವರೂ ಹತ್ತಾರು ಸಂಸ್ಥೆಗಳಲ್ಲಿ ಕ್ರಿಯಾಶೀಲ ಸದಸ್ಯರೂ ಸಾಹಿತ್ಯ ಸಮ್ಮೇಳನಗಳಲ್ಲಿ ಸಕ್ರಿಯ ಪಾತ್ರಧಾರಿಗಳೂ...ಹೀಗೆ ಅನೇಕ ವಿಧದಲ್ಲಿ ವರ್ಣಿಸಬಹುದಾದ ಕನ್ನಡದ ಹೆಮ್ಮೆಯ ಕಟ್ಟಾಳು, ಈ ಅನಾಜಿ.

೧೯೬೪ರ ಅನಂತರ ನಾನು ಅವರನ್ನು ಕಂಡೇ ಇರಲಿಲ್ಲ. ಕಾಣುವ ಪ್ರಮೇಯವೂ ಎದುರಾಗಲಿಲ್ಲ. ಈ ನಡುವೆ ಒಂದು ವಿಲಕ್ಷಣ ಘಟನೆ ನನ್ನನ್ನು ಆಶ್ಚರ್ಯಚಕಿತನನ್ನಾಗಿ ಮಾಡಿತ್ತು.

ಇಂತಹ ಘಟನೆಗಳ ಬಗ್ಗೆ ಏನನ್ನಬೇಕೋ ತಿಳಿಯುತ್ತಿಲ್ಲ. ಒಂದು ಬೆಳಗಿನ ಜಾವ ಕನಸಿನಲ್ಲಿ ಅನಾಜಿ ಬಂದಿದ್ದರು. ಅದೇನು ವಿಶೇಷ ಎನಿಸಿರಲಿಲ್ಲ. ಆ ಹೊತ್ತು ನಾನು ಬಿಟಿಎಂನ ನನ್ನ ಮನೆಯಿಂದ ಮಾಗಡಿ ರಸ್ತೆಯ ಮಂಗಳ ಸಾಪ್ತಾಹಿಕದ ಕಚೇರಿಗೆ ಹೋಗುತ್ತಿದ್ದಾಗ ಜಯನಗರ ಅರವಿಂದ ಮಾರ್ಗದ ಫುಟ್‌ಪಾತಿನ ಮೇಲೆ ಆ ಪುಣ್ಯಾತ್ಮರೇ ಹೆಗಲಿಗೊಂದು ಚೀಲ ತಗಲಿಸಿಕೊಂಡು, ತಲೆ ತಗ್ಗಿಸಿಕೊಂಡು ನೆಲವನ್ನು ನೋಡುತ್ತಾ ನಡೆದು ಹೋಗುತ್ತಿರಬೇಕೇ! ಕೂಡಲೆ ಸ್ಕೂಟರ್ ನಿಲ್ಲಿಸಿ ಅವರ ಬಳಿಗೆ ಹೋದೆ. ಅವರಿಗೆ ಮೊದಲಿಗೆ ನನ್ನ ಗುರುತು ಸಿಗಲಿಲ್ಲ. ಅನೇಕ ವರ್ಷಗಳ ಹಿಂದೆ ಕಂಡಿದ್ದು, ಅಂದು ಕನಸಿನಲ್ಲಿ ಕಂಡವರು ಅಚಾನಕ್ಕಾಗಿ ಪ್ರತ್ಯಕ್ಷರಾಗಿ ದರ್ಶನ ನೀಡಿದ ಕಾಕತಾಳೀಯದ ಬಗ್ಗೆ ಹೇಳಿದರೆ ಸ್ಥಿತಪ್ರಜ್ಞ ಸ್ವಭಾವದ ಅನಾಜಿ, ಚಕಿತಗೊಳ್ಳದೆ ನಕ್ಕು ಸುಮ್ಮನಾಗಿದ್ದು ನನಗೆ ಪಿಚ್ಚೆನ್ನಿಸಿದ್ದು ಮಾತ್ರ ನಿಜ. ಅದೊಂದು ಅಲೌಕಿಕ ಘಟನೆ ಎಂದು ನಾನು ರೋಮಾಂಚಿತನಾಗಿದ್ದೂ ನಿಜ.

ಕುಡಿಯೊಡೆದ ಕನ್ನಡ ಪ್ರತಿಭೆ

೧೯೩೭ರಲ್ಲಿ ಜನಿಸಿದ ಅನಾಜಿ ಜಯನಗರಕ್ಕೆ ಸ್ಥಳಾಂತರಗೊಳ್ಳುವವರೆಗೆ ಚಾಮರಾಜಪೇಟೆಯ ನಿವಾಸಿ. ಇವರು ತಂದೆ ಹೆಚ್. ಗುಂಡಪ್ಪನವರು, ತಾಯಿ ಜಿ. ಜಾನಕಮ್ಮನವರ ಪ್ರೀತಿಯ ಆರೈಕೆಯಲ್ಲಿ ಬೆಳೆದವರು. ಆದರೆ ಅವರಿಗೆ ಮನೆಗಿಂತಲೂ ಅವರು ಬೆಳೆಯುತ್ತಿದ್ದ ಪರಿಸರವೇ ಹೆಚ್ಚು ಪ್ರಿಯ. ಆಗಲೇ ಕನ್ನಡದ ಪರಿಚಾರಕನೊಬ್ಬ ಕುಡಿಯೊಡಲಾರಂಭಿಸಿದ್ದು.

ಕೋಟೆ ಮಾಧ್ಯಮಿಕ ಶಾಲೆ ಮತ್ತು ಕೋಟೆ ಪ್ರೌಢಶಾಲೆಗಳಲ್ಲಿ ಅವರ ಪ್ರಾರಂಭಿಕ ವಿದ್ಯಾಭ್ಯಾಸ. ಮಾಧ್ಯಮಿಕ ಶಾಲೆಯ ಎದುರೇ ಕನ್ನಡ ಸಾಹಿತ್ಯ ಪರಿಷತ್ ಕಛೇರಿ. ಅವು ೧೯೫೦ರ ದಶಕದ ಆರಂಭದ ವರ್ಷಗಳು. ತಿ.ತಾ. ಶರ್ಮ, ವಿ.ಸೀ, ಡಿವಿಜಿ, ಮಾಸ್ತಿ, ಎಂ.ಆರ್. ಶ್ರೀ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರೀ ಮುಂತಾದ ಮಹಾನ್ ಮಹಾನ್ ದಿಗ್ಗಜರು ಉಪನ್ಯಾಸ ನೀಡುತ್ತಿದ್ದ, ನಿರಂತರ ಭೇಟಿ ನೀಡುತ್ತಿದ್ದ ಸ್ಥಳ ಅಂದಿನ ಪರಿಷತ್ತು.

ಮಾಧ್ಯಮಿಕ ಶಾಲೆಯಲ್ಲಿ ಅನಾಜಿಯವರೆಗೆ ಓದುವ ಹುಚ್ಚು, ಪುಸ್ತಕಗಳ ಪ್ರೀತಿ ಮುತ್ತಿಕೊಂಡಿದ್ದವು. ಶಾಲೆಯ ಅನಂತರ ಮತ್ತು ಬಿಡುವಿನ ವೇಳೆಯಲ್ಲಿ ಕೃಷ್ಣರಾಜ ಪರಿಷನ್ಮಂದಿರವೇ ಇವರ ಎರಡನೆಯ ಮನೆ. ಅಲ್ಲಿನ ಪುಸ್ತಕ ಭಂಡಾರವನ್ನು ಒಮ್ಮೆ ಹೊಕ್ಕರೆ ಬಾಗಿಲು ಹಾಕುವ ವೇಳೆ ಇವರನ್ನು ಎಚ್ಚರಿಸಿ ಮನೆಗೆ ಕಳಿಸುವ ಕೆಲಸ ಅಲ್ಲಿನ ಸಿಬ್ಬಂದಿಯದು.

ಇನ್ನು ಅವರು ವಾಸಿಸುತ್ತಿದ್ದ ಚಾಮರಾಜಪೇಟೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಸಾಹಿತಿಗಳು, ಕಲಾವಿದರಿಂದ ಕೂಡಿದ್ದು ಅವರಲ್ಲಿ ಒಬ್ಬರಲ್ಲದಿದ್ದರೆ ಇನ್ನೊಬ್ಬರ ದರ್ಶನ ಪ್ರತಿದಿನ ಅನಾಜಿಯವರಿಗೆ ಆಗಿ ಅವರಲ್ಲಿ ಸಾಹಿತ್ಯ ಕಲಾಸಕ್ತಿಗಳನ್ನು ಅರಳಿಸುತ್ತಿತ್ತು. ವಿ.ಸೀ, ಎಂ.ಆರ್.ಶ್ರೀ, ಜಿ. ನಾರಾಯಣ, ಹೊನ್ನಪ್ಪ ಭಾಗವತರು, ಪಿಟೀಲು ಚೌಡಯ್ಯನವರು, ಸುಬೋಧ ರಾಮರಾಯರು, ಶೇಷಾದ್ರಿ ಗವಾಯ್ ಹೀಗೆ ಒಬ್ಬರಲ್ಲ ಒಬ್ಬರು ಅವರಿಗೆ ಎದುರಾಗುತ್ತಿದ್ದರು. ಅವರಿಗೆ ನಮಸ್ಕರಿಸಿ ಇವರು ಮುನ್ನಡೆಯುತ್ತಿದ್ದರೆ ಆ ಮಹಾನುಭಾವರ ಆಶೀರ್ವಾದ ಇವರ ಬೆನ್ನ ಹಿಂದೆ ಇರುತ್ತಿತ್ತು. ಹೀಗೆ ಕನ್ನಡವೇ ಸತ್ಯ ಕನ್ನಡವೇ ನಿತ್ಯ ಎಂಬ ವಾತಾವರಣದಲ್ಲಿ, ಹತ್ತಾರು ಸಾಹಿತ್ಯ ಚಟುವಟಿಕೆಗಳ ಸಮೃದ್ಧ ಸಂದರ್ಭಗಳಲ್ಲಿ, ಸಾಹಿತ್ಯ ದಿಗ್ಗಜರ ಸಾಮೀಪ್ಯ, ಸಹವಾಸದಲ್ಲಿ ಬಾಲ್ಯವನ್ನು ಕಳೆದ ಅನಾಜಿಯವರಿಗೆ ಸಾಹಿತ್ಯ ಪರಿಚಾರಿಕೆ ಜೊತೆ ಜೊತೆಗೆ ಅಂಟಿಕೊಂಡು ಬಂದಿದ್ದು ಸಹಜವೇ ಆಗಿತ್ತು.

ದಿಗ್ಗಜರ ಸಹವಾಸದಲ್ಲಿ

ಇದರ ಮುಂದಿನ ಹಂತವೇ ಅ.ನ.ಕೃ, ಮ. ರಾಮಮೂರ್ತಿ, ನಾಡಿಗೇರ್ ಕೃಷ್ಣರಾಯರೇ ಮುಂತಾದ ಸಾಹಿತಿಗಳ ನೇತೃತ್ವದಲ್ಲಿ ಶುರುವಾದ ಕನ್ನಡ ಚಳವಳಿ. ಇಡೀ ಕನ್ನಡ ಕುಲಕೋಟಿಯೇ ಉತ್ಸಾಹ ಸ್ಫೂರ್ತಿಗಳಿಂದ ವಿಜೃಂಭಿಸುತ್ತಿದ್ದ ಆ ದಿನಗಳಲ್ಲಿ ಪಾದರಸದಂತಿದ್ದ ಅನಾಜಿ ಹಿಂದುಳಿಯುವುದು ಸಾಧ್ಯವೇ. ಚಳವಳಿಯ ನಾಯಕರ ಎಡ ಬಲಗಳಲ್ಲಿಯೇ ಇರುತ್ತಾ, ಆಗೊಮ್ಮೆ ಈಗೊಮ್ಮೆ ಭಾಷಣವನ್ನೂ ಮಾಡುತ್ತಾ ಚಳುವಳಿಯಲ್ಲಿ ಒಂದಾದದ್ದು ಅವರ ಕನ್ನಡ ಪರಿಚಾರಿಕೆಯ ಇನ್ನೊಂದು ಮುಖ.

ವಿದ್ಯಾಭ್ಯಾಸದಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಡಿಪ್ಲೋಮಾ ಮಾಡಿದ ಮೇಲೆ ಡಿಗ್ರಿ ಓದುವ ಮನಸ್ಸುಂಟಾಗಿ, ಸರ್ಕಾರಿ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಒಂದು ವರ್ಷದ ಪಿಯುಸಿ ಓದಿ, ಬಿ.ಎ. ಮಾಡಿ, ಕನ್ನಡ ಎಂ.ಎ. ಪದವಿಗಳನ್ನು ಗಳಿಸಿದ್ದು ಇವರ ಓದಿದ ಹಾದಿ. ಆಗಲೇ ಇವರ ವಾಗ್ಝರಿ ಪ್ರವಾಹವಾಗಿ ಹರಿಯಲಾರಂಭಿಸಿದ್ದು. ಆ ಕಾಲಘಟ್ಟದಲ್ಲಿ ಎಲ್ಲೇ ಅಂತರ ಕಾಲೇಜು ಚರ್ಚಾಸ್ಪರ್ಧೆ ನಡೆದರೂ ಅಲ್ಲಿ ಅನಾಜಿ ಇರಲೇ ಬೇಕು. ಬಹುಮಾನ ಗಿಟ್ಟಿಸಲೇಬೇಕು. ಬಹುಮಾನ ಬಂದ ಬೆಳ್ಳಿ ಕಪ್ಪುಗಳನ್ನು ಇರಿಸಲು ಮನೆಯಲ್ಲಿ ಜಾಗವಿಲ್ಲದೆ ಅವನ್ನೇ ಬೇರೆ ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಿ ಕೈತೊಳೆದುಕೊಂಡಿದ್ದುಂಟು.

ಅವರು ಕನಕಪುರದ ಕರಿಯಪ್ಪನವರು ಅವರ ಪ್ರೌಢಶಾಲೆಯಲ್ಲಿ ನಡೆಸುತ್ತಿದ್ದ ಚರ್ಚೆಗಳ ವೈಭವವನ್ನು, ಆತಿಥ್ಯದ ಸೊಬಗನ್ನು, ಪಡೆಯುತ್ತಿದ್ದ ಗೌರವವನ್ನು ನೆನೆಸಿಕೊಂಡು ಇಂದೂ ಪುಳಕಿತರಾಗುವುದುಂಟು. ಸ್ಪರ್ಧಾಳು ವಿದ್ಯಾರ್ಥಿಗಳನ್ನು ಅನಾಜಿಯವರು ಕರಿಯಪ್ಪನವರ ಬಸ್ಸುಗಳಲ್ಲಿ ಕರೆದುಕೊಂಡು ಹೋಗಿ, ರಾತ್ರಿ ಸೊಗಸಾದ ಭೋಜನ ಏರ್ಪಡಿಸಿ, ಹಾಸಿಗೆ ಹೊದಿಕೆಗಳನ್ನು ಹೊಂದಿಸಿ ವಿಶ್ರಾಂತಿಗೆ ಅನುಕೂಲ ಮಾಡಿಕೊಟ್ಟ ದಿನಗಳು ಇವರ ನೆನಪಿನ ಬುತ್ತಿಯಲ್ಲಿ ಇಂದಿಗೂ ಜೀವಂತ.

ಕರ್ತವ್ಯನಿಷ್ಠೆಗೆ ತೆತ್ತ ಬೆಲೆ

ಅನಾಜಿಯವರಿಗೆ ಸರ್. ಎಂ. ವಿಶ್ವೇಶ್ವರಯ್ಯನವರದೇ ಆದರ್ಶ. ಅನ್ಯಾಯ, ಅಕ್ರಮ, ಅನೀತಿಗಳ ವಿರುದ್ಧ ಸಿಡಿದೇಳುವ ಸ್ವಭಾವ. ಅವುಗಳಿಗಾಗಿ ಯಾವುದೇ ಸವಾಲುಗಳನ್ನು ಎದುರಿಸಬೇಕಾದರೂ ಸಿದ್ಧ. ತ್ಯಾಗ ಮಾಡಬೇಕಾದರೂ ಯಾವ ಹಿಂಜರಿಕೆಯೂ ಇಲ್ಲ. ಅಂತಹ ಸಂದರ್ಭಗಳು ಒಂದೇ ಎರಡೇ.

ಇದು ಬಹುಶಃ ೧೯೬೦ರಲ್ಲಿ ಘಟಿಸಿದ್ದು ಇರಬಹುದು. ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿತ್ತು. 'ಕಾಲೇಜು ಉಪನ್ಯಾಸಕನ ಮೇಲೆ ಹಲ್ಲೆ' ಎಂಬ ಶೀರ್ಷಿಕೆಯ ಸುದ್ದಿ. ಓದಿ ನೋಡಿದಾಗ ಆ ಉಪನ್ಯಾಸಕ ಬೇರೆ ಯಾರೂ ಇಲ್ಲ ನನಗೆ ಅಲ್ಪಸ್ವಲ್ಪ ಪರಿಚಿತರಿದ್ದ ಜಿ. ಅಶ್ವತ್ಥನಾರಾಯಣರೇ ಎಂಬುದು ಖಚಿತ ಪಟ್ಟಿತು. ಅದರ ವೃತ್ತಾಂತ ಹೀಗೆ; ಮಂಡ್ಯದಲ್ಲಿ ನಡೆದ ದುರ್ಘಟನೆ ಇದು. ಅಲ್ಲಿನ ಸರ್ಕಾರಿ ಕಾಲೇಜು ರಾಜಕೀಯದ ಗೂಡು. ಬಿ.ಜಿ.ಎಲ್. ಸ್ವಾಮಿಗಳ ಕಾಲೇಜು ರಂಗ, ಕಾಲೇಜು ತರಂಗಗಳ ಪ್ರತಿರೂಪ. ಈ ಗೊಂದಲದ ಗೂಡಿನಲ್ಲಿ ಅಶ್ವತ್ಥನಾರಾಯಣರೊಬ್ಬ ಬಡಪಾಯಿ ಉಪನ್ಯಾಸಕ. ಪುಳಿಚಾರು ಉಪನ್ಯಾಸಕನಾದರೂ ಉಕ್ಕಿನ ನಿರ್ಧಾರದ ಮನುಷ್ಯ. ನಿಯಮಾದರ್ಶಗಳ ಅಪ್ಪಟ ಪ್ರತಿಪಾದಕ, ಸಂರಕ್ಷಕ.

ಪರೀಕ್ಷೆಯಲ್ಲಿ ರಾಜಾರೋಷವಾಗಿ ಕಾಪಿ ಹೊಡೆಯುತ್ತಿದ್ದುದನ್ನು ನೋಡಿ ಅಸ್ವಸ್ಥಗೊಂಡ ಅಶ್ವತ್ಥನಾರಾಯಣ ಕೆಲವರು ವಿದ್ಯಾರ್ಥಿಗಳನ್ನು ಹಿಡಿದು ಪರೀಕ್ಷೆ ಕೊಠಡಿಯಿಂದ ಹೊರಕ್ಕೆ ಕಳಿಸಿ

ಕರ್ತವ್ಯ ನಿಭಾಯಿಸಿದರು. ಇವರೇನೋ ಕರ್ತವ್ಯ ನಿಭಾಯಿಸಿದ ಆತ್ಮಸಂತೃಪ್ತಿಯಲ್ಲಿ ತೇಲಾಡುತ್ತಿದ್ದರು. ಆದರೆ ಅವರ ಬೆನ್ನ ಹಿಂದೆ ಸೇಡು ಹೊಗೆಯಾಡುತ್ತಿದ್ದುದು ಇವರಿಗೆ ಹೇಗೆ ತಾನೇ ತಿಳಿಯಬೇಕು? ಸೇಡಿನ ಕಿಡಿಗೆ ಗಾಳಿ ಬೀಸುವ ಸಹೋದ್ಯೋಗಿಗಳಿಗೇನು ಕೊರತೆ ಇರಲಿಲ್ಲ. ಇವರು ಕಾಲೇಜು ಮುಗಿಸಿ ಎಂದಿನಂತೆ ತಲೆ ಬಗ್ಗಿಸಿಕೊಂಡು ನೆಲ ನೋಡುತ್ತಾ ಬಗಿಲಿನ ಚೀಲದೊಂದಿಗೆ ಬಸ್ ಸ್ಟಾಂಡ್‌ನತ್ತ ಹೆಜ್ಜೆ ಹಾಕುತ್ತಿದ್ದಾಗ ಇವರು ಕನಸು ಮನಸಿನಲ್ಲೂ ನೆನೆಯದ ದುರ್ಘಟನೆ ಜರುಗಿ ಹೋಯಿತು.

ಎಲ್ಲಿಂದಲೋ ಇವರ ಬೆನ್ನ ಹಿಂದೆ ಬಂದ ಗುಂಪೊಂದು ಬೆನ್ನ ಮೇಲೆ ಬಲವಾದ ಹೊಡೆತಗಳ ಸುರಿಮಳೆಗರೆಯರಾರಂಭಿಸಿತು. ಯಾರೋ ಒಬ್ಬ ಇಂತಹ ಕೃತ್ಯಗಳಲ್ಲಿ ಎತ್ತಿದ ಕೈ ಎನಿಸಿದವನು ತನ್ನ ಕೈಯಲ್ಲಿ ಬಚ್ಚಿಟ್ಟುಕೊಂಡಿದ್ದ ರೇಝರ್ ಬ್ಲೇಡ್ ಒಂದರಿಂದ ನಾಜೂಕಾಗಿ ಇವರ ಕುತ್ತಿಗೆಯ ಮೇಲೆ ಗೆರೆ ಎಳೆದ! ಅದೇನು ಪೆನ್ನಿನ ಗೆರೆಯೇ? ಬ್ಲೇಡಿನ ಗೆರೆ! ಉದ್ದವಾದ ಗಾಯವಾಯಿತು. ರಕ್ತ ಚೆಲ್ಲನೆ ಚಿಮ್ಮಿತು. ಇನ್ನು ಕೆಲವರು ಕೆಳಕ್ಕೆ ದಬ್ಬಿದರು. ಹೊಡೆದರು. ಎಷ್ಟು ವೇಗವಾಗಿ ಬಂದರೋ ಅಷ್ಟೇ ವೇಗವಾಗಿ ಅಲ್ಲಿಂದ ಮಾಯವಾಗಿಬಿಟ್ಟರು. ಯಾರವರು? ದೇವರೇ ಬಲ್ಲ.

ಸಂಜೆಯ ಬೆಳಕಿನಲ್ಲಿ ಈ ಘಟನೆ ನಡೆದಿದ್ದರೂ ಗುರುಗಳ ಸಹಾಯಕ್ಕೆ ಯಾವೊಬ್ಬ ಮಂಡ್ಯದ ಗಂಡು ಬರಲಿಲ್ಲ. ಏಕ್ಲಾ ಚಲೋ ರೇ...ಎಂಬ ರವೀಂದ್ರನಾಥ ಟಾಗೋರರ ಬಂಗಾಳಿ ಗೀತೆಯಂತೆ ಒಬ್ಬರೇ ಬೆಂಗಳೂರಿಗೆ ಬಂದರು.

ಬೆಂಗಳೂರಿಗೆ ಬಂದವರೇ ಬಸವನಗುಡಿಯ ಓಲ್ಡ್ ರಿಸರ್ವಾಯರ್ ಸ್ಟ್ರೀಟ್‌ನಲ್ಲಿದ್ದ ಅವರ ಅಚ್ಚುಮೆಚ್ಚಿನ ಗುರುಗಳು ಪ್ರೊ. ಎಂ.ವಿ. ಕೃಷ್ಣರಾಯರ ಮನೆಗೆ ಧಾವಿಸಿ ನಡೆದದ್ದನ್ನು ವರದಿ ಮಾಡಿದರು. ಅವರು ಮಾರನೆಯ ದಿನವೇ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕಿ ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರ ಕಚೇರಿಗೆ ಕರೆದೊಯ್ದರು. ಆಕೆ ಕಾಲೇಜಿನಲ್ಲಿ ಕೃಷ್ಣರಾಯರ ವಿದ್ಯಾರ್ಥಿನಿ. ಅವರ ಮುಂದೆ ಮಂಡ್ಯದ ವಿದ್ಯಾರ್ಥಿಗಳಿಂದ ತಮ್ಮ ಪ್ರೀತಿಪಾತ್ರ ವಿದ್ಯಾರ್ಥಿಯಾದ ಅಧ್ಯಾಪಕನ ಮೇಲೆ ನಡೆದ ಹಲ್ಲೆಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿ ಹಲ್ಲೆ ನಡೆಸಿದವರನ್ನು ಹುಡುಕಿ ಅವರನ್ನು ಕಾಲೇಜಿನಿಂದ ಸಸ್ಪೆಂಡ್ ಮಾಡಬೇಕೆಂದು ಕೃಷ್ಣರಾಯರು ವಾದಿಸಿದರು. ಆಕೆ ಗುರುಗಳಿಗೆ ಕಾಫಿ ತರಿಸಿಕೊಟ್ಟು ಗೌರವಿಸಿದರು. ಆದರೆ ಮಂಡ್ಯದ ಹೆಸರು ಕೇಳಿದ ಕೂಡಲೇ ಹೆದರಿ ಗುಬ್ಬಚ್ಚಿಯಾದಂತೆ ಆದರು. ತಾವು ಅತಿಹೆಚ್ಚಿನದಾಗಿ ಮಾಡಬಹುದಾದುದೇನೆಂದರೆ ನೊಂದ ಅಧ್ಯಾಪಕರನ್ನು ಮಂಡ್ಯದಿಂದ ಇನ್ನೊಂದು ಊರಿಗೆ ವರ್ಗಾಯಿಸಬಹುದೆಂದರು. ಅಲ್ಲಿಯೇ ಅಶ್ವತ್ಥನಾರಾಯಣರನ್ನು ಹಾಸನ ಸರ್ಕಾರಿ ಡಿಗ್ರಿ ಕಾಲೇಜಿಗೆ ವರ್ಗಾಯಿಸಿದ ಆರ್ಡರ್ ಸಿದ್ಧಪಡಿಸಿ ಕೊಟ್ಟೇ ಬಿಟ್ಟರು. ಈಗ ಅಶ್ವತ್ಥನಾರಾಯಣರ ಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಯಿತು.

ದೇಜಗೌ ಸರ್ಟಿಫಿಕೇಟ್

ಹಾಸನದಲ್ಲಿ ಇವರ ಪರಿಸ್ಥಿತಿ ಸುಧಾರಿಸಲಿಲ್ಲ. ಆ ಕಾಲೇಜು ಕೂಡ ಎಲ್ಲ ಕಾಲೇಜುಗಳಂತೆ ಗೊಂದಲಪುರವೇ. ಗುಂಪುಗಾರಿಕೆಯ ರಾಜಕೀಯ ಆಡುಂಬೊಲ. ಇವರು ಪರೀಕ್ಷೆಯಲ್ಲಿ ಕಾಪಿ ಹೊಡೆದವರನ್ನು ಹಿಡಿದರು. ಪರೀಕ್ಷಾ ಸಮಯದಲ್ಲಿ ಅಧ್ಯಾಪಕರು ಯಾರೂ ಇನ್ವಿಜಿಲೇಷನ್ ಕೆಲಸ ಮಾಡುವುದಿಲ್ಲವೆಂದು ಭೀಷ್ಮ ಪ್ರತಿಜ್ಞೆ ಮಾಡಿ ಪತ್ರ ಬರೆದುಕೊಟ್ಟು ಕೈಕಟ್ಟಿ ಕುಳಿತರು. ಅಶ್ವತ್ಥನಾರಾಯಣರೂ ಸಹಿ ಮಾಡಿದವರಲ್ಲಿ ಒಬ್ಬರು. ಪರೀಕ್ಷೆ ಮಾತ್ರ ನಡೆಯಲಿಲ್ಲ. ವಿಶ್ವವಿದ್ಯಾಲಯಕ್ಕೆ ವರದಿ ಹೋಯಿತು. ಉಪಕುಲಪತಿ ಸ್ವತಃ ಪ್ರೊ. ದೇ. ಜವರೇಗೌಡರೇ ಹಾಸನಕ್ಕೆ ಬಂದು ಇಳಿದರು.

ವಿಚಾರಣೆ ನಡೆಯಿತು. ಸಂಧಾನವಾಯಿತು. ಎಲ್ಲರೂ ತಮ್ಮ ತಮ್ಮ ಪತ್ರಗಳನ್ನು ಹಿಂದಕ್ಕೆ ತೆಗೆದುಕೊಂಡರು. ಅನಾಜಿ ಮಾತ್ರ ಹಿಂದಕ್ಕೆ ಸರಿಯಲಿಲ್ಲ. ತಮ್ಮ ಪ್ರತಿಭಟನೆಯನ್ನು ಸೂಚಿಸಿ ತಮ್ಮ ನೆಲೆಯಲ್ಲಿ ದೃಢವಾಗಿ ನಿಂತರು. ಇವರ ಕರ್ತವ್ಯನಿಷ್ಠೆಯನ್ನು ಉಪಕುಲಪತಿ ದೇಜಗೌರವರು ಗುರುತಿಸಿಕೊಳ್ಳದಿರಲಿಲ್ಲ.

ಇನ್ನೂ ಉಪಕುಲಪತಿಗಳು ಹಾಸನದ ಸರ್ಕೀಟ್ ಹೌಸ್‌ನಲ್ಲಿದ್ದಾಗಲೇ ಕರ್ನಾಟಕ ಕಾವಲು ಪಡೆಯ ಅಧ್ಯಕ್ಷರಾದ ಜಿ. ನಾರಾಯಣರ ನೇತೃತ್ವದಲ್ಲಿ ಕಾವಲು ಪಡೆ ಸದಸ್ಯರು ಬಂದರು. ಆಗ ಗಡಿಗಳಲ್ಲಿ ಕನ್ನಡ ರಕ್ಷಣೆ ಮಾಡುವ ಪ್ರಶ್ನೆ ಬಂದಾಗ ದೇಜಗೌ ಅಂತಹ ಕೆಲಸಗಳಿಗೆ ದೃಢಚಿತ್ತ ಮತ್ತು ನ್ಯಾಯಪರ ದೃಷ್ಟಿಯ ಅಶ್ವತ್ಥನಾರಾಯಣರಂತಹವರು ನೇಮಕಗೊಳ್ಳಬೇಕು ಎಂದರು. ಗುಣಗ್ರಾಹಿ ದೇಜಗೌರವರು ಅನಾಜಿಯವರ ಮೌಲ್ಯಾಧಾರಿತ ನಡೆನುಡಿಗೆ ಚಿನ್ನದ ಸರ್ಟಿಫಿಕೇಟ್ ನೀಡಿದಂತಾಗಿತ್ತು.

ಅನಾಜಿ ಛಲದಂಕಮಲ್ಲರಷ್ಟೇ ಅಲ್ಲ. ಪ್ರತಿವಾದಿ ಭಯಂಕರರೂ ಸಹ. ಅವರ ಜೊತೆ ಅಪ್ಪಿತಪ್ಪಿ ಯಾರಾದರೂ ವಾದಕ್ಕ ಇಳಿದರೆ ಅಂಥವರಿಗೆ ಬೆವರಿಳಿಸುವ ಜೊತೆಗೆ ಅನಂತರ ಸಮಾಧಾನವನ್ನು ಮಾಡಬಲ್ಲವರು. ವಾದದಲ್ಲಿ ಅವರ ಭಾಷಾಜ್ಞಾನ, ಪುಸ್ತಕ ಜ್ಞಾನಗಳು ಅವರಿಗೆ ಸಹಾಯಕ್ಕೆ ಬರುತ್ತವೆ.

ಇನ್ನು ಇವರ ಸಂಬಂಧವಿರುವ ಸಾರ್ವಜನಿಕ ಸಂಸ್ಥೆಗಳ ವಾರ್ಷಿಕ ಸರ್ವಸದಸ್ಯರ ಸಭೆಗಳಲ್ಲಿ ತಪ್ಪದೆ ಭಾಗವಹಿಸುವ ಇವರು ವಾರ್ಷಿಕ ವರದಿಯ ಪುಸ್ತಕದಲ್ಲಿ ಅಂಡರ್‌ಲೈನ್ ಮಾಡಿಕೊಂಡು ಹೋಗಿ ಪ್ರಶ್ನಿಸಲು ಎದ್ದು ನಿಂತರೆಂದರೆ ಕೆಲವು ಸಂಸ್ಥೆಗಳ ಕಾರ್ಯದರ್ಶಿಗಳು, ಕೋಶಾಧ್ಯಕ್ಷರುಗಳಿಗೆ ನಡುಕ ತಪ್ಪದು. ಹಾಗಿರುತ್ತದೆ ನ್ಯೂನತೆಗಳ ಮೇಲಿನ ಅವರ ಖಡಕ್ ವಾಗ್ದಾಳಿ. ಅಂತಹ ಪ್ರತಿವಾದಿ ಭಯಂಕರರು ಈ ಅನಾಜಿ.

ಇಂತಹ ಹಲವು ಹತ್ತು ಸಂದರ್ಭಗಳಲ್ಲಿ ತಾವು ನಂಬಿದ ಜೀವನ ಮೌಲ್ಯಗಳಿಗಾಗಿ ಕಟಿಬದ್ಧರಾಗಿ ನಿಂತವರು ಅನಾಜಿ. ಅವರ ಜೀವಿತ ಕಾಲದಲ್ಲಿ ಅವರು ಭಾಗವಹಿಸದ ಕನ್ನಡ ಸಾಹಿತ್ಯ ಸಮ್ಮೇಳನಗಳು ಕಡಮೆ. ಭಾಗವಹಿಸಿದ್ದು ಹೆಚ್ಚು. ಜಿ.ಪಿ. ರಾಜರತ್ನಂರವರು ಬಹಳ ಇಷ್ಟಪಡುತ್ತಿದ್ದ 'ಸಾಹಿತ್ಯ ಪರಿಚಾರಕ' ಎಂಬ ಶೀರ್ಷಿಕೆಯ ಅಭಿನಂದನಾಗ್ರಂಥವನ್ನು ಅನಾಜಿಯವರಿಗೆ ಅರ್ಪಿಸುತ್ತಿರುವುದು ಸಕಾಲಿಕ, ಸಾಮಯಿಕ, ಸಾರ್ಥಕ.

*****

ತರತಮ ಎಣಿಸದ ಸಹೃದಯ ವಿದ್ವಾಂಸ

ಡಾ. ಟಿ.ಆರ್. ಅನಂತರಾಮು
ಚರವಾಣಿ : ೯೮೮೬೩೫೬೦೮೫

ಇದು ಐದು ದಶಕಗಳ ಹಿಂದಿನ ವೃತ್ತಿಜೀವನದ ಪುಟ – ಈಗ ತಿರುವಿಹಾಕುವ ಸಮಯ. ೧೯೭೨ ರಲ್ಲಿ ನಾನು ಬೆಂಗಳೂರು ಸರ್ಕಾರಿ ವಿಜ್ಞಾನ ಕಾಲೇಜಿನ ಭೂವಿಜ್ಞಾನ ಇಲಾಖೆಗೆ ಡೆಮಾನ್ಸ್ಟ್ರೇಟರ್ ಆಗಿ ತಾತ್ಕಾಲಿಕ ಪಟ್ಟಿಯಲ್ಲಿ ಆಯ್ಕೆಯಾಗಿ ಬಂದೆ. ಆಗ ತಾನೇ ಕವಿ ನಿಸಾರ್ ಅಹಮದ್ ಅವರು ಶಿವಮೊಗ್ಗ ಕಾಲೇಜಿನಿಂದ ಈ ಕಾಲೇಜಿಗೆ ವರ್ಗವಾಗಿ ಬಂದಿದ್ದರು. ಅವರದು ಜಿಯಾಲಜಿ ವಿಭಾಗವೇ. ನಿಸಾರ್ ಅವರ ಹೆಸರು ಕೇಳಿದ್ದೆ, ಅವರು ಆಗಷ್ಟೇ ಬರೆದಿದ್ದ 'ರಾಮನ್ ಸತ್ತ ಸುದ್ದಿ' ಕವನವನ್ನು ಓದಿದ್ದೆ. ಹಿರಿಯ ಸಹೋದ್ಯೋಗಿಯಾದರೂ ಅವರೊಡನೆ ಚರ್ಚಿಸುವಷ್ಟು ಸಾಹಿತ್ಯದ ಬಂಡವಾಳವಿರಲಿಲ್ಲ. ಜತೆಗೆ ಕವಿ ಎಂಬ ಭಯಮಿಶ್ರಿತ ಗೌರವ ಬೇರೆ. ಅವರನ್ನು ಹುಡುಕಿಕೊಂಡು ಅನೇಕ ಸಾಹಿತಿಗಳು ಇಲಾಖೆಗೆ ಬರುತ್ತಿದ್ದರು. ಅಲ್ಲದೆ ಸರ್ಕಾರಿ ವಿಜ್ಞಾನ ಕಾಲೇಜಿನ ಕನ್ನಡ ವಿಭಾಗದ ಅಧ್ಯಾಪಕರಿಗೆ ನಿಸಾರರ ಪುನರಾಗಮನ ಒಂದು ರೀತಿಯ ಪುಲಕ ಕೊಟ್ಟಿತ್ತು. ತಮ್ಮ ಇಲಾಖೆಗಳನ್ನು ಬಿಟ್ಟರೆ ಈ ಅಧ್ಯಾಪಕರು ಹೆಚ್ಚು ಇರುತ್ತಿದ್ದುದು ಜಿಯಾಲಜಿ ಡಿಪಾರ್ಟ್‌ಮೆಂಟಿನಲ್ಲೇ. ಈ ಪೈಕಿ ಕನ್ನಡ ವಿಭಾಗದ ಪ್ರೊ. ಜಿ. ಅಶ್ವತ್ಥನಾರಾಯಣ ಒಬ್ಬರು. ಸಹೋದ್ಯೋಗಿಗಳ ಬಾಯಲ್ಲಿ ಅವರು ಮೂರಕ್ಷರದ 'ಅನಾಜಿ'. ನನಗೂ ಅವರ ಪೂರ್ಣ ಹೆಸರು ಗೊತ್ತಾದದ್ದು ಅನಂತರವೇ. ಆ ಕಾಲ ಹೇಗಿತ್ತೆಂದರೆ ನವ್ಯದ ಉಚ್ಛ್ರಾಯ ಕಾಲ. ಅನಾಥಪ್ರಜ್ಞೆ, ಏಕಾಂಗಿತನ, ಅಂತರ್ಮುಖತೆ ಇವನ್ನೇ ಬಂಡವಾಳವಾಗಿಸಿ ಬರೆದ ಕಾವ್ಯದ ತುಂಬ ಪ್ರತೀಕಗಳೇ. ಸಾಮಾನ್ಯ ಕಾವ್ಯಪ್ರೇಮಿಗಳಿಗೆ ನವ್ಯಕಾವ್ಯ ದೂರವೇ ಉಳಿಯಿತು. ನಿಸಾರರು ಕವಿಯಾಗಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ನವ್ಯ ಕಾವ್ಯ ಬರೆಯಬೇಕಾಯಿತು. ಇಲ್ಲಿ ಪ್ರಾಸಕ್ಕೆ ಪ್ರವೇಶವಿರಲಿಲ್ಲ. ಆದರೆ ಅನಾಜಿ ಬಂದರೆಂದರೆ ಅವರ ಪ್ರತಿ ಮಾತೂ ಪ್ರಾಸಬದ್ಧ. ಆದರೆ ಅದು ಕೃತಕವಲ್ಲ, ಸಹಜವಾಗಿ ಅವರ ಮಾತಿನಲ್ಲಿ ಬರುತ್ತಿತ್ತು. ಎಲ್ಲರಿಗೂ ಅಚ್ಚರಿ. ಜತೆಗೆ ಇವರ ಸಾಹಿತ್ಯಜ್ಞಾನ; ನಿಂತಲ್ಲೇ ಪದಗಳು ಉಕ್ಕುತ್ತಿದ್ದವು, ಬಾಯಲ್ಲೇ ರೆಫೆರೆನ್ಸ್ ಹೇಳುವ ಪಾಂಡಿತ್ಯ.

ಅವರ ಮನೆಯಲ್ಲಿ ಕನ್ನಡ ಸಾಹಿತ್ಯದ ಸಾವಿರಾರು ಪುಸ್ತಕಗಳಿವೆ ಎಂಬುದು ೭೦ರ ದಶಕದಲ್ಲೇ ಜನಜನಿತವಾಗಿತ್ತು. ಮುಂದೆ ಅವರ ಒಡನಾಟ ಬೆಳೆಯಿತು, ಅವರ ಮನೆಗೆ ಅನೇಕ ಸಲ ಹೋಗಿದ್ದೇನೆ. ಎಲ್ಲೆಲ್ಲೂ ಬೈಂಡ್ ಮಾಡಿದ ಪುಸ್ತಕಗಳೇ. ಅವರ ಮನೆಯ ಕಿಟಕಿಗಳಲ್ಲಿ ಗಾಳಿ, ಬೆಳಕನ್ನು ಬಂದ್ ಮಾಡುವಷ್ಟು ಪುಸ್ತಕಗಳು ಹಠತೊಟ್ಟಿವೆ ಎನ್ನಬೇಕು. ಅಂದಾಜು ೧೦,೦೦೦ ಪುಸ್ತಕಗಳು ಎನ್ನುವುದು ಅವರ ಬಾಯಿಂದಲೇ ಬಂದ ಅಂಕಿ-ಸಂಖ್ಯೆ. ಪಂಡಿತರು ಪರಾಮರ್ಶೆಗಾಗಿ ಪುಸ್ತಕ ಹುಡುಕಲು ಹೊರಟು ಎಲ್ಲೂ ಸಿಕ್ಕದಿದ್ದಾಗ, ಅವರ ಮನೆಗೇ ಹಾಜರಾಗುವುದು ಈಗಲೂ ಒಂದು ಅಕಾಡೆಮಿಕ್

ಸಂಗತಿಯೇ. ಎಷ್ಟೋ ವೇಳೆ ಶೇಷಾದ್ರಿ ಸ್ಮಾರಕ ಲೈಬ್ರರಿಯಲ್ಲಿ ಇಲ್ಲದಿದ್ದ ಪುಸ್ತಕಗಳು ಇವರ ಮನೆಯಲ್ಲಿ ಹಾಯಾಗಿ ಕುಳಿತಿರುತ್ತವೆ. ಅನಾಜಿ, ಪುಸ್ತಕ ಎರವಲು ಕೊಡುವುದು ತುಂಬ ಅಪರೂಪ. ಬಹುತೇಕ ವೇಳೆ ಅವರೇ ಬಂದು, ಅವರದೇ ಖರ್ಚಿನಲ್ಲಿ, ಹತ್ತಿರದ ಜೆ಼ರಾಕ್ಸ್ ಅಂಗಡಿಯಲ್ಲಿ ನೀವು ಬಯಸಿದ ಪುಸ್ತಕವನ್ನು ತಂದು ನಿಮಗೆ ಬೇಕಾದ ಭಾಗವನ್ನು ಜೆ಼ರಾಕ್ಸ್ ಮಾಡಿಸಿಕೊಟ್ಟು ಪುಸ್ತಕವನ್ನು ಮರಳಿ ತಂದು ಸ್ವಸ್ಥಾನ ಸೇರಿಸುತ್ತಾರೆ. ಅದು ಸುಲಭ, ಏಕೆಂದರೆ ಎಲ್ಲ ಪುಸ್ತಕವನ್ನು ಅವು ಯಾವ ಕೆಟಗರಿ ಎಂದು ವರ್ಗೀಕರಿಸಿದ್ದಾರೆ.

ಕೀರ್ತನೆಗಳು, ದಾಸಸಾಹಿತ್ಯ ಎಂದರೆ ಅವರಿಗೆ ವಿಶೇಷ ಒಲವು ಎಂಬ ಸಂಗತಿಯನ್ನು ಮತ್ತೆ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಹೊಸಕೆರೆ ಚಿದಂಬರಯ್ಯ ಎಂದರೆ ಹಳೆ ತಲೆಮಾರಿನ ಸಾಹಿತ್ಯಪ್ರಿಯರಿಗೆ ಕಿವಿ ನಿಮಿರುವುದು. ಕವಿ, ನಾಟಕಕಾರ, ಅಧ್ಯಾತ್ಮ ಪ್ರಧಾನವಾದ ಸಾಹಿತ್ಯ ರಚಿಸಿದ ಚಿದಂಬರಯ್ಯನವರು (೧೮೭೦-೧೯೩೦) ಎತ್ತರದ ಸಾಹಿತಿಗಳು. ಆರ್ಯಧರ್ಮ ಪ್ರದೀಪಿಕೆ, ಗೀತಾರ್ಥಚಂದ್ರಿಕೆ, ಕೀರ್ತನ ಕಂಠಾಭರಣ, ಮನಸ್ಸಿಗುಪದೇಶ ಇವೇ ಮುಂತಾದವು ಹಿಂದಿನ ತಲೆಮಾರಿಗೆ ಬಾಯಿಪಾಠವಾಗಿದ್ದ ಅವರ ಕೃತಿಯ ಶೀರ್ಷಿಕೆಗಳು. ಈ ಮಹನೀಯರು ಒಟ್ಟು ಎಷ್ಟು ಕೃತಿಗಳನ್ನು ರಚಿಸಿದ್ದಾರೆಂಬುದು ಅವರ ಬಂಧುಬಾಂಧವರಿಗೂ ಸಂಪೂರ್ಣವಾಗಿ ತಿಳಿಯದು. ಆದರೆ ಅನಾಜಿ ಅವರ ಶೋಧಕ ಕಣ್ಣುಗಳಿಂದ ಇವು ತಪ್ಪಿಸಿಕೊಂಡಿರಲಿಲ್ಲ. ಕಾಲಾನುಕ್ರಮದಲ್ಲಿ ಕೃತಿಗಳನ್ನು ಪಟ್ಟಿಮಾಡಿದರು, ಸಮಾನ ಮನಸ್ಕರೊಡನೆ ಅನಾಜಿ ಮಾತನಾಡಿದರು, ಹೊಸಕೆರೆ ಚಿದಂಬರಯ್ಯನವರ ಹೆಸರಿನಲ್ಲಿ ಟ್ರಸ್ಟ್ ಸ್ಥಾಪನೆಯಾಯಿತು (ಬಹುಶಃ ೨೦೧೦). ತಾವೂ ಸದಸ್ಯರಾದರು, ಚಿದಂಬರಯ್ಯನವರ ಸಾಹಿತ್ಯದ ಮಹತ್ವವನ್ನು ಸದಸ್ಯರಿಗೆ ಮನವರಿಕೆಮಾಡಿದರು. ಇವೆಲ್ಲವೂ ಪುನರ್ಮುದ್ರಣವಾಗಬೇಕೆಂದು ದೀಕ್ಷೆತೊಟ್ಟರು. ಸುಮಾರು ೭೫ ಕೃತಿಗಳನ್ನು ಅವರು ಪಟ್ಟಿಮಾಡಿದ್ದು ಸದಸ್ಯರಿಗೇ ವಿಸ್ಮಯ ತಂದಿತ್ತು. ಪ್ರಕಾಶನಕ್ಕೆ ಬೇಕಾದ ಎಲ್ಲ ಪೂರ್ವಸಿದ್ಧತೆಗಳನ್ನು ಅದರಲ್ಲೂ ಮುಖ್ಯವಾಗಿ ಅಕ್ಷರದೋಷಗಳನ್ನು ತಿದ್ದುವುದನ್ನು ತಾವೇ ವಹಿಸಿಕೊಂಡರು. ಈ ಮಹತ್ಕಾರ್ಯದಲ್ಲಿ ಮರುಮುದ್ರಣವಾದ ಗ್ರಂಥಗಳು –ಮಹಲಿಂಗರಂಗ ಕವಿಯ ಅನುಭವಾಮೃತ ಕಾವ್ಯ (ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿ ಇದಕ್ಕೆ ಲಭ್ಯವಾಯಿತು (೨೦೧೨). ಭರತಖಂಡದ ಜೀವಜ್ಯೋತಿಗಳು (೨೦೧೦) ಕೃತಿ ಬಿ.ಎ.ಪಾಂಡುಸ್ಮೃತಿ ಗ್ರಂಥಮಾಲೆಯಲ್ಲಿ ಪ್ರಕಟವಾಯಿತು. 'ಆರ್ಯಧರ್ಮಪ್ರದೀಪಿಕೆ' ಮೂರನೇ ಮುದ್ರಣವಾಗಿ ೨೦೧೧ರಲ್ಲಿ ಐ.ಬಿ.ಎಚ್. ನಿಂದ ಪ್ರಕಟವಾಯಿತು. 'ಭಕ್ತಿಗೀತಾವಳಿ' ಹೊಸಕೆರೆ ಚಿದಂಬರಯ್ಯನವರ ಟ್ರಸ್ಟ್‌ನಿಂದ ಡಾ. ಜಯಂತಿ ಮತ್ತು ಸತೀಶ್ ದಂಪತಿಗಳ ಆರ್ಥಿಕ ನೆರವಿನಿಂದ ಪರಿಷ್ಕೃತವಾಗಿ ಮರುಮುದ್ರಣ ಕಂಡಿತು (೨೦೧೦). ಇದರ ಹಿಂದೆಯೇ 'ಮಕ್ಕಳ ಕೈ ಗೀತೆ' ೨೦೨೪ರಲ್ಲಿ ಅನಾಜಿ ಅವರ ಸಂಪಾದಕತ್ವದಲ್ಲಿ ವಿನಯ್ ಫೌಂಡೇಶನ್‌ನಿಂದ ಮತ್ತು 'ಗೀತೆಯ ತಿರುಳು' ಪ್ರಶ್ನೋತ್ತರ ರೂಪ ಅದೇ ವರ್ಷದಲ್ಲಿ (೨೦೨೪) ಪ್ರಕಟವಾಯಿತು. ಈ ಎಲ್ಲ ಕೃತಿಗಳು ಹೊಸಕೆರೆ ಚಿದಂಬರಯ್ಯನವರ ಸಾಹಿತ್ಯವನ್ನು ಸಮಾಜಕ್ಕೆ ಮರುಪರಿಚಯಮಾಡಿಸಿದವು. ಇದರ ಮುಖ್ಯ ನೇತಾರ ನಿಸ್ಸಂಶಯವಾಗಿ ಡಾ. ಜಿ. ಅಶ್ವತ್ಥನಾರಾಯಣ. ದುರದೃಷ್ಟವಶಾತ್ ಟ್ರಸ್ಟ್ ತನ್ನ ಕಾರ್ಯ ಚಟುವಟಿಕೆಗಳನ್ನು ಮುಂದುವರಿಸಲಿಲ್ಲ. ನಷ್ಟವಾದದ್ದು ಕನ್ನಡಿಗರಿಗೆ. ಈ ಹೊತ್ತಿಗೆ ಹೊಸಕೆರೆ ಚಿದಂಬರಯ್ಯನವರ ಎಲ್ಲ ಕೃತಿಗಳೂ ಮರುಮುದ್ರಣವಾಗುತ್ತಿದ್ದವು.

೨೦೧೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವ ಆಚರಿಸುವ ಸಂಭ್ರಮದಲ್ಲಿತ್ತು. ನೂರು ವರ್ಷಗಳು ದಾಟಿದ ಹಿನ್ನೆಲೆಯಲ್ಲಿ ಅದು ಗೈದ ಕೆಲಸಗಳ ಅವಲೋಕನ ಕುರಿತು ಗ್ರಂಥ ತರುವುದು ಪರಿಷತ್ತಿನ ಯೋಜನೆಗಳಲ್ಲೊಂದು. ಆಧುನಿಕ ಕನ್ನಡ ಸಾಹಿತ್ಯದ ದಾಪುಗಾಲುಗಳನ್ನು ಗುರುತಿಸಲೆಂದು ಅಧ್ಯಕ್ಷ ಪುಂಡಲೀಕ ಹಾಲಂಬಿಯವರು ನನಗೆ ವಿಜ್ಞಾನ ತಂತ್ರಜ್ಞಾನ ಕುರಿತು ೧೪ನೇ ಸಂಪುಟವನ್ನು

ಸಂಪಾದಿಸಲು ಸೂಚಿಸಿದರು. ಕೆಲಸ ಗುರುತರವಾದದ್ದು; ಸುಲಭಸಾಧ್ಯವಾಗಿರಲಿಲ್ಲ. ಆದರೂ ಲೇಖಕ ಮಿತ್ರರೊಡನೆ ಯೋಚಿಸಿ, ಯಾರು, ಯಾವ ವಿಭಾಗ ನಿರ್ವಹಿಸಿದರೆ ನ್ಯಾಯ ಒದಗೀತು ಎಂಬ ಪ್ರಜ್ಞೆ ಇಟ್ಟುಕೊಂಡೇ ಸಂಪುಟ ರೂಪಿಸಬೇಕಾಯಿತು. ಕನ್ನಡ ವಿಜ್ಞಾನ ತಂತ್ರಜ್ಞಾನ ಸಾಹಿತ್ಯದಲ್ಲಿ ನಿಘಂಟು, ವಿಶ್ವಕೋಶಗಳ ಪಾತ್ರ ಹಿರಿದು. ಆದರೆ ಅವುಗಳ ಕ್ರಮಾಗತ ಅಧ್ಯಯನ ಕನ್ನಡದಲ್ಲಿ ಆಗಿಲ್ಲ. ನಾನೇ ಈ ವಿಭಾಗ ನಿರ್ವಹಿಸಲು ಧೈರ್ಯಕೊಟ್ಟವರು ಅನಾಜಿ. ಅಷ್ಟೇ ಅಲ್ಲ, ಅನುಬಂಧದಲ್ಲಿ ೪೬ ವಿಜ್ಞಾನ ಶಬ್ದಕೋಶಗಳ ಪಟ್ಟಿಯನ್ನು ಕೊಟ್ಟವರು ಇವರೇ. ವರ್ಷ, ಕೃತಿ, ಲೇಖಕರು/ಸಂಪಾದಕರು, ಪ್ರಕಾಶಕರು, ಭಾಷೆ ಈ ಪ್ರಧಾನ ಶೀರ್ಷಿಕೆಗಳಲ್ಲಿ ಅನುಬಂಧವನ್ನು ತಯಾರಿಸಬೇಕಾಗಿತ್ತು. ಇದನ್ನು ಗಮನಿಸಿದ ನನಗೆ ಮಹದಾಶ್ಚರ್ಯ. ಎಷ್ಟೋ ನಿಘಂಟು, ಶಬ್ದಕೋಶಗಳ ಹೆಸರನ್ನು ಕೇಳಿಯೇ ಇರಲಿಲ್ಲ. ಮೊತ್ತದಲ್ಲಿ ಹೇಳುವುದಿಷ್ಟು, ಹಿರಿಯರೂ, ವಿದ್ವಾಂಸರೂ ಅನುಭವಿಗಳು ಇಂಥ ಸಂಕೀರ್ಣ ವಿಚಾರದಲ್ಲಿ ಹೇಗೆ ಮುನ್ನಡೆಸಬಲ್ಲರು ಎಂಬ ಅರಿವು ನನಗಾಯಿತು. ೭೦ರ ದಶಕದಲ್ಲಿಯೇ ಕರ್ನಾಟಕ ಸರ್ಕಾರ ರಾಜ್ಯದ ವಿವಿಧ ಇಲಾಖೆಗಳಿಗೆ ಸೂಚನೆಕೊಟ್ಟು ಆಯಾ ಇಲಾಖೆ ಬಳಸುವ ಪಾರಿಭಾಷಿಕ ಶಬ್ದಗಳ ನಿಘಂಟು ತಯಾರಿಸಿದೆ. ಅದನ್ನೂ ಅನುಬಂಧದಲ್ಲಿ ಸೇರಿಸಬೇಕು' ಎಂದು ಹೇಳಿದ್ದಷ್ಟೇ ಅಲ್ಲ, ಸ್ವತಃ ಅವರೇ ತಯಾರಿ ಮಾಡಿಕೊಟ್ಟರು. ಔಷಧನಿಯಂತ್ರಣ ಇಲಾಖೆ, ಅರಣ್ಯ ಇಲಾಖೆ, ರೇಷ್ಮೆ ಇಲಾಖೆ ಮುಂತಾದವು ತಮ್ಮ ತಮ್ಮ ಇಲಾಖೆಯಲ್ಲಿ ಬಳಸುವ ಪಾರಿಭಾಷಿಕ ಶಬ್ದಗಳ ಪರಿಚಯ ನನಗಾದದ್ದು ಇದೇ ಮೊದಲು. ಈ ಬಗೆಯ ಮಾರ್ಗದರ್ಶನ ಮಾಡುವ ಏಕೈಕ ವಿದ್ವಾಂಸ ನಮ್ಮ ಅನಾಜಿ. ಇದರಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆ ಇರದು.

ಇದನ್ನೇ ಮುಂದುವರೆಸಿದರೆ, ಅನಾಜಿಯವರ ಜ್ಞಾನ ವಾಙ್ಮಯದ ಮತ್ತೊಂದು ಮುಖ ಪರಿಚಯವಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳನ್ನು ಬೇರೆ ಬೇರೆ ಸಂಪುಟಗಳಲ್ಲಿ ಹೊರತಂದಿದೆ. ರಂ.ಶ್ರೀ ಮುಗಳಿಯವರು, ಹಂಪ ನಾಗರಾಜಯ್ಯ, ಗೊ.ರು. ಚೆನ್ನಬಸಪ್ಪ, ಧರ್ಮದರ್ಶಿ ಹರಿಕೃಷ್ಣ ಪುನರೂರು ಇವರೆಲ್ಲ ಸೇರಿ ೨೦೦೬ ರವರೆಗಿನ ಸಂಪುಟಗಳನ್ನು ಸಿದ್ಧಪಡಿಸಿದ್ದರು. ೨೦೦೬ರಿಂದ ೨೦೧೫ ರವರೆಗೆ ಅಂದರೆ ಪರಿಷತ್ತು ನೂರರ ಸಂಭ್ರಮವನ್ನು ಕಾಣುವ ಸಂದರ್ಭದಲ್ಲಿ ಮತ್ತೊಂದು ಸಂಪುಟವನ್ನು ಹೊರತರಲು ನಿವೇದಿಸಿಕೊಂಡದ್ದು ಅನಾಜಿಯವರನ್ನು. ಇಂಥ ಸಂಪುಟಗಳ ಪ್ರಾಮುಖ್ಯವನ್ನು ಅನಾಜಿ ಸ್ಪಷ್ಟ ಮಾತುಗಳಲ್ಲಿ ದಾಖಲಿಸಿದ್ದಾರೆ. 'ಸಮ್ಮೇಳನದಲ್ಲಿ ಕಾಲಾಭಾವದಿಂದ ಸಮ್ಮೇಳನಾಧ್ಯಕ್ಷರು ಭಾಷಣಗಳನ್ನು ಪೂರ್ತಿ ಹೇಳಲಾಗದಿರುವ ಸಂದರ್ಭಗಳಿರುತ್ತವೆ. ಅವರ ಭಾಷಣಗಳಷ್ಟೇ ಅಲ್ಲದೆ, ನಾಡುನುಡಿಯ ಬಗೆಗಿನ ಅನೇಕ ವಿಚಾರಗಳು ತಮ್ಮ ಸುಧಾರಣೆಗಳ ಸೂಚನೆಗಳು, ಅವರ ವಿಶಾಲ ಜ್ಞಾನ, ಅವರ ಅನುಭವದಿಂದ ನಾಡುನುಡಿಗಾಗಿ ದುಡಿಯುವವರಿಗೆ, ಪರಿಷತ್ತಿಗೆ, ಸರ್ಕಾರಕ್ಕೆ, ಸಂಶೋಧಕರಿಗೆ ಮಾರ್ಗದರ್ಶಕ ಸೂಚನೆಗಳಾಗಿವೆ'(ಸಂಪುಟ ೧೭, ೨೦೧೬). ಅಧ್ಯಕ್ಷರ ಭಾಷಣಗಳಲ್ಲಿ ಕನ್ನಡನಾಡಿನಲ್ಲಿ ಕನ್ನಡದ ಸ್ಥಿತಿಗತಿಗಳ ಬಗ್ಗೆಯೂ ಕನ್ನಡಿಗರಿಗೆ ತಿಳಿಯಬೇಕು. ಈ ಎಲ್ಲ ಏಳು ಸಂಪುಟಗಳ ಅಧ್ಯಯನ ಮಾಡಿದರೆ ಸಂಶೋಧನೆಗೊಂದು ಹೊಸ ವಸ್ತು ಸಿಕ್ಕಂತಾಗುತ್ತದೆ ಎನ್ನುವುದು ಉತ್ಪ್ರೇಕ್ಷೆಯ ಮಾತಲ್ಲ. ಅನಾಜಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಒಡನಾಟವನ್ನು ಹೊಂದಿದವರು. ಸಂಸ್ಥೆಯ ಕಾರ್ಯದರ್ಶಿಯಾಗಿಯೂ ೧೯೭೮ ರಿಂದ ೭೯ ರವರೆಗೆ, ಹಾಸನಕ್ಕೆ ವರ್ಗಾವಣೆಯಾಗುವವರೆಗೆ ದುಡಿದವರು. ಆ ಅವಧಿಯಲ್ಲಿ ಡಾ. ಹಂಪ ನಾಗರಾಜಯ್ಯ ಅವರು ತಳೆದ ನಿಲುವುಗಳನ್ನು ಅನಾಜಿ ಈಗಲೂ ಸ್ಮರಿಸುತ್ತಾರೆ. ಇದನ್ನು ಇಲ್ಲಿ ದಾಖಲಿಸುವ ಉದ್ದೇಶ ಸ್ಪಷ್ಟವಾಗಿದೆ. ಅವರ ಬಿಡುವಿಲ್ಲದ ಕನ್ನಡ ಕೈಂಕರ್ಯದ ನಡುವೆಯೂ ನಮ್ಮಂಥವರ ಬೇಡಿಕೆಗಳನ್ನು ಪ್ರೋತ್ಸಾಹಿಸುತ್ತಲೇ ಬಂದಿದ್ದಾರೆ. ಅವರು ಹೇಗೋ ಸಮಯ ಹೊಂದಿಸಿಕೊಳ್ಳುತ್ತಾರೆ. ನೆಪ

ಒಡ್ಡುವವರಲ್ಲ ಎನ್ನುವುದು ನನಗೆ ಅವರ ದೀರ್ಘಕಾಲದ ಸ್ನೇಹದಲ್ಲಿ ಅನುಭವಕ್ಕೆ ಬಂದ ಸಂಗತಿ.

ಸಮುದಾಯಗಳ ಅಧ್ಯಯನ ಸಮಾಜವಿಜ್ಞಾನಿಗಳ ಕೆಲಸ ಎಂದು ನಾನು ಎಂದೂ ಭಾವಿಸಿಲ್ಲ. ಆಸಕ್ತಿ ಇದ್ದರಾಯಿತು ಅಧ್ಯಯನವನ್ನು ಒಂದು ಶಿಸ್ತಿಗೊಳಪಡಿಸಿ, ಆ ನಿಟ್ಟಿನಲ್ಲಿ ಮುಂದೆ ಹೋಗಲು ಯಾವ ಅಡ್ಡಿಯೂ ಬರದು, ಬಂದರೂ ಅದನ್ನು ನಿಭಾಯಿಸುವ ಧೈರ್ಯ ಬರುತ್ತದೆ. ಇಂಥ ಒಂದು ತಿಕ್ಕಲಿನಲ್ಲಿ ನಾನು ಆಯ್ದುಕೊಂಡದ್ದು 'ಕರ್ನಾಟಕದಲ್ಲಿ ಸ್ಮಾರ್ತ ಬ್ರಾಹ್ಮಣರು' ಎಂಬ ಒಂದು ಸಂಕೀರ್ಣದ ವಿಷಯವನ್ನು. ನನ್ನ ಉದ್ದೇಶವಿದ್ದದ್ದು ಸ್ಮಾರ್ತ ಬ್ರಾಹ್ಮಣರು ಕರ್ನಾಟಕದಲ್ಲಿ ನೆಲೆಗೊಂಡ ಬಗ್ಗೆ ಮತ್ತು ನೆಲೆಯ ಬಗ್ಗೆ. ಇದನ್ನು ಅನಾಜಿಯವರ ಕಿವಿಗೆ ಹಾಕಿದಾಗ ವಿಷಯ ಚೆನ್ನಾಗಿದೆ ಎಂದು ಮುಗುಳ್ನಗೆ ತೋರಿದರು. ಆದರೆ ಮುಂದುವರಿಯುವ ಬಗೆ ಹೇಗೆ ಎಂದು ಯೋಚಿಸುತ್ತಿರುವಾಗ, ಅವರು ಈ ಮಹತ್ ಯೋಜನೆಗೆ ನೆರವಾಗುವಂಥ ಪರಾಮರ್ಶನ ಗ್ರಂಥಗಳನ್ನು ನನ್ನ ಮುಂದೆ ಇಡುತ್ತಾ ಹೋದರು. ಬಹುತೇಕ ಅವರ ಪುಸ್ತಕ ಭಂಡಾರದಿಂದಲೇ ಹೆಕ್ಕಿ ತಂದವು. ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿಗಳು ರಚಿಸಿದ 'ಮುಲಕನಾಡು ಬ್ರಾಹ್ಮಣರು' (೨೦೧೩), ಡಾ. ಡಿ. ಆರ್. ಪಾಂಡುರಂಗ ಅವರ 'ಹೊಯ್ಸಳ ಕರ್ನಾಟಕ ಬ್ರಾಹ್ಮಣರು-ಸಾಂಸ್ಕೃತಿಕ ಅಧ್ಯಯನ' (೧೯೯೭) ಕೃತಿಗಳು ನನ್ನ ಕೈಸೇರಿದವು. ಅಲ್ಲಿಗೆ ನನ್ನ ಯೋಜನೆಗೆ ಒಂದು ಸ್ಪಷ್ಟವಾದ ಚೌಕಟ್ಟು ಲಭಿಸಿತು. ಒಂದು ಹಂತದಲ್ಲಿ ನಿಲುಗಡೆಯಾಗುತ್ತಿತ್ತು. 'ಸರ್, ಸಂಕೇತಿಗಳ ಬಗ್ಗೆ ಏನು ಮಾಡೋಣ' ಎಂದಾಗ, ಅವರು ನಕ್ಕು 'ಅಯ್ಯೋ ಅದಕ್ಕೇನಂತೆ, ಮೈಸೂರಿನಲ್ಲಿ ಪ್ರಣತಾರ್ತಿ ಹರನ್ ಇದ್ದಾರೆ, ಸಂಕೇತಿಗಳ ಬಗ್ಗೆ ಎಲ್ಲ ಮಾಹಿತಿ ಸಂಗ್ರಹಿಸಿ ತಾವೇ ಫೀಲ್ಡ್ ವರ್ಕ್ ಮಾಡಿ, ಗ್ರಂಥಗಳ ಸರಮಾಲೆಯನ್ನೇ ತಂದಿದ್ದಾರೆ' ಎಂದು ನನ್ನ ಕಗ್ಗಂಟನ್ನು ಬಿಡಿಸುತ್ತಲೇ ನನ್ನೆದುರಿಗೆ ಪ್ರಣತಾರ್ತಿ ಹರನ್ ಅವರಿಗೆ ಫೋನ್ ಮಾಡಿ ನನ್ನ ಉದ್ದೇಶವನ್ನು ಸ್ಪಷ್ಟಪಡಿಸಿ ಒಂದು ಲೇಖನ ಬರೆದುಕೊಡಲು ಅವರಿಗೆ ವಿನಂತಿಮಾಡಿಕೊಂಡರು. ಕೆಲವು ವಾರಗಳಲ್ಲಿ ನನಗೆ ಸ್ಕ್ರಿಪ್ಟ್ ಬಂದೇ ಬಿಟ್ಟಿತು. ಇಡೀ ಯೋಜನೆ ಮುಗಿದಾಗ ಮತ್ತೆ ಅನೇಕ ಸೂಚನೆಗಳನ್ನು ಅವರು ನೀಡಿದರು. ನಾನು ಅವರಿಗೆ ಉಪಕೃತ ಎಂದರೆ ಅಷ್ಟೇ ಸಾಕೆ? 'ಸರ್, ಗೋತ್ರ ಋಷಿಗಳ ಬಗ್ಗೆ, ಗೋತ್ರದ ಬಗ್ಗೆ ಎಲ್ಲಿ ಮಾಹಿತಿ ಸಿಕ್ಕಬಹುದು ಎನ್ನುವುದು ನನ್ನ ಇನ್ನೊಂದು ಪ್ರಶ್ನೆ'. 'ಗೋತ್ರ, ಪ್ರವರ ಅವೆಲ್ಲ ಬಿಡಿ, ನಿಮಗೆ ಪ್ರಾಚೀನ ಮಹರ್ಷಿಗಳ ವಿವರ ಬೇಕು ಅಂದರೆ ಡಾ. ಎಸ್. ಹೇಮಲತಾ ಎರಡು ಸಂಪುಟಗಳಲ್ಲಿ ಹೊರತಂದಿರುವ 'ಪ್ರಾಚೀನ ಭಾರತದ ಮಹರ್ಷಿಗಳು' ಎಂಬ ಕೃತಿ ನೋಡಿ, ರಾಷ್ಟ್ರೋತ್ಥಾನ ಇದನ್ನು ಪ್ರಕಟಿಸಿದೆ' ಎಂದು ಅವರು ಹೇಳುತ್ತಲೇ, ನಾನು ಅದೇ ಉಸಿರಿನಲ್ಲಿ ಓಡಿ ಆ ಎರಡು ಕೃತಿಗಳನ್ನು ಕೊಂಡೆ. ಅನಾಜಿ ಅವರು ಇನ್ನೊಂದು ಸಣ್ಣ ಸೂಚನೆಯನ್ನು ನನಗೆ ಸ್ನೇಹಪೂರ್ವಕವಾಗಿ ಕೊಟ್ಟಿದ್ದರು. 'ನಿಮಗೆ ಯಾವುದಾದರೂ ಪುಸ್ತಕ ಇಷ್ಟವಾಯಿತು ಅನ್ನಿಸಿದರೆ, ಓದಿದ ನಂತರ ಲೇಖಕರಿಗೆ ಒಂದು ಫೋನ್ ಮಾಡಿ, ಅವರಿಗೆ ಬರೆದದ್ದಕ್ಕೆ ಸಾರ್ಥಕ ಭಾವ ಬರುತ್ತದೆ' ಎಂದಿದ್ದರು. ಪ್ರತಿಬಾರಿ ಪುಸ್ತಕವನ್ನು ಓದಿದಾಗ, ನಾನು ಇದನ್ನು ಅನುಸರಿಸಿಕೊಂಡು ಬಂದಿದ್ದೇನೆ.

ಕಳೆದ ಐದಾರು ದಶಕಗಳಲ್ಲಿ ಅನಾಜಿ ತಮ್ಮ ಅನೇಕ ಕೃತಿಗಳನ್ನು ಪ್ರೀತಿಯಿಂದ ನನಗೆ ನೀಡಿದ್ದಾರೆ. ಅವರ ತೀರ ವಿರಳಕೃತಿ ಎನ್ನಬಹುದಾದವು ನನ್ನ ಕೈಸೇರಿವೆ. ನಾನೇ ಅನೇಕ ಕೃತಿಗಳನ್ನು ಕೊಂಡು ಓದುವವರಿಗೆ ಪ್ರೀತಿಯಿಂದ ಕೊಡುವುದೂ ಉಂಟು. ಅನಾಜಿ ಅವರ ಒಂದು ಕೃತಿ 'ಕರಡಚ್ಚು ತಿದ್ದುವಿಕೆ ಮತ್ತು ಕನ್ನಡ ಭಾಷೆ'. ಕನ್ನಡ ಪುಸ್ತಕ ಪ್ರಾಧಿಕಾರ ೨೦೧೭ರಲ್ಲಿ ಇದನ್ನು ಪ್ರಕಟಿಸಿದೆ. ಈ ಮೊದಲು ಇದು ಪುಸ್ತಕಲೋಕ ಎಂಬ ನಿಯತಕಾಲಿಕೆಯಲ್ಲಿ ಲೇಖನಮಾಲೆಯಾಗಿ ಪ್ರಕಟಣೆಯಾಗಿತ್ತು. ಇಂಥ ಗ್ರಂಥಗಳ ಪ್ರಸ್ತುತತೆ ಎಷ್ಟು ಹೇಳಿದರೂ ಸಾಲದು. ಅನಾಜಿ ಅವರಿಗೆ ಈ ಗ್ರಂಥ ತರಬೇಕೆಂಬ ಇರಾದೆ ಹುಟ್ಟಿದ್ದಾದರೂ ಹೇಗೆ? ಕನ್ನಡದಲ್ಲಿ ವೈವಿಧ್ಯಮಯ ಕೃತಿಗಳು, ವೈವಿಧ್ಯ

ವಿನ್ಯಾಸದಲ್ಲಿ ಹೊರಬರುತ್ತಿವೆ. ಆದರೆ ಭಾಷೆಯ ವಿಷಯಕ್ಕೆ ಬಂದಾಗ, ವಿಶೇಷವಾಗಿ ಕರಡಚ್ಚು ತಿದ್ದುವುದು ಕುರಿತು ಹೆಚ್ಚೇನೂ ಪ್ರಕಟವಾಗಿಲ್ಲ. ಅನಾಜಿ ಕೊಡುವ ಕಾರಣ ಗಮನಿಸಬೇಕಾದದ್ದು. ಇಂದಿನ ಡಿ.ಟಿ.ಪಿ.ಕಾರರಿಗೆ, ಕರಡಚ್ಚು ತಿದ್ದುವವರಿಗೆ ತರಬೇತಿ ಇಲ್ಲ. ಆಸಕ್ತಿ ಶ್ರದ್ಧೆಗಳಿಲ್ಲ. ಕೇವಲ ಹಣದ ದೃಷ್ಟಿಯಿಂದ ಕೆಲಸ ನಿರ್ವಹಿಸುತ್ತಾರೆ. ..... ಅಚ್ಚಿನ ದೋಷಗಳು ಹೆಚ್ಚು ಕಾಣುತ್ತವೆ. ಇದು ಅನಾಜಿಯವರು ಕಂಡುಕೊಂಡಿರುವ ಸತ್ಯ. ಇದಕ್ಕೆ ಇನ್ನೂ ಒಂದು ಮಾತು ಸೇರಿಸಬಹುದು. ಇಂದು ಬರೆಯುವ ತರಾತುರಿಯಲ್ಲಿ ಕರಡಚ್ಚನ್ನು ಸರಿಯಾಗಿ ತಿದ್ದುವುದಿರಲಿ, ಭಾಷೆಯ ಪ್ರಯೋಗದಲ್ಲೇ ಯಡವಟ್ಟುಗಳನ್ನು ಮಾಡುತ್ತಿದ್ದಾರೆ. ಕರಡಚ್ಚು ತಿದ್ದಲು ಬಳಸುವ ಬಹುತೇಕರಿಗೆ ಭಾಷೆಯ ಕಡೆಯ ಬಗ್ಗೆ ಗಮನವಿಲ್ಲ. ಸಂಕೇತಗಳ ಬಳಕೆಯ ಬಗ್ಗೆ ಪ್ರಾಥಮಿಕ ಜ್ಞಾನವಿಲ್ಲ. ಆವರಣ ಚಿಹ್ನೆಗಳು, ಚೌಕಾಕಾರ ಚಿಹ್ನೆಗಳು, ಪುಷ್ಪಾವರಣ ಚಿಹ್ನೆಗಳು ಎಂಬ ಹೆಸರುಗಳೇ ಮಾಯವಾಗುತ್ತಿವೆ. ಇಂಥ ಸಂದರ್ಭದಲ್ಲಿ ಅತ್ಯಗತ್ಯವಾಗಿ ಅನಾಜಿ ಅವರ ಈ ಗ್ರಂಥವನ್ನು ಗಮನಿಸಲೇಬೇಕು. ಏಕೆಂದರೆ ಇದರಲ್ಲಿ ಕನ್ನಡದಲ್ಲಿ ಬಳಸುವ ಶುದ್ಧ, ಅಶುದ್ಧ ರೂಪಗಳ ಉದಾಹರಣೆಗಳು ಸಾಕಷ್ಟಿವೆ. ಆ ದೃಷ್ಟಿಯಿಂದಲೂ ಈ ಕೃತಿಯ ಮೌಲ್ಯ ಹೆಚ್ಚು. ಅನಾಜಿಯವರಂಥ ವಿದ್ವಾಂಸರು ಲೇಖಕರ ಕಣ್ಣನ್ನೂ ತೆರೆಸುತ್ತಾರೆ. ನಾನು ಈ ಗ್ರಂಥವನ್ನು ಮತ್ತೆ ಮತ್ತೆ ಓದುತ್ತೇನೆ, ಅನುಮಾನ ಬಂದ ಕಡೆ ಇದರಿಂದ ಪರಿಹರಿಸಿಕೊಳ್ಳುತ್ತೇನೆ. ಈ ಕಾರಣಕ್ಕಾಗಿ ಅನೇಕ ಲೇಖಕರಿಗೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಈ ಪುಸ್ತಕವನ್ನು ಕೊಂಡು ಉಡುಗೊರೆಯಾಗಿ ನೀಡುತ್ತ ಬಂದಿದ್ದೇನೆ.

ಅನಾಜಿ ತರತಮ ಎಣಿಸದ ಸಹೃದಯ ವಿದ್ವಾಂಸ ಎಂದು ನನಗೆ ಮತ್ತೆ ಮತ್ತೆ ಮನವರಿಕೆಯಾಗಿದೆ. ಅವರು ತಮ್ಮನ್ನು ಅರಸಿ ಬಂದ ಯಾವ ವಯಸ್ಸಿನ ಲೇಖಕರಾಗಲಿ ಅವರನ್ನು ನಿರಾಶೆಗೊಳಿಸಿದ ಪ್ರಸಂಗವಿಲ್ಲ. ಮುನ್ನುಡಿ ಬರೆದು ಕೊಡಿ ಎಂದು ಪ್ರಾರ್ಥಿಸಿದರೆ ತಿರಸ್ಕರಿಸಿದವರೂ ಅಲ್ಲ, ಕಾಲದ ನೆಪ ಹೇಳುವವರೂ ಅಲ್ಲ. ಇಂಥ ಒಂದು ಪ್ರಸಂಗ ಥಟ್ಟನೆ ನನ್ನ ಕಣ್ಣ ಮುಂದೆ ಬರುತ್ತದೆ. ಹೆಚ್. ಕೆ. ಅನಂತಸುಬ್ಬರಾವ್ ಎಂಬವರು 'ಕುಮಾರವ್ಯಾಸ ಭಾರತದ ಎಂಟು ರಸಪ್ರಸಂಗಗಳು' ಎಂಬ ಕಾವ್ಯರೂಪದ ಎರಡು ಸಂಪುಟಗಳನ್ನು ರಚಿಸಿ, ಅನಾಜಿಯವರಿಗೆ ಮುನ್ನುಡಿ ಬರೆಯಲು ಪ್ರಾರ್ಥಿಸಿದಾಗ ಪ್ರೋತ್ಸಾಹದಾಯಕವಾಗಿ ಎರಡು ಮಾತನ್ನು ಬರೆಯುವುದರ ಜತೆಗೆ ಇಂದಿನ ಪ್ರಕಟಣಾ ಪ್ರಪಂಚದ ವಿದ್ಯಮಾನಗಳನ್ನು ದಾಖಲಿಸುತ್ತ 'ಕನ್ನಡದಲ್ಲಿ ಇಂದು ಒಂದು ಕಾಲದಲ್ಲಿ ಪ್ರಕಟವಾಗುತ್ತಿದ್ದ ಪುಸ್ತಕಗಳ ಸಂಖ್ಯೆಗಿಂತ ಲೇಖಕರು ಹೆಚ್ಚಾಗಿದ್ದಾರೆ' ಎಂದೇ ಆರಂಭದ ಮಾತುಗಳನ್ನು ಬರೆದರು. ಇದರಲ್ಲಿ ವ್ಯಂಗ್ಯವಿರಲಿಲ್ಲ, ದೂಷಣೆಯಿರಲಿಲ್ಲ. ಪ್ರಮುಖ ಕನ್ನಡ ಪ್ರಕಾಶಕರು ಹೊಸಬರಿಗೆ ಹೆಚ್ಚು ಪ್ರೋತ್ಸಾಹ ಕೊಡದಿರುವ ಕಾರಣ ಅನೇಕ ಲೇಖಕರು ತಾವೇ ಸ್ವಯಂ ಪ್ರಕಾಶಕರಾಗಬೇಕಾಯಿತು ಎಂಬ ವಾಸ್ತವತೆಯನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಅನಾಜಿಯಂಥ ಹಿರಿಯರ ಸಂಪರ್ಕ ನನಗಿದೆ ಎಂಬುದೇ ನಾನು ಆಗಾಗ ಪಡುವ ಹೆಮ್ಮೆ. ಬಹುಶಃ ಅವರ ಸಂಪರ್ಕಕ್ಕೆ ಬಂದ ಎಲ್ಲರೂ ಇದೇ ಮಾತನ್ನು ಪುನರುಚ್ಚರಿಸಬಹುದು.

*****

ಅಶ್ವತ್ಥಭಂಡಾರ

ಜಿ.ಬಿ. ಹರೀಶ್
ಚರವಾಣಿ : ೯೯೮೦೬೪೩೭೦೪

ನಾನು ಇಷ್ಟಪಟ್ಟು ಹೋಗುತ್ತಿದ್ದ ಮನೆಗಳಲ್ಲಿ ಜಯನಗರ ನಾಲ್ಕನೇ ಟಿ. ಬ್ಲಾಕಿನ ಮನೆ ಒಂದು ಅದು ಒಂದು ಕಾಂಪೌಂಡ್ ಒಳಗೆ ಮಹಡಿ ಇರುವ ಮನೆ. ಕೆಳಗಡೆ ಕಾರು ಗ್ಯಾರೇಜು. ಅದರ ತುಂಬ ಪುಸ್ತಕಗಳು. ಅದಕ್ಕೆ ಒಳಗಿನಿಂದಲೇ ಒಂದು ಮೆಟ್ಟಿಲು ಆ ಮೆಟ್ಟಿಲನ್ನು ಹತ್ತಿಕೊಂಡು ಹೋದರೆ ವಾಸ ಮಾಡುವ ಮನೆ. ಆ ಮನೆಯ ಒಡೆಯರೇ ಕನ್ನಡದ ಸುಪ್ರಸಿದ್ಧ ವಿದ್ವಾಂಸ ಪ್ರೊಫೆಸರ್ ಜಿ. ಅಶ್ವತ್ಥನಾರಾಯಣ. ಉದರಕ್ಕೆ ಅನ್ನ, ಮೆದುಳಿಗೆ ಆಹಾರ– ಇವೆರಡೂ ಅವರ ಮನೆಯಲ್ಲಿ ನನಗೆ ಕಟ್ಟಿಟ್ಟ ಬುತ್ತಿ.

ರಾಮಚಂದ್ರ ರಾಯರ ಪುಸ್ತಕದ ವಿಚಾರ

ನವೋದಯ ಕಾಲದ ವಿದ್ವಾಂಸರು ಹೇಗಿರುತ್ತಿದ್ದರು ಎಂಬ ಕಲ್ಪನೆ ಮೂಡಬೇಕಾದರೆ ಅಶ್ವತ್ಥನಾರಾಯಣ ಅವರ ಸಹವಾಸವನ್ನು ಮಾಡಿದರೆ ಸಾಕು. ಜೋಳಿಗೆ ಅದರ ತುಂಬಾ ಪುಸ್ತಕ, ಚುರುಕು ನಡಿಗೆ, ಕಂಚಿನ ಕಂಠದ ಮಾತು, ಸ್ಪಷ್ಟವಾದ ನೇರ ನೋಟ. ಇದು ಅವರ ವ್ಯಕ್ತಿತ್ವ ಮತ್ತು ಅದಕ್ಕೆ ಹೊಂದಿಕೊಂಡಿರುವ ಸುಂದರವಾದ ಮೀಸೆ. ಎಸ್.ಕೆ. ರಾಮಚಂದ್ರರಾಯರ ಪುಸ್ತಕದ ನನ್ನ ಲೇಖನ ಕಾರ್ಯ ಮುಂದುವರಿಯಲು, ಅವರು ಸಹಾಯಕ್ಕೆ ಬರೆದಿದ್ದರೆ ಸಾಧ್ಯವಾಗುತ್ತಿರಲಿಲ್ಲ. ಎಸ್.ಕೆ.ಆರ್. ಅವರ ವ್ಯಕ್ತಿತ್ವ ಸಾಹಿತ್ಯ ಮತ್ತು ಸಂಸ್ಕೃತಿಗೆ ಭಾರತೀಯ ಮೌಲ್ಯ ಪರಂಪರೆಗೆ ಅವರ ಕೊಡುಗೆಯನ್ನು ತುಂಬಾ ಸುಂದರವಾಗಿ ನನ್ನ ಮುಂದೆ ಅವರು ಬಿಡಿಸಿಟ್ಟರು. ಜೊತೆಗೆ ಪುರಂದರ ದಾಸರ ಸಾಹಿತ್ಯವನ್ನು ಕುರಿತು ಎಸ್.ಕೆ.ಆರ್. ನಾಲ್ಕು ಸಂಪುಟಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಿದ್ಧಪಡಿಸಿ ಕೊಡುವಾಗ ತಾವು ಅವರಿಗೆ ನೆರವು ನೀಡಿದ್ದನ್ನು ಹೇಳಿಕೊಂಡರು. ಇದರಿಂದ ನನ್ನ ಪುಸ್ತಕಕ್ಕೆ ಒಂದು ಅಧಿಕೃತತೆ ಬಂತು ಎಂದು ಸಂತೋಷದಿಂದ ಒಪ್ಪಿಕೊಳ್ಳುವೆನು.

ಹಾಸನದಲ್ಲಿ ದೇವುಡು ಕುರಿತು ಉಪನ್ಯಾಸ

ಕಳೆದ ಶತಮಾನದ ಅಂತ್ಯದಲ್ಲಿ ಹಾಸನ ನಗರದಲ್ಲಿ ಅಖಿಲ ಭಾರತೀಯ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನ ಜರುಗಿತು. ನಾನಾಗ ಎಂಎ ಕನ್ನಡ ವಿದ್ಯಾರ್ಥಿ. ಆಗ ನಾನು ಮೊದಲ ಬಾರಿ ಅವರನ್ನು ಕಂಡಿದ್ದು. ವೇದಿಕೆಯಿಂದ ಅವರ ಕಂಚಿನ ಕಂಠ ಮೊಳಗಿತು. ಅವರು ದೇವುಡು ನರಸಿಂಹ ಶಾಸ್ತ್ರಿಗಳ ಸಾಹಿತ್ಯ ಮತ್ತು ಜೀವನವನ್ನು ಕುರಿತು ದೀರ್ಘವಾಗಿ ಉಪನ್ಯಾಸವನ್ನು ಮಾಡಿದರು. ಆಗಲೇ

ಅವರ ಮಹಾ ಬ್ರಾಹ್ಮಣ ಸೇರಿದಂತೆ ಕೆಲವು ಪುಸ್ತಕಗಳನ್ನು ತಿರುವಿ ಹಾಕಿದ್ದ ನನ್ನ ಮನಸ್ಸಿನಲ್ಲಿ ದೇವುಡು ಬಗೆಗೆ ಒಂದು ಗೌರವ ಮೂರ್ತಿ ಚಿತ್ರಣ ಮೂಡಿದ್ದು ಅವರ ಉಪನ್ಯಾಸದಿಂದಲೇ. ಮುಂದೆ ಬೆಂಗಳೂರಿಗೆ ನಾನು ಬಂದು ನೆಲೆಸಿದ ಮೇಲೆ ಅವರ ಜೊತೆ ಆತ್ಮೀಯತೆ ಹೆಚ್ಚಾದಾಗ ಈ ವಿಷಯವನ್ನು ಪ್ರಸ್ತಾಪಿಸಿದೆ. ಶಾಸ್ತ್ರಿಗಳ ಬಗೆಗೆ ಅವರು ಇನ್ನಷ್ಟು ರಸವತ್ತಾದ ವಿಷಯಗಳನ್ನು ತಿಳಿಸಿಕೊಟ್ಟರು.

ಅನಾಜಿ ಪುಸ್ತಕ ಪ್ರೇಮ

ಗಂಭೀರ ಶೈಲಿಯ ವಿಷಯಗಳನ್ನು ಬರವಣಿಗೆ ಮಾಡುವುದರಲ್ಲಿ ಚೆನ್ನಾಗಿ ಪಳಗಿರುವ ಅಶ್ವತ್ಥನಾರಾಯಣರು ಪುಸ್ತಕ ಪ್ರೀತಿಗೆ ಹೆಸರಾದವರು. ಕೊಂಡ ಪುಸ್ತಕಗಳನ್ನು ಮನೆಯಲ್ಲಿ ಒಪ್ಪ ಓರಣಗಳೊಂದಿಗೆ ಜೋಡಿಸಿ, ಅದಕ್ಕೊಂದು ಕ್ರಮಬದ್ಧತೆಯನ್ನು ಒದಗಿಸುತ್ತಿದ್ದರು. ಯಾವುದೇ ಉಪನ್ಯಾಸ ಮಾಡಲು ಅವರಿಗೆ ಅವರ ಗ್ರಂಥ ಭಂಡಾರವೇ ದೊಡ್ಡ ಆಕರ. ಪುಸ್ತಕ ಕೊಂಡವರೆಲ್ಲ ಓದುವುದಿಲ್ಲ ಉಪನ್ಯಾಸ ಮಾಡುವವರೆಲ್ಲ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಪುಸ್ತಕಗಳನ್ನು ಸಂಗ್ರಹ ಮಾಡುವುದಿಲ್ಲ. ಆದರೆ ಬೃಹತ್ ಪುಸ್ತಕ ರಾಶಿಯನ್ನು ಅಷ್ಟೇ ಮಹತ್ ಉಪನ್ಯಾಸಗಳಿಗೆ ಬಳಸಿಕೊಂಡವರು ಅಶ್ವತ್ಥನಾರಾಯಣರು. ಅವರ ಉಪನ್ಯಾಸಗಳನ್ನು ಅವರೇ ಆಗಲಿ ಅವರ ಶಿಷ್ಯರೇ ಆಗಲಿ ರೆಕಾರ್ಡ್ ಮಾಡಿದ್ದರೆ ಚೆನ್ನಾಗಿತ್ತು ಎಂದು ಎಷ್ಟೋ ಸಲ ನನಗೆ ಅನಿಸುತ್ತದೆ. ಅವುಗಳ ವಿಷಯ ವ್ಯಾಪ್ತಿ ಪದಸಂಪತ್ತು, ಪದ ವಾಕ್ಯಗಳ ಜೋಡಣೆ, ನಡುನಡುವೆ ಚಾಟೂಕ್ತಿಗಳು ಖಂಡಿತ ಅವರೇ ರೂಢಿಸಿಕೊಂಡಿರುವ ಶೈಲಿ. ಅವರ ಮೇಲೆ ಕೈಲಾಸಂ, ರಾಜರತ್ನಂ, ದೇವುಡು ಇನ್ನೂ ಅನೇಕ ಮಹನೀಯರ ಪ್ರಭಾವ ಉಂಟಾಗಿರುವುದು ಒಂದು ಅಂಶವಾದರೆ, ಅವರ ಸ್ವಂತ ಸರಸ್ವತಿ ತಪಸ್ಸು ಅದಕ್ಕಿಂತ ಹೆಚ್ಚಿನ ಭಾಗದಿಂದ ಕೂಡಿದೆ.

ಒಂದು ಸಲ ತಮಾಷೆಗೆ ಪ್ರಸಂಗ

ಒಂದು ತಮಾಷೆಯ ಪ್ರಸಂಗ ಬೆಂಗಳೂರಿನ ರಾಜಾಜಿನಗರದ ಇಸ್ಕಾನ್‌ನಲ್ಲಿ ನಡೆಯಿತು. ಪ್ರಭುಪಾದರ ಜೀವನ ಮತ್ತು ಕೃಷ್ಣ ಭಕ್ತಿಯ ಅಪೂರ್ವ ಸಾಹಸಗಾಥೆಯನ್ನು ಕುರಿತು ಬಾಬು ಕೃಷ್ಣಮೂರ್ತಿಯವರು ಮಹಾಸಾಧಕ ಕಾದಂಬರಿಯನ್ನು ಆ ಹೊತ್ತಿನಲ್ಲಿ ರಚಿಸಿದ್ದರು. ಎಲ್ಲ ಕಡೆ ಅದರ ಚರ್ಚೆ ನಡೆಯುತ್ತಿತ್ತು. ಇಸ್ಕಾನಿನ ಕೃಷ್ಣಭಕ್ತ ಮಂಡಳಿಯವರು ಆ ಪುಸ್ತಕವನ್ನು ಕುರಿತು ವಿಚಾರ ಸಂಕಿರಣವನ್ನು ಏರ್ಪಾಟು ಮಾಡಿದ್ದರು. ಅವತ್ತು ನನ್ನ ಭಾಷಣಕ್ಕೆ ಅಶ್ವತ್ಥನಾರಾಯಣ ಅವರದ್ದೇ ಅಧ್ಯಕ್ಷತೆ. ಸಮಯದ ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವ ಅವರು, ನಾನು ಉಪನ್ಯಾಸವನ್ನು ಇನ್ನೇನು ಮುಗಿಸುವುದರಲ್ಲಿದ್ದೆ, ಅಷ್ಟರಲ್ಲಿ ಚೀಟಿಯನ್ನು ನನಗೆ ತಲುಪಿಸಿದರು. ಸಮಯ ಪಾಲನೆಯನ್ನು ಅಷ್ಟೇ ಕಟ್ಟುನಿಟ್ಟಾಗಿ ಪಾಲಿಸುವ ನಾನು ಚೀಟಿ ಬರುವಷ್ಟರಲ್ಲಿ ಮಾತನ್ನು ಮುಗಿಸಿ ಅವರ ಪಕ್ಕ ಬಂದು ಕುಳಿತುಕೊಂಡೆ. ಇವಿಷ್ಟು ಶರವೇಗದಲ್ಲಿ ನಡೆದುಹೋಯಿತು. “ನೀವು ಭಾಷಣ ಮುಗಿಸಿದ್ದರಲ್ಲಿ ನನ್ನದೇನು ಪಾತ್ರವಿಲ್ಲ” ಎಂದು ಅವರು ಚಟಾಕಿ ಹಾರಿಸಿದರು. ಇದೊಂದು ಅಪೂರ್ವವಾದ ಘಟನೆ.

ಇನ್ನೊಂದು ಪ್ರಸಂಗ

ಇದು ಪುಂಡಲೀಕ ಹಾಲಂಬಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲದಲ್ಲಿ ನಾನು ಐದಾರು ಲೇಖನಗಳನ್ನು ಮೊದಲ ಸಂಪುಟಕ್ಕೆ ಬರೆದು ಕೊಟ್ಟೆ. ಈ ಲೇಖನಗಳನ್ನು ಓದಿ ಅಶ್ವತ್ಥನಾರಾಯಣರು ಸಂತೋಷಪಟ್ಟರು. ಅವರು ಇದೇ ಸಮಯದಲ್ಲಿ ಸಾಹಿತ್ಯ ಪರಿಷತ್ತಿಗೆ ಮತ್ತೆ

ಮತ್ತೆ ಬರುತ್ತಿದ್ದರು. ತಾವೇ ಒಂದು ಪುಸ್ತಕವನ್ನು ರಚಿಸುತ್ತಿದ್ದರು. ಇದಕ್ಕೆ ಅವರಿಗೆ ಹಿನ್ನೆಲೆಯಲ್ಲಿ ಬೆಂಬಲವಾಗಿ ನಿಂತವರು ಜೆ. ಶಾಮರಾಯರು. ಕನ್ನಡ ಪುಸ್ತಕ ಪ್ರಾಧಿಕಾರದಲ್ಲಿ ಕೆಲಸ ಮಾಡಿದ್ದ ಅನುಭವಿ ಆಡಳಿತಗಾರರು. ಅವರ ಬೆಂಬಲದಿಂದ, ಪರಿಷತ್ತಿನ ಅಂದಿನ ಅಧ್ಯಕ್ಷರ ಸಹಕಾರದಿಂದ ಅಶ್ವತ್ಥನಾರಾಯಣರು ಬೃಹತ್ ಕೆಲಸಕ್ಕೆ ಕೈ ಹಾಕಿದ್ದರು.

ಪರಿಷತ್ತಿನಲ್ಲಿ ಸಿಕ್ಕುವ ಮತ್ತು ತಮ್ಮ ಗ್ರಂಥ ಭಂಡಾರದಲ್ಲಿರುವ ಅಮೂಲ್ಯ ದಾಖಲೆಗಳನ್ನು ಬಳಸಿಕೊಂಡು ಸಾಹಿತ್ಯ ಪರಿಷತ್ತಿನ ಇತಿಹಾಸ ಕುರಿತು ಒಂದು ಬೃಹತ್ ಗ್ರಂಥವನ್ನೇ ಅಲ್ಪಾವಧಿಯಲ್ಲಿ ಅಚ್ಚುಕಟ್ಟಾಗಿ ಅವರು ಸಿದ್ಧಪಡಿಸಿ ಬಿಟ್ಟರು. ಇದು ಈಗಲೂ ನನಗೆ ಒಂದು ವಿಸ್ಮಯ. ಏಕೆಂದರೆ ಹಾಲಂಬಿಯವರ ಕನಸಿನ ಆಧುನಿಕ ಕನ್ನಡ ಸಾಹಿತ್ಯ ಸಂಪುಟಗಳ ಯೋಜನೆ, ಪೂರ್ಣವಾಗಿ ಆಗಲಿಲ್ಲ ಎನ್ನುವುದೇ ನನ್ನ ತಿಳುವಳಿಕೆ. ಆಧುನಿಕ ಕನ್ನಡದ ವಿಮರ್ಶಕರಲ್ಲಿ ಕೆಲವರು ತಾವೇ ಪ್ರತ್ಯೇಕ ಪ್ರತ್ಯೇಕ ಸಂಪುಟಗಳನ್ನು ಬರೆದುಕೊಡುತ್ತೇವೆ ಎಂದು ಆಶ್ವಾಸನೆ ನೀಡಿದ್ದರಂತೆ. ಆದರೆ ಆ ಕೆಲಸ ಅವರಿಂದ ಆಗಲಿಲ್ಲ ಎಂದು ನನಗೆ ನೆನಪು. ಆದರೆ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಎಷ್ಟೋ ವರ್ಷಗಳ ನಂತರ ಪಟ್ಟು ಹಿಡಿದು ಕನ್ನಡ ಸಾಹಿತ್ಯ ಪರಿಷತ್ತಿನ ಬಗೆಗೆ ಇಷ್ಟು ದೊಡ್ಡ ಗ್ರಂಥವನ್ನು ಅನಾಜಿ ಅವರು ರಚಿಸಿಕೊಟ್ಟದ್ದು ಇಂದಿಗೂ ನನಗೆ ಒಂದು ಸೋಜಿಗ. ಇದು ಸಮಯ ಪಾಲನೆ ಅಧ್ಯಯನದ ಶಿಸ್ತು ಟಿಪ್ಪಣಿಗಳನ್ನು ಒಪ್ಪೋರಣವಾಗಿ ಬರೆದಿಟ್ಟುಕೊಂಡು ಸೂಕ್ತವಾದ ಜಾಗಗಳಲ್ಲಿ ಬಳಸಿಕೊಳ್ಳುವ ಚಾಣಾಕ್ಷತನ ದಕ್ಷತೆ ಮತ್ತು ಎಲ್ಲಕ್ಕೂ ಮಿಗಿಲಾಗಿ ಕನ್ನಡ ಭಾಷೆಯ ಮೇಲಿನ ಅವರ ಅಪಾರ ಶ್ರದ್ಧೆ ಇದಕ್ಕೆ ಕಾರಣ ಎಂದು ಹೇಳಬೇಕು. ಈ ಪುಸ್ತಕವನ್ನು ಪ್ರೊಫೆಸರ್ ಅಶ್ವತ್ಥನಾರಾಯಣ ಅವರ ಮ್ಯಾಗ್ನಂ ಓಪಸ್ ಎಂದು ನಾನು ಗೌರವದಿಂದ ಕರೆಯಲು ಬಯಸುತ್ತೇನೆ.

ಡಿವಿಜಿಯವರ ಜ್ಞಾಪಕ ಚಿತ್ರ ಶಾಲೆ ಬರೆದಂತೆ ಅಶ್ವತ್ಥನಾರಾಯಣ ಅವರು ಕೂಡ ಅದೇ ಮಾದರಿಯ ಕೃತಿಯನ್ನು ರಚನೆ ಮಾಡಲು ಸರ್ವ ರೀತಿಯಿಂದಲೂ ಸಮರ್ಥರು. ಶಬ್ದ ಭಂಡಾರ, ನೆನಪಿನ ಭಂಡಾರ, ಅನುಭವದ ಭಂಡಾರ ಇವುಗಳ ತ್ರಿವೇಣಿ ಸಂಗಮ- ಅಶ್ವತ್ಥ ಭಂಡಾರ. ಅವರ ಹತ್ತಿರದ ಶಿಷ್ಯರು ಯಾರಾದರೂ ಅವುಗಳನ್ನು ಧ್ವನಿ ಮುದ್ರಣ ಮಾಡಿಕೊಂಡು ಪುಸ್ತಕ ರೂಪದಲ್ಲಿ ತಂದರೆ ಅವು ಶತಮಾನದ ಕನ್ನಡದ 50 ವರ್ಷಗಳ ಸಾಹಿತ್ಯದ ಚರಿತ್ರೆಗೆ ಬಹು ಅಮೂಲ್ಯವಾದ ಕೊಡುಗೆಗಳಾಗುತ್ತವೆ ಎನ್ನುವುದು ನನ್ನ ಭಾವನೆ.

*****

"ಶಿಷ್ಯರಿಗೆಲ್ಲಾ ಸ್ಫೂರ್ತಿ ಪ್ರೊ. ಅ.ನಾ.ಜಿ"

ಡಾ. ಎಚ್.ಎಸ್. ಭುವನೇಶ್ವರ
ಚರವಾಣಿ : ೯೪೪೯೦೭೧೪೮೩

ಪ್ರೀತಿಪಾತ್ರರಾದವರಿಗೆಲ್ಲಾ 'ಅನಾಜಿ' (ಅಶ್ವತ್ಥನಾರಾಯಣ.ಜಿ) ಎಂದೇ ಖ್ಯಾತರಾಗಿರುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ವೃತ್ತಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರೂ, ಪ್ರವೃತ್ತಿಯಲ್ಲಿ ಕನ್ನಡ ಪ್ರಚಾರಕರೂ, ಪರಿಚಾರಕರೂ ಆಗಿದ್ದಾರೆ. ಕನ್ನಡ ಭಾಷಾ ತಜ್ಞರಾಗಿರುವ ಇವರು ಯಾವುದೇ ವಿಷಯ ಪ್ರಸ್ತಾಪಿಸಿದರೂ ಅದಕ್ಕೆ ಅಧಿಕೃತತೆ ನೀಡಿ ವ್ಯಾಖ್ಯಾನಿಸುವ ವ್ಯಾಖ್ಯಾನಕಾರರಾಗಿದ್ದಾರೆ. ಪ್ರಸಿದ್ಧ ವಾಗ್ಮಿಗಳಾಗಿ ಎಲ್ಲಾ ವಿಷಯಗಳ ಬಗ್ಗೆಯೂ ಪುಂಖಾನುಪುಂಖವಾಗಿ ವಿವರಿಸುವ ವಿಚಾರವಂತರಾಗಿದ್ದಾರೆ. ಇಂತಹವರು ಕನ್ನಡನಾಡುನುಡಿಗೆ ಸಲ್ಲಿಸಿದ ಸೇವೆಗಾಗಿ ನಾಡಿನ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಲು ಸಾಹಿತ್ಯ ಪರಿಚಾರಕ ಎಂಬ ಅಭಿನಂದನಾ ಗ್ರಂಥವೊಂದನ್ನು ಪ್ರಕಟಿಸಲು ನಿರ್ಧರಿಸಿರುವ ಅಭಿನಂದನಾ ಸಮಿತಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಕನ್ನಡ ಸಾಹಿತ್ಯ ಪರಿಚಾರಕವೆಂದು ಪ್ರಖ್ಯಾತರಾಗಿರುವ ಜಿ.ಪಿ. ರಾಜರತ್ನಂರಂತೆಯೇ ಅನಾಜಿಯವರು ಸರ್ವಧರ್ಮ ಚಿಂತಕರಾಗಿದ್ದಾರೆ ರಾಜರತ್ನಂ ಅವರ ಸ್ಫೂರ್ತಿಯಿಂದ ಸುಮಾರು ೧೫,೦೦೦ಕ್ಕೂ ಹೆಚ್ಚು ಕೃತಿಗಳನ್ನು ಸಂಗ್ರಹಿಸಿದ್ದಾರೆ. ಇವರ ಮನೆಯೇ ಒಂದು ಗ್ರಂಥಾಲಯವಾಗಿದೆ. ಇವರು ಮಾಡಿರುವ ಸಾಹಿತ್ಯಸೇವೆ, ಸಾಹಿತ್ಯ ಪ್ರಶಸ್ತಿ, ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ ಸಾಹಿತ್ಯ ಪರಿಚಾರಕ ಎಂದು ಹೆಸರಿಟ್ಟಿರುವುದು ತುಂಬಾ ಅರ್ಥಪೂರ್ಣವಾದ ಶೀರ್ಷಿಕೆಯಾಗಿದೆ.

ಜಗತ್ತಿನಾದ್ಯಂತ ಗುರುಶಿಷ್ಯ ಪರಂಪರೆ ಇದೆ, ಭಾರತದಲ್ಲಿಯೂ ಗುರುಶಿಷ್ಯ ಪರಂಪರೆ ಗುರುಕುಲದಿಂದ ಆರಂಭಗೊಂಡು ಇಂದಿನವರೆಗೂ ಬೆಳೆದು ಬಂದಿದೆ. ಹಿಂದೆ "ಗುರುವೇ ನಮಃ" ಎನ್ನುವ ಕಾಲವೊಂದಿತ್ತು. ಇಂದು "ಗುರುವೇನ್ ಮಹಾ" ಎನ್ನುವ ಕಾಲ ಬಂದಿದೆ. ಅಂದರೆ ಶಿಷ್ಯ ಗುರುವನ್ನು ಮೀರಿಸಿದ ಶಿಷ್ಯನಾಗಿ ಬೆಳೆದು ನಿಂತಿರುವುದೇ ಆಗಿದೆ. ಆದರೆ ಶಿಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ಗುರುವು ಗುರುವೇ ಆಗುತ್ತಾರೆ. ಶಿಷ್ಯನು ಶಿಷ್ಯನೇ ಆಗಿರುತ್ತಾರೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣಾ ಮುಕುತಿ" ಎಂದ ದಾಸರ ನುಡಿಯಂತೆ ಗುರುವಿನಲ್ಲಿ ಶಿಷ್ಯ ಸಮರ್ಪಣಾಭಾವ ತಳೆಯದಿದ್ದರೆ ಜ್ಞಾನ ದೊರೆಯಲು ಸಾಧ್ಯವಿಲ್ಲ. ಗುರುವಿಗೆ ಶಿಷ್ಯರನ್ನು ಕಂಡರೆ ಪ್ರೀತಿ ಇರಬೇಕು ಹಾಗೆಯೇ ಶಿಷ್ಯರಿಗೆ ಗುರುವನ್ನು ಕಂಡರೆ ಭಯಭಕ್ತಿ ಇರಬೇಕು. ಆಗಲೇ ನಿಜವಾದ ಆಲೋಚನೆ ಹೊರಬರಲು ಸಾಧ್ಯ. ಮಹಾಕವಿ ಕಾಳಿದಾಸ ಹೇಳಿರುವಂತೆ ಕೆಲವು ಗುರುಗಳು ತಾವು ಮಾತ್ರ ಬೆಳೆಯುತ್ತಾರೆ. ಕೆಲವು ಗುರುಗಳು ತಾವು ಬೆಳೆಯದೆ ಶಿಷ್ಯರನ್ನು ಮಾತ್ರ ಬೆಳೆಸುತ್ತಾರೆ. ಆದರೆ ಇವರು ಯಾರೂ ಪೂರ್ಣ ಗುರುಗಳಾಗುವುದಿಲ್ಲ. ನಿಜವಾದ ಗುರುವೆಂದರೆ ತಾನೂ ಬೆಳೆದು,

ತನ್ನ ಶಿಷ್ಯರನ್ನೂ ಬೆಳೆಸುವುದಾಗಬೇಕು. ಅಂತಹ ಗುರುಪರಂಪರೆಗೆ ಸೇರಿರುವರೆ ನನ್ನ ಅಚ್ಚುಮೆಚ್ಚಿನ ಗುರುಗಳಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು.

ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದ ಇವರು ಬಾಲ್ಯದಿಂದಲೂ ಸಂಸ್ಕೃತವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿ, ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಡಿಪ್ಲೋಮಾವನ್ನು ಪಡೆದಿದ್ದರೂ ಎಂ.ಆರ್. ಶ್ರೀನಿವಾಸಮೂರ್ತಿ, ಡಿ.ಎಲ್. ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ, ದ.ರಾ. ಬೇಂದ್ರೆ, ಕುವೆಂಪು ಮುಂತಾದ ಕನ್ನಡ ವಿದ್ವಾಂಸರ ಪ್ರಭಾವಕ್ಕೊಳಗಾಗಿ ಕಲಾವಿಭಾಗವನ್ನು ಆಯ್ಕೆ ಮಾಡಿಕೊಂಡು ಮತ್ತೇ ಪಿ.ಯು.ಸಿ. ಯಿಂದ ಅಭ್ಯಾಸ ಪ್ರಾರಂಭಿಸಿ ಬಿ.ಎ. ಮಾಡಿದಾಗ ಕನ್ನಡ ಐಚ್ಛಿಕ ಓದಿಲ್ಲವೆಂದು ಎಂ.ಎ.ಗೆ ಪ್ರವೇಶ ನಿರಾಕರಿಸಿದರು. ಇದರಿಂದ ನಿರಾಸೆಗೊಂಡಿದ್ದ ಇವರಿಗೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಯಾವುದಾದರೂ ಎಂ.ಎ. ಮಾಡಿದ್ದರೆ ಸಾಕು ಕನ್ನಡ ಎಂ.ಎ. ಮಾಡಬಹುದೆಂಬ ಪ್ರಕಟಣೆಯನ್ನು ನೋಡಿ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರ ಎಂ.ಎ. ಮಾಡಿ, ನಂತರ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಮಾಡಿದರು. ಕನ್ನಡಕ್ಕೆ ಸಂಬಂಧಿಸಿದ ಕನ್ನಡ ಭಾಷಾಶಾಸ್ತ್ರ ಡಿಪ್ಲೋಮಾ, ಶಾಸನಶಾಸ್ತ್ರ ಡಿಪ್ಲೋಮಾ, ಕನ್ನಡ ಸಾಹಿತ್ಯ, ಪರಿಷತ್ತಿನಲ್ಲಿ ಮೊದಲಿಗೆ ಶ್ರೀ ಶಿವಮೂರ್ತಿ ಶಾಸ್ತ್ರಿಯವರು ಪ್ರಾರಂಭಿಸಿದ ಭಾಷಣ ಕಲಾಪ್ರವೀಣ ಕೋರ್ಸ್‌ನ ಮೊದಲ ತಂಡದ ವಿದ್ಯಾರ್ಥಿಯಾಗಿದ್ದು ಮೇಲ್ದರ್ಜೆಯಲ್ಲಿ ಉತ್ತೀರ್ಣರಾದರು. ಇದರ ಜೊತೆಗೆ ಕನ್ನಡ ಶೀಘ್ರಲಿಪಿ, ಕನ್ನಡ ಬೆರಳಚ್ಚು ಮುಂತಾದ ಶಿಕ್ಷಣ ತರಬೇತಿಯನ್ನು ಪಡೆದಿದ್ದಾರೆ. ಕನ್ನಡಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದವರು ಕನ್ನಡ ಶಿಶುವಿಹಾರ ಶಿಕ್ಷಣ ಪ್ರಾರಂಭಿಸುವುದಕ್ಕೆ ಕಾರಣಕರ್ತರಾದ ಎಚ್. ಎಸ್. ದೊರೆಸ್ವಾಮಿ ಮತ್ತು ಇತರರ ಜೊತೆಯಲ್ಲಿ ಸೇರಿ ಸಕ್ರಿಯವಾಗಿ ಕಾರ್ಯ ನಿರ್ವಹಿಸಿದ್ದಾರೆ. ಅ.ನ.ಕೃ ರಾಮಮೂರ್ತಿಯವರ ಜೊತೆಗೂಡಿ ಕನ್ನಡ ಚಳವಳಿಯ ಪ್ರಾರಂಭಧ ಕಾರ್ಯಕರ್ತರಲ್ಲಿ ಒಬ್ಬರಾಗಿದ್ದುಕೊಂಡು ಅನೇಕ ಕನ್ನಡ ಪ್ರಚಾರೋಪನ್ಯಾಸಗಳನ್ನು ಮಾಡಿದ್ದಾರೆ. ಮಾಧ್ಯಮಿಕ ಶಾಲೆಯಿಂದ ಸ್ನಾತಕ ಶಿಕ್ಷಣ ಪೂರೈಸುವವರೆಗೂ ಕನ್ನಡ ಚರ್ಚಾಸ್ಪರ್ಧೆ, ಸಾಹಿತ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ, ಅನೇಕ ಬಹುಮಾನಗಳನ್ನು ಪಡೆದಿದ್ದಾರೆ. ಕನ್ನಡ ಸಾಹಿತ್ಯದ ಅಭಿರುಚಿ ಇದ್ದ ಇವರಿಗೆ ಪ್ರಭಾವ, ಪ್ರೋತ್ಸಾಹ ನೀಡಿದವರೆಂದರೆ ಕನ್ನಡದ ಪ್ರಸಿದ್ಧ ವಿದ್ವಾಂಸರಾದ ಡಾ. ಎಂ.ವಿ. ಕೃಷ್ಣರಾವ್, ಪ್ರೊ॥ ಎಚ್.ಆರ್. ದಾಸೇಗೌಡ ನೂರಾರು ಜೈನ ಕೃತಿಗಳನ್ನು ಬರೆದಿರುವ ಭುವನಹಳ್ಳಿ ಡಿ. ಪದ್ಮನಾಭಶರ್ಮ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ಭಂಡಾರದ ಕೆ. ನಾಗರಾಜ್ ಮುಖ್ಯರಾದವರು. ಕನ್ನಡ ಎಂ.ಎ. ಮಾಡಿದ್ದ ಇವರು ಬೆಂಗಳೂರಿನ ದಯಾನಂದ ಕಲೆ, ವಾಣಿಜ್ಯ ಮತ್ತು ವಿಜ್ಞಾನ ಸಂಜೆ ಮತ್ತು ಹಗಲು ಕಾಲೇಜುಗಳಲ್ಲಿ ೧೯೬೭ರಲ್ಲಿ ವೃತ್ತಿ ಆರಂಭಿಸಿದರು. ಆನಂತರ ಸರ್ಕಾರಿ ಕಾಲೇಜು ಶಿಕ್ಷಣ ಇಲಾಖೆಗೆ ಸೇರಿ ಬೆಂಗಳೂರು, ಮಂಡ್ಯ, ಹಾಸನ, ಕೊಳ್ಳೇಗಾಲ, ಮಾಗಡಿ ಮುಂತಾದ ಪದವಿ ಕಾಲೇಜುಗಳಲ್ಲಿ ೩೦ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಹೀಗೆ ಸೇವೆ ಸಲ್ಲಿಸುವಾಗ ಹಾಸನದ ಸರ್ಕಾರಿ ಪದವಿ ಕಾಲೇಜಿನಲ್ಲಿ ೧೯೭೦-೭೨, ೧೯೭೯-೮೧ರ ಅವಧಿಯಲ್ಲಿ ನಾನು ಅವರ ಶಿಷ್ಯನಾಗಿ ಅಧ್ಯಯನ ಮಾಡಿದ್ದೇನೆ. ಸರ್ಕಾರಿ ಕಾಲೇಜಾಗಿದ್ದುದರಿಂದ ಬೇರೆ ವಿಷಯಗಳಿಗೆ ೧೫೦ಕ್ಕೂ ಹೆಚ್ಚು ವಿದ್ಯಾರ್ಥಿಗಳಿರುತ್ತಿದ್ದರು. ಆದರೆ ಕನ್ನಡ ಐಚ್ಛಿಕ ವಿಷಯಕ್ಕೆ ೧೦ ವಿದ್ಯಾರ್ಥಿಗಳು ಮಾತ್ರ ಇರುತ್ತಿದ್ದೆವು. ನಾನು ಕನ್ನಡ ಐಚ್ಛಿಕ ವಿದ್ಯಾರ್ಥಿಯಾಗಿದ್ದುದರಿಂದ, ಇವರೊಂದಿಗೆ ಪ್ರೀತಿ, ಆತ್ಮೀಯತೆ ಹೆಚ್ಚಾಗಿತ್ತು. ಇವರ ಕನ್ನಡ ಸಾಹಿತ್ಯ ಜ್ಞಾನದ ಪ್ರಭಾವಕ್ಕೊಳಗಾದ ನನಗೆ ಅಚ್ಚುಮೆಚ್ಚಿನ ಗುರುಗಳಾದವರು.

ಅನಾಜಿ ಅವರು ಭಾಷಣ ಮಾಡುವಾಗಲೂ, ಪಾಠ ಮಾಡುವಾಗಲೂ ಕೂಡ ವಿಷಯ ಪ್ರತಿಪಾದನೆಯಲ್ಲಿ ತ್ರಾಸವಿಲ್ಲದೆ ಪ್ರಾಸ ಬಳಸುವ ವಿಧಾನ, ಹೋಲಿಸುವ ಕ್ರಮ, ಅರ್ಥೈಸುವ ರೀತಿ

ಅಮೋಘವಾದುದು. ಯಾವುದೇ ವಿಷಯ ಕೊಡಲಿ ನಿರರ್ಗಳವಾಗಿ, ನಿರಾತಂಕವಾಗಿ, ಸ್ಪಷ್ಟವಾಗಿ ಅನೇಕ ದೃಷ್ಟಾಂತಗಳ ಮೂಲಕ ಒಂದು ಮಂತ್ರಮುಗ್ಧರನ್ನಾಗಿಸುತ್ತಿದ್ದರು. ನಮಗೆ ಪ್ರತಿಯೊಂದು ಸಂದರ್ಭವೂ ಅಮೂಲ್ಯವಾಗಿದ್ದು ಹಾಗಿರುತ್ತಿತ್ತು. ಏಕೆಂದರೆ ಯಾವಾಗ ಏನನ್ನು ಹೇಳುತ್ತಾರೆ ಅದು ಎಲ್ಲಿ ನನ್ನ ಗ್ರಹಿಕೆಗೆ ಬಾರದೆ ಬಿಟ್ಟು ಹೋಗುತ್ತಿದೆಯೋ ಎಂಬ ದೃಷ್ಟಿಯಿಂದ ಎಚ್ಚರವಾಗಿರುತ್ತಿದ್ದೆ. ಇವರ ಇನ್ನೊಂದು ವಿಷಯವೆಂದರೆ ಒಂದು ಬಾರಿ ಹೇಳಿದ ವಿಚಾರವನ್ನು ಮತ್ತೊಮ್ಮೆ ಹೇಳುತ್ತಿರಲಿಲ್ಲ. ಹೀಗಾಗಿ ಅವರನ್ನು ವಿಚಾರಗಳ ವಿಶ್ವಕೋಶವೆಂದರೆ ತಪ್ಪಾಗಲಾರದು. ಸಾಮಾನ್ಯವಾಗಿ ಭಾಷಣಗಳಲ್ಲಿ ಸಭಿಕರನ್ನು ಮೆಚ್ಚಿಸಲು ರಂಜನೀಯವಾಗಿ ಹೇಳುವುದು ಸುಲಭ ಆದರೆ ಪಠ್ಯಗಳನ್ನು ಬೋಧಿಸುವಾಗ ವಿದ್ಯಾರ್ಥಿಗಳು ಮೆಚ್ಚುವಂತೆ ವಿಚಾರ ಮಂಡಿಸುವುದು ಕಷ್ಟ. ಕಾವ್ಯಗಳನ್ನು ರಂಜನೀಯವಾಗಿ ಹೇಳುವಂತೆಯೇ ಶಾಸ್ತ್ರಗಳನ್ನು ರಂಜನೀಯಗೊಳಿಸುತ್ತಿದ್ದರು. ಕನ್ನಡ ಸಾಹಿತ್ಯ ಚರಿತ್ರೆ ಪಾಠ ಮಾಡುವಾಗ ಶಾಸನ ವಿಚಾರ ಹೇಳಿದಾಗ ಹಾಸನದ ಪಬ್ಲಿಕ್ ಲೈಬ್ರರಿ ಬಳಿ ಇದ್ದ ಹಾಸನದ ಪ್ರಾಚೀನ ಶಾಸನ ಓದಿ ತೋರಿಸಿ ಅದರಲ್ಲಿ ಹಾಸನಕ್ಕೆ ಅರಸೀಕೆರೆ ಎಂಬ ಹೆಸರು ಇದ್ದುದನ್ನು ಹೇಳಿ ರೈಲ್ವೇ ಸ್ಟೇಷನ್ ಪ್ರದೇಶವನ್ನು ಕಳ್ಳ ಅರಸೀಕೆರೆಗೆ ಎಂದು ಹಿಂದಿನವರು ಕರೆಯುತ್ತಿದ್ದದನ್ನು ತಿಳಿಸಿ, ಸ್ಥಳದ ಇತಿಹಾಸ ತಿಳಿಯಬೇಕಾದ್ದು ಪ್ರತಿ ವಿದ್ಯಾರ್ಥಿಯ ಕರ್ತವ್ಯ ಎಂದು ತಿಳಿಸಿದರು. ಶ್ರವಣ ಬೆಳಗೊಳಕ್ಕೆ ನಮ್ಮನ್ನೆಲ್ಲ ಪ್ರವಾಸ ಕರೆದೊಯ್ದಾಗ ಅಲ್ಲಿನ ಪ್ರತಿಶಾಸನ ಓದಿ ಹೇಳಿ ನಮಗೆಲ್ಲಾ ಅಚ್ಚರಿ ಹುಟ್ಟಿಸಿದ್ದರು.

ಉಪನ್ಯಾಸಗಳಲ್ಲಿ ಸರ್ವಧರ್ಮ ಪ್ರತಿಪಾದನೆ ಇವರ ವೈಶಿಷ್ಟ್ಯವಾಗಿತ್ತು. ಹಾಸನದ ಶಂಕರಮಠದಲ್ಲಿ ಜನಮಿತ್ರ ಸಂಪಾದಕರಾದ ಕೃ.ನ. ಮೂರ್ತಿ ಅವರ ಕನ್ನಡ ಅನುವಾದದ ಭಜಗೋವಿಂದ ಕೃತಿ ಬಿಡುಗಡೆ ಕಾರ್ಯಕ್ರಮ ಏರ್ಪಾಡಿಸಲಾಗಿತ್ತು. ಅದರ ಬಿಡುಗಡೆಗೆ ಶ್ರವಣಬೆಳಗೊಳದ ಚಾರುಕೀರ್ತಿ ಜಗದ್ಗುರುಗಳನ್ನು ಕರೆಸಲಾಗಿತ್ತು. ಗ್ರಂಥ ಪರಿಚಯ ಮಾಡಿಕೊಟ್ಟ ನಮ್ಮ ಗುರುಗಳು ಜೈನಧರ್ಮ ವೈದಿಕ ಧರ್ಮದ ಸಾಹಿತ್ಯ ಸಮನ್ವಯ ತಿಳಿಸುತ್ತಾ, ಜೈನರಲ್ಲಿ ಪ್ರಸಿದ್ಧವೂ ಜನಪ್ರಿಯವೂ ಆದ ಮಾನತುಂಗಾಚಾರ್ಯರ ಭಕ್ತಾಮರ ಸ್ತೋತ್ರವನ್ನು ಆದಿಶಂಕರರ ಭಜಗೋವಿಂದಂ ಅನ್ನು ಹೋಲಿಸಿ ಅದ್ಭುತ ಭಾಷಣ ಮಾಡಿದ್ದನ್ನು ನಾನೆಂದೂ ಮರೆಯಲಾರೆ. ಇವರು ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಹಾಜರಾತಿಯನ್ನು ಕಡ್ಡಾಯ ಮಾಡುತ್ತಿರಲಿಲ್ಲ. ನೇರವಾಗಿ ವಿದ್ಯಾರ್ಥಿಗಳಿಗೆ ಪಾಠ ಕೇಳಬೇಕಾದವರು ಇರಬಹುದು ಇಲ್ಲವೇ ಎದ್ದು ಹೋಗಬಹುದು. ಆದರೆ ಮಧ್ಯದಲ್ಲಿ ತೊಂದರೆ ಕೊಡಬಾರದು ಎಂದು ಹೇಳುತ್ತಿದ್ದರು. ಆದರೂ ತುಂಬಿದ ಹಾಜರಾತಿ ಇರುತ್ತಿತ್ತು. ಯಾವ ವಿದ್ಯಾರ್ಥಿಯೂ ಎದ್ದು ಹೋಗುತ್ತಿರಲಿಲ್ಲ. ಅವರ ಹಾಸ್ಯ ಪ್ರಸಂಗಗಳಿಗಾಗಿ ಕಾಯುತ್ತಾ ಕುಳಿತುಕೊಳ್ಳುತ್ತಿದ್ದೆವು. ಇವರು ಮೊದಲ ಐದು ತಿಂಗಳು ಪಠ್ಯದ ಹಿನ್ನೆಲೆಯಲ್ಲಿ ಲೋಕಾನುಭವವನ್ನು ಜೀವನಾನುಭವಕ್ಕೆ ಬೇಕಾಗುವ ಮಾರ್ಗದರ್ಶನ ನೀಡುತ್ತಿದ್ದರು. ಹಾಗೆಯೇ ಉಳಿದ ಐದು ತಿಂಗಳಲ್ಲಿ ಪರೀಕ್ಷಾ ದೃಷ್ಟಿಯಿಂದ ಬೇಕಾಗುವ ವಿಚಾರಗಳನ್ನು ಪರೀಕ್ಷೆ ಎದುರಿಸಬೇಕಾದ, ಬರೆಯುವ ವಿಧಾನಗಳನ್ನು ಹೇಳಿಕೊಡುತ್ತಿದ್ದರು. ಪಠ್ಯಪುಸ್ತಕಗಳನ್ನು ಮತ್ತು ಅವುಗಳ ಗೈಡುಗಳನ್ನು ಕೊಂಡು ತಂದು ಅದರಲ್ಲಿರುವ ಲೋಪದೋಷಗಳನ್ನು ಹೇಳುವುದರೊಂದಿಗೆ ಜಾಗೃತಿ ಮೂಡಿಸಿ, ನಾವು ಅನುಸರಿಸಬೇಕಾದ ಕ್ರಮಗಳನ್ನು ಮನವರಿಕೆ ಮಾಡಿಕೊಡುತ್ತಿದ್ದರು. ಕನ್ನಡ ಐಚ್ಛಿಕ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸಾಹಿತ್ಯಕೃತಿ ಇದ್ದರೆ ಅದಕ್ಕೆ ಸಂಬಂಧಿಸಿದ ಎಲ್ಲಾ ಕೃತಿಗಳ ಪರಿಚಯಿಸುತ್ತಿದ್ದರು. ಆ ಎಲ್ಲಾ ಕೃತಿಗಳು ಅವರ ಬಳಿಯಲ್ಲಿರುತ್ತಿದ್ದವು. ನಾವು ಕನ್ನಡ ಐಚ್ಛಿಕ ವಿಭಾಗದಲ್ಲಿ ಹತ್ತು ವಿದ್ಯಾರ್ಥಿಗಳು ಮಾತ್ರ ಇದ್ದುದರಿಂದ ಅವರ ಪುಸ್ತಕ ಸಂಗ್ರಹವನ್ನು ಚೆನ್ನಾಗಿಯೇ ಬಳಸಿಕೊಂಡಿದ್ದೇವೆ. ವೆಂಕಟರಾಮಪ್ಪ ಮತ್ತು ಜಿ.ಪಿ. ರಾಜರತ್ನಂರವರ ಪ್ರಭಾವಕ್ಕೆ ಒಳಗಾಗಿದ್ದ ಇವರು ನಾಟಕಗಳನ್ನು ನಾಟಕೀಯವಾಗಿಯೇ ಓದುತ್ತಿದ್ದರು. ಒಮ್ಮೆ ಅಭಿನವ ಕಾಳಿದಾಸ ಬಿರುದಾಂಕಿತ ಬಸವಪ್ಪಶಾಸ್ತ್ರಿಯವರ ಅನುವಾದದ ಕಾಳಿದಾಸನ ನಾಟಕ ಕರ್ನಾಟಕ

ಅಭಿಜ್ಞಾನ ಶಾಕುಂತಲ ಗೊತ್ತುಪಡಿಸಿದ್ದರು. ಈ ಸಂದರ್ಭವನ್ನು ಬಸವಪ್ಪಶಾಸ್ತ್ರಿ ಮತ್ತು ಕಾಳಿದಾಸನ ಪರಿಚಯ ಮತ್ತು ಅವರ ಎಲ್ಲಾ ನಾಟಕಗಳನ್ನು ಕೂಡಾ ತರಗತಿಯಲ್ಲಿ ಓದಿ ಪರಿಚಯಿಸುತ್ತಿದ್ದರು. ಕವಿಗಳನ್ನು ಪರಿಚಯಿಸುವಾಗ ಅವರ ಎಲ್ಲಾ ಕೃತಿಗಳನ್ನು ಕೊಂಡುತಂದು ನಮಗೆ ನೀಡುತ್ತಿದ್ದರು. ಕೆಲವು ಕೃತಿಗಳು ನಮ್ಮಲ್ಲಿದ್ದರೂ ಅವರು ಕೊಡುವ ಕೃತಿಗಳನ್ನು ಪಡೆಯುತ್ತಿದ್ದೆವು. ಏಕೆಂದರೆ ಅವರು ಕೊಡುವ ಕೃತಿಗಳಲ್ಲಿ ಅವರು ಮಾಡಿರುತ್ತಿದ್ದ ಟಿಪ್ಪಣಿಗಳು ನಮಗೆ ಹೆಚ್ಚು ಪ್ರಭಾವ ಬೀರುತ್ತಿದ್ದವು. ಅದರಿಂದ ನಮಗೆ ವಿಮರ್ಶಾಜ್ಞಾನ ಬರುತ್ತಿತ್ತು. ಕಾಲೇಜಿನ ಗ್ರಂಥಾಲಯದಲ್ಲಿ ಎಲ್ಲೆಲ್ಲಿಯೋ ಇದ್ದ ಐಚ್ಛಿಕ ಕನ್ನಡ ವಿಷಯದ ಕೃತಿಗಳನ್ನು ಒಂದೆಡೆ ದೊರಕಲು ಗ್ರಂಥಪಾಲಕರ ನೆರವಿನಿಂದ ಪಠ್ಯ ಹಾಗೂ ಪಠ್ಯೇತರ ಕೃತಿಗಳ ವರ್ಗೀಕರಿಸಿ ಇಟ್ಟು ನಮಗೆಲ್ಲಾ ಅಧ್ಯಯನಕ್ಕೆ ಸಹಾಯ ಮಾಡಿದ್ದಾರೆ. ಇವರು ಪುಸ್ತಕಪ್ರಿಯರು ಅವುಗಳನ್ನೇ ಮಕ್ಕಳಂತೆ ನೋಡಿಕೊಂಡವರು. ಅವರೇ ಹೇಳುತ್ತಿದ್ದಂತೆ ಅಧ್ಯಾಪಕರಲ್ಲಿ ನಾಲ್ಕು ಬಗೆಯ ಅಧ್ಯಾಪಕರಿರುತ್ತಾರೆ. ತರಗತಿ ಅಧ್ಯಾಪಕರು, ಕಾಲೇಜು ಅಧ್ಯಾಪಕರು, ಊರಿನ ಅಧ್ಯಾಪಕರು, ದೇಶದ ಅಧ್ಯಾಪಕರು, ಅನಾಜಿಯವರು ತರಗತಿ ಅಧ್ಯಾಪಕರಾಗಿ ನಮ್ಮನ್ನೆಲ್ಲಾ ಮಂತ್ರಮುಗ್ಧರನ್ನಾಗಿಸುತ್ತಿದ್ದರು. ಕಾಲೇಜು ಅಧ್ಯಾಪಕರಾಗಿ, ಕಾಲೇಜು ವಿದ್ಯಾರ್ಥಿಗಳಿಗೆ ಬೇಕಾಗುವ ಎಲ್ಲಾ ರೀತಿಯ ಸಾಮಗ್ರಿಯನ್ನು ಒದಗಿಸುತ್ತಿದ್ದರು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಕ್ರೀಡಾ ಚಟುವಟಿಕೆಯಲ್ಲಿ ಕನ್ನಡದಲ್ಲಿ ಕಾಮೆಂಟ್ರಿ ಕೊಡುವುದರ ಮೂಲಕ ರಂಜಿಸುತ್ತಿದ್ದರು. ಇನ್ನೂ ಊರಿನ ಅಧ್ಯಾಪಕರಾಗಿ ಹಳ್ಳಿ ಹಳ್ಳಿಗಳಿಗೆ ಹೋಗಿ ಉಪನ್ಯಾಸ ನೀಡುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಕ್ರಿಯವಾಗಿ ಭಾಗವಹಿಸಿ ವಿವಿಧ ವಿಷಯಗಳಲ್ಲಿ ಮಾಹಿತಿ ನೀಡಿ, ಸಾರ್ವಜನಿಕರ ದೃಷ್ಟಿಯಲ್ಲಿ ಶ್ರೇಷ್ಠ ವ್ಯಕ್ತಿಯಾಗಿದ್ದರು. ಜಿ.ಪಿ. ರಾಜರತ್ನಂ ಅವರು ಕಲಾ ಕಾಲೇಜಿನಲ್ಲಿ ಎಂ.ವಿ. ಸೀತಾರಾಮಯ್ಯನವರೊಡನೆ ಪಠ್ಯಪುಸ್ತಕಗಳ ಅರಿವನ್ನು ಮೂಡಿಸಲು ಅನುಸರಿಸುತ್ತಿದ್ದ ಕ್ರಮಕ್ಕೆ ಪ್ರಭಾವಿತರಾಗಿ, ಹಾಸನದಲ್ಲಿ ಪ್ರಸಿದ್ಧವಾಗಿದ್ದ ಜನಮಿತ್ರ ಪತ್ರಿಕೆಯಲ್ಲಿ ಪರೀಕ್ಷಾ ದೃಷ್ಟಿಯಿಂದ ಪಠ್ಯಪುಸ್ತಕಗಳ ಅವಲೋಕನ ಮಾಲೆಯನ್ನು ಪ್ರಾರಂಭಿಸಿ ತಾವೂ ಬರೆದು, ಬೇರೆಯವರಿಂದಲೂ ಬರೆಸಿ, ನಾವೂ ಬರೆಯುವಂತೆ ಪ್ರೇರೇಪಿಸಿದ್ದರು.

ಅನಾಜಿಯವರು ಸಮಯ ಸಿಕ್ಕಾಗಲೆಲ್ಲಾ ಯಾವುದೇ ವಿಚಾರದ ಬಗ್ಗೆಯಾದರೂ ಮಾಹಿತಿಯನ್ನು ನೀಡುತ್ತಿದ್ದರು. ಒಮ್ಮೆ ಹೊಸದಾಗಿ ಕಾಲೇಜಿಗೆ ಅಧ್ಯಾಪಕರಾಗಿ ಬಂದಿದ್ದ, ಕೆ.ಎಸ್. ನರಸಿಂಗರಾವ್ ಎಂಬುವರನ್ನು ನಮ್ಮ ತರಗತಿಗೆ ಪರಿಚಯಿಸಲು ಬಂದಿದ್ದರು. ಅವರನ್ನು ಪರಿಚಯಿಸುವುದರ ಜೊತೆಗೆ ಪಾಠಮಾಡುವ ಕಲೆಯನ್ನು ವಿಷಯ ಪ್ರತಿಪಾದನೆ ಮಾಡುವ ರೀತಿಯನ್ನು ಅಧ್ಯಾಪಕನೊಬ್ಬನಿಗೆ ಇರಬೇಕಾದ ವಿಚಾರಗಳನ್ನು ತಿಳಿಸಿ, ಅವರಿಗೆ ಧೈರ್ಯ ತುಂಬಿದರು. ಯಾರಾದರೂ ಕವಿಗಳಿಗೆ ಪ್ರಶಸ್ತಿ ಬಂದರೆ, ನಿಧನರಾದರೆ ಅಂದು ಅವರ ತರಗತಿಯಿದ್ದಾಗ ಇಡೀ ಅವಧಿಯಲ್ಲಿ ಅವರ ಪರಿಚಯ, ಕೃತಿಗಳ ಬಗ್ಗೆ ಮತ್ತು ಸಾಧನೆಗಳನ್ನು ತಿಳಿಸಿ ಕೊಡುತ್ತಿದ್ದ ಅವರ ಸ್ವಭಾವ ನನಗೆ ಅಚ್ಚುಮೆಚ್ಚಿನದಾಗಿತ್ತು. ನನ್ನಲ್ಲಿ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿ, ನಾನೊಬ್ಬ ಕನ್ನಡ ಅಧ್ಯಾಪಕನಾಗಲು ಕಾರಣೀಭೂತರಾಗಿದ್ದಾರೆ. ಅವರೇ ನನಗೆ ಸ್ಫೂರ್ತಿಯಾಗಿ, ಅವರಂತೆಯೇ ಅನುಕರಿಸಿ, ಅನುಸರಿಸಿ ಪದ್ಯಪಾಠಮಾಡುವಾಗ ಹಾಡುವ ಮೂಲಕ, ನಾಟಕ ಮಾಡುವಾಗ ನಾಟಕೀಯವಾಗಿ ಸಂಭಾಷಿಸಿ, ನನ್ನ ವಿದ್ಯಾರ್ಥಿಗಳ ಮನಸ್ಸುಗಳನ್ನು ಗೆದ್ದಿದ್ದೇನೆ. ಅಧ್ಯಾಪಕನಾದವನಿಗೆ ಮೂಲಭೂತವಾಗಿ ಮಾಹಿತಿ ಒದಗಿಸುವ ಮತ್ತು ಪ್ರಭಾವ ಬೀರುವ ಶಕ್ತಿ ಇರಬೇಕು. ಇದೆಲ್ಲವನ್ನು ನನ್ನ ನೆಚ್ಚಿನ ಗುರುಗಳಲ್ಲಿ ಕಂಡಿದ್ದೇನೆ. ಅದನ್ನೇ ನನ್ನ ಬೋಧನೆ ಜೀವನದಲ್ಲಿ ಅಳವಡಿಸಿಕೊಂಡಿದ್ದೇನೆ.

****

ಹುಮ್ಮಸ್ಸಿನ ಕಾರಂಜಿ-ಶ್ರೀ ಅ.ನಾ.ಜಿ

ಕೆ.ವಿ. ವರದರಾಜ ಅಯ್ಯಂಗಾರ್
ಚರವಾಣಿ: ೯೬೩೨೪೬೧೨೫೦

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ ।
ಕೆಲವಂ ಸಜ್ಜನಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥

ಕನ್ನಡದ ಕಸ್ತೂರಿಯ ಕಂಪನ್ನು ಹೊರಸೂಸುವ ನುಡಿಮುತ್ತೊಂದನ್ನು ಮೇಲೆ ಕಾಣುತ್ತಿದ್ದೇವೆ. ಜ್ಞಾನಾರ್ಜನೆಗೆ ಬೇಕಾದ ಪರಿಕರಗಳನ್ನು ಸುಲಭರೂಪದಲ್ಲಿ ವಿಂಗಡಿಸಿ, ವಿವರಿಸಿರುವ ಬಹು ಜನಪ್ರಿಯ ಸದ್ವಚನವಿದಾಗಿದೆ. ನಾನು ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದಾಗ ಕಲಿತ ಸೋಮೇಶ್ವರ ಶತಕದಲ್ಲಿ ಇದೂ ಒಂದಾಗಿದೆ.

ಜ್ಞಾನಾರ್ಜನೆಯಲ್ಲಿ ವಿಖ್ಯಾತರಾಗಿ ಮೆರೆದ ಅನೇಕ ಶ್ರೇಷ್ಠರಲ್ಲಿ ಒಬ್ಬೊಬ್ಬರೂ ಒಂದೊಂದು ಮೇಲ್ಕಾಣಿಸಿದ ಪರಿಕರಗಳಿಂದ ಮುಂದೆ ಬಂದವರು. ಅವರವರ ದಾರಿಯಲ್ಲಿ ಅವರು ಬಹಳಷ್ಟು ಮುಂದುವರಿದು ಜ್ಞಾನಾಂಗಣಕ್ಕೆ ಒಂದೊಂದು ದಿಕ್ಕಿನಿಂದಲೂ ಕಾಲಿಟ್ಟವರು. ದ.ರಾ. ಬೇಂದ್ರೆ, ಕುವೆಂಪು, ಬಿ.ಎಂ.ಶ್ರೀ., ಪು.ತಿ.ನ., ಮಾಸ್ತಿ ವೆಂಕಟೇಶ ಅಯ್ಯಂಗಾರ್, ಜಿ.ಪಿ. ರಾಜರತ್ನಂ- ಹೀಗೆಯೇ ನೂರಾರು ಕನ್ನಡದ ಕಲಿಗಳು ತಮ್ಮದೇ ಆದ ಛಾಪನ್ನೊತ್ತಿ ವಿಖ್ಯಾತರಾದರು. ಕನ್ನಡದ ಮಹಾವಟವೃಕ್ಷದ ಭಾರೀ ಕೊಂಬೆಗಳಾಗಿ ಮೆರೆದಿರುವರು.

ಇವರೆಲ್ಲರ ಜ್ಞಾನಭಂಡಾರಗಳಿಂದ ಒಂದೊಂದು ಹಿಡಿಪಡೆದುಕೊಂಡು ಕೆಲವರಿಂದ ಪಾಠ ಕೇಳಿ, ಕೆಲವರ ಪುಸ್ತಕಗಳನ್ನು ಆಳವಾಗಿ ಅಧ್ಯಯನ ಮಾಡಿ, ಕೆಲವರು ಕನ್ನಡ ಭಾಷಾ ಸಾಮ್ರಾಜ್ಯದಲ್ಲಿ ಮೆರೆದಾಡಿದ ರೀತಿಯನ್ನು ಕಣ್ಣಾರೆ ಕಂಡು, ತಮ್ಮದೇ ಆದ ಭಾಷಾವ್ಯವಸಾಯದ ಬಲದಿಂದ ಬಲವಂದು, ಕೆಲವು ಸಜ್ಜನರೊಡನೆ ಸದಾ ಓಡಾಡಿ, ಅವರಾಡಿದ ನುಡಿಮುತ್ತುಗಳನ್ನು ಹೆಕ್ಕಿ ಪೋಣಿಸಿ ಸೋಮೇಶ್ವರನ ನುಡಿ-ಕನ್ನಡದ ಕಲಿ, ಕಟ್ಟಾಳು ನಮ್ಮೊಡನೆ ಇಂದೂ ಇದ್ದಾರೆ ಎನ್ನುವುದು ನಮ್ಮೆಲ್ಲರನ್ನು ಬೆರಗುಗೊಳಿಸುವ, ಹೆಮ್ಮೆ ತುಂಬುವ, ಧನ್ಯರಾಗಿಸುವ ಸಂಗತಿಯಾಗಿದೆ. ಅಂತಹ ಅದ್ಭುತ ವ್ಯಕ್ತಿಯೇ ಬಹುಶೃಂಗದ ಪ್ರೊ॥ ಶ್ರೀ ಅಶ್ವತ್ಥನಾರಾಯಣ ಜಿ. ಚಿಕ್ಕದಾಗಿ ಚೊಕ್ಕವಾಗಿ- ಶ್ರೀ ಅ.ನಾ.ಜಿ.

ನನಗೆ ಶ್ರೀ ಅ.ನಾ.ಜಿ. ಯವರ ಪರಿಚಯವಾದುದೇ ಒಂದು ಸುದಿನದಲ್ಲಿ. ಶ್ರೀ ಎಂ.ಕೆ. ಎಲ್.ಎನ್. ಶಾಸ್ತ್ರಿಯವರು ನನಗೆ ಇಂಜಿನಿಯರಿಂಗ್‌ನಲ್ಲಿ ಗುರುಗಳಾಗಿದ್ದವರು. ಕಾಲಾಂತರದಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ರಾಷ್ಟ್ರೀಯ ಪ್ರಜ್ಞೆಯ ತುಂಬು ಹೃದಯದ ವಿನಮ್ರ ವಿದ್ವಾಂಸರು. ಹಾಗೂ 'ಅಜೇಯ' ಮುಂತಾದ ಅದ್ಭುತ ಗ್ರಂಥಗಳ ಲೇಖಕರಾದ ಶ್ರೀ ಬಾಬು ಕೃಷ್ಣಮೂರ್ತಿಗಳು. ಶ್ರೀ ಶಾಸ್ತ್ರಿಯವರ ಮೂಲಕ ನನಗೆ ಪರಿಚಿತರಾದರು. ಈ ಇಬ್ಬರು ಮಹನೀಯರೂ

೨೦೧೧ನೇ ಇಸವಿಯಲ್ಲಿ ನನ್ನನ್ನು ಶ್ರೀ ಅನಾಜಿಯವರಿಗೆ ಪರಿಚಯಿಸಿದರು – ಇದರಿಂದ ನನ್ನ ಶ್ರೇಯೋಭಿಲಾಷಿಗಳಾದರು.

ಶ್ರೀ ಅ.ನಾ.ಜಿ.ಯವರು, ಆಗ ನಾನು ಕಂಡಂತೆ ಜ್ಞಾನ ಭಂಡಾರದಿಂದ ತುಂಬಿ ತುಳುಕುತ್ತಿದ್ದರು. ಅದರ ಹೊರ ಸ್ವರೂಪವೋ ಎಂಬಂತೆ ಅವರು ಸುಮಾರು ೨೦,೦೦೦ ಪುಸ್ತಕ ಭಂಡಾರವನ್ನು ಸಂಗ್ರಹಿಸಿ, ಅಭಿಮಾನದಿಂದ ಪೋಷಿಸುತ್ತಿದ್ದವರು. ವಯೋಮಾನದಲ್ಲಿ ನನಗಿಂತ ೧೧ ವರ್ಷ ಹಿರಿಯರಾಗಿದ್ದು, ಇಷ್ಟೆಲ್ಲ ಹಿರಿಯ ವಿದ್ವಾಂಸರಾಗಿದ್ದರೂ ಅ.ನಾ.ಜಿ.ಯವರು ನನ್ನನ್ನು ತಮ್ಮ ಸಹಪಾಠಿಯಂತೆ ಕಾಣುತ್ತಿದ್ದುದ್ದು ಒಮ್ಮೊಮ್ಮೆ ನನ್ನನ್ನು ಮುಜುಗರಕ್ಕೀಡಾಗಿಸಿತ್ತು. ಅವರ ಸರಳ ಸ್ವರೂಪವೆಂದರೆ ಹೆಗಲಲ್ಲಿ ಸದಾ ಕಾಣುತ್ತಿದ್ದ ಪುಸ್ತಕಗಳ ಚೀಲ, ಚಪ್ಪಲಿ ಮತ್ತು ಸದಾ ನಗುಮೊಗ, ಹಾಸ್ಯ ಚಟಾಕಿ, ಪ್ರಾಸ-ರಿಂಗಣಗಳಿಂದ ಕೂಡಿದ ನುಡಿ ಮುತ್ತು; ಏನು ಕಂಡರೂ ಅದರಲ್ಲಿನ ಗುಣಗಳನ್ನು ನೋಡುವುದು; ನಾವು ಹೇಗೇ ಬರೆದಿದ್ದರೂ ಅದನ್ನು ಓದಿ, ನಲಿದು ಅದಕ್ಕೆ ಪ್ರೋತ್ಸಾಹ ಕೊಡುವುದೂ ಅಲ್ಲದೇ ಅದಕ್ಕೆ ಪೂರಕವಾಗುವಂತಹ ವಿಷಯಗಳ ಭಂಡಾರವನ್ನೇ ತೆರೆದಿಡುತ್ತಿದ್ದರು!! ಅವರ ಸರಳತೆಯ ಇಷ್ಟಕ್ಕೇ ನಿಲ್ಲದೇ, ನಮ್ಮ ಬರವಣಿಗೆಯನ್ನು ಎತ್ತಿ ಹಿಡಿಯಲು ಬೇಕಾದ ಪುಸ್ತಕಗಳನ್ನು ತಾವೇ, ಸ್ವತಃ ಹೊತ್ತು ತಂದು ನಮ್ಮ ಮನೆಗೇ ತಲುಪಿಸುತ್ತಿದ್ದುದು ಅವರ ಹಿರಿತನಕ್ಕೆ ಸಾಕ್ಷಿಯಾಗಿದೆ. ಇವೆಲ್ಲ ನಾನು ಅವರನ್ನು ಕೇಳಬೇಕೆಂದು ನನಗೆ ಹೊಳೆಯದಿದ್ದರೂ ಅವರೇ ವಾತ್ಸಲ್ಯಪೂರಿತರಾಗಿ ಮಾಡುತ್ತಿದ್ದ ಆಶೀರ್ವಾದಗಳಾಗಿದ್ದವು.

ಆಗಾಗ, ಶ್ರೀ ಅ.ನಾ.ಜಿ.ಯವರು ಅನೇಕ ಹಿರಿಯ ಲೇಖಕರು, ಕವಿಗಳು, ಉಪಾಧ್ಯಾಯರು, ಒಡನಾಡಿಗಳು, ಓದಿದ ಅಪರೂಪದ ವಿಷಯಗಳು ಮುಂತಾದವುಗಳ ಬಗ್ಗೆ ಪುಂಖಾನುಪುಂಖವಾಗಿ, ಅಪ್ಯಾಯಮಾನವಾಗಿ, ತಾವು ಕಳೆದ ಬಹುಮೌಲ್ಯಗಳಿಗೆ ತಮ್ಮ ಅದ್ಭುತ ಜ್ಞಾಪಕ ಚಿತ್ರಶಾಲೆಯಿಂದ ಹೊರತೆಗೆದು ಹೇಳುತ್ತಾರೆ. ಹಿಂದಿನ ಸುಮಾರು ೫೦-೬೦ ವರ್ಷಗಳ ಬೆಳೆ ಬಾಳುವ ಕನ್ನಡದಲ್ಲಿನ ಆಗು-ಹೋಗುಗಳನ್ನು ಸವಿಸ್ತಾರವಾಗಿ ತಿಳಿಸುತ್ತಾರೆ. ಅವರು ಪ್ರಾಧ್ಯಾಪಕರಾಗಿದ್ದಾಗಿನ ವಿದ್ಯಾರ್ಥಿ-ಸಹಚರ ಹೆಸರುಗಳೊಂದಿಗೆ ಅವರ ಸಾಧನೆ-ಪ್ರಸಕ್ತ ವಿವರಗಳೊಂದಿಗೆ ಹೇಳುತ್ತಾರೆ. ಅವರ ಮಾತಿನ ಹೊಳೆಯಲ್ಲಿ ಬಹುದೂರ ಸಾಗಿ ಗಂಟೆಗಳಾಗಿದ್ದರೂ ಬಳಲಿಕೆಯ ಸೊಗಡೂ ಇಲ್ಲದೆ ವಿಷಯಗಳನ್ನು ಒಂದೇ ಉತ್ಸಾಹದಿಂದ ತುಂಬಿಕೊಡುತ್ತಾರೆ. ಯಾವಾಗ, ಎಲ್ಲಿ ಕಂಡರೂ, "ಈಗ ಏನೂ ಬರೆಯುತ್ತಿದ್ದೀರಾ?" ನೀವು ಬರೆಯುತ್ತಿದ್ದುದು ಎಲ್ಲಿಯವರೆಗೆ ಬಂದಿದೆ?" ಎಂದೆಲ್ಲಾ ವಿಚಾರಿಸುತ್ತಾರೆ. ಅಪಾರ ಪ್ರೋತ್ಸಾಹದ ಮಾತುಗಳಿಂದ ಹುರಿದುಂಬಿಸುತ್ತಾರೆ. ಕಾರಣಾಂತರಗಳಿಂದ ಬರವಣಿಗೆ ಕುಂಠಿತವಾಗಿದ್ದರೂ, ಅವರೊಡನೆ ಸ್ವಲ್ಪಕಾಲ ಮಾತನಾಡಿದರೆ "ಆನೆಬಲ" ಬಂದಂತಾಗಿ ಬರವಣಿಗೆ ಮುಂದೋಡುತ್ತದೆ.

ನನ್ನ ಕವನ ಸಂಗ್ರಹಗಳ ಒಂದೊಂದು ಪದ್ಯ ಬರೆದಾಗಲೂ ಅ.ನಾ.ಜಿ.ಯವರು ಅದನ್ನು ಓದಿ ಅದರ ಛಂದಸ್ಸು, ಮಾತ್ರಾಕಾಲ, ಪ್ರಾಸ, ರಿಂಗಣಗಳನ್ನು ಬೊಟ್ಟು ಮಾಡುತ್ತಾರೆ. ಹಿಂದಿನವರ ಕೃತಿಗಳಲ್ಲಿ ಈ ಗುಣಗಳ ಹೇಗೆ ಓತ-ಪ್ರೋತವಾಗಿದ್ದವು ಎಂಬುದನ್ನು ತಿಳಿಸಿದ್ದರು. ಹಿರಿಯರಾದ ಬೇಂದ್ರೆ, ಕುವೆಂಪು, ಪುತಿನ ಮುಂತಾದವರ ಕೃತಿಗಳಲ್ಲಿ ಈ ಕುರುಹುಗಳು ಹೇಗೆ ಬೀಡುಬಿಟ್ಟಿವೆ ಎಂಬುದನ್ನು ವಿವರಿಸಿದ್ದರು. ಮೇಲಿನ ಎಲ್ಲಾ ಕುರುಹುಗಳೊಂದಿಗಿದ್ದರೂ ಅದರ ವಸ್ತುವಿನಲ್ಲಿ ಸತ್ವವಿಲ್ಲದಿದ್ದರೆ ಕವನವು ಹೇಗೆ ಜಾಳು ಜಾಳಾಗುತ್ತದೆ ಎಂಬದನ್ನು ತಿಳಿಸಿದ್ದಾರೆ.

"ಸಂಪೂರ್ಣ ಕನ್ನಡ ಭಾಗವತ"ವನ್ನು ನಾನು ಪದ್ಯರೂಪದಲ್ಲಿ ೧೫೪೨ ಪದ್ಯಗಳಲ್ಲಿ ೫ ಛಂದಸ್ಸುಗಳಲ್ಲಿ ಅಕ್ಟೋಬರ್ ೨೦೧೧ರಲ್ಲಿ ಬರೆದು ಮುಗಿಸಿದೆನು. ಆಗ ಒಂದೊಂದು ಸರ್ಗ ಮುಗಿದಾಗಲೂ ಅನಾಜಿಯವರು ಬಹು ಅಕ್ಕರೆಯಿಂದ ಓದಿ ನಲಿದಾಡುತ್ತಿದ್ದರು. ಈ ಬರವಣಿಗೆಯು ೧೮ ತಿಂಗಳ ಕಾಲ ಅವ್ಯಾಹತವಾಗಿ ನಡೆಯುತ್ತಿದ್ದಾಗ, ಅಷ್ಟೂ ಕಾಲ ಬೇಸರವಿಲ್ಲದೆ, ಕಷ್ಟವೆಂದೆಣಿಸದೆ

ನಮ್ಮ ಮನೆಗೇ ಬಂದು ಅದರ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದರು. ಈ ಗ್ರಂಥ ಕಾವ್ಯವು ಬಿಡುಗಡೆಯಾಗುವ ಸಂದರ್ಭದಲ್ಲಿ, ಕಾರ್ಯಕ್ರಮವು ವಿಶೇಷವಾಗಿ ಕಳೆಗಟ್ಟುವಂತೆ ಬೆಂಗಾವಲಾಗಿ ನಿಂತಿದ್ದರು. ಇದಕ್ಕಾಗಿ ಶ್ರೀ ಕೆ.ಎಸ್. ನಾರಾಯಣಾಚಾರ್ಯರು, ಡಾ॥ ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು, ಶ್ರೀ ಕೃಷ್ಣ ಕಲಾಕ್ಷೇತ್ರದ ಶ್ರೀ ತಿರುದಾಸರು, ಪ್ರೊ॥ ಹೊಳಲ್ಕೆರೆ ರಂಗರಾವ್ ಚಂದ್ರಶೇಖರ್, ಶ್ರೀ ಆರ್.ಎಲ್. ಕಶ್ಯಪ್, ಡಾ॥ ಎಸ್.ಆರ್. ಲೀಲಾ, ಶ್ರೀಮತಿ ಲಲಿತಾಶಾಸ್ತ್ರಿಯವರುಗಳನ್ನು ಪರಿಚಯಿಸಿಕೊಟ್ಟರು. ಶ್ರೀ ಅನಾಜಿಯವರು ಈ ಬಗ್ಗೆ ಮಾಡಿದ ಉಪಕಾರಗಳನ್ನು ವಹಿಸುತ್ತಿದ್ದ ಮುತುವರ್ಜಿಯಲ್ಲಿ ನೋಡಿದರೆ, ನನ್ನ ಸ್ವಂತ ಅಣ್ಣನೂ ಹೀಗೆ ಒದಗುತ್ತಿದ್ದನೋ ಇಲ್ಲವೋ ಎಂದೆನಿಸುತ್ತಿತ್ತು. ಅವರ ಪ್ರೀತಿಯ, ಎಂದೆಂದಿಗೂ ನಾನು ಮರೆಯಲಾಗದ ಈ ಎಲ್ಲಾ ಪ್ರೋತ್ಸಾಹಗಳಿಗೆ ನಾನು ನಿರಂತರ ಚಿರಋಣಿಯಾಗಿದ್ದೇನೆ.

ಶ್ರೀ ಅ.ನಾ.ಜಿ.ಯವರು ಭಾಗವಹಿಸುತ್ತಿದ್ದು ಅನೇಕ ಕಾರ್ಯಕ್ರಮಗಳಿಗೆ ನನ್ನನ್ನು ಕರೆದೊಯ್ದು, ಅಲ್ಲಿನ ಹಿರಿಯರಿಗೆಲ್ಲ ನನ್ನನ್ನು ಪರಿಚಯಿಸಿದ್ದಾರೆ. ಅಂತಹ ಕೆಲವು ಸಭಾಂಗಣಗಳಲ್ಲಿ ನಾನು ಮಾತನಾಡುವಾಗಲೆಲ್ಲ, ಅವರೂ ತುಂಬಾ ಆಸ್ಥೆಯಿಂದ ಪ್ರೇಕ್ಷಕರಾಗಿ ಕುಳಿತಿರುತ್ತಿದ್ದರು. ಕಾರ್ಯಕ್ರಮದ ನಂತರ ನನ್ನ ಮಾತಿನಲ್ಲಿನ ಸತ್ವಯುತವಾಗಿದ್ದ ವಿಷಯಗಳನ್ನು ಎತ್ತಿ ಹೇಳಿ, ಅದರೊಂದಿಗೆ ಸೇರಿಸಿಕೊಳ್ಳಬಹುದಾದ ಇತರ ವಿಷಯಗಳನ್ನೂ ವಿವರಿಸಿದ್ದಾರೆ. ನಾನು ೩೦ ದಿನಗಳ ಕಾಲ ಮಾಡುತ್ತಿದ್ದ "ತಿರುಪ್ಪಾವೈ ಪ್ರವಚನ ಮಾಲೆ"ಯಲ್ಲಿ ಪ್ರತಿದಿನವೂ ತಪ್ಪದೇ ಭಾಗವಹಿಸುತ್ತಿದ್ದರು. ಇತರ ಹಿಂದಿನವರು ಹೇಳಿರುವ ವಿಷಯಗಳೊಂದಿಗೆ ಹೋಲಿಸಿ, ತಾವು ಸವಿದ ಹೂರಣವನ್ನು ವಿವರಿಸಿದ್ದರು. ಇದು ಅವರ ದೊಡ್ಡತನ, ಭಾಷಾಪ್ರೇಮಗಳಿಗೆ ಹಿಡಿದ ಕನ್ನಡಿಯಂತಿದೆ.

"ಆಡು ಮುಟ್ಟದ ಸೊಪ್ಪಿಲ್ಲ" ಎಂಬ ಮಾತಿನಂತೆ ನಮ್ಮ ಕನ್ನಡ ನುಡಿ ಸಾಗರದಲ್ಲಿ ಶ್ರೀ ಅ.ನಾ.ಜಿ. ಯವರು ಕೈಯಾಡಿಸದ ಕನ್ನಡ ಭಾಷಾ ಪ್ರಕಾರಗಳು ಬಹುವಿರಳವೆಂದೇ ಹೇಳಬಹುದು. ಅವರು ನೀಡಿರುವ ಸಮಾಜಸೇವೆ, ಕನ್ನಡಕ್ಕೆ ದುಡಿದ ರೀತಿಗಳು, ಪಡೆದ ಪ್ರಶಸ್ತಿಗಳ ಸರಮಾಲೆ, ಅವರ ಅಪಾರವಾದ ಗ್ರಂಥರಚನೆಗಳು ಮುಂತಾದವನ್ನು ಹತ್ತಿರದಿಂದ ಗಮನಿಸಿದಾಗ, ಇಂತಹ ಕನ್ನಡಕ್ಕೆ ಕಳಸಪ್ರಾಯರಾದವರೊಡನೆ ನಾನೂ ಓಡಾಡಿದ್ದೇನೆ ಎಂಬುದೇ ನನಗೊಂದು ಹೆಮ್ಮೆ. ಇಂತಹ ಸಜ್ಜನರ, ವಿದ್ವಾಂಸರ ಆಶೀರ್ವಾದಗಳನ್ನು ಸದಾ ನನ್ನೊಡನಿರಲಿ ಎಂಬುದು ನನ್ನ ಹೃತ್ಪೂರ್ವಕ ಹಂಬಲವಾಗಿದೆ.

ಶ್ರೀ ಅನಾಜಿಯವರ ಇಂತಹ ಮೇರು ಸಾಧನೆಗಳಿಗೆಲ್ಲ ಬೆನ್ನೆಲುಬಾಗಿರುವವರು ಅವರ ಧರ್ಮಪತ್ನಿಯಾದ ಶ್ರೀಮತಿ ಪ್ರೊ॥ ಲಕ್ಷ್ಮೀದೇವಿಯವರು. ಇವರು ಇತರರಗಿಂತ ವಿಭಿನ್ನರಾದವರು. ಸಂಸಾರದ ಗಾಡಿಗಲ್ಲದೆ ಅನಾಜಿಯವರ ಈ ಕನ್ನಡ ಸೇವೆಯ ತೇರಿಗಾಗಿ ಇವರು ಜೊತೆಜೊತೆಯ, ಸಮಸಮದ ಗಾಲಿಯಂತಿದ್ದಾರೆ ಇವರ ಕನ್ನಡದ ಸೇವೆ ಅಪಾರವಾಗಿದ್ದು, ಅನಾಜಿಯವರ ಹೆಗಲಿಗೆ ಹೆಗಲುಕೊಟ್ಟಿರುವವರು ಎಂಬುದು ನಮ್ಮ ಗಮನಕ್ಕೆ ಬರದಿರುವುದು ಖಂಡಿತಾ ಅಸಾಧ್ಯ!!

ಬಹು ಅಮೂಲ್ಯವಾದ ೮೭ ವಸಂತಗಳನ್ನು ಕಂಡಿರುವ ಕನ್ನಡದ ಕಟ್ಟಾಳದ ಈ ಅ.ನಾ.ಜಿ. ಎಂಬ ಮಹಾನ್ ವ್ಯಕ್ತಿಗೆ ಅವರ ಶಿಷ್ಯ-ಸ್ನೇಹಿತವರ್ಗ ತಮ್ಮ ಕೃತಜ್ಞತೆಗಳನ್ನು "ಸಾಹಿತ್ಯ ಪರಿಚಾರಕ" ಎಂಬ ಇವರ ಬಗೆಗಿನ ಅಭಿನಂದನಾ ಗ್ರಂಥವನ್ನು ಪ್ರಕಟಿಸುವುದರೊಂದಿಗೆ ಸಲ್ಲಿಸುತ್ತಿರುವುದು ಬಹು ಸಂತಸದ ವಿಷಯ. ಆ ಶಿಷ್ಯಕೋಟಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಪೂಜ್ಯ ಅ.ನಾ.ಜಿ. ಯವರು ನೂರ್ಕಾಲ ಬಾಳಿ-ಬದುಕಿ ಕನ್ನಡ ಕುಲತಿಲಕಪ್ರಾಯರಾಗಿ ಬೆಳಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಅವರ ೧೦೦ನೆಯ ವಸಂತೋತ್ಸವವೂ ಇದಕ್ಕೂ ನೂರ್ಮಡಿಯಾಗಿ ವೈಭವೋಪೇತವಾಗಿ ನೆರವೇರುವಂತಾಗಲಿ ಎಂದು ಆಶಿಸುತ್ತ ನನ್ನ ಬರವಣಿಗೆಯಿಂದ ವಿಶ್ರಮಿಸುತ್ತೇನೆ.

*****

ಅಕ್ಷರ ಲೋಕದ ಅನರ್ಘ್ಯ ರತ್ನ

ನಾಡೋಜ ಡಾ. ವೂಡೇ ಪಿ. ಕೃಷ್ಣ
ಚರವಾಣಿ : ೮೧೦೫೬೪೦೫೯೩

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕೆಲವು ಲೇಖಕರು ಕೇವಲ ಕೃತಿಗಳಿಂದ ಗುರುತಿಸಿಕೊಂಡರೆ. ಮತ್ತೆ ಕೆಲವರು ತಮ್ಮ ವ್ಯಕ್ತಿತ್ವ ಮತ್ತು ಸಮಾಜಮುಖಿ ಚಿಂತನೆಗಳಿಂದ ಸಾಂಸ್ಕೃತಿಕ ರಾಯಭಾರಿಗಳಾಗಿ ಬೆಳೆಯುತ್ತಾರೆ. ಅಂತಹ ಸಾಲಿನಲ್ಲಿ ನಿಲ್ಲುವ ಅಪರೂಪದ ವಿದ್ವಾಂಸರು ಪ್ರೊ. ಜಿ. ಅಶ್ವತ್ಥನಾರಾಯಣ ಅವರು. ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಬದುಕು ಮತ್ತು ಬರಹ ಎರಡೂ ಸಮಾನಾಂತರವಾಗಿ ಸಾಗಿದವುಗಳು. ಅವರೊಬ್ಬ ಶ್ರೇಷ್ಠ ಅಧ್ಯಾಪಕರಾಗಿ ಸಾವಿರಾರು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸಾಹಿತ್ಯದ ಜ್ಯೋತಿಯನ್ನು ಬೆಳಗಿದವರು. ಸಾಹಿತ್ಯವೆಂದರೆ ಕೇವಲ ಪದಗಳ ಜೋಡಣೆಯಲ್ಲ, ಅದು ಬದುಕನ್ನು ಪ್ರೀತಿಸುವ ಮತ್ತು ಮೌಲ್ಯಗಳನ್ನು ಬಿತ್ತುವ ಮಾಧ್ಯಮ ಎಂಬುದು ಅಶ್ವತ್ಥನಾರಾಯಣ ಅವರ ನಂಬಿಕೆ. ಅವರ ಲೇಖನಿಯಿಂದ ಮೂಡಿಬಂದ ಪ್ರತಿಯೊಂದು ಕೃತಿಯೂ ಕನ್ನಡ ನಾಡಿನ ಮಣ್ಣಿನ ಗುಣವನ್ನು, ಇಲ್ಲಿನ ಪರಂಪರೆಯನ್ನು ಮತ್ತು ಮಾನವೀಯ ಸಂಬಂಧಗಳನ್ನು ಬಹಳ ಗಾಢವಾಗಿ ಚಿತ್ರಿಸಿವೆ.

ಅಶ್ವತ್ಥನಾರಾಯಣ ಅವರ ಸಂಶೋಧನಾ ಪ್ರವೃತ್ತಿ ನನಗೆ ಬಹಳ ಮೆಚ್ಚುಗೆಯಾದದ್ದು. ಯಾವುದೇ ವಿಷಯವನ್ನು ಕೈಗೆತ್ತಿಕೊಂಡರೂ ಅದರ ಆಳ-ಅಗಲಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸುವ ಅವರ ಶೈಲ ವಿಶಿಷ್ಟವಾದುದು. ಜೈನ ಸಾಹಿತ್ಯ, ದಾಸ ಸಾಹಿತ್ಯ ಹಾಗೂ ವಚನ ಸಾಹಿತ್ಯದ ವಿವಿಧ ಮಗ್ಗಲುಗಳ ಬಗ್ಗೆ ಅವರು ನಡೆಸಿರುವ ಅಧ್ಯಯನಗಳು ಇಂದಿನ ತಲೆಮಾರಿನ ಸಂಶೋಧಕರಿಗೆ ದಾರಿದೀಪವಾಗಿವೆ. ಅವರ ಬರಹಗಳಲ್ಲಿ ವೈಚಾರಿಕತೆ ಇದ್ದರೂ, ಎಲ್ಲಿಯೂ ಸೌಜನ್ಯದ ಗೆರೆಯನ್ನು ದಾಟದ ಸಂಸ್ಕಾರವಿದೆ. ಲೌಕಿಕ ಜಗತ್ತಿನ ಸಾಹಿತ್ಯದ ಜೊತೆಗೆ ಪಾರಮಾರ್ಥಿಕ ಚಿಂತನೆಗಳನ್ನು ಸಮನ್ವಯಗೊಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಜ್ಞಾನಕ್ಕೆ ವಿನಯವೇ ಆಭರಣ ಎಂಬ ಮಾತಿಗೆ ಅವರು ಜೀವಂತ ಉದಾಹರಣೆ. ಈ ಅಭಿನಂದನಾ ಸಮಿತಿಯ ಅಧ್ಯಕ್ಷನಾಗಿ ಅಶ್ವತ್ಥನಾರಾಯಣ ಅವರ ಬದುಕಿನ ಪುಟಗಳನ್ನು ತಿರುವಿ ನೋಡಿದಾಗ ನನಗೆ ಕಂಡದ್ದು ಒಬ್ಬ 'ನಿಗರ್ವಿ ಸಾಧಕ', ಸಂಘಟನಾತ್ಮಕ ಕೆಲಸಗಳಲ್ಲಿ ಅವರು ನೀಡುವ ಸಲಹೆಗಳು ಬಹಳ ಮೌಲ್ಯಯುತವಾಗಿರುತ್ತವೆ. ಪ್ರಚಾರದ ಹಂಗಿಲ್ಲದೆ, ತೆರೆಯ ಮರೆಯಲ್ಲಿ ನಿಂತು ಕನ್ನಡದ ಕೆಲಸ ಮಾಡುವ ಅವರ ಕಾಯಕಯೋಗಿ ಮನೋಭಾವ ನಮಗೆಲ್ಲರಿಗೂ ಪ್ರೇರಣೆ.

ಕನ್ನಡ ಸಾಹಿತ್ಯ ಲೋಕಕ್ಕೆ ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಕೊಡುಗೆ ಕೇವಲ ಅಕ್ಷರರೂಪದಲ್ಲಲ್ಲ, ಅದು ಸಂಸ್ಕಾರದ ರೂಪದಲ್ಲಿದೆ. ೮೫ಕ್ಕೂ ಹೆಚ್ಚು ವಸಂತಗಳನ್ನು ಕಂಡು ಸಾರ್ಥಕ ಬದುಕು ಸಾಗಿಸುತ್ತಿರುವ ಅವರಿಗೆ ಈ ಅಭಿನಂದನಾ ಗ್ರಂಥವು ನಾಡಿನ ಜನತೆಯ ಪರವಾಗಿ ಸಲ್ಲಿಸುತ್ತಿರುವ ಅಕ್ಷರ ನಮನ. ತುಮಕೂರಿನ ರಾಮಕೃಷ್ಣ-ವಿವೇಕಾನಂದ ಆಶ್ರಮದ ಪೂಜ್ಯ ಸ್ವಾಮಿ ವೀರೇಶಾನಂದ ಸರಸ್ವತಿಯವರ ಆಶೀರ್ವಾದದೊಂದಿಗೆ ಸಿದ್ಧವಾಗಿರುವ ಈ ಗ್ರಂಥವು ಸಾಹಿತ್ಯಾಸಕ್ತರಿಗೆ ಕೈಪಿಡಿಯಾಗಲಿ. ಭಗವಂತನು ಜಿ. ಅಶ್ವತ್ಥನಾರಾಯಣ ಅವರಿಗೆ ಇನ್ನೂ ಹೆಚ್ಚಿನ ಆಯುಷ್ಯ ಮತ್ತು ಆರೋಗ್ಯವನ್ನು ಕರುಣಿಸಲಿ. ಅವರಿಂದ ಕನ್ನಡ ಸಾಹಿತ್ಯಕ್ಕೆ ಇನ್ನೂ ಮೌಲ್ಯಯುತ ಕೃತಿಗಳು ಅರ್ಪಿತವಾಗಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

ನಡೆದಾಡುವ ವಿಶ್ವಕೋಶಕ್ಕೆ ನಮನ

ಪ್ರೊ. ಎಸ್. ರಂಗನಾಥ್
ಚರವಾಣಿ : ೯೮೮೬೨೯೦೪೨೦

"ಸೌಜನ್ಯ ಎಂಬುದು ತಾತ್ಕಾಲಿಕವಾಗಿ ತೋರಿಸಿದ ಉದಾರ ಭಾವ ಅಲ್ಲ. ಜೀವಿತದ ಪೂರ್ತಿ ಕೃತಜ್ಞತಾ ಭಾವದಿಂದ ಇದ್ದು ಇತರರು ಮಾಡಿದ ಉಪಕಾರವನ್ನು ಸದಾ ನೆನೆಯುತ್ತ ಅನುಕೂಲವಾದಾಗ, ಅವಕಾಶ ಬಂದಾಗ, ಕೃತಜ್ಞತೆಗಳನ್ನು ಸಹಾಯ ರೂಪದಲ್ಲಿ ಸಲ್ಲಿಸುವುದು ಸೌಜನ್ಯದ ಲಕ್ಷಣ. ನಿಘಂಟುಕಾರ (ಕವಿ– ಕಸಾಪ, ಪು.೮೭೪) ಸೌಜನ್ಯವನ್ನು ಅರ್ಥೈಸುವುದು ಹೀಗೆ. "ಸೌಜನ್ಯ ಎಂದರೆ ಒಳ್ಳೆಯತನ, ವಿನಯ, ಸಜ್ಜನಿಕೆ, ಉದಾರತ್ವ, ಔದಾರ್ಯ". ಇಂಥ ಗುಣವಿದ್ದವರಿಗೆ ೧೧ನೇ ಶತಮಾನದಲ್ಲಿ "ಸೌಜನ್ಯ ರತ್ನಾಕರ" ಎಂದು ಕರೆಯುತ್ತಿದ್ದರು. ಶಾಸನವೊಂದರಲ್ಲಿ ಪ್ರಭು ಶಾಂತಶೆಟ್ಟಿ ಎಂಬಾತನನ್ನು "ಕಲಿಕಾಲ ಮೇರು ವಿಬುಧಂ ಸೌಜನ್ಯ ರತ್ನಾಕರಂ ಬಲವಂತಂ" ಎಂದು ಕರೆಯಲಾಗಿದೆ. "ಸೌಜನ್ಯ ತೀರ್ಥ", "ಸೌಜನ್ಯ ಕಂದಾಂಕುರ", ಮೊದಲಾದ ಬಿರುದುಗಳು ಶಾಸನಗಳಲ್ಲಿ ಕಾಣುತ್ತೇವೆ.

"ಈ ಕಾಲದಲ್ಲಿ ಒಬ್ಬರಿಗಿಂತ ಒಬ್ಬರು ಹೊರಗೆ ಸಜ್ಜನ ಒಳಗೆ ದುರ್ಜನ ಆದವರೇ ಬಹುಜನ. ನಿಜವಾದ ಸಜ್ಜನ ಟಾರ್ಚ್ ಇರಲಿ ಹತ್ತು ಸಾವಿರ ಕಿಲೋವ್ಯಾಟ್ ಡೈನಮೊ ಲೈಟ್ ಹಾಕಿಕೊಂಡು ಹುಡುಕಿದರೂ ತಡಕಿದರೂ ಸಿಗಲಾರದ ವ್ಯಕ್ತಿ. ಅಪರೂಪದ ವಸ್ತು." (ಸೌಜನ್ಯ ಮತ್ತು ಸಂಸ್ಕೃತಿ, ಸಿಂಚನ ಕನ್ನಡ ವೇದಿಕೆ, ೨೦೦೯ ಪು.೧೩, ೧೪ – ಪ್ರೊ.ಜಿ. ಅಶ್ವತ್ಥನಾರಾಯಣ ಅವರ ಲೇಖನ) ಎಂಬ ಮಾತುಗಳು ಪ್ರೊ. ಜಿ. ಅಶ್ವತ್ಥನಾರಾಯಣರವರಿಗೆ ಸಂಪೂರ್ಣವಾಗಿ ಅನ್ವಯಿಸುತ್ತವೆ.

"ಸಾಹಿತ್ಯ ಪರಿಚಾರಕ" ಎಂಬುದಾಗಿ ಅಭಿನಂದನಾ ಗ್ರಂಥಕ್ಕೆ ನೀಡಿರುವ ಶೀರ್ಷಿಕೆ ಅತ್ಯಂತ ಔಚಿತ್ಯಪೂರ್ಣ. ಸಾಹಿತ್ಯವು ಸಮಾಜದ ಕನ್ನಡಿಯಂತೆ. ಸಮಾಜವು ಯಾವ ವಿಧದಲ್ಲಿದ್ದರೂ ವಸ್ತುತಃ, ಅದರ ಪ್ರತಿಬಿಂಬವೇ ಸಾಹಿತ್ಯದಲ್ಲಿ ರೂಪಿತವಾಗುತ್ತದೆ. ಈ ರೀತಿಯಾಗಿ ಸಾಹಿತ್ಯವು ಸಂಸ್ಕೃತಿಯ ಪ್ರಧಾನ ಅಂಗ. ಸಂಸ್ಕೃತಿಯ ವ್ಯಾಪಕವಾದ ಪ್ರಸಾರ ಮತ್ತು ಪ್ರಚಾರಕ್ಕೆ ಸಾಹಿತ್ಯವೇ ಸರ್ವಶ್ರೇಷ್ಠವಾದ ಸಾಧನ. ಸಾಹಿತ್ಯ ಎಂಬ ಪದವು ಶಬ್ದ ಮತ್ತು ಅರ್ಥಗಳ ಸಾಮಂಜಸ್ಯವನ್ನು ಸೂಚಿಸುತ್ತದೆ. "ಸಹಿತಯೋಃ ಭಾವಃ ಸಾಹಿತ್ಯಂ" ಅರ್ಥಾತ್ ಶಬ್ದ ಮತ್ತು ಅರ್ಥಗಳ ಸಹಯೋಗ ಎಂಬ ಭಾವ. ಈ ಪಾರಿಭಾಷಿಕಾರ್ಥದಲ್ಲಿ ಈ ಪದವು ನಮ್ಮ ಕಾವ್ಯ ಗ್ರಂಥಗಳಲ್ಲಿ ಮತ್ತು ಅಲಂಕಾರ ಗ್ರಂಥಗಳಲ್ಲಿ ಪ್ರಯೋಗಿಸುರುವುದನ್ನು ಕಾಣುತ್ತೇವೆ. ಆದ್ದರಿಂದಲೇ ಭರ್ತೃಹರಿಯು ಸಾಹಿತ್ಯ ಸಂಗೀತಗಳಲ್ಲಿ ಅಭಿರುಚಿ ಇಲ್ಲದ ಪುರುಷನನ್ನು ಪಶು ಎಂದು ಕರೆಯುವ ಪ್ರಸಂಗದಲ್ಲಿ "ಸಾಹಿತ್ಯ ಸಂಗೀತ ಕಲಾವಿಹೀನಃ ಸಾಕ್ಷಾತ್ಪಶುಃ" ಎಂದಿದ್ದಾನೆ. ಸಾಹಿತ್ಯವೆಂಬುದರ ಅಭಿಪ್ರಾಯ ಶಬ್ಧ ಮತ್ತು ಅರ್ಥಗಳ ಅನುಪಮವಾದ ಸನ್ನಿವೇಶ.

"ಪರಿಚಾರಕ" ಎಂದರೆ "ಸೇವಕ" ಎಂದೂ ಸಾಮಾನ್ಯವಾದ ಅರ್ಥ. ಈ ಸಂದರ್ಭದಲ್ಲಿ ಶತಾಯುಷಿ, ಪದ್ಮಶ್ರೀ ಪುರಸ್ಕೃತ ಜಿ. ವೆಂಕಟಸುಬ್ಬಯ್ಯನವರು ನನಗೆ ಹಿಂದೆ ಹೇಳಿದ್ದ ಒಂದು ಘಟನೆ

ಇಲ್ಲಿ ಪ್ರಸ್ತಾಪಿಸಿದರೆ ಅನೌಚಿತ್ಯವಲ್ಲವೆಂದು ಭಾವಿಸಿ ಬರೆಯುತ್ತಿದ್ದೇನೆ. ಸುಮಾರು ಐವತ್ತು ವರ್ಷಗಳ ಹಿಂದೆ ಕ್ರೈಸ್ಟ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ ಹುದ್ದೆಗೆ ಅರ್ಜಿ ಕರೆದಾಗ ಜಿ. ಶ್ರೀನಿವಾಸ ರಾಜು ಅವರಿಗೆ ಜಿ.ವಿ. ಯವರು 'ನಿಮಗೆ ಈ ಹುದ್ದೆ ನೀಡಿದರೆ ಏನು ಮಾಡುವಿರಿ' ಎಂದು ಕೇಳಿದರಂತೆ. ಅದಕ್ಕೆ ಉತ್ತರವಾಗಿ ಶ್ರೀನಿವಾಸ ರಾಜು ಅವರು 'ನಾನು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಜಿ.ಪಿ. ರಾಜರತ್ನಂ ಅವರು ತಮ್ಮನ್ನು "ಕನ್ನಡ ಪರಿಚಾರಕ" ಎಂದು ಹೇಳಿಕೊಳ್ಳುತ್ತಿದ್ದರು. ನಾನು ಸಹ ಇಲ್ಲಿ ಕನ್ನಡ ಪರಿಚರ್ಯೆಯನ್ನು ಮುಂದುವರೆಸಬೇಕೆಂದಿದ್ದೇನೆ' ಎಂದರಂತೆ. ಅದರಿಂದ ತೃಪ್ತರಾದ ಜಿ.ವಿ. ಅವರು ರಾಜು ಅವರಿಗೆ ಕನ್ನಡ ಉಪನ್ಯಾಸಕ ಹುದ್ದೆಯನ್ನು ಮಂಜೂರು ಮಾಡಿದ್ದರಂತೆ. ಈ ಹಿನ್ನೆಲೆಯಲ್ಲಿ ಜಿ. ಅಶ್ವತ್ಥನಾರಾಯಣ ಅವರ ಅಭಿನಂದನಾ ಗ್ರಂಥಕ್ಕೆ "ಸಾಹಿತ್ಯ ಪರಿಚಾರಕ" ಎಂದು ಶೀರ್ಷಿಕೆ ನೀಡಿರುವುದು ಅತ್ಯಂತ ಸಮಂಜಸ ಹಾಗೂ ಔಚಿತ್ಯಪೂರ್ಣ.

ಜಿ. ಅಶ್ವತ್ಥನಾರಾಯಣ ಅವರು ೧೨-೦೫-೧೯೩೮ ರಂದು ಶ್ರೀ ಹೆಚ್. ಗುಂಡಪ್ಪ ಮತ್ತು ಶ್ರೀಮತಿ ಜಿ. ಜಾನಕಮ್ಮ ಅವರಿಗೆ ಬೆಂಗಳೂರಿನಲ್ಲಿ ಜನಿಸಿ, ಕೋಟೆ ಶಾಲೆಯಲ್ಲಿ ವಿದ್ಯಾಭ್ಯಾಸ ನಡೆಸಿ, ಆಚಾರ್ಯ ಪಾಠಶಾಲೆಯಿಂದ ಪದವಿಯನ್ನು ಗಳಿಸಿ, ತದನಂತರ ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯ ಎಂಬ ತ್ರಿವೇಣಿ ಸಂಗಮದಲ್ಲಿ ಮಿಂದು, ಸಮಾಜಶಾಸ್ತ, ಕನ್ನಡ ಹಾಗೂ ತಂತ್ರಜ್ಞಾನ ಎಂಬ ಮೂರು ಪ್ರಕಾರಗಳಲ್ಲೂ ಪರಿಣತಿ ಪಡೆದು, ಮೂರು ದಶಕಗಳಿಗೂ ಮೀರಿ ಕರ್ನಾಟಕ ಸರ್ಕಾರದ ವಿಭಿನ್ನ ಪದವಿ ಕಾಲೇಜುಗಳಲ್ಲಿ ಸಾರ್ಥಕ ಸೇವೆಗೈದು ಜನಪ್ರಿಯ ಪ್ರಾಧ್ಯಾಪಕರಾಗಿ ಸಾವಿರಾರು ಮಕ್ಕಳಿಗೆ ಮಾರ್ಗದರ್ಶಕರಾಗಿ, ಸಹ ಅಧ್ಯಾಪಕರೊಂದಿಗೆ ಸೌಜನ್ಯ ವ್ಯಕ್ತಿಯಾಗಿ, ಸಾಹಿತ್ಯ ದಿಗ್ಗಜರಾದ ರಾಜರತ್ನಂ, ಡಿ.ವಿ.ಜಿ., ಮಾಸ್ತಿ, ದೇವುಡು, ವೀರಕೇಸರಿ, ವಿ.ಸೀ., ಅನಕೃ, ಮೊದಲಾದವರ ನೇರ ನಂಟಿನಿಂದ ಅದ್ಭುತ ಸಾಹಿತ್ಯದ ಒಳನೋಟಗಳನ್ನು ಬಲ್ಲವರಾಗಿ ಸೌಜನ್ಯ, ಸಂಸ್ಕೃತಿ, ಸಂಸ್ಕಾರಗಳಿಂದ ಸ್ವಾರಸ್ಯಕರವಾದ ವಿಷಯ ನಿರೂಪಣೆಯಲ್ಲಿ ಪ್ರಾಸಬದ್ಧವಾದ ಪದಪುಂಜದ ವಾಕ್ಯಗಳಿಂದ ಕೇಳುಗರನ್ನು ಪುಳಕಿತರನ್ನಾಗಿ ಮಾಡುವ ವಾಗ್ಮಿ, ನಿರ್ದಿಷ್ಟ, ನಿರ್ದುಷ್ಟ, ನಿಷ್ಕೃಷ್ಟ, ನಿರೂಪಣಕಾರ, ಎಂಬತ್ತೇಳರ ಹರಯದಲ್ಲೂ ಅದ್ಭುತ ನೆನಪಿನ ಗಣಿ, ಸದಾ ಕುತೂಹಲ ಹಾಗೂ ಅನ್ವೇಷಕ ಪ್ರವೃತ್ತಿ, ಪ್ರಾಯಶಃ ಬೆಂಗಳೂರಿನಲ್ಲೇ ಅತ್ಯಂತ ದೊಡ್ಡ ಗ್ರಂಥ ಭಂಡಾರವುಳ್ಳ ವಿದ್ವಾಂಸ, ಪತಿಪತ್ನಿಯರಿಬ್ಬರೂ ಕನ್ನಡ ಪ್ರಾಧ್ಯಾಪಕರಾಗಿದ್ದರೂ ಮಗಳಾದ ಕ್ಷಮಾಗೆ ಪದವಿ ತರಗತಿಯಲ್ಲಿ ದ್ವಿತೀಯ ಭಾಷೆಯಾಗಿ ಸಂಸ್ಕೃತ ಕೊಡಿಸಿದ ಅಪರೂಪ ವ್ಯಕ್ತಿತ್ವ, ಸಿಂಚನ ಕನ್ನಡ ಸಂಘದಿಂದ ಪ್ರಕಟವಾಗಿರುವ ಡಿ.ಎ. ಪಾಂಡು ಸ್ಮರಣಾತ್ಮಕ ೩೦ಕ್ಕೂ ಹೆಚ್ಚು ಗ್ರಂಥಗಳಿಗೆ ಮಾರ್ಗದರ್ಶಕ ಸಂಪಾದಕ, ವಿದ್ಯಾವಿನಯ ಸಂಪನ್ನ, ಮನೆಗೆ ಬಂದ ಎಲ್ಲರಿಗೂ ಸಹ ಆತಿಥ್ಯದೊಡನೆ ಸಾಹಿತ್ಯದ ರಸದೌತಣ ಪ್ರದಾಯ, ನೂರು ವರ್ಷಗಳ ಹಿಂದೆ ಪ್ರಕಟವಾಗಿ ಈಗ ಅನುಪಲಬ್ಧವಾಗಿರುವ ಶಬ್ದೌಘಕಲ್ಪದ್ರುಮವೆಂಬ ಸಂಸ್ಕೃತ ಕೋಶದಂಥ ಗ್ರಂಥಗಳಿಗೆ ಮರು ಮುದ್ರಣಕ್ಕೆ ಸಹಕರಿಸಿರುವ ಅಪರೂಪ ವ್ಯಕ್ತಿ,

ಎಲೆಮರೆಕಾಯಿಯಂತೆ ಇದ್ದು ಅರವತ್ತು ವರ್ಷಗಳಿಗೂ ಮಿಗಿಲಾಗಿ ಸಾಹಿತ್ಯಕ್ಕೆ ತಮ್ಮನ್ನು ತಾವು ಅಹರ್ನಿಶಿ ತೊಡಗಿಸಿಕೊಂಡಿರುವಂತಹ ಅಪರೂಪದ ವ್ಯಕ್ತಿ. ಸರಳ, ಸಹಜ, ಸಜ್ಜನಿಕೆಗಳ ಸಾಕಾರ ಮೂರ್ತಿಯಾಗಿ ಅಮೇರಿಕ ದೇಶದಲ್ಲಿಯೂ ಸಹ ಕನ್ನಡದ ಸೊಬಗನ್ನು ಉಣಬಡಿಸಿದ ಧೀಮಂತ.

ಸಾಹಿತ್ಯದ ವಿಭಿನ್ನ ಪ್ರಕಾರಗಳಾದ ಗ್ರಂಥ ಸಂಪಾದನೆ, ನಾಟಕ ಸಾಹಿತ್ಯ, ಹಸ್ತಪ್ರತಿ ಶಾಸ್ತ್ರ, ಹರಿದಾಸ ಸಾಹಿತ್ಯ, ದಾಸಸಾಹಿತ್ಯ, ಪಠ್ಯಪುಸ್ತಕಗಳ ಸಂಪಾದನೆ, ಸ್ವತಂತ್ರ ಪಠ್ಯಗಳ ರಚನೆ, ಸೂಕ್ತಿ ಸಂಗ್ರಹಕಾರ, ಇತ್ಯಾದಿ ಹತ್ತು ಹಲವು ವಿಭಿನ್ನ ವಿಭಾಗಗಳಲ್ಲಿ ಅಪ್ರತಿಮ ಕೊಡುಗೆಯನ್ನು ಸಾಹಿತ್ಯಕ್ಕೆ ನೀಡಿರುವ ಅಪರೂಪದ ವ್ಯಕ್ತಿ.

ನಮ್ಮ ರಾಷ್ಟ್ರಕವಿಯಾದ ಕಾಳಿದಾಸ ತನ್ನ ಮಹಾಕಾವ್ಯವಾದ ರಘುವಂಶದಲ್ಲಿ ಹೇಳಿರುವಂತೆ "ರತ್ನವು ಯಾರನ್ನೂ ಸಹ ಹುಡುಕಿಕೊಂಡು ಹೋಗುವುದಿಲ್ಲ, ಎಲ್ಲರೂ ರತ್ನವನ್ನೇ ಅರಸಿ ಬರುವರು" ಎಂಬಂತೆ ರಾಜರತ್ನಂ ಅವರ ನಿಕಟವರ್ತಿಯಾದ ಜಿ. ಅಶ್ವತ್ಥನಾರಾಯಣ ರತ್ನವನ್ನು ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಸಾಹಿತಿಗಳು ಅರಸಿ ಬಂದು ತಮ್ಮ ಸಂಶಯ ಸಂದೇಹಗಳನ್ನು ನಿವಾರಿಸಿಕೊಳ್ಳುತ್ತಾರೆ.

- ಕರಡಚ್ಚು ತಿದ್ದುವಿಕೆ ಮತ್ತು ಕನ್ನಡಭಾಷೆ – ಕನ್ನಡ ಪುಸ್ತಕ ಪ್ರಾಧಿಕಾರ, ೨೦೧೭
- ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಭಾಷಣಗಳು – ಸಂಪುಟ ೭, ೨೦೧೬
- ಸೌಂದರ್ಯಲಹರೀ ಸ್ತೋತ್ರ ದೀಪಿಕೆ – ಬಿ.ಎಂ.ಶ್ರೀ ಸಂಶೋಧನಾ ಸಂಸ್ಥೆ, ೨೦೧೬
- ಪರಿಷತ್ತು ನೂರು (ಪರಿಷತ್ತಿನ ೧೦೦ ವರ್ಷಗಳ ಇತಿಹಾಸ) – ಕನ್ನಡ ಸಾಹಿತ್ಯ ಪರಿಷತ್ತು, ೨೦೧೬.

ಇತ್ಯಾದಿ ಗ್ರಂಥಗಳು ಅನಾಜಿ ಅವರ ಪ್ರಖರ ಲೇಖನಿಯಿಂದ ಮೂಡಿಬಂದಂತಹ ಕೆಲವು ಅದ್ಭುತ ಗ್ರಂಥಗಳು. ಕರಡಚ್ಚು ತಿದ್ದುವಿಕೆ ಗಾತ್ರದಲ್ಲಿ ಚಿಕ್ಕದಾಗಿದ್ದರೂ ಸಹ ಅತ್ಯಂತ ಮೌಲಿಕವಾದದ್ದು. ಸೌಂದರ್ಯ ಲಹರೀ ಸ್ತೋತ್ರ ದೀಪಿಕೆ ಶಂಕರ ಭಗವತ್ಪಾದರ ಯೋಗ, ತಂತ್ರ, ವೇದಾಂತ ಹಾಗೂ ಕಾವ್ಯ ಮಿಶ್ರಿತವಾದ ಅದ್ಭುತ ಸ್ತೋತ್ರ ಸಾಹಿತ್ಯ. ಈ ಗ್ರಂಥಕ್ಕೆ ಕನ್ನಡ, ಇಂಗ್ಲಿಷ್, ಸಂಸ್ಕೃತ, ಹಿಂದಿ, ತೆಲುಗು ಭಾಷೆಗಳಲ್ಲಿ ಅನೇಕ ವಿದ್ವಾಂಸರು ಟೀಕೆ ಬರೆದಿದ್ದಾರೆ, ಅನುವಾದ ಮಾಡಿದ್ದಾರೆ, ವಿಮರ್ಶೆ ಮಾಡಿದ್ದಾರೆ. ಪ್ರಸ್ತುತ ಅನಾಜಿಯವರು ಬಿ.ಎಸ್. ಕಪನೀಪತಯ್ಯನವರ ಟೀಕೆ ಮತ್ತು ಎಂವಿಸೀ ಅವರ ಪದ್ಯಾನುವಾದ ಸಹಿತ ಪ್ರತಿ ಶ್ಲೋಕಕ್ಕೂ ಸಹ ಪಾಠಾಂತರ, ಪದವಿಭಾಗ, ಅನ್ವಯಾರ್ಥ, ತಾತ್ಪರ್ಯ, ಪದ್ಯಾನುವಾದ, ಟಿಪ್ಪಣಿ ಇತ್ಯಾದಿ ವಿಭಾಗಗಳಲ್ಲಿ ವಿವರಣೆ ನೀಡಿರುವುದಲ್ಲದೆ ಅನುಬಂಧದ ರೂಪದಲ್ಲಿ ಅಧಿಕ ಶ್ಲೋಕಗಳು, ಶ್ಲೋಕಗಳ ಅಕಾರಾದಿ ಕ್ರಮ, ಸೌಂದರ್ಯಲಹರೀ ಮತ್ತು ಲಲಿತಾಸಹಸ್ರನಾಮಗಳ ಸಮಾನಾರ್ಥಕ ಪದಭಾಗಗಳ ಶ್ಲೋಕ ನಾಮಗಳು, ಸೌಂದರ್ಯಲಹರೀ ಕನ್ನಡ ಮತ್ತು ಇತರ ಭಾಷೆಗಳಲ್ಲಿ ಸಹಾಯಕ ಗ್ರಂಥಸೂಚಿ ಎಂಬ ಐದು ಅನುಬಂಧಗಳೊಡನೆ ಸೇರಿಸಿರುವುದು ಗ್ರಂಥದ ಗೌರವವನ್ನು ಹೆಚ್ಚಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತು – ೧೦೦, ೮೯೩ ಪುಟಗಳಿಂದ ಕೂಡಿರುವ ಪರಿಷತ್ತಿನ ಇತಿಹಾಸ ಗ್ರಂಥವಾಗಿದ್ದು ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಮಾಲಿಕೆಯ ಪ್ರಕಟಣೆಯಾಗಿ ಹೊರಬಂದಿರುವುದು ನಿಜಕ್ಕೂ ಸಹ ಒಂದು ಇತಿಹಾಸವೇ ಸರಿ. ಪರಿಷತ್ತಿನ ಇತಿಹಾಸದ ವಿವರಗಳು ಈ ನೂರು ವರುಷಗಳಲ್ಲಿ ನಾಡಿನ ಪತ್ರಿಕೆಗಳಲ್ಲಿ ಚೆದರಿ ಹೋಗಿವೆ. ನೂರಾರು ಗ್ರಂಥಗಳಲ್ಲಿ ಲೇಖನ ರೂಪದಲ್ಲಿ ಅಡಗಿವೆ. ನಾನಾ ಸಂಸ್ಥೆಗಳ ಪ್ರಕಟನೆಗಳಲ್ಲಿ ಕಾಣಿಸಿಕೊಂಡಿವೆ. ಪರಿಷತ್ತಿಗೆ ದುಡಿದವರಲ್ಲಿ ಎಷ್ಟೋ ಜನರು ದಿವಂಗತರಾಗಿ ಪರಿಷತ್ತಿನ ಬಗ್ಗೆ ಅನುಭವಗಳು, ಮಾಹಿತಿಗಳು ಅವರು ಬರೆದಿಡದೆ ನಾಶವಾಗಿವೆ. ಈ ಬದುಕಿರುವ ಹಿರಿಯರಲ್ಲಿ ಸಾಕಷ್ಟು ಮಾಹಿತಿಗಳಿದ್ದರೂ ದೊರಕುತ್ತಿಲ್ಲ. ಇಂತಹ ಸಂದರ್ಭದಲ್ಲಿ ಕಾಲಗರ್ಭದಲ್ಲಿ ಎಷ್ಟೋ ಮಾಹಿತಿಗಳು, ಅಡಗಿ ಹೋಗಿದ್ದರಿಂದ ಕಾಲಮಿತಿಯಿಂದ, ಲಭ್ಯವಾದಷ್ಟು ಗ್ರಂಥಗಳ, ಪತ್ರಿಕೆಗಳ ಮಾಹಿತಿಯನ್ನು ಆಧರಿಸಿ ಈ ಉದ್ಗ್ರಂಥವನ್ನು ಜಿ. ಅಶ್ವತ್ಥನಾರಾಯಣ ಅವರು ಅತ್ಯಂತ ಶ್ರಮವಹಿಸಿ ನಿಖರವಾದ ಮಾಹಿತಿಯನ್ನು ನೀಡಿರುವುದು ನಿಜಕ್ಕೂ ಸಹ ಅಭಿನಂದನೀಯ, ಸಾರ್ಥಕ ಕಾರ್ಯ ಹಾಗೂ ಮುಂದಿನ ತಲೆಮಾರಿಗೆ ಒಂದು ದಿಗ್ದರ್ಶನ.

******

"ಸುಫಲ ಸುಮಭರಿತ ಪಾದಪ"

ಡಾ. ಶ್ರೀಧರ್

ಚರವಾಣಿ : ೯೪೪೯೦೧೧೩೩೧

ಪ್ರೊ. ಜಿ. ಅಶ್ವತ್ಥನಾರಾಯಣ ಅವರು ನಾನು ಜೀವನದಲ್ಲಿ ಕಂಡ ಅತ್ಯಂತ ಅಪರೂಪದ ಹಾಗೂ ವಿಶೇಷ ವ್ಯಕ್ತಿಗಳಲ್ಲಿ ಒಬ್ಬರು. ಅವರ ಜೀವನದ ಸಾಧನೆ, ಕನ್ನಡ ಸಾಹಿತ್ಯ ಲೋಕಕ್ಕೆ ಅವರು ಸಲ್ಲಿಸಿರುವ ಸೇವೆ ನಿರುಪಮ. ಒಬ್ಬ ವ್ಯಕ್ತಿ ತನ್ನ ಜೀವಮಾನದಲ್ಲಿ ಇಷ್ಟೊಂದು ವಿಭಾಗಗಳಲ್ಲಿ ಶ್ರೇಷ್ಠ ಗುಣಮಟ್ಟದ ಕೆಲಸ ಮಾಡಲು ಸಾಧ್ಯವೇ? ಅಂತ ಬೆರಗಾಗುವಷ್ಟು ಕೆಲಸ ಮಾಡಿದ್ದಾರೆ ಶ್ರೀ ಅನಾಜಿ.

ಶ್ರೀ ಅಶ್ವತ್ಥನಾರಾಯಣ ಅವರ ಜೊತೆ ನನಗೆ ಹಲವು ವರ್ಷಗಳ ಪರಿಚಯ, ಆತ್ಮೀಯ ಬಾಂಧವ್ಯ. ಅವರು ನಮ್ಮ ದೊಡ್ಡಪ್ಪ ದಿ. ಶ್ರೀ. ನ. ಸುಬ್ರಹ್ಮಣ್ಯಂ ಅವರ ಸಹೋದ್ಯೋಗಿ. ಹಾಸನದಲ್ಲಿ ಇಬ್ಬರೂ ಹಲವು ವರ್ಷ ಒಟ್ಟಿಗೆ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡಿ ನಂತರ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲೂ ಅಧ್ಯಾಪನ ಮುಂದುವರೆಸಿದರು. ನಮ್ಮ ದೊಡ್ಡಪ್ಪ ಮಹಾರಾಣಿ ಕಾಲೇಜಿನ ವಿಭಾಗ ಮುಖ್ಯಸ್ಥರು ಅಗಿದ್ದರು, ಅದೇ ಸಮಯದಲ್ಲಿ ಅನಾಜಿ ಅವರು ಕನ್ನಡ ಪ್ರಾಧ್ಯಾಪಕರಾಗಿ ಬೋಧನೆ ಮಾಡುತ್ತಿದ್ದರು. ಆಗಲಿಂದಲೂ ಶ್ರೀಯುತರು ನನಗೆ ಪರಿಚಯ. ೧೯೮೨ ರಲ್ಲಿ ಇರಬಹುದು. ದೊಡ್ಡಪ್ಪ ತಮ್ಮ ಕಾಲೇಜಿನಲ್ಲಿ ನನ್ನ ಭರತನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಸುಮಾರು ಒಂದು ಘಂಟೆ ನೃತ್ಯ ಪ್ರದರ್ಶನ. ಇದು ನಾನು ಚಿತ್ರರಂಗಕ್ಕೆ ಬರುವುದಕ್ಕೂ ಮುಂಚೆ ನಡೆದದ್ದು. ನಾನೂ ತಾದಾತ್ಮ್ಯತೆಯಿಂದ ನೃತ್ಯ ಮಾಡುತ್ತಿದ್ದೆ. ಶಿಕ್ಷಕ ವರ್ಗದವರೂ ವಿದ್ಯಾರ್ಥಿನಿಯರೂ ಎಲ್ಲರು ತಲ್ಲೀನರಾಗಿ ನೋಡುತ್ತಿದ್ದರು. ಆಗ ವೇದಿಕೆ ಮೇಲೆ ಇದ್ದ ಒಂದು ಮೊಳೆ ನನ್ನ ಪಾದದಲ್ಲಿ ಚುಚ್ಚಿಕೊಂಡಿತು. ಪಾದದಿಂದ ರಕ್ತ ಬರುತ್ತಿತ್ತು. ನಾನು ನೋವನ್ನು ಲೆಕ್ಕಿಸದೆ ಮೈ ಮರೆತು ನೃತ್ಯ ಮುಂದುವರೆಸಿದೆ. ಈ ಘಟನೆಯನ್ನು ನಾನೇ ಮರೆತು ಬಿಟ್ಟಿದ್ದೆ. ಆದರೆ, ಅನಾಜಿ ಅವರು ಈವತ್ತಿಗೂ ಆ ಘಟನೆಯನ್ನು ಸ್ಮರಿಸುತ್ತಾ ಎಲ್ಲರ ಹತ್ತಿರ ಮೆಚ್ಚುಗೆಯಿಂದ ವಿವರಿಸುತ್ತಾರಂತೆ. ಹೀಗೆ ಆದ ಪರಿಚಯ ಬರಬರುತ್ತಾ ಅವರ ಬಗ್ಗೆ ಅತ್ಯಂತ ಪ್ರೀತಿ, ಗೌರವಗಳಿಂದ ಬೆಳೆಯಿತು.

ಇದಾದ ಹಲವು ವರ್ಷಗಳನಂತರ ಮತ್ತೊಮ್ಮೆ ಅನಾಜಿ ಅವರನ್ನು ನನ್ನ ಜೀವನದ ಅತಿ ಮುಖ್ಯವಾದ ಸಂದರ್ಭದಲ್ಲಿ ಭೇಟಿಯಾಗುವ ಸಂದರ್ಭ ಒದಗಿ ಬಂತು. ಬಾಲ್ಯದಿಂದಲೂ ನನಗೆ ನೃತ್ಯಕಲೆಯ ಬಗ್ಗೆ ವಿಪರೀತ ಆಸಕ್ತಿ. ಹಲವು ವರ್ಷಗಳ ನಿರಂತರ ಸಾಧನೆ. ನೃತ್ಯಕಲೆಯೇ ಉಪಾಸನೆಯಾಗಿತ್ತು. ಚಿತ್ರ ರಂಗಕ್ಕೆ ಬಂದು ಹಲವು ಉತ್ತಮ ಚಿತ್ರಗಳಲ್ಲಿ ಅಭಿನಯಿಸಿದರೂ ನೃತ್ಯ ಕಲೆಯ ತೀವ್ರ ಆಕರ್ಷಣೆಯಂದ ಅದನ್ನೇ ಜೀವನವಾಗಿ ಆಯ್ಕೆ ಮಾಡಿಕೊಂಡು ನನ್ನ ಧರ್ಮಪತ್ನಿ ಅನುರಾಧ ಅವರ ಜೊತೆ ಜೋಡಿಯಾಗಿ ನೃತ್ಯ ಪ್ರದರ್ಶನಗಳನ್ನು ಮಾಡುತ್ತಿದ್ದೆ. ದೇಶ ವಿದೇಶಗಳಲ್ಲಿ ನೃತ್ಯ ಪ್ರದರ್ಶನಗಳನ್ನು ನೀಡುತ್ತ ಬಂದೆವು. ಹೀಗೆ ಇದ್ದಾಗ, ನೃತ್ಯಕ್ಷೇತ್ರದಲ್ಲಿ ಸಂಶೋಧನೆ ಮಾಡಬೇಕು ಎನ್ನುವ ಹಂಬಲ ತೀವ್ರವಾಗುತ್ತ ಬಂತು. ೨೦೧೨ ರಲ್ಲಿ ಇರಬೇಕು. ಹಂಪಿ ಕನ್ನಡ ವಿಶ್ವ ವಿದ್ಯಾಲಯದಲ್ಲಿ

ಡಿ.ಲಿಟ್ ಮಾಡಲು ಅವಕಾಶ ಬಂತು. ಸಂಶೋಧನೆಯ ಉದ್ದೇಶ, ವಿಧಿ ವಿಧಾನಗಳ ಕುರಿತಂತಹ ಪ್ರಸ್ತಾವನೆಯನ್ನು ಹಂಪಿ ವಿಶ್ವವಿದ್ಯಾಲಯಕ್ಕೆ ಕಳಿಸಬೇಕಿತ್ತು. ಆ ಸಂದರ್ಭದಲ್ಲಿ ನನಗೆ ಜ್ಞಾಪಕ ಬಂದಿದ್ದು ಅಶ್ವತ್ಥನಾರಾಯಣ ಅವರು. ಕೇಳಿದ ತಕ್ಷಣ ಸಂತೋಷವಾಗಿ ಒಪ್ಪಿಕೊಂಡು ಅವರ ಮನೆಗೆ ಬರಮಾಡಿಕೊಂಡರು. ಅವರೂ ಅವರ ಧರ್ಮಪತ್ನಿ ಶ್ರೀಮತಿ. ಲಕ್ಷ್ಮೀದೇವಿಯವರೂ ಪ್ರೀತಿಯಿಂದ ಆತಿಥ್ಯವನ್ನು ನೀಡಿದರು. ನಾನು ಬರೆದಿದ್ದನ್ನು ಓದಿ, ತಿದ್ದಿ, ಸೂಕ್ತ ಸಲಹೆ ನೀಡಿ ಮಾರ್ಗದರ್ಶನ ಮಾಡಿದರು. ಇದರಿಂದ ಮುಂದೆ 'ಭಾರತೀಯ ನೃತ್ಯ ಕ್ಷೇತ್ರದಲ್ಲಿ ನರ್ತಕ-ವಿಶೇಷವಾಗಿ ಭರತನಾಟ್ಯದಲ್ಲಿ ಪುರುಷಾಭಿವ್ಯಕ್ತಿ' ಎಂಬ ಶೀರ್ಷಿಕೆಯ ನನ್ನ ಸಂಶೋಧನಾ ಪ್ರಬಂಧವನ್ನು ಸಮರ್ಪಕವಾಗಿ ಬರೆಯಲು ಸಾಧ್ಯವಾಯಿತು. ೨೦೧೫ ರಲ್ಲಿ ನನಗೆ ಹಂಪಿ ವಿಶ್ವವಿದ್ಯಾಲಯವು ಡಿ.ಲಿಟ್. ಪದವಿ ನೀಡಿತು. ನನ್ನ ಜೀವನದ ಅತ್ಯಂತ ಮುಖ್ಯ ಮೈಲಿಗಲ್ಲು ಆದ ಈ ಸಂದರ್ಭವನ್ನು, ಅದಕ್ಕೆ ಸಹಾಯವನ್ನು ಮಾಡಿದ ಅನಾಜಿ ಅವರನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಅವರಿಗೆ ನಾನು ಚಿರಋಣಿ.

ಅಶ್ವತ್ಥನಾರಾಯಣ ಅವರು ಭಾರತೀಯ ಸಂಸ್ಕೃತಿಯಲ್ಲಿ ನಾವು ಸದಾ ಸ್ಮರಿಸುವ ಗುರುಗಳ ಸಾಲಿಗೆ ಸೇರುತ್ತಾರೆ. 'ಗುರು' ಎನ್ನುವ ಶಬ್ದಕ್ಕೆ ಅತ್ಯಂತ ಅನ್ವರ್ಥ ನಾಮಧೇಯರು ಅವರು. ಇಡೀ ಜೀವನ ಅಧ್ಯಯನ ಅಧ್ಯಾಪನದಲ್ಲೇ ನಿರತರಾಗಿರುವವರು. ಕನ್ನಡ ಸಾಹಿತ್ಯ ಅವರ ಉಸಿರು, ಜೀವಾಳ. ಅವರ ಮನೆಯೇ ಒಂದು ಗ್ರಂಥಾಲಯ. ಅಲ್ಲಿ ೩೦ ಸಾವಿರಕ್ಕೂ ಹೆಚ್ಚು ಗ್ರಂಥಗಳ ಸಂಗ್ರಹ ಇದೆ. ಅದರಲ್ಲೂ ಈಗ ಪ್ರತಿಗಳು ಲಭ್ಯವಿಲ್ಲದ ಅನೇಕ ಗ್ರಂಥಗಳು ಇವೆ.

ಕನ್ನಡ ಕಾವ್ಯ, ಚಿಂತನೆ, ಉಪನ್ಯಾಸಗಳು, ಗ್ರಂಥ ಸಂಪಾದನೆ, ಸ್ವತಂತ್ರ ಕೃತಿಗಳು, ಹೀಗೆ ಅಶ್ವತ್ಥನಾರಾಯಣ ಅವರ ಕಾರ್ಯ ವ್ಯಾಪ್ತಿ ಬಹಳ ದೊಡ್ಡದು. ಹಲವು ಆಯಾಮಗಳಲ್ಲಿ ಕನ್ನಡ ಭಾಷೆಯ ಸೊಬಗನ್ನು ಪಸರಿಸಿದ್ದಾರೆ. ಭಾಷೆಯ ಅರಿವನ್ನು ಮೂಡಿಸಿದ್ದಾರೆ. ಹಲವು ವರ್ಷ ಕನ್ನಡದ ಪ್ರಖ್ಯಾತ ಕವಿಗಳ ಕಾವ್ಯ ವಾಚನಕ್ಕೆ, ವ್ಯಾಖ್ಯಾನವನ್ನು ಮಾಡಿ ಕಾವ್ಯಗಳ ರಸವನ್ನು ಉಣಬಡಿಸಿದ್ದಾರೆ. ಕನ್ನಡ ಸಾಹಿತ್ಯ, ಸಾಹಿತ್ಯ ಚರಿತ್ರೆ, ಮಹಾನ್ ಸಾಹಿತಿಗಳ ಬದುಕು -ಹೀಗೆ ಯಾವುದೇ ವಿಷಯವನ್ನು ತಿಳಿದುಕೊಳ್ಳಬೇಕಾದರೂ, ಅಧ್ಯಯನ ಮಾಡಬೇಕಾದರೂ, ಅತ್ಯಂತ ಸೂಕ್ತ ಗುರು ಅನಾಜಿ ಅವರು.

ಅತ್ಯಂತ ಸರಳತೆ, ಮಗುವಿನಂತಹ ಮನಸ್ಸು, ಸಹೃದಯತೆ, ಪ್ರೀತಿ, ಆತ್ಮೀಯವಾದ ಮಾತು, ಹೃದಯದಿಂದ ಜ್ಞಾನವನ್ನು ಕೊಡುವ ಧಾರಾಳತನ; ಅವರಲ್ಲಿ ಇರುವ ಈ ಎಲ್ಲ ಸದ್ಗುಣಗಳು ಅವರ ಬಗ್ಗೆ ಅತ್ಯಂತ ಪ್ರೀತಿ, ಗೌರವಗಳನ್ನು ಮೂಡಿಸುತ್ತದೆ. ಕನ್ನಡ ಸಾರಸ್ವತ ಕ್ಷೇತ್ರದಲ್ಲಿ ಯಾವುದಾದರು ಕಾರ್ಯಕ್ರಮವಾಗಬೇಕು, ಗ್ರಂಥಗಳ ಬಿಡುಗಡೆ, ಪರಿಚಯ, ನಿರೂಪಣೆ ಮುಂತಾದವನ್ನು ಮಾಡಿಕೊಡಬೇಕು ಎಂದರೆ ಅವರೇ ನಿಶ್ಚಯವಾದ ಆಯ್ಕೆ. ಅವರು ಮಹಾವಾಗ್ಮಿ. ಅವರು ಮಾತು ಆಳವಾದ ಸಾಹಿತ್ಯದ ಅಧ್ಯಯನ ಹಾಗೂ ಜೀವನಾನುಭವದಿಂದ ಹೊರಹೊಮ್ಮುವ ಜ್ಞಾನಪ್ರವಾಹ. ಗಂಭೀರ ವಿಚಾರದ ಜೊತೆ ಅವರ ಹಾಸ್ಯ ಪ್ರಜ್ಞೆಯೂ ಅದ್ಭುತ.

ಅನಾಜಿಯಂತಹ ಹಿರಿಯರ ಬಗ್ಗೆ ಶ್ರೇಷ್ಠ ಗುರುಗಳ ಬಗ್ಗೆ ಏನು ಹೇಳಲೂ ನಾನು ಸಮರ್ಥನಲ್ಲ. ಆದರೆ ಅವರನ್ನು ಕಂಡಾಗ ಅವರ ಜೊತೆ ಮಾತಾಡುವಾಗ ಏನೋ ಆನಂದ, ವಿನೀತ ಭಾವ ಅನುಭವಕ್ಕೆ ಬರುತ್ತದೆ. ಮಹತ್ತಾದ ವಸ್ತುವಿನ ಮುಂದೆ ನಾನು ಚಿಕ್ಕವನು ಎನ್ನುವ ಭಾವನೆ ತಾನಾಗೇ ಬರುತ್ತದೆ ಅಲ್ಲವೇ.

ಮನೆತನದ ಸಾಂಪ್ರದಾಯಿಕ ಮೌಲ್ಯಗಳು, ಶಾಸ್ತ್ರೀಯ ಕಲೆಯೇ ಜೀವನ ಎಂದು ಬಾಳುವ ನಮ್ಮಂಥವರಿಗೆ, 'ಗುರು' ಶಬ್ದವೇ ಅತ್ಯಂತ ಮಹತ್ವದ್ದು. ಆ 'ಗುರು ತತ್ತ್ವ' ಅಂತರಂಗದಲ್ಲಿ ಮೈಗೂಡಿಸಿಕೊಂಡಿರುವ ಮಹನೀಯರನ್ನು ಕಂಡಾಗ ಹೃದಯದಲ್ಲಿ ವಿಶೇಷ ಚೈತನ್ಯದ ಅನುಭವ-

ವಾಗುತ್ತದೆ, ಆನಂದವಾಗುತ್ತದೆ. ಅಶ್ವತ್ಥನಾರಾಯಣ ಅವರನ್ನು ನೋಡಿದಾಗಲೂ ಅದೇ ಶುದ್ಧತೆಯ ಅನುಭವ ನನಗೆ.

ಮನೆಯಲ್ಲಿ ದೊಡ್ಡ ಗ್ರಂಥಾಲಯ ಇರುವುದು ಮಾತ್ರವಲ್ಲ, ಅನಾಜಿ ಅವರ ಮನದಲ್ಲೂ ದೊಡ್ಡ ಜ್ಞಾನ ಭಂಡಾರ ಇದೆ. ಕನ್ನಡ ಸಾಹಿತ್ಯದಲ್ಲಿ ಅವರು ಅಧ್ಯಯನ ಮಾಡದೇ ಇರುವ ವಿಚಾರವೇ ಇಲ್ಲ ಅನಿಸುತ್ತೆ. ಅದೇ ಕಾರಣದಿಂದ ಡಿ.ಲಿಟ್.ಗಾಗಿ ನನ್ನ ಸಂಶೋಧನೆ ನೃತ್ಯಕಲೆಗೆ ಸಂಬಂಧಿಸಿದ್ದರೂ ಪ್ರಬಂಧವನ್ನು ಬರೆಯುವುದಕ್ಕೆ ಮುಂಚೆ ಯಾರನ್ನು ಸಂಪರ್ಕಿಸಲಿ, ಈ ವಿಧಾನದ ಬಗ್ಗೆ ಯಾರನ್ನು ಕೇಳಲಿ ಎಂದು ಯೋಚಿಸಿದಾಗ ಥಟ್ಟನೆ ಹೊಳೆದವರು ಶ್ರೀ ಅಶ್ವತ್ಥನಾರಾಯಣ ಸರ್. ಅವರ ಸೂಚನೆ, ಅವರ ಜೊತೆ ಸಂವಾದದ ನಂತರ ಇಡೀ ಪ್ರಬಂಧವನ್ನು ಬರೆಯುವುದಕ್ಕೆ ಸುಲಭವಾಯಿತು. ಇದರ ಬಗ್ಗೆ ಅವರಿಗೆ ನಾನು ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು.

ಹಲವು ದಶಕಗಳ ಮಹತ್ತರ ಸೇವೆಯನ್ನು ನಿರಪೇಕ್ಷ ಭಾವದಿಂದ ಮಾಡಿಕೊಂಡು ಬಂದಿದ್ದಾರೆ. ಅವರನ್ನು ನೋಡಿದರೆ ಡಿ.ವಿ.ಜಿ. ಯವರ "ವನಸುಮದೊಳೆನ್ನ ಜೀವನವು ವಿಕಸಿಸುವಂತೆ" ಗೀತೆ ಜ್ಞಾಪಕಕ್ಕೆ ಬರುತ್ತದೆ. ವಿಪುಲಾಶ್ರಯವನೀವ ಸುಫಲ ಸುಮ ಭರಿತ ಪಾದಪದಂತೆ ನೈಜಮಾದೊಳ್ಪಿನಂ ಬಾಳ್ವವೊಲು" ಎನ್ನುವ ಸಾಲಿಗೆ ಉತ್ತಮ ಉದಾಹರಣೆ ಅನಾಜಿ ಅವರು.

ಅಂತಹ ಮಹಾನ್ ಗುರು, ಸ್ನೇಹ ಜೀವಿ, ಸಜ್ಜನರ ಜೊತೆ ಸಾಂಗತ್ಯ ಸಿಗುವುದೇ ಭಾಗ್ಯ. ಅವರಿಗೆ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಲಭಿಸಿವೆ. ಇನ್ನೂ ಅನೇಕ ಪ್ರಶಸ್ತಿಗಳು ಗೌರವಗಳು ಅವರಿಗೆ ಸಿಗಬೇಕು. ಅತ್ಯಂತ ಸರಳವಾಗಿ ಆತ್ಮೀಯತೆಯಿಂದ ಎಲ್ಲರೊಡನೆ ಬೆರೆಯುತ್ತ, ಎಲ್ಲೂ ನಾನು, ನನ್ನ ಸ್ಥಾನ ಎಂದು ಯೋಚಿಸದೆ ನಿರ್ಮಲವಾಗಿ, ಎಲ್ಲರಿಗೂ ಬೇಕಾದ ವ್ಯಕ್ತಿಯಾಗಿ ಬಾಳುವುದು ಬಹಳ ಕಷ್ಟ. ಅದು ವಿಶೇಷ ಗುಣ, ದೈವಿಕ ಗುಣ, ಅಂತಹ ಯೋಗ್ಯ ವ್ಯಕ್ತಿಗೆ ಹಿರಿಯರು, ಸಾಧಕರು ಎಲ್ಲರೂ ಸೇರಿ ಅಭಿನಂದನೆ ಸಲ್ಲಿಸುತ್ತಿರುವುದು ಅತ್ಯಂತ ಶ್ಲಾಘನೀಯ ವಿಷಯ. ಈ ಎಲ್ಲ ಮಹನೀಯರಿಗೂ ತುಂಬು ಹೃದಯದಿಂದ ಅಭಿನಂದಿಸುತ್ತೇನೆ ಹಾಗೂ ವಂದಿಸುತ್ತೇನೆ.

ಭಗವಂತ "ಎಲ್ಲಾ ಕಡೇನೂ ನಾನು ಸಾಕಾರವಾಗಿ ಇರುವುದಕ್ಕೆ ಆಗುವುದಿಲ್ಲ. ಅದಕ್ಕೇ ನನ್ನ ಸಗುಣ ಸಾಕಾರ ರೂಪದಲ್ಲಿ 'ತಾಯಿ' ಯನ್ನು ಸೃಷ್ಟಿಸಿದ್ದೇನೆ" ಎನ್ನುವ ಪ್ರಖ್ಯಾತ ನುಡಿ ಇದೆ. ಅದೇ ರೀತಿ ಸಮಾಜದಲ್ಲಿ ಉತ್ತಮ ವಿಚಾರಗಳು, ಮೌಲ್ಯಗಳು, ಸಾಹಿತ್ಯ ರಸಾಸ್ವಾದನೆಗಾಗಿ ಶ್ರೀ ಅಶ್ವತ್ಥನಾರಾಯಣರಂತಹ ಗುರುಗಳನ್ನೂ ಸೃಷ್ಟಿಮಾಡುತ್ತಾನೇನೋ!

ಅನಾಜಿ ಅವರ ಸಾರಸ್ವತ ಸೇವೆ ಹೀಗೆಯೇ ನಿರಂತರವಾಗಿ ಸಾಗಲಿ. ಅದಕ್ಕೆ ಬೇಕಾದ ಶಕ್ತಿ, ಆರೋಗ್ಯ, ಚೈತನ್ಯವನ್ನು ಭಗವಂತ ಅವರಿಗೆ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಇಂತಹ ಉತ್ತಮರನ್ನು ನನ್ನ ಬಾಳಿನಲ್ಲಿ ಸಿಗುವ ಹಾಗೆ ಮಾಡಿದ ಭಗವಂತನಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಾಗೆಯೇ ಅನಾಜಿ ಅವರ ಸಹಧರ್ಮಚಾರಿಣಿ, ವಾತ್ಸಲ್ಯಮಯಿ ಶ್ರೀಮತಿ. ಲಕ್ಷ್ಮೀದೇವಿಯವರಿಗೂ ನನ್ನ ಪ್ರೀತಿಪೂರ್ವಕ ವಂದನೆಗಳು.

*****

ನಾನು ಕಂಡಂತೆ ನನ್ನ ಗುರುಗಳು

ಭಾರತೀ ಕಾಸರಗೋಡು
ಚರವಾಣಿ : ೯೮೮೬೩೩೮೭೯೭೩

ನಮ್ಮ ಗೌರವಾನ್ವಿತ ಗುರುಗಳಾದ ಪ್ರೊ. ಅನಾಜಿ ಅವರನ್ನು ನಾನು ಮೊದಲು ಕಂಡದ್ದು ಮಂಡ್ಯದ ಸರ್ಕಾರಿ ಕಾಲೇಜಿನಲ್ಲಿ ನಾನು ಪ್ರಥಮ ಬಿಎ ತರಗತಿಯಲ್ಲಿ ಓದುತ್ತಿದ್ದಾಗ. ಪದವಿ ಪರೀಕ್ಷೆಗೆ ಕನ್ನಡ ಸಾಹಿತ್ಯ ನನ್ನ ಪ್ರಧಾನ ವಿಷಯಗಳಲ್ಲಿ ಒಂದು. ಗುರು ಅನಾಜಿ ನಮಗೆ ' ಕರ್ಣಪರ್ವ ' ಪಠ್ಯವನ್ನು ಬೋಧಿಸುತ್ತಿದ್ದರು. ಆಗ ಅವರು ವಯಸ್ಸಿನಲ್ಲಿ ಸಣ್ಣವರು. ಆದರೆ ವಿದ್ವತ್ತಿನಲ್ಲಿ ಮತ್ತು ಬೋಧನಾ ಕ್ರಮದಲ್ಲಿ ಬಹಳ ದೊಡ್ಡವರು. ನೋಡಿದೊಡನೆ ಗೌರವ ಮೂಡಿಸುವ ವ್ಯಕ್ತಿತ್ವ, "ನನ್ನ ವಿದ್ಯಾರ್ಥಿಗಳಿಗೆ ನಾನು ಪ್ರೀತಿಯಿಂದ ಮತ್ತು ಪ್ರಾಮಾಣಿಕವಾಗಿ ಪಾಠ ಹೇಳಬಲ್ಲೆ!" ಅನ್ನುವಂತಹ ಅಸೀಮ ಆತ್ಮವಿಶ್ವಾಸ, ಸ್ವ ಸಾಮರ್ಥ್ಯದ ಬಗೆಗಿನ ಅದೊಂದು ರೀತಿಯ ಅಕಳಂಕ ಪ್ರಕಾಶ – ಇವೆಲ್ಲವೂ ಅವರ ವ್ಯಕ್ತಿತ್ವದಲ್ಲಿ ಬೆರೆತು, ವಿದ್ಯಾರ್ಥಿಗಳಲ್ಲಿ ಅವರ ಕುರಿತು ಭಯಭಕ್ತಿಗಳನ್ನು ಮೂಡಿಸುತ್ತಿದ್ದವು. ಜತೆಗೆ, ಈ ನಮ್ಮ ಗುರುಗಳು ನಮ್ಮನ್ನು ಬೆಳಕಿನ ದಾರಿಗಳಲ್ಲಿ ಮುನ್ನಡೆಸುತ್ತಾರೆ ಎಂಬ ಭರವಸೆ ಕೂಡ. ಅವರ ಪಾಠ ಕ್ರಮವಂತು ಬಲು ಚೆನ್ನ. ಅವರ ಮಾತು ಇನ್ನೂ ಚೆನ್ನ. ಒಂದು ಮಾತಿನಲ್ಲಿ ಹೇಳಬಹುದಾದರೆ ತರಗತಿಯಲ್ಲಿ ಅವರೇ ಸ್ವತಃ ಕುಮಾರವ್ಯಾಸನ ಮಧುರ ವಾಣಿಯಾಗಿ ಭಾಸವಾಗುತ್ತಿದ್ದರು. ಕಾವ್ಯದಲ್ಲಿ ಹಾಸು ಹೊಕ್ಕಾಗಿ ಬರುವ ನವರಸಗಳ ವರ್ಣನೆಯನ್ನು ಮನಂಬುಗುವಂತೆ ವಿವರಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಅದು ಸವಿಯೂಟ....ಅಮೃತಧಾರೆ! ನನ್ನ ಮನಸ್ಸು ಮಹಾಭಾರತದ ಬಣ್ಣಬಣ್ಣದ ಲೋಕಗಳಲ್ಲಿ ವಿಹರಿಸಿ ಬರುತ್ತಿತ್ತು. ಹೊಸಬಗೆಯ ಕಾವ್ಯಾನಂದವನ್ನು ಅನುಭವಿಸುತ್ತಿತ್ತು.

ಆದರೆ ಈ ಸೌಭಾಗ್ಯ ನನಗೆ ಒಂದೇ ವರ್ಷದ್ದು! ಎರಡನೇ ಬಿಎ ತರಗತಿಗೆ ಬರುತ್ತಿದ್ದಂತೆ ಅದಾವ ಅನಾಗರಿಕ ನಿಷ್ಕರುಣ ಪ್ರೇರಣೆಯೋ ಏನೋ.... ಹೆಣ್ಣು ಮಕ್ಕಳನ್ನೆಲ್ಲ ಇನ್ನೊಂದು ದೂರದ ಮೂಲೆಯ ಕಟ್ಟಡಕ್ಕೆ ವರ್ಗಾಯಿಸಿ, ಅದನ್ನು ಪ್ರತ್ಯೇಕ ಮಹಿಳಾ ಕಾಲೇಜು ಎಂದು ಕರೆಯಲಾಯಿತು. ಇದಕ್ಕೆ ಸ್ವಂತ ಕಟ್ಟಡವಿಲ್ಲ! ಸರ್ಕಾರಿ ಹುಡುಗರ ಪ್ರೌಢಶಾಲೆ ಅದು. ಬೆಳಗಿನ ಏಳು ಗಂಟೆಯಿಂದ ಹನ್ನೊಂದೂವರೆಯವರೆಗೆ ನಮಗೆ ತರಗತಿಗಳು! ನಂತರ ಪ್ರೌಢಶಾಲೆಯ ತರಗತಿಗಳು ನಡೆಯುತ್ತಿದ್ದವು. ನಮ್ಮ ಮನೆಯಿಂದ ಈ ಕಟ್ಟಡ ಬಲು ದೂರ. ಸುಮಾರು ಮೂರು ಕಿಲೋಮೀಟರು! ಆಗೆಲ್ಲ ಎಲ್ಲರಿಗೂ ಕಾಲ್ನಡಿಗೆಯೇ ವಾಹನ ತಾನೇ! ನಾನು ಬೆಳಿಗ್ಗೆ ಆರು ಗಂಟೆಗೆ ಮನೆ ಬಿಡಬೇಕಾಗುತ್ತಿತ್ತು. ಅವೆಲ್ಲ ಕಷ್ಟಗಳು ಹಾಗಿರಲಿ. . . ಅಲ್ಲಿ ಬಂದು ನಮಗೆ ಪಾಠ ಹೇಳುತ್ತಿದ್ದವರ ಬಗ್ಗೆ ಮಾತನಾಡದಿರುವುದು ಕ್ಷೇಮ.

ಗುರುತ್ರಯರಾದ ಪ್ರೊ. ಅನಾಜಿ, ಪ್ರೊ. ಎಸ್. ಶ್ರೀನಿವಾಸನ್, ಪ್ರೊ. ಎಂ. ಎ. ಜಯಚಂದ್ರ ಇವರುಗಳ ಪ್ರಬುದ್ಧ ಉಪನ್ಯಾಸಗಳನ್ನು ಆಲಿಸಿ ಪ್ರಭಾವಿತಳಾಗುತ್ತಿದ್ದ ನನಗೆ ಇದೀಗ ತೀವ್ರ ನಿರಾಶೆಯಾಯಿತು. ಇದೇ ಸಮಯದಲ್ಲಿ ಗುರು ಅನಾಜಿ ಅವರ ಸಾನ್ನಿಧ್ಯ ಸಹ ದೂರವಾಯಿತು.

ನಾನು ಮೊದಲನೇ ಬಿ.ಎ. ಓದುತ್ತಿದ್ದಾಗ ನಮ್ಮ ಮನೆ ಇದ್ದುದು ಮಂಡ್ಯದೊಂದು ಸಣ್ಣ ಬಡಾವಣೆ ಕಲ್ಲಹಳ್ಳಿಯಲ್ಲಿ. ನಮ್ಮ ಕಾಲೇಜಿಗೆ ಇದು ಸಾಕಷ್ಟು ಹತ್ತಿರ. ಗುರುತ್ರಯರಿಗೆ ನನ್ನ ತಂದೆಯವರಲ್ಲಿ (ಸಮೇತನಹಳ್ಳಿ ರಾಮರಾಯರು) ಬಹಳ ಗೌರವ. ಆಗಾಗ ಭೇಟಿ ಮಾಡಿ ಸಾಹಿತ್ಯ ವಿಚಾರಗಳನ್ನು ಚರ್ಚಿಸಲು ನಮ್ಮ ಮನೆಗೆ ಬರುತ್ತಿದ್ದರು. ನನ್ನ ಅಮ್ಮ ಈ ಮೂವರಿಗೆ 'ತ್ರಿಮೂರ್ತಿಗಳು' ಅಂತ ಹೆಸರಿಟ್ಟಿದ್ದಳು. ಈ ವಿದ್ವಾಂಸರನ್ನು ಸತ್ಕರಿಸುವುದು ಆಕೆಗೆ ಸಂಭ್ರಮದ ವಿಷಯ.

ಪ್ರಸ್ತುತ ಪ್ರಬಂಧ ಗುರು ಅನಾಜಿ ಅವರ ಬಗೆಗೆ ಇರುವುದರಿಂದ ಅವರ ವ್ಯಕ್ತಿತ್ವದ ಬಗ್ಗೆ ಕೆಲವು ಮಾತುಗಳನ್ನು ಗೌರವದಿಂದ ಹೇಳಲು ಅಪೇಕ್ಷಿಸುತ್ತೇನೆ. ಯಾವುದೇ ಕೋನದಿಂದ ನೋಡಿದರೂ, ನಿಲುವುಗಳಲ್ಲಿ ವಿದ್ವತ್ತಿನ ವರ್ಚಸ್ಸು, ಅಸ್ಖಲಿತ ಪ್ರಬುದ್ಧ ವಾಕ್ಕುಗಳ ಮಧುರ ಮೋಡಿ, ವಿದ್ಯಾರ್ಥಿಪ್ರೇಮವನ್ನು ಅಕಳಂಕವಾಗಿ ವರ್ಷಿಸುವ ಪ್ರಾಂಜಲ ನಯನಗಳು - ಇವೆಲ್ಲದರ ಸಾರ ಸಂಗ್ರಹ ಗುರು ಅನಾಜಿ ಅವರು. ಇಂತಹ ಹಿರಿಯ ವಿದ್ವಾಂಸರನ್ನು ನನ್ನ ಬಿ.ಎ. ವಿದ್ಯಾಭ್ಯಾಸದ ಅವಧಿಯಿಂದ ಈವರೆಗೂ ಜ್ಞಾನಮಾರ್ಗದಲ್ಲಿ ಮುನ್ನಡೆಸುವ ಸದ್ಗುರುವಾಗಿ ಪಡೆದಿರುವ ನನ್ನ ಪುಣ್ಯ ದೊಡ್ಡದು. ಮೊದಲನೇ ಬಿ.ಎ. ಮುಗಿದ ಮೇಲೆ ಬಹುಕಾಲದ ಅವಧಿಯ ನಂತರ, ಗುರು ಅನಾಜಿ ಅವರನ್ನು ಮತ್ತೆ ನಾನು ಕಂಡದ್ದು ೧೯೭೫ರ ಸುಮಾರಿನಲ್ಲಿ; ನನ್ನ ತಂದೆಯವರಿಗೆ ಎಂಬತ್ತು ವರ್ಷಗಳು ತುಂಬಿದಾಗ ಅವರಿಗೆ ಅಭಿನಂದನಾ ಗ್ರಂಥವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ. ಈ ಪುಸ್ತಕ ಪ್ರಕಟಣೆಗೆ ಪ್ರೊ. ಅನಾಜಿ ಮತ್ತು ಪ್ರೊ. ಶ್ರೀನಿವಾಸನ್ ಅವರು ಸಂಪಾದಕರಾಗಿರಬೇಕೆಂಬುದು ನನ್ನ ತಂದೆಯವರ ಅಪೇಕ್ಷೆ. ಅದರಂತೆ ನಡೆಯಿತು. ಮೂರನೇ ಸಂಪಾದಕಳು ನಾನು. ಎಲ್ಲ ಸಾಹಿತಿಗಳನ್ನು ಆತ್ಮೀಯರನ್ನು ಪದೇ ಪದೇ ಸಂಪರ್ಕಿಸಿ (ಮನೆ ಮನೆ ಭೇಟಿಯೂ ಸೇರಿ!) ಸಕಾಲದಲ್ಲಿ ಗ್ರಂಥಕ್ಕೆ ಲೇಖನಗಳನ್ನು ನನಗೆ ತಲುಪಿಸಬೇಕೆಂದು ವಿನಂತಿಸುವ ಹೊಣೆ ನನ್ನದು!

ಈ ಸಂದರ್ಭದಲ್ಲಿ ನನ್ನ ಗುರುಗಳಿಗೆ ಮೊದಲ ಬಾರಿ ಫೋನ್ ಮಾಡಿದಾಗ "ಬಹಳ ದಿನಗಳ ನಂತರ ಫೋನ್ ಮಾಡ್ತಾ ಇದ್ದೀಯಲ್ಲ? ನೀನು ಪೂರ್ವಾಶ್ರಮದಲ್ಲಿದ್ದಾಗ ನಿನ್ನ ಕಂಡ ನೆನಪಷ್ಟೇ ನನಗೆ! ಆಗಿನ್ನೂ ನೀನು ಲಂಗದ ಹುಡುಗಿ! "ಅಂತ ಪರಿಹಾಸ ಮಾಡಿದರು. ನಮ್ಮ ಗುರುಗಳ ಮಾತೇಹಾಗೆ! ಪರಿಶುದ್ಧ ಹೃದಯವನ್ನು ಪ್ರತಿಫಲಿಸುವ ಸದಭಿರುಚಿಯ ಹಾಸ್ಯದ ಹೊನಲು! ನನ್ನ ಚಿಕ್ಕ ವಯಸ್ಸನ್ನು ಹಿತವಾಗಿ ನೆನಪಿಸುವ 'ಲಂಗದ ಹುಡುಗಿ' ಪದ ಪ್ರಯೋಗವೂ ತುಂಬಾ ಇಷ್ಟ ನನಗೆ! ಕವಿ ವಾಲ್ಮೀಕಿ ಒಂದು ಪ್ರಸಂಗದಲ್ಲಿ ತಾವು ಮೀಯಲಿರುವ ಸರೋವರವನ್ನು "ಸನ್ಮನುಷ್ಯನ ಮನಸ್ಸು ಇದ್ದಂತಿದೆ" ಎಂದು ಬಣ್ಣಿಸುತ್ತಾರೆ. ಆ ರೀತಿಯ ಸನ್ಮನಸು ನಮ್ಮ ಗುರುಗಳದು.

"ಗುರು ಹಿರಿಯರನ್ನು, ಅವರ ವಿದ್ವತ್ತು – ಸಾಧನೆಗಳನ್ನು ವಿದ್ವಜ್ಜನರು ಮಾತ್ರ ಕೊಂಡಾಡಬೇಕು. ಕಿರಿಯರು ಹಾಗೆ ಮಾಡ ಹೊರಟರೆ ಅದು ಉದ್ಧಟತನವಾಗುತ್ತದೆ.'' ಹೀಗೆಂದು ಡಿ.ವಿ.ಜಿ. ಅವರು ಒಂದೆಡೆ ಪ್ರಸ್ತಾಪಿಸಿದ್ದಾರೆ. ಈ ಮಾತನ್ನು ನಾನು ಗೌರವಿಸುತ್ತೇನೆ ಮತ್ತು ಪಾಲಿಸುತ್ತೇನೆ. ಹಿರಿಯರ ಬಗ್ಗೆ ಕಿರಿಯರು ತೋರಬೇಕಾದ ಗೌರವ ಭಾವದಲ್ಲಿ ಈ ಲೇಖನವನ್ನು ಸಿದ್ಧಪಡಿಸಿದ್ದೇನೆ.

೧೯೭೦ ರಿಂದ ಇದುವರೆಗೂ ಗುರು ಅನಾಜಿ ಅವರು ನನಗೆ ಮಾರ್ಗದರ್ಶನವನ್ನು ನೀಡುವ ಸದ್ಗುರುವಾಗಿದ್ದಾರೆ. ನನ್ನಲ್ಲಿ ಅಪರಿಮಿತ ಶಿಷ್ಯ ಪ್ರೇಮವನ್ನು ಪ್ರಕಟಿಸುತ್ತಲೇ ಬಂದಿದ್ದಾರೆ. ನನ್ನ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುವ, ಮೆಚ್ಚುಗೆಯನ್ನು ವ್ಯಕ್ತಪಡಿಸುವ ಹಿರಿಗುಣ ಅವರದು. ಅವರಿಗೆ ಸರಿ ಕಾಣದ ಅಂಶಗಳ ಬಗ್ಗೆ ಕಟು ಟೀಕೆಗಳೂ ಇದ್ದೇ ಇರುತ್ತವೆ! ಆ ಮಾತು ಬೇರೆ. ನಾನು ಪ್ರಕಟಿಸುವ ಎಲ್ಲ ಪುಸ್ತಕಗಳನ್ನು ಆಗಿಂದಾಗ ಅವರಿಗೆ ತಲುಪಿಸಲೇಬೇಕು. ಇದೊಂದು ಅಲಿಖಿತ ಸುಗ್ರೀವ ಶಾಸನ! ಗುರುವಿನಾದೇಶವನ್ನು ನಾನು ಗೌರವದಿಂದ ನೆರವೇರಿಸುತ್ತೇನೆ. ಒಂದು ವೇಳೆ

ತಡವಾದರೆ – "ನಿನ್ನ ಹೊಸ ಪುಸ್ತಕ ನಂಗಿನ್ನೂ ಬಂದಿಲ್ಲ. ಯಾಕೆ ತಡ ಮಾಡಿದೆ? ಕೂಡಲೇ ಕಳಿಸು.'' ನನ್ನ ಅಣ್ಣಯ್ಯನಂತೆಯೇ ಆಜ್ಞೆ ಮಾಡುತ್ತಾರೆ. ಶಿಷ್ಯಳ ಪುಸ್ತಕವನ್ನು ಪಡೆದುಕೊಳ್ಳಲು ಅವರು ತೋರುವ ಗುರು ಪ್ರೀತಿ ಎಲ್ಲರಿಗೂ ಸಾಧ್ಯವಾಗಬಹುದೇ? ಶಿಷ್ಯೆಯಾದ ನನಗೆ ಇದು ಹೃದಯಸ್ಪರ್ಶಿ ಸಂಗತಿ. ಇನ್ನು ನಮ್ಮ ಈ ಗುರುಗಳು ಅದೆಷ್ಟು ಉನ್ನತ ಪುಸ್ತಕ ಪ್ರೇಮಿ ಮತ್ತು ಪುಸ್ತಕ ಸಂಗ್ರಹಕಾರರು ಎಂಬುದನ್ನು ಅವರನ್ನು ಬಲ್ಲ ಎಲ್ಲರಿಗೂ ತಿಳಿದ ಮಾತು.

ಒಂದು ಬಾರಿ ನನ್ನ ಪ್ರಬಂಧ ಸಂಕಲನವನ್ನು ಓದಿದ ನಂತರ ನನಗೆ ಫೋನ್ ಮಾಡಿ ಎಚ್ಚರಿಸಿದರು –

"ನಿನ್ನ ಕೆಲವು ಪ್ರಬಂಧಗಳಲ್ಲಿ ವೈಯಕ್ತಿಕ ವಿಷಯಗಳು ಅಗತ್ಯಕ್ಕಿಂತ ಹೆಚ್ಚಾಗಿವೆ. ಇಂಥದ್ದನ್ನು ಬರೆಯುವಾಗ ಇದರಿಂದ ಓದುಗರಿಗೆ ಪ್ರಯೋಜನವೇನಾದರೂ ಇದೆಯೇ ಎಂಬುದನ್ನು ಮೊದಲು ಆಲೋಚಿಸು. ನಂತರ ಬರವಣಿಗೆಯಲ್ಲಿ ಮೂಡಿಸು.''

ನಾನು ನಿರೂಪಿಸಿದ, ಪ್ರಖ್ಯಾತ ವೀಣಾವಾದಕರಾಗಿದ್ದ ಬಾ. ಮೈಸೂರು ದೊರೆಸ್ವಾಮಿ ಅಯ್ಯಂಗಾರ್ ಅವರ ಆತ್ಮಕಥನ 'ವೀಣೆಯ ನೆರಳಿನಲ್ಲಿ' ಕೃತಿಗೆ 1998ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಸಂದಿತು. ಹೀಗೆ ನನ್ನ ಪುಸ್ತಕಕ್ಕೆ ಬಹುಮಾನ ಬಂದದ್ದು ನನಗೆ ಗೊತ್ತಿರಲಿಲ್ಲ. ಅಕಾಡೆಮಿಯ ವಾರ್ಷಿಕ ಬಹುಮಾನಗಳಿಗೆ ಕೃತಿಗಳನ್ನು ಸಲ್ಲಿಸಬೇಕೆಂಬ ಮಾಹಿತಿ ಸಹ ತಿಳಿದಿರಲಿಲ್ಲ. ಯಾಕೆಂದರೆ ಇದು ನನ್ನ ಮೊದಲ ಕೃತಿ. ಪ್ರಾಯಶಃ ಪುಸ್ತಕದ ಪ್ರಕಾಶಕರಾದ ಮೈಸೂರಿನ ಗೀತಾ ಬುಕ್ ಹೌಸ್ ನ ಶ್ರೀ ಸತ್ಯನಾರಾಯಣರಾವ್ ಅವರು ಕೊಟ್ಟಿದ್ದರು. ಬಹುಮಾನ ಬಂದ ಸಂಗತಿ ಪತ್ರಿಕೆಗಳಲ್ಲಿ ಪ್ರಕಟವಾದಾಗ ನನಗೆ ತಿಳಿಯಿತು.

ಕೆಲ ದಿನಗಳಲ್ಲಿ ನನಗೆ ನನ್ನ ಗುರುಗಳಿಂದ ಆಶೀರ್ವಚನದ ಕರೆ ಬಂದೇ ಬಂದಿತು. ತುಂಬು ಮನಸ್ಸಿನಿಂದ ಅಭಿಮಾನವನ್ನು ಸೂಚಿಸಿದರು. ಹೆಚ್ಚಿನ ಒಳ್ಳೆಯದನ್ನು ಹಾರೈಸಿದರು. ಅಸೀಮ ಶಿಷ್ಯ ವಾತ್ಸಲ್ಯವನ್ನು ಸೂಚಿಸುವ ಅವರ ಒಂದು ಮಾತು ಈಗಲೂ ಮನಸ್ಸಿನಲ್ಲಿ ಆಗಾಗ ಅನುರಣಿತವಾಗುತ್ತಿರುತ್ತದೆ.

"ನನ್ನ ಶಿಷ್ಯೆ ನೀನು. ನಿನಗೆ ಸಂದ ಈ ಬಹುಮಾನ ನನಗೇ ಬಂದಷ್ಟು ಆನಂದವನ್ನು ಉಂಟು ಮಾಡುತ್ತಿದೆ." ದೊಡ್ಡವರು ಅವರು. . . ದೊಡ್ಡ ಮಾತು ಯಾವಾಗಲೂ! ಆಮೇಲೆ ನನ್ನ ಗುರುಗಳು ನಗುನಗುತ್ತಾ ಹೇಳಿದರು –

"ಈ ಸಂತೋಷಕ್ಕಾಗಿ ನೀನು ನನಗೆ ಡಬಲ್ ಸ್ವೀಟ್ ಕೊಡಬೇಕು!''

ಗುರುಗಳ ಆಜ್ಞೆಯನ್ನು ನಾನು ಶಿರಸಾ ವಹಿಸಿ ಪಾಲಿಸಿದೆ. ಕೆಲವೇ ದಿನಗಳಲ್ಲಿ ನಮ್ಮ ಅಣ್ಣಯ್ಯ ಮೈಸೂರಿನಿಂದ ಬಂದರು. ಆ ಸಂದರ್ಭದಲ್ಲಿ ಗುರುದ್ವಯರನ್ನು (ಅಂದರೆ ಪ್ರೊ. ಅನಾಜಿ ಮತ್ತು ಪ್ರೊ. ಶ್ರೀನಿವಾಸನ್) ಮನೆಗೆ ಊಟಕ್ಕೆ ಆಹ್ವಾನಿಸಿದೆ. ಮೂವರೂ ಹಿರಿಯರು ಸಂತೋಷದಿಂದ ಸಿಹಿ ತಿನಿಸುಗಳನ್ನು ಮೆಲ್ಲುವಾಗ ನನಗೆ ಮಿಗಿಲಾನಂದ! ಮಾತುಕತೆಯ ನಡುವೆ ನನ್ನ ಅಣ್ಣಯ್ಯ ನಾನು ವಿರೋಧಿಸುತ್ತಿದ್ದ ಅವರ ಅಭಿಪ್ರಾಯವೊಂದರ ಬಗ್ಗೆ ಪ್ರಸ್ತಾಪಿಸಿ

"ನೀವೇ ಹೇಳಿ ಅಶ್ವತ್ಥನಾರಾಯಣ. . ಈ ವಿಷಯದಲ್ಲಿ ನಾನು ಸರಿಯೋ? ನನ್ನ ಮಗಳು ಸರಿಯೋ?" ಅಂತ ನ್ಯಾಯ ಒಪ್ಪಿಸಿದರು.

ನನ್ನ ಗುರುಗಳು ಅವರ ಎಂದಿನ ಕಡ್ಡಿ ಮುರಿದ ಶೈಲಿಯಲ್ಲಿ ಅಪ್ಪಣೆ ಕೊಡಿಸಿದರು–

"ಈ ವಿಷಯದಲ್ಲಿ ನಾನು ನನ್ನ ಶಿಷ್ಯಯನ್ನೇ ವಹಿಸಿಕೊಳ್ಳುವುದು! ಆಕೆಯೇ ಸರಿ!''

ಈ ಮಾತಿಗೆ ಅಣ್ಣಯ್ಯನೂ ಹೃತ್ಪೂರ್ವಕವಾಗಿ ನಕ್ಕುಬಿಟ್ಟರು. ಮಕ್ಕಳನ್ನು ಹೊಗಳಿದರೆ ಯಾವ ತಂದೆಗೆ ತಾನೇ ಸಂತೋಷವಾಗುವುದಿಲ್ಲ ಹೇಳಿ?

ಊಟದ ನಂತರ ಪ್ರಕಟಣೆಯ ಹಂತದಲ್ಲಿದ್ದ ಅಣ್ಣಯ್ಯನ ಅಭಿನಂದನಾ ಗ್ರಂಥ 'ರಾಸದರ್ಶನ'ದ ಬಗ್ಗೆ ವಿಸ್ತೃತವಾದ ಚರ್ಚೆಗಳಾದವು. ಅದರಲ್ಲಿನ ಬಹುಪಾಲು ಸಮಂಜಸ ಸಲಹೆಗಳು– ಯೋಜನೆಗಳು ಅನಾಜಿ ಅವರದೇ! ನಂತರ ೧೯೯೮ ರಲ್ಲಿ 'ರಾಸದರ್ಶನ' ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವಿದ್ವಜ್ಜನರ ಮತ್ತು ಸಹೃದಯರ ಸಮ್ಮುಖದಲ್ಲಿ ಲೋಕಾರ್ಪಣೆಯಾಯಿತು.

ಅದೊಂದು ಸಂತೋಷದ ಸಮಾರಂಭ. ಪುಸ್ತಕಕ್ಕಾಗಿ ದುಡಿದವರಿಗೆ ಸಾರ್ಥಕ ಕ್ಷಣ.

ನಮ್ಮ ತಂದೆಯವರ ನಿಧನಾನಂತರ ಅವರ ಸ್ಮರಣಾರ್ಥವಾಗಿ ನಾವು ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದೆವು. ಅವುಗಳಲ್ಲಿ ಪ್ರಮುಖವಾದದ್ದು ೨೦೧೭ ರಲ್ಲಿ ನಡೆದ ಅಣ್ಣಯ್ಯನ ಶತಮಾನೋತ್ಸವ ಕಾರ್ಯಕ್ರಮ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಗುರು ಅನಾಜಿ ಅವರ ಆತ್ಮೀಯ ಉಪಸ್ಥಿತಿ ಇರಲೇಬೇಕು. ನಮ್ಮದೇ ಕುಟುಂಬದ ಒಬ್ಬ ಹಿರಿಯ ವ್ಯಕ್ತಿ ಅನ್ನುವಂತೆ ನಾವೆಲ್ಲರೂ ಅವರನ್ನು ಗೌರವಿಸುತ್ತೇವೆ. ಅವರ ಆಶೀರ್ವಾದಕ್ಕೆ, ವಿದ್ವತ್ಪೂರ್ಣ ಮಾತುಗಳಿಗೆ ಕಾಯುತ್ತೇವೆ. ಎಲ್ಲ ಭಾಷಣಗಳಲ್ಲಿ ನನ್ನ ಗುರುಗಳು ಹೃತ್ಪೂರ್ವಕವಾಗಿ ಒಂದು ಮಾತನ್ನು ಹೇಳುತ್ತಾರೆ –

"ಒಬ್ಬ ಸಾಹಿತಿ ನಿರ್ಗಮಿಸಿದ ನಂತರ ವಾರಸುದಾರರು ಆ ಸಾಹಿತಿಯ ಆಸ್ತಿ ನಗ ನಾಣ್ಯ ಬ್ಯಾಂಕ್ ಅಕೌಂಟ್‌ಗಳಿಗೆ ಉತ್ತರಾಧಿಕಾರಿಗಳಾಗಲು ಹಪಹಪಿಸುತ್ತಾರೆ. ಆದರೆ ಅವರ ಸಾಂಸ್ಕೃತಿಕ ಉತ್ತರಾಧಿಕಾರಿ ಆಗಲು ಯಾರೂ ಮುಂದೆ ಬರುವುದಿಲ್ಲ. ಯಾಕೆಂದರೆ ಅದೊಂದು ಸುಸಂಸ್ಕೃತ ನಡಾವಳಿ. ನನ್ನ ಶಿಷ್ಯೆ, ಭಾರತಿ, ತನ್ನ ತಂದೆಯ ಸಾಹಿತ್ಯ ವ್ಯಕ್ತಿತ್ವದ ಸಾಂಸ್ಕೃತಿಕ ಉತ್ತರಾಧಿಕಾರಿ ಆಗಿದ್ದಾಳೆ. ಇದು ನನಗೆ ಹೆಮ್ಮೆಯ ವಿಷಯ.''

ಇನ್ನೂ ಒಂದು ಹೃದಯಸ್ಪರ್ಶಿ ಮಾತನ್ನು ಅವರು ಹೇಳುತ್ತಿರುತ್ತಾರೆ –

"ಗುರುಗಳಾಗಿ ನಾವು ಅದೆಷ್ಟೋ ಮಂದಿ ವಿದ್ಯಾರ್ಥಿಗಳಿಗೆ ಸಾಹಿತ್ಯ ಪಾಠವನ್ನು ಹೇಳಿರುತ್ತೇವೆ. ಆದರೆ ಎಲ್ಲರೂ ಮುಂದೆ ಸಾಹಿತ್ಯವನ್ನು ತಮ್ಮ ಜೀವನದಲ್ಲಿ ರೂಢಿಸಿಕೊಳ್ಳುತ್ತಾರೆಯೇ? ಅದು ಪ್ರಯಾಸದ ಕೆಲಸ. ನಾವು ನಿರೀಕ್ಷಿಸುವಂತಿಲ್ಲ. ಇನ್ನೊಂದು ವಿಷಯವೆಂದರೆ, ತಮಗೆ ಪಾಠ ಹೇಳಿದ ಗುರುಗಳನ್ನು ನೆನಪಿಟ್ಟುಕೊಂಡು ಆಗಾಗ ಹೀಗೆ ಕರೆದು ಗೌರವಿಸುವುದು ಕೂಡ ಒಂದು ಅಪರೂಪದ ಗುಣ. ನನ್ನ ವಿದ್ಯಾರ್ಥಿನಿ ಇವೆಲ್ಲವನ್ನೂ ಮಾಡುತ್ತಾ ಬಂದಿದ್ದಾಳೆ. ಪಾಠ ಹೇಳಿದ ನಮಗೆ ಸಾರ್ಥಕತೆಯ ಅನುಭವವಾಗುತ್ತದೆ."

ಪಾಯಸದ ನಡುನಡುವೆ ಸಿಗುವ ಹಣ್ಣುಗಳಂತೆ ಆಗಿಂದಾಗ ಹೊಮ್ಮುವ ಸುಮಧುರ ಪರಿಹಾಸ ಅವರ ಮಾತುಗಾರಿಕೆಗೆ ಚಿನ್ನದ ಚೌಕಟ್ಟು! ಈ ಒಂದು ಉದಾತ್ತ ಗುಣವನ್ನು ಅವರು ಜೀವಮಾನದುದ್ದಕ್ಕೂ ಪೋಷಿಸಿಕೊಂಡು ಬಂದಿದ್ದಾರೆ. ಸಮಗ್ರ ವ್ಯಕ್ತಿತ್ವದ ಹೃದಯವಂತ ಗುರುವೊಬ್ಬರಿಗೆ ಪರಿಪೂರ್ಣ ನಿದರ್ಶನವಾಗಿದ್ದಾರೆ.

ನಮ್ಮ ಗುರುಗಳು ಮಾತನಾಡುತ್ತಿರಲಿ.

ಅವರ ಕನ್ನಡ ಸೇವೆ ನಿರಂತರವಾಗಿರಲಿ.

******

ಅನಾಜಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತು

ಜಗನ್ನಾಥ ಹೇಮಾದ್ರಿ
ಚರವಾಣಿ : ೯೯೭೨೨೯೧೪೫೭೩

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನೇ ಉಸಿರಾಗಿಸಿಕೊಂಡಿರುವ, ತಮ್ಮ ಬಾಲ್ಯದಿಂದ ಇಂದಿನವರೆಗಿನ, ಕನ್ನಡದ ಬಹುತೇಕ ಎಲ್ಲ ಸಾಹಿತ್ಯ ದಿಗ್ಗಜರೊಡನೆ ನಿಕಟ ಒಡನಾಟ ಹೊಂದಿದ, ನಾಡಿನ ಕನ್ನಡ ಸಂಘ ಸಂಸ್ಥೆಗಳೊಡನೆ, ಸಮಕಾಲೀನ ಕನ್ನಡ ಬರಹಗಾರರೊಡನೆ ಮಧುರ ಬಾಂಧವ್ಯವನ್ನು ಬಹುಕಾಲದಿಂದ ಉಳಿಸಿಕೊಂಡು ಬಂದಿರುವ, ಕನ್ನಡ ಬಾರದಿರುವವರಿಂದ ಹಿಡಿದು ಐ.ಎ.ಎಸ್, ಸ್ನಾತಕೋತ್ತರ, ಪಿ.ಎಚ್.ಡಿ. ವಿದ್ಯಾರ್ಥಿಗಳವರೆಗೆ ಕನ್ನಡ ಪಾಠ ಮಾಡುತ್ತಿರುವ, ಎಲ್ಲ ವಯೋಮಾನದವರೊಡನೆ ಆತ್ಮೀಯವಾಗಿ ಬೆರೆಯುವ ಸರಳ ಸಜ್ಜನ ಸ್ವಭಾವದ, ಈ ಇಳಿಹರೆಯದಲ್ಲೂ ಜೀವನೋತ್ಸಾಹದಿಂದ ಸದಾ ಚಟುವಟಿಕೆಯಲ್ಲಿರುವ ನಮ್ಮ ನಾಡಿನ ಅಪರೂಪದ ಅಗ್ರಗಣ್ಯ ಸಾಹಿತಿಗಳು ಪ್ರೊ. ಜಿ. ಅಶ್ವತ್ಥನಾರಾಯಯಣ ಅವರು.

ಕೀರ್ತನ ಕೇಸರಿ ಪಂಡಿತ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ (೧೯೫೬-೧೯೬೪) ಮಕ್ಕಳಿಗಾಗಿ ಭಾಷಣ ಕಲಾ ತರಗತಿಗಳನ್ನು ಏರ್ಪಡಿಸುತ್ತಿದ್ದರು. ಅದು ಶ್ರೀ ಟಿ.ಎಂ.ಎ. ಪೈ ಪ್ರಾಯೋಜಿತ ಕಾರ್ಯಕ್ರಮ. ಈ ತರಗತಿಗಳಿಗೆ ಸೇರಿ ಶ್ರೀ ಜಿ. ಅಶ್ವತ್ಥನಾರಾಯಣರೇ ಪ್ರಥಮ ಸ್ಥಾನ ಪಡೆಯುತ್ತಿದ್ದುದನ್ನು ಹಿಂದಿಕ್ಕಲು ಯಾರಿಗೂ ಸಾಧ್ಯವಾಗಲಿಲ್ಲ ಎನ್ನುವುದು ಅಂದು ಸಾಹಿತ್ಯವಲಯದ ಬಹಳಷ್ಟು ಮಂದಿಗೆ ಅಚ್ಚರಿಯ ಸುದ್ದಿಯಾಗಿತ್ತು. ತಮ್ಮ ವಿದ್ಯಾರ್ಥಿ ಜೀವನದುದ್ದಕ್ಕೂ, ಇಂಟರ್‌ಹೈಸ್ಕೂಲ್, ಇಂಟರ್‌ಕಾಲೇಜು, ಇಂಟರ್ ಯೂನಿವರ್ಸಿಟಿಗಳು ನಡೆಸಿದ ಕನ್ನಡ ಚರ್ಚಾಸ್ಪರ್ಧೆಗಳಲ್ಲಿ ಬಹುಮಾನಗಳನ್ನೇ ಪಡೆಯುತ್ತ, ಟ್ರೋಫಿಗಳ ರಾಶಿಯನ್ನೇ ಕಲೆಹಾಕಿದ್ದರೆಂಬುದು ಇವರ ಎಳೆವಯದ ಪ್ರತಿಭೆಗೆ ಸಾಕ್ಷಿ.

ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಎರಡನೇ ಬಾರಿಗೆ ಪರಿಷತ್ತಿನ ಅಧ್ಯಕ್ಷತೆ ಬಯಸಿ ಚುನಾವಣೆಯಲ್ಲಿ ಸ್ಪರ್ಧಿಸಿದರು. ಸಾಹಿತ್ಯ ಕ್ಷೇತ್ರಕ್ಕೆ ಅಪರಿಚಿತರಾಗಿದ್ದ ಬೆಂಗಳೂರಿನ ಮಾಜಿ ಮೇಯರ್ ಶ್ರೀ ಜಿ. ನಾರಾಯಣ ಅವರು ಇವರಿಗೆ ನೇರ ಪ್ರತಿಸ್ಪರ್ಧಿ. ೧೯೬೯ ರಲ್ಲಿ ನಡೆದ ಈ ಚುನಾವಣೆ ಸಾಹಿತ್ಯವಲಯದಲ್ಲಿ ಅತ್ಯಂತ ಮಹತ್ವ ಪಡೆದಿತ್ತು. ಪ್ರೊ. ಅಶ್ವತ್ಥನಾರಾಯಣರು ಇದರಲ್ಲಿ ಆಸಕ್ತಿ ವಹಿಸಿ ಓಡಾಡಿದರು. ಪರಿಷತ್ತಿನ ವ್ಯವಹಾರಗಳ ಸೂಕ್ಷ್ಮತೆಗಳನ್ನು, ಅಂಕುಡೊಂಕುಗಳನ್ನು ಗ್ರಹಿಸಿದರು.

ಅಂತರರಾಷ್ಟ್ರೀಯ ಪುಸ್ತಕವರ್ಷದ ಅಂಗವಾಗಿ ಪರಿಷತ್ತು ೧೯೭೨ ರಲ್ಲಿ ಏರ್ಪಡಿಸಿದ್ದ 'ಸಾಹಿತ್ಯ ಪ್ರಸಾರ ಯೋಜನೆ'ಯಡಿ ಪಾದಯಾತ್ರೆಯಲ್ಲಿ ಸಾಗಿ ಮನೆ ಮನೆಗೆ ಪುಸ್ತಕಗಳನ್ನು ತಲುಪಿಸುವ ಕಾರ್ಯವೂ ಒಂದು. ಸ್ವಯಂಸೇವಕರ ದೊಡ್ಡ ಪಡೆಯೇ ರಚನೆಯಾಗಿತ್ತು. ಪ್ರೊ. ಅಶ್ವತ್ಥನಾರಾಯಣರು ಮತ್ತು ಗುಂಡೂರಾಯರು ಕಾರ್ಯದರ್ಶಿಗಳಾಗಿ ಮುಂಚೂಣಿಯಲ್ಲಿ ನಿಂತು ಈ ಕಾರ್ಯದಲ್ಲಿ ಪಾಲ್ಗೊಂಡರು. ಒಂದು ದಿನವಂತೂ ಮಲ್ಲೇಶ್ವರಂ ಬಡಾವಣೆಯ

೧ನೇ ಕ್ರಾಸ್ ನಿಂದ ೧೮ನೇ ಕ್ರಾಸ್ ವರೆಗೂ ಬೆಳಗ್ಗೆಯಿಂದ ಸಂಜೆವರೆಗೂ ಕಾಲ್ನಡಿಗೆಯಲ್ಲಿ ಹೋಗಿ ಎಲ್ಲ ಮನೆ ಮನೆಗಳಿಗೆ ಪುಸ್ತಕಗಳನ್ನು ಕೊಟ್ಟು ಸಂಜೆ ಜಿ. ಪಿ. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಮುಕ್ತಾಯ ಸಮಾರಂಭ ಮಾಡಿದ್ದನ್ನು ಈಗಲೂ ಅಭಿಮಾನದಿಂದ ನೆನಪಿಸಿಕೊಳ್ಳುತ್ತಾರೆ.

ಕನ್ನಡ ಕಾವ್ಯಗಳನ್ನು, ಸಾಹಿತ್ಯಶುದ್ಧವಾಗಿ ವಿಶಿಷ್ಟ ರೀತಿಯಲ್ಲಿ ರಾಗವಾಗಿ ವಾಚನ ಮಾಡುವ ಗಮಕ ವಾಚನ ಕಲೆ ಬಹು ಪ್ರಾಚೀನವಾದುದು. ಕುಮಾರವ್ಯಾಸ ಭಾರತ ಇದಕ್ಕೆ ಹೆಚ್ಚು ಬಳಕೆಯಾಗುತ್ತಿತ್ತು. ಈ ಗಮಕ ವಾಚನ ತರಬೇತಿ ತರಗತಿಗಳು ಪರಿಷತ್ತಿನಿಂದ ನಾಡಿನ ನಾನಾ ಭಾಗಗಳಲ್ಲಿ ನಡೆಯುತ್ತಿದ್ದುವು. ಮೌಖಿಕ ಪರೀಕ್ಷೆಗಳು ನಡೆಯುವಾಗ ವಾಚನಕ್ಕೆ ಮತ್ತು ಸಾಹಿತ್ಯಕ್ಕೆ ಒಬ್ಬೊಬ್ಬರಂತೆ ಪರೀಕ್ಷಕರಾಗಿ ಇಬ್ಬರನ್ನು ಕಳುಹಿಸಿಕೊಡುತ್ತಿದ್ದರು. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಗಮಕ ಪರೀಕ್ಷಕರಾಗಿ ಅನೇಕ ಬಾರಿ ಪ್ರೊ. ಅಶ್ವತ್ಥನಾರಾಯಣ ಅವರು ರಾಜ್ಯದ ವಿವಿಧೆಡೆ ಹೋಗಿಬಂದಿದ್ದಾರೆ.

ಪರಿಷತ್ತಿನ ಸ್ಥಾಪಕ ಸದಸ್ಯರಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರು, ಶ್ರೀ ಅ.ನ. ಕೃಷ್ಣರಾಯರು, ಶ್ರೀ ಡಿ.ವಿ. ಗುಂಡಪ್ಪನವರು, ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು, ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಯವರು, ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಮೊದಲಾದ ಗಣ್ಯರುಗಳೊಡನೆ ಆತ್ಮೀಯವಾಗಿ ಮಾತನಾಡುವಷ್ಟು ಸಲುಗೆ ಬೆಳೆಸಿಕೊಂಡಿದ್ದರು. ಇಂತಹ ಮಹನೀಯರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದ ಪರಿಷತ್ತಿನ ಆಡಳಿತವನ್ನು ಹತ್ತಿರದಿಂದ ನೋಡಿ ಸಂತೋಷಿಸುತ್ತಿದ್ದರು. ಮುಂದೆಯೂ ಸಹಜವಾಗಿ ಇದರ ಕಾರ್ಯಕ್ರಮಗಳಲ್ಲಿ, ಸಕಲ ಸದಸ್ಯರ ಸಭೆಗಳಲ್ಲಿ ಪಾಲ್ಗೊಂಡು ಚರ್ಚಿಸುತ್ತಿದ್ದರು. ತಮಗೆ ಸರಿಕಾಣದ ವಿಷಯಗಳಲ್ಲಿ ಪದಾಧಿಕಾರಿಗಳ ಜೊತೆ ವಾಗ್ವಾದ ನಡೆಸಿದ್ದೂ ಇದೆ. ಶ್ರೀ ಶ್ರೀವತ್ಸ ಮತ್ತು ಶ್ರೀ ಎಂ. ವಿ. ಸುಬ್ಬರಾವ್ ಹಾಗೂ ಇವರು ಈ ಮೂವರೂ ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯ ಅವಧಿಯ ವಾರ್ಷಿಕ ಮಹಾಧಿವೇಶನದಲ್ಲಿ ಉತ್ತರಿಸಲು ತಿಣುಕಾಡುವ ಪ್ರಶ್ನೆಗಳ ಮಳೆಯನ್ನೇ ಸುರಿಸುತ್ತಿದ್ದರು. ಹೀಗಾಗಿ ಪದಾಧಿಕಾರಿಗಳ ದೃಷ್ಟಿಯಲ್ಲಿ ಇವರುಗಳು ನಿಷ್ಠುರವಾದಿಗಳೆಂದೇ ಪರಿಗಣಿತರಾಗಿದ್ದರು. ಶ್ರೀ ಎಂ.ವಿ. ಸುಬ್ಬರಾವ್ ಅವರನ್ನು ಕ್ಷುಲ್ಲಕ ಕಾರಣಕ್ಕಾಗಿ ಸದಸ್ಯತ್ವದಿಂದಲೇ ವಜಾ ಮಾಡಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಗೊಂಡು ಒಂದುನೂರು ವರ್ಷ ಪೂರೈಸಿದ ನೆನಪಿಗಾಗಿ, ಆಕರ ಗ್ರಂಥ ರೂಪದ ಒಂದು ಪುಸ್ತಕವನ್ನು ರಚಿಸಿಕೊಡುವಂತೆ, ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪುಂಡಲೀಕ ಹಾಲಂಬಿ ಅವರು ಅನಾಜಿ ಅವರನ್ನು ವಿನಂತಿಸಿಕೊಂಡರು. ಈ ಕೈಂಕರ್ಯಕ್ಕೆ, ಪರಿಷತ್ತನ್ನು ಆಮೂಲಾಗ್ರವಾಗಿ ಬಲ್ಲ ಪ್ರೊ. ಜಿ. ಅಶ್ವತ್ಥನಾರಾಯಣರಿಗಿಂತ ಸಮರ್ಥ ಲೇಖಕರು ಬೇರೆ ಇಲ್ಲ ಎಂಬುದನ್ನು ಪರಿಷತ್ತು ಸರಿಯಾಗಿಯೇ ಗುರುತಿಸಿದ್ದನ್ನು ಪ್ರಶಂಸಿಸಬೇಕು. ೨೦೧೫ ರಲ್ಲಿ ಪ್ರಕಟವಾದ, ರಾಯಲ್ ಸೈಜಿನ ೯೦೫ ಪುಟಗಳ ಬೃಹದ್ ಗ್ರಂಥವಿದು. ಪರಿಷತ್ತಿನ ಇತಿಹಾಸ, ಸಾಧನೆಗಳು, ಏಳುಬೀಳುಗಳು, ಪ್ರಕಟವಾದ ಪುಸ್ತಕಗಳು, ಸರಸ್ವತೀ ಭಂಡಾರ, ನಿಯತಕಾಲಿಕೆಗಳು, ನಿಬಂಧನೆಗಳು, ದತ್ತಿನಿಧಿಗಳು, ಸಮ್ಮೇಳನಗಳು, ಅವುಗಳ ನಿರ್ಣಯಗಳು, ಸಮ್ಮೇಳನಾಧ್ಯಕ್ಷರುಗಳು, ಪರಿಷತ್ತಿನ ಅಧ್ಯಕ್ಷರ ಜೀವನ, ಸಾಧನೆಗಳು, ಸ್ವಾರಸ್ಯ ಪ್ರಸಂಗಗಳು– ಹೀಗೆ ಸಮಗ್ರ ವಿಷಯಗಳು ಈ ಆಕರ ಗ್ರಂಥದಲ್ಲಿ ದೊರೆಯುತ್ತವೆ. ಅತ್ಯಂತ ಶ್ರಮವಹಿಸಿ, ಮಾಹಿತಿ ಸಂಗ್ರಹಿಸಿ, ವಿವಿಧ ಅಧ್ಯಾಯಗಳಲ್ಲಿ ವಿಂಗಡಿಸಿ ಪ್ರೊ. ಅಶ್ವತ್ಥನಾರಾಯಣ ಅವರು ವ್ಯವಸ್ಥಿತವಾಗಿ ನಿರೂಪಿಸಿದ್ದಾರೆ.

'ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿ' ಹಾಗೂ ದತ್ತಿನಿಧಿಯ ಪ್ರತಿಷ್ಠಿತ ಪುರಸ್ಕಾರವಾಗಿರುವ 'ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ವಿದ್ವತ್ ಪ್ರಶಸ್ತಿ' ಇವರ ಸಾಹಿತ್ಯ ಸೇವೆಗೆ ಸಂದಾಯವಾದ ಪರಿಷತ್ತಿನ ಮನ್ನಣೆಗಳು.

ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತದ ಪ್ರಮುಖ ಸ್ಥಾನಗಳಲ್ಲಿ ಒಂದಾದ ಗೌರವ ಕಾರ್ಯದರ್ಶಿ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಳ್ಳುವ ಸುಯೋಗ ೧೯೭೮ ರಲ್ಲಿ ಹಂಪನಾ ಅಧ್ಯಕ್ಷರಾಗಿದ್ದಾಗ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ಒದಗಿ ಬಂದಿತು. ಕಾರ್ಯಕಾರಿ ಸಮಿತಿಯ, ಉಪಸಮಿತಿಗಳ, ಪ್ರಶಸ್ತಿಗಳ ಆಯ್ಕೆ ಸಮಿತಿಗಳ, ಪದಾಧಿಕಾರಿಗಳ ಸಭೆಗಳಲ್ಲಿ, ತಮ್ಮ ಅನುಭವ ಮತ್ತು ಪರಿಷತ್ತಿನ ಬಗೆಗಿನ ತಿಳಿವಳಿಕೆಗಳ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ವಿಚಾರಗಳನ್ನು ಮಂಡಿಸಿ ಗಮನ ಸೆಳೆಯುತ್ತಿದ್ದರು. ಮೀಟಿಂಗ್‌ಗಳು ಮುಕ್ತಾಯವಾಗಿ ನಡವಳಿಕೆಗಳು ಸಿದ್ಧಗೊಂಡ ನಂತರ ಅವುಗಳ ಅನುಪಾಲನಾ ಕೆಲಸಗಳು ಶೀಘ್ರವಾಗಿ ಮುಗಿಯುವ ಕಡೆಗೇ ಇವರ ಗಮನವಿರುತ್ತಿತ್ತು. ಸಮಾರಂಭಗಳಲ್ಲಂತೂ ಪ್ರಾರ್ಥನೆ, ಸ್ವಾಗತದಿಂದ ಮೊದಲ್ಗೊಂಡು ವಂದನಾರ್ಪಣೆಯವರೆಗೂ ಹೀಗೀಗೇ ಇರಬೇಕೆಂಬುದನ್ನು ಮೊದಲೇ ಟಿಪ್ಪಣಿ ತಯಾರಿಸಿಕೊಂಡು ಜಾರಿಗೊಳಿಸುತ್ತಿದ್ದರು. ಸಮಯ ಪಾಲನೆಯಲ್ಲಂತೂ ಎತ್ತಿದ ಕೈ. ಕಾರ್ಯಾಲಯದ ಕೆಲಸ ಕಾರ್ಯಗಳಲ್ಲಿ ಅಚ್ಚುಕಟ್ಟು, ಶಿಸ್ತನ್ನು ತಂದರು. 'ಪರಿಷತ್ತು ಸೇವಾ ಸಂಸ್ಥೆ, ಇದು ಕನ್ನಡದ ಸೇವೆ' ಎಂಬ ಮನೋಭಾವನೆಯನ್ನು ಸಿಬ್ಬಂದಿಯಲ್ಲಿ ಜಾಗೃತಗೊಳಿಸಿದರು. ವೇಳೆಯ ಪರಿಪಾಲನೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದರು. ಜಿಲ್ಲಾ ಘಟಕಗಳ ಅಧ್ಯಕ್ಷರಿಂದ, ಸಾಹಿತಿಗಳಿಂದ, ಸದಸ್ಯರಿಂದ, ಸಾರ್ವಜನಿಕರಿಂದ, ನಾಡಿನ ನಾನಾ ಭಾಗಗಳಿಂದ ಬರುತ್ತಿದ್ದ ಪ್ರತಿಯೊಂದು ಪತ್ರಕ್ಕೂ ಶೀಘ್ರವಾಗಿ ಉತ್ತರ ಕಳಿಸುವಂತೆ ತಾಕೀತು ಮಾಡಿ, ನಿಗಾ ವಹಿಸಿದರು. ಕಛೇರಿ ವೇಳೆಗೂ ಮೀರಿ ಕೆಲವೊಮ್ಮೆ ನೌಕರರಿಂದ ಕೆಲಸ ಮಾಡಿಸಬೇಕಾಗಿ ಬರುತ್ತಿತ್ತು. ಸಮಯದ ಲೆಕ್ಕ ಹಾಕಿ ಅವರಿಗೆ ಅರ್ಧದಿನ ವಿಶೇಷ ರಜೆ ನೀಡಿ ಹುರಿದುಂಬಿಸುತ್ತಿದ್ದರು. ಪರಿಷತ್ತಿನಂಥ ಸೇವಾ ಸಂಸ್ಥೆಗಳಲ್ಲಿ ಪದಾಧಿಕಾರಿಗಳ ನಡೆವಳಿಕೆ ಹೇಗಿರಬೇಕು ಎಂಬುದರ ಬಗ್ಗೆ ಒಂದು ಘಟನೆಯನ್ನು ನೆನಪಿಸಿಕೊಳ್ಳಬಹುದು : ಪ್ರಸಿದ್ಧ ವಿದ್ವಾಂಸರಾದ ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿ ಅವರು ಸದಸ್ಯತ್ವದ ನವೀಕರಣಕ್ಕಾಗಿ ತಮ್ಮ ಊರು ಬಳ್ಳಾರಿಯಿಂದ ಬಂದಿದ್ದರು. ಆರು ರೂಪಾಯಿ ಶುಲ್ಕ ನೀಡಿ ರಸೀದಿ ಕೊಡುವಂತೆ ಸಂಬಂಧಿಸಿದ ನೌಕರನನ್ನು ವಿನಂತಿಸಿದರು. ನೌಕರ, 'ಈಗ ೧೨ ಗಂಟೆ. ಕಚೇರಿ ವೇಳೆ ಆಗಿಹೋಗಿದೆ. ಮಧ್ಯಾಹ್ನ ೪ ಗಂಟೆಗೆ ಬನ್ನಿ' ಎಂದು ಬಿಟ್ಟನು. ಶಾಸ್ತ್ರಿಗಳು ಅಸಹಾಯಕರಾಗಿ ಅತ್ತಿತ್ತ ನೋಡಿ ಕೊಠಡಿ ಒಳಗೆ ಇಣುಕಿದರು. ಶ್ರೀ ಅಶ್ವತ್ಥನಾರಾಯಣರು ಇವರನ್ನು ನೋಡುತ್ತಲೇ ಕೂಡಲೇ ಎದ್ದು, ಗೌರವದಿಂದ 'ಬನ್ನಿ' ಎಂದು ಕೂರಿಸಿ, ವಿಚಾರ ತಿಳಿದುಕೊಂಡು ನೌಕರನನ್ನು ಕರೆದು ರಸೀದಿ ಹಾಕಿಸಿ ನೀಡಿದ್ದಲ್ಲದೇ– ೧೯೪೦ ರಲ್ಲಿ ಧಾರವಾಡದಲ್ಲಿ ನಡೆದ ೨೫ನೇ ಸಮ್ಮೇಳನಾಧ್ಯಕ್ಷರೂ, ಹಿರಿಯರೂ ಆದ ಅವರಲ್ಲಿ ಕ್ಷಮೆಯಾಚಿಸಿ, ಎಳನೀರು ತರಿಸಿಕೊಟ್ಟು ಉಪಚರಿಸಿ ಕಳುಹಿಸಿಕೊಟ್ಟರು. ನೌಕರನಿಗೆ ಆಮೇಲೆ ತಿಳಿಹೇಳಿ ಅರ್ಧ ದಿನ ರಜೆ ಜಮಾ ಮಾಡಿದರು! (ಆಗ ಕಚೇರಿ ವೇಳೆ ಬೆಳಗ್ಗೆ ೯ ರಿಂದ ೧ – ಮಧ್ಯಾಹ್ನ ೪ ರಿಂದ ೭.೩೦ ಇತ್ತು). ಬಿಡುವಿನ ವೇಳೆಯಲ್ಲಿ ಕೆಲಸ ಮಾಡಿದರೆ ಅರ್ಧ ದಿನ ರಜೆಯನ್ನು ಅವರಿಗೆ ಮಂಜೂರು ಮಾಡುತ್ತಿದ್ದರು.

ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಗೌರವ ಕಾರ್ಯದರ್ಶಿಗಳಾಗಿದ್ದ ಅವಧಿಯಲ್ಲಿ, ೧೯೭೯ ಮಾರ್ಚ ೯ ರಿಂದ ೧೧ ರ ವರೆಗೆ, ಧರ್ಮಸ್ಥಳದಲ್ಲಿ ಡಾ. ಎಂ. ಗೋಪಾಲಕೃಷ್ಣ ಅಡಿಗ ಅವರ ಅಧ್ಯಕ್ಷತೆಯಲ್ಲಿ ೫೧ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಏರ್ಪಾಡಾಗಿತ್ತು. ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರು ಸ್ವಾಗತಸಮಿತಿಯ ಅಧ್ಯಕ್ಷರು. ಪೂರ್ವ ಸಿದ್ಧತೆಗಳ ಸಭೆಗಳಿಗಾಗಿ ಪ್ರೊ. ಅಶ್ವತ್ಥನಾರಾಯಣ ಅವರು ಅನೇಕ ಬಾರಿ ಧರ್ಮಸ್ಥಳಕ್ಕೆ ಹೋಗಿ ಬಂದರು. ಕೊನೆಯ

ಎರಡುವಾರ ಅಲ್ಲೇ ಉಳಿದುಕೊಂಡು ದಿನವಿಡೀ ಪರಿಶೀಲನೆ ನಡೆಸಿದರು. ಪರಿಷತ್ತಿನ ಕಡೆಯಿಂದ ಆಗಬೇಕಾದ ಎಲ್ಲ ವ್ಯವಸ್ಥೆಗಳ ಕುರಿತು ಕೂಲಂಕಷವಾಗಿ ವಿವರಿಸಿ ಎಲ್ಲಿಯೂ ಲೋಪವಾಗದಂತೆ ನೋಡಿಕೊಂಡರು. ಸಾಹಿತಿಗಳು, ಗೋಷ್ಠಿಗಳ ಆಹ್ವಾನಿತರು, ಪ್ರತಿನಿಧಿಗಳು, ಆಡಳಿತ ಮಂಡಳಿ ಸದಸ್ಯರು, ಆಕಾಶವಾಣಿ ಮತ್ತು ಪತ್ರಿಕಾ ಮಾಧ್ಯಮದವರು, ಕಲಾತಂಡಗಳು, ಪುಸ್ತಕ ಮಳಿಗೆಗಳು, ಸಿಬ್ಬಂದಿಗಳು ಹೀಗೆ ಎಲ್ಲರಿಗೆ ಬ್ಯಾಡ್ಜ್, ಊಟ, ವಸತಿ ವ್ಯವಸ್ಥೆಮಾಡುವಲ್ಲಿ ಶ್ರಮಿಸಿ, ಸಹಕರಿಸಿದರು. ಸಮ್ಮೇಳನದ ವೇದಿಕೆಯ ಎದುರು ನೆಲವನ್ನು ಐದು-ಆರು ಅಡಿ ತಗ್ಗಿಸಿ, ಅಲ್ಲಿ ಫೊಟೋಗ್ರಾಫರ್‌ಗಳಿಗೆ, ಮಾಧ್ಯಮ ಪ್ರತಿನಿಧಿಗಳಿಗೆ ಸ್ಥಳಾವಕಾಶ ಕಲ್ಪಿಸಿ, ವೇದಿಕೆ ಕಾರ್ಯಕ್ರಮಗಳ ವೀಕ್ಷಣೆಗೆ, ಪ್ರೇಕ್ಷಕರಿಗೆ ಅಡೆತಡೆಯಾಗದಂತೆ ಏರ್ಪಾಟು ಮಾಡಿದ ವ್ಯವಸ್ಥೆ ಬಹಳ ಪ್ರಶಂಸೆಗೆ ಪಾತ್ರವಾಯಿತು. ಗೋಷ್ಠಿಗಳ ವಿಷಯ ಸೂಚಿಸುವ ಬ್ಯಾನರ್‌ಗಳನ್ನು ಮೊದಲೇ ಬರೆಯಿಸಿ, ಆಯಾ ಗೋಷ್ಠಿಗಳು ನಡೆಯುವಾಗ ಅವುಗಳನ್ನು ಹಿನ್ನೆಲೆಯಲ್ಲಿ ಅಳವಡಿಸಿದ ಕ್ರಮ ಮತ್ತು ಪೆಂಡಾಲ್‌ನ ಪ್ರವೇಶ ದ್ವಾರದ ಇಕ್ಕೆಲಗಳಲ್ಲಿ ಅಂದಿನ ಗೋಷ್ಠಿಗಳ ಹಾಗೂ ಮಾರನೇದಿನದ ಗೋಷ್ಠಿಗಳ ವಿವರ ಹಾಗೂ ಹಿಂದಿನ ದಿನದ ಕಾರ್ಯಕ್ರಮಗಳ ಫೋಟೊಗಳನ್ನು ಮಾರನೇ ದಿನವೇ ಪ್ರದರ್ಶಿಸಿದ ರೀತಿಯನ್ನು ಬಹುಮಂದಿ ಕೊಂಡಾಡಿದರು. ಸಮ್ಮೇಳನಕ್ಕೆ ನೀರು ಪೂರೈಸಲು ಹತ್ತಿರದ ನೇತ್ರಾವತಿ ಹೊಳೆಯಿಂದ ಪೈಪು ಅಳವಡಿಸುತ್ತಾ ಬರಲಾಗಿತ್ತು. ಅದು ಸಮ್ಮೇಳನದ ವೇದಿಕೆಯ ಕೆಳಭಾಗದಿಂದಲೇ ಹೋಗಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ವೇದಿಕೆ ನಿರ್ಮಾಣ ಕೆಲಸ ಮುಕ್ತಾಯದ ಹಂತದಲ್ಲಿತ್ತು. ಸಮ್ಮೇಳನಕ್ಕೆ ಒಂದೇ ದಿನ ಬಾಕಿ ಇತ್ತು. ಪೈಪು ಸಾಗುವ ಸ್ಥಳದ ವೇದಿಕೆಯ ಭಾಗವನ್ನು ತೆರವುಗೊಳಿಸಿ, ಅದರ ಕೆಲಸ ಮುಗಿದ ಮೇಲೆ ಪುನಃ ಸ್ಟೇಜು ಪೂರ್ಣಗೊಳಿಸಲು ರಾತ್ರಿಯಿಡೀ ನಿದ್ದೆಗೆಟ್ಟು, ಹೆಗ್ಗಡೆಯವರ ಜೊತೆ ಸ್ಥಳದಲ್ಲೇ ನಿಂತು ಪ್ರೊ. ಅಶ್ವತ್ಥನಾರಾಯಣ ಅವರೂ ಮೇಲ್ವಿಚಾರಣೆ ನಡೆಸಿದರು. ಕಾರ್ಯಕ್ರಮಗಳ ಯಶಸ್ಸಿಗಾಗಿ ತೆರೆಯ ಹಿನ್ನೆಲೆಯಲ್ಲಿ ಪ್ರೊ. ಅಶ್ವತ್ಥನಾರಾಯಣ ಅವರು ಶ್ರಮಿಸಿದ ಇಂತಹ ಅದೆಷ್ಟೋ ಸಂದರ್ಭಗಳು ಬಹುಶಃ ಅವರಿಗೂ ನೆನಪಿರಲಿಕ್ಕಿಲ್ಲ! ಧರ್ಮಸ್ಥಳ ಸಮ್ಮೇಳನವು ಎಲ್ಲಿಯೂ ಏನೂ ಲೋಪವಿಲ್ಲದೆ, ವ್ಯವಸ್ಥಿತವಾಗಿ, ಯಶಸ್ವಿಯಾಗಿ ನಡೆದ 'ಆದರ್ಶ ಸಮ್ಮೇಳನ' ಎಂದು, ಮಾಧ್ಯಮದವರನ್ನೂ ಒಳಗೊಂಡಂತೆ ಎಲ್ಲರೂ ಮುಕ್ತಕಂಠದಿಂದ ಹೊಗಳಿದರು.

ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕರ್ತವ್ಯದಲ್ಲಿದ್ದ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ಬೆಂಗಳೂರಿನಿಂದ ಏಕಾಏಕಿ ಹಾಸನಕ್ಕೆ ವರ್ಗವಾಯಿತು. ಸೇವಾಸಂಸ್ಥೆಯಾದ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿರುವ ಕಾರಣ, ವರ್ಗಾವಣೆಯನ್ನು ರದ್ದುಗೊಳಿಸಿ, ಕನ್ನಡದ ಸೇವೆಯನ್ನು ಮುಂದುವರಿಸಲು ಅನುವು ಮಾಡಿಕೊಡುವ ಅವಕಾಶವಿತ್ತು. ಆದರೆ ಅಧ್ಯಕ್ಷರಿಂದ ಸೂಕ್ತ ಸ್ಪಂದನೆ ಸಿಗಲಿಲ್ಲ. ನೈಜವಲ್ಲದ ಅವರ ಪ್ರತಿಕ್ರಿಯೆಯ ಹಿಂದಿನ ಮರ್ಮ ಇವರಿಗೆ ಅರ್ಥವಾಗಿ ಹೋಯಿತು. ನೋವು, ನಿರಾಶೆಯಿಂದ ಕಾರ್ಯದರ್ಶಿ ಸ್ಥಾನ ತ್ಯಜಿಸಿ ಹೊರಬಂದರು. ದಿನಾಂಕ ೨೬-೦೭-೧೯೭೮ ರಿಂದ ೧೬-೦೯-೧೯೭೯ ರ ವರೆಗಿನ ಸುಮಾರು ೧೪ ತಿಂಗಳ ಅವಧಿಯ ಇವರ ಪರಿಷತ್ತಿನ ಸೇವೆ ಸ್ಮರಣೀಯವಾಗಿದೆ.

ಕರ್ನಾಟಕ ಸರ್ಕಾರವು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ತನ್ನ ನೌಕರರಿಗೆ ಆಡಳಿತ ಕನ್ನಡ ತರಬೇತಿ ಶಿಬಿರಗಳನ್ನು ನಡೆಸುತ್ತಿದೆ. ಐದು ದಿನಗಳ ಆ ಶಿಬಿರದ ಪಠ್ಯಾವಳಿಯನ್ನು ಪ್ರೊ. ಜಿ. ಅಶ್ವತ್ಥನಾರಾಯಣ ಅವರು, ಡಾ. ಪ್ರಧಾನ ಗುರುದತ್ತ ಅವರೊಡನೆ ಸೇರಿ ರೂಪಿಸಿದ್ದಲ್ಲದೇ ಪ್ರಾರಂಭದಿಂದ ಹಲವು ವರ್ಷಗಳಕಾಲ ಶಿಬಿರ ನಿರ್ದೇಶಕರಾಗಿ, ಬೋಧಕರಾಗಿ ಕಾರ್ಯ ನಿರ್ವಹಿಸಿದರು.

ಪ್ರಖ್ಯಾತ ಸಾಹಿತಿ ಶ್ರೀ ದೇವುಡು ನರಸಿಂಹ ಶಾಸ್ತ್ರಿಯವರ ಸಾಧನೆ, ಸಾಹಿತ್ಯ ಪ್ರಸಾರಕ್ಕಾಗಿ ಇರುವ, 'ದೇವುಡು ಪ್ರತಿಷ್ಠಾನ'ದ ಸ್ಥಾಪಕ ಸದಸ್ಯರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ದೇವುಡು ಶತಮಾನೋತ್ಸವ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಂಘಟಿಸಿ, ಪೂರೈಸಿದ್ದಾರೆ.

ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ, ವಿದ್ಯಾರ್ಥಿಗಳಿಗಾಗಿ ಆಕಾಶವಾಣಿ ಕೇಂದ್ರದಿಂದ ಪ್ರಸಾರವಾದ 'ಜ್ಞಾನವಾಣಿ' (ಜ್ಞಾನ ಜ್ಯೋತಿ) ಶೀರ್ಷಿಕೆಯ, 'ಕನ್ನಡ ಸಾಹಿತ್ಯದ ಕಣ್ಮಣಿಗಳು' ಎಂಬ ವಿಷಯದ ಕುರಿತು ೫೦ ದಿನ ೫೦ ಸಾಧಕರ ಬಗೆಗೆ ಸರಣಿ ಉಪನ್ಯಾಸಗಳನ್ನು ನೀಡಿರುವುದು ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಜ್ಞಾನ ಸಂಪತ್ತಿಗೆ ಸಾಕ್ಷಿಯಾಗಿದೆ.

ಪುಸ್ತಕಗಳನ್ನು ಅಪಾರವಾಗಿ ಪ್ರೀತಿಸುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಬಳಿ ಸುಮಾರು ಇಪ್ಪತ್ತು ಸಾವಿರಕ್ಕೂ ಮಿಕ್ಕು ಮೌಲಿಕ ಗ್ರಂಥಗಳಿವೆ. ವ್ಯವಸ್ಥಿತವಾದ ಗ್ರಂಥ ಭಂಡಾರವೇ ಇವರ ನಿವಾಸದಲ್ಲಿದೆ. ಪ್ರತೀ ಪುಸ್ತಕವನ್ನೂ ಓದಿ ಟಿಪ್ಪಣಿ ಮಾಡಿಟ್ಟುಕೊಂಡು, ಬೇಕಾದಾಗ ಬಳಸಿಕೊಳ್ಳುವ ಇವರ ರೀತಿ ಅನುಕರಣೀಯವಾಗಿದೆ.

ಉದ್ಘಾಟನೆಗಾಗಿ, ಉಪನ್ಯಾಸಕ್ಕಾಗಿ, ಅಧ್ಯಕ್ಷತೆಗಾಗಿ, ಪ್ರಶಸ್ತಿ ಸ್ವೀಕಾರಕ್ಕಾಗಿ – ಹೀಗೆ ವಿವಿಧ ಕಾರಣಕ್ಕೆ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆಹ್ವಾನಗಳು ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ಸದಾ ಬರುತ್ತಿರುತ್ತವೆ. ಒಮ್ಮೆ ಒಪ್ಪಿಕೊಂಡ ಸಮಾರಂಭಕ್ಕೆ ಯಾವತ್ತೂ ತಪ್ಪಿಸಿದ್ದಿಲ್ಲ. ಸಮಯ ಪಾಲನೆ ಇವರಿಗೆ ರಕ್ತಗತವಾಗಿದೆ. ಯಾವುದೇ ಕಾರ್ಯಕ್ರಮಕ್ಕೆ ನಿಗದಿತ ವೇಳೆಗಿಂತ ಹತ್ತು ನಿಮಿಷ ಮುಂಚೆಯೇ ಆ ಸ್ಥಳದಲ್ಲಿರುತ್ತಾರೆ. ಬೆಂಗಳೂರಿನ ಎಸ್. ಜೆ. ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಓದುತ್ತಿದ್ದಾಗ, ಆಗಾಗ ಅಲ್ಲಿಗೆ ಬರುತ್ತಿದ್ದ, ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರೊಡನೆ ಸಂಭಾಷಿಸುವಾಗ, ಅವರಿಂದ ಸಿಕ್ಕ ಸಲಹೆ ಮತ್ತು ಸ್ವತಃ ವಿಶ್ವೇಶ್ವರಯ್ಯನವರ ಸಮಯಪಾಲನೆಯ ಗುಣ ತನ್ನ ಮೇಲೆ ಅಗಾಧ ಪ್ರಭಾವ ಬೀರಿತು ಎಂದು ವಿನಮ್ರವಾಗಿ ನೆನೆಯುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯುತ್ತಿದ್ದ ಗಮಕಕಲಾ ತರಗತಿಗಳು ೧೯೭೦ ರ ಸುಮಾರಿಗೆ ಕಾರಣಾಂತರಗಳಿಂದ ಸ್ಥಗಿತವಾದ ಕಾರಣ ಗಮಕಿ ಶ್ರೀ ಎಂ. ರಾಘವೇಂದ್ರರಾಯರಾದಿಯಾಗಿ ನಾಡಿನ ಪ್ರಸಿದ್ಧ ಗಮಕ ವಿದ್ವಾಂಸರು ಚಿಂತೆಗೊಳಗಾದರು. ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಶ್ರೀ ರಾಘವೇಂದ್ರ ರಾಯರನ್ನು ಭೇಟಿ ಮಾಡಿ ಗಮಕಕಲೆಯ ತರಗತಿ ಮತ್ತು ಪ್ರಸಾರಕ್ಕಾಗಿ ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸಲು ಸಲಹೆಯನ್ನು ಇತ್ತರು. ಅದರ ರೂಪರೇಷೆಗಳನ್ನು, ನಿಯಮಗಳನ್ನು, ತರಗತಿಗಳ ಪಠ್ಯಾವಳಿಯನ್ನು ಸಿದ್ಧಪಡಿಸಿಕೊಟ್ಟರು. ತತ್ಫಲವಾಗಿ 'ಗಮಕ ಕಲಾ ಪರಿಷತ್ತು' ಉದಯಿಸಿತು. ಗಮಕಿ ಶ್ರೀ ಎಂ. ರಾಘವೇಂದ್ರ ರಾಯರು ಮೊದಲ ವ್ಯವಸ್ಥಾಪಕರು, ಜಿ. ನಾರಾಯಣ ಅವರು ಪ್ರಥಮ ಅಧ್ಯಕ್ಷರಾದರು. ಇಂದಿಗೂ ಅದು ನಡೆದುಕೊಂಡು ಬರುತ್ತಿದೆ.

ಸುಮಾರು ಐವತ್ತಕ್ಕೂ ಮಿಕ್ಕು ಪುಸ್ತಕಗಳನ್ನು ರಚಿಸಿರುವ, ನೂರಾರು ವಿದ್ವತ್ ಲೇಖನಗಳನ್ನು ಬರೆದಿರುವ, ಸಾವಿರಾರು ಉಪನ್ಯಾಸಗಳನ್ನು ನೀಡಿರುವ, ಕನ್ನಡ ನಾಡು ನುಡಿಯ ಬಗೆಗೆ ಅಧಿಕಾರಯುತವಾಗಿ ಮಾತನಾಡಬಲ್ಲ ಗುರುಸಮಾನರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಅನುಪಮ ಕನ್ನಡದ ಸೇವೆ, ಸಾಧನೆಯನ್ನು ಕನ್ನಡ ನಾಡು ಸರಿಯಾಗಿ ಗುರುತಿಸಿಲ್ಲ, ಅವರಿಗೆ ಸಲ್ಲಲೇಬೇಕಾಗಿದ್ದ ಹಲವಾರು ಪ್ರತಿಷ್ಠಿತ ಗೌರವ, ಮನ್ನಣೆಗಳು ಇನ್ನೂ ದೊರೆತಿಲ್ಲ ಎಂಬ ಕೊರಗು ನನ್ನಂತಹ ಅನೇಕ ಅಭಿಮಾನಿಗಳಲ್ಲಿ ಹಾಗೆಯೇ ಉಳಿದಿವೆ.

*****

ಅಂತರಂಗಮಿತ್ರ ಅನಾಜಿ

ಡಾ. ಅನಂತಪದ್ಮನಾಭರಾವ್
ಚರವಾಣಿ : ೯೪೪೯೩೮೦೯೧೫

'ಅನಾಜಿ' ಅಂದಕೂಡಲೇ ಮನಸ್ಸಿಗೆ ಬರುವ ಚಿತ್ರ ಹೀಗಿದೆ. ಸಡಿಲವಾದ ದೊಗಲೆ ಪ್ಯಾಂಟು, ಅರ್ಧತೋಳಿನ ಅಂಗಿ, ಹೆಗಲಿಗೆ ಒಂದು ಬ್ಯಾಗು, ಬ್ಯಾಗಿನಲ್ಲಿ ಹಳೆಯ ಪುಸ್ತಕಗಳು, ಬೈತಲೆ ತೆಗೆದು ಬಾಚಿದ ತಲೆ, ಪಂಪ ಕವಿ ಹೇಳುವಂತೆ 'ಮೃದು ಕುಟಿಲಶಿರೋರುಹಂ' ಮೂಗಿನ ಕೆಳಗೆ ಪೊದೆ ಮೀಸೆ ಎದ್ದು ಕಾಣುತ್ತವೆ ಈಗೀಗ ಧವಳಕೇಶಿಯೂ ಆಗಿದ್ದಾರೆ.

'ಅನಾಜಿ' ಅವರ ಪತ್ನಿ ಲಕ್ಷ್ಮೀದೇವಿ ಅವರು ನನಗೆ ಅವರ ಮದುವೆಗೆ ಮುಂಚಿನಿಂದಲೂ ಪರಿಚಿತರು. ಜಯನಗರದ ೧೧ನೇ ಮುಖ್ಯ ರಸ್ತೆಯಲ್ಲಿ ಇದ್ದರು. ನಮ್ಮ ಮನೆಯೂ ಅದೇ ರಸ್ತೆಯಲ್ಲಿತ್ತು. ಆಕೆ ತುಂಬಾ ಉತ್ತಮ ಉಪನ್ಯಾಸಕರೆಂದು ನನಗೆ ಕೊರಟಿ ಶ್ರೀನಿವಾಸರಾಯರು ಹೇಳಿದ್ದರು. ಅವರ ಉಪನ್ಯಾಸವನ್ನು 'ಕನ್ನಡಿಗರ ಕೂಟ'ದಲ್ಲಿ ನಾನೇ ವ್ಯವಸ್ಥೆಮಾಡಿದ್ದೆ. 'ರಾಮಾಯಣ ದರ್ಶನಂ' ಮಹಾ ಕಾವ್ಯವನ್ನು ಪುಟಗಟ್ಟಲೆ ಕಂಠಸ್ಥವಾಗಿಸಿಕೊಂಡಿದ್ದರು. ಲೇಖಕಿಯರ ಸಂಘದಲ್ಲೂ ಅವರ ಉಪನ್ಯಾಸವನ್ನು ಏರ್ಪಡಿಸಿದ್ದೆ. ನಮ್ಮ ಕಾಲೇಜಿನಲ್ಲಿಯೂ ಆನರ್ಸ್ ವಿದ್ಯಾರ್ಥಿಗಳಿಗೆ ಅವರಿಂದ ಉಪನ್ಯಾಸ ಮಾಡಿಸಬೇಕೆಂಬ ಅಪೇಕ್ಷೆಯಿತ್ತು.

ವಿಜಯಾ ಕಾಲೇಜಿನ ಆನರ್ಸ್ ವಿದ್ಯಾರ್ಥಿಗಳಿಗೆ ಪ್ರತಿ ಶನಿವಾರ ವಿಶೇಷ ಉಪನ್ಯಾಸವನ್ನು ಏರ್ಪಡಿಸುವ ಯೋಜನೆಯನ್ನು ಪ್ರೊ. ಜಿ.ವಿ. ಯೋಜಿಸಿದ್ದರು. ಪಂಪಭಾರತವನ್ನು ಕುರಿತು ಸಾ.ಶಿ. ಮರುಳಯ್ಯ ಗದಾಯುದ್ಧದ ಬಗ್ಗೆ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಕುಮಾರವ್ಯಾಸನ ಬಗ್ಗೆ ಅ.ರಾ.ಮಿತ್ರ ಬೇಂದ್ರೆಯವರನ್ನು ಕುರಿತು ಆರ್.ಜಿ. ಕುಲಕರ್ಣಿ ರಾಮಾಯಣದರ್ಶನವನ್ನು ಕುರಿತು ಲಕ್ಷ್ಮೀದೇವಿ ಅವರು ಉಪನ್ಯಾಸ ನೀಡಿದ್ದು ನೆನಪಿದೆ.

ಅನಾಜಿ ಮತ್ತು ಲಕ್ಷ್ಮೀದೇವಿಯವರ ಪುತ್ರಿ 'ಕ್ಷಮಾ' ನಮ್ಮ ಕಾಲೇಜಿನ ವಿದ್ಯಾರ್ಥಿನಿ. ಆಕೆ ನಮ್ಮ ಕಾಲೇಜಿಗೆ ಬಂದ ಮೇಲೆ ನನ್ನ ಮತ್ತು 'ಅನಾಜಿ' ಅವರ ಒಡನಾಟ ಹೆಚ್ಚಾಯಿತು. ನನಗೆ ಪಿ.ಎಚ್.ಡಿ.ಗೆ ಅಗತ್ಯವಾದ ಪುಸ್ತಕಗಳನ್ನು ಒದಗಿಸಿದರು. ಅವರ ಸಹಾಯವಿಲ್ಲದಿದ್ದರೆ ಗುರುರಾಮವಿಠಲ ದಾಸರ ತಂದೆ ಪುರಂದರವಿಠಲರು ಮತ್ತು ಗುರುತಂದೆ ಪುರಂದರವಿಠಲರಂತಹ ಅಜ್ಞಾತ ಕವಿಗಳು ದಾಸರು ಬೆಳಕಿಗೆ ಬರುವ ಸಾಧ್ಯತೆಯೇ ಇರಲಿಲ್ಲ.

ಶ್ರೀಮತಿ ಡಾ. ಶಾಂತಾನಾಗರಾಜ್ ಅವರ ಮನೆಯಲ್ಲಿ ಗಂಟೆಗಟ್ಟಲೆ ದಾಸಸಾಹಿತ್ಯದ ಕೈ ಬರಹದ ಪುಸ್ತಕಗಳು ಇವೆಯೆಂದು ತಿಳಿದುಬಂತು.

ಈ ವಿಷಯವನ್ನು ತಿಳಿಸಿದವರು ಶ್ರೀಮತಿ ಎಚ್.ಎಸ್. ಪಾರ್ವತಿ ಅವರು. ಶ್ರೀ ನಾಗರಾಜ್ ಅವರು ನನ್ನ ಗೆಳೆಯ ಮೇಜರ್ ಶ್ರೀನಿವಾಸಮೂರ್ತಿ ಅವರ ಸ್ನೇಹಿತರು. ಶ್ರೀಮತಿ ಶಾಂತಾಮೇಡಂ

ಅವರ ತಂದೆ ಸ್ವತಃ ಹರಿದಾಸರೆಂದು 'ನಿತ್ಯಾನಂದವಿಠಲ' ಅವರ ಅಂಕಿತವೆಂದು ತಿಳಿದುಬಂತು. ನಾನು ಮತ್ತು 'ಅನಾಜಿ' ಅವರು ಶ್ರೀಮತಿ ಶಾಂತಾರವರ ಮನೆಗೆ ದಾಳಿ ಮಾಡಿದ್ದೆವು. ಇದ್ದ ಎಲ್ಲಾ ಪುಸ್ತಕಗಳನ್ನು ತೆಗೆದುಕೊಂಡು ಬಂದೆವು. ಅಜ್ಞಾತ ಕವಯಿತ್ರಿಯಾಗಿದ್ದ ಅಂಬಾಬಾಯಿ ಅವರ ಕೀರ್ತನ ಸಂಪುಟವನ್ನು 'ಶ್ರೀರಾಮಕಥಾಮೃತ' ಎಂಬ ಮಹಾಕಾವ್ಯವನ್ನು ಸಂಪಾದಿಸಲು ಸಾಧ್ಯವಾಯಿತು.

ಕನ್ನಡ ಸಾಹಿತ್ಯ ಪರಿಚಾರಕರಲ್ಲಿ 'ಅನಾಜಿ' ಅವರು ಅಗ್ರ ಸ್ಥಾನದಲ್ಲಿದ್ದಾರೆ. ಯಾವುದೇ ಕನ್ನಡದ ಸಭೆ, ಸಮಾರಂಭ, ಉಪನ್ಯಾಸ, ಪುಸ್ತಕ ಬಿಡುಗಡೆ ಇಂಥ ಸ್ಥಳಗಳಲ್ಲಿ 'ಅನಾಜಿ' ಅವರು ಸಭೆಗೆ ಮುನ್ನವೇ ಬಂದು ಆಸೀನರಾಗಿರುತ್ತಾರೆ. ಕೈಲಿ ಹಿಡಿದ ಒಂದು ಡೈರಿಯಲ್ಲಿ ದಿನಾಂಕ, ಉಪನ್ಯಾಸದ ವಿಷಯ, ಉಪನ್ಯಾಸಕರ ವಿಳಾಸ, ಭಾಷಣದಲ್ಲಿ ಮಾಡಿದ ತಪ್ಪು ಒಪ್ಪುಗಳು ಅವರ ಡೈರಿಯಲ್ಲಿ ದಾಖಲಾಗಿರುತ್ತವೆ. ಅವರ ಡೈರಿ ಒಂದು ಅಪೂರ್ವ ದಾಖಲೆಗಳ ಸಂಗ್ರಹ.

ನನ್ನ ಮತ್ತು 'ಅನಾಜಿ'ಅವರ ಪರಿಚಯ ೫೦ ವರ್ಷಗಳಷ್ಟು ಹಳೆಯದು. 'ಅನಾಜಿ' ಅವರನ್ನು ನನಗೆ ಪರಿಚಯಿಸಿದವರು ಶ್ರೀ ನಾ.ಕೃ. ಸತ್ಯನಾರಾಯಣ ಅವರು ಆ ಕಾಲದ ಪ್ರಸಿದ್ಧ ನಾಟಕಕಾರರು. ಅವರು ಕನ್ನಡ ಚಳುವಳಿಯ ಪ್ರಾರಂಭ ಕಾಲದ ಕಾರ್ಯಕರ್ತರು. ನಾ.ಕೃ.ಸ. ಎಂದೇ ಪ್ರಸಿದ್ಧರು. ಅವರ 'ಕನ್ನಡವೇ ದೇವರು' ನಾಟಕ ಆ ಕಾಲದಲ್ಲಿಯೇ ನೂರಕ್ಕೂ ಹೆಚ್ಚು ದರ್ಶನಗಳನ್ನು ಕಂಡಿತ್ತು. 'ವಿಪ್ಲವ' ಅವರ ಇನ್ನೊಂದು ನಾಟಕ.

'ನೆತ್ತಮನಾಡಿಭಾನುಮತಿಸೊಲ್ಲೊಡೆ' ಅವರ ಇನ್ನೊಂದು ಪ್ರಸಿದ್ಧ ನಾಟಕ. ಇವೆಲ್ಲವೂ 'ಅನಾಜಿ' ಅವರ ಮಾರ್ಗದರ್ಶನದಲ್ಲಿಯೇ ಸಿದ್ಧವಾದ ನಾಟಕಗಳು. 'ಕನ್ನಡ ಎಂದರೆ ಎನ್ನಡ' ಎಂದು ಕೇಳುವ ಪರಿಸ್ಥಿತಿ. ಇದ್ದ ಕುಲದಲ್ಲಿ ಕನ್ನಡದ ಪರಿಚಾರಿಕೆಗೆ ತಮ್ಮನ್ನು ತೊಡಗಿಸಿಕೊಂಡವರು 'ಅನಾಜಿ' ಅವರು. ಇವರ ಜೊತೆಗೆ ಸೈಕಲ್ ಸುಬ್ಬರಾಯರು, ಕೇಶವರಾಯರು ಆರ್.ಎಚ್. ರಾಜು ಮತ್ತು ಗುಂಡೂರಾಯರು ಪ್ರಮುಖರು. 'ಕನ್ನಡಿಗರ ಕೂಟ'ದ ಕ.ರಾ. ಮೋಹನ್, ನಾಗೇಂದ್ರ, ಡಿ. ಲಿಂಗಯ್ಯ ಮತ್ತು ಅನೇಕ ತರುಣರು ಇವರ ಜೊತೆಗೆ ಸೇರಿಕೊಂಡವರು.

ಸೈಕಲ್ ಸುಬ್ಬರಾಯರು ಕನ್ನಡದ ಕೆಲಸವೆಂದರೆ ಎಲ್ಲಿಂದ ಎಲ್ಲಿಗೆ ಬೇಕಾದರೂ ಸೈಕಲಿನಲ್ಲಿಯೇ ಹೋಗುತ್ತಿದ್ದರು. ಕುಮಾರವ್ಯಾಸ ಇವರ ನೆಚ್ಚಿನ ಕವಿ. ಸಾಹಿತ್ಯ ಪರಿಷತ್ತಿನ ಎದುರಿನಲ್ಲಿ ಇದ್ದ ಸಂಸ್ಕೃತ ಕಾಲೇಜಿನಲ್ಲಿ ಪ್ರತಿ ಭಾನುವಾರ ಕುಮಾರವ್ಯಾಸ ಭಾರತದ ಪಾತ್ರಗಳ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಉಪನ್ಯಾಸಕರ ಆಯ್ಕೆ 'ಅನಾಜಿ' ಅವರದೇ. ೨೦-೩೦ ಮಂದಿ ಆಸಕ್ತರು ಸಭೆಗೆ ಬರುತ್ತಿದ್ದರು. 'ಅನಾಜಿ' ನನಗೆ ನೀಡಿದ ವಿಷಯ 'ಕುಮಾರವ್ಯಾಸ ಭಾರತದ ಕೃಷ್ಣ' ಓದಿಗೆ, ಸಿದ್ಧತೆಗೆ ಒಂದು ತಿಂಗಳ ಕಾಲಾವಕಾಶವಿತ್ತು. ಹಗಲು-ರಾತ್ರಿ ಕುಳಿತು ಪ್ರಬಂಧವನ್ನು ಸಿದ್ಧಪಡಿಸಿದೆ. ಹಲವಾರು ಪದ್ಯಗಳು ಕಂಠಸ್ಥವಾದವು. 'ಕರ್ನಾಟ ಕಥಾಮಂಜರಿ'ಯ ಬೆಲೆ ಆಗ ಎರಡು ರೂಪಾಯಿಗಳು. ಅಗ ಬಿ.ಎ. ರಂಗನಾಥ ಕೊಟ್ಟ ಪುಸ್ತಕ ಈಗಲೂ ನನ್ನ ಬಳಿಯಿದೆ.

ನನ್ನ ಉಪನ್ಯಾಸದ ದಿನ ಬಂದೇ ಬಂತು. 'ಅನಾಜಿ' ಅವರ ಉಪಸ್ಥಿತಿಯಲ್ಲಿ ಶ್ರೀ ಕೆಂಗಲ್ ಹನುಮಂತಯ್ಯನವರ ಅಧ್ಯಕ್ಷತೆ. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದ ಮಾತು ಈಗಲೂ ನೆನಪಿದೆ.

'ಬೇರು ನೀರುಂಡಾಗ ತಣಿಯದೇ ಭೂರುಹದ ಶಾಖೋಪಶಾಖೆಗಳು'
ಶ್ರೀರಮಣ ಸಂತುಷ್ಟನಾದರೆ ಬೇರೆ ಭೋಜನ ಬೇಹುದೆ

ಆದಿನ ನನಗಿಂತ ಖುಷಿ ಪಟ್ಟವರು 'ಅನಾಜಿ' ಅವರು.

ಕೇಶವರಾಯರದು ಮತ್ತೊಂದು ರೀತಿಯ ಕನ್ನಡ ಪರಿಚಾರಿಕೆ. ಕನ್ನಡ ಬಾರದವರಿಗೆ ಕನ್ನಡ ತರಗತಿಗಳನ್ನು ನಡೆಸುವ ಕಾಯಕ. ಚಾಮರಾಜಪೇಟೆಯಲ್ಲಿ ಪ್ರಸಿದ್ಧವಾಗಿದ್ದ ಅಶೋಕ ಶಿಶುವಿಹಾರದಲ್ಲಿ ತರಗತಿಗಳು ನಡೆಯುತ್ತಿದ್ದವು. 'ಅನಾಜಿ' ಮತ್ತು ಶ್ರೀಮತಿ ಬನಶಂಕರಮ್ಮ ಅವರು ಮಾರ್ಗದರ್ಶಕರು, ಬಾಹ್ಯ ವಿದ್ಯಾರ್ಥಿಗಳು ಕನ್ನಡ ಎಂ.ಎ. ಮಾಡುವ ಅವಕಾಶವನ್ನು ೧೯೭೫ ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಕಲ್ಪಿಸಿದ್ದು ಬಿ.ಎ. ಮಾಡಿದ ಅನೇಕ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಎಂ.ಎ. ಮಾಡುವ ಆಸೆ. ಆದರೆ ಪಾಠ ಮಾಡುವವರೇ ಇರಲಿಲ್ಲ. 'ಅನಾಜಿ'ಅವರ ಮಾರ್ಗದರ್ಶನದಲ್ಲಿ ಕೇಶವರಾಯರು ಅಶೋಕ ಶಿಶುವಿಹಾರದಲ್ಲಿ ಸಂಜೆ ತರಗತಿಗಳನ್ನು ಪ್ರಾರಂಭ ಮಾಡಿ ಅಧ್ಯಾಪಕರನ್ನೂ ಕಲೆಹಾಕಿದರು.

ಪಂಪಭಾರತ ಹರಿಶ್ಚಂದ್ರಕಾವ್ಯ 'ಅನಾಜಿ' ಅವರದು. ಕಾವ್ಯಮೀಮಾಂಸೆ–ಡಾ.ಪಿ.ವಿ.ನಾರಾಯಣ ಶಾಸನಶಾಸ್ತ್ರ ಗಣೇಶ್.ಕೆ.ಆರ್., ಟಿ.ವೆಂಕಟೇಶಮೂರ್ತಿ ಇಂಗ್ಲೀಷ್ ಕೃತಿಗಳು–ಅವರು ಟ್ರಾಜಿಡಿ ಮೇಷ್ಟ್ರು ಎಂದೇ ಪ್ರಸಿದ್ಧರಾಗಿದ್ದರು. ಛಂದಸ್ಸಿನ ಪಾಠವನ್ನು ನಾನು ಮಾಡುತ್ತಿದ್ದೆ. ವಾರದಲ್ಲಿ ಆರುದಿನ ತರಗತಿಗಳು ನಡೆಯುತ್ತಿದ್ದವು. ಅನೇಕಮಂದಿ ಈ ಮೂಲಕ ಎಂ.ಎ. ತರಗತಿಗಳಲ್ಲಿ ಉತ್ತೀರ್ಣರಾದರು. ಅನೇಕರ ಹೆಸರುಗಳು ಕೂಡ ನನಗೆ ನೆನಪಿದೆ.

೫೦ ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯದಲ್ಲಿ ಸರ್ಕಾರ ಪ್ರಕಟಿಸಿದ ದಾಸಸಾಹಿತ್ಯದ ಅನಾಜಿ ನಾನು ಮತ್ತು ಡಾ. ಗೀತಾಚಾರ್ಯರನ್ನು ಇಲಾಖೆ ನೇಮಿಸಿತು. ಸಂಚಾಲಕರಾಗಿ ರವಿಶಂಕರ್ ಎಂದು ಅಧಿಕಾರಿ ಸರ್ಕಾರದ ಪ್ರತಿನಿಧಿಯಾಗಿದ್ದರು. ಪ್ರತಿ ಗುರುವಾರ ೩ ಘಂಟೆಗೆ ನಮ್ಮ ಕಾಲೇಜಿನ ಗ್ರಂಥಾಲಯದಲ್ಲಿ ಸಭೆ ಸೇರುತ್ತಿತ್ತು. ರವಿಶಂಕರ್ ಅವರು ಬರುವಾಗ ನಾಲ್ಕು ಕರಡಚ್ಚು ಪ್ರತಿಗಳನ್ನು ತರುತ್ತಿದ್ದರು. ಮುಂದಿನ ಸಭೆಗೆ ಬರುವಾಗ ಒಬ್ಬೊಬ್ಬರು ಒಂದೊಂದು ಕರಡಚ್ಚನ್ನು ತಿದ್ದಿ, ಪರಿಷ್ಕರಿಸಿ ತರಬೇಕೆಂದು ನಿರ್ಧಾರವಾಯಿತು. ಮುಂದಿನ ಗುರುವಾರ ಹಳೆಯ ಕರಡಚ್ಚನ್ನು ಕುರಿತು ಚರ್ಚಿಸಿ ಹೊಸ ಕರಡಚ್ಚುಗಳನ್ನು ಒಡೆಯುತ್ತಿದ್ದೆವು.

ಅಂದಂದಿನ 'ಬಟವಾಡೆ' ಅಂದೇ ನೀಡುತ್ತಿದ್ದುದು ರವಿಶಂಕರ್ ಅವರ ಅಚ್ಚಕಟ್ಟುತನ. ಮೂರುನಾಲ್ಕು ತಿಂಗಳಲ್ಲಿ ೫೦ ಗ್ರಂಥಗಳು ಪರಿಷ್ಕಾರಗೊಂಡು ಮುದ್ರಣಕ್ಕೆ ಸಿದ್ಧವಾಯಿತು. ಇದರಲ್ಲಿ 'ಅನಾಜಿ' ಅವರದೇ ಸಿಂಹಪಾಲು. ಗೆಳೆಯ ಗೀತಾಚಾರ್ಯರ ಸಹಕಾರವನ್ನೂ ಮರೆಯುವಂತಿಲ್ಲ. ಈ ಸಂಪುಟಗಳು ಈಗ ಪುನರ್ ಮುದ್ರಣವಾಗುತ್ತಿದೆ.

ಹೀಗೆ ಸ್ನೇಹಿತರಾಗಿ, ಪರೋಕ್ಷ ಗುರುಗಳಾಗಿ, ಮಾರ್ಗದರ್ಶಕರಾಗಿ, ಪುಸ್ತಕಪ್ರೇಮಿಯಾಗಿ ಕನ್ನಡ ಜನಾನುರಾಗಿಗಳಾಗಿರುವ 'ಅನಾಜಿ' ಅವರಿಗೆ ಅನಂತಪದ್ಮನಾಭನ ಅನಂತ ನಮನಗಳು.

*****

ನಿಜವಾದ ಅರ್ಥದ ನಾಡೋಜ

ಡಾ. ಆರ್. ಲಕ್ಷ್ಮೀನಾರಾಯಣ
ಚರವಾಣಿ : ೯೪೪೯೦೨೮೯೯೬

ನನಗೆ ಅನಾಜಿ ಅವರ ಪರಿಚಯ ಆದದ್ದು 1972 ರ ಆಗಸ್ಟ್ ಅಥವಾ ಸೆಪ್ಟೆಂಬರ್ ಇರಬೇಕು. ನಾವೆಲ್ಲ ಅಂದರೆ 1971ರಲ್ಲಿ ಎಂ.ಎ. ಮಾಡಿ ಸ್ಥಳೀಯ ಅಭ್ಯರ್ಥಿಗಳಾಗಿ ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ನೇಮಕ ಹೊಂದಿದ್ದವರೆಲ್ಲ 1971ರಲ್ಲಿ ಕರೆದಿದ್ದ ಕೆ.ಪಿ.ಎಸ್.ಸಿ. ಗೆ ಅರ್ಜಿ ಹಾಕಿಕೊಂಡು ಅದರ ಪ್ರಕ್ರಿಯೆಯ ಭಾಗವಾಗಿ ಸಂದರ್ಶನಕ್ಕೆಂದು ಆ ದಿನ ಕೆ.ಪಿ.ಎಸ್.ಸಿ. ಕಛೇರಿಯ ಕ್ಯಾಂಪಸ್‌ನಲ್ಲಿ ನಮ್ಮ ಸರದಿಗಾಗಿ ಕಾದುಕೂತಿದ್ದ ಆತಂಕ, ಉದ್ವೇಗಗಳ ಕ್ಷಣ. ನನ್ನ ಜೊತೆಯಲ್ಲೇ ಅಂದು ನನ್ನ ಸಹಪಾಠಿಗಳಾಗಿದ್ದ ಟಿ. ಕೆ. ನಾಗರಾಜ್, ನೊ ಸಂ ತಿ, ಮೊದಲಾದವರೆಲ್ಲ ಸಂದರ್ಶನ ಎದುರಿಸಿದ್ದೆವು. ಆಗ ಅದಕ್ಕಿಂತ ಮುಂಚೆ ತಮ್ಮ ಸಹೋದ್ಯೋಗಿಯಾಗಿದ್ದ ಟಿ. ಕೆ ನಾಗರಾಜರಿಗೆ ಒಂದು ನೈತಿಕ ಧೈರ್ಯ ತುಂಬುವ ಸಲುವಾಗಿ ಅಲ್ಲಿಗೆ ಬಂದಿದ್ದ ಅನಾಜಿಯವರನ್ನು ಟಿ. ಕೆ. ನಾಗರಾಜ್ ನಮ್ಮೆದುರು ಕರೆತಂದು ನೋಡಿ ಇವರೇ ಅಶ್ವತ್ಥನಾರಾಯಣ (ಅನಾಜಿ). ನನಗೆ ಇವರದ್ದೇ ಬೆಂಬಲ, ಧೈರ್ಯ, ಗೈಡೆನ್ಸ್ ಎಲ್ಲ ಎಂದು ಅವರ ಪರಿಚಯ ಮಾಡಿಕೊಟ್ಟರು. ಅಶ್ವತ್ಥನಾರಾಯಣ ಅವರು ಅಂದು ಹೇಗೆ ದೃಢಕಾಯರಾದ, ಕಂಚಿನ ಕಂಠದ, ತುಂಬುದೇಹದ ವ್ಯಕ್ತಿಯೋ ಇಷ್ಟು ವರ್ಷ ಕಳೆದ ಮೇಲೂ ಈಗಲೂ ಹಾಗೆಯೇ ಇದ್ದಾರೆ. ವ್ಯತ್ಯಾಸ ಇಷ್ಟೆ. ಅಂದು ದಟ್ಟವಾದ ಪೂರಾ ಕಪ್ಪುಕೂದಲಿನ ದಪ್ಪ ಮೀಸೆಯ ವ್ಯಕ್ತಿ. ಇಂದು ಕಪ್ಪುಕೂದಲಿನ ಪ್ರಮಾಣ ಕಡಮೆ ಆಗಿದೆ. ಅಂದು ಅವರ ಪರಿಚಯವಾದರೂ ಅದು ಅಷ್ಟಕ್ಕೇ ನಿಂತಿತ್ತು. ಆದರೆ ಮುಂದೆ ಒಂದೆರಡು ಬಾರಿ ಭೇಟಿಯಾದರೂ ಅವರ ನಿಕಟ ಪರಿಚಯವೇನೂ ಆಗಿರಲಿಲ್ಲ. ಮುಂದೆ ತುಮಕೂರು ಸರ್ಕಾರಿ ಕಾಲೇಜಿಗೆ ಮಂಗಳೂರಿನಿಂದ ವರ್ಗವಾಗಿ ಬಂದ ಎಸ್. ಶ್ರೀನಿವಾಸನ್ ಎಂಬ ಹಿರಿಯ ಕನ್ನಡ ಅಧ್ಯಾಪಕರ ಮನೆಯಲ್ಲಿ ಮತ್ತೆ ಅಶ್ವತ್ಥನಾರಾಯಣರ ಭೇಟಿಯಾಯಿತು. ಅವರಿಬ್ಬರೂ ಅತ್ಯಂತ ಗಾಢಸ್ನೇಹಿತರು. ಮಂಡ್ಯದ ಕಾಲೇಜಿನಲ್ಲಿ ಸಹೋದ್ಯೋಗಿಗಳಾಗಿದ್ದವರು. ಇನ್ನು ಶ್ರೀನಿವಾಸನ್ ತಮ್ಮ ಆತ್ಮೀಯ ಸ್ವಭಾವದಿಂದ, ಕನ್ನಡ ಕಾವ್ಯದ ಭಾಗಗಳನ್ನು ಅಗಾಧವಾದ ನೆನಪಿನ ಶಕ್ತಿಯಿಂದಲೇ ನಿರರ್ಗಳವಾಗಿ ಭಾಷಣಗಳಲ್ಲಿ, ಅಧ್ಯಾಪಕರ ಕೊಠಡಿಯಲ್ಲಿ ಹೇಳುತ್ತಿದ್ದವರಾದ್ದರಿಂದ ನಮಗೆಲ್ಲ ಬಹಳ ಪ್ರಿಯರಾಗಿಬಿಟ್ಟರು. ಸಹಜವಾಗಿಯೇ ಅವರಿಗೆ ಪ್ರಿಯರಾಗಿದ್ದ ಅನಾಜಿ ನನಗೂ ಆತ್ಮೀಯರಾಗಿಬಿಟ್ಟರು. ಶ್ರೀನಿವಾಸನ್ ಈಗ್ಗೆ ಸುಮಾರು ಐವತ್ತು ವರ್ಷಗಳ ಹಿಂದೆ ಹೇಳಿದ ಒಂದು ಮಾತು ಇನ್ನೂ ಈಗತಾನೆ ಕೇಳಿದಂತೆ ನನ್ನ ಕಿವಿಗಳಲ್ಲಿ ನಿನದಿಸುತ್ತಿದೆ. ಏನೋ ಮಾತಿಗೆ ಬಂದು "ಅಶ್ವತ್ಥನಾರಾಯಣ ಯಾರಿಗೆ ಫ್ರೆಂಡಲ್ಲ! ಅವರಂತೆ ಬೇರೆ ಯಾರಿಗೂ ಫ್ರೆಂಡ್ ಆಗಲು ಸಾಧ್ಯವಿಲ್ಲ" ಎಂದು ಹೇಳಿದ ಮಾತೇ ಅದು. ಅದರಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇದ್ದರೂ ಅಶ್ವತ್ಥನಾರಾಯಣರ ಸ್ನೇಹ ಸ್ವಭಾವವನ್ನು, ದಾಕ್ಷಿಣ್ಯವನ್ನು ಸ್ನೇಹಿತರಿಗಾಗಿ ಯಾವುದೇ

ಸಹಾಯಕ್ಕೆ ಜೊತೆಗೆ ನಿಲ್ಲುವ ಅವರ ಸ್ವಭಾವವನ್ನು ಅತ್ಯಂತ ಸೊಗಸಾಗಿ ಬಿಂಬಿಸುವ ಮಾತು ಅದು.

ಅಶ್ವತ್ಥ ನಾರಾಯಣ. ಜಿ. (ಅನಾಜಿ) ಅವರ ಜೊತೆ ಸಹೋದ್ಯೋಗಿಯಾಗಿ ಕೆಲಸ ಮಾಡುವ ಅದೃಷ್ಟ ನನಗೆ ಬಂದೊದಗಲಿಲ್ಲ. ಆದರೆ ಮೌಲ್ಯಮಾಪನ ಸಂದರ್ಭದಲ್ಲಿ ಅವರ ಒಡನಾಟ, ಅವರ ನಿರ್ಮಲವಾದ ಹಾಸ್ಯದ ಮಾತುಗಳು, ಅವರ ಜೋರು ನಗೆ, ಗಟ್ಟಿದನಿ ಇವನ್ನೆಲ್ಲ ಎಂದೂ ಮರೆಯಲು ಸಾಧ್ಯವೇ ಇಲ್ಲ. ಬೆಂಗಳೂರಿಗೆ ಬಂದ ಮೇಲೆ ಬಿ.ಎಂ.ಶ್ರೀ. ಪ್ರತಿಷ್ಠಾನದೊಂದಿಗೆ ಸಂಪರ್ಕ ಏರ್ಪಟ್ಟ ನಂತರದಲ್ಲಿ ಸುಮಾರು ಇಪ್ಪತ್ತು ವರ್ಷಗಳಿಂದ ಅವರ ಒಡನಾಟ ಸಾಧ್ಯವಾಗಿರುವುದು ನನ್ನ ಬದುಕಿನ ಹೃದ್ಯವಾದ ಒಂದು ಭಾಗವೇ ಆಗಿದೆ.

ಅಶ್ವತ್ಥನಾರಾಯಣ ಒಬ್ಬ ಆದರ್ಶ ಕನ್ನಡ ಅಧ್ಯಾಪಕರು. ನಮ್ಮಲ್ಲಿ ಒಳ್ಳೇ ಕ್ಲಾಸ್ ರೂಂ ಟೀಚರ್‌ಗಳಿಗೇನೂ ಕೊರತೆ ಇಲ್ಲ. ಒಳ್ಳೇ ಕ್ಲಾಸ್ ರೂಮ್ ಟೀಚರ್ ಅಂದರೆ ನಮಗೆಲ್ಲಾ ಗೊತ್ತಿರುವಂತೆ ವೇಳಾ ಪಟ್ಟಿಯ ಪ್ರಕಾರ ರಜೆ ಇರುವ ದಿನಗಳನ್ನು ಹೊರತುಪಡಿಸಿ ಎಂದೂ ತಪ್ಪದೆ ಪ್ರಾಮಾಣಿಕವಾಗಿ, ಕಾಲ ವ್ಯರ್ಥ ಮಾಡದೆ ಅರುವತ್ತೂ ನಿಮಿಷ ತರಗತಿ ತೆಗೆದುಕೊಂಡು ನಿಗದಿತ ಪಠ್ಯಭಾಗಗಳನ್ನು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಪಾಠಮಾಡಿ ಅವರಿಗೆ ನಿಜವಾದ ಮಾರ್ಗದರ್ಶಿ ಅಧ್ಯಾಪಕನಾಗಿರುವುದು. ಅಶ್ವತ್ಥನಾರಾಯಣ ಅವರು ಒಳ್ಳೇ ತರಗತಿಯ ಅಧ್ಯಾಪಕರಾಗಿದ್ದುದರ ಜೊತೆಗೆ ವಿದ್ಯಾರ್ಥಿಗಳಿಗೆ ಅವರು ಓದಬೇಕಾದ ಪುಸ್ತಕಗಳನ್ನು ಹೇಳುವುದು, ಅಗತ್ಯಬಿದ್ದರೆ ಪುಸ್ತಕಗಳನ್ನು ಕೊಡುವುದು (ಅವರ ಬಳಿ ಅಪಾರ ಸಂಖ್ಯೆಯ ಪುಸ್ತಕಗಳ ರಾಶಿಯೇ ಇದೆ) ಇವುಗಳನ್ನು ಮಾಡಿದ್ದಾರೆ. ಅಶ್ವತ್ಥನಾರಾಯಣ ಅವರು ಇಷ್ಟರ ಜೊತೆಗೆ ಮೊದಲಿನಿಂದಲೂ ಕನ್ನಡದ ಒಬ್ಬ ಸಾಂಸ್ಕೃತಿಕ ರಾಯಭಾರಿಯಂತೆ ಕೆಲಸ ಮಾಡಿಕೊಂಡು ಬಂದವರು. ಅಂದರೆ ಸಾಹಿತ್ಯ, ಸಂಸ್ಕೃತಿ ಕುರಿತಂತೆ ಸಾರ್ವಜನಿಕ ಉಪನ್ಯಾಸಗಳನ್ನು ನೀಡುವುದು, ಹಳಗನ್ನಡ ತರಗತಿಗಳನ್ನು ತೆಗೆದುಕೊಳ್ಳುವುದು, ಅನೇಕ ಕನ್ನಡಪರ ಸಾಹಿತ್ಯಕ ಸಾಂಸ್ಕೃತಿಕ ಸಂಸ್ಥೆಗಳ ಸದಸ್ಯರಾಗಿ, ಪದಾಧಿಕಾರಿಗಳಾಗಿ ಹೊಣೆಗಾರಿಕೆ ವಹಿಸಿಕೊಂಡು ನಿರ್ವಹಿಸುವುದು ಇವನ್ನೆಲ್ಲ ಉದ್ದಕ್ಕೂ ಮಾಡಿಕೊಂಡೇ ಬಂದಿದ್ದಾರೆ. ಮಾತನ್ನು ಪ್ರಾಸಬದ್ಧವಾಗಿ ಜೋಡಿಸುವುದೆಂದರೆ ಅವರಿಗೆ ಅತಿಶಯವಾದ ಪ್ರೀತಿ. ಜನರಿಗೂ ಅದು ಯಾವಾಗಲೂ ಇಷ್ಟವಾಗುತ್ತದಾಗಿ ಅವರೊಬ್ಬ ಜನಪ್ರಿಯ ಭಾಷಣಕಾರರೂ ಹೌದು. 'ಈ ಜನಪ್ರಿಯ' ನೂರಕ್ಕೆ ನೂರು ಧನಾತ್ಮಕವಾಗಿ ಹೇಳಿರುವುದು– ಯಾವುದೇ ವ್ಯಂಗ್ಯದ ದೃಷ್ಟಿ ಇಲ್ಲದೆ. ಈ ಅರ್ಥದಲ್ಲಿ ಅವರು ನಿಜವಾದ ಕನ್ನಡದ ನಾಡೋಜ ಮತ್ತು ಪರಿಚಾರಕ. ಸಾಮಾನ್ಯ ಕಾವ್ಯ ಪ್ರೇಮಿಗಳಿಗೆ ನಮ್ಮ ಪ್ರಮುಖ ಕಾವ್ಯಗಳನ್ನು ವ್ಯಾಖ್ಯಾನಿಸುವುದೂ ಸೇರಿದಂತೆ, ಶಂಕರಾಚಾರ್ಯರನ್ನು ಕುರಿತ ಉಪನ್ಯಾಸವಾಗಬಹುದು, ಶಂಕರ ವಿಜಯ ಕುರಿತು ಆಗಬಹುದು, ಸೌಂದರ್ಯಲಹರಿ ಕುರಿತು ಆಗಬಹುದು, ಮಹಲಿಂಗರಂಗನ ಅನುಭವಾಮೃತ ಆಗಬಹುದು. ಹೀಗೆ ಧಾರ್ಮಿಕ, ತಾತ್ವಿಕ ವಿಷಯಗಳನ್ನು ಕುರಿತು ಮಾತನಾಡಲು ಯಾವ ಹಿಂಜರಿಕೆಯನ್ನೂ ತೋರದೆ ಉತ್ಸಾಹದಿಂದ ಮಾತನಾಡಿದವರು ಮತ್ತು ಈಗಲೂ ಮಾತನಾಡುವವರು. ಅಂದರೆ ಕನ್ನಡ ಅಧ್ಯಾಪಕ ಸಾಹಿತ್ಯಕ ವಿಷಯಗಳ ಜೊತೆಗೆ ಅಧ್ಯಾತ್ಮಿಕ, ಧಾರ್ಮಿಕ ವಿಷಯಗಳ ಕುರಿತು ಕೂಡ ಉಪನ್ಯಾಸ ನೀಡಬೇಕಾದ್ದು ಕರ್ತವ್ಯಕರ್ಮದ ಒಂದು ಭಾಗ ಎಂದು ತಿಳಿದವರು. ಮತ್ತು ಸಮಕಾಲೀನ ಸಮುದಾಯವನ್ನು ಇಂಥ ವಿಷಯಗಳಲ್ಲಿ ಶಿಕ್ಷಿತರನ್ನಾಗಿ ಮಾಡುವುದು ಅರಿತ ಕನ್ನಡ ಅಧ್ಯಾಪಕನ ಸಾಮಾಜಿಕ ಹೊಣೆಗಾರಿಕೆ ಎಂದು ತಿಳಿದವರು. ಅದರ ಫಲವಾಗಿಯೇ ಅವರು ಹಾಸನದಲ್ಲಿದ್ದಾಗ ಶ್ರವಣಬೆಳುಗೊಳದ ಗೊಮ್ಮಟೇಶ್ವರನ ಮಹಾಮಸ್ತಕಾಭಿಷೇಕ ಬಂದೊದಗಿದ್ದ ಸಂದರ್ಭದಲ್ಲಿ ಧರ್ಮಚಕ್ರ ಶ್ರೀವಿಹಾರದ ಜೊತೆ ಜೊತೆಯಲ್ಲಿ ಅವರೂ ಧರ್ಮಚಕ್ರ ಶ್ರೀವಿಹಾರಿಗಳಾಗಿ ಅಕ್ಷರಶಃ ನೂರಾರು ಕಡೆ ಹೋಗಿ

ನೂರಾರು ಉಪನ್ಯಾಸಗಳನ್ನು ನೀಡಿದ್ದುಂಟು. ಅವರು ಕೇವಲ ತರಗತಿಯ ನಾಲ್ಕು ಗೋಡೆಗಳಿಗಷ್ಟೇ ಸೀಮಿತವಾದ ಅಧ್ಯಾಪಕರು ಎಂದೂ ಆಗಿರಲಿಲ್ಲ.

ಇನ್ನು ಅವರು ಯಾವುದೇ ಸಂಸ್ಥೆಯ ಸದಸ್ಯರೋ ಪದಾಧಿಕಾರಿಗಳೋ ಆಗಿದ್ದಾಗಲಂತೂ ಕೇವಲ 'ನಾಮಕಾವಾಸ್ತೆ' ಇಲ್ಲವೆ ಅಲಂಕಾರಕ್ಕೆ ಸದಸ್ಯರಾಗಿದ್ದವರಲ್ಲವೇ ಅಲ್ಲ. ಹಲವಾರು ಪ್ರಶ್ನೆಗಳು, ಕ್ರಿಯಾಲೋಪಗಳು, ಹಣಕಾಸಿನ ಲೆಕ್ಕಪತ್ರ ಮಂಡಿಸುವುದಿದ್ದರೆ ಅದರಲ್ಲಿ ಕಂಡುಬರುವ ಅಂಕಿಸಂಖ್ಯೆಗಳಲ್ಲಿನ ತಪ್ಪುಗಳು, ವರದಿಗಳಲ್ಲಿನ ಅಂಶಗಳಲ್ಲಿನ ನ್ಯೂನತೆಗಳಿಂದ ತೊಡಗಿ ಮುದ್ರಣ ದೋಷಗಳವರೆಗೂ ಬಿಡದೆ ಗಟ್ಟಿಸಿಕೇಳುವುದು ಅವರ ಜಾಯಮಾನ. ನಮ್ಮ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲೇ ಹೀಗೆ ಸಭೆಯ ಅಧಿವೇಶನಗಳಲ್ಲಿ ಪ್ರಶ್ನಿಸುವುದು ತುಂಬಾ ಜಾಸ್ತಿಯಾಯಿತು ಎಂದು ನಾವುಗಳು ಆಕ್ಷೇಪಮಾಡುವಷ್ಟರ ಮಟ್ಟಿಗೆ ಅವರ ಪುಂಖಾನುಪುಂಖವಾದ ತಕರಾರುಗಳು, ಪ್ರಶ್ನೆಗಳು ಇರುತ್ತಿದ್ದುವು. ಆಕ್ಷೇಪಗಳಿಗೆ ಅವರು ಹಿಂಜರಿಯುವಂಥವರಲ್ಲ, ಜಗ್ಗುವಂಥವರೂ ಅಲ್ಲ. ಅದು ಅವರ ಜಾಯಮಾನವೇ ಆಗಿಬಿಟ್ಟಿದೆ. ಅಂದರೆ "ಹಿಂದೆ ಬಂದರೊದೆಯದ ಮುಂದೆ ಬರಲು ಹಾಯದ" ಪುಣ್ಯಕೋಟಿ ಗೋವಿನ ತರದವರಂತೂ ಅಲ್ಲ. ಪ್ರಶ್ನಿಸಬೇಕಾದಾಗ ಎಲ್ಲರ ಸಾಕ್ಷಿಪ್ರಜ್ಞೆಯಂತೆ ಪ್ರಶ್ನಿಸುತ್ತಲೇ ಬಂದವರು. ಆದರೆ ಒಳಗೆ ಮಾತ್ರ ಯಾರ ಬಗ್ಗೆಯೂ ಕಹಿಯನ್ನಿಟ್ಟುಕೊಂಡವರಲ್ಲ.

ಅವರ ಕನ್ನಡಪರ ಕೆಲಸಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳಿಗೆ ಆಗಿಂದಾಗ್ಗೆ ನಡೆಸುತ್ತಿದ್ದ ಆಡಳಿತ ಕನ್ನಡದ ಹಲವಾರು ಶಿಬಿರಗಳಲ್ಲಿ ನಿರ್ದೇಶಕರಾಗಿ, ಉನ್ಯಾಸಕರಾಗಿ ವಿಚಕ್ಷಣತೆಯಿಂದ ನಡೆಸಿಕೊಟ್ಟಿದ್ದಾರೆ. ನನಗೂ ಇಂಥ ಶಿಬಿರಗಳನ್ನು ನಡೆಸಿದ ಅನುಭವವಿದ್ದು ಅದರ ಅಗತ್ಯತೆ ತಿಳಿದವನಾಗಿರುವುದರಿಂದ ಅಶ್ವತ್ಥನಾರಾಯಣರಂಥ ಅನುಭವೀ ತಜ್ಞರಿಂದ ನೌಕರರು ಮತ್ತು ಅಧಿಕಾರಿಗಳಿಗೆ ಒಳ್ಳೆಯ ಮಾರ್ಗದರ್ಶನ ಖಂಡಿತಾ ದೊರಕಿರುತ್ತದೆ.

ಅಶ್ವತ್ಥನಾರಾಯಣ ಅವರು ಕನ್ನಡದ ಯಾವ ಕೆಲಸವನ್ನೂ ಸಣ್ಣದೆಂದು ತಿಳಿದವರಲ್ಲ. ಸಂಶಿ ಭೂಸನೂರಮಠ ಡಾ. ಆರ್. ಸಿ. ಹಿರೇಮಠ, ಡಾ. ಕಲ್ಬುರ್ಗಿಯವರ ಶಿಷ್ಯರಾಗಿದ್ದರಿಂದಲೋ ಏನೋ ಗ್ರಂಥ ಸಂಪಾದನೆಯಲ್ಲಿ ಅವರಿಗೆ ಹೆಚ್ಚು ಆಸಕ್ತಿ. ಆದ್ದರಿಂದಲೇ ದಾಸಸಾಹಿತ್ಯ, ವಚನಸಾಹಿತ್ಯ, ಎಂ.ವಿ.ಸೀ. ಜೀವನಚರಿತ್ರೆ ಸಂಪುಟ ಹೀಗೆ ಹತ್ತು ಹಲವು ಗ್ರಂಥಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಅಲ್ಲಿಂದ ಹಿಡಿದು ಕರಡು ತಿದ್ದುವ ಕೆಲಸದವರೆಗೆ ಎಲ್ಲವನ್ನೂ ಸಾರ್ಥಕವಾಗಿ ನಡೆಸಿ ಆ ಬಗ್ಗೆ ಪುಸ್ತಕವನ್ನೂ ಬರೆದವರು.

ಕಾಲ ಒಂದು ನಿರ್ದಯ ನ್ಯಾಯಾಧೀಶ. ಕಾಲದ ಏರಿಳಿತಗಳಲ್ಲಿ ಅದು ಯಾರ ಹೆಸರನ್ನು ಉಳಿಸುತ್ತದೋ ಅಳಿಸುತ್ತದೋ ಎಂಬುದಕ್ಕೆ ಕಾಲವೇ ಉತ್ತರ ಕೊಡಬೇಕು. ಆದರೆ "ಸಾಹಿತ್ಯ ಸ್ವಾಂತ ಸುಖಾಯ ಮಾತ್ರವಲ್ಲ; ಜನಹಿತಾಯವೂ ಹೌದು" ಎಂದು ತಿಳಿದು ಸಾಹಿತ್ಯದಿಂದ ತಾವು ಪಡೆದ ತಿಳಿವು ವಿವೇಕಗಳನ್ನು ತರಗತಿಗಳ ಹೊರಗೂ ಸುತ್ತಣ ಸಮಾಜಕ್ಕೆ ತಲಪಿಸುವಂಥ ಸಮಾಜಮುಖಿಯಾದ ಕೆಲಸ ಮಾಡಿಕೊಂಡುಬಂದಿರುವ ಅನಾಜಿಯವರಂಥ ನಿಷ್ಕಾಮ ಕರ್ಮಿಗಳನ್ನು ಜನರು ಮರೆಯುವುದಿಲ್ಲ ಎಂಬುದಕ್ಕೆ ಅವರಿಗೆ ಸಲ್ಲಿಸುತ್ತಿರುವ ಈ ಅಭಿನಂದನ ಗ್ರಂಥವೇ ಸಾಕ್ಷಿ. ಈ ಹಿರಿಯರು ನೂರ್ಕಾಲ ನಮ್ಮೊಡನಿದ್ದುಕೊಂಡು ಹೀಗೆಯೇ ತಮಗೆ ಇಷ್ಟವಾದ ಕನ್ನಡಪರ ಕೆಲಸಗಳನ್ನು ಮಾಡಿಕೊಂಡು ಬರಲೆಂದು ಹಾರೈಸುತ್ತೇನೆ.

****

ಕನ್ನಡದ ಘನ ವಿದ್ವಾಂಸ

ಶಾ.ಮಂ. ಕೃಷ್ಣರಾಯ
ಚರವಾಣಿ : ೭೦೧೯೪೩೩೩೭೪

ಕೆಲವರು ಪ್ರಚಾರದಿಂದ ದೊಡ್ಡವರಾಗುತ್ತಾರೆ. ಕೆಲವರು ವಿಚಾರದಿಂದ ದೊಡ್ಡವರೆನಿಸಿಕೊಳ್ಳುತ್ತಾರೆ. ಪ್ರೊ. ಅಶ್ವತ್ಥನಾರಾಯಣ ಎರಡನೆಯ ಗುಂಪಿಗೆ ಸೇರಿದವರು. ಅವರನ್ನು ನಾವು ಗುರುತಿಸುವುದು ಒಬ್ಬ ವಿಚಾರವಾದಿಯೆಂದು, ಒಬ್ಬ ವಿದ್ವಾಂಸನೆಂದು, ಒಬ್ಬ ವಾಗ್ಮಿಯೆಂದು ಕನ್ನಡ ಪರಿಚಾರಕನೆಂದು.

ಹೊಟ್ಟೆತುಂಬುವ ಸಾಧನ, ಬದುಕಿನ ಗುರಾಣಿ ಓದು ಎಂದು ಭಾವಿಸುವವರೂ ಇದ್ದಾರೆ, ನಂಬಿದವರೂ ಇದ್ದಾರೆ. ಆದ್ದರಿಂದ ಕೆಲವು ಕೋರ್ಸುಗಳಿಗೆ ವಿದ್ಯಾರ್ಥಿಗಳು ಮುಗಿ ಬೀಳುತ್ತಾರೆ. ಕೆಲವು ಕೋರ್ಸುಗಳನ್ನು ಮೂಸಿ ನೋಡುವವರೂ ಇಲ್ಲ.

ಅಂದಿನ ದಿನಗಳಲ್ಲಿ ಇಂಜಿನಿಯರಿಂಗ್, ಡಾಕ್ಟರ್‌ರಿಗೂ ಬೇಡಿಕೆಯಿದ್ದ ಕಾಲದಲ್ಲಿ ಅಶ್ವತ್ಥನಾರಾಯಣ ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೋಮಾ ಮುಗಿಸಿದರು. ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೋಮಾ ಮಾಡಿದವರಿಗೆ ತುಂಬಾ ಬೇಡಿಕೆಯಿತ್ತು. ಸರಕಾರಿ ಹುದ್ದೆಗಳಲ್ಲಿ ಕರೆದು ಕೆಲಸ ಕೊಡುತ್ತಿದ್ದರು. ಖಾಸಗಿ ಸಂಸ್ಥೆಗಳು ತಾಂತ್ರಿಕ ತಜ್ಞರಿಗೆ ಪ್ರಥಮ ಪ್ರಾಶಸ್ತ್ಯ ಕೊಡುತ್ತಿದ್ದವು.

ಪ್ರೊ. ಅಶ್ವತ್ಥನಾರಾಯಣ ಅಂದು ಮನಸ್ಸು ಮಾಡಿದ್ದರೆ ಲೋಕೋಪಯೋಗಿ ಖಾತೆಯಲ್ಲಿ ಉನ್ನತ ಹುದ್ದೆಯಲ್ಲಿದ್ದು ಕೈತುಂಬಾ ಸಂಬಳ, ಚೀಲ ತುಂಬಾ ಗಿಂಬಳ ಗಿಟ್ಟಿಸಿಕೊಂಡು ಹಾಯಾಗಿರಬಹುದಿತ್ತು. ಆದರೆ ಇವರ ಗ್ರಹಚಾರ ಕೆಟ್ಟಿತೋ, ಒಳ್ಳೆಯದಾಗುವುದಿತ್ತೋ ಗೊತ್ತಿಲ್ಲ ಇವರು ಎಚ್.ಎಂ.ಟಿ. ಕಂಪನಿಯಿಂದ ಕೆಲಸದ ಆರ್ಡರ್ ಬಂದರೂ ಸೇರದೇ ತನಗೆ ಇಷ್ಟವಾದ ಪ್ರೀತಿಯ ಶಿಕ್ಷಣ ಮುಗಿಸಲು ಹೋಗಿ ಜನರಿಂದ ಹುಚ್ಚರ ಗುಂಪಿಗೆ ಸೇರಿದರು. ನಿಜವಾಗಿಯೂ ಅದು ಹುಚ್ಚು ನಿರ್ಧಾರವೇ ಆಗಿತ್ತು. ಕೈಗೆ ಬಂದ ಬಿಸಿಬಿಸಿ ರೊಟ್ಟಿ ಬಿಟ್ಟು ಹುಲ್ಲು ಮೇಯಲು ಹೋದಂತಿತ್ತು. ತಾನಾಗಿ ಬಂದ ಒಳ್ಳೆಯ ಕೆಲಸ ಬಿಟ್ಟುಕೊಟ್ಟು ಬೇರೊಂದು ಅಧ್ಯಯನ ಆರಂಭಿಸಿದ ಬಗ್ಗೆ ಅಶ್ವತ್ಥನಾರಾಯಣರಿಗಾದ ದುಃಖಕ್ಕಿಂತ ಇತರರಿಗೆ ಹೆಚ್ಚು ಆಘಾತವಾಯಿತು.

ಧಾರವಾಡದಲ್ಲಿ ಓದಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದ ಇವರು ತಮಗೆ ಆಪ್ತವಾದ ಶಿಕ್ಷಣ ಖಾತೆಯನ್ನು ಸೇರಿ ಕನ್ನಡ ಉಪನ್ಯಾಸಕರಾದರು. ಬೆಂಗಳೂರಿನ ದಯಾನಂದ ಕಾಲೇಜ್ ಅನಂತರ ಕೆ.ಪಿ.ಎಸ್.ಸಿ.ಯಲ್ಲಿ ಆಯ್ಕೆಯಾದ ನಂತರ ಮಂಡ್ಯ ಸರಕಾರಿ ಪದವಿ ಕಾಲೇಜ್, ಹಾಸನ ಪದವಿ ಕಾಲೇಜ್, ಬೆಂಗಳೂರು ಮಹಾರಾಣಿ ಕಾಲೇಜ್, ಕೊಳ್ಳೇಗಾಲ ಮಹದೇಶ್ವರ ಪದವಿ ಕಾಲೇಜ್, ಬೆಂಗಳೂರು ಕಲಾ ಕಾಲೇಜ್, ಮಾಗಡಿ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು.

ಕೆಲವರು ನೌಕರಿಯಿಂದ ನಿವೃತ್ತರಾಗಬಹುದು. ಆದರೆ ಕೆಲಸದಿಂದ ನಿವೃತ್ತರಾಗುವುದಿಲ್ಲ. ಕಾರಣ ಅದು ಅವರ ಆಪ್ತವಾದ ಕಾರ್ಯ, ಮನ ಮೆಚ್ಚುವ ಕೆಲಸ. ಈಗಲೂ ಅವರು ಪಾಠ ಮಾಡುವುದನ್ನು

ಬಿಟ್ಟಿಲ್ಲ. ಸರಕಾರಿ ಅಧಿಕಾರಿಗಳು, ಸಿಬ್ಬಂದಿ ವರ್ಗದವರಿಗೆ ನೂರಾರು ಶಿಬಿರಗಳಲ್ಲಿ ಆಡಳಿತ ಕನ್ನಡದ ಕುರಿತು ಪಾಠ ಮಾಡಿದ್ದಾರೆ. ಅಮೇರಿಕಾದಲ್ಲಿ ಕನ್ನಡಿಗರ ಮಕ್ಕಳಿಗೆ ಕನ್ನಡ ಕಲಿಸಿದ್ದಾರೆ.

'ಅಕ್ಕ' ಸಮ್ಮೇಳನ ಬಾಲ್ಟಿಮೋರ್‌ನಲ್ಲಿ ನಡೆದಾಗ ಅಲ್ಲಿಯ ಕನ್ನಡ ಪ್ರೇಮಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಅನೇಕ ಬಗೆಯಲ್ಲಿ ಸಮ್ಮೇಳನ ಯಶಸ್ವಿಗೊಳಿಸಲು ಸಹಾಯ ಮಾಡಿದ್ದಾರೆ.

ಅ.ನ.ಕೃಷ್ಣರಾಯರ ನೇತೃತ್ವದಲ್ಲಿ ೧೯೬೦ರಲ್ಲಿ ಕನ್ನಡ ಚಳುವಳಿ ಆರಂಭಗೊಂಡಾಗ ಇವರಿಗೆ ೨೭ರ ತಾರುಣ್ಯ, ಅಶ್ವತ್ಥನಾರಾಯಣ ಚಳುವಳಿ ಸೇರಿ ಕನ್ನಡಕ್ಕೆ 'ಜೈ' ಅಂದರು. ಅನಂತರ ಅವರ ವೃತ್ತಿ ನಿಮಿತ್ತದಿಂದ ಬೇರೆ-ಬೇರೆ ಊರಿಗೆ ವರ್ಗವಾಗಿದ್ದರಿಂದ ಚಳುವಳಿ ಮುಂದುವರಿಸಲಾಗದಿದ್ದರೂ ಕನ್ನಡ ಕಟ್ಟುವ ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಧ್ಯಯನ ಶೀಲರಾಗಿ ವಿದ್ವತ್ತನ್ನು ಬೆಳೆಯಿಸಿಕೊಂಡರು. ಈಗ ಅವರು ಕೇವಲ ಕನ್ನಡದ ಮೇಷ್ಟ್ರಲ್ಲ. ಕನ್ನಡದ ಘನ ವಿದ್ವಾಂಸರು. ಅವರೀಗ ಕೇವಲ ಕನ್ನಡ ಚಳುವಳಿಗಾರರಲ್ಲ. ಅವರೀಗ ಕನ್ನಡಕ್ಕೊಂದು ಮಹತ್ತರ ಬಳುವಳಿ.

ಸಿಂಚನ ಕನ್ನಡ ವೇದಿಕೆಯಿಂದ, ಜ್ಞಾನಜ್ಯೋತಿ ರೇಡಿಯೋ ಕಾರ್ಯಕ್ರಮದ ಮೂಲಕ, ದಾಸಸಾಹಿತ್ಯ ಸಂಪುಟಗಳ ಸಹಸಂಪಾದಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಕರ್ನಾಟಕ ಗಾನಕಲಾ ಪರಿಷತ್ತು, ದೇವುಡು ಪ್ರತಿಷ್ಠಾನ ಸ್ಥಾಪಕರಲ್ಲೊಬ್ಬರಾಗಿ ಅವರು ಮಾಡಿದ ಕೆಲಸವೆಲ್ಲಾ ಕನ್ನಡ ಅಭಿಮಾನದ ಕೆಲಸವೆ.

ಅವರೊಬ್ಬ 'ವಾಗ್ಮಿ'ಯೆಂದು ನಿಸ್ಸಂಕೋಚವಾಗಿ ಹೇಳಬಹುದು. ಹಾಸನದಲ್ಲಿ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರ ದೇವುಡು ಜೀವನ ಮತ್ತು ಸಾಹಿತ್ಯದ ಕುರಿತು ಸುಮಾರು ಒಂದೂವರೆ ಗಂಟೆ ಉಪನ್ಯಾಸ ನೀಡಿ ಶ್ರೋತೃಗಳನ್ನು ಮಂತ್ರ ಮುಗ್ಧಗೊಳಿಸಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅನಂತರ ಅವರ ಅನೇಕ ಭಾಷಣಗಳನ್ನು ಕೇಳಿದ್ದೇನೆ. ಅವರು ಭಾಷಣಕ್ಕೆ ನಿಂತರೆ ದೇವರು ಮೈಮೇಲಿ ಬಂದವರಂತೆ ಮಾತಾಡುತ್ತಾರೆ. ಆದರೆ ತಾಳ ತಪ್ಪುವುದಿಲ್ಲ. ವಿಷಯಾಂತರ ಮಾಡುವುದಿಲ್ಲ. ಯಾವ ಟೀಕೆ-ಟಿಪ್ಪಣೆ ಮಾಡುವುದಿಲ್ಲ. ಯಾರಿಗೂ ನೋವಾಗುವಂತಹ ಮಾತಾಡುವುದಿಲ್ಲ. ಅವರ ಭಾಷಣವೆಂದರೆ ಕೇವಲ ಶಬ್ದಗಳ ಸಿಂಚನವಲ್ಲ. ಅದು ವಿಚಾರಗಳ ಶಬ್ಧಗಳ ದಭದಭೆ. ಅವರ ಒಂದೊಂದೂ ಮಾತು ಹೃದಯದಿಂದ ಪುಟಿದೇಳುವ ಕಾರಂಜಿ! ಅವರ ಮಾತಿನಲ್ಲಿರುವ ಆವೇಶ, ಶಬ್ಧಗಳ ಪೋಣಿಕೆಯಲ್ಲಿ ಅವರು ತೋರುವ ಸಂಯಮ, ಅವರ ಪಾಂಡಿತ್ಯದ ಪ್ರತಿಫಲವಾಗುವಂತೆ ಮಾಡುತ್ತವೆ. ಇಂದಿಗೂ ನಾನು ಅವರ ದೀರ್ಘ ಭಾಷಣಗಳಿದ್ದಲ್ಲಿ ಹೋಗಿ ಕೇಳಿ ಸುಖಿಸುತ್ತೇನೆ.

'ಶೈಕ್ಷಣಿಕ ಕಾರ್ಯದಲ್ಲೂ ಹಿಂದೆ ಬಿದ್ದಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪಠ್ಯಗಳ ಭಾಷಾತಜ್ಞರಾಗಿ, ಅನೇಕ ಪಠ್ಯರಚನಾ ಸಮಿತಿಗಳಲ್ಲಿ ದುಡಿದಿದ್ದಾರೆ. ಕನ್ನಡ ಸಂಸ್ಕೃತಿಯ ಇಲಾಖೆಯು ಪ್ರಕಟಿಸಿದ ದಾಸಸಾಹಿತ್ಯ ಸಂಪುಟಗಳ ಸಮಗ್ರ ಪರಿಶೀಲನೆ, ಕನ್ನಡ ಸಂಸ್ಕೃತಿ ಇಲಾಖೆ ನಡೆಸಿದ ಆಡಳಿತ ಕನ್ನಡ, ಶಿಬಿರದ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಅನೇಕ ವಿಶ್ವವಿದ್ಯಾಲಯಗಳ ಎಂ.ಫಿಲ್. ವಿದ್ಯಾರ್ಥಿಗಳಿಗೆ ಐ.ಎ.ಎಸ್., ಕೆ.ಎ.ಎಸ್. ವಿದ್ಯಾರ್ಥಿಗಳಿಗೆ ಕನ್ನಡ ವಿಷಯದಲ್ಲಿ ಮಾರ್ಗದರ್ಶನ ನೀಡಿದ್ದಾರೆ.

ಸಮಗ್ರ ಗ್ರಂಥ ಉಪನ್ಯಾಸ ಮಾಲಿಕೆಯಲ್ಲಿ ಆದಿಪುರಾಣ, ಪಂಪಭಾರತ, ರಾಮಾಯಣ ದರ್ಶನ, ಹರಿಶ್ಚಂದ್ರ ಕಾವ್ಯ, ಜೈಮಿನಿ ಭಾರತದಂತಹ ಕಬ್ಬಿಣದ ಕಡಲೆಯಂತಹ ಕಾವ್ಯಗಳನ್ನು ಸೋಮೇಶ್ವರ ಶತಕದಂತಹ ನೀತಿ ಶತಕಗಳನ್ನು ಅರ್ಥೈಸಿ ಜನಸಾಮಾನ್ಯರಿಗೆ ತಲುಪಿಸುವ ಕಾರ್ಯ

ಮಾಡಿದ್ದಾರೆ. ಕನ್ನಡದ ಕಠಿಣ ಕಾವ್ಯಗಳನ್ನು ವ್ಯಾಖ್ಯಾನಿಸುವ ಸಾಮರ್ಥ್ಯವುಳ್ಳ ಅಶ್ವತ್ಥನಾರಾಯಣರಿಂದ ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳು ಹಳೆಯ ಮಹಾಕಾವ್ಯಗಳ ಸರಳಾನುವಾದ ಪ್ರಕಟಿಸಿದ್ದರೆ ಮೂಲ ಕಾವ್ಯಗಳ ಶ್ರೀಮಂತಿಕೆಯತ್ತ ಇಂದಿನ ತರುಣರ ಗಮನ ಹರಿಯುತ್ತಿತ್ತು. ಅವರಂತಹ ಸಾಹಿತ್ಯ-ಇತಿಹಾಸ ಪ್ರಜ್ಞೆಯುಳ್ಳ ವಿದ್ವಾಂಸರು ಮುಂದಿನ ದಿನಗಳಲ್ಲಿ ನಮಗೆ ಸಿಗುವುದು ದುರ್ಲಭ.

ಅವರ ಗ್ರಂಥ ರಚನೆಯಲ್ಲಿ ಕರಡು ತಿದ್ದುವಿಕೆ, ಕನ್ನಡ ಸಾಹಿತ್ಯದ ದಿಗ್ಗಜರು, ಬಿ.ಎಂ.ಶ್ರೀ ದೇವುಡು ನರಸಿಂಹಶಾಸ್ತ್ರಿ, ವ್ಯಾವಹಾರಿಕ ಕನ್ನಡ ಮೊದಲಾದ ಅನೇಕ ಗ್ರಂಥಗಳು ಅವರ ಆಳ ಅಧ್ಯಯನ, ವ್ಯಾಖ್ಯಾನಗಳ ವೈಶಾಲ್ಯವನ್ನು ಸಾರಿ ಹೇಳುತ್ತವೆ. ದಾಸ ಸಾಹಿತ್ಯದಲ್ಲೂ ಅವರ ಅಧ್ಯಯನ ಗಾಢವಾದುದು. ಅವರ ವಿದ್ವತ್ತಿನ ಅನಾವರಣ ನಮ್ಮಂಥವರಿಂದ ಈ ಪುಟ್ಟ ಲೇಖನದಲ್ಲಿ ಸಾಧ್ಯವಿಲ್ಲ. ಅವರನ್ನು ಮೇಲ್ನೋಟದಲ್ಲಿ ನೋಡುವುದು ಬೇರೆ ಅವರನ್ನು ಅವರ ಕೃತಿಗಳಿಂದ ತೂಗುವುದು ಬೇರೆ. ಅವರು ಯಾವ ಆಡಂಬರ, ಮೌಲ್ಯ ಮಾಪನಕ್ಕಾದರೂ ಇಂಥ ಗೌರವ ಗ್ರಂಥಗಳು ಬೇಕು. ಅವರನ್ನು ವಿವಿಧ ಆಯಾಮಗಳಲ್ಲಿ ನೋಡಿದಾಗಲೇ ಅವರ ಭಾಷಣ, ಸಾಹಿತ್ಯಗಳ ಆಳ ವಿಸ್ತಾರ ಅರಿವಾಗುತ್ತದೆ.

ಪ್ರೊ. ಅಶ್ವತ್ಥನಾರಾಯಣರ 'ಕನ್ನಡ ಸಾಹಿತ್ಯ ದಿಗ್ಗಜರು' ನನ್ನನ್ನು ತುಂಬಾ ಆಕರ್ಷಿಸಿದ ಗ್ರಂಥ. ಅವರು ಈ ಗ್ರಂಥದಲ್ಲಿ ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಎಂ. ಗೋವಿಂದಪೈ, ಡೆಪ್ಯುಟಿ ಚೆನ್ನಬಸಪ್ಪ, ಕ.ವಂ. ರಾಘವಾಚಾರ್, ಹೊಸಕೆರೆ ಚಿದಂಬರಯ್ಯ, ಹುಯಿಲಗೋಳ ನಾರಾಯಣರಾಯರಿ, ನ್ಯಾಯಾಧೀಶರಾದ ಶ್ರೀಕಂಠೇಗೌಡರು, ದೇವುಡು ನರಸಿಂಹಶಾಸ್ತ್ರಿ, ಕಡೂರು ವಾಸುದೇವಾಚಾರ್ಯ, ದ.ಕೃ. ಭಾರದ್ವಾಜ, ವಿದ್ವಾನ್ ಬಾಲ ಸರಸ್ವತಿಯವರ ಬಗ್ಗೆ ಪರಿಚಯ ಲೇಖನಗಳು ಬರೆದಿದ್ದಾರೆ. ಇವರೆಲ್ಲ ಕನ್ನಡ ಕಟ್ಟಿದ ವಿದ್ವನ್ಮಣಿಗಳು.

ನನ್ನ ಸುದೈವದಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಂಗಾರದ ಎಲೆಗಳು, ಸಂಪಾದನೆ ಸಂದರ್ಭದಲ್ಲಿ ಅವರೊಂದಿಗೆ ದುಡಿಯುವ ಸುಯೋಗ ಅಧ್ಯಯನ ಮಾಡುವ ವಿದ್ವಾಂಸನೆಂಬುದು ನನ್ನ ಗಮನಕ್ಕೆ ಬಂತು. ಅವರು ಸಂಗ್ರಹಿಸಿದ ವಿವರಗಳು, ಅವನ್ನು ಜೋಡಿಸಿದ ಕ್ರಮ ಬದ್ಧತೆ, ಅದಕ್ಕೆ ನೀಡಿದ ವ್ಯಾಖ್ಯಾನ, ಅಡಿ ಟಿಪ್ಪಣಿಗಳನ್ನು ನೋಡಿದಾಗ ಅವರಲ್ಲಿ ಹುದುಗಿದ್ದ ಸಂಶೋಧಕ, ನನ್ನ ಹೃದಯಕ್ಕೆ ಹತ್ತಿರವಾದ. ಕಾರಣ ನನಗೆ ಇಂಥ ಪ್ರಾಮಾಣಿಕ, ತಲಸ್ಪರ್ಶಿ ಅಧ್ಯಯನಕಾರರನ್ನು ನೋಡಿದರೆ ಪ್ರೀತಿ. ನಮ್ಮ ತಂಡದಲ್ಲಿ ಪ್ರೊ. ಅಶ್ವತ್ಥನಾರಾಯಣರಂತಹರಿರುವುದರಿಂದಲೇ ನಮ್ಮ ಶ್ರಮ ಸಫಲವಾಯಿತು.

ಪ್ರಾಚೀನ ಗ್ರಂಥಗಳ ಅಧ್ಯಯನ-ವ್ಯಾಖ್ಯಾನ ಕಡಿಮೆಯಾಗುತ್ತಿರುವ ಇಂದಿನ ದಿನಗಳಲ್ಲಿ ಅಶ್ವತ್ಥನಾರಾಯಣರಂತಹ ಕನ್ನಡ ಪ್ರೇಮಿಗಳನ್ನು ಕಂಡಾಗ ಹೆಮ್ಮೆಯಿಂದ ಹೃದಯ ಉಕ್ಕಿ ಬರುತ್ತದೆ. ಅವರ ಸೇವೆ ಕನ್ನಡ ನಾಡು ಇನ್ನೂ ಹೆಚ್ಚು ಹೆಚ್ಚು ಪಡೆಯಲಿ ಎಂದು ಹಾರೈಸುತ್ತೇನೆ. ಜೊತೆಗೆ ಅವರಲ್ಲಿ ಕನ್ನಡಕ್ಕಾಗಿ ದುಡಿಯುವ ಉತ್ಸಾಹ, ಹುಮ್ಮಸ್ಸು ಹೆಚ್ಚಾಗಲಿ. ಈ ದಂಪತಿಗಳು ನೂರ್ಕಾಲ ಸುಖ-ಸಂತಸದಿಂದಿರಲಿ, ನೆಮ್ಮದಿಯಿಂದ ಬದುಕಲಿ ಎಂದು ಮನಸಾರೆ ಹಾರೈಸುತ್ತೇನೆ.

*****

ದಣಿವರಿಯದ ಸಾಹಿತ್ಯಜೀವಿ

– ನಾ. ಗೀತಾಚಾರ್ಯ
ಚರವಾಣಿ : ೮೦೭೩೩೧೭೩೩೬

ಅನಾಜಿ ಅವರಿಗೂ ನನಗೂ ಸುಮಾರು ೪೫ ವರ್ಷಗಳ ಬಾಂಧವ್ಯವಿದೆ. ನಾನು ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಇದ್ದಾಗಿನಿಂದಲೂ ಅಂದರೆ ೧೯೮೦ ರಿಂದಲೂ ಅವರ ಸಂಪರ್ಕವಿದೆ. ಅವರ ಸಾಹಿತ್ಯ ಸಾಹಚರ್ಯವನ್ನು ಹತ್ತಿರದಿಂದ ಕಂಡಿದ್ದೇನೆ, ಅನುಭವಿಸಿದ್ದೇನೆ, ಅವರೊಂದಿಗೆ ಹಲವಾರು ಸಂದರ್ಭಗಳಲ್ಲಿ ಪಾಲ್ಗೊಂಡಿದ್ದೇನೆ ಮತ್ತು ಹಲವನ್ನು ನಾನೇ ಸಂಘಟಿಸಿದ್ದೇನೆ.

ಬಿಡುವಿಲ್ಲದ ಚಟುವಟಿಕೆಗಳ ನಡುವೆಯೂ ಅವರ ಪಾಲ್ಗೊಳ್ಳುವಿಕೆಯ ಉತ್ಸಾಹ, ಆಸಕ್ತಿ, ಶ್ರದ್ಧೆ, ನಿರರ್ಗಳ ಮಾತುಗಾರಿಕೆ, ಪದಗುಚ್ಛಗಳ ಜೋಡಣೆಯ ಆಕರ್ಷಣೆ, ಸಭಿಕರಿಗೆ ತಕ್ಕುದಾದ ಭಾಷಣ ಕಲೆ, ಸಭಿಕರನ್ನು ತಮ್ಮತ್ತ ಸೆಳೆದುಕೊಳ್ಳುವ ಮಾತಿನ ಮೋಡಿ, ವಿಷಯದ ಆಳವಾದ ನೋಟ, ವಿಸ್ತಾರವಾದ ಅಧ್ಯಯನ, ಪಾಂಡಿತ್ಯ ಇತ್ಯಾದಿಗಳಿಂದ ಬಹುಬೇಗ ಜನಾಕರ್ಷಣ ವ್ಯಕ್ತಿತ್ವವನ್ನು ಪಡೆಯುತ್ತಿದ್ದ ಜನಪ್ರಿಯ ಭಾಷಣಕಾರರಾಗಿದ್ದಾರೆ ಅನಾಜಿ. ಆ ಕಸುವು ಈಗಲೂ ಈ ಇಳಿವಯಸ್ಸಿನಲ್ಲಿಯೂ ಮರೆಯಾಗಿಲ್ಲ ಎಂಬುದೇ ಅವರ ವಿಶೇಷವಾದ ವ್ಯಕ್ತಿತ್ವವಾಗಿದೆ.

ಪ್ರತಿಷ್ಠಾನದ ಕಾರ್ಯಸಮಿತಿ ಸದಸ್ಯರಾಗಿ ವಿವಿಧ ಉಪ ಸಮಿತಿಗಳ ಸದಸ್ಯರಾಗಿ ನಿರಂತರವಾಗಿ ಚಟುವಟಿಕೆಯಿಂದ ಇದ್ದರು ಮತ್ತು ಈಗಲೂ ಮುಂದುವರಿದಿದ್ದಾರೆ.

ಪ್ರತಿಷ್ಠಾನದ ಮೂಲಕ ಅವರಿಂದ ಅದೆಷ್ಟು ಭಾಷಣಗಳನ್ನು ಮಾಡಿಸಿದ್ದೇನೆಯೋ ಲೆಕ್ಕವೇ ಇಲ್ಲ. ಹಳಕಟ್ಟಿ, ಬಿ.ಎಂ.ಶ್ರೀ, ಡಿ.ವಿ.ಜಿ. ವೆಂಕಣ್ಣಯ್ಯ , ಎ.ಆರ್.ಕೃ, ಮಾಸ್ತಿ, ಕಾರಂತ, ಕುವೆಂಪು, ಪುತಿನ, ಎಂ.ವಿ.ಸೀ. ಮುಂತಾದ ಸಾಹಿತಿಗಳ ಶತಮಾನೋತ್ಸವಗಳು, ಪ್ರತಿಷ್ಠಾನದ ದಶಮಾನೋತ್ಸವಗಳು, ದತ್ತಿ ಉಪನ್ಯಾಸಗಳು, ವಿಚಾರಗೋಷ್ಠಿಗಳು, ತರಗತಿ ಉಪನ್ಯಾಸಗಳು, ಹೀಗೆ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರತಿಷ್ಠಾನದ ಚಟುವಟಿಕೆಗಳನ್ನು ಸಂಪನ್ನವಾಗಿಸುತ್ತಿದ್ದರು.

ಹಲವು ವಿಶೇಷ ಉಪನ್ಯಾಸ ಮಾಲೆಗಳಲ್ಲಿ ಸಂಚಾಲಕರಾಗಿ ಸಂಪನ್ಮೂಲವ್ಯಕ್ತಿಗಳಾಗಿ ಪುಸ್ತಕ ಸಂಪಾದಕರಾಗಿ ಜೊತೆಗಿದ್ದರು. ಹೆಸರಿಸಬಹುದಾದ ಒಂದು ಮಾಲೆ ಎಂದರೆ "ಸಾಹಿತ್ಯೋಪಾಸಕರು".

ನಾನು ಹರಿದಾಸ ಸಾಹಿತ್ಯದಲ್ಲಿ ತೊಡಗಿಕೊಂಡಿದ್ದೇನೆ. ಅದರಲ್ಲೂ ವಿಶಿಷ್ಟಾದ್ವೈತ ಹರಿದಾಸ ಸಾಹಿತ್ಯದಲ್ಲಿ ಸ್ವಲ್ಪ ಕೆಲಸ ಮಾಡುತ್ತಿದ್ದೇನೆ. ನಮ್ಮ ತಂದೆಯವರಾದ ನಾರಾಯಣ ಶರ್ಮರ ಕೆಲವು ಕೀರ್ತನೆಗಳನ್ನು ಪ್ರಕಟಿಸುವ ಮೂಲಕ ಈ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದೆ. ಅವರ ಹೆಸರಲ್ಲೇ "ನಾರಾಯಣ ಶರ್ಮ ಸಂಸ್ಕೃತಿ ಕೇಂದ್ರ" ಎಂಬ ಸಂಸ್ಥೆ ಸ್ಥಾಪಿಸಿ ಅದರ ಮೂಲಕ ಅನೇಕ ಅಪ್ರಕಟಿತ ಶ್ರೀವೈಷ್ಣವ ಹರಿದಾಸರನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿದ್ದೇನೆ. ನನ್ನ ಈ ಮಹತ್ಕಾರ್ಯದಲ್ಲಿ ಬೆನ್ನೆಲುಬಾಗಿ ನಿಂತವರಲ್ಲಿ ಅನಾಜಿ ಅವರೂ ಒಬ್ಬರು. ಕೇಂದ್ರದ ಉದ್ಘಾಟನೆಯನ್ನು ನಮ್ಮೂರಲ್ಲಿ

- ದೊಡ್ಡಹೆಜ್ಜಾಜಿ- ನೆರವೇರಿಸಿದಾಗ ಅಲ್ಲಿಗೆ ಬಂದು ಹಾರೈಸಿದ್ದಲ್ಲದೆ ಅಂದು ಬಿಡುಗಡೆಯಾದ ನಾರಾಯಶರ್ಮರ ಕೀರ್ತನೆಗಳಿಗೆ ಅಭಿಪ್ರಾಯವನ್ನು ಬರೆದು ಬೆನ್ನುತಟ್ಟಿದ್ದರು. ಮುಂದೆಯೂ ಕೇಂದ್ರದ ಹತ್ತಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ, ಈಗಲೂ ಭಾಗವಹಿಸುತ್ತಿದ್ದಾರೆ.

ನಾನು ಪ್ರಕಟಿಸಿದ ಹಲವು ಅಪ್ರಕಟಿತ ದಾಸರ ಕೀರ್ತನೆಗಳ ಪುಸ್ತಕಕ್ಕೆ ಮುನ್ನುಡಿಯೋ, ಬೆನ್ನುಡಿಯೋ, ಅಭಿಪ್ರಾಯವನ್ನೋ ಬರೆದು ಕೆಲವನ್ನು ಬಿಡುಗಡೆ ಮಾಡಿಯೂ ಹಾರೈಸಿದ್ದಾರೆ.

ಡಾ॥ ಶ್ರೀನಿವಾಸ ಹಾವನೂರರ ಸಾರಥ್ಯದಲ್ಲಿ ನಡೆದ ಸಮಗ್ರ ಹರಿದಾಸ ಸಾಹಿತ್ಯ ಸಂಪುಟ ಮಾಲೆಯ ಕರಡು ಪರಿಶೀಲನೆ ಸಮಿತಿಯಲ್ಲಿ ಅನಾಜಿ ಅವರೊಂದಿಗೆ ಅನಂತಪದ್ಮನಾಭರಾವ್ ಮತ್ತು ನಾನು ಹತ್ತಾರು ತಿಂಗಳು ನಿರಂತರವಾಗಿ ಕಾರ್ಯ ನಿರ್ವಹಿಸಿದ್ದ ನೆನಪು ಅಚ್ಚಳಿಯದೆ ಉಳಿದಿದೆ.

ನಾರಾಯಣಶರ್ಮ ಸಂಸ್ಕೃತಿ ಕೇಂದ್ರದ ಅಡಿಯಲ್ಲಿ ಅಪ್ರಕಟಿತ ದಾಸ ಸಾಹಿತ್ಯವನ್ನು ಪರಿಚಯಿಸುವುದಕ್ಕಾಗಿಯೇ "ದಾಸ ಸಾಹಿತ್ಯ ಪರಿಷತ್ತು" ಮತ್ತು ಕನ್ನಡಕ್ಕೆ, ಅವಿರತ ಹೋರಾಟದಿಂದ ಲಭಿಸಿದ ಶಾಸ್ತ್ರೀಯ ಕನ್ನಡದ ಪ್ರಚಾರಕ್ಕಾಗಿ "ಶಾಸ್ತ್ರೀಯ ಕನ್ನಡ ವೇದಿಕೆ" ಎಂಬ ಎರಡು ವೇದಿಕೆಗಳನ್ನು ಸ್ಥಾಪಿಸಲಾಯಿತು. ಇವಕ್ಕೂ ಮಾರ್ಗದರ್ಶಕರಾಗಿ ಗೌರವ ಸಲಹೆಗಾರರಾಗಿ ನನ್ನ ಜೊತೆಗಿರುವವರಲ್ಲಿ ಅನಾಜಿ ಅವರು ಪ್ರಮುಖರು. ಇವುಗಳ ಮೂಲಕ "ಮನೆಮನೆಗೆ ದಾಸ ಸಾಹಿತ್ಯ" ಮತ್ತು "ಕಾಲೇಜಿನೆಡೆಗೆ ಕನ್ನಡ" ಎಂಬ ಎರಡು ಉಪನ್ಯಾಸ ಮಾಲೆಗಳನ್ನು ಹಮ್ಮಿಕೊಳ್ಳಲಾಗಿದೆ, ಇವು ಈಗಲೂ ನಡೆಯುತ್ತಿವೆ. ಈವರೆಗೆ ಈ ಎರಡು ಮಾಲೆಗಳಲ್ಲೂ ನೂರಾರು ಕಾರ್ಯಕ್ರಮಗಳು ನಡೆದಿವೆ. ಅವುಗಳಲ್ಲಿ ಸಾಕಷ್ಟು ಕಾರ್ಯಕ್ರಮಗಳಲ್ಲಿ ಅನಾಜಿ ಅವರು ಭಾಗವಹಿಸಿ ಸಂಪನ್ನವಾಗಿಸಿದ್ದಾರೆ.

ಅವರೊಂದಿಗೆ ಭಾಗವಹಿಸಿದ ಅವರ ಜೊತೆ ಕೆಲಸಮಾಡಿದ ಇಂಥ ಅನೇಕ ಸಂದರ್ಭಗಳು ನನ್ನ ನೆನಪಿನ ಮೂಸೆಯಲ್ಲಿವೆ. ಅವರ ಪ್ರೋತ್ಸಾಹ, ಪ್ರೇರಣೆ, ಪಾಲ್ಗೊಳ್ಳುವಿಕೆಗಳನ್ನು ನಾನು ಮರೆಯಲಾರೆ.

ಈಚೆಗೆ ಮಾಡಿದ ಒಂದು ಜೊತೆ ಕಾರ್ಯವೆಂದರೆ ಡಾ ಕೃಷ್ಣ ಕೊಲ್ಹಾರ ಕುಲಕರ್ಣಿ ಅವರಿಗಾಗಿ "೧೯ ನೇ ಶತಮಾನದ ಹರಿದಾಸರ ಸಮಾಜಮುಖಿ ಕೀರ್ತನೆಗಳು" ಎಂಬ ಪುಸ್ತಕವನ್ನು ಜೊತೆಯಾಗಿ ಸಂಪಾದಿಸಿ ಕೊಟ್ಟಿರುವುದಾಗಿದೆ.

ನನ್ನ ಮೇಲೆ ಅವರು ಇಟ್ಟಿರುವ ಅಭಿಮಾನ, ವಿಶ್ವಾಸ, ಪ್ರೀತಿಯ ಕಾಳಜಿಗಾಗಿ ನಾನು ಆಭಾರಿಯಾಗಿದ್ದೇನೆ. ಅವರು ನನಗೆ ಗುರು ಸಮಾನರಾಗಿದ್ದಾರೆ. ಅವರಿಂದ ತರಗತಿಯಲ್ಲಿ ಕಲಿಯದಿದ್ದರೂ ಜೊತೆಯಲ್ಲಿದ್ದು ಸಾಕಷ್ಟು ಕಲಿತಿದ್ದೇನೆ. ನನ್ನ ಏಳ್ಗೆಯಲ್ಲಿ ಅವರ ಪಾಲೂ ಇದೆ.

ವಾಸ್ತವವಾಗಿ ನನ್ನ ಗುರುಪತಿ ಅನಾಜಿ. ನಾನು ಎ.ಪಿ.ಎಸ್ ಕಾಲೇಜಿನ ವಿದ್ಯಾರ್ಥಿ ಆಗಿದ್ದಾಗ ನನ್ನ ಗುರುಗಳಾಗಿದ್ದ ಎಂ.ಆರ್. ಲಕ್ಷ್ಮೀದೇವಿ ಅವರ ಪತಿ. ಈ ಗುರು ಪತಿ ಪತ್ನಿಯರು ನನ್ನ ಮೇಲೆ ತೋರಿದ ವಿಶ್ವಾಸಕ್ಕೆ ನಾನು ಸದಾ ಋಣಿಯಾಗಿದ್ದೇನೆ.

******

ಸಾಹಿತ್ಯದ ಮಾರ್ಗದರ್ಶಿ

ವೈ.ಎನ್. ಗುಂಡೂರಾವ್
ಚರವಾಣಿ : ೯೮೮೦೧೯೦೧೯

ಅಶ್ವತ್ಥ:- ಪಾರ್ವತಿ ಪರಮೇಶ್ವರರು ಕ್ರೀಡೆಯಲ್ಲಿ ತೊಡಗಿದ್ದಾಗ, ದೇವತೆಗಳ ಸೂಚನೆಯಂತೆ ಅಗ್ನಿಯು ಅವರ ಕ್ರೀಡೆಗೆ ಭಂಗವನ್ನುಂಟು ಮಾಡತೊಡಗಿದ. ಇದರಿಂದ ಕೋಪಗೊಂಡ ಪಾರ್ವತಿಯು ದೇವತೆಗಳಿಗೆಲ್ಲಾ ಮರವಾಗುವಂತೆ ಶಾಪವಿತ್ತಳು. ಆಗ ವಿಷ್ಣುವು ಅಶ್ವತ್ಥಮರವಾದನು-ಪದ್ಮ ಪುರಾಣ.

ಅಶ್ವತ್ಥ- ಒಬ್ಬ ರಾಕ್ಷಸ, ಇವನೂ ಇವನ ತಮ್ಮನಾದ ಪಿಪ್ಪಲನೂ ವೃಕ್ಷರೂಪವನ್ನು ಧರಿಸಿ ತಮ್ಮ ನೆರಳಿನಲ್ಲಿ ಬರುವ ತಪೋನಿಷ್ಠ ಬ್ರಾಹ್ಮಣರನ್ನೆಲ್ಲಾ ನುಂಗುತ್ತಿದ್ದನು. ಆಗ ಬ್ರಾಹ್ಮಣರೆಲ್ಲರೂ ಸೂರ್ಯ ಪುತ್ರನಾದ ಶನೈಶ್ಚರನ ಮೊರೆ ಹೋಗಲು ಶನೈಶ್ಚರನು ಆ ಬ್ರಾಹ್ಮಣರ ತಪಶ್ಶಕ್ತಿಯನ್ನೆಲ್ಲಾ ತಾನು ಪಡೆದುಕೊಂಡು ಇಬ್ಬರು ರಾಕ್ಷಸರನ್ನು ಸಂಹರಿಸಿದನಂತೆ-ಬ್ರಹ್ಮಾಂಡ ಪುರಾಣ.

ಈ ಮೇಲಿನ ಎರಡು ಪುರಾಣ ಪ್ರಸಿದ್ಧ ಘಟನೆಗಳನ್ನು ಏಕೆ ತೆಗೆದುಕೊಂಡಿದ್ದೇನೆಂದರೆ ಪ್ರೊ. ಅಶ್ವತ್ಥನಾರಾಯಣರೂ ಒಂದು ಬೃಹತ್ ಮರದಂತೆ. ಅಲ್ಲಿ ರಾಕ್ಷಸರು ತಮ್ಮ ನೆರಳಿಗೆ ಬಂದವರನ್ನು ಸ್ವಾಹಮಾಡಲು ತೊಡಗಿದರೆ ಇಲ್ಲಿ ಅಶ್ವತ್ಥನಾರಾಯಣರು ತಮ್ಮ ನೆರಳಿಗೆ ಬಂದವರೆಲ್ಲರಿಗೂ ಸಾಹಿತ್ಯದ ಆಶ್ರಯದಾತರಾಗಿ, ಲಾಲನೆ-ಪಾಲನೆಯಲ್ಲಿ ತೊಡಗಿಸಿಕೊಂಡವರು.

ಲಾಲನೆ ಎಂದರೆ ಅರ್ಥಾತ್ ಪ್ರೀತಿ ತೋರುವುದು ಅಕ್ಕರೆ ತೋರುವುದು ಎಂದು. ತಮ್ಮ ಬಳಿ ಸಾಹಿತ್ಯ ಸಂದರ್ಭದ ಯಾವುದೇ ಸಮಸ್ಯೆಗಳನ್ನು ತಂದರೂ ತಾಳ್ಮೆಯಿಂದ ಆಲಿಸಿ ಅದಕ್ಕೆ ತಕ್ಕ ಪರಿಹಾರ ಸೂಚಿಸಿ ಕಳುಹಿಸುತ್ತಿದ್ದುದೇ ಅವರ ವಿಶಿಷ್ಟ ಗುಣ. ಹಾಗೊಂದು ವೇಳೆ ಆ ಕ್ಷಣಕ್ಕೆ ಹೊಳೆಯದಿದ್ದರೆ ತಮ್ಮ ಮನಸ್ಸಿನ ಮೂಲೆಯಲ್ಲಿ ಆ ವಿಷಯವನ್ನು ಕಾಯ್ದಿಟ್ಟುಕೊಂಡು ಪರಾಮರ್ಶನ ಗ್ರಂಥಗಳನ್ನೆಲ್ಲಾ ಪರಿಶೀಲಿಸಿ, ಪ್ರಶ್ನಿಸಿದವರಿಗೆ ಉತ್ತರಿಸುವವರೆಗೂ ಅಶ್ವತ್ಥನಾರಾಯಣರಿಗೆ ನೆಮ್ಮದಿ ಇಲ್ಲ.

ಇನ್ನು ಪಾಲನೆ ಎಂದರೆ ನಡೆಸುವುದೂ ಎಂಬ ಅರ್ಥವೂ ಇದೆ. ಇದರಂತೆ ಅವರ ಬಳಿ ಹೋದವರಿಗೆಲ್ಲಾ ಸಾಹಿತ್ಯ ಸಿಂಚನ ನಡೆಸಿ, ಬಂದವರು ಕೇಳಿದ ಪುಸ್ತಕಗಳು ಆ ಕ್ಷಣ ಇವರ ಭಂಡಾರದಲ್ಲಿ ದೊರೆಯದಿದ್ದರೆ ಹೊರಗಡೆ ಎಲ್ಲಿ ದೊರೆಯುತ್ತದೆ, ಯಾರು ಪ್ರಕಾಶಕರು, ಯಾವಾಗ ಪ್ರಕಟವಾಗಿತ್ತು ಎಂಬ ಸಮಗ್ರ ಮಾಹಿತಿಯನ್ನೊದಗಿಸಿ, ಅವರು ಕೊಂಡು ಓದುವಂತೆ ಪ್ರಚೋದಿಸಿ ಮಾರ್ಗದರ್ಶನ ಮಾಡುವುದರಲ್ಲಿ ಅಶ್ವತ್ಥನಾರಾಯಣರಿಗೆ ಏನೋ ಒಂದು ರೀತಿಯ ಸಂತೋಷ.

ಮಾಸ್ತಿ, ಡಿ.ವಿ.ಜಿ., ಎಂ.ಆರ್.ಶ್ರೀ., ವಿ.ಸೀ. ಮುಂತಾದ ಸಾಹಿತ್ಯ ದಿಗ್ಗಜರನ್ನು ಹತ್ತಿರದಿಂದ ಕಂಡಿದ್ದರಿಂದಲೇ ಇಂತಹ ಮಹಾನ್ ವ್ಯಕ್ತಿಗಳ ಪ್ರಭಾವವು ಅಶ್ವತ್ಥನಾರಾಯಣರ ಮೇಲೆ ಹಲವಾರು ರೀತಿ ಪ್ರಭಾವ ಬೀರಿರುವುದನ್ನು ಕಾಣಬಹುದು. ಬಹುಶಃ ಮಾಸ್ತಿಯವರಂತಹವರ ಆದರ್ಶ ಗುಣಗಳೇ ಅಶ್ವತ್ಥನಾರಾಯಣರ ಮೇಲೂ ಪ್ರಭಾವ ಬೀರಿರುವುದರಿಂದಲೇ ಇವರ ಬಳಿ ಬಂದವರಿಗೂ ಅದೇ ರೀತಿಯ ಸಾಹಿತ್ಯ ಲಾಲನೆ-ಪಾಲನೆ ಮಾಡತೊಡಗುವುದನ್ನು ಕಾಣಬಹುದಾಗಿದೆ.

ಹಿಂದೆ ಇವರಿದ್ದುದು ಚಾಮರಾಜಪೇಟೆಯ ಎಂ.ಆರ್.ಶ್ರೀ.ಯವರಿದ್ದ ಬೀದಿಯಲ್ಲಿಯೇ. ದಿನಂಪ್ರತಿ ಅವರ ಭೇಟಿ. ಇವರಿಗೆ ಸ್ಕೂಲು ಬಿಟ್ಟರೆ ಮತ್ತೊಂದು ಓದುವ ಸ್ಥಳವೆಂದರೆ ಕನ್ನಡ ಸಾಹಿತ್ಯ ಪರಿಷತ್ತು. ಹೀಗೆ ಹೈಸ್ಕೂಲಿನಲ್ಲಿದ್ದಾಗಲೇ ಕ.ಸಾ.ಪ.ದ ಒಡನಾಟ. ಅಲ್ಲಿ ನಡೆಯುತ್ತಿದ್ದ ಸಭೆ, ಸಮಾರಂಭಗಳಲ್ಲಿ ಭಾಗವಹಿಸುತ್ತಾ ಲೈಬ್ರರಿಯಲ್ಲಿ ಕುಳಿತು ಪುಸ್ತಕಗಳನ್ನು ಓದುತ್ತಾ ಜ್ಞಾನಾರ್ಜನೆ ಮಾಡಿದವರು.

ಇವರಿಗೂ ಏಕೆ ಲೈಬ್ರರಿಯ ಸದಸ್ಯನಾಗಬಾರದೆಂದೆನಿಸಿತು. ಹೋಗಿ ಕೇಳಿದರಂತೆ. ಆಗ ಇದ್ದ ಮ್ಯಾನೇಜರು ಇಲ್ಲಪ್ಪ, ಹಾಗೆ ಹುಡುಗರಿಗೆಲ್ಲಾ ಸದಸ್ಯತ್ವ ಕೊಡಲು ಬರುವುದಿಲ್ಲವೆಂದರಂತೆ. ಆಗ ಅಲ್ಲೇ ಇದ್ದ ಮಾಸ್ತಿಯವರು ಪಾಪ, ಹುಡುಗ ಕೇಳುತ್ತಿದ್ದಾನೆ, ಮೆಂಬರ್‌ಶಿಪ್ ಕೊಡಿ. "ಬೆಳೆಯುವ ಕುಡಿಗಳು ಮುಂದೆ ಸಾಹಿತ್ಯದ ಮರವಾಗಿ ಬೆಳೆಯಬಹುದು" ಎಂದರಂತೆ. ಮಾಸ್ತಿಯವರು ಹೇಳಿದಂತೆ ಇಂದು ಸಾಹಿತ್ಯದ ಮರವಾಗಿ ಬೆಳೆದು, ಮಾಸ್ತಿಯವರಂತೆ ಸಾಹಿತ್ಯಾಸಕ್ತರನ್ನು ಆಧರಿಸಿ ಸಾಕಿ-ಸಲಹಿ ಬೆಳೆಸಿದವರು ಅಶ್ವತ್ಥನಾರಾಯಣರು.

೨೦೦೬ ರಲ್ಲಿ ಪ್ರಕಟವಾದ "ಸಾಹಿತಿಗಳು. . .ರಸ ನಿಮಿಷಗಳು. . ." ಎಂಬ ನನ್ನ ಪುಸ್ತಕಕ್ಕೆ ಸೊಗಸಾದ ಮುನ್ನುಡಿ ಬರೆದಿದ್ದಾರೆ. ಮತ್ತೊಂದು ಪುಸ್ತಕ "ಕನ್ನಡ ಸಾಹಿತ್ಯದ ದಿನಮಣಿಗಳು" ಬಿಡುಗಡೆಯ ಸಂದರ್ಭದಲ್ಲಿ ನನ್ನ ಪುಸ್ತಕದ ಬಗ್ಗೆ ಮಾತನಾಡುತ್ತಾ, ಇವರು ಒಬ್ಬ ವಿಶಿಷ್ಟ ಬರಹಗಾರರು, ದಿನಪತ್ರಿಕೆಗಳಿಗೆ ವಾರಕ್ಕೊಮ್ಮೆ ಅಂಕಣ ಬರೆಯುವುದೇ ಶ್ರಮದಾಯಕ ಕೆಲಸವೆನಿಸಿದಾಗ ಇವರು "ದಿನಕ್ಕೊಬ್ಬರು ಸಾಹಿತಿಯ (ಸಾಹಿತಿಯ ಹುಟ್ಟಿದ ದಿನಕ್ಕನುಗುಣವಾಗಿ) ಪರಿಚಯವನ್ನು ಎರಡು ವರ್ಷಗಳ ಕಾಲ (ಸಾಹಿತಿ-ಕಲಾವಿದರು ಸೇರಿ) ಮುಖ್ಯ ವಿಷಯಗಳನ್ನೊಳಗೊಂಡಂತೆ ಸಂಕ್ಷಿಪ್ತವಾಗಿ, ಉದಾತ್ತವಾಗಿ, ಸಮಗ್ರವಾಗಿ ಚಿತ್ರಿಸಿರುವುದೇ ವಿಶೇಷವಾಗಿದೆ" ಎಂದು ನನ್ನನ್ನು ಸಭೆಗೆ ಪರಿಚಯಿಸಿದಾಗ ಚಪ್ಪಾಳೆ ಸುರಿಮಳೆ. ಈ ಮೇಲಿನ ಘಟನೆಯನ್ನು ನಿರೂಪಿಸಿರುವುದು ನನ್ನ ಸ್ವ-ಪ್ರತಿಷ್ಠೆಯನ್ನು ತೋರಿಸಲೆಂದಲ್ಲ. ಅಶ್ವತ್ಥನಾರಾಯಣರ ಶ್ರೇಷ್ಠಗುಣವನ್ನು ವಿಶದಪಡಿಸಲು.

ಹೀಗೆ ಉದಯೋನ್ಮುಖ ಬರಹಗಾರರಿರಲಿ, ಪ್ರಸಿದ್ಧ ಸಾಹಿತಿಗಳಿರಲಿ ಎಲ್ಲರನ್ನೂ ವಿಶ್ವಾಸದಿಂದ ಕಾಣುವ, ಯಾವ ಭೇದಭಾವವೂ ಇಲ್ಲದೇ ಅವರ ಆಕಾಂಕ್ಷೆ, ಅಪೇಕ್ಷೆಗಳಿಗನುಗುಣವಾಗಿ ಮಾರ್ಗದರ್ಶನ ಮಾಡುತ್ತಿರುವ ಶ್ರೀ ಅಶ್ವತ್ಥನಾರಾಯಣರ ಬಗ್ಗೆ ಬರೆಯುವುದೇ ಒಂದು ಸಂತೋಷದಾಯಕ ಕೆಲಸವೆಂದು ನಾನು ಭಾವಿಸಿದ್ದೇನೆ.

ಶ್ರೀ ಅಶ್ವತ್ಥನಾರಾಯಣರ ಸಾಹಿತ್ಯ ಪರಿಚಾರಿಕೆ ನಮ್ಮ, ನಿಮ್ಮಂತಹ ಬರಹಗಾರರೆಲ್ಲರಿಗೂ ಸದಾಕಾಲ ದೊರೆಯಲೆಂದು ಆಶಿಸುವೆ.

*****

ಅನಾಜಿ ಪಾಂಡಿತ್ಯ ನನಗೊಂದು ಪ್ರೇರಣೆ

ಡಾ. ವಿಜಯಾ ಸುಬ್ಬರಾಜು
ಚರವಾಣಿ : ೭೦೭೫೨೧೧೬೪೩

ಪ್ರೊ॥ ಅಶ್ವತ್ಥನಾರಾಯಣ ಅವರ ಬಗ್ಗೆ ಬರೆಯುವುದೇ ಒಂದು ಸವಾಲು. ಅವರ ಕಾರ್ಯಕ್ಷೇತ್ರ ಅಪಾರವಾದದ್ದು. ಕನ್ನಡ ಸಾಹಿತ್ಯ ವಲಯದಲ್ಲಿ ಅಶ್ವತ್ಥನಾರಾಯಣ ಅವರು 'ಅನಾಜಿ' ಎಂಬ ಸಂಕ್ಷಿಪ್ತ ಹೆಸರಿನಲ್ಲಿ ಎಲ್ಲೆಲ್ಲೂ, ಎಲ್ಲರಿಗೂ ಅತ್ಯಂತ ಪರಿಚಿತರು ಮತ್ತು ಆಪ್ತರು. ಸರಕಾರಿ ಶಿಕ್ಷಣ ಇಲಾಖೆಯ, ಬೇರೆ ಬೇರೆ ಡಿಗ್ರಿ ಕಾಲೇಜುಗಳಲ್ಲಿ, ಸುಮಾರು ೩೦ ವರ್ಷ ಅಧ್ಯಾಪಕರಾಗಿ ಪ್ರಾಧ್ಯಾಪಕರೂ ಆಗಿ, ಬೋಧನೆಯ ಕಲೆಯಲ್ಲಿ ಅತ್ಯಂತ ನುರಿತವರು. ಕನ್ನಡ ಬೋಧನೆ ಮಾಡಿದರೂ, ಬೇರೆ ಬೇರೆ ವಿಷಯಗಳಲ್ಲಿ ಅಂದರೆ ಸಮಾಜ ಶಾಸ್ತ್ರ, ಶಾಸನ ಶಾಸ್ತ್ರ ಇತ್ಯಾದಿಗಳಲ್ಲಿ ಡಿಪ್ಲೊಮಾ ಪದವಿಗಳಲ್ಲಿಯೂ ಮತ್ತು ಇವುಗಳಿಗಿಂತ ಭಿನ್ನವಾದ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿಯೂ ಡಿಪ್ಲೊಮಾ ಪಡೆದವರು. ಅಲ್ಲದೇ ಶಿಕ್ಷಣ, ಸಂಸ್ಕೃತಿ ಸಂಬಂಧವಾದ ವಿಷಯಗಳ ತಜ್ಞರಾಗಿ, ಪಠ್ಯ ರಚನೆ, ಪ್ರಕಟಣೆ ಮೊದಲಾದ ಮಂಡಳಿ, ಸಮಿತಿಗಳಲ್ಲಿ, ಮಹತ್ವದ ಪಾತ್ರ ವಹಿಸಿದ್ದಾರೆ. ಬಹುಮುಖ ಪ್ರತಿಭೆಯುಳ್ಳ ಇವರು ಸ್ಪರ್ಧಾತ್ಮಕ ಕೋರ್ಸ್ ಗಳಲ್ಲಿಯೂ, ಬೋಧಕರಾಗಿ, ನಿರ್ದೇಶಕರಾಗಿ, ವ್ಯವಸ್ಥಾಪಕರಾಗಿ ಹಲವಾರು ವರ್ಷಸೇವೆ ಸಲ್ಲಿಸುತ್ತಾ ಬಂದವರು. ಶಿಕ್ಷಣ, ಸಾಹಿತ್ಯಲೋಕದಲ್ಲಿ ಅಶ್ವತ್ಥನಾರಾಯಣ ಅವರು ಬಹಳ ಬೇಡಿಕೆಯ ವ್ಯಕ್ತಿಯಾಗಿದ್ದಾರೆ. ಹಲವಾರು ಕಾಲೇಜುಗಳಲ್ಲಿ, ಸಂಶೋಧನೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕನ್ನಡ ಸಂಸ್ಕೃತಿ ಇಲಾಖೆಯ ಸಮಗ್ರದಾಸ ಸಾಹಿತ್ಯದ ೫೦ ಸಂಪುಟಗಳ ಪರಿಶೀಲನೆ ಮತ್ತು ಮುದ್ರಣದ ಜವಾಬ್ದಾರಿಯನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿ ಸೈ ಎನಿಸಿಕೊಂಡಿದ್ದಾರೆ. ಅವರು ಸಾಂಸ್ಕೃತಿಕ, ಸಾಹಿತ್ಯಕ ಜವಾಬ್ದಾರಿಗಳನ್ನು ನಿರ್ವಹಿಸಿದ ಪರಿ ನಿಜಕ್ಕೂ ಅಚ್ಚರಿ, ಅದ್ಭುತ ಎನಿಸುತ್ತದೆ. ಇಷ್ಟೇ ಸಾಲದೆಂಬಂತೆ ಜೈನ, ದಾಸ, ವಚನ ಸಾಹಿತ್ಯಗಳು, ಗ್ರಂಥ ಸಂಪಾದನೆ ಇತ್ಯಾದಿ ಮಹತ್ವದ ಕೆಲಸಗಳನ್ನು ನಿರ್ವಹಿಸಿರುವುದರ ಜೊತೆಗೆ ನೂರಾರು ಉಪನ್ಯಾಸಗಳನ್ನು ರಾಜ್ಯಾದ್ಯಂತ, ಕಾಲೇಜುಗಳಲ್ಲಿ ಹಲವಾರು ಸಂಘ ಸಂಸ್ಥೆಗಳಲ್ಲಿ ನೀಡಿದ್ದಾರೆ. ಅವರ ಹಳೆಗನ್ನಡ ಸಾಹಿತ್ಯ ಪ್ರಕಾರಗಳ ಅಧ್ಯಯನ, ಅವುಗಳ ಮೇಲೆ ಅವರಿಗಿರುವ ಪ್ರಭುತ್ವ, ನಿಜಕ್ಕೂ ದಿಗ್ಭ್ರಮೆ ಮೂಡಿಸುತ್ತದೆ. ಹಳೆಗನ್ನಡ ಕಾವ್ಯಗಳಾದ ಆದಿಪುರಾಣ, ಜೈಮಿನಿ ಭಾರತ, ಪಂಪಭಾರತಗಳ ಕುರಿತು ಅವರು ನೀಡಿದ ಉಪನ್ಯಾಸಗಳಂತೂ, ಹತ್ತು ವರ್ಷಗಳವರೆಗೂ ಮುಂದುವರಿದು ದಾಖಲೆ ನಿರ್ಮಿಸಿದ್ದಾರೆ! ಹೀಗೆ ಅವರಿವರ ಗ್ರಂಥಗಳ ಬಗ್ಗೆ ಮಾತಾಡುವುದಷ್ಟೇ ಅಲ್ಲ, ಸ್ವತಂತ್ರವಾಗಿಯೂ ಪರಿಷತ್ತು–೧೦೦, ಕನ್ನಡ ಸಾಹಿತ್ಯ ಮತ್ತು ಕರಡು ತಿದ್ದುವಿಕೆ, ಕನ್ನಡ ಸಾಹಿತ್ಯ ದಿಗ್ಗಜರು, ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು, ಬಿ.ಎಂ.ಶ್ರೀ. ಪರಿಚಯ, ದೇವುಡು ನರಸಿಂಹ ಶಾಸ್ತ್ರಿ, ಫ.ಗುಳಹಟ್ಟಿ, ಇತ್ಯಾದಿ ಇತ್ಯಾದಿ ಇನ್ನೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಕೇವಲ ಕನ್ನಡ ಸಾಹಿತ್ಯ ಕೃತಿಗಳಷ್ಟೇ ಅಲ್ಲದೇ,

ಆರ್.ವಿ.ಇನ್ಸಿಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ಗಾಗಿ ೩೧ ಕೃತಿಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ.

ಇವರಿಂದ ಸೃಷ್ಟಿಯಾದ ಅಪಾರ ಸಾಹಿತ್ಯ ಕೃತಿಗಳು, ಸಾಹಿತ್ಯದ ಮೇಲೆ ಅವರಿಗೆ ಇರುವ ಪ್ರಭುತ್ವ. ಮತ್ತು ಅಧಿಕೃತತೆ, ಅವರ ಸ್ನೇಹ, ಸಂಪರ್ಕಕ್ಕೆ ಬಂದವರನ್ನು ದಿಗ್ಭ್ರಮೆಪಡಿಸುತ್ತದೆ. ಹಳಗನ್ನಡ ಸಾಹಿತ್ಯ ಪ್ರತಿಭೆಯನ್ನು ಕಂಡವರೆಲ್ಲರೂ ಅವರಿಗೆ ಚಿರಋಣಿಯಾಗಿರುವುದರಲ್ಲಿ ಅಚ್ಚರಿಯೇನೂ ಪಡಬೇಕಾದ್ದಿಲ್ಲ. ಇಷ್ಟೆಲ್ಲ ಅವರಿಗೆ ಸಾಧ್ಯವಾದದ್ದು ಹೇಗೆ ಎನ್ನುವ ಪ್ರಶ್ನೆ ಪ್ರತಿಯೊಬ್ಬರಲ್ಲಿಯೂ ಮೂಡುವುದು ಸಹಜವೇ! ಅವರ ಮನೆಯೇ ಒಂದು ಬೃಹತ್ ಗ್ರಂಥಾಲಯವಾಗಿದೆ. ಅಧ್ಯಯನ ಮಾಡುವವರಿಗೆ ಅದೊಂದು ಸ್ವರ್ಗ! ತಮ್ಮ ತಮ್ಮ ಅಭಿರುಚಿಯ ಆಯ್ಕೆಗೆ ಅಲ್ಲಿ ಅವಕಾಶವಿದೆ.

ಇಷ್ಟೆಲ್ಲ ಮಾಡಿದ ವ್ಯಕ್ತಿಗೆ ಪ್ರಶಸ್ತಿ, ಪುರಸ್ಕಾರಗಳ ಮಹಾಪೂರವೇ ಹರಿದು ಬಂದಿದೆ. ಅಪಾರ ಜ್ಞಾನ ಭಂಡಾರವೇ ಅವರಲ್ಲಿದೆ. ನಿಜವಾಗಿಯೂ ಅವರೊಬ್ಬ ಅಪ್ರತಿಮ ವ್ಯಕ್ತಿ. ಅವರ ಸಮಗ್ರ ವ್ಯಕ್ತಿತ್ವ, ಕಾರ್ಯ ಚಟುವಟಿಕೆಗಳ ವ್ಯಾಪ್ತಿ, ಹೆಸರಿನ ಜೊತೆಗೆ, ಕನ್ನಡಿಗ, ಕನ್ನಡ ಲೇಖಕ, ಅತ್ಯುತ್ತಮ ವಾಗ್ಮಿ, ಸಂಶೋಧಕ, ವಿದ್ವಾಂಸ, ಮಾರ್ಗದರ್ಶಕ, ಕನ್ನಡ ಸೇವಾ ಧುರೀಣ, ಹೀಗೆ ಎಷ್ಟೋ ವಿಶೇಷಣಗಳಿಂದ ಅಲಂಕೃತರಾಗಿದ್ದಾರೆ. ಮಹಾನ್ ಸಾಹಿತಿಗಳ, ಗಮಕಿಗಳ ಹೆಸರಿನ ಸಂಘ ಸಂಸ್ಥೆಗಳ ಚಟುವಟಿಕೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕನ್ನಡ ಭಾಷೆ, ಸಾಹಿತ್ಯದ ಏಳ್ಗೆಗಾಗಿ, ಚಳುವಳಿಗಳಲ್ಲಿ ಭಾಗವಹಿಸಿದ್ದಾರೆ. ಅವರ ಬದುಕೇ ಕನ್ನಡಕ್ಕಾಗಿ, ವಿಶಾಲವಾಗಿ ಕನ್ನಡದ ಪ್ರಗತಿಗಾಗಿ ಮೀಸಲಿರಿಸದಂತಿದೆ. ಕನ್ನಡದ ಕರ್ಮಯೋಗಿಯಂತೆ ಬದುಕುತ್ತಿರುವ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರಿಗೆ ಸಂದ ಗೌರವ, ಪ್ರಶಸ್ತಿಗಳಿಗೆ ಮಿತಿಯೇ ಇಲ್ಲದಂತೆ ಪಾತ್ರರಾಗಿರುವುದು ಅಚ್ಚರಿಯೇನಲ್ಲ!

ವಾಸ್ತವವಾಗಿ ಇವರ ಸಾಧನೆಯ ಒಂದೊಂದು ಪ್ರಶಸ್ತಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇಂತಹ ವ್ಯಕ್ತಿಗಳು ಹೀಗೆ ಇಷ್ಟೊಂದು ಕರ್ಮನಿರತರಾಗಿರಲು ಸಾಧ್ಯವೇ ಎಂದು ಅಚ್ಚರಿಪಡುವುದು ಸಹಜವೆನಿಸುತ್ತದೆ. ಇಷ್ಟು ಹಿರಿಯರಾದರೂ ದಣಿವರಿಯದ ಕ್ರಿಯಾಶೀಲತೆಯೊಂದಿಗೆ ಬದುಕುತ್ತಿರುವ ಅಶ್ವತ್ಥನಾರಾಯಣ ಸರ್, ಇನ್ನೂ ನೂರ್ಕಾಲ ಬಾಳಿ ಬದುಕಿ ಪ್ರತಿಯೊಬ್ಬ ಕನ್ನಡಿಗರಿಗೂ ಪ್ರೇರಣೆಯಾಗಲೆಂದು ಹಾರೈಸುತ್ತೇನೆ. ಅವರ ಪರಿಚಯ ನನಗೆ ನೇರವಾಗಿ ಆಗಿದ್ದು ಎಂ.ಇ.ಎಸ್. ಕಾಲೇಜಿನಲ್ಲಿ ೩೪ ವರ್ಷ ಕೆಲಸ ಮಾಡಿ ನಿವೃತ್ತಳಾದ ಮೇಲೆ. ಬನಶಂಕರಿಯ ಸ್ವಂತ ಮನೆಗೆ ಬಂದೆ, ಕೆಲಸವಿಲ್ಲದೆ ಬೇಸರದ ಸ್ಥಿತಿಯಲ್ಲಿದ್ದಾಗ, ಬಿ.ಎಂ.ಶ್ರೀ. ಪ್ರತಿಷ್ಠಾನದ ಜೊತೆಗೆ ನಂಟು ಬೆಳೆಯಿತು. ಎಂಫಿಲ್. ಪಿ.ಎಚ್.ಡಿ.ಗಳಿಗೆ, ತರಗತಿಗಳನ್ನು ತೆಗೆದುಕೊಳ್ಳುವ, ಮಾರ್ಗದರ್ಶನ ಮಾಡುವ ಅವಕಾಶ ಸಿಕ್ಕಾಗ, ಹಲವಾರು ಮಂದಿ ಹಿರಿಯ ಸಾಹಿತಿಗಳ ಒಡನಾಟ ಸಿಕ್ಕಾಗ, ಹಲವಾರು ಮಂದಿ ಹಿರಿಯ ಸಾಹಿತಿಗಳ ಒಡನಾಟ ನನಗೆ ಲಭ್ಯವಾಯಿತು. ಈ ರೀತಿಯಲ್ಲಿ ನನಗೆ ಅನಾಜಿಯವರ ಪರಿಚಯವಾಯಿತು. ಅಲ್ಲಿನ ಪ್ರತಿಯೊಂದು ಕಾರ್ಯಕ್ರಮದಲ್ಲಿ ಹಾಜರಾಗುತ್ತಿದ್ದೆ. ಇವರೂ ಕೂಡಾ ತಪ್ಪದೇ ಬರುತ್ತಿದ್ದು, ನಮ್ಮಿಬ್ಬರ ಪರಸ್ಪರ ಪರಿಚಯವಾಗಿ, ನಮ್ಮ ನಮ್ಮ ಸಾಹಿತ್ಯ ಸಾಧನೆಗಳನ್ನು ಹಂಚಿಕೊಂಡೆವು. ಅವರ ಸಾಧನೆಗಳ ಬಗ್ಗೆ ತಿಳಿದಾಗ, ಇಂತಹ ಮಹಾನ್ ವ್ಯಕ್ತಿಗಳ ಪರಿಚಯದಿಂದ ಸಾಧನೆಯ ಶಿಖರಗಳಂತಿರುವವರ ಜೊತೆಗೆ ಅನಾಜಿಯವರ ಸಾಧನೆ, ಪ್ರತಿಭೆ, ಕನ್ನಡ ಭಾಷಾ ಪ್ರೀತಿ, ಸಾಹಿತ್ಯದಲ್ಲಿ ಸಾಧಿಸಿದ ಮೈಲಿಗಲ್ಲುಗಳು, ನನ್ನನ್ನು ದಿಗ್ಭ್ರಾಂತಗೊಳಿಸಿದವು. ಪರಿಪೂರ್ಣವಾದ ಅವರ ವ್ಯಕ್ತಿತ್ವ, ಸ್ವಭಾವಗಳನ್ನು ಸಂಪೂರ್ಣವಾಗಿ ಇನ್ನೂ ಹೃದ್ಗತ ಮಾಡಿಕೊಂಡಿಲ್ಲ. ಆದರೂ ಅವರ ಪರಿಚಯ, ಅವರ ಪಾಂಡಿತ್ಯಗಳು ನನಗೊಂದು ಪ್ರೇರಣೆಯ ಶಕ್ತಿಯಾಗಿವೆ!.

*****

ಸಾಹಿತ್ಯ ಬಂಧು

ಡಾ. ಎಂ.ಎಸ್. ವಿಜಯಾ ಹರನ್
ಚರವಾಣಿ : ೮೯೭೧೬೨೬೩೩೫

ಪ್ರೊ. ಜಿ. ಅಶ್ವತ್ಥನಾರಾಯಣ ಅವರನ್ನು ಕಂಡಾಗಲೆಲ್ಲಾ ಒಬ್ಬ ವಿನಯಸಂಪನ್ನ, ವಿದ್ಯಾಭೂಷಣ, ಪರೋಪಕಾರಿ ಮಾರ್ಗದರ್ಶಕನ ಚಿತ್ರ ನನ್ನ ಮನದಲ್ಲಿ ಮೂಡುತ್ತದೆ. ಮಾರ್ಗದರ್ಶಕ ಎಂದಕೂಡಲೇ ವಿಶ್ವವಿದ್ಯಾನಿಲಯವೊಂದರ ವೃತ್ತಿಪರ ಮಾರ್ಗದರ್ಶಕ ಪ್ರಾಧ್ಯಾಪಕರ ಚಿತ್ರವೂ ನಮ್ಮ ಕಣ್ಣ ಮುಂದೆ ನುಸುಳಬಹುದು. ಆದರೆ ಈ ಪ್ರಾಧ್ಯಾಪಕ ಅಶ್ವತ್ಥನಾರಾಯಣ ಅವರು ಆ ಗುಂಪಿಗೆ ಸೇರುವವರಲ್ಲ. ಬದಲಾಗಿ, ನಿತ್ಯಮಾರ್ಗದರ್ಶಕರು. ಮಾರ್ಗದರ್ಶನ ಕೈಂಕರ್ಯವನ್ನು ತಮ್ಮ ನಿತ್ಯಕರ್ತವ್ಯವೆಂಬಂತೆ ನಂಬಿ ನಡೆಯುತ್ತಿರುವವರು. ಅವರ ಈ ಪ್ರವೃತ್ತಿ, ನನ್ನಂತಹ ಹಲವಾರು ಉಪಕೃತರ ಅನುಭವಕ್ಕೂ ಬಂದಂತಹ ಸಂಗತಿಯೇ ಆಗಿದೆ.

ತೊಂಬತ್ತರ ದಶಕದಿಂದ ಆರಂಭವಾದ ಅಶ್ವತ್ಥನಾರಾಯಣ ಅವರ ಪರಿಚಯ, ಸ್ನೇಹವಾಗಿ, ಸುಮಧುರವಾಗಿ ಇಂದಿಗೂ ಸಾಗುತ್ತಿದೆ. ಕುಟುಂಬ ಮಿತ್ರರೂ ಆಗಿ, ನಮ್ಮ ನೆಚ್ಚಿನ 'ಅನಾಜಿ' ನಮ್ಮ ಹಿತೈಷಿಗಳೂ ಆಗಿದ್ದಾರೆ. ಸಾಹಿತ್ಯಕ್ಕೆ ಸಂಬಂಧಿಸಿದ ಯಾವುದೇ ಪುಸ್ತಕದ ಬಗ್ಗೆಯಾಗಲೀ, ಲೇಖಕರ ಬಗ್ಗೆಯಾಗಲೀ, ಮಾಹಿತಿ ಬೇಕಾದಲ್ಲಿ ತಕ್ಷಣ ನನಗೆ ನೆನಪಾಗುವವರೇ 'ಅನಾಜಿ'. ಅವರು ಒಂದು ರೀತಿ ಮಾಹಿತಿ ಕೇಂದ್ರದಂತೆ. ಸಂಬಂಧಪಟ್ಟ ಮಾಹಿತಿಯನ್ನು, ಎಷ್ಟೇ ಕಷ್ಟವಾದರೂ ಸರಿಯೇ, ಕೂಡಲೇ ಸಂಗ್ರಹಿಸಿ, ತಿಳಿಸುವವರೆಗೆ ಅವರು ವಿರಮಿಸುವುದಿಲ್ಲ. ಅಂತಹ ಕಾರ್ಯನಿಷ್ಠೆ ಅವರದು.

೧೯೯೪ ರಲ್ಲಿ ಸಾಹಿತಿ ಆನಂದರ ಬಗ್ಗೆ ನಾನು ಪಿ.ಎಚ್.ಡಿ. ಅಧ್ಯಯನದಲ್ಲಿ ತೊಡಗಿದ್ದೆ. ನನಗೆ ಅಗತ್ಯವಾಗಿ ಬೇಕಾಗಿದ್ದ ಪುಸ್ತಕಗಳನ್ನು ಕೊಡುವುದಷ್ಟೇ ಅಲ್ಲದೆ, ತಮ್ಮಲ್ಲಿಲ್ಲದ ಪುಸ್ತಕಗಳು ಯಾವ ಗ್ರಂಥಾಲಯದಲ್ಲಿ ದೊರಕಬಹುದು ಎಂಬ ಎಲ್ಲಾ ಮಾಹಿತಿಯನ್ನೂ ನೀಡುತ್ತಿದ್ದರು. ನನ್ನ ಸಂಪ್ರಬಂಧದ ರಚನೆಯ ಅವಧಿಯಲ್ಲಿ ತಾನೇ ಆ ಅಧ್ಯಯನದಲ್ಲಿ ತೊಡಗಿರುವರೇನೋ ಎಂಬಷ್ಟು ಆಸ್ಥೆಯಿಂದ ನನ್ನ ಬರೆವಣಿಗೆಯ ಪ್ರಗತಿಯನ್ನು ತಿಳಿದುಕೊಳ್ಳುತ್ತಿದ್ದರು. ಸೂಕ್ತ ಸಲಹೆ ಸೂಚನೆಗಳನ್ನೂ ನೀಡುತ್ತಿದ್ದರು.

ಅನಾಜಿ ಅವರು ಯಾವುದೇ ಕಾರ್ಯನಿಮಿತ್ತ ಮೈಸೂರಿಗೆ ಬಂದರೂ ನಮ್ಮ ಮನೆಯಲ್ಲೇ ತಂಗುತ್ತಿದ್ದರು. ಅದು ನಮ್ಮ ಭಾಗ್ಯವೆಂದೇ ಹೇಳಬೇಕು. ಕಾರಣ, ಅವರ ಆಗಮನ, ನಮಗೆ ಸಾಹಿತ್ಯದ ರಸದೌತಣ, ವಿಚಾರ ವಿನಿಮಯ, ಚಿಂತನ ಪ್ರಚೋದಕ. ಮೈಸೂರು ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಗಾಗಿ 'ಆನಂದರ ಬದುಕು ಬರಹ – ಒಂದು ಅಧ್ಯಯನ' ಎಂಬ ಸಂಪ್ರಬಂಧವನ್ನು, ಪೂಜ್ಯ ಗುರುಗಳಾದ ಡಾ. ಹಾ.ಮಾ.ನಾಯಕರ ಮಾರ್ಗದರ್ಶನದಲ್ಲಿ ಸಲ್ಲಿಸಿದ್ದೆ. ಅದು ಅಂಗೀಕೃತವಾಗಿ ಪಿ.ಎಚ್.ಡಿ. ಪದವಿಯೂ ದೊರಕಿತು. ಆ ಸಂದರ್ಭದಲ್ಲಿ ಹಾ.ಮಾ.ನಾಯಕರೂ, ಅನಾಜಿ ಅವರೂ

ಮೌಲ್ಯಯುತ ಸಲಹೆಯನ್ನು ಕೊಟ್ಟಿದ್ದರು. 'ನಿಮ್ಮ ಕಾರ್ಯ ಇಲ್ಲಿಗೇ ಮುಗಿಯಿತೆಂದು ಭಾವಿಸಬೇಡಿ. ಆನಂದರನ್ನು ಕುರಿತಂತೆ ಇನ್ನೂ ಆಗಬೇಕಾಗಿರುವ ಕಾರ್ಯಗಳತ್ತ ಗಮನಕೊಡಿ. ಪುಸ್ತಕ ಪ್ರಕಟಣೆಯ ಮೂಲಕ ಎಲ್ಲವೂ ದಾಖಲಾಗಬೇಕು' ಎಂದು. ಅವರೀರ್ವರ ಸದಾಶಯದಂತೆ 'ಆನಂದರ ಬದುಕು ಬರಹ- ಒಂದು ಅಧ್ಯಯನ' ಎಂಬ ನನ್ನ ಸಂಪ್ರಬಂಧವನ್ನು ಪುಸ್ತಕ ರೂಪಕ್ಕೆ ಸಿದ್ಧಪಡಿಸಿದೆ. ೧೯೯೮ ರಲ್ಲಿ ಮೈಸೂರಿನ ಅಂದಿನ ಪ್ರಸಿದ್ಧ ಪ್ರಕಾಶನ ಸಂಸ್ಥೆ ಕಾವ್ಯಾಲಯದಿಂದ ಅದು ಪ್ರಕಟವಾಯಿತು. ಇತ್ತೀಚೆಗೆ ೨೦೨೪ ರಲ್ಲಿ ಅದರ ದ್ವಿತೀಯ ಮುದ್ರಣವೂ ಆಯಿತು. ಮೈಸೂರಿನ ವಿಜಯಲಕ್ಷ್ಮೀ ಪ್ರಕಾಶನದಿಂದ ಆಯಿತು. ಇದೇ ಅಲ್ಲದೆ, ಆನಂದರ ಕತೆಗಳನ್ನೆಲ್ಲಾ ಒಟ್ಟುಗೂಡಿಸಿ, ಆಸಕ್ತ ಓದುಗರಿಗೆ ಒಂದೆಡೆ ಲಭ್ಯವಾಗುವಂತೆ 'ಆನಂದರ ಸಮಗ್ರ ಕತೆಗಳು' ಎಂಬ ಬೃಹತ್ ಗ್ರಂಥವನ್ನು ಸಂಪಾದಿಸಿದೆ. ೨೦೧೭ ರಲ್ಲಿ ಮೈಸೂರಿನ ಸಂಸ್ಕೃತಿ ಬುಕ್ ಪ್ಯಾರಡೈಸ್‌ನಿಂದ ಅದು ಪ್ರಕಟವಾಯಿತು.

ಒಮ್ಮೆ, ಅನಾಜಿಯವರು ನಮ್ಮ ಮನೆಗೆ ಬಂದಿದ್ದಾಗ, ಮಹಾನ್ ಕಾದಂಬರಿಕಾರ ಎಸ್.ಎಲ್. ಭೈರಪ್ಪನವರ ಸಾಹಿತ್ಯ ಕೃತಿಗಳನ್ನು ಕುರಿತು ಮಾತನಾಡುತ್ತಿದ್ದಾಗ, "ಕನ್ನಡದಲ್ಲಿ ಎಸ್.ಎಲ್. ಭೈರಪ್ಪನವರ ಕಾದಂಬರಿಗಳನ್ನು ಕುರಿತು, ಮಹಾಪ್ರಬಂಧಗಳು, ವಿಮರ್ಶಾಲೇಖನಗಳು, ವಿಶೇಷ ಸಂಚಿಕೆಗಳು ಬಂದಿವೆ. ಅನೇಕ ವಿಚಾರಗೋಷ್ಠಿಗಳು ನಡೆದಿವೆ. ಈ ಎಲ್ಲ ಗ್ರಂಥಗಳಲ್ಲಿ ಹಾಗೂ ಗೋಷ್ಠಿಗಳಲ್ಲಿ ಅವರ ಭಾಷೆ, ಶೈಲಿ, ಪದಸಂಪತ್ತಿನ ಬಗ್ಗೆ ನಡೆದಿರುವ ಚರ್ಚೆ, ವಿಮರ್ಶೆಗಳು ಸಾಕಷ್ಟಿಲ್ಲ ಎಂದು ನನ್ನ ಅನಿಸಿಕೆ." ಆ ಕುರಿತು ಬರೆಯಿರಿ ಎಂದು ನನಗೆ ಸಲಹೆ ನೀಡಿದ್ದರು. ಅದರ ವ್ಯಾಪ್ತಿ ಅತ್ಯಂತ ವಿಶಾಲವಾದದ್ದು ಎನಿಸಿ, ಮೊದಲ ಪ್ರಯತ್ನವಾಗಿ 'ಎಸ್.ಎಲ್. ಭೈರಪ್ಪನವರ ಕಾದಂಬರಿಗಳಲ್ಲಿ ಗಾದೆಗಳು' ಎಂಬ ಅಧ್ಯಯನಕ್ಕೆ ತೊಡಗಿದೆ. ಅದು ಪುಸ್ತಕ ರೂಪವನ್ನು ತಾಳಿತು. 'ಅನಾಜಿ' ಅವರು ಅತ್ಯಂತ ಸಂತಸಪಟ್ಟರು. ಅದಕ್ಕೆ ಸೊಗಸಾದ ಮುನ್ನುಡಿ ಬರೆದುಕೊಟ್ಟರು.

ನಮಗೆಲ್ಲಾ ತಿಳಿದಿರುವಂತೆ ಅನಾಜಿ ಅವರು ಶ್ರೀಸಾಮಾನ್ಯರಲ್ಲ. ಮಾನ್ಯರು, ಅಸಾಮಾನ್ಯರು. ಹೀಗಾಗಿ ಮುಂದೆ ೨೦೨೧ರಲ್ಲಿ ಬೆಂಗಳೂರಿನ ಸಾಹಿತ್ಯ ಭಂಡಾರದಿಂದ ಪ್ರಕಟಿಸಿದ ಭೈರಪ್ಪನವರನ್ನು ಕಂಡಂತೆ ವಿದ್ವಾಂಸರ ಅನಿಸಿಕೆಗಳನ್ನು ಸಂಗ್ರಹಿಸಿದ್ದ 'ಬಲ್ಲವರು ಬಲ್ಲಂತೆ ಭೈರಪ್ಪ' ಎಂಬ ಗ್ರಂಥಕ್ಕಾಗಿ 'ಅನಾಜಿ' ಅವರಿಂದ ಲೇಖನವನ್ನು ಬರೆಸಿದೆ. "ನಾ ಕಂಡಂತೆ ಎಸ್.ಎಲ್. ಭೈರಪ್ಪ" ಎಂಬ ವಿದ್ವತ್ಪೂರ್ಣ ಲೇಖನವನ್ನು ಬರೆದುಕೊಟ್ಟರು.

ಒಟ್ಟಾರೆ, ನನ್ನೆಲ್ಲಾ ಸಾಹಿತ್ಯ ರಚನೆಗೆ 'ಅನಾಜಿ' ಅವರು, ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರೇರಕರಾಗಿದ್ದಾರೆ. ಅವರಿಗೆ ನಾನು ಚಿರಋಣಿ ಎಂದೆಲ್ಲಾ ಹೇಳುವುದು ತೀರಾ ಔಪಚಾರಿಕ ಎನಿಸುತ್ತಿದೆ. ಅವರ ಸ್ನೇಹ, ವಿಶ್ವಾಸ ದೊರೆತದ್ದು ನನ್ನ ಅದೃಷ್ಟವೆಂದೇ ಭಾವಿಸಿದ್ದೇನೆ. ಅನಾಜಿ ಅವರು ನನ್ನ ಸಾಹಿತ್ಯ ಬಂಧುವಷ್ಟೇ ಅಲ್ಲ, ಕುಟುಂಬ ಮಿತ್ರರೂ ಆಗಿದ್ದಾರೆ. ನಮಗೆ ಹಿರಿಯಣ್ಣನಂತೆ ಮಾರ್ಗದರ್ಶಕರೂ ಆಗಿದ್ದಾರೆ. ಅವರ ಪತ್ನಿ ಶ್ರೀಮತಿ ಲಕ್ಷ್ಮೀದೇವಿ ಅವರೂ ಅಷ್ಟೇ ಪ್ರೀತಿಪಾತ್ರರಾಗಿದ್ದಾರೆ. ಸಾಹಿತ್ಯಸೇವೆ, ಪರೋಪಕಾರಕ್ಕಾಗಿಯೇ ಮುಡಿಪಾಗಿಟ್ಟ ಅನಾಜಿ ಅವರ ಜೀವನ ಶೈಲಿ ಅನುಸರಣೀಯವಾದುದು. ಅನಾಜಿ ದಂಪತಿ, ಶತಾಯುಷಿಗಳಾಗಿ ನಮ್ಮೊಂದಿಗಿದ್ದು, ನಮಗೆ ಮಾರ್ಗದರ್ಶನ ಮಾಡುತ್ತಿರಲಿ ಎಂಬುದೇ ನನ್ನ ಶುಭ ಹಾರೈಕೆ.

******

ಅನಾಜಿಯೆಂಬ ಅಮೋಘ ಕನ್ನಡ ಝರಿ

ಎನ್. ರಾಮನಾಥ್
ಚರವಾಣಿ : ೯೪೪೪೮೦೫೫೦೪೬೩

ಜಟಿಲವಾದ ಪದಗಳ ಅರ್ಥಗಳನ್ನು ನಿಘಂಟಿನಲ್ಲಿ ಹುಡುಕಲು ಸೋಮಾರಿತನವೆ? ಕುರುಕ್ಷೇತ್ರ ಯುದ್ಧದ ಎಷ್ಟನೆಯ ದಿನ ಸುಪ್ರತೀಕದ ವಧೆಯಾಯಿತು ಎಂಬ ಮಾಹಿತಿ ನೀಡುವ ಗ್ರಂಥವನ್ನು ಹೆಕ್ಕಿ, ಹುಡುಕಲು ಸಮಯದ ಅಭಾವವಿದೆಯೆ? ಚಿಂತಿಸಬೇಡಿ, ಪ್ರೊಫೆಸರ್ ಅನಾಜಿ ಅವರಿಗೆ ಫೋನ್ ಮಾಡಿ. ಸಾಹಿತಿಗಳು, ಸಾಹಿತ್ಯ, ಭಾಷಾ ಬಳಕೆ, ಭಾಷಾ ವೈಶಿಷ್ಟ್ಯ ಮೊದಲಾದ ವಿಷಯಗಳ ಕುರಿತು ನನಗೆ ತಿಳಿದಿರುವ ನರರೂಪಿ ಗೂಗಲ್ ಎಂದರೆ ಅನಾಜಿ.

ಸಾಹಿತ್ಯ ಪರಿಚಾರಿಕೆ ಸುಲಭದ ಕೆಲಸವಲ್ಲ. ಹಣಕಾಸಿನ ಲೆಕ್ಕದಲ್ಲಿ ನೋಡುವುದಾದರೆ ಅನೇಕ ಬಾರಿ ಅದು ಲಾಭದಾಯಕವೂ ಅಲ್ಲ. ಆದರೆ ಆ ಪರಿಚಾರಿಕೆಯಲ್ಲಿ ತೊಡಗಿಸಿಕೊಂಡಾಗ ಪಡೆಯುವ ಸಾರ್ಥಕತೆ ಅನನ್ಯವಾದುದು. ಒಮ್ಮೆ ಅನಾಜಿ ಪರಸ್ಥಳದಲ್ಲಿ ಭಾಷಣಕ್ಕೆ ಹೋಗಬೇಕಾಗಿತ್ತು. ಅವರು ಪ್ರಯಾಣಿಸುತ್ತಿದ್ದ ಬಸ್ ಅರ್ಧದಾರಿಯಲ್ಲಿ ಕೆಟ್ಟು ನಿಂತಿತು. ಪ್ರಾಯಶಃ ಮರುದಿನದ ವರೆಗೆ ಅವರು ಸೇರಬೇಕಾದ ಸ್ಥಳಕ್ಕೆ ಮತ್ತೊಂದು ಬಸ್ ಇರಲಿಲ್ಲ. ಇಂದಿನಂತೆ ಕ್ಯಾಬ್ ಮಾಡಿಕೊಂಡು ಹೋಗುವ ಅವಕಾಶ ಅಂದು ಯೋಚನೆಗೂ ಲಭ್ಯವಿರಲಿಲ್ಲ. "ಭಾಷಣಕ್ಕೆ ಬರುತ್ತೇನೆಂದು ಹೇಳಿ ತಪ್ಪಿಸಿಕೊಳ್ಳುವುದು ತರವಲ್ಲ" ಎಂದು ಚಡಪಡಿಸುತ್ತಿದ್ದ ಅನಾಜಿಯವರಿಗೆ ಮಣ್ಣಿನ ಲಾರಿಯೊಂದು ಬರುತ್ತಿರುವುದು ಗೋಚರಿಸಿತು. ಸನ್ನೆ ಮಾಡಿ, ಲಾರಿ ನಿಲ್ಲಿಸಿ, ತಮ್ಮ ಗಮ್ಯಕ್ಕೆ ಬಿಡಲು ವಿನಂತಿಸಿಕೊಂಡರೆ, "ಕ್ಯಾಬಿನ್ ಫುಲ್ ಆಗಿದೆ ಸಾರ್. ಆಗೋದಿಲ್ಲ" ಎಂದ ಡ್ರೈವರ್. ಲಾರಿಯ ಹಿಂಬದಿಯಲ್ಲಿ ಮಣ್ಣು ತುಂಬುವ ಜಾಗದಲ್ಲೇ ನಿಂತು ಬರುತ್ತೇನೆಂದು ವಿನಂತಿಸಿಕೊಂಡ ಅನಾಜಿ ತಾವು ತಲುಪಬೇಕಾದ ಸ್ಥಳವನ್ನು ತಲುಪುವ ವೇಳೆಗೆ ತಮ್ಮನ್ನು ತಾವು ಮಣ್ಣಿನ ಮಗ ಎಂದು ಅಘೋಷಿತವಾಗಿ ತೋರಿದುದನ್ನು ಕಂಡು ಸರ್ವಲಿಂಗಗಳೂ ಮೆಚ್ಚಿ ಅಹುದಹುದೆನ್ನುತ್ತಿದ್ದವು. ಒಬ್ಬ ಪ್ರೊಫೆಸರ್ ಒಂದು ಕಾರ್ಯಕ್ರಮದ ಬಗ್ಗೆ ಇಷ್ಟು ಆಸ್ಥೆ ವಹಿಸುವುದು, ಶ್ರಮ ಪಡುವುದು ರಿಪ್ಲಿಯ 'ಬಿಲೀವ್ ಇಟ್ ಆರ್ ನಾಟ್' ಅಂಕಣಕ್ಕೆ ಯೋಗ್ಯವಾದ ವಸ್ತುವೇ ಸೈ.

ಪ್ರೊಫೆಸರ್ ಅನಾಜಿಯವರನ್ನು ನಾನು ಮೊದಲು ಕಂಡದ್ದು ಕನ್ನಡ ಸಾಹಿತ್ಯ ಪರಿಷತ್ತಿನ ಎದುರಿನ ಮಕ್ಕಳಕೂಟದಲ್ಲಿ. ಅಂದು ಅವರು ಭಾಷಣಕಾರನಂತಲ್ಲದೆ ಶುದ್ಧ ಮೇಷ್ಟ್ರ ಹಾಗೆ ಆರ್. ಕಲ್ಯಾಣಮ್ಮನವರ ಬಗ್ಗೆ ತರಗತಿಯನ್ನೇ ತೆಗೆದುಕೊಂಡಿದ್ದರು ಎನಿಸಿತ್ತು. ಒಬ್ಬ ವ್ಯಕ್ತಿಯನ್ನು ಸಮಗ್ರವಾಗಿ ಪರಿಚಯಿಸುವುದು ಸುಲಭದ ಮಾತಲ್ಲ. ಅವರ ಬಗ್ಗೆ ವಿಷಯಗಳು ತಿಳಿದಿದ್ದರೂ, ಒಂದು ಮಾಲೆಯ ರೀತಿ ಅವುಗಳನ್ನು ಪೋಣಿಸಿ ಮಂಡಿಸುವ ಕಲೆ ಎಲ್ಲರಿಗೂ ಸಿದ್ಧಿಸದು. ಅನಾಜಿ ಅಂದು ಕಲ್ಯಾಣಮ್ಮನವರ ಬಗ್ಗೆ ಮಾಡಿದ ಭಾಷಣ/ಪಾಠ/ಉಪನ್ಯಾಸವು ಸುಮನೋಹರ ಪದಮಾಲೆಯಾಗಿತ್ತು. ಅವರು ಬಳಸಿದ ಭಾಷೆಯ ಶ್ರೀಮಂತಿಕೆ ನನ್ನನ್ನು ಬೆರಗುಗೊಳಿಸಿತ್ತು. ಅಂದು ಆರಂಭಗೊಂಡ ಆ ಬೆರಗು ಇಂದಿಗೂ ಮುಂದುವರಿದಿದೆ.

ಬೆಂಗಳೂರಿನ ವಿಜಯನಗರದಲ್ಲಿ ಸಾಹಿತ್ಯ ಪರಿಷತ್ತಿನ ಮಾಜಿ ಕಾರ್ಯದರ್ಶಿಗಳಾಗಿದ್ದ, ನಾನು ಕಂಡ ಉತ್ತಮ ಸಂಘಟಕರ ಪೈಕಿ ಒಬ್ಬರಾಗಿದ್ದ ಶ್ರೀ ಜಿ.ಕೆ. ಗುಂಡೂರಾವ್ ಅವರ ನಾಯಕತ್ವದಲ್ಲಿ ನಾವು ವಿನೋದೋತ್ಸವ ಎಂಬ ಅರ್ಧ ದಿನದ (ನಂತರ ಅದು ಇಡೀ ದಿನದ ಕಾರ್ಯಕ್ರಮವಾಗಿಯೂ ಕೆಲವು ವರ್ಷಗಳು ನಡೆಯಿತು) ಹಾಸ್ಯಮೇಳವನ್ನು ನಡೆಸಿದಾಗ ಅಲ್ಲಿ ವಿನೋದದ ಲಹರಿಯನ್ನು ಹರಿಸಲು ಬಂದವರ ಪೈಕಿ ಅನಾಜಿಯೂ ಇದ್ದರು. ತಮ್ಮ ಬದುಕಿನ ಅನೇಕ ವಿನೋದಕರ ಘಟನೆಗಳನ್ನು ತಮ್ಮ ಭಾಷಣದಲ್ಲಿ ಮಂಡಿಸಿದುದಲ್ಲದೆ ಅನೇಕ ಸಾಹಿತಿಗಳ ಜೀವನದಲ್ಲಿ ಸಂದ ಹಾಸ್ಯಪ್ರಸಂಗಗಳನ್ನೂ ಆಸಕ್ತ ಪ್ರೇಕ್ಷಕರಿಗೆ ತಲುಪಿಸಿದರು. ಅನಂತರ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ ಅನೇಕ ಸಭೆಗಳಲ್ಲಿ ನಾನು ಶ್ರೋತೃವಾಗಿ ಕುಳಿತು ಅವರ ಭಾಷಣಗಳನ್ನು ಕೇಳಿ ಆನಂದಿಸಿದ್ದೇನೆ.

ಅನಾಜಿ ನನಗೆ ಇಷ್ಟವಾಗುವ ಗುಣಗಳ ಪೈಕಿ ಅವರು ತಮಗೆ ಸರಿಯಲ್ಲ ಎನ್ನಿಸಿದ್ದನ್ನು ನೇರವಾಗಿ ಹೇಳಿ, ಇತರರಿಗೂ ಸರಿದಾರಿಯ ದರ್ಶನ ಮಾಡಿಸುವಲ್ಲಿ ಅವರದು ಹರಯದ ಕಾಲದಿಂದಲೂ ರೂಢಿತವಾದ ಧೋರಣೆ. "ನಿನಗೇನು ತಿಳಿದೀತು ಈ ಸಾಹಿತ್ಯ! ನಿನಗೆ ಕೊಡುವುದಿಲ್ಲ" ಗ್ರಂಥಪಾಲಕರೊಬ್ಬರು ಇವರು ಕೇಳಿದ ಪುಸ್ತಕವನ್ನು ಕೊಡಲು ನಿರಾಕರಿಸಿದಾಗ ಆ ಪುಸ್ತಕವನ್ನು ಪಡೆಯಲು ಅವರು ಅರ್ಹರೆಂದು ತೋರಿಸಿಕೊಟ್ಟ ರೀತಿ, ಪರಿಷತ್ತಿನ ಹಲವು ಧೋರಣೆಗಳು ತಪ್ಪೆಂದು ತನ್ಮಂಡಲಿಗೆ ಮನವರಿಕೆ ಮಾಡಿಕೊಟ್ಟ ಪ್ರಸಂಗ, ಮೊದಲಾದವಲ್ಲದೆ ಗೋಕಾಕರ ಬರವಣಿಗೆಯ ಬಗ್ಗೆ ತಮ್ಮ ತಕರಾರುಗಳನ್ನು ಗೋಕಾಕರಲ್ಲಿಯೇ ಹಂಚಿಕೊಂಡು ಅವುಗಳನ್ನು ಬಗೆಹರಿಸಿಕೊಂಡ ಪರಿ, ಇವೆಲ್ಲವೂ ಇವರ ಸತ್ಯಪರತೆಗೆ, ತತ್ತ್ವಬದ್ಧತೆಗೆ ಸಾಕ್ಷಿಗಳಾಗಿವೆ.

ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಎಂಟುನೂರು ದಿನಗಳ ಕಾಲ 'ಹೀಗೂ ಉಂಟು' ಎಂಬ ಅಂಕಣವನ್ನು ನಾನು ಬರೆಯುತ್ತಿದ್ದ ಸಂದರ್ಭದಲ್ಲಿ ಪ್ರತಿ ದಿನದ ಅಂಕಣದ ಬಗ್ಗೆ ಅನಾಜಿ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಿದ್ದರು. ಆ ಲೇಖನಮಾಲೆಯಲ್ಲಿ ಅಂದಂದು ಮೂಡಿದ ಲೇಖನವನ್ನು ಮತ್ತೂ ಯಾವ ರೀತಿ ಉತ್ತಮಗೊಳಿಸಬಹುದು ಎಂಬುದಕ್ಕೆ ಸಲಹೆಗಳನ್ನು ನೀಡುವುದಲ್ಲದೆ ಲೇಖನದಲ್ಲಿ ವಸ್ತು/ವಿಷಯಗಳ ಸಮರ್ಪಕ ಉಲ್ಲೇಖವಾಗದಿದ್ದರೆ ಅದನ್ನೂ ಎತ್ತಿತೋರಿಸಿ ನನ್ನ ಬರವಣಿಗೆಯ ಉತ್ತಮಿಕೆಗೆ ಅವಶ್ಯವಾದ ಮಾರ್ಗದರ್ಶನವನ್ನು ನೀಡಿದವರು ಅನಾಜಿ.

ಅನಾಜಿ ಮತ್ತು ಶ್ರೀಮತಿ ಅನಾಜಿಯವರೊಡನೆ ಕಾಲ ಕಳೆಯುವುದೊಂದು ರಸದೌತಣ. "ಕಾಡಿನ ಬಗ್ಗೆ ಪಂಪ ಹೇಳಿರುವುದನ್ನು ಕೇಳಿ" ಎಂದು ಅನಾಜಿ ಆರಂಭಿಸುತ್ತಿದ್ದಂತೆಯೇ ಅವರ ಶ್ರೀಮತಿಯವರಾದ ಲಕ್ಷ್ಮೀದೇವಿಯವರು "ರನ್ನನು ಹೀಗೆಂದಿದ್ದಾನೆ", ಎಂದೋ, "ಶಬ್ದಮಣಿದರ್ಪಣದಲ್ಲಿ ಹೀಗಿದೆ" ಎಂದೋ ಪತಿಯ ಮಾತುಗಳಿಗೆ ಪೂರಕವಾಗಿ ನುಡಿಯತೊಡಗುತ್ತಾರೆ. ಅನಾಜಿ ಮಡದಿ ನುಡಿದ ಮಾತುಗಳ ಮಹಾಪೂರಕ್ಕೆ ಮತ್ತಷ್ಟು ಮಾಹಿತಿಸುನಾಮಿಯನ್ನು ಜೋಡಿಸಿಕೊಡುತ್ತಾರೆ. ಒಟ್ಟಿನಲ್ಲಿ ಅವರಿಬ್ಬರೊಡನೆ ಮಾತಿಗೆ ಕುಳಿತವರಿಗೆ ಸಾಹಿತ್ಯದ ಅಮೋಘ ವರ್ಷಧಾರೆ ಲಭ್ಯವಾಗುವುದು ನಿಶ್ಚಿತ. ಪಂಪನ ಮಾತುಗಳ ಅಣಕದಲ್ಲೇ ನನ್ನ ಅನಿಸಿಕೆಗಳನ್ನು ಈ ರೀತಿಯಲ್ಲಿ ಸಮಾಪ್ತಿಗೊಳಿಸಿ ಸಮರ್ಪಿಸುತ್ತಿದ್ದೇನೆ:

ಕ್ಲಿಷ್ಟದ ಭಾಷೆ ಓದಿದೊಡಂ; ಪಳೆನುಡಿಗೇಲ್ದೊಡಂ; ಮೆದುಳರಿವುದಕೇ
ಕಷ್ಟವಾದ ಪದಪುಂಜಂ ಕಿವಿವೊಕ್ಕೊಡಂ; ಪೊಸಗನ್ನಡ ಕಾವ್ಯಂ
ಸ್ಪಷ್ಟಾರ್ಥದೋರದೆ ಕಂಗೆಡಿಸಿದೊಡಂ; ಪದಾರ್ಥವರಿಯದಿರಲಾ
ರಿಟ್ಟೊಡಮಂಕುಶಂ ನೆನೆವುದೆನ್ನ ಮನಂ ಅನಾಜಿ ಗುರುಗಳಂ ॥

******

'ಅನಾಜಿ' ಎಂಬ ಆಲದಮರ

ನೈಷಧಂ ಎಸ್ಸೆ
(ಎನ್.ಎಸ್. ಅಶ್ವತ್ಥನಾರಾಯಣಶಾಸ್ತ್ರೀ)

ಕೆಲವು ದಿನಗಳ ಹಿಂದೆ 'ಉದಯಭಾನು ಕಲಾ ಸಂಘ'ದ ಆಶ್ರಯದಲ್ಲಿ ಖ್ಯಾತ ಕಾದಂಬರಿಕಾರರಾಗಿದ್ದ ಶ್ರೀ ಕೊರಟಿ ಶ್ರೀನಿವಾಸರಾಯರ ಜನ್ಮಶತಾಬ್ಧಿಯ ಕಾರ್ಯಕ್ರಮ ಆಯೋಜನೆಯಾಗಿತ್ತು. ಕೊರಟಿಯವರ ಸ್ನೇಹಸುಖ ನನಗೂ ತಟ್ಟಿತ್ತಾದ್ದರಿಂದ ಸಭೆಗೆ ಹೋಗಿದ್ದೆ. ಪ್ರೊಫೆಸರ್ ಅಶ್ವತ್ಥನಾರಾಯಣ ಜಿ. ಮಾತನಾಡಿದರು. ಅವರ ಮಾತು ಕೇವಲ ಕೊರಟಿಯವರಿಗೆ ಮಾತ್ರ ಸೀಮಿತವಾಗಿರದೆ ಅವರ ಸುತ್ತಲಿನ ಕನ್ನಡ ನವೋದಯ ಕಾಲದ ಪ್ರಪಂಚವನ್ನೆ ತೆರೆದಿಟ್ಟಹಾಗಿತ್ತು. ಅವರದು ನಿರರ್ಗಳ ಮಾತುಗಾರಿಕೆ!

ಸಭೆಯಲ್ಲಿ ಮಾತನಾಡಿದ ಇನ್ನೊಬ್ಬರು ದಾಸಸಾಹಿತ್ಯದ ದಿಗ್ಗಜರಾದ ಡಾ. ಅರಳುಮಲ್ಲಿಗೆ ಪಾರ್ಥಸಾರಥಿಯವರು. ಅವರ ಮಾತಿನ ಮುಖ್ಯ ಅಂಶಗಳಲ್ಲಿ ಒಂದು ಹೀಗಿತ್ತು: "ಗಳಗನಾಥರಿಂದ ಇಂದಿನವರೆಗೆ ಅನೇಕ ಸಾಹಿತಿಗಳ ಮಹತ್ವದ ಕೃತಿಗಳು ಮರುಬೆಳಕನ್ನು ಕಾಣದೇ ಸಮಾಜದ ವಿಸ್ಮೃತಿಗೆ ಜಾರಿ ಕಳೆದುಹೋಗುತ್ತಿದೆ ಎನ್ನುವಂತಹ ಸನ್ನಿವೇಶ ಇಂದು ಎದುರಾಗಿದೆ. ಇಂತಹ ಸಂದರ್ಭದಲ್ಲಿ ಆ ಕಾಲವನ್ನು ಕಂಡ ಮತ್ತು ಅಂದಿನ ಸಾಹಿತಿಗಳೂ, ಸಾಹಿತ್ಯವೂ ಪರಿಚಯವಿರುವ ಅಶ್ವತ್ಥನಾರಾಯಣರಂತಹವರ ಕೈಯ್ಯಲ್ಲಿ ಅಂದಿನ ವಿದ್ಯಮಾನಗಳನ್ನು ಬರೆಯಿಸಬೇಕಾದ ತುರ್ತು ಇಂದು ಇದೆ. ಅದನ್ನು ಸಂಘ ಸಂಸ್ಥೆಗಳು ಮಾಡಿಸಬೇಕಾಗಿದೆ:- ಇಷ್ಟು ಸಾಕಲ್ಲವೆ ಅಶ್ವತ್ಥನಾರಾಯಣರ ಕುರಿತ ಪರಿಚಯ?

ಇದೇ ರೀತಿ–

ಇವರ ವಿದ್ವತ್ತು ಕುರಿತಾಗಿ ಇವರಿಗೆ ಆಪ್ತರೂ ಗಾಂಧೀವಾದಿಗಳೂ ದೇಶಭಕ್ತರೂ ಆದ ಶ್ರೀ ಡಿ.ನಂ. ವೆಂಕಟರಮಣಯ್ಯನವರು ಇವರನ್ನು 'ಆಲದಮರ' ಎಂದು ಗುರುತಿಸುತ್ತಾರೆ; ನಿಜ ಅಲ್ಲವೆ? ಆಲದ ಮರಕ್ಕೆ ಬೇರುಗಳು, ಕಾಂಡ, ಕೊಂಬೆಗಳು, ಬಿಳಲುಗಳು, ಎಲೆಗಳು, ಸಣ್ಣ ಹೂಗಳು ಎಲ್ಲಾ ಇರುತ್ತವೆ. ಮರ ಅನೇಕ ಪ್ರಾಣಿ ಪಕ್ಷಿಗಳಿಗೆ ಆಶ್ರಯ ಕೊಡುತ್ತದೆ. ಒಬ್ಬ ಜೋಗಿಯೂ ಸಹ ಮರದ ಕೆಳಗೆ ಒಲೆ ಹಚ್ಚಿ ಊಟಮಾಡುತ್ತಾನೆ. ಅಶ್ವತ್ಥನಾರಾಯಣರ ಕೃತಿ ಸಂಪತ್ತು ಅವರ ಗ್ರಂಥ ಸಂಗ್ರಹ ವಿಫುಲವಾದುದು ಎನ್ನುತ್ತಾರೆ. ಅವರ ಮಿತ್ತರು. ಹೌದು, ನೀವು ಒಂದು ರಾಮಾಯಣ ಗ್ರಂಥ ಕೇಳಿ ಅವರು ತಮ್ಮ ಪುಸ್ತಕ ಭಂಡಾರದಲ್ಲಿರುವ ನೂರು ಬೇರೆ ಬೇರೆ ರಾಮಾಯಣಗಳನ್ನು ತೋರಿಸುತ್ತಾರೆ. ಹಾಗೆಯೇ ಹಳಗನ್ನಡ ವ್ಯಾಕರಣ ಮತ್ತು ಗ್ರಂಥ ಸಂಪಾದನೆಯ ವಿಷಯಗಳಿಗೂ ಈ ಮಾತು ಸಲ್ಲುತ್ತದೆ.

ಬಹುಮುಖ್ಯವಾಗಿ, ಗಂಗಾಧರ ದೇವುಡುರವರು ತಮ್ಮ ತಂದೆ ದೇವುಡು ನರಸಿಂಹಶಾಸ್ತ್ರಿಗಳ ಪ್ರತಿಷ್ಠಾನ ಸ್ಥಾಪಿಸಿದಾಗಲಿಂದಲೂ ಬಾಗದ ಬೆನ್ನೆಲುಬಾಗಿ 'ದೇವುಡು ಪ್ರತಿಷ್ಠಾನ'ದ ಜೊತೆ ನಿಂತದ್ದನ್ನು ನಾನು ಕಂಡಿದ್ದೇನೆ. ಈ ದಿನಗಳಲ್ಲಿ ದೇವುಡುರವರ ವಿಖ್ಯಾತ ಕಾದಂಬರಿತ್ರಯ ಮಾತ್ರವಲ್ಲದೆ ಅವರ ಹಲವಾರು ಬೇರೆ ಬೇರೆ ಗ್ರಂಥಗಳನ್ನೂ ಹೇಮಂತ ಪ್ರಕಾಶನ ಪ್ರಕಟಿಸಿತು. ಈ ಕಾರ್ಯದಲ್ಲಿ ಪ್ರತಿಷ್ಠಾನಕ್ಕೆ ಸಹಯೋಗ ನೀಡಿದವರು ಅನಾಜಿಯವರು. ನನ್ನ ಗ್ರಹಿಕೆಯಲ್ಲಿ ಇದು ದೊಡ್ಡ ಕೆಲಸ. ಇಂದು ಅನೇಕರು ದೇವುಡು ಅಂತಹ ಮಹಾ ಲೇಖಕರ ಮರು ಓದನ್ನು ಮಾಡುತ್ತಿರುವುದಕ್ಕೆ ಈ ಪ್ರಕಟಣೆಗಳು ನಾಂದಿ ಹಾಡಿದವು. ಈ ಕೆಲಸವನ್ನು ಮುಂದುವರಿಸಿ ಸಹೃದಯ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅಂತಹ ವಿದ್ವಾಂಸರೂ ದೇವುಡು ಸಮಗ್ರ ಸಾಹಿತ್ಯವನ್ನು ಪ್ರಕಟಿಸಿ ಜನಕ್ಕೆ ತಲುಪಿಸುವ ಕೆಲಸವನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ. ಈ ಎಲ್ಲದರ ಮಧ್ಯೆ ಅನಾಜಿ ಇದ್ದೇ ಇದ್ದಾರೆ.

ಅವರ ಇನ್ನೊಂದು ಉಲ್ಲೇಖಾರ್ಹವಾದ ಕೆಲಸವೆಂದರೆ ಗ್ರಂಥ ಸಂಪಾದನೆ. ಇದು ಕಣ್ಣಿಗೆ ಕೈಗೆ ಎಟುಕುವಂತಹುದು. ದೇವರ ದಾಸಿಮಯ್ಯನ ವಚನ ಸಂಗ್ರಹ, ರಾಸ ದರ್ಶನ, ವಿಜಯದಾಸರ ಕೀರ್ತನೆಗಳು, ಕಲ್ಲಂಗೆರೆ ತಿಮ್ಮಪ್ಪ ದಾಸರ ಕೃತಿಗಳು, ಸೌಂದರ್ಯಲಹರಿ ಕುರಿತ ಕೃತಿ–ಇಂತಹವು ಅನಾಜಿಯವರ ವಿದ್ವತ್ತು ಮತ್ತು ವ್ಯಕ್ತಿತ್ವವನ್ನು ಪಾರದರ್ಶಕವಾಗಿ ತೋರುವಂತಹವು.

ಹಾಗೆಯೇ ಇವರು ಆಕಾಶವಾಣಿ ಮತ್ತು ದೂರದರ್ಶನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ ಎನ್ನುವುದೂ, ಜೀವನ ಚರಿತ್ರೆಗಳು, ಜೈನ ಸಾಹಿತ್ಯ ಕುರಿತ ಕೃತಿಗಳನ್ನು ರಚಿಸಿದ್ದಾರೆ ಎನ್ನುವುದೂ ಗಮನಾರ್ಹವಾದ ಸಂಗತಿ. ಅನಾಜಿ ವಿಫುಲವಾಗಿ ಧಾರ್ಮಿಕ ಸಾಹಿತ್ಯವನ್ನೂ, ತಾವು ಮಾಡಿರುವ ಉಪನ್ಯಾಸಗಳನ್ನೂ ಪ್ರಕಟಿಸಿದ್ದಾರೆ. ಇಪ್ಪತ್ತು ಸಾವಿರಕ್ಕೂ ಮಿಗಿಲಾದ ಗ್ರಂಥ ಸಂಗ್ರಹವನ್ನೂ ಹೊಂದಿದ್ದಾರೆ.

ಸಹಜವಾಗಿಯೇ ಇವರು ಕರ್ನಾಟಕ ಸಾಹಿತ್ಯ ಅಕಾಡಮಿಯ ಪ್ರಶಸ್ತಿಯೇ ಮುಂತಾದ ಹಲವಾರು ಪ್ರಶಸ್ತಿ ಮತ್ತು ಸಮ್ಮಾನಗಳಿಗೆ ಭಾಜನರಾಗಿದ್ದಾರೆ; ಇನ್ನೇನು ಬೇಕು? ಹಾಗೆ ಸುಮ್ಮನೆ ಕೊಡುವವರಲ್ಲ ಅನಾಜಿ! ಇದನ್ನು ಇಂದೂ ನಾವು ಗಮನಿಸಬೇಕು.

ಕರ್ನಾಟಕ ಲೇಖಕರ ಸಂಘ ಒಂದು ಸಂಗತಿ ನೆನಪಾಗುತ್ತಿದೆ, ಹೇಳಬಹುದು ಅನ್ನಿಸಿದೆ. ರೂಪಗೊಂಡದ್ದು ಕಳೆದ ಶತಮಾನದ ಅರವತ್ತರ ದಶಕದ ಪೂರ್ವಾರ್ಧದಲ್ಲಿ. ನಾನು ಈ ಸಂಸ್ಥೆಯ ಸಂಪರ್ಕಕ್ಕೆ ಬಂದದ್ದು 1976 ರಲ್ಲಿ. ಈ ಸಂಸ್ಥೆಗೆ ನನ್ನ ಆಗಮನ ಮತ್ತು ಇಂಗ್ಲಿಷ್ ವ್ಯಾಮೋಹದ ಹಿರಿಯ ಕನ್ನಡ ಕವಿ ಅರ್ಚಕ ವೆಂಕಟೇಶರ ನಿರ್ಗಮನ ಘಟಿಸಿದ್ದು ಈ ವರ್ಷದಲ್ಲೇ. ಇಲ್ಲಿಗೆ ಗೊರೂರು ರಾಮಸ್ವಾಮಯ್ಯಂಗಾರ್, ನಿಟ್ಟೂರು ಶ್ರೀನಿವಾಸರಾಯರು, ಸು.ರಂ. ಎಕ್ಕುಂಡಿಯವರು, ಸೂರ್ಯನಾರಾಯಣ ಚಡಗ, ಹಿ.ಮ. ನಾಗಯ್ಯ, ಸೂಲಿಬೆಲೆ ನಾರಾಯಣರಾವ್, ಪರ್ವತವಾಣಿ, ಪ್ರಧಾನ ಗುರುದತ್, ಹೆಚ್.ಎಸ್. ಪಾರ್ವತಿ, ಜಯ ಸುದರ್ಶನ ಮುಂತಾದ ಅನೇಕರು ಬರುತ್ತಿದ್ದರು. ಸಿ.ಕೆ. ನಾಗರಾಜರಾಯರು ಅಧ್ಯಕ್ಷರು, ತೊ.ಸು. ಸುಬ್ರಹ್ಮಣ್ಯಂ ಕಾರ್ಯದರ್ಶಿಗಳು, ಡಿ.ನಂ. ಶೇಷಾದ್ರಿ ಖಜಾಂಚಿಗಳು, ನಾನು ಮತ್ತು ಶ್ರೀರಂಗಚಾರ್ಯರು ಜಂಟಿ ಕಾರ್ಯಕದರ್ಶಿಗಳಾಗಿದ್ದ ಕಾಲ ಅದು. ಈ ಎಲ್ಲವನ್ನೂ ಅನಾಜಿ ಕಂಡವರು, ಬಲ್ಲವರು, ಮತ್ತು ಒಳಗೊಂಡವರು.

ಇದೇ ವೇಳೆ ಅಂದರೆ 70–80ರ ದಶಕಗಳಲ್ಲಿ ನವ್ಯದ ಭರಾಟೆ ನಡೆದಿತ್ತು. ಸ್ವಲ್ಪ ತಡವಾಗಿ ಬಂಡಾಯವೂ ಭುಗಿಲೆದ್ದಿತು. ನವೋದಯ ರೀತಿಯ, ನವ್ಯದ ಮತ್ತು ಬಂಡಾಯದಂತಹ ಎಲ್ಲಾ ಮುಖ್ಯ ಸಭೆಗಳಲ್ಲೂ ಇವರು ಕಾಣಿಸಿಕೊಳ್ಳುತ್ತಿದ್ದುದನ್ನು ನಾನು ಕಂಡಿದ್ದೇನೆ. ಹೀಗೆ, ಸಾಹಿತ್ಯದ ಎಲ್ಲಾ ಸಂಗತಿಗಳಲ್ಲಿಯೂ ಇನ್ನಿಲ್ಲದ ಆಸ್ಥೆ ಅನಾಜಿಯವರಿಗೆ.

ಇಂದಿಗೂ ಅವರು ಅದೇ ಆಸ್ಥೆಯನ್ನು ಉಳಿಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯ ಮತ್ತು ಸಾಹಿತ್ಯೇತರ ೪ ಚಟುವಟಿಕೆಗಲ್ಲಿ ಈಗಲೂ ಭಾಗವಹಿಸುತ್ತಲೇ ಇದ್ದಾರೆ. ಆರ್. ಕಲ್ಯಾಣಮ್ಮನವರು ಕಟ್ಟಿದ 'ಮಕ್ಕಳಕೂಟ' ಮತ್ತು ಎಂ.ವಿ. ಸೀತಾರಾಮಯ್ಯನವರು ಸ್ಥಾಪಿಸಿದ 'ಬಿ.ಎಂ.ಶ್ರೀ. ಪ್ರತಿಷ್ಠಾನ'ದ ಕಾರ್ಯಕ್ರಮಗಳಲ್ಲಿ ಅಂದಿನಿಂದ ಇಂದಿಗೂ ಭಾಗವಹಿಸುತ್ತಾ ಬಂದಿದ್ದಾರೆ. ಇಂತಹ ಕನ್ನಡಾಭಿಮಾನದ ಮತ್ತು ತೀರದ ಜ್ಞಾನದಾಹದ ಅನಾಜಿ ಇವರು. ಇದೇ ಅಲ್ಲವೆ ಜೀವನ ಪ್ರೀತಿ ಎಂದರೆ ಮತ್ತು ಸಂಘ ಪ್ರೀತಿ ಎಂದರೆ! ಕೊನೆಯ ಮಾತಾಗಿ ಇಷ್ಟು ಹೇಳುತ್ತೇನೆ.

ಈ ಕನ್ನಡ ಕುವರ ಶತಮಾನೋತ್ಸವ ಆಚರಿಸಿಕೊಳ್ಳಲಿ. ನಾವೂ ಭಾಗವಹಿಸೋಣ.

******

ಕವಿತೆ ೩ - ಅಕ್ಷರದ ಬೊಕ್ಕಸಕೆ ಅಧಿಪತಿ

ಕೆ.ವಿ. ವರದರಾಜ ಅಯ್ಯಂಗಾರ್
ದೂರವಾಣಿ : ೯೬೩೨೪೬೮೧೨೫೦

ಅಕ್ಷರದ ಬೊಕ್ಕಸಕೆ ಅಧಿಪತಿಗಳಿವರು
ಅಕ್ಕರದಿ ಕನ್ನಡವ ಪಸರಿಸಿದರಿವರು
ನಾಡಿನಾದ್ಯಂತ ನಡೆದಾಡಿ, ನುಡಿದಾರಿ
ಬಿಡದೆ ಕನ್ನಡ ನುಡಿಯ ಡಿಂಡಿಮವ ಮೊಳಗಿಸಿಹರು
ಈಲ್ಲೆಜಿಲ್ಲೆಗಳಲ್ಲಿ ಕನ್ನಡದ ನಳನಳಿಪ
ಸೊಲ್ಲುಸವಿ ಮೆರೆವಂತೆ ದುಡಿಯುತ್ತಲಿಹರಿವರು
ಅನಾಜಿಯೆಂದೇ ಖ್ಯಾತರಾಗಿದ ಇವರ
ಕನ್ನಡದ ಅಶ್ವತ್ಥ ವೃಕ್ಷವೆಂದೆನಬಹುದು
ವರ್ಷ ಎಂಭತ್ತೆಂಟು ಹರ್ಷ ಸಾವಿರದೆಂಟು
ಶಿಷ್ಯಕೋಟಿಯು ತಮ್ಮ ಆಶಿಶಗಳರಹಿಸರು
ದೇಶದೆಲ್ಲೆಡೆ ನಿಮ್ಮ ಹೆಸರು ಪಸರಿಸಲಿ
ಈಶನೊಲುಮೆಯು ನಿಮಗೆ ವರದಾಯಿಯಾಗಿರಲಿ

****

ಬತ್ತದ ಉತ್ಸಾಹದ ವಿದ್ವಾಂಸ

ಜಿ.ಎನ್. ನರಸಿಂಹಮೂರ್ತಿ
ಚರವಾಣಿ : ೯೮೪೫೩೩೨೯೫೮

ಪ್ರೊ. ಜಿ ಅಶ್ವತ್ಥನಾರಾಯಣ ಅವರು ನನಗೆ ಸುಮಾರು ೪೦ ವರ್ಷಗಳಿಂದ ಪರಿಚಯ. ಅವರ ಅನೇಕ ಭಾಷಣ ಕಾರ್ಯಕ್ರಮಗಳಿಗೆ ನಾನು ಹೋಗಿದ್ದೇನೆ. ಅವರ ವಾಗ್ಝರಿ ಪ್ರಾಸಾನುಪ್ರಾಸಗಳನ್ನು ಪುಂಖಾನುಪುಂಖವಾಗಿ ಹೊರ ಹೊಮ್ಮಿಸುತ್ತಿದ್ದುದನ್ನು ಕಂಡು ವಿಸ್ಮಿತನಾಗಿದ್ದೇನೆ.

ನಾನು ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿ ಆಗಾಗ ಕನ್ನಡ ಭಾಷೆಯ ಅನುಷ್ಠಾನದ ಕುರಿತಾಗಿ ಕಾರ್ಯಶಿಬಿರಗಳಿರುತ್ತಿದ್ದವು. ಅಂತಹ ಅನೇಕ ಶಿಬಿರಗಳಲ್ಲಿ ಅನಾಜಿಯವರು ಬಂದು ನಮಗೆ ಮಾರ್ಗದರ್ಶನ ನೀಡಿದ್ದಾರೆ.

ಕನ್ನಡ ಗಣಕ ಪರಿಷತ್ತು ಪ್ರಾರಂಭವಾದ ನಮ್ಮ ನುಡಿ ತಂತ್ರಾಂಶ ಲಿಪಿ ಮತ್ತು ಭಾಷೆಗಳ ಕುರಿತು ಕೆಲವು ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳಲು ಹಲವು ವಿದ್ವಾಂಸರ ಒಂದು ಸಭೆಯನ್ನು ಕರೆದಿದ್ದೆವು. ವಿದ್ವಾಂಸರ ಪೈಕಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರೂ ಇದ್ದರು. ಇವರೆಲ್ಲರ ಮಾರ್ಗದರ್ಶನದ ಹಿನ್ನೆಲೆಯಲ್ಲಿ ನುಡಿ ಕನ್ನಡಕ್ಕೆ ಅನುಕೂಲವಾಗುವಂತೆ ರೂಪುಗೊಂಡಿತು. ಅಲ್ಲಿಂದಾಚೆಗೆ ಅವರು ಕನ್ನಡ ಸಂಸ್ಕೃತಿ ಇಲಾಖೆ ನಡೆಸುತ್ತಿದ್ದ ಆಡಳಿತ ಕನ್ನಡ ತರಬೇತಿ ಶಿಬಿರಗಳ ನಿರ್ದೇಶಕರಾಗಿ ಇರುತ್ತಿದ್ದರು. ಅಂತಹ ಅನೇಕ ಶಿಬಿರಗಳಲ್ಲಿ ನಾನು ಸಹ ಅವರ ಜೊತೆಗೆ ಪಾಲ್ಗೊಂಡಿದ್ದೆ. ಅವರು ಆಡಳಿತ ಭಾಷೆ, ಹಳಗನ್ನಡ, ನಿಘಂಟುಗಳು, ಸಾಹಿತ್ಯ ಚರಿತ್ರೆ ಇನ್ನೂ ಅನೇಕ ಸಾಹಿತ್ಯಕ ಸಂಗತಿಗಳನ್ನು ಅಲ್ಲಿ ಬಳಸಿಕೊಳ್ಳುತ್ತಿದ್ದರು. ಇದು ನನಗೆ ಅಚ್ಚರಿಯನ್ನು ಮೂಡಿಸಿತ್ತು .

ಒಬ್ಬ ಬಹುಶ್ರುತ ಭಾಷಾ ವಿದ್ವಾಂಸ ಹೇಗೆ ನಾನಾ ಸಂಗತಿಗಳ ಕುರಿತು ಆಸಕ್ತಿಯನ್ನು ಹೊಂದಿರುತ್ತಾರೆ ಎನ್ನುವುದಕ್ಕೆ ಪ್ರೊ. ಅನಾಜಿ ಒಂದು ಉತ್ತಮ ಉದಾಹರಣೆ.

ಕನ್ನಡ ಗಣಕ ಪರಿಷತ್ತಿನ ಅನೇಕ ಕೆಲಸಗಳಲ್ಲಿ ಪ್ರೊಫೆಸರ್ ಅನಾಜಿ ಕೈ ಜೋಡಿಸಿದ್ದಾರೆ. ಕನ್ನಡ ಗಣಕ ಪರಿಷತ್ತು ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶದ ಅಂಕೀಕರಣದ ಕೆಲಸವನ್ನು ಕೈಗೆತ್ತಿಕೊಂಡಾಗ ಅನೇಕ ಮಾಹಿತಿಗಳನ್ನು ಒದಗಿಸಿ ನೆರವಾಗಿದ್ದಾರೆ.

ಅವರು ಹಳಗನ್ನಡ ಗ್ರಂಥಗಳ ಗ್ರಂಥಸಂಪಾದನೆಯ ಕೆಲಸದಲ್ಲಿ ತೊಡಗಿದ್ದಾಗ ಅವರ ಜೊತೆ ಸ್ವಲ್ಪ ಕೆಲಸ ಮಾಡುವ ಅವಕಾಶ ನನಗೂ ದೊರೆಯಿತು. ಕನ್ನಡ ಗಣಕ ಪರಿಷತ್ತು ಕುಮಾರವ್ಯಾಸ ಭಾರತದ ಅಂಕೀಕರಣದ ಯೋಜನೆಯನ್ನು ಕೈಗೊಂಡಾಗ ಮೊದಲು ಸಂಪರ್ಕಿಸಿದ್ದು ಪ್ರೊಫೆಸರ್ ಅನಾಜಿ ಅವರನ್ನೇ. ಅವರ ಸಲಹೆಯ ಮೇರೆಗೆ ಅನೇಕ ವಿದ್ವಾಂಸರನ್ನು ಆ ಯೋಜನೆಯಲ್ಲಿ ತೊಡಗಿಸಿಕೊಳ್ಳಲಾಯಿತು. ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಪ್ರಧಾನ ಸಂಪಾದಕರಾಗಿರಬೇಕೆಂದು ಅನಾಜಿಯವರು ಸೂಚಿಸಿದರು. ಹಾಗೆಂದು ಅವರಲ್ಲಿ ನಾನು ವಿನಂತಿಸಿದಾಗ ಅವರು ಒಪ್ಪಿಕೊಂಡರು. ಮುಂದಿನ ಹಲವಾರು ವರ್ಷಗಳು ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು, ಅನಾಜಿಯವರು ಮತ್ತು

ಅನೇಕ ಹಿರಿಯ ವಿದ್ವಾಂಸರ ಅಧ್ಯಾಪನದಲ್ಲಿ ಕುಮಾರವ್ಯಾಸಭಾರತದ ವಿದ್ಯಾರ್ಥಿಯಾಗುವ ಅವಕಾಶ ನನಗೆ ದೊರೆಯಿತು. ಕುಮಾರವ್ಯಾಸ ಭಾರತದ ವಿವಿಧ ಪರ್ವಗಳನ್ನು ಹೊಸಗನ್ನಡದ ಗದ್ಯಾನುವಾದ ಮಾಡಲು ವಿದ್ವಾಂಸರಿಗೆ ತಮ್ಮ ಆಸಕ್ತಿಯ ಪರ್ವಗಳನ್ನು ಆಯ್ಕೆ ಮಾಡಿಕೊಳ್ಳಲು ವಿನಂತಿ ಮಾಡಿಕೊಂಡೆವು. ಆಗ ಪ್ರೊಫೆಸರ್ ಅನಾಜಿ ಅವರು ಭೀಷ್ಮಪರ್ವವನ್ನು ನಾನು ಪಾಠಮಾಡಿದ್ದೇನೆ. ಆದುದರಿಂದ ನಾನು ಭೀಷ್ಮಪರ್ವವನ್ನು ಅನುವಾದ ಮಾಡಿಕೊಡುತ್ತೇನೆ ಎಂದು ತಿಳಿಸಿದರು. ಅದನ್ನು ಯಶಸ್ವಿಯಾಗಿ ನಿರ್ವಹಿಸಿದರು. ಬೇರೆ ಪರ್ವಗಳ ಅನುವಾದದ ಕುರಿತಾದ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಅವರ ಬಳಿ ಈ ಹಿಂದೆ ಪ್ರಕಟವಾಗಿದ್ದ ಭೀಷ್ಮಪರ್ವದ ಎಲ್ಲಾ ಆವೃತ್ತಿಗಳೂ ಲಭ್ಯವಿದ್ದವು. ಇತರ ಪರ್ವಗಳ ಹಿಂದಿನ ಆವೃತ್ತಿಗಳು ಅವರ ಬಳಿ ಇದ್ದವು. ಅವುಗಳ ಪ್ರಯೋಜನವನ್ನೂ ಕನ್ನಡ ಗಣಕ ಪರಿಷತ್ತು ಆಗುಮಾಡಿಕೊಂಡಿತು.

ಕುಮಾರವ್ಯಾಸ ಭಾರತದ ಗದ್ಯಾನುವಾದದ ಕುರಿತಾದ ಚರ್ಚೆಗಳಲ್ಲಿ ಅವರು ಅನೇಕ ವೇಳೆ ಹಾಸ್ಯ ಚಟಾಕಿಗಳನ್ನು ಹಾರಿಸಿ ಸಭೆಯನ್ನು ಉಲ್ಲಾಸಗೊಳಿಸುತ್ತಿದ್ದರು. ಹೊಸಕೆರೆ ಚಿದಂಬರಯ್ಯನವರು ಆಧುನಿಕ ಕನ್ನಡದ ಗದ್ಯ ನಿರ್ಮಾಪಕರಲ್ಲಿ ಒಬ್ಬರು ಎಂದು ಹಾ.ಮಾ. ನಾಯಕರು ಹೇಳುತ್ತಿದ್ದದ್ದನ್ನು ಅನಾಜಿ ಉಲ್ಲೇಖಿಸಿ ಹೊಸಕೆರೆ ಚಿದಂಬರಯ್ಯನವರ ಕೃತಿಗಳ ಸಂಗ್ರಹಣೆಯಲ್ಲಿ ತುಂಬಾ ಆಸ್ಥೆಯನ್ನು ತೋರಿದರು. ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಸಮಿತಿ ಅವರ ಕೆಲವು ಕೃತಿಗಳನ್ನು ಮರು ಮುದ್ರಣ ಮಾಡಬೇಕು ಎಂದಾಗ ತಾವೇ ಅವರ ಹಲವಾರು ಕೀರ್ತನೆಗಳನ್ನು ಸಂಗ್ರಹಿಸಿ ಅವುಗಳು ಸರಿಯಾದ ರೂಪದಲ್ಲಿ ಇರುವಂತೆ ನೋಡಿಕೊಂಡು 'ಭಕ್ತಿ ಗೀತಾವಳಿ' ಎಂಬ ಕೃತಿಯನ್ನು ಸಂಪಾದಿಸಿ ಮುದ್ರಣಕ್ಕೆ ಸಿದ್ಧಪಡಿಸಿದರು. ಈ ಕೀರ್ತನೆಗಳ ಮಹತ್ವವನ್ನು ಪ್ರಚಾರ ಮಾಡಲು ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ದಾಸ ಸಾಹಿತ್ಯದ ಸಂಪುಟಗಳು ಪ್ರಕಟವಾದಾಗ ಅದರಲ್ಲಿ ಹೊಸಕೆರೆ ಚಿದಂಬರಯ್ಯನವರ ಹಲವು ಕೀರ್ತನೆಗಳು ಸೇರುವ ಹಾಗೆ ಮಾಡಿದರು. ಹೊಸಕೆರೆ ಚಿದಂಬರಯ್ಯನವರನ್ನು ಕುರಿತು ಒಂದು ಪುಸ್ತಕವನ್ನು ರಚಿಸಿದರು. ಬಿಎಂಶ್ರೀ ಪ್ರತಿಷ್ಠಾನ ಏರ್ಪಡಿಸಿದ್ದ ಒಂದು ವಿಚಾರ ಸಂಕಿರಣದಲ್ಲಿ ಹೊಸಕೆರೆ ಚಿದಂಬರಯ್ಯನವರ ಕುರಿತು ಮಾತನಾಡಿದರು. ಮಹಾಲಿಂಗರಂಗನ ಅನುಭವಾಮೃತದ ಸಂಪಾದನೆಯ ಸಂದರ್ಭದಲ್ಲಿ ಹೊಸಕೆರೆ ಚಿದಂಬರಯ್ಯನವರು ಪರಿಷ್ಕರಣೆಯನ್ನು ಆಧಾರವಾಗಿರಿಸಿಕೊಂಡು ತಮ್ಮ ಕೃತಿಯನ್ನು ಪರಿಷ್ಕರಿಸಿದರು.

ಯಾವುದೇ ಕೆಲಸಕ್ಕೆ ಅಗತ್ಯವಾದ ಮಾಹಿತಿಯನ್ನು ಕಲೆ ಹಾಕುವುದರಲ್ಲಿ ಅವರು ಅನನ್ಯವಾದ ನಿಷ್ಠೆಯನ್ನು ಹೊಂದಿದ್ದಾರೆ. ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ ರಘುಕುಲ ಚರಿತಂ (ಕಾಳಿದಾಸನ ರಘುವಂಶದ ಕನ್ನಡ ಅನುವಾದ) ಅನ್ನು ಪುನರ್ಮುದ್ರಿಸಲು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ತೀರ್ಮಾನಿಸಿ ಅದರ ಸಂಪಾದಕತ್ವವನ್ನು ಅನಾಜಿ ಅವರಿಗೆ ನೀಡಿತು. ಅನಾಜಿ ಅವರು ವಿಶೇಷ ಶ್ರಮ ವಹಿಸಿ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ ವಂಶಸ್ಥರನ್ನು ಭೇಟಿ ಮಾಡಿ ಅವರಿಂದ ಮಾಹಿತಿಗಳನ್ನು ಸಂಗ್ರಹಿಸಿ ಅನೇಕ ಹೊಸ ಸಂಗತಿಗಳನ್ನು ದಾಖಲಿಸಿದರು. ಅಲ್ಲಿಯವರೆಗೆ ಕನ್ನಡದಲ್ಲಿ ಪ್ರಕಟವಾಗಿದ್ದ 'ರಘುವಂಶ'ದ ಎಲ್ಲಾ ಅನುವಾದಗಳನ್ನು ಮುಂದಿರಿಸಿಕೊಂಡು ಮೂಲಪ್ರತಿಯನ್ನು ಪರಿಷ್ಕರಿಸಿದರು. ಅನೇಕ ಅನುಬಂಧಗಳನ್ನು ಒದಗಿಸಿ ಹೊಸ ಪ್ರಕಟಣೆ ಹೆಚ್ಚು ಮೌಲಿಕವಾಗುವಂತೆ ಮಾಡಿದರು. ಈ ಬಗೆಯಲ್ಲಿ ಅವರು ಯಾವುದೇ ಗ್ರಂಥದ ಪುನರ್ಮುದ್ರಣದಲ್ಲಿ ಅಥವಾ ಪರಿಷ್ಕರಣೆಯಲ್ಲಿ ಮೌಲಿಕವಾದ ಅಂಶಗಳನ್ನು ಹೊಸದಾಗಿ ಸೇರಿಸುತ್ತಿರುತ್ತಾರೆ.

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಬಂಗಾರದ ಎಲೆಗಳು ಎಂಬ ಯೋಜನೆಯಲ್ಲಿ ಅವರು ೧೮೫೧ ರಿಂದ ೧೮೭೫ರ ವರೆಗಿನ ಕನ್ನಡದ ಲೇಖಕರ ಮತ್ತು ಅವರ ಮುಖ್ಯ ಕೃತಿಗಳ ಸೂಚಿಯನ್ನು ಸಿದ್ಧಪಡಿಸಿದರು. ಇದು ಎಷ್ಟು ಕಷ್ಟದ ಕೆಲಸವೆಂದು ಎಲ್ಲರಿಗೂ ತಿಳಿದಿರುವುದೇ ಆಗಿದೆ. ಅನಾಜಿಯವರು ಅದನ್ನು ಯಶಸ್ವಿಯಾಗಿ ನಿರ್ವಹಿಸಿದರು. ಅದು ಈಗ ಅಂತರಜಾಲದಲ್ಲಿ ಲಭ್ಯವಿದೆ.

ಇತ್ತೀಚಿಗೆ ಅವರು ತುಮಕೂರಿನ ಡಾಕ್ಟರ್ ಬಿ. ನಂಜುಂಡಸ್ವಾಮಿ ಅವರ ವಿನಂತಿಯ ಮೇರೆಗೆ ಹೆಸರುಘಟ್ಟದ ಹೊನ್ನಪ್ಪನವರು ರಚಿಸಿದ ವ್ಯಾಕರಣ ಗ್ರಂಥವನ್ನು ಪರಿಷ್ಕರಿಸಿದ್ದಾರೆ. ಅದು ಸ್ನೇಹ ಪ್ರಕಾಶನದ ಮೂಲಕ ಪ್ರಕಟವಾಗಿದೆ.

ಅವರ ಮನೆಗೆ ಹೋಗುವುದೇ ಒಂದು ಸಂತೋಷದ ಸಂಗತಿ. ಅಲ್ಲಿ ಅನಾಜಿಯವರ ಯಾವುದೋ ಒಂದು ಹೊಸ ವಿಷಯದ ಕುರಿತಾದ ಪುಸ್ತಕಗಳ ರಾಶಿ, ಅವುಗಳ ಕುರಿತಾದ ಸ್ವಾರಸ್ಯಕರವಾದ ಮಾತುಗಳ ಜೊತೆಗೆ ಶ್ರೀಮತಿ ಲಕ್ಷ್ಮೀದೇವಿ ಅನಾಜಿಯವರ ಆತ್ಮೀಯ ಉತ್ತೇಜಕ ಮಾತುಗಳು, ಅವರೇ ತಯಾರಿಸಿದ ರುಚಿಯಾದ ತಿಂಡಿ, ಕಾಫಿ ಎಲ್ಲವೂ ಇರುತ್ತವೆ. ಶ್ರೀಮತಿ ಲಕ್ಷ್ಮೀದೇವಿಯವರೂ ಸ್ವತಃ ಕನ್ನಡದ ವಿದ್ವಾಂಸರು. ಅವರು ಒಮ್ಮೆ ಹೇಳಿದ್ದುಂಟು : "ಇವರ ಹತ್ತಿರ ನೂರು ಪಿ.ಹೆಚ್.ಡಿ. ಗಳಿಗಾಗುವಷ್ಟು ಮಾಹಿತಿ ಸದಾ ಇರುತ್ತದೆ. ಆದರೆ ಇವರು ಬರೆಯುವುದಕ್ಕಿಂತ ಹೆಚ್ಚು ಭಾಷಣಗಳಿಗೇ ತಮ್ಮ ಸಮಯವನ್ನು ವ್ಯಯಿಸುತ್ತಾರೆ."

ಪ್ರೊ. ಅನಾಜಿಯವರು ತಮ್ಮ ಕೆಲಸಗಳಿಗಿಂತ ಇತರರಿಗೆ ಪ್ರಯೋಜನಕ್ಕೆ ಬರುವ ಕೆಲಸಗಳನ್ನೇ ಹೆಚ್ಚಾಗಿ ಮಾಡಿದ್ದಾರೆ. ಅನೇಕರಿಗೆ ಪಿ.ಹೆಚ್.ಡಿ, ಎಂಫಿಲ್ ಪದವಿಗಳಿಗೆ ಪ್ರಬಂಧ ಬರೆಯಲು ಎಲ್ಲ ಸಹಾಯವನ್ನೂ ಮಾಡಿದ್ದಾರೆ, ಮಾಡುತ್ತಿದ್ದಾರೆ. ಆರ್.ವಿ. ಕಾಲೇಜಿನ ಸಿಂಚನ ವೇದಿಕೆಯಿಂದ ಪುಸ್ತಕ ಪ್ರಕಟಣಾ ವಿಭಾಗದ ಸಂಪಾದಕರಾಗಿ ಮುವ್ವತ್ತೊಂದು ಕೃತಿಗಳನ್ನು ಸಂಪಾದಿಸಿದ್ದಾರೆ.

ಕರಡಚ್ಚು ತಿದ್ದುವುದರಲ್ಲಿಯೂ ಅವರು ಪರಿಣತರು. ಆ ಕುರಿತು ಅವರು ಒಂದು ಪುಸ್ತಕವನ್ನೇ ಬರೆದಿದ್ದಾರೆ. ಅದು ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟವಾಗಿದೆ. ಮೌಲಿಕವಾದ ಯಾವ ಹೊಸ ಪುಸ್ತಕ ಪ್ರಕಟವಾದರೂ ಅನಾಜಿ ಅದನ್ನು ಆ ಕೂಡಲೇ ಖರೀದಿಸುತ್ತಾರೆ. ಪುಸ್ತಕಗಳೆಂದರೆ ಅವರಿಗೆ ಎಲ್ಲಕ್ಕಿಂತ ಹೆಚ್ಚು ಪ್ರೀತಿ. ಅವುಗಳನ್ನು ದೊರಕಿಸಿಕೊಳ್ಳಲು ಅವರು ಎಲ್ಲ ರೀತಿಯಲ್ಲಿಯೂ ಪ್ರಯತ್ನಿಸಿ ಜಯಶೀಲರಾಗುತ್ತಾರೆ.

ಎಂಬತ್ತೇಳನ್ನು ದಾಟಿದರೂ ಈಗಲೂ ಅವರ ಕಾರ್ಯಕ್ಷಮತೆ ಇಪ್ಪತ್ತರಲ್ಲಿಯೇ ಇದೆ. ಅವರು ಸದಾ ಹೀಗೆಯೇ ಇದ್ದು ನಮಗೆಲ್ಲ ಪುಸ್ತಕಗಳು, ಮಾರ್ಗದರ್ಶನಗಳನ್ನು ಒದಗಿಸುತ್ತಿರಲಿ ಎಂದು ಹಾರೈಸುತ್ತೇನೆ.

******

ಆಪ್ತವಾಗುವ ರಸ ಪ್ರಸಂಗಗಳು ಆಪ್ತ ಮಿತ್ರರು

ಎಂ.ಎಸ್. ನರಸಿಂಹಮೂರ್ತಿ
ಚರವಾಣಿ : ೯೩೪೧೧೨೨೧೨೪೩

ಬದುಕೆಂಬುದು ರೈಲು ಪ್ರಯಾಣ ಇದ್ದಂತೆ. ನಿಲ್ದಾಣಗಳಲ್ಲಿ ಹತ್ತಿ ಬಂದು ಕೆಲ ಕಾಲ ನಮ್ಮ ಜೊತೆ ಇದ್ದು ಮರೆಯಾಗುವ ಮಂದಿಗೆ ಲೆಕ್ಕವಿಲ್ಲ. ಆದರೆ ಕೆಲವು ಪಾತ್ರಗಳು ಮಾತ್ರ ಮನದಲ್ಲಿ ಅಚ್ಚಳಿಯದೆ ಉಳಿದುಬಿಡುತ್ತವೆ. ನಾವು ಅವರ ಪ್ರಭಾವಕ್ಕೆ ಒಳಗಾಗುತ್ತೇವೆ. ಅವರಿಂದ ಬದಲಾಗುತ್ತೇವೆ. ನಮ್ಮಲ್ಲಿ ಶಿಸ್ತು, ಸಂಯಮ, ಉದಾರತೆ ಮೊದಲಾದ ಗುಣಗಳ ಆವಾಹನೆ ಆಗುತ್ತದೆ. ಗಣ್ಯ ಸಾಹಿತಿಗಳ ಜೊತೆ ಸಂಪರ್ಕಕ್ಕೆ ಬಂದ ಖ್ಯಾತ ಲೇಖಕ ಅನಾಜಿಯವರಿಗೆ ಆದ ಅನುಭವಗಳನ್ನು ರಸವತ್ತಾಗಿ ಇಲ್ಲಿ ವರ್ಣಿಸಿದ್ದಾರೆ. ಪ್ರೊ. ಅನಾಜಿಯವರು ಇಷ್ಟು ಎತ್ತರಕ್ಕೆ ಏರಲು ಸಾಹಿತ್ಯ ದಿಗ್ಗಜರಾದ ಅನೇಕರು ಗಾಢ ಪ್ರಭಾವ ಬೀರಿದ್ದಾರೆ. ಘಟನೆಗಳನ್ನು ತಿಳಿಸುವಾಗ ಸಂಬಂಧಿಸಿದ ಸಾಹಿತಿಗಳ ವ್ಯಕ್ತಿತ್ವವನ್ನೂ ಸಹ ಲೇಖಕರು ಚಿತ್ರಿಸುತ್ತಾರೆ.

ಅ.ನ.ಕೃ., ಬೀಚಿ, ನಾಡಿಗೇರ್, ತ.ರಾ.ಸು., ದೇವುಡು, ವಿ.ಸೀ, ಹಾ.ಮಾ.ನಾಯಕ್, ಮಾಸ್ತಿ ಮೊದಲಾದವರ ಜೊತೆ ಅನಾಜಿ ಅವರಿಗಿದ್ದ ಒಡನಾಟ ಆಶ್ಚರ್ಯದಾಯಕ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಾಲಯದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ. ಪ್ರೊ. ಅನಾಜಿಯವರು ತಮ್ಮ ಬದುಕಲ್ಲಿ ಸರಳತೆಯನ್ನು, ಶಿಸ್ತನ್ನು ಮೂಡಿಸಿಕೊಳ್ಳಲು ಯಾರೆಲ್ಲ ಕಾರಣರಾದರು ಎಂಬುದನ್ನು ಇಲ್ಲಿರುವ ಪ್ರಸಂಗಗಳು ತಿಳಿಸುತ್ತವೆ.

ಸಿದ್ಧವನಹಳ್ಳಿ ಕೃಷ್ಣಶರ್ಮರ 'ಕುಲದೀಪಕರು', ವಿ.ಸೀ. ಅವರ 'ಮಹನೀಯರು', ರಾವ್‌ಬಹದ್ದೂರ್ ಅವರ 'ಮರೆಯದ ನೆನಹುಗಳು', ಗೊರೂರರ 'ನಮ್ಮೂರಿನ ರಸಿಕರು', ಟಿ.ಪಿ.ಪಿ. ಯವರ 'ಉದಾರಚರಿತರು, ಉದಾತ್ತ ಪ್ರಸಂಗಗಳು' ಮೊದಲಾದ ಕೃತಿಗಳನ್ನು ಓದಿ ಮೆಚ್ಚಿ ಖುಷಿ ಪಟ್ಟಿದ್ದ ನನಗೆ ಅನಾಜಿ ಅವರ ಈ ಕೃತಿ ಅತ್ಯಂತ ಭಿನ್ನವಾಗಿ ತೋರಿತು. ಇದಕ್ಕೆ ಕಾರಣ ಇದು ಅವರ ಆತ್ಮ ಕಥನದ ಒಂದು ಭಾಗ. ನಿರೂಪಣೆಯಂತೂ ಮನವನ್ನು ತಟ್ಟುತ್ತದೆ. ಓದುತ್ತಾ ಹೋದಂತೆ ನಮಗೆ ಗೊತ್ತಿಲ್ಲದಂತೆಯೇ ನಾವು ಬದಲಾವಣೆ ಆಗುವ ಅಪಾಯವಿದೆ.

ವಿದ್ಯಾರ್ಥಿಯಾಗಿದ್ದಾಗ ಒಂದು ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿದ ಇವರಿಗೆ ಗೀತಾ ಪ್ರವಚನ ಪುಸ್ತಕಗಳು ಬಹುಮಾನವಾಗಿ ಸಿಕ್ಕವು. ಇವುಗಳನ್ನು ಓದಿದ ಅನಾಜಿ ಎಷ್ಟು ಬದಲಾದರೆಂದರೆ ಕ್ರಿಕೆಟ್ ಬೇಡ, ಫುಟ್‌ಬಾಲೂ ಬೇಡ ಎಂದು ಹೇಳಿ ಕನ್ನಡದ ಶ್ರೇಷ್ಠ ಪುಸ್ತಕಗಳನ್ನು ಅಭ್ಯಾಸ ಮಾಡಲು ಪರಿಷತ್ತಿನ ಲೈಬ್ರರಿಯಲ್ಲಿ ಝೂಂಡಾ ಊರಿದರು. ಶಾಲೆ ಬಿಟ್ಟರೆ ಪರಿಷತ್ತು, ರಾತ್ರಿ ತಡವಾಗಿ ಮನೆ. ಹೀಗಾಗಿ ಫೋರ್ಟ್ ಹೈಸ್ಕೂಲ್ ವಿದ್ಯಾರ್ಥಿ ಆಗಿದ್ದಾಗ ಅನಾಜಿ ಬುಕ್‌ವರ್ಮ್ ಆಗುತ್ತಾರೆ. ಕನಸು ಮನಸುಗಳಲ್ಲಿ ಕನ್ನಡ ಕಾವ್ಯಗಳ ಕುಣಿತ ! ಗೀತಾ ಪ್ರವಚನ ಪುಸ್ತಕ ಅವರಿಗೆ ಬಹುಮಾನವಾಗಿ ಬಂದಿದ್ದು ಇದಕ್ಕೆಲ್ಲ ಕಾರಣ.

ಅನಾಜಿಯವರು ಉಪನ್ಯಾಸಕರಾಗಿ, ಪ್ರವಚನಕಾರರಾಗಿ ಹೆಸರು ಮಾಡಿದವರು. ಮೈಕ್ ಸಿಕ್ಕರೆ ಓತಪ್ರೋತವಾಗಿ ಕನ್ನಡ ಸಾಹಿತ್ಯದ ಬಗ್ಗೆ ಗಂಟೆಗಟ್ಟಲೆ ಅಧಿಕೃತವಾಗಿ ಮಾತಾಡುವ ಶಕ್ತಿ ಅವರಲ್ಲಿದೆ. ಡಿಗ್ರಿ ಪಠ್ಯಪುಸ್ತಕಗಳ ಪರಿಷ್ಕಾರದಲ್ಲಿ ಭಾಷಾತಜ್ಞರಾಗಿ ಅವರು ದುಡಿದಿದ್ದಾರೆ. ಕಾಲೇಜಿನ ಒಳಗೆ, ಹೊರಗೆ – ಪಾಠ ಮಾಡಿ 'ಒಳ್ಳೆಯ ಮೇಷ್ಟ್ರು' ಎಂಬ ಬಿರುದು ಸಂಪಾದಿಸಿದ್ದಾರೆ.

ಕನ್ನಡ ಸಂಸ್ಕೃತಿ ಇಲಾಖೆಯು ಒಂದು ವಾರದ ಅವಧಿಯ ಆಡಳಿತ ಕನ್ನಡ ಶಿಬಿರಗಳನ್ನು ಬಹು ಹಿಂದೆ ಏರ್ಪಡಿಸಿತ್ತು. ಇದು ಸುಮಾರು 10 ವರ್ಷ ಕಾಲ ನಡೆಯಿತು. ಶಿಬಿರದ ನಿರ್ದೇಶಕರಾಗಿ ಅನಾಜಿಯವರು ಮಾರ್ಗದರ್ಶನ ಮಾಡುತ್ತಿದ್ದರು. ನನ್ನಂತಹ ಹಲವಾರು ಉಪನ್ಯಾಸಕರಿಗೆ ಇಲ್ಲಿ ಅವಕಾಶ ಮಾಡಿಕೊಟ್ಟವರು ಅನಾಜಿ, ಆಡಳಿತ ಕನ್ನಡ ಶಿಬಿರ ನಡೆಸುವುದು ಹೇಗೆ, ಪಾಠ ಮಾಡುವುದು ಹೇಗೆ ಎಂಬುದನ್ನು ಸವಿವರವಾಗಿ ತಿಳಿಸಿ ಕನ್ನಡ ಭಾಷೆಯಲ್ಲಿರುವ ಒಪ್ಪುತಪ್ಪುಗಳನ್ನು ತಿದ್ದುವ ಸುಲಭ ತಂತ್ರಗಳನ್ನು ತಲೆಗೆ ತುಂಬಿದರು.

ಅನಾಜಿಯವರ ಸಹಜ ಮಾತುಗಳಲ್ಲಿ ಸಹ ತಿಳಿಹಾಸ್ಯದ ಕಂಪು ಇರುತ್ತದೆ. ಅವರದು ಎಂಥ ಸಟ್ಲ್ ಜೋಕ್ಸ್ ಎಂದರೆ ತಕ್ಷಣಕ್ಕೆ ಅರ್ಥವಾಗುವುದು ಕಷ್ಟ ಸ್ವಲ್ಪ ಹೊತ್ತಾದ ಮೇಲೆ ನಮಗೆ ನಾವೇ ನಗುತ್ತೇವೆ. ಸುತ್ತಲೂ ಇರುವವರು ನಮ್ಮನ್ನು ಕನಿಕರದಿಂದ ನೋಡಲೂಬಹುದು. ಈ ಕೃತಿಯಲ್ಲಿ ತಮ್ಮ ಬದುಕಿನ ರಸಪ್ರಸಂಗಗಳ ವರ್ಣನೆ ಇದೆ. ನಗೆ ಚಿಮ್ಮಿಸುವ ಪುಟ್ಟ ಪುಟ್ಟ ಅನುಭವ ಕಥಾನಕಗಳಿವೆ. ಒಂದೆರಡು ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು.

ಬಿಡಿ ಮುತ್ತು ಕೊಡುವೆ

ತೀ.ನಂ.ಶ್ರೀ ಯವರ ಕಾವ್ಯಮೀಮಾಂಸೆ ಪಾಠ ಮಾಡಿದ ಇವರು ಸಂಸ್ಕೃತ ಶೃಂಗಾರ ಕಾವ್ಯಗಳ ಅನುವಾದದ ಬಗ್ಗೆ ಹೇಳಿದ್ದರು. ಈ ಬಗ್ಗೆ ಪುಸ್ತಕ ಇದೆಯಾ ಎಂದಾಗ, ಹೌದು ಎಂದು ತೀ.ನಂ.ಶ್ರೀ. ಯವರ 'ಬಿಡಿ ಮುತ್ತು' ಪುಸ್ತಕವನ್ನು ವಿದ್ಯಾರ್ಥಿನಿಗೆ ಕೊಟ್ಟರು. ಓದಿ ಖುಷಿಯಾದ ಆಕೆ ಮರುದಿನ ಕಾಲೇಜಿಗೆ ಬಂದು ನೀವು ಕೊಟ್ಟ 'ಬಿಡಿಮುತ್ತು' ತುಂಬಾ ಚೆನ್ನಾಗಿತ್ತು. ನಮ್ಮ ಅಕ್ಕಾನೂ ಇಷ್ಟಪಟ್ಟಳು. ನಮ್ಮಕ್ಕ ಬಿಡಿ ಮುತ್ತನ್ನು ನಿಮಗೆ ನೇರವಾಗಿ ಕೊಡ್ತಾಳಂತೆ' ಎಂದಾಗ ಇವರ ಸ್ಥಿತಿ ಹೇಗೆ ಆಗಿರಬೇಡ !

ರಸ್ತೆ ದಾಟಲು ದೋಣಿ

ಬೀಚಿ, ನಾಡಿಗೇರ್, ಅನಕೃ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮ ಮುಗಿಸಿ ಹೊರಗೆ ಬಂದಾಗ ವಿಪರೀತ ಮಳೆ ಸುರಿದಿತ್ತು. ಆಗಿನ್ನೂ ಮಣ್ಣಿನ ರಸ್ತೆ ಇತ್ತು. ಕಾರಿಡಾರ್ ಆಗಿರಲಿಲ್ಲ. ವಿಪರೀತ ನೀರು ಪರಿಷತ್ತಿನ ಬಾಗಿಲೆಡೆಗೆ ನುಗ್ಗಿ ಬಂದಿತ್ತು. 'ಸರ್, ನಿಮಗೆ ಆಟೋ ತರಿಸಲಾ, ಟ್ಯಾಕ್ಸಿ ತರಿಸಲಾ" ಎಂದು ವ್ಯವಸ್ಥಾಪಕರು ಕೇಳಿದರು. ಹೊಂಡದಲ್ಲಿ ತುಂಬಿದ್ದ ನೀರನ್ನು ನೋಡುತ್ತಿದ್ದ ಬೀಚಿ ಹೇಳಿದ್ದೇನು ಗೊತ್ತಾ?

'ಮೊದಲು ಒಂದು ನಾಡದೋಣಿ ತರಿಸು, ಈ ಹೊಂಡ ದಾಟೋಣ, ಆಮೇಲೆ ಆಟೋ, ಟ್ಯಾಕ್ಸಿಯ ವಿಷಯ." ಮಳೆಯ ತೊಂದರೆ ಮರೆಸುವಂತಹ ನಗೆ ಎಲ್ಲೆಡೆ ಚಿಮ್ಮಿತು.

******

ನಾನು ಲೇಖಕಿ ಆಗಲು ಈ ದಂಪತಿಗಳೇ ಕಾರಣ

ಮೀರಾಬಾಯಿ
ಚರವಾಣಿ : ೯೮೮೦೪೮೪೮೪೫

ನಾನು ಮೀರಾಬಾಯಿ, ಅನಾಜಿಯವರ ಎದುರುಮನೆಯಲ್ಲಿ ಇದ್ದೇನೆ. ಸುಮಾರು ೭೫ ವರ್ಷಗಳಿಂದ ಎದುರು ಮನೆಗಳಲ್ಲಿ ನಾವು ವಾಸವಾಗಿದ್ದೇವೆ. ಅಷ್ಟಾದರೂ ಸಾಮಾನ್ಯ ಪರಿಚಯವೇ ಇತ್ತು. ಎದುರುಮನೆ ಆದ್ದರಿಂದ ನಮ್ಮ ರೀತಿನೀತಿಗಳೂ ಪರಸ್ಪರ ತಿಳಿಯುತ್ತಿತ್ತು. ಇಷ್ಟಾದರೂ. ಅವರ ಓದು ಬರಹ ವಿದ್ಯೆಗಳ ಪರಿಚಯ ನನಗಿರಲಿಲ್ಲ.

ಒಮ್ಮೆ ಲಕ್ಷ್ಮೀದೇವಿ ಅವರೂ ಯಜಮಾನರೂ ನಮ್ಮ ಮನೆ ಬಳಿ ಇರುವ ಪಟ್ಟಾಭಿರಾಮನ ದೇವಸ್ಥಾನದ ಬಳಿ ಎದುರಾದರು. ಆಗ ಅಶ್ವತ್ಥನಾರಾಯಣ ಅವರು ಹೊಸಕೆರೆ ಚಿದಂಬರಯ್ಯನವರ ಮನಾಚೆಶ್ಲೋಕ ಭಜಗೋವಿಂದಾ ಸ್ತೋತ್ರಗಳನ್ನು ಪ್ರಕಟಿಸಿರುವ ಜೈಮುನಿರಾಯರು ಗೊತ್ತೇ ಎಂದು ಕೇಳಿದರು. ಅವರು ನಮ್ಮ ತಂದೆ ಎಂದೆ. ಹೊಸಕೆರೆ ಚಿದಂಬರಯ್ಯನವರು ಘನವಿದ್ವಾಂಸರು ಪ್ರಸಿದ್ಧ ಲೇಖಕರು. ಅವರು ನಿಮ್ಮ ತಂದೆಗೆ ಆಪ್ತರು ಎಂದ ಮೇಲೆ ನಿಮ್ಮ ತಂದೆಯವರ ಸಾಹಿತ್ಯಪ್ರೇಮ ಧರ್ಮಾಸಕ್ತಿ ಮೆಚ್ಚಬೇಕಾದ್ದು. ಅವರ ಬಗ್ಗೆ ಯಾರೂ ಏನೂ ಬರೆದಿಲ್ಲವೇ ಎಂದು ಕೇಳಿದಾಗ ಇಲ್ಲ ಎಂದೆ. ಸಾಕಷ್ಟು ಜನರಿಗೆ ಉಪಕಾರ ಮಾಡಿದ್ದಾರೆ. ಹರಿಜನರಿಗೆ ಕಾಲೋನಿ ನಿರ್ಮಿಸಿದ್ದಾರೆ. ತಾವಿರುವ ದಾಸರಹಳ್ಳಿಯಲ್ಲಿ ದೇವಸ್ಥಾನ ಕಟ್ಟಿಸಿದ್ದಾರೆ. ಶಾಲೆ ಸ್ಥಾಪಿಸಿದ್ದಾರೆ ಎಂದು ಓದಿದ್ದೇನೆ.

ಇಂಥಾ ಉಪಕಾರಿಗಳು ನಿಮ್ಮ ತಂದೆಯವರು ಎಂಬುದು ಸಂತೋಷದ ಸಂಗತಿ. ಅವರ ಬಗ್ಗೆ ಒಂದು ಪುಸ್ತಕ ಬರೆಯಿರಿ. ನಾನು ತಿದ್ದಿಕೊಡುತ್ತೇನೆ ಎಂದರು. ನಾನು ಓದಿದವಳಲ್ಲ, ಮರಾಠಿ ಮನೆ ಮಾತು. ಕನ್ನಡ ಓದಲು ಬರೆಯಲು ಅಷ್ಟೆ ಬರುತ್ತದೆ ಎಂದರು. ಪರವಾಗಿಲ್ಲ ನಿಮಗ ತೋಚಿದ ಹಾಗೆ ನಿಮ್ಮ ತಂದೆ ವಿಷಯವನ್ನೆಲ್ಲಾ ಬರೆದಿಡಿ ನೀವು ದೊಡ್ಡ ಮಗಳು. ನಿಮಗೆ ತಂದೆಯವರ ವಿಷಯ ಉಳಿದವರಿಗಿಂತ ಹೆಚ್ಚಿಗೆ ತಿಳಿದಿರುತ್ತದೆ ಎಂದು ಹುರಿದುಂಬಿಸಿದರು.

ಅವರಿಂದ ಸ್ಫೂರ್ತಿಗೊಂಡು ನಮ್ಮ ತಂದೆಯವರ ವಿಷಯವನ್ನು ನೋಟು ಬುಕ್ಕಿನಲ್ಲಿ ನನಗೆ ತೋಚಿದಂತೆ ಬರೆದಿಟ್ಟೆ. ಅದನ್ನು ಓದಲು ನಮ್ಮಕ್ಕನ ಮಗಳಿಗೆ ಕೊಟ್ಟೆ ಅವಳು ಮನೆ ಖಾಲಿಮಾಡಿ ಹೊಸಮನೆಗೆ ಬಂದಿದ್ದಳು. ಮನೆ ಬದಲಾಯಿಸುವಾಗ ಹಳೇ ಪೇಪರ್ ಮಾರುವಾಗ ಅದರಲ್ಲಿ ಹೋಗಿರಬೇಕು. ನನ್ನಲ್ಲಿ ಇಲ್ಲ ಎಂದಳು ನನಗೆ ಬಹಳ ನಿರಾಸೆ ಆಯಿತು.

ಒಂದು ದಿನ ರಾಮಕೃಷ್ಣಾಶ್ರಮಕ್ಕೆ ಹೋದಾಗ ಸ್ವಾಮಿ ಪುರುಷೋತ್ತಮಾನಂದರು ಏನು ಮಾಡುತ್ತಿದ್ದೀರಿ ಎಂದಾಗ "ನಮ್ಮ ತಂದೆ ಜೀವನ ಚರಿತ್ರೆಯನ್ನು ಬರೆಯಬೇಕೆಂದು ನಮ್ಮ ಎದುರುಮನೆ ಸಾಹಿತಿಗಳು ಪ್ರೊಫೆಸರ್ ಅಶ್ವತ್ಥನಾರಾಯಣ ಅವರು ಒತ್ತಾಯಮಾಡಿದರು. ನಿಮಗೆ ತೋಚಿದಂತೆ ಬರೆಯಿರಿ. ನಾನು ತಿದ್ದಿಕೊಡುತ್ತೇನೆ ಎಂದರು. ಅದರಂತೆ ಬರೆದಿದ್ದೆ. ಅದನ್ನು ನನ್ನ

ತಂಗಿ ಕಳೆದುಹಾಕಿಬಿಟ್ಟಳು ಎಂದೆ. ಅದಕ್ಕೆ ಅಶ್ವತ್ಥನಾರಾಯಣರು ಚಿಂತಿಸಬೇಡಿ. ನಿಮ್ಮ ತಂದೆಯವರ ಲೋಕೋಪಕಾರ ಸಂಗತಿಗಳು ಜನಸೇವೆ ಇಂದಿಗೂ ಎಲ್ಲರಿಗೂ ಆದರ್ಶಪ್ರಾಯ. ಅಂಥವರು ಅಪರೂಪಿ. ನೀವು ಮತ್ತೆ ಜ್ಞಾಪಿಸಿಕೊಂಡು ಅವರ ಜೀವನ ಚರಿತ್ರೆ ಬರೆದು ಕೊಡಲೇ ಬೇಕು. ನಾನು ತಿದ್ದಿಕೊಡುತ್ತೇನೆ ಎಂದು ಹೇಳಿದ್ದಾರೆ ಎಂದೆ. ಆಗ ಪುರುಷೋತ್ತಮಾನಂದರು ಅವರನ್ನು ನಾನು ಬಲ್ಲೆ. ವಿಜಯನಗರದಲ್ಲಿ ಚಿಕಾಗೋವಿನ ಆಚರಣೆ ದಿನ ವಿವೇಕಾನಂದರ ಬಗ್ಗೆ ಅದ್ಭುತ ಭಾಷಣ ಮಾಡಿದರು. ನಿನ್ನೆ ಆಶ್ರಮದಲ್ಲಿ ಮಾಡಿದ ಭಾಷಣವೂ ಸೊಗಸಾಗಿತ್ತು. ಮನಸ್ಸು ಮಾಡಿದರೆ ಯಾವ ಕೆಲಸವೂ ಅಸಾಧ್ಯವಲ್ಲ. ನೀವು ಮತ್ತೆ ಬರೆಯಿರಿ. ರಾಮಕೃಷ್ಣರ ಅನುಗ್ರಹ ನಿಮಗಿರುತ್ತದೆ ಎಂದರು. ಅವರ ಆಶೀರ್ವಾದ ಬಲದಿಂದ ದೈವಕೃಪೆಯಿಂದ ಮತ್ತೆ ಮತ್ತೆ ಜ್ಞಾಪಿಸಿಕೊಂಡು ಬರೆದು ಅವರಿಗೆ ಕೊಟ್ಟೆ. ಅದನ್ನು ಅಕ್ಕಸಾಲಿಗ ಚಿನ್ನದಿಂದ ಒಡವೆ ಮಾಡಿದ ಹಾಗೆ ತಿದ್ದಿ ತೀಡಿ ಎಲ್ಲರೂ ಓದಿ ಮೆಚ್ಚಿಕೊಳ್ಳುವ ರೀತಿ ಪರಿಷ್ಕರಿಸಿಕೊಟ್ಟರು. ಅದರ ಬಿಡುಗಡೆಗೆ ವ್ಯವಸ್ಥೆ ಮಾಡಿದರು. ಆ ಸಭೆಯಲ್ಲಿ ಆ ಪುಸ್ತಕದ ಬಗ್ಗೆ ಲಕ್ಷ್ಮೀದೇವಿ ಅವರು ಅದ್ಭುತ ಪರಿಚಯ ಭಾಷಣವನ್ನು ಮಾಡಿದರು. ರಾಜರಾಜೇಶ್ವರಿ ನಗರದ ತಮ್ಮ ದೇವಸ್ಥಾನಕ್ಕೆ ನೆರವು ನೀಡಿದವರು ಆ ಸ್ಥಳವನ್ನು ಕೊಟ್ಟು ತಮ್ಮ ಗುರುಗಳಿಗೆ ಉಪಕರಿಸಿದವರು ಜೈಮುನಿರಾವ್ ಎಂದು ತಿಳಿಸಿದಾಗ ಸ್ವಾಮೀಜಿ ಅವರೇ ಸ್ವತಃ ಮುಂದೆ ನಿಂತು ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ತಮ್ಮ ದೇವಸ್ಥಾನದ ಸಭಾಮಂದಿರದಲ್ಲಿ ಅದ್ಧೂರಿಯಾಗಿ ನಡೆಸಿಕೊಟ್ಟರು. ಜೈಮುನಿರಾಯರು ಮಹಾನುಭಾವರು ಲೋಕೋಪಕಾರಿಗಳು ಎಂದು ಹೊಗಳಿದರು. ಆಗ ನನಗೆ ನಮ್ಮ ತಂದೆಯವರು ಬಗ್ಗೆ ಪುಸ್ತಕದ ಬಗ್ಗೆ ಹೆಮ್ಮೆ ಉಂಟಾಯಿತು. ಜನರೆಲ್ಲಾ ಓದಿ ಆನಂದಿಸಬೇಕಿತ್ತು ಎಂದು ಸಾವಿರ ಪ್ರತಿಗಳನ್ನು ಉಚಿತವಾಗಿ ಎಲ್ಲರಿಗೂ ಹಂಚಿಬಿಟ್ಟೆ. "ಪುಸ್ತಕದಾನ ಮಹಾದಾನ. ನೀವು ಇದರಿಂದ ಪುಣ್ಯ ಗಳಿಸಿದ್ದೀರಿ. ಜನ್ಮ ಸಾರ್ಥಕದ ಕೆಲಸ ಆಯಿತು" ಎಂದು ಅಶ್ವತ್ಥನಾರಾಯಣ-ಲಕ್ಷ್ಮೀದೇವಿ ದಂಪತಿಗಳು ಮನಸಾರೆ ಹೊಗಳಿದರು. ಹೀಗೆ ಜೈಮುನಿರಾಯರ ಮಗಳಾದ ನಾನು ಒಬ್ಬ ಮಹಾಪುರುಷರ ಜೀವನ ಚರಿತ್ರೆಯನ್ನು ಬರೆದು ಲೇಖಕಿ ಆಗಲು ಅನಾಜಿ ಲಕ್ಷ್ಮೀ ದಂಪತಿಗಳು ಕಾರಣಕರ್ತರಾದರು. ಅವರ ಉಪಕಾರವನ್ನು ಎಂದಿಗೂ ಮರೆಯುವುದಿಲ್ಲ.

ಅವರು ನನಗೆ ಇಂಥಾ ಪುಸ್ತಕ ಓದಿ ತುಂಬಾ ಚೆನ್ನಾಗಿದೆ ಎಂದು ಹೇಳಿ ಓದಲು ಒಳ್ಳೆಯ ಪುಸ್ತಕಗಳನ್ನು ಕೊಡುತ್ತಾರೆ. ಆ ಪುಸ್ತಕಗಳ ಲೇಖಕರ ಬಗ್ಗೆ ಆಸಕ್ತಿಕಕರ ವಿಷಯಗಳನ್ನು ಹೇಳುತ್ತಾರೆ. ನನಗೆ ಓದಿನ ಅಭ್ಯಾಸವನ್ನು ಹೆಚ್ಚಿಸಿದ್ದಾರೆ. ಅಷ್ಟೇ ಅಲ್ಲ ನನ್ನ ಗೆಳತಿ ಗಿರಿಜಮ್ಮ ಅವರು ಪುಸ್ತಕ ಓದುವ ಗೀಳು ವಿಪರೀತ. ದಿನಾ ಬೆಳಗಾದರೆ ಓದುವುದೇ ಅವರ ಕೆಲಸ. ಅವರಿಗೆ ಜೀವನದಲ್ಲೇ ಎರಡೇ ಕೆಲಸ ಒಂದು ಓದು ಇನ್ನೊಂದು ಸಂಗೀತ. ಅವರಿಗೆ ಓದಲು ಒಂದೇ ಸಮನೆ ಪುಸ್ತಕಗಳನ್ನು ಕೊಡುತ್ತಿರುತ್ತಾರೆ. ಅವರಿಗಷ್ಟೇ ಅಲ್ಲ ಅವರ ಬಳಿ ಬರುವ ವಿದ್ಯಾರ್ಥಿಗಳಿಗೆ ವಿದ್ವಾಂಸರಿಗೆ ಬೇಕಾದ ಗ್ರಂಥಗಳನ್ನು ಓದಲು ಕೊಡುತ್ತಾರೆ. ಒಳ್ಳೆಯ ಲೈಬ್ರರಿ ಇಟ್ಟಿದ್ದಾರೆ. ಅವರ ಮನೆ ಒಂದು ಸರಸ್ವತಿ ಮನೆ ಆಗಿದೆ. ಅವರ ಪತ್ನಿ ಲಕ್ಷ್ಮೀದೇವಿ ಅವರು ಅಧ್ಯಾಪಕಿ, ಲೇಖಕಿ. ಅವರೂ ಪುಸ್ತಕಗಳನ್ನು ಬರೆದಿದ್ದಾರೆ. ಇವರನ್ನು ನೋಡಲು ಬಂದ ವಿದ್ವಾಂಸರಿಗೆಲ್ಲ ಅತಿಥಿ ಸತ್ಕಾರ ಮಾಡಿ ಸಾಹಿತ್ಯದ ವಿಚಾರಗಳನ್ನು ಚರ್ಚಿಸುತ್ತಾರೆ. ಬಂದವರೆಲ್ಲಾ ಈ ಸಾಹಿತಿ ದಂಪತಿಗಳನ್ನು ತುಂಬಾ ಮೆಚ್ಚಿಕೊಳ್ಳುತ್ತಾರೆ. ಗಂಡ ಹೆಂಡತಿ ಇಬ್ಬರೂ ಸಾಹಿತಿಗಳಾಗಿ ಸಾಹಿತ್ಯಕ್ಕೆ ಪ್ರೋತ್ಸಾಹ ಕೊಡುವುದನ್ನು ಬೇರೆ ಕಡೆ ಎಲ್ಲೂ ನಾನು ನೋಡೇ ಇಲ್ಲ. ದೇವರು ಅವರಿಬ್ಬರಿಗೂ ದೀರ್ಘಾಯುಷ್ಯ ಆರೋಗ್ಯ ಕೊಡಲಿ ಅವರ ಸಾಹಿತ್ಯ ಸೇವೆ ಮುಂದುವರಿಯುತ್ತಿರಲಿ ಎಂದು ದೇವರಲ್ಲಿ ಬೇಡಿಕೊಳ್ಳುತ್ತೇನೆ.

******

ವಿದ್ವದ್ವಿಲಾಸದ ಸಾಕ್ಷಿಕಲ್ಲು

ಡಾ. ಬೈರಮಂಗಲ ರಾಮೇಗೌಡ
ಚರವಾಣಿ : ೯೩೪೧೨೫೮೧೪೨

'ಅನಾಜಿ' ಸಂಕ್ಷಿಪ್ತನಾಮದಿಂದ ಗೆಳೆಯರು, ಶಿಷ್ಯವೃಂದ ಪ್ರೀತಿಯಿಂದ ಗುರುತಿಸುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರನ್ನು ನಾನು ಕಳೆದ ನಲವತ್ತು ವರ್ಷಗಳಿಂದ ನೋಡುತ್ತಿದ್ದೇನೆ. ೮೭ ರ ವಯೋಮಾನದ ಅನಾಜಿ ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಸರ್ಕಾರಿ ಪದವಿಕಾಲೇಜುಗಳಲ್ಲಿ ೩೦ ವರ್ಷಗಳ ಕಾಲ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ೧೯೯೬ ರಲ್ಲಿ ನಿವೃತ್ತರಾದ ನಂತರದ ೨೯ ವರ್ಷಗಳಲ್ಲಿ, ಬಹುಮಟ್ಟಿನ ಅಧ್ಯಾಪಕರು ಮಾಡುವಂತೆ ಓದುವುದನ್ನಾಗಲೀ ಬರೆಯುವುದನ್ನಾಗಲೀ ನಿಲ್ಲಿಸಿಯೇ ಇಲ್ಲ; ಬದಲಾಗಿ ಅದನ್ನು ಮತ್ತಷ್ಟು ಜಾಸ್ತಿ ಮಾಡಿಕೊಂಡಿದ್ದಾರೆ ಎಂದೇ ಹೇಳಬಹುದು. ಪುಸ್ತಕಗಳನ್ನು ಓದಿ ಓದಿ, ಹೊಸ ವಿಚಾರಗಳನ್ನು ಗ್ರಹಿಸಿ ಗ್ರಹಿಸಿ, ಹಳತು ಹೊಸತನ್ನು ಪರಸ್ಪರ ಉಜ್ಜಿ ನೋಡಿ ನೋಡಿ ವಿದ್ವತ್ತನ್ನು ಹೆಚ್ಚಿಸಿಕೊಳ್ಳಲು ಸಮಯದ ಸದ್ವಿನಿಯೋಗ ಮಾಡಿಕೊಳ್ಳುವ ಅನಾಜಿ ಶಾರೀರಿಕವಾಗಿ ಮತ್ತು ಉತ್ಸಾಹದಲ್ಲಿ ನಲವತ್ತು ವರ್ಷಗಳ ಹಿಂದೆ ಹೇಗಿದ್ದರೋ ಈಗಲೂ ಹಾಗೆಯೇ ಇದ್ದಾರೆ. ದೇಹ ಮತ್ತು ಮನಸ್ಸಿನ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಂಡಿದ್ದಾರೆ. ನನಗೆ ವಯಸ್ಸಾಯಿತು ಎಂದು ಮತ್ತೆ ಮತ್ತೆ ಅಂದುಕೊಳ್ಳುವುದು, ಬೇರೆಯವರೊಂದಿಗೆ ಹೋಲಿಸಿಕೊಂಡು ನಿಟ್ಟುಸಿರು ಬಿಡುವುದು ಒಂದು ಮನೋವ್ಯಾಧಿ. ಅದಕ್ಕೆ ತುತ್ತಾದವರು ಬಹುಬೇಗ ಕುಸಿದುಬಿಡುತ್ತಾರೆ. ಅನಾಜಿ ಹಾಗೆ ಎಂದೂ ಅಂದುಕೊಳ್ಳದಿರುವುದೇ ಅವರ ಆರೋಗ್ಯದ ಗುಟ್ಟು ಇರಬಹುದು. ಅವರ ಸಹೋದ್ಯೋಗಿಗಳಲ್ಲಿ, ಸಮಾನ ವಯಸ್ಸಿನ ಗೆಳೆಯರಲ್ಲಿ ಅನೇಕರು ಮನೆಯಿಂದ ಹೊರಗೆ ಬರಲಾಗದ ಅವಸ್ಥೆಯಲ್ಲಿದ್ದರೆ, ಕೆಲವರು ಲೋಕದ ವ್ಯಾಪಾರವನ್ನೇ ಮುಗಿಸಿದ್ದಾರೆ. ವಯಸ್ಸಿನ ಪರಿಣಾಮ ದೇಹದಮೇಲೆ ಆಗಿರುವುದು ಕಾಣುತ್ತದೆ ನಿಜ. ಆದರೆ ಸದಾ ಚೇತೋಹಾರಿಯಾದ ಪ್ರಕೃತಿ ಅವರದ್ದಾಗಿರುವುದರಿಂದ ತಾರುಣ್ಯದ ಹುರುಪು ಮತ್ತು ಉಲ್ಲಾಸ ಮಾತು ಹಾಗೂ ಚಟುವಟಿಕೆಗಳಲ್ಲಿ ಕಾಣುತ್ತದೆ. ತಾರುಣ್ಯದ ಒಡನಾಟದಲ್ಲಿ ಕಳೆಯಬಹುದಾದ ಅವಕಾಶಗಳಿಂದ ಅವರು ಎಂದೂ ತಪ್ಪಿಸಿಕೊಳ್ಳುವುದಿಲ್ಲ. ಅವರು ವೃತ್ತಿಯಲ್ಲಿದ್ದಾಗಲೂ ಹತ್ತಾರು ಸಂಘ, ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ, ಸದಸ್ಯರಾಗಿ, ಸಲಹೆಗಾರರಾಗಿ ಇದ್ದರು. ಅಂಥವುಗಳಿಗೆ ನಿಯತವಾಗಿ ಹೋಗುವುದನ್ನು, ಅಲ್ಲಿ ಮಾತು ಚರ್ಚೆ ಸಂವಾದಗಳಲ್ಲಿ ಭಾಗವಹಿಸುವುದನ್ನು ಅವರು ಈಗಲೂ ಬಿಟ್ಟಿಲ್ಲ. ಮನೆಯಿಂದ ಹೊರಗೆ ಬಂದರೆ ಅವರ ಒಂದು ಹೆಗಲಿನ ಮೇಲಿನಿಂದ ಭೂಷಣಪ್ರಾಯವಾಗಿ ತೂಗಾಡುವ ಚೀಲ ಈಗಲೂ ಇದೆ. ಹೆಗಲುಚೀಲ ಇಲ್ಲದ ಅನಾಜಿಯವರಲ್ಲಿ ಏನೋ ವ್ಯತ್ಯಾಸ ಆಗಿದೆಯಲ್ಲ ಎಂದು ಪರಿಚಯದವರಿಗೆ ಥಟ್ಟನೆ ಅನ್ನಿಸಿಬಿಡುವಷ್ಟು ಬಾಂಧವ್ಯ ಅವರಿಗೂ ಚೀಲಕ್ಕೂ ಇರುವುದುಂಟು.

ಅನಾಜಿಯವರಿಗೆ ಪ್ರಿಯವಾದ ವಿಷಯಗಳನ್ನು ಅಂದರೆ ಹಳಗನ್ನಡ ಕವಿ-ಕಾವ್ಯ, ಜೈನ ಸಾಹಿತ್ಯ, ದಾಸ ಸಾಹಿತ್ಯ, ವಚನ ಸಾಹಿತ್ಯ, ಶಬ್ದಕೋಶ, ಗ್ರಂಥ ಸಂಪಾದನೆ, ಭಾಷೆ ಕಲಿಕೆ, ಲಿಪಿ ಕಲಿಕೆ ಇಂಥವುಗಳನ್ನು ಕುರಿತು ಉಪನ್ಯಾಸ, ಭಾಷಣ ಮಾಡಲು ಒಪ್ಪಿಕೊಂಡರೆ ಮತ್ತೆ ಒಂದು ಗಂಟೆಯೋ

ಎರಡು ಗಂಟೆಯೋ ಮೇಷ್ಟ್ರಾಗುವ ಉತ್ಸಾಹ ಗರಿಗೆದರಿಬಿಡುತ್ತದೆ. ಮೇಲೆ ಸೂಚಿಸಲಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಅವರು ರಚಿಸಿರುವ ಗ್ರಂಥಗಳು ಮತ್ತು ಸಂಪಾದಿತ ಕೃತಿಗಳು ಅವರ ವಿದ್ವದ್ವಿಲಾಸ, ಪ್ರತಿಭಾ ಪ್ರಕಾಶದ ಸಾಕ್ಷಿಕಲ್ಲುಗಳಂತಿವೆ. ಭಾಷಾತಜ್ಞರಾಗಿ, ಸಾಹಿತ್ಯ ಶಿಬಿರಗಳ ನಿರ್ದೇಶಕರಾಗಿ, ಸ್ಪರ್ಧಾತ್ಮಕ ಪರೀಕ್ಷೆಗಳ ಮಾರ್ಗದರ್ಶಕರಾಗಿ, ಪ್ರತಿಷ್ಠಾನ-ಪರಿಷತ್ತುಗಳ ಸದಸ್ಯರಾಗಿ ಅವುಗಳನ್ನು ಆಧುನಿಕ ಸಂದರ್ಭಕ್ಕೆ ಸಜ್ಜುಗೊಳಿಸಿಕೊಳ್ಳುವುದಕ್ಕಾಗಿ ಅಂದಂದಿಗೆ ಬೇಕಾಗುವುದನ್ನು ಕಲಿಯುತ್ತಲೇ, ಕಲಿಸುವಿಕೆಗೆ ಪೂರ್ಣ ನ್ಯಾಯ ದೊರಕುವಂತೆ ಮಾಡುತ್ತಲೇ ಇದ್ದಾರೆ. ಅನಾಜಿಯವರೊಂದಿಗೆ ಇರುವ ದೀರ್ಘಕಾಲದ ಒಡನಾಟದಿಂದ ಪರಸ್ಪರರ ಬಗೆಗೆ ತಿಳಿದುಕೊಳ್ಳಲು ಹೆಚ್ಚಿನ ಅವಕಾಶ ಇದ್ದಿತಾದರೂ ಅವರ ವಿದ್ಯಾರ್ಹತೆ ಕನ್ನಡ ಸಾಹಿತ್ಯದಲ್ಲಿ ಎಂ.ಎ. ಎಂದಷ್ಟೇ ನಾನು ತಿಳಿದುಕೊಂಡಿದ್ದೆ. ಅವರು ಎಂ.ಎ. ಮಾಡಿದ ದಿನಮಾನಗಳಲ್ಲಿ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಪದವಿ ಕಾಲೇಜುಗಳಲ್ಲಿ ಬೋಧನೆ ಮಾಡಲು ಉದ್ಯೋಗಾವಕಾಶ ಕೊಡುತ್ತಿದ್ದುದರಿಂದ ಅನಾಜಿಯವರೂ ಎಂ.ಎ. ಮುಗಿಸಿ ಅಧ್ಯಾಪಕ ವೃತ್ತಿಗೆ ಸೇರಿಕೊಂಡಿರುತ್ತಾರೆಂದು ಭಾವಿಸಿದ್ದೆ. ಈಗ 'ಸಾಹಿತ್ಯ ಪರಿಚಾರಕ'ನಿಗೆ ಲೇಖನ ಬರೆಯಲು ಸಹಾಯಕವಾಗಲೆಂದು ಕಳಿಸಿಕೊಟ್ಟಿರುವ ಪರಿಚಯ ಪತ್ರ ನೋಡಿದಾಗ ನನಗೆ ಆಶ್ಚರ್ಯವಾಯಿತು. ಅವರ ಪದವಿ ಅಭ್ಯಾಸದ ಪಟ್ಟಿಯಲ್ಲಿ ಕನ್ನಡ ಎಂ.ಎ. ಜೊತೆಗೆ ಸಮಾಜಶಾಸ್ತ್ರ, ಎಂ.ಎ., ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ, ಶಾಸನಶಾಸ್ತ್ರ ಡಿಪ್ಲೊಮಾ ಕೂಡ ಸೇರಿವೆ. ಇದು ಅವರ ಕಲಿಕೆಯ ಉತ್ಸಾಹ ಮತ್ತು ಅನ್ಯಜ್ಞಾನ ಶಿಸ್ತುಗಳ ತಿಳಿವಳಿಕೆಯನ್ನೂ ಪಡೆಯಬೇಕೆನ್ನುವ ಹಂಬಲವನ್ನು ಸೂಚಿಸುತ್ತದೆ.

ಒಬ್ಬ ಕನ್ನಡ ಅಧ್ಯಾಪಕ ತನ್ನ ವೃತ್ತಿಯಲ್ಲಿ ಪರಿಪೂರ್ಣತೆ ಪಡೆಯಲು ಪುಸ್ತಕಾಭಿರುಚಿ ಮತ್ತು ಓದುವ ಹಂಬಲವನ್ನು ನಿರಂತರವಾಗಿ ಉಳಿಸಿಕೊಳ್ಳುತ್ತ, ಬೆಳೆಸಿಕೊಳ್ಳುತ್ತ ಇರಬೇಕು. ಅಂಥವರು ವಿದ್ಯಾರ್ಥಿಗಳ ಉತ್ತಮ ಭವಿಷ್ಯ ನಿರ್ಮಾಣದ ರೂವಾರಿಗಳಾಗಬಲ್ಲರು. ಕನ್ನಡ ಅಧ್ಯಾಪಕರ ಬಹುದೊಡ್ಡ ಸಂತೆಯೊಳಗೆ ಅಂಥವರು ವಿರಳಾತಿವಿರಳ. ಹೊಸಹೊಸದನ್ನು ಪುಸ್ತಕಗಳ ಮೂಲಕ ತಿಳಿಯದೆ, ತಿಳಿದಿದ್ದನ್ನು ಕಾಲಕಾಲಕ್ಕೆ ವಿದ್ಯಾರ್ಥಿಗಳಿಗೆ ತಲುಪಿಸದೆ, ಪಠ್ಯಕ್ರಮದ ಗಿಳಿಪಾಠ ಒಪ್ಪಿಸಿ ಬರುವ ಸಂಬಳದ ಅಧ್ಯಾಪಕರು ಆ ವೃತ್ತಿಗೆ ದೊಡ್ಡ ಕಳಂಕ. ಬಹುಸಂಖ್ಯಾತರಾದ ಇಂಥವರ ನಡುವೆ ವೃತ್ತಿಧರ್ಮವನ್ನು ಅಳವಡಿಸಿಕೊಂಡು, ತರಗತಿಯೊಳಗಿನ ಬೋಧನಾ ವಿಧಾನದಿಂದ, ವಿಷಯ ಮಂಡನೆಯ ಕಲೆಗಾರಿಕೆಯಿಂದ, ಉಪನ್ಯಾಸವನ್ನು ರಸಭರಿತವಾಗಿಸುವುದರಿಂದ ವಿದ್ಯಾರ್ಥಿಗಳ ಒಳಗಣ್ಣು ತೆರೆಯುವಂತೆ ಮಾಡುತ್ತಿದ್ದ ಅಪರೂಪದ ಅಧ್ಯಾಪಕರಲ್ಲಿ ಅನಾಜಿ ಒಬ್ಬರಾಗಿದ್ದಾರೆ. ಅವರಿಗಿಂತ ಹಿರಿಯ ತಲೆಮಾರಿನ ಅಧ್ಯಾಪಕರಾಗಿದ್ದ ಜಿ.ಪಿ. ರಾಜರತ್ನಂ ಅಂಥವರು ಭಾಷಣ ಮಾಡುವವರಿಗೂ ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ಬೋಧನೆ ಮಾಡುತ್ತಿದ್ದವರಿಗೂ ಹೇಳುತ್ತಿದ್ದ ಕಿವಿಮಾತು-"ಮಾತನಾಡಲು ವೇದಿಕೆಗೆ ಹೋಗುವುದಕ್ಕೆ ಮುಂಚಿತವಾಗಿ ಸಾಕಷ್ಟು ಓದಿಕೊಂಡು, ಚಿಂತನೆ ಮಾಡಿಕೊಂಡು, ಸಾಧ್ಯವಾದರೆ ಟಿಪ್ಪಣಿ ಮಾಡಿಕೊಂಡು ಹೋಗಿ. ಪೂರ್ವ ತಯಾರಿ ಇಲ್ಲದೆ ತರಗತಿಗೆ ಹೋಗಲೇಬೇಡಿ. ಅಂಥ ಸಂದರ್ಭ ಬಂದರೆ ರಜಾ ಹಾಕಿಬಿಡಿ." ಇದನ್ನು ಅಕ್ಷರಶಃ ಪಾಲಿಸಿದ ಅಧ್ಯಾಪಕರೆಲ್ಲ ಆದರ್ಶ ಗುರುಗಳೆನಿಸಿಕೊಂಡಿದ್ದಾರೆ.

ಅನಾಜಿಯವರ ಓದಿನ ದಾಹ ಎಂಥದ್ದೆಂದರೆ, ನಾಲ್ಕಾರು ಮಂದಿ ಸಾಹಿತ್ಯಾಸಕ್ತರ, ಸಾಹಿತಿಗಳ ಜೊತೆಗಿದ್ದರೆ ಮಾತಾಡುವ ವಿಷಯ ಎಲ್ಲಿಂದೆಲ್ಲಿಗೋ ಹೋಗಿ ಕೊನೆಗೆ ಪುಸ್ತಕಗಳತ್ತ ಹೊರಳುತ್ತದೆ. ಇತ್ತೀಚೆಗೆ ಯಾವ ಹೊಸ ಪುಸ್ತಕ ಓದಿದಿರಿ? ಮಾರುಕಟ್ಟೆಗೆ ಬಂದಿರುವ ಒಳ್ಳೆಯ ಪುಸ್ತಕ ಯಾವುದು? ಎಂದು ಅವರು ಕುತೂಹಲದಿಂದ ಪ್ರಶ್ನಿಸುವಾಗ ಎದುರಿಗಿರುವವರು ಓದುವ ಅಭ್ಯಾಸ ಇಟ್ಟುಕೊಂಡಿದ್ದಾರೋ ಇಲ್ಲವೋ ಎಂದು ತಿಳಿಯುವುದರ ಜೊತೆಗೆ ಒಳ್ಳೆಯ ಪುಸ್ತಕವಾದರೆ ಅದನ್ನು

ಕೊಳ್ಳಬಹುದು ಎನ್ನುವ ಆಲೋಚನೆಯೂ ಇರುತ್ತದೆ. ಈಗ ಯು.ಜಿ.ಸಿ. ವೇತನದ ಹೆಸರಿನಲ್ಲಿ ಭಾರೀ ಮೊತ್ತ ಪಡೆದುಕೊಳ್ಳುತ್ತಿರುವ ಅನೇಕ ಕನ್ನಡ ಅಧ್ಯಾಪಕರಿಗೆ ಪುಸ್ತಕಗಳನ್ನು ಓದಿ ಜ್ಞಾನಭಂಡಾರ ಹೆಚ್ಚಿಸಿಕೊಂಡು ಅದನ್ನು ವಿದ್ಯಾರ್ಥಿಗಳಿಗೆ ರುಚಿಕರವಾಗಿ ಉಣಬಡಿಸಬೇಕೆನ್ನುವ ಆಲೋಚನೆ ಇರುವುದೇ ಇಲ್ಲ. ಅವರ ಮನೆಯೊಳಗೆ ಐಷಾರಾಮಿ ವಸ್ತುಗಳಿರಬಹುದು, ಆದರೆ ಪುಟ್ಟದಾದ ಒಂದು ಪುಸ್ತಕ ಭಂಡಾರ ಇರುವುದಿಲ್ಲ; ಅವರು ಮನೆಗೆ ದಿನಪತ್ರಿಕೆಗಳನ್ನು ತರಿಸಿಕೊಂಡು ಓದಿ ಲೋಕಜ್ಞಾನವನ್ನು ಹೆಚ್ಚಿಸಿಕೊಳ್ಳುವುದೂ ಇಲ್ಲ; ಎಲ್ಲವೂ ಹೇಗೋ ನಡೆಯುತ್ತದೆ ಎನ್ನುವ ಮನೋಧರ್ಮದಿಂದಲೇ ನಡೆದುಹೋಗುತ್ತದೆ. ಅಂಥವರನ್ನು ಅನಾಜಿಯವರ ಮನೆಯಲ್ಲಿರುವ ಮಹಾ ಗ್ರಂಥಭಂಡಾರದ ದರ್ಶನ ಮಾಡಿಸಲು ಕರೆದುಕೊಂಡು ಹೋದರೆ ನಾಚಿಕೆ ಪಟ್ಟುಕೊಳ್ಳಬಹುದು. ಸಾಹಿತ್ಯದ ಎಲ್ಲ ಪ್ರಕಾರದ ಅಪರೂಪದ ಪುಸ್ತಕಗಳ ಸಂಗ್ರಹ ಅಲ್ಲಿದೆ. ಅಲ್ಲಿರುವ ಪುಸ್ತಕಗಳು ಸುಮ್ಮನೆ ಅಲಂಕಾರಕ್ಕಾಗಿ ಜೋಡಿಸಿರುವಂಥವಲ್ಲ, ಅನಾಜಿ ಅವುಗಳನ್ನು ಪೂರ್ಣವಾಗಿ ಓದಿಯೇ, ಅವುಗಳ ಬಗೆಗೆ ಟಿಪ್ಪಣಿ ಮಾಡಿಕೊಂಡೇ ಸೂಕ್ತವಾದ ಜಾಗದಲ್ಲಿ ಅಚ್ಚುಕಟ್ಟಾಗಿ ಜೋಡಿಸಿಟ್ಟಿದ್ದಾರೆ. ಅಲ್ಲಿಗೆ ಭೇಟಿ ಕೊಡುವವರು ಕುತೂಹಲದಿಂದ ಯಾವ ಪುಸ್ತಕದ ಮೇಲೆ ಕಣ್ಣು ಹಾಕುತ್ತಾರೋ ಅಥವಾ ಕೈಗೆತ್ತಿಕೊಳ್ಳುತ್ತಾರೋ ಅಂಥವುಗಳ ವಿಶೇಷತೆ, ಮಹತ್ವ ಕುರಿತು ಮಾಹಿತಿ ಕೊಡುತ್ತಾರೆ, ಕೆಲವೊಮ್ಮೆ ಉಪನ್ಯಾಸವನ್ನೇ ಕೊಟ್ಟುಬಿಡಬಹುದು! ಬೆಂಗಳೂರಿನಲ್ಲಿ ಬಹಳ ಹಳೆಯ, ಒಂದು ಬಾರಿ ಮುದ್ರಣವಾಗಿರುವ ಪ್ರತಿಗಳು ಮುಗಿದು ಎಷ್ಟೋ ವರ್ಷಗಳಾಗಿರುವ ಪುಸ್ತಕಗಳನ್ನು ಸಂಗ್ರಹಿಸಿಟ್ಟುಕೊಂಡಿರುವ ಕೆಲವೇ ಗ್ರಂಥಭಂಡಾರಗಳು ಕೆಲವು ಸಂಸ್ಥೆಗಳಲ್ಲಿವೆ. ಅಂಥ ಅಪರೂಪದ, ಅಮೂಲ್ಯವಾದ ಪುಸ್ತಕಗಳನ್ನು ಜತನವಾಗಿ ಇರಿಸಿಕೊಂಡಿರುವ ಗ್ರಂಥಭಂಡಾರಗಳ ಬಗೆಗೆ ಮಾಹಿತಿ ಇರುವವರು ಆ ಪುಸ್ತಕ ಇಂಥ ಕಡೆ ಸಿಗಬಹುದು ನೋಡಿ ಎಂದು ತಿಳಿಸುತ್ತಾರೆ. ಆ ಎಲ್ಲ ಗ್ರಂಥಭಂಡಾರಗಳಲ್ಲಿ ಸಿಗದಿರುವ ಪುಸ್ತಕವೂ ಕೆಲವೊಮ್ಮೆ ಅನಾಜಿಯವರ ಗ್ರಂಥಭಂಡಾರದಲ್ಲಿ ಸಿಗಬಹುದು ಎಂದರೆ ಅದು ವಿಸ್ಮಯಕಾರಿಯಲ್ಲವೇ? ೮೭ ಅಂದರೆ ಪುಸ್ತಕ ಓದುವುದನ್ನೆಲ್ಲ ನಿಲ್ಲಿಸಿಬಿಡುವ ವಯಸ್ಸು ಎಂದು ಅನೇಕರು ಭಾವಿಸುತ್ತಾರೆ. ಆದರೆ ಒಂದು ಒಳ್ಳೆಯ ಪುಸ್ತಕ ಕಣ್ಣಿಗೆ ಬಿದ್ದರೆ ಅನಾಜಿ ಅದನ್ನು ಸಂಗ್ರಹಿಸುತ್ತಾರೆ, ಪುಸ್ತಕ ಭಂಡಾರದಲ್ಲಿಡುತ್ತಾರೆ, ಓದುತ್ತಾರೆ, ಅದರಲ್ಲಿನ ವಿಚಾರವನ್ನು ಹಂಚಿಕೊಳ್ಳುತ್ತಾರೆಂದರೆ ಅದು ಅವರ ಬಗೆಗಿನ ಗೌರವವನ್ನು ಹೆಚ್ಚು ಮಾಡುತ್ತದೆ. ಓದುವ ಹವ್ಯಾಸ ಇರುವವರಿಗೆ ಯಾವ ವ್ಯಸನಗಳೂ ಇರುವುದಿಲ್ಲ ಎನ್ನುವುದಕ್ಕೆ ಅನಾಜಿ ನಿದರ್ಶನವಾಗಿದ್ದಾರೆ.

ಕೊನೆಯದಾಗಿ ಹೇಳಬೇಕಾದ ಒಂದು ಮಾತು–ಅನಾಜಿಯವರು ಲೋಕಾಭಿರಾಮ ಮಾತುಕತೆಯಲ್ಲಿ ತೊಡಗಿರುವಾಗ ಅವರ ಬಾಲ್ಯ, ವಿದ್ಯಾಭ್ಯಾಸ, ವೃತ್ತಿಜೀವನ, ಸಹೋದ್ಯೋಗಿಗಳು, ಪ್ರಾಂಶುಪಾಲರು, ಅಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಕೆಲವು ಕೌತುಕದ ಪ್ರಸಂಗಗಳಿಗೆ ಜಿಗಿಯುತ್ತಾರೆ. ನಲವತ್ತು ಐವತ್ತು ವರ್ಷಗಳಷ್ಟು ಹಳೆಯ ನೆನಪುಗಳೂ ಕೂಡ ಅವರ ಮೆದುಳಿನ ತಿಜೋರಿಯಲ್ಲಿ ಭದ್ರವಾಗಿ ಸಂಗ್ರಹಗೊಂಡಿವೆ. ಅವುಗಳನ್ನು ನಿರೂಪಿಸುವಾಗ ಆಯಾ ವಯೋಮಾನಕ್ಕೆ ಪ್ರವೇಶಿಸಿಬಿಟ್ಟಿರುತ್ತಾರೆ. ಮಾನವನ ಮೆದುಳಿನ ಸಂಗ್ರಹ ಸಾಧ್ಯತೆ ಅಪಾರವಾಗಿದ್ದು ಅವನು ಕ್ರಿಯಾಶೀಲವಾಗಿದ್ದಷ್ಟೂ ಅದು ಚುರುಕಾಗಿ ಕಾರ್ಯ ನಿರ್ವಹಿಸುತ್ತದೆ. ಅದು ಅನಾಜಿಯವರಿಗೆ ಸಾಧ್ಯವಾಗಿದ್ದು, ಈ ವಿಚಾರದಲ್ಲಿ ಅವರು ನಮಗೆ ಆದರ್ಶವಾಗಿದ್ದಾರೆ. ಇಂಥ ಅಪರೂಪದ ಗೌರವಾನ್ವಿತ ಹಿರಿಯರಾಗಿರುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ೮೭ನೇ ವಯಸ್ಸಿಗೆ ತಲುಪುತ್ತಿರುವಾಗಲಾದರೂ 'ಸಾಹಿತ್ಯ ಪರಿಚಾರಕ' ಎಂದು ಗುರುತಿಸಿ, ಅಭಿನಂದನಾ ಗ್ರಂಥವನ್ನು ಸಮರ್ಪಿಸುತ್ತಿರುವುದಕ್ಕೆ ಸಂತೋಷವಾಗುತ್ತಿದೆ. ಅವರ ಹಾರೈಕೆ, ಮಾರ್ಗದರ್ಶನ ನಮ್ಮಂಥ ಕಿರಿಯರು ಕ್ರಮಿಸುವ ದಾರಿಗೆ ಬೆಳಕಾಗಲಿ.

'ಅನಾಜಿ' ಅಪೂರ್ವ ವ್ಯಕ್ತಿ 'ಅನಾಜಿ' ಪುಸ್ತಕಲೋಕ

ಎಂ.ಕೆ. ಗೋಪೀನಾಥ್

ಚರವಾಣಿ : ೯೯೮೬೪೨೪೬೬೫

ಒಂದು ಸಾಹಿತ್ಯ ನಿರ್ಮಿತಿಯಲ್ಲಿ ತೊಡಗಿರುವ ಜನರನ್ನು ಮಾತ್ರ ಸಾಹಿತಿಗಳು ಎನ್ನುವುದಾದರೆ ಶುದ್ಧ ಸಾಹಿತ್ಯ ಪ್ರೇಮಿಗಳನ್ನು ಯಾವ ಹೆಸರಿನಿಂದ ಕರೆಯಬೇಕು? ಸಾಹಿತ್ಯವನ್ನು ಉದ್ದೇಶಕ್ಕೊಗ್ಗಿಸಿಕೊಂಡು ಅದನ್ನು ಗಂಭೀರವಾಗಿ ಅಭ್ಯಾಸ ಮಾಡುತ್ತಾ ತಮ್ಮ ಓದಿನ ಚಿಂತನೆಯ ಫಲವನ್ನು ಸಾಹಿತ್ಯಾಭಿಮಾನಿಗಳಲ್ಲಿ ಹಂಚುವ ಕಾಯಕದಲ್ಲಿ ನಿರತರಾಗಿರುವ ಜನ ಸಾಹಿತಿಗಳ ಸಾಲಿಗೆ ಸೇರಲಾರರೆ ? ಸಹಸ್ರ ಸಹಸ್ರಗಟ್ಟಲೆ ಪುಸ್ತಕಗಳನ್ನು ಸಂಗ್ರಹಿಸಿ ಹಗಲಿರುಳೂ ಅವುಗಳ ಅಧ್ಯಯನ ಅಭ್ಯಾಸಗಳಲ್ಲೇ ತೊಡಗಿ ಸದ್ದು ಗದ್ದಲವಿಲ್ಲದೆ ತನ್ನ ಮಟ್ಟಿಗೆ ಸಾಹಿತ್ಯ ಪ್ರಸಾರ ಮಾಡುತ್ತಿರುವ ಒಬ್ಬ ವ್ಯಕ್ತಿ ಸಾಹಿತಿ ಎನಿಸಿಕೊಳ್ಳಲಾರರೇ ?

ಬೆಂಗಳೂರಿನ ಜಯನಗರದಲ್ಲಿ ವಾಸಿಸುತ್ತಿರುವ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರನ್ನು ಕಂಡು ಅವರೊಡನೆ ಮಾತಾಡಿದಾಗ ಮೇಲಿನ ಪ್ರಶ್ನೆಗಳು ಪ್ರಸ್ತುತವಾಗುತ್ತವೆ.

ಹಾಗೆ ನೋಡಿದರೆ ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು ಸಾಹಿತ್ಯ ನಿರ್ಮಿತಿಯನ್ನೂ ಮಾಡಿದ್ದಾರೆ. ಆದರೆ ಸಾಹಿತ್ಯ ನಿರ್ಮಿತಿಯನ್ನು ಮೀರಿದ ವಿಶಿಷ್ಟ ಗುಣವೊಂದು ಅವರ ವ್ಯಕ್ತಿತ್ವದಲ್ಲಿದೆ. ಅಶ್ವತ್ಥನಾರಾಯಣ ಹೆಚ್ಚು ಬರೆದಿಲ್ಲ. ಆದರೆ ಬರಹಕ್ಕೆ ಬದಲಾಗಿ ಅವರು ಮಹತ್ಸಾಧನೆಯೊಂದನ್ನು ಮಾಡಿದ್ದಾರೆ. ಅವರು ಪುಸ್ತಕ ಸಂಗ್ರಹವನ್ನು ತಮ್ಮ ಬದುಕಿನ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡಿದ್ದಾರೆ. ಅವರ ಸಂಗ್ರಹದಲ್ಲಿರುವ ಪುಸ್ತಕಗಳ ಸಂಖ್ಯೆ ಹನ್ನೆರಡು ಸಾವಿರವನ್ನು ಮೀರುತ್ತದೆ. ಈ ಕೆಲಸಕ್ಕಾಗಿ ಅವರು ವ್ಯಯಿಸಿರುವ ಹಣವನ್ನು ಅಡ್ಡಾದಿಡ್ಡಿಯಾಗಿ ಅಂದಾಜು ಮಾಡಿದರೂ ಆ ಮೊತ್ತ ಹಲವು ಸಾವಿರಗಳಷ್ಟಾಗುತ್ತದೆ. ತಾವು ಸಂಗ್ರಹಿಸಿರುವ ಪುಸ್ತಕಗಳನ್ನು ಒಪ್ಪವಾಗಿಟ್ಟುಕೊಳ್ಳಲು ಪ್ರತ್ಯೇಕ ಕೋಣೆಯೊಂದನ್ನೇ 'ಅನಾಜಿ' ಮೀಸಲಾಗಿಟ್ಟಿದ್ದಾರೆ ಅಶ್ವತ್ಥನಾರಾಯಣ ಪರಿಚಿತ ವಲಯಗಳಲ್ಲಿ 'ಅನಾಜಿ' ಎಂದೇ ಖ್ಯಾತರು. ಅವರು ಪುಸಕ್ತಗಳ ಮೇಲೆ ದಾಖಲಿಸುವ ಅಂಕಿತನಾಮವೂ ಅದೇ) ಅನಾಜಿಯವರದು ರೂಪಾಯಿ. ಆಣೆ. ಪೈ: ಮನೋವೃತ್ತಿಯ ಜನ ಮಾಡುವ ವ್ಯವಹಾರಕ್ಕಿಂತ ಭಿನ್ನವಾದದ್ದು, ಅನನ್ಯವಾದದ್ದು.

ಅಶ್ವತ್ಥನಾರಾಯಣ ಹುಟ್ಟಿದ್ದು ಬೆಂಗಳೂರಿನಲ್ಲಿ (1938), ತಂದೆ ಹೆಬ್ಬಗೋಡಿ ಗುಂಡಪ್ಪ; ತಾಯಿ ಜಾನಕಮ್ಮ, ಈ ದಂಪತಿಗಳದು ಹತ್ತುಮಕ್ಕಳ ದೊಡ್ಡ ಸಂಸಾರ. ಆದ್ದರಿಂದ ಮಗ ಅಶ್ವತ್ಥನನ್ನು ಮೆಕ್ಯಾನಿಕಲ್ ಎಂಜಿನಿಯರಿಂಗ್ ಡಿಪ್ಲೊಮ ಓದಲಿಕ್ಕೆ ಹಾಕಿದರು. ಅಶ್ವತ್ಥರು ಅದರಲ್ಲಿ ಪಾಸೂ ಆದರು.

ಇತ್ತ ಅಶ್ವತ್ಥನಾರಾಯಣರಿಗಾದರೋ ಹೈಸ್ಕೂಲಿನಲ್ಲಿದ್ದಾಗಿನಿಂದಲೇ ಕನ್ನಡದ ಗೀಳು; ಉತ್ಕಟ ಕನ್ನಡಾಭಿಮಾನ, ಇವರ ಮನೆ ಕನ್ನಡ ಸಾಹಿತ್ಯ ಪರಿಷತ್ತಿನ ಸಮೀಪದಲ್ಲಿತ್ತು. ಸಹಜವಾಗಿಯೇ ಅಶ್ವತ್ಥರ

ಮೇಲೆ ಪರಿಷತ್ತು ಬೀರಿದ ಪ್ರಭಾವ ಅಷ್ಟಿಷ್ಟಲ್ಲ. ಹೈಸ್ಕೂಲು ವಿದ್ಯಾರ್ಥಿಯಾಗಿದ್ದ ಅಶ್ವತ್ಥನಾರಾಯಣ ದಿನ ತಪ್ಪದೆ ಪರಿಷತ್ತಿಗೆ ಭೇಟಿ ನೀಡುತ್ತಿದ್ದರು. ಅಲ್ಲಿನ ವಾಚನಾಲಯವೇ ಅವರ ವಾಸದ ಕೋಣೆ ಎನ್ನುವಷ್ಟರ ಮಟ್ಟಿಗಿನ ಗಾಢ ನಂಟನ್ನು ಅವರು ಪರಿಷತ್ತಿನೊಂದಿಗೆ ಬೆಳಸಿಕೊಂಡರು. ಮುಂದೆ ಅಶ್ವತ್ಥನಾರಾಯಣ ತಮ್ಮ ಕಾರ್ಯ ಕ್ಷೇತ್ರವನ್ನು ಆರಿಸಿಕೊಂಡು ಅದರಲ್ಲಿ ಭದ್ರವಾಗಿ ನೆಲೆಯೂರಿ ನಿಂತಮೇಲೆ ಅನಾಜಿ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ (26-7-78ರಿಂದ 16-9-79ರ ವರೆಗೆ) ಸೇವೆ ಮಾಡಿದರು.

ಹೈಸ್ಕೂಲು ವಿದ್ಯಾರ್ಥಿಯಾಗಿದ್ದ ಅನಾಜಿ ತಮ್ಮಲ್ಲಿದ್ದ ಕನ್ನಡಾಭಿಮಾನಕ್ಕೆ ನಿಶ್ಚಿತ ರೂಪ ಕೊಡುವ ನಿಟ್ಟಿನಲ್ಲಿ ಮಾಡಿದ ಕೆಲಸಗಳು ಒಂದೆರಡಲ್ಲ. 'ವಿದ್ಯಾಗಣಪತಿ ಪುಸ್ತಕ ಭಂಡಾರ' ಎಂಬ ಸರ್ಕ್ಯುಲೇಟಿಂಗ್ ಲೈಬ್ರರಿ ಒಂದನ್ನು ಸ್ವಲ್ಪ ಕಾಲ ನಡೆಸಿದರು. ಕೈಬರಹದ ಪತ್ರಿಕೆ ಒಂದರ ಜೊತೆಗಿನ ಒಡನಾಟ ಅಷ್ಟು ಕಾಲ ನಡೆಯಿತು. ಆ ಕಾಲಕ್ಕೆ ಕನ್ನಡದಲ್ಲಿ ಬಂದಿದ್ದ ಕಾದಂಬರಿಗಳ ಹೆಸರು ಗಳನ್ನು ಬಳಸಿ 'ಜನಪ್ರಗತಿ'ಯಲ್ಲಿ ಒಂದು ಕಥೆ ಬರೆದರು. 'ಜನಪ್ರಗತಿ' ಹಾಗೂ 'ಪ್ರಜಾಮತ'ಗಳಲ್ಲಿ ಪ್ರಕಟಿಸಿದರು.

ವಿ.ಸೀ. ಅವರ ಮಗ ಸತ್ಯ ಪ್ರೈಮರಿ ಶಾಲೆಯಲ್ಲಿ ಕ್ಲಾಸ್‌ಮೇಟ್. ಹಾಗಾಗಿ ಅನಾಜಿ ವಿ.ಸೀ. ಅವರ ಮನೆಗೆ ಹೋಗಿಬರುತ್ತಿದ್ದುದು ಸಾಮಾನ್ಯವಾಯಿತು. ಮೆಕ್ಯಾನಿಕಲ್ ಎಂಜಿನೀರಿಂಗ್‌ನಲ್ಲಿ ಡಿಪ್ಲೊಮ ಮುಗಿಯುವ ಹೊತ್ತಿಗೆ ಅಶ್ವತ್ಥನಾರಾಯಣರಿಗೆ ಕನ್ನಡ ಎಂ.ಎ. ಪದವೀಧರನಾಗಬೇಕು ಹಾಗೂ ಕಾಲೇಜಿನಲ್ಲಿ ಕನ್ನಡ ಪಾಠ ಹೇಳುವ ಶಿಕ್ಷಕನಾಗಬೇಕು ಎಂಬ ಆಕಾಂಕ್ಷೆ ಹುಚ್ಚು ಎನಿಸುವಷ್ಟು ಗಾಢವಾಗಿ ಮೆಟ್ಟಿಕೊಂಡಿತ್ತು. ಈ ಹೊತ್ತಿಗೆ ರಾಜರತ್ನಂ ಅವರ ಪರಿಚಯವೂ ಲಭ್ಯವಾಗಿತ್ತು. ಸುಟಿಯಾಗಿದ್ದ ಈ ಹುಡುಗನಲ್ಲಿ ರಾಜರತ್ನಂ ಆಸಕ್ತಿ ತೋರಿದರು. ಇನ್ನೇನು ಬೇಕು ? ಕನ್ನಡ ಎಂ.ಎ. ಪದವೀಧರನಾಗಲು ಮಾರ್ಗ ಸುಗಮವಾಗಿತ್ತಲ್ಲ? ಹಾಗಾಗಲಿಲ್ಲ.

ಈ ತನಕ ಕನ್ನಡ ಮಾಧ್ಯಮದಲ್ಲಿ ಓದಿದ್ದ ಅಶ್ವತ್ಥರಿಗೆ ಕನ್ನಡ ಎಂ.ಎ., ಓದಲು ಸೀಟು ಸಿಗಲಿಲ್ಲ. ಈ ಸಲುವಾಗಿ, ತೀ.ನಂ.ಶ್ರೀ., ಕುವೆಂಪು, ಹಾಗೂ ಡಿ.ಎಲ್.ಎನ್. ಮುಂತಾದವರನ್ನು ಕಂಡು 'ವ್ಯಾಜ್ಯಗಂಟ' ಎಂಬ ಬಿರುದನ್ನು ಸಂಪಾದಿಸಿದ್ದಾಯಿತೇ ಹೊರತು ಸೀಟು ಸಿಗಲೇ ಇಲ್ಲ. ಆಗ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಜವರೇಗೌಡರನ್ನು ಕಂಡದ್ದು ಕೂಡ ಫಲಕಾರಿಯಾಗಲಿಲ್ಲ.

ಬೇರೊಂದು ವಿಷಯದಲ್ಲಿ ಎಂ.ಎ. ಪದವಿ ಪಡೆದಿದ್ದಲ್ಲಿ ಕನ್ನಡ ಎಂ.ಎ. ಓದಲು ಸೀಟು ಕೊಡಬಹುದೆಂಬುದು ಆಗ ಜಾರಿಯಲ್ಲಿದ್ದ ನಿಯಮ. ಈ ನಿಯಮದ ಲಾಭ ಪಡೆದು ಮುಂದೆ ಕನ್ನಡ ಎಂ.ಎ.ಗೆ ಸೀಟು ದೊರಕಿಸಿ ಕೊಳ್ಳುವ ಉದ್ದೇಶದಿಂದ ಬೆಂಗಳೂರಿನ ಆಚಾರ್ಯ ಪಾಠಶಾಲೆಯಲ್ಲಿ ಬಿ.ಎ. ಮುಗಿಸಿದ್ದ. ಅವರು ಸೆಂಟ್ರಲ್ ಕಾಲೇಜಿನಲ್ಲಿ ಸಮಾಜಶಾಸ್ತ್ರದಲ್ಲಿ ಎಂ.ಎ. ಮಾಡಿ ಧಾರವಾಡಕ್ಕೆ ಹೋದರು.

ಧಾರವಾಡದಲ್ಲಿರುತ್ತ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಡಿಗ್ರಿಯನ್ನೂ ಪಡೆದರು. ಈ ಎರಡು ಡಿಗ್ರಿಗಳ ಜೊತೆ ಶಾಸನ ಶಾಸ್ತ್ರದಲ್ಲಿ ಒಂದು ಡಿಪ್ಲೊಮಾವನ್ನು ಪಡೆದರು. ಈ ಓದಿಗೆ ಅವರಿಗೆ ಶಿಷ್ಯ ವೇತನವೂ ಸಿಕ್ಕಿತ್ತು.

ಕನ್ನಡ ಮೇಷ್ಟರಾಗಿ ಮೊದಲು ನೌಕರಿಗೆ ಸೇರಿದ್ದು ದಯಾನಂದ ಕಾಲೇಜಿಗೆ ಮುಂದೆ ಸರಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿ ಬೆಂಗಳೂರು, ಹಾಸನ, ಮಂಡ್ಯ, ಮಾಗಡಿ, ಕೊಳ್ಳೇಗಾಲಗಳ ಕಾಲೇಜುಗಳಲ್ಲಿ ಪಾಠ ಹೇಳುತ್ತಾ ಪ್ರಾಧ್ಯಾಪಕರ ಹುದ್ದೆಗೆ ಏರಿ 1996 ರಲ್ಲಿ ನಿವೃತ್ತರಾದರು.

ಸಾಹಿತ್ಯ ಪರಿಚಾರಿಕೆಯನ್ನೇ ಮುಖ್ಯವೃತ್ತಿಯನ್ನಾಗಿ ಮಾಡಿಕೊಂಡಿರುವ ಪ್ರೊ॥ ಅಶ್ವತ್ಥ ನಾರಾಯಣ 'ನಾನು ಬರೆದಿರುವುದು ಬಹು ಸ್ವಲ್ಪ' ಎಂದು ಹೇಳುತ್ತಾರಾದರೂ 'ರತ್ನಕರಂಡಕ ಶ್ರಾವಕಾಚಾರ', 'ರತ್ನಾಕರನ ಶತಕತ್ರಯ' ಹಾಗೂ 'ಜಾಗರೂಕರಾಗಿ ಮತ್ತು ಜ್ಞಾನವಂತರಾಗಿ' ಎಂಬ (ಜೈನಧರ್ಮಕ್ಕೆ ಸಂಬಂಧಿಸಿದ) ಮೂರು ಕೃತಿಗಳ ಅನುವಾದ ಕಾರ್ಯ ಅವರಿಂದಾಗಿದೆ. ಅಲ್ಲದೆ ಉಪನ್ಯಾಸಗಳಿಗೆಂದು ಮಾಡಿಕೊಂಡ ಸಿದ್ಧತಾ ರೂಪದ ಪ್ರಬಂಧಗಳು ನಾಲ್ಕು ಸಂಪುಟಗಳಷ್ಟಾಗುತ್ತವೆ (ಪ್ರಕಟವಾಗಿಲ್ಲ). ಕನ್ನಡದ ಬಳಕೆಯನ್ನು ಕುರಿತಂತೆ 'ವ್ಯಾವಹಾರಿಕ ಕನ್ನಡ' ಎಂಬ ಕೃತಿ ಪರಿಷತ್ ಪರೀಕ್ಷೆಗೆ ಪಠ್ಯವಾಗಿದೆ. 'ವಿಜಯದಾಸರ ಕೀರ್ತನೆಗಳು' ಎಂಬೊಂದು ಸಂಪುಟವನ್ನು ಕನ್ನಡ ಸಂಸ್ಕೃತಿ ನಿರ್ದೇಶನಾಲಯಕ್ಕಾಗಿ ಸಿದ್ಧಗೊಳಿಸಿದ್ದಾರೆ.

ಪ್ರೊ॥ ಜಿ. ಅಶ್ವತ್ಥನಾರಾಯಣ ಅವರ ಪತ್ನಿ ಎಂ.ಆರ್. ಲಕ್ಷ್ಮೀದೇವಿ ಬೆಂಗಳೂರಿನ ಆಚಾರ್ಯ ಪಾಠಶಾಲೆಯಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಒಳ್ಳೆಯ ವಾಗ್ಮಿಗಳಾದ ಇವರು ಲೇಖನ ಕೃಷಿಯನ್ನೂ ಮಾಡಿದ್ದಾರೆ. 'ಲಕ್ಷ್ಮೀಶ ಕವಿ: ಕವಿ ಕಾವ್ಯ ಪರಿಚಯ' ಎಂಬ ಹೆಸರಿನ ಲಕ್ಷ್ಮೀದೇವಿಯವರ ಕೃತಿಯನ್ನು (ಆಗಸ್ಟ್ 97ರಲ್ಲಿ) ಭಾರತೀಯ ವಿದ್ಯಾಭವನದವರು ಹೊರತಂದಿದ್ದಾರೆ. 'ಅಜ್ಞಾತ ಕವಯಿತ್ರಿಯರು', 'ಕನ್ನಡ ವಾಣಿಜ್ಯ ಪರಿಚಯ', 'ಕುಮಾರ ವ್ಯಾಸ ಮತ್ತು ಜಾನಪದ' – ಇವು ಲಕ್ಷ್ಮೀದೇವಿಯವರ ಇನ್ನಿತರ ಕೃತಿಗಳು. ಈ ದಂಪತಿಗಳ ಒಬ್ಬಳೇ ಮಗಳು ಕ್ಷಮಾ ಅಶ್ವತ್ಥ್. ಇವಳು ಹುಟ್ಟಿದ ದಿನ ಅಶ್ವತ್ಥನಾರಾಯಣರಿಂದ 'ಉತ್ತಮ ಕ್ಷಮಾ ಧರ್ಮ' ಎಂಬ ಕನ್ನಡದ ಕೃತಿಯ ಬಿಡುಗಡೆಯೂ ಆಯಿತಾಗಿ ಮಗುವಿಗೆ ಕ್ಷಮಾ ಅಶ್ವತ್ಥ್ ಎಂಬ ಹೆಸರು ಬಂತು. ಎಂ.ಎಸ್ಸಿ.ಯ (ಅಂತಿಮ ವರ್ಷದ) ವಿದ್ಯಾರ್ಥಿನಿ ಆಗಿರುವ ಕ್ಷಮಾ ಕೂಡ ವಾಗ್ಮಿಯಾಗಿ ಹೆಸರು ಮಾಡಿ ಅನೇಕ ಬಹುಮಾನಗಳನ್ನು ಪಡೆದಿದ್ದಾಳೆ. ಸದ್ಯ ಅವಳು ಅಮೆರಿಕೆಯಲ್ಲಿದ್ದಾಳೆ.

ಅಶ್ವತ್ಥನಾರಾಯಣ – ಲಕ್ಷ್ಮೀದೇವಿ ದಂಪತಿಗಳ ಮದುವೆ ಸರಳವೆಂದರೆ ಅತ್ಯಂತ ಸರಳ ರೀತಿಯಲ್ಲಿ ಒಂದೆರಡು ಗಂಟೆಗಳ ಅವಧಿಯಲ್ಲಿ ಕಲವೇ ಜನರ ನಡುವೆ ಶಾಸ್ತ್ರೋಕ್ತವಾಗಿ –ನಡೆಯಿತು.

ಪ್ರೊ॥ ಅಶ್ವತ್ಥನಾರಾಯಣರಿಗೆ ಬರವಣಿಗೆಗಿಂತ ಉಪನ್ಯಾಸಗಳಲ್ಲೇ ಹೆಚ್ಚು ಒಲವು. 'ನಾನು ಬರೆದು ಹೇಳುವಂಥದೇನೂ ಇಲ್ಲ ಅನ್ನಿಸುತ್ತೆ' ಎನ್ನುತ್ತಾರವರು. ಈಗಾಗಲೇ ಬಂದಿರುವ ಒಳ್ಳೆಯ ಪುಸ್ತಕಗಳನ್ನು ರಸವತ್ತಾದ ಭಾಷಣಗಳ ಮೂಲಕ ಜನಕ್ಕೆ ಪರಿಚಯಿಸುವುದರ ಅಗತ್ಯ ತುಂಬ ಇದೆಯೆಂಬುದು 'ಅನಾಜಿ' ನಿಲುವು. ರಾಜರತ್ನಂ, ಸಿ.ಕೆ. ವೆಂಕಟರಾಮಯ್ಯ, ದೇವುಡು, ಅ.ನ.ಕೃ. ಮುಂತಾದವರು ಹುಟ್ಟು ಹಾಕಿ ಬೆಳೆಸಿದ Oral Tradition– ಭಾಷಣ ಕಲೆ – ನಶಿಸುತ್ತಿದೆಯೆಂಬುದು ಅಶ್ವತ್ಥರ ವಿಷಾದಕ್ಕೆ ಕಾರಣವಾಗಿದೆ. ಈ ಬಗ್ಗೆ ಕೊರಗುತ್ತ ಕುಳಿತಿರುವುದಕ್ಕಿಂತ ಆ ಕಲೆಗೆ ಜೀವ ತುಂಬ ಹೊರಟಿರುವವರಲ್ಲಿ ಅನಾಜಿಯೂ ಒಬ್ಬರು. ಈ ದೃಷ್ಟಿಯಿಂದ ಅವರು ನೂರಾರು ಸಭೆಗಳಿಗೆ ಉಪನ್ಯಾಸ ಮಾಡಿದ್ದಾರೆ. ಬೇಡಿಕೆಯಿರುವ ಭಾಷಣಕಾರ.

******

ಅನಾಜಿ ಮತ್ತು ನಾನು

ಡಿ. ಬಿ. ಪ್ರಾಣೇಶ್ ರಾವ್
ಚರವಾಣಿ : ೯೮೪೫೫೦೮೩೭೦

ನದಿಯಲ್ಲಿ ಎರಡು ಮರದ ದಿಮ್ಮಿಗಳು ಸ್ವಲ್ಪ ದೂರ ಒಟ್ಟಿಗೆ ತೇಲುತ್ತ, ಬೇರೆಯಾಗುತ್ತವೆ. ಮತ್ತೆ ಎಲ್ಲೋ ಒಟ್ಟಿಗೆ ಸೇರಿ ತೇಲುತ್ತ ಹೋಗುತ್ತವೆ. ಹೀಗೆ ಯಾವಾಗ ಒಟ್ಟಿಗೆ ಇರುತ್ತವೆ, ಯಾವಾಗ ಸೇರುತ್ತವೆ ಅಥವಾ ಬೇರೆಯಾಗುತ್ತವೆ ಎನ್ನುವುದು ದೇವರಿಗೆ ಗೊತ್ತು.

ನಮ್ಮ ಜೀವನವೂ ಒಂದು ನದಿಗೆ ಹೋಲಿಸಿದರೆ, ನಾನು ಸ್ನೇಹಿತರಾಗಿ, ಬಂಧುಗಳಾಗಿ, ಮತ್ತೆ ಏನೋ ಆಗಿ ಕೆಲವು ಕಾಲ ಒಟ್ಟಿಗೆ ಇರುತ್ತೇವೆ. ಮತ್ತೆ ಯಾವಾಗಲೋ ಬೇರೆಯಾಗಿ ಮತ್ತೆ ಇನ್ನ್ಯಾವಗಲೋ ಎಲ್ಲಿಯೋ ಭೇಟಿಯಾಗುತ್ತೇವೆ ಅಲ್ಲವೇ?

ನಾನು ಪ್ರೊ. ಅಶ್ವತ್ಥನಾರಾಯಣ ಬಾಲ್ಯ ಸ್ನೇಹಿತರು. ೧೯೪೮-೫೨ ರವರೆಗೆ ಬೆಂಗಳೂರು ಚಾಮರಾಜಪೇಟೆಯ ನಾಲ್ಕನೇ ಬೀದಿಯಲ್ಲಿ ವಾಸ, ಕೋಟೆ ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ. ನಂತರ ೧೯೫೨ ರಿಂದ ೫೫ ರವರೆಗೆ ಕೋಟೆ ಪ್ರೌಢಶಾಲೆಯಲ್ಲಿ (ಹೈಸ್ಕೂಲು) ವಿದ್ಯಾಭ್ಯಾಸ. ನಾನು ಹೈಸ್ಕೂಲಿನಲ್ಲಿರುವಾಗ ನಮ್ಮ ವಾಸ ಚಾಮರಾಜಪೇಟೆ ಆರನೇ ಬೀದಿಯ ಹಿಂದಿನ ಸಮೀರಪುರದಲ್ಲಿ.

ಹೈಸ್ಕೂಲು ವಿದ್ಯಾಭ್ಯಾಸದ ನಂತರ, ನನ್ನ ವಿದ್ಯಾಭ್ಯಾಸ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜು (GAS) ಮತ್ತು ಸೆಂಟ್ರಲ್ ಕಾಲೇಜಿನಲ್ಲಿ ಮುಂದುವರೆಯಿತು.

ಮತ್ತೆ ಸುಮಾರು ನಲವತ್ತು ವರ್ಷಗಳ ನಂತರ ಅಶ್ವತ್ಥನಾರಾಯಣರ ದಾರಿಯಲ್ಲಿ ಭೇಟಿಯಾಗಿ ಅವರು ಹಾಸನದಲ್ಲಿರುವುದಾಗಿ ತಿಳಿಸಿದರು . ಈ ನಡುವೆ ಅವರು ಕ.ಸಾ.ಪ ಗೌರವ ಕಾರ್ಯದರ್ಶಿಯಾಗಿದ್ದು, ಪ್ರೊ.ಜಿ.ವಿ. ಅವರ ಪ್ರತಿಸ್ಪರ್ಧಿಯಾಗಿ ನನ್ನ ಶಾಲಾ ಕಾಲೇಜುಗಳ ಸಹಪಾಠಿಗಳಲ್ಲಿ ಈಗ ಸಂಪರ್ಕದಲ್ಲಿರುವ ಏಕೈಕ ಮಿತ್ರ. ಅನಾಜಿ ಅವರೂ ನಾನು ಬಾಲ್ಯ ಸ್ನೇಹಿತರು. ನಮ್ಮ ಸ್ನೇಹ ಸುಮಾರು ೭೫ ವರ್ಷಗಳು. ಹಾ! ಹೌದು ಚಡ್ಡಿದೋಸ್ತ್ ಎನ್ನುವುದು ಅಕ್ಷರಶಃ ನಿಜ. ಆಗ ನಮಗೆ ಚಡ್ಡಿ ಷರ್ಟೇ ವೇಷಭೂಷಣ. ಆಗಿನ ಲೋಯರ್ ಸೆಕೆಂಡರಿ ಪರೀಕ್ಷೆ (೫ ರೂ) ಪಾಸಾದ ನಂತರ ಪಕ್ಕದಲ್ಲೇ ಇದ್ದ ಕೋಟೆ ಹೈಸ್ಕೂಲಿನಲ್ಲಿ ನಮ್ಮ ವಿದ್ಯಾಭ್ಯಾಸ ಮುಂದುವರೆಯಿತು. (೧೯೫೨-೫೫) ನಮ್ಮ ವೇಷಭೂಷಣ ಚಡ್ಡಿ ಷರಟೂ ಮುಂದುವರೆಯಿತು. ಹೀಗೆ 'ಚಡ್ಡಿದೋಸ್ತುಗಳು' ಎಂಬುದು ನಿಜವೇ ಸರಿ. ಏಕವಚನದಲ್ಲಿ ಮಾತಾಡುವಷ್ಟು ಸಲುಗೆ, ಆಪ್ತತೆ ಇದೆ. ವಿದ್ಯಾಭ್ಯಾಸ ಬೆಂಗಳೂರು ಗ್ಯಾಸ್ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ (ಪಿಸಿಎಂ) ಮುಂದುವರಿಯಿತು. ಅನಾಜಿ ಸಮೀಪದಲ್ಲೇ ಇದ್ದ (ಕೆ.ಆರ್.ಸರ್ಕಲ್‌ನಲ್ಲಿ) ಜೆ.ಸಿ. ಆಕ್ಯುಪೇಷನಲ್ ಇನ್ಸ್ಟಿಟ್ಯೂಟ್ ಸೇರಿದರೆಂದು ಅನಿಸುತ್ತೆ.

೧೯೫೭ ನಮ್ಮ ಸಂಪರ್ಕ ಮತ್ತೆ ಸುಮಾರು ೩೫ ವರ್ಷಗಳ ನಂತರ ಜಯನಗರದ ನಾಲ್ಕನೇ ಬ್ಲಾಕ್‌ನಲ್ಲಿ ಭೇಟಿಯಾದಾಗ ಅನಾಜಿ ಹಾಸನದಲ್ಲಿನ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿರುವುದು ತಿಳಿಯಿತು. ಇದಿಷ್ಟು ಪೂರ್ವ ಪೀಠಿಕೆ ಸಾಕು.

ಈಗ ಆರ್.ವಿ. ಇನ್ಸ್ಟಿಟ್ಯೂಟ್ ಬೆಂಗಳೂರಿನ ಶ್ರೀಯುತ ಟಿ.ವಿ. ರಾಜುರವರ ನೇತೃತ್ವದಲ್ಲಿ "ಸಿಂಚನ ಕನ್ನಡ ವೇದಿಕೆ"ಯಿಂದ ಅನಾಜಿಯವರ ಕನ್ನಡ ನಾಡು ನುಡಿಗಳ ಸೇವೆಗಾಗಿ ಕೃತಜ್ಞತಾಪೂರ್ವಕವಾಗಿ "ಸಾಹಿತ್ಯ ಪರಿಚಾರಕ" ಎಂಬ ಅಭಿನಂದನಾ ಗ್ರಂಥವನ್ನು ಪ್ರಕಟಿಸುವ ನಿರ್ಧಾರ ತಿಳಿದು ನನಗೆ ಅತೀವ ಸಂತೋಷವಾಗಿದೆ.

ಈ ಹಿಂದೆ ಕನ್ನಡ ಸಾಹಿತ್ಯದಲ್ಲಿ 'ಸಾಹಿತ್ಯ ಪರಿಚಾರಕ' ಎಂಬ ಕೀರ್ತಿ ಶ್ರೀಯುತ ಗಳಗನಾಥ, ದ. ಬಾ. ಕುಲಕರ್ಣಿ ಮತ್ತು ಡಾ. ಜಿ. ಪಿ. ರಾಜರತ್ನಂರವರು ಭಾಜನರಾಗಿದ್ದರು. ಈಗ ಅನಾಜಿಯವರನ್ನು ಈ ಸಾಲಿಗೆ ಸೇರಿಸುವ ಪ್ರಯತ್ನ ಅಭಿನಂದನೀಯ. ಈ ಪ್ರಯತ್ನ ಮಾಡುತ್ತಿರುವವರಿಗೆ ತುಂಬು ಮನದ ನನ್ನ ಶುಭಾಶಯಗಳು.

ಶ್ರೀಯುತ ಗಳಗನಾಥರು ಮತ್ತು ದ.ಬಾ. ಕುಲಕರ್ಣಿಯವರು ಜೋಳಿಗೆಯಲ್ಲಿ ಕನ್ನಡ ಪುಸ್ತಕಗಳನ್ನು ಹೊತ್ತು ಊರೂರು ತಿರುಗುತ್ತ ಮನೆ ಮನೆಗೂ ಕನ್ನಡ ಪುಸ್ತಕಗಳನ್ನು ತಲುಪಿಸಿ, "ಸಾಹಿತ್ಯ ಪರಿಚಾರಿಕೆ" ಮಾಡುತ್ತಿದ್ದರೆಂದು ಓದಿರುವೆ.

ಡಾ. ಜಿ.ಪಿ. ರಾಜರತ್ನಂರವರು ನಾನು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್‌ಸಿ., ಓದುತ್ತಿದ್ದಾಗ (೧೯೫೭-೫೯) ಕನ್ನಡ ವಿಭಾಗದ ಮುಖ್ಯಸ್ಥರಾಗಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ನಮಗೆ ಪಾಠ ಮಾಡುತ್ತಿದ್ದರು. ೧೯೬೩ ರಲ್ಲಿ ನಾನು ರಿಸರ್ವ್ ಬ್ಯಾಂಕ್ ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿದೆ. ೧೯೬೫-೭೫ ರ ಅವಧಿಯಲ್ಲಿ ಅವರು ನಮ್ಮ ಗೆಳೆಯ ಸೂ. ಸುಬ್ರಹ್ಮಣ್ಯಂ ರವರನ್ನು ಭೇಟಿಯಾಗಲು ಬರುತ್ತಿದ್ದರು. ಆಗ ಅವರು ಚೀಲದಲ್ಲಿ ಕೆಲವು ಕನ್ನಡ ಪುಸ್ತಕಗಳನ್ನು ನಮಗೆ ಕೊಳ್ಳಲು ಪ್ರೇರೇಪಿಸುತ್ತಿದ್ದರು. ಹೀಗಿತ್ತು ಅವರ "ಸಾಹಿತ್ಯ ಪರಿಚಾರಿಕೆ".

"ಅನಾಜಿಯವರ ಸಾಹಿತ್ಯ ಪರಿಚಾರಿಕೆ" ವಿಭಿನ್ನ ಶೈಲಿ ವೈವಿಧ್ಯಮಯ. ಇದು ನನ್ನ ಸ್ವಾನುಭವ.

ನನ್ನ ಅವರ ಭೇಟಿ ಜಯನಗರ ನಾಲ್ಕನೇ ಬ್ಲಾಕಿನಲ್ಲಿ ಆಗಾಗ ನಡು ಬೀದಿಯಲ್ಲಿ ಆಗುತ್ತದೆ. ಪ್ರತಿಭೇಟಿಯಲ್ಲಿ ಅವರು ಯಾವುದಾದರೂ ಕಾರ್ಯಕ್ರಮದ ಬಗ್ಗೆ ತಿಳಿಸಿ, ನನಗೆ ಭಾಗವಹಿಸಲು ತಿಳಿಸುವರು. ಯಾವುದಾದರೂ ಪುಸ್ತಕ ಉಡುಗೊರೆಯಾಗಿ ನೀಡುತ್ತ ಅದರ ಬಗ್ಗೆ ಒಂದಿಷ್ಟು ಮಾತುಕತೆ ಸಾಗುತ್ತದೆ. ಅನೇಕ ವೇಳೆ ಅವರು ಸೂಚಿಸಿದ ಕಾರ್ಯಕ್ರಮಕ್ಕೆ ನಾನು ಹೋಗಿ ಅವರ ನಿರರ್ಗಳ ವಾಗ್ಝರಿ ಕೇಳಿ ಬೆರಗಾಗಿದ್ದೇವೆ. ಕನ್ನಡ ಸಾಹಿತ್ಯದಲ್ಲಿ ಆಳವಾದ ಅಧ್ಯಯನ, ಅಧ್ಯಾಪಕರಾಗಿ ಅಪಾರ ಪಾಂಡಿತ್ಯ, ಅನುಭವದಿಂದ ಅವರನ್ನು ಅತ್ಯುತ್ತಮ ಭಾಷಣಕಾರರಾಗಿದ್ದಾರೆ. ಅವರ ಭಾಷಣ ಕೇಳಿ ಮನಸೋಲದವರೇ ಇಲ್ಲವೆನಿಸುತ್ತದೆ. ಅವರ ಭಾಷಣಗಳ ಸಾರಾಂಶವೇ ಕೆಲವು ಕೃತಿಗಳಾಗಿ ಪ್ರಕಟವಾಗಿವೆ; "ಕನ್ನಡ ಸಾಹಿತ್ಯ ದಿಗ್ಗಜರು" "ಕನ್ನಡದ ಹಿರಿಯ ಸಾಹಿತಿಗಳು" ಪುಸ್ತಕಗಳ ಕೆಲವು ಅಪರೂಪದ ಸ್ವಾರಸ್ಯಕರ ವಿಷಯಗಳನ್ನು ತಿಳಿಯಬಹುದು.

ಒಮ್ಮೆ ನಾನು ಜಯನಗರಲ್ಲಿ "ನಾಗಶ್ರೀ"ಗೆ ಪುಸ್ತಕದ ಅಂಗಡಿಯ ಹತ್ತಿರ ಅನಾಜಿಯವರ ಭೇಟಿಯಾಯಿತು. ನನ್ನ ಕೈಯಲ್ಲಿ ಗೆಳೆಯರೊಬ್ಬರು ಕೊಟ್ಟಿದ್ದ ಬೆಳಗೆರೆ ಕೃಷ್ಣಶಾಸ್ತ್ರಿಗಳ "ಸಾಹಿತಿಗಳ ಸ್ಮೃತಿಯಲ್ಲಿ" ಪುಸ್ತಕವಿತ್ತು. ಅದರಲ್ಲಿ ಮುಕುಂದೂರು ಸ್ವಾಮಿಗಳ "ಯೇಗ್ದಾಗೆಲ್ಲಾ ಐತೆ" ಪುಸ್ತಕ ಕೊಳ್ಳುವ ವಿಷಯ ತಿಳಿದು "ನನ್ನ ಹತ್ತಿರ ಇದೆ, ಕೊಡ್ತೀನಿ ಬಾ" ಎಂದು ಅವರ ಮನೆಗೆ ಆಹ್ವಾನಿಸಿದರು.

ಅವರ ಮನೆಗೆ ಹೋದಾಗ ನನಗೆ ಆಶ್ಚರ್ಯಕರವಾಗಿತ್ತು. ಅವರ ಮನೆಯ ನೆಲಮಾಳಿಗೆಯಲ್ಲಿ ಸುಮಾರು ಮೂವತ್ತು ಕಬ್ಬಿಣದ ಐದಂತಸ್ತಿನ Rack ಗಳಲ್ಲಿ ಕನ್ನಡ ಸಾಹಿತ್ಯಗಳನೇಕರ ಪುಸ್ತಕಗಳನ್ನು ಅಚ್ಚುಕಟ್ಟಾಗಿ ಜೋಡಿಸಿ, ಪ್ರತಿಯೊಬ್ಬ ಚೀಟಿಗಳನ್ನು ಅಂಟಿಸಿರುವುದನ್ನು ನೋಡಿದೆ. ನನಗೆ "ಯೇಗ್ದಾಗೆಲ್ಲಾ ಐತೆ" ಪುಸ್ತಕ ಕೊಡುತ್ತ ಒಂದು (ಕಚ್ಚಾ)ಪುಸ್ತಕದಲ್ಲೂ ನನ್ನ ಹೆಸರು, ಪುಸ್ತಕದ ಹೆಸರು ಕೊಟ್ಟ ತಾರೀಖು ವಿವರಿಸಿ ದಾಖಲಿಸಿಕೊಟ್ಟರು ಓದಿ ವಾಪಸು ಕೊಡು ಎಂದರು. ಅವರ ಸಂಗ್ರಹದಲ್ಲಿ ಸುಮಾರು ಮೂರು ಸಾವಿರ ಪುಸ್ತಕಗಳಿವೆ ಎಂದು ತಿಳಿಯಿತು. ಅವರ ಅಚ್ಚುಕಟ್ಟುತನ, ಶಿಸ್ತು, ನಿಯಮ ಕಂಡು ಬೆರಗಾದೆ. ನಮ್ಮ ಮನೆಯವರಿಗೆ ತಿಳಿಸಿದಾಗ, "ನೋಡಿ ನೀವೂ ಇದೀರಾ, ಯಾಯಾರಿಗೋ ಪುಸ್ತಕ ಕೊಡ್ತೀರಾ, ವಾಪಸು ಬಂದರೆ ಬಂತು, ಇಲ್ಲದಿದ್ದರೆ ಇಲ್ಲ." ಈಗಲಾದರೂ ನಿಮ್ಮ ಸ್ನೇಹಿತರನ್ನು ನೋಡಿ ಕಲಿತುಕೊಳ್ಳಿ ಎಂದು ಹಂಗಿಸಿದರು. ನಾನು ನಿರುತ್ತರನಾದೆ.

ಅನಾಜಿ ತುಂಬಾ ಸರಳಜೀವಿ, ನಿಗರ್ವಿ, ಅವರ ಸಜ್ಜನಿಕೆಯಿಂದ ಅಪಾರ ಅಭಿಮಾನಿಗಳಿದ್ದಾರೆ. ಅನೇಕ ಲೇಖಕರು ತಮ್ಮ ಕೃತಿಯನ್ನು ಬಿಡುಗಡೆ ಮಾಡಲು ಅನಾಜಿಯವರನ್ನು ಆಹ್ವಾನಿಸುತ್ತಾರೆ. ಅವರಲ್ಲಿ ನಾನೂ ಸಹ ಒಬ್ಬ. ಒಮ್ಮೆ ನಮ್ಮ ಮನೆಯ ಪಕ್ಕದ ರಸ್ತೆಯಲ್ಲಿ ಅವರ ಭೇಟಿಯಾಯಿತು. ಅವರು ನನ್ನ ಇತ್ತೀಚಿನ ಬರವಣಿಗೆ ಕುರಿತು ಕೇಳಿದರು. ನಾನು ನನ್ನ ಕೆಲವು ನಿವೃತ್ತ ಬ್ಯಾಂಕ್ ಸ್ನೇಹಿತರೊಂದಿಗೆ ಪ್ರತಿ ತಿಂಗಳ ಕಡೆ ಭಾನುವಾದ ಹಮ್ಮಿಕೊಂಡಿರುವ "ಸಾಹಿತ್ಯದಾಸೋಹ" ಕಾರ್ಯಕ್ರಮ ತಿಳಿಸಿ, ನಮ್ಮ ಮನೆಯಲ್ಲಿ ನಡೆಸಲಿರುವ ದಾಸೋಹ ಕಾರ್ಯಕ್ರಮಕ್ಕೆ ಆಹ್ವಾನಿಸಿದೆ. ಅವರು ಒಪ್ಪಿ ಬಂದು ನಮ್ಮ ಮನೆಯಲ್ಲಿ ಸೇರಿದ ಸುಮಾರು ಇಪ್ಪತ್ತೈದು ಸ್ನೇಹಿತರು ಓದಿದ ಬರಹಗಳನ್ನು ಆಲಿಸಿ ಪ್ರತಿಯೊಬ್ಬರಿಗೂ ಮೆಚ್ಚುಗೆ ಸೂಚಿಸಿ, ಸೂಕ್ತ ಸಲಹೆ ನೀಡಿದ್ದಲ್ಲದೇ, ಧಾರವಾಡದಲ್ಲಿ ಬೇಂದ್ರೆ ಮುಂತಾದವರು ಸೇರುತ್ತಿದ್ದ ಮನೋಹರ ಗ್ರಂಥಮಾಲೆಯ ವಿಷಯ ತಿಳಿಸಿದರು.

ಆನಂತರ ಮತ್ತೊಮ್ಮೆ ಭೇಟಿಯಾದಾಗ ನನ್ನ "ಆಗೊಂದಷ್ಟು ಈಗೊಂದಿಷ್ಟು" ಹಾಸ್ಯ ಸಂಕಲನದ ಬಿಡುಗಡೆ ಅವರನ್ನು ಮುಖ್ಯ ಅತಿಥಿಯಾಗಿ ಕೇಳಿಕೊಂಡೆ. ಅವರು ಸಂತೋಷದಿಂದ ಒಪ್ಪಿ ಕಾರ್ಯಕ್ರಮವನ್ನು ಹುರಿದುಂಬಿಸುವ ಮಾತಾಡಿದ್ದನ್ನು ಮರೆಯಲಾಗದು.

ಅದಾದ ಕೆಲವು ದಿನಗಳ ನಂತರ ೨೦೧೬ರ ಆಗಸ್ಟ್ ೧೫ ರಂದು ನಮ್ಮ ಸ್ನೇಹಿತ ಶ್ರೀ ಪಿ.ವಿ. ಚಂದ್ರಶೇಖರ್ ಮನೆಯಲ್ಲಿ ನಮ್ಮ ಸಾಹಿತ್ಯದಾಸೋಹಿ ಮಿತ್ರರ ಬರಹಗಳ "ಸಾಹಿತ್ಯ ಮಂದಾರ" ಎಂಬ ಸಂಕಲನದ ಬಿಡುಗಡೆ ಸಮಾರಂಭದಲ್ಲಿ ಅನಾಜಿಯವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಪ್ರತಿಯೊಬ್ಬರ ಬರಹವನ್ನು ಕುರಿತು ಮೆಚ್ಚುಗೆಯ ಮಾತಾಡಿದ್ದಲ್ಲದೇ ಎಲ್ಲರಿಗೂ ಒಂದೊಂದು ಕನ್ನಡ ಪುಸ್ತಕ ಉಡುಗೊರೆಯಾಗಿ ನೀಡಿದರು. ಈ ಕಾರ್ಯಕ್ರಮ ಕೂಡ ನಮ್ಮ ಗೆಳೆಯರಿಗೆ ಅವಿಸ್ಮರಣೀಯ.

೨೦೧೬ರ ಜುಲೈ ೯ ಮತ್ತು ೧೦ನೇ ತಾರೀಖಿನಂದು ತುಮಕೂರಿನಲ್ಲಿ "ನಗೆ ಮುಗುಳು" ಹಾಸ್ಯ ಮಾಸ ಪತ್ರಿಕೆಯ ೧೫ನೇ ವರ್ಷದ ಪ್ರಯುಕ್ತ ರಾಜ್ಯ ಮಟ್ಟದ ಪ್ರಪ್ರಥಮ ಹಾಸ್ಯ ಸಾಹಿತ್ಯ ಸಮ್ಮೇಳನವನ್ನು ಶ್ರೀಮಾನ್ ಅ.ರಾ.ಮಿತ್ರರ ಅಧ್ಯಕ್ಷತೆಯಲ್ಲಿ ನಗೆ ಮುಗುಳು ಸಂಪಾದಕ ಶ್ರೀ ರಾಮಣ್ಣನವರು ಏರ್ಪಡಿಸಿದ್ದರು. ನಾನು ಅನಾಜಿ ಜತೆ ಸಮಾರಂಭಕ್ಕೆ ಹೋಗಿದ್ದೆ. ಅನಾಜಿ ಮುಖ್ಯ ಅತಿಥಿಯಾಗಿ ಹಲವಾರು ಕನ್ನಡ ಸಾಹಿತ್ಯ ಲೇಖಕ/ಲೇಖಕಿಯರು ಭಾಗವಹಿಸಿದ್ದು ಸಮಾರಂಭ ವಿಜೃಂಭಣೆಯಿಂದ ನಡೆಯಿತು. ಅಳಿಯನ ಹಿಂದೆ ಗೆಳೆಯ ಎಂಬಂತೆ ಅನಾಜಿಯವರೊಡನೆ ನಾನೂ ಸನ್ಮಾನಿತನಾದೆ.

ಈಗ ಎರಡು ವರ್ಷಗಳ ಹಿಂದೆ, ಆರ್.ವಿ.ಇನ್‌ಸ್ಟಿಟ್ಯೂಟ್ ನೇತೃತ್ವದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಪ್ರಯುಕ್ತ ಕೆಲವು ಶಿಕ್ಷಕರನ್ನು ಸನ್ಮಾನ ಸಮಾರಂಭಕ್ಕೂ ಮತ್ತು ಜಯನಗರದ ಯುವಪಥದಲ್ಲಿ ೨೮.೦೫.೨೦೨೩ ರಲ್ಲಿ ನಡೆದ ಅನಾಜಿ, ಶ್ರೀಯುತ, ವೈ.ಎನ್. ಗುಂಡೂರಾವ್ ಮತ್ತು ಕೆ. ಸತ್ಯನಾರಾಯಣ ಅವರ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಡಾ. ಬಾಬುಕೃಷ್ಣ ಮೂರ್ತಿಯವರು ವಿಶೇಷ ಆಹ್ವಾನಿತರಾಗಿದ್ದ ಸಮಾರಂಭವನ್ನು ಮರೆಯಲಾಗದು. ಆ ಸಂದರ್ಭದಲ್ಲಿ ಬಿಡುಗಡೆಯಾದ, ಅನಾಜಿಯವರ 'ರತ್ನಾಕರವರ್ಣಿಯ ಮೂರು ಶತಕಗಳು, ನಾ ಕಂಡ ಕನ್ನಡದ ಹಿರಿಯ ಸಾಹಿತಿಗಳು" ಪುಸ್ತಕಗಳು ಬಿಡುಗಡೆಯಾದವು.

ಕೇವಲ ಐವತ್ತು ಅರವತ್ತು ವರ್ಷಗಳಲ್ಲಿ ಅನಾಜಿ ಇಷ್ಟೊಂದು ವಿಪುಲ ಸಾಹಿತ್ಯ ರಚಿಸಲು ಹೇಗೆ ಸಾಧ್ಯವಾಗಿದೆ ಎಂಬ ಸೋಜಿಗ ಯಾರಿಗಾದರೂ ಯೋಚನೆಯಾಗುವುದು ಸಹಜ. ನನಗೆ ತೋಚುವುದು ಅನಾಜಿ ಮೊಬೈಲು ದಾಸರಲ್ಲ, ವಾಟ್ಸ್ ಅಪ್ ತಂಟೆಗೆ ಹೋಗಿಲ್ಲ. ಬದಲಿಗೆ ದಾಸ ಸಾಹಿತ್ಯದ ವಿಚಾರವಾಗಿ ಮಾಡಿದ ಆಳವಾದ ಅಧ್ಯಯನದ ಫಲವಾಗಿ ದಾಸ ಸಾಹಿತ್ಯದ ಕುರಿತು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅವರ ಇತ್ತೀಚಿನ ಶ್ರೀರಾಮನ ಹಾಡುಗಳ ೫೦೦ ಕೀರ್ತನೆಗಳುಳ್ಳ ಪುಸ್ತಕ ಉಡುಗೊರೆಯಾಗಿ ನೀಡಿದ್ದಾರೆ. ನಾಟಕ, ಸಿನಿಮಾ ಕ್ರಿಕೆಟ್ ಗೀಳೂ ಇಲ್ಲ. ಟೀವೀ ಚಟವಿಲ್ಲ. ಮುಖ್ಯವಾಗಿ ಸಮಾನ ಅಭಿರುಚಿ, ಸಾಹಿತ್ಯ ಅಧ್ಯಯನ ಇರುವ ಅವರ ಶ್ರೀಮತಿ ಲಕ್ಷ್ಮೀದೇವಿಯವರೂ ಸಹ ಕನ್ನಡ ಅಧ್ಯಾಪಕ ವೃತ್ತಿಯಲ್ಲಿದ್ದವರು. ಅವರೂ ಸಹ ಮಹಿಳಾ ಗಲಗಲಿ ಅವ್ವ ಎಂಬ ಕೃತಿ ರಚಿಸಿದ್ದಾರೆ. ಆದ್ದರಿಂದಲೇ ಅನಾಜಿ ಇಷ್ಟು ವಿಪುಲವಾದ ಸಾಹಿತ್ಯ ರಚಿಸಿ, "ಸಾಹಿತ್ಯ ಪರಿಚಾರಿಕ" ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

ದೇವರಲ್ಲಿ ಅವರಿಗೆ ಆರೋಗ್ಯ ನೀಡಿ ನೆಮ್ಮದಿಯ ಶಾಂತಿ ಜೀವನ ನಡೆಸಿ ಇನ್ನೂ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿ ಕರ್ನಾಟಕ ರತ್ನ, ಡಾಕ್ಟರೇಟ್ ಪದವಿ ಇತ್ಯಾದಿ ದೊರಕಲಿ, ಶತಾಯುಷಿಗಳಾಗಲಿ ಎಂದು ಬೇಡುತ್ತೇನೆ.

******

ಸಂಶೋಧನ ಮಾರ್ಗದರ್ಶಕ

ಡಾ. ಸೈಯದ್ ಮುಯಿನ್
ಚರವಾಣಿ : ೯೯೭೨೯೨೫೦೭೭

ಇಸ್ಲಾಂ ಧರ್ಮದಲ್ಲಿ ಗುರುವಿಗೆ ಅತ್ಯುನ್ನತ ಸ್ಥಾನವನ್ನು ಕಲ್ಪಿಸಲಾಗಿದೆ. ಕಲಿಸುವುದು ವಿಶ್ವದ ಅತ್ಯಂತ ಗೌರವಾನ್ವಿತ ಮತ್ತು ಬೆಲೆಯುಳ್ಳ ವೃತ್ತಿಗಳಲ್ಲಿ ಒಂದಾಗಿದೆ. ಇಸ್ಲಾಮ್ ಧರ್ಮದಲ್ಲಿ, ಈ ವೃತ್ತಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ ಏಕೆಂದರೆ ಪ್ರವಾದಿ ಮುಹಮ್ಮದ್‌ರನ್ನು ಗುರುವಿನಂತೆಯೇ ಪರಿಚಯಿಸಲಾಗಿದೆ. ಪವಿತ್ರ ಕುರ್‌ಆನ್‌ನಲ್ಲಿ: "ನಾವು ನಿಮ್ಮೊಳಗಿಂದಲೇ ಓರ್ವ ಸಂದೇಶವಾಹಕನನ್ನು ಕಳುಹಿಸಿದ್ದೇವೆ. ಅವರು ನಿಮಗೆ ಆಯತ್‌ಗಳನ್ನು ಓದಿ ಹೇಳುತ್ತಾರೆ. ನಿಮ್ಮನ್ನು ಸಂಸ್ಕರಿಸುತ್ತಾರೆ. ನಿಮಗೆ ಗ್ರಂಥ ಮತ್ತು ಯುಕ್ತಿಯ ಶಿಕ್ಷಣ ನೀಡುತ್ತಾರೆ. ಮತ್ತು ನೀವು ಇಷ್ಟ ತನಗೆ ತಿಳಿಯದಿದ್ದ ಸಂಗತಿಗಳನ್ನು ಬೋಧಿಸುತ್ತಾರೆ." (ಕುರ್‌ಆನ್, ೨: ೧೫೧). ಪವಿತ್ರ ಕುರಾನ್‌ನ ಈ ಆಯತ್‌ನ ಪ್ರಕಾರ ಪ್ರವಾದಿ ಮುಹಮದ್ ಅವರನ್ನು ಇಡೀ ವಿಶ್ವದ ಜನರಿಗೆ ಪವಿತ್ರ ಗ್ರಂಥ ಕುರ್‌ಆನ್, ಬುದ್ಧಿವಂತಿಕೆ ಮತ್ತು ತಿಳಿಯದ ವಿಷಯಗಳನ್ನು ಕಲಿಸಲು ಕಳುಹಿಸಲಾಯಿತು.

ಗುರುವೊಬ್ಬನು ಇರಬೇಕಾದ ಉನ್ನತ ದರ್ಜೆಯ ಗುಣಗಳನ್ನು ಮುಂದೆ ಉಲ್ಲೇಖಿಸಲಾಗಿದೆ:

- ತನ್ನ ಶಿಷ್ಯನನ್ನು ಮುನ್ನಡೆಸುವುದು ಎಂದರೆ ತನ್ನ ವಿದ್ಯಾರ್ಥಿಯನ್ನು ಬುದ್ಧಿವಂತನನ್ನಾಗಿ ಮಾಡುವುದು ಮತ್ತು ಉತ್ತಮ ಅಖ್ಲಾಕ್ (ನಡವಳಿಕೆ) ಅನ್ನು ನೀಡುವುದು ಶಿಕ್ಷಕರ ಕರ್ತವ್ಯ.
- ಶಿಕ್ಷರೆಂದರೆ ಪ್ರತಿಫಲ ಮತ್ತು ಮೆಚ್ಚುಗೆಯನ್ನು ಬಯಸದವನು. ಶಿಕ್ಷಕನು ವಿದ್ಯಾರ್ಥಿಯ 'ಆಧ್ಯಾತ್ಮಿಕ ತಂದೆ' ಏಕೆಂದರೆ ಅವನು ಆಧ್ಯಾತ್ಮಿಕ ಪೋಷಣೆಯನ್ನು ಒದಗಿಸುತ್ತಾನೆ ಮತ್ತು ಕಲಿಯುವವರ ನಡವಳಿಕೆಯನ್ನು ಸುಧಾರಿಸುತ್ತಾನೆ. ಅದಕ್ಕಾಗಿಯೇ ಶಿಕ್ಷಕರನ್ನು ಅವರ ಉತ್ತಮ ಕೆಲಸಕ್ಕಾಗಿ ಪ್ರಶಂಸಿಸಬೇಕೇ ಹೊರತು ಜಾತಿ, ಧರ್ಮ, ಜನಾಂಗದ ದೃಷ್ಟಿಯಿಂದಲ್ಲ.
- ಶಿಕ್ಷಕರು ತಮ್ಮ ಶಿಷ್ಯರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಬೇಕು, ಅಡೆತಡೆಗಳು ಮತ್ತು ಹಸ್ತಕ್ಷೇಪವನ್ನು ಮಾಡಬಾರದು.
- ಶಿಕ್ಷಕರು ಇತರ ಜನರಿಂದ ಗೌರವವನ್ನು ಪಡೆಯುವವರು. ನಮಗೆ ಜ್ಞಾನವನ್ನು ನೀಡಲು ಸಿದ್ಧರಿರುವ ಶಿಕ್ಷಕರನ್ನು ನಾವು ಗೌರವಿಸಬೇಕು.
- ಶಿಕ್ಷಕರು ತಮ್ಮ ಕೆಲಸವನ್ನು ಸುಲಭಗೊಳಿಸಲು ಉತ್ತಮ ಚಿಕಿತ್ಸಕ ಬುದ್ಧಿಯನ್ನು ಪಡೆದಿರಬೇಕು.
- ತೀರ್ಪು ನೀಡುವಲ್ಲಿ ಶಿಕ್ಷಕರಿಗೆ ಸ್ವಾತಂತ್ರ್ಯವಿರಬೇಕು ಮತ್ತು ತಾರತಮ್ಯವನ್ನು ಮಾಡಬಾರದು.

ಇಸ್ಲಾಂ ಧರ್ಮದಲ್ಲಿ ಗುರುವಿನ ಲಕ್ಷಣಗಳು, ಕರ್ತವ್ಯಗಳನ್ನು ವ್ಯಕ್ತಪಡಿಸಿರುವುದನ್ನು ಕಂಡರೆ ನನ್ನ ಗುರುಗಳಾದ ಪ್ರೊ. ಜಿ. ಅಶ್ವತ್ಥನಾರಾಯಣರು ಮೇಲಿನ ಎಲ್ಲಾ ಗುಣಲಕ್ಷಣಗಳಿಗೆ ಸಾರಿಸಾಟಿಯಾಗಿ ನಿಲ್ಲಬಲ್ಲವರಾಗಿದ್ದಾರೆ ಎಂದರೆ ತಪ್ಪಾಗಲಾರದು. ಇಂತಹ ಗುರುಗಳ ಸಾನ್ನಿಧ್ಯ ದೊರೆತದ್ದು ನನ್ನ ಪುಣ್ಯವೆಂದು ಭಾವಿಸುತ್ತೇನೆ. ಈ ಎಲ್ಲಾ ಮಾತುಗಳು ಕೇವಲ ಹೇಳಿಕೊಳ್ಳುವುದಕ್ಕಷ್ಟೇ ಅಲ್ಲ, ಅನಾಜಿ ಅವರನ್ನು ಕಂಡರೆ ನನ್ನಲ್ಲಿರುವ ಭಕ್ತಿ, ಪ್ರೇಮ, ವಿಶ್ವಾಸವನ್ನು ಸೂಚಿಸುತ್ತವೆ.

೨೦೦೮ರ ಎಂಫಿಲ್ ತರಗತಿಗಳಲ್ಲಿ ಕನ್ನಡ ಸಾಹಿತ್ಯ ಲೋಕದ ಪ್ರಸಿದ್ಧ ಸಾಹಿತಿಗಳು, ಲೇಖಕರ ಮೂಲಕ ಸಂಶೋಧನೆಯ ವಿಧಿವಿಧಾನಗಳನ್ನು ಕಲಿತದ್ದು ನನ್ನ ಅಧ್ಯಾಪನ, ಸಂಶೋಧನಾ ವೃತ್ತಿಗೆ ನವದಿಕ್ಕನ್ನು ನೀಡಿತು. ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ವಿಜಯ ಸುಬ್ಬರಾಜು, ಪ್ರೊ. ಮಧುಸೂದನ್ ಕೆ.ಎಸ್., ಕೆ.ಆರ್. ಗಣೇಶ್, ಪ್ರೊ. ಡಿ. ಲಿಂಗಯ್ಯ, ಪಿ.ವಿ. ನಾರಾಯಣ, ಡಾ. ನಾ. ಗೀತಾಚಾರ್ಯ ಪ್ರೊ. ದೇವರಕೊಂಡಾರೆಡ್ಡಿ, ಪುಸ್ತಕ ಭಂಡಾರಿ ಬೆಂ. ಶ್ಯಾಮಲರತ್ನಕುಮಾರಿ, ಇಂತಹ ಘನ ವಿದ್ವಾಂಸರಿಂದ ಜ್ಞಾನಾರ್ಜನೆ ಪಡೆದದ್ದು ನನ್ನ ಜ್ಞಾನ ಸಂಪತ್ತನ್ನು ವೃದ್ಧಿಸಿತು.

ಪ್ರೊ. ಜಿ. ಅಶ್ವತ್ಥನಾರಾಯಣ ಸರ್ ಅವರು ಎಂಫಿಲ್ ತರಗತಿಗಳಿಗೆ ಪಾಠ ಪ್ರವಚನ ಮಾಡುವ ಸಂದರ್ಭದಲ್ಲಿ ನನ್ನ ಗುರುಗಳಾದುದು ನನ್ನ ಪುಣ್ಯವೇ ಸರಿ. ಎಂ.ಫಿಲ್. ಪದವಿಗಾಗಿ ಸಲ್ಲಿಸುವ ಸಂಶೋಧನಾ ನಿಬಂಧದ ಮಾರ್ಗದರ್ಶಕರಾಗಿ ಪ್ರೊ. ಅಶ್ವತ್ಥನಾರಾಯಣ ಅವರು ನಿಯೋಜನೆಗೊಂಡರು. ಅನಾಜಿಯವರೊಟ್ಟಿಗೆ ಸಂಶೋಧನಾ ವಿಷಯದ ಕುರಿತಾಗಿ ಚರ್ಚಿಸಿದಾಗ ನಾನು ತಾವು ಸೂಚಿಸುವ ಯಾವುದೇ ವಿಷಯದ ಕುರಿತಾಗಿ ಶ್ರದ್ಧೆ, ನಿಷ್ಠೆ, ಪರಿಶ್ರಮದಿಂದ ಅಧ್ಯಯನ ಮಾಡುವುದಾಗಿ ಸೂಚಿಸಿದಾಗ, ಅನಾಜಿ ಅವರು ಬಹಳ ಕಾಳಜಿಯಿಂದ, ವಿಶ್ವಾಸದಿಂದ ಕೇಳಿದರು – ದಾಸ ಸಾಹಿತ್ಯದ ಬಗ್ಗೆ ಸಾಕಷ್ಟು ಅಧ್ಯಯನಗಳು ಆಗಬೇಕಿದೆ, ಇಲ್ಲಿಯವರೆಗೆ ಆಗಿರುವ ಸಂಶೋಧನೆಗಳು ಬಹಳ ಕಡಿಮೆ, ಇಸ್ಲಾಂ ಧರ್ಮದವರಾದ ನೀವು ದಾಸ ಸಾಹಿತ್ಯದ ಬಗ್ಗೆ, ಅದರಲ್ಲೂ ರಾಮಾಯಣ ವಿಷಯದ ಬಗ್ಗೆ ಸಂಶೋಧನೆ ಮಾಡಲು ಯಾವುದೇ ರೀತಿಯ ಅಭ್ಯಂತರವಿಲ್ಲವಲ್ಲ ಎಂದು ಕೇಳಿದಾಗ, ಸಾಹಿತ್ಯ ವಿದ್ಯಾರ್ಥಿಯಾದ ನನ್ನಲ್ಲಿ ಅಂತಹ ಯಾವುದೇ ಭೇದ ಇಲ್ಲದಿರುವುದರ ಬಗ್ಗೆ ಸ್ಪಷ್ಟೀಕರಿಸಿದೆ. ಆದರೆ ದಾಸ ಸಾಹಿತ್ಯದ ವಿಶೇಷ ಪರಿಚಯ, ಹಿನ್ನೆಲೆ ಇಲ್ಲವಲ್ಲ ಎಂಬ ಅಳಕನ್ನು ವ್ಯಕ್ತಪಡಿಸಿದಾಗ, ಆಸಕ್ತಿ, ಶ್ರದ್ಧೆ, ಅಭ್ಯಾಸ, ವಿಷಯ ನಿಷ್ಠೆಗಳಿದ್ದಲ್ಲಿ ಯಾವುದೇ ವಿಷಯದಲ್ಲಾಗಲಿ ಪರಿಣತಿ ಸಾಧ್ಯ ಎಂದು ಹೇಳಿ ಧೈರ್ಯ ತುಂಬಿ, ಬಹು ಸಮರ್ಥ ರೀತಿಯಲ್ಲಿ ಮಾರ್ಗದರ್ಶನ ಮಾಡಿ ಸಂಪ್ರಬಂಧ ರಚನೆಗೆ ನೆರವಾದರು. ಹೆಜ್ಜೆಹೆಜ್ಜೆಗೆ ಸೂಚನೆಗಳನ್ನು ನೀಡುತ್ತ ಬರೆದುದನ್ನೆಲ್ಲಾ ಪರಿಶೀಲಿಸುತ್ತಾ, ಆಕರ ಗ್ರಂಥಗಳನ್ನು, ಅಪೂರ್ವ ಮಾಹಿತಿಗಳನ್ನು ಒದಗಿಸುತ್ತ ಜ್ಞಾನ ದಾಸೋಹ ಹೇಗಿರಬೇಕೆಂಬುದನ್ನು ತೋರಿಸಿಕೊಟ್ಟರು. ಅವರ ಮಾರ್ಗದರ್ಶನ, ಪ್ರೋತ್ಸಾಹದ ಫಲವಾಗಿ ಈ ಸಂಪ್ರಬಂಧ ರಚಿಸಲು ಸಾಧ್ಯವಾಯಿತು. ಅಂದು ನನ್ನ ಅಧ್ಯಯನಕ್ಕೆ ಕೈ ಹಿಡಿದ ಅನಾಜಿ ಅವರು ಇಂದಿಗೂ ನನ್ನ ಮಾರ್ಗದರ್ಶಕರಾಗಿರುವುದು ಸುದೈವ.

ಸಂಶೋಧನೆಯ ಸ್ವರೂಪ, ಆಳ–ಅಗಲಗಳನ್ನು, ಆಕರಗಳ ಸಂಗ್ರಹ, ಅವುಗಳ ವಿಮರ್ಶಾತ್ಮಕ ವಿವರಣೆ, ಸುದೀರ್ಘ ಓದು, ಮೊದಲಾದ ವಿಷಯಗಳನ್ನು ಬಹಳ ಸೂಕ್ಷ್ಮವಾಗಿ ತಿಳಿಸಿಕೊಟ್ಟವರು ಅನಾಜಿ ಅವರು. 'ದಾಸಸಾಹಿತ್ಯದಲ್ಲಿ ರಾಮಾಯಣ ಪ್ರಸಂಗಗಳು' ಎಂಬ ಸಂಶೋಧನ ವಿಷಯವನ್ನು ಸೂಚಿಸುತ್ತಲೇ, ಈ ಸಂಶೋಧನೆಗೆ ಸಂಬಂಧಪಟ್ಟ ನನ್ನ ಓದಿನ ಬಗ್ಗೆ ಸುದೀರ್ಘವಾದ ಪಟ್ಟಿಯನ್ನು ನೀಡಿದರು. ಮೊದಲಿಗೆ ಕರ್ನಾಟಕ ಸರ್ಕಾರ ಪ್ರಕಟಿಸಿರುವ ದಾಸ ಸಾಹಿತ್ಯದ ೩೦ ಸಂಪುಟಗಳಲ್ಲಿರುವ ರಾಮಾಯಣ ಸಂದರ್ಭಗಳು ಉಲ್ಲೇಖಿತ ಕೀರ್ತನೆಗಳನ್ನು ಸಂಗ್ರಹಿಸುವ ಕಾರ್ಯನಿಯೋಜಿಸಿದರು.

ವಿಷಯ ಸಂಗ್ರಹಣೆಯ ನಂತರ ವಿದ್ವಾನ್ ರಂಗನಾಥ ಶರ್ಮ ಅವರ ಶ್ರೀಮದ್ವಾಲ್ಮೀಕಿ ರಾಮಾಯಣದ ಅನುವಾದವನ್ನು ಓದಲು ಸೂಚಿಸಿದರು, ಕನ್ನಡದಲ್ಲಿ ಬಂದಿರುವ ಎಲ್ಲಾ ರಾಮಾಯಣಗಳನ್ನು ಕೂಲಂಕಷವಾಗಿ ಓದಲು ಸೂಚಿಸಿ ಮಾಧ್ವ ಪರಂಪರೆಯ ಹಿನ್ನೆಲೆಯಲ್ಲಿ ಮಧ್ವಾಚಾರ್ಯರು ರಚಿಸಿರುವ ಮಧ್ವರಾಮಾಯಣದ (ಅನುವಾದ - ಬನ್ನಂಜೆ ಗೋವಿಂದಾಚಾರ್ಯ) ಪ್ರತಿಯನ್ನಿತ್ತು ಅದರಲ್ಲಿರುವ ರಾಮಾಯಣ ಪ್ರಸಂಗಗಳ ವಿಶಿಷ್ಟತೆ, ವಿವರಣೆಗಳನ್ನು ದಾಸರ ಕೀರ್ತನೆಗಳೊಂದಿಗೆ ತೌಲನಿಕವಾಗಿ ಗಮನಿಸಲು, ಅಭ್ಯಸಿಸಲು ಸೂಚಿಸಿದರು. ದಾಸ ಸಾಹಿತ್ಯದ ಸಂಪುಟಗಳಲ್ಲಿ ಬಿಟ್ಟು ಹೋಗಿರುವ, ಅಲಕ್ಷಿತ ದಾಸರ ಕೀರ್ತನೆಗಳಲ್ಲಿ ಉಲ್ಲೇಖಿತ ರಾಮಾಯಣ ಪ್ರಸಂಗಗಳ ಸಂಗ್ರಹ ಕಾರ್ಯ ಸೂಚಿಸಿದರು, ಪಿ.ಎಚ್.ಡಿ. ಪ್ರಬಂಧ ರಚನೆಗೆ ಬೇಕಾದ ಓದನ್ನೆಲ್ಲ ಎಂ.ಫಿಲ್. ಪದವಿಗಾಗಿ ನನ್ನಲ್ಲಿ ಮಾಡಿಸಿದರು. ಸಂಶೋಧನ ಪ್ರಬಂಧದ ಸಲುವಾಗಿ ಅನಾಜಿ ಅವರ ಮನೆಗೆ ಹೋದಾಗಲೆಲ್ಲ ರಾಮಾಯಣದ ಬಗೆಗಿರುವ ಅನನ್ಯವಾದ ಮಾಹಿತಿಯನ್ನು ನೀಡುತ್ತಿದ್ದರು. ಅವರ ಮನೆಗೆ ಹೋದಾಗಲೆಲ್ಲ ಅವರಲ್ಲಿದ್ದ ಅಪಾರ ಪುಸ್ತಕ ಭಂಡಾರದಿಂದ ರಾಮಾಯಣಕ್ಕೆ ಸಂಬಂಧಪಟ್ಟಂತಹ ಹೊಸ ಹೊಸ ಪುಸ್ತಕಗಳನ್ನು ಓದಿಗೆ ನೀಡುತ್ತಿದ್ದರು. ಅಂದು ಸರ್ ಅವರ ಪ್ರೇರಣೆ, ಪ್ರೋತ್ಸಾಹದಿಂದಾಗಿ ರಾಮಾಯಣದ ಕುರಿತಾಗಿ ಹಲವಾರು ಸಂಶೋಧನ ಲೇಖನಗಳನ್ನು, ಕರ್ನಾಟಕ ಸರ್ಕಾರದ ಸಂಸ್ಥೆಯಾದ ಕುವೆಂಪು ಭಾಷಾಭಾರತಿ ಪ್ರಾಧಿಕಾರದ ವತಿಯಿಂದ ನೀಡುವ ಕಿರಿಯ ಫೆಲೋಷಿಪ್ ಕೂಡ ರಾಮಾಯಣದ ಬಗ್ಗೆಯೇ ಮಾಡಿ ಪೂರ್ಣಗೊಳಿಸಿರುವ ಸಾರ್ಥಕತೆ ನನ್ನದಾಗಿದೆ. ಇದರ ಶ್ರೇಯಸ್ಸು ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ಸಲ್ಲುತ್ತದೆ.

ಅನಾಜಿ ಅವರ ಧರ್ಮಪತ್ನಿ ಪ್ರೊ. ಲಕ್ಷ್ಮೀ ಮೇಡಂ ಅವರು ಮಮತಾಮಯಿ ಹೋದಾಗಲೆಲ್ಲ ತುಂಬು ಹೃದಯದಿಂದ ಮಾತನಾಡುವ, ಆತ್ಮೀಯತೆ ವ್ಯಕ್ತಪಡಿಸುವ ಮಹಾತಾಯಿ. ನನ್ನ ವೃತ್ತಿಯ ಬಗ್ಗೆ, ನಾನು ಕಾರ್ಯ ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯದ ಬಗ್ಗೆ ಅತ್ಯಂತ ಪ್ರೀತಿಯಿಂದ ಕೇಳಿ ತಿಳಿದುಕೊಳ್ಳುವ ಸಹೃದಯಿ. ೨೦೦೮ರಲ್ಲಿ ಮೊದಲ ಸಲ ಅನಾಜಿ ಸರ್ ಅವರ ಮನೆಗೆ ಹೋದಾಗ ಲಕ್ಷ್ಮೀ ಮೇಡಂ ಅವರು ಬರೆದಿದ್ದ 'ವಾಣಿಜ್ಯ ಕನ್ನಡ', 'ವ್ಯಾವಹಾರಿಕ ಕನ್ನಡ'ದ ಎರಡು ಪುಸ್ತಕಗಳನ್ನು ನೀಡಿದ್ದರು. ಅವುಗಳ ಉಪಯೋಗವನ್ನು ನಾನು ಇಂದಿಗೂ ಮಾಡುತ್ತಿರುವೆ.

ಹಲವು ಬಗೆಯ ಪರಿಶ್ರಮ ಪಟ್ಟು ಎಂಫಿಲ್ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಪದವಿಯನ್ನು ಪಡೆದದ್ದಾಯಿತು. ಅಷ್ಟರಲ್ಲೇ ಅಶ್ವತ್ಥನಾರಾಯಣ ಸರ್ ಅವರು ಕರೆ ಮಾಡಿ ತಮ್ಮ ಮನೆಗೆ ಕರೆಸಿಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಎಂಫಿಲ್ ಸಂಶೋಧನ ನಿಬಂಧಗಳ ಪ್ರಕಟಣೆಗಾಗಿ ಧನಸಹಾಯವಿದ್ದು, ನೀನು ಈಗಲೇ ಇದಕ್ಕೆ ಅರ್ಜಿ ಹಾಕುವಂತೆ ಸೂಚಿಸಿ ಮಾರ್ಗದರ್ಶನ ಮಾಡಿದ್ದಷ್ಟೇ ಅಲ್ಲ, ಮುದ್ರಣಕ್ಕೆ ಬೇಕಿರುವ ಎಲ್ಲಾ ಸಲಹೆ ಸೂಚನೆಗಳನ್ನು ನೀಡಿದರು. ಪುಸ್ತಕದ ಬಿಡುಗಡೆ ಕಾರ್ಯಕ್ರಮವನ್ನು ಏರ್ಪಡಿಸಬೇಕು ಮತ್ತು ಇದರ ಮುಖ್ಯ ಅತಿಥಿಯಾಗಿ ವೆಂಕಟಾಚಲಶಾಸ್ತ್ರೀಯವರನ್ನು ಆಹ್ವಾನಿಸುವಂತೆ ಸೂಚಿಸಿದರು. ಸರ್ ಅವರ ಮಾರ್ಗದರ್ಶನದಂತೆ ಸುಮಾರು ೧೫ ವರ್ಷಗಳ ಹಿಂದೆ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಈ ಕಾರ್ಯಕ್ರಮವು ಯಶಸ್ವಿಗೊಂಡಿತು, ನನಗೆ ಆ ದಿನಗಳು ಇಂದೂ ಹಸಿ ಹಸಿಯಾಗಿ ನೆನಪಿನಲ್ಲಿ ಉಳಿದುಕೊಂಡಿವೆ. ಮುಂದೆ ನಾನು ಕೈಗೊಳ್ಳುವ ಪಿ.ಎಚ್.ಡಿ.ಯ ಸಂಶೋಧನ ವಿಷಯವನ್ನು ದಾಸ ಸಾಹಿತ್ಯ ಮತ್ತು ಮಹಾಭಾರತವನ್ನು ಆಯ್ಕೆ ಮಾಡಿಕೊಳ್ಳಲು ಅನಾಜಿ ಅವರು ಸೂಚಿಸಿದ್ದರು, ಆದರೆ ಕಾರಣಾಂತರಗಳಿಂದ ಅದು ಕೈಗೂಡದಾಯಿತು.

ಪತ್ರಿಕೆಯೊಂದರ ಸಂದರ್ಶನಕ್ಕಾಗಿ ಅನಾಜಿ ಅವರಿಗೆ ಶಿಕ್ಷಣದ ಪ್ರಸ್ತುತತೆಯ ಕುರಿತು ಪ್ರಶ್ನಾವಳಿಯನ್ನು ತೆಗೆದುಕೊಂಡು ಹೋಗಿದ್ದಾಗ ಅತ್ಯಂತ ಅರ್ಥಪೂರ್ಣವಾದ ಉತ್ತರಗಳನ್ನು ಬರೆದು, ಕನ್ನಡ ಮಾಧ್ಯಮ ಶಿಕ್ಷಣದ ಕುರಿತಾದ ತಮ್ಮ ಅನಿಸಿಕೆಗಳನ್ನು ಕನ್ನಡ ಸ್ಥಿತಿಗತಿಯನ್ನು ಬಹಳ ನೋವಿನಿಂದ ಹಂಚಿಕೊಂಡಿದ್ದರು. ೭೦ ವರ್ಷಗಳ ಹಿಂದಿನ ಕನ್ನಡ ಭಾಷೆಯ ಸ್ಥಿತಿ ಹಾಗೂ ೨೦೨೩ರ ಕನ್ನಡದ ಗತಿಯನ್ನು ಸೋದಾಹರಣವಾಗಿ ಹಂಚಿಕೊಂಡಿದ್ದರು. ಅದೇ ರೀತಿ ಕ್ರಿಸ್ತು ಜಯಂತಿ ಪರಿಗಣಿತ ವಿಶ್ವವಿದ್ಯಾಲಯವು ಆನ್‌ಲೈನ್‌ನಲ್ಲಿ ಆಯೋಜಿಸಿದ್ದ ಶಾಸ್ತ್ರೀಯ ಕನ್ನಡ ಪಠ್ಯಗಳ ವಾಚನ-ವ್ಯಾಖ್ಯಾನ- ಅನುಸಂಧಾನ ಕಾರ್ಯಾಗಾರದ ಸಮಾರೋಪ ಭಾಷಣಕ್ಕೆ ಕೇಳಿಕೊಂಡಾಗ, ಅನಾಜಿ ಸರ್ - ಮೊದಲಿಗೆ ನಾನು ಎಲ್ಲಾ ಸಂಪನ್ಮೂಲ ವ್ಯಕ್ತಿಗಳ ಮಾತುಗಳ್ನನಾಲಿಸಿದ ನಂತರವೇ ಸಮಾರೋಪ ಭಾಷಣ ಮಾಡಲು ಸಾಧ್ಯವೆಂದು ಹೇಳಿ ೪ ದಿನಗಳ ಕಾಲ ಎಲ್ಲಾ ಸಂಪನ್ಮೂಲ ವ್ಯಕ್ತಿಗಳ ಮಾತುಗಳನ್ನು ಪ್ರತಿದಿನ ೨ ಗಂಟೆಗಳ ಅವಧಿ ಇದಕ್ಕಾಗಿಯೇ ಮೀಸಲಿರಿಸಿ ವಿಷಯವನ್ನಾಲಿಸಿ ಸಮಾರೋಪ ಭಾಷಣವನ್ನು ನೆರವೇರಿಸಿದರು. ಈ ಘಟನೆಗಳು ಶಿಕ್ಷಕನಲ್ಲಿ ಇರಬೇಕಾದ ಸಹೃದಯತೆ, ಬದ್ಧತೆ, ಸಮಯಪ್ರಜ್ಞೆ, ಪ್ರಾಮಾಣಿಕತೆಯನ್ನು ಸೂಚಿಸುತ್ತವೆ.

ಅನಾಜಿ ಸರ್ ಅವರೊಂದಿಗೆ ಯಾವುದೇ ವಿಷಯದ ಪ್ರಸ್ತಾಪ ಮಾಡಿದರು ಅದಕ್ಕೆ ಪೂರಕವಾದ ಸಾಹಿತ್ಯದ ಹೊಳೆಯನ್ನು ಹರಿಸುವವರಾಗಿದ್ದಾರೆ. ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಕಿರಿಯ ಸಂಶೋಧನ ಫೆಲೋಶಿಪ್‌ಗಾಗಿ ನಾನು ಆಯ್ಕೆಯಾದಾಗ ಹಿಂದಿ ಭಾಷೆಯ ಮೈಥಿಲಿ ಶರಣಗುಪ್ತರ ಸಾಕೇತ ಮತ್ತು ಕುವೆಂಪು ಅವರ ಶ್ರೀರಾಮಾಯಣದರ್ಶನಂ ಕುರಿತ ತೌಲನಿಕ ಅಧ್ಯಯನ ಮಾಡುವುದಾಗಿ ಅನಾಜಿ ಸರ್ ಅವರಿಗೆ ಸೂಚಿಸಿದಾಗ ಬಹಳ ಸಂತೋಷಪಟ್ಟು ತುಳಸಿದಾಸರ ರಾಮಚರಿತ ಮಾನಸ, ಅಧ್ಯಾತ್ಮ ರಾಮಾಯಣ, ತೊರವೆ ರಾಮಾಯಣ ಮೊದಲಾದ ಆಕರ ಗ್ರಂಥಗಳನ್ನು ಅಭ್ಯಸಿಸಲು ಸೂಚಿಸಿದರು. ಅದೇ ರೀತಿ ಮತ್ತೊಂದು ಉದಾಹರಣೆ ನೀಡುವುದಾದರೆ ನಾನು ಜಟಕಬಂಡಿ ಚಾಲಕರ ಬಗ್ಗೆ ಸಂಶೋಧನ ಪ್ರಾಜೆಕ್ಟನ್ನು ಮಾಡುತ್ತಿರುವುದರ ಬಗ್ಗೆ ಹೇಳಿದ್ದೇ ತಡ ತಕ್ಷಣವೇ ಸರ್ ನನಗೆ ಕನ್ನಡ ಸಾಹಿತ್ಯದಲ್ಲಿ ಎಲ್ಲೆಲ್ಲಿ, ಯಾವ್ಯಾವ ಕವಿಗಳ ಜಟಕಬಂಡಿಯ ಬಗ್ಗೆ ಕಾವ್ಯ ರಚಿಸಿರುವುದರ ಬಗ್ಗೆ ಸ್ಥೂಲ ಮಾಹಿತಿ ಒದಗಿಸಿದರು, ೭೦-೮೦ ವರ್ಷಗಳ ಹಿಂದೆ ಬೆಂಗಳೂರಿನಲ್ಲಿದ್ದ ಜಟಕಾಬಂಡಿಗಳು, ಜಟಕಬಂಡಿ ಸವಾರರ ವರ್ಣರಂಜಿತ ಇತಿಹಾಸವನ್ನು ತಿಳಿಸುತ್ತ ಈ ಪ್ರಾಜೆಕ್ಟಿನಲ್ಲಿ ಹಳೆಯ ಬೆಂಗಳೂರಿನ ಜಟಕಾಕಬಂಡಿಗಳ ಪರಿಚಯ ನೀಡಲೇಬೇಕೆಂದು ಸಲಹೆಯನ್ನಿತ್ತರು.

ಯಾವುದೇ ವಿಷಯದ ಕುರಿತು ಅನಾಜಿ ಅವರ ಬಳಿ ಚರ್ಚೆ ಮಾಡಿದರೂ ಅದನ್ನು ಸೋದಾಹರಣವಾಗಿ ವಿವರಿಸುವ ಸಾಮರ್ಥ್ಯ ಹೊಂದಿರುವ ಅಪರೂಪದ ವಿದ್ವಾಂಸರು. ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಕನ್ನಡಕ್ಕೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ಕೇಳಿದರೂ ಅದಕ್ಕೆ ಹತ್ತು, ಹದಿನೈದು ಪುಸ್ತಕಗಳ ಪಟ್ಟಿ ನೀಡಬಲ್ಲವರು. ಅವರು ಸಮರ್ಥ ಓದುಗರು, ವಿದ್ವಾಂಸರು, ನೆನಪಿನ ಶಕ್ತಿಯನ್ನು ಸದಾ ಹಸನಾಗಿರಿಸಿಕೊಂಡವರು. ಹೀಗೆ ಹಲವು ಪ್ರಸಂಗಗಳ ಮೂಲಕ ನನ್ನ ಸಂಶೋಧನ ಕ್ಷೇತ್ರಕ್ಕೆ ಹೊಸ ಆಯಾಮವನ್ನು ನೀಡಿದಂತಹ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ನಾನು ಚಿರಋಣಿಯಾಗಿರುತ್ತೇನೆ.

*****

ಅರ್ಥಪೂರ್ಣ ಬದುಕಿನ ಅನಾವರಣ

ಡಾ. ವಿ. ಪ್ರಭುದೇವ್

ಒಳ್ಳೆಯ ಸಾಹಿತ್ಯ ಹೊರಹೊಮ್ಮುವುದು ಸಾಹಿತಿಯ ಸಾಹಿತ್ಯ ಕೃಷಿಯಿಂದ ಸಾಹಿತಿಯ ಅನುಭವ, ಅನುಭಾವ, ಜೀವನದ ಒಳನೋಟಗಳು, ದೃಷ್ಟಿಕೋನ, ಬದುಕಿನ ಪಾಠಗಳು ಎಲ್ಲವೂ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ತಮ್ಮ ಪ್ರಭಾವ ಬೀರುವುದು ಸಹಜ. ಸಾಹಿತಿಯ ಜೀವಂತಿಕೆ, ಸೃಜನಶೀಲತೆ, ವಸ್ತುನಿಷ್ಠ ನಿಲುವು, ತಲಸ್ಪರ್ಶಿ ಅಧ್ಯಯನ, ಸಾಮಾಜಿಕ ಕಳಕಳಿ, ಸೂಕ್ಷ್ಮ ಸಂವೇದನೆಗಳು ಸಾಹಿತ್ಯದ ಹಿರಿಮೆಯನ್ನು ಹಾಗೂ ಗಾಂಭೀರ್ಯವನ್ನು ವೃದ್ಧಿಸುವುದನ್ನು ಕಾಣಬಹುದು. ಸಾಹಿತ್ಯದ ಪ್ರಾಕಾರಗಳು- ಕಾವ್ಯ, ಕಥೆ, ನಾಟಕ, ಪುಬಂಧ, ಇತ್ಯಾದಿ ಎಲ್ಲದಕ್ಕೂ ಇದು ಅನ್ವಯಿಸುತ್ತದೆ.

ಸಾಹಿತ್ಯದ ಉದ್ದೇಶ ಕೇವಲ ಮನರಂಜನೆಯಾಗಿರದೆ, ಅರ್ಥಪೂರ್ಣ ಬದುಕಿಗೆ, ಅರ್ಥಪೂರ್ಣ ಅಸ್ತಿತ್ವಕ್ಕೆ ಪೂರಕವಾಗಿದ್ದಲ್ಲಿ ಸಾರ್ಥಕತೆಯನ್ನು ಪಡೆಯುತ್ತದೆ. ಯಾವುದೇ ಸಾಹಿತ್ಯ ಸಾರ್ವಕಾಲಿಕವಾಗಿ ಹಾಗೂ ಕಾಲಾತೀತವಾದಾಗ ಮಾತ್ರ ತನ್ನ ಹಿರಿಮೆಯನ್ನು ಕಾಪಾಡಿಕೊಳ್ಳುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ನಮ್ಮ ನಾಡಿನ ಶ್ರೇಷ್ಠ ವಿದ್ವಾಂಸರಾದ ಶ್ರೀ ಅಶ್ವತ್ಥನಾರಾಯಣ. ಜಿ. ಅವರ ಸಾಹಿತ್ಯದಲ್ಲಿ ಕಾಣಬಹುದು. ಸರಳತೆ ಹಾಗೂ ಸಜ್ಜನಿಕೆ ಶ್ರೀಯುತರ ಸ್ವಾಭಾವಿಕ ಗುಣಗಳು. ಯಾವುದೇ ಹಮ್ಮು-ಬಿಮ್ಮು ಇಲ್ಲದೇ ಎಲ್ಲರೊಡನೆ ಬೆರೆಯುವ ಅವರ ಗುಣ ಶ್ಲಾಘನೀಯ ಹಾಗೂ ಅನುಕರಣೀಯ, ತ್ರಾಸವಿಲ್ಲದೆ ಪ್ರಾಸಬದ್ಧವಾಗಿ (ಆ ಕ್ಷಣದಲ್ಲಿ ಮಾತನಾಡುವ ಕಲೆ ಶ್ರೀಯುತರಿಗೆ ಒಲಿದಿರುವುದು ಬಹಳ ಸಂತಸದ ಸಂಗತಿ. ಬಹಳ ಕ್ಲಿಷ್ಟಕರವಾದ ಸಂಗತಿಗಳನ್ನೂ ಸಹ ತಮ್ಮದೇ ಧಾಟಿಯಲ್ಲಿ ಅತ್ಯಂತ ಸಹಜವಾಗಿ ಹಾಗೂ ಸರಳವಾಗಿ ಮಂಡಿಸುವ ಕಲೆ ಶ್ರೀ ಅನಾಜಿಯವರ ಆಸ್ತಿ. ಬದುಕಿನ ಮೌಲ್ಯಗಳನ್ನು ತಮ್ಮ ಅದ್ಭುತ ಮಾತುಗಳಲ್ಲಿ ಅರ್ಥಪೂರ್ಣವಾಗಿ ಅನಾವರಣ ಮಾಡುವ ಕಲೆಯಲ್ಲಿ ಶ್ರೀ ಅನಾಜಿ ಸಿದ್ಧಹಸ್ತರು.

ಸಾಧನೆಯ ಜೊತೆ ಸರಳತೆ ಶ್ರೀ ಅನಾಜಿ ಅವರ ವಿಶಿಷ್ಟತೆ.

ವಿನಯ್ ಫೌಂಡೇಶನ್ ಆಶ್ರಯದಲ್ಲಿ ಇತ್ತೀಚೆಗೆ (ಸೆಪ್ಟೆಂಬರ್ ೨೦೨೫) ನೀಡಲಾದ ವಿನಯ ವಿದ್ಯಾಭೂಷಣ ಪ್ರಶಸ್ತಿಯನ್ನು ನಾನು ಶ್ರೀ ಅನಾಜಿ ಅವರಿಂದ ಸ್ವೀಕರಿಸಿದ ಕ್ಷಣ ನನ್ನ ಜೀವನದ ಅತ್ಯಂತ ವಿಶೇಷವಾದ ಹಾಗೂ ಅವಿಸ್ಮರಣೀಯ ಕ್ಷಣ.

ತಮ್ಮ ಜೀವನದ ಅರ್ಥಪೂರ್ಣ ಎಂಬತ್ತೇಳು ವಸಂತಗಳನ್ನು ಪೂರೈಸುತ್ತಿರುವ ಶ್ರೀ ಅನಾಜಿ ಅವರಿಗೆ ಹಾರ್ದಿಕ ಶುಭಾಶಯಗಳು, ಶ್ರೀಯುತರು ಶತಾಯುಷಿಗಳಾಗಿ ನಮಗೆಲ್ಲರಿಗೂ ಅವರ ಮಾರ್ಗದರ್ಶನ ಹಾಗೂ ಬೌದ್ಧಿಕ ಸಾಂಗತ್ಯ ದೊರಕಲಿ ಎಂದು ಆಶಿಸುತ್ತೇನೆ.

******

ವೈವಿಧ್ಯಮಯ ವ್ಯಕ್ತಿತ್ವದ ಪ್ರೊ. ಅನಾಜಿ

ಪ್ರೊ. ಕೆ. ಎಸ್. ನರಸಿಂಗರಾವ್

ಚರವಾಣಿ : ೯೮೮೬೦೪೨೯೮೦

ಮಾನವ ಬದುಕಿನಲ್ಲಿ ವೃತ್ತಿ ಪ್ರವೃತ್ತಿಗಳು ಎಲ್ಲರಿಗೂ ಸಾಮಾನ್ಯವಾಗಿ ಇರುವಂಥದೇ. ಜೀವನ ನಿರ್ವಹಣೆಗಾಗಿ ವೃತ್ತಿಯಾದರೆ, ಬದುಕಿನ ಉತ್ಸಾಹ ಉಲ್ಲಾಸಕ್ಕಾಗಿ ಯಾವುದಾದರೂ ಪ್ರವೃತ್ತ ಅಗತ್ಯವಾಗುತ್ತದೆ. ಪ್ರವೃತ್ತಿ ಎನ್ನುವುದು ಒಂದು ಸಹಜ ಒಲವು, ಅಭ್ಯಾಸ, ಕ್ರಿಯಾಶೀಲತೆ, ನಿರಂತರ ಪ್ರಾಪಂಚಿಕ ವ್ಯವಹಾರಗಳೊಡನೆ ನಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವಿಕೆ. ಕೇವಲ ವೃತ್ತಿಯಲ್ಲಿ ಮಾತ್ರ ವಿರಮಿಸದೆ ಹೊರ ಜಗತ್ತಿಗೆ ತನಗೆ ತಾನು ತೆರೆದುಕೊಳ್ಳುವುದು ಪ್ರವೃತ್ತಿಯ ಮುಖ್ಯ ಲಕ್ಷಣ. ವೃತ್ತಿ, ಪ್ರವೃತ್ತಿಗಳೆರಡೂ ಒಂದಾಗಿ ಮೇಳೈಸಿದಾಗ ಮೈಗೂಡುವ ವ್ಯಕ್ತಿತ್ವ ಅತ್ಯಂತ ಅನನ್ಯವಾದದ್ದು; ವೈವಿಧ್ಯಮಯವಾದದ್ದು. ಹಿರಿಯರೂ, ಆತ್ಮೀಯರೂ, ಸರಳ ಸರಸ ಸಹೃದಯರೂ, ಸಾಹಿತ್ಯಜ್ಞರೂ ಆದ ಪ್ರೊ. ಜಿ. ಅಶ್ವತ್ಥನಾರಾಯಣ ಅವರದು ಇಂಥ ಧೀಮಂತ ವ್ಯಕ್ತಿತ್ವ. ಅವರು ಉತ್ತಮವಾಗ್ಮಿ, ಲೇಖಕರು, ಸಜ್ಜನರು, ಬಹುಶ್ರುತರು, ವಿದ್ವಾಂಸರು.

ಪ್ರೊ. ಜಿ. ಅಶ್ವತ್ಥನಾರಾಯಣ ಅವರದು ಪ್ರಧಾನವಾಗಿ ಮೂಲತಃ ಕನ್ನಡ ಪ್ರಜ್ಞೆ. ಸ್ನೇಹವಲಯದಲ್ಲಿ 'ಅನಾಜಿ' ಎಂದೇ ಹೆಸರಾದ ಅವರಿಗೆ ಬೋಧನೆ ವೃತ್ತಿಯಾದರೆ, ಅಧ್ಯಾತ್ಮ, ಸಾಹಿತ್ಯಪರವಾದ ಉಪನ್ಯಾಸಗಳು, ಲೇಖನಕಾರ್ಯ, ಸಂಘಸಂಸ್ಥೆಗಳ ಚಟುವಟಿಕೆಗಳು, ಗ್ರಂಥ ಸಂಗ್ರಹ, ಗ್ರಂಥ ಸಂಪಾದನೆ, ವಿದ್ವಾಂಸರ ಸಹವಾಸ ಮುಂತಾದ ವೈವಿಧ್ಯತೆಯಿಂದ ಕೂಡಿದ ಸಕಲವೂ ಕನ್ನಡಪರವಾದ ಪ್ರವೃತ್ತಿಗಳು. ಹೀಗೆ ವಿಸ್ತಾರವಾದ ಕಾರ್ಯ ಕ್ಷೇತ್ರದಲ್ಲಿ ತಮ್ಮ ಧ್ಯೇಯೋದ್ದೇಶಗಳಿಗೆ ತಕ್ಕಂತೆ ಕಾಯಾ ವಾಚಾ ಮನಸಾ ತಮ್ಮನ್ನು ನಿಮಗ್ನಗೊಳಿಸಿದವರು ಪ್ರೊ. ಅನಾಜಿ.

ಕಳೆದ ೫೫ ವರ್ಷಗಳ ಅನಾಜಿಯವರ ಸ್ನೇಹ, ಸಹಕಾರ ಕುರಿತಂತೆ ನನ್ನ ಅನುಭವ ಅನಿಸಿಕೆ ದಾಖಲಿಸುವ ಒಂದು ಸುಸಂದರ್ಭ ಇದು ಎಂದು ಭಾವಿಸುತ್ತೇನೆ. ಶ್ರೀಯುತರು ಮಂಡ್ಯ, ಹಾಸನ, ಮಾಗಡಿ ಬೆಂಗಳೂರು ಮುಂತಾದ ಕಡೆ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಮೂವತ್ತು ವರ್ಷಗಳಿಗೂ ಹೆಚ್ಚುಕಾಲ ಸೇವಾನಿರತರಾಗಿದ್ದರು. ಅವರದು ಸಾಹಿತ್ಯ ಕುಟುಂಬ. ಅವರ ಶ್ರೀಮತಿ ಎಂ. ಆರ್. ಲಕ್ಷ್ಮೀದೇವಿಯವರೂ ಕನ್ನಡ ಪ್ರಾಧ್ಯಾಪಕಿಯಾಗಿ ಆಚಾರ್ಯ ಪಾಠಶಾಲಾದಲ್ಲಿ ಸೇವೆ ಸಲ್ಲಿಸಿದ್ದು ಅನಾಜಿಯವರಿಗೆ ಹಲವು ಬಗೆ ಸಹಕರಿಸಿದ್ದಾರೆ.

ಪ್ರೊ.ಅನಾಜಿಯವರ ಬೋಧನೆಯಿಂದ ಅಸಂಖ್ಯಾತ ವಿದ್ಯಾರ್ಥಿಗಳು ಉಪಕೃತರಾಗಿದ್ದಾರೆ. ಅವರ ತರಗತಿಗಳು ಯಾವಾಗಲೂ ವಿದ್ಯಾರ್ಥಿಗಳಿಂದ ಕಿಕ್ಕಿರಿದು ತುಂಬಿರುತ್ತಿತ್ತು. ಮಂಡ್ಯದ ಕಾಲೇಜಿನಲ್ಲಿದ್ದಾಗಲೇ ಅಮೋಘ ಭಾಷಣದ ವೈಖರಿಯ ಬಗೆಗೆ, ಕನ್ನಡ ಪ್ರೇಮ, ಕಾಳಜಿಯ ಬಗೆಗೆ ಕೇಳಿದ್ದ ನನಗೆ ೧೯೭೧ ರಲ್ಲಿ ಕನ್ನಡ ಅಧ್ಯಾಪಕರಾಗಿ ಹಾಸನದ ಸರ್ಕಾರಿ ಕಾಲೇಜಿಗೆ ಆದೇಶ ಬಂದು ಅಲ್ಲಿ ಅನಾಜಿಯವರ ಭೇಟಿ, ಪರಿಚಯವಾಗಿ ಅವರ ಒಡನಾಟ ಆರಂಭವಾಯಿತು. ಅದು

ಇಂದೂ ಅಷ್ಟೇ ಹಸಿರಾಗಿದೆ. ಹಾಸನಕ್ಕೆ ಹೋದ ದಿನವೇ ಅವರು ನನ್ನನ್ನು ಕನ್ನಡ ತರಗತಿಯೊಂದಕ್ಕೆ ಕರೆದುಕೊಂಡು ಹೋಗಿ ವಿದ್ಯಾರ್ಥಿಗಳಿಗೆ ಪರಿಚಯಿಸಿ ಮೆಚ್ಚುಗೆಯ ಮಾತುಗಳನ್ನು ಆಡಿದ್ದು ನನಗೆ ನೆನಪಿದೆ. ಅವರು ತುಂಬಾ ಸ್ನೇಹಪರ ಜೀವಿ. ನನ್ನ ಸೇವಾರಂಭಧ ಮೊದಲಲ್ಲಿ ದೊರೆತ ಒಂದು ವರುಷದ ಅನಾಜಿಯವರ ಸಖ್ಯದ ಒಡನಾಟ ನನಗೆ ಬಹಳ ಪ್ರಯೋಜನಕಾರಿಯಾಗಿ ಅಮೂಲ್ಯವೆನಿಸುತ್ತದೆ. ಹೊಸದಾಗಿ ಉಪನ್ಯಾಸಕನಾಗಿ ಬಂದ ನನಗೆ ಎಲ್ಲಾ ರೀತಿಯ ಸಹಕಾರ, ಮಾರ್ಗದರ್ಶನ ಅವರು ನೀಡಿದ್ದಾರೆ. ಅವರಲ್ಲಿ ವಿಶೇಷವಾಗಿ ನಾನು ಕಂಡಿದ್ದು ಇತರರಿಗೆ ತಾವಾಗಿ ಸ್ಪಂದಿಸುವ ಮಾನವೀಯ ಗುಣ; ಸಹಾಯದ ಮನೋಭಾವ. ಆಗ ಹಾಸನದಲ್ಲಿ 'ಜನಮಿತ್ರ' ಎಂಬ ದಿನಪತ್ರಿಕೆ ಬರುತ್ತಿತ್ತು. ಅದರ ಸಂಪಾದಕರು ಕೃ.ನ. ಮೂರ್ತಿ ಎಂಬ ಸಾಹಿತಿಗಳು. ನಾನು ಕರ್ತವ್ಯಕ್ಕೆ ಹಾಜರಾದ ದಿವನೇ ಜಿ. ಅಶ್ವತ್ಥನಾರಾಯಣರು ನನ್ನನ್ನು ಮತ್ತು ನನ್ನ ಅಣ್ಣನವರನ್ನು ಅವರಲ್ಲಿಗೆ ಕರೆದುಕೊಂಡು ಹೋಗಿ ಪರಿಚಯಿಸಿ ಅವರಿಂದ ಮೂರುನಾಲ್ಕು ದಿನ ನಮ್ಮ ವಾಸ್ತವ್ಯಕ್ಕಾಗಿ ವ್ಯವಸ್ಥೆ ಮಾಡಿದ್ದನ್ನು ಮರೆಯುವಂತಿಲ್ಲ. ಇದು ಅವರ ಉದಾರತೆ.

ದಿನವಿಡೀ ಅನಾಜಿಯವರೊಡನೆ ಹೆಚ್ಚುಕಾಲ ಇರುತ್ತಿದ್ದ ನನಗೆ ಸಾಹಿತ್ಯಪರವಾದ ಮಾತುಕಥೆಗಳ ವಿಶೇಷ ಪ್ರಯೋಜನ ಲಭಿಸುತ್ತಿತ್ತು. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಅದರ ಸಮೀಪದಲ್ಲೇ ಚಾಮರಾಜಪೇಟೆಯಲ್ಲಿ ಅವರು ವಾಸವಿದ್ದ ಮನೆ, ಅವರ ಬಾಲ್ಯ, ವಿದ್ಯೆ, ಜೀವನ, ಪರಿಷತ್ತಿಗೆ ಬರುತ್ತಿದ್ದ ಮಹಾಮಹಿಮರಾದ ವಿದ್ವಾಂಸರು, ಅಲ್ಲಿ ನಡೆಯುತಿದ್ದ ಗೋಷ್ಠಿಗಳು, ವಿದ್ಯಮಾನಗಳು, ಪರಿಷತ್ತಿನೊಡನೆ ಬೆಸೆದಿದ್ದ ನಂಟಿನ ಬಗ್ಗೆ ದೊರೆಯದ, ಓದಿ ತಿಳಿಯಲು ಅವಕಾಶವಿಲ್ಲದ ಎಷ್ಟೋ ಆಹ್ಲಾದಕರವಾದ ಕುತೂಹಲದ ಸಂಗತಿಗಳು ಅವರಿಂದ ತಿಳಿಯುವ ಸದವಕಾಶ ನನಗಿತ್ತು. 'ಜನಮಿತ್ರ' ಪತ್ರಿಕೆಗೆ ನನ್ನಿಂದ ಲೇಖನಗಳನ್ನು ಬರೆಸಿದರು. ಒಂದೆರಡು ಉಪನ್ಯಾಸ ಮಾಡಿಸಿದರು. ಸಂಜೆಯ ವೇಳೆ 'ಜನಮಿತ್ರ' ಪತ್ರಿಕೆಯ ಕಛೇರಿಗೆ ಹೋಗುವುದು ನಮ್ಮ ದಿನಚರಿಯಲ್ಲಿ ಒಂದು. ಅಲ್ಲಿ ಸಾಹಿತ್ಯಕ ವಾತಾವರಣವಿತ್ತು. ಆಗಾಗ ಅಲ್ಲಿಗೆ ಗೊರೂರು ರಾಮಸ್ವಾಮಿ ಅಯ್ಯಂಗಾರರು ಬರುತ್ತಿದ್ದರು. ಹಾರನಹಳ್ಳಿ ರಾಮಸ್ವಾಮಿ, ಗುಂಡೂರಾವ್, ಹೆಚ್.ಬಿ. ಜ್ವಾಲನಯ್ಯ ಮುಂತಾದ ಗಣ್ಯರು, ಸಾಹಿತ್ಯಾಸಕ್ತರು ಬರುತ್ತಿದ್ದರು. ಹಾಸನದ ಅಂದಿನ ಅನೇಕಪ್ರಮುಖರ ಪರಿಚಯದ ಅವಕಾಶ ದೊರೆತಿತ್ತು.

ಹಾಸನದ ಸರ್ಕಾರಿ ಕಾಲೇಜು ಬಹಳ ಹಳೆಯದು. ಅಲ್ಲಿನ ಗ್ರಂಥಾಲಯದಲ್ಲಿ ನೂರಾರು ವರ್ಷಗಳ ಹಿಂದಿನದೆನ್ನಬಹುದಾದ ಕನ್ನಡ ಪುಸ್ತಕಗಳಿದ್ದವು. ಗಣನೀಯ ಸಂಖ್ಯೆಯ ಕನ್ನಡ ಪುಸ್ತಕಗಳನ್ನು ವಿಷಯವಾರು ವಿಂಗಡಣೆ ಮಾಡಿದ್ದ ಒಂದು ಗ್ರಂಥ ಸೂಚಿ– ಇರಲಿಲ್ಲ. ಯಾರೂ ಹಿಂದಿನವರು ಮಾಡಿರಲಿಲ್ಲ. ಇದನ್ನು ಗಮನಿಸಿದ ಅನಾಜಿಯವರು ನಾನು ಅಲ್ಲಿಗೆ ಹೋಗುವ ಮೊದಲೇ ಕೆಲವರ ಸಹಕಾರದಿಂದ ಸಾಕಷ್ಟು ತಯಾರಿ ನಡೆಸಿದ್ದರು. ಸುಮ್ಮನೆ ಕೂಡುವ ಜಾಯಮಾನ ಅವರದ್ದಲ್ಲ. ಕಾಲೇಜಿನಲಿ ಮಧ್ಯಾಹ್ನದವರೆದೂ ತರಗತಿಗಳು, ಅನಂತರದಲ್ಲಿ ಲೈಬ್ರರಿಯಲ್ಲಿ ಗ್ರಂಥಸೂಚಿ ಸಿದ್ಧತಾ ಕಾರ್ಯ. ದುಂಡಾಗಿ ಸ್ಪಷ್ಟವಾಗಿ, ದಪ್ಪ ಅಕ್ಷರಗಳಲ್ಲಿ ಪುಸ್ತಕಗಳ ಹೆಸರು, ಸಂಖ್ಯೆ, ಕಪಾಟುಸಂಖ್ಯೆ ಮುಂತಾಗಿ ಸುಂದರವಾಗಿ ಅವರು ಬರೆದಿಡುತ್ತಿದ್ದುದನ್ನು ನಾನು ನೋಡಿದ್ದೇನೆ. ಬೋಧನೆಗೆ ಬೇಕಾದ ಶಿಸ್ತಿನ ಅಧ್ಯಯನ ಹೇಗಿತ್ತೋ, ಪರಿಣಾಮಕಾರಿ ಅಧ್ಯಾಪನ ಹೇಗಿತ್ತೋ ಹಾಗೆಯೇ ಎಲ್ಲಾ ಕಾರ್ಯಗಳಲ್ಲೂ ಅವರದು ಮೆಚ್ಚುವಂಥ ಅಚ್ಚುಕಟ್ಟು. ತರಗತಿ ಪಾಠ, ಬರವಣಿಗೆ, ಉಪನ್ಯಾಸಗಳು ಸಾಹಿತಿಗಳ ಸಂಪರ್ಕ ಒಂದು ರೀತಿ ಕಾಣುವಂತದ್ದಾದರೆ, ಗ್ರಂಥಗಳ ಲೇಖನಗಳ ಕರಡು ತಿದ್ದುವುದು,

ಸಂಪಾದನೆ, ಪರಿಷ್ಕರಣ ಮುಂತಾದವು ಎದ್ದು ಕಾಣದಿರುವ ಅಗಾಧಕಾರ್ಯ. ಹೀಗೆ ಅವಿಶ್ರಾಂತವಾಗಿ ಕನ್ನಡದ ಕೆಲಸ ಮಾಡುವುದು ಅವರಿಗೆ ಉಸಿರಾಡಿದ್ದಷ್ಟೆ ಸಹಜಪ್ರವೃತ್ತಿ.

ಅನಾಜಿಯವರು ೧೯೨೭ ಕ್ಕೆ ವರ್ಗವಾಗಿ ಬೆಂಗಳೂರಿಗೆ ಹೋದಾಗ ಅವರು ವಾಸವಿದ್ದ ಕೊಠಡಿಯನ್ನೇ ನನಗೆ ಇರಲು ವ್ಯವಸ್ಥೆ ಮಾಡಿದ್ದರು. ಬೇಸಿಗೆ ರಜೆ ಕಳೆದು ಹಾಸನಕ್ಕೆ ನಾನು ಬಂದಾಗ ಅವರಿದ್ದ ಕೊಠಡಿಯ ಬಾಗಿಲು ತೆರೆಯುತ್ತಿದ್ದಂತೆ ಒಂದು ಆಶ್ಚರ್ಯ ನನಗೆ ಕಾದಿತ್ತು. ನನಗೆ ಸುದೀರ್ಘವಾಗಿ ಒಂದು ಪತ್ರ ಬರೆದಿಟ್ಟಿದ್ದರು. ಆ ಕೊಠಡಿಗೆ ಸಂಬಂಧಿಸಿದ ಮಾಹಿತಿ ಅಲ್ಲಿನ ಸೌಲಭ್ಯ, ಸ್ನಾನದ ವ್ಯವಸ್ಥೆ, ಅಡೆತಡೆಗಳು, ಮೊದಲಾದ ಜೀವನವಿಧಾನದ ಬಗ್ಗೆ ವಿವರವಾಗಿ ಬರೆದು ಅನಾಜಿಯವರು ಅಣ್ಣಾಜಿಯಾಗಿ ಓರ್ವ ಹಿರಿಯ ಸೋದರನ ವಾತ್ಸಲ್ಯ ತೋರಿದ್ದರು. ಆ ಪತ್ರದ ಒಂದು ಮಾತು ಈಗಲೂ ನೆನಪಿದೆ. 'ನೀವು ಮಲಗಿ ನಿದ್ರಿಸುವಾಗ ರಾತ್ರಿ ವೇಳೆ 'ಗಿರ್‌ರ್' ಶಬ್ಧ ಕೇಳಿಸಿದರೆ ಅದು metre ಓಡುವ ಶಬ್ಧ. ಗಾಬರಿಯಾಗಬೇಡಿ' – ಇದು ಅವರ ಹಾಸ್ಯಪ್ರಜ್ಞೆ ಮಾತ್ರವಲ್ಲದೇ ಸಂದರ್ಭೋಚಿತ ಉಪದೇಶ; ಉಪಕಾರ. ಅವರ ಸಹೃದಯತೆ ಮನನೀಯ. ಹಾಸನದ ಆ ದಿನಗಳು ನನಗೆ ಇಂದಿಗೂ ಸ್ಮರಣೀಯ.

ಅನಾಜಿಯವರ ಮತ್ತೊಂದು ಪರಮಾಸಕ್ತಿಯ ಹವ್ಯಾಸವೆಂದರೆ ಗ್ರಂಥ ಸಂಗ್ರಹ. ಇದು ಬಾಲ್ಯದಿಂದಲೇ ಅವರಿಗೆ ಇದ್ದಿರಬಹುದಾದ ಅಭ್ಯಾಸವಿರಬಹುದು. ಬೆಂಗಳೂರಿನ ಅವರ ಮನೆಗೆ ಒಮ್ಮೆ ಹೋದಾಗ ನೆಲಮಹಡಿಯಲ್ಲಿರಯವ ಒಂದು ವಿಶಾಲವಾದ ಖಾಸಗಿ ಪುಸ್ತಕ ಭಂಡಾರ ನೋಡಿ ನಾನು ನಿಬ್ಬೆರಗಾದೆ. ಹಲವು ಕಪಾಟುಗಳಲ್ಲಿ ಅಸಂಖ್ಯ ಗ್ರಂಥಗಳು ಸಾರ್ವಜನಿಕ ಗ್ರಂಥಾಲಯಗಳಲ್ಲಿ ಕಾಣುವಂತೆ ವಿರಾಜಮಾನವಾಗಿದ್ದರು. ಕನ್ನಡ, ಇಂಗ್ಲಿಷ್ ಭಾಷೆಗಳಿಗೆ ಸಂಬಂಧಿಸಿದಂತೆ ಇಪ್ಪತ್ತು ಸಾವಿರಕ್ಕೂ ಅಧಿಕ ಪುಸ್ತಕಗಳು ಅವರ ಗ್ರಂಥಾಲಯದಲ್ಲಿವೆ. ಕನ್ನಡ ಸಾಹಿತ್ಯದ ಕಾವ್ಯ, ನಾಟಕ, ಕಾದಂಬರಿ, ವಿಮರ್ಶೆ, ಶಾಸ್ತ್ರ ಸಾಹಿತ್ಯ ಎಲ್ಲ ಇತರ ಪ್ರಕಾರಗಳ ಗ್ರಂಥಗಳು ಅಲ್ಲಿವೆ. ಸಾಹಿತ್ಯದ ಕೃಷಿ ಮಾಡುವವರಿಗೆ ಲೇಖನಕ್ಕೆ ಸಮಾಲೋಚನೆಗೆ ಬೇಕಾದ ಮೌಲಿಕ ಪುಸ್ತಕಗಳು ಅಲ್ಲಿವೆ. ಒಮ್ಮೆ ನಾನು ರತ್ನಾಕರವರ್ಣಿಯ ಬಗ್ಗೆ ಕೇಳಿದಾಗ ತಕ್ಷಣ ನಾಲ್ಕು ಪುಸ್ತಕಗಳನ್ನು ತೆಗೆದುಕೊಟ್ಟರು. ಹಳೆಯ ಹೊಸ ಪ್ರಕಟಣೆಯ ಬೆಲೆಬಾಳುವ ಪುಸ್ತಕಗಳ ಅಪರೂಪದ ಜ್ಞಾನಭಂಡಾರ ಅದು. ಅವುಗಳನ್ನು ವಾಚಿಸಿ ಅಲ್ಲಲ್ಲಿ ಗುರುತು ಮಾಡಿರುವ ಟಿಪ್ಪಣಿಗಳನ್ನು ನೋಡಿದರೆ ಅವರ ಅಧ್ಯಯನಶೀಲತೆ ಬೆರಗುಂಟುಮಾಡುತ್ತದೆ. ಹಾಗೆಯೇ ಅಧ್ಯಾಪನವೂ ಅಸಾಧಾರಣವಾದುದು.

ಕನ್ನಡದ ಕಾಯಕಕ್ಕೆ ಪ್ರೊ.ಅನಾಜಿಯವರು ಸದಾ ತಮ್ಮ ಸಹಾಯ ಹಸ್ತವನ್ನು ನೀಡುವುದರ ಕುರಿತು ಇನ್ನೊಂದು ಸಂಗತಿಯನ್ನು ನಾನು ಹೇಳಬೇಕು. ನನಗೆ ಆತ್ಮೀಯರಾಗಿದ್ದ ನಾಡೋಜ ಡಾ. ಜಿ. ಕೃಷ್ಣಪ್ಪನವರು 'ಬೇಂದ್ರೆ ಕೃಷ್ಣಪ್ಪ'ಎಂದೇ ಜನಪ್ರಿಯರಾಗಿದ್ದವರು. ಬೇಂದ್ರೆಯವರ ಕಾವ್ಯದಲ್ಲಿ ಬೆಳಗು, ಸೂರ್ಯೋದಯದ ಬಗ್ಗೆ ಅಭ್ಯಸಿಸಿ ಕೃತಿ ಬರೆಯಲು ಕವನ ಸಂಕಲನಗಳ ಪ್ರಥಮ ಮುದ್ರಣದ ಕೃತಿಗಳ ಲಭ್ಯತೆಯ ಕುರಿತು ನನ್ನನ್ನು ಕೇಳಿದರು. ಅವರಿಗೆ ಕವನಗಳ ಮೂಲಪಾಠ ಬೇಕಿತ್ತು. ಆಗ ಕೂಡಲೇ ನನಗೆ ನೆನಪಾಗಿದ್ದು, ಅನಾಜಿ ಅವರು; ಮತ್ತೆ ಅವರ ಗ್ರಂಥ ಭಂಡಾರ. ತಕ್ಷಣ ಅವರಿಗೆ ಕರೆ ಮಾಡಿದೆ. 'ಅಗತ್ಯವಾಗಿ ಬನ್ನಿ' ತೆಗೆದಿರಿಸಿರುತ್ತೇನೆ ಎಂದರು. ಕೃಷ್ಣಪ್ಪನವರೊಡನೆ ಅವರಲ್ಲಿಗೆ ಹೋದಾಗ ಬೇಂದ್ರೆಯವರ ಪ್ರಥಮ ಸಂಕಲನ 'ಗರಿ' (೧೯೩೨) ಮೊದಲಾದ ಒಟ್ಟು ಹದಿಮೂರು ಮೊದಲ ಮುದ್ರಣದ ಕವನ ಸಂಕಲನಗಳನ್ನು ಕೊಟ್ಟರು. ಕೃಷ್ಣಪ್ಪನವರಿಗಾದ ಸಂತಸ ಅಷ್ಟಿಷ್ಟಲ್ಲ. ಇದು ಕನ್ನಡದ ಕೆಲಸಕ್ಕೆ ನೆರವಾಗುವ ಅನಾಜಿಯವರ ಔದಾರ್ಯ. ಅಲ್ಲದೇ ಅವರ ಗ್ರಂಥಾಲಯ ಅಷ್ಟರಮಟ್ಟಿಗೆ ಸುಸಜ್ಜಿತವಾದದ್ದು.

ಕನ್ನಡ ಸಾಹಿತ್ಯದ ಅರುಣೋದಯದ ಕಾಲದಿಂದ ಇಂದಿನವರೆಗೂ ಭಾಷಾ ಸಾಹಿತ್ಯಗಳಿಗೆ ದುಡಿದ ಸಾಧಕರನ್ನು ಕುರಿತು ಜಿ. ಅಶ್ವತ್ಥನಾರಾಯಣರೊಡನೆ ಸಂಭಾಷಿಸುವುದು ಎಂದರೆ ಅದೊಂದು ಅರಿವಿನ ಆನಂದದ ಲೋಕಕ್ಕೆ ಪ್ರಯಾಣ ಮಾಡಿರುವುದು. ಹಿಂದಿನ ಸಾಹಿತಿಗಳ ಬಗ್ಗೆ ಅವರಷ್ಟು ತಿಳಿದ ಮತ್ತೊಬ್ಬರು ನನ್ನ ಅರಿವಿಗೆ ಬಂದಿಲ್ಲ. ಅವರ ಸ್ಮೃತಿ, ವಾಕ್ಶಕ್ತಿ ಅಪೂರ್ವವಾದದ್ದು. ಅನಾಜಿಯವರಿಗೆ ಬರವಣಿಗೆ, ಭಾಷಣಕಲೆ, ವಿದ್ಯಾರ್ಥಿ ದೆಸೆಯಲ್ಲೇ ಬಂದಿರಬೇಕು, ಮಂಡ್ಯದ ಸರ್ಕಾರಿ ಕಾಲೇಜಿನಲ್ಲಿ ನಾನು ವ್ಯಾಸಂಗ ಮಾಡುವಾಗ ನನ್ನ ವಿದ್ಯಾಗುರುಗಳಾಗಿ ಸ. ಶ್ರೀನಿವಾಸನ್ ಮತ್ತು ಡಾ. ಎಂ.ಎ. ಜಯಚಂದ್ರ ಅವರಿದ್ದರು. ನಾನು ಸ್ನಾತಕೋತ್ತರ ತರಗತಿ ಸೇರಿದಾಗ ಮಂಡ್ಯಕ್ಕೆ ಅನಾಜಿಯವರು ಬಂದರು. ಅಲ್ಲಿ ಪ್ರತಿಭಾವಂತ ಕನ್ನಡ ವಿದ್ವಾಂಸರ ಒಂದು ಸಾಹಿತ್ಯಿಕ ವಾತಾವರಣವಿತ್ತು ಎಂದು ಕೇಳಿದ್ದೇನೆ. ದಿನಕ್ಕೆ ಒಂದು ಪುಟವಾದರೂ ಕನ್ನಡದಲ್ಲಿ ಏನನ್ನಾದರೂ ಬರೆದುಕೊಂಡು ಕಾಲೇಜಿಗೆ ಬರಬೇಕೆಂದು ಒಂದು ನಿಯಮದಂತೆ ಪಾಲಿತವಾಗುತ್ತಿದ್ದಿತೆಂದೂ ಕೇಳಿದ್ದೇನೆ. ಇದೆಲ್ಲವರೂ ಅವರ ಕನ್ನಡದ ಬಗೆಗಿನ ಕಾಳಜಿ. ಜೈನಧರ್ಮದ ದಶಧರ್ಮಗಳಲ್ಲಿ ಮೊದಲನೆಯದಾದ 'ಉತ್ತಮಕ್ಷಮಾ' ಕುರಿತು ಉಪನ್ಯಾಸ ಮಾಡಿದಾಗ 'ಕ್ಷಮಾ' ಎಂಬ ಮಾತು ಅನಾಜಿ ಅವರಿಗೆ ಮೆಚ್ಚುಗೆಯಾಗಿ, ಹುಟ್ಟಿದ ಮಗಳಿಗೆ ಅದನ್ನೇ ಹೆಸರಾಗಿಟ್ಟರು. 'ಉತ್ತಮ ಕ್ಷಮಾ' ಎಂಬ ಕೃತಿಯೂ ಅವರ ಮೊದಲ ಕೃತಿಯಾಯಿತು. ಅಂದಿನಿಂದ ಅವರ ಬರವಣಿಗೆ ನಿರಂತರವಾಗಿ ನಡೆಯುತ್ತಿದೆ. ಶ್ರೀಯುತರ ಸಾಹಿತ್ಯ ರಚನೆ ಕುರಿತಂತೆ ವಿಚಾರ ವಿಮರ್ಶೆಗಳು ಪ್ರತ್ಯೇಕವಾಗಿ ಆಗಬೇಕಾದಷ್ಟು ವ್ಯಾಪಕವಾಗಿದೆ. ಸಂಗ್ರಹವಾಗಿ ಹೇಳುವ ಪ್ರಯತ್ನ ನನ್ನದು.

ಕನ್ನಡ ಸಾಹಿತ್ಯ ಪರಿಷತ್ತಿಗೂ ಅನಾಜಿಯವರಿಗೂ ಅವರ ಬಾಲ್ಯದಿಂದಲೇ ಬಂದ ಒಂದು ಅವಿನಾಭಾವ ಸಂಬಂಧವಿದೆ. ಅದರ ಫಲವೇ "ಕನ್ನಡ ಸಾಹಿತ್ಯ ಪರಿಷತ್ತು-೧೦೦". ಮಹಾಗ್ರಂಥದ ಉದಯಕ್ಕೆ ನಿಮಿತ್ತವಾಗಿರುವುದು. ಸುಮಾರು ೯೦೦ ಪುಟಗಳ ಈ ಶತಮಾನೋತ್ಸವ ಸಂಚಿಕೆ (೧೯೧೫-೨೦೧೫) ಅನಾಜಿಯವರ ಮಹತ್ ಸಾಧನೆ. "ಇಂದಿಗೂ ಪರಿಷತ್ತು ನನ್ನ ಬಾಳಿನ ಅವಿಭಾಜ್ಯ ಅಂಗ; ಕನ್ನಡ ಹೆಸರಾದದ್ದು ಉಸಿರಾದದ್ದು ನನಗೆ ಪರಿಷತ್ತಿನಿಂದ" ಎಂದು ತುಂಬು ಅಭಿಮಾನದಿಂದ ಹೇಳುವರ ಅವರು ಪರಿಷತ್ತಿನ ಇತಿಹಾಸದ ನೂರು ವರುಷಗಳ ಸಾಕಷ್ಟು ವಿವರಗಳನ್ನು, ಮಾಹಿತಿಯನ್ನು ಇಲ್ಲಿ ಒದಗಿಸಿದ್ದಾರೆ. ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲೇ ಇದೊಂದು ಗಮನಾರ್ಹ ಮೈಲಿಗಲ್ಲು; ಮಹತ್ವದ ದಾಖಲೆ. ನೂರು ವರ್ಷಗಳಲ್ಲಿ ನಡೆದ ೮೧ ಸಮ್ಮೇಳನಗಳು, ೨೮ ಜನ ಅಧ್ಯಕ್ಷರ ಪರಿಚಯ, ಸಾಧನೆಯ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಪರಿಷತ್ತನ್ನು ಕುರಿತು ಮುಂದೆ ಬರುವ ಗ್ರಂಥಕ್ಕೆ ಇದೊಂದು ಮುಖ್ಯ ಆಕರಗ್ರಂಥ ಆಗುವುದರಲ್ಲಿ ಸಂಶಯವಿಲ್ಲ.

ಜೈನ ಸಾಹಿತ್ಯ, ವಚನ ಸಾಹಿತ್ಯ, ದಾಸಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೃತಿಗಳನ್ನು ರಚಿಸಿ ನಾಡಿನಾದ್ಯಂತ ಅನೇಕ ಉಪನ್ಯಾಸಗಳನ್ನು ಮಾಡಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆಯು ಪ್ರಕಟಿಸಿದ ಪ್ರೊ. ಸಾ. ಕೃ. ರಾಮಚಂದ್ರರಾವ್ ಸಂಪಾದಕತ್ವದ 'ಪುರಂದರ ಸಾಹಿತ್ಯ ದರ್ಶನ'ದ ಪ್ರಕಟಣೆಗೆ ಅನಾಜಿ ಅವರ ಕೊಡುಗೆ ಅಪಾರವಾಗಿದೆ. ಪುರಂದರರ ಅಲ್ಲಲ್ಲಿ ಚದುರಿಹೋದ ಕೀರ್ತನೆಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಮುದ್ರಣ ಕಾರ್ಯಕ್ಕೆ ಪೂರ್ಣವಾಗಿ ಸಹಕರಿಸಿರುವುದು ಶ್ರೀಯುತರ ಮಹಾಪರಿಶ್ರಮ ಮತ್ತು ಕಾರ್ಯ ನಿಷ್ಠೆಗೆ ದ್ಯೋತಕವಾಗಿವೆ. ಪ್ರತಿ ಕೀರ್ತನೆಯ ಅಡಿ ಟಿಪ್ಪಣಿಯಲ್ಲಿ ಕ್ಲಿಷ್ಟ ಪದಗಳ ಅರ್ಥ, ಹಾಗೂ ಇತರ ವಿಚಾರಗಳನ್ನೊಳಗೊಂಡ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಅವರ ವಿದ್ವತ್ತು ಕೆಲಸ ಮಾಡಿದೆ. ಈ ಸಂಪುಟಗಳು ಪುರಂದರರನ್ನು ಕುರಿತು ಅಧ್ಯಯನ ಮಾಡುವವರಿಗೆ ತುಂಬಾ ಸಹಾಯಕವಾಗಿದೆ.

ಕನ್ನಡ ಸಾಹಿತ್ಯ ದಿಗ್ಗಜರು –ಎಂಬ ಕೃತಿ ಅನಾಜಿಯವರ ಹೊಸಗನ್ನಡ ಸಾಹಿತ್ಯೋದಯ ಕಾಲದ ಸಾಹಿತಿಗಳನ್ನು ಕುರಿತ ವ್ಯಕ್ತಿ ಚಿತ್ರ ಒದಗಿಸಿದೆ. ಕನ್ನಡ ಭಾಷೆ, ಸಾಹಿತ್ಯದ ಏಳಿಗೆಗೆ ಶ್ರಮಿಸಿದ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರೇ ಮೊದಲಾದ ಹನ್ನೆರಡು ಪ್ರಾತಃಸ್ಮರಣೀಯರನ್ನು ಅವರ ಬದುಕಿನ ಪ್ರಸಂಗಗಳನ್ನು ಇಲಿ ಕಥಾತ್ಮಕವಾಗಿ ಚಿತ್ರಿಸಲಾಗಿದೆ. ಎಲ್ಲವೂ ನಮ್ಮನ್ನು ಕುತೂಹಲದಿಂದ ಓದಿಸಿಕೊಂಡು ಹೋಗುವ ಜೀವನ ಚಿತ್ರಗಳು. 'ನಾ ಕಂಡಂತೆ ಹಿರಿಯ ಕನ್ನಡ ಕವಿಗಳು' –ಇಂಥದೇ ಸ್ವಾರಸ್ಯ ಘಟನಾವಳಿಗಳನ್ನೊಳಗೊಂಡು ಗಮನ ಸೆಳೆಯುವ ಕೃತಿ. ಅವರ ಬಾಲ್ಯದಿಂದಲೂ ಇದ್ದ ಸಾಹಿತಿಗಳ ಆಳವಾದ ಪರಿಚಯ, ಒಡನಾಟ ಇಲ್ಲಿನ ವ್ಯಕ್ತಿ ಚಿತ್ರಣಕ್ಕೆ ಮೆರುಗು ತಂದಿದೆ. 'ದೇವುಡು ನರಸಿಂಹ ಶಾಸ್ತ್ರಿ –ಎಂಬ ಕೃತಿ ರಚನೆ ಒಂದು ರೀತಿ ಕ್ಷೇತ್ರ ಅಧ್ಯಯನ ಎಂಬಂತೆ ದೇವುಡು ಅವರ ಸಂಬಂಧಿಕರನ್ನು ವಿಚಾರಿಸಿ ತಿಳಿದು ರಚಿಸಿದ ಗ್ರಂಥವಾಗಿದೆ. 'ವ್ಯಾವಹಾರಿಕ ಕನ್ನಡ' ಭಾಷಾ ಜಿಜ್ಞಾಸುಗಳಿಗೆ ಉಪಯುಕ್ತವಾದುದು. ಕವಿ ರತ್ನಾಕರ ವರ್ಣಿಯ ಮೂರು ಶತಕಗಳಿಗೆ ಮೂಲ–ಅನುವಾದ–ಟಿಪ್ಪಣಿಗಳ ಸಮೇತ ಮಾಡಿರುವ ಅವರ ಸಂಪಾದನೆಯ ಕ್ರಮ, ರೀತಿ ಇತರರಿಗೆ ಒಂದು ಉತ್ತಮ ಮಾದರಿ. 'ಹರಿದಾಸರು ಹಾಡಿದ ಸಾವಿರ ಕೀರ್ತನೆಗಳು' ೫೦೦ ಕೀರ್ತನೆಗಳ ಒಂದು ಸುಂದರ ಗುಚ್ಛ. ಈವರೆಗೆ ಅನೇಕ ಪ್ರಕಾರವಾಗಿ ದಾಸಸಾಹಿತ್ಯ ಪ್ರಕಟವಾಗಿದ್ದರೂ ಒಂದೆಡೆ ಶ್ರೀರಾಮಪರವಾದ ಹರಿದಾಸರ ಇಷ್ಟ ಕೀರ್ತನೆಗಳನ್ನು ವ್ಯಾಸಂಗಿಗಳಿಗೆ ಉಪಯೋಗವಾಗುವಂತೆ ಸಂಗ್ರಹಿಸಿ ಸಂಪಾದಿಸಿರುವುದು ಮೆಚ್ಚುವಂಥದು. 'ಹೆಸರುಘಟ್ಟದ ಹೊನ್ನಪ್ಪನವರ ವ್ಯಾಕರಣ ಸಂಗ್ರಹಂ'ಎಂಬ ಗ್ರಂಥ ಪ್ರಶ್ನೋತ್ತರ ರೂಪದಲ್ಲಿದ್ದು ಕಳೆದ ಶತಮಾನಕ್ಕೆ ಸಂಪಾದಿಸಿ ಜಿ. ಅಶ್ವತ್ಥನಾರಾಯಣರು ಶಾಸ್ತ್ರವಿಷಯಗಳಲ್ಲಿ ಕಾರ್ಯತತ್ಪರರಾಗಿದ್ದಾರೆ. ಹೀಗೆಯೇ ಶಂಕರಭಗವತ್ಪಾದರ ಸೌಂದರ್ಯ ಲಹರೀ ಸ್ತೋತ್ರ ದೀಪಿಕೆ, ಕಾಳಿದಾಸನ ರಘುವಂಶದ ಗದ್ಯಾನುವಾದ, ರಘುಕುಲಚರಿತಂ, ಮುಂತಾದವು ಶ್ರೀಯುತರ ಗ್ರಂಥ ಸಂಪಾದನಾ ಶಿಸ್ತು, ಅಚ್ಚುಕಟ್ಟುತನಕ್ಕೆ ಸಾಕ್ಷಿಯಾಗಿದೆ.

ಜಿ. ಅಶ್ವತ್ಥನಾರಾಯಣರು ತಮ್ಮ ಸರ್ಕಾರಿ ಸೇವಾವಧಿಯಲ್ಲಿ ಅನೇಕ ಪಠ್ಯಪುಸ್ತಕ ಮಂಡಳಿಗಳಲ್ಲಿ ಸದಸ್ಯರಾಗಿ ರಚನಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಗಮಕಕಲಾ ಪರಿಷತ್ತು, ಕನ್ನಡ ಸಂಸ್ಕೃತಿ ಇಲಾಖೆ, ಕನ್ನಡ ವಿಶ್ವವಿದ್ಯಾನಿಲಯ, ದೇವುಡು ಪ್ರತಿಷ್ಠಾನ, ಮಂತಾದ ಕಡೆ ಸಲಹೆ, ಸೂಚನೆ, ಬರಹ–ನಾನಾ ರೀತಿ ಕ್ರಿಯಾಶೀಲರಾಗಿ ಸಹಕರಿಸಿದ್ದಾರೆ. ಐ.ಎ.ಎಸ್. ಕೆ.ಎ.ಎಸ್. ತರಗತಿಗಳಲ್ಲಿ ಕನ್ನಡ ಬೋಧನೆ ಮಾತ್ರವಲ್ಲದೇ ಅವರ ಪುತ್ರಿ ಕ್ಷಮಾ ಅವರಿರುವ ಅಮೇರಿಕೆಗೆ ಹೋದಾಗಲೂ ಅಲ್ಲೂ ಕನ್ನಡ ಸಂಘಸಂಸ್ಥೆಗಳಲ್ಲಿ ತಮ್ಮ ಅಭಿರುಚಿ, ಆಸಕ್ತಿಯ ಕನ್ನಡ ಕಳಕಳಿಯನ್ನು ಉಪನ್ಯಾಸ ನೀಡಿ ತೋರಿದ್ದಾರೆ.

ಅನಾಜಿಯವರಿಗೆ ಅವರ ಅವಿರತ ಕನ್ನಡ ಕೈಂಕರ್ಯಕ್ಕಾಗಿ ಅನೇಕ ಪ್ರಶಸ್ತಿಗಳು ಬಂದಿವೆ. 'ಕುವೆಂಪುಶ್ರೀ ಪ್ರಶಸ್ತಿ'ಯಿಂದ ಮೊದಲುಗೊಂಡು 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ'ಯವರೆಗೂ ಹಲವು ಪ್ರಶಸ್ತಿಗಳಿದ್ದು ಈಚೆಗೆ ದಾಸಸಾಹಿತ್ಯದ ಅವರ ಕಾರ್ಯಕ್ಕೆ 'ಪರಿಮಳ ಪ್ರಶಸ್ತಿ'ಯೂ ಅವರಿಗೆ ಲಭಿಸಿದೆ. ಅನೇಕ ಸನ್ಮಾನಗಳಿಗೆ ಅವರು ಭಾಜನರಾಗಿದ್ದಾರೆ. ಜೀವನವಿಡೀ ಕ್ನನಡಕ್ಕಾಗಿ ಕಾರ್ಯಮಗ್ನರಾಗಿ ಮನಸಾರೆ ತಮ್ಮನ್ನು ಅರ್ಪಿಸಿಕೊಂಡಿರುವ ಸಾಹಿತಿ, ಜಿ. ಅಶ್ವತ್ಥನಾರಾಯಣರ ಅವರ ಕನ್ನಡ ಸೇವೆ ಯುವಜನಾಂಗಕ್ಕೆ ಆದರ್ಶವಾಗಲಿ ಎಂಬುದೇ ನಮ್ಮ ಆಶಯ.

******

ಸ್ನೇಹಪರ ಆದರ್ಶಜೀವಿ

ಎಲ್.ಎಂ.ಎಲ್. ಶಾಸ್ತ್ರೀ
ಚರವಾಣಿ : ೯೪೮೮೯೮೯೪೨೦

ಅನಾಜಿ ಎಂದರೆ "ಅವರು ನಾ ಕಂಡ ಜಿತಜೀವಿ" ಎಂದು. ಸಾಹಿತ್ಯ ಅಧ್ಯಾಪಕರಾಗಿ, ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಲ್ಲಿ ಬಾಳಿನ ಉದ್ದಕ್ಕೂ ತೊಡಗಿಕೊಂಡು, ತಾವು ಒಳ್ಳೆಯ ಬದುಕನ್ನು ಕಟ್ಟಿಕೊಂಡು, ತನ್ನಂಥ ನೂರಾರು ವ್ಯಕ್ತಿತ್ವಗಳನ್ನು ರೂಪಿಸಿ, ಬದುಕನ್ನು ಗೆದ್ದು ಜಿತರಾದ ಗಣ್ಯರು. ಅವರ ಬಗ್ಗೆ, ಅವರ ಕೃತಿಗಳ ಬಗ್ಗೆ ಎರಡು ಮಾತು ಹೇಳುವುದೇ ಪುಣ್ಯಕಾರ್ಯವೆಂದು ಭಾವಿಸಿದ್ದೇನೆ.

ನಾನು ಶಿವಮೊಗ್ಗೆಯ ಡಿವಿಎಸ್ ಕಾಲೇಜಿನಲ್ಲಿ ೪೦ ವರ್ಷ ಕನ್ನಡ ಅಧ್ಯಾಪಕನಾಗಿದ್ದವನು. ಅನಾಜಿಯವರು ನನ್ನಂತೆ ಅಧ್ಯಾಪಕರು. ನನಗಿಂತ ೧ ವರ್ಷ ಹಿರಿಯರು. ಅವರ ಪರಿಚಯವಾಗಿ ಕೇವಲ ಒಂದು ವರ್ಷವಾಗಿತ್ತು. ತಮ್ಮ ಅಪಾರವಾದ ವಿದ್ವತ್ತು ಮತ್ತು ಲೋಕಾನುಭವದ ಕಾರಣದಿಂದ ಅದೆಷ್ಟು ಪ್ರಭಾವ ಬೀರಿದ್ದರೆಂದರೆ ಅವರನ್ನು ನನ್ನ ಹಿರಿಯ ಮಿತ್ರನೆಂದು ಪರಿಗಣಿಸದೆ ಗುರುವೆಂದೇ ಭಾವಿಸಿ ವ್ಯವಹರಿಸಿದ್ದೇನೆ. ಅಷ್ಟು ಪ್ರಭಾವಿತನಾಗಲು ೨ ಕಾರಣ: ಮೊದಲನೆಯದು ಅವರು ಒಳ್ಳೆಯ ವಾಗ್ಮಿ. ಅವರು ಮಾತಾಡುತ್ತಿದ್ದರೆ ನಾನು ಬರೀ ಕೇಳುಗ ಆಗಿರುತ್ತಿದ್ದನಷ್ಟೆ. ೨ನೆಯದು ಅವರ ಸಾಹಿತ್ಯ ಶಕ್ತಿ, ಸಾಹಿತ್ಯಾಸಕ್ತಿ.

೨೦ ವರ್ಷಗಳ ಹಿಂದೆ ಪ್ರಕಟವಾಗಿದ್ದ ನನ್ನ 'ವಿರಾಟಪರ್ವ ದೀಪಿಕೆ' ಕೃತಿಯನ್ನು ಆಗ ಓದಿದ್ದವರು ಈಗ ಪೂರ್ಣ ನೆನಪಿಸಿಕೊಂಡರು. ಎಂಥ ಅದ್ಭುತ! ಅನಾಮಿಕನ ಒಂದು ಕೃತಿಯನ್ನು ೨ ದಶಕಗಳ ಕಾಲದ ನಂತರ ಈಗ ನೆನಪಿಸಿಕೊಂಡು ಗೌರವದ ಮಾತನ್ನಾಡುವುದು! ಉಳಿದ ಭಾಗ ಬರೆಯಲಿಲ್ಲ ಏಕೆ? ಮುಗಿಸಿಕೊಡಿ ಎಂದು ಹುರಿದುಂಬಿಸಿದುದು ನನಗೆ ವಿಸ್ಮಯದ ಸಂಗತಿಯಾಯಿತು. ಕಾರಂತ, ಭೈರಪ್ಪರ ಒಂದು ಕೃತಿಯನ್ನು ನಾವು ಓದಿದರೆ ಮತ್ತೆ ಮರೆಯುವದಿಲ್ಲ. ಇದಕ್ಕೆ ಕಾರಣ ಆ ವ್ಯಕ್ತಿಗಳ ಬಗ್ಗೆ ನಮಗಿರುವ ಗೌರವಾದರ. ಆ ವ್ಯಕ್ತಿಗಳು ನಮ್ಮ ಮೇಲೆ ಬೀರಿರುವ ಪ್ರಭಾವ ಮತ್ತು ನಾವು ಕಂಡುಕೊಂಡ ಆ ಲೇಖಕರ ವಿಶ್ವರೂಪ! ಆದರೆ ನಾನು ಮೊದಲ ಬಾರಿಗೆ ಅವರನ್ನು ಕಂಡಾಗ ಹೀಗೆ ನನ್ನ ಕೃತಿ ಜ್ಞಾಪಿಸಿಕೊಂಡದ್ದು, ಹಾಗೆ ಇನ್ನೂ ಬರೆಯಿರಿ ಎಂದದ್ದು ಅವರ ಸಾಹಿತ್ಯಾಸಕ್ತಿಯ ಮತ್ತು ಸಜ್ಜನಿಕೆಯ ದ್ಯೋತಕ. ಅವರ ಮಾತನ್ನು ಗೌರವಿಸಿ ನಾನು 'ಕುಮಾರವ್ಯಾಸ ರಸವೈಭವ' ಕೃತಿಯನ್ನು ರಚಿಸಿದ್ದು. ಇದೇ ಡಿಸೆಂಬರ್‌ನಲ್ಲಿ ಬಿಡುಗಡೆಯಾಗಲಿದೆ.

ಅನಾಜಿಯವರ ಹಿರಿಮೆಯನ್ನು ಕೇಳಿ ತಿಳಿದಿದ್ದ ನಾನು ನನ್ನ 'ವ್ಯುತ್ಪತ್ತಿ ಚತುಷ್ಟಯೀ' ಕೃತಿಗೆ, ಶಬ್ದಮಣಿ ದರ್ಪಣದ ವ್ಯಾಖ್ಯಾನ ಗ್ರಂಥಕ್ಕೆ ಮುನ್ನುಡಿ ಬರೆದು ಕೊಡುವಂತೆ ಕೋರಿದೆ. ಈ ಕೃತಿಯು ಹಳಗನ್ನಡದ ೪ ವ್ಯಾಕರಣಗಳ ಗ್ರಂಥಗಳಾದ ಶಬ್ದಮಣಿದರ್ಪಣದ, ಶಬ್ದಾನುಶಾಸನ, ಭಾಷಾಭೂಷಣ

ಮತ್ತು ಶಬ್ದಸ್ಮೃತಿಗಳ ತೌಲನಿಕ ಕೃತಿ. ಈ ಎಲ್ಲಾ ಕೃತಿಗಳನ್ನು ಆಳವಾಗಿ ಅಭ್ಯಾಸಮಾಡಿರುವವರಿಂದ ಮುನ್ನುಡಿ ಬರೆಸಿಕೊಡುತ್ತೇನೆ ಎಂದರು. ನಾನು ಒಪ್ಪಲಿಲ್ಲ. ಎಂಥ ಸ್ನೇಹಜೀವಿ ಎಂದರೆ ಒತ್ತಾಯಕ್ಕೆ ಕಟ್ಟು ಬಿದ್ದೂ, ಹಟತೊಟ್ಟು ಬರೆದೇ ಕೊಟ್ಟರು! ಈ ಸಜ್ಜನಿಕೆ ನನ್ನ ಮೇಲೆ ತುಂಬಾ ಪ್ರಭಾವ ಬೀರಿತು.

ಅನಾಜಿಯವರು ಪ್ರಕಟಿಸಿರುವ ಗ್ರಂಥಗಳನ್ನೆಲ್ಲಾ ಓದಿದ್ದೇನೆ. ನಾನು ಇಷ್ಟಪಟ್ಟ ಒಂದೆರಡು ಕೃತಿಗಳ ಬಗ್ಗೆ ಹೇಳದೆ ಇರಲಾರೆ. ಮಹಾಲಿಂಗರಂಗ ಮತ್ತು ಹೊಸಕೆರೆ ಚಿದಂಬರಯ್ಯರು ನನಗೆ ಪ್ರಿಯರಾದ ಲೇಖಕರು. ಅನಾಜಿಯವರಿಗೂ ಇವರ ಬಗ್ಗೆ ವಿಶೇಷ ಮಮತೆ, ಗೌರವ. ಮಹಾಲಿಂಗರಂಗನ 'ಅನುಭವಾಮೃತ' ಕೃತಿಯು ಅದ್ವೈತ ದರ್ಶನ ಕುರಿತಾದ ಮಹತ್ವದ ಕೃತಿ. ಕನ್ನಡ ಸಾಹಿತ್ಯ ಪರಿಷತ್ ಮೂಲಕ ಪ್ರಕಟವಾಗಿರುವ ಈ ಕೃತಿಯನ್ನು ಬಿದರಹಳ್ಳಿ ನರಸಿಂಹಮೂರ್ತಿಯವರು ಸಂಪಾದಿಸಿದ್ದಾರೆ. ಈ ಕೃತಿಯನ್ನು ಕುರಿತು ಒಂದು ಒಳ್ಳೆಯ ವಿಮರ್ಶಾಕೃತಿಯನ್ನು ಕೆ. ಕೃಷ್ಣಮೂರ್ತಿಯವರು ಪ್ರಕಟಿಸಿದ್ದಾರೆ. ಅವರಿಟ್ಟ ಹೆಸರು 'ಅನುಭವಾಮೃತ ದರ್ಶನ' ತುಂಬಾ ಉಪಯುಕ್ತ ಕೃತಿ ಇದು.

ಅನುಭವಾಮೃತವನ್ನು ನಾನು ನಾಡಿನ ಹಲವೆಡೆ ವ್ಯಾಖ್ಯಾನ ಮಾಡಿದ್ದೇನೆ. ನನ್ನ ಜೊತೆ ಮತ್ತೂರಿನ ಸಂಸ್ಕೃತ ವಿದ್ವಾಂಸರಾದ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು ನನ್ನೊಡನೆ ಸಹಕರಿಸಿ ಜೊತೆಜೊತೆಯಲ್ಲಿ ಬಂದು ಶಂಕರ ಸಿದ್ಧಾಂತವನ್ನು ಸರಳವಾಗಿ ಪರಿಚಯಿಸಿದ್ದಾರೆ. ಇದರಿಂದ ನನಗಾದ ಒಟ್ಟಾರೆ ಅನುಭವ 'ಈ ಕೃತಿ ಕಬ್ಬಿಣದ ಕಡಲೆಯಲ್ಲ' ಎಂಬುದು. ಈ ಕೃತಿಯ ಬಗ್ಗೆ ಅನಾಜಿಯವರ ಮಾತುಗಳನ್ನು ಕೇಳಿ ಮುಗ್ಧನಾಗಿದ್ದೇನೆ. ಮಹಲಿಂಗರಂಗನ ಷಟ್ಪದಿ ಪದ್ಯವನ್ನು ಸರಳ ಗದ್ಯರೂಪದಲ್ಲಿ ನಾನು ಅನುವಾದ ಮಾಡಿ ಕೊಟ್ಟದ್ದನ್ನು ಗಮನಿಸಿದ ಅನಾಜಿಯವರು ಹೇಳಿದ್ದು: "ಮೂಲರೂಪದಲ್ಲಿಯೇ ಇರಬೇಕು. ಅದು ಶಾಸ್ತ್ರ ಶುದ್ಧ ಬರವಣಿಗೆಯ ಕ್ರಮ, ಎಂದು ಆಕ್ಷೇಪಿಸಿದರು. ಅವರ ಈ ದೃಷ್ಟಿಕೋನ ನನಗೆ ಮೆಚ್ಚುಗೆಯಾಯಿತು.

ಅನಾಜಿಯವರು ಸಂಪಾದಿಸಿರುವ ಕೃತಿಗಳಲ್ಲಿ 'ಅನುಭವಾಮೃತ ಟೀಕೆ' ಕೃತಿಯು ಬಹು ವಿಶಿಷ್ಟವಾದುದು. ಈ ಕೃತಿಯನ್ನು ಕರಗತ ಮಾಡಿಕೊಳ್ಳಲು ಅಪಾರವಾದ ವಿದ್ವತ್ತು ಮತ್ತು ಸಂಸ್ಕೃತ ಸಾಹಿತ್ಯದ ಪರಿಚಯವೂ ಬೇಕು. ಪೂಜ್ಯರು ಇದನ್ನು ಸವಿದಂತೆ ಚಿದಂಬರಯ್ಯನವರನ್ನು ಕೂಡ ಇಷ್ಟಪಟ್ಟು ಸ್ವೀಕರಿಸಿ ಪಾಂಡಿತ್ಯಗಳಿಸಿದರೆಂಬುದು ಗಮನಾರ್ಹವಾದದ್ದು. ಈ ಹಿನ್ನಲೆಯಲ್ಲಿ ಅನಾಜಿಯವರ ಮನಃಪ್ರವೃತ್ತಿಯನ್ನು ಮತ್ತು ಧರ್ಮದ ಹಿನ್ನೆಲೆಯಲ್ಲಿ ಅನಾಜಿಯವರ ಮನಃಪ್ರವೃತ್ತಿಯನ್ನು ಸಾಹಿತ್ಯದ ಬಗ್ಗೆ ಆದರ ಭಾವ ಇರುವುದು ಕೂಡ ವಿಶಿಷ್ಟವಾದದ್ದೇ. ಅವರು ಪರಿಚಯಿಸಿರುವ, ನಾಡಿನ ಹಿರಿಯ ಗಣ್ಯ ಸಾಹಿತಿಗಳ ಪರಿಚಯಾತ್ಮಕ ಲೇಖನಗಳ ಕೃತಿಯ ಓದಿನಿಂದ ಕೂಡ ಅವರ ಆಸಕ್ತಿಯ ಕ್ಷೇತ್ರ ವಿಸ್ತಾರದ ಅರಿವೂ ಆಗುತ್ತದೆ.

ಅನಾಜಿಯವರು ರಾಜ್ಯ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ದಶಕಗಳ ಕಾಲ ಸೇವೆ ಸಲ್ಲಿಸಿ ಅಸಾಧಾರಣವಾದ ಓದು, ಅದ್ಭುತ ನೆನಪಿನ ಶಕ್ತಿ, ಕ್ರಿಯಾಶೀಲತೆ ಇರುವ ಇವರು ಖಾಸಗಿಯಾಗಿ ಬೆಳೆಸಿಕೊಂಡಿರುವ ಗ್ರಂಥ ಭಂಡಾರವು ಹಲವು ಹತ್ತು ಸಹಸ್ರಗಳಷ್ಟಿವೆ. ಅಲ್ಲದೇ ಅಪೂರ್ವ ಗ್ರಂಥಗಳ ಸಂಚಯವೂ ಇದೆ. ಅವರು ಶಿಷ್ಯವತ್ಸಲರು ಮಾತ್ರವಲ್ಲ. ಮಿತ್ರವತ್ಸಲರೂ ಹೌದು. ಹಿರಿಯ ಸಾಹಿತಿಗಳ ಮಾರ್ಗದರ್ಶನದಲ್ಲಿ ಬೆಳೆದು ತಾವೂ ಹಿರಿಯರಾದವರೂ ಹೌದು! ಕಂಚಿನಕಂಠದ ಪ್ರವಚನಕಾರ. ಬಾನುಲಿ, ದೂರದರ್ಶನಗಳಲ್ಲಿ ನೂರಾರು ಕಾರ್ಯಕ್ರಮಗಳನ್ನು ನೀಡಿ ಜನಮಾನಸವನ್ನು ಗೆದ್ದವರು. ಕಿರಿಯರಿಗೆ ಮುಕ್ತವಾಗಿ ಸಲಹೆ ಸೂಚನೆ ಮಾರ್ಗದರ್ಶನ ನೀಡುತ್ತ ಬಂದ ಉದಾರಿ. ಅನ್ಯರ ಬೆಳವಣಿಗೆಯಲ್ಲಿ ಸಂತೋಷ ಕಾಣುತ್ತ ಹಿರಿಯರೆನಿಸಿದವರು.

ಅನಾಜಿಯವರ ಕೃತಿಗಳಲ್ಲಿ ನನಗೆ ಹೆಚ್ಚು ಪ್ರಿಯವಾದದ್ದು 'ಕರಡಚ್ಚು ತಿದ್ದುಪಡಿ' ಇದು ಕನ್ನಡದಲ್ಲಿ ಬರೆಯುವ ಎಲ್ಲರಿಗೂ ಮಾರ್ಗದರ್ಶನ ನೀಡುತ್ತ ಬಂದ ಆಚಾರ್ಯ ಕೃತಿ. ಸುಮಾರು ದಿನಕ್ಕೊಂದರಂತೆ ಅಚ್ಚಾಗುತ್ತಿರುವ 'ಕನ್ನಡ ಪುಸ್ತಕ ಲೋಕವು' ಹಾದಿ ತಪ್ಪದಂತೆ ಕಾಯುವ ಪೋಲಿಸ್ ಕೆಲಸ ಮಾಡುವ ಮಾರ್ಗದರ್ಶಕ ಕೃತಿ. ನಾನು ಬಿ.ಎಡ್. ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದ ಕಾಲದ ಒಂದು ಅನುಭವ ಹೇಳುತ್ತೇನೆ. ನನ್ನ ವಿದ್ಯಾರ್ಥಿಯೊಬ್ಬ ಶಿಕ್ಷಕ ಕಪ್ಪು ಹಲಗೆಯ ಮೇಲೆ ತಪ್ಪಾಗಿ ಕನ್ನಡ ಪದಗಳನ್ನು ಬರೆದಾಗ, ಈ ವಿಚಾರ ಆಡಳಿತ ಮಂಡಳಿಯ ಗಮನಕ್ಕೆ ಬಂದು ಇದಕ್ಕೆ ನನ್ನನ್ನು ಆಕ್ಷೇಪಿಸಿತು. ನನ್ನ ಉತ್ತರ: "ಕಾಗುಣಿತದ ತಪ್ಪುಗಳಿಗೆ ಅಂಕವನ್ನು ಕಳೆದರೆ ಕರ್ನಾಟಕದಲ್ಲಿ ಯಾವ ವಿದ್ಯಾರ್ಥಿಯೂ ತೇರ್ಗಡೆಯಾಗಲಾರ." ವಿದ್ಯಾರ್ಥಿಗಳು ಬೆಳೆದು ಬಂದ ದಾರಿಯೇ ಹಾಗಿದೆ ಅಂತ. ನನ್ನ ತಪ್ಪನ್ನು ಮುಚ್ಚಿಟ್ಟು ಕೊಳ್ಳುವ ಮಾತು ಇದಾಗಿರಲಿಲ್ಲ. ಮೊದಲ ಹಂತದಿಂದ ವಿದ್ಯಾರ್ಥಿ ಬೆಳೆದು ಬಂದ ಹಾದಿಯ ದರ್ಶನವಿದು. ಈ ಗಾಢವಾದ ಅನುಭವ ತಮ್ಮದಾದ್ದರಿಂದ ಅನಾಜಿಯವರು 'ತಿದ್ದುಪಡಿ' ಗ್ರಂಥವನ್ನು ರಚಿಸಬೇಕಾಯಿತು.

ನಾನು ಬಿ.ಎಡ್. ಓದುವ ಕಾಲಕ್ಕೆ ಒಂದು ಪ್ರಾಜೆಕ್ಟ್ ತಗೊಂಡಿದ್ದ 'Abode of spelling devil' ಎಂಬ ಪ್ರಬಂಧ ರಚನೆಯ ಪ್ರಾಜೆಕ್ಟ್. ಶಿವಮೊಗ್ಗ ತಾಲ್ಲೂಕಿನಲ್ಲಿ ೨೫೦೦೦ ೯ನೇ ತರಗತಿ ವಿದ್ಯಾರ್ಥಿಗಳಿಗೆ ೧೦೦ ಪದಗಳ ಒಂದು ಕಾಗುಣಿತದ ಪರೀಕ್ಷೆ ನಡೆಸಿದೆ. ಪದಗಳನ್ನು ವಾಕ್ಯದಲ್ಲಿ ಬಳಸಿ ಉಚ್ಚರಿಸಿ ಶುದ್ಧರೂಪ ಅರಿವಾಗುವಂತೆ ಉಕ್ತಲೇಖನ ಹೇಳಿ ಬರೆಸಿದೆ. ಸಮೀಕ್ಷೆಯ ಫಲಿತವು ಭಯಂಕರವಾಗಿತ್ತು. ನೂರಕ್ಕೆ ನೂರರಷ್ಟು ನಪಾಸಾಗಿದ್ದರು. ಕೃಷ್ಣ ಎಂಬ ಪದವನ್ನು ಶೇ ೬೭% ರಷ್ಟು ಮಕ್ಕಳು ತಪ್ಪಾಗಿ ಬರೆದಿದ್ದರು. ಆಡು ಪದವನ್ನು ಶೇ ೧೮% ರಷ್ಟು ಮಕ್ಕಳು 'ಅಂಡು' ಎಂದು ಬರೆದಿದ್ದರು! ಹೀಗೇ ಬೆಳೆದು ಬಂದ ಈ ಮಕ್ಕಳೇ ಬಿ.ಎಡ್. ಕಾಲೇಜಿನಲ್ಲಿ ನನಗೆ ಸಿಕ್ಕಿದಷ್ಟು ಮತ್ತು ಮುಂದೆ ಹೈಸ್ಕೂಲಿನಲ್ಲಿ ಕನ್ನಡ ಶಿಕ್ಷಕರಾಗಿ ನಿವೃತ್ತರಾದರು! ಇದರರ್ಥವೇನು? ನಾನು ಹಳಿ ತಪ್ಪಿದ್ದೆಲ್ಲಿ?

ಕಾಗುಣಿತವೆಂಬುದು ಬೆರಳಿಗೆ ಮಾಡಿಸುವ ಅಭ್ಯಾಸ. ಆದರೆ ೨ ಪದ ಕೊಟ್ಟು ಸರಿ ತಪ್ಪು ಹೇಳಿ ಎಂದಾಗ ಬಹಳ ಜನಕ್ಕೆ ಗಡಿಬಿಡಿಯಾಗುತ್ತದೆ. ಉದಾ: ಗದಾಯುದ್ಧ-ಗಧಾಯುದ್ಧ. ಗಧಾಯುದ್ಧ-ಗದಾಯುದ್ಧ. ಇವುಗಳಲ್ಲಿ ಯಾವುದು ಸರಿ? ಎರಡು- ಎರೆಡು, ಚಿನ್ಹೆ-ಚಿಹ್ನೆ, ಪ್ರಹ್ಲಾದ-ಪ್ರಲ್ಹಾದ, ಸ್ವಚ್ಛ-ಸ್ವಚ್ಚ, ಪ್ರಭಾವಳಿ-ಪ್ರಬಾವಳಿಗಳಲ್ಲಿ ಯಾವುದು ಸರಿ? ಎಂದಾಗ ಗಡಿಬಿಡಿಯಾಗುವುದುಂಟು. ಇಂತಹ ಸಂದೇಹಗಳಿಗೊಂದು ಮಾರ್ಗದರ್ಶಕ ಕೃತಿಯಾಗಿ ಅನಾಜಿಯವರ ಪುಸ್ತಕ ಹೊರ ಬಂದಿದೆ. ಈಚೆಗೆ ಇನ್ನೂ ಕೆಲವರು ಪ್ರಕಟಿಸಿರುವುದು ಖುಷಿಯ ಸಂಗತಿಯಾಗಿದೆ.

"ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು" ಕೃತಿಯು ಬಹು ಶ್ಲಾಘನೀಯವಾದದ್ದು. ಇದರಲ್ಲಿ ೧೨ ಜನ ಕಳೆದ ಶತಮಾನದ ಸಾಹಿತಿಗಳ ಪರಿಚಯ ಲೇಖನವಿದೆ. ಇದಕ್ಕೆ ಹಿಂದೆಯೂ ಇಂಥ ಕೃತಿಯೊಂದನ್ನು ಪ್ರಕಟಿಸಿ ೧೨ ಜನರನ್ನು ಪರಿಚಯಿಸಿದ್ದಾರೆ. ನಮಗೆ ದಂತಕತೆಯಾಗಿರುವ ಎ.ಆರ್. ಕೃ, ತೀನಂಶ್ರೀ ಅಂಥವರು ಮತ್ತೊಮ್ಮೆ ನಮ್ಮ ನಡುವೆ ಕಾಣಿಸುವಂಥಾಗಿದೆ! ಅವರ ಒಡನಾಟ ಪಡೆದ ಅನಾಜಿಯವರ ಪುಣ್ಯ ಅಪೂರ್ವವಾದದ್ದು. ಸದಾ ಸ್ಮರಣೀಯರಾದ ಈ ೨೧ ಜನ ಸಾಹಿತಿಗಳು ಎಂದೂ ಅಳಿಯದಂತೆ ನಮ್ಮ ಮಾನಸದಲ್ಲಿ ಉಳಿಯುವಂತೆ ಘನ ಕಾರ್ಯವನ್ನು ಅನಾಜಿಯವರು ಮಾಡಿದ್ದಾರೆ. ಪರಿಚಯವು ಸಂಕ್ಷಿಪ್ತವಾಗಿದ್ದರೂ ಪರಿಪೂರ್ಣವಾಗಿದೆ. ವ್ಯಕ್ತಿಗಳ ಪರಿಚಯಕ್ಕಿಂತ ಮಿಗಿಲಾಗಿ ವ್ಯಕ್ತಿತ್ವದ ಪರಿಚಯವು ಬಹು ಪರಿಣಾಮಕಾರಿಯಾಗಿದೆ. ಅವರೊಡನೆ ಒಡನಾಡಿದ ಅನಾಜಿ ಧನ್ಯರು! ಓದಿ ತಣಿದ ನಾವು ಕೃತಕೃತ್ಯರು!

'ಪದ್ಮನಾಭ ಶರ್ಮ, ಭುವನಹಳ್ಳಿ' ಅವರು ಎಷ್ಟು ಜನಕ್ಕೆ ಗೊತ್ತು? ಆದರೆ ಇಲ್ಲಿ ಅವರ ಬಗ್ಗೆ ಓದಿದಾಗ ಎಷ್ಟು ದೊಡ್ಡ ವಿದ್ವಾಂಸರೆಂದು ವಿಸ್ಮಯ ಮಾಡುವುದಲ್ಲದೆ ಇಂಥವರ ಪರಿಚಯವಿಲ್ಲದ ನಮ್ಮ ಅಜ್ಞತೆಗೆ ಮುಜುಗರ ಆಗುತ್ತದೆ. ಆದರೂ ಅಭಿಮಾನದಿಂದ ಮನಸ್ಸಿನಲ್ಲಿ ದಾಖಲು ಆಗುತ್ತದೆ ಕೂಡ. ಶಬ್ದಾನುಶಾಸನವನ್ನು ತಲಸ್ಪರ್ಶಿಯಾಗಿ ಕರಗತ ಮಾಡಿಕೊಂಡಿದ್ದವರು ನನಗೆ ತಿಳಿದಂತೆ-ಇವರೊಬ್ಬರೇ! ನನ್ನ ಬಾಲ್ಯದಲ್ಲಿ ಇವರಿಂದ ಈ ಕೃತಿಯ ಬಗೆಗೆ ಆಸಕ್ತಿ ಮತ್ತು ಮಾರ್ಗದರ್ಶನವನ್ನು ಪಡೆದದ್ದು ಇಂದಿಗೂ ಹಸಿಹಸಿಯಾಗಿದೆ. ಅವರ ಬರವಣಿಗೆಯಲ್ಲಿ ಅನಗತ್ಯ ಸಂಸ್ಕೃತ ಪಾರಮ್ಯ ವಿಜೃಂಭಿಸದೆ ಸಮತೋಲನ ಕಾದಿದ್ದಾರೆ ಶರ್ಮರು!

ಅನಾಜಿಯವರಿಗೆ ಖುಷಿಕೊಟ್ಟ ಸಂಗತಿಯೆಂದರೆ ಈ ಮಹನೀಯರ ಪರಿಚಯದಿಂದ ಅವರ ಸಾಹಿತ್ಯ ಕೃತಿಗಳಿಗಿಂತ ಹೆಚ್ಚಾಗಿ ಅವರ ಗುಣಶೀಲ ಸ್ವಭಾವದಿಂದ ತಾವು ಪವಿತ್ರಾತ್ಮರಾದದ್ದು. ಒಂದು ಉದಾಹರಣೆ: ಒಮ್ಮೆ ಮಾಸ್ತಿಯವರು ಅತಿಥಿಯಾಗಿ ದೇವನೂರಿಗೆ ಬಂದ ಸಂದರ್ಭ ಊರ ಗೌಡ ಹಾಲನ್ನಿತ್ತು ಸತ್ಕರಿಸಿದ. ಹಿಂತಿರುಗುವ ಮುನ್ನ ಆ ಹಾಲಿನ ಮೌಲ್ಯ (೨೫ ಪೈಸೆ) ವನ್ನು ಗೌಡನಿಗೆ ನೀಡಲು ಹೋದರು. ಆ ಹಣ ಪಡೆಯುವಷ್ಟು ಅಸಂಸ್ಕೃತನಲ್ಲ ಗೌಡ. ಯಾರೂ ಸೋಲಲೊಲ್ಲರು. ಕಡೆಗೆ ದೇವರ ಕಾಣಿಕೆ ಹುಂಡಿಗೆ ಹಾಕಬೇಕೆಂದು ಮೂರನೆಯವರು ಮಧ್ಯಸ್ಥಿಕೆ ಮಾಡಿದರು! ಸರ್ಕಾರಿ ಕೆಲಸಕ್ಕೆ ಹೋದಾಗ ಹೀಗೆ ಖಾಸಗಿ ಸತ್ಕಾರ ಪಡೆಯಬಾರದೆಂಬ ನೀತಿ (ರೀತಿ) ನಮ್ಮ ಮಂತ್ರಿಗಳಿಗೆಷ್ಟಿದೆ? ಈ ಸಂದರ್ಭದಲ್ಲಿ ಎರಡೂ ಪಕ್ಷದವರ ನಡವಳಿಯು ನಮಗೆ ಆದರ್ಶ! ಇಬ್ಬರೂ ಸರಿ. ಇನ್ನೊಂದು ಸಂಗತಿ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಮಾಸ್ತಿಯವರು ಸಮಿತಿಯ ಕೆಲಸಕ್ಕೆ ಹೋದಾಗ ನಿಯಮದಂತೆ ಪ್ರಯಾಣಭತ್ಯೆ ಪಡೆಯಲು ನಿರಾಕರಿಸಿದ್ದರಂತೆ. ಅನಾಜಿ ಒತ್ತಾಯಿಸಿದರೂ ಫಲಿತವಾಗಲಿಲ್ಲ. ನಿಯಮ ಭಂಗ ಆಗ ಬಾರದೆಂಬ ಅನಾಜಿಯವರ ವಾದಕ್ಕೆ ಮಣಿದು ಮಾಸ್ತಿಯವರು ಓಚರ್‌ಗೆ ರುಜು ಮಾಡಿದರಂತೆ ಮತ್ತು ಆ ಹಣದಿಂದ ಒಂದು ಪುಸ್ತಕ ಕೊಂಡು ಪರಿಷತ್ತಿನ ಲೈಬ್ರರಿಗೆ ಸೇರಿಸಿದರಂತೆ! ಇದಲ್ಲವೆ ಆದರ್ಶ!

ಹೀಗೆ ಇಲ್ಲಿನ ಹಿರಿಯರೆಲ್ಲರೂ ಒಂದಲ್ಲ ಒಂದು ಕಾರಣಕ್ಕೆ ನಮ್ಮ ನೆನಪಿನಲ್ಲಿ ಉಳಿಯುವುದು ಮಾತ್ರವಲ್ಲ ನಮ್ಮ ನಡವಳಿಯ ವಿಷಯದಲ್ಲಿ ಪರೋಕ್ಷವಾಗಿ ಪ್ರಭಾವವನ್ನು ಬೀರಿದವರೇ.

ನವರತ್ನ ರಾಮರಾಯರು ಚಿಕ್ಕಂದಿನಲ್ಲಿ ಸ್ವಲ್ಪ ತುಂಟರು. ಆದರೆ ಸತ್ಯಸಂಧರೂ ಪ್ರಾಮಾಣಿಕರೂ ಆಗಿದ್ದವರು. ಒಮ್ಮೆ ತಮ್ಮದಲ್ಲದ ತಪ್ಪಿಗೆ ಅಧ್ಯಾಪಕರು ಬೆಂಚಿನ ಮೇಲೆ ನಿಲ್ಲುವಂತೆ ಹೇಳಿದಾಗ ೧೦ರ ಕಿಶೋರ ನಿರಾಕರಿಸಿದರಂತೆ. ಮುಖ್ಯೋಪಾಧ್ಯಾಯರಿಗೆ ಸಂಗತಿ ತಿಳಿದಾಗ 'ನಾಳೆಯಿಂದ ಶಾಲೆಗೆ ಬರಬೇಡ' ಅಂದರಂತೆ. ಅಭಿಮಾನಿ ರಾಮರಾಯರು ಬೇಡಲಿಲ್ಲ. ಬೇರೆ ಶಾಲೆಗೆ ಸೇರಿದರು! ಮುಂದೆ ಅಪಾರ ಪರಿಶ್ರಮದಿಂದ ಓದಿ ಒಳ್ಳೆಯ ಕೆಲಸ ಗಳಿಸಿದರು. ಅವರು ಅಮಾಲ್ದಾರರಾಗಿದ್ದಾಗಿನ ಒಂದು ಘಟನೆ. ಅವರು ಕಾರಿನಲ್ಲಿ ಪ್ರಯಾಣ ಮಾಡುವಾಗ ರೇಡಿಯೇಟರ್‌ನಲ್ಲಿ ನೀರು ಕಡಿಮೆ ಆಗಿ ಸಮೀಪದ ಬಾವಿ ಬಳಿ ಹೋಗಿ ನೀರು ಕೇಳಿದರು. 'ಗೇರುದಡ' ಅಂತ ಗ್ರಾಮ, ಭಾವಿ ಬಳಿ ಮಹಿಳೆಯಿಂದ ಬಿಂದಿಗೆ ನೀರು ಪಡೆದರು ಮತ್ತು ಅದಕ್ಕಾಗಿ ೧೦ ರೂ ಕೊಡಲು ಹೋದರು. ಹೆಂಗಸು ಹಣ ನಿರಾಕರಿಸಿದ್ದಲ್ಲದೆ ಹಣ ಪಡೆಯಲು ನಾವು ಪೇಟೆ ಮಂದಿಗೆ ಕೆಟ್ಟು ಹೋದೆವೆ? ಅಂದರಂತೆ. ಒತ್ತಾಯಿಸಿದಾಗ ಬಂದ ಉತ್ತರ: "ಸ್ವಾಮಿ, ನಮ್ಮ ಭಂಗ ಕಂಡು ಸುಬೇದಾರರು ನವರತ್ನ ರಾಮರಾಯರು ಬಾವಿ ತೆಗೆಸಿ ನೀರುಕೊಟ್ಟರು. ನೀವು ಈ ಹಣ ಅವರಿಗೆ ಕೊಡಿ" ಅಂದಳಂತೆ! ಕೇಳಿ ರಾಮರಾಯರಿಗೆ ಹೇಗಾಗಿರಬೇಡ!

******

ಮಕ್ಕಳ ಕೂಟದ ಹಳೆಯ ಕೊಂಡಿ

ಎಸ್. ವೆಂಕಟಾಚಲಂ
ಚರವಾಣಿ : ೯೩೪೩೭೩೩೦೭೯

ಪ್ರೊ|| ಜಿ. ಅಶ್ವತ್ಥನಾರಾಯಣ ಅವರು ಶ್ರೀಮತಿ ಆರ್. ಕಲ್ಯಾಣಮ್ಮನವರ ಜೊತೆಯಲ್ಲೇ ಮಕ್ಕಳ ಕೂಟಕ್ಕೆ ಶ್ರಮಿಸಿದ್ದಾರೆ. ಹಾಗೂ ಕಲ್ಯಾಣಮ್ಮನವರಿಗೆ ಮಕ್ಕಳಕೂಟದ ಏಳಿಗೆ ಬಗ್ಗೆ, ಸಲಹೆ ನೀಡುತ್ತಿದ್ದರು. ಕಾರ್ಯಕ್ರಮಗಳು ನಡೆಯಲು ಸೂಚನೆಗಳನ್ನು ಕೊಡುತ್ತಿದ್ದರು. ಕಲ್ಯಾಣಮ್ಮನವರು ಅನಾಜಿಯವರ ಸಲಹೆ ಸೂಚನೆಗಳನ್ನು ಪಾಲಿಸುತ್ತಿದ್ದರು.

ಮಕ್ಕಳಕೂಟದಲ್ಲಿ ಮಕ್ಕಳಿಗಾಗಿಯೇ ಬಾಲಜಗತ್ ಕಾರ್ಯಕ್ರಮವನ್ನು ಅಳವಡಿಸಿ ಅದರೆ ಬಗ್ಗೆ ಪ್ರತಿ ತಿಂಗಳ ೩ನೇ ಶನಿವಾರದಂದು ಸಂಜೆ ೪.೩೦ ರಿಂದ ೬.೦೦ ಗಂಟೆಯವರೆಗೆ ಹಾಡು, ನೃತ್ಯ, ಏಕಪಾತ್ರಾಭಿನಯ ಕತೆ ಹೇಳುವುದು ಮತ್ತು ಕವನ, ಒಗಟು ಬಿಡಿಸುವುದು ಮುಂತಾದ ಕಾರ್ಯಕ್ರಮಗಳನ್ನು ಕಲ್ಯಾಣಮ್ಮನವರ ಜೊತೆಯಲ್ಲಿದ್ದುಕೊಂಡು ನಡೆಸಿಕೊಡುತ್ತಿದ್ದರು. ಮಕ್ಕಳಿಗೆ ನೀತಿ ಬೋಧನೆಯ ಕತೆಗಳನ್ನು ಹೇಳುತ್ತಿದ್ದರು. ಮಕ್ಕಳು ಇಷ್ಟಪಟ್ಟು ಕತೆಗಳನ್ನು ಕೇಳುತ್ತಿದ್ದರು.

ಅನಂತರ ವಾರಕ್ಕೆ ಮೂರು ದಿನಗಳು ಸಂಜೆ ೫ ರಿಂದ ೬ ರವರೆಗೆ ಗ್ರಂಥಾಲಯಕ್ಕೆ ಭೇಟಿ ನೀಡುವ ಹಾಗೂ ಪುಸ್ತಕವನ್ನು ಓದುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮಕ್ಕಳಲ್ಲಿ ಸ್ಫೂರ್ತಿ ತುಂಬಿದರು. ಶ್ರೀಮತಿ ಆರ್.ಕಲ್ಯಾಣಮ್ಮನವರು ನಡೆಸುತ್ತಿದ್ದ ಮಕ್ಕಳ ಬಾವುಟ ಪುಸ್ತಕವನ್ನು ಅಶ್ವತ್ಥನಾರಾಯಣರವರಿಗೆ ನಡೆಸಲು ಬಿಟ್ಟು ಕೊಟ್ಟರು. ಒಂದೆರಡು ವರ್ಷದವರೆಗೆ ಮಕ್ಕಳ ಬಾವುಟ ಪುಸ್ತಕದಲ್ಲಿ ಮಕ್ಕಳಿಗೆ ಇಷ್ಟವಾಗುವಂತಹ ಕತೆಗಳನ್ನು, ಕವನ ಚುಟುಕಗಳನ್ನು ಪ್ರಕಟಿಸಿದರು.

ಅನಾಜಿಯವರು ಯಾವುದೇ ಪುಸ್ತಕವನ್ನು ಓದಲು ಪ್ರಾರಂಭಿಸಿದರೆ ಅದು ರಾತ್ರಿಯಾದರೂ ಸರಿ ಹಗಲಿನಲ್ಲಾದರೂ ಸರಿ ಪೂರ್ತಿ ಓದಿ ಮುಗಿಸುತ್ತಿದ್ದರು. ಹಾಗೂ ಮಕ್ಕಳ ಕೂಟದ ಬಗ್ಗೆ ಹೆಚ್ಚಿನ ವಿವರಗಳನ್ನು ಇತರರಿಗೆ ತಿಳಿಸುತ್ತಿದ್ದರು. ಕಲ್ಯಾಣಮ್ಮನವರು ಕೆಲಸದ ಒತ್ತಡವಿದ್ದಾಗ ಮಕ್ಕಳ ಕೂಟದ ಜವಾಬ್ದಾರಿಯನ್ನು ಅನಾಜಿಯವರಿಗೆ ವಹಿಸಿಕೊಡುತ್ತಿದ್ದರು.

ಈ ಇಳಿ ವಯಸ್ಸಿನಲ್ಲೂ ಅನಾಜಿಯವರು ಮಕ್ಕಳ ಕೂಟದ ಬಗ್ಗೆ ಅಭಿಮಾನ, ಕಾಳಜಿಯಿಂದ ಎಲ್ಲಾ ಕಾರ್ಯಕ್ರಮಗಳಿಗೂ ಆಗಮಿಸುತ್ತಾರೆ. ಹಾಗು ಮಕ್ಕಳ ಕೂಟದ ಪ್ರತಿತಿಂಗಳ ಖರ್ಚು ವೆಚ್ಚವನ್ನು ಧರಿಸಲು ಒಂದು ಶಾಶ್ವತ ನಿಧಿಯನ್ನು ಸ್ಥಾಪಿಸಲು ಸಲಹೆ ನೀಡಿ ತಾವೇ ಆ ನಿಧಿಗೆ ಮೊದಲು ಧನಸಹಾಯ ಮಾಡಿದ್ದಾರೆ.

ಇಂಥ ಒಬ್ಬ ಜ್ಞಾನಭಂಡಾರ ಅನಾಜಿಯವರಿಗೆ ಆ ಭಗವಂತನು ಆರೋಗ್ಯ; ಆಯಸ್ಸನ್ನು ನೀಡಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

****

ಆತ್ಮೀಯರಾದ ಹಿರಿಯ ಸಾಹಿತಿ

ರುಕ್ಮಿಣಿ ರಘುರಾಂ
ಚರವಾಣಿ : ೯೮೮೬೭೯೨೦೯೪

ಪ್ರೊ. ಅಶ್ವತ್ಥನಾರಾಯಣ ಅವರು ಕನ್ನಡ ಸಾಹಿತ್ಯವನ್ನು ಓದುವವರಿಗೆ ಮತ್ತು ಕನ್ನಡ ಬರವಣಿಗೆ ಮಾಡುವ ಲೇಖಕರಿಗೆ ಚಿರ ಪರಿಚಿತರು. ಯಾವುದೇ ಒಂದು ಲೇಖನವಾಗಲಿ ಪುಸ್ತಕವಾಗಲಿ ಅವರು ಒಮ್ಮೆ ನೋಡಿದ್ದಾರೆ, ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ ಎಂದರೆ ಅದು ಅಚ್ಚಿಗೆ ಹೋಗಬಹುದು ಎಂದೇ ಅರ್ಥ. ಮೂವತ್ತು ವರ್ಷ ಕನ್ನಡ ಆಧ್ಯಾಪಕರಾಗಿ ಸೇವೆ ಸಲ್ಲಿಸಿರುವುದು ಒಂದು ಅಪೂರ್ವವಾದ ಸಾಧನೆಯೇ ಸರಿ. ಆದರೆ ಇಲ್ಲಿ ಬರೀ ವರ್ಷಗಳ ಸಂಖ್ಯಾ ಬಾಹುಳ್ಯದ ಲೆಕ್ಕವಲ್ಲ, ತಮ್ಮ ಬೋಧನೆಯಿಂದ ಅಸಂಖ್ಯ ವಿದ್ಯಾರ್ಥಿಗಳು ಕನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳುವಂತೆ ಅವರ ಮೇಲೆ ಪ್ರಭಾವವನ್ನು ಬೀರಿದ್ದಾರೆ ಎಂಬುದು ಗಮನಾರ್ಹವಾದ ಸಂಗತಿ.ಇವರ ಶಿಷ್ಯರು ಅನೇಕರು ಕನ್ನಡದ ಹೆಸರಾಂತ ಲೇಖಕರಾಗಿ ಹೆಸರನ್ನೂ ಗಳಿಸಿದ್ದಾರೆ. ಈಗಲೂ ಬೆಂಗಳೂರಿನಲ್ಲಿ ನಡೆಯುವ ಅನೇಕ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಪಾಲ್ಗೊಂಡು ಲೇಖಕರ ಬಗ್ಗೆ ಒಳ್ಳೆಯ ಮಾತುಗಳನ್ನಾಡಿ ಅವರನ್ನು ಪ್ರೋತ್ಸಾಹಿಸುತ್ತಾರೆ.

ಬೆಂಗಳೂರಿನಲ್ಲಿರುವ ಬಿ.ಎಂ.ಶ್ರೀ. ಪ್ರತಿಷ್ಠಾನ, ಕರ್ನಾಟಕ ಗಮಕ ಕಲಾ ಸಂಸ್ಥೆ, ಕರ್ನಾಟಕ ಗಾನ ಕಲಾ ಪರಿಷತ್ತು ಸಂಸ್ಥೆಗಳಲ್ಲಿ ಸ್ಥಾಪಕ ಸದಸ್ಯರಾಗಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿ ಪರಿಷತ್ತಿನ ನೂರು ವರ್ಷಗಳ ಇತಿಹಾಸವನ್ನು ರಚಿಸಿದ್ದಾರೆ. ಹಾಗಾಗಿ ಇವರಿಗೆ ಸಾಹಿತ್ಯದ ಬಗ್ಗೆ ಬರೀ ಪ್ರೀತಿ ಮಾತ್ರವೇ ಅಲ್ಲದೆ ಸಂಶೋಧನೆಯಲ್ಲಿಯೂ ಅಪಾರವಾದ ಆಸಕ್ತಿ ಇದೆ. ಸಾಹಿತ್ಯ ಪರಿಷತ್ತಿನ ವಿಷಯವನ್ನು ತಿಳಿದುಕೊಳ್ಳುವವರಿಗೆ ಎಲ್ಲ ವಿಷಯಗಳು ಒಂದೇ ಕಡೆ ಲಭ್ಯವಾಗುವಂತೆ ಮಾಡಿರುವುದು ಕನ್ನಡ ಸಾಹಿತ್ಯಕ್ಕೆ ಅವರು ಸಲ್ಲಿಸಿರುವ ದೊಡ್ಡ ಕೊಡುಗೆ. ಅವರ ಸಾಹಿತ್ಯ ಸೇವೆಯನ್ನು ಗಮನಿಸಿದರೆ ಅದರಲ್ಲಿ ಸಮಗ್ರವಾಗಿರುವ ಜೀವನ ಚರಿತ್ರೆ, ದಾಸರ ಕೀರ್ತನೆಗಳು ಎಲ್ಲವೂ ಒಳಗೊಂಡಿದೆ. ಸಾಹಿತ್ಯಕ್ಕೆ ಮಾತ್ರವೇ ಸೀಮಿತವಾಗದೆ ಸೌಂದರ್ಯ ಲಹರಿ ಸ್ತೋತ್ರಕ್ಕೆ ಕೂಡ ಅನ್ವಯ ಅರ್ಥ ಮತ್ತು ತಾತ್ಪರ್ಯವನ್ನು ಬರೆದು ಅದನ್ನು ಪಾರಾಯಣ ಮಾಡುವವರಿಗೆ ಅರ್ಥವನ್ನು ತಿಳಿದುಕೊಂಡು ಓದುವಂತೆ ಅನುವು ಮಾಡಿಕೊಟ್ಟಿದ್ದಾರೆ.

ಪ್ರೊ. ಅಶ್ವತ್ಥನಾರಾಯಣ ಅವರಿಗೂ ನನ್ನ ತಂದೆ ಡಿ. ಆರ್. ವೆಂಕಟರಮಣನ್ ಅವರಿಗೂ ಬಹಳ ವರ್ಷಗಳ ಪರಿಚಯ ಮತ್ತು ಸ್ನೇಹ. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಆಗಾಗ ಭೇಟಿಯಾಗುತ್ತಿದ್ದರು. ಗೋಖಲೆ ಸಂಸ್ಥೆಯ ಅಮೂಲ್ಯವಾದ ಗ್ರಂಥಾಲಯದ ಬಗ್ಗೆ ನನ್ನ ತಂದೆ ಆಸಕ್ತಿ ವಹಿಸಿದ್ದರು. ಹಾಗಾಗಿ ಯಾವ ಯಾವ ಪುಸ್ತಕ ಎಲ್ಲೆಲ್ಲಿದೆ ಎಂದು ಅವರಿಗೆ ನಿಖರವಾಗಿ ಗೊತ್ತಿತ್ತು. ಸುಮಾರು ಮೂವ್ವತ್ತು ವರ್ಷಗಳ ಹಿಂದೆ ಪ್ರೊ. ಅಶ್ವತ್ಥನಾರಾಯಣ ಅವರಿಗೆ

ಕುಮಾರವ್ಯಾಸನ ಬಗ್ಗೆ ಪುಸ್ತಕಗಳು ಬೇಕಾಗಿದ್ದವು. ಆಗ ಅವರು ನಮ್ಮ ತಂದೆಯನ್ನು ಕೇಳಿದರಂತೆ. ನಮ್ಮ ತಂದೆಯವರು ಗೋಖಲೆ ಸಂಸ್ಥೆಯ ಗ್ರಂಥಾಲಯಕ್ಕೆ ಹೋಗಿ ಸುಮಾರು ಹತ್ತು-ಹದಿನೈದು ಅಡಿ ಎತ್ತರದ ಏಣಿಯನ್ನು ಹತ್ತಿ ಹಲವಾರು ಪುಸ್ತಕಗಳನ್ನು ತೆಗೆದುಕೊಟ್ಟರಂತೆ. ನೀವು ಕೊಡುವ ಪುಸ್ತಕವನ್ನು ನಿಮ್ಮ ಬಳಿ ತೆಗೆದುಕೊಳ್ಳಲು ನಾನು ಮತ್ತೊಂದು ಏಣಿಯನ್ನು ಹಾಕಿಕೊಳ್ಳಬೇಕು ಎಂದು ಅಶ್ವತ್ಥನಾರಾಯಣ ಅವರು ಹಾಸ್ಯ ಮಾಡಿದರಂತೆ. ಈ ಪ್ರಸಂಗವನ್ನು ಈಚೆಗೆ ಅವರು ನನಗೆ ಹೇಳಿದರು. ನನ್ನ ತಂದೆ ಮತ್ತು ಅಶ್ವತ್ಥನಾರಾಯಣ ಅವರು ವಿದ್ವಾನ್. ಎಸ್. ರಂಗನಾಥ ಶರ್ಮ ಅವರ ಅಭಿನಂದನೆಯ ಸಂದರ್ಭದಲ್ಲಿ ಒಟ್ಟಿಗೆ ಕೆಲಸ ಮಾಡಿದ್ದರು. ರಂಗಾಭಿನಂದನ ಎಂಬ ಅಭಿನಂದನ ಗ್ರಂಥವನ್ನು ವಿದ್ವಾನ್ ಎಸ್. ರಂಗನಾಥ ಶರ್ಮ ಅವರಿಗೆ ಅರ್ಪಿಸಲಾಯಿತು.

ಅಶ್ವತ್ಥನಾರಾಯಣ ಅವರು ನಮ್ಮ ತಂದೆಯವರನ್ನು ಭೇಟಿ ಮಾಡಲು ಹಲವಾರು ಬಾರಿ ನಮ್ಮ ಮನೆಗೆ ಬರುತ್ತಿದ್ದರು. ನಮ್ಮ ತಂದೆಯವರ 'ಕಗಕ್ಕೊಂದು ಕೈಪಿಡಿ' ಪುಸ್ತಕ ಪ್ರಕಟಣೆಯ ದಿನ ಮರುಳ ಮುನಿಯನ ಕಗ್ಗಕ್ಕೂ ತಾವೇ ವಿವರಣೆ ನೀಡಬೇಕು ಎಂದು ಆ ಪುಸ್ತಕಕ್ಕಾಗಿ ಒಂದು ಸಾವಿರ ರೂಪಾಯಿ ಮುಂಗಡ ಹಣವನ್ನು ಆ ದಿನ ಕೊಟ್ಟಿದ್ದರು. ಒಂದು ಪುಸ್ತಕ ಬರೆದು ಬಿಡುಗಡೆ ಮಾಡಿದ ದಿನವೇ ಮತ್ತೊಂದು ಪುಸ್ತಕ ಬರೆಯಿರಿ ಎಂದು ಉತ್ತೇಜನ ನೀಡುವ ಮಾತುಗಳು ಅವರ ವಿಶಾಲ ಮನೋಭಾವವನ್ನು ತೋರಿಸುತ್ತದೆ. ಆದರೆ ನಮ್ಮ ತಂದೆಯವರು ಮರುಳ ಮುನಿಯನ ಕಗ್ಗಕ್ಕೆ ವಿವರಣೆಯನ್ನು ಬರೆದು ಮುಗಿಸಲಾಗಲಿಲ್ಲ. ನಮ್ಮ ತಂದೆಯವರು 2001 ರಲ್ಲಿ ಕಾಲವಾಗುವುದಕ್ಕೆ ಹದಿನೈದು ದಿನಗಳ ಮೊದಲು ಕೂಡ ಅವರೊಂದಿಗೆ ಆಂಗ್ಲ ಸಾಹಿತ್ಯದ ಬಗ್ಗೆ ಮಾತನಾಡಲು ಬಂದಿದ್ದರು.

ಸುಮಾರು ೨೦೦೦ ದಿಂದ ಎರಡು ವರ್ಷಗಳ ಕಾಲ ಅಶ್ವತ್ಥ ನಾರಾಯಣ ಅವರೂ, ಎಚ್. ಕೆ. ರಂಗನಾಥ್ ಅವರೂ, ಎಮ್. ಎಚ್. ಕೃಷ್ಣಯ್ಯನವರೂ ತಾತ ಜಸ್ಟಿಸ್ ನಿಟ್ಟೂರು ಶ್ರೀನಿವಾಸರಾಯರ ನೂರರ ನೆನಪಿನ ಪುಸ್ತಕವನ್ನು ಬರೆಯಲು ನಮ್ಮ ಮನೆಗೆ ಬರುತ್ತಿದ್ದರು. ಸುಮಾರು ಎರಡು ಮೂರು ವರ್ಷಗಳ ಕಾಲ ಬಹಳ ತಾಳ್ಮೆಯಿಂದ ಅವರು ಹೇಳಿದ್ದನ್ನೆಲ್ಲ ಟೇಪುಗಳಲ್ಲಿ ಒಕ್ಕಣಿಸಿ ಅದನ್ನು ಬರವಣಿಗೆಗೆ ರೂಪಾಂತರಿಸಿದ್ದಾರೆ. ಆ ಪುಸ್ತಕ ಒಂದು ಅದ್ಭುತವಾದ ಸಾಮಾಜಿಕ ಹಾಗೂ ವೈಯುಕ್ತಿಕ ದಾಖಲೆಯಾಗಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

ನನಗೆ ಅಶ್ವತ್ಥ ನಾರಾಯಣ ಹಾಗೂ ಅವರ ಪತ್ನಿ ಪ್ರೊ. ಲಕ್ಷ್ಮೀದೇವಿ ಅವರೊಡನೆ ಆತ್ಮೀಯವಾದ ಸಂಬಂಧ ಏರ್ಪಟ್ಟಿದ್ದು ಈಚೆಗೆ. ಒಂದು ಒಂದೂವರೆ ವರ್ಷಗಳ ಹಿಂದೆ ನಾನು ನನ್ನ ಮೊದಲ ಕಥಾ ಸಂಕಲನ ರಾಮಾಯಣ ಪರೀಕ್ಷಣಂ ಪ್ರಕಟಿಸಲು ತಯಾರಿ ಮಾಡಿಕೊಳ್ಳುತ್ತಿದ್ದೆ. ಆಗ ನನ್ನ ಸೋದರ ಸಮಾನರಾದ ಸಂಗೀತ ಕಲಾರತ್ನ ವಿದ್ವಾನ್ ಎಸ್. ಶಂಕರ್ ಅವರ ಅಂತಃಪುರ ಗೀತೆಗಳ ಕಾರ್ಯಕ್ರಮಕ್ಕೆ ಪ್ರೊ. ಅಶ್ವತ್ಥನಾರಾಯಣ ಅವರೂ ಬಂದಿದ್ದರು. ಆಗ ಶಂಕರ್ ಅವರು ಒಂದು ಬಾರಿ ನಿಮ್ಮ ಬರವಣಿಗೆಯನ್ನು ಅಶ್ವತ್ಥನಾರಾಯಣ ಅವರಿಗೆ ತೋರಿಸಿ ಅಭಿಪ್ರಾಯ ಪಡೆಯಿರಿ ಎಂದರು. ನಾನು ಆಗಲೇ ಮೊದಲ ಬಾರಿ ಜಯನಗರದಲ್ಲಿರುವ ಅವರ ಮನೆಗೆ ಹೋಗಿ ಅವರನ್ನು ಭೇಟಿ ಮಾಡಿದ್ದು. ಅವರಿಬ್ಬರ ಪ್ರೀತಿ ವಿಶ್ವಾಸದಿಂದ ಮನಸ್ಸು ಮುದಗೊಂಡಿತು. ಇಷ್ಟೊಂದು ವಿದ್ವತ್ತು ಪಾಂಡಿತ್ಯವುಳ್ಳ ಹಿರಿಯರು ನನ್ನೊಂದಿಗೆ ಸುಮಾರು ಎರಡು ಗಂಟೆ ಮಾತನಾಡಿದರು. ಹಲವಾರು ಜನ ಸಾಹಿತಿಗಳನ್ನು ಗಣ್ಯರನ್ನು ಹತ್ತಿರದಿಂದ ನೋಡಿದ್ದಾರೆ, ಸಾವಿರಾರು ಸಭೆ ಸಮಾರಂಭಗಳಲ್ಲಿ ಭಾಗವಹಿಸಿದ್ದಾರೆ. ಅವರ ಅನುಭವಗಳನ್ನು ಕೇಳುತ್ತಿದ್ದರೆ ಹೊತ್ತು ಹೋಗುವುದು ತಿಳಿಯುವುದಿಲ್ಲ. ಅವರು ನನ್ನ ಕಥೆಗಳನ್ನು ಅಚ್ಚಿಗೆ ಮೊದಲೇ ನೋಡಿ, ಸಣ್ಣ ಕಥೆಗಳ ಹೆಸರುಗಳಿಂದ ಹಿಡಿದು ಹಲವಾರು ಮಾರ್ಪಾಟುಗಳನ್ನು ಸೂಚಿಸಿದರು. ವಿದ್ವತ್ಪೂರ್ಣವಾದ ಮುನ್ನುಡಿಯನ್ನೂ ಬರೆದುಕೊಟ್ಟರು. ಪುಸ್ತಕ

ಬಿಡುಗಡೆ ಕಾರ್ಯಕ್ರಮದ ಯಾವ ರೀತಿ ಇರಬೇಕು ಎಂಬುದನ್ನೂ ಸೂಚಿಸಿದರು. ಕಾರ್ಯಕ್ರಮ ಯಶಸ್ವಿಯಾಯಿತು. ನನ್ನ ಪುಸ್ತಕಕ್ಕೆ ಅವರ ಮುನ್ನುಡಿಯಿಂದ ಮೌಲ್ಯವರ್ಧನೆ ಆಯಿತು ಎಂದು ಹೇಳಲೇಬೇಕು.

ಮೊದಲ ಬಾರಿ ಅವರ ಅವರನ್ನು ಭೇಟಿ ಮಾಡಲು ಜಯನಗರದ ಅವರ ಮನೆಗೆ ಹೋಗಿದ್ದಾಗ ಅವರು ಸಂಪಾದಿಸಿರುವ ಶ್ರೀ ಶಂಕರ ಭಗವತ್ಪಾದರ ಸೌಂದರ್ಯ ಲಹರೀ ಸ್ತೋತ್ರ ದರ್ಪಣ ಪುಸ್ತಕವನ್ನು ಕೊಟ್ಟರು. ಎಷ್ಟೋ ವರ್ಷಗಳಿಂದ ಸೌಂದರ್ಯ ಲಹರಿಯ ಶ್ಲೋಕಗಳನ್ನು ಓದಿ ಕಲಿತುಕೊಳ್ಳ-ಬೇಕೆಂದುಕೊಳ್ಳುತ್ತಿದ್ದೆ, ಸಮಯ ಕೂಡಿ ಬಂದಿರಲಿಲ್ಲ. ಅಶ್ವತ್ಥನಾರಾಯಣ ಅವರು ಹಿರಿಯರು, ಒಳ್ಳೆಯ ಮನಸ್ಸಿನಿಂದ ಕೊಟ್ಟರು. ಅಂದಿನಿಂದ ಪ್ರತಿದಿನವೂ ಸೌಂದರ್ಯ ಲಹ ಶ್ಲೋಕಗಳನ್ನು ಓದುತ್ತಿದ್ದೇನೆ. ದೇವಿಯು ಈ ಹಿರಿಯರ ರೂಪದಲ್ಲಿ ನನಗೆ ಅನುಗ್ರಹ ಮಾಡಿದ್ದಾಳೆ ಎಂದುಕೊಂಡಿದ್ದೇನೆ. ಅಂದಿನಿಂದ ನಾನು ಹಲವಾರು ಬಾರಿ ಅವರ ಮನೆಗೆ ಹೋಗಿದ್ದೇನೆ. ಅವರಿಬ್ಬರೊಡನೆ ಮಾತನಾಡುವುದು ನನಗೆ ನಿಜಕ್ಕೂ ಸಂತೋಷ ಕೊಡುವ ಸಂಗತಿ. ಎಷ್ಟೋ ವಿಷಯಗಳು ತಿಳಿಯುತ್ತದೆ, ಅಲ್ಲದೆ ಅವರಿಗಿರುವ ಹಾಸ್ಯಪ್ರಜ್ಞೆಯಿಂದ ನಮ್ಮ ಮನಸ್ಸು ಮುದಗೊಳ್ಳುತ್ತದೆ.

ಬಿಡುಗಡೆಯ ದಿನ ಅವರು ಬರಲಾಗಲಿಲ್ಲ ಆದರೆ ನನ್ನ ಪುಸ್ತಕ ಬಿಡುಗಡೆಯ ನಂತರ ಅವರ ಮನೆಗೆ ಹೋಗಿದ್ದಾಗ ಈಗ ಏನು ಮಾಡುತ್ತಿದ್ದೀರಾ ಎಂದು ಕೇಳಿದರು. ನಾನು ಮಹಾಭಾರತದ ಕಥೆಗಳನ್ನು ಬರೆಯಬೇಕೆಂದಿದ್ದೇನೆ ಸಾರ್ ಎಂದೆ. ಅದಕ್ಕೆ ಅವರು ಯಾವ ಯಾವ ಮಹಾಭಾರತವನ್ನು ಓದಿದ್ದೀರ ಎಂದು ಕೇಳಿದರು. ಆನಂತರ ಅಳಸಿಂಗರಾಚಾರ್ಯರದ್ದು ಓದಲೇಬೇಕು, ನಿಮ್ಮ ಬಳಿ ಇದೆಯೇ ಎಂದು ವಿಚಾರಿಸಿದರು. ನಾನು, ನನ್ನ ಬಳಿ ಇಲ್ಲ ಕೊಂಡುಕೊಳ್ಳುತ್ತೇನೆ ಎಂದೆ. ಅವರು ನನ್ನ ಬಳಿ ಇದೆ ನಾನೇ ಕೊಡುತ್ತೇನೆ ಎಂದರು. ಒಂದು ದಿನ ಫೋನ್ ಮಾಡಿ ಬರುತ್ತೇನೆ ಎಂದು ತಿಳಿಸಿದೆ. ಸಾಧಾರಣವಾಗಿ ನಾನು ನನ್ನ ಪತಿ ರಘುರಾಮ್ ಅವರೊಡನೆ ಅಶ್ವತ್ಥನಾರಾಯಣ ಅವರ ಮನೆಗೆ ಹೋಗುತ್ತೇನೆ. ಆದರೆ ಆ ದಿನ ಅನಿವಾರ್ಯ ಕಾರಣಗಳಿಂದಾಗಿ ನಾನು ಒಬ್ಬಳೇ ಹೋಗಬೇಕಾಯಿತು. ನಾನು ಹೋಗುವ ವೇಳೆಗೆ ಅವರು ಎಲ್ಲ ಪುಸ್ತಕಗಳನ್ನು ಅಚ್ಚುಕಟ್ಟಾಗಿ ದಾರದಿಂದ ಕಟ್ಟಿ ಸಿದ್ಧಪಡಿಸಿ ಇಟ್ಟಿದ್ದರು. ಹೇಗೆ ಹೋಗುತ್ತೀರಾ ಎಂದು ನನ್ನನ್ನು ಕೇಳಿದರು. ನಾನು ಆಟೋದಲ್ಲಿ ಹೋಗುತ್ತೇನೆ ಎಂದೆ. ಅವರು ನೀವೊಬ್ಬರೇ ಬಂದಿದ್ದೀರಾ ಇಷ್ಟು ಪುಸ್ತಕ ತೆಗೆದುಕೊಂಡು ಹೋಗುವುದು ಕಷ್ಟವಾಗುತ್ತದೆ ನಾನೇ ಕೆಳಗೆ ತಂದುಕೊಡುತ್ತೇನೆ ಎಂದು ಬಲವಂತ ಮಾಡಿದರು. ನಾನು ಯಾವ್ಯಾವ ಪುಸ್ತಕಗಳನ್ನು ಓದಬೇಕು ಎಂದು ಹೇಳುವುದಲ್ಲದೆ, ಅದನ್ನೆಲ್ಲ ತೆಗೆದಿಟ್ಟು, ತಾವೇ ಆಟೋದಲ್ಲಿಟ್ಟು ಕೊಡುತ್ತೇನೆ ಎಂದಾಗ ಇವರ ಪ್ರೀತಿ ವಿಶ್ವಾಸ ಕಂಡು ನನ್ನ ಕಣ್ಣು ತುಂಬಿ ಬಂತು. ಇದನ್ನು ನನ್ನ ಅದೃಷ್ಟವೆಂದೇ ಭಾವಿಸಿದ್ದೇನೆ.

ನಾನು ಮಹಾಭಾರತದ ಕಥೆಗಳನ್ನು ಬರೆಯುತ್ತೇನೆ ಎಂದಾಗ ಯಾವ ಯಾವ ಪಾತ್ರಗಳ ಬಗ್ಗೆ ಯಾವ ಪ್ರಸಂಗಗಳ ಬಗ್ಗೆ ಬರೆಯುತ್ತೇನೆ ಎಂದು ನಾನೇ ತೀರ್ಮಾನಿಸಿರಲಿಲ್ಲ. ಪುಸ್ತಕಗಳನ್ನು ತರಲು ಹೋದಾಗ ಅಶ್ವತ್ಥ ನಾರಾಯಣ ಅವರು ನನಗೆ ಸ್ತ್ರೀ ಪಾತ್ರಗಳ ಬಗ್ಗೆ ಬರೆಯಿರಿ ಎಂಬ ಅಮೂಲ್ಯವಾದ ಸಲಹೆಯನ್ನು ಕೊಟ್ಟರು. ಮತ್ತೊಂದು ಬಾರಿ ಅವರ ಮನೆಗೆ ಹೋದಾಗ ಇದೇ ವಿಷಯವನ್ನು ಚರ್ಚಿಸುತ್ತಿದ್ದೆವು. ಪ್ರೊ. ಲಕ್ಷ್ಮೀದೇವಿಯವರು ಕುಮಾರವ್ಯಾಸ ಕುವೆಂಪು ಹಾಗೂ ಹಲವಾರು ಮೇರು ಸಾಹಿತಿಗಳ ಬಗ್ಗೆ ಮಾತನಾಡುತ್ತಿದ್ದರು, ನಾನು ಬಹಳ ಕುತೂಹಲದಿಂದ ಉತ್ಸಾಹದಿಂದ ಕೇಳಿಸಿಕೊಳ್ಳುತ್ತಿದ್ದೆ. ನನ್ನ ಕಥೆಗಳನ್ನು ಕುಮಾರವ್ಯಾಸನ ಗದುಗಿನ ಭಾರತದ ಆಧಾರದ ಮೇಲೆ ಬರೆಯಬೇಕೆಂದುಕೊಂಡಿದ್ದೇನೆ, ನಿಮ್ಮ ಮಾರ್ಗದರ್ಶನ ಆಶೀರ್ವಾದ ಬೇಕು ಎಂದೆ. ಆಗ ಅವರು ನಿಮಗೆ ಪ್ರತಿಭೆ ಇದೆ ಯಾರ ಮಾರ್ಗದರ್ಶನವೂ ಬೇಡ ಬರೆಯಿರಿ ಎಂದರು. ಹತ್ತಾರು ವರ್ಷಗಳ

ಕಾಲ ಅವರು ಪಾಠ ಮಾಡುತ್ತಿದ್ದ ವಿದ್ಯಾರ್ಥಿಗಳನ್ನು ಇದೇ ರೀತಿ ಉತ್ತೇಜನ ಕೊಟ್ಟು ಉತ್ಸಾಹ ತುಂಬುತ್ತಿದ್ದರೇನೋ! ಈಗ ನನಗೂ ಆ ಸೌಭಾಗ್ಯ ಉಂಟಾಯಿತು ಎಂದು ಅವರ ಮಾತುಗಳನ್ನು ಕೇಳಿ ನನಗೆ ಬಹಳ ಸಂತೋಷವಾಯಿತು.

ಮಹಾಭಾರತದ ಬಗ್ಗೆ ಕಥೆಗಳನ್ನು ಬರೆದು ಮುಗಿಸಿ ಕರಡನ್ನು ಅವರ ಅವಗಾಹನೆಗಾಗಿ ಕೊಟ್ಟಿದ್ದೆ. ತಮಗೆಲ್ಲ ತಿಳಿದಿರುವ ಹಾಗೆ ನನ್ನಂತೆ ಹಲವಾರು ಜನ ಅವರ ಭೇಟಿಗೆ ಅವರ ಮಾರ್ಗದರ್ಶನಕ್ಕಾಗಿ ಅವರ ಮನೆಗೆ ಬರುತ್ತಲೇ ಇರುತ್ತಾರೆ. ಹಾಗಾಗಿ ಅಶ್ವತ್ಥ ನಾರಾಯಣ ಅವರು ಇಡೀ ದಿನ ಬಿಡುವಿಲ್ಲದೆ ಕೆಲಸ ಮಾಡುತ್ತಾರೆ. ತಿಂಗಳಿಗೆ ಒಂದೆರಡು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಲೇಖಕರ ಬಗ್ಗೆ ಒಳ್ಳೆಯ ಮಾತನಾಡಿ ಪ್ರೋತ್ಸಾಹ ನೀಡುತ್ತಾರೆ. ಬಹಳ ಅಮೂಲ್ಯವಾದ ಸಮಗ್ರ ದಾಸ ಸಾಹಿತ್ಯದ ಐವತ್ತು ಸಂಪುಟಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಕಾಲದ ಗತಿಯಲ್ಲಿ ಕಳೆದು ಹೋಗಬಹುದಾದ ಅಮೂಲ್ಯ ಕೃತಿಗಳನ್ನು ಪರಿಷ್ಕರಣೆ ಮಾಡಿ ಮುದ್ರಣಕ್ಕೆ ತಯಾರು ಮಾಡುವುದು ಸುಲಭವಲ್ಲ. ಅದರ ಸರಿಯಾದ ಆವೃತ್ತಿಯನ್ನು ಹುಡುಕಿ ಪದ ಪ್ರಯೋಗಗಳನ್ನು ಜೋಡಿಸಿ ಪುಸ್ತಕವನ್ನು ಅಚ್ಚಿಗೆ ತಯಾರು ಮಾಡಲು ಅಷ್ಟೇ ವಿದ್ವತ್ತು ತಾಳ್ಮೆ ಎಲ್ಲವೂ ಇವರ ಸಂಪಾದನಾ ಕಾರ್ಯದಲ್ಲಿ ಕಾಣಬಹುದು.

ಇದರ ಮಧ್ಯೆ ನನ್ನ ಕಥೆಗಳನ್ನು ಬಹಳ ತಾಳ್ಮೆಯಿಂದ ಓದಿ ಅದರಲ್ಲಿದ್ದ ತಪ್ಪುಗಳನ್ನು ಸರಿಪಡಿಸಿ ಕೊಟ್ಟರು. ಕಥೆಯಲ್ಲಿ ಉಲ್ಲೇಖ ಮಾಡಿದ್ದ ಕೆಲವು ಸಂಗತಿಗಳು ಎಲ್ಲಿವೆ ಪರಿಶೀಲಿಸಬೇಕು ಎಂದು ಸಂಶಯ ಬಂದ ಕಡೆ ಪ್ರಶ್ನಿಸಿದರು. ಇವರ ಅಗಾಧವಾದ ನೆನಪಿನ ಶಕ್ತಿಯನ್ನು ಕಂಡು ನನಗೆ ವಿಸ್ಮಯವಾಗುತ್ತದೆ. ಯಾವುದಾದರೂ ಒಂದು ವಿಷಯವನ್ನು ಕೇಳಿದರೆ ಅವರು ಹಲವಾರು ಪುಸ್ತಕಗಳನ್ನು ಹೆಸರಿಸಿ ಬರೆದ ಲೇಖಕರ ಹೆಸರನ್ನು, ಪ್ರಕಾಶಕರ ಹೆಸರನ್ನೂ ತಿಳಿಸುತ್ತಾರೆ. ನಮ್ಮ ಹಾಗೆ ಬರೆಯುವ ಲೇಖಕರಿಗೆ, ಕಥೆಗಾರರಿಗೆ ಇಂಥ ಹಿರಿಯರ ಮಾರ್ಗದರ್ಶನ ದೊರೆತಿರುವುದು ದೈವಾನುಗ್ರಹವೇ ಸರಿ. ಅಷ್ಟು ಹಿರಿಯರು, ಅಪಾರವಾದ ವಿದ್ವತ್ತು ಅನುಭವ ಇದ್ದರೂ ಅವರು ನಮ್ಮ ಬರವಣಿಗೆಯನ್ನು ಓದಿ ಮೆಚ್ಚುಗೆಯ ಮಾತನ್ನಾಡಿ ಇನ್ನೂ ಬರೆಯಿರಿ ಎಂದು ಉತ್ತೇಜನ ನೀಡುತ್ತಾರೆ.

ಮಣಿ ಮಂತ್ರ ತಂತ್ರ ಸಿದ್ಧಿಗಳ ಸಾಕ್ಷ್ಯಗಳೇಕೆ ।
ಮನಗಾಣಿಸಲು ನಿನಗೆ ದೈವದದ್ಭುತವ ॥
ಮನುಜರೊಳಗಾಗಾಗ ತೋರ್ಪ ಮಹನೀಯಗುಣ ।
ವನುವಾದ ಬೊಮ್ಮನದು – ಮಂಕುತಿಮ್ಮ ॥ (59)

ಹಿರಿಯರಾದ ಪ್ರೊ. ಅಶ್ವತ್ಥನಾರಾಯಣ ಅವರನ್ನು ನೋಡಿದಾಗಲೆಲ್ಲ ಪೂಜ್ಯ ಡಿವಿಜಿಯವರ ಮಂಕುತಿಮ್ಮನ ಕಗ್ಗದ ಈ ಸಾಲುಗಳು ನನಗೆ ನೆನಪಾಗುತ್ತದೆ. ಕನ್ನಡ ಓದುವವರಿಗೆ, ಬರೆಯುವವರಿಗೆ, ಬರೆಯುವ ಉತ್ಸಾಹ ಇರುವವರಿಗೆ ಅವರು ಮನಸಾರೆ ಸಹಾಯ ಮಾಡಿ ಮಾರ್ಗದರ್ಶನ ನೀಡಿ ಉತ್ತೇಜನ ಕೊಡುತ್ತಾರೆ. ಅವರಿಗೆ ಇದರಿಂದ ಯಾವ ಯಶಸ್ಸು ಕೀರ್ತಿ ಲಾಭ ಯಾವುದೂ ಬರುವುದಿಲ್ಲ. ಪಂಡಿತರು ವಿದ್ಯಾವಂತರ ಸಂಪರ್ಕವಿರಲಿ ಮನುಷ್ಯ ಸಂಪರ್ಕ ಮಾತು ಕಥೆಗಳೇ ದುರ್ಲಭವಾಗಿರುವ ಈ ಕಾಲದಲ್ಲಿ ಪ್ರೊ. ಅಶ್ವತ್ಥನಾರಾಯಣ ಅವರ ಮನೆಗೆ ಹೋಗಿ ಅವರೊಡನೆ ಒಂದೆರಡು ಗಂಟೆ ಮಾತುಕತೆಗಳಲ್ಲಿ ಕಳೆದು ಅವರ ಮಾರ್ಗದರ್ಶನ ಪಡೆಯುತ್ತಿರುವುದು ನನ್ನ ಸೌಭಾಗ್ಯವೆಂದೇ ತಿಳಿದಿದ್ದೇನೆ. ಈ ಹಿರಿಯ ದಂಪತಿಗಳ ಪ್ರೀತಿ ವಿಶ್ವಾಸಗಳು ಯಾವಾಗಲೂ ನನ್ನ ಮೇಲಿರಲಿ. ಭಗವಂತನು ಅವರಿಗೆ ಆಯಸ್ಸು ಆರೋಗ್ಯವನ್ನು ಕರುಣಿಸಲಿ ಅವರು ಇನ್ನೂ ನೂರಾರು ಜನರಿಗೆ ಮಾರ್ಗದರ್ಶನ ನೀಡುವಂತಾಗಲಿ.

******

ಅನಾಜಿ ನಿಯಮಾವಳಿ ನಿಷ್ಣಾತರು-ತಂದೆಯವರ ಶಿಷ್ಯರು

ಎಸ್. ಟಿ. ರಾಧಾಕೃಷ್ಣ

ಪ್ರೊ॥ ಅಶ್ವತ್ಥನಾರಾಯಣ ಅವರ ಮತ್ತು ನನ್ನ ಪರಿಚಯ ಗಾಢವಾದದ್ದಲ್ಲದಿದ್ದರೂ ಸುಮಾರು ೩೦ ವರ್ಷಗಳಿಂದ ಅವರನ್ನು ಬಲ್ಲೆ. ನಮ್ಮ ತಂದೆ ಪ್ರೊ॥ ಎಂ.ವೀ.ಸೀ. ಅವರು ಸ್ಥಾಪಿಸಿದ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಆಜೀವ ಸದಸ್ಯರಾಗಿದ್ದು, ಇಬ್ಬರೂ ಹಲವಾರು ಸಭೆ-ಸಮಾರಂಭಗಳಲ್ಲಿ ಭಾಗಿಯಾಗಿದ್ದು, ಅವರು ಎಲ್ಲಾ ಸಭೆಯಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದನ್ನು ಕಣ್ಣಾರೆ ಕಂಡಿದ್ದೇನೆ. ನಂತರ, ಇಬ್ಬರೂ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾದ ಮೇಲೆ ಹೆಚ್ಚು ಗಟ್ಟಿಯಾದ ಸಂಬಂಧ, ಈವರೆವಿಗೂ ಮುಂದುವರಿದಿದೆ. ಪ್ರತಿಷ್ಠಾನದ ನಿಯಮಾವಳಿಗಳನ್ನು ತಿದ್ದುಪಡಿ ಮಾಡಲು ಒಂದು ಉಪಸಮಿತಿಯನ್ನು ನೇಮಕ ಮಾಡಿದಾಗ ನಾವಿಬ್ಬರೂ ಅದರಲ್ಲಿ ಸದಸ್ಯರಾಗಿದ್ದು, ಆ ಸಭೆಗಳಲ್ಲಿ ಶ್ರೀಯುತರು ನೀಡಿದ ಅಮೂಲ್ಯ ಸಲಹೆ-ಸೂಚನೆಗಳ ಮೇರೆಗೆ, ನಿಯಮಾವಳಿಗಳ ಅಂತಿಮ ಕರಡನ್ನು ಕಾರ್ಯಕಾರಿ ಸಮಿತಿಯಲ್ಲಿ ಹಾಗೂ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿದಾಗ ಅವರ ಸ್ಪಷ್ಟ, ನಿಖರ ನಿಲುವುಗಳು, ನಿಯಮಾವಳಿಗಳ ಅನುಮೋದನೆಗೆ ಸಹಾಯ ಮಾಡಿತು. ಇತ್ತೀಚೆಗೆ, ಶ್ರೀಯುತರು ಎಂ.ವಿ.ಸೀ. ಅವರ ಶಿಷ್ಯರೂ ಆಗಿದ್ದರೆಂಬ ವಿಷಯ ತಿಳಿದು ನಮ್ಮ ಬಾಂಧವ್ಯ ಮತ್ತಷ್ಟು ಗಾಢವಾಯಿತು.

ಶ್ರೀಯುತರು ಹಲವಾರು ಪ್ರತಿಷ್ಠಿತ ಸಂಘ-ಸಂಸ್ಥೆಗಳಲ್ಲಿ ವಿವಿಧ ಹಂತಗಳಲ್ಲಿ ಕಾರ್ಯ-ನಿರ್ವಹಿಸಿದ್ದಾರೆ. ಹಾಗೂ ಕರ್ನಾಟಕ ಸರ್ಕಾರದ ಹಾಗೂ ವಿಶ್ವವಿದ್ಯಾನಿಲಯಗಳ ಸಮಿತಿಗಳಲ್ಲಿ ಕನ್ನಡ ನಾಡು ಮತ್ತು ನುಡಿಯ ಏಳಿಗೆಗೆ ರಚಿಸಿದ ಸಮಿತಿಗಳಲ್ಲೂ ಕಾರ್ಯ ನಿರ್ವಹಿಸಿದ್ದಾರೆ.

ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯಗಳ ವಿವಿಧ ಪ್ರಕರಣಗಳಲ್ಲಿ; ಗ್ರಂಥದ ಸಂಪಾದನೆಯಲ್ಲಿ ಮತ್ತು ವಿಶೇಷವಾಗಿ ಸರ್ಕಾರಿ ನೌಕರರಿಗೆ ಕನ್ನಡ ಕಲಿಸುವ ಶಿಬಿರಗಳಲ್ಲಿ ಪಾಲ್ಗೊಂಡು ತಮ್ಮ ಛಾಪನ್ನು ನಾಡಿನಾದ್ಯಂತ ಪಸರಿಸಿದ್ದಾರೆ. ಹಂಪಿ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದರಿಂದ, ಕನ್ನಡ ಕಲಿಕೆಗೆ ಮತ್ತು ಶಿಕ್ಷಣಕ್ಕೆ ಅವರ ಕೊಡುಗೆಯನ್ನು ಮೆಚ್ಚಬೇಕಾದುದು.

ಶ್ರೀಯುತರ ವ್ಯಾಕರಣ ಮತ್ತು ಛಂದಸ್ಸಿನಲ್ಲೂ ಪರಿಣತಿ ಹೊಂದಿದ್ದಾರೆ. ಎಂ.ವಿ.ಸೀ ಯವರು ರಚಿಸಿದ ವ್ಯಾಕರಣ-ಛಂದಸ್ಸಿನ ದೀರ್ಘ ಲೇಖನವೊಂದನ್ನು ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಯನ ಕೇಂದ್ರ ಪುಸ್ತಕ ರೂಪದಲ್ಲಿ ಪ್ರಕಟಿಸಿತ್ತು. ಅದರಲ್ಲಿ ಕಂಡ ಕೆಲವು ತಪ್ಪುಗಳನ್ನು ಎಂ.ವಿ.ಸೀ ಅವರಿಗೆ ನಿಸ್ಸಂಕೋಚದಿಂದ ತಿಳಿಸಿ, ಅವರು ಅದನ್ನು ಸ್ವೀಕರಿಸಿ, ಪುಸ್ತಕದ ಮರುಮುದ್ರಣವಾದಾಗ, ಅವುಗಳನ್ನು ಅಳವಡಿಸಿದ್ದಾರೆ ಎಂದು ಹೇಳಿದರು. ಈ ಇಳಿ ವಯಸ್ಸಿನಲ್ಲಿ ಕ್ರಿಯಾಶೀಲರೂ, ಚಿಂತನಶೀಲರೂ ಆಗಿರುವ ಶ್ರೀಯುತರಿಗೆ ಭಗವಂತನು ದೀರ್ಘಾಯಸ್ಸು ಮತ್ತು ಆರೋಗ್ಯವನ್ನು ನೀಡಲಿ ಎಂಬುದೇ ನನ್ನ ಪ್ರಾರ್ಥನೆ.

****

ಪದ ಸಲ್ಲಾಪದ ಸೋಪಾನಗಾರ

ಡಾ. ಶಾಂತರಾಜು
ಚರವಾಣಿ : ೯೮೮೦೪೬೮೧೪೬೮೦

ಪದ ಬಿಂಬ ಕಟ್ಟುವ ಕರ್ತೃ
ಕನ್ನಡದ ಕಾವ್ಯ ಕಲೆಯ ಕೀರ್ತಿ

ನಿಘಂಟಿನ ಪುಟಗಳ ಮೌನಶಿಲ್ಪಿಯಾಗಿರುವ ಅನಾಜಿ ಅವರು ಪದ ಸಂಪತ್ತಿನ ಶಿಲ್ಪಿ, ನಿಘಂಟು ಸಂಶೋಧನೆಯ ಮೂಲಕ ಪದವೇ ಪರಮಪರಿಪೂರ್ಣ ಎಂದು ನಂಬಿರುವವರು. ಕನ್ನಡ ಭಾಷೆಯ ಅಸಂಖ್ಯಾತ ಪದರಾಶಿಯ ಗಂಭೀರ ಕ್ಷೇತ್ರದಲ್ಲಿ ಅಪರೂಪದ ತಪಸ್ಸಿನಿಂದ ಇದರೊಳಗೆ ಸಂಸ್ಕೃತಿಯ ಆತ್ಮವಿದೆ ಎಂದು ಅದರ ಮೂಲಕ ಭಾಷೆಯ ಭವಿಷ್ಯವನ್ನು ಕಟ್ಟುವ ಶ್ರಮದ ಯಜ್ಞದಲ್ಲಿ ತೊಡಗಿರುವವರು ಪ್ರೊ. ಅಶ್ವತ್ಥನಾರಾಯಣ ಜಿ. ಅವರು. ಇದೇ ಅವರಿಗೆ ಜೀವ, ಧ್ಯಾನ, ಕರ್ತವ್ಯ, ಸೇವೆ ಸಾಧನೆ. ವಿದ್ಯಾರ್ಥಿ ದಿನಗಳಲ್ಲಿ ಕನ್ನಡ ಭಾಷೆಯ ಮೇಲಿದ್ದ ಮಮತೆ ಕ್ರಮೇಣ ಪಾಂಡಿತ್ಯಪೂರ್ಣವಾದ ಅಭಿರುಚಿಯಾಗಿ ಬೆಳೆದಿತು, ಪದಗಳ ಪ್ರಪಂಚವು ಅವರಿಗೆ ಅನಂತ ವಿಜ್ಞಾನದ ಹೊನಲು ತೋರಿಸಿತು ಕನ್ನಡ ಭಾಷೆಯನ್ನು ಕೇವಲ ಮಾತೃಭಾಷೆಯಾಗಿಯಲ್ಲ ಅದಕ್ಕೂ ಮಿಗಿಲಾಗಿ ಕಂಡವರು. ಸರಳತೆ, ಅನುಪಮ ಸೌಜನ್ಯ, ಮೃದು ಮಧುರ ಭಾಷೆ, ಸದಾ ನಗುಮುಖ ಇವರ ಆಕರ್ಷಕ ವ್ಯಕ್ತಿತ್ವದ ವಿಶೇಷತೆಗಳು. ತಮ್ಮ ಸದುವಿನಯ ನಡೆ-ನುಡಿಗಳಿಂದ ಎಲ್ಲರಿಗೂ ಪ್ರಿಯರಾದವರು. ಸದಾ ಒಳ್ಳೆಯದರ ಕಡೆಗೆ ತುಡಿಯುವ, ತಕ್ಷಣ ಸ್ಪಂದಿಸುವ ಮನಸ್ಸುಳ್ಳ ಇವರು 'ಅಪ್ರತಿಮ ವಾಗ್ಮಿ' ಎಂಬ ಖ್ಯಾತಿಗೆ ಭಾಜನರಾಗಿದ್ದಾರೆ. ಅನಾಜಿ ಅವರ ಮಾತುಗಳಲ್ಲಿ ಅವರ ಓದಿನ ಅಗಾಧತೆ, ಅನುಭವದ ವಿಸ್ತಾರ ಹಾಗೂ ಚಿಂತನೆಯ ಆಳ ಥಟ್ಟನೆ ಅರಿವಿಗೆ ಬಂದೇ ಬರುತ್ತದೆ. ಇವರ ಮಾತು ಬರಿ ಮಾತಲ್ಲ ಅದೊಂದು 'ಜ್ಯೋತಿರ್ಲಿಂಗ', ನುಡಿ 'ಮುತ್ತಿನ ಹಾರ' ಎನ್ನುವುದಕ್ಕೆ ಸಾಕ್ಷಿಯಾಗಿ ಕೇಳುವಂತೆ ಇರುತ್ತದೆ, ಮಾತುಗಳನ್ನು ಕೇಳಿದರೆ ಕೇಳುತ್ತಲೇ ಇರಬೇಕು ಎನಿಸುತ್ತದೆ, ಇವರು ಪಾಲ್ಗೊಂಡ ಕಾರ್ಯಕ್ರಮಗಳು ಲೆಕ್ಕವಿಲ್ಲದಷ್ಟು ಸಭೆ, ಸಮಾರಂಭ, ಸಮ್ಮೇಳನ, ಸಮಾವೇಶ, ಶಿಬಿರಗಳೇ ಮೊದಲಾದವುಗಳಲ್ಲಿ ಇವರು ಪಾಲ್ಗೊಂಡರೆ ಒಂದು ಶಿಸ್ತು ಇದ್ದೇ ಇರುತ್ತದೆ. ಸ್ವಾತಂತ್ರ್ಯ ಪೂರ್ವೋತ್ತರಗಳ ಕೊಂಡಿಯಂತಿರುವ ಇವರ ಮಾತಿನಲ್ಲಿ ಆ ಕಾಲಮಾನದ ಗಣ್ಯ ಮಾನ್ಯರ ವ್ಯಕ್ತಿತ್ವದ ಅನಾವರಣವಾಗುತ್ತದೆ. ಸಾಹಿತ್ಯ, ರಾಜಕಾರಣ, ಅಧ್ಯಾತ್ಮ, ಸಮಾಜಸೇವೆಯಲ್ಲಿ ತೊಡಗಿಸಿಕೊಂಡು ತಮ್ಮ ವ್ಯಕ್ತಿತ್ವದ ಮೈಲುಗಲ್ಲನ್ನು ನಿರ್ಮಿಸಿದ ಅನೇಕರ ಬಗೆಗೆ, ಅನೇಕರಿಗೆ ಗೊತ್ತಿಲ್ಲದಂತ ಹೊಸ ಹೊಸ ವಿಚಾರಗಳ ಪರಿಮಳ ಹೊರಸೂಸುತ್ತದೆ.

ಅತ್ಯಂತ ಕಿರಿಯನಾದ ನನಗೆ ಪರಿಚಯವಾದದ್ದು ಸಹ ಒಂದು ವಿಚಾರ ಸಂಕಿರಣದಲ್ಲಿ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದವರು ಮೂರು ಪ್ರಬಂಧ ಮಂಡನೆಯಾದ ಮೇಲೆ ಅಧ್ಯಕ್ಷರ ನುಡಿಗಾಗಿ ನಿಂತರು ಅವರ ಮೊದಲ ವಾಕ್ಯವೇ 'ನೀವೆಲ್ಲಾ ಪ್ರಬಂಧವನ್ನು ಅಚ್ಚುಕಟ್ಟಾಗಿ ಮಂಡಿಸಿದ್ದೀರಿ' ಆದರೆ ಎಂದರು, ಆಗ ಪ್ರಬಂಧ ಮಂಡಕರು ಒಡನೆಯೇ ಇವರಡೆಗೆ ಕತ್ತು ತಿರುಗಿಸಿ ನೋಡುತ್ತಾ ಕುಳಿತರು.

'ಆದರೆ' ಎಂಬ ಮಾತನ್ನು ಮುಂದುವರಿಸಿ ದಯಮಾಡಿ ಪ್ರಬಂಧ ಮಂಡಕರು ಯಾವುದೇ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಾಗ ಹೊಸ ಹೊಸ ವಿಚಾರಗಳ ಕಡೆಗೆ ಅಥವಾ ಈವರೆಗೆ ಬೆಳಕು ಚೆಲ್ಲದೇ ಇದ್ದ ವಿಚಾರಗಳ ಬಗೆಗೆ ಬೆಳಕು ಚೆಲ್ಲಿದರೆ ಇನ್ನೂ ಚೆನ್ನಾಗಿರುತ್ತಿತ್ತು ಎಂದು ಹೇಳಿ ಲಕ್ಷ್ಮೀಶ, ಲಕ್ಷ್ಮೀಶನ ಕಾಲ ಮತ್ತು ಲಕ್ಷ್ಮೀಶನ ಕೃತಿಯ ಬಗೆಗೆ ವಿಶೇಷವಾದ ಅಂಶಗಳನ್ನು ಪ್ರಸ್ತಾಪಿಸಿ ಹೀಗೆ ಮುಂದಿನ ಸಭೆ, ಸಮಾರಂಭ, ವಿಚಾರ ಸಂಕಿರಣಗಳು ನಡೆದರೆ ಚೆನ್ನಾಗಿರುತ್ತದೆ ಎಂದು ಹೇಳಿ ಕುಳಿತರು. ಆಗ ನನಗೆ ಈ ಉದಯೋನ್ಮುಖರನ್ನು ಇಷ್ಟೇಕೆ ಟೀಕಿಸುತ್ತಾರೆ ಎಂದೆನಿಸಿತ್ತಾದರೂ, ಆನಂತರದಲ್ಲಿ ನನಗೆ ಅರಿವಾದದ್ದು ಉದಯೋನ್ಮುಖ ಬರಹಗಾರರು ಅಥವಾ ಸಂಶೋಧಕರು ಹೊಸ ಹೊಸ ನೆಲೆಗಟ್ಟಿನಲ್ಲಿ ಒಂದು ವಸ್ತುವನ್ನು ಅಥವಾ ಕವಿಯನ್ನು ನೋಡಬೇಕೆನ್ನುವ ಅವರ ಕಳಕಳಿ, ಪ್ರಬಂಧ ಮಂಡಕರಿಗೆ ಇರಬೇಕಾದ ಶಿಸ್ತು.

ಹಿರಿಯರಾದ ಅನಾಜಿಯವರ ಜತೆಗೆ ನನ್ನ ಸಂಬಂಧ ಬೆಳೆದದ್ದು, ಪರಿಚಯವಾದದ್ದು ಅದು ಒಂದು ಆಕಸ್ಮಿಕವೇ. ಆರ್.ವಿ. ಮ್ಯಾನೇಜ್ಮೆಂಟ್ ಕಾಲೇಜಿನಲ್ಲಿ ಡಾ. ಟಿ.ವಿ ರಾಜು ಅವರು ನಿರ್ದೇಶಕರಾಗಿದ್ದಾಗ 'ಸಿಂಚನ' ಕನ್ನಡ ವೇದಿಕೆಯಲ್ಲಿ ಕನ್ನಡ ಪರ ಕಾರ್ಯಕ್ರಮಗಳನ್ನು ನಡೆಸುವುದರಲ್ಲಿ ನನ್ನ ಒಡನಾಟ ಮತ್ತು ಅದೇ ಸಂದರ್ಭದಲ್ಲಿ ಒಂದು ಮ್ಯಾನೇಜ್ಮೆಂಟ್ ಸಂಸ್ಥೆ ಕನ್ನಡ ಪುಸ್ತಕಗಳನ್ನು, ಅದರಲ್ಲಿಯೂ ವ್ಯಕ್ತಿತ್ವ ವಿಕಸನದ ಪುಸ್ತಕಗಳನ್ನು ತರುವ ನಿಟ್ಟಿನಲ್ಲಿ ಮುಂದಾಗಿ ಡಿ.ಎ. ಪಾಂಡು ಅವರ ಸ್ಮೃತಿ ಗ್ರಂಥಮಾಲೆಯ ಮೂಲಕ ಕನ್ನಡ ಪುಸ್ತಕಗಳನ್ನು ಪ್ರಕಟಿಸಲು ಮುಂದಾದಾಗ ಗೌರವ ಸಂಪಾದಕರಾಗಿದ್ದ ಟಿ.ವಿ. ರಾಜು ಅವರು ಸಂಪಾದಕರಾಗಿ ಪ್ರೊ. ಅಶ್ವತ್ಥನಾರಾಯಣ. ಜಿ. ಅವರನ್ನು ನಿಯೋಜಿಸಿಕೊಂಡು, ಸಹ ಸಂಪಾದಕರಾಗಿ ನನ್ನನ್ನು ಸಂಪಾದಕ ಮಂಡಳಿಯಲ್ಲಿ ಅವರೊಡನೆ ಸೇರಿಸಿದ್ದು ನನ್ನ ಕಲಿಕೆಗೆ ಸದವಕಾಶವಾಯಿತು ಎಂದರೆ ತಪ್ಪಾಗಲಾರದು. ಆ ಸಂದರ್ಭದಲ್ಲಿ ನಾನು ಪುಸ್ತಕ ಸಂಪಾದನಾ ಕಾರ್ಯದಲ್ಲಿ ತೊಡಗಿದಾಗ ಅನಾಜಿ ಅವರ ಶಿಸ್ತು, ಪ್ರೂಫ್ ರೀಡಿಂಗ್ ಕಲೆ, ಅದಕ್ಕೆ ಬೇಕಾದ ಸಂಯಮ, ತಾಳ್ಮೆ, ಜಾಗರೂಕತೆ ಮತ್ತು ಬಾಧ್ಯತೆಗಳ ಅರಿವಾಯಿತು. ಸುಮಾರು 27 ಕೃತಿಗಳನ್ನು ಇವರೊಟ್ಟಿಗೆ ಸಹ ಸಂಪಾದಕನಾಗಿ ಸಂಪಾದಿಸುವಂತಾಯಿತು . ಈ ಸಂಬಂಧವಾಗಿ ಅವರ ಮನೆಗೆ ಹೋಗಿ ಬರುವಂತಾಯಿತು, ಆಗ ನನ್ನ ಗಮನಕ್ಕೆ ಬಂದದ್ದು ನಾವು ಬಿ.ಕಾಂ. ವಿದ್ಯಾರ್ಥಿಗಳಿಗೆ ವಾಣಿಜ್ಯ ಕನ್ನಡ ಪಾಠ ಮಾಡುತ್ತಿದ್ದರೂ ಅದನ್ನು ರಚಿಸಿದ ಲೇಖಕರನ್ನು ಕಂಡಿರಲಿಲ್ಲ, ಅವರ ಮನೆಗೆ ಹೋದಾಗ ಕಂಡ ಪ್ರೊ. ಲಕ್ಷ್ಮೀದೇವಿಯವರೇ ಆ ಪುಸ್ತಕವನ್ನು ರಚಿಸಿದವರು ಎಂದು ತಿಳಿದಾಗ ನನಗೆ ಅತ್ಯಾನಂದವೂ ಆಯಿತು. ಅವರು ಮನೆಗೆ ಬಂದವರನ್ನು ಸತ್ಕರಿಸುವ ರೀತಿ ಮತ್ತು ಕನ್ನಡದ ಮೇಲಿನ ಅವರ ಅವರ ಪ್ರೇಮವನ್ನು ಕಂಡೆನು. 'ಸತಿಪತಿಗಳೊಂದಾದ ಭಕ್ತಿ ಹಿತಮಪ್ಪುದು ಶಿವಂಗೆ' ಎನ್ನುವ ಜೇಡರ ದಾಸಿಮಯ್ಯನ ಮಾತಿನಂತೆ ಸತಿಪತಿಗಳು ಒಂದಾಗಿ ಕನ್ನಡಮ್ಮನ ಸೇವೆಯನ್ನು ನಿರಂತರವಾಗಿ ಮಾಡುತ್ತಾ ಬರುತ್ತಿದ್ದಾರೆ, ಪ್ರತಿಯೊಂದು ವಿಚಾರಗಳನ್ನು, ಕೃತಿಗಳನ್ನು ಇಬ್ಬರೂ ಓದಿ, ಚರ್ಚಿಸಿ, ಚಿಂತನ ಮಂಥನ ಮಾಡಿ ಅದನ್ನು ಮಂಡಿಸುವ ಪರಿ ವಿಶೇಷವೆನಿಸುವಂತಿರುತ್ತದೆ ಮತ್ತು ಅವರ ಮನೆಯೇ ಒಂದು ಭಾಷಾ ಸಂಶೋಧನಾ ಕೇಂದ್ರದಂತೆ ಪರಿಣಮಿಸಿದೆ. ಇವರ ಮನೆಗೆ ಹೋದಾಗ ಸಾಹಿತ್ಯದ ಔತಣ ಮತ್ತು ಊಟೋಪಚಾರಗಳು ನಿರಂತರವಾಗಿ ನಡೆದೇ ನಡೆಯುತ್ತವೆ. ಒಟ್ಟಿನಲ್ಲಿ ಇಬ್ಬರೂ ಸಹೃದಯಿಗಳಾಗಿ ಸಂಸಾರ – ಸಾಹಿತ್ಯ ಎರಡರಲ್ಲೂ ಪಾಲ್ಗೊಂಡು ಅದರ ರಸಾನುಭವವನ್ನು ಉಂಡವರು ಮತ್ತು ಬೇರೆಯವರಿಗೂ ಉಣಬಡಿಸಿದವರು ಎಂದರೆ ಅತಿಶಯೋಕ್ತಿ ಆಗಲಾರದು.

ಇನ್ನೊಂದು ಮಾತು ಹೇಳಲೇಬೇಕಾದದ್ದು ನನ್ನ ಪಿ.ಎಚ್.ಡಿ. ಪ್ರೌಢ ಪ್ರಬಂಧವನ್ನು ಬಹಳಷ್ಟು ಬದಲಾಯಿಸಿ ಒಂದು ವಿಮರ್ಶಾ ಕೃತಿಯಾಗಿ ಹೊರತರಬೇಕೆಂಬ ಆಸೆಯಿಂದ ನನ್ನ ಪ್ರಬಂಧವನ್ನು

ಅನೇಕ ಬದಲಾವಣೆ ಮಾಡಿ ವಿಮರ್ಶಾರೂಪಕ್ಕೆ ಪರಿವರ್ತಿಸಿ, ಪುಸ್ತಕ ರೂಪದಲ್ಲಿ ಸಿದ್ಧವಾದ ಮೇಲೆ, ಓದಿ ನಿಮ್ಮ ಅಭಿಪ್ರಾಯವನ್ನು ತಿಳಿಸಿ ಎಂದು ಕೊಟ್ಟೆ. ಅವರು ಸ್ವಲ್ಪ ಸಮಯ ತೆಗೆದುಕೊಂಡು ಸತಿಪತಿಗಳಿಬ್ಬರೂ ಓದಿ ಅನಿವಾರ್ಯ ತಿದ್ದುಪಡಿಗಳನ್ನು ಮಾಡಿ ಈಗ ಮುದ್ರಣಕ್ಕೆ ಕೊಡಬಹುದು ಎಂದು, ಮುನ್ನುಡಿಯನ್ನು ಬರೆದುಕೊಟ್ಟರು. ಅದರ ಜೊತೆಗೆ ಪ್ರೊ. ಲಕ್ಷ್ಮೀದೇವಿ ಅವರು ಹಾರೈಕೆಯ ನುಡಿಗಳನ್ನು ಬರೆಯುವುದರ ಮೂಲಕ ನನ್ನ ಬಗೆಗೆ ಒಳ್ಳೆಯ ಮಾತುಗಳನ್ನು ಆಡಿದರು. ಇದೊಂದು ಉತ್ತಮ ವಿಮರ್ಶಾ ಕೃತಿ ಇನ್ನೂ ಒಂದಷ್ಟು ಅಂಶಗಳನ್ನು ಸೇರಿಸಬಹುದು, ಆದರೂ ಈ ಕೃತಿಯ ಮಟ್ಟಿಗೆ ಹೇಳುವುದಾದರೆ ಚೆನ್ನಾಗಿದೆ ಎಂದು ಇಬ್ಬರೂ ಹೇಳಿ ಇದನ್ನು ಬೇಗ ಹೊರತನ್ನಿ ಎಂದು ಹಾರೈಸಿದರು. ಆಗ ನನಗೆ ಅರ್ಥವಾದ ಮತ್ತೊಂದು ವಿಚಾರವೇ ಉದಯೋನ್ಮುಖರಿಗೆ ಮತ್ತು ಆರಂಭದಲ್ಲಿ ಬರೆಯುವವರಿಗೆ ಅವರು ತೋರಿಸುವ ಕಾಳಜಿ, ಬರಹಕ್ಕೆ ನೀಡುವ ಪ್ರೋತ್ಸಾಹ. ಕಿರಿಯರಿಂದ ಹಿರಿಯರವರೆಗೆ ಅವರ ಸಂಪರ್ಕದಲ್ಲಿ ಇರುವವರಿಗೆ ತಾವು ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ತಮ್ಮ ಎದುರಿಗಿರುವವರ ಮಟ್ಟಕ್ಕೆ ಇಳಿದು ಅವರಿಗ ಅನುಕೂಲವಾಗುವಂತ ಅವರ ವ್ಯಕ್ತಿತ್ವ ಆದರ್ಶಪ್ರಾಯವಾಗಿದೆ.

ಜೈನ ಸಾಹಿತ್ಯ, ದಾಸ ಸಾಹಿತ್ಯ, ವಚನ ಸಾಹಿತ್ಯ, ಗ್ರಂಥ ಸಂಪಾದನೆ, ಶಾಸನ ಮತ್ತು ಸೃಜನ, ಸೃಜನೇತರ ಸಾಹಿತ್ಯದಲ್ಲಿ ಕೃಷಿ ಮಾಡಿರುವ ಇವರ ಓದು ಬಹು ವಿಸ್ತೀರ್ಣವಾದದ್ದು, ಅಗಾಧವಾದದ್ದು. ಇದಕ್ಕೆ ಸಾಕ್ಷಿ ಎಂಬಂತೆ ಅವರ ಮನೆಯ ಗ್ರಂಥಾಲಯವನ್ನು ನೋಡಿದರೆ ತಿಳಿಯುತ್ತದೆ ಅಸಂಖ್ಯ ಪುಸ್ತಕಗಳ ರಾಶಿ, ಎಲ್ಲಿಯೂ ನೋಡಿರದ ಅನೇಕ ಪುಸ್ತಕಗಳು ಇಲ್ಲಿ ಮಾತ್ರವೇ ಸಿಗುತ್ತವೆ ಎನ್ನುವಂತಹ ಅಭಿಮಾನದ ಪುಸ್ತಕಗಳು. ಇದೆಲ್ಲವನ್ನು ಒಂದು ನಿಧಿಯಂತೆ ಕಾಪಾಡುತ್ತಿದ್ದಾರೆ. ಪ್ರಶಸ್ತಿ, ಪುರಸ್ಕಾರ, ಬಿರುದು ಬಾವಲಿಗಳಿಗೆ ಒಲಿಯದೆ ಅನ್ಯರನ್ನು ಗೌರವಿಸಿ, ಸನ್ಮಾನಿಸುವುದರಲ್ಲಿ ಹೆಚ್ಚು ಸುಖ ಪಡುತ್ತಾ ತಮ್ಮಷ್ಟಕ್ಕೆ ತಾವು ಕರ್ಮಯೋಗಿಯಂತೆ ಕಾರ್ಯನಿರತರಾಗಿದ್ದಾರೆ.

ಕನ್ನಡವೆಂದರೆ ಶ್ರದ್ಧೆ
ಪದವೆಂದರೆ ಪರಂಪರೆ

ಪದಪರಂಪರೆ ಉಳಿಸುವ ಪಾಂಡಿತ್ಯದ ಹುಡುಕಾಟ ಎನ್ನುವ ಮೂಲ ಸೆಲೆಯೊಂದಿಗೆ ಕರ್ತವ್ಯ ನಿರತರಾಗಿರುವ ಅನಾಜಿ ಅವರು ತಮ್ಮದೇ ಏಳಿಗೆ ಸುಖ ಸಂತೋಷಗಳಿಗಾಗಿ ಕಾರ್ಯಪ್ರವೃತ್ತರಾಗಿರುವವರು ಅನೇಕ ಜನರಿರುವ ಈ ಲೋಕದಲ್ಲಿ ಇತರರ ಸುಖ ಸಂತೋಷಗಳಿಗಾಗಿ ಕೆಲಸ ಮಾಡುತ್ತಾ, ಅವರ ಸಂತೋಷದಲ್ಲಿ ತಾವೂ ಆನಂದ ಪಡುತ್ತಾ ನಗುವು ಸಹಜದ ಧರ್ಮ, ನಗಿಸುವುದು ಪರಧರ್ಮ ನಗುವ ಕೇಳುತ ನಗುವುದತಿಶಯದ ಧರ್ಮ..... ಡಿವಿಜಿಯವರ ಮುಕ್ತಕಕ್ಕೆ ಅನ್ವರ್ಥವಾಗಿ ಬದುಕುತ್ತಿದ್ದಾರೆ. ಸಾಹಿತ್ಯದ ಪರಿಚಾರಿಕೆಯಲ್ಲಿ ಹೆಚ್ಚು ಮಗ್ನರಾಗಿರುವ ಅನಾಜಿಯವರು ಒಳ್ಳೆಯ ಲೇಖಕರು, ವಿಮರ್ಶಕರು, ನಿಘಂಟು ತಜ್ಞರು, ಗ್ರಂಥ ಸಂಪಾದಕರು ಸಾಹಿತ್ಯ ಕ್ಷೇತ್ರದ ಗಣ್ಯರು ಎನಿಸುವಷ್ಟು ಖ್ಯಾತಿಯನ್ನು ಗಳಿಸಿದ್ದಾರೆ. ತಾವೊಬ್ಬರೇ ಹೆಮ್ಮರವಾಗಿ ಬೆಳೆಯುವಷ್ಟು ಸಾಧ್ಯತೆಗಳಿದ್ದರೂ ಅನೇಕರನ್ನು ತಮ್ಮೊಡನೆ ಬೆಳೆಸುವ ಪ್ರವೃತ್ತಿಯಲ್ಲಿ ನಿರಂತರವಾಗಿ ತೊಡಗಿದ್ದಾರೆ. ಅತ್ಯುತ್ತಮವಾಗಿ ಪಾಠ ಮಾಡುವ ಇನ್ನೂ ಅನೇಕ ಅಧ್ಯಾಪಕರು ಇದ್ದಾರೆ ಎನ್ನುವುದನ್ನು ಸಾಬೀತು ಮಾಡುವಂತೆ ಈಗಲೂ ಮನೆಗೆ ಬಂದವರಿಗೆ ಪಾಠ ಮಾಡುತ್ತಾ, ತಾವು ವಿದೇಶಕ್ಕೆ ಹೋದಾಗ ಅಲ್ಲಿಯೂ ಕನ್ನಡ ಪಾಠವನ್ನು ಮಾಡುವುದರ ಮೂಲಕ ಸದಾ ತಮ್ಮ ಅಸ್ಮಿತೆಯನ್ನ ಕಾಪಾಡಿಕೊಂಡಿರುವ ಅಶ್ವತ್ಥನಾರಾಯಣ ಜಿ. ಅವರ ವ್ಯಕ್ತಿತ್ವ ಆದರ್ಶಪ್ರಾಯ ಮತ್ತು ಅನುಕರಣೀಯ.

******

ಮಕ್ಕಳ ಕೂಟದ ಹಿರಿಯ ವ್ಯಕ್ತಿ

ಎ. ಆರ್. ಗೋಪಾಲ್

ಪ್ರೊಫೆಸರ್ ಜಿ. ಅಶ್ವತ್ಥನಾರಾಯಣ ಹಾಗೂ ನನ್ನ ಒಡನಾಟ ಸುಮಾರು ಇಪ್ಪತ್ತೈದು ವರ್ಷಕ್ಕೂ ಮಿಗಿಲಾದದ್ದು. ಆದರೆ ಅವರ ಪರಿಚಯ ಸುಮಾರು ಐವತ್ತು ವರ್ಷಕ್ಕೂ ಹಳೆಯದು. ಇಬ್ಬರ ಮನೆಗಳು ಒಂದೇ ಬಡಾವಣೆಯಲ್ಲಿ ಇದ್ದದ್ದರಿಂದಲೋ ಏನೋ ನಾವು ಭೇಟಿಯಾಗದಿದ್ದರೂ ಸಭೆ ಸಮಾರಂಭಗಳಲ್ಲಿ ಪರಸ್ಪರ ಮುಗುಳ್ನಗೆ ಮೂಲಕ ನಮ್ಮ ಸಂಬಂಧ ಮುಂದುವರೆದಿತ್ತು. ನನ್ನ ಹಾಗೂ ಅವರ ಕಾರ್ಯಕ್ಷೇತ್ರಗಳು ಬೇರೆ ಬೇರೆ.

ಅನಾಜಿಯವರು ವೃತ್ತಿಯಲ್ಲಿ ಕನ್ನಡ ಪ್ರಾಧ್ಯಾಪಕರು. ಆದರೆ ನನ್ನದು ಹಣಕಾಸಿಗೆ ಸಂಬಂಧಪಟ್ಟಂತಹ ಬ್ಯಾಂಕಿಂಗ್ ಕ್ಷೇತ್ರ. ಶ್ರೀ ಅನಾಜಿಯವರು ಸರ್ಕಾರಿ ವಿಜ್ಞಾನ ಕಾಲೇಜು ಹಾಗು ಸರ್ಕಾರಿ ಶಿಕ್ಷಣ ಇಲಾಖೆಯ ವಿವಿಧ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅನೇಕ ಕಡೆಗಳಲ್ಲಿ ಎಷ್ಟೋ ಮಂದಿ ನನ್ನ ಸ್ನೇಹಿತರು, ಇವರ ಪಾಠವನ್ನು ಕೇಳಲು ತಮ್ಮ ದಿನಂಪ್ರತಿಯ ತರಗತಿಗಳಿಗೆ ಹೋಗದೆ, ಇವರ ತರಗತಿಗೆ ಹೋಗುತ್ತಿದ್ದರು.

ಇವರ ಬದುಕಿನಲ್ಲಿ ಮುಖ್ಯವಾದದ್ದು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅಲ್ಲಿಗೆ ಬರುತ್ತಿದ್ದ ಕನ್ನಡದ ದಿಗ್ಗಜರಾದ ಡಿ.ವಿ.ಜಿ. ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯ, ವಿ. ಸೀತಾರಾಮಯ್ಯ ಹಾಗೂ ಪ್ರೊಫೆಸರ್ ಎಂ.ವಿ. ಸೀತಾರಾಮಯ್ಯ ಅವರ ಒಡನಾಟ. ಪ್ರೊಫೆಸರ್ ಅಶ್ವತ್ಥನಾರಾಯಣ ಅವರು ಕನ್ನಡ ದಾಸಸಾಹಿತ್ಯ ಹಾಗೂ ವ್ಯಕ್ತಿಚಿತ್ರ ಪುಸ್ತಕಗಳನ್ನು ಕನ್ನಡ ಸಾಹಿತ್ಯದ ಹಾಗೂ ಲೇಖನಗಳನ್ನು ರಚಿಸಿದ್ದಾರೆ. ಉದಾಹರಣೆಗೆ ರತ್ನಾಕರ ಮಹಾಕವಿಯ ಮೂರು ಶತಕಗಳು, ಸೌಂದರ್ಯ ಲಹರೀ ಸ್ತೋತ್ರ ದರ್ಪಣ ಇತ್ಯಾದಿ. ದಾಸ ಸಾಹಿತ್ಯಕ್ಕೆ ಶ್ರೀಯುತ ಅನಾಜಿ ಅವರ ಕೊಡುಗೆ ಅಪಾರ. ಅಖಿಲ ಕರ್ನಾಟಕ ಮಕ್ಕಳ ಕೂಟ ಹಾಗೂ ಶ್ರೀಯುತ ಅನಾಜಿಯವರ ಸಂಬಂಧ ಹಲವು ದಶಕಗಳದ್ದು. ಮಕ್ಕಳ ಕೂಟದ ಸ್ಥಾಪಕಿ ಶ್ರೀಮತಿ ಆರ್. ಕಲ್ಯಾಣಮ್ಮ ಶ್ರೀಮತಿ ಕೆ.ಟಿ. ಬನಶಂಕರಮ್ಮ ಹಾಗೂ ಇತರರ ಜೊತೆಗೂಡಿ ಮಕ್ಕಳ ಕೂಟದ ಅಭಿವೃದ್ಧಿಗೆ ಸಹಕಾರಿಯಾಗಿದ್ದಾರೆ.

ಇಂದಿಗೂ ಸಹ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಈ ರೀತಿಯಾಗಿ ಮಕ್ಕಳಕೂಟದ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಿದ್ದಾರೆ. ಇಂತಹ ಮಹನೀಯರ ಜೊತೆಗಿನ ಒಡನಾಟವು ನಮ್ಮನ್ನು ಮತ್ತಷ್ಟು ಸಾರ್ಥಕ್ಯದೆಡೆಗೆ ಕೊಂಡಯ್ಯುವಲ್ಲಿ ಸಹಕಾರಿಯಾಗಿದೆಯೆಂದರೂ ಅತಿಶಯೋಕ್ತಿಯಲ್ಲ. ಇಂತಹ ಸಂಗತಿಗಳನ್ನು ಅಕ್ಷರರೂಪದಲ್ಲಿ ಅವರ ಸಂಪರ್ಕದಲ್ಲಿ ಇರುವ ಎಲ್ಲರಿಗೂ ತಲಪಿಸುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಂತಹ ಸಮಿತಿಯವರಿಗೆ ನನ್ನ ನಮನಗಳು.

******

ಆದರ್ಶ ಕನ್ನಡ ಅಧ್ಯಾಪಕ

ಡಾ॥ ಟಿ. ಸುಬ್ರಹ್ಮಣ್ಯಂ

ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು ನನ್ನ ಹಿರಿಯ ಸಹೋದ್ಯೋಗಿ. ಜೊತೆಗೆ, ನನ್ನ ಹೆಚ್ಚಿನ ಗೌರವಕ್ಕೆ ಪಾತ್ರರಾದ ಹಿರಿಯ ಗೆಳೆಯರೂ ಹೌದು. ಕೆಲವು ವಿಷಯಗಳಲ್ಲಿ ಅವರ ಮಾರ್ಗದರ್ಶನ ನನಗೆ ಲಭ್ಯವಾಗಿದೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಅವರನ್ನು ಒಬ್ಬ ಆದರ್ಶ ಕನ್ನಡ ಅಧ್ಯಾಪಕರೆಂದು ನಾನು ಭಾವಿಸಿದ್ದೇನೆ.

ಅನಾಜಿ ಅವರು ಹಾಸನದ ಸರ್ಕಾರಿ ಕಾಲೇಜಿಗೆ ಕನ್ನಡ ಅಧ್ಯಾಪಕರಾಗಿ ವರ್ಗವಾಗಿ ಬಂದಾಗ ನಮ್ಮ ಪರಿಚಯ ನಿಕಟವಾಯಿತು. ಅದಕ್ಕೆ ಮುಂಚಿತವಾಗಿ, ಕಸಾಪ ಕಾರ್ಯದರ್ಶಿಯಾಗಿ ಅವರನ್ನು ಕಂಡಿದ್ದೆ.

ಅನಾಜಿ ಅರಳು ಹುರಿದಂತೆ ಪಟಪಟ ಮಾತಾಡುವವರು. ಅದೇ ಅವರ ಪ್ರಮುಖ ಆಕರ್ಷಣೆಯಾಗಿ ಬಿಟ್ಟು, ಅವರ ಅನೇಕ ಸದ್ಗುಣಗಳು ತಕ್ಷಣಕ್ಕೆ ಜನರ ಗಮನಕ್ಕೆ ಬರುತ್ತಿರಲಿಲ್ಲ. ನಾನು ಅವರಲ್ಲಿ ವಿಶೇಷವಾಗಿ ಗುರುತಿಸಿದ ಗುಣವೆಂದರೆ ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯದ ಮೇಲಿನ ಅವರ ಪ್ರೀತಿ. ಇನ್ನೊಂದು ಗುಣ, ಶಾಸ್ತ್ರ ಸಾಹಿತ್ಯದ ಬಗ್ಗೆ ವಿಶೇಷ ಒಲವು. ಕಾಲೇಜು ಶಿಕ್ಷಣ ಇಲಾಖೆಯ ಕನ್ನಡ ವಿಭಾಗದ ಹಲವು ಅಧ್ಯಾಪಕರು, ನಮಗೆ ಆಶ್ಚರ್ಯ ಹುಟ್ಟಿಸುವಂತೆ, ಸಾಹಿತ್ಯದ ಬಗ್ಗೆಯೇ ನಿರಾಸಕ್ತಿಯನ್ನು ಹೊಂದಿದ್ದರು. ಈ ಮಂದಿಯ ಸಾಹಿತ್ಯ ಸಂಪರ್ಕವು ನಿಗದಿ ಮಾಡಿದ ಪಠ್ಯವಿಷಯಕ್ಕೆ ಸೀಮಿತವಾಗಿರುತ್ತಿತ್ತು. ಇಂಥ ಅನಾಕರ್ಷಣೀಯ ಅಧ್ಯಾಪಕ ಸಮೂಹದ ನಡುವೆ, ಜಿ. ಅಶ್ವತ್ಥನಾರಾಯಣ ಅಂಥ ತೀರಾ ವಿಭಿನ್ನರು. ನಮಗೆ ಆದರ್ಶವಾಗಿದ್ದರು. ನಮ್ಮ ಇಲಾಖೆಯಲ್ಲಿದ್ದ, ಬೋಧನೆಯನ್ನು ತುಂಬ ಪ್ರೀತಿಸುವ ಡಾ॥ ನ. ಸುಬ್ರಹ್ಮಣ್ಯ, ಪ್ರೊ॥ ಬಿ.ಎನ್. ಶಾಸ್ತ್ರೀ, ಪ್ರೊ॥ ಅ.ರಾ. ಮಿತ್ರ, ಪ್ರೊ॥ ಕೆ.ಎಸ್. ನರಸಿಂಗರಾವ್, ಪ್ರೊ॥ ವಿ. ಗುಂಡಣ್ಣ, ಅಂಥವರ ಗುಂಪಿಗೆ ಅಶ್ವತ್ಥನಾರಾಯಣ ಸೇರಿದವರಾಗಿದ್ದರು. ಅವರು ತಾವು ಬೋಧಿಸುವ ಹಳೆಗನ್ನಡ ಪಠ್ಯಗಳನ್ನು ಗ್ರಂಥಾಲಯದಿಂದ ಎರವಲು ಪಡೆಯುತ್ತಿರಲಿಲ್ಲ. ಸ್ವಂತಕ್ಕೆ ಹಣ ಕೊಟ್ಟು ಕೊಂಡುಕೊಳ್ಳುತ್ತಿದ್ದರು. ಆ ಪುಸ್ತಕದ ಹೊಲಿಗೆಯನ್ನು ಬಿಚ್ಚಿಸಿ, ಪ್ರತಿ ಪುಟದ ಪಕ್ಕದಲ್ಲೂ ಒಂದು ಬಿಳಿ ಹಾಳೆ ಸೇರಿಸಿ, ದಪ್ಪ ಪುಸ್ತಕವನ್ನು ಬೈಂಡ್ ಮಾಡಿಸಿಕೊಳ್ಳುತ್ತಿದ್ದರು. ಆ ಬಿಳಿಹಾಳೆಯಲ್ಲಿ ಪಕ್ಕದ ಪುಟದ ಪಠ್ಯದ ಬಗ್ಗೆ ಚಿಕ್ಕ ಅಕ್ಷರಗಳಲ್ಲಿ ಅಗತ್ಯವಾದ ಟಿಪ್ಪಣಿಗಳನ್ನು ಬರೆದುಕೊಳ್ಳುತ್ತಿದ್ದರು. ಆ ಸಮೃದ್ಧವಾದ ವೈಯಕ್ತಿಕ ಟಿಪ್ಪಣಿಗಳಿಂದ ಕೂಡಿದ ಗ್ರಂಥವನ್ನು ಅವರು ಜೀವನ ಪೂರ್ತಿ ಅಗಲುತ್ತಿರಲಿಲ್ಲ. ಹೀಗೆ, ಒಮ್ಮೆ ಪಾಠ ಮಾಡಿದ ಕಾವ್ಯ ಅವರ ಜೀವನ ಸಂಗಾತಿಯಾಗಿ ಬಿಡುತ್ತಿತ್ತು. ಈ ಆದರ್ಶವನ್ನೇ ಅವರು ನಮಗೂ ಹೇಳಿಕೊಟ್ಟಿದ್ದರು; ನಾವೂ ಕೆಲವರು ಅದನ್ನು ಯಥಾಶಕ್ತಿ ಪಾಲಿಸಿದ್ದೆವು.

ಶಾಸ್ತ್ರ ಬೋಧನೆ ಎಂದರೆ ಇಲಾಖೆಯ ಕೆಲವರಿಗೆ ಚಳಿಜ್ವರ ಬರುತ್ತಿತ್ತು. ಅನಾಜಿ ಉತ್ಸಾಹದಿಂದ ಶಾಸ್ತ್ರಬೋಧನೆಯನ್ನು ಕೇಳಿ ಪಡೆದುಕೊಳ್ಳುತ್ತಿದ್ದರು. ಇಲಾಖೆಯ ಉಳಿದವರು ನಿರಾಳವಾಗಿ

ಸಂತೋಷದಿಂದ ವ್ಯಾಕರಣ, ಛಂದಸ್ಸು, ಕಾವ್ಯಮೀಮಾಂಸೆ ಇತ್ಯಾದಿಗಳನ್ನು ಅವರಿಗೇ ಬಿಟ್ಟು ಕೊಡುತ್ತಿದ್ದರು.

ಅನಾಜಿ ಅವರ ಸಭೆ-ಸಮಾರಂಭಗಳ ಭಾಷಣ ಜನಕ್ಕೆ ಬಹು ಪ್ರಿಯವಾಗಿತ್ತು. ಚಿನುಕುರುಳಿಯಂತ ಅವರ ವಾಕ್-ಲಹರಿ ಜನರನ್ನು ಆಕರ್ಷಿಸಿ, ಮುದಕೊಡುತ್ತಿತ್ತು. ಹೀಗಾಗಿ, ಕಾಲೇಜಿನಲ್ಲಿ ಅಲ್ಲದೇ ಊರಿನ ಸಾಹಿತ್ಯ ಸಮುದಾಯದಲ್ಲೂ ಅನಾಜಿ ಪ್ರಿಯವ್ಯಕ್ತಿಯಾಗಿದ್ದರು.ಯಾವ ಊರಿಗೇ ಹೋಗಲಿ, ಅಲ್ಲಿನ ಸಭೆ-ಸಮಾರಂಭಗಳಲ್ಲಿನ ಅನಿವಾರ್ಯ ವ್ಯಕ್ತಿಗಳಲ್ಲಿ ಅವರೊಬ್ಬರಾಗಿ ಬಿಡುತ್ತಿದ್ದರು.

ಸಾಹಿತ್ಯದ ಅಧ್ಯಯನ ಬೋಧನೆಯ ಜೊತೆಗೆ ಸಾಹಿತ್ಯ-ಸಂಸ್ಕೃತಿ ಚಟುವಟಿಕೆಗಳ ಸಂಘಟನೆಯಲ್ಲಿ ಅನಾಜಿ ತೀವ್ರವಾಗಿ ನಿರತರಾಗಿದ್ದರು. ಸಂಘಟನೆಯಲ್ಲಿ ಅವರು ದಕ್ಷರು ಮತ್ತು ಬಹಳ ಶಿಸ್ತಿನ ವ್ಯಕ್ತಿಯಾಗಿದ್ದರು. ಕೆಲವೊಮ್ಮೆ ಈ ಶಿಸ್ತು ಮುಜುಗರವನ್ನೂ ಉಂಟು ಮಾಡುತ್ತಿತ್ತು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದ ಸಂದರ್ಭ. ಕನ್ನಡದ ಹಿರಿಯ ಸಾಹಿತಿಗಳೊಬ್ಬರು ಪರಿಷತ್ತಿನ ಯೋಜನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಅವರು ಸಮಯಪಾಲನೆ ಮಾಡುತ್ತಿರಲಿಲ್ಲ. ಯಾವುದೇ ಮುಲಾಜು ತೋರಿಸದೆ ಕಾರ್ಯದರ್ಶಿಗಳಾದ ಅನಾಜಿ ಅವರು, ಆ ಹಿರಿಯ ಸಾಹಿತಿಗೆ ಮೆಮೋ ಕೊಟ್ಟೇ ಬಿಟ್ಟರಂತೆ! ಮೆಮೋ ಕೊಡುವುದು ಸರ್ಕಾರಿ ಇಲಾಖೆಗಳಲ್ಲಿ ವಾಡಿಕೆ. ಆದರೆ ಆ ಹಿರಿಯ ಸಾಹಿತಿಗಳು ಅವರ ಜನ್ಮದಲ್ಲಿ ಇಂತಹ ಮೆಮೋ ಪಡೆದಿರಲಿಲ್ಲ. ಇದೊಂದು ದೊಡ್ಡ ಮುಜುಗರದ ಪ್ರಸಂಗವೇ ಆಗಿಬಿಟ್ಟಿತಂತೆ! ಅನಾಜಿ ಅವರ ಸ್ವಭಾವವೇ ಹಾಗೆ. ಖಂಡತುಂಡವಾಗಿ ಮಾತಾಡುವವರು. ಅದರಿಂದ ಅನೇಕರು ಅವರ ಬಗ್ಗೆ ಅಸಮಾಧಾನ ಪಟ್ಟುಕೊಳ್ಳುತ್ತಿದ್ದರು. ಆದರೆ ಅನಾಜಿ ಯಾವುದನ್ನೂ ಲೆಕ್ಕಿಸುತ್ತಿರಲಿಲ್ಲ. ತಮ್ಮ ದಾರಿಯಲ್ಲೇ ಮುನ್ನಡೆಯುತ್ತಿದ್ದರು.

ಅನಕೃ-ಮ.ರಾಮಮೂರ್ತಿ ಅವರು ಪ್ರಾರಂಭಿಸಿದ, ಅರ್ಥಪೂರ್ಣವೂ ಅತ್ಯವಶ್ಯಕವೂ ಆಗಿದ್ದ, ಕನ್ನಡ ಚಳುವಳಿಯ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬರಾಗಿದ್ದ ಅನಾಜಿ ಅವರು, ಆ ಚಳುವಳಿಯ ಸಾಂಸ್ಕೃತಿಕ ಮುಖದ ಪ್ರತಿನಿಧಿಯಾಗಿದ್ದಾರೆ. ಕನ್ನಡ ಅವರ ಜೀವನದ ಸರ್ವಸ್ವವಾಗಿದೆ. ಸಾಹಿತ್ಯ-ಗಮಕ-ಸಂಘಟನೆ-ಪ್ರವಾಸ ಹೀಗೆ ಹಲವು ಮುಖಗಳ ಕಾರ್ಯಕ್ರಮಗಳಲ್ಲಿ ತೊಡಗಿ, ವಿವಿಧ ಕ್ಷೇತ್ರಗಳಲ್ಲಿ ದುಡಿದಿರುವ ಅವರು ಸಮೃದ್ಧವಾಗಿ ಬರವಣಿಗೆಯ ಕೆಲಸವನ್ನು ಮಾಡಿದ್ದಾರೆ.

ಹಳಗನ್ನಡ-ನಡುಗನ್ನಡ ಅವರ ಬರವಣಿಗೆಯ ಮುಖ್ಯಕ್ಷೇತ್ರ ಅದರಲ್ಲೂ ದಾಸ ಸಾಹಿತ್ಯದ ಬಗ್ಗೆ ಅವರ ಪರಿಶ್ರಮ ಹೆಚ್ಚಾಗಿದೆ. ಅವರು ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವ್ಯಾಪಕ ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗಿದ್ದ ಸಂಘಟಕರಾದದ್ದರಿಂದ ಹಿರಿಯ ಸಾಹಿತಿಗಳ ಪರಿಚಯ ಅವರಿಗೆ ಹೆಚ್ಚಾಗಿತ್ತು. ಅದರ ಲಾಭ ಕನ್ನಡಿಗರಿಗೆ, ಅವರ ಬರವಣಿಗೆಯ ಮೂಲಕ ದಕ್ಕಿದೆ. ಎಂವಿಸೀ, ಹೊಸಕೆರೆ ಚಿದಂಬರಯ್ಯ, ಹು.ಮ.ರಾಮಾರಾಧ್ಯ ಮುಂತಾದವರಲ್ಲದೇ, ಫ.ಗು. ಹಳಕಟ್ಟಿ, ದೇವುಡು ನರಸಿಂಹಶಾಸ್ತ್ರೀ, ಬಿ.ಎಂ.ಶ್ರೀ. ಅಂಥ ಖ್ಯಾತನಾಮರ ಬಗ್ಗೆಯೂ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. “ಕನ್ನಡ ಸಾಹಿತ್ಯ ದಿಗ್ಗಜರು”, “ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು”, “ನನಗೆ ಸವಿನೆನಪುಗಳು-ನಿಮಗೆ ರಸಪ್ರಸಂಗಗಳು”- ಇವೆಲ್ಲ ಆಕರ್ಷಕ ಪುಸ್ತಕಗಳು.

ಈ ವಯಸ್ಸಿನಲ್ಲಿ ಅನಾಜಿ ತುಂಬಾ ಚಟುವಟಿಕೆಯಿಂದ, ಕ್ರಿಯಾಶೀಲರಾಗಿರುವುದು ತುಂಬಾ ಸಂತೋಷದ ಸಂಗತಿ. ಅವರ ಮುಂದಿನ ಜೀವನ ಇದೇ ರೀತಿ ಸಾರ್ಥಕವೂ, ಸಮೃದ್ಧವೂ ಆಗಲಿ, ಆರೋಗ್ಯಪೂರ್ಣ ನೂರು ವರ್ಷಗಳು ಅವರದ್ದಾಗಲಿ ಎಂದು ಹಾರೈಸುತ್ತೇನೆ.

****

ಅಪ್ರತಿಮ ವಿದ್ವಾಂಸ ; ಅಪರೂಪದ ಮಾರ್ಗದರ್ಶಕ

ಯಗಟಿ ಮೋಹನ್
ಚರವಾಣಿ : ೯೮೮೦೧೮೪೩೫೬

ಅವರೊಬ್ಬ ಅದ್ಭುತ ಮಾತುಗಾರ, ಸರಳ ಜೀವಿ, ಸ್ನೇಹಮಯಿ , ಅಪ್ರತಿಮ ವಿದ್ವಾಂಸ ಜೊತೆಗೆ ನಿಗರ್ವಿ. ಪ್ರೊ. ಅಶ್ವತ್ಥನಾರಾಯಣ ಅವರನ್ನು ಕುರಿತು ಹೇಳಬೇಕೆಂದರೆ ಪದಗಳು ಸಾಲದು. ಅವರದ್ದು ಒಂದು ರೀತಿಯ ಆಯಸ್ಕಾಂತೀಯ ವ್ಯಕ್ತಿತ್ವ, ಪರಿಚಯವಾದವರನ್ನು ಸ್ನೇಹದ ಸಂಕೋಲೆಯಲ್ಲಿ ಬಿಗಿದು ಹಿಡಿದಿಟ್ಟುಕೊಳ್ಳುವ ಶ್ರೇಷ್ಠ ಗುಣ ಅವರದ್ದು, ಅದಕ್ಕಾಗೇ ಅವರೊಬ್ಬ ಅಜಾತ ಶತ್ರುವಾಗಿದ್ದಾರೆ. ನನ್ನದು ಅಶ್ವತ್ಥನಾರಾಯಣ ಅವರ ಸ್ನೇಹ ದಶಕದಷ್ಟು ಹಳೆಯದು. ಅವರು ನನಗಿಂತ ವಯಸ್ಸು, ಅನುಭವದಲ್ಲಿ ಹಿರಿಯರು. ನನ್ನಂತಹ ಎಷ್ಟೋ ಮಂದಿ ವಿದ್ಯಾರ್ಥಿಗಳನ್ನು ತಯಾರು ಮಾಡಿದವರು. ಈ ಕಾರಣಕ್ಕಾಗಿಯೇ ನಾನು ಅವರನ್ನು ಪೂಜ್ಯ ಗುರುವಿನ ಸ್ಥಾನದಲ್ಲಿ ಅತ್ಯಂತ ಗೌರವದಿಂದ ಸದಾ ನೋಡ ಬಯಸುತ್ತೇನೆ.

ನಗರದ ಪ್ರತಿಷ್ಠಿತ ವಸತಿ ಸಂಸ್ಥೆ ನಿರ್ಮಾಣ್ ಶೆಲ್ಟರ್ಸ್ ವತಿಯಿಂದ ನಡೆಯುತ್ತಿದ್ದ ಹಲವು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ವಾಗತ ಭಾಷಣ, ನಿರೂಪಣೆ, ಸನ್ಮಾನಿತರಿಗೆ ಅರ್ಪಿಸುವ ಬಿನ್ನವತ್ತಳೆಯ ಸಾಹಿತ್ಯ ಎಲ್ಲವೂ ಅವರದ್ದೇ. ಸ್ವಭಾವತಃ ನಾನು ವಾಚಾಳಿಯಲ್ಲ. ಅಪರಿಚಿತರ ಎದುರು ತೆರೆದುಕೊಳ್ಳುವ ಸ್ವಭಾವವೂ ನನ್ನದಲ್ಲ. ಆದರೆ ಪ್ರೊ. ಅಶ್ವತ್ಥನಾರಾಯಣ ಅವರದ್ದು ಇದಕ್ಕೆ ತದ್ವಿರುದ್ಧ ಸ್ವಭಾವ. ಎದುರುಗಡೆ ಇರುವ ಕಗ್ಗಲ್ಲನ್ನೂ ಮಾತಿಗೆಳೆಯುವ ಚಮತ್ಕಾರಿಕ ಕಲೆ ಅವರಲ್ಲಿದೆ. ನಿರ್ಮಾಣ್ ಶೆಲ್ಟರ್ಸ್ ಕಾರ್ಯಕ್ರಮಗಳಿಗೆ ನಾನು ಮತ್ತು ನನ್ನ ಗೆಳೆಯರಲ್ಲಿ ಒಬ್ಬರಾದ ಬೆಂಗಳೂರಿನಲ್ಲಿ ಜಾಹೀರಾತು ಕಂಪನಿ ನಡೆಸುತ್ತಿರುವ ರಾಜ್‌ಕುಮಾರ್ ಕಾಯಂ ಆಹ್ವಾನಿತರು. ಹೀಗೇ ಕಾರ್ಯಕ್ರಮಗಳಿಗೆ ಒಟ್ಟಿಗೇ ಹೋಗುವಾಗ ಪ್ರೊಫೆಸರ್ ಪರಿಚಯವಾದರು. ನಂತರ ನಮ್ಮ ಸ್ನೇಹ ಗಟ್ಟಿಯಾಯಿತು.

ಅಶ್ವತ್ಥನಾರಾಯಣ ಅವರ ಜತೆ ಮಾತಿಗೆ ಕುಳಿತರೆ ಅಲ್ಲಿ ಕೆಲಸಕ್ಕೆ ಬಾರದ ಕಾಡುಹರಟೆಗಳಿಗೆ ಅವಕಾಶವೇ ಇರುವುದಿಲ್ಲ. ಹಾಗೆಯೇ ಇನ್ನೊಬ್ಬರನ್ನು ಕುರಿತು ಹಗುರವಾದ ಮಾತುಗಳಿಗೆ ಜಾಗವೂ ಇರುವುದಿಲ್ಲ. ಸಾಹಿತ್ಯದ ಪ್ರಸಂಗಗಳ ಕುರಿತು ಅವರು ಮಾತಿಗೆ ಶುರುವಿಟ್ಟುಕೊಂಡರೆ ಅದಕ್ಕೆ ಸಮಯದ ಪರಿವೆಯೇ ಇರುವುದಿಲ್ಲ. ಹಾಗೆಯೇ ಎಲ್ಲೂ ಬೇಸರ ಆಗದಂತೆ ವಿಚಾರದ ಕುರಿತ ಆಸಕ್ತಿ ಮತ್ತು ಕುತೂಹಲ ಮೂಡುವಂತೆ ಮಾಡುವ ಮೋಡಿ ಅವರಲ್ಲಿದೆ.

ಇಂತಹ ಎಷ್ಟೋ ಪ್ರಸಂಗಗಳನ್ನು ಅವರು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಅವರ ಸ್ನೇಹ ಬಳಗವೂ ದೊಡ್ಡದು ಕನ್ನಡ ಕಾವ್ಯ ಲೋಕಕ್ಕೆ ಹೊಸ ದಿಕ್ಕು ತೋರಿದ ಪೂಜನೀಯ ಹಿರಿಯ ಕವಿ ಪು.ತಿ.ನರಸಿಂಹಾಚಾರ್ ರವರಂತಹ ದಿಗ್ಗಜರಿಂದ ಹಿಡಿದು ನಿತ್ಯೋತ್ಸವದ ಕವಿ

ಪ್ರೊ. ನಿಸಾರ್ ಅಹಮದ್ ಅಂತಹ ಸಮಕಾಲೀನರವರೆಗೆ ಅವರ ಸ್ನೇಹಿತರ ಬಳಗ ದೊಡ್ಡದು. ಆತ್ಮೀಯರ ಬಳಗದಲ್ಲಿ ಅನಾಜಿ ಎಂದೇ ಗುರುತಿಸಲ್ಪಡುವ ಅವರದ್ದು ಅಧ್ಯಯನಶೀಲ ವ್ಯಕ್ತಿತ್ವ. ಈ ಕಾರಣಕ್ಕಾಗಿಯೇ ಅವರು ಸಾಹಿತಿಗಳ ವಲಯದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಬೆಂಗಳೂರಿನಲ್ಲಿ ಬೇರೆಲ್ಲೂ ಕಾಣ ಸಿಗದ ಕನ್ನಡ ಪುಸ್ತಕಗಳ ಭಂಡಾರ ಅವರ ಮನೆಯಲ್ಲಿದೆ. ಆದರೆ ಪುಸ್ತಕಗಳ ವಿಚಾರದಲ್ಲಿ ಅವರು ಕಟ್ಟುನಿಟ್ಟು ಅದನ್ನು ಅಮೂಲ್ಯ ಆಸ್ತಿ ಎಂಬಂತೆ ಕಾಪಾಡಿಕೊಂಡು ಬಂದಿದ್ದಾರೆ. ಪು.ತಿ.ನ. ಅವರೊಂದಿಗಿನ ತಮ್ಮ ಅನೇಕ ನೆನಪುಗಳನ್ನು ಪ್ರೊ.ಅಶ್ವತ್ಥನಾರಾಯಣ ನನ್ನ ಬಳಿ ಹಂಚಿಕೊಂಡಿದ್ದಾರೆ. ಅವೆಲ್ಲವನ್ನು ಅವರಿಂದಲೇ ಕೇಳುವುದು ಚೆಂದ. ಅಂಥ ಒಂದು ಪ್ರಸಂಗವನ್ನು ಇಲ್ಲಿ ದಾಖಲಿಸಲು ಪ್ರಯತ್ನಿಸಿದ್ದೇನೆ.

ಆಹಾ ....ಭಾಗ್ಯವೆಂದರೆ ಇದೇ ಅಲ್ವೇನಯ್ಯಾ (ಪ್ರೊ. ಜಿ. ಅಶ್ವತ್ಥನಾರಾಯಣ ಅವರು ವಿವರಿಸಿದ ಪ್ರಸಂಗ)

"ತಮ್ಮ ಕಾವ್ಯಗಳ ಮೂಲಕ ಜನಪ್ರಿಯರಾದ ಕವಿ. ಪು.ತಿ. ನರಸಿಂಹಾಚಾರ್ ಅವರು ಪಕ್ಕಾ ಸಂಪ್ರದಾಯವಾದಿ. ಆದರೇನಂತೆ ಆತಿಥ್ಯದ ವಿಚಾರಕ್ಕೆ ಬಂದರೆ ಅವರಷ್ಟು ಧಾರಾಳಿ ಇನ್ನೊಬ್ಬರಿಲ್ಲ ಎನ್ನಬಹುದೇನೋ. ಅದಕ್ಕೊಂದು ಸ್ಯಾಂಪಲ್ ಇಲ್ಲಿದೆ. ಖ್ಯಾತ ಸಾಹಿತಿಗಳಾದ ಡಾ. ಪ್ರಭುಶಂಕರ ಮತ್ತು ಪ್ರೊ. ಸು.ಜ.ನ. ಅವರಿಗೆ ಪು.ತಿ.ನ. ಅವರನ್ನು ಕುರಿತು ಅಪಾರ ಭಕ್ತಿ ಮತ್ತು ಗೌರವ. ಒಂದು ರೀತಿಯಲ್ಲಿ ಹೇಳಬಹುದಾದರೆ ತಮ್ಮ ಗುರುವಿನ ಬಗ್ಗೆ ಈ ಶಿಷ್ಯರಿಗೆ ಒಂದು ರೀತಿಯಲ್ಲಿ ದೇವರ ಬಗ್ಗೆ ಇರಬಹುದಾದ ಆರಾಧನಾ ಮನೋಭಾವ.

ಒಮ್ಮೆ ಬೆಂಗಳೂರಿನ ಕಲಾಕ್ಷೇತ್ರದಲ್ಲಿ ಯಾವುದೊ ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಕ್ಕೆ ಈ ಇಬ್ಬರು ಮಿತ್ರರೂ ಮೈಸೂರಿನಿಂದ ಬಂದಿದ್ದರು. ಅದು ಸಂಜೆ ಇದ್ದ ಕಾರ್ಯಕ್ರಮವಾಗಿದ್ದರಿಂದ ಮುಗಿಯುವುದು ತಡವಾಗಿ ರಾತ್ರಿಯಾಗಿತ್ತು. ಹೇಗೂ ಮೈಸೂರಿನಿಂದ ವಾಹನದಲ್ಲಿ ಬಂದಿದ್ದೇವೆ. ಗುರುಗಳಾದ ಪು.ತಿ.ನ. ಅವರನ್ನು ಕಂಡು ಮಾತಾಡಿಸಿ ಹೋಗೋಣ ಇಷ್ಟು ಬೇಗ ಅವರು ಮಲಗಿರಲಾರರು ಎಂದವರೆ ಡಾ. ಪ್ರಭುಶಂಕರ ಪು.ತಿ.ನ ಅವರ ಮನೆಗೆ ಫೋನಾಯಿಸಿದರು. ಆಗೆಲ್ಲ ಮೊಬೈಲ್ ಇರಲಿಲ್ಲ. ಅಲ್ಲೇ ಇದ್ದ ಲ್ಯಾಂಡ್‌ಲೈನಿನಿಂದ ಪು.ತಿ.ನ. ಅವರ ಮನೆಗೆ ಕರೆ ಮಾಡಿ ಸಾರ್, ಬೆಂಗಳೂರಿಗೆ ಬಂದಿದ್ದೆವು ಒಂದು ಕಾರ್ಯಕ್ರಮ ಇತ್ತು. ಮೈಸೂರಿಗೆ ವಾಪಸಾಗುವ ಮುನ್ನ ನಿಮ್ಮನ್ನು ಕಂಡು ಮಾತಾಡಿಸಿಕೊಂಡು ಹೋಗೋಣ ಅಂದುಕೊಂಡು ಫೋನ್ ಮಾಡಿದೆ ತೊಂದರೆ ಆಯ್ತೇನೋ ಎಂದು ತುಸು ಸಂಕೋಚದಿಂದಲೇ ಕೇಳಿದರು.

ಆ ಮಾತಿಗೆ ಆ ಕಡೆಯಿಂದ ಉತ್ತರಿಸಿದ ಪು.ತಿ.ನ. ಅಯ್ಯೋ ಎಲ್ಲಾದರೂ ಉಂಟೇನಪ್ಪಾ, ಕಲಾಕ್ಷೇತ್ರದಲ್ಲಿ ಕಾರ್ಯಕ್ರಮ ಅಂತಿದ್ದೀರಿ ಅಲ್ಲಿಯ ವ್ಯವಸ್ಥೆಗಳು ಹೇಗೋ ಏನೋ, ಒಂದು ಕೆಲಸ ಮಾಡಿ ಸೀದಾ ಊಟಕ್ಕೆ ಇಲ್ಲಿಗೇ ಬಂದು ಬಿಡಿ ಎಂದರು. ಸರಿ ರಾತ್ರಿ ಹತ್ತು ಹನ್ನೊಂದು ಗಂಟೆ ದಾಟಿದ್ದರೂ ಮಲಗದೇ ಶಿಷ್ಯರಿಗಾಗಿ ತಮ್ಮ ಜಯನಗರ ಟಿ.ಬ್ಲಾಕ್ ನ ಮನೆಯಲ್ಲಿ ಕಾಯುತ್ತಿದ್ದ ಪು.ತಿ.ನ., ಶಿಷ್ಯರು ಬಂದೊಡನೆಯೇ ಅವರನ್ನು ಸಡಗರದಿಂದ ಸ್ವಾಗತಿಸಿ ಕುಶಲೋಪರಿ ವಿಚಾರಿಸಿ ಊಟಕ್ಕೇಳಿ ಎಂದು ಎಂದು ಎಬ್ಬಿಸಿದರು.

ಆವತ್ತು ರಾತ್ರೆ ಮೈಸೂರಿನಿಂದ ಈ ಸಾಹಿತಿಮಿತ್ರರ ಜತೆ ಬಂದಿದ್ದ ಎಲ್ಲರಿಗೂ ಪು.ತಿ.ನ ಅವರ ಮನೆಯಲ್ಲಿ ಪುಷ್ಕಳವಾದ ಭೋಜನ. ಸರಿ ಊಟವಾದ ನಂತರ ಒಂದಷ್ಟು ಹೊತ್ತು ಹರಟೆ, ಸಾಹಿತ್ಯದ ವಿಚಾರಗಳಿಗೆ ಸಂಬಂಧಿಸಿದಂತೆ ಚರ್ಚೆ. ಹೊತ್ತು ಕಳೆದು ಮಧ್ಯರಾತ್ರಿ ದಾಟಿದರೂ ಈ ಹರಟೆ ಮುಗಿಯುವಂತೆಯೇ ಇರಲಿಲ್ಲ. ಪಕ್ಕಾ ಸಂಪ್ರದಾಯಸ್ಥರಾದ ಪು.ತಿ.ನ. ಅವರ ಮನೆಯಲ್ಲಿ ಒಂದು

ಅಲಿಖಿತ ನಿಬಂಧನೆ ಎಂದರೆ ಮನೆಗೆ ಬಂದ ಅತಿಥಿಗಳ ಊಟವಾಗುವವರೆಗೆ ಮನೆಯವರೂ ಯಾರೂ ಊಟಮಾಡುವಂತಿಲ್ಲ ಎಂಬುದು. ಅಂದರೆ ಅತಿಥಿ ದೇವೋಭವ ಎಂಬುದನ್ನು ಈ ಹಿರಿಯ ಜೀವ ಪಾಲಿಸಿಕೊಂಡು ಬಂದಿದ್ದರು.

ಸರಿ ಊಟ-ಹರಟೆ ಮುಗಿಸಿದ ಅತಿಥಿಗಳು ಮೈಸೂರಿಗೆ ಹೊರಡಲು ಕಾರು ಹತ್ತುವ ವೇಳೆಗೆ ಅಹೋರಾತ್ರಿಯಾಗಿತ್ತು. ಅತಿಥಿಗಳನ್ನು ಕಳಿಸಿ ಮನೆಯವರೆಲ್ಲ ಊಟಮಾಡಿ ಮಲಗುವ ಹೊತ್ತಿಗೆ ಅರ್ಧ ರಾತ್ರಿ ದಾಟಿತ್ತು. ಇಲ್ಲಿ ವಿಷಯ ಎಂದರೆ ಅದಲ್ಲ ಮುಂದಿನದು ಇನ್ನೂ ಕುತೂಹಲಕರವಾದುದು. ಪು.ತಿ.ನ. ಅವರ ಮನೆ ಇದ್ದ ಜಯನಗರ ಟಿ. ಬ್ಲಾಕಿನಲ್ಲೇ ನನ್ನ ಮನೆ. ಆಗೆಲ್ಲ ನಾವು ಹುಡುಗರು. ಬೆಳಗ್ಗೆ ಎದ್ದು ಅವರ ಮನೆಗೆ ಆಗಾಗ ಹೋಗುವುದು ನಾನು ಬೆಳೆಸಿಕೊಂಡು ಬಂದಿದ್ದ ಅಭ್ಯಾಸ.

ಎಂದಿನಂತೆ ಬೆಳಗ್ಗೆ ಎಂಟು ಗಂಟೆಗೆಲ್ಲ ಅವರ ಮನೆಗೆ ನಾನು ಹಾಜರಾದಾಗ ಮನೆಯ ಹೊರಗಿನ ವರಾಂಡದಲ್ಲಿ ಪೇಪರ್ ಓದುತ್ತಿದ್ದ ಕುಳಿತಿದ್ದ ಪು.ತಿ.ನ. ನನ್ನನ್ನು ಕಂಡವರೆ 'ಬಾರಯ್ಯಾ ಬಾ ನಿನ್ನೇ ರಾತ್ರಿ ಎಂಥಾ ಅಪರೂಪದ ಅವಕಾಶ ನನಗೆ ಸಿಕ್ಕಿತ್ತು ಅಂದರೆ ಅದು ದೇವರೇ ನನಗಾಗಿ ಸೃಷ್ಟಿಸಿಕೊಟ್ಟ ಅಪೂರ್ವ ಅವಕಾಶ ಕಣಯ್ಯ' ಎಂದು ಹಿಂದಿನ ರಾತ್ರಿ ಮೈಸೂರಿನಿಂದ ಬಂದ ಅತಿಥಿಗಳ ಬಗ್ಗೆ ಅವರಿಗೆ ತಾವು ಮನೆಯಲ್ಲಿ ನೀಡಿದ ಸತ್ಕಾರದ ಬಗ್ಗೆ ಹೇಳತೊಡಗಿದರು.

ಆವತ್ತು ಪು.ತಿ.ನ. ಅವರು ಎಷ್ಟು ಆನಂದಭರಿತರಾಗಿದ್ದರು ಎಂದರೆ ಅವರ ಮಾತುಗಳಲ್ಲಿ ಪದೇ ಪದೇ ಇದು ದೇವರೇ ನನಗಾಗಿ ಸೃಷ್ಟಿಸಿದ್ದ ಅವಕಾಶ ಕಣಯ್ಯ ಮೈಸೂರಿನ ಅತಿಥಿಗಳು ಫೋನ್ ಮಾಡುವುದು ಒಂದು ನಿಮಿಷ ತಡವಾಗಿದ್ದರೂ ಮನೆಯಲ್ಲಿ ನಮ್ಮದೆಲ್ಲ ಊಟ ಮುಗಿದಿರುತ್ತಿತ್ತು. ಇನ್ನೇನು ತಟ್ಟೆಯಲ್ಲಿದ್ದ ಊಟಕ್ಕೆ ಕೈ ಹಾಕಬೇಕೆನ್ನುಷ್ಟರಲ್ಲಿ ಮೈಸೂರಿನ ಗೆಳೆಯರಿಂದ ಫೋನ್ ಬಂತು. ಊಟಕ್ಕೆ ಬರುವಂತೆ ಆಹ್ವಾನಿಸಿದೆ. ಎಂದು ನಡೆದ ಸಂಗತಿಯನ್ನೆಲ್ಲ ವಿವರಿಸಿದರು.

ಅವರೆಲ್ಲ ಊಟ ಮುಗಿಸಿ ಹೋಗುವ ತನಕ ಮನೆಯಲ್ಲಿದ್ದವರು ಯಾರೂ ಊಟ ಮಾಡದೇ ಅತಿಥಿಗಳ ಸತ್ಕಾರದಲ್ಲೇ ಬೀಗಿದರು. ಹಿಂದಿನ ರಾತ್ರಿಯ ಪ್ರಸಂಗ ವಿವರಿಸಿದ ಪು.ತಿ.ನ. ಇನ್ನೇನು ತಟ್ಟೆಗೆ ಕೈ ಹಾಕಬೇಕು ಅನ್ನುವಷ್ಟರಲ್ಲಿ ಫೋನ್ ಬಂತು. ನಾನು ಕರೆ ಸ್ವೀಕರಿಸುವುದು ಒಂದು ಸೆಕೆಂಡ್ ತಡವಾಗಿದ್ದರೆ ಮನೆಯವರೆಲ್ಲ ಊಟ ಶುರು ಮಾಡಿಬಿಡುತ್ತಿದ್ದೆವು. ಅತಿಥಿಗಳು ಉಪವಾಸ ಹೋಗಬೇಕಿತ್ತು. ಆದರೆ ಸುದೈವವಶಾತ್ ಹಾಗೆ ಆಗಲಿಲ್ಲ. ದೇವರೇ ಹೀಗಾಗುವುದನ್ನು ತಪ್ಪಿಸಿದ ಎಂದೂ ಹೇಳುವಾಗ ಪು.ತಿ.ನ. ಅವರ ಮುಖದಲ್ಲಿ ಅದ್ಯಾವುದೋ ಪುಣ್ಯ ಕಾರ್ಯ ಮಾಡಿ ಧನ್ಯರಾದ ಭಾವ ತುಂಬಿತ್ತು." ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ ಎಂಬ ಮಾತೊಂದಿದೆ. ಅಶ್ವತ್ಥನಾರಾಯಣರಂತಹ ಹಿರಿಯ ವಿದ್ವಾಂಸರ ಗೆಳೆತನ ಸಿಕ್ಕಿದ್ದು ನನ್ನ ಸೌಭಾಗ್ಯ.

****

ನಡೆದಾಡುವ ಗ್ರಂಥಾಲಯ ಅನಾಜಿ

ಡಾ.ಎಲ್.ಜಿ. ಮೀರಾ
ಚರವಾಣಿ : ೯೯೮೦೩೦೮೮೪೫

ನಾನು ಅನಾಜಿ (ಪ್ರೊ. ಎ.ಎನ್. ಅಶ್ವತ್ಥನಾರಾಯಣ) ಅವರನ್ನು ಮೊದಲು ನೋಡಿದ್ದು ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ. ಅರ್ಧ ತೋಳಿನ ಶರಟು, ಪ್ಯಾಂಟು, ಎಡಭುಜಕ್ಕೆ ಸದಾ ಇಳಿಬಿದ್ದಿರುತ್ತಿದ್ದ ಪುಸ್ತಕದ ಚೀಲ, ಗಾಳಿಗಷ್ಟು ಹಾರಾಡುವ ಮುಂದಲೆಯ ಅಲೆಗೂದಲು, ಹಾಗೆಯೇ ಎಂದೂ ಮಾಸದ ಮುಗುಳ್ನಗೆ ಮೊಗದ ಹಿರಿಯರು. ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ (ಈಗ ಅದು ನೃಪತುಂಗ ವಿಶ್ವವಿದ್ಯಾಲಯ) ನಾನು ಆಗಷ್ಟೇ ಹೊಸದಾಗಿ ಕೆಲಸಕ್ಕೆ ಸೇರಿದ್ದ ಸಮಯ ಅದು. ಈ ಹಿರಿಯರು ಕೆಲವೊಮ್ಮೆ ನಮ್ಮ ಕಾಲೇಜಿನ ಕನ್ನಡ ವಿಭಾಗಕ್ಕೆ ಬರುತ್ತಿದ್ದರು. ಆಗ ನನ್ನ ಹಿರಿಯ ಸಹೋದ್ಯೋಗಿಗಳಾಗಿದ್ದ ಪ್ರೊ. ಪಿ.ಜಿ. ರುಕ್ಕಿಣಿ, ಪ್ರೊ. ಸಿ.ಜಿ. ವೆಂಕಟಯ್ಯ, ಪ್ರೊ. ಯು.ಆರ್. ಲಲಿತಾ, ಪ್ರೊ. ಪ್ರೇಮಲತಾ, ಶ್ರೀ ಕೃಷ್ಣಪ್ಪ ಇವರೆಲ್ಲರೂ ಹಿಂದೆ ತಮ್ಮ ಸಹೋದ್ಯೋಗಿಯಾಗಿದ್ದ ಇವರು (ಅನಾಜಿಯವರು) ಬಂದರೆಂದರೆ ಹಿರಿಯಣ್ಣನೊಬ್ಬ ತಮ್ಮ ಮನೆಗೆ ಬಂದಷ್ಟು ಸಂಭ್ರಮಿಸುತ್ತಿದ್ದರು. ಪುಂಖಾನುಪುಂಖವಾಗಿ ಪುಸ್ತಕಗಳ ಹೆಸರು ಹೇಳುತ್ತಾ, ಸಾಹಿತ್ಯ ಕ್ಷೇತ್ರದ ನೆನಪುಗಳನ್ನು ಸುರುಳಿ ಸುರುಳಿಯಾಗಿ ಬಿಚ್ಚುತ್ತಾ ಇವರೆಲ್ಲರೊಂದಿಗೆ ಅನಾಜಿಯವರು ಮಾತಾಡುತ್ತಿದ್ದರೆಂದರೆ ನಾನು ಬೆರಗುಗಣ್ಣಿನಿಂದ ನೋಡುತ್ತಾ ಇರುತ್ತಿದ್ದೆ.

ಇನ್ನೂ ಇಪ್ಪತ್ನಾಲ್ಕು, ಇಪ್ಪತ್ತೈದು ವರ್ಷದ ಇನ್ನೂ ಆಗಷ್ಟೇ ಪ್ರಬುದ್ಧ ಜೀವನಕ್ಕೆ, ಅಧ್ಯಾಪನಕ್ಕೆ ಹಾಗೂ ಗಂಭೀರ ಬರವಣಿಗೆಗೆ ತೆರೆದುಕೊಳ್ಳುತ್ತಿದ್ದ ನನ್ನನ್ನು, 'ಅಯ್ಯೋ, ಎಳಸು. ಇದರ ಹತ್ತಿರ ಏನು ಮಾತಾಡುವುದು?' ಎಂಬ ನಿರ್ಲಕ್ಷ್ಯ ತೋರದೆ ಅನಾಜಿಯವರು ತುಂಬ ವಿಶ್ವಾಸದಿಂದ ಮಾತಾಡಿಸುತ್ತಿದ್ದರು. ಯಾವುದೇ ವಿಷಯವಾಗಲಿ ಕ್ಷಣಮಾತ್ರದಲ್ಲಿ ಅದನ್ನು ಕುರಿತಾಗಿ ಪ್ರಕಟವಾದ ಹತ್ತು ಹಲವು ಪುಸ್ತಕಗಳ ಹೆಸರನ್ನು ಅವರು ಪಟಪಟನೆ ಹೇಳುತ್ತಿದ್ದಾಗ ಅವರ ಅಗಾಧ ಓದು ಮತ್ತು ನೆನಪಿನ ಶಕ್ತಿಗೆ ನಾನು ಮನದಲ್ಲೇ ನೂರು ಸಲ ಕೈಮುಗಿಯುತ್ತಿದ್ದೆ. ಆಗ ನಾನು ಡಾ. ಡಿ.ಆರ್. ನಾಗರಾಜ್ ಅವರ ಬಳಿ 'ಆಧುನಿಕ ಕನ್ನಡ ಕಥನ ಸಾಹಿತ್ಯದಲ್ಲಿ ವಾಸ್ತವದ ಪ್ರತಿನಿಧೀಕರಣ ಒಂದು ಸ್ತ್ರೀವಾದಿ ಅಧ್ಯಯನ' ಎಂಬ ವಿಷಯದ ಬಗ್ಗೆ ಪಿ.ಎಚ್.ಡಿ. ಪದವಿಗಾಗಿ ಸಂಶೋಧನೆ ಮಾಡುತ್ತಿದ್ದೆ. ಅನಾಜಿಯವರು ಈ ಸಂಶೋಧನೆಯ ಬಗ್ಗೆ ಆಗಾಗ ನನ್ನ ಬಳಿ ಗಂಭೀರವಾಗಿ ಮಾತಾಡುತ್ತಿದ್ದರು. ಆ ಸಂದರ್ಭದಲ್ಲಿ ಅವರು ಹೇಳಿದ ಒಂದು ಎಚ್ಚರಿಕೆಯ ಕಿವಿಮಾತು ನನ್ನ ಅಧ್ಯಯನಕ್ಕೆ ಒಂದು ದಿಕ್ಸೂಚಿಯಾಯಿತು ಎಂದರೆ ಅದು ಉತ್ಪ್ರೇಕ್ಷೆ ಅಲ್ಲ. ಸುಮಾರು 1997ನೇ ಇಸವಿ ಅದು ಎಂದು ನನ್ನ ನೆನಪು. ನನ್ನ ಸಂಶೋಧನಾ ಪ್ರಬಂಧದ ಅಧ್ಯಾಯ ವಿಂಗಡಣೆ ಇನ್ನೂ ಸರಿಯಾಗಿ ಆಗಿರಲಿಲ್ಲ. ಇದನ್ನು ಗಮನಿಸಿದ ಅನಾಜಿಯವರು "ಅಲ್ಲಮ್ಮ ಆಧುನಿಕ ಕನ್ನಡ ಕಥನ ಸಾಹಿತ್ಯ ಅಂದ್ರೆ ನವೋದಯದಿಂದ ಈ ಕಾಲದವರೆಗೆ ಸುದೀರ್ಘವಾಗಿದೆ. ನೀವು ಇಷ್ಟು ದೊಡ್ಡ

ವ್ಯಾಪ್ತಿ ಇಡ್ಕೊಂಡ್ರೆ ಎಲ್ಲಿಂದ ಎಲ್ಲೀವರೆಗೆ ಅಂತ ಮಾಡ್ತೀರಿ!? ಆಧುನಿಕ ಕನ್ನಡ ಸಾಹಿತ್ಯದ ಪ್ರತಿ ಘಟ್ಟದಿಂದಲೂ ಕೆಲವು ಪ್ರಾತಿನಿಧಿಕ ಲೇಖಕ-ಲೇಖಕಿಯರನ್ನ ಇಟ್ಟಕೊಂಡರೆ ಮಾತ್ರ ನೋಡಿ ನೀವು ಈ ಅಧ್ಯಯನಕ್ಕೆ ಸ್ವಲ್ಪಾನಾದ್ರೂ ನ್ಯಾಯ ಒದಗಿಸಕ್ಕೆ ಆಗೋದು' ಅಂದರು. ನನಗೆ 'ಅರೆ, ಹೌದಲ್ಲ" ಅನ್ನಿಸಿತು. ಮುಂದೆ ನಾನು ನನ್ನ ಮಾರ್ಗದರ್ಶಕರ ಹತ್ತಿರ ಈ ಬಗ್ಗೆ ಹೇಳಿದಾಗ ಅವರಿಗೂ ಈ ಮಾತು ಒಪ್ಪಿಗೆಯಾಗಿ, ನಂತರ ಹೀಗೆಯೇ ಘಟ್ಟಗಳ ಅನುಸಾರವಾಗಿ, ಪ್ರಾತಿನಿಧಿಕ ಆಧುನಿಕ ಕನ್ನಡ ಲೇಖಕ ಲೇಖಕಿಯರನ್ನು ಇಟ್ಟುಕೊಂಡು ನಾನು ಪಿ.ಎಚ್.ಡಿ. ಅಧ್ಯಯನವನ್ನು ಮುಂದುವರಿಸಿದೆ. ದುರಾದೃಷ್ಟವಶಾತ್ ಡಿಆರ್‌ಎನ್ ಅವರು ಅಕಾಲಿಕವಾಗಿ ಮರಣ ಹೊಂದಿದಾಗ ಡಾ.ಎಚ್.ಎಸ್. ವೆಂಕಟೇಶ ಮೂರ್ತಿ ಅವರ ಮಾರ್ಗದರ್ಶನದಲ್ಲಿ ಈ ಸಂಶೋಧನೆಯನ್ನು ಪೂರೈಸಿ ಡಾಕ್ಟರೇಟ್ ಪದವಿ ಗಳಿಸಿದೆ. ನನಗೆ ಸಕಾಲಿಕವಾಗಿ ಸರಿಯಾದ ಎಚ್ಚರಿಕೆ ಕೊಟ್ಟು ನನ್ನ ಅಧ್ಯಯನವು ಯುಕ್ತ ದಿಕ್ಕಿನಲ್ಲಿ ಸಾಗುವಂತೆ ಮಾಡಿದ್ದಕ್ಕಾಗಿ ನಾನು ಅನಾಜಿಯವರಿಗೆ ಸದಾ ಆಭಾರಿಯಾಗಿರುತ್ತೇನೆ.

ದಾರಿದೀಪಗಳಂತಹ ನನಗೆ ಮಾಡಿದ ಸಹಾಯಗಳ ಯಾದಿ. ಇಷ್ಟಕ್ಕೇ ನಿಲ್ಲುವುದಿಲ್ಲ ಎಸ್.ಎಲ್. ಭೈರಪ್ಪನವರ ಅಭಿನಂದನ ಗ್ರಂಥವೊಂದಕ್ಕಾಗಿ ಲೇಖನ ಬರೆಯಲು ಪುಸ್ತಕಗಳನ್ನು ಹುಡುಕುತ್ತಿದ್ದಾಗ, ಅನಂತರ, ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2009ರಲ್ಲಿ ಹೊಸದಾಗಿ ಎಂ.ಎ. ಆರಂಭವಾದ ಸಂದರ್ಭದಲ್ಲಿ, ಡಿ.ಎಲ್. ನರಸಿಂಹಾಚಾರ್ ಅವರು ವಡ್ಡಾರಾಧನೆಗೆ ಬರೆದ ಸಂಪಾದನಾ ಮುನ್ನುಡಿ ಹುಡುಕುತ್ತಿದ್ದಾಗ ಅನಾಜಿಯವರು ನನಗೆ ಗ್ರಂಥಗಳನ್ನು ಕೊಟ್ಟು ಸಹಾಯ ಮಾಡಿದ್ದಾರೆ. ಒಮ್ಮೆಯಂತೂ ಹದಿನೈದು ಸಾವಿರದಷ್ಟು ಗ್ರಂಥಗಳು ಇದ್ದ ತಮ್ಮ ಸರಸ್ವತಿಯ ಖಜಾನೆಯಂತಹ ಗ್ರಂಥ ಭಂಡಾರದಿಂದ, ಅಚ್ಚುಕಟ್ಟಾಗಿ ರಟ್ಟು ಹಾಕಿದ್ದ ಪುಸ್ತಕವೊಂದನ್ನು ತೆಗೆದು ತಾವೇ ಅದನ್ನು ಪ್ರತಿ ಮಾಡಿಸಿ ನನಗಾಗಿ ಎತ್ತಿಟ್ಟಿದ್ದರು ಈ ವಾತ್ಸಲ್ಯಮಯಿ. ಮೊದಲ ಸಲ ಅವರ ಮನೆಯ ನೆಲಮಾಳಿಗೆಯಲ್ಲಿನ ಈ ಗ್ರಂಥಾಲಯ ನೋಡಿದಾಗ ನಾನು ಅಚ್ಚರಿಯಿಂದ ಅವಾಕ್ಕಾಗಿ ಹೋಗಿದ್ದೆ. ಪುಸ್ತಕಗಳನ್ನು ಕುರಿತ ಅವರ ನೆನಪಂತೂ ಅಗಾಧ! ಅವರೊಂದು ನಡೆದಾಡುವ ಗ್ರಂಥಾಲಯ ಎಂದೇ ನನಗೆ ಯಾವಾಗಲೂ ಅನ್ನಿಸುತ್ತೆ.

ಅನಾಜಿಯವರನ್ನು ಕುರಿತ ಇನ್ನೊಂದು ನೆನಪು ಸಹ ನನ್ನಲ್ಲಿ ಹಸಿರಾಗಿದೆ. 2003ರ ಜನವರಿ 24ನೇ ತಾರೀಖು ಅದು. ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಅಂದು ನಾನು ನನ್ನ ಪಿ.ಎಚ್.ಡಿ. ಪದವಿ ಸ್ವೀಕರಿಸುವುದಿತ್ತು. ಅದೇ ದಿನ ಬೆಳಿಗ್ಗೆ ಯಾವುದೋ ಒಂದು ಸಾಹಿತ್ಯ ಕಾರ್ಯಕ್ರಮದಲ್ಲೂ ನಾನು ಭಾಷಣ ಮಾಡಲು ಒಪ್ಪಿಬಿಟ್ಟಿದ್ದೆ. ಸಮಯದ ದೃಷ್ಟಿಯಿಂದ ಬಹಳ ಒತ್ತಡದ ದಿನವಾಗಿತ್ತು ನನಗದು. ನಾನು ಸದರಿ ಸಾಹಿತ್ಯ ಕಾರ್ಯಕ್ರಮಕ್ಕೆ ಹೋಗುವಷ್ಟರಲ್ಲಿ ಕಾರ್ಯಕ್ರಮ ಪ್ರಾರಂಭವಾಗಿ ಅತಿಥಿಗಳು ವೇದಿಕೆಯ ಮೇಲೆ ಕುಳಿತಿದ್ದರು. ಅಂದು ಅನಾಜಿಯವರು ಕೂಡ ಒಬ್ಬ ಅತಿಥಿಯಾಗಿದ್ದರು. ಅಂದಿನ ನನ್ನ ಗಡಿಬಿಡಿ, ಧಾವಂತಗಳು ಈ ಸೂಕ್ಷ್ಮಗಣ್ಣಿನ ಹಿರಿಯರ ಗಮನದಿಂದ ತಪ್ಪಿಸಿಕೊಳ್ಳಲಿಲ್ಲ. ಅವರು ಆ ದಿನ ಸಮಯ ನಿರ್ವಹಣೆಯನ್ನು ಕುರಿತು ಸೂಚ್ಯವಾಗಿ ಹೇಳಿದ ಮಾತು ನನ್ನ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದುಬಿಟ್ಟಿದೆ. "ಮೀರಾ ಅವರೇ, ನಾನು ಯಾವತ್ತೂ ಯಾವ ಸಮಾರಂಭಕ್ಕೂ ತಡವಾಗಿ ಹೋಗಿಲ್ಲ ಗೊತ್ತಾ?" ಅಂದರು. ನಾನು "ಹೇಗೆ ಸರ್? ಸಮಯವನ್ನು ನೀವು ಹೇಗೆ ನಿರ್ವಹಿಸ್ತೀರಿ?" ಅಂತ ಕೇಳಿದೆ. ಅವರೆಂದರು "ನೋಡೀ .. ಎಲ್ಲಿ, ಎಷ್ಟು ಹೊತ್ತಿಗೆ ಇರಬೇಕು, ಹೋಗಲು ಎಷ್ಟು ಹೊತ್ತಾಗುತ್ತೆ ಹೋಗುವ ದಾರಿಯಲ್ಲಿ ಏನಾದರೂ ಸಮಸ್ಯೆಗಳು ಎದುರಾದರೆ ಅದಕ್ಕೆ ಎಷ್ಟು ಸಮಯ ಬೇಕಾಗಬಹುದು? ವಾಹನ ದಟ್ಟಣೆಯಾದರೆ ನಾನು ತಲುಪಲು ಎಷ್ಟು ಹೊತ್ತು ಬೇಕಾಗಬಹುದು? ಈ ಅಂಶಗಳನ್ನೆಲ್ಲ ಗಮನದಲ್ಲಿರಿಸಿಕೊಂಡೇ

ನಾನು ಸಾಕಷ್ಟು ಬೇಗನೆಯೇ ಮನೆ ಬಿಡ್ತೇನಿ. ಹೀಗಾಗಿ ನಾನು ಎಲ್ಲೂ, ಯಾವಾಗಲೂ ತಡವಾಗಿ ಹೋಗುವ ಪ್ರಮೇಯವೇ ಉದ್ಭವಿಸಿಲ್ಲ". ಎಲ್ಲರೂ ಹೀಗೆ ಯೋಚಿಸಿದರೆ ಎಲ್ಲಿಗೂ ಯಾರೂ ತಡವಾಗಿ ತಲುಪುವ ಪ್ರಶ್ನೆಯೇ ಇರುವುದಿಲ್ಲವಲ್ಲ ಅನ್ನಿಸಿತು ನನಗೆ. ನಾನು

ಮುಂದೆ ಮಕ್ಕಳ ಕೂಟವು ಮಕ್ಕಳ ಸಾಹಿತ್ಯ-ಸಂಸ್ಕೃತಿಯ ಕ್ಷೇತ್ರದಲ್ಲಿ ಕೆಲಸ ಮಾಡಿದವರಿಗಾಗಿ ಕೊಡುವ ಆರ್.ಕಲ್ಯಾಣಮ್ಮ ಪ್ರಶಸ್ತಿಗೆ ನನ್ನ ಹೆಸರು ಸೂಚಿಸಿದ್ದು ನನ್ನ ಮನಸ್ಸಿಗೆ ಆನಂದವನ್ನುಂಟುಮಾಡಿತ್ತು. ಮಕ್ಕಳಿಗಾಗಿ ನಾಟಕ ಬರೆಯುವುದು, ಅವರಿಗೆ ಭರತನಾಟ್ಯ-ಭಾವನೃತ್ಯ ಹೇಳಿಕೊಡುವುದು, ಕನ್ನಡ ಕವಿಗಳ ಹಾಡುಗಳಿಗೆ ಅವರಿಂದ ನೃತ್ಯ ಮಾಡಿಸುವುದು, ಇಂಥವನ್ನೆಲ್ಲ ಮಾಡುತ್ತಿದ್ದ ನನ್ನ ಅಳಿಲುಸೇವೆಯನ್ನು ಅನಾಜಿ ಗಮನಿಸಿದ್ದರು. ಮಕ್ಕಳ ಕೂಟದಲ್ಲಿ ಆ ಪ್ರಶಸ್ತಿ ನೀಡುವ ದಿನ ಅವರು ಅಲ್ಲಿ ನೆರೆದು ಗಲಾಟೆ ಮಾಡುತ್ತಿದ್ದ ಚಿಕ್ಕಮಕ್ಕಳನ್ನು ಸುಮ್ಮನಿರಿಸಲು ಮುದ್ದಣನ ರಾಮಾಶ್ವಮೇಧದ ಮನಸೆಳೆಯುವ "ಓಹೋಹೋ, ಆಹಾಹಾ ಹಾಗಂತೆ, ಹೀಗಂತೆ " ಎಂಬ ದೊಡ್ಡ ದನಿಯ ಪ್ರಾರಂಭದಂತೆ, ತಮ್ಮ ಭಾಷಣವನ್ನು ಪ್ರಾರಂಭಿಸಿ ಅಲ್ಲಿದ್ದ ಮಕ್ಕಳ ಗಮನವನ್ನು ತಮ್ಮೆಡೆಗೆ ಸೆಳೆದುಕೊಂಡು ಆಮೇಲೆ ಸಭೆಗೆ ಉಚಿತವಾದ ಅರ್ಥಪೂರ್ಣ ಮಾತುಗಳನ್ನಾಡಿದ್ದು ನೆನಪಾಗುತ್ತದೆ.

ನಮ್ಮ ಭರತನಾಟ್ಯ ಸಂಸ್ಥೆಯಾದ ಚಿತ್ರನಾಟ್ಯ ಫೌಂಡೇಷನ್‌ಗೆ ಅವರು ಬಂದಿದ್ದು ನೆನಪಾಗುತ್ತದೆ. ರಾಜಾಜಿನಗರದ ಪೇರೆಂಟ್ಸ್ ಅಸೋಸಿಯೇಷನ್ ಸಂಸ್ಥೆಯಲ್ಲಿ ನಡೆದ 'ನಾಟ್ಯಕೆ ಆಟದ ಸೋಪಾನ ಬಾಲನಾಟ್ಯ 2018' ಎಂಬ ನಾಟ್ಯ ಕಾರ್ಯಕ್ರಮಕ್ಕೆ ಅನಾಜಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸೊಗಸಾದ ನುಡಿಗಳನ್ನಾಡಿ ನಮಗೆ ಸಂತೋಷ ತಂದಿದ್ದರು.

ನನ್ನಂತಹ ಅನೇಕ ಕಿರಿಯರನ್ನು ಹೀಗೆ ನಿರ್ವ್ಯಾಜ ವಾತ್ಸಲ್ಯ, ಮಮತೆ, ಅಭಿಮಾನಗಳಿಂದ ಬೆಳೆಸಿದ ಅನಾಜಿಯವರು ಕನ್ನಡಿಗರು ತಂಪುಹೊತ್ತಿನಲ್ಲಿ ನೆನೆಯಬೇಕಾದ ಸಜ್ಜನರು, ಬಹುಶ್ರುತರು, ಪುಸ್ತಕ ಪ್ರೇಮಿ, ಅಶ್ವತ್ಥನಾರಾಯಣ ಜಿ. ಎಂಬ ಕನ್ನಡಮ್ಮನ ನಲ್ಮೆಯ ಕುವರನ ಸಾಹಿತ್ಯಸೇವೆಯ ನೆನಪು ಕನ್ನಡದ ಮನಸ್ಸುಗಳಲ್ಲಿ ಸದಾ ಹಸಿರಾಗಿರುತ್ತದೆ.

****

ಕನ್ನಡ ಪ್ರೀತಿಯ ಕಟ್ಟಾಳು

ಜಿ. ವಿ. ನಿರ್ಮಲ
ಚರವಾಣಿ : ೯೯೪೫೫೯೩೭೦೪

ಪ್ರೊ. ಜಿ. ಅಶ್ವತ್ಥನಾರಾಯಣರಾಯರು ಕನ್ನಡ ಸಾಹಿತ್ಯದ ಪರಿಚಯವಿರುವವರಿಗೆಲ್ಲಾ ಪರಿಚಿತರೇ ಆಗಿರುತ್ತಾರೆ. ನಾನು ಅವರನ್ನು ಮೊದಲ ಬಾರಿ ಭೇಟಿ ಮಾಡಿದ್ದು ಕನ್ನಡ ಗಣಕ ಪರಿಷತ್ತಿನಲ್ಲಿ. ಅಷ್ಟು ಹೊತ್ತಿಗಾಗಲೇ ಕನ್ನಡ ಗಣಕ ಪರಿಷತ್ತು ಕುಮಾರವ್ಯಾಸ ಭಾರತದ ಅಡಕ ಮುದ್ರಿಕೆಯ ಯೋಜನೆಯನ್ನು ಕೈಗೆತ್ತಿಕೊಂಡಿತ್ತು. ಕುಮಾರವ್ಯಾಸ ಭಾರತವನ್ನು ಬಹುವಾಗಿ ಮೆಚ್ಚಿ, ಆಳವಾಗಿ ಅರಿತಿದ್ದ ವಿದ್ವಜ್ಜನರ ಗುಂಪೇ ಈ ಯೋಜನೆಯಲ್ಲಿ ಸೇರುವಂತೆ ಯೋಜನೆಯ ರೂಪುರೇಷೆಗಳನ್ನು ರೂಪಿಸಿದ್ದವರು ಕಗಪದ ಕೆಲಸಗಳ ಶ್ರದ್ಧಾಳು ಶ್ರೀ.ಜಿ.ಎನ್. ನರಸಿಂಹಮೂರ್ತಿಯವರು. ಕಗಪಕ್ಕೂ ನನಗೂ ಇದ್ದ ನಂಟಿನಿಂದ ನನಗೂ ಈ ಯೋಜನೆಯಲ್ಲಿ ಸ್ವಲ್ಪಮಟ್ಟಿಗೆ ಪಾಲ್ಗೊಳ್ಳುವ ಅವಕಾಶ ದೊರೆತದ್ದು ನನ್ನ ಭಾಗ್ಯವೇ. ಆ ತಂಡದಲ್ಲಿದ್ದ ಶ್ರೀಗಳಾದ ಆ.ರಾ.ಮಿತ್ರ, ಡಾ. ವೆಂಕಟಾಚಲ ಶಾಸ್ತ್ರಿ, ಪ್ರೊ. ಅಶ್ವತ್ಥನಾರಾಯಣ, ಡಾ. ಎ.ವಿ. ಪ್ರಸನ್ನ, ಡಾ. ಗೋಕುಲನಾಥ್, ಪಂಡಿತಾರಾಧ್ಯ, ಕೃಷ್ಣಗಿರಿ ರಾಮಚಂದ್ರ ಮತ್ತು ಅವರ ತಮ್ಮ ಮುರಳಿ ಮುಂತಾದವರು ಚರ್ಚಿಸುತ್ತಿದ್ದ ಸಭೆಯಲ್ಲಿದ್ದು, ಚಿಕ್ಕಪುಟ್ಟ ಕೆಲಸಗಳಲ್ಲಿ ಪಾಲ್ಗೊಳ್ಳುತ್ತಿದ್ದೆ. ವಿದ್ವಜ್ಜನರು ಕುಮಾರವ್ಯಾಸ ಭಾರತದ ಕೆಲವು ಪದ್ಯಗಳನ್ನು ನಿರರ್ಗಳವಾಗಿ ಹೇಳುತ್ತಾ ಕಾವ್ಯದ ಸೊಗಸನ್ನು ಆಸ್ವಾದಿಸುತ್ತಿದ್ದುದನ್ನು ಕೇಳುವುದೇ ನನಗೆ ರಸದೌತಣವಾಗಿತ್ತು. ಮತ್ತೊಮ್ಮೆ ಅಂತಹ ಅವಕಾಶ ಲಭಿಸಲು ಸಾಧ್ಯವೇ? ಆ ಅವಧಿಯಲ್ಲಿ ನನಗೆ ಕನ್ನಡದ ದಿಗ್ಗಜರು ಪರಿಚಯವಾದದ್ದು ಮತ್ತೊಂದು ಅದೃಷ್ಟವೆಂದೇ ಹೇಳಬೇಕು. ನನಗೆ ನಮ್ಮ ತಂದೆ ಡಾ. ಜಿ. ವರದರಾಜರಾವ್ ಅವರ ವತಿಯಿಂದ ಕೆಲವರ ಪರಿಚಯವಿತ್ತು, ಮತ್ತೆ ಕೆಲವರ ಹೆಸರುಗಳನ್ನು ಕೇಳಿದ್ದೆ. ನಾನು ಡಾ.ಜಿ.ವರದರಾಜರಾವ್ ಅವರ ಮಗಳೆಂದು ತಿಳಿದ ಅವರೆಲ್ಲರೂ ನನ್ನನ್ನು ಬಹಳ ಆತ್ಮೀಯತೆಯಿಂದ ಕಾಣುತ್ತಿದ್ದರು. ಆ ತಂಡದವರಾದ ಪ್ರೊ. ಅಶ್ವತ್ಥನಾರಾಯಣರ ಪರಿಚಯವಾದದ್ದು ಹೀಗೆ. ಅನಂತರವೂ ನನಗೆ ಈ ಗಣ್ಯರನ್ನು ಭೇಟಿ ಮಾಡಿದಾಗಲೆಲ್ಲಾ ಅವರೊಡನೆ ಪರಿಚಯಾತ್ಮಕವಾಗಿ ಸಂಭಾಷಿಸುವಷ್ಟು ಸನಿಹಕ್ಕೆ ಬರಲು ಸಾಧ್ಯವಾಯಿತು. ಈಗಲೂ ಪ್ರೊ. ಅಶ್ವತ್ಥನಾರಾಯಣ ಅವರನ್ನು ಕಂಡಾಗಲೆಲ್ಲಾ ಅವರು ನನ್ನನ್ನು ಬಹಳ ವಿಶ್ವಾಸದಿಂದ ಆತ್ಮೀಯವಾಗಿ ಮಾತನಾಡಿಸುತ್ತಾರೆ. ಅದು ಅವರ ಸ್ವಭಾವವೇ ಇರಬಹುದು.

ನಮ್ಮ ಪರಿಚಯ ಮುಂದುವರಿದು ಅವರಿಂದ ನನಗೆ ಮತ್ತು ನಮ್ಮ ತಾಯಿ ಮತ್ತು ಅಕ್ಕ-ತಂಗಿಯರಿಗೆ ಮಹದುಪಕಾರವಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನದ ಸಂದರ್ಭದಲ್ಲಿ ಕೆಲವು ಕೃತಿಗಳ ಮರುಮುದ್ರಣ ಮಾಡಬೇಕೆಂದು ಯೋಚಿಸಿದಾಗ ಶ್ರೀಯುತರು ನಮ್ಮ ತಂದೆಯವರ ಪುಸ್ತಕ 'ಹರಿದಾಸ ಸಾಹಿತ್ಯಸಾರ' ಕೃತಿಯನ್ನು ಆಯ್ಕೆಯ ಸಮಿತಿಯ ಸದಸ್ಯರಾಗಿದ್ದ

ಪ್ರೊ. ಅಶ್ವತ್ಥನಾರಾಯಣರಾವ್ ಅವರು ಮರುಮುದ್ರಣಕ್ಕೆ ಶಿಫಾರಸ್ಸು ಮಾಡಿ, ಬೇರೆಲ್ಲಾ ಕಾದಂಬರಿ, ಕಥೆ ಮುಂತಾದ ಪುಸ್ತಕಗಳಿಗಿಂತ ಎಂದೆಂದಿಗೂ ದಾಸಸಾಹಿತ್ಯ ಕೃತಿಗಳ ಅಧ್ಯಯನಕ್ಕೆ ನೆರವಾಗುವ ಇಂತಹ ಪುಸ್ತಕ ಪರಿಷತ್ತಿನ ವತಿಯಿಂದ ಮರುಮುದ್ರಣವಾಗಲೇಬೇಕೆಂದು ಪಟ್ಟು ಹಿಡಿದರಂತೆ. ನನ್ನ ಮೂಲಕವೇ ನಮ್ಮ ತಾಯಿಯವರಿಂದ ಮುದ್ರಣಕ್ಕೆ ಅನುಮತಿ ಪಡೆದು, ಆ ಪುಸ್ತಕವನ್ನು ಮುದ್ರಿಸಿರುವುದಲ್ಲದೆ ನಮಗೆ ಗೌರವಪ್ರತಿಗಳನ್ನೂ ತಲುಪಿಸುವ ವ್ಯವಸ್ಥೆ ಮಾಡಿದ ಶ್ರೀಯುತರು ನಮಗೆ ಪ್ರಾತಃಸ್ಮರಣೀಯರೇ.

ಮುಂದೆ ಒಂದೆರಡು ಬಾರಿ ನನ್ನ ಪರಿಚಯವನ್ನು ಹೇಳಿಕೊಳ್ಳುತ್ತಿದ್ದೆ. ಒಂದು ಬಾರಿ 'ನನಗೆ ನಿಮ್ಮ ಪರಿಚಯವಿದೆ' ಎಂದು ಹೇಳಿದ ನಂತರ ಮುಂದೆಂದೂ ನನ್ನ ಗುರುತು ಹೇಳಿಕೊಳ್ಳುವ ಧಾರ್ಷ್ಟ್ಯ ಮಾಡಿಲ್ಲ.

ಇಂತಹ ಉದ್ದಾಮ ಕನ್ನಡಿಗರ ಬಗ್ಗೆ ನಾನು ಹೇಳುವುದು ಏನೂ ಇಲ್ಲ. ಆದರೆ ಅವರ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ನಂಟು ಇಂದು ನೆನ್ನೆಯದಲ್ಲ ಎನ್ನುವ ಸ್ವಾರಸ್ಯವಾದ ವಿಚಾರ ನನಗೆ ಇತ್ತೀಚೆಗೆ ತಿಳಿಯಿತು. ಈ ಮಾಹಿತಿಯನ್ನು ಕನ್ನಡ ಸಾಹಿತಿಗಳ ಬದುಕಿನ ರಸಪ್ರಸಂಗಗಳನ್ನು ನಿರೂಪಿಸಿರುವ ತಮ್ಮ 'ನಾ ಕಂಡ ಸಾಹಿತಿಗಳ ಚಿಟ್ಟೆ ಕಥೆಗಳು' ಎನ್ನುವ ಪುಸ್ತಕದಲ್ಲಿ ಸಂಗ್ರಹಿಸಿದ್ದಾರೆ. ಅದರಲ್ಲಿ ಇವರೇ ಹೇಳುವಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಸಮೀಪದ ಚಾಮರಾಜಪೇಟೆಯಲ್ಲಿ ವಾಸವಾಗಿದ್ದು, ಅಲ್ಲಿನ ಕೋಟೆ ಹೈಸ್ಕೂಲಿನಲ್ಲಿ ಓದಿದ ಅಶ್ವತ್ಥನಾರಾಯಣರವರಿಗೆ ಸಾಹಿತ್ಯ ಪರಿಷತ್ತು ಸೂಜಿಗಲ್ಲಿನಂತೆ ಆಕರ್ಷಿಸಿತ್ತು. ಪರಿಷತ್ತಿನ ಪುಸ್ತಕ ಭಂಡಾರಕ್ಕೆ ಭೇಟಿ ನೀಡಿ, ಪತ್ರಿಕೆ ಮತ್ತು ಪುಸ್ತಕಗಳನ್ನು ಓದುವುದು ಬಾಲಕ ಆಶ್ವತ್ಥನಾರಾಯಣ ಮತ್ತು ಜೊತೆಗಾರರ ದಿನಚರಿಯೇ ಆಗಿತ್ತು. ಕೆಲವು ಕೈಬರಹಗಳ ಪತ್ರಿಕೆಗಳೂ ಬರುತ್ತಿದ್ದು, ಪತ್ರಿಕೆಗಳ ಬಗ್ಗೆ ಅಭಿಪ್ರಾಯ ಬರೆಯಲು ಕಡೆಯಲ್ಲಿ ಎರಡು ಪುಟಗಳಿರುತ್ತಿದ್ದವಂತೆ. ಓದುಗರು ಆ ಪುಟದಲ್ಲಿ ಏನು ಬರೆಯುತ್ತಾರೆ; ಬರೆದಿರುತ್ತಾರೆ ಎಂದು ನೋಡುವುದೂ ಅವರ ದಿನಚರಿಯಲ್ಲಿ ಸೇರಿತ್ತಂತೆ. ಅಂದಿನಿಂದಲೂ ಕನ್ನಡವನ್ನು ಓದುತ್ತಲೇ ಇರುವ ರಾಯರು ಕನ್ನಡದ ಬಗ್ಗೆ ಅಪಾರ ಪ್ರೀತಿಯುಳ್ಳ ಜ್ಞಾನದಗಣಿಯೇ ಆಗಿದ್ದಾರೆ.

ಹೈಸ್ಕೂಲಿನಲ್ಲಿ ಎಂಟನೆಯ ತರಗತಿಯಲ್ಲಿ ಓದುತ್ತಿದ್ದಾಗ ಇವರಿಗೆ ವಿದ್ಯಾರ್ಥಿ ವೇತನವಾಗಿ ಐದು ರೂಪಾಯಿಗಳು ದೊರೆತ ಕೂಡಲೇ ಸಾಹಿತ್ಯ ಪರಿಷತ್ತಿನ ಸದಸ್ಯರಾಗಲು ಓಡಿದರಂತೆ. ಆಗ ಪರಿಷತ್ತಿನ ಅಧ್ಯಕ್ಷರು ಈ ಪುಟ್ಟ ಬಾಲಕ ತಾನು ಬಂದಿರುವ ಕಾರಣ ಹೇಳಿದಾಗ, ಬಾಲಕರಿಗೆ ಕಸಾಪದ ಸದಸ್ಯತ್ವ ನೀಡಲು ಅವಕಾಶವಿಲ್ಲ ಎಂದರಂತೆ. ಆಗ ಅಲ್ಲಿದ್ದ ಮಾಸ್ತಿಯವರು ಇವರ ಪರವಾಗಿ ನಿಂತು, ಕನ್ನಡವನ್ನು ಬೆಳಸುವುದು, ಮುಂದಿನ ಪೀಳಿಗೆಯವರಿಗೆ ತಲುಪಿಸುವುದು ಇಂತಹ ಬಾಲಕರೇ. ಅವರಿಗೇ ಆಸಕ್ತಿ ಇದ್ದಲ್ಲಿ ಸದಸ್ಯತ್ವ ನೀಡುವುದನ್ನು ನಿರಾಕರಿಸಬಾರದು ಎಂದು ತಮ್ಮ ನಿಲುವನ್ನು ತಿಳಿಸಿದರಂತೆ. ಹೀಗೆ ಹೈಸ್ಕೂಲು ಮೊದಲ ವರ್ಷದಲ್ಲಿಯೇ ಸಾಹಿತ್ಯ ಪರಿಷತ್ತಿನ ಸದಸ್ಯತ್ವ ಪಡೆದ ಅಶ್ವತ್ಥನಾರಾಯಣರಾಯರು ಇಂದಿನವರೆಗೂ ಕನ್ನಡ ಸಾಹಿತ್ಯ ಪರಿಷತ್ತಿಗೆ ಆಧಾರಸ್ತಂಭದಂತೆ ಭದ್ರವಾಗಿ ತಳ ಊರಿದ್ದು, ಕನ್ನಡದ ಕೆಲಸಗಳಲ್ಲಿಯೇ ತತ್ಪರರಾಗಿ ಸೇವೆ ಗೈಯ್ಯುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರಿಗೆ ಅನೇಕಾನೇಕ ಪ್ರಶಸ್ತಿಗಳು ಲಭಿಸಿವೆ. ಆದರೆ ಅದ್ಯಾವುದಕ್ಕೂ ಮಹತ್ವ ನೀಡದೆ, ಕನ್ನಡದ ಸೇವೆಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟು ಸದಾ ಕಾಲ ಕನ್ನಡವನ್ನು ಉಳಿಸಿ ಬೆಳಸುತ್ತಿರುವ ಶ್ರೀಯುತರಿಗೆ ಮತ್ತು ದೂರವಾಣಿಯಲ್ಲಿಯೇ ನನ್ನ ಜೊತೆ ಆತ್ಮೀಯವಾಗಿ ಮಾತನಾಡಿಸಿದ ಅವರ ಪತ್ನಿ ಲಕ್ಷ್ಮೀದೇವಿಯವರಿಗೆ ಭಗವಂತ ಸಕಲ ಸೌಭಾಗ್ಯಗಳನ್ನೂ ನೀಡಲಿ ಎಂದು ಮನಃಪೂರ್ತಿಯಾಗಿ ಬೇಡುತ್ತೇನೆ.

****

ಬಹುಮುಖಿ ಸಾಹಿತಿ

ಕೆ.ಎಸ್. ರಾಮಮೂರ್ತಿ,
ಚರವಾಣಿ : ೯೪೪೯೭೫೦೬೧೮

ಕನ್ನಡ ಪ್ರಾಧ್ಯಾಪಕರು / ಭಾಷಾತಜ್ಞರು / ಸಾಹಿತಿಗಳು / ಸುಪ್ರಸಿದ್ಧ ವಾಗ್ಮಿಗಳು / ಅಪೂರ್ವ ಕನ್ನಡ ಗ್ರಂಥಗಳ ಸಂಗ್ರಾಹಕರು / ಸಾಹಿತ್ಯಪರಿಚಾರಕರು /ವಿನೀತ ಕನ್ನಡ ವಿದ್ವಾಂಸರು / ವಿನಮ್ರಶ್ರೋತೃಗಳು ಆಗಿರುವ ಹೆಬ್ಬಗೋಡಿ ಗುಂಡಪ್ಪ ಅಶ್ವತ್ಥನಾರಾಯಣ, ಸಾಹಿತ್ಯ ವಲಯದಲ್ಲಿ ಅನಾಜಿ ಎಂದು ಚಿರಪರಿಚಿತರಾಗಿರುವರು.

ಕನ್ನಡ ನಾಡು–ನುಡಿ–ಸಾಹಿತ್ಯದ ಕುರಿತ ಮಾಹಿತಿ ಕಣಜವೆನಿಸಿರುವ ಅನಾಜಿಯವರು ನಾಡಿನ ಬಹುತೇಕ ಕಡೆ ನೀಡಿರುವ ಮೌಲಿಕ ಉಪನ್ಯಾಸಗಳು ಕನ್ನಡ ಸಾಹಿತ್ಯಾಸಕ್ತರ ಮೆಚ್ಚುಗೆಗೆ ಪಾತ್ರವಾಗಿವೆ. ಸಾಹಿತ್ಯ ಲೋಕದ ಬಗೆಗಿನ ಅರ್ಪಣಾ ಮನೋಭಾವ ಹಾಗೂ ಸ್ಮರಣ ಶಕ್ತಿ ಅನನ್ಯವಾಗಿದೆ.

ಹೊಸಗನ್ನಡ ಸಾಹಿತ್ಯದ ದಿಗ್ಗಜರೆನಿಸಿದ ಡಿ.ವಿ.ಜಿ, ಅ.ನ.ಕೃ, ವಿ.ಸೀ, ಗೊರೂರು, ಮಾಸ್ತಿ ಮೊದಲಾದ ಸಾಹಿತಿಗಳನ್ನು ಹತ್ತಿರದಿಂದ ಬಲ್ಲವರು, ಇಂತಹವರ ಸಾಹಿತ್ಯ ಸಂಪರ್ಕದಿಂದ ಅನಾಜಿಯವರು ಸಾಹಿತ್ಯಾಸಕ್ತಿ ಮತ್ತು ಸಾಹಿತ್ಯ ರಚನೆಗೆ ಪ್ರೇರಣೆ ಪಡೆದವರು.

ಶಾಲಾದಿನಗಳಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ತೊಡಗಿಸಿಕೊಂಡಿದ್ದರು. ಚರ್ಚಾಸ್ಪರ್ಧೆ, ಭಾಷಣಸ್ಪರ್ಧೆಗಳಲ್ಲಿ ಪಾಲ್ಗೊಂಡು ಬಹುಮಾನಗಳನ್ನು ಪಾರಿತೋಷಕಗಳನ್ನು ಪಡೆದುಕೊಂಡಿದ್ದರು.

ಮುಂದಿನ ದಿನಗಳಲ್ಲಿ ಅ.ನ.ಕೃಷ್ಣರಾವ್ ಮತ್ತು ಮ. ರಾಮಮೂರ್ತಿಯವರು ಪ್ರಾರಂಭಿಸಿದ ಕನ್ನಡ ಚಳವಳಿಯ ಪ್ರಾರಂಭದ ದಿನಗಳಲ್ಲಿ ಕಾರ್ಯಕರ್ತರಲ್ಲಿ ಒಬ್ಬರಾಗಿದ್ದರು. ನಂತರ ನಡೆದ ಗೋಕಾಕ ಚಳವಳಿಯಲ್ಲಿ ಹಾಗೂ ಕನ್ನಡ ಪರವಾದ ಹೋರಾಟಗಳಲ್ಲಿ ಭಾಗವಹಿಸಿದ್ದರು.

ನಾಡು–ನುಡಿಗೆ ಸಂಬಂಧಿಸಿದಂತೆ ರಾಜ್ಯದೆಲ್ಲೆಡೆ ಸಂಚರಿಸಿ ಬೋಧಪ್ರದವಾದ ಉಪನ್ಯಾಸಗಳನ್ನು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ನೀಡುತ್ತಿದ್ದರು. ವಿಷಯಸಂಗ್ರಹಕ್ಕೆ ಹೆಚ್ಚು ಒತ್ತು ನೀಡಿ ಮಾಡುತ್ತಿದ್ದ ಅವರ ಭಾಷಣಗಳು ನಿರರ್ಗಳವಾಗಿತ್ತು. ಉತ್ಸಾಹಭರಿತವಾಗಿರುತ್ತಿತ್ತು. ಆಸಕ್ತಿದಾಯಕವಾಗಿರುತ್ತಿತ್ತು. ಅಂಥಹ ಅದ್ಭುತವಾದ ಭಾಷಣ ಕಲೆ ಅವರಿಗೆ ಸಿದ್ಧಿಸಿತ್ತು. ಉಪಯುಕ್ತವಾದ ಮಾಹಿತಿಗಳಿಂದ ಕೂಡಿವ ಇವರ ಉಪನ್ಯಾಸಗಳು ಕಿರಿಯರಿಗೆ ಪ್ರೇರಣೆಯಾಗಿತ್ತು. ಹಿರಿಯರ ಮೆಚ್ಚುಗೆಗೆ ಪಾತ್ರವಾಗುತ್ತಿತ್ತು.

ವಚನ ಸಾಹಿತ್ಯ, ದಾಸಸಾಹಿತ್ಯ, ಜೈನಸಾಹಿತ್ಯ ಹಾಗೂ ಹಳಗನ್ನಡ ಸಾಹಿತ್ಯದಲ್ಲಿ ನೈಪುಣ್ಯತೆ ಹೊಂದಿದ್ದ ಅನಾಜಿಯವರು ಈ ವಿಭಾಗಗಳಲ್ಲಿ ಹಲವು ಮೌಲಿಕ ಕೃತಿಗಳನ್ನು ರಚಿಸಿರುವರು. ಹೊಸಗನ್ನಡ ಸಾಹಿತ್ಯ ಲೋಕದ ದಿಗ್ಗಜರ ಸವಿನೆನಪುಗಳನ್ನು ಹಾಗೂ ಅವರ ಜೀವನದ ರಸ ನಿಮಿಷಗಳನ್ನು ಪುಸ್ತಕರೂಪದಲ್ಲಿ ದಾಖಲಿಸಿದ್ದಾರೆ.

ಹಳಗನ್ನಡ-ನಡುಗನ್ನಡ ಸಾಹಿತ್ಯ ಕೃತಿಗಳನ್ನು ಹಾಗೂ ವಚನ ಮತ್ತು ದಾಸಸಾಹಿತ್ಯ ಗ್ರಂಥಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. ಸಾಹಿತ್ಯ ಕೃತಿಗಳ ಕರಡು ತಿದ್ದುವಿಕೆ, ಶಬ್ದಕೋಶ, ಸುಲಭ ಕನ್ನಡ ಕಲಿಕೆ ಮೊದಲಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಯಶಸ್ವಿಯಾಗಿರುವರು.

ಕನ್ನಡ ಸಂಸ್ಕೃತಿ ಇಲಾಖೆಯ ಪುಸ್ತಕ ಪ್ರಕಟಣೆ, ವಿಶ್ವವಿದ್ಯಾಲಯಗಳ ಪಠ್ಯಪುಸ್ತಕ ಸಮಿತಿಗಳಲ್ಲಿ ತಜ್ಞರಾಗಿದ್ದು ಮಾರ್ಗದರ್ಶನ ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು, ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ನಡೆಸುವ ಶಿಬಿರಗಳಲ್ಲಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿರುವರು. ಐ.ಎ.ಎಸ್. ಹಾಗೂ ಕೆ.ಎ.ಎಸ್. ತರಗತಿಗಳ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ವಿಭಾಗದಲ್ಲಿ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸಿರುವರು.

ಸಾವಿರಾರು ಸಾಹಿತ್ಯಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮುಖ್ಯ ಅತಿಥಿಗಳಾಗಿ, ಭಾಷಣಕಾರರಾಗಿ, ವಿನಮ್ರಶ್ರೋತೃಗಳಾಗಿ ಪಾಲ್ಗೊಂಡು ಸಭಾ ಮರ್ಯಾದೆಯನ್ನು ಕಾಪಾಡಿರುವರು. ಹಿರಿಯರ ಕಾರ್ಯಕ್ರಮಗಳಿಂದ ಮಾರ್ಗದರ್ಶನ ಪಡೆಯುತ್ತಿದ್ದರು. ಕಿರಿಯರ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರೋತ್ಸಾಹಿಸುತ್ತಿದ್ದರು. ನಿಗದಿತ ಸಮಯಕ್ಕೆ ಸರಿಯಾಗಿ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದರು. ನಿಗದಿತ ಸಮಯಕ್ಕೆ ಸರಿಯಾಗಿ ಭಾಷಣ ಮುಕ್ತಾಯಗೊಳಿಸುತ್ತಿದ್ದರು. ಇನ್ನೂ ಕೇಳಬೇಕೆನಿಸುತ್ತಿತ್ತು. ಅವರು ಭಾಷಣ, ಉಪನ್ಯಾಸ ನೀಡಲು ಸಾಕಷ್ಟು ಪೂರ್ವಸಿದ್ಧತೆ, ಅಧ್ಯಯನ ನಡೆಸುತ್ತಿದ್ದರು. ವಿಷಯಾಂತರವಿರುತ್ತಿರಲಿಲ್ಲ. ಉಡಾಫೆಯ ಮಾತುಗಳನ್ನಾಡುತ್ತಿರಲಿಲ್ಲ. ಶಬ್ದಸಂಪತ್ತನ್ನು ಲೀಲಾಜಾಲವಾಗಿ ಬಳಸುತ್ತಿದ್ದರು. ಭಾಷಣಗಳಿಗೆ ಪೂರಕವಾಗುವಂತೆ ಗಾದೆಗಳನ್ನು ನಾಣ್ನುಡಿಗಳನ್ನು ಹಾಗೂ ಹಿರಿಯರ ಉಕ್ತಿಗಳನ್ನು ಬಳಸುತ್ತಿದ್ದರು.

ಬೆಂಗಳೂರಿನ ಸಜ್ಜನರಾವ್ ವೃತ್ತದಲ್ಲಿರುವ ಶತಮಾನಕ್ಕೂ ಮಿಗಿಲಾದ ಇತಿಹಾಸವುಳ್ಳ ಮೈಸೂರು ಪೌರ ಮತ್ತು ಸಾಮಾಜಿಕ ಪ್ರಗತಿ ಸಂಘ ನಡೆಸುವ ರಾಷ್ಟ್ರೀಯ ಹಬ್ಬಗಳು ಮತ್ತು ದೇಶಭಕ್ತರ ಸಂಸ್ಮರಣೆಯ ಅನೇಕ ಕಾರ್ಯಕ್ರಮಗಳಲ್ಲಿ ಸ್ಫೂರ್ತಿಯುತ ಮಾತುಗಳನ್ನಾಡಿ, ದೇಶಪ್ರೇಮವನ್ನು ತೋರಿರುವರು.

ಬಾಲ್ಯದ ದಿನಗಳಲ್ಲೇ ಸಾಹಿತ್ಯ ಕೃಷಿಗೆ ಕೈ ಹಾಕಿದ ಅನಾಜಿಯವರು ಪ್ರೌಢಶಾಲೆಯಲ್ಲಿ ಓದುತ್ತಿದ್ದ ದಿನಗಳಲ್ಲಿ ಕಥೆಗಳನ್ನು, ಕವಿತೆಗಳನ್ನು ರಚಿಸುತ್ತಿದ್ದರು. 'ಜನಪ್ರಗತಿ', 'ಪ್ರಜಾಮತ' ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಬೆಂಗಳೂರು ನಗರದಲ್ಲಿ ಮನೆ ಮಾತಾಗಿರುವ ಮಕ್ಕಳ ಕೂಟದ ನಂಟು ಚಿಕ್ಕಂದಿನಿಂದ ಇತ್ತು. ಬೇಸಿಗೆ ಶಿಬಿರಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ನಂತರದ ದಿನಗಳಲ್ಲಿ 'ಬಾಲಜಗತ್ತು' ಕಾರ್ಯಕ್ರಮಗಳಿಗೆ ಸಲಹೆ-ನೆರವು ನೀಡುತ್ತಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿಗೆ ಬರುತ್ತಿದ್ದ ೭-೮ ಕೈ ಬರಹದ ಪತ್ರಿಕೆಗಳನ್ನು ಓದಿ ಪ್ರತಿಕ್ರಿಯಿಸುತ್ತಿದ್ದರು.

'ಜಿ.ಪಿ. ರಾಜರತ್ನಂ' ದೇವುಡು ನರಸಿಂಹ ಶಾಸ್ತ್ರಿ ಮೊದಲಾದ ಲೇಖಕರು ಮಕ್ಕಳಿಗಾಗಿ ಬರೆದ ನೀತಿ ಕಥೆಗಳನ್ನು ಸಂಕ್ಷಿಪ್ತಮಾಡಿ ಗಿಡಮರಬಳ್ಳಿಗಳ ನೀತಿಕಥೆಗಳು ಎಂಬ ಹೆಸರಿನಲ್ಲಿ ಬರೆದು ಪ್ರಕಟಿಸಿದ್ದಾರೆ. ಮಕ್ಕಳ ಮನಸ್ಸನ್ನು ಸಾಹಿತ್ಯದತ್ತ ಆಕರ್ಷಿಸುವ ಈ ಕೃತಿಗಳು ಶಿಶುಸಾಹಿತ್ಯ ವಾಙ್ಮಯದಲ್ಲೊಂದು ಮೈಲಿಗಲ್ಲಾಗಿದೆ. ಸರಳ-ಶುದ್ಧ ಭಾಷೆ, ಉತ್ತಮ ನಿರೂಪಣೆಯಿಂದಾಗಿ ಇವು ಮಕ್ಕಳ ಮನವನ್ನು ಗೆದ್ದಿವೆ.

ಅನಾಜಿಯವರು ಸಾಹಿತ್ಯೋಪನ್ಯಾಸಗಳನ್ನು ಮಾಡುವುದು ಹಾಗೂ ಸಾಹಿತ್ಯರಚನೆ ಮಾಡುವುದಲ್ಲದೇ ಅನೇಕ ಶೈಕ್ಷಣಿಕ ಹಾಗೂ ಸಾಹಿತ್ಯ ಸಂಸ್ಥೆಗಳೊಂದಿಗೆ ನಿರಂತರ ಸಂಪರ್ಕ ಹೊಂದಿದ್ದು, ಸಲಹೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಸಾಹಿತ್ಯ ಪರಿಷತ್ತು, ಬಿ.ಎಂ.ಶ್ರೀ. ಪ್ರತಿಷ್ಠಾನ, ಉದಯಭಾನು ಕಲಾ ಸಂಘ, ಯುವಪಥ, ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆ ಮೊದಲಾದವುಗಳಲ್ಲಿ ಸಕ್ರಿಯರಾಗಿರುವರು. ಬಿ.ಎಂ.ಶ್ರೀ. ಪ್ರತಿಷ್ಠಾನ ಸಾಹಿತ್ಯಾಸಕ್ತರಿಗಾಗಿ ನಡೆಸುವ ಹಳಗನ್ನಡ ಸಾಹಿತ್ಯ ರಸಗ್ರಹಣ ಶಿಬಿರಗಳಲ್ಲಿ ಪಾಠ ಮಾಡಿ ತಮ್ಮ ಅನುಭವಾಮೃತವನ್ನು ಉಣಬಡಿಸಿದ್ದಾರೆ.

೭೦ವರ್ಷಗಳಿಗಿಂತಲೂ ಮಿಗಿಲಾಗಿ ನಾಡು-ನುಡಿ-ಸಾಹಿತ್ಯಸೇವೆ ಮಾಡುತ್ತಿರುವ ಅನಾಜಿಯವರ ಕನ್ನಡ ಪರಿಚಾರಿಕೆಯನ್ನು ಗುರುತಿಸಿ ಹಲವಾರು ಪ್ರಶಸ್ತಿಗಳನ್ನು ನೀಡಿ ಪುರಸ್ಕರಿಸಿವೆ.

****

ಕವಿತೆ ೪- ಅನಾಜಿಗೆ ಅಭಿನಂದನೆ

ವಿದ್ವಾನ್ ಡಾ॥ ಆರ್.ಕೆ. ಪದ್ಮನಾಭ
ಚರವಾಣಿ : ೯೪೪೪೮೫೭೪೪೮೯೪

ಕನ್ನಡ ಭೂಮಿಯ-ಮಧುರಮಧು
ನಾರಾಯಣ-ಅಶ್ವತ್ಥನಾರಾಯಣ ॥

ದೇಹದ ಸಂಪೂರ್ಣ ಕಣಕಣಗಳಲೂ ಮತ್ತೆ
ಕರುನಾಡ ಭಾಷೆಯ ತುಂಬಿಕೊಂಡಿಹ ನಮ್ಮ ॥

ಜ್ಞಾನ ಅಖಂಡ-ಮಾತು ಚಿಲುಮೆ
ಭವ ಬಾಧೆಯಿಲ್ಲದ-ಭಾವ ಜೀವಿ
ಪದ್ಮನಾಭದಾಸಗೆ-ಅತಿಪ್ರಿಯನಾದ
ನಾರಾಯಣನೇ-ನಂದಾ ದೀಪ ॥

****

ನನಗೆ ಸಾಹಿತ್ಯ ಮಾರ್ಗದರ್ಶಿ

ವಿಕ್ರಮ್
ಚರವಾಣಿ : ೯೯೭೨೪೧೯೧೧೬

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಅಶ್ವತ್ಥನಾರಾಯಣ ಅವರಿಗೆ ನನ್ನ ದಿವಂಗತ ಸೋದರಮಾವ ಕೆ.ಸಿ. ರಾವ್ ಅವರು ನನ್ನನ್ನು ಪರಿಚಯಿಸಿದರು. ಅವರು ಅನಾಜಿ ಎಂದೇ ಆಗಲೂ ಮತ್ತು ಈಗಲೂ ಪ್ರಸಿದ್ಧರಾಗಿದ್ದಾರೆ. ನನ್ನ ಮಾವ ನನ್ನನ್ನು ಅನಾಜಿಯವರ ಉಪನ್ಯಾಸ ಮಾಲೆಗೆ ಕರೆದೊಯ್ಯುತ್ತಿದ್ದರು.

ಚಿಕ್ಕ ಪ್ರಾಯದ(ಇಪ್ಪತ್ತರಿಂದ-ಮೂವತ್ತು ವರ್ಷ) ಏಕೈಕ ವ್ಯಕ್ತಿ ನಾನು ಮಾತ್ರ. ಕಾರ್ಯಕ್ರಮದಲ್ಲಿದ್ದ ಎಲ್ಲರಿಗೂ ಆಶ್ಚರ್ಯವಾಯಿತು. ಏಕೆಂದರೆ ಉಳಿದ ಜನರು ಐವತ್ತು ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಾಗಿದ್ದರು. ಅದು ಒಂದು ಸಣ್ಣ ಸಭೆಯಾಗಿತ್ತು. ಆದರೆ ನನಗೆ ಆಕರ್ಷಕವಾಗಿತ್ತು. ಅವರ ಪ್ರವಚನ ಅರ್ಥಮಾಡಿಕೊಳ್ಳುವುದಕ್ಕೆ ಸರಳವಾಗಿತ್ತು, ಆದರೆ ಮನಸ್ಸನ್ನು ಯೋಚಿಸಲು ಪ್ರಚೋದಿಸುತ್ತಿತ್ತು.

ಪ್ರವಚನದ ನಂತರ ನಮಗೆ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡಲಾಯಿತು. ಅನಾಜಿಯವರ ಮತ್ತು ಅವರ ಪ್ರವಚನದ ವಿರುದ್ಧ ಕೆಲವು ಪ್ರಶ್ನೆಗಳು ಮತ್ತು ಟೀಕೆಗಳು ಭಾಗವಹಿಸುವುದುರಿಂದ ಬಂದಿದ್ದರೂ ಸಹ ಅನಾಜಿಯವರು ಯಾವಾಗಲೂ ಮುಗುಳ್ನಗೆ ಮತ್ತು ಕೆಲವೊಮ್ಮೆ ಲಘು ಹಾಸ್ಯದಿಂದ ಉತ್ತರಿಸುತ್ತಿದ್ದರು.

ಪ್ರವಚನದ ಆಯೋಜಕರಿಂದ ಅವರು ಎಷ್ಟೇ ಸಣ್ಣ ಮೊತ್ತವನ್ನು ಪಡೆದರೂ ಅವರು ತೃಪ್ತರಾಗಿರುತ್ತಿದ್ದರು. ಅವರು ಅನೇಕ ಪ್ರಶಸ್ತಿಗಳನ್ನು ಪಡೆದಿದ್ದರೂ ಅವರು ಆಗಲೂ ಮತ್ತು ಈಗಲೂ ವಿನಮ್ರ ವ್ಯಕ್ತಿತ್ವದವರು. ಅವರು ತಮ್ಮ ಜ್ಞಾನವನ್ನು ಹಂಚಿಕೊಳ್ಳಲು ಇಷ್ಟಪಡುತ್ತಿದ್ದರು ಮತ್ತು ಇತರರಂತೆ ಜ್ಞಾನವನ್ನು ನಿಧಿಯಂತೆ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಇಷ್ಟವಿರಲಿಲ್ಲ. ಕೆಲವೊಮ್ಮೆ ಅವರು ರಸ್ತೆ ಬದಿಯಂತಹ ಸ್ಥಳವನ್ನು ಮರೆತು ತಮ್ಮ ಚರ್ಚೆಯನ್ನು ಪ್ರಾರಂಭಿಸುತ್ತಿದ್ದರು ಮತ್ತು ಅವರು ಎಲ್ಲಿಗೆ ಹೋಗಬೇಕೆಂಬುದನ್ನು ಸಹ ಮರೆತುಬಿಡುತ್ತಿದ್ದರು.

ನಾನು ಅವರ ಮನೆಯ ಹತ್ತಿರ ವಾಸಿಸುತ್ತಿದ್ದೇನೆ. ಆದ್ದರಿಂದ ಅವರು ನನ್ನನ್ನು ಅವರ ಮನೆಗೆ ಆಹ್ವಾನಿಸಿದ್ದರು. ಅವರು ನನ್ನನ್ನು ಅವರ ಪತ್ನಿ ಲಕ್ಷ್ಮೀದೇವಿಯವರಿಗೆ ಪರಿಚಯಿಸಿದರು. ಶ್ರೀಮತಿ ಲಕ್ಷ್ಮೀದೇವಿಯರು ಕೂಡ ಒಬ್ಬ ಪ್ರಸಿದ್ದ ಕನ್ನಡ ಪ್ರಾಧ್ಯಾಪಕಿ.

ನಾನು ಅವರ ಮನೆಗೆ ಹಲವು ಬಾರಿ ಭೇಟಿ ನೀಡಿದ್ದೇನೆ. ಅದು ಮುಖ್ಯವಾಗಿ ಕನ್ನಡ ಪುಸ್ತಕಗಳನ್ನು ಓದುವುದಕ್ಕಾಗಿ ಮತ್ತು ಎರವಲು ಪಡೆಯುವುದಕ್ಕಾಗಿ. ಅವರ ಬಳಿ ಪುಸ್ತಕಗಳ ದೊಡ್ಡ (ಇಪ್ಪತ್ತೈದು ಸಾವಿರಕ್ಕೂ ಹೆಚ್ಚು) ಭಂಡಾರವಿದೆ. ಅವರ ಬಳಿ ಪ್ರಾಚೀನವಾದ ತಾಳೆಗರಿಯ ಮೇಲೆ ಬರೆದ ಅಪರೂಪದ ಹಸ್ತಪ್ರತಿಗಳಿವೆ. ಅವರು ಪಿ.ಎಚ್.ಡಿ. ಪದವಿಗಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಆದರೆ ವಿದ್ಯಾರ್ಥಿಗಳು ಪಿ.ಎಚ್.ಡಿ. ಪದವಿ ಪಡೆಯಲು ಮಾತ್ರ ಆಸಕ್ತಿ ಹೊಂದಿದ್ದರೆ ಹೊರತು ಅನಾಜಿಯವರ ಅಥವಾ ಅವರ ಕುಟುಂಬದವರ ಬಗ್ಗೆ ಆಸಕ್ತಿ ಇರಲಿಲ್ಲ. ಆ ದಿನಗಳಲ್ಲಿ ನಾನು ಬಹಳಷ್ಟು ಪುಸ್ತಕಗಳನ್ನು ಓದುತ್ತಿದ್ದೆ. ನಾನು ಪ್ರತಿದಿನ ಎರಡರಿಂದ ಮೂರು ಕನ್ನಡ ಪುಸ್ತಕಗಳನ್ನು ಓದುತ್ತಿದ್ದರಿಂದ ಬೇಗ ಓದಬೇಡ ಎಂದು ಅವರು ನನಗೆ ಎಚ್ಚರಿಕೆ

ನೀಡಿದ್ದರು. ಅವರು ಕೊಟ್ಟ ಪುಸ್ತಕಗಳ ಸಾರಾಂಶವನ್ನು ನಾನು ಅವರಿಗೆ ಮತ್ತು ಲಕ್ಷ್ಮೀದೇವಿಯವರಿಗೆ ವಿವರಿಸಬೇಕಾಗಿತ್ತು. ಪುಸ್ತಕಗಳ ಕೆಲವು ಭಾಗಗಳ ಬಗ್ಗೆ ನಾನು ಇಬ್ಬರಿಗೂ ಬಹಳಷ್ಟು ಪ್ರಶ್ನೆಗಳನ್ನು ಕೇಳುತ್ತಿದ್ದೆ. ಅವರೂ ನನ್ನನ್ನು ಪ್ರಶ್ನಿಸುತ್ತಿದ್ದರು.

ನನಗೆ ಪುಸ್ತಕಗಳನ್ನು ಕೊಡುವ ಬಗ್ಗೆ ಅವರ ನಡುವ ಕೆಲವೊಮ್ಮೆ ಚರ್ಚೆ ಮತ್ತು ಜಗಳ ನಡೆಯುತಿತ್ತು. ಏಕೆಂದರೆ ಲಕ್ಷ್ಮೀದೇವಿಯವರಿಗೆ ಮೊದಲು ನಾನು ಹೆಸರಾಂತ ಲೇಖಕರ ಒಳ್ಳೆಯ ಪುಸ್ತಕಗಳನ್ನು ಓದಬೇಕೆಂದು ಇಷ್ಟವಿತ್ತು – ವಿಶೇಷವಾಗಿ ಭೈರಪ್ಪನವರ ಪುಸ್ತಕಗಳು. ಆದರೆ ಅನಾಜಿಯವರಿಗೆ ನಾನು ಎಲ್ಲಾ ಲೇಖಕರ ಕಾದಂಬರಿ ಮತ್ತು ಕಾಲ್ಪನಿಕವಲ್ಲದ ಪುಸ್ತಕಗಳನ್ನು ಓದಲಿ ಎಂದು ಇಷ್ಟವಿತ್ತು. ಇದು ವಿಭಿನ್ನ ಬರವಣಿಗೆಯ ಶೈಲಿಗಳು ಮತ್ತು ಲೇಖಕರ ಸಂಶೋಧನೆಯ ಆಳವನ್ನು ಅರ್ಥಮಾಡಿಕೊಳ್ಳಲು ನನಗೆ ಸಹಾಯ ಮಾಡುತ್ತದೆ ಎಂಬುದು ಅವರ ಅನಿಸಿಕೆ.

ನಾನು ಅಂತಹ ಅನೇಕ ಮನಸ್ಸಿಗೆ ಸ್ಫೂರ್ತಿ ಮತ್ತು ಜ್ಞಾನ ನೀಡುವ ಸಂಭಾಷಣೆಗಳನ್ನು ಕೇಳಿದ್ದೇನೆ ಮತ್ತು ಅವುಗಳಲ್ಲಿ ಭಾಗವಹಿಸಿದ್ದೇನೆ. ಹಲವಾರು ತಿಂಗಳುಗಳ ಅವಧಿಯಲ್ಲಿ ಇಂತಹ ಸಂಭಾಷಣೆಗಳಿಂದ ನಾನು ವಿವಿಧ ವಿಷಯಗಳ ಬಗ್ಗೆ ನನ್ನ ಜ್ಞಾನ ಮತ್ತು ತಿಳಿವಳಿಕೆಯನ್ನು ಹೆಚ್ಚಿಸಿಕೊಂಡೆ. ನಾನು ಯಾವುದಾದರೂ ವಿಷಯದ ಬಗ್ಗೆ ಮಾತನಾಡಿದ ರೀತಿಯಲ್ಲಿನ ಬದಲಾವಣೆಯ ಮತ್ತು ಪ್ರಬುದ್ಧತೆಯ ಬಗ್ಗೆ ಅವರು ಪ್ರಶಂಸಿಸುತ್ತಿದ್ದರು.

ಲ್ಯಾಪ್‌ಟಾಪ್ ಅಥವಾ ಸ್ಮಾರ್ಟ್‌ಫೋನ್ ಎಂಬಂತಹ ತಂತ್ರಜ್ಞಾನವನ್ನು ಕಲಿಯಲು ಅನಾಜಿಯವರು ವೇಳೆ ವಿನಿಯೋಗಿಸಲಿಲ್ಲ. ಆದರೆ ಲಕ್ಷ್ಮೀದೇವಿಯವರು ಕಲಿಯುತ್ತಿದ್ದಾಗ ಹತ್ತಿರವೇ ಸುಳಿದಾಡುತ್ತಿದ್ದರು ಮತ್ತು ಅವರು ಅದನ್ನು ಸರಿಯಾಗಿ ಕಲಿಯುವಂತೆ ಲಕ್ಷ್ಮೀದೇವಿಯವರಿಗೆ ಹೇಳುತ್ತಿದ್ದರು.

ಜೀವನವು ತನ್ನದೇ ಆದ ಹಾದಿಯನ್ನು ಹಿಡಿಯಿತು ಮತ್ತು ನಾನು ಅವರ ಸಂಪರ್ಕವನ್ನು ಕಳೆದುಕೊಂಡೆ. ಅವರು ನನ್ನನ್ನು ಸಂಪರ್ಕಿಸಲು ಹಲವಾರು ಬಾರಿ ಪ್ರಯತ್ನಿಸಿದರು. ನಾನು ಒಂದಲ್ಲ ಒಂದು ಕಾರಣಕ್ಕಾಗಿ ಅವರನ್ನು ಸಂಪರ್ಕಿಸಲು ಸಾಧ್ಯವಾಗಲಿಲ್ಲ.

ಸುಮಾರು ವರ್ಷಗಳ ನಂತರ ಇತ್ತೀಚೆಗೆ ನಾನು ಅವರ ಮನೆಯ ಬಳಿ ವಾಹನ ಚಲಾಯಿಸುತ್ತಿದ್ದಾಗ ಅನಾಜಿಯವರನ್ನು ನೋಡಿದೆ ಮತ್ತು ದೂರದಿಂದಲೇ ಅವರನ್ನು ಗುರುತಿಸಿದೆ. ವಯಸ್ಸು ಅವರ ನಡಿಗೆಯನ್ನು ನಿಧಾನಗೊಳಿಸಿತ್ತು. ಅವರು ನನ್ನನ್ನು ತಕ್ಷಣ ಗುರುತಿಸಲಿಲ್ಲ.

ನಾನು ಯಾರೆಂದು ಅವರಿಗೆ ಅರಿವಾದ ನಂತರ ಅವರು ತುಂಬಾ ಸಂತೋಷಪಟ್ಟರು. ಅವರು ಯಾವುದೋ ವೈಯಕ್ತಿಕ ಕೆಲಸಕ್ಕೆ ಹೋಗುತ್ತಿದ್ದರೂ ಸಹ ಹತ್ತಿರದ ಅವರ ಮನೆಗೆ ಬರಬೇಕೆಂದು ಒತ್ತಾಯಿಸಿದರು. ಲಕ್ಷ್ಮೀದೇವಿಯವರೂ ಕೂಡ ನನ್ನನ್ನು ನೋಡಿ ತುಂಬಾ ಸಂತೋಷಪಟ್ಟರು. ನಾನು ಅವರನ್ನು ಇಷ್ಟು ವರ್ಷ ಸಂಪರ್ಕಿಸದಿದ್ದಕ್ಕೆ ಇಬ್ಬರೂ ನೊಂದುಕೊಂಡಿದ್ದರೂ ಅದನ್ನು ಮರೆತು ಅವರು ನನ್ನನ್ನು ವಿಶೇಷ ಅತಿಥಿಯಾಗಿ ಸ್ವಾಗತಿಸಿದರು.

ಗಂಭೀರ ವಾಕ್ಯವನ್ನು ಹಗುರವಾಗಿ ಪರಿವರ್ತಿಸುವ ಅನಾಜಿಯವರ ಹಾಸ್ಯಪ್ರಜ್ಞೆ ಇನ್ನೂ ಹಾಗೆಯೇ ಇದೆ. ನನ್ನ ಜೀವನದಲ್ಲಿ ಏರುಪೇರಾಗಿದೆ ಎಂದು ನಾನು ಅವರಿಗೆ ತಿಳಿಸಿದೆ. ಅದಕ್ಕೆ ಅವರು ಆಂಗ್ಲ ಬಾಷೆಯ “pair” ಅಂದರೆ ನಾನು ಮದುವೆಯಾಗಿದ್ದೇನೆಯೇ? ಎಂದು ಲಘು ಹಾಸ್ಯದಿಂದ ಕೇಳಿದರು.

ಅನಾಜಿಯವರನ್ನು ಮತ್ತು ಲಕ್ಷ್ಮೀದೇವಿಯವರನ್ನು ಅರಿತಿರುವ ನಾನು ತುಂಬಾ ಅದೃಷ್ಟಶಾಲಿ. ನಾನು ಅವರ ಮತ್ತು ಅವರೊಂದಿಗೆ ಕಳೆದ ಕ್ಷಣಗಳನ್ನು ಯಾವಾಗಲೂ ನಿಧಿಯಂತೆ ಕಾಪಿಡುತ್ತೇನೆ.

******

ಜ್ಞಾನವೃಕ್ಷ

ಅನಿಲ್ ಕುಮಾರ್
ಚರವಾಣಿ : ೭೯೭೫೯೮೬೩೩೭

"ರೀ, ಆ ಹುಡುಗನಿಗೆ ತಿಂಡಿ ಕೊಡ್ರಿ, ಪಾಪ ಹಸಿದಿದ್ದಾನೆ, ಅನ್ಸುತ್ತೆ. ಅದಕ್ಕೆ ತುಂಬಾ ಜೋರಾಗಿ ಮಾತನಾಡುತ್ತಿದ್ದಾನೆ" ಎಂದು ಹೇಳಿದ್ದು ಕನ್ನಡ ಹೋರಾಟಗಾರ ವೆಂಕಟರಾಮಪ್ಪ ಅವರು.

1960ನೇ ಇಸ್ವಿಯಲ್ಲಿ ಕರ್ನಾಟಕ ಸಂಘ ನಡೆಸುತ್ತಿದ್ದ ವಾರ್ಷಿಕ ಸಭೆಯಲ್ಲಿ 21ನೇ ವಯಸ್ಸಿನ ಯುವಕ ಅಕೌಂಟ್ಸ್ ಬಗ್ಗೆ ಜೋರು ಧ್ವನಿಯಲ್ಲಿ ಪ್ರಶ್ನೆ ಕೇಳಿದಾಗ, ಕರ್ನಾಟಕದ ಅತ್ಯುತ್ತಮ ಉಪನ್ಯಾಸಕ ವೆಂಕಟರಾಮಪ್ಪ ಅವರು ಹೇಳಿದ್ದು. ಸಾಮಾನ್ಯವಾಗಿ ಈ ರೀತಿಯ ಮಾತುಗಳನ್ನು ಹಿರಿಯರು, ಕಿರಿಯರ ಬಗ್ಗೆ ಕಾಳಜಿಯಿಂದ ಆಡುವುದು ಸರ್ವೇಸಾಮಾನ್ಯ.

ಡಿಪ್ಲೋಮೋ ಇನ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ಓದಿದಂತಹ ಒಬ್ಬ ವಿದ್ಯಾರ್ಥಿ ಪದವಿ ಗಳಿಸಲೇ ಬೇಕೆಂದು ತೀರ್ಮಾನಿಸುತ್ತಾನೆ. ಪದವಿ ಸೇರಲು ಇಂಟರ್ ಮಿಡಿಯೇಟ್ ಅಂದ್ರೆ ಪಿಯುಸಿಯ ಅರ್ಹತೆ ಕಡ್ಡಾಯವಾಗಿತ್ತು. ಈ ನಿರ್ಧಾರ ತೆಗೆದುಕೊಂಡ, ಆ ಯುವ ವಿದ್ಯಾರ್ಥಿಯೇ 21 ವರ್ಷದ ಶ್ರೀ ಅಶ್ವತ್ಥನಾರಾಯಣ ಅವರು.

ಅಶ್ವತ್ಥನಾರಾಯಣ ಅವರು ತಮ್ಮ ಹೈಸ್ಕೂಲಿನ ವಿದ್ಯಾಭ್ಯಾಸದ ನಂತರ ಡಿಪ್ಲೋಮೋ ಇನ್ ಮೆಕಾನಿಕಲ್ ಇಂಜಿನಿಯರಿಂಗ್ ಮಾಡಿ ಅಷ್ಟಕ್ಕೆ ತೃಪ್ತಿಯನ್ನು ಹೊಂದದೆ, ಒಂದು ಪದವಿಯನ್ನು ಪಡೆಯಲೇಬೇಕೆಂದು ನಿರ್ಧರಿಸಿದರು. ಆ ದಿನಗಳಲ್ಲಿ ಪದವಿ ಪೂರ್ವ ವ್ಯಾಸಂಗ ಒಂದು ವರ್ಷದ ಅವಧಿಯದಾಗಿತ್ತು. ಇದಕ್ಕಾಗಿ ಅವರು ಆರಿಸಿಕೊಂಡದ್ದು, ಅಂದಿನ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ಒಂದಾದ, ಗ್ಯಾಸ್ ಕಾಲೇಜ್ ಎಂದೆ ಹೆಸರುವಾಸಿಯಾಗಿದ್ದ ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜು. ಕೆಲವೊಂದು ನಿರ್ಧಾರಗಳು ನಮ್ಮ ಜೀವನದ ದಿಕ್ಕನ್ನೇ ಬದಲಿಸುತ್ತದೆ ಎಂಬುದಕ್ಕೆ ಇದು ಒಂದು ಉತ್ತಮ ಉದಾಹರಣೆ. ಆಗಿನ ಕಾಲದಲ್ಲಿ ಪದವಿ ಪೂರ್ವ ಹಾಗೂ ಪದವಿ ಕಾಲೇಜು ಪ್ರತ್ಯೇಕವಾಗಿರಲಿಲ್ಲ. ಒಟ್ಟಿಗೆ ಕೆಲಸ ಮಾಡುತಿತ್ತು. ಉಪನ್ಯಾಸಕರುಗಳು, ಒಟ್ಟಿಗೆ ಕಾರ್ಯ ನಿರ್ವಹಿಸುತ್ತಿದ್ದರು.

ಅಶ್ವತ್ಥನಾರಾಯಣ ಅವರು ಪದವಿ ಪೂರ್ವ ವ್ಯಾಸಂಗಕ್ಕಾಗಿ ಕಾಲೇಜಿಗೆ ಸೇರಿದ ನಂತರ ಕಾಲೇಜು ನಡೆಸುತ್ತಿದ್ದ ಕಾರ್ಯಕ್ರಮಗಳಲ್ಲಿ ಚಟುವಟಿಕೆಗಳಲ್ಲಿ ಬಹಳ ಸಕ್ರಿಯರಾಗಿ ಭಾಗವಹಿಸುತ್ತಿದ್ದರು. ಈ ಕಾರ್ಯಕ್ರಮಗಳನ್ನು ನಿರ್ವಹಿಸಲು ಕಾಲೇಜಿನ ಹಂತದಲ್ಲೇ ಒಂದು ಸಂಘವನ್ನು ಸ್ಥಾಪಿಸಿದ್ದರು. ಆ ಸಂಘಕ್ಕೆ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳನ್ನು ಒಳಗೊಂಡಂತೆ ಕಾರ್ಯಕಾರಿಣಿ ಸಭೆಯಲ್ಲಿ ಒಟ್ಟಾಗಿ ಚರ್ಚೆ ಮಾಡುತ್ತಿದ್ದರು. ಇದಕ್ಕೆ ಅವರು ನೀಡಿದ ಹೆಸರೇ ಕರ್ನಾಟಕ ಸಂಘ. ಇಂತಹ ಕರ್ನಾಟಕ ಸಂಘದ ವಿದ್ಯಾರ್ಥಿ ಪ್ರತಿನಿಧಿಯಾಗಿ ಕಾರ್ಯದರ್ಶಿ ಸ್ಥಾನವನ್ನು ಪಡೆದವರೇ ಶ್ರೀಯುತ ಅಶ್ವತ್ಥನಾರಾಯಣ ಅವರು.

ಅಶ್ವತ್ಥನಾರಾಯಣ ಅವರು ಪ್ರೈಮರಿ ವ್ಯಾಸಂಗದಿಂದ ಇಂಟರ್‌ಮೀಡಿಯಟ್ ವ್ಯಾಸಂಗದವರೆಗೆ ಅವರ ದ್ವಿತೀಯ ಭಾಷೆ ಸಂಸ್ಕೃತವಾಗಿತ್ತು. ಆದರೆ ಅವರ ವ್ಯಾಸಂಗದ ಮಾಧ್ಯಮ ಮಾತ್ರ ಕನ್ನಡವೇ ಆಗಿತ್ತು. ಇದುವರೆಗೂ ಅವರು ಎಲ್ಲೂ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಭ್ಯಾಸ ಮಾಡಿರಲಿಲ್ಲ.

ಕನ್ನಡ ಪ್ರೇಮದ ಉದ್ಭವ

ಕಾಲೇಜಿನ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಕರ್ನಾಟಕ ಸಂಘದ ಸಭೆ ಸಮಾರಂಭಗಳಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳುತ್ತಿದ್ದ ವಿದ್ಯಾರ್ಥಿ ಅಶ್ವತ್ಥನಾರಾಯಣ ಅವರ ಮೇಲೆ ಅಂದಿನ ಕನ್ನಡದ ಉಪನ್ಯಾಸಕರ ಪ್ರಭಾವ ಮಹತ್ತರವಾಗಿತ್ತು. ವೆಂಕಟರಾಮಪ್ಪ, ಎಂ.ವಿ. ಸೀತಾರಾಮಯ್ಯ, ಲಿಂಗಪ್ಪ ಕೆ.ಜಿ., ಜಿ. ಪಿ. ರಾಜರತ್ನಂ ಇನ್ನೂ ಅನೇಕ ಕನ್ನಡತನವನ್ನು ರಕ್ತವಾಗಿಸಿಕೊಂಡಿದ್ದ, ಉತ್ತಮ ವ್ಯಕ್ತಿತ್ವ ಹೊಂದಿದ ವ್ಯಕ್ತಿಗಳಿಂದ ಅನಾಜಿ ಪ್ರೇರಿತರಾಗಿದ್ದರು. ಅವರು ಇಂದಿಗೂ ಈ ಕನ್ನಡ ಉಪನ್ಯಾಸಕರ ಬಗ್ಗೆ ಕಣ್ಣಿಗೆ ಕಟ್ಟಿದಂತೆ ಹೇಳುತ್ತಾರೆ.

ವೆಂಕಟರಾಮಪ್ಪ ಅವರು ಕಾಲೇಜಿಗೆ ಒಳ ಶಾನಭೋಗರ ಹಾಗೆ ಆಕರ್ಷಕವಾಗಿ ಬರುತ್ತಿದ್ದರು. ಕಚ್ಚೆ ಪಂಚೆ, ಪೇಟ, ಕೋಟು, ಕೈಯಲ್ಲಿ ಕೊಡೆ, ಬ್ಯಾಗು, ಹೀಗೆ ಶಿಸ್ತಿನಿಂದ ಬರುತ್ತಿದ್ದರು. ಸದಾ ಲವಲವಿಕೆಯಿಂದ ಕಾಲೇಜಿಗೆ ಬರುತ್ತಿದ್ದರು. ಇವರು ಕನ್ನಡ ಪಾಠ ಮಾಡುತ್ತಿದ್ದ ಬಗೆಗೆ ವಿದ್ಯಾರ್ಥಿಗಳಲ್ಲಿ ಗೌರವ ಭಾವನೆ ತರುತ್ತಿತ್ತು ಅಷ್ಟೇ ಅಲ್ಲದೆ ತಮ್ಮ ಪಾಠಕ್ಕೆ ಯಾರಾದರೂ ತಂಟೆ ತಕರಾರು ಮಾಡಿದರೆ ಅವರ ಚಳಿಯನ್ನು ಮಾತುಗಳಿಂದಲೇ ಬಿಡಿಸಿ ಸರಿದಾರಿಗೆ ತರುತ್ತಿದ್ದರು. ಅವರು ತಮ್ಮ ಕೊಠಡಿಯಲ್ಲಿ ಪಾಠ ಮಾಡುತ್ತಿದ್ದರೆ ಪಕ್ಕದ ಕೋಣೆಗೆ ಪಾಠ ಕೇಳಿಸುತ್ತಿತ್ತು. ಅಂತಹ ಕಂಠ ಅವರದ್ದು. ಎಷ್ಟೋ ಬಾರಿ ಅಶ್ವತ್ಥನಾರಾಯಣ ಅವರು ಇವರ ಪಾಠವನ್ನು ಈ ರೀತಿಯೇ ಕೇಳಿಸಿಕೊಳ್ಳುತ್ತಿದ್ದರು. ವೆಂಕಟರಾಮಪ್ಪನವರು ಕನ್ನಡದಲ್ಲಿ ಭಾಗವತವನ್ನು ರಚಿಸಿದ್ದರು. ಅನೇಕ ಕಡೆ ಕನ್ನಡ ಉಪನ್ಯಾಸಗಳನ್ನು ನೀಡುತ್ತಿದ್ದರು. ಬಹಳ ಉತ್ತಮ ವಾಗ್ಮಿಯಾಗಿದ್ದ ವೆಂಕಟರಾಮಪ್ಪನವರು ಅತ್ಯುತ್ತಮವಾಗಿ ವ್ಯಾಖ್ಯಾನಗಳನ್ನು ಮಾಡುತ್ತಿದ್ದರು. ಇದರ ಜೊತೆಗೆ ಪಾಠ ಮಾಡುವಾಗ ವಿದ್ಯಾರ್ಥಿಗಳನ್ನು ಉದಾಹರಣೆಗಳೊಂದಿಗೆ ನಗಿಸುತ್ತ ಕನ್ನಡದ ಅಭಿಮಾನವನ್ನು ತುಂಬುತ್ತಿದ್ದರು. ವಿದ್ಯಾರ್ಥಿಗಳ ಏಳಿಗೆ ಬಗ್ಗೆ ಸದಾ ಕಾರ್ಯ ಪ್ರವೃತ್ತರಾಗಿರುತ್ತಿದ್ದರು.

ಇನ್ನು ಉಳಿದಂತೆ ಎಂವಿ ಸೀತಾರಾಮಯ್ಯ ಕೆಜಿ ಲಿಂಗಪ್ಪ ಜಿಪಿ ರಾಜರತ್ನಂ ಇವರುಗಳ ಬಗ್ಗೆ ಇಡೀ ರಾಜ್ಯವೇ ಅರಿತಿದೆ. ಇವರುಗಳು ಉತ್ತಮ ಉಪನ್ಯಾಸಕರುಗಳೇ ಅಲ್ಲದೆ ಕನ್ನಡದ ಏಳಿಗೆಗೆ ತಮ್ಮನ್ನು ಅರ್ಪಿಸಿಕೊಂಡವರು.

ಇಂತಹ ಮಹನೀಯರ ಸಂಪರ್ಕ ಅಶ್ವತ್ಥನಾರಾಯಣ ಅವರನ್ನು ಕನ್ನಡದ ಸೇವೆಯೆಡೆಗೆ ಪ್ರೇರೇಪಿಸಿತು. ಕನ್ನಡ ಭಾಷೆಯನ್ನು ಅಲ್ಲಿಯವರೆಗೂ ವ್ಯಾಸಂಗ ಮಾಡದಿದ್ದ ವಿದ್ಯಾರ್ಥಿ ಕನ್ನಡ ನಾಡು ನುಡಿ, ಹೋರಾಟದ ಮೇಲೆ ಕ್ರಮೇಣ ಆಸಕ್ತಿ ಬೆಳೆಸಿಕೊಂಡರು.

ಮುಂದೆ ತಾನು ಕನ್ನಡ ಉಪನ್ಯಾಸಕನಾಗಿ ಇದೇ ರೀತಿ ಉತ್ತಮ ಕೆಲಸ ಮಾಡಬೇಕೆಂದು ಅಶ್ವತ್ಥನಾರಾಯಣ ಅವರ ನಿರ್ಧಾರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಯೂರಿತು. ಅಷ್ಟೇ ಅಲ್ಲದೆ ಅನಾಜಿ ಅವರಿಗೆ ಕನ್ನಡ ಭಾಷೆಯ ಅಭಿಮಾನದೊಂದಿಗೆ ಹೋರಾಟ, ಕನ್ನಡ ಪುಸ್ತಕಗಳನ್ನು ಓದುವ ಆಸಕ್ತಿ, ಉಪನ್ಯಾಸಗಳನ್ನು ನೀಡುವುದೂ, ಸ್ವಾರಸ್ಯಕರವಾಗಿ ಪುಸ್ತಕಗಳನ್ನು ವಿಮರ್ಶಿಸುವ ಹಾಗೂ ವಿಷಯದ ಪ್ರಸ್ತಾವನೆಯಲ್ಲಿ ಇತರರ ಬರವಣಿಗೆ ಉಲ್ಲೇಖಗಳನ್ನು ಪ್ರಸ್ತಾಪಿಸುವ, ಆಧಾರಗಳನ್ನು ನೀಡುವ ಬಗೆಯನ್ನು ಕರಗತವಾಯಿತು.

ಸದಾ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ಅಶ್ವತ್ಥನಾರಾಯಣ ಅವರು ಒಂದು ಸಭೆಯಲ್ಲಿ ಕಾರ್ಯಕ್ರಮಗಳ ಲೆಕ್ಕ ಪಟ್ಟಿಯನ್ನು ಪದಾಧಿಕಾರಿ ಒಬ್ಬರು ಸುಮ್ಮನೆ ಓದುತ್ತಿದ್ದರು. ಆಗ ಅನಾಜಿ ಅವರು "ಈ ರೀತಿ ವಿವರಣೆ ಕೊಟ್ಟರೆ ಸರಿ ಹೋಗುವುದಿಲ್ಲ, ಸರಿಯಾಗಿ ನೀಡಿ, ಎಂದು ಗಟ್ಟಿ ಧ್ವನಿಯಲ್ಲಿ ಕೇಳುತ್ತಾರೆ. ಆಗಲೇ ವೆಂಕಟರಾಮಪ್ಪನವರು ಈ ಹುಡುಗನಿಗೆ ಹಸಿವಾಗಿದೆ ಎಂದು ತೋರುತ್ತದೆ ಅವನಿಗೆ ಎರಡು ದೋಸೆ ಕೊಡಿ ಎಂದು ಅಲ್ಲೇ ಇದ್ದ ಕಚೇರಿ ಗುಮಾಸ್ತನಿಗೆ ತಿಳಿಸುವುದನ್ನು ಪ್ರಾರಂಭದಲ್ಲೇ ಉಲ್ಲೇಖಿಸಿದ್ದೇವೆ.

ಈ ಉಪನ್ಯಾಸಕರುಗಳು ಅಲ್ಲದೆ ಅನೇಕ ಕನ್ನಡ ಹೋರಾಟಗಾರರ ಸಂಪರ್ಕ ಅಶ್ವತ್ಥನಾರಾಯಣ ಅವರಿಗೆ ಆಗಿನಿಂದಲೂ ಇತ್ತು. ಮುಂದೆ ಬೆಳೆದು ಪದವಿ ಪೂರ್ವ ನಂತರ ಎಪಿಎಸ್ ಕಾಲೇಜಿನಲ್ಲಿ ಬಿಎ ಪದವಿ ಮುಗಿಸಿ ನಂತರ ಎಂಎ ಸಮಾಜ ಶಾಸ್ತ್ರ ಮತ್ತು ಕನ್ನಡದಲ್ಲಿ ಎಂಎ ಪದವಿಯನ್ನು ಪಡೆದು ದಯಾನಂದ ಸಾಗರ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿದರು. ಇವರು ಪಾಠ ಮಾಡುವ ರೀತಿ ವಿದ್ಯಾರ್ಥಿಗಳಲ್ಲಿ ಬಹಳ ಮೆಚ್ಚುಗೆಯನ್ನು ಪಡೆದಿದೆ ಅಲ್ಲದೆ ಗೌರವ ಭಾವನೆಯನ್ನು ಮೂಡಿಸಿದೆ. ಅನೇಕ ಕನ್ನಡ ಸಂಘ ಸಂಸ್ಥೆಗಳ ಆಜೀವ ಸದಸ್ಯತ್ವ ಹೊಂದಿರುವ ಅಶ್ವತ್ಥನಾರಾಯಣ ಅವರು ಎಲ್ಲರಿಗೂ ಅನಾಜಿ ಎಂದೇ ಪರಿಚಿತರು.

ಬೆಂಗಳೂರಿನಲ್ಲಿರುವ ಎಲ್ಲಾ ಸಂಘ ಸಂಸ್ಥೆಗಳಲ್ಲೂ ಇವರು ಉಪನ್ಯಾಸವನ್ನು ನೀಡಿದ್ದಾರೆ. ಅಲ್ಲದೆ ಎಲ್ಲಾ ಸಂಘ-ಸಂಸ್ಥೆಗಳ ಲ್ಲು ಬಹಳ ಚಟುವಟಿಕೆಯಿಂದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಶ್ರೀಯುತರು ಯಾವುದೇ ವಿಷಯದ ಬಗ್ಗೆ ಉಪನ್ಯಾಸ ನೀಡಿದಾಗ ಬಹಳ ಪ್ರಬುದ್ಧವಾಗಿ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಾರೆ ಅನೇಕ ಪುಸ್ತಕಗಳನ್ನು ಉಲ್ಲೇಖಿಸಿ ಆಧಾರ ಸಹಿತ ವಿವರಗಳನ್ನು ನೀಡುತ್ತಾರೆ. ಕನ್ನಡ ಕಲಿಯಬೇಕೆಂಬ ಆಕಾಂಕ್ಷಿಗಳಿಗೆ ಕಾಗುಣಿತದಿಂದ ಪ್ರಾರಂಭಿಸಿ ಪುಸ್ತಕಗಳನ್ನು ಓದುವ ರೀತಿಯವರೆಗೆ ಶ್ರದ್ಧೆ ಮತ್ತು ಶಿಸ್ತಿನಿಂದ ಹೇಳಿಕೊಡುತ್ತಾರೆ. ಪಾಠಗಳನ್ನು ಬೋಧಿಸುತ್ತಿರುವಾಗಲೇ ವಿದ್ಯಾರ್ಥಿಗಳ ಮನದಲ್ಲಿ ಕನ್ನಡದ ಅಭಿಮಾನ ತುಂಬಿದ್ದಾರೆ. ಯಾವುದನ್ನು ಸುಲಭವಾಗಿ ಒಪ್ಪದ ತಮ್ಮ ನಿಲುವನ್ನು ವಿದ್ಯಾರ್ಥಿಗಳ ಮನದಲ್ಲಿ ಬೀಜ ಬಿತ್ತುತ್ತಾರೆ ಇವರ ಓದುವ ದಾಹ ವಿಷಯಗಳನ್ನು ತಿಳಿಯುವ ಆಸಕ್ತಿ ಎಷ್ಟಿದೆ ಎಂದು ತಿಳಿಯಲು ನಾವು ಒಮ್ಮೆ ಅವರ ಮನೆಗೆ ಭೇಟಿ ನೀಡಬೇಕು. ಮನೆಯಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚು ಗ್ರಂಥಗಳು ಮತ್ತು ಅಪರೂಪದ ಪುಸ್ತಕಗಳು ಇವೆ. ಮನೆಯಲ್ಲಿಯೇ ಗ್ರಂಥಾಲಯವನ್ನು ಹೊಂದಿದ್ದಾರೆ. ಅಷ್ಟು ಪುಸ್ತಕಗಳನ್ನು ಅನೇಕ ಬಾರಿ ಓದಿದ್ದಾರೆ. ಪರಾಮರ್ಶೆಗೆ ಸಹಾಯಕವಾಗುವ ಪುಸ್ತಕಗಳನ್ನು ಮಾತ್ರ ಇವರ ಸಂಗ್ರಹಿಸಿರುವುದು. ಇಷ್ಟೇ ಅಲ್ಲದೆ ಅನೇಕ ಪುಸ್ತಕಗಳನ್ನು ವಿಮರ್ಶೆ ಮಾಡಿ ಬರಹಗಾರರ ಗುಣಮಟ್ಟವನ್ನು ಹೆಚ್ಚಿಸಲು ಆ ಮೂಲಕ ಸಾಹಿತ್ಯ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಿದ್ದಾರೆ. ಹಿರಿಯರು ಕಿರಿಯರು ಎಂಬ ಭೇದ ಭಾವವಿಲ್ಲದೆ ಸರಳ ರೀತಿಯಲ್ಲಿ ಎಲ್ಲರೊಂದಿಗೆ ಕೂಡಿ ಕೆಲಸ ಮಾಡುವುದು ಚರ್ಚಿಸುವುದು, ಶಕ್ತ್ಯಾನುಸಾರ ಸಹಕರಿಸುವ ಇವರ ಈ ಉತ್ತಮ ಗುಣಗಳು ನಮ್ಮಂತಹ ಯುವ ಪೀಳಿಗೆಗೆ ದಾರಿ ದೀಪ.

ಅಶ್ವತ್ಥನಾರಾಯಣ ಅವರ ಮತ್ತೊಂದು ಅಪರೂಪದ ಪರಿಚಯವೆಂದರೆ ಇವರು ಮೂಲ ಬೆಂಗಳೂರಿನವರು. ಬೆಂಗಳೂರಿನಲ್ಲಿ ಹುಟ್ಟಿ ವ್ಯಾಸಂಗ ಮಾಡಿ ಬೆಂಗಳೂರಿನಲ್ಲೇ ಕೆಲಸ ಪ್ರಾರಂಭಿಸಿದವರು. ತಂದೆ ನ್ಯಾಯಾಲಯದಲ್ಲಿ ಅಮೀನರಾಗಿದ್ದರಿಂದ, ಹೆಚ್ಚು ಬೆಂಗಳೂರಿನಲ್ಲೇ ಸೇವೆಯನ್ನು ಸಲ್ಲಿಸಿದ್ದಾರೆ. ಬೆಂಗಳೂರಿಗೆ 125 ವರ್ಷಗಳು ತುಂಬಿದ ಸುಸಂದರ್ಭದಲ್ಲಿ, ಚಾಮರಾಜಪೇಟೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಇವರನ್ನು ಮೂಲ ಬೆಂಗಳೂರಿಗ ಎಂದು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ನಾವು ಅಂದರೆ ರವೀಂದ್ರ ಮತ್ತು ಅನಿಲ್ ಕುಮಾರ್ ಬಿ.ಎಂ.ಶ್ರೀ ಪ್ರತಿಷ್ಠಾನದ ಪದಾಧಿಕಾರಿಗಳಾಗಿದ್ದಾಗ ಅಶ್ವತ್ಥನಾರಾಯಣ ಅವರು ನಮಗೆ ಪರಿಚಯವಾಗಿದ್ದು ನಾವು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಬಂದಾಗ. ಅಶ್ವತ್ಥನಾರಾಯಣ ಅ ರಾ ಮಿತ್ರ, ಅಬ್ದುಲ್ ಬಶೀರ್, ತೀನಂಶ್ರೀ ಅವರ ಮಗ ನಾಗಭೂಷಣ್ ಮುಂತಾದ ದಿಗ್ಗಜರು ಸದಸ್ಯರಾಗಿದ್ದರು. ಇಂತಹ ದಿಗ್ಗಜರ ನಡುವೆ ಅಧ್ಯಕ್ಷರಾಗಿದ್ದವರು ಡಾ. ಪಿ ವಿ ನಾರಾಯಣ್ ಅವರು ಹಾಗೂ ಗೌರವ ಅಧ್ಯಕ್ಷರು ಡಾಕ್ಟರ್ ಎಂ ಎಚ್ ಕೃಷ್ಣಯ್ಯ, ಅನಾಜಿಯವರು ಯಾವಾಗಲೂ ತಮಾಷೆಯಾಗಿ ಎಂ ಎಚ್ ಕೃಷ್ಣಯ್ಯ ಅವರು ಗೌರವಯುತ ಅಧ್ಯಕ್ಷರು, ಹಾಗಂತ ಅಧ್ಯಕ್ಷರಿಗೆ ಗೌರವ ಇಲ್ಲವೆಂದು ಭಾವಿಸಬಾರದು ಎಂದು ಎಲ್ಲರಲ್ಲೂ ನಗೆ ಮೂಡಿಸುತ್ತಿದ್ದರು.ನಮ್ಮ ಕಾರ್ಯಕಾರಿ ಸಮಿತಿ ಸಭೆ ಗಂಟೆಗಟ್ಟಲೆ ನಡೆಯುತ್ತಿತ್ತು ಅದಕ್ಕೆ ಮುಖ್ಯ ಕಾರಣಕರ್ತರಲ್ಲಿ ಅಶ್ವತ್ಥನಾರಾಯಣ ಕೂಡ ಒಬ್ಬರು. ಯಾವುದೇ ವಿಷಯವನ್ನು ಬಹಳ ಶಿಸ್ತಿನಿಂದ ಚರ್ಚಿಸಿ ವಿಷಯವಾರು ಸರಿ ತಪ್ಪುಗಳನ್ನು ತಿಳಿಸುವುದೇ ಅಲ್ಲದೆ ದೋಷಗಳನ್ನು ಸರಿಪಡಿಸುತ್ತಿದ್ದರು. ಆತ್ಮೀಯವಾಗಿ ಕಹಿ ವಿಷಯಗಳನ್ನು ತಿಳಿಸಿ ಸಿಹಿ ಆಗುವಂತೆ ಮಾಡುತ್ತಿದ್ದರು. ಕಳೆದ 20 ವರ್ಷಗಳಲ್ಲಿ ಅನಾಜಿಯವರು ನಮಗೆ ಉತ್ತಮ ಮಾರ್ಗದರ್ಶಕರಾಗಿದ್ದಾರೆ. ಒಂಬತ್ತು ದಶಕಗಳಲ್ಲಿ ಕನ್ನಡದ ಸೇವೆ ಮಾಡುತ್ತಾ ಒಬ್ಬ ಸಾಹಿತ್ಯ ಪರಿಚಾರಕನಾಗಿ ಪೀಪಲ್ ಟ್ರೀ ಅಂತೆ ಬೆಳೆದು ನಾಡು ನುಡಿಗಾಗಿ ಶ್ರಮಿಸಿರುವ ಹಿರಿಯ ಜೀವ.

ಡಾ. ಟಿ.ವಿ. ರಾಜು ಅವರು ನನಗೆ ಎಂ.ಫಿಲ್. ಮಾರ್ಗದರ್ಶಕರು, ಗುರುಗಳು. ಅಂತಹ ವ್ಯಕ್ತಿಯ ಸಂಪಾದಕತ್ವದಲ್ಲಿ ಆನಾಜಿ ಅಭಿನಂದನಾ ಗ್ರಂಥ ಬರುತ್ತಿರುವುದು ಬಹಳ ಹೆಮ್ಮೆಯ ವಿಷಯ. ಹಾಲಿನೊಂದಿಗೆ ಜೇನು ಬೆರೆತಾಗ ಸ್ವಾದಿಸುವವನೇ ಧನ್ಯ. ಡಾ. ಟಿ.ವಿ. ರಾಜು ಮತ್ತು ಅಶ್ವತ್ಥನಾರಾಯಣ್ ಅಂತವರ ಸ್ನೇಹವೇ ಈ ಸಾಹಿತ್ಯ ಆಸಕ್ತರಿಗೆ ಧನ್ಯತೆಯನ್ನು ತಂದುಕೊಡುತ್ತದೆ.

****

ಬಹುಕಾಲದ ಸನ್ಮಿತ್ರರು

ಎಂ.ಎಸ್. ವೆಂಕಟಸುಬ್ಬಯ್ಯ
ಚರವಾಣಿ : ೯೪೪೮೪ ೬೫೩೧೯

ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಪರಿಚಯ ನನಗೆ ೧೯೭೩ರಿಂದ ಈಚೆಗೆ ಆದದ್ದು. ಅದಕ್ಕೂ ಮೊದಲು ನನಗೆ ಅನಾಜಿ ಅವರ ಮಾವನವರಾದ ದಿ। ಎಂ. ಆರ್. ರಾಮರಾಯರು ಹಾಗೂ ಅವರ ಕುಟುಂಬದವರ ಪರಿಚಯ ಗಾಢವಾಗಿತ್ತು. ಜಯನಗರ 'ಟಿ' ಬ್ಲಾಕಿನಲ್ಲೇ ವಾಸಿಸುತ್ತಿದ್ದು ನಮ್ಮ ಕುಟುಂಬದವರ ಪರಿಚಯ ಅಲ್ಲಿಯೇ ಇದ್ದ ರಾಘವೇಂದ್ರ ಮಠ ಹಾಗೂ ಅದರ ಪಕ್ಕದಲ್ಲೇ ಇರುವ ಶ್ರೀರಾಮದೇವರ ದೇವಸ್ಥಾನದಲ್ಲಿ ಬೆಳೆದು ಬಂದಿತ್ತು. ಕ್ರಮೇಣ ನಮ್ಮ ಮನೆಯಲ್ಲಿ ನಡೆಯುತ್ತಿದ್ದ ಪೂಜೆ ಪುನಸ್ಕಾರ, ಹಬ್ಬ-ಹರಿದಿನಗಳು, ಮದುವೆ-ಮುಂಜಿ ಮೊದಲಾದ ಸಮಾರಂಭಗಳಲ್ಲಿ ನಮ್ಮಿಬ್ಬರ ಕುಟುಂಬವು ಭಾಗವಹಿಸುತ್ತಿದ್ದೆವು. ನಮ್ಮೂರಾದ ಕನಕಪುರದ ನಮ್ಮ ಹೊಲದಿಂದ ತರುತ್ತಿದ್ದ ಕಡಲೆಕಾಯಿ, ಕೋಡುಬಳೆ ಮೊದಲಾದ ತಿಂಡಿಗಳನ್ನು ನಾವೆಲ್ಲರೂ ಅಂದಿನ ರಾಗಿಗುಡ್ಡಕ್ಕೆ ಹೋಗಿ ತಿಂದು, ಓಡಾಡಿಕೊಂಡು ಆರಾಮವಾಗಿ ಬರುತ್ತಿದ್ದೆವು. ೧೯೭೩ರ ಆಸುಪಾಸಿನಲ್ಲಿ ರಾಗಿಗುಡ್ಡ ಈಗಿನಂತೆ ಪ್ರೇಕ್ಷಣೀಯ ಅಂತೆಯೇ ಭಕ್ತಗಣಗಳ ಅಪೂರ್ವ ತಾಣವಾಗಿರಲಿಲ್ಲ. ಈಗಿನಂತೆ ಜಯನಗರ ಜನಸಂದಣಿಯಿಂದ ಕೂಡಿರಲಿಲ್ಲ. ರಾಮನವಮಿ ಕೇವಲ ದೇವಸ್ಥಾನದಲ್ಲಿ ಮಾತ್ರವಲ್ಲ ಎಲ್ಲರ ಮನೆಗಳಲ್ಲೂ ಸಂಭ್ರಮದಿಂದ ಆಚರಿಸುತ್ತಿದ್ದೆವು. ಹೀಗೆ ಬೆಳೆದು ಬಂದ ನಮ್ಮಿಬ್ಬರ ಕುಟುಂಬಗಳ ಸಂಬಂಧ ನಿಕಟವಾಗಿ ಬೆಳೆದು ಬಂದಿತು. ಇಂಥ ಒಂದು ಸಂದರ್ಭದಲ್ಲಿ ೧೯೭೩ರಲ್ಲಿ ಶ್ರೀಮತಿ ಲಕ್ಷ್ಮೀದೇವಿ ಹಾಗೂ ಶ್ರೀ ಅಶ್ವತ್ಥನಾರಾಯಣ ಅವರ ವಿವಾಹವು ಕೂಡಿ ಅವರಿಬ್ಬರು ಬಂದು ಅತ್ಯಂತ ಸರಳವಾಗಿ ಮಾಗಡಿಯ ಛತ್ರವೊಂದರಲ್ಲಿ ನೆರವೇರಿತು. ಆಗ ಮಾಗಡಿಗೆ ಹೋಗಿಬರುವ ಹಾಗೂ ಅಲ್ಲಿನ ವಿವಾಹದ ಕಾರ್ಯಗಳಲ್ಲಿ ನಾನು ಲಕ್ಷ್ಮಿಯವರ ತಮ್ಮ ಮಾಧವಮೂರ್ತಿಯೊಂದಿಗೆ ಭಾಗವಹಿಸುವ ಅವಕಾಶ ನನಗೆ ಒದಗಿ ಬಂದಿತ್ತು. ಅವರ ಆಪ್ತ ಬಳಗದವರಲ್ಲಿ ನಾನೊಬ್ಬನಾಗಿ ಭಾಗವಹಿಸುವ ಸೌಭಾಗ್ಯ ನನ್ನದಾಗಿತ್ತು.

ಅಲ್ಲಿಂದೀಚೆಗೆ ನನಗೆ ಅನಾಜಿ ಅವರೊಂದಿಗಿನ ಒಡನಾಟ ಪ್ರಾರಂಭವಾಯಿತು. ಯಾವ ಹಮ್ಮು-ಬಿಮ್ಮುಗಳಿಲ್ಲದ ಅವರ ಸರಳ ವ್ಯಕ್ತಿತ್ವ ನನ್ನನ್ನು ಆಕರ್ಷಿಸಿತ್ತು. ನನಗೆ ಮಾಡುವಲ್ಲದೆ ನಮ್ಮ ಮನೆಯವರೆಲ್ಲರಿಗೂ ಅವರ ಒಡನಾಟ ಬಹಳ ಇಷ್ಟವಾಯಿತು. ಭಜಗೋವಿಂದಂ ಬಗ್ಗೆ ಅವರು ನೀಡಿದ ಉಪನ್ಯಾಸ ನಮ್ಮ ತಂದೆ-ತಾಯಿಗಳಿಗೆ ಬಹಳ ಮೆಚ್ಚುಗೆಯಾಯಿತು.

ಶ್ರೀಮತಿ ಲಕ್ಷ್ಮೀ ಮತ್ತು ಶ್ರೀ ಅಶ್ವತ್ಥನಾರಾಯಣ ಅವರ ಕುಟುಂಬವು ದಿ॥ ರಾಮರಾಯರ ಮನೆಯ ಮಹಡಿಗೆ ಸ್ಥಳಾಂತರಗೊಂಡನಂತರ ನಮ್ಮ ಒಡನಾಟ ಹೆಚ್ಚಾಯಿತು. ಅವರ ಮನೆಯ ಪುಸ್ತಕಭಂಡಾರ, ಆ ದಂಪತಿಗಳಿಲ್ಲದ್ದ ಅಪಾರ ಸಾಹಿತ್ಯಾಸಕ್ತಿ, ಸ್ನೇಹಿತರ ಬಗ್ಗೆ ತೋರುತ್ತಿದ್ದ ವಿಶ್ವಾಸ,

ಮಾತನಾಡುವಾಗಲೆಲ್ಲ ಪರಿಚಯಿಸುತ್ತಿದ್ದ ಹೊಸ ಹೊಸ ಪುಸ್ತಕಗಳು, ನಡುನಡುವೆ ಹಾರಿಸುತ್ತಿದ್ದ ಮಾತಿನ ಪಟಾಕಿಗಳು, ನೀಡುತ್ತಿದ್ದ ಆತಿಥ್ಯ, ನಮ್ಮಿಬ್ಬರ ಕುಟುಂಬದ ಬೆಸುಗೆಯನ್ನ ಮತ್ತಷ್ಟೂ ಭದ್ರಪಡಿಸಿತು.

ನಾವು ಸ್ವಂತಮನೆಯನ್ನು ಕೊಂಡು, ಜಯನಗರದಿಂದ ದೂರ ವಲಸೆ ಹೋದರೂ, ನಮ್ಮಿಬ್ಬರ ಸ್ನೇಹಕ್ಕೆ ಚ್ಯುತಿ ತಂದಿಲ್ಲ. ಈಗಲೂ ಫೋನಿನಲ್ಲಾದರೂ ಪರಸ್ಪರ ಮಾತನಾಡುತ್ತಿರುತ್ತೇವೆ.

ಈ ಮಧ್ಯೆ ನನ್ನ ಬೀಗರಾದ ಶ್ರೀಸತ್ಯನಾರಾಯಣ ಅವರು ವೃತ್ತಿಯಲ್ಲಿ ಇಂಜಿನಿಯರ್ ಆದರೂ, ಅನಾಜಿ ಅವರಂತೆ ಸಾಹಿತ್ಯಾಸಕ್ತರು. ಅವರು ಹಲವಾರು ಕಾವ್ಯಗಳನ್ನು ಬರೆದಿದ್ದಾರೆ. ಅವರ ಹಲವು ಪುಸ್ತಕಗಳನ್ನು ನಮ್ಮ ಮನೆಯಲ್ಲಿ ನೋಡಿದ ಅವರು, ಆ ಪುಸ್ತಕಗಳನ್ನು ತಮ್ಮ ಮನೆಗೆ ತೆಗೆದುಕೊಂಡು ಹೋಗಿ ಓದಿ, ಅವುಗಳ ಬಗ್ಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ಅಷ್ಟೇ ಅಲ್ಲದೆ ಅವರನ್ನು ಮುಖತಃ ಭೇಟಿಯಾಗ ಬಯಸಿ ನನ್ನೊಂದಿಗೆ ಅವರನ್ನು ಭೇಟಿ ಮಾಡಿ ಅಭಿನಂದಿಸಿದರು. ನಾನಂತೂ ಹೀಗೆ ಪುಸ್ತಕವನ್ನು ಓದಿ ಮೆಚ್ಚಿಕೊಂಡು ತಾವಾಗಿಯೇ ಅವರಲ್ಲಿಗೆ ಹೋಗಿ ಅಭಿನಂದಿಸಿದ ಸರಳ ವ್ಯಕ್ತಿಯನ್ನು ನೋಡಿಲ್ಲ. ಪ್ರೊಫೆಸರರಾದರೂ ಸ್ವಲ್ಪವೂ ಹಮ್ಮುಬಿಮ್ಮಿಲ್ಲದೆ, ಬೇರೆಯವರನ್ನು ಮೆಚ್ಚಿಕೊಳ್ಳುವ, ಅವರನ್ನು ಮತ್ತಷ್ಟು ಹುರಿದುಂಬಿಸುವ ಉದಾತ್ತ ಹೃದಯಿಯನ್ನು ನಾನು ಎಲ್ಲಿಯೂ ನೋಡಿಲ್ಲ. ಮೂಲತಃ ಅಧ್ಯಾಪಕನಾಗಿದ್ದ ನನಗೆ ಅವರ ಈ ಗುಣಶ್ರೀಮಂತಿಕೆ ಅತ್ಯಂತ ಅಚ್ಚುಮೆಚ್ಚು.

ಅವರಿಗೆ ಸಲ್ಲುತ್ತಿರುವ ಈ 'ಸಾಹಿತ್ಯ ಪರಿಚಾರಕ' ಎಂಬ ಗ್ರಂಥಾಭಿನಂದನೆಯ ಯಶಸ್ವಿಯಾಗಲಿ, ಭಗವಂತನು ಅವರಿಗೂ ಅವರ ಕುಟುಂಬದವರಿಗೂ ಆಯುರಾರೋಗ್ಯ ಭಾಗ್ಯವನ್ನು ನೀಡಲಿ ಎಂಬ ಹಾರೈಕೆಯೊಂದಿಗೆ.

****

ಕನ್ನಡದ ಅಪರೂಪದ ವಿದ್ವಾಂಸ

ಡಾ. ಬಿ. ನಂಜುಂಡಸ್ವಾಮಿ
ಚರವಾಣಿ : ೯೮೮೦೯೯೬೧೯೬

ಬೆಂಗಳೂರು ನಗರದಲ್ಲಿ ಕಳೆದ ಇನ್ನೂರು ವರ್ಷದಿಂದ ಕನ್ನಡ ಅಧ್ಯಯನ ನಡೆಯುತ್ತಾ ಬಂದಿದೆ. ಆ ಎಲ್ಲಾ ಮುಖದ ಪರಿಚಯ ಇರುವ ಅಪರೂಪದ ವಿದ್ವಾಂಸರು ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು ನನ್ನ ಪ್ರಕಾರ ಬೆಂಗಳೂರು ನಗರದ ಸಾಹಿತ್ಯ ಚಟುವಟಿಕೆಯಲ್ಲಿ ದಿ. ಎಂ.ಆರ್. ಶ್ರೀನಿವಾಸಮೂರ್ತಿ ಅವರ ಕಾಲದಿಂದಲೂ ಕಂಡವರು.

ಬೆಂಗಳೂರು ನಗರದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ೧೯೮೬ ರಿಂದ ಭಾಗವಹಿಸುತ್ತಾ ಬಂದೆ. ನನ್ನ ಭಾಗ್ಯ. ಡಾ. ಎಂ. ಚಿದಾನಂದಮೂರ್ತಿ, ಡಾ.ಸಾ.ಶಿ. ಮರುಳಯ್ಯ, ಎನ್. ಶಿವಣ್ಣ, ಡಾ. ಎನ್. ವಿದ್ಯಾಶಂಕರ, ಪ್ರೊ॥ ಕಮಲಹಂಪನಾ, ಪ್ರೊ॥ ಎನ್. ಬಸವಣ್ಣ ಇವರೆಲ್ಲರ ಪರಿಚಯವಾಯಿತು. ಜಯನಗರದಲ್ಲಿ ವಿವಾಹ ಮಹೋತ್ಸವಕ್ಕೆ ಜೊತೆಯಲ್ಲಿ ನಾನು ಪ್ರೊ॥ ಎನ್.ಬಸವಾರಾಧ್ಯರು ಹೋಗಿದ್ದೆವು. ವಿವಾಹ ಭೋಜನಾಂತರ ಬನ್ನಿ ಡಾಕ್ಟ್ರೇ ನಿಮಗೆ ಒಬ್ಬ ಅಪರೂಪದ ವಿದ್ವಾಂಸರ ಪರಿಚಯ ಮಾಡಿಕೊಡುತ್ತೇನೆ ಎಂದು ಪ್ರೊ॥ ಅನಾಜಿ ಅವರ ಮನೆಗೆ ಕರೆದುಕೊಂಡು ಹೋದರು. ಅವರ ಬೃಹತ್ ಪುಸ್ತಕ ಭಂಡಾರ ದರ್ಶನ ಮಾಡಿಸಿದವರು ಅವರ ಮನೆಯವರು. ಕನ್ನಡ ಪ್ರಾಧ್ಯಾಪಕಿ ಲಕ್ಷ್ಮೀದೇವಿ ಅವರ ಪರಿಚಯವಾಯಿತು. ಆ ನಂತರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ, ಸಾಹಿತ್ಯ ಅಕಾಡೆಮಿ ಕಾರ್ಯಕ್ರಮಗಳಲ್ಲಿ ಅಪರೂಪದ ಪುಸ್ತಕ ಬಿಡುಗಡೆಯಲ್ಲಿ ಪ್ರೊ. ಅನಾಜಿ ಅವರ ಭೇಟಿಯಾಗುತ್ತಾ ಇತ್ತು. ನನ್ನ ಪ್ರಕಾರ ಅವರು ಬರೆದ ಲೇಖನಗಳು ಪ್ರಕಟಿತ ಇನ್ನೂರು ಇದ್ದರೆ ಅಪ್ರಕಟಿತ ಎರಡು ಸಾವಿರ ಲೇಖನಗಳು ಇವೆ. ಹತ್ತು ಸಾವಿರದಷ್ಟು ಪುಟದಷ್ಟು ಅಪ್ರಕಟಿತ ಅಪರೂಪದ ಸಾಹಿತ್ಯವಿದೆ.

ನನ್ನ ಪ್ರಕಾರ ಅವರ ಬಳಿ ಕನ್ನಡನಾಡಿನಲ್ಲಿ ಪ್ರಕಟವಾದ ಜೈನ, ಬೌದ್ಧ, ವೀರಶೈವ, ಇಸ್ಲಾಂ, ಕ್ರೈಸ್ತ ಮತಧರ್ಮಕ್ಕೆ ಸಂಬಂಧಿಸಿದ ಗ್ರಂಥಗಳು ಇವೆ.

ತುಮಕೂರಿನಲ್ಲಿ ಪ್ರೊ. ಹೆಚ್.ಆರ್. ದಾಸೇಗೌಡರು ನೆಲೆಸಿದ್ದಾಗ ಕನ್ನಡದ ಅಪರೂಪದ ವಿದ್ವಾಂಸರನ್ನು ತಮ್ಮ ಕಾಲೇಜಿಗೆ ಕರೆಸುತ್ತಾ ಇದ್ದರು. ಇಂತಹ ಒಂದು ಸಂದರ್ಭದಲ್ಲಿ ಪ್ರೊ॥ ಅನಾಜಿ ಅವರು ಬಂದಿದ್ದರು ಅವರ ವಿಶೇಷವಾದ ಬೇಡಿಕೆ ಏನು ಎಂದರೆ ಗುಬ್ಬಿ ತಾಲ್ಲೂಕು, ಹೊಸಕೆರೆಗೆ ನಾನು ಹೋಗಿ ಬರಬೇಕು ಎಂದು, ಕಾರ್ಯಕ್ರಮದ ನಂತರ ಪ್ರೊ॥ ಎಚ್.ಆರ್. ದಾಸೇಗೌಡರ ಅಣತಿಯಂತೆ ನಾನು ಪ್ರೊ॥ ಅನಾಜಿ ಅವರನ್ನು ಹೊಸಕೆರೆಗೆ ಕರೆದುಕೊಂಡು ಹೋಗಿ ಕನ್ನಡದ ಹಿರಿಯ ವಿದ್ವಾಂಸ "ಹೊಸಕೆರೆ ಚಿದಂಬರಯ್ಯ"ನವರು ಬಾಳಿ ಬದುಕಿದ ಮನೆ ಬೀದಿ ಮತ್ತು ಅವರ ಬಂಧುಗಳನ್ನು ಮಾತಾಡಿಸಿಕೊಂಡು ಬಂದೆ. ಆ ದಿನ ಪ್ರೊ॥ ಅನಾಜಿ ಅವರಿಗೆ ಬಹಳ ಸಂತೋಷವಾಯಿತು. ಆ ನಂತರ ಮತ್ತೆ ಒಂದೆರಡು ತಿಂಗಳು ನಂತರ ಹೊಸಕೆರೆ ಚಿದಂಬರಯ್ಯನವರ ಬಂಧುಗಳನ್ನೇ ಕರೆದುಕೊಂಡು

ಬಂದಿದ್ದರು. ಆಗಲೂ ಜೊತೆಯಲ್ಲಿ ಹೋಗಿದ್ದೆ. ತುಮಕೂರು ನಗರದಲ್ಲಿ ವಾಲ್ಮೀಕಿ ರಾಮಾಯಣ ಮತ್ತು ಇತರ ರಾಮಾಯಣಗಳ ವಿಚಾರ ಸಂಕಿರಣ ಏರ್ಪಡಿಸಿದ್ದೆ. ಈ ವಿಚಾರ ಸಂಕಿರಣಕ್ಕೆ ಪ್ರೊ॥ ಎಲ್.ಎಸ್. ಶೇಷಗಿರಿರಾವ್, ಪ್ರೊ॥ ಪಿ.ವಿ. ನಾರಾಯಣ, ವಿದ್ವಾನ್ ರಂಗನಾಥಶರ್ಮ, ಪ್ರೊ॥ ಅನಾಜಿ, ಪ್ರೊ॥ ಲಕ್ಷ್ಮೀದೇವಿ ಬಂದಿದ್ದರು. ವಿದ್ವಾನ್ ರಂಗನಾಥ ಶರ್ಮ ಅವರು ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಮಾಡುವುದರ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು. ವಾಲ್ಮೀಕಿ ರಾಮಾಯಣ ಸುಮಾರು ಇನ್ನೂರಕ್ಕೂ ಹೆಚ್ಚು ಶ್ಲೋಕಗಳನ್ನು ಉದಾಹರಿಸುತ್ತಾ ಉಪನ್ಯಾಸ ಮಾಡಿದರು.

ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಪಾಶ್ಚಾತ್ಯರ ಕಣ್ಣಿನಲ್ಲಿ ರಾಮಾಯಣ ಕುರಿತು ಮಾತನಾಡಿದರು. ಎಲ್ಲಾ ವಿದ್ವಾಂಸರನ್ನು ಬೆಂಗಳೂರಿನಿಂದ ಕರೆತಂದು ಕರೆದುಕೊಂಡು ಹೋಗುವ ಸಂಪೂರ್ಣ ಜವಾಬ್ದಾರಿ ಅನಾಜಿ ಅವರು ಮಾಡಿಕೊಂಡಿದ್ದರಿಂದ ನನಗೆ ಯಾವ ವಿಧದ ತೊಂದರೆಯಾಗಲಿಲ್ಲ.

ಭಗವದ್ಗೀತೆ ಬಗ್ಗೆ ವಿಶೇಷವಾದ ಅಧ್ಯಯನ ಮಾಡಿರುವ ಪ್ರೊ॥ ಅನಾಜಿ ಅವರು ಹಲವು ವರ್ಷದಿಂದ ಒಂದು ಕೋಶವನ್ನು ತಯಾರಿಸುತ್ತಾ ಇದ್ದಾರೆ. ಕನ್ನಡ ನಾಡಿನಲ್ಲಿ ಸೋಮೇಶ್ವರ ಶತಕ ಜನಸಾಮಾನ್ಯರ ಬಾಯಲ್ಲಿ ಇರುವಂತಹ ಮಹತ್ವದ ಶತಕ ಪ್ರಕಟಣಾ ಇತಿಹಾಸ, ಮುದ್ರಿತ ವಿವರ ಪಾಠಾಂತರ, ಶುದ್ಧಪಾಠ ನಿರ್ಣಯ ಇಷ್ಟನ್ನು ಕಳೆದ ಎಂಟು ವರ್ಷದಿಂದ ಪರಿಷ್ಕರಿಸುತ್ತಾ ಇದ್ದಾರೆ. ನಾನೆ ನಾಲ್ಕು ಮುದ್ರಿತ ಪ್ರತಿಗಳನ್ನು ಅವರ ಪರಿಶೀಲನೆಗೆ ಕೊಟ್ಟಿದ್ದೆ.

ಗದುಗಿನ ಭಾರತದ ಹತ್ತಾರು ಪ್ರಕಟಣೆಗಳನ್ನು ಮಾಡಿರುವ ಅನಾಜಿ ಅವರು ಬೆಂಗಳೂರು ಲಾಲ್‌ಬಾಗ್ ಉಪ್ಪಾರಹಳ್ಳಿ ರಾಮಪ್ಪ ಬರೆದು ಸೇರಿಸಿದ "ಭಗವದ್ಗೀತೆ"ಯನ್ನು ತೆಗೆದು ಪ್ರತ್ಯೇಕವಾಗಿ ಪುಸ್ತಕರೂಪದಲ್ಲಿ ಪ್ರಕಟಿಸುವಂತೆ ಮಾಡಿದರು. ಡಾ.ಎನ್. ವಿದ್ಯಾಶಂಕರ ಅವರ ಮಗ ವಿ. ಮಹೇಶ ಮತ್ತು ವಿ. ಕಾರ್ತೀಕ ಪ್ರಕಟಿಸಿದರು. ಕನ್ನಡಮ್ಮನ ಮಡಿಲಿಗೆ ಅಪರೂಪದ ಪುಸ್ತಕದ ಕಾಣಿಕೆ ಕೊಟ್ಟ ಕೀರ್ತಿ ಅನಾಜಿ ಅವರದು.

ಕನ್ನಡ ನಾಡಿನಲ್ಲಿ ಅನೇಕರು ಪುಸ್ತಕಗಳನ್ನು ಸಂಗ್ರಹಿಸಿದ್ದಾರೆ. ಆದರೆ ವ್ಯವಸ್ಥೆ ವಿಷಯದಲ್ಲಿ ಪ್ರೊ॥ ಅನಾಜಿ ಅವರದು ವಿಶೇಷ. ಹಸ್ತಪ್ರತಿ ತಜ್ಞರಾದ ಎನ್.ಶಿವಣ್ಣನವರು ಉತ್ತರಕರ್ನಾಟಕದ ಧಾರವಾಡ, ಗದಗ, ಚಿತ್ರದುರ್ಗಕ್ಕೆ ನಾನಾ ಕಾರ್ಯಕ್ರಮಕ್ಕೆ ಹೋಗುತ್ತಾ ಇದ್ದರು. ಅವರ ಹತ್ತಿರ ಪ್ರೊ॥ ಅನಾಜಿ ಅವರು ಹೇಳಿಬಿಟ್ಟಿದ್ದರಂತೆ ಪ್ರಕಟಿತ ಪುಸ್ತಕ ಕನ್ನಡದ್ದು ಏನೇ ಇರಲಿ ತೆಗೆದುಕೊಂಡು ಬಾ ಎಂದು. ಹೀಗೆ ಸಹಸ್ರಾರು ಪುಸ್ತಕಗಳನ್ನು ಕೊಂಡು ಸಂಗ್ರಹಿಸಿಟ್ಟಿದ್ದಾರೆ. ಕನ್ನಡ ನಾಡಿನಲ್ಲಿ ಕನ್ನಡ ವಿದ್ಯಾಭ್ಯಾಸ ಪ್ರಾರಂಭವಾದ ಮೇಲೆ ಬಂದ ಒಂದನೇ ತರಗತಿ ಪುಸ್ತಕದ ಬಗ್ಗೆ ವಿವರವಾಗಿ ಬರೆಯುತ್ತಾ ಇದ್ದಾರೆ, ಮಿಶನರಿ ಶಾಲೆಗಳು, ಬ್ರಿಟಿಷರ ಕಾಲದ ಪುಸ್ತಕಗಳು ತದನಂತರ ಮಹಾರಾಜರ ಕಾಲದಲ್ಲಿ ಬಂದ ಪುಸ್ತಕಗಳು ಸ್ವಾತಂತ್ರ್ಯಾನಂತರ ಬಂದ ಪುಸ್ತಕಗಳ ಅಧ್ಯಯನ ನಡೆಯುತ್ತಾ ಇವೆ. ನನ್ನ ಪ್ರಕಾರ ವಿವರವಾಗಿ ಈ ಪುಸ್ತಕ ಸಚಿತ್ರ ಸಮೇತ ಮುದ್ರಣವಾಗಬೇಕು.

ದಾಸಸಾಹಿತ್ಯದಲ್ಲಿ ಅಪಾರವಾಗಿ ದುಡಿದಿರುವ ಶ್ರೀಯುತರು 'ಸಮಗ್ರ ಕೀರ್ತನಾ ಸಾಹಿತ್ಯ' ಸಂಪಾದಕ ಮಂಡಲಿಯಲ್ಲಿದ್ದು ಪ್ರೊ॥ ಶ್ರೀನಿವಾಸ ಹಾವನೂರರಿಗೆ ಬಲಗೈಯಂತೆ ದುಡಿದವರು ಇತ್ತೀಚೆಗೆ ಅಪಾರ ಶ್ರಮವನ್ನು ಹಾಕಿ ಶ್ರೀರಾಮನ ಬಗ್ಗೆ ಬಂದಿರುವ ಉಲ್ಲೇಖ ಇರುವ ಕೀರ್ತನೆಗಳ ಬೃಹತ್ ಸಂಗ್ರಹವನ್ನು ಜಯನಗರದ ಜಯರಾಮ ಸೇವಾಮಂಡಲಿಯಿಂದ ಪ್ರಕಟಿತವಾಯಿತು. ಅಪಾರ ಶ್ರಮ ಪುಸ್ತಕ ಸಂಪಾದನೆಯ ಹಿಂದೆ ಇದೆ.

ಪ್ರೊ॥ ಶಾಂತರಸ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ 'ಜೇಡರ ದಾಸಿಮಯ್ಯನ 'ಕಿರುವಚನ ಪುಸ್ತಕ ಸಿದ್ಧಮಾಡಬೇಕಾದ ತುರ್ತು ಉಂಟಾಯಿತು. ಪುಸ್ತಕ

ಪ್ರಕಟಣೆಯ ಸಮಿತಿ ಸದಸ್ಯರಾದ ಪ್ರೊ.ಎನ್.ವಿದ್ಯಾಶಂಕರ ನನ್ನ ಸ್ನೇಹಿತ ಪ್ರೊ॥ ಅನಾಜಿ ಅವರು ಮಾಡಿಕೊಡುತ್ತಾರೆ ಎಂದು ಹೇಳಿದರಂತೆ. ಅದರಂತೆ ಪ್ರೊ॥ ಅನಾಜಿ ಅವರು ಮೂರು ದಿವಸದಲ್ಲಿ ಸಿದ್ಧಮಾಡಿ ಕೊಟ್ಟರಂತೆ.

ಪ್ರೊ॥ ಎ.ಆರ್. ಕೃಷ್ಣಶಾಸ್ತ್ರೀ, ಪ್ರೊ॥ ಎಂ.ವಿ. ಸೀತಾರಾಮಯ್ಯ, ಪ್ರೊ॥ ಎಂ.ಆರ್. ಶ್ರೀನಿವಾಸ ಮೂರ್ತಿ, ಬಿ. ಪದ್ಮಶ್ರೀ, ಬಿ. ಶಿವಮೂರ್ತಿ, ಅ.ನ.ಕೃ, ಮಾಸ್ತಿವೆಂಕಟೇಶ ಅಯ್ಯಂಗಾರ್, ಪ್ರೊ॥ ತೀ.ನಂ. ಶ್ರೀಕಂಠಯ್ಯ, ಕಾ.ಸ.ಧರಣೇಂದ್ರಯ್ಯ, ಹೀಗೆ ಪರಿಷತ್ತಿಗೆ ಬರುತ್ತಾ ಇದ್ದ ವಿದ್ವಾಂಸರನ್ನು ಕಂಡವರು.

ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾಗಿದ್ದು ೧೯೧೫ರಲ್ಲಿ. ಅಂದಿನಿಂದ ಇಂದಿನವರೆಗೆ ಪರಿಷತ್ತು ಬೆಳೆದು ಬಂದ ದಾರಿಯಲ್ಲಿ ವಿಶೇಷವಾದ ಬೃಹತ್ ಶತಮಾನೋತ್ಸವ ನೆನಪಿನ ಬಗ್ಗೆ ಸಂಪುಟ ಸಿದ್ಧಮಾಡಿಕೊಟ್ಟ ಕೀರ್ತಿ ಅನಾಜಿ ಅವರದು. ನಾನಾ ಸಂಘ ಸಂಸ್ಥೆಗಳ ಸಹಾಯದಿಂದ ಅಮೂಲ್ಯವಾದ ಪುಸ್ತಕಗಳ ಮರುಮುದ್ರಣದಲ್ಲಿ ತಮ್ಮ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

ಬೆಂಗಳೂರಿನ ಹಲವು ಸಂಘ ಸಂಸ್ಥೆಗಳ ಜೊತೆ ನಿಕಟಸಂಪರ್ಕ ಇಟ್ಟುಕೊಂಡಿರುವವರು, ಚಾಮರಾಜಪೇಟೆ "ಮಕ್ಕಳ ಕೂಟ"ದಲ್ಲಿ ಬಾಲ್ಯದಲ್ಲಿ ಆಡಿ ಅಲ್ಲಿನ ಗ್ರಂಥಾಲಯದ ಪುಸ್ತಕಗಳನ್ನು ಓದಿ ಬೆಳೆದು ದೊಡ್ಡವರಾದರು. ಬಾಲ್ಯದಲ್ಲಿ ಪ್ರಖ್ಯಾತ ಚಿತ್ರಸಾಹಿತಿ ಚಿ. ಉದಯಶಂಕರರ ಸಹಪಾಠಿ. ಅವರನ್ನು ಕಂಡವರು ಕನ್ನಡದ ಸಹಸ್ರಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉಪನ್ಯಾಸ ನೀಡಿದವರು. ಇತ್ತೀಚೆಗೆ ಶತಮಾನ ಕಂಡ ಸ್ವಾತಂತ್ರ್ಯ ಹೋರಾಟಗಾರ ವೀರಯ್ಯಸ್ವಾಮಿ ಶಾಸ್ತ್ರೀಯವರು ಪುಸ್ತಕ ಕೊಟ್ರೆ ಮೂರು ದಿವಸದಲ್ಲಿ ಓದಿ ತಮ್ಮ ಅಭಿಪ್ರಾಯವನ್ನು ಬರೆದುಕೊಟ್ಟರು.

ನಾನು ಸಂಶೋಧಿಸಿದ ಹೆಸರುಘಟ್ಟ ಹೊನ್ನಪ್ಪ ವಿರಚಿತ "ವ್ಯಾಕರಣ ಸಂಗ್ರಹಂ" ವ್ಯಾಕರಣ ಗ್ರಂಥದ ಮಹತ್ವವನ್ನು ಕಂಡ ಪ್ರೊ॥ ಅನಾಜಿ ಅಪಾರ ಶ್ರಮದಿಂದ ಪರಿಷ್ಕರ ಮಾಡಿದರು. ಈ ಅಪರೂಪದ ವ್ಯಾಕರಣ ಗ್ರಂಥ ಡಾ. ಎನ್. ವಿದ್ಯಾಶಂಕರ ಅವರ ಮಕ್ಕಳೇ ಪ್ರಕಟಿಸಿದ್ದಾರೆ. ಈ ಜೀವನ ಸಾಧನೆ ಕುರಿತು ಅಪರೂಪದ ಲೇಖನ ಬರೆದಿದ್ದೇನೆ.

ಹಿರಿಯ ವಿದ್ವಾಂಸರಾದ ಪ್ರೊ॥ ಬಸವಾರಾಧ್ಯರು ಪ್ರೊ॥ ಜಿ.ಎಸ್. ಸಿದ್ಧಲಿಂಗಪ್ಪ, ಡಾ. ಎಂ. ಚಿದಾನಂದಮೂರ್ತಿ ಮುಂತಾದವರು ತಮಗೆ ಪುಸ್ತಕ ಬೇಕಾದಾಗ ತಕ್ಷಣ ಫೋನ್ ಮಾಡುತ್ತಾ ಇದ್ದದ್ದು ಪ್ರೊ॥ ಅನಾಜಿ ಅವರಿಗೆ ಆ ವಿದ್ವಾಂಸರು ಕೇಳಿದ ಪುಸ್ತಕಗಳನ್ನು ಅವರುಗಳಿಗೆ ಕೊಟ್ಟಿದ್ದಾರೆ.

ಕನ್ನಡ ನಾಡು ನುಡಿ ಬಗ್ಗೆ ಅಪರೂಪದ ಒಲುಮೆ ಹೊಂದಿರುವ ಪ್ರೊ॥ ಅನಾಜಿಯವರು ಅನೇಕ ನಾಡಿನ ವಿದ್ವಾಂಸರಿಗೆ ಅವರು ಕೇಳಿದ ವಿಷಯವನ್ನು ಸೃಷ್ಟಿ ಮಾಡಿ ಕೊಡುತ್ತಾ ಬಂದಿದ್ದಾರೆ. "ಸೌಗಂಧಿಕಾ ಪರಿಣಯ" ಇದನ್ನು ರಚಿಸಿದವರು ಮುಮ್ಮಡಿ ಕೃಷ್ಣರಾಜ ಒಡೆಯರು ಚಿತ್ರ ಸಮೇತ ಮುದ್ರಣವಾದ ಅಪರೂಪದ ಪುಸ್ತಕ ಪ್ರೊ॥ ಅನಾಜಿ ಅವರ ಸಂಗ್ರಹದಲ್ಲಿದೆ. ನನ್ನ ಪ್ರಕಾರ ಇಪ್ಪತ್ತು ಜನ ಕನ್ನಡ ವಿದ್ಯಾರ್ಥಿಗಳು ಮಹಾಪ್ರಬಂಧ ರಚಿಸಲು ಬೇಕಾದ ಸಾಮಗ್ರಿ ಪ್ರೊ॥ ಅನಾಜಿ ಅವರ ಸಂಗ್ರಹದಲ್ಲಿ ಇದೆ.

ನಾನು ಹಲವು ಬಾರಿ ಪ್ರೊ॥ ಅನಾಜಿ ಅವರ ಮನೆಗೆ ಹೋಗಿದ್ದೇನೆ. ಪ್ರೊ॥ ಲಕ್ಷ್ಮೀದೇವಿಯವರು ನಾನು ಹೋದಾಗ ಪುತ್ರವಾತ್ಸಲ್ಯದಿಂದ ಸಲಹಿದ್ದಾರೆ ದಂಪತಿಗಳು. ನನ್ನ ಬಗ್ಗೆ ಅಪರಿಮಿತವಾದ ಮಮತೆ ತೋರಿದ್ದಾರೆ.

ದಂಪತಿಗಳು ದೇಶ-ವಿದೇಶ ಸುತ್ತಿರುವ ವಿದ್ವತ್‌ಗಣಿಗಳು, ಆದರೆ ಸದಾ ಸರಳ ಜೀವನ. ವಿಶ್ವಪ್ರೇಮ ಹೊಂದಿರುವ ಅಪರೂಪದ ದಂಪತಿಗಳು. ಸದಾ ಕನ್ನಡದ ಕೆಲಸವನ್ನು ತಮ್ಮ ಉಸಿರಾಗಿಸಿರುವ ಪ್ರೊ॥ ಅನಾಜಿ ಅವರಿಗೆ ಕನ್ನಡನಾಡಿನ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ನೀಡಬೇಕು ಎಂಬುದು ನನ್ನ ಅನಿಸಿಕೆ.

****

ಕನ್ನಡ ವಿದ್ವತ್ ಲೋಕದ ಅಶ್ವತ್ಥಮರ

ಜಿ.ಪಿ. ರಾಮಣ್ಣ
ಚರವಾಣಿ : ೯೪೪೪೮೨೦೨೭೦೮

ದುಂಡನೆಯ ಮುಖಾರವಿಂದ, ಕನ್ನಡಕದ ನಡುವೆ ಇಣುಕುವ, ಎದುರಿಗಿರುವವರ ಎದೆಗೆ ಜ್ಞಾನದ ಬೆಳಕು ಹರಿಸುವ ಕಣ್ಣುಗಳು, ಬೋಳುತಲೆಯವರ ಅಸೂಯೆಗೆ ಕಾರಣವಾಗಬಹುದಾದಷ್ಟು ಪ್ರಮಾಣದಲ್ಲಿರುವ ಅರೆನೆರೆತ ತಲೆ ಕೂದಲು, ಅರ್ಧತೋಳಿನ ಅಂಗಿ, ಪೈಜಾಮಿನ ತರಹದ ಪ್ಯಾಂಟು, ಬಗಲಲ್ಲಿ ಕೈಚೀಲ, ಕಾಲಲ್ಲಿ ಚಪ್ಪಲಿ, ಮೊಬೈಲ್ ಹಂಗಿಲ್ಲದೆ ಓಡಾಡುವ, ಸದಾ ಸಾಹಿತ್ಯ ಚಿಂತನೆಯಲ್ಲೇ ಮಗ್ನವಾಗಿರುವ ಜೀವವೊಂದನ್ನು ನೀವು ಕಂಡಿರುವಿರಾದರೆ ಅವರು ಖಂಡಿತವಾಗಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರೇ ಆಗಿರುತ್ತಾರೆ. ಅವರು ಸಾಹಿತ್ಯದ ವಿದ್ಯಾರ್ಥಿಗಳ ಪಾಲಿನ ಅಚ್ಚುಮೆಚ್ಚಿನ ಅನಾಜಿ ಮೇಷ್ಟ್ರು

ನಾನು ಅನಾಜಿ ಅವರಿಗೆ ಪರಿಚಯವಾದದ್ದು ಕೆಲವರ್ಷಗಳ ಹಿಂದೆಯಷ್ಟೆ. ಅವರ ಆಪ್ತವಲಯ ಪ್ರವೇಶಿಸುವ ಮುನ್ನ ಅವರ ಘನಪಾಂಡಿತ್ಯದ ಕುರಿತು ಸಾಹಿತ್ಯ ವಲಯದಲ್ಲಿನ ಸಂಗಡಿಗರು ಹೇಳುವುದನ್ನು ಕೇಳಿ ಅರಿತಿದ್ದೆ. ಅವರ ಪುಸ್ತಕ ಸಂಗ್ರಹದ ಬಗ್ಗೆಯೂ ಕೇಳಿದ್ದೆ. ಹಲವು ಸಾಹಿತ್ಯಿಕ ವೇದಿಕೆಗಳಲ್ಲಿ ಸಾಹಿತ್ಯಾಭಿಮಾನಿಯಾಗಿ ಅವರ ಮಾತುಗಳಿಗೆ ಕಿವಿಯಾಗಿದ್ದೆ. ಅವರ ಮಾತಿನ ಓಘ, ಅನುಪಮವಾದ ವಾಗ್ಝರಿ, ಅಗಾಧ ನೆನಪಿನ ಶಕ್ತಿ ಕಂಡು ಬೆರಗಾಗಿದ್ದೆ. ಎದುರಿಗೆ ಸಿಕ್ಕಾಗ ನಮಸ್ಕಾರ ಮಾಡುವಷ್ಟು ಪರಿಚಯವಿದ್ದರೂ ಅವರೊಂದಿಗೆ ಮಾತಾಡುವ ಧೈರ್ಯ ಮಾಡಿರಲಿಲ್ಲ. ದೊಡ್ಡ ವಿದ್ವಾಂಸರೆನ್ನುವುದು ಒಂದು ಕಾರಣವಾದರೆ, ಕೇವಲ ಸಾಹಿತ್ಯಾಭಿಮಾನಿಯಾದ ನಾನು ಅವರೊಂದಿಗೆ ಏನು ಮಾತಾಡಿಯೇನು ಅನ್ನುವ ಅಳುಕು, ನಾನವರಿಂದ ದೂರ ಇರುವಂತೆ ಮಾಡಿತ್ತು. ಅವರೆಡೆಗೆ ನನಗಿದ್ದ ಘನಗೌರವ ಭಾವವೂ ಕೂಡ ಒಂದು ಕಾರಣವಾಗಿರಬಹುದು.

ಒಮ್ಮೆ, ನಾನು ಕೆಲಸ ಮಾಡುತ್ತಿದ್ದ ಎಚ್.ಎ.ಎಲ್ ಕಾರ್ಖಾನೆಯ ಕರ್ನಾಟಕ ಕಲಾ ಸಂಘವು ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಅನಾಜಿಯವರನ್ನು ಅತಿಥಿಯನ್ನಾಗಿ ಆಹ್ವಾನಿಸಿತ್ತು. ಆ ಸಂದರ್ಭವು ಅವರನ್ನು ತುಂಬಾ ಹತ್ತಿರದಿಂದ ಕಾಣುವ, ಅವರೊಂದಿಗೆ ಕೆಲವು ಮಾತುಗಳನ್ನಾಡುವ ಸದವಕಾಶವನ್ನು ನನಗೆ ಒದಗಿಸಿತು. ಅನಾಜಿ ಘನವಿದ್ವಾಂಸರಾದರೂ ಯಾವ ಹಮ್ಮುಬಿಮ್ಮುಗಳನ್ನೂ ತೋರಗೊಡದೆ ಎಲ್ಲರೊಂದಿಗೂ ಬೆರೆತರು. ಅತ್ಯಂತ ಸಹಜವಾಗಿಯೆ ನನ್ನೊಂದಿಗೂ ಮಾತಾಡಿದರು. ಅಂದಿನ ಸಮಾರಂಭದಲ್ಲೂ ನವಿರು ಹಾಸ್ಯದಿಂದ ಕೂಡಿದ ನುಡಿಜಾಗೃತಿಯ ಮಾತುಗಳಾಡಿ ನೆರೆದಿದ್ದ ಕಾರ್ಮಿಕರು ತಲೆದೂಗುವಂತೆ ಮಾಡಿದರು. ಸಮಾರಂಭದ ನಂತರ ಅವರನ್ನು ಬೀಳ್ಕೊಡುವ ಸರದಿ ನನ್ನದಾಗಿತ್ತು. ಸಿಕ್ಕ ಆ ಅವಕಾಶವನ್ನು ಬಿಡುವುದುಂಟೆ? ನನ್ನ ಪರಿಚಯವನ್ನೂ ಮಾಡಿಕೊಂಡು ಅವರನ್ನು ಬೀಳ್ಕೊಟ್ಟೆ. ಅವರ ಸರಳತೆ, ತಮಾಷೆಯ ಸ್ವಭಾವ ನನಗೆ ಇಷ್ಟವಾಯಿತು.

ಅಲ್ಲಿಂದಾಚೆಗೆ ನನಗೆ ಅವರೊಡನೆ ಮಾತಾಡಲು ಸ್ವಲ್ಪ ಧೈರ್ಯ ಬಂತು. ಸಭೆ-ಸಮಾರಂಭಗಳಲ್ಲಿ ಭೇಟಿ ಆದಾಗ ಉಭಯಕುಶಲೋಪರಿ ನಡೆಯುತ್ತಿತ್ತು. ನನ್ನ ಮನೆಗೆ ಸಮೀಪವಿದ್ದ ಕಾರಣ, ಆಗಾಗ ಅವರ ಮನೆಗೂ ಹೋಗಿ ಭೇಟಿಯಾಗುತ್ತಿದ್ದೆ. ಕೆಲ ಸಂದರ್ಭಗಳಲ್ಲಿ ಸಭೆ-ಸಮಾರಂಭಗಳಿಗೆ ಅವರನ್ನು ಕರೆದೊಯ್ಯುವುದು, ಕರೆತರುವುದು ನಡೆದಿತ್ತು. ಭೇಟಿ ಆದಾಗಲೆಲ್ಲಾ ಅವರ ಅನುಭವಾಮೃತವನ್ನು ಸವಿಯುವ, ಅವರು ತಮ್ಮ ನೆನಪಿನಂಗಳದಿಂದ ಆರಿಸಿ ಹೇಳುವ ರಸಪ್ರಸಂಗಗಳು, ಅನುಭವಗಳು ಮತ್ತು ಸಂಗತಿಗಳಿಗೆ ಕಿವಿಯಾಗುವ ಭಾಗ್ಯವನ್ನು ನನ್ನದಾಗಿಸಿಕೊಂಡಿದ್ದೇನೆ. ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಷಯಗಳ ಕುರಿತು ನನ್ನ ಅರಿವನ್ನು ವಿಸ್ತರಿಸಿಕೊಂಡಿದ್ದೇನೆ. ಅವರೊಂದಿಗೆ ಮಾತಾಡುವುದೆಂದರೆ ಪುಸ್ತಕವೊಂದನ್ನು ಓದಿದಂತೆ ಎಂದು ಅನೇಕ ಸಲ ಅನಿಸಿದೆ. ಅವರಲ್ಲೊಬ್ಬ ಪಂಡಿತನೂ ಇರುವುದನ್ನು ನನ್ನ ಅವರ ಭೇಟಿಯ ಸಂದರ್ಭಗಳು ಖಚಿತಪಡಿಸಿವೆ. ಅವರ ಮನೆಗೆ ಹೋದಾಗೆಲ್ಲ ಅವರ ಶ್ರೀಮತಿಯವರ ಅಕ್ಕರೆಯ ಮಾತುಗಳು, ಅದಕ್ಕೆ ಜೊತೆಯಾಗುವ ಚಂದದ ಕಾಫಿ ಹಾಗೂ ಕುರುಕಲು ತಿಂಡಿಗೆ ನಾನು ಫಿದಾ ಆಗಿದ್ದೇನೆ. ಪಂಡಿತ ಮತ್ತು ಪಾಮರರನ್ನು ಏಕಬಗೆಯಲ್ಲಿ ದಂಪತಿಗಳು ಆದರಿಸುವ ರೀತಿ ಇತರ ಸಾಹಿತಿ ಮತ್ತು ಕವಿಗಳಿಗೆ ಮಾದರಿ.

ಅನಾಜಿ ಅವರಿಗೆ ನಾನು ಇನ್ನಷ್ಟು ನಿಕಟವಾಗುವ ಮತ್ತು ಬಾಂಧವ್ಯವನ್ನು ಗಟ್ಟಿಗೊಳಿಸಿಕೊಳ್ಳುವ ಇನ್ನೊಂದು ಅವಕಾಶವೂ ನನಗೆ ಒದಗಿತು. ಅದು ಒದಗಿದ್ದು, ಗೆಳೆಯ ಹೊಂಬಾಳೆಯ ಫಲ್ಗುಣ ಅವರು ಏರ್ಪಡಿಸಿದ 'ಕವಿದನಿ' ಎನ್ನುವ ವಿಶಿಷ್ಟ ಬಗೆಯ ಕಾರ್ಯಕ್ರಮದ ಮೂಲಕ. ಇದೊಂದು ಸಾಹಿತ್ಯಿಕ-ಸಾಂಸ್ಕೃತಿಕ ಕಾರ್ಯಕ್ರಮ ಮಾಲಿಕೆ.ಕನ್ನಡ ನವೋದಯ ಸಂದರ್ಭದ ಆಯ್ದ ಇಪ್ಪತ್ತೈದು ಕವಿಮಹೋದಯರ ಪರಿಚಯಾತ್ಮಕ ಸರಣಿ ಕಾರ್ಯಕ್ರಮ. ಕವಿಪರಿಚಯ, ಕಾವ್ಯಸುಧಾರಸ ಮತ್ತು ಗಮಕಸವಿ- ಈ ಮೂರರ ತ್ರಿವೇಣಿ ಸಂಗಮವಿದ್ದ ಮಾಲಿಕೆ. ಕಾವ್ಯದ ಬನಿ, ಗಮಕದ ಘಮ-ಘಮ, ಗಾಯನದ ಗಮ್ಮತ್ತುಗಳಿದ್ದ ಆಕರ್ಷಕ ಕಾರ್ಯಕ್ರಮ. ಇಪ್ಪತ್ತೈದು ತಿಂಗಳುಗಳ ಕಾಲ ಕಾವ್ಯಾಸಕ್ತರನ್ನು, ಕವಿಗಳನ್ನು, ಗಾಯಕರನ್ನು, ಸ್ವರಪ್ರಿಯರನ್ನು ತಣಿಸಿದ ಈ ಕಾರ್ಯಕ್ರಮವು ಕನ್ನಡ ಸಾಹಿತ್ಯಿಕ-ಸಾಂಸ್ಕೃತಿಕ ಪ್ರಪಂಚಕ್ಕೆ ವಿನೂತನ ಸ್ಪರ್ಶ ನೀಡಿದ ಮೌಲಿಕ ಕಾರ್ಯಕ್ರಮ. ಈ ಕಾರ್ಯಕ್ರಮದ ಹಿಂದಿನ ಜೀವನಾಡಿಯಾಗಿದ್ದವರು ಪ್ರೊ.ಅನಾಜಿ. ಕಾರ್ಯಕ್ರಮದ ಸ್ವರೂಪ ಹೇಗಿರಬೇಕು, ಯಾವ ತಿಂಗಳಲ್ಲಿ ಯಾವ ಕವಿ, ಆ ಕವಿಯ ಪ್ರಾತಿನಿಧಿಕ ಕವಿತೆಗಳು ಯಾವುವು? ಇವುಗಳ ಕುರಿತು ಮಾರ್ಗದರ್ಶನ ಮಾಡಿದವರು ಅನಾಜಿಯವರು. ಈ ಸರಣಿ ಕಾರ್ಯಕ್ರಮದ ನಿರೂಪಣಾ ಜವಾಬ್ದಾರಿಯನ್ನು ಹೊತ್ತಿದ್ದವನು ನಾನು. ಪ್ರತಿ ಕವಿದನಿ ಕಾರ್ಯಕ್ರಮದ ನಂತರ ವಿನಮ್ರ ವಿದ್ಯಾರ್ಥಿಯಂತೆ ಕವಿಗಳ ಕುರಿತು ನಿರೂಪಣೆಯಲ್ಲಿ ನಾನು ನೀಡುತ್ತಿದ್ದ ವಿವರಗಳಲ್ಲಿನ ಸರಿತಪ್ಪುಗಳನ್ನು ತಿಳಿಸಿ ಎಂದು ಅನಾಜಿ ಅವರಿಗೆ ದುಂಬಾಲು ಬೀಳುತ್ತಿದ್ದೆ. ಅವರು ಸೂಚಿಸುತ್ತಿದ್ದ ಸಂಗತಿಗಳು ಮುಂದಿನ ಕವಿದನಿಯ ಕಂತಿಗೆ ತೋರುದೀಪವಾದವು. ನನ್ನ ಆತ್ಮವಿಶ್ವಾಸವನ್ನು ಬಲಗೊಳಿಸಿದವು. ನನ್ನ ನಿರೂಪಣೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಅನಾಜಿ, ಒಂದು ಹಂತದಲ್ಲಿ, 'ರಾಮಣ್ಣ, ನಿಮ್ಮ ಕವಿನಿರೂಪಣಾ ಬರಹಗಳನ್ನೆಲ್ಲಾ ಒಂದು ಗ್ರಂಥವಾಗಿ ತನ್ನಿ' ಎಂದು ಸೂಚಿಸಿದರು. ಈ ವಿಚಾರವನ್ನು ಫಲ್ಗುಣರ ಕಿವಿಗೂ ಹಾಕಿದರು. ಈ ಯೋಚನೆ ಫಲ್ಗುಣ ಅವರ ತಲೆಹೊಕ್ಕಿದ್ದೇ ತಡ 'ನೀವು ಈ ದಿಸೆಯಲ್ಲಿ ಕಾರ್ಯೋನ್ಮುಖರಾಗಿ' ಎಂದು ನನಗೆ ಆದೇಶಿಸಿಯೇಬಿಟ್ಟರು. ಎಲ್ಲವನ್ನೂ ಮುಂದೂಡುವ ಸ್ವಭಾವದವನಾದ ನಾನು ಅವರಿತ್ತ ಆದೇಶವನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳದೆ, ಪುಸ್ತಕ ಬರೆಯುವ ಕೆಲಸ ಮುಂದಮುಂದಕ್ಕೆ ಹೋಗುತ್ತಲೇ ಇತ್ತು. ಆದರೆ, ಪ್ರೊ. ಅನಾಜಿ ಮತ್ತು ಫಲ್ಗುಣ ಅವರು ಬಿಡಬೇಕಲ್ಲ. ಅವರ ಸತತ ಒತ್ತಾಯದ ಫಲವಾಗಿ ನನ್ನ ನಿರೂಪಣಾ ಸಾಹಿತ್ಯವು

ಪುಸ್ತಕ ರೂಪ ಪಡೆಯಿತು. ಫಲ್ಗುಣ ಅವರು ಅತ್ಯಂತ ಶ್ರದ್ಧೆಯಿಂದ ಪುಸ್ತಕವನ್ನು ಅಚ್ಚುಹಾಕಿಸಿದರು. ಕಾರ್ಯಕ್ರಮದ ಕೊನೆಯ ಕಂತಿನ ಸಮಾರಂಭದಲ್ಲಿ ರಜತಕವಿ ದರ್ಶನ ಎಂಬ ಹೆಸರಿನಲ್ಲಿ ಪುಸ್ತಕವು ಲೋಕಾರ್ಪಣೆಗೊಂಡಿತು. ಹೀಗೆ ನನ್ನ ಚೊಚ್ಚಲ ಪುಸ್ತಕ ಜನ್ಮತಳೆಯಲು ಕಾರಣರಾದವರು ಪ್ರೊ.ಅನಾಜಿ. ನನ್ನ ನಿರೂಪಣಾ ಶೈಲಿಯನ್ನು ಬಹುವಾಗಿ ಮೆಚ್ಚಿಕೊಂಡು, ಈ ಪುಸ್ತಕಕ್ಕೆ ಮೆಚ್ಚುಗೆಯ ಮೆಚ್ಚೋಲೆ ಬರೆದು ಆಶೀರ್ವಾದ ಮಾಡಿದವರೂ ಅವರೇ. ಈ ಕವಿದನಿ ಕಾರ್ಯಕ್ರಮದಿಂದಾಗಿ ನನ್ನ ಮತ್ತು ಅನಾಜಿಯವರ ಬಾಂಧವ್ಯದ ಬೆಸುಗೆ ಇನ್ನಷ್ಟು ಗಟ್ಟಿಯಾಯಿತು.

ಅನಾಜಿ ಅವರ ಪುಸ್ತಕ ಸಂಗ್ರಹವನ್ನೂ ನಾನು ನೋಡಿದ್ದೇನೆ. ಅದೊಂದು ಅಮೂಲ್ಯ ಮತ್ತು ಅಪೂರ್ವವಾದ ಪುಸ್ತಕ ಭಂಡಾರ. ಬಹುತೇಕ ಎಲ್ಲ ಸಾಹಿತ್ಯ ಪ್ರಕಾರದ ಪುಸ್ತಕಗಳು ಇವರ ಸಂಗ್ರಹದಲ್ಲಿ ಸ್ಥಾನ ಪಡೆದಿವೆ ಎನ್ನಬಹುದು. ಸರಿಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ಪುಸ್ತಕಗಳ ಸಂಗ್ರಹ ಅವರಲ್ಲಿದೆ. ಪ್ರತಿ ಪುಸ್ತಕಕ್ಕೂ ಹೊದಿಕೆ, ಹೊದಿಕೆಯ ಮೇಲೆ ಪುಸ್ತಕದ ಸಂಖ್ಯೆ, ಅದನ್ನು ಕೊಂಡ ದಿನ, ಮುಂತಾದ ವಿವರಗಳನ್ನು ಬರೆದು, ವಿಭಾಗೀಕರಣದ ಪ್ರಕಾರವಾಗಿ ಒಪ್ಪವಾಗಿ ಜೋಡಿಸಿದ್ದಾರೆ. ಪುಸ್ತಕ ಜೋಡಿಸುವಿಕೆಯಲ್ಲಿರುವ ಒಪ್ಪ-ಓರಣವು, ನಾವು ಪುಸ್ತಕಗಳನ್ನು ಹೇಗೆ ಕಾಪಾಡಬೇಕು ಎನ್ನುವ ಪಾಠ ಹೇಳುತ್ತದೆ.

ಇನ್ನೊಂದು ವಿಚಾರವನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಕಳೆದೊಂದು ದಶಕದಿಂದ ಪರಂಪರಾ ಕಲ್ಚರಲ್ ಫೌಂಡೇಶನ್ ಎನ್ನುವ ಸಾಂಸ್ಕೃತಿಕ ಸಂಘಟನೆಯೊಂದನ್ನು ನಾನು ನಡೆಸಿಕೊಂಡು ಬರುತ್ತಿದ್ದೇನೆ. ಈ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಆಗಾಗ್ಗೆ ಕೇಳಿ ತಿಳಿದುಕೊಳ್ಳುವ ಮತ್ತು ಸಲಹೆ ಸೂಚನೆಗಳನ್ನು ಕೊಡುವ ಕಾರ್ಯವನ್ನೂ ಅನಾಜಿ ಮಾಡುತ್ತಾ ಬಂದಿದ್ದಾರೆ. ಮಕ್ಕಳು ನಮ್ಮ ಪರಂಪರೆಯ ನಿಜವಾದ ವಾರಸುದಾರರು ಮತ್ತು ವಾಹಕರು ಎಂದು ನಂಬಿರುವ ನಾನು, ಮಕ್ಕಳಿಗೆ ಕತೆ ಹೇಳುವ, ಆ ಮೂಲಕ ಅವರಲ್ಲಿ ಕನ್ನಡದ ಬೀಜ ಬಿತ್ತುವ ಮತ್ತು ಮೌಲ್ಯಗಳನ್ನು ತುಂಬುವ 'ಕತೆ ಹೇಳುವೆ' ಎನ್ನುವ ಕಾರ್ಯಕ್ರಮವೊಂದನ್ನು ಮಾಡುತ್ತಾ ಬಂದಿದ್ದೇನೆ. ಇದೊಂದು ಸರಣಿ ಕಾರ್ಯಕ್ರಮ. ಶಾಲೆಗಳಿಗೆ ಹೋಗುವುದು, ಆ ಶಾಲೆಯ ಮಕ್ಕಳಿಗೆ ಕತೆ ಹೇಳುವುದು, ಮಕ್ಕಳಿಂದ ಕತೆ ಹೇಳಿಸುವುದು ಮತ್ತು ಓದಿಸುವುದು, ಕತೆ ಹೇಳುವ ಬಗೆಯನ್ನು ಮಕ್ಕಳಿಗೆ ತಿಳಿಸುವುದು, ಹೇಳಿದ ಕತೆ ಕುರಿತು ಪ್ರಶ್ನೆಗಳನ್ನು ಕೇಳುವುದು, ಉತ್ತಮವಾಗಿ ಕತೆ ಹೇಳುವ ಮತ್ತು ಓದುವ ಮಕ್ಕಳಿಗೆ ಅಲ್ಲೇ ಬಹುಮಾನ ಕೊಡುವುದು-ಇದು ಆ ಕಾರ್ಯಕ್ರಮದ ಸ್ವರೂಪ. ಇಂತಹುದೊಂದು ಕಾರ್ಯಕ್ರಮವನ್ನು ಮಾಡಬೇಕೆಂದಿದ್ದೇನೆ ಎಂದು ನಾನು ಅನಾಜಿಯವರಲ್ಲಿ ಅರುಹಿದೆ. ಕಾರ್ಯಕ್ರಮದ ಸ್ವರೂಪವನ್ನು ಬಹುವಾಗಿ ಮೆಚ್ಚಿದ ಅನಾಜಿ, ಕತೆ ಹೇಳುವೆ ಕಾರ್ಯಕ್ರಮದ ಮೊದಲ ಸಂಚಿಕೆಗೆ ನಾನೇ ಕತೆ ಹೇಳಲು ಬರುತ್ತೇನೆ ಎಂದು ಹೇಳಿ, ಕಾರ್ಯಕ್ರಮಕ್ಕೆ ಬಂದು ಮಕ್ಕಳಿಗೆ ಸೊಗಸಾಗಿ ಕತೆ ಹೇಳಿ ನನ್ನ ಸಂಭ್ರಮವನ್ನು ಹೆಚ್ಚಿಸಿದರು.

ಪ್ರಚಾರದ ಯಾವುದೇ ಸೋಂಕಿಲ್ಲದೆ ಸದಾ ಕನ್ನಡ ಭಾಷೆ, ಸಂಸ್ಕೃತಿ ಕುರಿತು ಚಿಂತಿಸುವ ಪ್ರೊ.ಜಿ.ಅಶ್ವತ್ಥನಾರಾಯಣರಂತಹ ವಿದ್ವಾಂಸರು ಬಹಳ ಅಪರೂಪ. ಮುಟ್ಟಿದಷ್ಟೂ ಮೇರೆವರಿವ, ಕಂಡಷ್ಟೂ ಕವಲೊಡೆವ, ತಿಳಿದಷ್ಟೂ ತೆರೆದುಕೊಳ್ಳುವ, ಹತ್ತಿರವಾದಷ್ಟೂ ಹರಹಿಕೊಳ್ಳುವ, ಬಗೆದಷ್ಟೂ ಭಂಡಾರವಾಗುವ, ಸಂಕೀರ್ಣರೆಂದಷ್ಟೂ ಸುಲಭರಾಗುವ, ಸ್ಥಿತಪ್ರಜ್ಞತೆಯ ಮೂರ್ತರೂಪರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ನುಡಿಸುಗಂಧವನ್ನು ಸೂಸುತ್ತಾ, ಕನ್ನಡ ಸಾಹಿತ್ಯ ಪ್ರಪಂಚದ ಕಂಪನ್ನು ಇನ್ನಷ್ಟು ಹೆಚ್ಚಿಸಲಿ ಎನ್ನುವ ಹಾರೈಕೆ ನನ್ನದು.

******

ಕನ್ನಡ ಸೇವಾ ಕಿಂಕರ

ಪಿ. ಅರವಿಂದರಾವ್

ಪ್ರೊ. ಅಶ್ವತ್ಥನಾರಾಯಣ ಜಿ. ಯವರು ಜಾಲತಾಣಗಳಲ್ಲಿ ಅವರ ಸ್ನೇಹಿತರ ಬಳಗದಲ್ಲಿ ಅನಾಜಿ ಎಂದೇ ಪ್ರಸಿದ್ಧರಾಗಿರುವ ಸುಪ್ರಸಿದ್ಧ ಚಿಂತಕರು, ಲೇಖಕರು ಹಾಗು ವಾಗ್ಮಿಗಳು ೩೦ ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ, ವಿಶ್ರಾಂತರಾದ ಪ್ರಾಧ್ಯಾಪಕರು. ಸಾವಿರಾರು ವಿದ್ಯಾರ್ಥಿಗಳ ಮಾರ್ಗದರ್ಶಕರಾಗಿ ಅವರೆಲ್ಲರನ್ನೂ ಉನ್ನತ ಮಟ್ಟದ ಸುಶಿಕ್ಷಿತ ಪ್ರಜೆಗಳಾಗಿ, ಉತ್ತಮ ಮಾನವರಾಗಿ ರೂಪಿಸಿರುವಂತಹ ಮಹಾನ್ ಗುರುಗಳಾಗಿದ್ದಾರೆ.

ಹುಟ್ಟು ಚಿಂತಕರಾದ ಮೇಧಾವಿಗಳೆಂದೂ ವಿಶ್ರಾಂತರಾಗುವುದಿಲ್ಲವಂತೆ. ಜೀವನವಿಡೀ ಕಲಿಯುತ್ತಲೇ ಇರುತ್ತಾರೆ. ಕಲಿಸುತ್ತಲೇ ಇರುತ್ತಾರೆ, ಅಂತೆಯೇ ಶಿಕ್ಷಣ ಸೇವೆಯಿಂದ ವಿಶ್ರಾಂತರಾಗಿದ್ದರೂ ಸ್ನೇಹಿತರಾದ ಅನಾಜಿಯವರು ಸಾಹಿತ್ಯ ಸೇವೆಯಿಂದ ನಿವೃತ್ತಿ ಪಡೆದಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ಹಲವಾರು ಸಂಶೋಧನಾ ಕೇಂದ್ರಗಳ ಸದಸ್ಯರಾಗಿ, ನಿರಂತರ ಸಂಶೋಧಕರಾದ ಅನಾಜಿಯವರು ಆಕಾಶವಾಣಿ, ದೂರದರ್ಶನದಲ್ಲಿ ಹಲವಾರು ಸಾಹಿತ್ಯ ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳಾಗಿ ವಿದ್ವತ್ ಪೂರ್ಣವಾದ ಹಲವಾರು ವಿಚಾರಗಳ ಮೇಲೆ ಉಪನ್ಯಾಸಗಳನ್ನು ನೀಡಿರುತ್ತಾರೆ.

ಸುಪ್ರಸಿದ್ಧ ಹರಿದಾಸರುಗಳ ಕೀರ್ತನೆಗಳು, ಹರಿದಾಸ ಸಾಹಿತ್ಯದ ವಿವರಣೆಗಳು, ಕನ್ನಡ ಸಾಹಿತ್ಯ ಪರಂಪರೆ ಮುಂತಾದ ಗಂಭೀರ ವಿಚಾರಗಳ ಮೇಲೆ ತಮ್ಮ ವ್ಯಾಖ್ಯಾನವನ್ನು ಪ್ರಕಟಿಸಿರುವುದಲ್ಲದೆ, ಒಗಟಿನ ರೂಪದಲ್ಲಿರುವ ಹೊಸಕೆರೆ ಚಿದಂಬರಯ್ಯನವರಿಂದ ವಿವರಿಸಲ್ಪಟ್ಟ ಅನುಭವಾಮೃತ ಕಾವ್ಯದಂತಹ ಮಹಾನ್ ಕೃತಿಗಳನ್ನು ಜನಸಾಮಾನ್ಯರೆಲ್ಲರೂ ಅರ್ಥಮಾಡಿಕೊಳ್ಳಲು ಸುಲಭವಾದ ಸರಳ ಕನ್ನಡದಲ್ಲಿ ಅನುವಾದಿಸಿ, ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಸೇವೆ ಸಲ್ಲಿಸಿರುತ್ತಾರೆ. ಎಲೆಮರೆ ಕಾಯಿಯಂತಿದ್ದು, ಅಷ್ಟೊಂದು ಪ್ರಚಾರದಲ್ಲಿರದ ದೇವರ ದಾಸಿಮಯ್ಯ, ದೇವುಡು ನರಸಿಂಹ ಶಾಸ್ತ್ರಿ, ಹೊಸಕೆರೆ ಚಿದಂಬರಯ್ಯನವರಂತಹ ಹಲವರು ಘನವಿದ್ವಾಂಸರ, ಸಾಹಿತ್ಯಲೋಕಕ್ಕೆ ಅಪಾರ ಸೇವೆ ಸಲ್ಲಿಸಿರುವ ಮಹಾಮಹಿಮರುಗಳ ಜೀವನ ಚರಿತ್ರೆಯನ್ನು ರಚಿಸಿದ್ದಾರೆ.

ಎಲ್ಲಾ ತರಹದ ಸಿದ್ಧಾಂತಗಳ ಮೇಲೂ ಅಧಿಕಾರಯುತವಾಗಿ ವ್ಯಾಖ್ಯಾನಿಸುವುದು ಅನಾಜಿಯವರ ಮತ್ತೊಂದು ವಿಶೇಷವಾದ ಕೊಡುಗೆ, ಪುಸ್ತಕ ರೂಪದಲ್ಲಿ ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು ಆ ಮಂತ್ರ ಈ ಮಂತ್ರ ಜಪಿಸಿ ಕೆಡಲು ಬೇಡ, ರಾಮಮಂತ್ರವ ಜಪಿಸು ಎಂದು ಕೈಲಾಸವಾಸಿ ಸೋಮಶೇಖರ ತನ್ನ ಪಾರ್ವತಿಗೆ ಜಪಿಸಲು ಹೇಳಿರುವ ಆ ತಾರಕ ಮಂತ್ರ

ರಾಮಮಂತ್ರದ ಮಹಾತ್ಮೆಯನ್ನು ಹೊಗಳುತ್ತಿರುವ ಹರಿದಾಸರುಗಳು ಹಾಡಿದ ಕೀರ್ತನೆಗಳನ್ನು ಸಂಗ್ರಹಿಸಿ ರಚಿಸಿರುವ ಈ ಅದ್ಭುತ ಕಲಾಕೃತಿ, ಅನಾಜಿಯವರ ಆಧ್ಯಾತ್ಮಿಕತೆಯ ಆಸಕ್ತಿಗೆ ಸಾಕ್ಷಿಯಾಗಿದೆ.

ವೃತ್ತಿಯಲ್ಲಿ ಸನ್ನದು ಲೆಕ್ಕಪರಿಶೋಧಕ (ಚಾರ್ಟರ್ಡ್ ಅಕೌಂಟೆಂಟ್) ಆಗಿರುವ ನನಗೆ ಸಾಹಿತ್ಯ ಲೋಕದ ದಿಗ್ಗಜರಾದ ಅಶ್ವತ್ಥನಾರಾಯಣ ಜಿ. ಅವರ ಪರಿಚಯವಾಗಿರುವುದೇ ಒಂದು ಆಕಸ್ಮಿಕ ದೈವ ಘಟನೆ.

ಸಮಸ್ತ ಸೃಷ್ಟಿಗೆ ಕಾರಣಕರ್ತನಾಗಿರುವ ನಿರಾಕಾರಿಯಾದ ಆ ಪರಮಾತ್ಮನ ಅರಿವಾಗಬೇಕಿದ್ದರೆ ಮೊದಲು ನಾವು ಯಾರು ಎಂದು ನಮ್ಮನ್ನು ನಾವು ತಿಳಿದುಕೊಳ್ಳುವುದು ಅತ್ಯವಶ್ಯಕ. ಅಂತಹ ಸಿದ್ಧಾಂತವನ್ನು ಸಾರುವ ಸಂತಮತದ ಅನುಯಾಯಿಯಾಗಿ ಸಾಧನೆ ಮಾಡುತ್ತಿರುವಾಗ ಅದೇ ಪಥದಲ್ಲಿದ್ದ ಮತ್ತೋರ್ವ ಮಿತ್ರರಾದ ಮಹಾನ್ ವಿದ್ವಾಂಸ ಪ್ರಮುಖ ಪ್ರಾಚಾರ್ಯರಾಗಿ ವಿಶ್ರಾಂತರಾಗಿದ್ದ ಡಾ. ಎನ್. ಸುಬ್ರಹ್ಮಣ್ಯರವರು ೨೦೧೪ ರಲ್ಲಿ ದೈವಾಧೀನರಾಗುವ ಮೊದಲು ಆಕಸ್ಮಿಕವಾಗಿ ಜಯನಗರದ ಮನೆಗೆ ಬಂದಾಗ, ಅದೇ ಬಡಾವಣೆಯಲ್ಲಿರುವ ಅವರ ಮಿತ್ರ, ಸಾಹಿತಿ ಜಿ. ಅಶ್ವತ್ಥನಾರಾಯಣ ಅವರ ಪರಿಚಯ ಮಾಡಿಸಿದ್ದು ಒಂದು ಪವಾಡದಂತಿದೆ.

ಮೂವತ್ತು ಮೂವತ್ತೈದು ವರ್ಷಗಳ ಕಾಲ ಔದ್ಯೋಗಿಕ ವ್ಯವಹಾರಗಳಲ್ಲಿ ಜೀವನ ಸವೆಸಿರುವ ನನಗೆ ಇಂತಹ ಮಹಾನ್ ಸಾಹಿತಿಗಳ ಪರಿಚಯದಿಂದಾಗಿ, ಗಂಧದ ಮರದ ಜೊತೆಗಿರುವ ಬೇವಿನ ಮರಕ್ಕೂ ಗಂಧದ ಪರಿಮಳ ಬರುವಂತೆ ನನಗೂ ಸಾಹಿತ್ಯದಲ್ಲಿ ಆಸಕ್ತಿ ಬರುವಂತಾಯಿತು.

ಈ ರೀತಿಯಾಗಿ ಪರಿಚಯವಾದ ಅನಾಜಿಯವರು ಸೃಜನಶೀಲ ಮಿತ್ರರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಮುಂದುವರಿಯಲು ಸದಾ ಸಹಾಯಹಸ್ತವನ್ನು ನೀಡುತ್ತಾ ಅನುರಾಗದ ಆತ್ಮೀಯ ಬಂಧುಗಳಾದರು.

ನಾವು ಅನುಸರಿಸುತ್ತಿರುವ ಸಂತಮತದ ವಿಕಸಿತ ಸಾಧಕರು ಇಂಗ್ಲಿಷಿನಲ್ಲಿ ಬರೆದಿರುವ ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದಾಗ, ಅಂತಹ ಲೇಖನಗಳ ಕರಡು ಪ್ರತಿಗಳನ್ನು ಪರಿಶೀಲಿಸಿ, ಸುಧಾರಿಸಲು ನೆರವಾದರು. ಹಾಗೆಯೇ ಮುಂದುವರಿಯುತ್ತಾ, ಅನಾದಿಯಾದ ಆ ಪರಮಾತ್ಮನನ್ನು ಅರಿಯಬೇಕಿದ್ದರೆ, ನೋಡಬೇಕಿದ್ದರೆ, ದೇವ ಮಂದಿರವೆಂದು ಕರೆಯಲ್ಪಡುವ ಈ ನಮ್ಮ ದೇಹದೊಳಗೇ ಹೋಗಿ ನೋಡಬೇಕಲ್ಲದೆ ಬೇರಾವ ತರಹದ ಬಾಹ್ಯ ವಿಧಾನಗಳಿಂದಲೂ ಸಾಧ್ಯವಿಲ್ಲ. 'ಒಳಗಣ್ಣಿನಿಂದ ನೋಡು ಮೂಜಗದೊಡೆಯನ'ಎಂದು ಹೇಳುತ್ತಾ 'ಎಲ್ಲಿ ನೋಡಿದರಲ್ಲಿ ರಾಮ', 'ಇದ ಬಲ್ಲ ಜಾಣರ ದೇಹದೊಳಗೆ ನೋಡಣ್ಣ' ಎಂಬ ಸಿದ್ಧಾಂತವನ್ನು ಸಾರಿರುವ ಪುರಂದರದಾಸರು, ಕನಕದಾಸರು, ಶಿಶುನಾಳ ಷರೀಫರು ಮುಂತಾದ ಹರಿದಾಸರುಗಳ ಕುರಿತಾದ ಆಧ್ಯಾತ್ಮಿಕ ದೃಷ್ಟಿಯಲ್ಲಿ ರಚಿಸಿರುವ ಸಾಹಿತ್ಯದ ಕೃತಿಯನ್ನು ಪರಿಶೀಲಿಸಿ, ಪ್ರಕಾಶನದ ಮೊದಲು ಅದರ ಪರಿಷ್ಕರಣೆಗೆ ಸಹಕರಿಸಿದ ಅನಾಜಿಯವರ ಔದಾರ್ಯದ ಶ್ರಮ ವರ್ಣನಾತೀತ.

ಅವರ ನಿವಾಸಕ್ಕೆ ಭೇಟಿ ನೀಡಿದಾಗಲೆಲ್ಲಾ, ಪ್ರಾಧ್ಯಾಪಕರಾಗಿದ್ದ ಅವರ ಸಹಧರ್ಮಿಣಿಯೊಂದಿಗೆ ಪ್ರೀತಿಪೂರ್ವಕವಾಗಿ ಸ್ವಾಗತಿಸುವುದು ನಮ್ರತೆಯ ಹಾಗು ಔದಾರ್ಯದ ಪ್ರತೀಕ.

ಮತ್ತೊಂದು ಅತೀ ಮುಖ್ಯವಾದ ವಿಚಾರವೆಂದರೆ, ಅವರ ಇಡೀ ಮನೆಯಲ್ಲಿ ಒಂದು ಮಹಾನ್ ಪುಸ್ತಕ ಭಂಡಾರ, ಮನೆಯಲ್ಲಿ ಎಲ್ಲಿ ನೋಡಿದರಲ್ಲಿ ಪುಸ್ತಕಗಳ ರಾಶಿ, ಹೆಚ್ಚೂ ಸಾವಿರಾರು ಸಂಖ್ಯೆಯಲ್ಲಿರುವ ಕನ್ನಡ ಪುಸ್ತಕಗಳ ಸಂಕಲನ, ಸಾಹಿತ್ಯ ಕ್ಷೇತ್ರದಲ್ಲಿ ಸಂಶೋಧನೆ ಮಾಡಲು ಇದೊಂದು ಅಪೂರ್ವವಾದ ಜ್ಞಾನ ದೇಗುಲವೆನ್ನಬೇಕು.

ಇಂತಹ ಹಿನ್ನೆಲೆಯಲ್ಲಿರುವ ವಿದ್ವಾಂಸರಾದ ಅಶ್ವತ್ಥನಾರಾಯಣ. ಜಿ. ನನ್ನಂತಹ ಪರಿಣತರಲ್ಲದ ಹಲವಾರು ಬರಹಗಾರರಿಗೆ, ಸಾಹಿತ್ಯ ಸೃಷ್ಟಿಗೆ ಬೇಕಾಗುವ ವೈಯಕ್ತಿಕ ವಿವರಗಳಲ್ಲದೆ, ತಮ್ಮ ಪುಸ್ತಕ ಭಂಡಾರದಿಂದ ಬೇಕಾಗಿರುವ ಎಲ್ಲಾ ತರಹದ ಗ್ರಂಥಗಳ ಪರಿಶೀಲನೆಗೆ ಸದಾ ಸಹಕರಿಸುತ್ತಿದ್ದಾರೆ. ಅಂತಹ ಹಲವಾರು ಜಿಜ್ಞಾಸು ಮಿತ್ರರು ಕನ್ನಡ ಸಾಹಿತ್ಯ ಲೋಕದಲ್ಲಿ ಅಳಿಲು ಸೇವೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುತ್ತಾರೆ. ಉತ್ತೇಜಿಸುತ್ತಾರೆ.

'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಲೋಕೋಕ್ತಿಯಂತೆ, ಪರಿಪೂರ್ಣ ಜ್ಞಾನಿಗಳು ಬಹಳ ವಿನಮ್ರರಾಗಿರುತ್ತಾರೆ. ನಾನು, ನನ್ನದು ಎನ್ನುವ ಅಹಂನಿಂದ ಬಲು ದೂರವಿರುತ್ತಾರೆ. ಅನಾಜಿಯವರ ಜೊತೆ ಸಂಪರ್ಕದಲ್ಲಿದ್ದವರೆಲ್ಲರೂ ಗಮನಿಸಿರುವ ಅವರ ವಿಶಿಷ್ಟವಾದ ಈ ಗುಣ, ಅವರ ವಿನಮ್ರತೆ, ಸೌಜನ್ಯತೆ ಹಾಗು ಆತ್ಮೀಯತೆ, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದ ಉದಯೋನ್ಮುಖ ಬರಹಗಾರರಿಗೆ ಸದಾ ಸಹಾಯಹಸ್ತ ನೀಡುವ ಅವರ ದೈವೀಕ ಗುಣ.

ಇಂತಹ ಮೇಧಾವಿ, ಅನಾಜಿಯವರು ಅವರ ಸಾವಿರಾರು ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಸಾಹಿತ್ಯಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಆಕಾಂಕ್ಷಿಗಳಾಗಿರುವ ನೂರಾರು ಜಿಜ್ಞಾಸುಗಳಿಗೂ ಅವರು ಗುರುಗಳಾಗಿದ್ದಾರೆ. ಆನಾಜಿಯವರಿಗೆ ಅನಂತಾನಂತ ವಂದನೆಗಳು.

ಇಂತಹ ನಿರಾಡಂಬರದ ಮೇಧಾವಿ ಸಾಹಿತಿಗಳಾದ ಅನಾಜಿಯವರ ಅಭಿನಂದನಾ ಕಾರ್ಯಕ್ರಮ ಬಹಳ ಸ್ತುತ್ಯರ್ಹ.

ನನಗಿಂತಲೂ ಒಂದು ವರ್ಷ ಹಿರಿಯರಾಗಿರುವ ಅವರು ನನಗೆ ಬರೇ ಅನಾಜಿಯಲ್ಲ. ನನ್ನ ಅಣ್ಣಾಜಿಯವರು.

ಇಂತಹ ಸಾಧಕರ ವಿಚಾರವಾಗಿ ಒಂದೆರಡು ಮಾತುಗಳಿಂದ ನಮ್ಮ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸಲು ಪ್ರೇರೇಪಿಸಿರುವ ಸದಸ್ಯರಿಗೆಲ್ಲರಿಗೂ ಅನಂತಾನಂತ ವಂದನೆಗಳು.

****

ನನ್ನ ಸಂಶೋಧನೆಗೆ ಸ್ಫೂರ್ತಿ

ಡಾ. ಕೆ. ನಳಿನ
ಚರವಾಣಿ : ೯೫೩೫೭೭೮೯೬೩

ಕರ್ನಾಟಕ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಸುಮಾರು ಮೂವತ್ತು ವರ್ಷಗಳಿಗೂ ಹೆಚ್ಚು ಕಾಲ ಪ್ರಾಧ್ಯಾಪಕರಾಗಿ ಗುರುಗಳಾದ ಪ್ರೊ. ಜಿ. ಅಶ್ವತ್ಥನಾರಾಯಣ (ಅನಾಜಿ) ಅವರು ಸೇವೆ ಸಲ್ಲಿಸಿದ್ದಾರೆ. ಹೀಗಾಗಿ ಇವರಿಗೆ ದೊಡ್ಡ ಶಿಷ್ಯವೃಂದ ಹಾಗೂ ಮಿತ್ರವೃಂದವಿದೆ. ಅವರ ಶಿಷ್ಯವೃಂದದಲ್ಲಿ ನಾನೂ ಒಬ್ಬಳು ಎಂದು ಹೇಳಿಕೊಳ್ಳಲು ಹೆಮ್ಮೆಯೆನಿಸುತ್ತಿದೆ. ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಪರಿಚಿತರೆಲ್ಲರೂ ಗಮನಿಸುವ ಕೆಲವು ಸಾಮಾನ್ಯ ಅಂಶಗಳೆಂದರೆ ಕನ್ನಡ ಸಾಹಿತ್ಯದ ಬಗೆಗೆ ಅವರಿಗಿರುವ ಅಗಾಧವಾದ ಜ್ಞಾನ, ಆಳವಾದ ಅಧ್ಯಯನ (ಯಾವುದೇ ವಿಷಯವನ್ನು ಕುರಿತು ಬರವಣಿಗೆ ಕಾರ್ಯವನ್ನು ಆರಂಭಿಸುವ ಮೊದಲು ನಡೆಸುವ), ಅವರ ಬೃಹತ್ ಗ್ರಂಥ ಭಂಡಾರ, ಸಮಯ ಪಾಲನೆ, ಶಿಷ್ಯ ವಾತ್ಸಲ್ಯ ಮತ್ತು ಸಹನೆ.

ನನಗೆ ಗುರುಗಳಾದ ಪ್ರೊ. ಅಶ್ವತ್ಥನಾರಾಯಣ ಅವರ ಪರಿಚಯವಾದುದು ನಾನು ಎಂ.ಫಿಲ್. ಮಾಡುವಾಗ. ನಮ್ಮ ಎಂ.ಫಿಲ್. ಲಿಖಿತ ಪರೀಕ್ಷೆ ಮುಗಿದ ಮೇಲೆ ಯಾವುದಾದರೂ ಒಂದು ವಸ್ತುವನ್ನು ಆರಿಸಿಕೊಂಡು ನೂರು ಪುಟಗಳ ಮಿತಿಯಲ್ಲಿ ಒಂದು ಪ್ರಬಂಧ ಬರೆದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾಗಿತ್ತು. ಹಂಪಿ. ವಿ.ವಿ.ಯ ಮಾನ್ಯತಾ ಕೇಂದ್ರವಾದ ಬಿ.ಎಂ.ಶ್ರೀ. ಪ್ರತಿಷ್ಠಾನದಿಂದ ಒಂದು ದಿನ ಫೋನ್ ಕರೆಮಾಡಿ ಎಲ್ಲ ವಿದ್ಯಾರ್ಥಿಗಳಿಗೂ ತಮ್ಮ ಪ್ರಬಂಧದ ಸಾರಲೇಖವನ್ನು ನಾಲ್ಕು/ಐದು ದಿನಗಳಲ್ಲಿ ಕೊಡಬೇಕು ಎಂದು ಹೇಳಿದರು. ನನಗೆ ಮಾರ್ಗದರ್ಶಕರು ಯಾರು ಎಂಬುದು ಇನ್ನೂ ನಿಶ್ಚಿತವಾಗಿರಲಿಲ್ಲ. ಹೀಗಾಗಿ ವಿಷಯದ ಆಯ್ಕೆ – ಸಾರಲೇಖದ ತಯಾರಿ ಹೇಗೆ ಮಾಡಿಕೊಳ್ಳುವುದು ಎಂದು ಸಂಯೋಜಕರೊಡನೆ ಮಾತನಾಡುತ್ತಿದ್ದೆ. ಆಗ ಪ್ರೊ. ಅನಾಜಿಯವರು ನಲ್ವತ್ತೆಂಟು ಪದ್ಯಗಳಿರುವ 'ಪ್ರಾಣಪ್ರಿಯ ಕಾವ್ಯ' ಎಂಬ ಖಂಡ ಕಾವ್ಯವಿದೆ, ಅದರ ಮೇಲೆ ಕೆಲಸಮಾಡಬಹುದು ಎಂದು ಸೂಚಿಸಿ, ಮರುದಿನ ಪುಸ್ತಕ ಕೊಡುವುದಾಗಿ ಹೇಳಿದರು. ಕೇವಲ ನಲವತ್ತೆಂಟೇ ಪದ್ಯಗಳಿವೆ ಕೆಲಸ ಬೇಗ ಮುಗಿಯುತ್ತದೆ ಎಂದುಕೊಂಡು "ಸರ್, ನಾಳೆ ನಿಮ್ಮ ಮನೆಗೆ ಬರುತ್ತೇನೆ. ಪುಸ್ತಕ ಕೊಡಿ. ಜೆರಾಕ್ಸ್ ಮಾಡಿಸಿಕೊಂಡು ಕೊಡುತ್ತೇನೆಂದು ಹೇಳಿದೆ. ಮಾರ್ಗದರ್ಶಕರು ಯಾರು ಎಂದು ಇನ್ನೂ ತಿಳಿದಿರಲಿಲ್ಲವಾದ್ದರಿಂದ "ನಿನಗೆ ತಿಳಿದಂತೆ ಸಾರಲೇಖ ಮಾಡಿಕೊಂಡು ಬಾ. ನಾನೊಮ್ಮೆ ನೋಡಿಕೊಡುತ್ತೇನೆ. ನಿನ್ನ ಮಾರ್ಗದರ್ಶಕರು ಒಪ್ಪಿದರೆ ಮುಂದುವರೆಸು ಇಲ್ಲವಾದರೆ ಬದಲಾವಣೆ ಮಾಡಿಕೊ" ಎಂದರು. 'ಪ್ರಾಣಪ್ರಿಯ ಕಾವ್ಯ' ನೇಮಿನಾಥನ ವೈರಾಗ್ಯ ಪ್ರಸಂಗವನ್ನು ಕುರಿತ ಖಂಡಕಾವ್ಯವಾಗಿತ್ತು. ಪ್ರಬಂಧಕ್ಕೆ ನಾನು ಅಧ್ಯಯನ ಮಾಡಬೇಕಾಗಿದ್ದ ಪುಸ್ತಕಗಳ ಬಗೆಗೂ ತಿಳಿಸಿದರು. ಹಲವಾರು ಪುಸ್ತಕಗಳನ್ನು ಅವರೇ ಕೊಟ್ಟರು. ಹಲವಾರು ಪುಸ್ತಕಗಳನ್ನು ನಾನೂ ಕೊಂಡುಕೊಂಡೆ. ನಾನು ನನ್ನ ಮೊಮ್ಮಗುವಿನ ನಿರೀಕ್ಷೆಯಲ್ಲಿದ್ದುದರಿಂದ ಕೆಲಸವನ್ನು ಬೇಗ ಮುಗಿಸಬೇಕಾಗಿತ್ತು. ನನ್ನ ಸಹಪಾಠಿಗಳಿಗಿಂತ ಮುಂಚೆಯೇ ಕೆಲಸ ಮುಗಿಸಿದೆ. ಒಮ್ಮೆ ಗುರುಗಳಿಗೆ ತೋರಿಸಿಬಿಡೋಣ ಎಂದು ತೆಗೆದುಕೊಂಡು ಹೋದೆ. ನಾನು ಆಯ್ಕೆ ಮಾಡಿಕೊಂಡಿದ್ದುದು ಒಂದು 'ಚಿತ್ರಕಾವ್ಯ'. ಮೂಲಕಾವ್ಯವು

ಸಂಸ್ಕೃತದಲ್ಲಿದ್ದು ಅದನ್ನು ಭುವನಹಳ್ಳಿ ಡಿ. ಪದ್ಮನಾಭಶರ್ಮರು ಕನ್ನಡಕ್ಕೆ ಅನುವಾದ ಮಾಡಿದ್ದರು. ಬರವಣಿಗೆಯನ್ನು ನೋಡಿ ಗುರುಗಳು (ಅನಾಜಿಯವರು) ನೀನು ಸಂಸ್ಕೃತದ ಮೂಲ ಪದ್ಯಗಳನ್ನು ಕನ್ನಡಕ್ಕೆ ಅನುವಾದ ಮಾಡಬೇಕು, ಆಗ ನಿನ್ನ ಕೆಲಸ ಪೂರ್ತಿಯಾಗುತ್ತದೆ ಎಂದರು. ನಾನು "ಸರ್ ನನಗೆ ಸಂಸ್ಕೃತ ಬರುವುದಿಲ್ಲ" ಎಂದೆ. ತಕ್ಷಣ "ನನಗೆ ಬರುತ್ತಾ, ನನಗೂ ಬರೋಲ್ಲ, ಆದರೆ ಅನುವಾದ ಮಾಡಬೇಕು" ಎಂದರು. (ಸೌಂದರ್ಯ ಲಹರಿಯ ಬಗೆಗೆ ಗುರುಗಳು ಮಾಡಿರುವ ಕೆಲಸ, ಈಗ ಅವರು ಸಿದ್ಧಪಡಿಸುತ್ತಿರುವ ಭಗವದ್ಗೀತಾ ಕೋಶದಂತಹ ಕೆಲಸಗಳನ್ನು ಸಂಸ್ಕೃತ ಬಾರದವರು ಮಾಡಲು ಸಾಧ್ಯವಿಲ್ಲ. ಇವರು ಸಂಸ್ಕೃತ ವಿದ್ಯಾರ್ಥಿಯಾದರೂ ಕನ್ನಡ ಭಾಷಾ ತರಗತಿಗಳಲ್ಲಿ ಕುಳಿತುಕೊಳ್ಳುತ್ತಿದ್ದರಂತೆ.) ಹತ್ತು ಪದ್ಯಗಳನ್ನು ಅನುವಾದ ಮಾಡಲು ಮೂರು ದಿನಗಳು ಬೇಕಾದವು. ಕೊನೆಗೆ ಒಂದು ದಿನ ಬೆಳಗಿನಿಂದ ಸಂಜೆಯವರೆಗೆ ಕುಳಿತು ಉಳಿದ ಮೂವತ್ತೆಂಟು ಪದ್ಯಗಳನ್ನು ಅನುವಾದಿಸಿದೆ. ಗುರುಗಳು ತಮ್ಮ ವಿದ್ಯಾರ್ಥಿಗಳು ಮಾಡುವ ಕೆಲಸವೂ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ. ಮುಂದೆ ನಾನು ಪಿ.ಹೆಚ್‌ಡಿ., ಮಾಡುವಾಗಲೂ ನನಗೆ ಗುರುಗಳ ಸಂಪೂರ್ಣ ಸಹಕಾರ ಹಾಗೂ ಪ್ರೋತ್ಸಾಹ ದೊರೆಯಿತು.

ಪ್ರೊ. ಅನಾಜಿಯವರ ಬರವಣಿಗೆ / ಉಪನ್ಯಾಸದ ಕೆಲಸವನ್ನು ಅವರ ವಿದ್ಯಾರ್ಥಿಗಳೂ, ಮಿತ್ರರೂ ಗಮನಿಸಿರುವಂತೆ, ಅವರು ಯಾವುದಾದರೂ ಒಂದು ಕಾವ್ಯ ಅಥವಾ ವ್ಯಕ್ತಿಯ ಬಗೆಗೆ ಮಾತನಾಡಬೇಕಾದರೆ ಅಥವಾ ಬರೆಯಬೇಕಾದರೆ ಆ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆವಿಗೂ ಬಂದಿರುವ ಸಾಧ್ಯವಾದಷ್ಟು ಎಲ್ಲ ಪುಸ್ತಕಗಳನ್ನೂ ನೋಡಿ, ಬಲ್ಲವರಿಂದ ತಿಳಿದು ಸಂಪೂರ್ಣವಾಗಿ ವಿಷಯವನ್ನು ಸಂಗ್ರಹಿಸುತ್ತಾರೆ. ಆ ಕೆಲಸ ಮುಗಿದ ಮೇಲೆಯೂ ಅದಕ್ಕೆ ಸಂಬಂಧಿಸಿದಂತೆ ಬರುವ ಹೊಸ ಪುಸ್ತಕಗಳನ್ನೂ ಹೊಸ ವಿಷಯಗಳನ್ನೂ ಆ ಲೇಖನಕ್ಕೆ ಸೇರಿಸುತ್ತಾ ಹೋಗುತ್ತಾರೆ. ಇದು ಅವರ ಕೆಲಸದ ವೈಶಿಷ್ಟ್ಯ.

ಹೀಗೆ ಹೊಸಹೊಸ ಪುಸ್ತಕಗಳನ್ನು ಕೊಳ್ಳುವುದರ ಜೊತೆಗೆ ತಮ್ಮ ತಿಂಗಳ ವರಮಾನದ ಗೊತ್ತಾದ ಭಾಗವನ್ನು ಪುಸ್ತಕಗಳನ್ನು ಖರೀದಿಸಲು ಮೀಸಲು ಇಡುತ್ತಿದ್ದರೆಂದು ಕೇಳಿದ್ದೇನೆ. ಹೀಗೆ ಕೊಂಡು ತಂದ ಪುಸ್ತಕಗಳನ್ನು ಹಾಗೇ ಇಡುವುದಿಲ್ಲ. ತಕ್ಷಣವೇ ಅದಕ್ಕೆ ಒಂದು 'ಮರೆಹಾಳೆಯನ್ನು ಹಾಕಿ' ಅದರ ಮೇಲೆ ಪುಸ್ತಕದ ಹಾಗೂ ಲೇಖಕರ ಹೆಸರನ್ನು ಬರೆದು, ಪುಸ್ತಕದ ಮೂಲೆಯಲ್ಲಿ ಅದು ಧರ್ಮಗ್ರಂಥವೇ, ಕಾವ್ಯವೇ, ವಿಮರ್ಶೆಯೇ, ಜಾನಪದವೇ, ಯಾವ ವಿಷಯಕ್ಕೆ ಸಂಬಂಧಿಸಿದುದು ಎಂಬುದನ್ನು ಬರೆಯುತ್ತಾರೆ. ನಂತರ ವಿಷಯವಾರು ಜೋಡಿಸಿಡುತ್ತಾರೆ. ಅಷ್ಟೆ ಅಲ್ಲದೆ ಅದನ್ನು ಸಂಪೂರ್ಣವಾಗಿ ಓದಿ ಹೊಸಹೊಸ ಅಂಶಗಳನ್ನು ಅಥವಾ ಮುಖ್ಯವಾದ ವಿಷಯಗಳನ್ನು ಅದರಲ್ಲಿ ಶಾಯಿಯಲ್ಲಿ ಗುರುತುಮಾಡುತ್ತಾರೆ. ವಿಶೇಷವೆಂದರೆ ಹೀಗೆ ಓದಿದ ವಿಷಯವನ್ನು ಎಂದೂ ಮರೆಯುವುದಿಲ್ಲ. ಅವರ ನೆನಪಿನ ಶಕ್ತಿ ಅಗಾಧವಾದದ್ದು. ಆದ್ದರಿಂದಲೇ ಅವರು ಕನ್ನಡ ಸಾಹಿತ್ಯದ ಬಗೆಗೆ ಯಾರು ಏನೇ ಕೇಳಿದರೂ ತಕ್ಷಣವೇ ಉತ್ತರ ಹೇಳುತ್ತಾರೆ ಹಾಗೂ ಹೆಚ್ಚಿನ ವಿವರಗಳಿಗೆ ನೋಡಬಹುದಾದ ಪುಸ್ತಕಗಳ ಬಗೆಗೆ ವಿವರವನ್ನು ನೀಡುತ್ತಾರೆ. ಯಾವುದಾದರೂ ಪುಸ್ತಕದ ಅಂಗಡಿಗೆ ಹೋದರೆ ತಮಗೆ ಬೇಕಾದ ಪುಸ್ತಕಗಳನ್ನು ಕೊಳ್ಳುವುದರ ಜೊತೆಗೆ ತಮ್ಮ ವಿದ್ಯಾರ್ಥಿಗಳ ಅಧ್ಯಯನದ ಕ್ಷೇತ್ರವನ್ನು ನೆನಪಿನಲ್ಲಿಟ್ಟುಕೊಂಡು ಪುಸ್ತಕದ ಹೆಸರು, ಪ್ರಕಾಶಕರ ಹೆಸರುಗಳನ್ನು ಗುರುತುಮಾಡಿಕೊಂಡು ಬಂದು "ಈ ಪುಸ್ತಕ ಇಂತಹ ಪುಸ್ತಕದ ಅಂಗಡಿಯಲ್ಲಿ ಸಿಗುತ್ತಿದೆ, ತೆಗೆದುಕೋ" ಎಂದು ಫೋನ್ ಮಾಡಿ ತಿಳಿಸುತ್ತಾರೆ. ಕೆಲವೊಮ್ಮೆ ಅಂಗಡಿಯಲ್ಲಿ ಪ್ರತಿಗಳು ಕಡಿಮೆ ಇದ್ದು ಮುಗಿದು ಹೋಗಬಹುದು ಎನಿಸಿದರೆ ಆ ಪುಸ್ತಕವನ್ನು ಕೊಂಡು ತಂದೇ ಬಿಡುತ್ತಾರೆ. ಹೀಗೆ ಅವರ ಹಾಗೂ ಅವರ ವಿದ್ಯಾರ್ಥಿಗಳ ಗ್ರಂಥಾಲಯವು ಬೆಳೆಯುತ್ತಿದೆ.

ಯಾವುದಾದರೂ ಒಂದು ಕಾವ್ಯ ಅಥವಾ ವಸ್ತುವನ್ನು ಕುರಿತು ಬೇರೆ ಬೇರೆ ಲೇಖಕರು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡಿ ಬರೆದಿರುತ್ತಾರೆ. ಸಾಮಾನ್ಯವಾಗಿ ಒಂದು ವಸ್ತುವನ್ನು ಕುರಿತು ಬಂದ ಎಲ್ಲಾ ಕೃತಿಗಳು ಪ್ರೊ. ಅನಾಜಿಯವರ ಸಂಗ್ರಹದಲ್ಲಿರುತ್ತವೆ. ಯಾರಾದರೂ ವಿದ್ಯಾರ್ಥಿಗಳು/ ವಿದ್ವಾಂಸರು ತಮ್ಮ ಬರವಣಿಗೆಗೆ ಪೂರಕವಾಗುವಂತಹ ಪುಸ್ತಕವನ್ನು ಕೇಳಿದರೆ, ಅವರು ಉದ್ದೇಶವನ್ನು ಕೇಳಿ ತಿಳಿದುಕೊಳ್ಳುತ್ತಾರೆ. ಆ ವಿಷಯಕ್ಕೆ ಸಂಬಂಧಿಸಿದ ಎಲ್ಲ ಪುಸ್ತಕಗಳನ್ನೂ ನೋಡಿ ಯಾವುದು ಹೆಚ್ಚು ಉಪಯೋಗವಾಗುತ್ತದೆ ಎಂದು ನೋಡಿ ಶಾಯಿಯಲ್ಲಿ ಢಾಳಾಗಿ ಗೆರೆಹಾಕಿಟ್ಟು, ಅವರಿಗೆ ಪುಸ್ತಕಕೊಡುವಾಗ ಆ ಪುಸ್ತಕದಲ್ಲಿನ ವಿಷಯಗಳನ್ನು ಹೇಗೆ ಉಪಯೋಗಿಸಿಕೊಳ್ಳಬಹುದು ಎಂಬುದನ್ನೂ ಹೇಳುತ್ತಾರೆ. ಇದು 'ಅನಾಜಿ'ಯವರಲ್ಲಿ ಕಂಡುಬರುವ ವಿಶೇಷ ಗುಣ.

ಹೀಗೆ ಬೇಕಾದ ಪುಸ್ತಕಗಳಲ್ಲಿ ಯಾವುದಾದರೂ ಪುಸ್ತಕ ಅಂಗಡಿಯಲ್ಲಿ ದೊರೆಯುತ್ತಿದ್ದರೆ, ಇಂತಹ ಅಂಗಡಿಯಲ್ಲಿ ದೊರೆಯುತ್ತದೆ ಎಂದು ಹೇಳುವುದರ ಜೊತೆಗೆ ಲಭ್ಯವಿಲ್ಲದ ಪುಸ್ತಕಗಳನ್ನು ತಮ್ಮ ಸಂಗ್ರಹದಲ್ಲಿದ್ದರೆ ಕೊಡುತ್ತಾರೆ. ಇವರಲ್ಲಿ ನಾನು ಗಮನಿಸಿದ ವಿಶೇಷ ಅಂಶಗಳೆಂದರೆ, 'ಸಹನೆ' ಮತ್ತು 'ಸಮಯಪಾಲನೆ'. ಯಾವುದಾದರೂ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾದರೆ, ಸಮಯಕ್ಕಿಂತ ಹತ್ತು ನಿಮಿಷ ಮುಂಚೆಯೇ ಹೊರಡುತ್ತಾರೆ. ಎಂದೂ ಸಭೆ-ಸಮಾರಂಭಗಳಿಗೆ ತಡವಾಗಿ ಬಂದುದನ್ನು ನಾನು ಕಂಡಿಲ್ಲ. ಸಮಯಕ್ಕೆ ಸರಿಯಾಗಿ ಕಾರ್ಯಕ್ರಮ ಆರಂಭವಾದರೆ ಸರಿ, ಇಲ್ಲವಾದರೆ ತಮ್ಮ ಕೈ ಚೀಲದಲ್ಲಿ ಇಟ್ಟುಕೊಂಡಿರುವ ಯಾವುದಾದರೂ ಒಂದು ಪುಸ್ತಕವನ್ನು ಓದುತ್ತಾ ಕೂಡುತ್ತಾರೆ. ಹೀಗೆ ಸಮಯ ಪಾಲನೆ ಮಾಡುವುದನ್ನು ಸರ್.ಎಂ. ವಿಶ್ವೇಶ್ವರಯ್ಯನವರಿಂದ ಕಲಿತರು (ವಿಶ್ವೇಶ್ವರಯ್ಯನವರೇ ಅವರಿಗೆ ಮಾದರಿ) ಎಂದು ತಿಳಿದಾಗ ಆಶ್ಚರ್ಯವಾಗುತ್ತದೆ. ಯಾವುದಾದರೂ ಉಪನ್ಯಾಸಕ್ಕಾಗಿ ಸಂಪೂರ್ಣವಾಗಿ ಸಿದ್ಧವಾಗಿ ಬಂದಿದ್ದರೂ, ಸಮಯವನ್ನು ಅರಿತು ಮಾಡನಾಡುತ್ತಾರೆ. ಇದರಿಂದ ಸಭಾಸದರಿಗಾಗಲೀ, ಕಾರ್ಯಕ್ರಮವನ್ನು ಆಯೋಜಿಸಿದವರಿಗಾಗಲೀ ಮುಜುಗರವಾಗದಂತೆ ಮಾತನಾಡುತ್ತಾರೆ.

ಬಾಲ್ಯದಿಂದಲೂ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥಾಲಯದಿಂದ ಪುಸ್ತಕಗಳನ್ನು ತಂದು ಅದರ ಸುತ್ತಮುತ್ತಲಿನ ಮರಗಳ ಕೆಳಗೆ ಕುಳಿತು ಓದುತ್ತಿದ್ದರಂತೆ. ಈ ಸಮಯದಲ್ಲಿ ಅವರಿಗೆ ಹಲವಾರು ಜನ ವಿದ್ವಾಂಸರು, ಕವಿಗಳು, ಕಾದಂಬರಿಕಾರರನ್ನು ಭೇಟಿಮಾಡುವ ಅವಕಾಶವೂ ದೊರೆಯಿತು. ಮಾಸ್ತಿ, ಅ.ನ.ಕೃ., ವೀ.ಸಿ., ರಾಜರತ್ನಂ, ಮೊದಲಾದವರನ್ನು ಕಂಡು ಮಾತನಾಡುವ ಅವಕಾಶ ದೊರೆಯುತ್ತಿತ್ತು. ಪರಿಷತ್ತಿನಲ್ಲಿ ಹಿರಿಯ ವಿದ್ವಾಂಸರುಗಳು ಕಾವ್ಯ-ಸಾಹಿತ್ಯದ ಬಗೆಗೆ ನಡೆಸುತ್ತಿದ್ದ ಚರ್ಚೆಗಳನ್ನು ನೋಡುತ್ತಾ ಬೆಳೆದವರು. ಹೀಗಾಗಿ ಇವರಿಗೆ ಕನ್ನಡದ ಬಗೆಗೆ ಒಲವು ಹೆಚ್ಚು. ಅವರು ಬರೆಯುವಾಗಲೂ ಕೆಲವು ಸಂಸ್ಕೃತ ಪದಗಳನ್ನು ಕನ್ನಡದ ಜಾಯಮಾನದಂತೆಯೇ ಬರೆಯುತ್ತಾರೆ. ಉದಾ.: ಸಾಮಾನ್ಯವಾಗಿ ಧರ್ಮ-ಕರ್ಮ, ಕಾರ್ಯ, ಮೊದಲಾದ ಪದಗಳನ್ನು ಬರೆಯುವಾಗ ಧರ್ಮ-ಕರ್ಮ, ಕಾರ್ಯ, ಎಂದು ಬರೆಯುವುದು ಅವರ ರೂಢಿ.

ಅವರ ಕನ್ನಡದ ಅಭಿಮಾನವೇ ಕನ್ನಡ ಸಾಹಿತ್ಯದ ಬಗೆಗೆ ಯಾರು ಏನೇ ಕೇಳಿದರೂ ತಮಗೆ ತಿಳಿದಿರುವುದನ್ನು ಹೇಳುವುದು, ತಮ್ಮಲ್ಲಿರುವ ಪುಸ್ತಕಗಳನ್ನು ಕೊಟ್ಟು ಬರವಣಿಗೆ - ಸಂಶೋಧನೆಗೆ ಸಹಕರಿಸುವುದು, ಏನಾದರೂ ಬರೆದು ತಂದರೆ ಅದನ್ನು ತಿದ್ದುಪಡಿ ಮಾಡಿಕೊಡುವುದು ಹೀಗೆ ಕನ್ನಡದ ಸೇವೆಯನ್ನು ಮಾಡುತ್ತಿದ್ದಾರೆ. ಸದ್ದಿಲ್ಲದೇ ಮಾಡುತ್ತಿರುವ ಅವರ ಕನ್ನಡದ ಸೇವೆ ಹೀಗೇ ಮುಂದುವರೆಯುತ್ತಿರಲಿ ಎಂದು ಆಶಿಸುತ್ತೇನೆ.

ಹೀಗೆ ಅವರು ನಡೆಸುತ್ತಿರುವ ಕನ್ನಡ ಸೇವೆಯಲ್ಲಿ ಅವರ ಶ್ರೀಮತಿಯವರಾದ ಪ್ರೊ.ಲಕ್ಷ್ಮೀದೇವಿಯವರ ಸಹಕಾರವು ಅಪೂರ್ವವಾದದ್ದು.

******

ಹೊಸ ಲೇಖಕರಿಗೆ ಚೈತನ್ಯಶಕ್ತಿ

ಎಚ್. ಪ್ರಸನ್ನಕುಮಾರ್
ಚರವಾಣಿ : ೯೪೮೧೪೭೧೮೬೩

ಅಖಿಲ ಕರ್ನಾಟಕ ಮಕ್ಕಳ ಕೂಟದ ಬೇಸಿಗೆ ಶಿಬಿರದ ಕಾರ್ಯಕ್ರಮದಲ್ಲಿ ಒಂದು ಪುಸ್ತಕ ಬಿಡುಗಡೆಯ ಸಮಾರಂಭ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಕಂಚಿನ ಕಂಠದ ಹಿರಿಯರೊಬ್ಬರು ಅರಳು ಹುರಿದಂತೆ ಪಟಪಟನೆ ಮಾತನಾಡುತ್ತಿದ್ದರು. ಅವರ ಆ ಭಾಷಣದ ವಾಗ್ಝರಿಗೆ ನಾನು ಸೋತುಹೋದೆ. ಒಮ್ಮೆ ಮಾತನಾಡಿಸುವ ಆಸೆಯಾಯಿತು ಆದರೆ ಅಂಥಹ ವಿದ್ವಾಂಸರ ಜೊತೆ ಮಾತನಾಡಲು ಭಯ ಮತ್ತು ಹಿಂಜರಿಕೆಯಾಯ್ತು. ಕನ್ನಡ ರತ್ನಕೋಶ ಮತ್ತು ಶಬ್ದಕೋಶದ ಬಗ್ಗೆ ಸ್ವಲ್ಪ ತಿಳಿದುಕೊಂಡಿದ್ದೇನೆ. ಹವ್ಯಾಸಿ ಬರಹಗಾರನಾದ ನನಗೆ ನಡೆದಾಡುವ ಶಬ್ದಕೋಶ ಮತ್ತು ರತ್ನಕೋಶದ ಬಗ್ಗೆ ಅರಿವಿರಲಿಲ್ಲ. ಆದರೆ ಅದರ ದರ್ಶನ ಮತ್ತು ಪರಿಚಯವೂ ಆಯಿತು. ನನ್ನ ನೀಹಾರಿಕಾ ಕವನ ಸಂಕಲನಕ್ಕೆ ಮುನ್ನುಡಿ ಬರೆದು ಆಶೀರ್ವದಿಸಬೇಕೆಂದು ಕೇಳಿಕೊಂಡಾಗ ಮೂರ್ನಾಲ್ಕು ತಿಂಗಳುಗಳ ಕಾಲ ಪುರುಸೊತ್ತಿಲ್ಲಪ್ಪ ಎಂದರು. ನಾನು ಒಂದು ವರ್ಷವಾದರೂ ಪರವಾಗಿಲ್ಲ ಸರ್, ಬರೆದುಕೊಡಿ ಕಾದಿರುತ್ತೇನೆ ಎಂದೆ. ಪುಸ್ತಕವನ್ನು ಕೊಟ್ಟು ಮನೆಗೆ ತೆರಳಿದೆ. ೧೫ ದಿನಗಳ ನಂತರ ಫೋನ್ ಕರೆ ಬಂತು. ಮುನ್ನುಡಿ ಬರೆದಿದ್ದೇನೆ ಬನ್ನಿ ಎಂದರು. ನಾನು ಸಂತೋಷ ಮತ್ತು ಆಶ್ಚರ್ಯದೊಂದಿಗೆ ಅವರ ಮನೆಗೆ ಹೋದೆ. ಕೆಲವು ಸಲಹೆ ಸೂಚನೆಗಳನ್ನು ನೀಡಿದರು. ಇಂದಿನ ದಿನಗಳಲ್ಲಿ ಈ ರೀತಿ ಪ್ರೋತ್ಸಾಹಿಸುವ ವ್ಯಕ್ತಿತ್ವದ ಶಕ್ತಿಗಳು ದುರ್ಬೀನು ಹಾಕಿಕೊಂಡು ಹುಡುಕಿದರೂ ಸಿಗುವುದಿಲ್ಲ. ಮುನ್ನುಡಿ ಬರೆದು ಆಶೀರ್ವದಿಸಿ ಕೊಟ್ಟ ನನ್ನ ಕೃತಿಗೆ ಉತ್ತಮ ಪ್ರತಿಕ್ರಿಯೆ ದೊರಕಿತು. ಶ್ರೀಯುತರಿಗೆ ನನ್ನ ಅನಂತಾನಂತ ಪ್ರಣಾಮಗಳು.

******

ಸರಳ ಸಜ್ಜನಿಕೆಯ ವಿದ್ವಾಂಸ–ಅನಾಜಿ

ಈಶ್ವರಚಂದ್ರ
ಚರವಾಣಿ : ೯೮೮೦೨೩೪೧೪೧

ಗುಂಡಪ್ಪ ಅಶ್ವತ್ಥನಾರಾಯಣ ಎಂದರೆ ಯಾರಿಗೂ ಗೊತ್ತಾಗುವುದಿಲ್ಲ. ಜಿ. ಅಶ್ವತ್ಥನಾರಾಯಣ ಎಂದರೆ ಅನಾಜಿ ಅಲ್ಲವೇ ಅನ್ನುತ್ತಾರೆ. ಹೀಗೆ ಸಾಹಿತ್ಯ ವಲಯದಲ್ಲಿ ಜನಪ್ರಿಯರಾಗಿರುವವರೇ ನಮ್ಮ ಜಿ. ಅಶ್ವತ್ಥನಾರಾಯಣ. ಅವರನ್ನು ನಾನು ಕಸಾಪ ಸಾಹಿತ್ಯಕ ಕಾರ್ಯಕ್ರಮಗಳಲ್ಲಿ ತಪ್ಪದೇ ನೋಡುತ್ತಿದ್ದೆ. ಮಟ್ಟಸವಾದ ಆಳು. ಸ್ವಲ್ಪವೇ ಕೆದರಿದ ಗುಂಗುರು ಕೂದಲು. ದಪ್ಪ ಮೀಸೆ. ಮುಖದಲ್ಲಿ ಸದಾ ಮಿನುಗುವ ಕೀಟಲೆಯ ನಗೆ. ನೋಡಿದ ಕೂಡಲೇ, "ಓಹೋಹೋ, ಕಥೆಗಾರರು, ಹೊಸದಾಗಿ ಏನು ಬರೆದಿರಿ?" ಎಂದು ವಿಚಾರಿಸುವ ಸಲುಗೆ. ಕಿರಿಯ ಲೇಖಕರಲ್ಲಿ ವಿಶ್ವಾಸ. ಹಿರಿಯ ಲೇಖಕರು ಬಗೆಗೆ ಅಮಿತ ಗೌರವ. ಮಾತಿನ ನಡುವೆ ಯಾರದ್ದಾದರೂ ಪ್ರಸ್ತಾವ ಬಂದರೆ ಕೂಡಲೇ ಅವರನ್ನು ಕುರಿತ ಒಂದು ಚಿಟ್ಟೆಕಥೆ ಚಿಮ್ಮುತ್ತಿತ್ತು. ಅನಾಜಿ ಅವರ ಆಸಕ್ತಿಯ ಕ್ಷೇತ್ರಗಳು ಹಲವಾರು. ಅವುಗಳನ್ನು ಪಟ್ಟಿಮಾಡಿ ಮುಗಿಸಲಾಗುವುದಿಲ್ಲ. ವಿಧ್ಯಾರ್ಥಿಗಳಿಗೆ ಪ್ರೀತಿಯ ಕನ್ನಡ ಮೇಷ್ಟರಾಗಿದ್ದ ಅವರು ನೂರಕ್ಕೂ ಹೆಚ್ಚು ಗ್ರಂಥಗಳನ್ನು ಗ್ರಂಥ ಸಂಪಾದನೆಯ ನಿಕಷದಲ್ಲಿ ಬೆಳಗಿದ್ದಾರೆ ಎನ್ನುವುದು ಅವರ ದೈತ್ಯ ಶಕ್ತಿಗೆ ದ್ಯೋತಕವಾಗಿದೆ. ಹೀಗಾಗಿ ಅವರನ್ನು ಪ್ರಧಾನವಾಗಿ ಗ್ರಂಥ ಸಂಪಾದಕರು ಎಂದೇ ಗುರುತಿಸಬೇಕು. ಗ್ರಂಥ ಸಂಪಾದನೆಯಲ್ಲಿ ಅವರ ವಿಚಕ್ಷಣತೆಗೆ ಮಾದರಿಯಾಗಿ 'ರಘುಕುಲ ಚರಿತಂ' ಕೃತಿಯನ್ನು ಪರಿಶೀಲಿಸಬಹುದು.

ಕಾಳಿದಾಸನ ಸಂಸ್ಕೃತ ಮಹಾಕಾವ್ಯ 'ರಘುವಂಶ'ವನ್ನು ಸುಮಾರು ೧೧೫ ವರ್ಷಗಳ ಹಿಂದೆ ದೊಡ್ಡಬೆಲೆ ನಾರಾಯಣ ಶಾಸ್ತ್ರಿ ಎಂಬ ಪಂಡಿತರು ಗದ್ಯದಲ್ಲಿ ಅನುವಾದಿಸಿದ್ದರು. ಕಾಲಗರ್ಭದಲ್ಲಿ ಅಡಗಿ ಹೋಗಿದ್ದ ಅದನ್ನು ಉತ್ಖನನ ಮಾಡಿ ಹೆಕ್ಕಿ ತೆಗೆದು ಅನಾಜಿ ವಿದ್ವತ್‌ಪೂರ್ಣವಾಗಿ ಸಂಪಾದಿಸಿದ್ದಾರೆ. ಪ್ರಾರಂಭದಲ್ಲಿ ಒಂದು ದೀರ್ಘವಾದ ಪ್ರಸ್ತಾವನೆ ಇದೆ. ಅದರಲ್ಲಿ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ ಜೀವನ ಮತ್ತು ಕೃತಿಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಸುಮಾರು ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳು ಪ್ರಕಟಿಸಿದ್ದಾರೆಂದರೆ ಅವರ ಸಾಮರ್ಥ್ಯದ ಅರಿವಾಗದೇ ಇರದು. ಅನಂತರ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ ಜೀವನ ಮತ್ತು ಕೃತಿಗಳನ್ನು ಕುರಿತ ಆಕರ ಗ್ರಂಥಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಇದನ್ನು ನೋಡಿದರೆ ಅನಾಜಿ ಅವರು ಯಾವ ಆಕರವನ್ನೂ ಪರಿಶೀಲಿಸದೆ ಬಿಟ್ಟಿಲ್ಲ ಎಂದು ಅರಿವಾಗುತ್ತದೆ.

ಆನಂತರ ಸಂಪಾದಕರ ಪ್ರಸ್ತಾವನೆಯಲ್ಲಿ ಕಾಳಿದಾಸ ಮತ್ತು ರಘುವಂಶ ಕುರಿತ ಒಂದು ದೀರ್ಘವಾದ ಟಿಪ್ಪಣಿ ಇದೆ. ದೊಡ್ಡಬೆಲೆ ಅವರು ರಘುವಂಶವನ್ನು ಕನ್ನಡಕ್ಕೆ ಅನುವಾದಿಸುವಾಗ ಅವರ ಕಾಲಕ್ಕೆ ತಕ್ಕಂತೆ ಮಾಡಿಕೊಂಡಿರುವ ಪರಿಷ್ಕರಣೆಯನ್ನು ಕೂಲಂಕೂಷವಾಗಿ ಗುರುತಿಸಿದ್ದಾರೆ. ಮುಂದೆ ರಘುವಂಶದ ಗದ್ಯಾನುವಾದ ಹತ್ತೊಂಬತ್ತು ಅಧ್ಯಾಯಗಳಲ್ಲಿ ಹರಡಿದೆ. ೧೧೫ ವರ್ಷಗಳ ಹಿಂದಿನ ಕನ್ನಡ ಗದ್ಯಾನುವಾದದ ಚೆಲುವನ್ನು ಆಸ್ವಾದಿಸಲು ಗ್ರಂಥವನ್ನೇ ಓದಬೇಕು.

ಕೊನೆಯಲ್ಲು ಐದು ಅನುಬಂಧಗಳಿವೆ. ಅನುಬಂಧ 1 ರಲ್ಲಿ ಶಬ್ದಾರ್ಥಗಳು ಇವೆ. ಅನುಬಂಧ-2 ರಲ್ಲಿ ಅಧ್ಯಾಯಗಳಿಗೆ ಅನುಗುಣವಾಗಿ ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಅನುಬಂಧ-3ರಲ್ಲಿ ಈವರೆಗೆ ಕನ್ನಡದಲ್ಲಿ ಪ್ರಕಟವಾಗಿರುವ ರಘುವಂಶದ ಅನುವಾದಗಳ ಪಟ್ಟಿ ಇದೆ. ಇದು ಅನುವಾದಗಳನ್ನು ಹೋಲಿಸಿ ನೋಡಲು ತುಂಬಾ ಉಪಯುಕ್ತವಾಗಿದೆ. ಅನುಬಂಧ-4ರಲ್ಲಿ ಈ ಅನುವಾದವನ್ನು ಅಧ್ಯಯನ ಮಾಡಲು ಸಹಾಯಕವಾದ ಸಾಹಿತ್ಯದ ಪಟ್ಟಿಯನ್ನು ನೀಡಿದ್ದಾರೆ. ಅನುಬಂಧ-5ರಲ್ಲಿ ರಘುವಂಶ ಕನ್ನಡ ಅನುವಾದದ ಮೊದಲ ಮುದ್ರಣದ ಮುಖಪುಟಗಳು ಹೇಗಿದ್ದವು ಎಂಬ ಚಿತ್ರವನ್ನು ಕೊಟ್ಟಿದ್ದಾರೆ. ಇಷ್ಟು ವ್ಯಾಪಕವಾದ ಗ್ರಂಥಸಂಪಾದನಾ ವಿಧಾನವನ್ನು 'ವಿವೇಚನಾ ಗ್ರಂಥಸಂಪಾದನೆ' ಎಂದು ಕರೆಯಬಹುದು.

ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯವನ್ನು ಸಂಪಾದಿಸಿರುವುದರ ಜೊತೆಗೆ ಜೈನ ಸಾಹಿತ್ಯವನ್ನೂ ಸಂಪಾದಿಸಿದ್ದಾರೆ. ಪ್ರಾಚೀನ ಮತ್ತು ಆಧುನಿಕ ಕಾವ್ಯಗಳನ್ನು ಕುರಿತು ದೀರ್ಘಕಾಲ ಉಪನ್ಯಾಸ ನೀಡಿದ್ದಾರೆ. ಅನೇಕ ಸ್ವತಂತ್ರ ಗ್ರಂಥಗಳನ್ನು ರಚಿಸಿದ್ದಾರೆ. ಅನೇಕ ಗಣ್ಯ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ. ಕಾರ್ಯಕ್ರಮ ನಿರೂಪಣೆಯಂತಹ ಜವಾಬ್ದಾರಿಯನ್ನು ನಿರ್ವಹಿಸುವಾಗಲೂ ಅವರ ಪೂರ್ವ ಸಿದ್ಧತೆ ಬೆರಗುಗೊಳಿಸುತ್ತದೆ. ಅನಾಜಿ ಅವರನ್ನು ಕಾರ್ಯಕ್ರಮ ನಿರೂಪಕರಾಗಿ ಆಹ್ವಾನಿಸಿದರೆ ನಿಯೋಜಕರಿಗೆ ತಲೆನೋವಿಲ್ಲ. ಕಾರ್ಯಕ್ರಮ ಹೊತ್ತಿಗೆ ಸರಿಯಾಗಿ ಆರಂಭವಾಗುತ್ತದೆ ಮತ್ತು ಮುಕ್ತಾಯವಾಗುತ್ತದೆ. ಉಪನ್ಯಾಸಕರು ತಮಗೆ ನೀಡಿದ ಅವಧಿಯನ್ನು ಮೀರಲು ಅನಾಜಿ ಅವಕಾಶ ನೀಡುವುದಿಲ್ಲ. ಪ್ರೇಕ್ಷಕರು ಉಪನ್ಯಾಸಕರ ಭಾಷಣಗಳಿಗಿಂತ ಅನಾಜಿ ಅವರ ಟಿಪ್ಪಣಿಗಳನ್ನೇ ಹೆಚ್ಚಾಗಿ ಆಸ್ವಾದಿಸುತ್ತಾರೆ! ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಇವರು ಅನಕೃ-ರಾಮಮೂರ್ತಿ ಪ್ರಾರಂಭಿಸಿದ ಕನ್ನಡ ಚಳವಳಿಯಲ್ಲಿ ಸಕ್ರಿಯ ಕಾರ್ಯಕರ್ತರಾಗಿದ್ದರು.

ಬಹುತೇಕ ಪ್ರಮುಖ ಸಾಹಿತಿಗಳ ನಿಕಟ ಸಂಪರ್ಕದಲ್ಲಿದ್ದ ಅನಾಜಿ ಅವರ ಒಳಹೊರಗನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಸುಮಾರು ನೂರಿಪ್ಪತ್ತೈದು ಜನ ಸಾಹಿತಿಗಳ ಒಡನಾಟದ ನೆನಪುಗಳನ್ನು 'ನನಗೆ ಸವಿನೆನಪುಗಳು ನಿಮಗೆ ರಸಪ್ರಸಂಗಗಳು' ಎಂಬ ಹೆಸರಿನಲ್ಲಿ ಸಂಕಲಿಸಿದ್ದಾರೆ. ಇದರ ಓದು ಒಂದು ಚೇತೋಹಾರಿಯಾದ ಅನುಭವ

ಅನಾಜಿ ಅವರ ಒಂದು ಮಹತ್ವದ ಕೊಡುಗೆ ಎಂದರೆ ಕನ್ನಡ ಸಂಸ್ಕೃತಿ ಇಲಾಖೆಯ ಸಮಗ್ರ ದಾಸ ಸಾಹಿತ್ಯದ ೫೦ ಸಂಪುಟಗಳ ಪರಿಶೀಲನೆ ಮತ್ತು ಮುದ್ರಣ ಕಾರ್ಯದ ಸಂಚಾಲಕ ಸಮಿತಿಯ ಸದಸ್ಯನಾಗಿ ಸಲ್ಲಿಸಿದ ಸೇವೆ.

ಅನಾಜಿ ಅನೇಕ ಸಂಸ್ಥೆಗಳು ಮತ್ತು ಟ್ರಸ್ಟುಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಗಮಕ ಕಲಾ ಪರಿಷತ್ತಿನ ಸ್ಥಾಪಕ ಸದಸ್ಯರಾಗಿದ್ದಾರೆ. ಸ್ನಾತಕೋತ್ತರ ಸಂಶೋಧನೆ ನಡೆಸುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದಾರೆ.

ಕರಡಚ್ಚು ತಿದ್ದುವುದರಲ್ಲಿ ಅವರಿಗೆ ವಿಶೇಷ ಪರಿಣತಿ ಇದೆ. ಆ ವಿಷಯವಾಗಿ ಒಂದು ಪುಸ್ತಕವನ್ನೇ ಬರೆದಿದ್ದಾರೆ ಎಂಬತ್ತೆಂಟರ ಈ ಪಕ್ವ ವಯಸ್ಸಿನಲ್ಲಿ ದಣಿವರಿಯದೆ ಕೆಲಸ ಮಾಡುವ ಅವರ ಉತ್ಸಾಹ ಯುವ ಜನರಿಗೆ ಆದರ್ಶವಾಗಿದೆ. ನಿಜವಾದ ಅರ್ಥದಲ್ಲಿ 'ಕನ್ನಡ ಪರಿಚಾರಕ'ರಾದ ಅವರು ನೂರ್ಕಾಲ ಸುಖವಾಗಿ ಬಾಳಿ ಕನ್ನಡ ಸಾರಸ್ವತ ಲೋಕವನ್ನು ಮತ್ತಷ್ಟು ಶ್ರೀಮಂತಗೊಳಿಸಲಿ ಎಂದು ಹಾರೈಸುತ್ತೇನೆ.

****

ಆರಂಭ ಮಾಡುವೆನು ಗುರು ಪೂಜೆಗೆಂದು

ಡಾ|| ಶೀಲಾದೇವಿ. ಎಸ್ ಮಳಿಮಠ
ಚರವಾಣಿ : ೯೪೮೨೬೧೮೪೪೫

೧೯೭೪ ರಿಂದ ಇದುವರೆಗೂ ನನ್ನ ಪೂಜ್ಯ ಗುರುಗಳಾದಂತಹ ಜಿ. ಅಶ್ವತ್ಥನಾರಾಯಣ ಅವರ ಅಭಿನಂದನಾ ಗ್ರಂಥ ಬರುತ್ತಿರುವುದನ್ನು ಕೇಳಿ ಅತ್ಯಂತ ಸಂತೋಷದಿಂದ ದೀರ್ಘವಾದಂತಹ ನಲವತ್ತೈದು ವರ್ಷಗಳ ನಿರಂತರ ಶಿಷ್ಯದೀಕ್ಷೆಯನ್ನು ತೆಗೆದುಕೊಂಡಿರುವಂತಹ ನಾನು ಅವರಿಗಾಗಿ ಒಂದು ಲೇಖನ ಬರೆಯುವುದು ನನ್ನ ಸುಕೃತವೆಂದುಕೊಂಡು ಇದನ್ನು ಬರೆಯುತ್ತಿದ್ದೇನೆ.

ಬಸವಣ್ಣನವರ ಒಂದು ವಚನದಲ್ಲಿ ಇರುವಂತಹ ಲಿಂಗಾರ್ಚನೆಯ ಮಾಡುವೆನು, ಜಂಗಮ ದಾಸೋಹ ಮಾಡುವೆನು, ನಾ ಮಾಡಿದ ಕರ್ಮಕ್ಕೆ ಕರ್ಮಭೋಗವ ನೀಡುವ ಅರಿವನ್ನು ಅರ್ಥೈಸಿರುವಂತಹ ನನ್ನ ಪೂಜ್ಯ ಗುರುಗಳು ಜಿ. ಅಶ್ವತ್ಥ ನಾರಾಯಣ ಅವರು.

೧೯೭೪ ಅಕ್ಟೋಬರ್ ೦೩ ಮಹಾರಾಣಿ ಪದವಿ ಪೂರ್ವ ಕಾಲೇಜಿನಲ್ಲಿ ಪಿ.ಯು.ಸಿ. ಕನ್ನಡ ತರಗತಿಗಾಗಿ ಕಾಯುತ್ತ ಇರುವಾಗ, ನಮ್ಮ ಎದುರುಗಡೆ ಬಂದು ನಿಂತಿರುವಂತಹ ಅತ್ಯಂತ ಧೀಮಂತ ಕನ್ನಡ ಮೇಷ್ಟ್ರು ಅಶ್ವತ್ಥನಾರಾಯಣ. ನಾಗಚಂದ್ರನ ರಾಮಚಂದ್ರ ಚರಿತ ಪುರಾಣದ "ಪದ್ಮಪತ್ರದ ಜಲ ಬಿಂದುವಿನಂತೆ ಚಲಿತಮಾದುದು ಚಿತ್ತಂ" ಕಾವ್ಯ ಭಾಗವನ್ನು ಪದ ಅರ್ಥಗಳಿಂದ ಶಬ್ದಾರ್ಥಗಳಿಂದ ಹಳೆಗನ್ನಡದ ಚಂಪೂ ಓದುವ ರೀತಿಯನ್ನು ಅರ್ಥೈಸಿಕೊಳ್ಳುವಂತಹ ಜೀವನ ಮೌಲ್ಯವನ್ನು ನಮಗೆ ಪಾಠ ಮಾಡಿದ ತಕ್ಷಣ ನನಗೆ ಐಚ್ಛಿಕ ಕನ್ನಡವನ್ನು ಓದಬೇಕು ಎಂದೆನಿಸಿತು. ಏರು ಧ್ವನಿಯಲ್ಲಿ ಸ್ವರ ಭಾರ, ಧ್ವನಿ ಭಾರಗಳು, ಕನ್ನಡದ ತರಗತಿಯಲ್ಲಿ ಎಷ್ಟು ಮುಖ್ಯ ಎಂದು ಹೇಳಿ ಕೊಟ್ಟವರು ನಮ್ಮ ಮೇಷ್ಟ್ರು ಅಶ್ವತ್ಥನಾರಾಯಣ್ ಕನ್ನಡ ಎಂದರೆ ಕೇವಲ ನುಡಿಯಲ್ಲ, ಪದಗಳನ್ನು ಬಳಸುವ ರೀತಿ, ವಾಕ್ಯ ರಚನೆಗೆ ಕೊಡಬೇಕಾದಂತಹ ಒತ್ತು, ಛಂದಸ್ಸು, ವ್ಯಾಕರಣದ ಜೊತೆಯಲ್ಲಿ ಒಂದು ಕಾವ್ಯವನ್ನು ವಿಮರ್ಶಿಸಬಹುದಾದ ವಿಮರ್ಶಾ ಪ್ರಜ್ಞೆ, ಸಾಹಿತ್ಯಾತ್ಮಕವಾದಂತಹ ಪದಗಳ ರೀತಿ ನೀತಿ, ಓದಿಕೊಳ್ಳಬೇಕಾದಂತಹ ಶೈಲಿ ಬರವಣಿಗೆಗೆ ಹಿಡಿಸಬೇಕಾದಂತಹ ದಿಟ್ಟ ನಿಲುವು ಇವೆಲ್ಲವನ್ನೂ ಕೂಡ ರಾಮಚಂದ್ರಚರಿತ ಪುರಾಣದ ಕಾವ್ಯದ ಮೂಲಕ ರಾವಣನನ್ನು ತೀರ ಹತ್ತಿರಕ್ಕೆ ನಮಗೆ ಪರಿಚಯ ಮಾಡಿಕೊಟ್ಟವರು ನಮ್ಮ ಮೇಷ್ಟ್ರು. ಮೇಷ್ಟ್ರು ಕೇವಲ ಮೇಷ್ಟ್ರಲ್ಲ. ಸಾಹಿತ್ಯದ ಜೊತೆಯಲ್ಲಿ ಜೀವನ ಮೌಲ್ಯವನ್ನು, ಜೀವನ ಪ್ರೀತಿಯನ್ನು ಬದುಕಿನಲ್ಲಿ ಆತ್ಮಸ್ಥೈರ್ಯವನ್ನು ನಮ್ಮ ಕಾಲಿನ ಮೇಲೆ ನಾವು ನಿಲ್ಲಬೇಕಾದಂತಹ ನಿಲುವುಗಳನ್ನು ದಿಟ್ಟೆದೆಯಿಂದ ಬೋಧಿಸಿರುವಂತಹ ಮೇಷ್ಟ್ರು. ಎಷ್ಟೋ ಸಮಯಗಳಲ್ಲಿ ತಮ್ಮ ಸ್ಟಾಫ್ ರೂಮ್‌ನಲ್ಲಿ ಒಂದು ಬೆಂಚನ್ನು ಹಾಕಿ ಅರ್ಥವಾಗದೇ ಇರುವ ಭಾಗವನ್ನು ವಿವರಿಸಲು ತಮ್ಮೆಲ್ಲಾ ಸಮಯವನ್ನು ನಮಗೆ ಧಾರೆಯೆರೆದ ಅತ್ಯಂತ ಶ್ರೇಷ್ಠ ಮೇಷ್ಟ್ರು ಲಲಿತ ಪ್ರಬಂಧದಲ್ಲಿ ಒಂದಾದ ಎ.ಎನ್. ಮೂರ್ತಿರಾಯರ ದಿವಾನಖಾನೆಯ ಅಂದ ಚೆಂದವನ್ನು ಅರ್ಥ ಮಾಡಿಸಿದ್ದು, ಹಾಸ್ಯ ಪ್ರಜ್ಞೆಗೆ ಕೊಡಬೇಕಾದಂತಹ ಒತ್ತು ನೀಡಿದ್ದು, ಒಟ್ಟಾರೆ ಅವರೊಳಗಡೆ

ಒಂದು ಚುರುಕಾದ ಹಾಸ್ಯ ಪ್ರಜ್ಞೆಯನ್ನು ಕಂಡಿದ್ದು ನನಗೆ ಈಗಲೂ ನೆನಪಿದೆ. ಕಲ್ಕಿ ಪದ್ಯವನ್ನು ಮಾಡ್ತ ಮಾಡ್ತ ನಮ್ಮೆಲ್ಲರನ್ನೂ ಕೂಡ ಸಾಹಿತ್ಯಾಭಿರುಚಿಯತ್ತ ನಿಜವಾದ ಸಾಹಿತ್ಯ ವಿದ್ಯಾರ್ಥಿಗಳನ್ನಾಗಿಸಿದ ಮೇಷ್ಟ್ರು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು ಎನ್ನುವುದು ಕೇವಲ ವಾಕ್ಯವಲ್ಲ. ವಿದ್ಯಾರ್ಥಿಗಳ ಸೇವೆಯನ್ನು ದಾಸೋಹದ ರೀತಿಯಲ್ಲಿ ಅಕ್ಷರದ ದಾಸೋಹದಲ್ಲಿ, ಜ್ಞಾನ ದಾಸೋಹದಲ್ಲಿ ಕೊಟ್ಟಿರುವಂತಹವರು ಪಿ.ಯು.ಸಿ.ಯಲ್ಲಿ ಇವರು ನೀಡಿದ ಬೋಧನೆಯಿಂದಲೇ ನಾನೊಬ್ಬಳು ಐಚ್ಛಿಕ ಕನ್ನಡ ವಿದ್ಯಾರ್ಥಿಯಾಗಲು ಸಾಧ್ಯವಾಯಿತು.

೧೯೮೦ ಜೂನ್ ೦೧ ಮಹಾರಾಣಿ ಕಲಾ ಕಾಲೇಜಿನಲ್ಲಿ ಪದವಿಯನ್ನು ತೆಗೆದುಕೊಳ್ಳಬೇಕೆಂದು ಅಶ್ವತ್ಥ ನಾರಾಯಣ್ ಮಾರ್ಗದರ್ಶನದಂತೆ ನಾನು ಇತಿಹಾಸ, ಅರ್ಥಶಾಸ್ತ್ರ, ಐಚ್ಛಿಕ ಕನ್ನಡವನ್ನು ಆಯ್ಕೆ ಮಾಡಿಕೊಂಡೆ. ಕನ್ನಡದ ಅತ್ಯಂತ ಕಷ್ಟದ ಕೃತಿ ಎನ್ನಿಸಿಕೊಂಡಿರುವಂತಹ ಕೇಶಿರಾಜನ ಶಬ್ದಮಣಿದರ್ಪಣವನ್ನು ಅಶ್ವತ್ಥನಾರಾಯಣ ಅವರು ನಮ್ಮ ಐಚ್ಛಿಕ ಕನ್ನಡತರಗತಿಯಲ್ಲಿ ತೆಗೆದುಕೊಳ್ಳುತ್ತಿದ್ದರು. ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆಯಂತಿದೆ ಎನಿಸಿರುವ ಶಬ್ದಮಣಿದರ್ಪಣವನ್ನು ಅದು ಕಾವ್ಯವು ಹೌದು ಶಾಸ್ತ್ರವೂ ಹೌದು ಎನ್ನುವಂತೆ, ಸೂತ್ರಗಳನ್ನು ಬರೆಸಿ ಪದ ವಿಭಾಗಗಳನ್ನು ಮಾಡಿಸಿ ಅದರಲ್ಲಿ ಇರುವಂತಹ ವ್ಯಾಕರಣ ಅಂಶಗಳನ್ನು ಶೋಧನೆ ಮಾಡಿಸಿ, ಹಳೆಗನ್ನಡದ ವ್ಯಾಕರಣ ಹೇಗಿದೆ ಎಂಬುದನ್ನು ಸ್ಪಷ್ಟ ಮಾಡಿದರು. ತತ್ಸಮ-ತದ್ಭವಕ್ಕೆ ರಳ, ಕುಳ ಕ್ಷಳಗಳನ್ನು ಶುದ್ಧ ಕನ್ನಡವನ್ನಾಗಿ ಶುದ್ಧಗೆಗಳಾಗಿ ಬಳಸಲು ಶಬ್ದಮಣಿದರ್ಪಣವನ್ನು ವಿದ್ಯಾರ್ಥಿಗಳ ಸ್ನೇಹಿಯಾಗಿ ಮಾಡಿದ ಕುಶಾಗ್ರಮತಿಗಳು. ಕೇವಲ ಸಾಹಿತ್ಯ ಮಾತ್ರವಲ್ಲ ವ್ಯಾಕರಣಗ್ರಂಥಗಳ ಜೊತೆಯಲ್ಲಿ ಗ್ರಂಥಸಂಪಾದನೆ ಮಾಡುವುದನ್ನು ಸಹ ನಮ್ಮ ಪದವಿ ತರಗತಿಯಲ್ಲಿ ಹೇಳಿಕೊಟ್ಟರು.

ನನ್ನಲ್ಲಿ ಇರುವಂತಹ ಪ್ರತಿಭೆಯನ್ನು ಗುರ್ತಿಸಿದ ಮೊಟ್ಟ ಮೊದಲ ಗುರು ನನ್ನ ಭಾಷಾ ಪ್ರೌಢಿಮೆಯನ್ನು ಮೆಚ್ಚಿಕೊಂಡವರು ಸರ್, ನನ್ನನ್ನು ಅಂತರಕಾಲೇಜು ಚರ್ಚಾಪಟುವನ್ನಾಗಿಸಲು ಮಾಡಿದ ಸಿದ್ಧತೆಗಳನ್ನು ನಾನು ಎಂದೆಂದಿಗೂ ಮರೆಯಲು ಸಾಧ್ಯವಿಲ್ಲ. ಯಾವುದೇ ಅಂತರ ಕಾಲೇಜು ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಆಶುಭಾಷಣ ಸ್ಪರ್ಧೆಗಳು ನಡೆಯಿತು ಎಂದರೆ ನನ್ನನ್ನು ಮುಂಚೂಣಿಯಲ್ಲಿ ನಿಲ್ಲಿಸಿ ಪ್ರಾಂಶುಪಾಲರಲ್ಲಿ ಅನುಮತಿಯನ್ನು ಪಡೆದು ನನ್ನನ್ನು ಕಳುಹಿಸಿಕೊಡುತ್ತಿದ್ದರು. ಪ್ರತಿಸಲ ಅವರು ನೀಡಿದ ಸೂಚನೆಯ ಅನುಸಾರದ ಸಿದ್ಧತೆಯ ಆಧಾರದ ಮೇಲೆ ಪ್ರತಿ ಸಲ ನಾವು ಕಾಲೇಜಿಗೆ ಹತ್ತಾರು ಪಾರಿತೋಷಿಕಗಳನ್ನು ತೆಗೆದುಕೊಂಡು ಬರಲು ಸಾಧ್ಯವಾಯಿತು. ಈಗಲೂ ಅಂತರಕಾಲೇಜು ಚರ್ಚಾಪಟು ಎನ್ನುವ ಹೆಗ್ಗಳಿಕೆಗೆ ಅವರ ಕೊಡುಗೆ ಅಪಾರವಾದದ್ದು. ಸಾಂಸ್ಕೃತಿಕ ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಮ್ಮನ್ನ ನಾವು ತೊಡಗಿಸಿಕೊಳ್ಳುವುದು ಹೇಗೆ ಎಂಬುದನ್ನು ಅರ್ಥ ಮಾಡಿಸಿ, ಕನ್ನಡ ಸಂಘ ಮತ್ತು ನಾಟಕ ಸಂಘಗಳ ಉದ್ಘಾಟನೆಯನ್ನು ಮಾಡಿಸಿ ಅದರಲ್ಲಿ ಅಧ್ಯಕ್ಷಳನ್ನಾಗಿ ಮಾಡಿ, ಎಲ್ಲಾ ಸಾಹಿತಿಗಳ ಮನೆಗೂ ಹೋಗುವ ಸೌಭಾಗ್ಯವನ್ನು ಕಲ್ಪಿಸಿಕೊಟ್ಟಂತಹ ಸಾಹಿತಿಗಳು ನಮ್ಮ ಅನಾಜಿ ಅವರು. ಜ್ಞಾನಪೀಠ ಪುರಸ್ಕೃತ ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಮಲ್ಲಿಗೆಯ ಕವಿ ಎಂದು ಪ್ರಸಿದ್ಧರಾದ ಕೆ.ಎಸ್. ನರಸಿಂಹಸ್ವಾಮಿ, ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ್ ಕಂಬಾರ್, ಸೀತಾರಾಂ ಜಾಗೀರ್‌ದಾರ್, ಎಂ.ಕೆ ಇಂದಿರಾ, ನಾಡಿಗೇರ ಕೃಷ್ಣರಾಯರು, ಎಸ್.ಎಲ್. ಭೈರಪ್ಪನವರು, ಎಸ್.ಜಿ. ಸಿದ್ಧರಾಮಯ್ಯನವರು, ದಲಿತ ಕವಿ ಸಿದ್ಧಲಿಂಗಯ್ಯನವರು, ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಒಂದೇ ಎರಡೇ ಅನೇಕ ಕವಿಗಳ ಮನೆಗೆ ನಮ್ಮನ್ನು ಕಳಿಸಿಕೊಡುವುದರ ಮೂಲಕ ಕನ್ನಡ ಸಂಘದ ಚಟುವಟಿಕೆಗಳನ್ನ ಜೀವಂತವಾಗಿಸಿದಂತಹವರು ಅತ್ಯಂತ ಚಟುವಟಿಕೆಯ ಅನಾಜಿ ಅವರು. ಭರತನಾಟ್ಯ ಕಲಾವಿದೆಯಾದ ನನ್ನನ್ನು ಪ್ರತಿಯೊಂದು

ಸಾಂಸ್ಕೃತಿಕ ವೇದಿಕೆಯಲ್ಲಿಯೂ ಸ್ವಾಗತ ನೃತ್ಯಕ್ಕೆ ನನಗೆ ಅವಕಾಶ ಕಲ್ಪಿಸಿಕೊಟ್ಟು ಕಾಲೇಜಿಗೆ ಕೀರ್ತಿಯನ್ನು ತಂದು ಕೊಡಲು ಅವಕಾಶ ಒದಗಿಸಿದ ಅನಾಜಿಯವರು ನನಗೆ ಅತ್ಯಂತ ಶ್ರೇಷ್ಠ ಕಾಣಿಕೆ ನೀಡಿದ್ದಾರೆ. ಐಚ್ಛಿಕ ಕನ್ನಡದಲ್ಲಿ ಚಿನ್ನದ ಪದಕವನ್ನು ಪಡೆಯಬೇಕೆನ್ನುವ ಸದಾಶಯದಲ್ಲಿ ಪ್ರತಿ ಭಾನುವಾರ ಮನೆಗೆ ಕರೆಸಿಕೊಂಡು ಹತ್ತು ಪುಸ್ತಕಗಳನ್ನು ಕೊಟ್ಟು, ಒಂದು ವಾರದಲ್ಲಿ ಓದಿ ಪುಸ್ತಕಗಳನ್ನು ಹಿಂದಿರುಗಿಸಬೇಕೆಂದು ತಿಳಿಸಿ ಶಿಸ್ತನ್ನು ಕಲಿಸಿದರು. ಇಂದು ನಾನು ನನ್ನದೇ ಆದಂತಹ ವೈಯಕ್ತಿಕ ಗ್ರಂಥಾಲಯ ಇದೆ ಎಂದು ಹೆಮ್ಮೆಯಿಂದ ಹೇಳಬೇಕೆಂದರೆ ಅದಕ್ಕೆ ಕಾರಣೀಭೂತರು. ನನ್ನ ಹತ್ತಿರ ಬಂದು ಹತ್ತರಿಂದ ಹದಿನೈದು ಸಾವಿರ ಪುಸ್ತಕಗಳನ್ನು ಕೊಟ್ಟು ಓದಿಸಿರುವಂತಹ, ಓದುವ ಹುಚ್ಚು ಹಿಡಿಸಿರುವ ಮೇಷ್ಟ್ರು. ನಾನು ಬರೆದ ಸಣ್ಣ ಪುಟ್ಟ ಕವಿತೆಗಳಿಗೆ ಒಂದು ಹೊಸ ಮೆರುಗನ್ನು ಕೊಟ್ಟು ಅವು ಪ್ರಕಟವಾಗುವಂತೆ ಮಾಡುವುದರಲ್ಲಿಯೂ ನೇರವಾಗಿ ಅವರು ನನ್ನನ್ನು ಕವಯಿತ್ರಿ ಮತ್ತು ಲೇಖಕಿಯಾಗಿ ಗುರ್ತಿಸಿಕೊಳ್ಳುವಲ್ಲಿ ಸಹಾಯ ಮಾಡುತ್ತಿದ್ದರು. ಇವರ ಪ್ರೋತ್ಸಾಹದಿಂದಲೇ ನನ್ನ ಚೊಚ್ಚಲ ಕವನ ಸಂಕಲನ “ಅಂತರಂಗದ ಮೃದಂಗ” ಪ್ರಕಟಣೆಗೊಳ್ಳಲು ಸಾಧ್ಯವಾಯಿತು. ಕಾಲೇಜಿನ ಪ್ರತಿ ವಾರ್ಷಿಕ ಸಂಚಿಕೆಯಲ್ಲಿ ನನ್ನ ಲೇಖನವನ್ನು ಬರೆಯಿಸಿ, ಪ್ರಕಟಿಸುತ್ತಿದ್ದು ನನಗೆ ಕೊಟ್ಟ ಅತ್ಯಂತ ದೊಡ್ಡ ಪ್ರೋತ್ಸಾಹ. ಈ ವಿದ್ಯಾರ್ಜನೆಯ ಸೇವೆಯಿಂದಲೇ ನಾನು ೧೯೮೩ ರ ಪದವಿಯಲ್ಲಿ ಐಚ್ಛಿಕ ಕನ್ನಡದಲ್ಲಿ ಅತ್ಯಂತ ಹೆಚ್ಚಿನ ಅಂಕ ತೆಗೆದುಕೊಂಡು ಕಾಲೇಜಿಗೆ ಪ್ರಥಮ Rank ತಂದು ಕೊಡುವುದರಲ್ಲಿ ಯಶಸ್ವೀ ವಿದ್ಯಾರ್ಥಿ ಎನ್ನಿಸಿಕೊಂಡಿದ್ದೆ. ಅಷ್ಟೇ ಅಲ್ಲ, ಸರ್ಕಾರದ ಸ್ಕಾಲರ್‌ಶಿಪ್ ಪಡೆಯುವಲ್ಲಿಯೂ ಕೂಡ ಅಶ್ವತ್ಥ ನಾರಾಯಣರವರ ಕಾಳಜಿ ಇವತ್ತಿಗೂ ಸ್ಮರಣೀಯ. ಇವರ ಈ ಪ್ರೋತ್ಸಾಹದಿಂದಲೇ ನಾನು ಮತ್ತೆ ಎಂ.ಎ. ಕನ್ನಡಕ್ಕಾಗಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿಯ ಕನ್ನಡ ಅಧ್ಯಯನ ಕೇಂದ್ರಕ್ಕೆ ಸೇರಿಕೊಳ್ಳಲು ಸಹಕಾರಿಯಾಯಿತು.

೧೯೮೩ ರಿಂದ ೧೯೮೫ ರವರೆಗೂ ನನ್ನ ಎಂ.ಎ. ಕನ್ನಡ ಸ್ನಾತಕೋತ್ತರ ಪದವಿಯಲ್ಲಿ ಗುರುಗಳ ಪಾತ್ರ ಬಹಳ ಮುಖ್ಯವಾದದ್ದು. ಪ್ರಾಚೀನ ಕನ್ನಡ ಸಾಹಿತ್ಯ, ಜಾನಪದ ಸಾಹಿತ್ಯ, ಭಾಷಾ ವಿಜ್ಞಾನ, ತೌಲನಿಕ ಅಧ್ಯಯನಗಳ ಜೊತೆಗೆ ನಾನು ಆಯ್ಕೆ ಮಾಡಿಕೊಂಡಿರುವಂತಹ ವಿಶೇಷ ಅಧ್ಯಯನ ಚಂಪೂ, ಎಲ್ಲಾ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರತಿ ಭಾನುವಾರ ನನಗೆ ಹತ್ತಾರು ಪುಸ್ತಕಗಳನ್ನು ಕೊಟ್ಟು ಸ್ನಾತಕೋತ್ತರ ಪದವಿಯಲ್ಲಿ ಅಧ್ಯಯನ ಮಾಡಲು ಸಹಕರಿಸಿದಂತಹ ಗುರು ಅನಾಜಿ ಅವರು.

ಯಲಹಂಕ ಉಪನಗರದಲ್ಲಿ ಇರುವಂತಹ ನಮ್ಮ ಮನೆಗೆ ಬರಲು ಆಹ್ವಾನಿಸಿದಾಗ ಅತ್ಯಂತ ಪ್ರೀತಿಯಿಂದ ಬಂದು ನಮ್ಮ ಅತಿಥಿ ಸತ್ಕಾರವನ್ನು ಸ್ವೀಕರಿಸಿ, ನಮ್ಮ ತಂದೆ-ತಾಯಿಯವರಿಗೆ ನನ್ನ ವ್ಯಕ್ತಿತ್ವವನ್ನು ಪರಿಚಯ ಮಾಡಿಸಿದಂತಹ ಗುರು. ಐಚ್ಛಿಕ ಕನ್ನಡ ಓದುವುದರಿಂದ ಮುಂದೊಂದು ದಿವಸ ಅತ್ಯುತ್ತಮ ಕನ್ನಡ ಅಧ್ಯಾಪಕಿ ಆಗುತ್ತಾಳೆ ಎಂದು ಹೇಳಿ ನಮ್ಮ ತಂದೆ-ತಾಯಿ ಎದುರು ಭವಿಷ್ಯವನ್ನು ನುಡಿದವರು. ಅವರು ಹೇಳಿದ ರೀತಿಯಲ್ಲೇ ಸ್ನಾತಕೋತ್ತರ ಪದವಿಯಲ್ಲಿ ನಾನು ಅವರ ಮಾರ್ಗದರ್ಶನದಲ್ಲಿ, ಅವರು ನೀಡಿದ ಪುಸ್ತಕಗಳ ಓದಿನಲ್ಲಿ ಅತ್ಯುತ್ತಮವಾದಂತಹ ಓದುಗಾರಿಕೆಯನ್ನು, ಮಾತುಗಾರಿಕೆಯನ್ನು, ಬರವಣಿಗೆಯ ಕೌಶಲ್ಯವನ್ನು ಬೆಳೆಸಿಕೊಂಡು ಭಾಷಾ ವಿಜ್ಞಾನದ ವಿಶೇಷ ವಿದ್ಯಾರ್ಥಿ ಎನಿಸಿಕೊಂಡೆ, ಅಲ್ಲಿಯೂ ಕೂಡ ನನ್ನ ಛಾಪನ್ನು ಮೂಡಿಸಲು ಸಾಧ್ಯವಾಯಿತು. ನಿರ್ದೇಶಕರಾಗಿರುವಂತಹ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು, ಚಿದಾನಂದಮೂರ್ತಿ, ಬರಗೂರು ರಾಮಚಂದ್ರಪ್ಪ, ದಲಿತ ಕವಿ ಸಿದ್ಧಲಿಂಗಯ್ಯ, ಡಾ. ಚಂದ್ರಶೇಖರ ಕಂಬಾರ, ಡಾ. ಜಯದೇವ, ಡಾ. ಎಸ್. ವಿದ್ಯಾಶಂಕರ್, ಡಾ. ಹಂಪನಾ, ಡಾ. ಕೆ.ವಿ. ನಾರಾಯಣ, ಡಾ. ಬಸವರಾಜ ಕಲ್ಗುಡಿ ಸರ್ ಇವರೆಲ್ಲರ ಸಂಗಡದಲ್ಲಿ ನಾನು ಕರ್ನಾಟಕ ಸಂಘದ ಅಧ್ಯಕ್ಷಿಣಿಯಾಗಿ

ಮತ್ತೆ ಕನ್ನಡದ ಚಟುವಟಿಕೆಗಳನ್ನು ಉತ್ತುಂಗ ಶಿಖರಕ್ಕೇರಿಸಲು ಸಾಧ್ಯವಾಯಿತು. ಕನ್ನಡ ಅಧ್ಯಯನ ಕೇಂದ್ರದಲ್ಲಿ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ನಿರ್ದೇಶನದಂತೆ ಸಾಹಿತ್ಯಾತ್ಮಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಕೂಡ ತೊಡಗಿಸಿಕೊಂಡು ಅಲ್ಲಿಯೂ ಕೂಡ ಭಾಷಾ ವಿಜ್ಞಾನದಲ್ಲಿ ೨ನೇ Rank ಪಡೆಯಲು ಸಾಧ್ಯವಾಯಿತು. ಗುರುಗಳ ಭವಿಷ್ಯ ವಾಣಿಯಂತೆ ನಾನು ಮುಂದೆ ಬಿ.ಎಂ.ಎಸ್. ವಿದ್ಯಾಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕಿಯಾಗಿ ಸುದೀರ್ಘವಾದಂತಹ (೩೪) ವರ್ಷಗಳ ಕಾಲ ಕನ್ನಡ ವಿಭಾಗದ ಮುಖ್ಯಸ್ಥಳಾಗಿ ಅತ್ಯಂತ ನೀತಿ, ನಿಷ್ಠೆಯ, ಕನ್ನಡ ಅಧ್ಯಾಪಕಿಯಾಗಿ ನನ್ನ ಸೇವೆಯನ್ನು ಸಲ್ಲಿಸಿರುವುದು ಮೇಷ್ಟ್ರಿಗೆ ಸಲ್ಲಬೇಕಾದಂತಹ ಗೌರವ.

ಒಬ್ಬ ಮೇಷ್ಟ್ರು ಹೇಗೆ ಇರಬೇಕು ತರಗತಿಗೆ ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು, ಗುರು ಶಿಷ್ಯರ ಸಂಬಂಧ ಹೇಗಿರಬೇಕು, ಪಠ್ಯವನ್ನು ಯಾವ ರೀತಿ ಸಿದ್ಧಮಾಡಿಕೊಳ್ಳಬೇಕು, ಇವೆಲ್ಲವನ್ನು ಅರ್ಥಮಾಡಿಕೊಳ್ಳುವುದಕ್ಕೆ ನಾನು ಬಿ.ಎಂ.ಎಸ್. ಕನ್ನಡ ವಿಭಾಗದ ಅಧ್ಯಾಪಕಿಯಾಗಿ ಸೇರಿಕೊಂಡಾಗ ನಿರಂತರವಾಗಿ ಮೇಷ್ಟ್ರು ಮನೆಗೆ ಹೋಗುವುದು, ಇರುವಂತಹ ಎಲ್ಲಾ ಪಠ್ಯ ಪುಸ್ತಕಗಳನ್ನು ಅನಾಜಿಯವರ ಹತ್ತಿರ ತೆಗೆದುಕೊಂಡು ಹೋಗಿ ಇಡುವುದು, ಅನೇಕ ಸಲಹೆ ಸೂಚನೆಗಳನ್ನು ಪಡೆದುಕೊಳ್ಳುವುದು ಇವೆಲ್ಲ ನಡೆಯುತ್ತಿತ್ತು. ಮೇಷ್ಟ್ರು ಹಳೆಗನ್ನಡದ ಪದ್ಯವನ್ನು ಬೋಧನೆ ಮಾಡುವಾಗ ನಾವು ಮಾಡಿಕೊಳ್ಳಬೇಕಾದ ಸಿದ್ಧತೆಗಳನ್ನು ಎಷ್ಟು ಚೆನ್ನಾಗಿ, ಸರಳವಾಗಿ ಹೇಳಿಕೊಟ್ಟರು ಎಂದರೆ ಆ ಕಾವ್ಯ ಭಾಗದ ಪದ ವಿಭಾಗಕ್ಕಾಗಿ ಸದಾ ಒಂದು ಬಿಳಿಹಾಳೆಯನ್ನು ಇಟ್ಟುಕೊಳ್ಳುವುದು, ಮೊದಲೇ ತಯಾರಿ ಮಾಡಿಕೊಂಡು ಶಬ್ದಾರ್ಥಗಳನ್ನು ಪದಗಳನ್ನು ರೂಪಕಾಲಂಕಾರಗಳನ್ನು, ಉಪಮಾಲಂಕಾರಗಳನ್ನು ಅಲ್ಲಿ ಇರುವಂತಹ ವಿಶೇಷಣಗಳನ್ನು ವಿದ್ಯಾರ್ಥಿಗಳಿಗೆ ಕೇವಲ ಪರೀಕ್ಷಾ ದೃಷ್ಟಿಯಿಂದ ಪಾಠ ಮಾಡದೇ ಸಾಹಿತ್ಯದ ಬಗ್ಗೆ ಅಭಿರುಚಿ ಮೂಡಿಸುವಂತೆ ತಿಳಿಸಿ ಹೇಳಬೇಕು. ನಿಜವಾದ ಕನ್ನಡ ಅಧ್ಯಾಪಕಿಯಾಗಲು ಮೇಷ್ಟ್ರು ಅನೇಕ ಮಾರ್ಗದರ್ಶನ, ಸಲಹೆ, ಸೂಚನೆಗಳನ್ನು ಎಷ್ಟೋ ಸಲ ಬರೆದುಕೊಟ್ಟ ನಿದರ್ಶನಗಳು ಉಂಟು. ಪಠ್ಯ ಪುಸ್ತಕಗಳನ್ನು ಅವರ ಮನೆಗೆ ತೆಗೆದುಕೊಂಡು ಹೋಗಲಿಲ್ಲ ಎಂದರೆ ಅವರಿಗೆ ಹೆಚ್ಚು ಸಿಟ್ಟು ಬರುತ್ತಿತ್ತು.

ಪಠ್ಯ ಪುಸ್ತಕ ಇಲ್ಲದೆ ಬರಬಾರದು, ಪಠ್ಯ ಪುಸ್ತಕವಿಲ್ಲದೇ ಬಂದರೆ ಏನನ್ನು ನಾನು ಮಾರ್ಗದರ್ಶನ ಮಾಡಬೇಕು ಎಂದು ಸಿಟ್ಟಾಗುತ್ತಿದ್ದರು. ಆಧಾರ ಗ್ರಂಥಗಳನ್ನು ಹೇಗೆ ಮೊದಲೇ ಸಿದ್ಧತೆ ಮಾಡಿ ಇಟ್ಟುಕೊಳ್ಳಬೇಕು, ಹಿಂದುಳಿದ ವಿದ್ಯಾರ್ಥಿಗಳಿಗೆ ಯಾವ ರೀತಿ ನೋಟ್ಸ್ ಅನ್ನು ಮಾಡಿ ಇಟ್ಟುಕೊಳ್ಳಬೇಕು ಎಂದು ಇವೆಲ್ಲವನ್ನು ಕೂಡ ಒಬ್ಬ ಪ್ರಾಮಾಣಿಕವಾದಂತಹ ಅಧ್ಯಾಪಕ ಹೇಗೆ ವಿದ್ಯಾರ್ಥಿಗಳಿಗೆ ಸಾಹಿತ್ಯವನ್ನು ಬೋಧನೆ ಮಾಡುವುದರ ಜೊತೆಯಲ್ಲಿಯೇ ಆಸಕ್ತಿಯನ್ನು ಮೂಡಿಸಬೇಕು, ಎಂದು ನಮ್ಮ ಮೇಷ್ಟ್ರು ನಮಗೆ ಹೇಳಿ ಕೊಟ್ಟಿದ್ದಾರೆ. ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವಾಗ ಅನೇಕ ಪ್ಯಾರಾಮೀಟರ್‌ಗಳನ್ನು ನನಗೆ ಅವರು ಹೇಳಿಕೊಟ್ಟಿದ್ದು, ಹಲ್ಮಿಡಿ ಶಾಸನದಿಂದ ಹಿಡಿದು ಇವತ್ತಿನವರೆಗೂ ಇರುವಂತಹ ಸಾಹಿತ್ಯದ ವಿಭಾಗ, ಕ್ರಮ, ಕನ್ನಡ ಸಾಹಿತ್ಯ ಚರಿತ್ರೆ ಎಲ್ಲಾ ಪುಸ್ತಕಗಳನ್ನು ನನಗೆ ಕೊಟ್ಟು ಇಷ್ಟನ್ನು ಓದಿಕೊಂಡು ತರಗತಿಗೆ ಹೋಗಬೇಕೆನ್ನುವಂತಹದನ್ನು ನನಗೆ ಸರ್ ಹೇಳಿಕೊಡುತ್ತಿದ್ದರು. ಸರ್ ಜೊತೆಯಲ್ಲಿ ಲಕ್ಷ್ಮೀದೇವಿ ಮೇಡಂ ಕೊಡುತ್ತಿದ್ದ ಸಲಹೆಗಳು ನಾನು ನಿರಂತರವಾಗಿ ಯಶಸ್ವಿ ಅಧ್ಯಾಪಕಿಯಾಗಲು ನೆರವಾದವು. ಕನ್ನಡ ಸಂಘದ ಯಾವುದೇ ಕಾರ್ಯಕ್ರಮವನ್ನು ಮಾಡಬೇಕೆಂದರೂ ಕೂಡ ಸರ್ ನನಗೆ ಅತಿಥಿಗಳನ್ನು ಗುರ್ತಿಸಿ ಕೊಡುವುದರ ಜೊತೆಗೆ ನನಗೆ ಸಂಪರ್ಕ ಕೊಂಡಿಯಾಗಿ ಸರ್ ತಂದೆಯಾಗಿ, ಅಣ್ಣನಾಗಿ, ಎಷ್ಟೋ ಸಲ ಮಾರ್ಗದರ್ಶಕರಾಗಿ ನನ್ನ ಮೆಂಟರ್ ಆಗಿ, ನನ್ನ ಅಧ್ಯಾಪನ ವೃತ್ತಿಯಲ್ಲಿ ಜೊತೆ

ಜೊತೆಯಾಗಿ ನಿಂತಿರುವಂತಹ ಮೇಷ್ಟ್ರು. ನನ್ನೆಲ್ಲಾ ನೋವು ನಲಿವುಗಳನ್ನು ಬದಿಗಿಟ್ಟು ನಾನೊಬ್ಬಳು ಉತ್ತಮ ಶಿಕ್ಷಕಿಯಾಗುವ ಕಡೆ ಹೇಗೆ ಸಾಗಬೇಕು ಎನ್ನುವ ದಾರಿಯನ್ನು ತೋರಿಸಿದಂತಹ ಮೇಷ್ಟ್ರು. ಅವರ ಮಾರ್ಗದರ್ಶನದಲ್ಲಿ ಕನ್ನಡ ಅಧ್ಯಾಪನದ ಜೊತೆಜೊತೆಯಲ್ಲಿ, ನನಗೆ ಐವತ್ತು ಸಂಶೋಧನ ಲೇಖನಗಳನ್ನು ಬರೆದು ಪ್ರಕಟಿಸಲು ಸಾಧ್ಯವಾಯಿತು. ಈ ಹೊತ್ತಿನಲ್ಲಿ ಬನಾರಸ್ ಹಿಂದು ವಿಶ್ವವಿದ್ಯಾಲಯದ ಡೀನ್ ಮತ್ತು ಛೇರ್‌ಮನ್ ಆಗಿರುವಂತಹ ಡಾ. ವಿ. ಶಿವಾನಂದ ವಿರಕ್ತಮಠ ಅವರ ಮಾರ್ಗದರ್ಶನದಲ್ಲಿ ಪಿ.ಹೆಚ್.ಡಿ., (Ph.D.,) ಮಾಡುವ ಅವಕಾಶ ಬಂದಾಗ ಅಶ್ವತ್ಥನಾರಾಯಣ ಸರ್ ಇಡೀ ಪಿ.ಹೆಚ್.ಡಿ., ಅಧ್ಯಯನಕ್ಕೆ ಪುಸ್ತಕಗಳ ಜೊತೆಯಲ್ಲಿ ಅನೇಕ ರೀತಿಯ ಸಲಹೆಗಳನ್ನು ಕೊಟ್ಟು (Ph.D) ಪಿ.ಎಚ್.ಡಿ., ಯನ್ನು ಬೇಗ ಮುಗಿಸು ಎನ್ನುವಂತಹ ಉತ್ಸಾಹಿ ಮೆಂಟರ್ ಆಗಿದ್ದು ಸ್ಮರಣೀಯ. ಅತ್ಯಂತ ಶಿಸ್ತು ಮತ್ತು ಸಂಯಮದ ಜ್ಞಾನಿಯಾದಂತಹ ಡಾ. ಶಿವಾನಂದ ವಿರಕ್ತಮಠ ಅವರ ಮಾರ್ಗದರ್ಶನದಲ್ಲಿ ನಾನು ವಚನ ಮತ್ತು "ಸಮೂಹ ಸಂವಹನ, ಒಂದು ಅಧ್ಯಯನ" ಎಂಬ ಪಿ.ಹೆಚ್.ಡಿ., ಯನ್ನು ಮುಗಿಸಲು ಸಾಧ್ಯವಾಯಿತು.

ಅನಂತರ ನಾನು ಸಂಶೋಧನ ಮಾರ್ಗದರ್ಶಕಳಾಗಿ ಹದಿನೈದು (೧೫) ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಹದಿನಾಲ್ಕು ಎಂ.ಫಿಲ್. ವಿದ್ಯಾರ್ಥಿಗಳಿಗೆ ಯಶಸ್ವಿ ಮಾರ್ಗದರ್ಶನ ಮಾಡಿ ಅವರೆಲ್ಲರೂ ಇವತ್ತಿನ ದಿವಸ ಕನ್ನಡ ಅಧ್ಯಾಪಕರಾಗಿ ಜೀವನವನ್ನು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ಇದು ಒಬ್ಬ ಶ್ರೇಷ್ಠ ಗುರುವಿನ ಅಶೀರ್ವಾದ ಎಂದೇ ಭಾವಿಸುತ್ತೇನೆ.

ನಮ್ಮ ಮೇಷ್ಟ್ರು ಜಿ. ಅಶ್ವತ್ಥನಾರಾಯಣ ಅವರು ಅಂತರಂಗದಲ್ಲಿ ಹೇಗೋ ಬಹಿರಂಗದಲ್ಲಿಯೂ ಕೂಡ ಹಾಗೆಯೇ. ನನ್ನೊಡನೆ ಗುರುವಿನ ಸ್ಥಾನಕ್ಕೆ ತಕ್ಕಂತೆ ಘನ ವ್ಯಕ್ತಿತ್ವವನ್ನು ಮೆರೆದಿರುವಂತಹ ವಿಶೇಷ ಮೇಷ್ಟ್ರು. ಗುರುಪೌರ್ಣಮಿಯಂದು ಪ್ರತಿ ವರ್ಷವೂ ಕೂಡ ಅವರ ಆಶೀರ್ವಾದವನ್ನು ಪಡೆದು ಗುರುವೃಂದಕ್ಕೆ ನನ್ನದೇ ಆದಂತಹ ಕಾಣಿಕೆಯನ್ನು ಸಲ್ಲಿಸುವಂತಹ ಶಿಷ್ಯಳೆನಿಸಿಕೊಂಡಿದ್ದೇನೆ. ಅವರಿಗೆ ನಾವು ಹಣ್ಣು, ಹೂವು ಏನನ್ನು ಕೊಟ್ಟರೂ ಸಮಾಧಾನವಾಗುತ್ತಿರಲಿಲ್ಲ ಅವರಿಗೆ ಬೇಕಾಗಿರುವುದು ಪುಸ್ತಕ, ಪುಸ್ತಕವನ್ನು ಗುರುಪೌರ್ಣಮಿಯಂದು ನಾನು ನನ್ನ ಶಿಷ್ಯರೊಂದಿಗೆ ತೆಗೆದುಕೊಂಡು ಹೋಗಿ ಪರಿಚಯ ಮಾಡಿಸಿ ಅವರ ಗ್ರಂಥಾಲಯದಲ್ಲಿರುವಂತಹ ಸಾವಿರಾರು ಪುಸ್ತಕಗಳೊಡನೆ ಅವರನ್ನು ಕಂಡು ಸಾಕ್ಷಾತ್ ಸರಸ್ವತಿ ದೇವಿಯೆ ಮೈದೋರಿ ಬಂದಂತೆ ನಮಗೆ ಕಾಣಿಸುತ್ತಿತ್ತು. ಪುಸ್ತಕದಲ್ಲಿ ಬೆರೆತುಹೋಗುವಂತಹ ಇವರ ತಮ್ಮ ವೈಯಕ್ತಿಕ ಗ್ರಂಥಾಲಯದಲ್ಲಿ ಸಾವಿರಾರು ಪುಸ್ತಕಗಳನ್ನು ಕ್ರಮಬದ್ಧವಾಗಿ ಜೋಡಿಸಿದ ರೀತಿ, ವರ್ಣಮಾಲೆಯ ಮುಖಾಂತರ ಯಾವುದೇ ಪುಸ್ತಕವನ್ನು ಕೇಳಿದರೂ ಕೂಡ ನಮಗೆ ತೆಗೆದುಕೊಡುವಂತಹ ಧೀಮಂತ ವ್ಯಕ್ತಿತ್ವ ಹಾಗೂ ಪುಸ್ತಕದ ಬಗ್ಗೆ ಅತ್ಯಂತ ಸುಸಂಸ್ಕೃತ ವ್ಯಕ್ತಿತ್ವವನ್ನು ಪಡೆದಿರುವಂತಹ ಅನಾಜಿ ಸರ್ ರವರು. ಯಾರಿಗೆ ಪುಸ್ತಕವನ್ನು ಕೊಟ್ಟರೂ ತಮ್ಮ ಲೆಡ್ಜರ್‌ನಲ್ಲಿ ಬರೆಸಿಕೊಂಡು ಸಹಿಯನ್ನು ತೆಗೆದುಕೊಂಡು ಯಾವ ದಿನಾಂಕದಂದು ಹಿಂದಿರುಗಿಸುತ್ತೀರ ಎಂದು ಕೇಳಿ ನಮಗೆ ಪುಸ್ತಕವನ್ನು ಕೊಡುತ್ತಿದ್ದರು. ಇಡೀ ನನ್ನ ಶಿಷ್ಯವೃಂದವನ್ನು ಪ್ರತಿ ಗುರುಪೌರ್ಣಮಿಯಲ್ಲಿ ಕರೆದುಕೊಂಡು ಹೋಗಿ ಆಶೀರ್ವಾದ ಪಡೆಯುವುದು ಸಂಭ್ರಮವೋ ಸಂಭ್ರಮ. ಅಂತಹದೊಂದು ನಿರಂತರ ಸಂಬಂಧ ಅನಾಜಿಯವರ ವ್ಯಕ್ತಿತ್ವದ ಬಗೆಗೆ ನನಗೆ ದೈವೀಭಾವನೆಯೊಂದನ್ನು ಮೂಡಿಸಿರುವುದು ಮತ್ತೊಂದು ಆಯಾಮ.

ಸೆಪ್ಟೆಂಬರ್ ೦೫ ರಂದು ಶಿಕ್ಷಕರ ದಿನಾಚರಣೆ. ಅಂದು ಸರ್ವಪಲ್ಲಿ ರಾಧಾಕೃಷ್ಣನ್ ಅವರ ಪ್ರತಿರೂಪದಂತೆ ಇರುವ ಅನಾಜಿಯವರನ್ನು ಭೇಟಿಯಾಗುವ ಅತ್ಯಂತ ಮುಖ್ಯ ಕಾರ್ಯಕ್ರಮವನ್ನು ನಾನು ನನ್ನ ಜೀವನದಲ್ಲಿ ರೂಢಿಸಿಕೊಂಡಿದ್ದೆ. ಶಿಕ್ಷಕರ ದಿನಾಚರಣೆಯಂದು ಸಂಜೆ ಅವರ ಮನೆಗೆ

ಹೋಗಿ ನಾನು ಆಶೀರ್ವಾದ ಪಡೆಯಲಿಲ್ಲ ಎಂದರೆ ಅದು ನನ್ನ ಶಿಷ್ಯ ಜೀವನಕ್ಕೆ ಸಲ್ಲಿಸುವ ಅಗೌರವವೆಂದೇ ಭಾವಿಸಿಕೊಂಡು ಯಾವ ವರ್ಷವೂ ಕೂಡ ತಪ್ಪಿಸದೇ ದಂಪತಿಗಳನ್ನು ಭೇಟಿ ಮಾಡುತ್ತಿದ್ದೆ. ಇದು ಶಿಕ್ಷಕರ ದಿನಾಚರಣೆಯಂದು ಗುರುಶಿಷ್ಯರ ಸಂಬಂಧ ಹೇಗಿರಬೇಕೆಂಬುದರ ಬಗೆಗೆ ನನ್ನೊಳಗೆ ನಾನೇ ಕಂಡುಕೊಂಡಂತ ಪವಿತ್ರ ದಾರಿ. ಶಿಕ್ಷಕರ ದಿನಾಚರಣೆಯಂದು ಗುರುದಂಪತಿಗಳಿಗೆ ಶಿರಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸಿ ಆರ್ಶೀವಾದವನ್ನು ಪಡೆದುದರಿಂದಲೇ ನಾನು ನಿರಂತರವಾಗಿ ಶಿಷ್ಯವೃಂದವನ್ನು ಪಡೆಯಲು ಸಾಧ್ಯವಾಯಿತು ಎನ್ನುವುದು ಮತ್ತೊಂದು ಮರೆಯಲಾಗದಂತಹ ವಿದ್ಯಮಾನ. ಒಳ್ಳೆಯ ಶಿಕ್ಷಕ ಹೇಗೆ ಒಳ್ಳೆ ಶಿಷ್ಯರಿಗೆ ಆಕೃತಿಯನ್ನು ಕೊಡುತ್ತಾರೆ ಎನ್ನುವುದು ಶಿಕ್ಷಕರ ದಿನಾಚರಣೆಯ ಸಂಭ್ರಮದಂದು ನಾನು ಕಂಡುಕೊಂಡಂತಹ ಬದುಕಿನ ಸತ್ಯ.

ಕನ್ನಡ ರಾಜ್ಯೋತ್ಸವ ಸಮಾರಂಭವೇ ಆಗಿರಲಿ, ಕಾಲೇಜುಗಳಲ್ಲಿ ವಿಚಾರ ಸಂಕೀರಣಗಳಾಗಲೀ, ಕವಿಗೋಷ್ಠಿಗಳಾಗಿರಲಿ, ಸಾಹಿತ್ಯಾತ್ಮಕವಾದಂತಹ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡರೂ. ಮೊದಲು ನಾನು ಆಹ್ವಾನ ನೀಡುತ್ತಿದ್ದುದು ಅಶ್ವತ್ಥನಾರಾಯಣ ಅವರಿಗೆ. ಕಾಲೇಜಿನಲ್ಲಿ ನಡೆಯುವಂತಹ ಅನೇಕ ಕಾರ್ಯಚಟುವಟಿಕೆಯಲ್ಲಿ ಭಾಗಿಯಾಗುವುದರೊಡನೆ ಒಂದು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದು ಹೇಗೆ ಎಂಬುದನ್ನೂ ಅವರು ಕಲಿಸಿಕೊಟ್ಟರು. ಸಮಯ ಪ್ರಜ್ಞೆ, ಶಿಸ್ತು, ಆಹ್ವಾನ ಮಾಡಿರುವಂತಹ ಅತಿಥಿಗಳನ್ನು ಗೌರವಿಸಬೇಕಾದಂತಹ ರೀತಿ, ಪ್ರತಿ ಅತಿಥಿಗಳಿಗೂ ಕೂಡ ಒಂದು ಭಾವಚಿತ್ರವನ್ನು ಮನೆಗೆ ಹೋಗಿ ಕೊಟ್ಟುಬರುವಂತಹ ಒಂದು ನೀತಿಯನ್ನು ಹಾಕಿಕೊಟ್ಟರು. ಯಾವುದೇ ಸಾಹಿತ್ಯಾತ್ಮಕ ಚಟುವಟಿಕೆಗಳನ್ನು ಹೇಗೆ ಮಾಡಬೇಕೆಂದು ಕೇಳಿದ ಕೂಡಲೇ ಬ್ಯಾನರ್, ವೇದಿಕೆ, ವೇದಿಕೆ ಮೇಲೆ ಇಡಬೇಕಾದಂತಹ ಕಾರ್ಯಕ್ರಮ ಪಟ್ಟಿ, ಆಹ್ವಾನ ಪತ್ರಿಕೆ, ದೂರವಾಣಿ ಮೂಲಕ ಸಂಪರ್ಕಿಸಿ ಅವರಿಗೆ ಸಮಯವನ್ನು ಹೇಳುವಂತದ್ದು, ಅವರಿಗೆ ಸಿದ್ಧತೆ ಮಾಡಿಕೊಳ್ಳುವುದು, ಕರೆದುಕೊಂಡು ಬರುವುದಾಗಲೀ ಕರೆದುಕೊಂಡು ಹೋಗಿ ಬಿಡುವುದಾಗಲೀ ಪ್ರತಿಯೊಂದನ್ನು ಕೂಡ ಗುರುಗಳು ಅವರು ಶಿಸ್ತಿನಿಂದ ಕ್ರಮಬದ್ಧವಾಗಿ ಹೇಳಿಕೊಟ್ಟಿದ್ದರು. ಅದರಿಂದ ನಾನು ಇವತ್ತಿಗೂ ೬೦೦ ಕ್ಕೂ ಹೆಚ್ಚು ಕನ್ನಡ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲು ಸಾಧ್ಯವಾಗಿದೆ. ಸದಾ ನಮ್ಮ ಬೆಂಗಾವಲಾಗಿ ನಿಲ್ಲುವಂತಹ ಇವರು ವಿದ್ಯಾರ್ಥಿ ದೆಸೆಯಿಂದ ಹಿಡಿದು ಇವತ್ತಿನವರೆಗೂ ಕೂಡ ಜವಾಬ್ದಾರಿಯುತ ಗುರುವಾಗಿ ನಮ್ಮನ್ನು ಬೆಳೆಸುವಲ್ಲಿ ಸಕ್ರಿಯ ಪಾತ್ರಧಾರರಾಗಿದ್ದಾರೆ.

ಅನಾಜಿ ಸರ್ ಬಗ್ಗೆ ಹೇಳಬೇಕಾದಂತಹ ಮತ್ತೊಂದು ವಿಶೇಷತೆ ಕನ್ನಡ ಕಲಿಕೆ ಚಟುವಟಿಕೆ ಕೆ.ಎ.ಎಸ್., ಐ.ಎ.ಎಸ್., ಅಧಿಕಾರಿಗಳಿಗೆ ಸ್ವತಃ ಸರ್ಕಾರಿ ಕಾರ್ಯಕ್ರಮದಲ್ಲಿ ಕನ್ನಡ ಬೋಧನೆ ಮಾಡಿರುವಂತಹದು. ನಮ್ಮ ಕಾಲೇಜಿನಲ್ಲಿ ಕನ್ನಡೇತರರಿಗೆ ಕನ್ನಡ ಕಲಿಕೆಯ ಚಟುವಟಿಕೆ ಹಮ್ಮಿಕೊಳ್ಳುತ್ತೇನೆ ಎಂದು ಹೇಳಿದಾಗ, ಅನಾಜಿ ಸರ್ ಏಳು ದಿನದ ಸಪ್ತಾಹವನ್ನು ಹೇಗೆ ಮಾಡಬೇಕೆಂಬುದನ್ನು ನನಗೆ ತಿಳಿಸಿಕೊಟ್ಟು ಏಳು ದಿವಸವೂ ಮಧ್ಯಾಹ್ನ ೧:೩೦ ರಿಂದ ಸಂಜೆ ೫ ಗಂಟೆಯವರೆಗೂ ಕನ್ನಡೇತರರಿಗೆ ಕನ್ನಡ ಕಲಿಕಾ ಸಪ್ತಾಹದಲ್ಲಿ ವಯೋವೃದ್ಧರಾದ ತಾವೇ ಸಂಪನ್ಮೂಲ ವ್ಯಕ್ತಿಯಾಗಿ ಏಳು ಭಾಷೆಯ ಕನ್ನಡೇತರ ವಿದ್ಯಾರ್ಥಿಗಳಿಗೆ ಸರಳ ಕನ್ನಡವನ್ನು ಓದುವುದಕ್ಕೆ, ಮಾತನಾಡುವುದಕ್ಕೆ ಹೇಳಿಕೊಟ್ಟಂತಹ ಧೀಮಂತ ವ್ಯಕ್ತಿ. ಇವರು ನಡೆಸಿಕೊಟ್ಟ "ಕನ್ನಡೇತರರಿಗೆ ಕನ್ನಡ ಕಲಿಕಾ ಸಪ್ತಾಹ"ದ ಪರಿಣಾಮದಿಂದಾಗಿ ಈಗ ಆನ್‌ಲೈನ್‌ನಲ್ಲಿಯೂ ಕೂಡ ನಾವು ೪೦೦ ರಿಂದ ೫೦೦ ಕನ್ನಡೇತರರಿಗೆ ಕನ್ನಡ ಕಲಿಕೆಯನ್ನು ಹೇಳಿಕೊಡುವುದು ಸಾಧ್ಯವಾಗಿದೆ. ಅಂತಹ ಸರಳಗನ್ನಡದ ಮೇಷ್ಟ್ರು ಜಿ. ಅಶ್ವತ್ಥನಾರಾಯಣ ಅವರು. ಕನ್ನಡ ಎಂದರೆ ರೋಮಾಂಚಿತರಾಗುವ ಅನಾಜಿರವರು ಕನ್ನಡೇತರರಿಗೆ ಕನ್ನಡ ಕಲಿಸಲು ಸಂತೋಷದಿಂದ ಒಪ್ಪಿಕೊಂಡು ಆರಂಭದಿಂದ ಹಿಡಿದು ಅದರ

ವರದಿಯವರೆಗೂ ಕೂಡ ನಮ್ಮ ಜೊತೆ ಇದ್ದರು. ಬಿ.ಎಂ.ಎಸ್. ಮಹಿಳಾ ಕಾಲೇಜಿನಲ್ಲಿ ನ್ಯಾಕ್ ಮಾನ್ಯತೆಯನ್ನು ಪಡೆಯುವಂತಹ ಈ ಕೋರ್ಸ್, ಎಷ್ಟು ಶ್ರೇಷ್ಠ ಎಂಬುದನ್ನು ಅನಾಜಿಯವರು ತೋರಿಸಿಕೊಟ್ಟರು. ಇದರಿಂದ ನನ್ನ ವ್ಯಕ್ತಿತ್ವವೂ ರೂಪುಗೊಳ್ಳುವಲ್ಲಿ ನೆರವಾಯಿತು ಹಾಗೂ ಇವತ್ತಿಗೂ ಕೂಡ ನನಗೆ ಒಂದು ನಾಯಕತ್ವ ಪಟ್ಟವನ್ನು ತಂದುಕೊಡಲು, ಸಾಧ್ಯವಾಯಿತೆಂದು ಬಹಳ ಹರ್ಷದಿಂದ ಹೇಳಲು ಇಚ್ಛಿಸುತ್ತೇನೆ. ೨೦೨೩ ರಿಂದ ೨೦೨೫ ರವರೆಗೆ ಬಸವೇಶ್ವರ ವಾಣಿಜ್ಯ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲಳಾಗಿ ನ್ಯಾಕ್ ಮಾನ್ಯತೆ ತಂದುಕೊಡುವಲ್ಲಿ ಈ ನಾಯಕತ್ವದ ಗುಣಗಳು ಪ್ರಭಾವ ಬೀರಿದವು.

ಮುಖ್ಯವಾಗಿ ನನ್ನ ಜೀವನದ ಮತ್ತೊಂದು ಆಯಾಮಕ್ಕೆ ಕಾರಣವಾಗಿರುತಕ್ಕಂತದ್ದು, ೨೦೦೨ ರಲ್ಲಿ ನಮ್ಮ ಅಪ್ಪಾಜಿ ಲಿಂಗೈಕ್ಯರಾದಾಗ ೨೦೧೭ ರಲ್ಲಿ ನಮ್ಮ ಮಾತೃಶ್ರೀರವರು ಲಿಂಗೈಕ್ಯರಾದಾಗ ಅನಾಥಪ್ರಜ್ಞೆಯನ್ನು ಹೊಂದಿದ್ದ ನನಗೆ ತಂದೆ-ತಾಯಿಗಳ ರೂಪದಲ್ಲಿ ಕಂಡಂತವರು ಶ್ರೀಯುತ ಅಶ್ವತ್ಥ ನಾರಾಯಣ ಸರ್ ಮತ್ತು ಲಕ್ಷ್ಮೀದೇವಿರವರು. ತಂದೆ ತಾಯಿಯಂತೆ ವಾತ್ಸಲ್ಯ, ಮಮತೆ ಅಂತಃಕರಣ ಮಿಡಿಯುವಲ್ಲಿ ಅವರ ಒಡನಾಟ ಇನ್ನೂ ಹೆಚ್ಚಾಗಿ ಸಂಬಂಧ ಗಟ್ಟಿಗೊಳ್ಳುತ್ತಾ ಗುರು-ಶಿಷ್ಯರ ಸಂಬಂಧವನ್ನು ಮೀರಿದ ಪವಿತ್ರವಾದಂತಹ ಒಂದು ವಿದ್ಯಾದೀಕ್ಷೆಯ ದಾರಿ ಬೆಳಕನ್ನ ತೋರಿಸಿತು. ಇದರ ಪರಿಣಾಮವಾಗಿ ೨೦೨೪ ನೇ ನವೆಂಬರ್ ೨೫ ರಂದು ಮಗಳ ಮದುವೆಯ ಸಂದರ್ಭದಲ್ಲಿ ದಂಪತಿಗಳು ತಂದೆ-ತಾಯಿ ಸ್ಥಾನವನ್ನು ತುಂಬಿ ನನಗೆ ಧೈರ್ಯ-ಸ್ಥೈರ್ಯ ವಿಶ್ವಾಸವನ್ನು ನೀಡಿದ್ದರಿಂದ, ಅಂದುಕೊಂಡಿದ್ದಕ್ಕಿಂತ ಸಂಭ್ರಮದಿಂದ ಮಗಳ ಮದುವೆಯ ಕಾರ್ಯಕ್ರಮವನ್ನು ನೆರವೇರಿಸಲು ಸಾಧ್ಯವಾಯಿತು. ತಂದೆ-ತಾಯಿಗಳ ಸ್ಥಾನದಲ್ಲಿ ನಿಂತುಕೊಂಡು ತಂದೆ-ತಾಯಿಗಳು ಮಾಡಬೇಕಾದ ಎಲ್ಲಾ ಕಾರ್ಯವನ್ನು ನೆರವೇರಿಸಿಕೊಟ್ಟಂತಹ ಅಶ್ವತ್ಥನಾರಾಯಣ್ ದಂಪತಿಗಳು ನಾನು ಯಾವುದೇ ಭಯವಿಲ್ಲದೆ ಜೀವನದಲ್ಲಿ ಧೈರ್ಯದಿಂದ ಮುನ್ನುಗ್ಗಲು ಸಾಧ್ಯವಾದಂತಹ ಮತ್ತೊಂದು ಮಗಳ ಮದುವೆಯ ಸಂಭ್ರಮ. ಗುರು-ಶಿಷ್ಯರ ಸಂಬಂಧ ಕೇವಲ ತರಗತಿಗೆ ಮಾತ್ರ ಮೀಸಲಾಗದೆ ಅದರಾಚೆಯೂ ಅನೇಕ ಬಾಂಧವ್ಯಗಳು, ಅವರ್ಣನೀಯ ಮಾನವೀಯ ಸಂಬಂಧಗಳು ಏರ್ಪಡುವುದಕ್ಕೆ ಸಾಧ್ಯವಿದೆ. ಇದಕ್ಕೆ ಗುತುಗಳ ವ್ಯಕ್ತಿತ್ವ ಮತ್ತು ನಮ್ಮ ಗುರುಶಿಷ್ಯ ಸಂಬಂಧಗಳು ನಿದರ್ಶನ ಎಂದೆನಿಸಿದೆ.

****

ಅನನ್ಯ ಮಾರ್ಗದರ್ಶಕರು

ಸಂಧ್ಯಾ.ವಿ.
ಚರವಾಣಿ : ೯೯೮೬೧೬೪೮೯೦

.. ಸಾಧಿಸುವ ಛಲವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಸತ್ಯಕ್ಕೆ ಮರುಕಕ್ಕೆ ಚಿರತೆರೆದ ಎದೆಯೊಂದು..

ಪ್ರೊ. ವಿ. ಸೀತಾರಾಮಯ್ಯ ಅವರ ಈ ಪದ್ಯ ನಮ್ಮ ಮೇಷ್ಟ್ರು ಪ್ರೊ. ಅ.ನಾ.ಜಿ ಅವರಿಗೆಂದೇ ಬರೆದಂತಿದೆ.

ನಿರಂತರ ಅಧ್ಯಯನ, ಅಧ್ಯಾಪನ, ಬರವಣಿಗೆ, ಇತರರ ಬರವಣಿಗೆ ತಿದ್ದಿ ಮಾರ್ಗದರ್ಶನ ಮಾಡುವುದು, ಭಾಷಣ, ಗೋಷ್ಠಿಗಳನ್ನು ನಡೆಸಿಕೊಡುವುದು, ಹೀಗೆ, ಬಿಡುವಿಲ್ಲದ ಕಾರ್ಯಕ್ರಮಗಳೇ ಆದರೂ ಉತ್ಸಾಹದಿಂದ ತೊಡಗಿಕೊಳ್ಳುವುದು ಅವರ ಅಸಾಧ್ಯ ಶಕ್ತಿಯಾಗಿದೆ. ಒಟ್ಟೊಟ್ಟಿಗೆ ಹಲವು ಯೋಜನೆಗಳನ್ನು ಹಾಕಿಕೊಂಡು ನಡೆಸುವ ಅವರ ಕಾರ್ಯ ವೈಖರಿ ಬೆರಗು ಮೂಡಿಸುವಂಥದ್ದು. ಇಷ್ಟರ ನಡುವೆ ಒಮ್ಮೆಯೂ ಒಂದು ಕಾರ್ಯಕ್ರಮಕ್ಕೂ ತಡವಾಗಿ ಬರುವುದಿಲ್ಲ. ಅವರ ಸಮಯ ಪರಿಪಾಲನೆ, ಶಿಸ್ತು, ಕಾರ್ಯ ವೈಖರಿ ಅನುಕರಣೀಯ. ಒಮ್ಮೆ ಅವರು ಈ ಎಲ್ಲ ಕಾರ್ಯಗಳಿಗೂ ಸಮಯ ಹೊಂದಿಸಿಕೊಳ್ಳಲು ಹೇಗೆ ಸಾಧ್ಯ ಎಂದು ಕೇಳಿದಾಗ, ಅವರ ದಿನಚರಿಯಲ್ಲಿ ಮಾಡಬೇಕಾದ ಎಲ್ಲಾ ಕೆಲಸಗಳನ್ನೂ ಗುರುತು ಮಾಡಿಕೊಳ್ಳುತ್ತಿದ್ದ ಪುಟ್ಟ ಪುಸ್ತಕ ತೋರಿಸಿದರು. ಅದರಲ್ಲಿ, ತಾವು ಮಾಡಲಿರುವ ಸಣ್ಣ, ಪುಟ್ಟ ವಿಚಾರಗಳನ್ನೂ ಕೂಡ ಬರೆದಿಟ್ಟುಕೊಂಡು, ಕೆಲಸ ಮುಗಿದ ಮೇಲೆ ಗುರುತು ಹಾಕಿಕೊಂಡು, ಮಾಡದೇ ಉಳಿದಿರುವ ಕೆಲಸಗಳನ್ನು ಮುಂದಿನ ದಿನಗಳ ಪಟ್ಟಿಯಲ್ಲಿ ಸೇರಿಸಿಕೊಂಡು, ಆದ್ಯತೆಯ ಮೇರೆಗೆ ಮುಗಿಸಬೇಕಾದ ದಿನಾಂಕ, ಕೆಲಸ ಪೂರೈಸಿದ ದಿನಾಂಕ ಬರೆದಿಡುತ್ತಾರೆ. ಅವರ ಈ ಶಿಸ್ತು, ಅಪಾರವಾದ ಓದು, ನೆನಪಿನ ಶಕ್ತಿ, ಮಾತಿನ ಕಲೆ ಇವೆಲ್ಲಾ ಅವರ ಬಲ.

ಅನಾಜಿ ಅವರ ಪಾಠವನ್ನು ಮೊದಲಬಾರಿಗೆ ನಾನು ಬಿ.ಎಂ.ಶ್ರೀ ಪ್ರತಿಷ್ಠಾನದ ಹಳಗನ್ನಡ ತರಗತಿಯಲ್ಲಿ ಕೇಳಿದೆ. ನಾಲ್ಕು ದಿನಗಳ ತರಗತಿಗಳಲ್ಲಿ 'ವಿದ್ಯುಚ್ಚೋರನ ಕತೆ' ಪಾಠ ಮಾಡಿದರು. ಮೊದಲನೆಯ ದಿನ, ಪಠ್ಯಕ್ಕೆ ಪೂರಕವಾಗಿ ವಡ್ಡಾರಾಧನೆ, ಅದರ ವಿವಿಧ ಆವೃತ್ತಿಗಳು, ಗ್ರಂಥದ ಕಾಲ, ಕವಿಯ ವಿಚಾರ, ಉನ್ನತ ವಿಮರ್ಶೆ, ಈ ಕೃತಿಗೆ ಸಂಬಂಧಿಸಿದ ಇತರ ಲೇಖನಗಳು, ಪುಸ್ತಕಗಳು ಮೊದಲಾದ ವಿಚಾರಗಳನ್ನು ವಿವರಿಸುವಾಗ ಬಹಳ ಆಶ್ಚರ್ಯ ಆಯಿತು. ಎಷ್ಟೊಂದು ತಯಾರಿ

ನಡೆಸಿಕೊಂಡು ಬಂದಿದ್ದಾರೆ ಅಂತ. ಆದರೆ ಇವರು ಪಾಠ ಮಾಡುವುದಿರಲಿ, ಭಾಷಣಗಳಿರಲಿ, ಸಾಹಿತ್ಯ-ಸಾಹಿತಿಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಯಾರೇ ಮಾಹಿತಿ ಕೇಳಿದಾಗಲೂ, ಯಾವುದೇ ತಯಾರಿ ಇಲ್ಲದೆಯೂ ವಿಷಯಕ್ಕೆ ಪೂರಕವಾದ ಅಪಾರ ಮಾಹಿತಿ ನೀಡುತ್ತಾರೆ. ಇವರನ್ನು ಬಲ್ಲ ಎಲ್ಲರಿಗೂ ಇದು ತಿಳಿದಿರುವ ವಿಷಯ. ಇವರ ಮಾತಿನ ಕಲೆ ಕೂಡ ವಿಶೇಷವಾದದ್ದು, ಗಂಭೀರವಿಚಾರಗಳ ನಡುವೆ ಹಾಸ್ಯ, ಪ್ರಾಸ ಪದಗಳ ಬಳಕೆಯ ಮಾತಿನ ಶೈಲಿ, ಇಂದಿನ ಪೀಳಿಗೆಯವರು ಕಂಡಿರದ ಹಿರಿಯ ಸಾಹಿತಿಗಳ ಅನೇಕ ಸ್ವಾರಸ್ಯಕರ ಸಂಗತಿಗಳು ಪುಂಖಾನುಪುಂಖವಾಗಿ ಇವರ ಮಾತಿನಲ್ಲಿ ಕೇಳಬಹುದು. ಇವರೊಂದಿಗಿನ ಮಾತುಕತೆ, ಭಾಷಣ ಯಾವತ್ತೂ ವಿಷಯ ನಿಬಿಡವಾಗಿ, ಮಾಹಿತಿಗಳ ಭಂಡಾರದಿಂದ ಕೂಡಿರುತ್ತದೆ.

ಎಂ.ಫಿಲ್. ಕೋರ್ಸ್‌ವರ್ಕ್ ಮಾಡುವಾಗ ನಾವು ನಾಲ್ಕು ಜನ 'ಹಸ್ತಪ್ರತಿ' ಅಧ್ಯಯನವನ್ನು ಐಚ್ಛಿಕವಾಗಿ ತೆಗೆದುಕೊಂಡಿದ್ದೆವು. ತರಗತಿಗೆ ಹಾಜರಾಗುತ್ತಿದ್ದದ್ದು ಮಾತ್ರ ನಾನು, ಸಯ್ಯದ್ ಮುಯಿನ್ ಇಬ್ಬರೇ. ನಾನು ತರಗತಿಗೆ ಹೋಗುವುದು, ಯಾವಾಗಲೂ ಕನಿಷ್ಠ ಹತ್ತು ನಿಮಿಷಗಳಾದರೂ ತಡವಾಗಿಬಿಡುತ್ತಿತ್ತು. ಇಬ್ಬರಿರಲಿ, ಒಬ್ಬರಿರಲಿ, ಸಮಯಕ್ಕೆ ಸರಿಯಾಗಿ ಪಾಠ ಆರಂಭಿಸಿಬಿಡುತ್ತಿದ್ದರು. ಇಬ್ಬರೇ ವಿದ್ಯಾರ್ಥಿಗಳಿದ್ದರೂ, ಪಾಠಮಾಡುವಾಗ ನಿರಾಸಕ್ತಿ, ಬೇಸರ ಏನೂ ಅವರಲ್ಲಿ ಕಾಣುತ್ತಿರಲಿಲ್ಲ. ಉಪನ್ಯಾಸಕಿಯಾಗಿ ಕೆಲಸ ಮಾಡುವ ನನಗೆ, ಎಂದಾದರೋ ತರಗತಿಯಲ್ಲಿ ಹೀಗೆ ಬೆರಳೆಣಿಕೆಯ ಮಕ್ಕಳಿದ್ದರೆ, ಅನಾಜಿ ಅವರ ಹಸ್ತಪ್ರತಿ ತರಗತಿಯನ್ನು ನೆನೆಸಿಕೊಂಡು, ಉತ್ಸಾಹ ತರಿಸಿಕೊಳ್ಳುತ್ತೇನೆ.

ಎಂ.ಫಿಲ್.ನ dissertationಗಾಗಿ ನನಗೆ ಮತ್ತು ಮುಯಿನ್‌ಗೆ ಗೈಡ್ ಆಗಲು ಸರ್ ಒಪ್ಪಿದರು. ನಮ್ಮ ಕೆಲವು ಸಹಪಾಠಿಗಳು, ಅನಾಜಿ ಸರ್ ತುಂಬಾ strict, ತುಂಬಾ ಓದಿಸ್ತಾರೆ, ಎಷ್ಟು ಬರೆದರೂ ಒಪ್ಪುವುದಿಲ್ಲ, ಅವರ ಗೈಡೈನ್ಸ್‌ನಲ್ಲಿ ತುಂಬಾ ಕಷ್ಟ ಅಂತ ಹೆದರಿಸಿದ್ದರು. ನನಗಂತೂ, ಸರ್ ಗೈಡ್ ಆಗಲು ಒಪ್ಪಿದ್ದು, ನನ್ನ ಸುಕೃತ ಎಂದೇ ಸ್ಮರಿಸುತ್ತೇನೆ. ಒಂದು ವಿಷಯವನ್ನು ಅಧ್ಯಯನ ಮಾಡಬೇಕಾದಾಗ, ಅಗತ್ಯವಾದ ಮೊದಲ ತಯಾರಿ ಎಂದರೆ ಓದಬೇಕಾದ ಪುಸ್ತಕದ ಪಟ್ಟಿ bibliography. ಅದನ್ನು ಹೇಗೆ ಪಟ್ಟಿಮಾಡಬೇಕು ಎನ್ನುವ ಪ್ರಾಥಮಿಕ ಹಂತದ ತಯಾರಿಕೆಯಿಂದ ಆರಂಭಿಸಿ, ವಿಷಯವಾರು ಅಧ್ಯಾಯ, ಅದರಡಿಯ ಉಪವಿಭಾಗಗಳಲ್ಲಿ ವಿಂಗಡಿಸಿಕೊಳ್ಳುವ ಕ್ರಮ ಮೊದಲಾಗಿ ಅಂತಿಮ ಹಂತದ ವರೆಗಿನ ಹಲವಾರು ಸೂಕ್ಷ್ಮಗಳ ಬಗ್ಗೆ ಅವರು ಕಲಿಸಿದ ವಿಧಾನ, ಇಂದಿಗೂ ನನಗೆ ಮಾರ್ಗದರ್ಶನ ಮಾಡುತ್ತಿದೆ.

ಒಂದು ವರ್ಷದ ಎಂಫಿಲ್ ಕೋರ್ಸ್‌ನಲ್ಲಿ, ಮೊದಲ ಆರುತಿಂಗಳ ಕಾಲವು ತರಗತಿ, ಅಸೈನ್ಮೆಂಟ್ಸ್, ಪರೀಕ್ಷೆಗಳಲ್ಲೇ ಮುಗಿದು ಹೋಗುತ್ತದೆ. ಸಂಪ್ರಬಂಧ ರಚಿಸಲು ಕೇವಲ ನಾಲ್ಕೈದು ತಿಂಗಳ ಕಾಲ ಸಮಯ ಸಿಗುತ್ತದೆ. ನಾವು ವಿಷಯವನ್ನು ಆರಿಸಿಕೊಂಡು, ಅಧ್ಯಯನ ಆರಂಭಿಸುವಷ್ಟರಲ್ಲಿ ಅನಾಜಿ ಅವರು ಅಮೆರಿಕಾಗೆ ಹೋಗಬೇಕಾಯಿತು. ಆಗ ವಾಟ್ಸಪ್, ಮೆಸೆಂಜರ್ ಯಾವುದೂ ಇರಲಿಲ್ಲ. ಐಎಸ್‌ಡಿ ಕರೆಗಳು ತುಂಬಾ ದುಬಾರಿಯಾಗಿತ್ತು. ಹೊರಡುವ ಮುನ್ನ, ನಾವು ಮಾಡಬೇಕಾದ ಕೆಲಸಗಳ ಬಗ್ಗೆ ಸಮಗ್ರವಾದ ಚಿತ್ರಣ ಕೊಟ್ಟು, ಅಗತ್ಯ ಪುಸ್ತಕಗಳ ವ್ಯವಸ್ಥೆ ಮಾಡಿ, ಇಮೇಲ್ ಮೂಲಕವೇ ನಮ್ಮ ಬರವಣಿಗೆಗಳನ್ನು ಗಮನಿಸಿ, ತಿದ್ದಿ, ನಮ್ಮ ಸಂಪ್ರಬಂಧ ಸಲ್ಲಿಸಲು ಸಂಪೂರ್ಣ ನೆರವು ನೀಡಿದರು. ಅಷ್ಟೇ ಅಲ್ಲ, ಎಂಫಿಲ್. ನಂತರ ನಮ್ಮ ಸಂಪ್ರಬಂಧವು ಪುಸ್ತಕ ರೂಪದಲ್ಲಿ ಹೊರಬರಲು ಸಂಪೂರ್ಣ ಕಾರಣರಾದರು.

ಬಿ.ಎಂ.ಶ್ರೀ. ಪ್ರತಿಷ್ಠಾನದಿಂದ ನಡೆದ ಮೊದಲ ಹಸ್ತಪ್ರತಿ ಸಮ್ಮೇಳನದಲ್ಲಿ ನಮಗೆ ಪ್ರಬಂಧ ಮಂಡಿಸಲು ಉತ್ತೇಜನ ನೀಡಿ, ಅದಕ್ಕೂ ಮಾರ್ಗದರ್ಶನ ಮಾಡಿದರು. ಮೊದಲ ಬಾರಿಗೆ ವೇದಿಕೆ ಹತ್ತಲು ಪ್ರೇರಣೆ ನೀಡಿದ್ದಲ್ಲದೆ, ಮುಂದೆಯೂ ಅಂತಹ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಲು ಹುರಿದುಂಬಿಸಿ, ಪ್ರತಿಷ್ಠಾನದ ಆವರಣದಲ್ಲಿಯೇ ಇದ್ದ ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯರಾಗಲು ಕಾರಣರಾದರು. ಹೀಗೆ ಇತಿಹಾಸ ಅಕಾಡೆಮಿಯ ಸದಸ್ಯಳಾದ ಮೇಲೆ ನನಗೆ ಸಾಕಷ್ಟು ಕಲಿಯಲು, ಆ ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ ಒಂದಷ್ಟು ಕೆಲಸ ಮಾಡಲು ಮೂಲ ಕಾರಣರಾದವರು ಅನಾಜಿಯವರು.

ಉಜರೆಯಲ್ಲಿ ನಡೆದ ಹಸ್ತಪ್ರತಿ ಸಮ್ಮೇಳನದ ದಿನ, ಅಲ್ಲಿನ ಸ್ಥಳೀಯ ಪತ್ರಿಕೆಯನ್ನು ಕೊಟ್ಟು, 'ಇದರಲ್ಲಿ ನಿನಗೊಂದು ವಿಷಯ ಇದೆ ನೋಡು' ಎಂದು ಹೇಳಿದರು. ಆ ಪತ್ರಿಕೆಯಲ್ಲಿ ಮಂಗಳೂರು ವಿ.ವಿ. ಯಿಂದ ಪಿ.ಎಚ್.ಡಿ. ಮಾಡುವವರಿಗೆ ಪ್ರಕಟಣೆ ಇತ್ತು. ಹೀಗೆ ನಾನು ಮಂಗಳೂರು ವಿ.ವಿ. ಮೂಲಕ ಪಿ.ಎಚ್.ಡಿ. ಮಾಡಲು ದಾರಿ ತೋರಿಸಿದ್ದಷ್ಟೆ ಅಲ್ಲದೆ, ತಾವು ಅಧಿಕೃತ ಮಾರ್ಗದರ್ಶಕರಲ್ಲದಿದ್ದರೂ, ಅಧ್ಯಯನದ ಸಂದರ್ಭದಲ್ಲಿ ನನ್ನ ಬರವಣಿಗೆಯನ್ನು ಗಮನಿಸಿ ತಿದ್ದಿ, ಮಾರ್ಗದರ್ಶನ ಮಾಡಿದರು. ಇಂದಿಗೂ, ಎದುರು ಸಿಕ್ಕಾಗಲೆಲ್ಲಾ ಅದರ ಪ್ರಕಟಣೆ ಮಾಡಲು ಪ್ರೋತ್ಸಾಹಿಸುತ್ತಾರೆ. ನನ್ನ ಓದಿಗೆ ಅಗತ್ಯವಾದ ಹಲವಾರು ಪುಸ್ತಕಗಳನ್ನು ನೀಡಿದ್ದಾರೆ. ಸಾಹಿತ್ಯ ಪರಿಷತ್ತಿನಿಂದ ಮೊದಲುಗೊಂಡು ಹಲವು ಸಂಸ್ಥೆ, ಪತ್ರಿಕೆಗಳಿಗೆ ಸದಸ್ಯಳನ್ನಾಗಿಸಿದ್ದಾರೆ. ಇಂದಿಗೂ ನನಗೆ ಯಾವುದಾದರೋ ಮಾಹಿತಿ, ಪುಸ್ತಕದ ಅಗತ್ಯ ಬಿದ್ದಾಗ ಮೇಷ್ಟ್ರು ಕಡೆ ಕೈ ಚಾಚುತ್ತೇನೆ, ಮಾರ್ಗದರ್ಶನ ಪಡೆದುಕೊಳ್ಳುತ್ತೇನೆ.

ಕೇವಲ ನನ್ನ ಎಂಫಿಲ್ ಅಧ್ಯಯನಕ್ಕಷ್ಟೇ ಅಲ್ಲದೆ ಆನಂತರದ ಎಲ್ಲ ಸಾಹಿತ್ಯಕ ಚಟುವಟಿಕೆಗಳಿಗೂ ಪ್ರೋತ್ಸಾಹ, ಪ್ರೇರಣೆ, ಮಾರ್ಗದರ್ಶನ ನೀಡುತ್ತಾಬಂದಿರುವ ನಮ್ಮ ನೆಚ್ಚಿನ ಗುರುಗಳಿಗೆ ಈ ಮೂಲಕ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ.

****

ಕನ್ನಡದ ಕಣ್ಮಣಿ ಪ್ರೊ.ಜಿ. ಅಶ್ವತ್ಥನಾರಾಯಣ

ಜಯಲಕ್ಷ್ಮೀ.ಎಂ. ಇನಾಮದಾರ್

ಕಳೆದ ೭೦ ವರ್ಷಗಳಿಂದ ಕನ್ನಡ ನಾಡುನುಡಿಗೆ ತಮ್ಮ ತನುಮನಗಳಿಂದ ಸೇವೆ ಸಲ್ಲಿಸಿದ, ಇನ್ನೂ ಸಲ್ಲಿಸುತ್ತಿರುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ 'ಸಾಹಿತ್ಯ ಪರಿಚಾರಕ' ಎಂಬ ಅಭಿನಂದನಾ ಗ್ರಂಥವನ್ನು ನಾಡಿನ ಪರವಾಗಿ ಸಲ್ಲಿಸುತ್ತಿರುವುದು ಅತ್ಯಂತ ಸೂಕ್ತವಾಗಿದೆ. ನಾನು ಅವರ ಅಭಿಮಾನಿಗಳಲ್ಲಿ ಒಬ್ಬಳಾಗಿದ್ದು ಈ ಕಿರುಲೇಖನವನ್ನು ಅವರಿಗೆ ಸಮರ್ಪಿಸುತ್ತಿದ್ದೇನೆ.

ಮೊದಲನೆಯದಾಗಿ ಕರ್ನಾಟಕದಲ್ಲೇ ಹುಟ್ಟಿ ಬೆಳೆದರೂ ನಾನು ಕನ್ನಡಿಗ ಅಂತ ಹೇಳಿಕೊಳ್ಳುವುದಕ್ಕೆ ಹಿಂಜರಿಯುತ್ತಿರುವ ಈ ಕಾಲದಲ್ಲಿ ಕನ್ನಡದ ಒಬ್ಬ ಲೇಖಕನಾಗಿ, ವಾಗ್ಮಿಯಾಗಿ, ಅಧ್ಯಾಪಕನಾಗಿ, ಸಂಶೋಧಕನಾಗಿ ಅವರು ನಿರ್ವಹಿಸಿದ ಸೇವೆಯನ್ನು ಗಮನಿಸಿದಾಗ ನನಗನಿಸಿದ್ದು, ಅವರು ಒಬ್ಬ ವ್ಯಕ್ತಿಯಲ್ಲ ಶಕ್ತಿ ಎಂದು. ಸರ್ಕಾರಿ ಅಧಿಕಾರಿಗಳಿಗೆ, ವಿದೇಶಿಯರಿಗೆ, ಐ.ಎ.ಎಸ್, ಕೆ.ಎ.ಎಸ್. ವಿದ್ಯಾರ್ಥಿಗಳಿಗೆ ಕನ್ನಡ ಪಾಠ ಹೇಳಿ ಮಾರ್ಗದರ್ಶನ ಮಾಡಿರುವರು ನಿಜಕ್ಕೂ ಶ್ಲಾಘನೀಯ.

ಸಾಹಿತ್ಯದಲ್ಲಿ ಮಡಿವಂತಿಕೆ ಇರಬಾರದು ಅಂತ ಕೆಲವರ ಅಂಬೋಣ. ಕೇವಲ ಭಾಷಾಭ್ಯಾಸಿಗಳಿಗೆ ಇದು ತಕ್ಕಮಟ್ಟಿಗೆ ಅನ್ವಯಿಸಬಹುದಾದರೂ ಜ್ಞಾನಪಿಪಾಸುಗಳಿಗಲ್ಲ. ಶುದ್ಧ ಸಾಹಿತ್ಯದಿಂದ ಮನಸ್ಸಿಗೆ ಒಳ್ಳೆಯ ಸಂಸ್ಕಾರ ದೊರೆಯುತ್ತದೆ, ದೊರೆಯಬೇಕು. ಅಂಥ ಕೆಲ ಜಿಜ್ಞಾಸುಗಳಿಗಾಗಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಕೆಲವು ಪ್ರಾಚೀನ, ಅರ್ವಾಚೀನ ಗ್ರಂಥಗಳನ್ನು ಸಂಪಾದಿಸಿ ಉಪಕರಿಸಿರುತ್ತಾರೆ. ಅವುಗಳನ್ನು ಸ್ವತಃ ಓದಿ ಅರ್ಥೈಸಿಕೊಳ್ಳಲು ಪ್ರಯತ್ನಿಸಿದರೆ ಅವರ ಶ್ರಮ ಸಾರ್ಥಕ. ಬರೀ ಗ್ರಂಥ ಸಂಪಾದನೆಯಷ್ಟೇ ಅಲ್ಲ, ಸ್ವತಂತ್ರವಾಗಿಯೂ ಸಾಹಿತ್ಯ ಹಾಗು ಸಾಹಿತಿಗಳಿಗೆ ಸಂಬಂಧಪಟ್ಟಂತೆ ಅನೇಕ ಗ್ರಂಥಗಳನ್ನು ರಚಿಸಿ ತಮ್ಮ ಪಾಂಡಿತ್ಯವನ್ನು ಮೆರೆದಿದ್ದಾರೆ. ನಾಡಿನಾದ್ಯಂತ ಸಂಚರಿಸಿ ಸಾವಿರಾರು ಉಪನ್ಯಾಸಗಳನ್ನೂ ನೀಡಿದ ವಾಗ್ಮಿಗಳಾಗಿದ್ದಾರೆ. ಹೀಗೆ ಅವರ ಪ್ರವರವನ್ನೂ ಬರೆಯುತ್ತಾ ಹೋದರೆ ಅದೇ ಒಂದು ಗ್ರಂಥವಾದೀತು.

ಸಾಕ್ಷಾತ್ ಸರಸ್ವತಿಯ ವರಪುತ್ರರೇ ಆಗಿದ್ದರೂ ಜಿ. ಅಶ್ವತ್ಥನಾರಾಯಣ ಅವರಿಗೆ ಕಿಂಚಿತ್ತೂ ಅಹಂಕಾರವಿಲ್ಲ. ಸಾಮಾನ್ಯರ ಜೊತೆಯಲ್ಲಿ ಅತಿಸಾಮಾನ್ಯರಾಗಿ ಬೆರೆಯುತ್ತಾರೆ. ಇದನ್ನೇ ತುಂಬಿದ ಕೊಡ ತುಳುಕುವುದಿಲ್ಲ ಅಂತ ಹೇಳುವುದು. ಮನೆಯಲ್ಲಿ ದೂರವಾಣಿ ಬಿಟ್ಟರೆ ಮೊಬೈಲ್ (ಜಂಗಮವಾಣಿ) ಫೋನನ್ನು ಅವರು ಇಟ್ಟುಕೊಂಡೇ ಇಲ್ಲ. ಈಗಿನ ಕಾಲದಲ್ಲಿ ಚಿಕ್ಕ ಚಿಕ್ಕ ಮಕ್ಕಳೂ ಮೊಬೈಲನ್ನು ಆಟಿಗೆಯಂತೆ ಉಪಯೋಗಿಸುತ್ತಾರೆ. ಹೀಗಿರುವಾಗ ಪ್ರೊಫೆಸರ್ ಅವರಿಗೆ ಏಕೆ ಬೇಡವೋ ಗೊತ್ತಿಲ್ಲ. ನಾವು ಅವರನ್ನು ಸಂಪರ್ಕಿಸಬೇಕಾದರೆ ಅವರು ಮನೆಯಲ್ಲಿದ್ದಾಗ ದೂರವಾಣಿಗೇ ಕರೆ ಮಾಡಬೇಕಾಗುತ್ತದೆ, ಎಂದೂ ಅಂತ ನಮ್ಮನ್ನು ಗುರುಗಳಾದ ದೇವರಾಯ ಕುಲಕರ್ಣಿಯವರು

ಹೇಳುತ್ತಿದ್ದರು. ಅವರೂ ಹಾಗೇ ಇದ್ದರು. 'ನುಡಿಯಂತೆ ನಡೆ, ನಡೆಯಂತೆ ನುಡಿ' ಇದೇ ಸಜ್ಜನರ ಲಕ್ಷಣ. ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಸಂಪಾದಿಸಿದ ಅನುಭವಾಮೃತ ಗ್ರಂಥದ ಪ್ರವಚನವನ್ನು ದಾವಣಗೆರೆಯ ಅಧ್ಯಾತ್ಮ ಮಂದಿರದಲ್ಲಿ ಇವರಿಂದಲೇ ಕೇಳಿದ್ದೆ. ಆಗ ನನಗಿನ್ನೂ ಚಿಕ್ಕವಯಸ್ಸು. ಪ್ರೊ. ಜಿ. ಅಶ್ವತ್ಥನಾರಾಯಣ ಅವರನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವುದೆಂದರೆ ಸೂರ್ಯನನ್ನೂ ಬ್ಯಾಟರಿ ಹಿಡಿದು ತೋರಿಸಿದಂತಾಗುತ್ತದೆ. ಆದ್ದರಿಂದ ಈ ವ್ಯರ್ಥ ಪ್ರಯತ್ನ ಕೈಬಿಟ್ಟು ಪ್ರೊಫೆಸರ್ ಅವರಿಗೂ ನಮಗೂ ಹೇಗೆ, ಎಲ್ಲಿ ಪರಿಚಯವಾಯ್ತು ಎಂಬ ವಿಶೇಷ ಸಂದರ್ಭವನ್ನು ಹೇಳಿ ಈ ಲೇಖನವನ್ನು ಮುಕ್ತಾಯ ಮಾಡುತ್ತಿದ್ದೇನೆ.

ಸರಳವಾಗಿ ಹೇಳುವುದಾದರೆ ಜಿ. ಅಶ್ವತ್ಥನಾರಾಯಣ ಅವರು ಒಬ್ಬ ಉದ್ದಾಮ ಸಾಹಿತಿ, ನಾನು ಒಬ್ಬ ಗಮಕಿ. ಸಾಹಿತ್ಯಕ್ಕೂ ಗಮಕಕ್ಕೂ ಬಹಳ ಹತ್ತಿರದ ನಂಟು. ಹೀಗಾಗಿ ನಮ್ಮ ಬಾಂಧವ್ಯ ಬೆಳೆಯಿತು, ಉಳಿಯಿತು. ಇದಕ್ಕೆ ನಿಮಿತ್ತ ಕಾರಣರಾದವರು ಮಾಜಿ ಸಚಿವ ಶ್ರೀ ಎಂ. ಚಂದ್ರಶೇಖರ್ ಅವರು. ಸಚಿವರು ಕವಿ ಕುವೆಂಪು ಅವರ ಕಟ್ಟಾ ಅಭಿಮಾನಿ. ಆದ್ದರಿಂದ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದ ಪ್ರಚಾರ ಕಾರ್ಯವನ್ನು ನಗರದ ಅನೇಕ ಬಡಾವಣೆಗಳಲ್ಲಿ ಹಮ್ಮಿಕೊಂಡಿದ್ದರು. ಬಹುಶಃ ೨೦೦೦-೨೦೦೧ ಇಸ್ವಿ ಇರಬೇಕು.

ಒಂದು ಸಂಜೆ ವಿಶ್ವೇಶ್ವರಪುರದ ಮನೆಯೊಂದರಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾನು ವಾಚನ ಮಾಡಿದರೆ ಜಿ.ಅಶ್ವತ್ಥನಾರಾಯಣ ಅವರು ಸೊಗಸಾದ ವ್ಯಾಖ್ಯಾನ ಮಾಡಿದರು. ಹಿಂದೆ ಆ ಮನೆಯಲ್ಲಿ ಕುವೆಂಪು ಅವರು ಕೆಲಕಾಲ ವಾಸವಾಗಿದ್ದಾಗ (ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗ) ಮಧ್ಯರಾತ್ರಿ ಇದ್ದಕ್ಕಿದ್ದಂತೆ ಆಂಜನೇಯ ಸೀತಾದೇವಿಯ ಎದುರು ಬಂದು ನಿಂತು ಸಂಭಾಷಣೆ ಮಾಡಿದಂತೆ ಕನಸು ಕಂಡಿದ್ದರಂತೆ. ಪುಟ್ಟಪ್ಪನವರು ಬರೆದಿಟ್ಟಿದ್ದ ಆಂಜನೇಯ ಸೀತೆಯರ ಸಂಭಾಷಣೆಯ ಆ ಭಾಗದ ವಾಚನವನ್ನು ಕೇಳುತ್ತಿದ್ದಂತೆ, ಅನಾಜಿಯವರು ಕ್ಷಣಕಾಲ ಭಾವಪರವಶರಾಗಿ ಬಿಟ್ಟರು. ಅಂದಿನ ಆ ಸಂದರ್ಭ ಇನ್ನೂ ಅವರ ಮನಸ್ಸಿನಲ್ಲಿ ಹಸಿರಾಗಿಯೇ ಇದ್ದು ನಮ್ಮ ಸ್ನೇಹ ವಿಶ್ವಾಸ ಈಗಲೂ ಮುಂದುವರಿದಿದೆ.

ಜಿ. ಅಶ್ವತ್ಥನಾರಾಯಣ ಅವರ ಪ್ರತಿಭೆಯನ್ನು ಗುರುತಿಸಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಾಕಷ್ಟು ಪ್ರಶಸ್ತಿಗಳು ಅವರ ಮುಡಿಗೇರಿದ್ದರೂ ಕರ್ನಾಟಕ ಸರಕಾರ ನೀಡುವ ರಾಜ್ಯೋತ್ಸವರ ಪ್ರಶಸ್ತಿ ಇದುವರೆಗೂ ಅವರಿಗೆ ಸಂದಿಲ್ಲವೆಂದರೆ ಆಶ್ಚರ್ಯವೆನಿಸುತ್ತದೆ, ವಿಷಾದವೂ ಆಗುತ್ತದೆ. ಇನ್ನಾದರೂ ಸರ್ಕಾರವು ಎಚ್ಚೆತ್ತುಕೊಂಡು ಅರ್ಹರಿಗೆ ಪ್ರಶಸ್ತಿ ನೀಡುವ ಮೂಲಕ ತನ್ನನ್ನೇ ತಾನು ಗೌರವಿಸಿಕೊಳ್ಳುವಂತಾಗಲಿ ಎಂದು ಹಾರೈಸುತ್ತೇನೆ.

****

ಕನ್ನಡ ಕಣ್ಮಣಿ

ಕೆ. ಆರ್. ನಾಗರಾಜ

ಚರವಾಣಿ : ೯೪೪೮೬೨೭೭೭೩

ನಾನು ಹಾಗೂ ಅನಾಜಿ ಅವರು 1969 ಆಗಸ್ಟ್ ತಿಂಗಳಿನಲ್ಲಿ ಹಾಸನದ ಸರ್ಕಾರಿ ಕಾಲೇಜಿನಲ್ಲಿ ಭೇಟಿ ಆದೆವು. ನನ್ನ ಬೋಧನೆ ಭೌತ ಶಾಸ್ತ್ರವಾದರೆ, ಅವರದ್ದು ಕನ್ನಡ ಮತ್ತು ಸಾಹಿತ್ಯ. ಸ್ಟಾಫ್ ರೂಮುಗಳಲ್ಲಿ ಅವರ ಮಾತಿನ ಧಾಟಿ ನನಗೆ ಹಿಡಿಸಿ, ಇಬ್ಬರೂ ಆಪ್ತವಾಗಿ ಗೆಳೆಯರಾದೆವು. ಅವರು ಮಾತಿಗೆ ಸಿಕ್ಕಾಗಲೆಲ್ಲ ಒಂದಲ್ಲ ಒಂದು ಸಾಹಿತ್ಯ, ಕಾದಂಬರಿಯ ಬಗ್ಗೆ ಹೇಳುತ್ತಿದ್ದರು. ನನಗೆ ಮೊದಲಿಂದಲೂ ಕನ್ನಡ ಕಾದಂಬರಿಗಳನ್ನು ಓದುವ ಹವ್ಯಾಸ. ಹೀಗಾಗಿ ಅವರಿಂದ ಎಸ್. ಎಲ್. ಭೈರಪ್ಪ ಅವರ ಕಾದಂಬರಿಗಳನ್ನು ಎರವಲು ಪಡೆದು ಓದುತ್ತಿದ್ದೆ. ಅವರಲ್ಲಿ ಅದಾಗಲೇ ಪುಸ್ತಕಗಳ ಸಂಗ್ರಹ ಜೋರಾಗಿತ್ತು. ಅವರು ದಿನವೂ ಪೇಟೆ ಕಡೆ ಹೊರಟಾಗ ಖಾಲಿ ಕೈ. ಬರುವಾಗ ಅದೇ ಕೈನಲ್ಲಿ ಒಂದೆರಡು ಪುಸ್ತಕ ಇರುತ್ತಿತ್ತು. ನಮ್ಮ ಮನೆಯಿಂದ ಅವರ ರೂಮು ೩೦೦ ಮೀಟರ್ ದೂರ ಅಷ್ಟೇ. ನಾನು ಕೆಲವು ದಿನ ಅವರ ರೂಮಿಗೆ ಹೋದಾಗ ಅವರ ಮಂಚದ ಮೇಲೆ ಪುಸ್ತಕಗಳ ರಾಶಿ ನೋಡಿದೆ. ಹಾಸ್ಯ ಬರಹಗಳು ಇದೆಯೇ? ಎಂದು ಕೇಳಿದ ತಕ್ಷಣ, ಅಲ್ಲೇ ಹುಡುಕಿ ಎರಡು ಸಣ್ಣ ಪುಸ್ತಕ ಕೊಟ್ಟು, ಓದಿ ಕೊಡಿ ಎಂದರು. ಹೀಗೆ ಸ್ನೇಹ ಗಾಢವಾದಾಗ ನಮ್ಮ ಮನೆಯ ಹಬ್ಬಗಳಲ್ಲಿ ಸಹ ಅವರು ಭಾಗವಹಿಸುತ್ತ ಎಲ್ಲರನ್ನೂ ಬಹಳ ವಿಶ್ವಾಸದಿಂದ ಮಾತನಾಡಿಸುತ್ತಿದ್ದರು. ನಮ್ಮ ತಾಯಿಯವರ ಅಡುಗೆ ರುಚಿಯನ್ನು ನೋಡಿ ಹೊಗಳುತ್ತಿದ್ದರು. ಹಾಗೆಯೇ ಆ ಸಂದರ್ಭಗಳಲ್ಲಿ ನಮ್ಮ ತಾಯಿಯವರ ಸಂಪ್ರದಾಯದ ಹಾಡುಗಳನ್ನು ಕೇಳಿ, ನಿಮ್ಮ ಹತ್ತಿರ ಬಹಳ ಅಪರೂಪದ ಹಾಡುಗಳು ಇವೆ. ಇವೆಲ್ಲಾ ಶಿಷ್ಟ ಜನಪದ ಸಾಹಿತ್ಯ. ಇದನ್ನೆಲ್ಲ ದಾಖಲಿಸಿ ಎಂದು ತಿಳಿಸಿದರು. ಮನೆಗೆ ಬಂದಾಗಲೆಲ್ಲ ಜ್ಞಾಪಿಸುತ್ತಿದ್ದರು. ನಮ್ಮ ಮಾತೃಶ್ರೀ ಅವರ ಹೆಸರು ವಾಗೀಶ್ವರಿ ಶಾಸ್ತ್ರಿ. ಇವರ ಉತ್ತೇಜನದಿಂದ ಪ್ರೇರಣೆಗೊಂಡ ನಮ್ಮ ತಾಯಿ ಬೆಂಗಳೂರಿನಲ್ಲಿ ಬಂದು ನೆಲೆಸಿದಾಗ (1977 ರಲ್ಲಿ) ಸುಮಾರು 400 ಹಾಡುಗಳ, ವಿಚಾರ ಮತ್ತು ವಿಮರ್ಶೆಗಳನ್ನೊಳಗೊಂಡ "ಹೃದಯ ಸಂಪುಟ" ಎಂಬ ಒಂದು ಬೃಹತ್ ಗ್ರಂಥವನ್ನು 1985 ರಲ್ಲಿ ಮುದ್ರಿಸಿ ಬಿಡುಗಡೆ ಮಾಡಿದರು. ಇದರ ಮುದ್ರಣ ಸಮಯದಲ್ಲಿ ಕರಡು ತಿದ್ದುವುದು ಹೇಗೆಂಬುದನ್ನೂ ಸಹ ಅನಾಜಿ ಅವರು ನಮಗೆ ತಿಳಿಸಿಕೊಟ್ಟರು. ಈಗ ಈ ಗ್ರಂಥಕ್ಕೆ ನಾಲ್ಕಾರು ಪ್ರಶಸ್ತಿಗಳು ಲಭಿಸಿವೆ.

ನಮ್ಮ ಒಡನಾಟ ಗ್ರಂಥ ಪ್ರಕಟಣೆಯ ನಂತರವೂ ಮುಂದುವರಿದು ಹಾಡುಗಳ ಧ್ವನಿಮುದ್ರಿಕೆಗಳು ಹೊರಬರಲು ಉತ್ತೇಜಿಸಿದರು. ಅವುಗಳ ಬಿಡುಗಡೆ ಸಮಾರಂಭಗಳಲ್ಲಿ ಮೌಲ್ಯಯುತ ಭಾಷಣಗಳನ್ನು ಮಾಡಿದರು. ಒಟ್ಟಿನಲ್ಲಿ ಕನ್ನಡ ಸಾಹಿತ್ಯ ಉಳಿಯಲು, ಬೆಳೆಯಲು ಯಾರಿಗೇ ಆಗಲಿ ತಮ್ಮ ಸಹಾಯ ಹಸ್ತವನ್ನು ನೀಡಲು ಸದಾ ಮುಂದಾಗಿದ್ದವರು.

ಇಂಥ ಅಪರೂಪದ ಲೇಖಕ, ವಾಗ್ಮಿ ಮತ್ತು ಕುಟುಂಬದ ಸದಸ್ಯರೊಬ್ಬರಂತೆ ಆದ ಅನಾಜಿ ಅವರು ಎಂದಿಗೂ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತಾರೆ.

ಮತ್ತೊಂದು ವಿಚಾರ. ಅವರು ಸಾಹಿತ್ಯದ ಬಗ್ಗೆ ಅಥವಾ ಪುಸ್ತಕದ ಬಗ್ಗೆ ಮಾತಾಡಲು ಬೆಂಗಳೂರಿನಲ್ಲಿ ಇದ್ದಾಗ, ಸಮಯ ಮಾಡಿಕೊಳ್ಳುತ್ತಿದ್ದ ರೀತಿ ವಾಕಿಂಗ್ ಮೂಲಕ. ನಾವುಗಳು ಇಬ್ಬರು ಅಥವಾ ಮೂವರು ಕೆಲವೊಂದು ದಿನಗಳು, ಅನಾಜಿ ಅವರನ್ನು ಸೌತ್‌ಎಂಡ್ ಸರ್ಕಲಿನಲ್ಲಿ ಭೇಟಿ ಮಾಡಿ ಕಾಲೇಜಿಗೆ ನಡೆದುಕೊಂಡೇ ಹೊರಡುತ್ತಿದ್ದೆವು. ಆಗ ದಾರಿಯಲ್ಲಿ ಅನಾಜಿ ಅವರದ್ದೇ ಮಾತು, "ಈ ಪುಸ್ತಕ ಓದಿ", "ಹೆಚ್ಚಿನ ಮಾಹಿತಿಗೆ ಇದನ್ನು ಓದಿ" ಎಂದು ಕನ್ನಡದ ಬಗ್ಗೆಯೇ ಮಾತು. ಕುಂತರೆ ಕನ್ನಡ, ನಿಂತರೆ ಕನ್ನಡ ಅನ್ನುವಷ್ಟು ಕನ್ನಡಾಭಿಮಾನ!

ಇನ್ನು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುವಾಗ ಪ್ರಾಸಬದ್ಧವಾದ ಮಾತುಗಳು. ಅದೇ ಒಂದು ತರಹದ ಆಕರ್ಷಣೆ!

ಬೆಂಗಳೂರಿನ ಅವರ ಜಯನಗರದ ಮನೆಯಲ್ಲಿ ದೊಡ್ಡ ಲೈಬ್ರರಿ ಇದೆ. ವಿಶೇಷವೆಂದರೆ ಅವರ ಎಲ್ಲಾ ಪುಸ್ತಕಗಳ ಸೂಚಿ ಮಾಡಿಟ್ಟಿದ್ದಾರೆ. ಯಾವ ಪುರಾಣ ಕೇಳಿದರೂ ತಕ್ಷಣ ಹುಡುಕಿ ಕೊಡುತ್ತಾರೆ. ಲೈಬ್ರರಿಯಲ್ಲಿ ಪುಸ್ತಕಗಳನ್ನು ಓದಲು ಕೊಟ್ಟು ಹಿಂದಕ್ಕೆ ಪಡೆವ ದಾಖಲೆಗಳಿರುವ ಪುಸ್ತಕ ಇಟ್ಟುಕೊಂಡಿದ್ದಾರೆ.

ಇಂತಹ ಅನಾಜಿ ಅವರಿಗೆ ಈಗ ೮೮ ರ ಆಯುಸ್ಸು. ಅವರ ಅಭಿನಂದನೆಯ ಗ್ರಂಥಕ್ಕೊಂದು ನನ್ನ ಎರಡು ಮಾತುಗಳು ಬರೆಯುವ ಅವಕಾಶ, ನನ್ನ ಭಾಗ್ಯ.

ಅವರು ತಮ್ಮ ಕನ್ನಡ ಸೇವೆಯನ್ನು ಮುಂದುವರೆಸಲು ಸದಾ ಆರೋಗ್ಯವಾಗಿರಲಿ ಎಂದು ದೇವರನ್ನು ಪ್ರಾರ್ಥಿಸುತ್ತೇನೆ.

****

ನನ್ನ ಓದಿನ ಹವ್ಯಾಸಕ್ಕೆ ಜೀವಾಧಾರ

ಗಿರಿಜಾಮೂರ್ತಿ
ಚರವಾಣಿ : ೯೪೪೯೮೧೭೬೫೬

ನಾನು ಹಾಸನದವಳು. ಅರಕಲಗೂಡಿನಲ್ಲಿ ಹುಟ್ಟಿ ಬೆಳೆದು ಶಾಲಾ ಶಿಕ್ಷಣ ಮುಗಿಸಿದ ಮೇಲೆ ಅಂದಿನ ಕಾಲದ ಪದ್ಧತಿಗೆ ಅನುಗುಣವಾಗಿ ವಿವಾಹವಾದೆ. ಇಂಜಿನಿಯರಿಂಗ್ ಕೆಲಸದಲ್ಲಿದ್ದ ನಮ್ಮ ಯಜಮಾನರ ಕಾರ್ಯನಿಮಿತ್ತ ಬರೋಡಾ, ಬೊಂಬಾಯಿ ಮೊದಲಾದ ಕಡೆ ಸಂಸಾರ ಸಾಗಿಸುತ್ತಾ ನಿವೃತ್ತಿ ಕಾಲಕ್ಕೆ ಬೆಂಗಳೂರಿಗೆ ಬಂದೆವು. ಇಲ್ಲಿಯೇ ನೆಲೆಸಿದೆವು.

ನನಗೆ ಮೊದಲಿನಿಂದಲೂ ಪುಸ್ತಕ ಓದುವುದು ಚಟವಾಗಿತ್ತು. ಕಥೆ ಕಾದಂಬರಿ ನಾಟಕ ಮೊದಲಾದವನ್ನು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಬಿಡದೆ ಓದುತ್ತಿದ್ದೆ. ಪತ್ರಿಕೆಗಳನ್ನು ತರಿಸಿ ಓದುವುದು ಇದ್ದೇ ಇತ್ತು. ಎಲ್ಲಕ್ಕಿಂತ ಮಿಗಿಲಾಗಿ ಸಂಗೀತದಲ್ಲಿ ಆಸಕ್ತಿ ಇದ್ದುದರಿಂದ ಆರ್.ಕೆ. ಪದ್ಮನಾಭರಲ್ಲಿ ಸಂಗೀತಾಭ್ಯಾಸಕ್ಕೆ ಪ್ರಾರಂಭಿಸಿದೆ. ಇಂದಿಗೂ ಸಂಗೀತ ಪುಸ್ತಕ ನನ್ನ ಎಡ-ಬಲದ ಸಂಗಾತಿಗಳಾಗಿವೆ.

ಹೀಗಿರುವಾಗ ಬೆಂಗಳೂರಿನ 'ಟಿ' ಬ್ಲಾಕ್ ಜಯನಗರದಲ್ಲಿ ವಾಸಿಸತೊಡಗಿದ ಮೇಲೆ ನಮ್ಮ ಮನೆ ಪಕ್ಕದಲ್ಲಿ ವಾಸಿಸುತ್ತಿರುವ ಸಂಗೀತ ವಿದುಷಿ ಪದ್ಮಾ ಗುರುದತ್ತರ ಪರಿಚಯವಾಯಿತು. ಅವರು ಸಂಗೀತ-ಸಾಹಿತ್ಯಗಳೆರಡರಲ್ಲೂ ನಿಷ್ಣಾತರು. ನನಗೆ ಸಂಗೀತ ಸಾಹಿತ್ಯಕ್ಕೆ ಜೊತೆಯಾದರು.

ಅವರ ಮೂಲಕ ನಮ್ಮ ಮನೆ ಹತ್ತಿರದಲ್ಲೇ ಇದ್ದ ಪ್ರೊ. ಜಿ. ಅಶ್ವತ್ಥನಾರಾಯಣರನ್ನು ಪದ್ಮಾ ಗುರುದತ್ ಅವರು ಪರಿಚಯ ಮಾಡಿಸಿದರು. ನನ್ನ ಓದಿನ ಹವ್ಯಾಸ ಕಂಡು ಅವರಿಗೆ ಬಹಳ ಸಂತೋಷಪಟ್ಟರು. ಈ ವಯಸ್ಸಿನಲ್ಲೂ ಓದಿನಲ್ಲಿ ಎಷ್ಟೊಂದು ಆಸಕ್ತಿ ಹೊಂದಿದ್ದೀರಿ ಎಂದು ಅಚ್ಚರಿಪಟ್ಟರು.

ನನಗೆ ಸಂಗೀತ-ಸಾಹಿತ್ಯಗಳಲ್ಲಿ ಆಸಕ್ತಿ ಮೊದಲಿನಿಂದಲೂ ಇತ್ತು. ಇದಕ್ಕೆ ಕಾರಣವೆಂದರೆ ನಾಡಿನ ಪ್ರಸಿದ್ಧ ಸಾಹಿತಿಗಳಾದ ಅ.ನ.ಕೃಷ್ಣರಾಯರ ಸಹೋದರರಾದ ಅ.ನ.ರಾಮರಾಯರ ಮೊಮ್ಮಗಳು ನನ್ನ ಸೊಸೆಯಾದ ಕಾರಣ ನನ್ನ ಸಾಹಿತ್ಯಾಸಕ್ತಿ ಕಂಡು ರಾಮರಾಯರು ರಾಮೋತ್ಸವ ಕೃಷ್ಣೋತ್ಸವ ಕಾರ್ಯಕ್ರಮಗಳಿಗೆ ಇತರ ಸಂಗೀತ-ಸಾಹಿತ್ಯಿಕ ಕಾರ್ಯಕ್ರಮಗಳಿಗೆ ಕರೆದೊಯ್ಯುತ್ತಿದ್ದರು. ಆ ಕಲಾವಿದರಿಗೆ ನನ್ನನ್ನು ಪರಿಚಯಿಸುತ್ತಿದ್ದರು. ಹಾಗಾಗಿ ನನಗೆ ಸಾಹಿತ್ಯ-ಸಂಗೀತದಲ್ಲಿ ಇದ್ದ ಆಸಕ್ತಿ ಮೊದಲಿಗಿಂತ ಹೆಚ್ಚಾಯಿತು.

ಇನ್ನು ನೆರೆಮನೆಯ ಪದ್ಮಾ ಗುರುದತ್ ಅವರು ಶ್ರೇಷ್ಠ ಸಂಗೀತಗಾರ್ತಿ ಅಷ್ಟೇ ಅಲ್ಲ. ಸಾಹಿತ್ಯದಲ್ಲೂ ಪ್ರವೀಣರು. ಅವರೊಡನೆ ಮಾತಾಡಿದಾಗಲೆಲ್ಲ ನನ್ನ ಸಾಹಿತ್ಯ ಸಂಗೀತಾನುಭವ ಹಿಮ್ಮಡಿಯಾಗುತ್ತದೆ.

ಹೀಗಿದ್ದಾಗ ಒಂದು ದಿನ ಅವರ ಮನೆಯಲ್ಲಿ ಪ್ರೊ. ಜಿ. ಅಶ್ವತ್ಥನಾರಾಯಣರ ಪರಿಚಯವಾಯಿತು.

ಆಗ ಪದ್ಮಾ ಗುರುದತ್ ಅವರು ನನ್ನನ್ನು ಕುರಿತು ಇವರು ತುಂಬಾ ಓದುತ್ತಾರೆ ಎಂದಾಗ ಅವರಿಗೆ ಆನಂದವಾಗಿ ನೀವು ಎಂಥಾ ಪುಸ್ತಕಗಳನ್ನು ಓದುತ್ತೀರಿ ಅಂತ ಕೇಳಿದರು. ಕಥೆ, ಕಾದಂಬರಿ, ಕೀರ್ತನೆ, ನಾಟಕ ಇತ್ಯಾದಿ ಎಲ್ಲಾ ಬಗೆಯ ಕನ್ನಡ ಪುಸ್ತಕಗಳನ್ನು ಮಯೂರ, ತುಷಾರ, ಕಸ್ತೂರಿ ಮುಂತಾದ ಪತ್ರಿಕೆಗಳನ್ನು ದಿನಾ ಓದುತ್ತೇನೆ. ಆದರೆ ಒಳ್ಳೆಯ ಪುಸ್ತಕಗಳು ಓದಲು ಸಿಗುವುದು ಕಷ್ಟ ಎಂದೆ. ಆಗ ಅವರು ನಿಮಗಿರುವ ಆಸಕ್ತಿ ಈ ಇಳಿ ವಯಸ್ಸಿನಲ್ಲೂ ಮೆಚ್ಚುವಂಥದ್ದು ನನ್ನಲ್ಲಿ ಸಾಕಷ್ಟು ಪುಸ್ತಕಗಳಿವೆ, ಓದಲು ಕೊಡುತ್ತೇನೆ. ಈ ಕಾಲದಲ್ಲಿ ಕನ್ನಡದಲ್ಲಿ ಓದುವವರೇ ಕಡಿಮೆ ಆಗುತ್ತಿದ್ದಾರೆ. ನಿಮ್ಮಂಥವರು ಹೆಚ್ಚು ಬೇಕು ಎಂದು ಹೇಳಿ ಮಾರನೆಯ ದಿನವೇ ಕೆಲವು ಪುಸ್ತಕಗಳನ್ನು ತಂದುಕೊಟ್ಟರು. ಅಂದಿನಿಂದ ಒಂದೊಂದು ಸಲಕ್ಕೂ ೫-೬ ಪುಸ್ತಕಗಳನ್ನು ತಂದುಕೊಡುತ್ತಾರೆ. ಓದಿ ಹಿಂದಿರುಗಿಸಿದಾಗ ಮತ್ತಷ್ಟು ಮನೆಗೇ ತಂದುಕೊಡುತ್ತಾರೆ. ಅಂದಿನಿಂದ ಇಂದಿನವರೆಗೆ ಒಂದೇ ಸಮನೆ ಪುಸ್ತಕ ತಂದುಕೊಡುತ್ತಿರುತ್ತಾರೆ. ನಾನು ಓದಿ ಕೊಡುತ್ತಿರುತ್ತೇನೆ. ಕೇವಲ ಪುಸ್ತಕಗಳನ್ನು ತಂದು ಕೊಡುವುದಷ್ಟೇ ಅಲ್ಲದೆ ಅನೇಕ ಸಾಹಿತ್ಯದ ಸಂಗತಿಗಳನ್ನು ಹೇಳುತ್ತಿರುತ್ತಾರೆ. ಹೀಗಾಗಿ ಅವರು ಪುಸ್ತಕ ಕೊಡಲು ಅಥವಾ ಹಿಂಪಡೆಯಲು ಬಂದಾಗಲೆಲ್ಲ ಒಳ್ಳೆಯ ಸಾಹಿತ್ಯ ಚರ್ಚೆಯಂತೆ ಮಾತುಕತೆಗಳಾಗುತ್ತವೆ.

ಅವರ ಲೈಬ್ರರಿಯನ್ನು ನೋಡಿದ್ದೇನೆ, ಸಾವಿರಾರು ಪುಸ್ತಕಗಳಿವೆ, ಎಲ್ಲಾ ವಿಷಯಗಳ ಬಗ್ಗೆಯೂ ಪುಸ್ತಕಗಳನ್ನು ಇಟ್ಟುಕೊಂಡಿದ್ದಾರೆ. ಅವೆಲ್ಲವನ್ನು ಓದಿ ಪುಸ್ತಕದಲ್ಲಿ ಟಿಪ್ಪಣಿ ಬರೆದಿರುತ್ತಾರೆ.

ತಮ್ಮ ಬಳಿ ಇರುವ ಪುಸ್ತಕಗಳಿಗೆಲ್ಲಾ ನಂಬರು ಹಾಕಿ ರಟ್ಟು ಹಾಕಿ ಅದಕ್ಕೆ ಕ್ರಮಸಂಖ್ಯೆ ಕೊಟ್ಟು ಬಳಸುತ್ತಾರೆ. ಯಾವುದೇ ಪುಸ್ತಕದ ಬಗ್ಗೆ ವಿವರ ಕೇಳಿದರೆ ಸಂತೋಷದಿಂದ ವಿವರ ನೀಡುತ್ತಾರೆ. ತಾವು ಕಲಿತಿದ್ದುದನ್ನು ತಿಳಿದಿದ್ದನ್ನು ಯಾರಿಗೆ ಆಗಲಿ ನೀಡುತ್ತಾರೆ. ಈ ಹೃದಯ ವೈಶಾಲ್ಯಭಾವ ಎಲ್ಲರಲ್ಲೂ ಇರುವುದಿಲ್ಲ.

ಇಂಥ ಗುಣವಂತ ಹೃದಯವಂತ ಸನ್ಮಿತ್ರರರ ಧರ್ಮಪತ್ನಿ ಅವರು ಕನ್ನಡ ಅಧ್ಯಾಪಕರೂ, ಲೇಖಕಿಯೂ ಆಗಿದ್ದಾರೆ. 'ಗಲಗಲಿ ಅವ್ವ' ಗ್ರಂಥವನ್ನು ಬರೆದಿದ್ದಾರೆ. ಸಾಕಷ್ಟು ವಿದ್ವತ್‌ಪೂರ್ಣ ಲೇಖನಗಳನ್ನು ಬರೆದಿದ್ದಾರೆ. ಮನೆಗೆ ಬಂದವರಿಗೆ ಅತಿಥಿ ಸತ್ಕಾರ ಮಾಡಿಯೇ ಮಾಡುತ್ತಾರೆ. ಈ ಇಬ್ಬರು ಶಿಕ್ಷಕ ದಂಪತಿಗಳ ಸ್ನೇಹ ಸಿಕ್ಕಿರುವುದು ನನ್ನ ಭಾಗ್ಯವೆಂದು ತಿಳಿದಿದ್ದೇನೆ. ಈಗ ಜಿ. ಅಶ್ವತ್ಥನಾರಾಯಣರ ಜೀವನ-ಸಾಧನೆ ಕುರಿತು ಗೌರವ ಗ್ರಂಥ ತರುತ್ತಿರುವವರು ನನ್ನನ್ನು ಒಂದು ಲೇಖನ ಕೇಳಿದರು. ನನಗೆ ತಿಳಿದಷ್ಟೇ ಸ್ವಲ್ಪ ವಿಷಯವನ್ನು ಬರೆದು ಕೊಟ್ಟಿದ್ದೇನೆ. ನಾನು ಓದುಗಾರ್ತಿ, ಬರಹಗಾರ್ತಿ ಅಲ್ಲ. ದೇವರು ಅವರಿಗೆ ದೀರ್ಘಾಯಸ್ಸು ಆರೋಗ್ಯ ಕೊಟ್ಟು ಕನ್ನಡ ಭುವನೇಶ್ವರಿಯ ಸೇವೆಯನ್ನು ಸದಾ ಮಾಡುತ್ತಿರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

****

ಕನ್ನಡದ ನವಚೇತನ

ಬೂಕಿನಕೆರೆ ಕೆ. ನಾಗೇಂದ್ರ,
ಮೇರಿಲ್ಯಾಂಡ್, ಅಮೆರಿಕಾ

"ಸರ್ವಜ್ಞನೆಂಬುವನು ಗರ್ವದಿಂದಾದವನೇ ।
ಓರ್ವೋರ್ವರಲಿ ಒಂದೊಂದು ನುಡಿಗಲಿತು ವಿದ್ಯೆಯಾ ।
ಪರ್ವತವೇ ಆದ ಸರ್ವಜ್ಞ ।"

ಮೇರಿಲ್ಯಾಂಡ್ ನ ಕೊಲಂಬಿಯಾದಲ್ಲಿ ನೆಲೆಸಿದ್ದ ಶ್ರೀಮತಿ ಕ್ಷಮಾ ಅಶ್ವತ್ಥ್, ಮತ್ತು ಶ್ರೀ ಜಯರಾಮ್ ದಂಪತಿಗಳು ಕಾವೇರಿಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದು, ಭೂಮಿಕಾ ಸಂಸ್ಥೆಯ ಬಗ್ಗೆ ತಿಳಿದಿದ್ದು, ಭಾರತದಿಂದ ತಮ್ಮಲ್ಲಿಗೆ ಆಗಮಿಸಿದ್ದ ತಂದೆ ಪ್ರೊ. ಅಶ್ವತ್ಥನಾರಾಯಣರವರನ್ನು ಮೇರಿಲ್ಯಾಂಡ್ ನ 'ಭೂಮಿಕಾ'ದ ಒಂದು ಪ್ರವಚನ ಕಾರ್ಯಕ್ರಮಕ್ಕೆ ಕರೆತಂದರು. ಅಂದಿನ ಅತಿಥಿ ಪ್ರವಚನಕಾರರ ಭಾಷಣಾನಂತರ, ಪ್ರಶ್ನೋತ್ತರ ಕಾಲದಲ್ಲಿ, ನೆರೆದ ಸಭೆಗೆ ಅಂದಿನ ವಿಷಯದ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಗಳನ್ನು ಶ್ರೀ ಅಶ್ವತ್ಥ ನಾರಾಯಣರವರು ನೀಡಿ, ಎಲ್ಲರನ್ನೂ ಸಂತಸಪಡಿಸಿದರು! ಅಂದಿನಿಂದ ಅವರ ಪರಿಚಯ ಅಮೆರಿಕಾದ ಕನ್ನಡ ಸಾಹಿತ್ಯ ಪ್ರೇಮಿಗಳಿಗೆ ಅಧಿಕವಾಯ್ತು! ಅವರು ಮತ್ತು ಅವರ ಪತ್ನಿ ಪ್ರೊ. ಲಕ್ಷ್ಮೀದೇವಿಯವರು ಕೆಲವು ಪ್ರವಚನಗಳನ್ನು ಭೂಮಿಕಾದ ಪ್ರಾರ್ಥನೆಯ ಮೇರೆಗೆ ನೀಡಿ ಇಲ್ಲಿನ ಸಾಹಿತ್ಯ ಬಂಧುಗಳಿಗೆ ಬಹು ಆತ್ಮೀಯರಾದರು! ಬೆಂಗಳೂರಿನಲ್ಲಿ ನಡೆದ ಅವರ ಪ್ರೀತಿಯ ಮೊಮ್ಮಗ ಚಿ. ಆದಿತ್ಯನ ಉಪನಯನದಲ್ಲಿ ಮತ್ತು ಆಗಾಗ್ಗೆ ಬೆಂಗಳೂರಿಗೆ ಭೇಟಿ ನೀಡುತ್ತಿದ್ದ ನಾನು ಮತ್ತು ನನ್ನ ಪತ್ನಿ ಜಯಾ ಭಾಗವಹಿಸಿ, ಅವರ ಪ್ರೀತಿ, ಔದಾರ್ಯಗಳನ್ನು ಸವಿದೆವು!

ಅಮೆರಿಕಾದ ರಾಜಧಾನಿ ವಾಷಿಂಗ್ಟನ್ನಿನ ಸಂಯುಕ್ತ ವಲಯಗಳಾದ ಮೇರಿಲ್ಯಾಂಡ್ ಮತ್ತು ವರ್ಜಿನಿಯಾದ ಕನ್ನಡ ಸಾಹಿತ್ಯ ಕೇಂದ್ರವಾಗಿ ದಿ. ಡಾ. ವಿಜಯ ಮತ್ತು ದಿ. ಶ್ರೀ ಮನೋಹರ್ ರವರು ೧೯೮೬ ರಲ್ಲಿ 'ಭೂಮಿಕಾ' ಎಂಬ ಕನ್ನಡ ಸಾಹಿತ್ಯ ಸಮಾಗಮ ಸಂಸ್ಥೆಯನ್ನು ಮೇರಿಲ್ಯಾಂಡ್ ನ ರಾಕ್ವಿಲ್ ಬಡಾವಣೆಯಲ್ಲಿ ಸ್ಥಾಪಿಸಿದ್ದು, ಅಲ್ಲಿ ಪ್ರತಿ ತಿಂಗಳ ಮೊದಲ ಭಾನುವಾರದಂದು, ಭಾರತದಿಂದ ಆಗಮಿಸಿದ ಉತ್ತಮ ಸಾಹಿತಿಗಳ ಮತ್ತು ಸ್ಥಳೀಯರ ವಿವಿಧ ವಿಷಯಗಳ ಬಗ್ಗೆ ಪ್ರವಚನ ಕಾರ್ಯಕ್ರಮಗಳು ನಡೆಯುತ್ತಿದ್ದವು. ಕರ್ನಾಟಕದ ಅನೇಕ ಸಾಹಿತಿಗಳು, ಗಣ್ಯರು, ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸಂಸ್ಥೆಯು ಸರ್ವರ ಪ್ರೀತಿಯನ್ನು ಗಳಿಸಿ, ಎಲ್ಲರ ಆನಂದದ ಸಾಹಿತ್ಯ ಬಿಂದುವಾಗಿ ಮೆರೆದಿತ್ತು! ಭಾರತದಿಂದ ಆಗಮಿಸುವ ಸಾಹಿತಿಗಳು ಮತ್ತು ಅನೇಕ ಗಣ್ಯರು ಆ ಕೀರ್ತಿವಂತ ಸಂಸ್ಥೆಯಲ್ಲಿ ಪ್ರವಚನ ನೀಡುವುದು ಒಂದು ಸೌಭಾಗ್ಯವೆಂದು ಭಾವಿಸಿದ್ದರು! ಒಂದು ವರ್ಷದ ಹಿಂದೆ ಶ್ರೀ ಮನೋಹರ್ ಮತ್ತು ಶ್ರೀಮತಿ ವಿಜಯ ದಂಪತಿಗಳು ಕೀರ್ತಿಶೇಷರಾಗಿದ್ದು,

ಇಲ್ಲಿನ ಜನಮನದಲ್ಲಿ ಅವರ ಅವಿಶ್ರಾಂತವಾದ ಕನ್ನಡಮಾತೆಯ ಮಹಾ ಸಾಹಿತ್ಯಸೇವೆಗಳು ಇಂದಿಗೂ ಹಸಿರಾಗಿ ಬೆಳಗುತ್ತಿವೆ!

ಪ್ರೊ. ಜಿ. ಅಶ್ವತ್ಥನಾರಾಯಣರವರು ಅವರ ನಲ್ಮೆಯ ಸೇವಾಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ಕಾರ್ಯಕ್ರಮಗಳು, ಅದರ ಗ್ರಂಥಾಲಯ, ಅಲ್ಲಿನ ಅಮೂಲ್ಯ ಗ್ರಂಥಗಳಲ್ಲದೇ ಅವರ ರಮ್ಯಭಾಷೆಯಲ್ಲಿ ಭವ್ಯವಾಗಿ ಕನ್ನಡದ ಹಿರಿಮೆಯನ್ನು ಇಲ್ಲಿ ಸಾರಿದರು. ಅಂತೆಯೇ, ಪ್ರೊ. ಲಕ್ಷ್ಮೀದೇವಿಯವರೂ ಸಹಾ ಕನ್ನಡ ಸಾಹಿತ್ಯದಲ್ಲಿ ಕೀರ್ತಿವೆತ್ತ ಮಹಿಳೆಯರ ಬಗ್ಗೆ ನಮಗೆ ತಿಳಿಯದ ಅನೇಕ ಹೊಸ ವಿಷಯಗಳನ್ನು ವಿವರಿಸಿ, ಭಾಷಣಾನಂತರದ ಪ್ರಶ್ನೋತ್ತರ ಸಮಯದಲ್ಲಿ ಸಭಾಸದರಲ್ಲಿ ಇದ್ದ ಸಂದೇಹಗಳನ್ನು ನಿವಾರಿಸಿದರು. ಶ್ರೀ ಅಶ್ವತ್ಥನಾರಾಯಣರವರು ತಮ್ಮ ಅಸದೃಶವಾದ ಜ್ಞಾನಭಂಡಾರವನ್ನು ವಿಶ್ವವಿದ್ಯಾನಿಲಯಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ನೀಡಿರುವುದಲ್ಲದೆ, ಸದಾ ನೆನೆಪಿನಲ್ಲಿ ಉಳಿಯುವಂತೆ ತಮ್ಮ ವಿಶೇಷವಾದ ಸರಳ ಜೀವನ, ಉತ್ತಮ ಚಿಂತನ, ಹಿತಕರವೂ, ಸಂತೋಷದಾಯಕವೂ ಆದ ಹಾಸ್ಯಪ್ರವೃತ್ತಿ ಮತ್ತು ನಿರರ್ಗಳವಾದ ವಾಕ್ಶಕ್ತಿಯನ್ನು ರೂಢಿಸಿಕೊಳ್ಳುವಂತೆ, ಅವರಿಗೆ ವಿದ್ಯೆಯನ್ನು ಧಾರೆ ಎರೆದಿದ್ದಾರೆ. ಈ ಅದ್ಭುತವಾದ ವಿಶೇಷ ಸದ್ಗುಣಗಳನ್ನು ವಿಶ್ವದಾದ್ಯಂತ ವ್ಯಾಪಿಸಿರುವ ಅವರ ಹೆಚ್ಚಿನ ವಿದ್ಯಾರ್ಥಿಗಳಲ್ಲಿ ಇಂದಿಗೂ ನಾವು ಗುರುತಿಸಬಹುದು!

ಬಾಲ್ಟಿಮೋರ್ ನಲ್ಲಿ ಕಾವೇರಿ ಸಂಸ್ಥೆಯು ಪ್ರೊ. ಜಿ. ಅಶ್ವತ್ಥನಾರಾಯಣರವರ ಬೆಂಗಳೂರು ಸರ್ಕಾರಿ ಆರ್ಟ್ಸ್ ಕಾಲೇಜ್ ನ ಅವರ ವಿದ್ಯಾರ್ಥಿ ಶ್ರೀ ಸುರೇಶ್ ಮತ್ತು ಅವರ ಮಿತ್ರ ವಾಷಿಂಗ್ಟನ್ನಿನ ಸಿ.ಎ.ಸಿ.ಐ. ಸಂಸ್ಥೆಯ ನಿರ್ದೇಶಕ ಶ್ರೀ ರವಿ ಡೆಂಕನಕೋಟೆಯವರ ಅಧ್ಯಕ್ಷತೆಯಲ್ಲಿ ೨೦೦೬ ರಲ್ಲಿ ಕಾವೇರಿ ಸಂಸ್ಥೆಯಲ್ಲಿ ಏರ್ಪಡಿಸಲಾಗಿದ್ದ ಅಕ್ಕ ಕನ್ನಡ ವಿಶ್ವ ಸಮ್ಮೇಳನದಲ್ಲಿ ನಾನು ಧಾರ್ಮಿಕ ಕಾರ್ಯಕ್ರಮಗಳ ಸಮಿತಿಯಲ್ಲಿ ಸೇವೆ ಸಲ್ಲಿಸಿದೆ. ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು, ಶ್ರೀ ರವಿಶಂಕರ್, ಶ್ರೀ ಎಸ್.ಎಲ್. ಭೈರಪ್ಪನವರು ಅಲ್ಲದೆ ಖ್ಯಾತರಾದ ಅನೇಕ ಕವಿಗಳು, ಕಾದಂಬರಿಕಾರರು ಭಾಗವಹಿಸಿ, ಆ ಸಂದರ್ಭದಲ್ಲಿ ಎಲ್ಲರಿಗೂ ಮುದವನ್ನು ನೀಡಿದರು. ಆ ಅಮೋಘವಾದ ಸಾಹಿತ್ಯ ಸರಣಿ ಕಾರ್ಯಕ್ರಮಕ್ಕೆ ಪ್ರೊ. ಅಶ್ವತ್ಥನಾರಾಯಣ ದಂಪತಿಗಳನ್ನೂ ಕರೆದೊಯ್ಯುವ ಭಾಗ್ಯ ಮತ್ತು ಅವರೊಡನೆ ಎರಡು ದಿನದ ಅಲ್ಲಿನ ಸತ್ಸಂಗ ನನಗೆ ಒದಗಿ, ಮಹದಾನಂದವಾಯಿತು!

ಜನರು ತಮಗೆ ಹೆಚ್ಚು ಪ್ರೀತಿಯಾದ ಗುಣಗಳನ್ನು ಒಳಗೊಂಡಿರುವ ಹೆಸರುಗಳನ್ನು ತಮ್ಮ ಮಕ್ಕಳಿಗೆ ಆರಿಸಿ ಇಡುವುದು ರೂಢಿಯಲ್ಲಿದೆ. ಇದರಿಂದ ಆಯಾ ಮಾತಾಪಿತೃಗಳಿಗೆ ಪ್ರಿಯವಾದ ಸ್ವಭಾವ–ಧರ್ಮಗಳೂ, ಮನೋ ಭಾವನೆಗಳು ಇತರರಿಗೆ ಸೂಕ್ಷ್ಮವಾಗಿ ತಿಳಿಯುತ್ತವೆ. ಅಶ್ವತ್ಥನಾರಾಯಣ ದಂಪತಿಗಳು ತಮ್ಮ ಪ್ರೀತಿಯ ಏಕೈಕ ಪುತ್ರಿಗೆ 'ಕ್ಷಮಾ' ಎಂದು ಹೆಸರಿಸಿದ್ದಾರೆ. "ಕ್ಷಮಯಾ ಧರಿತ್ರೀ..." ಅಂದರೆ, ಭೂಮಾತೆಯು ಮಹಾ ತಾಳ್ಮೆಯ ಸಂಕೇತ; ಅನೇಕ ವಿಧವಾದ ಭಾರಗಳನ್ನು ಹೊರುವ ಶಕ್ತಿಯನ್ನು ಹೊಂದಿರುವದಲ್ಲದೆ, ಆ ಬಗ್ಗೆ ಯಾವುದೇ, ಯಾರದೇ ತಪ್ಪನ್ನು ಕಾಣದೇ ಇರುವ ಅತ್ಯುತ್ತಮ ಗುಣ! ಇದರಿಂದ, ಆ ದಿವ್ಯದಂಪತಿಗಳ ಜೀವನದ ಘನವಾದ ನೀತಿಗಳು, ಧ್ಯೇಯಗಳು ಸರ್ವರಿಗೂ ವಿದಿತವಾಗುತ್ತವೆ. ಈಗ ಮಗಳು ಕ್ಷಮಾ ಮತ್ತು ಶ್ರೀ ಜಯರಾಮ್ ದಂಪತಿಗಳು ವರ್ಜಿನಿಯಾದಲ್ಲಿ ನೆಲೆಸಿದ್ದು, ಅವರ ಇಬ್ಬರು ಮಕ್ಕಳು ಶ್ರೀ ಆದಿತ್ಯ ಮತ್ತು ಕುಮಾರಿ ಅಮೋಘಾ ಅದೇ ಸೌಶೀಲ್ಯದ ಸ್ವರೂಪರೋ ಎಂಬಂತೆ ಅವರ ಕುಟುಂಬದಲ್ಲಿ, ಬಹು ಗುಣಾಢ್ಯರಾಗಿ ಬೆಳೆಯುತ್ತಿರುವುದು ಒಮ್ಮೆ ಅವರ ಮನೆಗೆ ಭೇಟಿ ನೀಡಿದಾಗ, ನಮಗೆ ಎದ್ದು ಕಾಣುತ್ತದೆ!

ಶ್ರೀ ಅಶ್ವತ್ಥನಾರಾಯಣರವರ ಪಾಂಡಿತ್ಯ ಮತ್ತು ಅವರ ಬಗ್ಗೆ ಸಾಹಿತ್ಯಪ್ರೇಮಿಗಳು ಹಾಗೂ ಜನತೆಗೆ ಇರುವ ಪ್ರೀತ್ಯಾದರಗಳನ್ನು ಅರ್ಥೈಸಿ, ಪ್ರತಿ ವರ್ಷ ನಾಡಿನ ಅನೇಕ ಸಾಂಸ್ಕೃತಿಕ

ಹಾಗೂ ಬೆಂಗಳೂರಿನ ಬಸವನಗುಡಿಯ ಶ್ರೀ ಗೋಖಲೆ ಸಾಮಾಜಿಕ ಸಂಸ್ಥೆ ಮೊದಲಾದ ಪ್ರಸಿದ್ಧ ಸಂಘಗಳು ಅವರ ಪ್ರವಚನ ಮಾಲೆಯನ್ನು ಏರ್ಪಡಿಸುತ್ತವೆ. ಅಲ್ಲಿನ ಅವರ ಒಂದು ಭಾಷಣಕ್ಕೆ, ನಮ್ಮ ಬೆಂಗಳೂರಿನ ಒಂದು ಪ್ರಯಾಣದಲ್ಲಿ, ಆಗ ಹೆಚ್ಚು ಬೆಂಗಳೂರಿನಲ್ಲಿ ನೆಲೆಗೊಂಡಿದ್ದ ಮಿತ್ರ ಶ್ರೀ ಮನೋಹರ ಕುಲಕರ್ಣಿಯವರೊಡನೆ, ನಮ್ಮ ಅಮೇರಿಕಾ ಹಾಗೂ ಭಾರತದ ಪ್ರಿಯಮಿತ್ರ ಶ್ರೀ ಕುಕ್ಕೇ ಗೋಪಾಲ್ ಮತ್ತು ಶ್ರೀಮತಿ ನಳಿನಿಯವರೊಡನೆ ನಾನು ಮತ್ತು ನನ್ನ ಪತ್ನಿ ಜಯಾ ಭಾಗವಹಿಸಿ, ಆನಂದಿಸಿದೆವು!

ಅವರಿಗೆ ಗ್ರಂಥಗಳೆಂದರೆ ಅಪಾರ ಪ್ರೇಮ! ಅವರ ಗೃಹ ಗ್ರಂಥಭಂಡಾರದಲ್ಲಿ ಅನೇಕ ಅಪೂರ್ವ ಗ್ರಂಥಗಳಿದ್ದು, ಹೆಚ್ಚು ಸಮಯವನ್ನು ಅವರು ಅಲ್ಲಿ ಅಧ್ಯಯನದಲ್ಲಿ ಕಳೆಯುತ್ತಾರೆ. ಅವರ ಆ ಬೃಹತ್ ಗ್ರಂಥಭಂಡಾರವನ್ನು ನೋಡಿ ನಾನು ಮಹದಾನಂದಗೊಂಡು, ಅಮೆರಿಕೆಗೆ ಆ ಬಾರಿ ಹಿಂದಿರುಗುವಾಗ ನನ್ನ ಕೆಲವು ವಿಶೇಷ ಗ್ರಂಥಗಳನ್ನು ಅವರ ಮಹಾ ಗ್ರಂಥಸಂಗ್ರಹಕ್ಕೆ ನೀಡಿ, ಧನ್ಯನಾದೆ. ಅವರ ಬಂಧುಗಳ ಬಹು ಹಿರಿದು! ನಾನು ಅನೇಕ ಬಾರಿ, ಮತ್ತು ನನ್ನ ಹಿರಿಯ ಪ್ರಿಯ ಮಿತ್ರ ಶ್ರೀ ಗುರುಸ್ವಾಮಿ ಅಯ್ಯರವರೊಡನೆ ಒಮ್ಮೆ ಶ್ರೀ ಅಶ್ವತ್ಥನಾರಾಯಣ ಮತು ಶ್ರೀಮತಿ ಲಕ್ಷ್ಮೀದೇವಿಯವರ ಗೃಹಕ್ಕೆ ತೆರಳಿದಾಗ, ಅವರ ಸವಿಮಾತುಗಳ ಜೊತೆಗೆ, ನಗರದಲ್ಲಿ ನಾನಾ ಕಡೆಗಳಲ್ಲಿ ಬಿಡುವಿಲ್ಲದಂತೆ ಏರ್ಪಾಡಾಗಿರುವ ಅವರ ಅಸಂಖ್ಯಾತ ಕಾರ್ಯಕ್ರಮಗಳ ವಿವರಗಳ ಬಗ್ಗೆ ಅವರಿಂದ ಕೇಳಿ, ಆ ದಂಪತಿಗಳು ನೀಡುವ ಎಂದೂ ಮರೆಯಲಾಗದಂತಹ ಬಹು ರುಚಿಯಾದ ವಿವಿಧ ಫಲಾಹಾರಗಳನ್ನು ಆಸ್ವಾದಿಸಿದ್ದೇವೆ!

ಅನೇಕ ಜೀವನ ಚರಿತ್ರೆಗಳು, ಟೀಕಾ ಗ್ರಂಥಗಳು, ಮಾತು ಇತರ ಮುಖ್ಯ ವಿಷಯಗಳ ಬಗ್ಗೆ ನೂರಾರು ಗ್ರಂಥಗಳನ್ನು ರಚಿಸಿ, ಪ್ರಕಟಿಸಿರುವ ಶ್ರೀ ಅಶ್ವತ್ಥನಾರಾಯಣರವರು ಅಸಂಖ್ಯಾತ ಬರಹಗಾರರಿಗೆ ಮಾರ್ಗದರ್ಶಕರಾಗಿ, ಎಲ್ಲರ ಪ್ರೀತಿಯನ್ನು ಸಂಪಾದಿಸಿದ್ದಾರೆ! ಅವರ ಗ್ರಂಥರಚನಾ ನಿಪುಣತೆ, ವಿಷಯ ಸಂಗ್ರಹ, ಪರಿವಿಡಿ, ಅಧ್ಯಾಯಗಳ ಏರ್ಪಾಟು, ಪೂರ್ಣಗ್ರಂಥದ ಪೂರ್ವಚಿತ್ರಣ ಶಕ್ತಿ ಅಸದೃಶವಾದುದು! ಹೀಗಾಗಿ, ನೂರಾರು ನೂತನ ಲೇಖಕರು ಅವರ ಸಲಹೆಗಳನ್ನು ಪಡೆದು, ಉತ್ತಮ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕದಾದ್ಯಂತ ಶ್ರೀ ಪುರಂದರ-ಕನಕೋತ್ಸವ, ಶ್ರೀ ತ್ಯಾಗರಾಜೋತ್ಸವಗಳಲ್ಲಿ ನಮ್ಮ ಸಂತರ, ದಾಸವರೇಣ್ಯರ ಸಾಹಿತ್ಯದ ಮಹಾಪಂಡಿತರಾಗಿರುವ ಅವರ ಪ್ರವಚನಗಳ ಲಾಭವನ್ನು ಪಡೆಯದ ಸಂಸ್ಥೆಗಳಿಲ್ಲ!

ನಾನು ನಮ್ಮ ಗುರುಗಳಾದ ಶ್ರೀ ಸದ್ಗುರು ಭದ್ರಗಿರಿ ಕೇಶವದಾಸರ ಮತ್ತು ದಾಸಾಶ್ರಮದ ಹತ್ತಾರು ವರ್ಷ ಕಾರ್ಯದರ್ಶಿಯಾಗಿ ಸೇವೆಗೈದು 'ಭದ್ರಗಿರಿಯ ಭಕ್ತಿಯೋಗಿ' ಎಂಬ ಅವರ ಜೀವನ ಚರಿತ್ರೆಯನ್ನು ೧೯೭೬ರಲ್ಲಿ ಬರೆದಿದ್ದು, ಶ್ರೀ ಕೇಶವದಾಸರಚಿತ ದಿವ್ಯ ಗ್ರಂಥಗಳಾದ 'ಪುರಂದರೋಪನಿಷತ್','ಶ್ರೀ ಗಾಯತ್ರಿ ಮಹಿಮೆ' ಮೊದಲಾದವುಗಳ ಪುನರ್ಮುದ್ರಣ ಸೇವೆಯನ್ನು ಅಮೇರಿಕೆಯಿಂದ ಬೆಂಗಳೂರಿಗೆ ತೆರಳಿ ೨೦೧೨ರಲ್ಲಿ ಮಾಡಿದಾಗ, ಕೇಶವದಾಸರು ಹಿಂದೆ ರಚಿಸಿದ 'ಕೀರ್ತನರೂಪೀ ಭಗವದ್ಗೀತೆ'ಯ ಪ್ರಥಮ ಅಧ್ಯಾಯ ಗ್ರಂಥದ ಬಗ್ಗೆ ಶ್ರೀ ಅಶ್ವತ್ಥನಾರಾಯಣರವರಿಗೆ ಹೀಗೇ ಮಾತಾಡುವಾಗ ತಿಳಿಸಿದೆ. ಅವರು ಭಗವದ್ಗೀತಾ ಗ್ರಂಥದ ಅಸಂಖ್ಯಾತ ವಿವಿಧ ಪ್ರಕಟಣೆಗಳಲ್ಲಿ ಪರಿಣತರಾಗಿದ್ದು, ಗೀತೆಯ ಬಗ್ಗೆ ಬಹಳ ಆಳವಾದ ಪರಿಶೋಧನೆ ನಡೆಸಿರುವುದಲ್ಲದೆ, ಒಂದೊಂದು ವಿಶೇಷ ಶಬ್ದಗಳು ಎಷ್ಟು ಬಾರಿ ಗೀತೆಯಲ್ಲಿ ಬಂದಿವೆ ಎಂಬುದನ್ನೂ ಹುಡುಕಿ ತೆಗೆದಿದ್ದಾರೆ! ಅವರು 'ಈ ಹೆಸರಿನ ಭಗವದ್ಗೀತಾ ಗ್ರಂಥ ಇಲ್ಲಿಯವರಿಗೆ ಎಲ್ಲೂ ಪ್ರಕಟಣೆಯಾಗಿಲ್ಲ; ಅದನ್ನು ಖಂಡಿತಾ ಪ್ರಕಟಿಸಿ' ಎಂದು ನನಗೆ ಆ ಗ್ರಂಥವನ್ನು ಪೂರ್ಣಗೊಳಿಸಲು ಉತ್ತೇಜಿಸಿದರು!

ಅವರ ವಾಣಿಯಿಂದ ಸ್ಫೂರ್ತಿಗೊಂಡೆ! ಶ್ರೀ ಕೇಶವದಾಸರು ೧೯೬೧ರಲ್ಲಿ ಎಚ್.ಎ.ಎಲ್. ಕನ್ನಡ ಸಂಘದ ವಿನಂತಿಯ ಮೇರೆಗೆ ಕೀರ್ತನರೂಪಿಯಾಗಿ ಬಂದು ಅಲ್ಲಿ ಒಂದು ವಾರಪರ್ಯಂತ, ಸಪ್ತಾಹರೂಪಿಯಾಗಿ ಭಗವದ್ಗೀತೆಯ ಕೀರ್ತನೆ ನಡೆಸಿದ್ದು, ಅದರ ಪ್ರಥಮ ಅಧ್ಯಾಯವನ್ನು ಈ ಹೆಸರಿನಿಂದ ಪ್ರಕಟಗೊಳಿಸಿದ್ದರು. ಅದಾದ ನಂತರ ಅವರು ನಗರಾದ್ಯಂತ, ವಿಶ್ವಾದ್ಯಂತ ಅವರ ಮುವ್ವತ್ತು ವರ್ಷಗಳ ಗೀತಾ ಜ್ಞಾನಯಜ್ಞಗಳಲ್ಲಿ ಮತ್ತು ಅನೇಕ ಕೀರ್ತನಯಜ್ಞ ಸಮಾರಂಭಗಳಲ್ಲಿ ರಚಿಸಿದ ಭಗವದ್ಗೀತಾ ಮುಂತಾದ ಕೀರ್ತನೆಗಳು ಮುದ್ರಣಗೊಂಡಿರಲಿಲ್ಲ. ಆ ಗೀತಾ ಕೃತಿಗಳನ್ನು ಕೇಶವದಾಸರ ಅಗಾಧವಾದ ಭಕ್ತಿಸಾಹಿತ್ಯದ ೭,೦೦೦ ಖ್ಯಾತ ಕೃತಿಗಳಿಂದ ಆರಿಸಿ, ಒಂದು ವರ್ಷಕಾಲ ಅದರಲ್ಲಿ ಕೆಲಸ ಮಾಡಿ, 'ಕೀರ್ತನರೂಪೀ ಭಗವದ್ಗೀತೆ' ಎಂಬ ಮೂಲ ಹೆಸರಿನಿಂದಲೇ ಪೂರ್ಣ ಗೀತೆಯನ್ನು ಸಿದ್ಧಪಡಿಸಿ, ಶ್ರೀ ಅಶ್ವತ್ಥನಾರಾಯಣರವರಿಗೆ ನೀಡಿದೆ. ಅದನ್ನು ಕಂಡು, ಬಹು ಆಶ್ಚರ್ಯ, ಸಂತಸ ವ್ಯಕ್ತಪಡಿಸಿ, ಆ ಗ್ರಂಥವು ಜನತೆಗೆ ಉತ್ತಮವಾಗಿ ಉಪಕೃತವಾಗುವಂತೆ ಮಾಡಲು, ಅವರು ಅನೇಕ ದಿವ್ಯ ಸಲಹೆಗಳನ್ನು ನೀಡಿದರು!

ಆ 'ಕೀರ್ತನರೂಪೀ ಭಗವದ್ಗೀತಾ' ಗ್ರಂಥವು ಭಗವದ್ಗೀತೆಯ ಬಗ್ಗೆ ಶ್ರೀ ಕೇಶವದಾಸರ ಅನೇಕ ಇಂಗ್ಲಿಷ್ ಪ್ರವಚನಗಳ ತರ್ಜುಮೆಗಳು, ನೂರಾರು ಶ್ರೀ ಕೃಷ್ಣಪರ ಕೀರ್ತನೆಗಳು, ಕೇಶವದಾಸರಿಗೆ ಪ್ರಿಯವಾಗಿದ್ದ ಶ್ಲೋಕಗಳು, ಎಲ್ಲವನ್ನೂ ಒಳಗೊಂಡಿವೆ. ಗ್ರಂಥದಲ್ಲಿ 'ಭಗವದ್ಗೀತಾ ಅಂತ್ಯಾಕ್ಷರಿ' ಯನ್ನು ಸೇರಿಸಲು ಶ್ರೀ ಅಶ್ವತ್ಥನಾರಾಯಣರವರು ಸಲಹೆ ನೀಡಿದುದೇ ಅಲ್ಲದೆ, ಗೀತೆಯ ೭೦೦ ಶ್ಲೋಕಗಳಲ್ಲಿ ಇನ್ನೂ ಕೇಶವದಾಸರಿಂದ ರಚಿತವಾಗದ ನೂರಾರು ಕೀರ್ತನೆಗಳನ್ನು ರಚಿಸಿ, ತುಂಬಿ ಕೊಡಲು ಸಹಕರಿಸಿದ ಶ್ರೀ ಕೇಶವದಾಸರ ಶಿಷ್ಯೆ, ಪಂಡಿತೆ, ಆಶ್ರಮದ ನಮ್ಮೆಲ್ಲರ ಪ್ರೀತಿಯ ಸಹೋದರಿ ಶ್ರೀಮತಿ ಜಾನಕಿ ಸತ್ಯಮೂರ್ತಿಯವರಿಗೆ ಕೃತಜ್ಞತೆ ನೀಡಲು ನೆನಪು ಮಾಡಿದರು! 'ಸರ್ವಜ್ಞ' ತ್ರಿಪದಿಗಳನ್ನು ಇಂಗ್ಲಿಷ್ ಗೆ ನಾನು ಅನುವಾದಿಸಲು ಯತ್ನಿಸುತ್ತಿರುವುದನ್ನು ತಿಳಿದು, ಕರ್ನಾಟಕ ಪುಸ್ತಕ ಪ್ರಾಧಿಕಾರವು ಅಂತಹ ಕನ್ನಡ ಸಾಹಿತ್ಯದ ಅನ್ಯಭಾಷಾ ಅನುವಾದಕರನ್ನು ಗುರುತಿಸಿ, ಗೌರವಿಸುತ್ತದೆ ಎಂದು ತಿಳಿಸಿ, ಪ್ರೊ. ಅಶ್ವತ್ಥನಾರಾಯಣರವರು ಸಂತ ಮಹಾಂತ ಶ್ರೀ ಸರ್ವಜ್ಞರ ತ್ರಿಪದಿಗಳ ಅನೇಕ ಸಂಗ್ರಹ ಗ್ರಂಥಗಳನ್ನು ನೀಡಿ, ನನಗೆ ಸ್ಫೂರ್ತಿ ನೀಡಿದರು. ನನ್ನ ಪ್ರಾರ್ಥನೆಯಂತೆ, ಅವರೇ ವಿಶ್ವಶಾಂತಿ ಆಶ್ರಮದಲ್ಲಿ ಆ ದಿವ್ಯ ಗ್ರಂಥವನ್ನು ಉದ್ಘಾಟಿಸಿದರು. ಮರುದಿನ, ಶ್ರೀ ವಿಶ್ವೇಶ ತೀರ್ಥಶ್ರೀಪಾದರು ನೂತನವಾಗಿ ಸಂಪಾದಿಸಿದ 'ಪುರಂದರೋಪನಿಷತ್' ಗ್ರಂಥವನ್ನು ಬಿಡುಗಡೆ ಮಾಡಿ, ಹರಸಿದರು.

ಶ್ರೀ ಅಶ್ವತ್ಥನಾರಾಯಣರವರ ಈ ಎಲ್ಲ ಮಹದುಪಕಾರಗಳಿಗೆ, ಅವರ ಮಹಾಕರುಣೆಗೆ, ಅವರಿಗೆ ನಿರಂತರ ನಾನು ಆಭಾರಿಯಾಗಿದ್ದೇನೆ! ನನ್ನಂತಹ ಅನೇಕ ಲೇಖಕರಿಗೆ ಅವರು ಸ್ಫೂರ್ತಿಯನ್ನಿತ್ತು ಅನೇಕರು ಸರ್ವೋಪಯೋಗೀ ಸತ್ಕಾರ್ಯಗಳಲ್ಲಿ ತೊಡಗುವಂತೆ ಮಾರ್ಗದರ್ಶನ ಮಾಡಿದ್ದಾರೆ! ಶ್ರೀ ಸರ್ವಜ್ಞ ಮಹಾಕವಿಯಂತೆ ಸರಳ ಜೀವನ, ಉತ್ತಮ ಚಿಂತನಗಳಿಂದೊಡಗೊಂಡು, ಬಾಳಿದೀ, ಇಂತಹ ಅನೇಕ ಸತ್ಕಾರ್ಯಗಳನ್ನು ಮಾಡಿ, ಎಲ್ಲರಿಗೂ ಆದರ್ಶವಾಗಿರುವ ಶ್ರೀ ಅಶ್ವತ್ಥನಾರಾಯಣ ದಂಪತಿಗಳಿಗೆ, ಅವರ ಪ್ರತಿಭಾಯುಕ್ತ ಕುಟುಂಬದ ಸದಸ್ಯರಿಗೆ, ಶ್ರೀ ವಿಶ್ವವಿಜಯವಿಠಲ ಸ್ವಾಮಿಯು ಸದಾ ಸುಖಸಂತೋಷದಿಂದಿರಿಸಿ, ರಕ್ಷಿಸಲೆಂದು ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

****

ಲೇಖಕರಿಗೆ ಮಾರ್ಗದರ್ಶಿ

ವಸುವತ್ಸಲೆ
ಚರವಾಣಿ : ೮೭೯೨೬೯೩೪೩೮

ಕನ್ನಡ ಭಾಷೆಗಷ್ಟೇ ಮಹತ್ತರವಾದ ಪರಂಪರೆ ಇಲ್ಲ. ಕನ್ನಡ ಉಸಿರಾಗಿಸಿಕೊಂಡು ಬೋಧಿಸಿದ ಮೇಷ್ಟ್ರುಗಳ ಕನ್ನಡ ಪ್ರೇಮಕ್ಕೂ ಒಂದು ಬೃಹತ್ ಚಾರಿತ್ರಿಕ ಪರಂಪರೆ ಇದೆ. ಕನ್ನಡದ ಹಲವಾರು ಲೇಖಕರು ಪಂಡಿತೋತ್ತಮರ ಸಾಧನೆಯ ಹಿಂದೆ ಅವರ ಗುರುಗಳ ಶ್ರಮವಿದ್ದೇ ಇದೆ. ಅದರಲ್ಲೂ ಕನ್ನಡ ಪ್ರಾಧ್ಯಾಪಕರು ಸ್ವತಃ ತಮ್ಮ ಬರವಣಿಗೆ, ಜ್ಞಾನ, ವೈಶೇಷಿಕತೆಗಳ ಪ್ರಯೋಗದಿಂದ ಹುಟ್ಟು ಹಾಕಿದ ಜೀವನ ಮೌಲ್ಯಗಳು, ಸಾಹಿತ್ಯಿಕ ಆಲೋಚನೆಗಳು , ಅಧ್ಯಯನ ವಿಶೇಷಗಳು, ಚಿಂತನೆಗಳ ರೂಹು ವಿದ್ಯಾರ್ಥಿಗಳ ಬೃಹತ್ತಿಗೂ ಮಹತ್ತಿಗೂ ಕಾರಣವಾಗಿರುವುದು ಸುಳ್ಳಲ್ಲ. ಈ ಕಾರಣದಿಂದಲೇ ಸರಿಗನ್ನಡವು ಸಿರಿಗನ್ನಡವಾಗಿ ಇಂದಿಗೂ ಸಮೃದ್ಧವಾಗಿರಲು ಸಾಧ್ಯವಾಗಿದೆ.

ಒಬ್ಬ ಲೇಖಕ ಒಬ್ಬನಾಗುತ್ತಾನೆ. ಆದರೆ ಒಬ್ಬ ಮೇಷ್ಟ್ರು ನೂರಾರು ಲೇಖಕರ ಜೀವದಾತನಾಗಿರುತ್ತಾನೆ. ತನ್ನ ವಿದ್ಯಾರ್ಥಿಗಳ ಉತ್ಪತ್ತಿಯನ್ನೇ ಸಂಭ್ರಮಿಸುವ ಕನ್ನಡಿಯೆಂದರೆ ಅತಿಶಯೋಕ್ತಿಯಲ್ಲ. ವಿದ್ವತ್ತಿನ ವಿಶ್ವಕೋಶದಂತಹ ಪ್ರಾಧ್ಯಾಪಕರ ಅಗಾಧ ವಿದ್ವತ್ತೇ ವಿದ್ಯಾರ್ಥಿಯ ಏಳಿಗೆಗಳಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಾರಣವಾಗಿರುತ್ತದೆ. ಅಂತಹ ಗುರುಗಳನ್ನು ಪಡೆದ ಶಿಷ್ಯರೆಲ್ಲಾ ಧನ್ಯರು. ಇಂದಿಗೂ ಕನ್ನಡ ಅಸ್ಮಿತೆಗೆ ಒಂದು ಭಾಷೆಯ ಸಮೃದ್ಧಿಗೆ ಅಂತಹ ಗುರುಗಳ ಕಾಣ್ಕೆಗಳು ಗುರು ಶಿಷ್ಯರ ಸಮೇತ ಅಪಾರವಾಗಿ ಅರ್ಪಿತವಾದಂಥವು. ಅಂತಹ ಸಹೃದಯತೆಯನ್ನು ನಾನು ಕಂಡದ್ದು ಹಿರಿಯ ಲೇಖಕ, ಸಂಶೋಧಕರೂ ಆದ, ಪ್ರೊ.ಜಿ ಅಶ್ವತ್ಥ ನಾರಾಯಣ್ ಅವರಲ್ಲಿ. ತುಂಬಿದ ಕೊಡದಂತಹ ಅವರ ಜ್ಞಾನ, ಸಮಯ ಪ್ರಜ್ಞೆ, ನಿಗರ್ವಿತನ, ಸರಳಸಜ್ಜನಿಕೆಕಾರ್ಯ ನಿಷ್ಠೆ ಎಲ್ಲವೂ ಕಲಿಯಲೇಬೇಕಾದ ಅಂಶಗಳು.

ಪುಸ್ತಕ, ಸಂಶೋಧನೆ, ಮಾಹಿತಿಯಂತಹ ಯಾವುದೇ ವಿಷಯಗಳಿಗೆ ಅವರಲ್ಲಿಗೆ ಹೋದರೆ ಭರಪೂರ ಸಹಕಾರ ನೀಡಿಯೇ ಕಳಿಸುವಂತಹ ಗುರುಗಳು. ಅವರು "ನನಗೆ ತಿಳಿಯದು, ಗೊತ್ತಿಲ್ಲ, ಸಮಯವಿಲ್ಲ "ಇಂತಹ ನಕಾರಾತ್ಮಕ ಪದಗಳನ್ನೆಂದೂ ಹೇಳುವುದೇ ಇಲ್ಲ. ತಮಗೆ ತಿಳಿದಷ್ಟನ್ನು ಧಾರೆ ಎರೆಯುವ ಜ್ಞಾನ ಯಜ್ಞರು. ಸಮಯದ ಅಭಾವದಿಂದಲೋ, ಕೊಂಚ ನಿರ್ಲಕ್ಷದಿಂದಲೋ ನಾವು ಕೇಳಿದ ವಿಷಯ ನಾವೇ ಕೈಬಿಟ್ಟರೂ, ಅವರೇ ನೆನಪಿಸಿ, ಆ ಕಾರ್ಯ ಏನಾಯ್ತು? ಎಲ್ಲಿಯವರೆವಿಗೂ ಬಂತು?" ಎಂದು ಕರೆ ಮಾಡಿ ಕೇಳುತ್ತಿರುತ್ತಾರೆ. ನಮ್ಮಂತೆ ಅವರು ಎಂದೂ ನೆಪಗಳನ್ನು ಮುಂದು ಮಾಡಿ ಕೂರುವವರಲ್ಲ. ಹಿಡಿದ ಕೆಲಸಗಳನ್ನು ಸರಿಯಾಗಿ ಮಾಡಬೇಕೆಂಬ ಹಠ ಅವರಲ್ಲಿ ಇನ್ನೂ ಕಡಿಮೆಯಾಗಿಲ್ಲ. ಈ ಎಂಬತ್ತರ ಹರೆಯದಲ್ಲೂ ಸದಾ ಕಾರ್ಯ ಪ್ರವೃತ್ತರಾಗಿ, ಓದು ಬರಹದಲ್ಲಿ ತೊಡಗಿರುವ ಗುರುಗಳು ನಮಗೆಲ್ಲರಿಗೂ ಪ್ರತ್ಯಕ್ಷ ಆದರ್ಶ.

ಇಷ್ಟಲ್ಲದೆ, ಪಾರಂಪರಿಕ ಜ್ಞಾನ ಧಾರೆಗಳನ್ನು ದಾಟಿ ನಾವೀನ್ಯತೆಯ ತಲ್ಲಣಗಳಿಗೆ ಒಳಗಾಗುತ್ತಿರುವ ಭಾಷಾ ವರ್ತಮಾನದಲ್ಲೂ ಸಹ ಹಿಂದಣ ಹೆಜ್ಜೆಗಳ ಅರಸುತ್ತಾ, ಪ್ರಾಜ್ಞ ಪರ್ಯಾವರಣಗಳ ಅಧ್ಯಯನದಲ್ಲೇ ಮುಳುಗಿರುವ ಹಿರಿಯ ಚಿಂತನಶೀಲರು, ಸಂಶೋಧಕರು ಕಾಣಸಿಗುವುದು ಕಷ್ಟ. ಪ್ರಾಚೀನ ಕಾವ್ಯಗಳನ್ನು ಇಂದಿನ ತಲೆಮಾರಿಗೆ ಹಂಚುವ ಕಾರ್ಯ ಮಹತ್ತರವಾದದ್ದು. ಈ ನಿಟ್ಟಿನಲ್ಲಿ ಎರಡು ಮೂರು ವರ್ಷ ಸತತವಾಗಿ ಹಳಗನ್ನಡ ಕಾವ್ಯಗಳ ತರಗತಿಯನ್ನು ಬಿ.ಎಂ.ಶ್ರೀ ಪ್ರತಿಷ್ಠಾನದ ಮೂಲಕ ಮಾಡಿದರು. ಕನ್ನಡ ಸಾಹಿತ್ಯವೆಂಬ ಕಲ್ಪವೃಕ್ಷದ ಫಲವನ್ನು ಹಂಚುವಲ್ಲಿ ಯಾವುದೇ ಪೂರ್ವಾಗ್ರಹವಿಲ್ಲದೆ ಸೇವೆ ಸಲ್ಲಿಸುವ ಕೆಲವೇ ಮಂದಿಯಲ್ಲಿ ಅ.ನಾ.ಜಿ. ಗುರುಗಳೂ ಒಬ್ಬರು. ಅವರನ್ನು ಹಿರಿಯ ಸಂಶೋಧಕರು ಹಾಗೂ ಸಾಹಿತಿಗಳು ಎನ್ನುವುದಕ್ಕಿಂತ ಅಗಾಧ ಪಾಂಡಿತ್ಯ ಮತ್ತು ಪ್ರತಿಭೆ ಸಮದಂಡಿಯಾಗಿ ಬೆರೆತ ವಿದ್ವನ್ಮಣಿ ಎಂದರೆ ಅತಿಶಯೋಕ್ತಿಯಲ್ಲ. ಇಂತಹ ಪ್ರತಿಭಾ ಸಂಪನ್ನರಿಗೆ ಅಭಿನಂದನಾ ಗ್ರಂಥ ಸಲ್ಲಲೇಬೇಕಾಗಿದ್ದ ಗೌರವ. ಇದನ್ನು ಕೈಗೊಂಡ ಸಹೃದಯರಿಗೆ ವಂದನೆಗಳು.

ನಾನು ಬಹಳ ವರ್ಷಗಳ ಹಿಂದೆಯೇ ಅ.ನಾ.ಜಿ. ಅವರ ಹೆಸರು ಕೇಳಿದ್ದೆ. ಆದರೆ ಭೇಟಿಗೆ ಸಕಾಲ ಒದಗಿರಲಿಲ್ಲ. ಆದರೆ 2021ರಲ್ಲಿ “ಪ್ರಾಚೀನ ಕನ್ನಡ ಸಾಹಿತ್ಯ ಶಿಲ್ಪ” ಎಂಬ ಹಳಗನ್ನಡ ಕಾವ್ಯಗಳ ಕುರಿತಾದ ಹೊತ್ತಿಗೆ ತರುವಲ್ಲಿ ನಿರತಳಾಗಿ ಲೇಖನಗಳನ್ನು ಕ್ರೋಡೀಕರಿಸುತ್ತಿದ್ದೆ. ಆಗ ಡಾ.ಸಿದ್ದಲಿಂಗಯ್ಯನವರು ನಮ್ಮ ಸಾಧನಕೇರಿ ಸಾಹಿತ್ಯ ಪ್ರತಿಷ್ಠಾನದ ಗೌರವ ಅಧ್ಯಕ್ಷರಾಗಿದ್ದರು. ಅವರಲ್ಲಿ ಈ ಕೃತಿಯ ಬಗ್ಗೆ ಸಲಹೆ ಯಾಚಿಸಿದ್ದೆ. ಆ ಕ್ಷಣದಲ್ಲಿ ಅವರಿಗೆ ನೆನಪಾಗಿದ್ದೆ ತಮ್ಮ ನೆಚ್ಚಿನ ಗುರುಗಳಾದ ಅ.ನಾ.ಜಿ. ಅವರು. ಅವರ ದೂರವಾಣಿ ಸಂಖ್ಯೆ ನೀಡಿ, “ಹಳಗನ್ನಡದ ಬಗ್ಗೆ ಅಪಾರ ಜ್ಞಾನವಿರುವ ನಮ್ಮ ಮೇಷ್ಟ್ರು ಅಶ್ವತ್ಥನಾರಾಯಣ ಅವರ ಬಳಿ ಈ ವಿಷಯವಾಗಿ ಹೋಗಿ ಚರ್ಚಿಸಿ.... ಅವರು ಹಳಗನ್ನಡ ಕಾವ್ಯಗಳನ್ನು ಚೆನ್ನಾಗಿ ಬಲ್ಲವರು” ಎಂದು ತಮ್ಮ ಕಾಲೇಜು ದಿನದಲ್ಲಿ ಬೋಧಿಸುವಾಗಿನ ಅನುಭವಗಳನ್ನು ಹೇಳಿಕೊಂಡಿದ್ದರು. ಅಲ್ಲದೆ ಅವರು “ನಿಮ್ಮ ಈ ಕಾರ್ಯಕ್ಕೆ ಅ.ನಾ.ಜಿ. ಅವರೇ ಸೂಕ್ತ ವ್ಯಕ್ತಿ” ಎಂದು ಸಲಹೆ ಇತ್ತರು. ನನಗೆ ಅವರ ಸಲಹೆ ಉಚಿತವಾಗಿದ್ದರೂ, ಅ.ನಾ.ಜಿ. ಅವರ ಬಳಿ ಹೋಗುವ ಧೈರ್ಯ ಸಾಲದಾಗಿತ್ತು. ಏಕೆಂದರೆ ಕನ್ನಡವನ್ನೇ ತೊದಲುವವರು ಅಂತಹ ಬೃಹತ್ ಪಂಡಿತರೆದುರು ನಿಲ್ಲುವುದಾದರೂ ಹೇಗೆ ಎನಿಸಿತ್ತು. ಆದರೆ ಆನಂತರ ತಿಳಿಯಿತು. ಆ ಜ್ಞಾನವೃಕ್ಷದ ಕೆಳಗೆ ಯಾರು ಬೇಕಾದರೂ ನಿಂತು ನೆರಳು ಪಡೆಯಬಹುದೆಂದು. ಆದರೆ ಆಗ ಅವರನ್ನು ಭೇಟಿಯಾಗಲು ಸಾಧ್ಯವಾಗಿರಲಿಲ್ಲ. ಕರೋನಾ ಕಾಲ ಆರಂಭವಾಗಿ ಒಬ್ಬರನ್ನೊಬ್ಬರು ಭೇಟಿಯಾಗುವ ಪರಿಸ್ಥಿತಿಯೇ ಇಲ್ಲದಂತಾಗಿತ್ತು. ಆದರೂ ಅ.ನಾ.ಜಿ. ಅವರನ್ನೂ ಭೇಟಿಯಾಗಲೇಬೇಕೆಂಬ ಉತ್ಕಟ ನಿರೀಕ್ಷೆಯಿಂದ “ಡಾ. ಸಿದ್ದಲಿಂಯ್ಯನವರನ್ನು ತಾವೇ ಬಂದು ಒಮ್ಮೆ ಅ.ನಾ.ಜಿ. ಗುರುಗಳನ್ನು ಭೇಟಿ ಮಾಡಿಸಿ” ಎಂದು ವಿನಂತಿಸಿದ್ದೆ. ಅವರು ಅಪಾರ ಆನಂದದಿಂದ” ಆಗಲಿ ನಮ್ಮ ಗುರುಗಳನ್ನು ಭೇಟಿಯಾದಂತಾಗುವುದು ಬರುತ್ತೇನೆ” ಎಂದು ಒಪ್ಪಿದ್ದರು. ಆದರೆ ದುರಾದೃಷ್ಟವಶಾತ್ ಸಿದ್ದಲಿಂಗಯ್ಯನವರು ಕರೋನ ಕಾಲದಲ್ಲೇ ಇಲ್ಲವಾಗಿಬಿಟ್ಟರು.

ಅನಂತರ 2023 ರಲ್ಲಿ ಕರೋನಾ ಕಾಲ ತಿಳಿಯಾದ ನಂತರ, ನಾನು ಮತ್ತೆ ಈ ಸಂಪಾದಕತ್ವದ ಕಾರ್ಯ ಮಾಡುವ ಪ್ರಯತ್ನ ಕೈಗೊಂಡೆ. ಹೀಗೆ ಒಂದು ಬೆಳಗ್ಗೆ ಅ.ನಾ.ಜಿ. ಅವರಿಗೆ ಅಂಜಿಕೆಯಿಂದಲೇ ಸಿದ್ದಲಿಂಗಯ್ಯನವರ ಹೆಸರು ಹೇಳಿಕೊಂಡು ಅವರ ಲ್ಯಾಂಡ್ ಲೈನಿಗೆ ಕರೆ ಮಾಡಿ ಈ ವಿಷಯವಾಗಿ

ಹೇಳಿದೆ. ಅ.ನಾ.ಜಿ. ಅವರು ಗಡಸು ದನಿಯಲ್ಲೇ "ಮನೆಗೆ ಬನ್ನಿ ಮಾತನಾಡೋಣ" ಎಂದು ಹೇಳಿ ಕರೆ ಕತ್ತರಿಸಿದ್ದರು. ನನಗೆ ಇವರೇನು ಫೋನು ಕತ್ತರಿಸಿಯೇಬಿಟ್ಟರಲ್ಲ, ಹೋಗೋದಾ? ಬೇಡ್ವಾ? ಎಂಬ ಗೊಂದಲದಲ್ಲಿಯೇ ಅವರ ಮನೆ ತಲುಪಿದೆ. ನಾನು ಮಾಡಿಕೊಂಡು ಬಂದ ಟಿಪ್ಪಣಿ ಎಲ್ಲಾ ನೋಡಿ, "ಪಂಪಯುಗವಷ್ಟೇ ಈ ಸಂಪುಟದಲ್ಲಿ ಮುಗಿಸಿ, ಆಕರ ಗ್ರಂಥಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಮಾಡಿ...'' ಎಂಬ ಹಲವು ಮಾಹಿತಿಗಳನ್ನು ನೀಡಿ, ಅದೆಷ್ಟು ಒಳ್ಳೆಯ ಲೇಖಕರ ಸಂಪರ್ಕ ಕಲ್ಪಿಸಿ ಲೇಖನ ಸಂಗ್ರಹಕ್ಕೆ ಅಣಿ ಮಾಡಿಕೊಟ್ಟರೋ... ನಾನು ಆ ವಿಷಯದಲ್ಲಿ ಅವರಿಗೆ ಆಭಾರಿಯಾಗಿದ್ದೇನೆ. ಅವರ ಸೂಚನೆಗಳ ಮೇರೆಗೆ ತಕ್ಕ ಮಟ್ಟಿಗೆ ಸಂಪಾದನಾ ಕಾರ್ಯ ಮುಗಿಸಿದೆ. ಆನಂತರ ಕಾರ್ಮೆಲ್ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಏರ್ಪಡಿಸಿ ಆ ಕೃತಿಯನ್ನು ಗುರುಗಳೇ ಬಿಡುಗಡೆಗೊಳಿಸಿದರು. ಅದರೊಳಗಿನ ಸಾಕಷ್ಟು ತಪ್ಪು ಒಪ್ಪುಗಳನ್ನು ಮನ್ನಿಸಿ ಕೃತಿಯ ಬಗ್ಗೆ ಆ ಕಾರ್ಯಕ್ರಮದಲ್ಲಿ ಬಹಳ ಅರ್ಥಗರ್ಭಿತವಾಗಿ ಮಾತನಾಡಿದರು.

ಇತ್ತೀಚೆಗೆ 'ಪ್ರಾಚೀನ ಕನ್ನಡ ಸಾಹಿತ್ಯ ಶಿಲ್ಪ ಸಂಪುಟ ೨' ನ್ನು ಕೃಗೆತ್ತಿಕೊಳ್ಳುವ ಬಗ್ಗೆ ಅವರನ್ನು ಭೇಟಿ ಮಾಡಿದೆ. ಪೂರ್ವ ಕೃತಿಯಲ್ಲಾದ ಲೋಪಗಳನ್ನು ಸರಿಪಡಿಸಿಕೊಳ್ಳಬೇಕೆಂದು ಸಲಹೆ ಇತ್ತರು. ಜೊತೆಗೆ ಒಂದು ದೊಡ್ಡ ಪಟ್ಟಿಯನ್ನೇ ನೀಡಿ ಇದೇ ರೀತಿ ಚಂಪೂಕಾವ್ಯಗಳ ಲೇಖನಗಳ ಸಂಪಾದನೆ ಮಾಡಬೇಕೆಂದು ಅವರಲ್ಲಿ ಚರ್ಚಿಸಿದೆ. ಆಗ ಬಹಳ ಆಸ್ಥೆಯಿಂದ ಅನೇಕ ಆಯ್ದ ಪುಸ್ತಕಗಳಿಂದ ಮುನ್ನೂರು ಆಯ್ದ ಪುಟದಷ್ಟು ಆಕರ ಗ್ರಂಥಗಳ ನಕಲು ಪ್ರತಿಯನ್ನು ಸ್ಪೈರಲ್ ಮಾಡಿ ಬೈಂಡ್ ಮಾಡಿಸಿ ನೀಡಿದರು . ಅಲ್ಲದೆ ನಾನು ಪಿ.ಎಚ್.ಡಿ. ಮಾಡುವ ಬಗ್ಗೆ ಹೇಳಿಕೊಂಡಾಗ ಅದಕ್ಕಾಗಿ ಪುಸ್ತಕಗಳ ದೊಡ್ಡ ಪಟ್ಟಿಯನ್ನೇ ನೀಡಿ, ಅದು ಯಾರು ಬರೆದದ್ದು, ಎಷ್ಟು ಪುಸ್ತಕಗಳನ್ನು ಸಂಗ್ರಹಿಸಬೇಕೆಂದು ವಿವರಿಸುವಾಗ, ನನಗೆ ನಿಜವಾಗಲೂ ಇವರಿಗೆ ತಿಳಿಯದ ವಿಷಯ ಏನಾದರೂ ಇದೆಯೇ ಎನಿಸಿತು.

ಇನ್ನು ಅವರ ಪುಸ್ತಕಗಳ ಖಜಾನೆ ನೋಡಿದರೆ ''ಇಷ್ಟೊಂದು ಪುಸ್ತಕಾನಾ?'' ಎಂದು ಆಶ್ಚರ್ಯವಾಗದೇ ಇರದು. ಮನೆಯ ಕೆಳ ಮಹಡಿಯಲ್ಲಿ ಒಂದು ಇಡೀ ದೊಡ್ಡ ಕೊಠಡಿಯಲ್ಲಿ ದೊಡ್ಡ ಗ್ರಂಥಾಲಯವೇ ಇದೆ. ಅದು ಯಾವುದ್ಯಾವುದೋ ಪುಸ್ತಕಗಳ ರಾಶಿಯಲ್ಲ. ಸಾಹಿತ್ಯ ಕಾಲಘಟ್ಟಗಳನ್ವಯ ಹಲವಾರು ರಾಮಾಯಣ ,ಮಹಾಭಾರತಾದಿ, ಭಗವದ್ಗೀತೆ, ಕುವೆಂಪು, ಮಾಸ್ತಿ , ಡಿ.ವಿ.ಜಿ. ಅನೇಕರ ಕೃತಿಗಳ ಜ್ಞಾನ ಭಂಡಾರದ ಮಹಾ ಸರಕು. ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಸಂಶೋಧನೆಗೆ ಅನುಕೂಲವಾಗುವ ಮಹಾ ಸಾಮಗ್ರಿ ಅಲ್ಲಿದೆ. ಇತ್ತೀಚಿನ ದಿನಗಳಲ್ಲಿ ಯಾವ ಕನ್ನಡ ಪ್ರಾಧ್ಯಾಪಕರೂ ಪುಸ್ತಕಗಳ ಕೂಡಿಸುವ ಹವ್ಯಾಸಗಳನ್ನು ಹೊಂದಿಲ್ಲ. ಆದರೆ ಆಗಿನವರು ಹೇಗೆ ಕನ್ನಡ ಭಾಷೆ, ಬೋಧನೆಗೆ ಸಂಕಲ್ಪಗೊಂಡಿದ್ದರು ಎಂಬುದನ್ನು ಇವರೂ ಮತ್ತು ಇವರ ಧರ್ಮಪತ್ನಿಯವರನ್ನು ನೋಡಿದರೆ ಅರಿವಾಗುವುದು. ಅವರು ಕನ್ನಡ ಪ್ರಾಧ್ಯಾಪಿಕೆ. ಹಲವಾರು ಕೃತಿಗಳನ್ನು ರಚಿಸಿದ್ದಾರೆ.

ಪ್ರೊ. ಜಿ. ಅಶ್ವತ್ಥನಾರಾಯಣ ಗುರುಗಳಿಗೆ ಮತ್ತೂ ಆಯುರಾರೋಗ್ಯ ನೀಡಿ ಮತ್ತಷ್ಟು ಬರೆಯುವ, ನನ್ನಂಥ ಶಿಷ್ಯರನ್ನು ತಿದ್ದುವ ಚೈತನ್ಯವನ್ನು ಇಮ್ಮಡಿಸಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

******

‘ಅನಾಜಿ’ ಎಂಬ ಹಳೆಯ ಹಿರಿಯ ಸ್ನೇಹಿತ

ಡಾ॥ ಮೈ. ಶ್ರೀ. ನಟರಾಜ,
ಮೇರೀಲ್ಯಾಂಡ್, ಅಮೆರಿಕಾ

ಮೂಲತಃ ನಾನು ಹಾಸನದವನು. ಪಿಯುಸಿ ಕಳೆದ ನಂತರ ಮುಂದಿನ ಓದಿಗೆ ಬೆಂಗಳೂರು ಸೇರಿದೆ. ಹಿಂದಿನ ಶತಮಾನದ ಅರವತ್ತರ ದಶಕದಲ್ಲಿ ನಾನು ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿ ಗಾಂಧಿನಗರದ ಒಂದು ವಿದ್ಯಾರ್ಥಿನಿಲಯದಲ್ಲಿ ಐದು ವರ್ಷಗಳನ್ನು ಕಳೆದೆ. ನಂತರ ಮುಂಬೈ, ತದನಂತರ ಅಮೆರಿಕದ ಪಿಟ್ಸ್‌ಬರ್ಗ್ ನಗರ ಸೇರಿ ಅಮೆರಿಕದಲ್ಲೆ ತಳ ಊರಿದೆ.

ಪ್ರೌಢಶಾಲೆಯಲ್ಲಿದ್ದಾಗಿನಿಂದ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದ ನಾನು ಯೂನಿವರ್ಸಿಟಿ ಕಾಲೇಜ್ ಆಫ್ ಇಂಜಿನಿಯರಿಂಗ್ (ಆಗ ಯುಸಿಇ, ಈಗ ಯುವಿಸಿಇ) ಅನ್ನು ಪ್ರತಿನಿಧಿಸಿ ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಇಂಟರ್-ಕೊಲಿಜಿಯೇಟ್ ಚರ್ಚಾಸ್ಪರ್ಧೆಗಳಲ್ಲಿ ಭಾಗಿಯಾಗುತ್ತಿದ್ದೆ. ಅದೇ ರೀತಿ ಅಂತರ ವಿದ್ಯಾರ್ಥಿ-ನಿಲಯಗಳ ಚರ್ಚಾಸ್ಪರ್ಧೆಗಳಲ್ಲೂ ಭಾಗವಹಿಸುತ್ತಿದ್ದೆ. ನನ್ನ ಕಾಲೇಜು ಸಹಪಾಠಿಗಳಲ್ಲಿ ಅನೇಕರು ಇಂದಿಗೂ ನನ್ನ ಸಂಪರ್ಕದಲ್ಲಿದ್ದಾರೆ. ಕಾಲೇಜಿನ ಆಚೆ ಭಾಗವಹಿಸುತ್ತಿದ್ದ ಹಲವಾರು ಚಟುವಟಿಕೆಗಳ ಕಾರಣ ಇನ್ನೂ ಇತರರ ಸ್ನೇಹ ಸಂಪರ್ಕ ಬೆಳೆಸಿದ್ದೆ. ಹಾಗೆ ಪರಿಚಿತರಾದ ಅನೇಕ ಗೆಳೆಯರಲ್ಲಿ ಸಹ, ಕೆಲವರು ಇಂದಿಗೂ ನನ್ನೊಂದಿಗೆ ಸಂಪರ್ಕವಿಟ್ಟುಕೊಂಡಿದ್ದಾರೆ. ಕಾಲೇಜಿನಾಚೆ ಪರಿಚಿತರಾದ ಮಿತ್ರರ ಪೈಕಿ ಶ್ರೀ. ಜಿ. ಅಶ್ವತ್ಥನಾರಾಯಣ ಗಣ್ಯರು.

ನಾನು ಅಶ್ವತ್ಥನಾರಾಯಣರನ್ನು ಮೊದಲು ಭೇಟಿಯಾದದ್ದು ಯಾವುದೋ ಒಂದು ಚರ್ಚಾಸ್ಪರ್ಧೆಯ ಸಂದರ್ಭದಲ್ಲಿ. ನನಗೆ ನೆನಪಿರುವಂತೆ, ಆಗ ಅವರು ಇತರ ಸ್ಪರ್ಧಿಗಳಿಗಿಂತ ಸ್ವಲ್ಪ ಹಿರಿಯರಂತೆ ಕಾಣುತ್ತಿದ್ದರು. ನಮ್ಮನ್ನೆಲ್ಲಾ ‘ಬಚ್ಚಾ’ಗಳು ಎಂಬಂತೆ ಸ್ವಲ್ಪ ಗತ್ತಿನಿಂದಲೇ ನೋಡುತ್ತಿದ್ದರು ಎಂದು ನೆನಪು. ಸ್ವಲ್ಪ ದಡೂತಿಯಾಗೇ ಇದ್ದ ಆಸಾಮಿ ತಮ್ಮಷ್ಟಿಗೆ ತಾವಿದ್ದುಕೊಂಡು ತಮ್ಮ ಭಾಷಣದ ಸರದಿಗೆ ಕಾದಿರುತ್ತಿದ್ದರು. ಆಮೇಲೆ ಅವರಾಯ್ತು, ನಾವಾಯ್ತು! ಹೀಗೇ ಒಂದೆರಡು ಸ್ಪರ್ಧೆಗಳಲ್ಲಿ ಭೇಟಿಯಾದ ನಂತರ ಆ ‘ಗಂಭೀರ ವ್ಯಕ್ತಿ’ ಸ್ವಲ್ಪ ಸಡಿಲಗೊಂಡರು ಎಂದು ನೆನಪು. ಅಂದರೆ, ನಮ್ಮನ್ನು ನೋಡಿ ಒಂದು ಸಣ್ಣ ನಗೆ ಬೀರುವುದು, ಔಪಚಾರಿಕವಾಗಿ ಒಂದೋ ಎರಡೋ ಮಾತಾಡುವುದು, ಅಷ್ಟೆ. ಅವರು ನಮ್ಮಲ್ಲನೇಕರಿಗಿಂತ ವಯಸ್ಸಿನಲ್ಲಿ ಸ್ವಲ್ಪ ಹಿರಿಯರೂ ಆಗಿದ್ದುದರಿಂದ ಅವರು ಸಲಿಗೆಗೆ ಅವಕಾಶಕೊಡುತ್ತಿರಲಿಲ್ಲವೇನೋ ಎಂದು ನಂತರ ನನಗೆ ಅನ್ನಿಸಿತ್ತು.

ಅವರ ಹಿರಿತನಕ್ಕೆ ಕಾರಣವೂ ಇತ್ತು. ನಮ್ಮಲ್ಲಿ ಹೆಚ್ಚಿನವರು ಬೇರೆ ಬೇರೆ ಊರುಗಳಲ್ಲಿ ಪಿಯುಸಿ ಮುಗಿಸಿ ಆಗತಾನೇ ಬೆಂಗಳೂರಿಗೆ ಬಂದು ಸೇರಿದ್ದ ಅನನುಭವಿಗಳು. ಅವರಾಗಲೇ ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ ಮುಗಿಸಿ ಎಚ್‌ಎಮ್‌ಟಿಯಲ್ಲಿ ಕೆಲಸಕ್ಕೆ ಸೇರಬಹುದಾಗಿದ್ದ ಅವಕಾಶವನ್ನು ಬಿಟ್ಟು ಇಂಜಿನಿಯರಿಂಗೇತರ ವಿಷಯಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಲು

ಮತ್ತೊಮ್ಮೆ ಕಾಲೇಜ್ ಸೇರಿದ್ದರು. ನಮಗೆ ನಂತರ ತಿಳಿದಿದ್ದು, ಅವರು ಮೊದಲಿಗೆ ಬಿ.ಎ. ಪದವಿ ಪಡೆದು, ನಂತರ ಸಮಾಜಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು, ಅದೂ ಸಾಲದೋ ಎಂಬಂತೆ ಮುಂದೆ ಕನ್ನಡದಲ್ಲಿ ಎಂ.ಎ. ಪದವಿಯನ್ನೂ ಪಡೆದು ತಮ್ಮ ಹೃದಯಕ್ಕೆ ಹತ್ತಿರವಾದ ವೃತ್ತಿಯೊಂದಿಗೆ ತಮ್ಮ ಭವಿಷ್ಯವನ್ನು ರೂಪಿಸಿಕೊಂಡಿದ್ದರು, ಎಂದು. ಇದು ನಿಜಕ್ಕೂ ಒಂದು ವಿಶೇಷ ಸಂಗತಿಯಾಗಿತ್ತು. ಸಿಕ್ಕಿದ್ದ ಇಂಜಿನಿಯರಿಂಗ್ ಕೆಲಸಕ್ಕೆ ಸೇರಿಕೊಳ್ಳದೇ ಬೇರೆ ಯಾವುದೋ ವಿಷಯದಲ್ಲಿ ಓದನ್ನು ಮುಂದುವರೆಸುವುದು ಸಾಧಾರಣರು ಮಾಡುವ ಕೆಲಸವಲ್ಲ.

ಬೆಂಗಳೂರಿನಲ್ಲಿದ್ದಾಗ, ನಾನೂ ಒಂದು ರೀತಿಯಲ್ಲಿ ಕನ್ನಡದ 'ಹುಚ್ಚ'ನೇ ಆಗಿದ್ದರೂ, ಇಂಜಿನಿಯರಿಂಗ್ ಬಿಟ್ಟು ಕನ್ನಡ ಓದುವಷ್ಟು ಹುಚ್ಚನಾಗಿರಲಿಲ್ಲ, ಅಥವಾ ಅಂಥಾ ಧೈರ್ಯವೂ ನನಗಿರಲಿಲ್ಲ. ಹೀಗಾಗಿ ಅಶ್ವತ್ಥನಾರಾಯಣ ನನ್ನ ದೃಷ್ಟಿಯಲ್ಲಿ ಒಬ್ಬ 'ಹೀರೋ' ಆಗಿದ್ದರೆನ್ನಬಹುದು. ಆದರೂ ನನ್ನ ಮತ್ತು ಅವರ ಸಂಪರ್ಕ, ವರ್ಷದಲ್ಲಿ ಕೆಲವು ಸಂದರ್ಭಗಳಲ್ಲಿ ಮಾತ್ರವಾಗಿದ್ದು ಅವರೊಂದಿಗೆ ನಿಕಟ ಸ್ನೇಹ ಬೆಳೆಯಲು ಕಾರಣವಿರಲಿಲ್ಲ. ಆದರೆ ಅವರು ನನಗೂ ಪ್ರಿಯವಾಗಿದ್ದ ಹಲವು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದುದನ್ನು ಗಮನಿಸಿದ್ದೆ. ಅನಕೃ ಅವರ ಕನ್ನಡ ಚಳುವಳಿ, ಕಿರಿಯ ವಾಗ್ಮಿಗಳ ಸಂಘದ ಚಟುವಟಿಕೆ, ಉಲ್ಲಾಳ್ ನಾಟಕ ಸ್ಪರ್ಧೆ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳು ಮುಂತಾಗಿ ಅನೇಕ ಕಾರಣಗಳಿಂದ ನಮ್ಮ ಕಾಲುದಾರಿಗಳು ಆಗಾಗ್ಗೆ ಸಂಧಿಸುತ್ತಿದ್ದವು. ಆಗಲೂ 'ಗಳಸ್ಯ ಕಂಠಸ್ಯ' ಆಗುವ ಸಂದರ್ಭಗಳು ಇರಲಿಲ್ಲ.

ನಾನು ಬೆಂಗಳೂರು ವಿವಿಯ ಮೊದಲ ತಂಡದಿಂದ ಬಿ.ಇ. ಪದವಿ ಪಡೆದು ಎಮ್‌ಟೆಕ್ ಪದವಿಗಾಗಿ ಮುಬೈಗೆ ಹೊರಟ ನಂತರ, ಅಶ್ವತ್ಥನಾರಾಯಣರಿಗೂ ನನಗೂ ಸಂಪರ್ಕ ಸಂಪೂರ್ಣವಾಗಿ ಕಡಿದೇ ಹೋಯಿತು. 2003ರಲ್ಲಿ ಸುಮಾರು 38 ವರ್ಷಗಳ ತರುವಾಯ ವಿಧಿ ನಮ್ಮನ್ನು ಒಂದೆಡೆ ಸೇರಿಸಿತು! ಅದಕ್ಕೂ ಕಾರಣ ಕನ್ನಡವೇ! ನಾನು ಆ ವೇಳೆಗೆ ಅಮೇರಿಕಾಗೆ ಬಂದು ಸುಮಾರು 35 ವರ್ಷಗಳೇ ಕಳೆದಾಗಿತ್ತು. ಮೇರೀಲ್ಯಾಂಡ್ ಪ್ರದೇಶದಲ್ಲಿ 'ಭೂಮಿಕಾ' ಎಂಬ ಸಂಸ್ಥೆಯಲ್ಲಿ ಪ್ರತಿ ತಿಂಗಳೂ ನಡೆಯುತ್ತಿದ್ದ ವಾರಾಂತ್ಯದ ಒಂದು ಕನ್ನಡ ಕಾರ್ಯಕ್ರಮದಲ್ಲಿ ನಾನು ಹಾಜರಿದ್ದೆ. ಅಲ್ಲಿ, ಹಿಂದೆ ಆ ಸಂಸ್ಥೆಯ ಸಭೆಗಳಲ್ಲಿ ಕಂಡಿರದಿದ್ದ ಒಬ್ಬ ಹಿರಿಯರ ಪರಿಚಯವಾಯಿತು. ಒಂದಷ್ಟು ಮಾತುಕತೆಯಾದ ಮೇಲೆ ಅವರೇ ಬೆಂಗಳೂರಿನಲ್ಲಿ ಚರ್ಚಾಸ್ಪರ್ಧೆಗಳಲ್ಲಿ ಎದುರಾಗುತ್ತಿದ್ದ, (ಎದುರಾಗಿ–ಮಾಯವಾಗುತ್ತಿದ್ದ) ನಮ್ಮ ಅಶ್ವತ್ಥನಾರಾಯಣ ಎಂದು ತಿಳಿದು ಖುಶಿಯೂ ಆಶ್ಚರ್ಯವೂ ಆಗಿ ಮರುಪರಿಚಯ ಮಾಡಿಕೊಂಡೆವು. ಆದರೆ, ಅವರು ಮತ್ತೆ ಮಾಯವಾದರು! ಪ್ರಾಯಶಃ ಕೆಲವು ಕಾಲದ ಪ್ರವಾಸಕ್ಕೆ ಬಂದಿದ್ದವರು ತಮ್ಮೂರಿಗೆ ಹಿಂದಿರುಗಿದ್ದರು.

ಅವರನ್ನು ಮತ್ತೆ ಕಂಡಿದ್ದು ಅವರ ಎರಡನೇ ಅಮೇರಿಕಾ ಭೇಟಿಯ ಸಂದರ್ಭದಲ್ಲಿ, ಸುಮಾರು ಮೂರು ವರ್ಷಗಳ ನಂತರ. 2006 ರಲ್ಲಿ ಅಮೆರಿಕದ ರಾಜಧಾನಿಯ ಕಾವೇರಿ ಕನ್ನಡ ಸಂಘದ ಆಶ್ರಯದಲ್ಲಿ ನಾಲ್ಕನೇ ಅಕ್ಕ ಸಮ್ಮೇಳನ ನಡೆದಾಗ. ಆಗ ನಾವು ಸಾಕಷ್ಟು ಪುಸ್ತಕಗಳನ್ನು ಪ್ರಕಟಿಸಿ ವಿಕ್ರಮ ಸಾಧಿಸಿದ್ದೆವು. ಆಗ ನಾವು ಪ್ರಕಟಿಸಿದಂತೆ ಪ್ರಾಯಶಃ ಮತ್ತೊಮ್ಮೆ ಅಮೇರಿಕದ ಯಾವ ಸಂಸ್ಥೆಯೂ, ಯಾವ ಸಮ್ಮೇಳನವೂ, ಆ ಮಟ್ಟದಲ್ಲಿ ಸಾಹಿತ್ಯದ ಕೈಂಕರ್ಯ ಮಾಡಿಲ್ಲವೆಂದೇ ಘಂಟಾಘೋಷವಾಗಿ ಹೇಳಬಹುದು. ಒಂದು ಕಥಾ ಸಂಕಲನ, ಒಂದು ಕವಿತಾ ಸಂಕಲನ, ಒಂದು ಕಾದಂಬರಿ (ಸ್ಪರ್ಧೆ ಏರ್ಪಡಿಸಿ ಯುವ ಲೇಖಕರು ಬರೆದ ಚೊಚ್ಚಲ ಕಾದಂಬರಿಗಳಲ್ಲಿ ಅತ್ಯುತ್ತಮವಾದದ್ದನ್ನು ಪ್ರಕಟಣೆಗೆ ಆಯ್ದುಕೊಂಡದ್ದೂ ಒಂದು ವಿಕ್ರಮವೇ!), ಒಂದು ತಾಂತ್ರಿಕ/ವೈಜ್ಞಾನಿಕ ವಸ್ತುವನ್ನೊಳಗೊಂಡ ವಿಶೇಷ ಪುಸ್ತಕ ಮತ್ತು ಒಂದು ಸ್ಮರಣ ಸಂಚಿಕೆ. ಒಟ್ಟು ಸಾವಿರ ಪುಟಗಳಿಗಿಂತ ಹೆಚ್ಚು ಗಾತ್ರ! ಇಂಥಾ

ಒಂದು ಮಹತ್ವಾಕಾಂಕ್ಷೆಯ ಪ್ರಕಟಣಾ ತಂಡದ ಸಾರಥ್ಯವನ್ನು ಕಾವೇರಿ ಸಂಸ್ಥೆ ನನಗೆ ವಹಿಸಿತ್ತು. ಆ ಸಮಯದಲ್ಲಿ ನಮ್ಮ ಅಶ್ವತ್ಥನಾರಾಯಣ ನಮ್ಮೂರಿನ ಬಳಿ ತಮ್ಮ ಮಗಳ ಮನೆಗೆ ಪತ್ನೀಸಮೇತರಾಗಿ ಆಗಮಿಸಿದ್ದುದು ಕಾಕತಾಳೀಯವಷ್ಟೆ! ಅಥವಾ ನಮ್ಮ ಅದೃಷ್ಟ ಎನ್ನಬೇಕೆ?

ಅಶ್ವತ್ಥನಾರಾಯಣರ ಸಹಾಯ ಕೋರಿ ಕಾವೇರಿಯ ಪರವಾಗಿ ನಾವು ಕೇಳಿಕೊಂಡಾಗ ಅತ್ಯಂತ ಸಂತಸದಿಂದ ಒಪ್ಪಿಕೊಂಡದ್ದಲ್ಲದೇ ಉತ್ಸಾಹದಿಂದ ನಮ್ಮೊಡನೆ ಕಾರ್ಯೋನ್ಮುಖರಾದರು. ಆ ಸಂದರ್ಭದಲ್ಲಿ ಅವರನ್ನು 'ಅನಾಜಿ' ಎಂದು ಗುರುತಿಸಿದೆವು, ಬಹು ಬೇಗ ನಮಗೆ ಹತ್ತಿರದವರಾದರು, ಆಪ್ತರಾದರು ಮತ್ತು ಅತ್ಯಂತ ಸಹೃದಯೀ ಸಹಾಯಕರಾದರು. ಅವರು ಪ್ರಕಟಣೆಯಲ್ಲಿ ಸಿದ್ಧಹಸ್ತರಾಗಿದ್ದವರು ಎಂಬುದು ನಮಗೆ ಆವಾಗ ಗೊತ್ತಾಯಿತು. ಕರಡು ತಿದ್ದುವುದರಲ್ಲಿ ಪ್ರಾವೀಣ್ಯತೆ ಪಡೆದವರಾಗಿದ್ದರು ಎಂಬುದು ಸಹ ಆಗಲೇ ತಿಳಿದದ್ದು. ಹಲವಾರು ಸಮ್ಮೇಳನಗಳಲ್ಲಿ ದುಡಿದ ಅನುಭವಿಯಾಗಿದ್ದರು. ಪ್ರಕಟಣೆಗೆ ಹೋಗಬೇಕಿದ್ದ ನೂರಾರು ಪುಟಗಳನ್ನು ಪರಸ್ಪರ ಹಂಚಿಕೊಂಡು, ನಾವು ತಿದ್ದಿದ್ದನ್ನು ಆವರ ಸುಪರ್ದಿಗೆ ಕೊಟ್ಟು, ಅವರು ಒಂದು ಪುಟವನ್ನೂ ಬಿಡದಂತೆ ಓದಿ ತಿದ್ದಿಕೊಟ್ಟದ್ದನ್ನು ನಾವು ಗಣಕದಲ್ಲಿ ಶೇಖರಿಸಲ್ಪಟ್ಟಿದ್ದ ಪುಟಗಳಲ್ಲಿ ತಿದ್ದಿ, ಮುದ್ರಣಕ್ಕೆ ಭಾರತಕ್ಕೆ ಕಳಿಸಿದೆವು. ಅವರ ಸಹಾಯವನ್ನು ಕಾವೇರಿ ಕನ್ನಡ ಸಂಘದ ಪದಾಧಿಕಾರಿಗಳು, ಅದರಲ್ಲೂ ಸಂಪಾದಕತ್ವದ ಹೊಣೆ ಹೊತ್ತಿದ್ದ ನಾವು ನಾಲ್ಕಾರು ಜನರು, ಎಂದೆಂದೂ ಕೃತಜ್ಞತೆಯಿಂದ ನೆನೆಯುತ್ತೇವೆ.

ಅನಾಜಿ ಸುಮ್ಮನೇ ಅನೇಕರಂತೆ ಕನ್ನಡ ಪ್ರಾಧ್ಯಾಪಕರು ಎಂದರೆ ಅವರ ಆಳ ತಿಳಿಯುವುದಿಲ್ಲ. ವ್ಯಾವಹಾರಿಕ ಕನ್ನಡ, ಪಠ್ಯ ಪುಸ್ತಕದ ಕನ್ನಡ, ಆಡಳಿತದ ಕನ್ನಡ, ಶಿಲಾಶಾಸನಗಳ ಕನ್ನಡ, ಮಾತೃಭಾಷೆ ಕನ್ನಡವಲ್ಲದವರಿಗೆ ಕಲಿಸುವ ಕನ್ನಡ, ಅಧಿಕಾರಿಗಳಿಗೆ ಕಲಿಸುವ ಕನ್ನಡ, ಪ್ರಕಾಶಕರಿಗೆ ಮತ್ತು ವ್ಯಾಪಾರಿಗಳಿಗೆ ಉಪಯುಕ್ತವಾಗುವ ಕನ್ನಡ -- ಹೀಗೆ ಕನ್ನಡದ ನಾನಾ ಮುಖಗಳ ಹತ್ತಿರದ ಪರಿಚಯ ಮತ್ತು ಅವನ್ನು ಹೇಳಿಕೊಡುವ ವಿಧಾನದಲ್ಲಿ ಪ್ರಾವೀಣ್ಯ ಪಡೆದ ವ್ಯಕ್ತಿ ಇವರು. ಕನ್ನಡ ಸಾಹಿತ್ಯ ಪರಿಷತ್ತಿನ ಹಲವು ಯೋಜನೆಗಳಲ್ಲಿ ಭಾಗವಹಿಸಿ ತಮ್ಮ ಅಮೂಲ್ಯವಾದ ಸಮಯ ಮತ್ತು ಪಾಂಡಿತ್ಯವನ್ನು ದಾನ ಮಾಡಿರುವ ನಿಸ್ವಾರ್ಥ ಕನ್ನಡ ಸೇವಕ ಅನಾಜಿ. ಕನ್ನಡದ ಸಹಸ್ರಾರು ಪುಸ್ತಕಗಳನ್ನು, ಅಪರೂಪದ ಅಮೂಲ್ಯ ಗ್ರಂಥಗಳನ್ನು ಕ್ರೋಡಿಕರಿಸಿ ತಮ್ಮದೇ ಆದ ವೈಯಕ್ತಿಕ ಪುಸ್ತಕಾಲಯವನ್ನು ಮನೆಯಲ್ಲೇ ನಡೆಸುತ್ತಾ ಬಂದಿರುವ ಅನಾಜಿ ಕನ್ನಡವನ್ನು ಉಳಿಸುವ ಮತ್ತು ಬೆಳೆಸುವ ಸ್ವಯಂಸೇವಕ.

ಈ ಲೇಖನವನ್ನು ಮುಗಿಸುವ ಮುನ್ನ, ನನಗೆ ಅವರು ಮಾಡಿದ ಒಂದು ಉಪಕಾರವನ್ನು ನೆನೆಯದಿದ್ದರೆ ಕರ್ತವ್ಯಲೋಪವಾಗುತ್ತದೆ. ಕಾವೇರಿಯ ಪ್ರಕಟಣೆಗಳಲ್ಲದೇ ವೈಯಕ್ತಿಕವಾಗಿ ನನ್ನ ಒಂದು ಪುಸ್ತಕ ಸಹ ಅಕ್ಕ ಸಮ್ಮೇಳನದ ಸಂದರ್ಭದಲ್ಲಿ ಲೋಕಾರ್ಪಣೆಗೊಂಡಿತು. ಇತ್ತೀಚೆಗೆ ದಿವಂಗತರಾದ ಶ್ರೀ ಶಾಮಸುಂದರ್ 2003ರಲ್ಲಿಒಂದು ವಿದ್ಯುನ್ಮಾಧ್ಯಮದ 'ದಟ್ಸ್ ಕನ್ನಡ' ಎಂಬ ಒಂದು ಜಾಲಪತ್ರಿಕೆ ಪ್ರಾರಂಭಿಸಿ, ಅದು ಭಾರತದ ಹೊರಗಿನ ಕನ್ನಡಿಗರಿಗೆಲ್ಲ ಒಂದು ರೀತಿಯ ಸುದ್ದಿಪತ್ರವಾಗಿತ್ತು. ಜೊತೆಗೆ ಸಾಹಿತ್ಯದ ಲೇಖನಗಳು, ಕಥೆ ಕವಿತೆ ಮುಂತಾಗಿ ಹಲವು ಹತ್ತು ರೀತಿಯ ಸಾಹಿತ್ಯಕ್ಕೆ ಎಣೆಮಾಡಿಕೊಟ್ಟು ಜನಮನ್ನಣೆ ಪಡೆದಿತ್ತು. ಆ ಪತ್ರಿಕೆಯಲ್ಲಿ ಶಾಮ್ ಕೊಟ್ಟ ಉತ್ತೇಜನದ ಫಲವಾಗಿ ನಾನು ಒಂದು ಅನಿಮಿತಕಾಲಿಕ ಅಂಕಣವೊಂದನ್ನು ಬರೆಯಲು ಪ್ರಾರಂಭಿಸಿದೆ. ಹಾಗೆ ನೋಡಿದರೆ ನನ್ನ ಅನೇಕ ಪುಸ್ತಕಗಳಿಗೆ ಅದೇ ನಾಂದಿಯಾಯಿತೆನ್ನಬಹುದು. ಅಲ್ಲಿಯವರೆಗೆ ಸಂಗ್ರಹವಾಗಿದ್ದ ನನ್ನ ಅಂಕಣ ಬರಹಗಳ ಒಂದು ಪುಸ್ತಕವನ್ನು ಅಂಕಣದ ಹೆಸರಿನಲ್ಲೇ 'ಜಾಲತರಂಗ' ಎಂಬ ಪುಸ್ತಕವನ್ನು ಅಕ್ಕ ಸಮ್ಮೇಳನದ ಸಮಯದಲ್ಲೇ ಬಿಡುಗಡೆಮಾಡುವ ನನ್ನ ಯತ್ನವೂ ನಡೆದಿತ್ತು.

ನನ್ನ ಜೊತೆಯಲ್ಲೇ ಕೆಲಸ ಮಾಡುತ್ತಿದ್ದ ಪಂಡಿತರೂ ಸ್ನೇಹಿತರೂ ಆದ ಅನಾಜಿ ಅವರನ್ನೇ ಪುಸ್ತಕಕ್ಕೆ ಮುನ್ನುಡಿ ಬರೆಯಲು ನಾನು ಕೋರಿದೆ. ಸಹಸ್ರಾರು ಪುಟಗಳ ಕರಡು ತಿದ್ದುವಿಕೆಯ ನಡುವೆಯೂ ಅವರು ಒಂದು ಸುಂದರ ಮುನ್ನುಡಿಯನ್ನೂ ಬರೆದುಕೊಟ್ಟರು.

ಆ ಮುನ್ನುಡಿ ನನ್ನ ಮುಂದಿನ ಅಂಕಣ ಬರಹಗಳಿಗೆ ಒಂದು ರೀತಿಯಲ್ಲಿ ಕೈಪಿಡಿಯಾಯಿತು ಎನ್ನಬಹುದು. ಸುಮಾರು ನಾಲ್ಕೈದು ಪುಟಗಳ ದೀರ್ಘ 'ನಲ್ನುಡಿ' ವಿದ್ವತ್ಪೂರ್ಣವೂ, ಸಹಾನುಭೂತಿಯಿಂದ ಕೂಡಿದ ಸಹೃದಯ ವಿಮರ್ಶೆಯೂ ಆಗಿತ್ತು. ನನ್ನ ಬರಹಗಳನ್ನು ಅತ್ಯಂತ ಸೂಕ್ಷ್ಮವಾಗಿ ಓದಿ ಬರೆದ ವ್ಯಾಖ್ಯಾನವೂ ಆಗಿತ್ತು. ಅನಾಜಿಯವರನ್ನು ಕುರಿತ ಈ ನನ್ನ ಬರಹವನ್ನು ಬರೆಯುವ ಮುನ್ನ, ಅನೇಕ ವರ್ಷಗಳ ನಂತರ ಅವರ ನಲ್ನುಡಿಯನ್ನು ಓದಿದಾಗ, ಇವರು ಕೇವಲ ಇಂಜಿನಿಯರ್ ಆಗಿಬಿಟ್ಟಿದ್ದಿದ್ದರೆ, ಕನ್ನಡ ಜಗತ್ತು ಎಂಥಾ ಒಬ್ಬ ಮೇಧಾವಿಯನ್ನು ಕಳೆದುಕೊಳ್ಳುತ್ತಿತ್ತು ಎಂಬುದು ಮನದಟ್ಟಾಯಿತು!

ಅನಾಜಿಯವರ ಪುತ್ರಿ ಕ್ಷಮಾ, ನಮ್ಮೂರಿನ ಬಳಿಯೇ ಇರುವುದರಿಂದ ಆಗಿಂದಾಗ ಭೇಟಿಯಾಗುತ್ತಾಳೆ. ಆಕೆಯ ಮೂಲಕ ಅನಾಜಿ ಮತ್ತು ಅವರ ಶ್ರೀಮತಿಯವರ ಕುಶಲ ತಿಳಿಯುತ್ತಿರುತ್ತದೆ. ಈ ಸಂದರ್ಭದಲ್ಲಿ ಕನ್ನಡಕ್ಕೆ ಮತ್ತು ಕರ್ನಾಟಕಕ್ಕೆ ದೊರೆತಿರುವ ಅನಾಜಿಯವರ ಕೊಡುಗೆಯನ್ನು ಗುರುತಿಸಿ 'ಸಾಹಿತ್ಯ ಪರಿಚಾರಕ' ಎಂಬ ಅಭಿನಂದನಾ ಗ್ರಂಥವೊಂದನ್ನು ಅವರ ಅಭಿಮಾನಿಗಳು ಹೊರತರುತ್ತಿರುವುದು ಅರ್ಥಪೂರ್ಣವೂ, ಔಚಿತ್ಯಪೂರ್ಣವೂ ಹಾಗೂ ಅತ್ಯಗತ್ಯವೂ ಆಗಿದೆ. ಆ ಗ್ರಂಥದಲ್ಲಿ ನನ್ನದೂ ನಾಲ್ಕು ಮಾತುಗಳು ಸೇರಿಕೊಂಡರೆ ನನಗೆ ಅದು ಹೆಮ್ಮೆಯ ವಿಷಯವಾಗುತ್ತದೆ. ಈ ಒಂದು ಅವಕಾಶವನ್ನು ಮಾಡಿಕೊಟ್ಟ ಸಂಪಾದಕ ವರ್ಗಕ್ಕೆ ಕ್ಷಮಾ ಮೂಲಕ ನನ್ನ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ. ಅನಾಜಿಯರಿಗೆ ಹಲವು ಹತ್ತು ಪ್ರಶಸ್ತಿಗಳು ದೊರಕಿವೆ. ಆದರೆ, ಅವರ ಪರಿಚಿತರೂ, ಶಿಷ್ಯರೂ ಅಭಿಮಾನಿಗಳೂ ಅಕ್ಷರ ರೂಪದಲ್ಲಿ ಅರ್ಪಿಸುವ ಮೆಚ್ಚುಗೆಯ ನುಡಿನಮನ ಅವೆಲ್ಲಕ್ಕಿಂತ ಮಿಗಿಲು. ದೇವರು ಅವರಿಗೂ ಅವರ ಕುಟುಂಬಕ್ಕೂ ಆಯುರಾರೋಗ್ಯಗಳನ್ನು ಕರುಣಿಸಲಿ ಎಂದು ಪ್ರಾರ್ಥಿಸುವೆ.

ವಿಸೂ: 2003ರಲ್ಲಿ ನಾನು ಆಗಲೇ ಬರೆದು ಪ್ರಕಟಿಸಿದ್ದ ಮೂರು-ನಾಲ್ಕು ಪುಸ್ತಕಗಳನ್ನು ಅನಾಜಿಯವರಿಗೆ ಓದಲು ಕೊಟ್ಟಿದ್ದೆ. ಅವರು ಓದಿದ್ದಷ್ಟೇ ಅಲ್ಲ, ನಮ್ಮ ಕಣ್ಣುಗಳನ್ನು ತಪ್ಪಿಸಿದ್ದ ಮುದ್ರಣ ಹಾಗೂ ಕಾಗುಣಿತ ದೋಷಗಳನ್ನು ಗಮನಿಸಿ ಮಾರ್ಜಿನ್ ನಲ್ಲಿ ಪೆನ್ಸಿಲ್ ನಲ್ಲಿ ಸೂಚಿಸಿದ್ದರು! ತಪ್ಪಿಲ್ಲದ ಪುಸ್ತಕಗಳನ್ನು ಪ್ರಕಟಿಸಬೇಕೆಂಬ ಅವರ ಛಲವಾದಿತನಕ್ಕೆ ಇದೊಂದು ಸಣ್ಣ ಉದಾಹರಣೆ! ಅವರ ಗರಡಿಯಲ್ಲಿ ಬೆಳೆದ ಕೆಲವರಾದರೂ ಈ ಗುಣವನ್ನು ಗ್ರಹಿಸಿ ಅಭ್ಯಾಸದಲ್ಲಿಟ್ಟಿದ್ದಾರೆಂದು ನಂಬಿದ್ದೇನೆ.

****

ಕನ್ನಡ ಸೇವೆಗೆ ಕಂಕಣ ತೊಡಿಸಿದವರು

ಸುರೇಶ್
ಚರವಾಣಿ : ೯೮೪೫೫೩೭೪೭೦೩

ಪ್ರತಿಯೊಬ್ಬರ ಜಿವನದಲ್ಲೂ ಶಾಲಾ-ಕಾಲೇಜಿನ ಪಾತ್ರ ಮುಖ್ಯವಾಗಿರುತ್ತದೆ. ಆ ಕಾಲದಲ್ಲಿ ಅಧ್ಯಾಪಕರು ಯಾವ ರೀತಿ ಯಾವ ವಿಷಯದಲ್ಲಿ ಆಸಕ್ತಿ ಮೂಡಿಸುತ್ತಾರೋ ಆ ರೀತಿ ಬಾಳಿನುದ್ದಕ್ಕೂ ಹಾಗೆಯೇ ಬಾಳುತ್ತೇವೆ ಕನ್ನಡ ಸೇವೆಯಲ್ಲಿ ವಿದ್ಯಾರ್ಥಿಗಳಲ್ಲಿ ಕನ್ನಡಾಭಿಮಾನ ಮೂಡಿಸುವುದು ಕನ್ನಡದ ಹೋರಾಟಕ್ಕೆ ಯುವಕರನ್ನು ಸಿದ್ದಗೊಳಿಸುವುದು ಕನ್ನಡ ಸಾಹಿತ್ಯಾಭಿಮಾನಿಯಾಗಿ ಸಾಹಿತಿ ಕಲಾವಿದರ ಸೇವೆಗೆ ಬಾಳನ್ನು ಮುಡುಪಾಗಿಟ್ಟು ಅವರನ್ನು ಆರಾಧಿಸುವುದು ಮಾಡುವುದು ಎಲ್ಲ ಅಧ್ಯಾಪಕರಿಂದ ಸಾಧ್ಯವಿಲ್ಲ. ಕನ್ನಡದ ಕೆಲಸದಲ್ಲಿ ಸದಾ ನಿಷ್ಠರಾಗಿ ಸೇವೆ ಸಲ್ಲಿಸುತ್ತಾ ಕೇವಲ ತರಗತಿ ಪಾಠವಷ್ಟೇ ಮಾಡದೆ ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಕಲೆಗಳಲ್ಲಿ ಆಸಕ್ತಿ ಮೂಡಿಸುವ ಸಾಹಿತಿ ಅಧ್ಯಾಪಕರು ಕಲಾವಿದರು ಅಪರೂಪ.

ಸಾಹಿತ್ಯದಲ್ಲಿ ಅಂಥ ಅಭಿಮಾನ ಆಸಕ್ತಿ ಮೂಡಿಸಿದವರು ಕೆಲವರೇ ಅಧ್ಯಾಪಕರು. ಅಂಥವರಲ್ಲಿ ಮೊದಲಿಗರು ಎಂದರೆ ಸೆಂಟ್ರಲ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿ ಆಗಿದ್ದಾಗ ಪಂಡಿತ ಎರೆಸೀಮೆ, ಚೆನ್ನಪ್ಪನವರು ಕನ್ನಡ ಅಧ್ಯಾಪಕರಾಗಿ ಕನ್ನಡದ ಸ್ಫೂರ್ತಿಯನ್ನು ನನ್ನಲ್ಲಿ ತುಂಬಿದರು ಬೆಂಗಳೂರು ವಿಜ್ಞಾನ ಕಾಲೇಜಿನಲ್ಲಿ ಪದವಿ ವಿದ್ಯಾರ್ಥಿ ಆಗಿದ್ದಾಗ ಕನ್ನಡದ ಚಳುವಳಿಯಲ್ಲಿ ಭಾಗವಹಿಸಲು ವಾಟಾಳ್‌ನಾಗರಾಜ್ ಕಾರಣಕರ್ತರಾದರು, ಗೋಕಾಕ್ ಚಳುವಳಿ ಕಾಲದಲ್ಲಿ ಡಾ. ರಾಜಕುಮಾರ್ ಪರಿಚಯ ಪ್ರಭಾವದಿಂದ ಅನಕೃ-ರಾಮಮೂರ್ತಿ ಕನ್ನಡ ಚಳುವಳಿಗಳ ಪರಿಣಾಮದಿಂದ ಕನ್ನಡ ಹೋರಾಟಗಾರನಾಗಿ ಕನ್ನಡವೇದಿಕೆ ಮೊದಲಾದ ಸಂಘಟನೆಗಳ ಮೂಲಕ ಕ್ರಿಯಾ ಶೀಲ ಕನ್ನಡ ಸಂಘಟನೆಗಳ ಮೂಲಕ ಹತ್ತಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವೆ.

ವಿಜ್ಞಾನ ಕಾಲೇಜು ವಿದ್ಯಾರ್ಥಿ ಆದಾಗಿನಿಂದ ಇಂದಿನವರೆಗೆ ಸುಮಾರು ೪೦ ವರ್ಷಗಳಿಂದಲೂ ಹೆಚ್ಚಾಗಿ ಕನ್ನಡಕ್ಕೇ ಬಾಳನ್ನು ಮೀಸಲಾಗಿಡುವಂತೆ ಕನ್ನಡ ಸೇವೆಗೆ ನನ್ನ ತಯಾರು ಮಾಡಿದರು ಅನಾಜಿ ಕನ್ನಡ ಮೇಷ್ಟ್ರು ಅಗ್ರಗಣ್ಯರು.

ಕನ್ನಡ ಹೋರಾಟಗಾರನಾಗಲು ಸ್ಫೂರ್ತಿ ಮೇಷ್ಟ್ರು

ಕನ್ನಡ ಸಾಹಿತ್ಯದಲ್ಲಿ ಶ್ರದ್ಧೆ ಆಸಕ್ತಿ ಬರುವಂತೆ ಮಾಡಿದವರಲ್ಲಿ ವಿಜ್ಞಾನ ಕಾಲೇಜಿನಲ್ಲಿದ್ದ ಅನಾಜಿ ಅವರ ಪರಮ ಮಿತ್ರರು ನಿಸಾರ್ ಅವರು ವಿದ್ಯಾರ್ಥಿ ಆಗಿದ್ದಾಗಿನಿಂದ ಅನಾಜಿ ಮಿತ್ರರು ಭೂಗರ್ಭಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಅವರ ಪ್ರಭಾವದಿಂದ ನನಗೆ ಕಾವ್ಯ ಪ್ರೀತಿ ಎರವಾಯಿತು.

ಇಂದು ನನ್ನ ಮೇಲೆ ಪ್ರಭಾವ ಬೀರಿದ ಅನೇಕ ವ್ಯಕ್ತಿಗಳು ಇಹಲೋಕ ತ್ಯಜಿಸಿದ್ದಾರೆ. ಆದರೆ ಪುಣ್ಯವಶಾತ್ ಅನಾಜಿ ಅವರು ಈವತ್ತಿಗೂ ಸಂಪರ್ಕದಲ್ಲಿದ್ದಾರೆ ಅದಕ್ಕೆ ಒಂದು ಮುಖ್ಯ ಕಾರಣ

ಅವರು ನಾನು ಇರುವುದು ಜಯನಗರ ಕಾಂಪ್ಲೆಕ್ಸ್ ಬಳಿ ಇಬ್ಬರದು ಸ್ವಂತ ಮನೆ ಇದೆ. ಮತ್ತೆ ಕಾಂಪ್ಲೆಕ್ಸ್‌ನಲ್ಲಿರುವ ನನ್ನ ಲೇಖನ ಸಾಮಗ್ರಿ ಅಂಗಡಿಗೆ ತಪ್ಪದೆ ಬರುತ್ತಾರೆ. ಪೆನ್ನು, ಕ್ಲಿಪ್ಪು, ಬಿಳಿಕಾಗದ, ಕಾರ್ಬನ್ ಇತ್ಯಾದಿ ಕೊಳ್ಳಲು ನಮ್ಮಲ್ಲಿಗೇ ಶಿಷ್ಯ ಪ್ರೇಮದಿಂದ ಬರುತ್ತಾರೆ ಬಂದಾಗಲೆಲ್ಲ ಸಾಹಿತ್ಯದ ವಿಷಯ ಮಾತನಾಡುತ್ತಾರೆ. ತಪ್ಪದೆ ಕಾಫಿ ಕುಡಿಯುತ್ತೇವೆ. ಪ್ರತಿವರ್ಷ ಅವರಿಗೆ ಡೈರಿ, ಕ್ಯಾಲೆಂಡರನ್ನು ಕಾಣಿಕೆಯಾಗಿ ಕೊಡುತ್ತೇನೆ. ಅವರ ಇನ್ನೊಬ್ಬ ಶಿಷ್ಯೆ ಪ್ರತಿ ವರ್ಷ ಶಿಕ್ಷಕರ ದಿನಾಚರಣೆಯ ದಿನ ಒಂದು ಪುಸ್ತಕ ಕೊಟ್ಟು ಗುರುವಂದನೆ ಸಲ್ಲಿಸುತ್ತಾರೆ ಹತ್ತಾರು ವರ್ಷದಿಂದ ಒಂದು ವರ್ಷವೂ ನಾವಿಬ್ಬರು ಇದನ್ನು ತಪ್ಪಿಸಿಲ್ಲ.

ಅವರ ಹಳಗನ್ನಡ ಪ್ರೇಮ ಅಪಾರವಾದದ್ದು ಅವರೊಡನೆ ಹಲವಾರು ಸಾಹಿತ್ಯ ಕಾರ್ಯಕ್ರಮಗಳಿಗೆ ಹೋಗಿ ಅವರ ಭಾಷಣ ಕೇಳಿ ಆನಂದಿಸಿದ್ದೇನೆ ಕೆಲವು ವರ್ಷದ ಕೆಳಗೆ ಶ್ರವಣ ಬೆಳಗೊಳದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹಳೆಗನ್ನಡ ಸಾಹಿತ್ಯ ಸಮ್ಮೆಳನಕ್ಕೆ ವಿಶೇಷ ಆಹ್ವಾನಿತರಾಗಿದ್ದರು, ನಾನು ನನ್ನ ಸ್ನೇಹಿತರೂಂದಿಗೆ ಅವರನ್ನು ಆ ಸಮ್ಮೇಳನಕ್ಕೆ ಕರೆದುಕೊಂಡು ಹೋಗಿದ್ದೆ ಅದೊಂದು ಅಪೂರ್ವ ಭಾಗ್ಯ ನಮ್ಮ ಮೇಷ್ಟು ದಾರಿ ಉದ್ದಕ್ಕೂ ಸ್ವಾರಸ್ಯವಾಗಿ ಅನೇಕ ಕವಿಗಳ ವಿದ್ವಾಂಸರ ವಿಷಯಗಳನ್ನು ಹೇಳುತ್ತಿದ್ದರು ನಮಗೆ ಮಾಡಿದ್ದೆ ತಿಳಿಯಲಿಲ್ಲ ಶ್ರವಣಬೆಳಗೂಳದಲ್ಲಿ ಸಮ್ಮೇಳನದ ಅಧ್ಯಕ್ಷತೆಯನ್ನು ಪ್ರಸಿದ್ಧ ಶಾಸನ ತಜ್ಞರು ವಿದ್ವಾಂಸರು ಆದ ಷ. ಶೆಟ್ಟರ್ ವಹಿಸಿದ್ದರು ಅವರು ವಯಸ್ಸಿನಲ್ಲಿ ಇವರಿಗಿಂತ ಚಿಕ್ಕವರಾಗಿದ್ದರು ಅವರು ಮೇನೆಯಲ್ಲಿ ಬೆಟ್ಟ ಹತ್ತಿದರೆ ಇವರು ಕಾಲಿನಲ್ಲೇ ಬೆಟ್ಟಹತ್ತಿ ನಮ್ಮನ್ನೆಲ್ಲಾ ಬೆರಗಾಗಿಸಿದರು.

ಶ್ರವಣ ಬೆಳಗೊಳದ ಬಗ್ಗೆ ಸೊಗಸಾಗಿ ಇತಿಹಾಸ ತಿಳಿಸಿದರು ಹತ್ತಾರು ಸಲ ಶ್ರವಣ ಬೆಳಗೊಳದಲ್ಲಿ ಮಹಾವೀರ ಜಯಂತಿಯ ಉಪನ್ಯಾಸಮಾಡಿ ಗೊಮ್ಮಟನ ಮಹಾ ಮಸ್ತಕಾಭಿಷೇಕದಲ್ಲಿ ವೀಕ್ಷಕ ವಿವರಣೆ ಕೊಟ್ಟ ನಮ್ಮ ಮೇಷ್ಟ್ರು, ಗೊಮ್ಮಟನ ಪೂರ್ಣ ದರ್ಶನ ಗುಡ್ಡದಲ್ಲಿ ಎಲ್ಲಿ ನಿಂತರೆ ಆಗುತ್ತದೆ ಎಂದು ತಿಳಿಸಿ ಅಲ್ಲಿಗೆ ಕರೆದುಕೊಂಡುಹೋಗಿ ಗೊಮ್ಮಟನ ಪೂರ್ಣ ದರ್ಶನ ಮಾಡಿಸಿದರು. ಅವರಿಗಿಂತ ಯುವಕರಾಗಿದ್ದ ನನಗೆ ನನ್ನ ಸ್ನೇಹಿತರಿಗೆ ಆ ವಯಸ್ಸಲ್ಲೂ ಅವರ ಉತ್ಸಾಹ, ನಡೆಗೆ ಕಂಡು ಅಚ್ಚರಿಯಾಯಿತು.

ನಮ್ಮ ಮೇಷ್ಟ್ರರ ಪತ್ನಿ ಲಕ್ಷೀದೇವಿಯವರು ಎ.ಪಿ.ಎಸ್.ನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದವರೂ ಅವರೂ ಇವರಂತೆ ಪುಸ್ತಕಗಳನ್ನು ಬರೆದಿದ್ದಾರೆ ಸೊಗಸಾಗಿ ಭಾಷಣ ಮಾಡುತ್ತಾರೆ ಮನೆಗೆ ಬಂದವರಿಗೆಲ್ಲಾ ತಪ್ಪದೆ ಆತಿಥ್ಯ ನೀಡುತ್ತಾರೆ ಪ್ರೀತಿ ವಿಶ್ವಾಸಗಳಿಂದ ಮಾತನಾಡಿಸುತ್ತಾರೆ ನಮ್ಮ ಯಜಮಾನರಿಗೆ ತುಂಬಾ ಪ್ರೀತಿ ಪಾತ್ರರಾದ ನಿಮ್ಮನ್ನು ನಿಮ್ಮ ಕನ್ನಡ ಸೇವೆಯನ್ನು ಯಾವಾಗಲೂ ಹೊಗಳುತ್ತಿರುತ್ತಾರೆ ಎಂದು ಹೇಳುತ್ತಾರೆ ಈ ಸಾಹಿತ್ಯ ಕಂಡಾಗಲೆಲ್ಲ ನನಗೆ ಸಂತೋಷವಾಗುತ್ತದೆ ಹೆಮ್ಮೆಯೆನಿಸುತ್ತದೆ.

ಸದ್ದಿಲ್ಲದೆ ಕನ್ನಡಕ್ಕೆ ದುಡಿಯುತ್ತಿರುವ ಅವರು ಸಿಕ್ಕಾಗಲೆಲ್ಲ ಸಾಹಿತ್ಯದ ವಿಷಯ ಮಾತನಾಡಿ ಸ್ಫೂರ್ತಿ ತುಂಬುತ್ತಾರೆ ಅವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಿರುವುದು ನನಗಂತೂ ತುಂಬಾ ಆನಂದ ತಂದಿದೆ. ಭಗವಂತ ಅವರಿಗೆ ಆಯಿಷ್ಯ ಆರೋಗ್ಯಕೊಡಲಿ ಅನೇಕ ಪ್ರಶಸ್ತಿ ಗೌರವಗಳು ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

****

ಅಪರೂಪದ ಸಾಹಿತ್ಯ ಸೇವಾಧುರೀಣ

ಪ್ರೊ. ಕೆ. ರವಿಕುಮಾರ್
ಚರವಾಣಿ : ೯೮೮೬೧೨೧೩೪೦

ಕನ್ನಡ ಸಾಹಿತ್ಯದ ಪ್ರಸಾರ ಹಾಗೂ ಪ್ರಚಾರ ಮಾಡುವ ಸಾವಿರಾರು ಪ್ರಾಧ್ಯಾಪಕರು ಇದ್ದಾರೆ. ಅವರಲ್ಲಿ ಅಪರೂಪ ಕನ್ನಡ ಸಾಹಿತ್ಯಾರಾಧಕರು ಉತ್ತಮ ಪ್ರಾಧ್ಯಾಪಕರು ನಿರರ್ಗಳ ವಾಗ್ಮಿಗಳು ಹಾಗೂ ಸದಾ ಅಧ್ಯಾಪಕರಿಗೆ ಮಾರ್ಗದರ್ಶನ ಅಭಿಮಾನಿಗಳಲ್ಲಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಅಗ್ರಗಣ್ಯರು.

ಹಾಸನದ ಸರ್ಕಾರಿ ಕಾಲೇಜಿನಲ್ಲಿ 1974 ನೇ ಇಸವಿಯಲ್ಲಿ ಬಿ.ಎಸ್ಸಿ. ಪದವಿ ವಿದ್ಯಾರ್ಥಿಯಾಗಿದ್ದೆ. ಅಲ್ಲಿಗೆ ಹೊಸ ಕನ್ನಡ ಪ್ರಾಧ್ಯಾಪಕರು ಬೆಂಗಳೂರಿನಿಂದ ವರ್ಗವಾಗಿ ಬಂದರು. ನಾನು ಸಂಸ್ಕೃತ ಭಾಷೆಯನ್ನು ಆಯ್ಕೆ ಮಾಡಿಕೊಂಡಿದ್ದೆ. ನಮ್ಮ ಪಕ್ಕದ ತರಗತಿಯಲ್ಲಿ ಕನ್ನಡ ತರಗತಿ ಬಹಳ ದೊಡ್ಡ ಕೊಠಡಿಯಲ್ಲಿ ನಡೆಯುತ್ತಿತ್ತು. ಆ ತರಗತಿಗೆ ಪ್ರೊ. ಅಶ್ವತ್ಥನಾರಾಯಣ ಪಾಠ ಮಾಡಲು ಆಗಮಿಸಿದರೆಂದರೆ ಅವರು ಪಾಠ ಮಾಡುವ ಕಲೆ ಶೈಲಿ ಎಲ್ಲದರಿಂದ ಆಕರ್ಷಿತರಾಗಿ ಇತರ ತರಗತಿಯವರೂ ಅಲ್ಲಿ ಪಾಠ ಕೇಳಲು ಬರುತ್ತಿದ್ದರು.

ಪ್ರತಿಭಾವಂತ ಅಧ್ಯಾಪಕರಾದ ಪ್ರೊ. ಅಶ್ವತ್ಥನಾರಾಯಣ್ ಅವರು ಪ್ರಸಿದ್ಧ ಕನ್ನಡ ಗ್ರಂಥಗಳ ಪಾಠ ಮಾಡುವಾಗ ಅದರಲ್ಲಿ ಬರುವ ಪಾತ್ರಗಳೇ ಆಗಿಬಿಡುತ್ತಿದ್ದರು. ರನ್ನನ ಗದಾಯುದ್ಧದ ಭೀಮ ದುರ್ಯೋಧನರೇ ಬಂದಂತೆ ಭಾಸವಾಗುತ್ತಿತ್ತು. ಅವರ ವಾಕ್ಚತುರತೆಗೆ ಎಲ್ಲರೂ ಆಕರ್ಷಿತರಾಗಿದ್ದರು.

ಸದಾ ಅಧ್ಯಯನಶೀಲರಾದ ಅಶ್ವತ್ಥನಾರಾಯಣರು ಇತರ ಅಧ್ಯಾಪಕರೊಂದಿಗೆ ಸಾಹಿತ್ಯದ ವಿಚಾರವನ್ನೇ ಚರ್ಚಿಸುತ್ತಿದ್ದರು. ಅವರಿಗೆ ಪರಾಮರ್ಶನ ಗ್ರಂಥಗಳನ್ನು ಸೂಚಿಸುತ್ತಿದ್ದರು.

ಪ್ರೊ. ಜಿ ಅಶ್ವತ್ಥನಾರಾಯಣರ ಸಾಹಿತ್ಯ ಸೇವೆ ಬೋಧನೆಗಷ್ಟೇ ಸೀಮಿತವಾಗಿರಲಿಲ್ಲ. ಒಬ್ಬ ಜವಾಬ್ದಾರಿಯುತ ಶಿಕ್ಷಕರಾಗಿ ಸಮಾಜಕ್ಕೂ ಅವರ ಸೇವೆಯನ್ನು ವಿಸ್ತರಿಸಿದ್ದರು. ಈಗಿನ ಉನ್ನತ ಶಿಕ್ಷಣ ಮೌಲ್ಯಮಾಪನದಲ್ಲಿ extension service - ಸೇವಾ ವಿಸ್ತರಣೆ ಎಂಬ ಅಂಶವಿದೆ. ಬೋಧನೆಯ ಜೊತೆಗೆ ಸಮಾಜಕ್ಕೆ ಶಿಕ್ಷಕನ ಕೊಡುಗೆ ಏನು ಅನ್ನುವುದು ಇದಾಗಿದೆ.

ಹಾಸನದಲ್ಲಿ 'ಜನಮಿತ್ರ' ಎಂಬ ಜನಪ್ರಿಯ ದೈನಿಕ ಪತ್ರಿಕೆ ಇದೆ. ಕೃ ನಾ ಮೂರ್ತಿ ಎಂಬುವರು ಅದರ ಸಂಪಾದಕರಾಗಿದ್ದರು. ಅಶ್ವತ್ಥನಾರಾಯಣ ಅವರು ಕಾಲೇಜಿನ ಕರ್ತವ್ಯ ಮುಗಿಸಿ ಸಂಜೆ ಅವರಿಗೆ ಸಲಹೆ ಮಾರ್ಗದರ್ಶನ ನೀಡಿ ಪತ್ರಿಕೆಯ ಗುಣಮಟ್ಟದ ಹೆಚ್ಚಳದ ಬಗ್ಗೆ ಚರ್ಚಿಸಿ ತಾವೂ ಸಾಹಿತ್ಯದ ಬಗ್ಗೆ ಅಂಕಣ ಬರೆಯುತ್ತಿದ್ದರು.

ಹಾಸನದ ಶಂಕರಮಠದಲ್ಲಿ ಆಗಾಗ ಆಧ್ಯಾತ್ಮಿಕ ಪ್ರವಚನ ನೀಡುತ್ತಿದ್ದರು. ಕೃ.ನ.ಮೂರ್ತಿ ರಚಿಸಿದ ಕೃತಿ ಬಿಡುಗಡೆ ಸಂದರ್ಭದಲ್ಲಿ ಶ್ರೀ ಶಂಕರಾಚಾರ್ಯ ವಿರಚಿತ ಭಜಗೋವಿಂದ ಕೃತಿಯನ್ನು ಆಧುನಿಕ ಜಗತ್ತಿಗೆ ಅರಿವಾಗುವಂತೆ ಪರಿಚಯಿಸಿದರು. ಕನ್ನಡ ಪಂಡಿತರಾಗಿದ್ದ ಜೈನ ಮತದ ಪ. ನಾಗರಾಜಯ್ಯನವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಮರ್ಥನಾ ಭಾಷಣ ಮಾಡಿದ್ದುದು ವಿಶೇಷವಾಗಿತ್ತು. ಶ್ರವಣಬೆಳಗೊಳದ ಚಾರುಕೀರ್ತಿಭಟ್ಟಾರಕ ಸ್ವಾಮಿಗಳು ಗ್ರಂಥ ಬಿಡುಗಡೆ ಮಾಡಿದರು.

ಅನಾಜಿಯವರೇ ಕಾಲೇಜಿನಲ್ಲಿ ನಡೆಯುವ ಜಿಲ್ಲಾಮಟ್ಟದ ಕ್ರಿಕೆಟ್ ಆಟದ ವೀಕ್ಷಕ ವಿವರಣೆಯನ್ನು ಅತ್ಯಂತ ಆಕರ್ಷಕ ರೀತಿಯಲ್ಲಿ ನೀಡಿ ಮನ ಗೆದ್ದಿದ್ದರು. ಎಲ್ಲಾ ಕನ್ನಡ ಅಧ್ಯಾಪಕರ ಸ್ನೇಹಕ್ಕೆ ಪಾತ್ರರಾಗಿದ್ದರು.

ಮತ್ತೆ ನಾನು ಸಂಸ್ಕೃತ ಉಪನ್ಯಾಸಕನಾಗಿ ಹಾಸನದ ಸರ್ಕಾರಿ ಕಾಲೇಜಿನಲ್ಲಿ ಮತ್ತು ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಅವರ ಸಹೋದ್ಯೋಗಿಯಾಗುವ ಭಾಗ್ಯ ನನಗೆ ದೊರಕಿತು. ಅವರ ಮಾರ್ಗದರ್ಶನ ಆಗಾಗ ಸಿಗುತ್ತಿತ್ತು. ಅವರು ಎಲ್ಲ ಸಾಹಿತ್ಯ ಅಧ್ಯಾಪಕರಿಗೆ ಪುಸ್ತಕ, ಲೇಖನಗಳನ್ನು ಕೊಟ್ಟು ಅವರ ಪಾಠ ಪ್ರವಚನಗಳ ಯಶಸ್ಸಿಗೆ ಕಾರಣಕರ್ತರಾಗಿದ್ದರು.

ಒಮ್ಮೆ ಪದವಿಪೂರ್ವ ಪಠ್ಯಪುಸ್ತಕ ರಚನಾ ಸಮಿತಿಗೆ ನಾವೆಲ್ಲ ಸದಸ್ಯರಾಗಿದ್ದೆವು. ಪುಸ್ತಕ ರಚನಾ ಕಮ್ಮಟಗಳು ಪ್ರಾರಂಭವಾದವು. ಪಾಠಗಳ ಆಯ್ಕೆಯ ಬಗ್ಗೆ ಚರ್ಚೆ ನಡೆಯಿತು. ಮುಂದಿನ ಚರ್ಚೆಗೆ ಕನ್ನಡ ಪಠ್ಯಪುಸ್ತಕ ಸಮಿತಿ ಸದಸ್ಯರನ್ನೆಲ್ಲ ಅಶ್ವತ್ಥನಾರಾಯಣರು ತಮ್ಮ ಮನೆಗೇ ಕರೆದುಕೊಂಡು ಬಂದರು. ಜಯನಗರದ ಅವರ ಆಲಯದಲ್ಲಿ 'ದೊಡ್ಡ ಗ್ರಂಥಾಲಯ'ವೇ ಇದೆ. ಸಹಸ್ರಾರು ಕನ್ನಡ ಪುಸ್ತಕಗಳು. ಪ್ರತಿ ಪುಸ್ತಕಕ್ಕೂ ಸಂಖ್ಯೆಯನ್ನು ನೀಡಿ ಸುಲಭವಾಗಿ ಸಿಗುವಂತೆ ಜೋಡಿಸಿದ್ದಾರೆ. ಇದನ್ನು ಕಂಡು ಕಾಲೇಜು ಪ್ರಾಧ್ಯಾಪಕರೆಲ್ಲ ಬೆರಗಾದರು. ಸಂಪೂರ್ಣ ಪಠ್ಯಗಳ ಆಯ್ಕೆ ಇಲ್ಲಿಯೇ ನಡೆಯಿತು. ಶ್ರೀಮತಿ ಅಶ್ವತ್ಥನಾರಾಯಣ್ ಕನ್ನಡದ ಪ್ರಾಧ್ಯಾಪಕರು. ಎಲ್ಲರಿಗೂ ಅತ್ಯುತ್ತಮ ಬಿಸಿಬೇಳೆ ಬಾತ್, ಮೊಸರನ್ನ ಮಾಡಿ ಊಟ ಬಡಿಸಿದ್ದು ಇಂದಿಗೂ ನನ್ನ ನೆನಪಲ್ಲಿ ಇದೆ. ಸಾಹಿತ್ಯ ದಂಪತಿಗಳ ಈ ಸೇವೆ ಅವಿಸ್ಮರಣೀಯ.

ಅಪರೂಪದ ಉತ್ತಮ ಪುಸ್ತಕಗಳು ಸಿಕ್ಕಿದಾಗೆಲ್ಲ ಪುಸ್ತಕಗಳನ್ನು ಪ್ರೊ. ಜಿ ಅಶ್ವತ್ಥನಾರಾಯಣರು ಸಂಗ್ರಹಿಸಿದ್ದಾರೆ.

ಈ ಗ್ರಂಥಾಲಯದಿಂದ ಸಂಶೋಧನಾ ವಿದ್ಯಾರ್ಥಿಗಳು ಅಧ್ಯಾಪಕರು ಹಾಗೂ ಲೇಖನ ಬರೆಯುವ ಸಾಹಿತ್ಯಾಸಕ್ತರು ಬಹಳ ಉಪಯೋಗ ಪಡೆದಿದ್ದಾರೆ. ಇದೊಂದು ಅಪೂರ್ವ ಗ್ರಂಥಾಲಯವಾಗಿದೆ. ಸ್ವತಃ ಶ್ರೀ ಅನಾಜಿಯವರ ಅಧ್ಯಯನ ಅಧ್ಯಾಪನ ಹಾಗೂ ಸಾಹಿತ್ಯ ರಚನೆಗಳಿಗೂ ಪೂರಕವಾಗಿದೆ.

ಸುಮಾರು ಆರು ದಶಕಗಳಿಗೂ ಹೆಚ್ಚು ಕಾಲ ನಿರಂತರವಾಗಿ ಸಾಹಿತ್ಯ ಕೈಂಕರ್ಯವನ್ನು ಮಾಡಿರುವ ಪ್ರೊ. ಅನಾಜಿ ಅವರನ್ನು ನಾನು ಮಹಾರಾಣಿ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿದ್ದಾಗ ಕಾಲೇಜಿಗೆ ವಾರ್ಷಿಕೋತ್ಸವಕ್ಕೆ ಅತಿಥಿಗಳನ್ನಾಗಿ ಕರೆದು ಸಾಹಿತ್ಯ ದಂಪತಿಗಳಿಬ್ಬರನ್ನು ಸನ್ಮಾನಿಸಲು ಅವಕಾಶ ದೊರೆತಿತ್ತು. ಅಂದಿನ ಪ್ರಾಂಶುಪಾಲರಾದ ಕಮಲಮ್ಮನವರು ಬಹಳ ಹರ್ಷದಿಂದ ಸನ್ಮಾನಿಸಿದ್ದು ಸ್ಮರಣೀಯ.

ಪ್ರೊ. ಅನಾಜಿಯವರ ಅಭಿನಂದನಾ ಗ್ರಂಥದಲ್ಲಿ ಇವೆಲ್ಲವನ್ನು ಹಂಚಿಕೊಳ್ಳಲು ಅವಕಾಶ ನೀಡಿದ್ದಕ್ಕಾಗಿ ಸಮಿತಿಯವರಿಗೆ ನನ್ನ ಅಭಿನಂದನೆಗಳು.

****

ಎಳೆತನದಿಂದಲೂ ಗೆಳೆತನ

ಬಿ.ಎಸ್. ರಾಮರಾವ್
ಚರವಾಣಿ : ೯೪೪೮೫೦೭೩೯೩

"ಅನಾಜಿ" ಎಂದು ಪೂರ್ವ ವಿದ್ಯಾರ್ಥಿಗಳಿಂದಲೂ ಸಹೋದ್ಯೋಗಿಗಳಿಂದಲೂ ಸಾಹಿತ್ಯ ಪ್ರಿಯರಿಂದಲೂ ಕರೆಯಲ್ಪಡುವ ಈ ವ್ಯಕ್ತಿ ನನಗೆ ಮಾತ್ರ "ಅಶ್ವತ್ಥ"ನೆ. ಏಕೆಂದರೆ ನಾವಿಬ್ಬರೂ ಒಂದೇ ಪ್ರಾಯದವರು. ನನಗಿಂತಲೂ ಗೆಳೆಯ ಅಶ್ವತ್ಥ ೩ ತಿಂಗಳು ದೊಡ್ಡವನು. ಚಾಮರಾಜಪೇಟೆಯಲ್ಲಿ ೩ ತಿಂಗಳು ದೊಡ್ಡವನು. ಚಾಮರಾಜಪೇಟೆಯಲ್ಲಿ ೪ನೇ ಮುಖ್ಯರಸ್ತೆಯಲ್ಲೇ ನಮ್ಮ ಅವನ ಮನೆ. ನಾವು ಹುಟ್ಟಿದ್ದೂ ಬೆಳೆದದ್ದೂ ಅಲ್ಲೇ. ಅವನ ತಂದೆಯವರು ಹೆಬ್ಬಗೋಡಿ ಗುಂಡಪ್ಪನವರು. ತಾಯಿ ಜಾನಕಮ್ಮನವರು, ಅವರು ದಿನಸಿ ಅಂಗಡಿ ಭೀಮಣ್ಣನವರು ಮನೆಯ ಎದುರು ಮನೆ ವಠಾರದಲ್ಲಿ ಬಾಡಿಗೆಗೆ ಇದ್ದರು. ಶ್ರೀ ಭೀಮಣ್ಣನವರ ಮಗನ ಹೆಸರೂ ಅಶ್ವತ್ಥನೇ. ಅವನೂ ನನ್ನ ಬಾಲ್ಯದ ಗೆಳೆಯ. ಹೆಬ್ಬಗೋಡಿ ಶ್ರೀಗುಂಡಪ್ಪನವರ ತಮ್ಮನ ಮಕ್ಕಳು ನಮ್ಮ ಮನೆಯ ಸನಿಹದಲ್ಲೇ ಬಾಡಿಗೆಗೆ ಇದ್ದರು. ಆ ವಠಾರವನ್ನು "ರಂಗಮ್ಮನ ವಠಾರ" ಎಂದು ಕರೆಯುತ್ತಿದ್ದರು. ಅಶ್ವತ್ಥನ ಸೋದರತ್ತೆ ಗುಂಡಮ್ಮನವರು ಆ ವಠಾರದಲ್ಲಿದ್ದರು. ಕಾದಂಬರಿಕಾರ ನಿರಂಜನರು ಆ ವಠಾರದ ರೂಮಿನಲ್ಲಿ ಕೆಲವು ಕಾಲ ಬಾಡಿಗೆಗಿದ್ದರು. ರಂಗಮ್ಮನ ವಠಾರ ಎಂಬ ಕಾದಂಬರಿಯನ್ನು ಬರೆದರು. ಆಕೆ ಸುತ್ತಮುತ್ತಲ ಗೃಹಿಣಿಯರಿಗೆ ಸದಾ ನೆರವಾಗುತ್ತಿದ್ದರು ಎಂಬುದು ಈಗಲೂ ನೆನಪಿದೆ. ಇದೆಲ್ಲಾ ಎಂಬತ್ತೈದು ವರ್ಷಗಳ ಹಿಂದಿನ ಮಾತು. ನಾನು ಮನೆಯಿಂದ ಹೊರಡುವ ವೇಳೆಗೆ ಅಶ್ವತ್ಥನೂ ಅದೇ ಶಾಲೆಗೆ ಸೇರಿದ್ದ "ಕೋಟೆ ಮಾಧ್ಯಮಿಕ ಶಾಲೆ" ಅಶ್ವತ್ಥ, ನಾನು ವೀಸಿ ಅವರ ಮಗ ಸತ್ಯ, ಇವರೆಲ್ಲರೂ ಒಂದೇ ತರಗತಿ. ನಂತರ ಹೈಸ್ಕೂಲ್ ಕೋಟೆ ಹೈಸ್ಕೂಲ್ ಎಸ್‌ಎಸ್‌ಎಲ್ಸಿ ಪರೀಕ್ಷೆಯ ನಂತರ ಅವನುಮ ಎಸ್.ಎಂ.ಜೆ. ಪಾಲಿಟೆಕ್ನಿಕ್ನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೋಮಾ ತರಗತಿಗೆ ಸೇರಿದ್ದ. ನಾನು ವಿಜಯಾ ಕಾಲೇಜಿಗೆ ಇಂಟರ್ ಪ್ರಥಮ ತರಗತಿಗೆ ಸೇರಿದ್ದೆ. ಆದರೇ ನಮ್ಮಿಬ್ಬರ ಭೇಟಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪದೇ ಪದೇ ಆಗುತ್ತಿತ್ತು. ಅಂತರ ಕಾಲೇಜು ಚರ್ಚಾಸ್ಪರ್ಧೆಗಳಲ್ಲಿ ಇಬ್ಬರ ಭೇಟಿ ಆಗುತ್ತಿತ್ತು.

ಯಂತ್ರ ಕುಶಲಿಯಾಗಬೇಕಾದವನು ಸಾಹಿತ್ಯ ಪ್ರೇಮಿಯಾಗಿದ್ದು ಒಂದು ರೋಚಕ ತಿರುವು. ಇದಕ್ಕೆ ಬಹುಶಃ ಸಾಹಿತ್ಯ ಪರಿಷತ್ತು ಮತ್ತು ಅಲ್ಲಿ ನಡೆಯುತ್ತಿದ್ದ ಸಭೆ ಸಮಾವೇಶಗಳಲ್ಲಿ ಭಾಗವಹಿಸುತ್ತಿದ್ದ "ಅಂದಿನ ಕವಿಗಳು, ಸಾಹಿತಿಗಳು, ಪಂಡಿತರ ಪ್ರಭಾವ" ಎಂಬುದು ನನ್ನ ಅನಿಸಿಕೆ. ಚಾಮರಾಜಪೇಟೆಯಲ್ಲಿ ಅಂದಿನ ದಿನಗಳಲ್ಲಿ ನಡೆಯುತ್ತಿದ್ದ ಸಭೆ, ಸಮಾರಂಭಗಳೂ, ಹರಿಕಥೆಗಳು ಸಂಗೀತೋತ್ಸವಗಳೂ, ಸಾಂಸ್ಕೃತಿಕ ವಾತಾವರಣವೂ ಕಾರಣವಿರಬೇಕು. ಇವೆಲ್ಲದರ ಪರಿಣಾಮ ಅಶ್ವತ್ಥನ ಮೇಲೆ ಆಯಿತು. ಅಂದಿನ ಕಾಲೇಜು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದ ಸ್ಪರ್ಧಿಗಳು ಬೇರೆ

ಬೇರೆ ಕಾಲೇಜುಗಳು ನಡೆಸುತ್ತಿದ್ದ ಎಲ್ಲಾ ಅಂತರ. ಕಾಲೇಜು ಚರ್ಚಾಸ್ಪರ್ಧೆಗಳಲ್ಲಿ ಅಶ್ವತ್ಥನೂ ಭಾಗವಹಿಸುತ್ತಿದ್ದ. ಹೀಗೆ ಭಾಗವಹಿಸುತ್ತಿದ್ದ ನಾವೆಲ್ಲರೂ ಒಂದು ಸಂಘವನ್ನು ಸ್ಥಾಪಿಸಿದೆವು. ಆ ಸಂಘದ ಹೆಸರು "ಕಿರಿಯ ವಾಗ್ಮಿಗಳ ಸಂಘ" ಎಂದು ನೋಂದಾಯಿಸಲಾಯಿತು. ಈ ಸಂಘದ ಕ್ರಿಯಾಶೀಲ ಸದಸ್ಯರಲ್ಲಿ ಅಶ್ವತ್ಥನೂ ಒಬ್ಬನಾಗಿದ್ದ ಮತ್ತು ಕಾರ್ಯಕಾರೀ ಸಮಿತಿಯ ಸದಸ್ಯನೂ ಆಗಿದ್ದ. ಅವನು ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿದಾಗ, ಅವನ ಆಕರ್ಷಣೀಯ ಮಾತಿನ ಮೋಡಿಗೆ ಪ್ರೇಕ್ಷಕರು ಬೆರಗಾಗುತ್ತಿದ್ದರು. ಹೀಗೆ ಎಳೆಯ ವಯಸ್ಸಿನಲ್ಲೇ ಭಾಷೆಯ ಮೇಲೆ ಪ್ರಭುತ್ವ ಬೆಳೆಸಿಕೊಳ್ಳುವ ವ್ಯಕ್ತಿಗಳು ಬಹಳ ವಿರಳ ಎಂದೇ ಹೇಳಬೇಕು.

ಕನ್ನಡ ಸಾಹಿತ್ಯ ಮತ್ತು ಭಾಷೆಯ ಮೇಲೆ ಒಲವು ಬೆಳೆಸಿಕೊಂಡ ಈ ವ್ಯಕ್ತಿ ಕನ್ನಡ ಎಂ.ಎ. ಮಾಡಬೇಕೆಂಬ ಛಲದಿಂದ ಸಮಾಜ ವಿಜ್ಞಾನ ಶಾಸ್ತ್ರದಲ್ಲಿ ಬಿ.ಎ., ಎಂ.ಎ. ಪದವಿಗಳನ್ನು ಪಡೆದು ಮತ್ತೆ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡದಲ್ಲಿ ಎಂ.ಎ. ಪದವಿಯನ್ನು ಪಡೆದು, ಅದರ ಜೊತೆಗೆ ಶಾಸನ ಶಾಸ್ತ್ರ ಮತ್ತು ಭಾಷಾ ವಿಜ್ಞಾನ ಪರಿಣತಿಯನ್ನು ಪಡೆದದ್ದು ಬಹುದೊಡ್ಡ ಸಾಧನೆ.

ನಂತರ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡ ಶಿಕ್ಷಕರಾಗಿ ಸಹಸ್ರಾರು ವಿದ್ಯಾರ್ಥಿಗಳನ್ನು ತಯಾರು ಮಾಡಿದ್ದು, ಕನ್ನಡದ ಭಾಷಾ ಬೆಳವಣಿಗೆಗೆ ಸೇವೆ ಸಲ್ಲಿಸಿದರು. ತನ್ನ ಅಪೂರ್ವ ಪಾಂಡಿತ್ಯದಿಂದ ಹಳೆಗನ್ನಡ, ನಡುಗನ್ನಡ ಮತ್ತು ಈಗಿನ ಅನೇಕ ಕಾವ್ಯಗಳ ಬಗ್ಗೆ ಅಧಿಕಾರಯುತವಾಗಿ ಬರೆಯಬಲ್ಲ ಮತ್ತು ಮಾತನಾಡಬಲ್ಲ ಪ್ರತಿಭಾಶಾಲಿಯಾಗಿ ರೂಪುಗೊಂಡದ್ದು ಈ ನಾಡಿನ ಮತ್ತು ಭಾಷೆಯ ಸೌಭಾಗ್ಯ.

ಬೆಂಗಳೂರು ಮಹಾರಾಣಿ ಕಾಲೇಜು, ಮಂಡ್ಯ, ಹಾಸನ, ಕೊಳ್ಳೇಗಾಲ ಹೀಗೆ ಹಲವಾರು ಕಾಲೇಜುಗಳಲ್ಲಿ ಕನ್ನಡ ಶಿಕ್ಷಕರಾಗಿ, ಉಪಪ್ರಾಧ್ಯಾಪಕರಾಗಿ ಮತ್ತು ಪ್ರಾಧ್ಯಾಪಕರಾಗಿ ಮೂವತ್ತು ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿ, ನಿವೃತ್ತರಾದರೂ ಇವನ ಕನ್ನಡ ಸಾಹಿತ್ಯದ ಮತ್ತು ಭಾಷಾ ಸೇವೆಯಲ್ಲಿ ಇಂದಿಗೂ ನಿರತರಾಗಿದ್ದಾನೆ.

ಇವನ ಶಿಷ್ಯರು ಇವನಿಗೆ "ಕನ್ನಡ ಸಾಹಿತ್ಯ ಪರಿಚಾರಕ" ಎಂಬ ಅನೌಪಚಾರಿಕ ಬಿರುದನ್ನು ನೀಡಿದ್ದಾರೆ. ಆದರೇ ನನ್ನ ದೃಷ್ಟಿಯಲ್ಲಿ ಕೇವಲ ಕನ್ನಡ ಸಾಹಿತ್ಯ ಪರಿಚಾರಕನಷ್ಟೇ ಅಲ್ಲ, ಕನ್ನಡ ಸಾಹಿತ್ಯ ಪ್ರಕಾಶಕ, ಪ್ರಸಾರಕ, ಸಂಕಲನಕಾರ, ಈ ರೀತಿ ಅನೇಕ ಹೆಸರುಗಳನ್ನು ಸೇರಿಸಬಹುದು.

ಇವರ ಕೆಲವು ವಿಶೇಷ ಸಾಧನೆಗಳನ್ನು ಅವರ ಸಾಹಿತಿ ಮಿತ್ರರು, ಶಿಷ್ಯವೃಂದ ಮತ್ತು ಪಂಡಿತರು, ಅವರ ಲೇಖನಗಳಲ್ಲಿ ಹಾಡಿ ಹೊಗಳಿದ್ದಾರೆ. ಅವರ ಇತರೇ ಕೆಲವು ಸಾಧನೆಗಳನ್ನು ನಾನು ಈ ಲೇಖನದಲ್ಲಿ ಪ್ರಸ್ತಾಪ ಮಾಡಿದರೆ, ಅದು ಅತ್ಯಂತ ಉಚಿತವೆನಿಸುತ್ತದೆ. ಅವನು ಯಾವುದೇ ಗ್ರಂಥ, ಪುಸ್ತಕ ಹೊರತಂದರೆ, ಅದರ ಒಂದು ಪ್ರತಿ ನನಗೆ ಕೊಟ್ಟು ನಿನ್ನ ಅಭಿಪ್ರಾಯ ತಿಳಿಸು ಎಂದು ಬರೆಯುವುದು ಪದ್ಧತಿ. ಕೆಲವು ಪುಸ್ತಕಗಳಲ್ಲಿ, 'ನೀನು ಓದಿ ಹೇಳು' ಎಂದು ಬರೆದದ್ದೂ ಉಂಟು.

ಇತ್ತೀಚೆಗೆ ಕೊಟ್ಟ ಪುಸ್ತಕದಲ್ಲಿ 'ಓದಿ, ಅದರ ಬಗ್ಗೆ ಒದರು' ಎಂದು ಟಿಪ್ಪಣಿ ಬರೆದು ಕೊಟ್ಟಿದ್ದ. ಆಗ ನನಗೆ ಅವರಿಗೆ ನನ್ನ ಮೇಲಿರುವ ಪ್ರೀತಿಯ ಮತ್ತು ಗೆಳೆತನದ ಬಿಸಿ ತಟ್ಟಿತು. ಅದಕ್ಕಾಗಿ ಪುಸ್ತಕಗಳನ್ನು ಗಮನವಿಟ್ಟು ಓದಬೇಕಾಯಿತು. ಇದರಿಂದ ಗೋಚರವಾದದ್ದು ಒಂದು ಅಂಶ. ಪ್ರಸಿದ್ಧ ಕವಿ ಕಾವ್ಯಗಳ ಮೇಲೆ ಎಷ್ಟು ಪ್ರಭುತ್ವವಿತ್ತೋ ಅಷ್ಟೇ ಪ್ರಭುತ್ವ ಅಷ್ಟೇನು ಪ್ರಸಿದ್ಧರಲ್ಲದವರ ಕೃತಿಗಳ ಕುರಿತೂ ಇತ್ತು ಎನ್ನುವುದು.

ಉದಾಹರಣೆಗೆ ಕಾಳಿದಾಸನ ರಘುವಂಶ ಕಾವ್ಯವನ್ನು ಕನ್ನಡೀಕರಿಸಿದ ದೊಡ್ಡ ಬೆಲೆ ನಾರಾಯಣ ಶಾಸ್ತ್ರಿಗಳ ೧೯೧೩ರಲ್ಲಿ ಪ್ರಕಟಿತವಾದ 'ರಘುಕುಲ ಚರಿತಂ' ಎಂಬ ಕೃತಿಯನ್ನು ಸಂಪಾದಿಸುವಾಗ ಪ್ರಕಟಿಸಿರುವ ಅನುಬಂಧಗಳು ಮತ್ತು ಅಧ್ಯಯನ ಮಾಡಿರುವ ಆಕರ ಗ್ರಂಥಗಳು ಮತ್ತು ಟಿಪ್ಪಣಿಗಳು. ಇದರಲ್ಲಿ ಸಂಪಾದಕನಾಗಿ ಇವನು ಪಟ್ಟಿರುವ ಶ್ರಮ ಮತ್ತು ನಿಷ್ಪಕ್ಷಪಾತವಾದ ಚಿಕಿತ್ಸಕ ದೃಷ್ಟಿ ಮತ್ತು ಸಹಾಯಕ ಸಾಹಿತ್ಯದ ಟಿಪ್ಪಣಿಗಳು ಅಮೋಘ.

ಅನಾಜಿಯವರ ಸಾಹಿತ್ಯ ಸೇವೆಯ ಹರಹೂ ಜೈನ ಸಾಹಿತ್ಯ, ಅನುಭವಾಮೃತ, ದಾಸಸಾಹಿತ್ಯ, ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿತೆ, ಭಗವದ್ಗೀತಾ ಶಬ್ದಕೋಶ, ಹೀಗೆ ನಾನಾ ಪ್ರಕಾರಗಳಲ್ಲಿ ಹರಡಿದೆ. ಇದರಲ್ಲಿ ನನ್ನ ಗಮನ ಸೆಳೆದ ಉದ್ಗ್ರಂಥವೆಂದರೆ ಶಂಕರ ಭಗವತ್ಪಾದಕ "ಸೌಂದರ್ಯ ಲಹರೀ ಸ್ತೋತ್ರ ದೀಪಿಕೆ. ಅದಕ್ಕೆ ಜಿ.ಎಸ್. ಕಪಿನೀಪತಯ್ಯನವರ ಟೀಕೆ ಮತ್ತು ಎಂ.ವಿ. ಸೀತಾರಾಮಯ್ಯನವರು ಪದ್ಯಾನುವಾದ ಸಹಿತ ಅನಾಜಿ ನೀಡಿರುವ ಟಿಪ್ಪಣಿಗಳು. ಇಂಥ ಗ್ರಂಥ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಪ್ರಕಟಿಸಿದೆ. ಇದಕ್ಕೆ ಅಶ್ವತ್ಥನಾರಾಯಣ ಪರಿಷ್ಕರಿಸಿ ಪಾಠಾಂತರಗಳನ್ನೂ, ತಾತ್ಪರ್ಯಗಳನ್ನೂ, ಪದ ವಿಭಾಗಗಳನ್ನೂ ಮತ್ತು ಅಕಾರಾದಿ ಟಿಪ್ಪಣಿಗಳನ್ನೂ, ಯಾವ ಯಾವ ಅಲಂಕಾರಗಳನ್ನು ಬಳಸಿದ್ದಾರೋ ಮತ್ತು ಇತರ ಭಾಷೆಗಳಲ್ಲಿ ಪ್ರಕಟಿತವಾಗಿರುವ ಈ ಸೌಂದರ್ಯಲಹರಿಯ ಭಾಷ್ಯಾ, ಟೀಕೆಗಳನ್ನು ಪರಿಚಯ ಮಾಡಿಸಿರುವ ಗ್ರಂಥ ಕ್ನನಡದಲ್ಲಿ ಮಾಡಿರುವ ಅನಾಜಿಯವರ ಈ ಕೊಡುಗೆ ಅವನಿಗೆ ಸಲ್ಲುವ ಗೌರವ ಪ್ರಶಸ್ತಿಗಳು, ಅವನ ವಿಶಾಲ ಪ್ರೌಢಿಮೆಗೆ ದ್ಯೋತಕವೆಂದೇ ಹೇಳಬಹುದು. ಇದಲ್ಲದೇ ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸವನ್ನು ಗ್ರಂಥರೂಪದಲ್ಲಿ ತಂದಿರುವುದು ಹಾಗೂ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರುಗಳ ಪರಿಚಯ ಲೇಖನಗಳು, ಹಿರಿಯ ಕನ್ನಡ ಸಾಹಿತಿಗಳ ಪರಿಚಯಗಳು, ರತ್ನಾಕರ ವರ್ಣಿಯ ಮೂರು ಶತಕಗಳು, ಹೀಗೆ ನಾನಾ ಗ್ರಂಥಗಳ ಸಂಕಲನ, ಸಂಪಾದನೆ ಮತ್ತು ಹದಿನೈದು ಸಾವಿರಕ್ಕೂ ಹೆಚ್ಚು ಕೃತಿಗಳುಳ್ಳ ದಾಸ ಸಾಹಿತ್ಯದ ಸಂಪಾದನೆ ಮತ್ತು ಸಾವಿರಾರು ಜೈನ ಸಾಹಿತ್ಯ, ವೀರಶೈವ ಸಾಹಿತ್ಯ, ಅದ್ವೈತ ವೇದಾಂತ, ಹಲವಾರು ದತ್ತಿ ಉಪನ್ಯಾಸಗಳು, ಐ.ಎ.ಎಸ್, ಕೆ.ಎ.ಎಸ್., ಎಂ.ಫಿಲ್ ಕೂಟದಲ್ಲಿ ಕ್ರಿಯಾಶೀಲ ಸದಸ್ಯತ್ವ, ನಾನಾ ಸಮಿತಿಗಳಲ್ಲಿ ಸದಸ್ಯತ್ವ, ಹೀಗೆ ಬಹುಮುಖ ವ್ಯಕ್ತಿತ್ವವಿರುವ ಸರಳ, ಸಜ್ಜನ ಪ್ರತಿಭಾಶಾಲಿ ನನ್ನ ಎಳೆತನದ ಗೆಳೆಯ ಜಿ. ಅಶ್ವತ್ಥನಾರಾಯಣ.

ಒಂದು ದುಃಖದ ಸಂಗತಿ ಎಂದರೆ ಕರ್ನಾಟಕದಲ್ಲಿರುವ ಹಲವಾರು ವಿಶ್ವವಿದ್ಯಾನಿಲಯಗಳು ಇಂಥಾ ಜ್ಞಾನ ವೃದ್ಧ, ವಯೋವೃದ್ಧ, ಕಾರ್ಯಶೀಲ ಪ್ರತಿಭಾಶಾಲಿಗೆ ಡಾಕ್ಟರೇಟ್ ಪದವಿ ನೀಡದಿರುವುದು.

****

ಇವರಿಗೆ ಸಾಹಿತ್ಯವೇ ಉಸಿರು

ಆರ್. ಶಂಕರ್
ಚರವಾಣಿ : ೯೮೪೫೬೯೧೦೩೦

ಕೋಟೆ ಹೈಸ್ಕೂಲಿನಲ್ಲಿ ಓದುತ್ತಿರುವ ಒಬ್ಬ ಎಸ್.ಎಸ್.ಎಲ್.ಸಿ.ಯ ವಿದ್ಯಾರ್ಥಿಗೆ ಕನ್ನಡ ಚರ್ಚಾಸ್ಪರ್ಧೆಯಲ್ಲಿ ಹಣದ ರೂಪದಲ್ಲಿ ಬಹುಮಾನ ಬಂದಿದೆ. ಹುಡುಗ ಬಹುಮಾನದ ಹಣಕ್ಕೆ ಕೊಂಡುಕೊಂಡಿದ್ದು ಕನ್ನಡ ಪುಸ್ತಕಗಳನ್ನು. ಈ ವಿದ್ಯಾರ್ಥಿ ಯಾರು ಅಲ್ಲ, ಶ್ರೀ ಅಶ್ವತ್ಥನಾರಾಯಣರವರು (ಅನಾಜಿ). ಚಿಕ್ಕ ವಯಸ್ಸಿನಿಂದಲೂ ಸಾಹಿತ್ಯಕೃಷಿ ಆರಂಭಿಸಿ, ಈಗಲೂ 87ನೇ ವಯಸ್ಸಿನಲ್ಲಿ ಅದೇ ಉತ್ಸಾಹದಿಂದ ಈ ಸಾಹಿತ್ಯಕೃಷಿಯನ್ನು ಮಾಡುತ್ತಿರುವುದು ನಂಬಲಸಾಧ್ಯವಾದ ಸತ್ಯ.

ಕೋಟೆ ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಯಲ್ಲಿ ಓದುವಾಗ ಎದುರುಗಡೆ ಇದ್ದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯುವ ಭಾಷಣಗಳು, ವಿಚಾರಗೋಷ್ಠಿಗಳು ಅಶ್ವತ್ಥನಾರಾಯಣರವರನ್ನು ಆಕರ್ಷಿಸಿತ್ತು. ಅಲ್ಲಿ ಬರುವ ಪ್ರಸಿದ್ಧ ಸಾಹಿತಿಗಳ ಭೇಟಿ, ಒಡನಾಟ, ಚರ್ಚೆ ಅವರಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಅಪಾರ ಒಲವು ಬೆಳೆಸಿತು. ಈ ವಯಸ್ಸಿನಲ್ಲಿಯೂ ಅವರ ಕನ್ನಡ ಸಾಹಿತ್ಯ ಪ್ರೇಮ ಎಂತಹ ತರುಣ ಸಾಹಿತಿಗಳನ್ನು ನಾಚಿಸುವಂತಹದು.

ಪುಸ್ತಕ ಬರೆಯಲು ಎಲ್ಲಾ ಸಿದ್ಧತೆ ಮಾಡಿ ಕುಳಿತರೆ, ಹಸ್ತ ಪ್ರತಿಗಳನ್ನು ತಿದ್ದಲು ಕುಳಿತರೆ, ಲೇಖನಗಳನ್ನು ಬರೆಯಲು ಕುಳಿತರೆ, ಅವರು ಒಂದು ಹೊಸ ಪ್ರಪಂಚವನ್ನೇ ಪ್ರವೇಶಿಸುತ್ತಾರೆ. ಈ ವಿಷಯದಲ್ಲಿ ಅವರಿಗಿರುವ ಅಪಾರ ಜ್ಞಾನ, ಕೆಲಸದಲ್ಲಿ ತಲ್ಲೀನತೆ, ನಿರಂತರವಾಗಿ ಗಂಟೆಗಳನ್ನು, ದಿನಗಳನ್ನು ಲೆಕ್ಕಿಸದೇ ದುಡಿಯುವ ಪರಿ ನನ್ನನ್ನು ಹಲವು ಬಾರಿ ಅಚ್ಚರಿಗೊಳಿಸಿದೆ. ಆದ್ದರಿಂದಲೇ ಅವರ ಸಾಹಿತಿ ಮಡದಿ ಶ್ರೀಮತಿ ಲಕ್ಷ್ಮೀದೇವಿ ಇವರ ಸಾಹಿತ್ಯ ಪ್ರೇಮವನ್ನು ಯಾವ ಅಸೂಯೆಯೂ ಇಲ್ಲದೇ ಎರಡನೇ ಪತ್ನಿಗೆ ಹೋಲಿಸುತ್ತಾರೆ.

ಬೇಸಿಗೆ ರಜೆ ಬಂದರೆ ನಮಗೆಲ್ಲಾ ಹಲವಾರು ವಿಷಯಗಳ ಪುಸ್ತಕಗಳನ್ನು ಓದಲು ಕೊಟ್ಟು ಸಾಹಿತ್ಯ ಅಭಿರುಚಿಯನ್ನು ನನ್ನಲ್ಲಿ ಮತ್ತು ನನ್ನ ತಮ್ಮಂದಿರಲ್ಲಿ ಬೆಳೆಸಿದ್ದಾರೆ. ಅವರ ಜೊತೆಯ ಸಂವಾದ ಜ್ಞಾನವಲ್ಲದೇ ನಗೆಯ ಬುಗ್ಗೆಯನ್ನು ಹರಿಸುತ್ತದೆ. ಅವರ ಮನೆಯ ಗ್ರಂಥ ಭಂಡಾರ ಒಂದು ದೊಡ್ಡ ಜ್ಞಾನ ಭಂಡಾರ, ಅವರ ಮನೆ ಮತ್ತು ಮನ ಎರಡೂ ಅಮೂಲ್ಯವಾದ ಕನ್ನಡ ಗ್ರಂಥಾಲಯಗಳು.

ಶಾಲಾ ದಿನಗಳಲ್ಲಿ ಇವರು ಕ್ರಿಕೆಟ್ ಮತ್ತು ಫುಟ್ಬಾಲ್ ಆಡುತ್ತಿದ್ದರು. ಸಿಲ್ವರ್ ಜೂಬಿಲಿ ಟೂರ್ನಮೆಂಟ್ ಎಂಬ ಶಾಲೆಗಳ ಕ್ರಿಕೆಟ್ ಸ್ಪರ್ಧಾ ಪಂದ್ಯಗಳಿಗೆ ಸ್ಕೋರರ್ ಆಗಿದ್ದರು. ಸಂಗೀತದಲ್ಲಿ ಸಾಕಷ್ಟು ಆಸಕ್ತಿ ಇದೆ.

ಜೈನಧರ್ಮದ ಬಗ್ಗೆಯೂ ಸಾಕಷ್ಟು ಆಳವಾದ ಜ್ಞಾನವಿದ್ದು, ಹಲವಾರು ವಿದ್ವತ್ ಉಪನ್ಯಾಸಗಳನ್ನು ನೀಡಿದ್ದಾರೆ. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರವಣಬೆಳಗೊಳ ಇವರ ಪ್ರೀತಿ ಮತ್ತು ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಶ್ರೀ ಅಶ್ವತ್ಥನಾರಾಯಣರವರು ಅತ್ಯಂತ ಶಿಸ್ತಿನ ಪ್ರಾಧ್ಯಾಪಕರೂ ಹೌದು. ಎಷ್ಟೇ ಕಿರಿಕಿರಿ, ಒತ್ತಡ ಇದ್ದರೂ ಅವರು ತಮ್ಮ ಕಟ್ಟುನಿಟ್ಟುತನದಲ್ಲಿ ಎಂದೂ ರಾಜಿ ಮಾಡಿಕೊಳ್ಳಲಿಲ್ಲ, Total Kannada Media YouTube Channel ನಲ್ಲಿ ನಾ ಕಂಡ ಚಿಟ್ಟೆ ಕತೆಗಳು ಎಂಬ ಹಲವು ವೀಡಿಯೋಗಳು ಲಭ್ಯವಿದೆ.

ಇನ್ನಷ್ಟು ಸುಧೀರ್ಘ ಕನ್ನಡ ಸಾಹಿತ್ಯ ಸೇವೆ ನೀಡಲು, ಭಗವಂತನು ಶ್ರೀ ಅಶ್ವತ್ಥನಾರಾಯಣ ಅವರಿಗೆ ಆರೋಗ್ಯ ನೆಮ್ಮದಿ, ಉತ್ಸಾಹ, ಶಕ್ತಿ ನೀಡಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

****

ಕವಿತೆ ೫-ನಲ್ಮೆ

ಪ್ರೊ. ಕೆ. ಪಿ. ನರಸಿಂಹಮೂರ್ತಿ
ಚರವಾಣಿ : ೯೮೪೫೯೦೮೪೯೯

ನಮ್ಮ ಅಶ್ವತ್ಥರು.. .. ...
ಕನ್ನಡ ಜ್ಞಾನ ಜ್ಯೋತಿಯ ಬೋಧಿವೃಕ್ಷ
ಶ್ರೀಯುತರೆ ಕನ್ನಡ ಸಾಹಿತ್ಯದ ಅಶ್ವತ್ಥವೃಕ್ಷ
ಕನ್ನಡ ನಾಡು-ನುಡಿಗೆ ಇವರ ಸೇವೆ ಅನಂತ,
ಕನ್ನಡ ಸಾಹಿತ್ಯ ಸೇವೆಯೇ ಇವರ ಅಸ್ತ್ರ,
ಇವಋು ರಚಿಸಿದ ಸಾಹಿತ್ಯವೇ ನಮ್ಮ ಶಸ್ತ್ರ, ಶಾಸ್ತ್ರ
ಕನ್ನಡ ನಾಡಿಗೆ ಇವರೆ ಅದೃಷ್ಟ. ಭಾಗ್ಯ ವ್ಯಕ್ತಿ
ಆಡು ಮುಟ್ಟದ ಸೊಪ್ಪಿಲ್ಲ, ಅಶ್ವತ್ಥರು ಬರೆಯದ ಸಾಹಿತ್ಯವಿಲ್ಲ.
ಕನ್ನಡದ ಸಾಹಿತ್ಯವನ್ನು ಅಲಂಕರಿಸಿದ ಸರಸ್ವತಿಯ ಪುತ್ರ
ಹೊಸ ಸಾಹಿತ್ಯದ ಅನ್ವೇಷಕ ಮಕ್ಕಳಿಗೆ ಇದು ಪ್ರೇರಕ
ಕನ್ನಡಕ್ಕಾಗಿ ಕೈ ಎತ್ತಿದ ಕನ್ನಡಾಂಬೆಯ ಹೆಮ್ಮೆಯ ಪುತ್ರ
ಇವರೇ ಕನ್ನಡದ ಸಾಹಿತ್ಯವೃಕ್ಷ ವಿದ್ಯಾರ್ಥಿಗಳಿಗೆ ಕಲ್ಪವೃಕ್ಷ
ಇವರನ್ನು ಪಡೆದ ಎಲ್ಲಾ ಸಾಹಿತ್ಯಾಸಕ್ತರೆ ತೃಪ್ತರು ಸಂತೃಪ್ತರು.

****

ಕನ್ನಡ ನುಡಿ ಸೇವಕ

ಡಾ. ಬಿ.ವಿ. ರಾಜಾರಾಂ
ಚರವಾಣಿ : ೯೪೪೪೮೦೬೯೬೬೭

ಕನ್ನಡದ ಅಧ್ಯಾಪಕರಾಗಿ ಹಾಗೂ ಪ್ರಾಧ್ಯಾಪಕರಾಗಿ ೩೦ ವರ್ಷಗಳ ಕಾಲ ನುಡಿಸೇವೆಯನ್ನು ಸರ್ಕಾರಿ ವಿವಿಧ ಕಾಲೇಜುಗಳಲ್ಲಿ ನಡೆಸಿದ್ದಾರೆ. ಅಪಾರ ಓದು ಮತ್ತು ಶ್ರದ್ಧಾವಂತರಾಗಿ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದಾರೆ. ಕನ್ನಡ ನುಡಿಯ ಬಗ್ಗೆ, ಕನ್ನಡ ಸಾಹಿತ್ಯದ ಬಗ್ಗೆ ಅಭಿಮಾನ ಬರುವ ಹಾಗೆ ಸೇವೆ ಮಾಡಿದ್ದಾರೆ. ಇದು ವೃತ್ತಿ ಜೀವನ ಆದರೆ ಪ್ರವೃತ್ತಿ ಜೀವನದಲ್ಲಿ ಕನ್ನಡ ನುಡಿಗಾಗಿ ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ತೊಡಗಿ ಸಾಹಿತ್ಯ ಸೇವೆ ಮಾಡಿದ್ದಾರೆ ಪ್ರೊ. ಅಶ್ವತ್ಥನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಲವಾರು ಜವಾಬ್ದಾರಿಗಳನ್ನು ವಹಿಸಿಕೊಂಡು ಕನ್ನಡ ಸಾಹಿತ್ಯ ಸೇವೆ ಮಾಡಿದ್ದಾರೆ.

ಪ್ರೊ. ಅನಾಜಿ ಅವರ ಓದು ಅಪಾರ. ಅನೇಕ ಹಳೇ ಕಾಲದ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಸಂಪಾದಿಸಿ, ಪರಿಷ್ಕರಿಸಿ ಮುದ್ರಣ ಕಾಣಲು ಸಹಕರಿಸಿದ್ದಾರೆ. ದಾಸಸಾಹಿತ್ಯದ ಐವತ್ತು ಸಂಪುಟಗಳು– ಕನ್ನಡ ಸಂಸ್ಕೃತಿ ಇಲಾಖೆಯಿಂದ ಪ್ರಕಟವಾದವುಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಮುದ್ರಣ ಕಾಣಲು ಕಾರಣಕರ್ತರಾಗಿದ್ದಾರೆ. ಜೈನ ಸಾಹಿತ್ಯದ ಅನೇಕ ಕೃತಿಗಳು ಪ್ರಕಟವಾಗಲು ಸಹಕರಿಸಿದ್ದಾರೆ. ವಚನಸಾಹಿತ್ಯದಲ್ಲೂ ತಮ್ಮ ನುಡಿಸೇವೆಯನ್ನು ಸಲ್ಲಿಸಿದ್ದಾರೆ. ಕೆಲವು ಮರೆತು ಹೋಗಿರುವ ಕವಿಕೃತಿಗಳನ್ನು ಹುಡುಕಿ, ಪರಿಷ್ಕರಿಸಿ, ಪ್ರಕಟಣೆ ಕಾಣಲು ಶ್ರಮ ವಹಿಸಿದ್ದಾರೆ.

ವಿಶೇಷವಾಗಿ ನನ್ನ ಗಮನಕ್ಕೆ ಬಂದಹಾಗೆ ಅನೇಕ ಕನ್ನಡ ಕಲಿಕಾ ಶಿಬಿರಗಳನ್ನು ನಡೆಸಿಕೊಟ್ಟಿದ್ದಾರೆ. ಅಮೇರಿಕಾ ದೇಶದಲ್ಲಿ ಇದ್ದಾಗ ಅಲ್ಲಿನ ಮಕ್ಕಳಿಗೂ ಕನ್ನಡ ಭಾಷಾ ಕಲಿಕೆ ಲಿಪಿ ಕಲಿಕೆಗೋಸುಗ ಪಠ್ಯರಚನೆ ಮಾಡಿದ್ದಾರೆ.

ಡಾ. ಮುಖ್ಯಮಂತ್ರಿ ಚಂದ್ರು ಅವರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಅವಧಿಗಳಲ್ಲಿ ಹಲವಾರು ಸಭೆ ಸಮಾರಂಭಗಳಲ್ಲಿ ಭಾಗಿಯಾಗಿ, ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸಾವಿರಾರು ಜನರಿಗೆ ಕನ್ನಡ ಭಾಷೆಯ ಸೊಗಸನ್ನು ಮತ್ತು ಅದರ ಸೊಗಡನ್ನು ತಿಳಿಸಿದ್ದಾರೆ. ಅವರ ಅಗಾಧ ಪಾಂಡಿತ್ಯವನ್ನು ತಿಳಿಸಲು ಅವರಿಗೆ ಸಮಯಸಾಲದು. ಹತ್ತಾರು ವಿಷಯಗಳಲ್ಲಿ ಆಸಕ್ತಿ ಅವರದ್ದು. ನಮ್ಮ ಕಲಾಗಂಗೋತ್ರಿ ರಂಗತಂಡದಿಂದ ಜಯನಗರದಲ್ಲಿರುವ ಶ್ರೀಜಯರಾಮಸೇವಾ ಮಂಡಳಿಯಲ್ಲಿ 'ಜೈಶ್ರೀರಾಮ್' ರಂಗರೂಪಕವನ್ನು ಪ್ರದರ್ಶಿಸಲು ನೆರವಾದದ್ದು ಅವರ 'ಶ್ರೀರಾಮನ ಕೀರ್ತನೆಗಳು' ಗ್ರಂಥ. ಆ ಗ್ರಂಥದಲ್ಲಿ ಸುಮಾರು ೫೦೦ಕ್ಕೂ ಹೆಚ್ಚು ಶ್ರೀರಾಮನ ಸಂಬಂಧಿಯಾದ ಕೀರ್ತನೆಗಳನ್ನು ಹಾಡುಗಳನ್ನು ಹುಡುಕಿ ಹೆಕ್ಕಿ ತೆಗೆದು ಒಂದು ಕೃತಿಯಾಗಿ ಪ್ರಕಟಿಸಲು ಸಿದ್ಧಮಾಡಿಕೊಟ್ಟಿದ್ದಾರೆ. ಅವರು ಸಂಗ್ರಹಿಸಿ, ಶೇಖರಿಸಿಟ್ಟಿರುವ ಪುಸ್ತಕಗಳು ಸಾವಿರಾರು. ಅನೇಕ ಸಂದರ್ಭಗಳಲ್ಲಿ ನನಗೆ ಬೇಕಾದ ಹಲವಾರು ಪುಸ್ತಕಗಳನ್ನು ಓದಿ ಮರಳಿಸಲು ನೆರವಾಗಿದ್ದಾರೆ. ಇಂತಹ ಅನೇಕ

ಅಪರೂಪದ ಪುಸ್ತಕಗಳನ್ನು ಒದಗಿಸಿದಕ್ಕಾಗಿ ನಾನು ಅವರಿಗೆ ಅಭಾರಿಯಾಗಿದ್ದೇನೆ. ಅವರ ಪುಸ್ತಕ ಭಂಡಾರ ಮನೆಯನ್ನೆಲ್ಲಾ ಆಕ್ರಮಿಸಿದೆ. ಅಡುಗೆ ಮನೆಯೊಂದನ್ನು ಬಿಟ್ಟು. ಅವರ ಶ್ರೀಮತಿಯವರೂ ಅವರಂತೆ ಮಾತುಗಾರರು ಮತ್ತು ಬರಹಗಾರ್ತಿ. ಅವರೂ ಸಹ ಕನ್ನಡ ಪ್ರಾಧ್ಯಾಪಕರು, ಪ್ರೊ. ಎಂ. ಆರ್. ಲಕ್ಷ್ಮೀದೇವಿ.

ಅನಾಜಿಯವರ ಮತ್ತೊಂದು ವಿಶೇಷತೆಯಂದರೆ ನನ್ನ ಚಿಕ್ಕಪ್ಪ-ಬುಕ್ಕಾಂಬುಧಿ ಕೃಷ್ಣಮೂರ್ತಿ-ಯವರೊಡನೆಯ ಒಡನಾಟ. ಅವರು ಇಲ್ಲಿ ಬೆಂಗಳೂರಿನಲ್ಲಿ ಇದ್ದ ಎಪ್ಪತ್ತು ವರ್ಷಗಳು ಇವರಿಗೆ ಅಪರಿಚಿತರು. ಇಬ್ಬರ ವಾಸವೂ ಜಯನಗರದ ಟಿ. ಬ್ಲಾಕ್‌ನಲ್ಲಿಯೇ. ಆದರೂ ಒಬ್ಬರೊಬ್ಬರಿಗೆ ಪರಿಚಯವಿರಲಿಲ್ಲ. ಆದರೆ ನಮ್ಮ ಚಿಕ್ಕಪ್ಪ ಬಿ.ವಿ. ಕೃಷ್ಣಮೂರ್ತಿ, ಅಮೇರಿಕಾದಲ್ಲಿ ಹೋಗಿ ನೆಲೆಸಿ, ಕೆಲವು ಕೃತಿಗಳನ್ನು ರಚಿಸಿದಾಗ, ಅದನ್ನು ಇವರಿಗೆ ತೋರಿಸಿದರು. ಇವರು ಸರಿಯಿದೆ ಎಂದ ಮೇಲೆಯೇ, 'ಮಹದಾನಂದ ಪ್ರಕಾಶನ'ದಿಂದ ಪ್ರಕಟವಾಗುತ್ತಿತ್ತು. ಹೀಗೆ ಪರಿಚಯವಾದ ನಂತರದಲ್ಲಿ ಬರೆಯುವ ಹವ್ಯಾಸವೇ ಇಲ್ಲದ ಕೃಷ್ಣಮೂರ್ತಿಯವರು, ಅಲ್ಲಿನ ಅವರ ಬಿಡುವಿನ ವೇಳೆಯಲ್ಲಿ 'ಬುಕ್ಕಾಂಬುಧಿ ಪ್ರಾದೇಶಿಕ ಪದಕೋಶ'ದ ರಚನೆಯಲ್ಲಿ ತೊಡಗಿದರು. ಅವರ ಕಾಲದಲ್ಲಿ ಬಳಕೆಯಿದ್ದ ಪದಗಳ ಸಂಗ್ರಹ-ಅದಕ್ಕೆ ಕನ್ನಡದಲ್ಲಿ ಅರ್ಥ-ವಿವರಣೆ ಹಾಗೆಯೇ ಆಧುನಿಕ ಯುವ ಜನರಿಗಾಗಿ ಅದರ ಇಂಗ್ಲಿಷ್ ಅನುವಾದವನ್ನು ಮಾಡಿದ್ದಾರೆ. ಅಲ್ಲಲ್ಲಿ ಚಿತ್ರವನ್ನು ಜೋಡಿಸಿದ್ದಾರೆ. ಹೀಗೆ ಇಪ್ಪತ್ತು ವರುಷಗಳ ಕಾಲ ಪದಗಳನ್ನು ಜೋಡಿಸಿ-ಕೂಡಿಸಿದ್ದರ ಫಲವೇ ೬೦೦ ಪುಟಗಳ ಒಂದು ಬೃಹತ್ ಪದಕೋಶ ಸಿದ್ಧವಾಯಿತು. ಅದನ್ನೂ ಸಹ ಅನಾಜಿಯವರು ಸಹ ಸಂಪಾದಕರಾಗಿ ನೋಡಿ ಪರಿಷ್ಕರಿಸಿ, ವ್ಯವಸ್ಥೆಯಾಗಿರುವಂತೆ ತಿದ್ದುಪಡಿಗಳನ್ನು ಮಾಡಿ, ಪ್ರಕಟಿಸಲು ಅನುವು ಮಾಡಿ ನೆರವಾಗಿದ್ದಾರೆ. ಎಲ್ಲಾ ತಿದ್ದುಪಡಿಗಳನ್ನು ಮಾಡಿ ನಂತರ ಪ್ರಕಟವಾಗುವಂತೆ ನೋಡಿಕೊಂಡಿದ್ದಾರೆ. ಈ ಪದಕೋಶವು ೨೦೨೫ ರ ಆಗಸ್ಟ್‌ನ 'ನಾವಿಕಾ' ಉತ್ಸವದಲ್ಲಿ ಅಮೇರಿಕಾದ ಫ್ಲೋರಿಡಾದಲ್ಲಿ ಬಿಡುಗಡೆಯಾಯಿತು. ನಮ್ಮ ನಾಡಿನ ಖ್ಯಾತ ಚಲನಚಿತ್ರ ನಿರ್ದೇಶಕರಾದ ಶ್ರೀ ನಾಗತಿಹಳ್ಳಿ ಚಂದ್ರಶೇಖರ ಅವರು ಮತ್ತು ಇನ್ನೂ ಅನೇಕರು ಬಿಡುಗಡೆ ಮಾಡಿರುವರು. ಹೀಗೆ ನಮ್ಮೆಲ್ಲರ ಇನ್ನೂ ಹೆಚ್ಚಿನ ಗೌರವ ಪ್ರೀತ್ಯಾದರಗಳಿಗೆ ಭಾಗಿಯಾಗಿದ್ದಾರೆ ನಮ್ಮ ನಿಮ್ಮ ಅನಾಜಿ. ಅವರ ಈ ಸಾಹಿತ್ಯ ಪರಿಚಾರಿಕೆ ನಿರಂತರವಾಗಿ ನಡೆದಿರುವಂತಹುದು. ನೂರಾರು ಸಂದರ್ಭಗಳಲ್ಲಿ ಅನೇಕ ರೀತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಸತತವಾಗಿ ಕನ್ನಡ ನುಡಿ ಪರಿಚಾರಿಕೆ ಮಾಡಿದ್ದಾರೆ. ಅವರ ಸ್ವಂತ ಆಸಕ್ತಿಯಿಂದ ಖುಷಿಯಿಂದ ಶ್ರಮವಹಿಸಿ, ಶ್ರದ್ಧೆಯಿಂದ ದುಡಿಯುತ್ತಿರುತ್ತಾರೆ, ಓದುತ್ತಿರುತ್ತಾರೆ, ಗ್ರಂಥ ಸಂಗ್ರಹ ಮಾಡುತ್ತಾರೆ. ಆ ಪುಸ್ತಕಗಳನ್ನು ಅಚ್ಚುಕಟ್ಟಾಗಿ ಜೋಡಿಸಿ, ಉಪಯೋಗಕ್ಕೆ ಸಿಗುವ ಹಾಗೆ ಕಾದಿರಿಸಿದ್ದಾರೆ. ಅನೇಕ ಆಕರ ಗ್ರಂಥಗಳನ್ನು ಶೇಖರಿಸಿಟ್ಟುಕೊಂಡಿದ್ದಾರೆ. ಕನ್ನಡ ಭಾಷೆಯ ಹಿರಿತನವನ್ನು ಶ್ರೀಮಂತಿಕೆಯನ್ನೂ ಅದರ ಅಗಾಧ ಸಾಹಿತ್ಯ ರಾಶಿಯನ್ನು ಮಾತಾಡಿಸಿದವರಿಗೆಲ್ಲಾ ತಿಳಿಸಿದ್ದಾರೆ, ತಿಳಿಸುತ್ತಿದ್ದಾರೆ. ಈ ಹಿರಿಯರಿಗೆ ಪ್ರೊ ಅನಾಜಿಯವರಿಗೆ ನಮ್ಮೆಲ್ಲರ ಅನಂತ ನಮನಗಳು.

ನಾನು ಮತ್ತು ಬಿ.ಕೆ. ಶ್ರೀಧರ-ನನ್ನ ಚಿಕ್ಕಪ್ಪನವರ ಮಗ, ಆಗಾಗ ಹಲವಾರು ಬಾರಿ ಅವರ ಮನೆಗೆ ಭೇಟಿ ಕೊಟ್ಟಿದ್ದೇವೆ. ಪ್ರತಿಬಾರಿಗೂ ನಮಗೆ ತಿಂಡಿ ಕಾಫಿ ಸೇವನೆ ಕಡ್ಡಾಯ. ಹಾಗೆಯೇ ಅನಾಜಿಯವರ ಮಾತುಗಾರಿಕೆ, ಅನೇಕ ಹೊಸ ಮತ್ತು ಹಳೆಯ ಸಾಹಿತ್ಯ ಸಂಬಂಧಿತ ವಿಷಯಗಳನ್ನು ತಿಳಿಸುವರು. ಪ್ರಕಟಿತ ಕೃತಿಗಳನ್ನು ತೋರಿಸುವರು. ಅನೇಕ ಪ್ರಶಸ್ತಿಗಳನ್ನೂ ಗಳಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತರಾಗಿ ಗೌರವಿಸಲ್ಪಟ್ಟಿದ್ದಾರೆ. ಅವರಿಗೆ ಅಭಿನಂದನೆಗಳು- ಶುಭವಾಗಲಿ.

****

ಅನವರತ ನಾಡುನುಡಿಯ ಜೀವಿ

ಅಚ್ಯುತ ಸಂಕೇತಿ
ಚರವಾಣಿ : ೯೪೪೮೦೮೬೮೧೧

ಅನವರತ ಅಕ್ಷರ ಜೀವಿ, ನಾಡು-ನುಡಿಯ ಪ್ರೇಮಿ
ಜಿಹ್ವೆಯಲಿ ನಿತ್ಯ ಸಾಹಿತ್ಯ ಜಪ... - ಅದುವೇ ಅನಾಜಿ.

ಸರಳತೆಯೇ ಮೈವೆತ್ತಂತಿರುವ ವಾಮನಮೂರ್ತಿ, ಜ್ಞಾನಸಂಪನ್ನತೆಯಲ್ಲಿ ತ್ರಿವಿಕ್ರಮ. ಕನ್ನಡ ಭಾಷೆ, ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಆಳವಾಗಿ ವಿಚಾರ ಅರಿತಿರುವ ನಡೆದಾಡುವ ವಿಶ್ವಕೋಶ. ಯಾವುದೇ ವಿಷಯವಿರಲಿ ಕರಾರುವಾಕ್ಕಾಗಿ, ಅಧಿಕೃತವಾಗಿ ಥಟ್ಟನೆ ವಿಚಾರ ಮಂಡಿಸುವ ಮುತ್ಸದ್ದಿ ಮಾತುಗಾರ. ಬೇಸರ ತರಿಸದ, ದುಃಖ-ದುಮ್ಮಾನ ಹೋಗಲಾಡಿಸುವ ಹಿತವಾದ ಮಾತಿನ ಶೈಲಿ. ಜೊಳ್ಳೇ ಇರದ ತೂಕದ ಮಾತು-ಧಾತು ಅವರೇ ಈ ಪ್ರೊ. ಅಶ್ವತ್ಥನಾರಾಯಣ ಅರ್ಥಾತ್ ಅನಾಜಿ. ಎಲ್ಲಿಯೂ ಗದ್ದಲ-ಗೊಂದಲಗಳಿಗೆ ಆಸ್ಪದ ನೀಡದ ಪರಿಶುದ್ಧ ಪರಿಪೂರ್ಣ ವ್ಯಕ್ತಿತ್ವ. ಬೋಧಕ, ವಾಗ್ಮಿ, ಲೇಖಕ, ಸಂಪಾದಕ, ಸಂಘಟಕ, ಮಾರ್ಗದರ್ಶಕ. ಯಾವುದೇ ಹೊಣೆಗಾರಿಕೆ ಹೊತ್ತರೂ ಅನುಸರಿಸುವ ವ್ಯವಸ್ಥೆಯಲ್ಲಿ ಅಚ್ಚುಕಟ್ಟುತನ ಅನಾಜಿಯವರ ಬದುಕಿನಲ್ಲಿ ಆಳವಾಗಿ ಬೇರೂರಿದೆ.

ಇವರ ಬಳಿ ಯಾರೇ ಬರಲಿ, ಅವರ ಯಾವುದೇ ಸ್ಪಷ್ಟೀಕರಣಗಳಿಗೆ, ಪ್ರಶ್ನೆಗಳಿಗೆ ಇವರಿಂದ ಸ್ಪಷ್ಟವಾದ ಮಾಹಿತಿ, ವಿವರಗಳನ್ನು ಪಡೆದು ಧನ್ಯರಾಗುತ್ತಾರೆ. ವಯೋಮಾನದ ಭೇದವೆಣಿಸದೆ ಅನಾಜಿ ಸ್ಪಂದಿಸುವ ರೀತಿಗೆ, ನೆಲೆ-ಬೆಲೆ ಕೊಡುವ ನೀತಿಗೆ ಸರ್ವರೂ ಸಂತೃಪ್ತರಾಗುತ್ತಾರೆ. ಅನಾಜಿ, ಅಸದೃಶ ಜ್ಞಾನವೇತ್ತರಾಗಿ, ಮೌಲ್ಯಾಧಾರಿತ ಸಂಪನ್ಮೂಲ ವ್ಯಕ್ತಿಯಾಗಿ ನಮಗೆ ದೊರಕಿರುವ ಬೌದ್ಧಿಕ ಆಸ್ತಿಯಾಗಿ ವಿರಳರಲ್ಲಿ ವಿರಳರು.

ಪುಸ್ತಕ ಸಂಪಾದನೆಯ ಸಂದರ್ಭದಲ್ಲಿ ಯಾವ ವಿಷಯ, ಅದಕ್ಕೆ ಅನುಗುಣವಾಗಿ ಯಾವ ಲೇಖನಗಳು ಇರಬೇಕು? ಯಾವ ವಿಷಯತಜ್ಞರ ಲೇಖನಗಳು ಮೂಡಬೇಕು ಎಂಬುದನ್ನು ಸಮರ್ಪಕವಾಗಿ ನಿರ್ಧರಿಸಿ, ಖಚಿತತೆಯಿಂದ ಅದರ ಅಧಿಕೃತತೆಯನ್ನು ದಾಖಲಿಸಿಬಿಡುತ್ತಾರೆ. ಎಂತಹ ಸಂದರ್ಭದಲ್ಲೂ ವಿವಾದಕ್ಕೆ ಆಸ್ಪದ ಕೊಡದ ರೀತಿಯಲ್ಲಿ ಸುಂದರವಾಗಿ ಸುಪುಷ್ಟವಾಗಿ ಮೂಡಿಬರುವ ಅವರ ಟೀಕು-ಟಿಪ್ಪಣಿಗಳನ್ನು ಓದಿ ಮನನ ಮಾಡಿಕೊಳ್ಳಲು ಚಂದ. ಜ್ಞಾನಾರ್ಜನೆಯ ಮಾರ್ಗೋಪಾಯ.

ಅವರ ಕಪಾಟಿನಲ್ಲಿರುವ ಸಾವಿರಾರು ಪುಸ್ತಕಗಳ ಪ್ರತಿಯೊಂದು ವಿವರಣೆಯೂ ಅನಾಜಿಯವರಿಗೆ ಕರತಲಾಮಲಕ. ಅವೆಲ್ಲದರ ಶಿಸ್ತುಬದ್ಧ ವರ್ಗೀಕರಣ, ತಾರ್ಕಿಕ-ವೈಜ್ಞಾನಿಕ ತಳಹದಿಯ ಮೇಲೆ ಅವುಗಳನ್ನು ಒಪ್ಪ-ಓರಣಗೊಳಿಸಿರುವ ಪರಿ, ಬೇಕೆಂದಾಗ ಸುಲಭವಾಗಿ ಅವುಗಳನ್ನು ದೊರಕಿಸಿಕೊಳ್ಳುವ ಬಗೆ ನಿಜಕ್ಕೂ ಅನುಕರಣೀಯ.

ವಾಕ್‌ಪ್ರಭುತ್ವ, ಸಮಯಪ್ರಜ್ಞೆ, ಸಮಯಪರಿಪಾಲನೆ ಅನಾಜಿಯವರ ಬದುಕಿನ ಬದ್ಧತೆಯನ್ನು ಇನ್ನಷ್ಟು ಗಟ್ಟಿಗೊಳಿಸಿದೆ. ಯಾವುದೇ ಕಾರ್ಯಕ್ರಮವಿರಲಿ, ಅಧ್ಯಕ್ಷತೆ ವಹಿಸಿರಲಿ, ವಿಶೇಷ ಆಹ್ವಾನಿತರಾಗಿ ಭಾಷಣ ಮಾಡುವುದಾಗಿರಲಿ, ಸಾಹಿತ್ಯಿಕ ವಿಚಾರ ಮಂಡನೆಯಾಗಿರಲಿ, ಹಳಗನ್ನಡ, ವ್ಯಾಕರಣ, ಶಾಸನಶಾಸ್ತ್ರ, ದರ್ಶನಗಳ ವಸ್ತುವಾಗಿರಲಿ... ಆ ಸಂಬಂಧಿ ಇವರ ಪೂರ್ವತಯಾರಿ ಎಲ್ಲರಿಗೂ ಮಾದರಿ. ಕೊಟ್ಟ ಸಮಯಕ್ಕನುಸಾರವಾಗಿ ವಿಷಯಾಂತರ ಮಾಡದೆ ವೈಚಾರಿಕ ಬಗೆಯಲ್ಲಿ ಕೇಳುಗರ ಬೌದ್ಧಿಕತೆಯನ್ನು ವಿಸ್ತರಿಸುತ್ತಾ ಲೀಲಾಜಾಲವಾಗಿ ಅತ್ಯಾಕರ್ಷಕವಾಗಿ ನುರಿತ ವಾಗ್ಮಿಯಾಗಿ ಮಾತುಗಳನ್ನು ಮಥಿಸುವ ಬಗೆಯಂತೂ ಶ್ಲಾಘನೀಯ. ಅಮಿತ ಸಾಹಿತ್ಯೋತ್ಸಾಹಿ. ಕನ್ನಡದ ಕೆಲಸಕ್ಕೆ, ಸಂಘಟನೆ, ನಾಡುನುಡಿಯ ಕೈಂಕರ್ಯಕ್ಕೆ, ಸಾಂಸ್ಕೃತಿಕ ಸಂಚಾಲಕತ್ವಕ್ಕೆ ಎಂದಿಗೂ ಒಲ್ಲೆ ಎನ್ನದೆ, ನೀಡುವ ಆಹ್ವಾನಕ್ಕೆ ಮೌಲ್ಯ ನೀಡಿ, ಬೇಷರತ್ ಸಮ್ಮತಿ ನೀಡಿ, ಏನನ್ನೂ ನಿರೀಕ್ಷಿಸದೆ, ಅಪೇಕ್ಷಿಸದೆ ತಾವು ಹೊತ್ತ ಹೊಣೆಗಾರಿಕೆಯನ್ನು ನಿರ್ವಂಚನೆಯಿಂದ, ನಿಸ್ಪೃಹರಾಗಿ ದಕ್ಷತೆಯಿಂದ 'ಅಹುದಹುದು' ಎನ್ನುವಂತೆ ಸಮರ್ಥವಾಗಿ ನಿರ್ವಹಿಸಿ ಸರ್ವರ ಮನಗೆಲ್ಲುತ್ತಾರೆ - ಅನಾಜಿ.

ಸಾಮಾಜಿಕ ಕಾಳಜಿಯ ಕೊಡುಗೈದಾನಿ 'ಜೈಮುನಿರಾವ್' ಅವರನ್ನು ಕುರಿತಂತೆ ಒಂದು ಪುಸ್ತಕ ಮಾಡುವಾಗಂತೂ ಅನಾಜಿ ತೆಗೆದುಕೊಂಡ ನಿರ್ಧಾರಗಳು, ತೋರಿಸುತ್ತಿದ್ದ ಆಸ್ಥೆ, ಹಾಕಿಕೊಟ್ಟ ಕ್ರಮ, ಮಾರ್ಗಸೂಚಿ, ಸಮಯಾನುಸಾರ ನೀಡುತ್ತಿದ್ದ ಅಮೂಲ್ಯ ಮಾರ್ಗದರ್ಶನಗಳು ನಿಜಕ್ಕೂ ಅನುಕರಣೀಯ. ಜೈಮುನಿರಾವ್ ಅವರ ಕುಟುಂಬದವರು ಈ ಪುಸ್ತಕ ಹೊರತರಲು ಆಸಕ್ತಿ ವ್ಯಕ್ತಪಡಿಸಿದಾಗ, ಅದರ ಮುದ್ರಣದ ಹೊಣೆಗಾರಿಕೆಯನ್ನು ಅನಾಜಿ ಅವರು ನನಗೆ ವಹಿಸಿದ್ದರು. ಗ್ರಂಥದ ಸ್ವರೂಪ, ಅದರಲ್ಲಿನ ವಸ್ತು-ವಿಷಯಗಳು ಹೇಗೆ, ಯಾವ ಕ್ರಮದಲ್ಲಿ ಬರಬೇಕೆಂಬುದರ ಬಗ್ಗೆ ವಾಸ್ತವದಲ್ಲಿ ಅವರ ಕುಟುಂಬದವರಿಗೆ ಆಳವಾದ ಅನುಭವವೇನೂ ಇರಲಿಲ್ಲ. ತಮ್ಮ ಕುಟುಂಬದ ಜನಪ್ರಿಯ ವ್ಯಕ್ತಿಯಾಗಿದ್ದ ಜೈಮುನಿರಾವ್ ಬಗೆಗಿನ ಮಾಹಿತಿಯನ್ನು, ಚಿತ್ರಗಳನ್ನು ವೈಜ್ಞಾನಿಕವಾಗಿ, ತಾರ್ಕಿಕವಾಗಿ ಸಂಗ್ರಹಿಸಲು ಅನಾಜಿ ಆ ಕುಟುಂಬ ವರ್ಗಕ್ಕೆ ಆಗಾಗ್ಗೆ ಸಲಹೆ, ಸೂಚನೆಗಳನ್ನು ನೀಡುತ್ತಿದ್ದುದೇ ಅಲ್ಲದೆ, ನನ್ನೊಡನೆಯೂ ಪುಸ್ತಕದ ಎಲ್ಲ ಹಂತಗಳ ಬಗ್ಗೆ ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ನೀಡಿ ವಿವರವಾಗಿ ಚರ್ಚಿಸುತ್ತಿದ್ದರು. ಹೀಗಾಗಿ ಆ ಕೃತಿಯೂ ಕೂಡ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿಕೊಂಡು ಮಾನ್ಯತೆ ಪಡೆಯುವಂತಾಗಲು ನಿಸ್ಸಂದೇಹವಾಗಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಧೀಶಕ್ತಿ, ಕರ್ತೃತ್ವ ಶಕ್ತಿಗೆ ಒಂದು ನಿದರ್ಶನ.

ಅನಾಜಿಯವರು ಲೋಕಾಭಿರಾಮವಾಗಿ ಮಾತನಾಡುವಾಗ, ನನ್ನಂತಹ ಅನೇಕ ಮುದ್ರಕ-ರೊಂದಿಗೆ, ಸಾಹಿತ್ಯಾಸಕ್ತರೊಂದಿಗೆ ಹಾಗೂ ಅನ್ಯ ಲೇಖಕರೊಂದಿಗೆ ಯಾವ್ಯಾವ ಕೃತಿಗಳು ಹೊರಬಂದವು ಎಂಬುದನ್ನು ಸವಿವರವಾಗಿ, ಆಳವಾಗಿ ಸಾಹಿತ್ಯಿಕ ಕುತೂಹಲದಿಂದ ತಿಳಿದುಕೊಳ್ಳುತ್ತಿದ್ದುದೇ ಅಲ್ಲದೆ, ದಾಖಲೆಯ ದೃಷ್ಟಿಯಿಂದ ಅವುಗಳನ್ನು ತಮ್ಮ ಸಂಗ್ರಹಕ್ಕೆ ಸ್ವೀಕರಿಸಿ ಅದಕ್ಕೊಂದು ನೆಲೆ-ಬೆಲೆ ಒದಗಿಸುತ್ತಿದ್ದರು. ಮುಂದಿನ ದಿನಗಳಲ್ಲಿ ತಮ್ಮ ಸಂಶೋಧನೆಯ ಸಂದರ್ಭದಲ್ಲಿ ಯಾವುದಾದರೂ ಕೃತಿಯನ್ನು ಅವಲೋಕಿಸಿ, ಅದಕ್ಕೊಂದು ಗಟ್ಟಿಯಾದ ಟೀಕು-ಟಿಪ್ಪಣಿ-ವಿಮರ್ಶೆ ಬರೆದು, ಸಾಂದರ್ಭಿಕವಾಗಿ ಅವುಗಳ ಉಲ್ಲೇಖಗಳನ್ನು ಸರಿಯಾದ ಕ್ರಮದಲ್ಲಿ ದಾಖಲಿಸಿ ಕೃತಿಯ ಮೌಲ್ಯವರ್ಧನೆಗೆ ಕಾರಣರಾಗುತ್ತಿದ್ದರು.

****

ಅಪೂರ್ವ ವಿದ್ವಾಂಸ, ಸಾಹಿತ್ಯ ಮಾರ್ಗದರ್ಶಕ ಅನಾಜಿ

ಬಿ.ಎಸ್. ಚಂದ್ರಶೇಖರ್

ಕನ್ನಡ ಪ್ರಾಧ್ಯಾಪಕ, ಕನ್ನಡ ಗ್ರಂಥಗಳ ಕರ್ತೃ, ಭಾಷಣಕಾರ, ಹಿರಿಯ ವಿದ್ವಾಂಸ, ಆಡಳಿತ ಕನ್ನಡ ಶಿಬಿರಗಳ ನಿರ್ದೇಶಕ ಪ್ರೊ. ಜಿ. ಅಶ್ವತ್ಥನಾರಾಯಣ ಅವರನ್ನು ಕುರಿತು ಸ್ವಲ್ಪವೇನೋ ತಿಳಿದಿದ್ದೆ. ಆದರೂ ಅವರ ಮಾತುಗಳನ್ನು ಕೇಳುವ ಸದವಕಾಶ ನನಗೆ ದೊರೆತಿದ್ದು 2001 ರಲ್ಲೇ. ಸ್ಟೇಟ್ ಬ್ಯಾಂಕಿನ ತರಬೇತಿ ಕೇಂದ್ರದಲ್ಲಿ ನಡೆಯುತ್ತಿದ್ದ ಕನ್ನಡ ಕಮ್ಮಟಕ್ಕೆ ಅವರು ಸಂಪನ್ಮೂಲ ವ್ಯಕ್ತಿಯಾಗಿ ಬಂದಿದ್ದರು. ಅವರ ದೃಢ ನಿಲುವು, ಸ್ಪಷ್ಟ ಅಸ್ಖಲಿತ ಮಾತುಗಾರಿಕೆ ಶ್ರೋತೃಗಳನ್ನು ಮೋಡಿ ಮಾಡಿತ್ತು. ಪ್ರತಿಯೊಬ್ಬ ಕಮ್ಮಟಿಗರಿಂದ ಕನ್ನಡದ ಒಂದೊಂದು ವಾಕ್ಯ ಹೇಳಿಸಿ ಅದರಲ್ಲಿನ ಶಬ್ದಗಳ, ಅವುಗಳ ಉಚ್ಚಾರಣೆಯ, ವಾಕ್ಯ ರಚನೆಯ ಸರಿತಪ್ಪುಗಳನ್ನು ತಿಳಿಯಪಡಿಸಿದ್ದು ನನಗೆ ಅಚ್ಚರಿಯುಂಟುಮಾಡಿತು. 'ಅಶ್ವತ್ಥನಾರಾಯಣ' ಎಂಬ ಸ್ವಸ್ಥವಾದ ನನ್ನ ಹೆಸರನ್ನು ಸರಿಯಾಗಿ ಉಚ್ಚರಿಸದೆ ಕೆಲವರು ನನ್ನನ್ನು 'ಅಸ್ವಸ್ತ' ಮಾಡಿದ್ದಾರೆ' ಎಂಬ ಅವರ ಮಾತು ನಗೆತರಿಸಿ ಮನಮುಟ್ಟಿತು, ಅವರು ಹತ್ತು ಸಾವಿರಕ್ಕೂ ಹೆಚ್ಚು ಪುಟಗಳಷ್ಟು ಕನ್ನಡ ಬರೆದಿದ್ದು ತಿಳಿದು ಬೆರಗಾಯಿತು. ಅಗಾಧ ಪಾಂಡಿತ್ಯದ ಆಗರ ಅನಾಜಿ ಎಂದು ಮನವರಿಕೆಯಾಗಲು ಬಹುಕಾಲ ಬೇಕಾಗಲಿಲ್ಲ. ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಅನಾಜಿಯೆಂದೇ ಬಹುತೇಕರಿಗೆ ಪರಿಚಿತರು!

ಸ್ಟೇಟ್ ಬ್ಯಾಂಕಿನ ಮಿತ್ರರು ಆರಂಭಿಸಿದ ನಮ್ಮ 'ಮನೆಮನೆಯ ದಾಸೋಹ' ಅಭಿಯಾನದ ನೂರನೇ ಕಾರ್ಯಕ್ರಮದಲ್ಲಿ ಅವರನ್ನು ಅತಿಥಿಯಾಗಿ ಆಹ್ವಾನಿಸಿದ್ದೆವು. ಅವರಿಂದ ದಾಸೋಹದ ಸವಿಸಂಚಿಕೆಯೊಂದು ಲೋಕಾರ್ಪಣೆಗೊಳ್ಳುವ ಸಂದರ್ಭ. ಕೃತಿಯ ಪ್ರಸ್ತಾವನೆಯಲ್ಲಿ 'ಇದರಲ್ಲಿ ಕವಿತೆ, ಕತೆ, ನಗೆಬರಹ, ಹನಿಗವಿತೆ, ಗಂಭೀರ/ಲಲಿತ ಪ್ರಬಂಧಗಳು, ಪುಸ್ತಕ ಪರಿಚಯ, ವಿಮರ್ಶೆ, ವ್ಯಕ್ತಿಚಿತ್ರ ಎಲ್ಲವೂ ಇದೆ' ಎಂದು ಬೀಗಿದ್ದ ನಮಗೆ 'ಇಲ್ಲಿ ಏಕಾಂಕ ನಾಟಕವಿಲ್ಲ, ವೈಜ್ಞಾನಿಕ ಲೇಖನವಿಲ್ಲ, ಸಂಶೋಧನಾತ್ಮಕ ಬರಹವಿಲ್ಲ ಎಂದುದಲ್ಲದೆ ರಚನೆಗಳ ಗುಣಮಟ್ಟ ಇನ್ನೂ ಸುಧಾರಿಸಬೇಕು ಎಂದಿದ್ದರು. ಮೂವರು ಸಂಪಾದಕರಿದ್ದರೂ ಮುದ್ರಣದೋಷಗಳಿರುವುದನ್ನು ತಿಳಿಸಿ ಹೊಗಳಿಕೆ ನಿರೀಕ್ಷಿಸಿದ್ದವರಿಗೆ ನಿರಾಶೆಯುಂಟುಮಾಡಿದರು. ಆ ಪುಸ್ತಕದಲ್ಲಿ ತಮಗೆ ಮೆಚ್ಚುಗೆಯೆನಿಸಿದ ಲೇಖನಗಳನ್ನು ಬರೆದ ಹಲವರಿಗೆ ತಮ್ಮ ವತಿಯಿಂದ ಪುಸ್ತಕ ಬಹುಮಾನಗಳನ್ನೂ ನೀಡಿದರು. ಅವರು ಸುಮ್ಮನೆ ಹೊಗಳುವ ವ್ಯಕ್ತಿಯಲ್ಲವೆಂದೂ, ಗುಣಗ್ರಾಹಿಯೆಂದೂ ತಿಳಿಸಲು ಈ ಪ್ರಸಂಗ.

ಇದಾದ ಕೆಲವರುಷಗಳ ಬಳಿಕ ನಾನು ಕನ್ನಡ ಪದ್ಯರೂಪಕ್ಕೆ ತಂದ ಭರ್ತೃಹರಿಯ ಶತಕಗಳ ಹಸ್ತಪ್ರತಿಯನ್ನು ಅನಾಜಿಯವರಿಗೆ ಕೊಟ್ಟು ಅವರ ಅಭಿಪ್ರಾಯ ಕೋರಿ ಅದನ್ನು ಪ್ರಕಟಿಸುವ ಇಚ್ಛೆ

ವ್ಯಕ್ತಪಡಿಸಿ, ಸಾಧ್ಯವಾದರೆ ಮುನ್ನುಡಿಯನ್ನೂ ಬರೆದುಕೊಡಬೇಕೆಂದು ವಿನಂತಿಸಿದ್ದೆ. ಹಸ್ತಪ್ರತಿಯನ್ನು ಪಡೆದ ಒಂದೇ ವಾರದಲ್ಲಿ 'ನಿಮ್ಮ ಅನುವಾದ ಓದಿದ್ದೇನೆ. ಬನ್ನಿ' ಎಂದು ಅವರು ನನಗೆ ಕರೆಮಾಡಿದ್ದು ಆಶ್ಚರ್ಯವಾಯಿತು. ಭರ್ತೃಹರಿಯ ಶತಕಗಳನ್ನೂ ಅದರ ಅನುವಾದಗಳನ್ನೂ ಕುರಿತು ತಾವು ಬರೆದ ಆರು ಪುಟಗಳ ಒಂದು ಪ್ರಬುದ್ಧ ಲೇಖನವನ್ನೇ ನನ್ನ ಕೈಗಿತ್ತು ಅದನ್ನು ಅಲ್ಲೇ ಓದಲು ಹೇಳಿದರು. ಭರ್ತೃಹರಿಯ ಶತಕದ ಪದ್ಯವೊಂದನ್ನು ತೆಗೆದುಕೊಂಡು ಅದನ್ನು ಕನ್ನಡಕ್ಕೆ ಅನುವಾದಿಸಿದ (ನನ್ನನ್ನೂ ಸೇರಿ) ಆರು ಅನುವಾದಕರ ಪದ್ಯಗಳನ್ನು ಕೊಟ್ಟು ಒಂದೊಂದು ಅನುವಾದದ ವಿಶೇಷಾಂಶವನ್ನೂ ಎತ್ತಿ ತೋರಿಸಿದ್ದರು. ಲೇಖನ ಓದಿಸಿದ ಮೇಲೆ ಕಾಫಿ ತರಿಸಿ ಕೊಟ್ಟು 'ನಿಮ್ಮ ಅನುವಾದ ಚೆನ್ನಾಗಿದೆ, ಪುಸ್ತಕ ಪ್ರಕಟಿಸಬಹುದು' ಎಂದು ಹೇಳಿದುದಲ್ಲದೆ ಹೇಗಿರಬೇಕೆಂಬುದಕ್ಕೆ ತಮ್ಮ ಸಲಹೆಗಳ ಪಟ್ಟಿಯನ್ನೂ ನೀಡಿದರು. ಮುನ್ನುಡಿ ಸಹಿತ ಹಸ್ತಪ್ರತಿ ಇನ್ನೂ ಪ್ರಕಾಶಕರಿಗಾಗಿ ಕಾಯುತ್ತಿರುವುದು ಬೇರೆ ವಿಷಯ.

ಒಮ್ಮೆ ಅವರ ಮನೆಯಲ್ಲಿ ಭೇಟಿಯಾದಾಗ ತಾವು ಭಗವದ್ಗೀತೆಯ ಕನ್ನಡ ಅನುವಾದಗಳನ್ನು ಸಂಗ್ರಹಿಸಿ ಅಧ್ಯಯನ ಮಾಡುತ್ತಿರುವುದನ್ನು ಕುರಿತು ಹೇಳಿದ ಅವರು 'ಗದ್ಯಾನುವಾದಗಳು ಬಹಳ ಇವೆ. ನಾನು ಪದ್ಯಾನುವಾದ ಮಾತ್ರ ನೋಡುತ್ತಿದ್ದೇನೆ. ಪಂಪನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಸಂಕ್ಷಿಪ್ತವಾಗಿ ಭಗವದ್ಗೀತೆಯ ಸಾರ ನೀಡಿದ್ದಾನೆ' ಎಂದು ತಿಳಿಸಿದರು. 'ನಾನು ಮಾಡಿರುವ ಪದ್ಯಾನುವಾದವನ್ನು ಕೊಡಲೇ?' ಎಂದಾಗ 'ಆದಷ್ಟು ಬೇಗ ಅದನ್ನು ನನಗೆ ತಲುಪಿಸಿ' ಎಂದರು. ಅವರ ಸಹಪಾಠಿಯೂ, ನನ್ನ ಬಂಧುವೂ ಆತ್ಮೀಯ ಮಿತ್ರರೂ ಆದ ಶ್ರೀ ದಾ.ಭೀ. ಪ್ರಾಣೇಶ ರಾವ್ ಅವರ ಮೂಲಕ ಗೀತೆಯ ನನ್ನ ಪದ್ಯಾನುವಾದದ ಹಸ್ತಪ್ರತಿಯನ್ನು ಅವರಿಗೆ ತಲುಪಿಸಿದೆ. ಶ್ರೀ ಶಂಕರರ ಸೌಂದರ್ಯ ಲಹರಿ ಕುರಿತು ಅನಾಜಿಯವರು ಸಂಪಾದಿಸಿದ 'ಸೌಂದರ್ಯ ಲಹರೀ ದೀಪಿಕೆ' ಓದಿದಾಗ ಅವರ ಅಧ್ಯಯನದ ಶಿಸ್ತು, ಆಳ. ವಿಸ್ತಾರಗಳ ಪರಿಚಯ ಇನ್ನಷ್ಟು ಚೆನ್ನಾಗಿಯೇ ಆಗಿ ಶಂಕರರ ಆ ವಿಶಿಷ್ಟ ಕೃತಿಯ ಕನ್ನಡ ಪದ್ಯಾನುವಾದಕ್ಕೆ ಸ್ಫೂರ್ತಿ ತಂದಿತು. ಹೀಗೆ ಬರಹಗಾರರಿಗೆ ಅವರು ಮಾರ್ಗದರ್ಶಕರಾಗಿದ್ದಾರೆ. ಅವರು ಹಾಸನದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಸಮಯದಲ್ಲಿ (ನನ್ನ ಮಿತ್ರ ಶ್ರೀ ಕೆ.ಆರ್. ಶ್ರೀಕಂಠಮೂರ್ತಿಯವರ ತಾಯಿ) ಶ್ರೀಮತಿ ವಾಗೀಶ್ವರಿ ಶಾಸ್ತ್ರಿಯವರ ಸಂಪ್ರದಾಯದ ಹಾಡುಗಳ ಸಂಗ್ರಹ 'ಹೃದಯ ಸಂಪುಟ'ಕ್ಕೆ ಒಪ್ಪಕೊಟ್ಟು ಅದರ ಪ್ರಕಟಣೆಗೆ ಪ್ರೋತ್ಸಾಹಿಸಿದ್ದು ನನಗೆ ತಿಳಿದ ಉದಾಹರಣೆಗಳಲ್ಲಿ ಇನ್ನೊಂದು.

ಸ್ವತಃ ದೊಡ್ಡ ವಿದ್ವಾಂಸರಾದ ಪ್ರೊ.ಅನಾಜಿಯವರು ಯಾವುದೇ ಸಾಹಿತ್ಯಕ ವಿಷಯವನ್ನು ಕುರಿತು ನಿರರ್ಗಳವಾಗಿ ಉಪನ್ಯಾಸ ಮಾಡಬಲ್ಲವರೆಂದು ತಿಳಿದಿದ್ದ ನಾನು ಕುತೂಹಲದಿಂದ 'ಸರ್, ನೀವು ಉಪನ್ಯಾಸಗಳಿಗೆ ಹೇಗೆ ಸಿದ್ಧರಾಗುತ್ತೀರಿ?' ಎಂದು ಕೇಳಿದಾಗ ಅವರು 'ಉಪನ್ಯಾಸಗಳಿಗಾಗಿ ನಾನು ಯಾವ ಟಿಪ್ಪಣಿಯನ್ನೂ ಮಾಡಿಕೊಳ್ಳುವುದಿಲ್ಲ. ಆ ವಿಷಯ ಕುರಿತು ಯೋಚಿಸಿರುತ್ತೇನೆ. ಅಲ್ಲಿ ಮಾತನಾಡುವಾಗ ಏನು ಬರುತ್ತದೆಯೋ ಅಷ್ಟೇ!' ಎಂದರು. ಅಪರೂಪದ ವಿದ್ವಾಂಸರ ಶ್ರೇಣಿಗೆ ಸೇರುವ ಪ್ರೊ. ಅಶ್ವತ್ಥನಾರಾಯಣರ ಸಾಹಿತ್ಯ ಪರಿಚರ್ಯೆ ಅನನ್ಯವಾದುದು. ಅವರಿಗೆ ಕೃತಜ್ಞತಾ ಪೂರ್ವಕ ಅಭಿನಂದನೆ.

******

ಕಿರಿಯರಿಗೆ ಸಾಹಿತ್ಯದ ಸ್ಫೂರ್ತಿ

ದೇವನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ
ಚರವಾಣಿ : ೭೦೧೯೫೩೨೫೦೬

ಪೂಜ್ಯರಾದ ಶ್ರೀ ಜಿ. ಅಶ್ವತ್ಥನಾರಾಯಣರವರ ಬಗ್ಗೆ ಬರೆಯುವಷ್ಟು ದೊಡ್ಡವ ನಾನಲ್ಲ. ಆದರೂ ಸ್ಮರಿಸದಿದ್ದರೆ, ಬರೆಯದಿದ್ದರೆ ಪಾಪಪ್ರಜ್ಞೆ ಕಾಡುತ್ತದೆ. ನಾನು ಇವರನ್ನು ಕಂಡದ್ದು ೧೯೮೫ ರಲ್ಲಿ. ಅದು ಅಖಿಲ ಕರ್ನಾಟಕ ಮಕ್ಕಳಕೂಟದಲ್ಲಿ. ನಾನು ಅದೇತಾನೆ ಹೊಸದಾಗಿ ದೈಹಿಕ ಶಿಕ್ಷಣ ಶಿಕ್ಷಕನ ತರಬೇತಿ ಮುಗಿಸಿ ಬಂದಿದ್ದೆ. ಅಲ್ಲಿ ನಡೆಯುವ ಮಕ್ಕಳ ಬೇಸಿಗೆ ರಜೆಯ ಶಿಕ್ಷಣ ಹಾಗು ಮನರಂಜನಾ ಶಿಬಿರದಲ್ಲಿ ಶಿಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದೆ. ಆ ಸಮಯದಲ್ಲಿ ಶ್ರೀಯುತರು ಕಾರ್ಯಕ್ರಮ ಒಂದರಲ್ಲಿ ಮಾತನಾಡುತ್ತಿದ್ದರು. ಅವರ ಮಾತುಗಳು ಹೇಗಿತ್ತೆಂದರೆ ಕಾಳುಹುರಿದಂತಿತ್ತು. ಸಭಿಕರನ್ನು ಉದ್ದೇಶಿಸಿ ಮಾತನಾಡುವಾಗ ಹಿರಿಯರೆ, ಕಿರಿಯರೆ, ಅಣ್ಣಂದಿರೆ, ಅಕ್ಕಂದಿರೆ, ಅಜ್ಜಂದಿರೆ, ಪುಟಾಣಿಗಳೆ, ಬಟಾಣಿಗಳೆ ಹೀಗೆ ಅವರ ಬಾಯಲ್ಲಿ ಬರುತ್ತಿದ್ದ ಪದಗಳು ಕ್ಷಣಕಾಲವೂ ಯೋಚಿಸದೆ ನಿರರ್ಗಳವಾಗಿ ಆಡುತ್ತಿದ್ದ ಮಾತುಗಳಿಂದ ಕ್ಷಣಕಾಲ ನನ್ನನ್ನು ನಾನೇ ಮರೆತುಹೋದೆ. ನನ್ನ ಮನಸ್ಸಿಗೆ ಅವರಬಳಿ ಹೋಗಿ ಮಾತಾಡಿಸಬೇಕೆಂಬ ಆಸೆಯಾಯಿತು. ಮನಸ್ಸಿನಲ್ಲಿ ಅಂತಹ ವಿದ್ಯಾವಂತರ ಬಗ್ಗೆ ಈಗತಾನೆ ಕಣ್ಣು ಬಿಡುತ್ತಿರುವ ನಾನು ಮಾತನಾಡಲು ಸಾಧ್ಯವೆ? ಎಂಬ ಭಯ ಕಾಡಿತು. ಅವರಬಳಿ ಹೋಗಲೂ ಇಲ್ಲ, ಮಾತನಾಡಿಸಲೂ ಇಲ್ಲ.

ಹೀಗೆ ಕೆಲವು ವರ್ಷಗಳು ಕಳೆದೇ ಹೋಯಿತು, ಅವರನ್ನು ಮಾತನಾಡಿಸುವ ಧೈರ್ಯ ಬರಲೇಯಿಲ್ಲ. ಶಿಬಿರದಲ್ಲಿ ಮಕ್ಕಳಿಗೆ ಹಲವಾರು ಸ್ಪರ್ಧೆಗಳು ನಡೆಯುತ್ತಿದ್ದವು. ದೇವುಡು ಕಥಾಸ್ಪರ್ಧೆ, ಜಿ.ಪಿ. ರಾಜರತ್ನಂ ಕವನಗಳನ್ನು ಹೇಳುವುದು, ಅಮರಕೋಶ, ರಸಪ್ರಶ್ನೆಗಳನ್ನು ನಡೆಸುವುದು ಮುಂತಾದವುಗಳು. ಒಮ್ಮೆ ಶ್ರೀಯುತರೇ ನನ್ನನ್ನು ಕರೆದು ಮಾತನಾಡಿಸಿದರು. ಆ ಒಂದು ಕ್ಷಣವನ್ನು ನಾನು ಕನಸಿನಲ್ಲೂ ಯೋಚಿಸಿರಲಿಲ್ಲ. ಇದು ಕನಸೋ ನನಸೋ ಎನ್ನುವಂತಾಯಿತು. ಶಿಬಿರದ ಸಂಚಾಲಕರ ಬಳಿ ಮಾತನಾಡಿ ಸ್ಪರ್ಧೆಗಳನ್ನು ನಡೆಸುವ ಜವಾಬ್ದಾರಿಯನ್ನು ನನಗೆ ವಹಿಸಿದರು. ಅಂದಿನಿಂದ ಅವರ ಸ್ನೇಹ, ಸುಜ್ಞಾನದ ಸಹವಾಸ ನನಗೆ ದೊರೆಯಿತು.

ನಾನು ವೃತ್ತಿಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕನಾದರೂ, ಮಕ್ಕಳ ಒಡನಾಟದಲ್ಲಿದ್ದುದರಿಂದ ಮಕ್ಕಳಿಗಾಗಿ ಕವನಗಳನ್ನು ಬರೆಯುವುದು, ಕಥೆಗಳನ್ನು ಬರೆಯುವುದು ಹವ್ಯಾಸ ಮಾಡಿಕೊಂಡಿದ್ದೆ. ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನವೊಂದು ಬೆಂಗಳೂರಿನಲ್ಲೇ ಜರುಗಿತು. ಆ ಸಮಯದಲ್ಲಿ "ಬೆಡಗು" ಎಂಬ ಶೀರ್ಷಿಕೆಯಲ್ಲಿ ಒಡಪುಗಳ ಪುಸ್ತಕವನ್ನು ಮಕ್ಕಳಿಗಾಗಿ ಬರೆದಿದ್ದೆ. ಅದರ

ವಿಷಯವನ್ನು ಶ್ರೀಯುತರ ಬಳಿ ಚರ್ಚಿಸಿದ್ದೆ. ಅದನ್ನು ಪರಿಶೀಲಿಸಿದ ನಂತರ ಬೇರೆಬೇರೆ ವರ್ಗಗಳಾಗಿ ವಿಂಗಡಿಸಿದ್ದುದ್ದನ್ನು ಕಂಡು ಖುಷಿಪಟ್ಟರು. ನಡೆಯುತ್ತಿರುವುದು ಮಕ್ಕಳ ಸಮ್ಮೇಳನವಾದ್ದರಿಂದ ಮಕ್ಕಳಿಗಾಗಿಯೇ ಬರೆದಿರುವ ಈ ಪುಸ್ತಕವನ್ನು ಬಿಡುಗಡೆ ಮಾಡುವುದರಲ್ಲಿ ಅರ್ಥವಿದೆ. ಅಷ್ಟರಲ್ಲಿ ಪುಸ್ತಕವನ್ನು ಮುದ್ರಿಸಿ ಸಿದ್ಧಮಾಡಿಕೊಳ್ಳಿ ಸಮ್ಮೇಳನದ ಪ್ರಾರಂಭೋತ್ಸವದಲ್ಲಿ ಬಿಡುಗಡೆ ಮಾಡಿಸೋಣವೆಂದು ಹೇಳಿದರು. ಅವರು ಹೇಳಿದಂತೆಯೇ ಪುಸ್ತಕವನ್ನು ಬಿಡುಗಡೆ ಮಾಡಿಸಿದರು. ಆ ದಿನ ನನ್ನ ಜೀವಮಾನದಲ್ಲಿ ಅತ್ಯಂತ ಅವಿಸ್ಮರಣೀಯವಾದುದು. ಇಲ್ಲಿಂದ ನನ್ನ ಅವರ ಬಾಂಧವ್ಯ ಆತ್ಮೀಯತೆಯನ್ನು ಹೆಚ್ಚಿಸಿತು. ಈ ಸಮ್ಮೇಳನದ ನೆನಪಿಗಾಗಿ ಹೊರತಂದ ಸ್ಮರಣಸಂಚಿಕೆಯ ಪ್ರಧಾನ ಸಂಪಾದಕರಾದ ಶ್ರೀಯುತರು ಆ ಕಮಿಟಿಯಲ್ಲಿ ಅವರೊಂದಿಗೆ ಅಳಿಲುಸೇವೆ ಸಲ್ಲಿಸುವ ಒಂದು ಸುವರ್ಣ ಅವಕಾಶವನ್ನು ನನಗಿತ್ತರು.

೨೦೧೯ ರಲ್ಲಿ "ವನಸಿರಿ-ಐಸಿರಿ" ಎಂಬ ಶೀರ್ಷಿಕೆಯಲ್ಲಿ ಕಥನ-ಕವನಗಳ ಪುಸ್ತಕವನ್ನು ನನ್ನ ಹಿರಿಯ ವಿದ್ಯಾರ್ಥಿಗಳು ಮುದ್ರಿಸಿ ಹೊರತರಲು ಮುಂದಾದರು. ಆ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದುಕೊಡುವಂತೆ ಶ್ರೀಯುತರಲ್ಲಿ ಮನವಿಮಾಡಿದೆ. ತಮಗೆ ಬಿಡುವಿಲ್ಲದಷ್ಟು ಕೆಲಸದ ಒತ್ತಡವಿದ್ದರೂ ಅದನ್ನೆಲ್ಲಾ ಬದಿಗೆ ಒತ್ತಿ ಮುನ್ನುಡಿಯನ್ನು ಬರೆದು ಹರಸಿದರು. ಅದರಲ್ಲಿನ ಲೋಪದೋಷಗಳನ್ನು ತಿದ್ದಿ ಮುಂದಿನ ದಿನಗಳಲ್ಲಿ ಅದನ್ನು ಸರಿಪಡಿಸಿಕೊಳ್ಳಲು ಹೇಳಿದರು. ತನಗಿಂತ ಬೇರೊಬ್ಬರು ಮುಂದೆ ಬರಬಾರದೆಂದು ಅಸೂಯೆ ಪಡುವ ಜನರಿರುವ ಈ ಸಮಾಜದಲ್ಲಿ ಬೆಲೆ ಕಟ್ಟಲಾಗದಂತಹ ಒಂದು ಮಾತು ಹೇಳಿದರು. ಅದೇನೆಂದರೆ ನಿಮ್ಮ ಬರವಣಿಗೆಯು ಮಕ್ಕಳ ಮನಸ್ಸನ್ನು ತಲುಪುವುದರಲ್ಲಿ ಯಾವದೇ ಸಂಶಯವಿಲ್ಲ. ನೀವು ಕಥೆ, ಕಾದಂಬರಿಗಳಂತಹದಕ್ಕೆ ಕೈಹಾಕದೆ ಶಿಶುಸಾಹಿತ್ಯದಲ್ಲೇ ಮುಂದುವರಿಯಿರಿ ಎಂದು ಹೇಳಿದರು. ಅಲ್ಲದೆ ಶ್ರೀಯುತರಾದ ಪಂಜೆಮಂಗೇಶರಾಯರ. ಜಿ.ಪಿ. ರಾಜರತ್ನಂ, ಹೊಯ್ಸಳರ ಪುಸ್ತಕಗಳನ್ನು ನೀವು ಓದಿದರೆ ನಿಮ್ಮ ಬರವಣಿಗೆಯು ಮತ್ತಷ್ಟು ಗಟ್ಟಿಯಾಗುತ್ತದೆ ಎಂಬ ಅವರ ಹಿತನುಡಿ ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ

೨೦೨೪ ರಲ್ಲಿ ೧೯೭೩-೭೪ನೇ ಸಾಲಿನ ಹಳೆಯ ವಿದ್ಯಾರ್ಥಿಗಳ ದೆಸೆಯಿಂದ "ಗಣೇಶನ ಕಥೆಗಳು" ಎಂಬ ಮತ್ತೊಂದು ಪುಸ್ತಕಕ್ಕೂ ಶ್ರೀಯುತರೇ ಮುನ್ನುಡಿ ಬರೆದುಕೊಟ್ಟರು. ಆಗ ಅವರ ಮನದಾಳದಿಂದ ಬಂದ ಒಂದು ಮಾತು ಎಂದಿಗೂ ಮರೆಯಲಾಗದ ಮಾತಾಗಿತ್ತು. ಶಾಸ್ತ್ರಿಗಳೇ ನೀವು ಬರೆಯುವ ಎಲ್ಲಾ ಪುಸ್ತಕಗಳಿಗೂ ನಾನೇ ಮುನ್ನುಡಿ ಬರೆಯಬೇಕು ಎಂದರು. ತನ್ನಂತೆಯೇ ಎಲ್ಲರೂ ಮುಂದೆಬರಲೀ ಎಂಬ ಮನಸ್ಸು ಎಷ್ಟುಜನರಲ್ಲಿ ಬರಲು ಸಾಧ್ಯ? ಪ್ರಾರಂಭದಲ್ಲೇ ಚಿವುಟಿ ಹಾಕುವ ಮನಸ್ಸಿರುವ ಜನಗಳ ಮಧ್ಯ ಮರೀಚಿಕೆಯಂತೆ ಇರುವ ಶ್ರೀಯುತರು ಈಗೀಗ ಬರವಣಿಗೆಯ ಮೆಟ್ಟಿಲನ್ನು ಹತ್ತುತ್ತಿರುವ ನಮ್ಮಂತಹವರಿಗೆ ಗುರುವಾಗಿಯೂ, ಮಾರ್ಗದರ್ಶಕರಾಗಿಯೂ, ತಮ್ಮೊಂದಿಗೆ ಕೈಹಿಡಿದು ನಡೆಸುತ್ತಿರುವ ಶ್ರೀಯುತರಾದ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರಿಗೆ ನನ್ನ ಶಿರಸಾಷ್ಟಾಂಗ ಪ್ರಣಾಮಗಳು. ನಡೆದಾಡುವ ಶಬ್ದಕೋಶ ಎಂದು ಹೆಸರಾಗಿರುವ ಶ್ರೀಯುತರಿಗೆ ಅಭಿನಂದನಾಪೂರ್ವಕ ಅಗಣಿತ ಅಭಿವಂದನೆಗಳು.

****

ವಿದ್ವತ್ತು ವಾಗ್ಮಿತೆಗಳ ಸಂಗಮ

ಡಾ. ಎಸ್. ವಿ. ಸುಜಾತ
ಚರವಾಣಿ : ೯೯೦೧೧೦೩೧೧೧೯

''ಅನಾಜಿ'' ಎಂದೇ ಕನ್ನಡಿಗ ಸಾಹಿತ್ಯಾಸಕ್ತರಿಗೆ ಪರಿಚಿತರಾಗಿರುವ ಶ್ರೀಯುತ ಜಿ. ಅಶ್ವತ್ಥನಾರಾಯಣ ಅವರು ನಮ್ಮ ತಂದೆಯವರ ಸಮಕಾಲೀನರು. ಅವರು ನನಗೆ ಪರಿಚಯವಾಗಿದ್ದೂ ಅವರ ಮೂಲಕವೇ. ನಮ್ಮ ತಂದೆ ಶ್ರೀಯುತ ಎಸ್. ಬಿ. ವಸಂತರಾಜಯ್ಯನವರ ಮನೆ ಜಯನಗರ 4ನೇ ಬ್ಲಾಕಿನಲ್ಲಿತ್ತು. ಅನಾಜಿ ಅವರ ಮನೆಗೆ ಅಲ್ಲಿಂದ ೧೦ ನಿಮಿಷದ ನಡಿಗೆ. ಇಲ್ಲಿ ಮತ್ತೊಂದು ಸಂಬಂಧವನ್ನೂ ಜೋಡಿಸಿಕೊಳ್ಳಬಹುದು. ಅನಾಜಿ ಅವರ ಪತ್ನಿಯವರ ಅಕ್ಕ ಶ್ರೀಮತಿ ಜಯಲಕ್ಷ್ಮಿ ನನಗೆ ಹಿಂದೀ ಗುರುಗಳು. ಅವರ ಹತ್ತಿರ ಪಾಠ ಹೇಳಿಸಿಕೊಂಡು ಹಿಂದೀ ವಿದ್ವಾನ್ ಪರೀಕ್ಷೆ ಮುಗಿಸಿದ್ದೆ. ಅವರೂ ನನಗೆ ಕೊನೆಯವರೆಗೂ ಆತ್ಮೀಯರಾಗಿದ್ದರು.

ಅನಾಜಿ ಅವರು ನಮ್ಮ ತಂದೆಯವರ ಜತೆ ಜೈನಧರ್ಮದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಬಾಲ್ಯದಲ್ಲಿ ಅವರ ಮನೆಯ ಹತ್ತಿರವೇ ಇದ್ದ ಖ್ಯಾತ ವಿದ್ವಾಂಸರಾದ ಭುವನಹಳ್ಳಿ ಡಿ. ಪದ್ಮನಾಭಶರ್ಮ ಅವರ ಪ್ರಭಾವದಿಂದ ಅವರಿಗೆ ಜೈನಧರ್ಮದ ಬಗ್ಗೆ ಅರಿವು, ಅಭಿಮಾನ ಎರಡೂ ಇತ್ತು. ಅದಕ್ಕೆ ನೀರೆರೆದಂತೆ ಅವರಿಗೆ ನಮ್ಮ ತಂದೆಯವರ ಒಡನಾಟ ದೊರಕಿತು. ಸು. ೧೯೭೦ ರಿಂದ ೨೦೦೯ ರವರೆಗೂ ಅವರಿಬ್ಬರ ನಿಕಟ ಸಂಬಂಧ ಮುಂದುವರೆಯಿತು.

ಶ್ರೀ ಮಹಾವೀರ ಮಿಶನ್ ೭೦-೮೦ರ ದಶಕದಲ್ಲಿ ಮಕ್ಕಳಿಗೆ ಬೇಸಿಗೆ ರಜೆಯಲ್ಲಿ ಧಾರ್ಮಿಕ ಶಿಬಿರಗಳನ್ನು ಆಯೋಜಿಸಿ, ಅವರಿಗೆ ಬೋಧಿಸಿದ ವಿಷಯಗಳ ಬಗ್ಗೆ ಪರೀಕ್ಷೆ ನಡೆಸಿ ಪ್ರಮಾಣಪತ್ರ ನೀಡುತ್ತಿದ್ದರು. ಈ ಸರಣಿಯಲ್ಲಿ ಅನಾಜಿ ಅವರು ರತ್ನಕರಂಡಕ ಶ್ರಾವಕಾಚಾರ, ರತ್ನಾಕರ ಶತಕತ್ರಯಗಳ ಬಗ್ಗೆ ಪಠ್ಯ ಸಿದ್ಧ ಪಡಿಸಿಕೊಟ್ಟಿದ್ದರು. ೧೯೭೪ರಲ್ಲಿ ಭಗವಾನ್ ಮಹಾವೀರರ ೨೫೦೦ ನೇ ನಿರ್ವಾಣ ಮಹೋತ್ಸವ ನಡೆದಾಗ ಧರ್ಮಚಕ್ರ ದೇಶಾದ್ಯಂತ ವಿಹಾರ ಮಾಡಿತು. ಕರ್ನಾಟಕದಲ್ಲಿ ಅದರ ವಿಹಾರದ ಜತೆಗೆ ಧಾರ್ಮಿಕ ಉಪನ್ಯಾಸಗಳೂ ನಡೆದವು. ಆ ಸಂದರ್ಭದಲ್ಲಿ ಜೈನ ವಿದ್ವಾಂಸರ ಜತೆಗೆ ಜೈನೇತರ ವಿದ್ವಾಂಸರೂ ಇರಬೇಕೆಂದು ಸಮಿತಿಯಲ್ಲಿ ತೀರ್ಮಾನವಾಗಿತ್ತು. ಇದರಿಂದಾಗಿ ಅನಾಜಿ ಅವರು ಅನೇಕ ಊರುಗಳಲ್ಲಿ ಮಹಾವೀರರ ಸಂದೇಶವನ್ನು ಸಾರುವ ಉಪನ್ಯಾಸಗಳನ್ನು ನೀಡಲು ಅವಕಾಶವಾಯಿತು. ಬೆಂಗಳೂರಿನಲ್ಲಿ ದಶಲಕ್ಷಣಪರ್ವದ ಸಂದರ್ಭದಲ್ಲಿ ೧೦ ದಿನಗಳ ಕಾಲ ಉತ್ತಮ ಕ್ಷಮಾ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ ಮತ್ತು ಬ್ರಹ್ಮಚರ್ಯ, ಈ ವಿಷಯಗಳನ್ನು ಕುರಿತ ಉಪನ್ಯಾಸಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ವಿವಿಧ ಜೈನ್ ಮಿಲನ್‌ಗಳು, ಸಂಘ ಸಂಸ್ಥೆಗಳು ಆಯೋಜಿಸುತ್ತಿದ್ದ ಕಾರ್ಯಕ್ರಮಗಳಲ್ಲಿ ಅನಾಜಿ

ಪ್ರಮುಖ ಉಪನ್ಯಾಸಕಾರರಾಗಿರುತ್ತಿದ್ದರು. ಈ ವಿಷಯಕ್ಕೆ ಸಂಬಂಧಪಟ್ಟಂತೆ 'ಉತ್ತಮ ಕ್ಷಮಾಧರ್ಮ' ಎಂಬ ಕಿರು ಹೊತ್ತಿಗೆಯನ್ನು ಅವರು ಸಿದ್ಧಪಡಿಸಿಕೊಟ್ಟಿದ್ದಾರೆ. ಅದು ಉತ್ತಮ ಮಾರ್ಗದರ್ಶಕ ಪುಸ್ತಕವಾಗಿದೆ.

ನನಗೆ ಅನಾಜಿ ಅವರ ಹತ್ತಿರದಿಂದ ತಿಳಿಯುವ ಅವಕಾಶ ಒದಗಿದುದು ನಮ್ಮ ತಂದೆಯವರಾದ ಎಸ್.ಬಿ. ವಸಂತರಾಜಯ್ಯನವರಿಗೆ ೮೦ ವರ್ಷಗಳು ತುಂಬಿದಾಗ, ಡಾ|| ಎಂ. ಎ. ಜಯಚಂದ್ರ ಅವರ ಅಧ್ಯಕ್ಷತೆಯ ಸಮಿತಿಯ ಮೂಲಕ ಅಭಿನಂದನಾ ಕಾರ್ಯಕ್ರಮ ನಡೆದಾಗ. ಆ ಸಂದರ್ಭದಲ್ಲಿ 'ಸುಮಾವಸಂತ' ಎಂಬ ಅಭಿನಂದನಾ ಗ್ರಂಥವನ್ನು ಹೊರತರಲಾಯಿತು. ಅದರಲ್ಲಿ ವಸಂತರಾಜಯ್ಯನವರ ಸಂದರ್ಶನವನ್ನು ಅನಾಜಿ ಅವರು ಮಾಡಿದ್ದಾರೆ. ೩೨ ಪ್ರಶ್ನೆಗಳ ಮೂಲಕ ತುಂಬ ವಿಸ್ತೃತವಾಗಿ ಅವರ ಪೂರ್ವಜರು, ಕುಟುಂಬ, ವ್ಯಕ್ತಿತ್ವ, ಸಾಧನೆ, ಚಿಂತನೆಗಳನ್ನು ಅಲ್ಲಿ ದಾಖಲಿಸಿದ್ದಾರೆ. ಅದೊಂದು ಮಾದರಿ ಸಂದರ್ಶನ ಎನ್ನಬಹುದು. 'ಜೈನಸಮಾಜದ ಕಣ್ಮಣಿಯೊಂದಿಗೆ ಸಂವಾದ –ಸಲ್ಲಾಪ' ಅದರ ಶೀರ್ಷಿಕೆ ಆಕರ್ಷಣೀಯವೂ, ಅರ್ಥಪೂರ್ಣವೂ ಆಗಿದೆ.

ನಮ್ಮ ತಂದೆಯವರು ಸ್ವರ್ಗಸ್ಥರಾದ ಬಳಿಕ ನನಗೆ ಅವರೊಡನೆ ನೇರವಾಗಿ ಸಂಪರ್ಕ ಬೆಳೆಯಿತು. ಜ್ಞಾನರವಿ ಟ್ರಸ್ಟ್‌ನ ಮೂಲಕ ನಾವು ಕನ್ನಡ ಸಾಹಿತ್ಯ ಪರಿಷತ್ತಿನ 'ರತ್ನ' ಪರೀಕ್ಷೆ ಕಟ್ಟುತ್ತಿದ್ದ ವಿದ್ಯಾರ್ಥಿಗಳಿಗೆ ತರಗತಿ ನಡೆಸುತ್ತಿದ್ದೆವು. ಆಗ ಅನಾಜಿ ಅವರೂ ಆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದರು. 'ಜಂಗಲ್‌ವಾಲೇ ಬಾಬಾ' ಎಂದೇ ಖ್ಯಾತರಾಗಿದ್ದ ಚಿನ್ಮಯಸಾಗರ ಮುನಿಗಳು ೨೦೧೬ರಲ್ಲಿ ಬೆಂಗಳೂರಿನ ಬಳಿಯ ಬನ್ನೇರುಘಟ್ಟದ ಅರಣ್ಯದಲ್ಲಿ ಚಾತುರ್ಮಾಸ ನಡೆಸಿದ್ದರು. ಅನಂತರ ಅವರು ಕಿತ್ತೂರಿನಲ್ಲಿ ಚಾತುರ್ಮಾಸ್ಯ ನಡೆಸಿದ ಸಂದರ್ಭದಲ್ಲಿ ಹಲವಾರು ಕನ್ನಡದ ವಚನಗಳನ್ನು ಬರೆದು, ಅದನ್ನು ಸಂಪಾದಿಸಿ ಪ್ರಕಟಿಸುವ ಹೊಣೆಯನ್ನು ನನಗೆ ವಹಿಸಿದರು. ಡಾ. ಎಂ.ಎ. ಜಯಚಂದ್ರ ಅವರ ಅಪೇಕ್ಷೆಯ ಮೇರೆಗೆ ಆ ಪುಸ್ತಕಕ್ಕೆ ಅನಾಜಿ ಅವರು 'ಮೊದಲೋದುಗನ ಮುಕ್ತನುಡಿ' ಬರೆದುಕೊಟ್ಟು ಸಹಕರಿಸಿದರು. ಅವರ ಭಾಷೆಯ ಸೊಗಸನ್ನು ಇಲ್ಲಿ ನೋಡಬಹುದು, ಮುನಿಶ್ರೀ ೧೦೮ ಚಿನ್ಮಯಸಾಗರಜೀ ಮಹಾರಾಜರು ೨೧ನೇ ಶತಮಾನದ ವಿಸ್ಮಯಮುನಿ. ಇಂಥ ಅದ್ಭುತ ಅಹಿಂಸಾಮುನಿ ಕನ್ನಡ ನುಡಿಮುನಿ ಆಗಿರುವುದು ಕರ್ನಾಟಕದ ಹೆಮ್ಮೆ, ಕನ್ನಡದ ಭಾಗ್ಯ, ಕನ್ನಡಿಗರ ಅದೃಷ್ಟ. ಅವರ ದರ್ಶನಾವಕಾಶ, ಪ್ರವಚನ ಶ್ರವಣಭಾಗ್ಯ, ಅವರ ಜೀವಿತದ ಧಾರ್ಮಿಕ ರೀತಿ–ನೀತಿ ಪ್ರತ್ಯಕ್ಷ ಕಾಣುವ ಯೋಗ ೨೦೧೬ ರಲ್ಲಿ ಬೆಂಗಳೂರಿನ ಬನ್ನೇರುಘಟ್ಟದ ಅರಣ್ಯದಲ್ಲಿ ಚಾತುರ್ಮಾಸ್ಯ ವ್ರತ ಆಚರಿಸಿದ ಸಂದರ್ಭದಲ್ಲಿ ಬೆಂಗಳೂರು ಜನತೆಗೆ ಲಭ್ಯವಾಯಿತು. ಅವರ 'ರತ್ನಾಕರ ಮಹಾಕವಿಯ ಮೂರು ಶತಕಗಳು' ಕೃತಿಯಲ್ಲಿ ಅವರ ಪಾಂಡಿತ್ಯವನ್ನೂ ಶೈಕ್ಷಣಿಕ ಶಿಸ್ತನ್ನೂ ಗುರುತಿಸಬಹುದು. ಮೂಲ ಪದ್ಯಗಳ ಜತೆಗೆ ಅನುವಾದ, ಕಠಿಣ ಶಬ್ದಗಳ ಅರ್ಥ, ಪದ್ಯಾನುಕ್ರಮಣಿಕೆ, ಅಕಾರಾದಿ, ಟಿಪ್ಪಣಿಗಳನ್ನು ನೀಡಿ ಓದುಗರಿಗೆ ಹಾಗೂ ಅಧ್ಯಯನಕಾರರಿಗೆ ಸಹಾಯಕರಾಗಿದ್ದಾರೆ.

ಅನಾಜಿ ಅವರು ನಾನು ವಿವಿಧ ಸಂಸ್ಥೆಗಳ ಮೂಲಕ ಆಯೋಜಿಸಿದ ಹಲವಾರು ಕಾರ್ಯಕ್ರಮಗಳಲ್ಲಿ ಉಪನ್ಯಾಸಗಳನ್ನು ನೀಡಿದ್ದಾರೆ. ಅವರು ಬೆಂಗಳೂರಿನ ಕನ್ನಡ ಜೈನ ಸಮುದಾಯದೊಂದಿಗೆ ಹಾಲಿನಲ್ಲಿ ಸಕ್ಕರೆ ಬೆರೆತಂತೆ ಬೆರೆತುಹೋಗಿದ್ದಾರೆ.. ಬಿಎಂಶ್ರೀ ಪ್ರತಿಷ್ಠಾನ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಮುಂತಾದ ಸಂಸ್ಥೆಗಳಲ್ಲಿ ನಡೆದ ಸಾಹಿತ್ಯಿಕ

ಕಾರ್ಯಕ್ರಮಗಳಲ್ಲಿ ಅವರು ಭೇಟಿಯಾದಾಗಲೆಲ್ಲಾ ವಿಶ್ವಾಸಪೂರ್ವಕವಾಗಿ ಮಾತನಾಡಿಸುತ್ತಾರೆ. ನನ್ನ ಪತಿಯೊಂದಿಗೂ ಅದೇ ರೀತಿ ವಿಶ್ವಾಸ, ನನ್ನ ಮಕ್ಕಳಿಗೂ ಅವರು ಪರಿಚಿತರೇ. ಅವರು ಮನೆಗೆ ಬಂದಾಗ ತಾತನ ಫ್ರೆಂಡ್ ಬಂದರು ಎಂದೇ ಮಕ್ಕಳು ಹೇಳುತ್ತಿದ್ದುದು. ಜಯನಗರ ನಾಲ್ಕನೇ ಬ್ಲಾಕಿನ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ವಸಂತರಾಜಯ್ಯನವರು, ಅನಾಜಿ, ಪಿ.ವಿ. ನಾರಾಯಣ ಮುಂತಾದವರು ಸಂಜೆ ಹೊತ್ತು ಸೇರಿ ಸಾಹಿತ್ಯಿಕ ಚರ್ಚೆ ನಡೆಸುತ್ತಿದ್ದರು. ನಮ್ಮ ತಂದೆಯವರ ಶತಮಾನೋತ್ಸವದ ಅಂಗವಾಗಿ ಹೊರತಂದ ವೀಡಿಯೋ ಸರಣಿಯಲ್ಲಿ ಅನಾಜಿ ತಮ್ಮ ನೆನಪುಗಳನ್ನು ಹಂಚಿಕೊಂಡಿದ್ದಾರೆ. ಅವರ ನೆನಪಿನ ಶಕ್ತಿ ಅಗಾಧ. ದಿನ, ತಾರೀಖು ಸಮೇತ ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸುತ್ತಾರೆ,

ಇತ್ತೀಚೆಗೆ ಪ್ರಕಟವಾದ ತಮ್ಮ 'ರತ್ನಾಕರ ಮಹಾಕವಿಯ ಮೂರು ಶತಕಗಳು' ಎಂಬ ಪುಸ್ತಕದಲ್ಲಿ ಅದಕ್ಕೆ ಪ್ರೇರಕರಾಗಿದ್ದ ಎಸ್.ಬಿ. ವಸಂತರಾಜಯ್ಯ, ಹೆಚ್.ಎಸ್. ನೇಮಿನಾಥಯ್ಯ, ಅ.ನಾ. ಚಂದ್ರಕೀರ್ತಿ ಅವರ ಫೋಟೋಗಳನ್ನು ಹಾಕಿ ತಮ್ಮ ಕೃತಜ್ಞತೆ ಸಲ್ಲಿಸಿದ್ದಾರೆ. ಆ ಫೋಟೋಗಳನ್ನು ತರಿಸಿಕೊಟ್ಟ ಅಳಿಲುಸೇವೆ ನನ್ನದು ಎಂಬ ಧನ್ಯತಾಭಾವ ನನಗಿದೆ.

ಅನಾಜಿ ಅವರ ಪಾಂಡಿತ್ಯದ ಬಗ್ಗೆ ಹೇಳುವುದು ಸಾಧ್ಯವಿಲ್ಲ. ಅವರು ಒಂದು ವಿಶ್ವಕೋಶ. ಒಂದು ಕೇಳಿದರೆ ಹತ್ತು ಹೇಳುವಂಥ ವ್ಯಾಪಕ ಓದು ಅವರದು. ಅವರ ಮನೆಯೇ ಒಂದು ದೊಡ್ಡ ಗ್ರಂಥಭಂಡಾರ. ಜತೆಗೆ ಆಕರ್ಷಕವಾಗಿ, ಪ್ರಾಸಬದ್ಧವಾಗಿ, ನಿರರ್ಗಳವಾಗಿ ಮಾತನಾಡುವ ವಾಗ್ಮಿ. ಜತೆಗೆ ಅವರ ಹೃದಯವೂ ಅಷ್ಟೇ ವಿಶಾಲ. ಯಾರು ಕೇಳಿದರೂ ಸಹಾಯ ಮಾಡುವ ಗುಣ. ಇಂಥವರ ಮಾರ್ಗದರ್ಶನ, ಸಹಕಾರ ಜೈನ ಸಮಾಜಕ್ಕೂ ಕನ್ನಡ ಸಾಹಿತ್ಯಕ್ಕೂ ಇನ್ನಷ್ಟು ಕಾಲ ದೊರೆಯಲಿ ಎಂಬ ಆಶಯ ನನ್ನದು.

****

ಹಿರಿಯ ಆತ್ಮೀಯರಾದ ಅನಾಜಿ

ಪ್ರೊ॥ ಎಸ್. ಬಿಳಿಗಿರಿವಾಸನ್
ಚರವಾಣಿ : ೯೦೩೬೬೧೨೪೮೮೪

ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು ಸಾಹಿತ್ಯ ಲೋಕದಲ್ಲಿ 'ಅನಾಜಿ' ಎಂದೇ ಸುಪ್ರಸಿದ್ಧರು. ನನ್ನ ಅವರ ಭೇಟಿಯು ಅನಿರೀಕ್ಷಿತ, ಅಪ್ರೇಕ್ಷಿತ ಅಪರೂಪವಾದುದಾದರೂ ಅವಶ್ಯಕವಾಗಿತ್ತು. ನಾನು ಬೆಂಗಳೂರಿನ ವಿಜಯ ಸಂಜೆ ಕಾಲೇಜಿನಲ್ಲಿ ಉಪನ್ಯಾಸಕನಾಗಿ ೧೯೭೫ರಲ್ಲಿ ಸೇವೆ ಸಲ್ಲಿಸಲು ಆರಂಭಿಸಿದಾಗ, ನನ್ನ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ. ಹೆಚ್. ವಿ. ವೆಂಕಟಸುಬ್ಬಯ್ಯನವರು, ಐಚ್ಛಿಕ ಕನ್ನಡ ವಿದ್ಯಾಥಿಗಳಿಗೆ ಪಂಪನ 'ಆದಿಪುರಾಣ'ದ ಆಯ್ದ ಭಾಗಗಳನ್ನು ಪಾಠ ಹೇಳಲು ವೇಳಾಪಟ್ಟಿಯನ್ನು ನಿಗದಿಪಡಿಸಿದರು. ಪಠ್ಯಪುಸ್ತಕದ ಅಲಭ್ಯತೆಯಿಂದಾಗಿ ಪಾಠ ಹೇಳಲು ಸಮಸ್ಯೆಯಾಯಿತು. ಆಗ ಅವರು ತಿಳಿಸಿದಂತೆ ಅನಾಜಿಯವರನ್ನು ಕಂಡು ಪರಿಹಾರವನ್ನು ಕಂಡುಕೊಳ್ಳಲು ಅವರ ಜಯನಗರದ ಮನೆಗೆ ಹೋದಾಗ, ಗ್ರಂಥಗಳ ಮಧ್ಯದಲ್ಲಿ ಬರವಣಿಗೆಯಲ್ಲಿ, ತಲ್ಲೀನರಾಗಿದ್ದ ಅನಾಜಿ ಅವರನ್ನು ಕಂಡು ಬೆರಗಾದೆ. ನನಗೆ ಅವರ ವದನದಲ್ಲಿ ಕಂಡು ಬಂದ ಅಧ್ಯಯನ, ಅಧ್ಯಾಪನದ ಓಜಸ್ಸು, ತೇಜಸ್ಸನ್ನು ನನ್ನ ನೆಚ್ಚಿನ ಗುರುಗಳಾದ ಡಾ॥ ಸಾ.ಶಿ. ಮರುಳಯ್ಯನವರನ್ನು ಬಿಟ್ಟರೆ ನಾನು ಅನಾಜಿಯವರಲ್ಲಿಯೇ ಕಂಡದ್ದು. ಪರಸ್ಪರ ಪರಿಚಯವಾಗಿ ನನ್ನ ಭೇಟಿಯ ಕಾರಣದ ಬಗ್ಗೆ ತಿಳಿಸಲು, ಅವರು ಪಠ್ಯದ ವಿವರಗಳನ್ನು ಕೇಳಿ ತಿಳಿದುಕೊಂಡು, ಪಂಪನನ್ನು ಪಾಠ ಹೇಳಬೇಕಾದರೆ ಮಾಡಿಕೊಳ್ಳಬೇಕಾದ ಸಿದ್ಧತೆಗಳನ್ನು ಕುರಿತು, ಪರಿಶೀಲಿಸಬೇಕಾದ ಗ್ರಂಥಗಳನ್ನು ಕುರಿತು ತಿಳಿಸಿ, ಗ್ರಂಥಗಳನ್ನು ತೋರಿಸಿ, ಕೆಲವು ಕೃತಿಗಳನ್ನು ಎರವಲಾಗಿ ನೀಡಿದರು. ಸಾಶಿಮ ಅವರು ತಾವು ಒಂದು ಗಂಟೆ ಪಾಠ ಹೇಳಲು ನಾಲ್ಕು ಗಂಟೆಗಳ ಸಿದ್ಧತೆಯನ್ನು ಮಾಡಿಕೊಳ್ಳುವುದಾಗಿ ತಿಳಿಸಿದ್ದ ಮಾತಿನೊಂದಿಗೆ ಅನಾಜಿಯವರ ಮಾರ್ಗದರ್ಶನವೂ ಮಿಳಿತವಾಗಿ ನಾನು ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗೆ ಬೋಧಿಸಲು ಆರಂಭಿಸಿದೆ. ಹೀಗೆ ಆರಂಭವಾದ ನಮ್ಮ ಪರಿಚಯ ಆಗಾಗ ಸಭೆ ಸಮಾರಂಭಗಳಲ್ಲಿ ವಿಚಾರ ಸಂಕಿರಣಗಳಲ್ಲಿ ಭೇಟಿಯಾಗುತ್ತಾ ಉಭಯ ಕುಶಲೋಪರಿಯಾಗುತ್ತಿತ್ತು.

ಒಮ್ಮೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಲ್ಲಿ ನಾವಿಬ್ಬರೂ ಒಬ್ಬ ಅಧಿಕಾರಿಯನ್ನು ಭೇಟಿಯಾಗ-ಬೇಕಾಯಿತು. ಅನಾಜಿಯವರು ಮೊದಲೇ ಅವರೊಂದಿಗೆ ಮಾತನಾಡುತ್ತಿದ್ದರು. ನಾನೂ ಅವರೊಂದಿಗೆ ಸೇರಿಕೊಂಡೆ. ಆಗ ಅನಾಜಿಯವರು ಅಧಿಕಾರಿಗೆ ಪುಸ್ತಕ ಪ್ರಕಟಣೆಯ ಬಗೆಗೆ ನೀಡಿದ ಸೂಚನೆಗಳು, ಆಂತರ್ಯ ವಿಚಾರಗಳನ್ನು ಕುರಿತು ತಿಳಿಸಿದಾಗ ನನಗೆ ವಿಸ್ಮಯವಾಯಿತು. ಅವರಿಗೆ ಕನ್ನಡ ಸಾಹಿತ್ಯದಲ್ಲಿ ಮಾತ್ರವಲ್ಲದೇ ಹಲವಾರು ಕ್ಷೇತ್ರಗಳ ಆಳವಾದ ಪರಿಜ್ಞಾನವಿರುವುದನ್ನು ಅವರೊಂದಿಗೆ ಮಾತನಾಡಿದಾಗ ತಿಳಿದುಬಂದಿತು.

ಅನಾಜಿಯವರ ಹಲವು ಕ್ಷೇತ್ರಗಳಲ್ಲಿನ ಆಳವಾದ ಪಾಂಡಿತ್ಯಕ್ಕೆ ಕಾರಣ ಅವರ ಅಧ್ಯಯನ ಶೀಲತೆ. ಅವರು ನಿರಂತರ ಅಧ್ಯಯನ ನಿರತರು. ಅವರು ಕಾರ್ಯಾರ್ಥವಾಗಿ ಹೋಗುವಾಗಲೂ ಅವರ ಕೈಚೀಲದಲ್ಲಿ ಮೂರು-ನಾಲ್ಕು ಕೃತಿಗಳಿರುತ್ತವೆ. ಪ್ರಯಾಣ ಮಾಡುವಾಗ, ಯಾರನ್ನಾದರೂ ಭೇಟಿಯಾಗುವಾಗ ಕಾಯಬೇಕಾದ ಸಂದರ್ಭ ಬಂದಾಗ ಅವರು ಕೈಚೀಲದಲ್ಲಿರುವ ಕೃತಿಯ ಅಧ್ಯಯನದಲ್ಲಿ ತೊಡಗುವರು. ಅಧ್ಯಯನವೆಂದರೆ ಸುಮ್ಮನೆ ಓದುವುದಲ್ಲ, ಓದುವಾಗ ಅಲ್ಲಿಯೇ ಟೀಕೆ, ಟಿಪ್ಪಣಿ, ವಿಮರ್ಶೆ ಎಲ್ಲವನ್ನೂ ಗುರುತಿಸುವರು. ಇಂತಹ ಓದಿಗೆ ಬುನಾದಿ ಹಾಕಿದವರು, ಅವರ ಗುರುಗಳಾದ ಶ್ರೀ. ಕೆ. ನಾಗರಾಜ್ ಅವರು. ಅವರ ಪುಸ್ತಕ ಪ್ರೇಮ ಅಗಾಧವಾದುದು. ಆರ್ಥಿಕ ತೊಂದರೆ ಇದ್ದರೂ ಪುಸ್ತಕವನ್ನು ಕೊಳ್ಳಲು ಹಣವ್ಯಯಿಸುತ್ತಿದ್ದರು. ಅನಾಜಿಯವರಿಗೆ ಪುಸ್ತಕ ಪ್ರೇಮದ ಚಟ ಹತ್ತಿದ್ದು ಅವರಿಂದಲೇ. ಇಂದು ಅನಾಜಿಯವರ ಗ್ರಂಥ ಸಂಗ್ರಹದಲ್ಲಿ ೨೦೦೦೦ಕ್ಕೂ ಹೆಚ್ಚು ಗ್ರಂಥಗಳಿದ್ದು, ಅವುಗಳಿಗಾಗಿ ಒಂದು ಮನೆಯನ್ನೇ ಮೀಸಲಿರಿಸಿದ್ದಾರೆ.

ಅವರ ಗ್ರಂಥ ಸಂಗ್ರಹವೂ ಅವರ ಅಧ್ಯಯನದಂತೆಯೇ ಶಿಸ್ತುಬದ್ಧವಾದುದು. ಕೊಂಡು ತಂದ ಪುಸ್ತಕಕ್ಕೆ ಕ್ರಾಫ್ಟ್ ಕಾಗದದ ಹೊದಿಕೆಯನ್ನು ಹಾಕಿ, ಆಕೃತಿ ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದು ಎಂಬುದರ ವಿವರ, ಕೃತಿ ಕರ್ತೃವಿನ ಹೆಸರು, ಕೃತಿಯ ಹೆಸರುಗಳನ್ನು ಬರೆದು, ಅದಕ್ಕೆ ಕ್ರಮಸಂಖ್ಯೆಯನ್ನು ನೀಡುವುದು ಅವರ ಪರಿಪಾಠ. ಗೌರವ ಪ್ರತಿಯಾದರೆ, ಪ್ರಕಟವಾದ ಸಂದರ್ಭ, ನೀಡಿದವರ ವಿವರ, ಇತ್ಯಾದಿಗಳನ್ನು ದಾಖಲಿಸುವರು. ಅದರೊಂದಿಗೆ ಆಯಾ ಸಮಾರಂಭದ ಆಹ್ವಾನ ಪತ್ರಿಕೆಯೂ ಇರುತ್ತದೆ.

ಡಾ॥ ಟಿ.ವಿ. ರಾಜು ಅವರು ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ನಿರ್ದೇಶಕರಾಗಿದ್ದಾಗ, ತಮ್ಮ ಅಪಾರವಾದ ಕನ್ನಡ ಸಾಹಿತ್ಯದ ಪ್ರೇಮದಿಂದ "ಸಿಂಚನ ಕನ್ನಡ ವೇದಿಕೆ"ಯನ್ನು ೨೦೦೫ ರಲ್ಲಿ ಸ್ಥಾಪಿಸಿ ಶ್ರೀ ಚಿ. ಶ್ರೀನಿವಾಸರಾಜು ಅವರ ಮಾರ್ಗದರ್ಶನದಲ್ಲಿ ೫ ಕನ್ನಡ ಕೃತಿಗಳನ್ನು ಪ್ರಕಟಿಸಿದರು. ಕಾಲಕ್ರಮದಲ್ಲಿ ಶ್ರೀ ಚಿ. ಶ್ರೀನಿವಾಸರಾಜು ಅವರು ವಿಧಿವಶರಾದಾಗ ಡಾ॥ ಟಿ.ವಿ. ರಾಜು ಅವರು ನನ್ನೊಂದಿಗೆ "ಸಿಂಚನ"ದ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ತಿಳಿಸಿದರು. ಆ ವೇಳೆಗಾಗಲೇ ಅನಾಜಿಯವರ ಬಗ್ಗೆ ಸಾಕಷ್ಟು ತಿಳಿದಿದ್ದ ನಾನು, ಹಿರಿಯರೂ ಅನುಭವಸ್ಥರೂ ಆಗಿರುವ ಅನಾಜಿಯವರ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿ, ಅವರನ್ನು ಈ ಕಾರ್ಯಕ್ಕೆ ನಿಯೋಜಿಸುವುದು ಸೂಕ್ತವೆಂದು, ಡಾ॥ ಟಿ.ವಿ. ರಾಜು ಅವರಿಗೆ ತಿಳಿಸಿದಾಗ ಅವರು ಒಪ್ಪಿ, ಅನಾಜಿಯವರನ್ನು ಕರೆತರುವಂತೆ ಹೇಳಿದರು. ಈ ವಿಚಾರವನ್ನು ಅನಾಜಿಯವರಿಗೆ ತಿಳಿಸಿದಾಗ ಅವರು ಒಪ್ಪಿ ಬಂದು 'ಸಿಂಚನ'ದ ಜವಾಬ್ದಾರಿಯನ್ನು ವಹಿಸಿಕೊಂಡು ೧೧ ಕೃತಿಗಳನ್ನು ಪ್ರಕಟಿಸಿದ್ದಾರೆ. ಸಂಪಾದಕ ಮಂಡಲಿಯು ಪುನಾರಚಿತವಾದಾಗ ಸಂಪಾದಕಮಂಡಲಿಯಲ್ಲಿ ಕಾರ್ಯ ನಿರ್ವಹಿಸುವ ಅವಕಾಶ ದೊರೆತು, ಅನಾಜಿಯವರೊಂದಿಗೆ ಸ್ನೇಹ ಉಂಟಾಗಿ ಕೃತಿ ಸಂಪಾದನೆ, ಕರಡು ತಿದ್ದುವುದು, ಅನುವಾದ, ಇತ್ಯಾದಿಗಳನ್ನು ಅವರಿಂದ ಕಲಿತು ಇಂದಿಗೂ ಆ ಕಾರ್ಯಗಳನ್ನು ನಡೆಸುತ್ತಿದ್ದೇನೆ. ನನ್ನ ಕೃತಿ ರಚನೆಯ ಸಂದರ್ಭದಲ್ಲಿ ಸೂಕ್ತ ಸಲಹೆ, ಸೂಚನೆಗಳನ್ನು ನೀಡುವುದಲ್ಲದೆ, ಅವಶ್ಯಕವಾದ ಗ್ರಂಥಗಳನ್ನು ನೀಡಿ ಕೃತಿ ರಚನೆಗೆ ಇಂದಿಗೂ ಪ್ರೋತ್ಸಾಹಿಸುತ್ತಿದ್ದಾರೆ. ಅವರ ಪ್ರೋತ್ಸಾಹದಿಂದಲೇ ಕನ್ನಡ ಸಾರಸ್ವತ ಲೋಕಕ್ಕೆ ಅಪರಿಚಿತವಾಗಿದ್ದ ಅವರ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿ "ಮಹಾಭಾರತ ದರ್ಶನ" ಎಂಬ ಹೆಸರಿನಿಂದ ಪ್ರಕಟಿಸಲಾಗುತ್ತಿದೆ. ಈ ಕೃತಿಯಲ್ಲಿ ಆದಿಕವಿ ಪಂಪನ ಬಗ್ಗೆ ಅಪರೂಪವಾದ ವಿಚಾರಗಳಿವೆ. ಈ ಮೂಲ ಕೃತಿಯು ಅನಾಜಿಯವರ ಬಳಿ ಮಾತ್ರವಿದ್ದು

ಅವರ ನೆರಳಚ್ಚು ಪ್ರತಿಯನ್ನು ನೀಡಿ ಸಹಕರಿಸಿದರು. ಹೀಗೆ ಅಪರೂಪದ ಅಲಭ್ಯವಾಗಿರುವ ಗ್ರಂಥಗಳ ಭಂಡಾರ ಅನಾಜಿಯವರ ಗ್ರಂಥ ಸಂಗ್ರಹವಾಗಿದೆಯೆಂಬುದು ಗಮನಾರ್ಹವಾದುದು.

ಅನಂತರ ನನಗೆ ಬಿ.ಎಚ್.ಎಸ್. ಪ್ರಥಮ ದರ್ಜೆ ಕಾಲೇಜಿಗೆ ವರ್ಗವಾಯಿತು. ಅಲ್ಲಿನ ಪ್ರಾಂಶುಪಾಲರಾದ ಪ್ರೊ॥ ಡಿ.ಎನ್. ವೆಂಕಟರಾವ್ ಅವರು ಕನ್ನಡಾಭಿಮಾನಿಗಳಾಗಿದ್ದು, ಕನ್ನಡ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ೨೦೦೭ ರಿಂದ ನಿರಂತರವಾಗಿ ಸಾಹಿತ್ಯ ವಿಚಾರ ಸಂಕಿರಣವನ್ನು ಏರ್ಪಡಿಸಿ ನಾಡಿನ ಪ್ರಸಿದ್ಧ ಕವಿಗಳನ್ನು ಕಾದಂಬರಿಕಾರರನ್ನು ಕುರಿತು ವಿವಿಧ ವಿದ್ವಾಂಸರಿಂದ ಪ್ರಬಂಧ ಮಂಡನೆ, ವಿದ್ವಚ್ಚರ್ಚೆ, ಕೃತಿಗಳ ಲೋಕಾರ್ಪಣೆಗಳು ನಡೆಯುತ್ತಿದ್ದವು. ಜನವರಿ ೨೦೧೧ ರ ೨೮ ಮತ್ತು ೨೯ ರಂದು ನಡೆದ ವಿಚಾರ ಸಂಕಿರಣದಲ್ಲಿ ಅನಾಜಿಯವರು "ಡಿವಿಜಿ ಅವರ ಸಪ್ತ ಕಾವ್ಯಗಳು" ಎಂಬ ವಿಚಾರವಾಗಿ ವಿದ್ವತ್ಪೂರ್ಣವಾದ ಪ್ರಬಂಧವನ್ನು ಮಂಡಿಸಿ, ಸಪ್ತಕಾವ್ಯಗಳಾದ ವಸಂತ ಕುಸುಮಾಂಜಲಿ ನಿವೇದನ, ಕೇತಕೀವನ, ಅಂತಃಪುರಗೀತೆ, ಗೀತಾಶಾಕುಂತಲ, ಉಮರನ ಒಸಗೆ, ಶೃಂಗಾರ ಮಂಗಳಂ ಕಾವ್ಯಗಳನ್ನು ಪರಿಚಯಿಸುವುದರೊಂದಿಗೆ ಡಿ.ವಿ.ಜಿ.ಯವರ ಕಾವ್ಯಸೌರಭವನ್ನು ಸಭಿಕರಲ್ಲಿ ಹರಡಿದರು. ಈ ಪ್ರಬಂಧದಲ್ಲಿ ಅನಾಜಿಯವರ ವಿದ್ವತ್ತಿನ ಆಳ ಅಗಲಗಳನ್ನು ಕಾಣಬಹುದು. ಅನಾಜಿಯವರು ಎರಡೂ ದಿನಗಳ ವಿಚಾರಗೋಷ್ಠಿಯಲ್ಲಿ ಉಪಸ್ಥಿತರಿದ್ದು, ಚರ್ಚೆಗಳಲ್ಲಿ ಪಾಲ್ಗೊಂಡು ತಮ್ಮ ಸಾಹಿತ್ಯಾಸಕ್ತಿಯನ್ನು ವ್ಯಕ್ತಪಡಿಸಿದ ರೀತಿ ಅನುಪಮವಾದುದು, ಅಪರೂಪವಾದುದು.

ಅನಾಜಿಯವರು ಅತ್ಯಂತ ನೇರನುಡಿಯ ಪ್ರವೃತ್ತಿಯವರು. ಒಮ್ಮೆ ಒಂದು ವಿಚಾರಗೋಷ್ಠಿಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರು ತಮಗೆ ಪ್ರಬಂಧ ಮಂಡನೆಗೆ ನೀಡಿದ ವಿಷಯವನ್ನು ಕುರಿತ ತಮ್ಮ ವಿಚಾರವನ್ನು ಪ್ರಸ್ತಾಪಿಸುವುದರ ಬದಲಾಗಿ, ಅವರಿಗೆ ತಮಗೆ ನೀಡಿದ ವಿಷಯದ ಬಗೆಗೆ ಯಾವುದೇ ಮಾಹಿತಿಯಾಗಲೀ, ಕೃತಿಗಳಾಗಲೀ, ಲೇಖನಗಳಾಗಲೀ, ದೊರೆಯದಿರುವುದರಿಂದ ತಾವು ಪ್ರಬಂಧವನ್ನು ಮಂಡಿಸಲಾಗಲಿಲ್ಲವೆಂದು ಯಾವುದೇ ಅಳುಕಿಲ್ಲದೇ, ತಾವು ಮಾಡಿದುದು ಅಕ್ಷಮ್ಯವಾದುದೆಂಬುದಿಲ್ಲದೇ ಹೇಳಿ ತಮ್ಮ ಆಸನದಲ್ಲಿ ಮಂಡಿಸಿದರು, ಅನಂತರದಲ್ಲಿ ಹಾರ ತುರಾಯಿಗಳ ಸನ್ಮಾನ ಸಂಭಾವನೆಗಳನ್ನೂ ಪಡೆದುಕೊಂಡರು. ಆ ಗೋಷ್ಠಿಗೆ ಅನಾಜಿಯವರೇ ಅಧ್ಯಕ್ಷರು ಎಂದ ಮೇಲೆ ಕೇಳಬೇಕೆ? ಅವರು ಅಧ್ಯಕ್ಷ ಭಾಷಣದಲ್ಲಿ ಪ್ರಬಂಧವನ್ನು ಮಂಡಿಸದ ಪ್ರೊಫೆಸರರ ವಿಷಯಕ್ಕೆ ಸಂಬಂಧಿಸಿದಂತೆ ಪರಾಮರ್ಶನ ಗ್ರಂಥಗಳ ದೊಡ್ಡ ಪಟ್ಟಿಯನ್ನೇ ಕೊಟ್ಟುದಲ್ಲದೇ, ಆ ಕೃತಿಗಳು ಸಿಗುವ ಸ್ಥಳವನ್ನೂ ತಿಳಿಸಿ ಯಾರನ್ನಾದರೂ ವಿಚಾರಿಸಿ ಮಾಹಿತಿ ಪಡೆಯಬೇಕಿತ್ತು. ಇಲ್ಲದಿದ್ದರೆ ತಮ್ಮನ್ನೇ ಸಂಪರ್ಕಿಸಬಹುದಿತ್ತು ಎಂದು ಖಡಾಖಂಡಿತವಾಗಿ ಹೇಳಿ ಅವರ ವರ್ತನೆ ಅನುಚಿತವಾದುದೆಂದು ವೇದಿಕೆಯಲ್ಲಿಯೇ ನೀರಿಳಿಸಿದರು. ಇದಕ್ಕೆ ಸಭಿಕರೂ ಕರತಾಡನದಿಂದ ತಮ್ಮ ಬೆಂಬಲವನ್ನು ಸೂಚಿಸಿದರು. ಇದು ಅವರು ಬುದ್ಧಿವಾದ ಹೇಳುವ ರೀತಿ. ಅವರು ನನಗೊಮ್ಮೆ ಹೇಳಿದ ವಿಚಾರವೆಂದರೆ ಯಾವುದೇ ಸಭೆ ಸಮಾರಂಭಗಳಿಗಾಗಲೀ, ವಿಚಾರ ಸಂಕಿರಣಗಳಿಗಾಗಲೀ ಹೋಗುವಾಗ ಆಯಾ ವಿಷಯಗಳನ್ನು ಕುರಿತು ನಾವು ಅಧ್ಯಯನ ಮಾಡಿಕೊಂಡು ಹೋಗಬೇಕೆಂದೂ, ಸಮಯ ಬಂದಾಗ ನಮ್ಮ ವಿಚಾರವನ್ನು ಮಂಡಿಸಲು ಅನುಕೂಲವಾಗುವುದೆಂದೂ ಕಿವಿಮಾತುಹೇಳಿದರು. ನಾನು ಸಾಧ್ಯವಾದ ಮಟ್ಟಿಗೂ ಅದನ್ನು ಪಾಲಿಸುತ್ತಿದ್ದೇನೆ.

ಅನಾಜಿಯವರೊಂದಿಗೆ ಪ್ರಯಾಣ ಮಾಡುವುದೂ ಒಂದು ವಿಶಿಷ್ಟ ಅನುಭವವೆಂದೇ ಹೇಳಬೇಕು. ಒಮ್ಮೆ ಪ್ರಯಾಣಿಸುತ್ತಿದ್ದಾಗ ನಮ್ಮ ವಾಹನ ಶಂಕರ ಮಠದ ಮುಂದೆ ಸಾಗಿತು. ತಕ್ಷಣವೇ ಅನಾಜಿಯವರು ಕುವೆಂಪು ಅವರು ಶಂಕರ ಮಠದ ಬಳಿಯಲ್ಲಿ ಕೊಠಡಿಯೊಂದನ್ನು ಮಾಡಿಕೊಂಡು ತಮ್ಮ "ಮಹಾಛಂದಸ್ಸಿನ ರಾಮಾಯಣ ದರ್ಶನಂ" ಬರೆದರೆಂದು ಹೇಳಿದಾಗ ವಾಹನದಲ್ಲಿ ಇದ್ದವರಿಗೆಲ್ಲಾ ಪರಮಾಶ್ಚರ್ಯವಾಯಿತು. ಮತ್ತೊಮ್ಮೆ ಪ್ರಯಾಣಿಸುತ್ತಿರುವಾಗ ನಮ್ಮ ವಾಹನ ವಿಶ್ವೇಶ್ವರಪುರಂ ಮಿನರ್ವಾವೃತ್ತದ ಮಧ್ಯದಲ್ಲಿ ಸಾಗುತ್ತಿತ್ತು. ಆಗ ಅನಾಜಿಯವರು ಅನಕೃ ಅವರ ಮನೆಯನ್ನು ತೋರಿಸಿ ಸರಸ್ವತಿಯ ನೆಲೆವೀಡಾಗಿದ್ದ ಅವರ ಮನೆ ಇಂದು ಪಾದರಕ್ಷೆಗಳ ಬೀಡಾಗಿರುವುದನ್ನು ತಿಳಿಸಿ ವಿಷಾದಿಸಿ, ಅನಕೃ ಅವರೊಂದಿಗಿದ್ದ ಆತ್ಮೀಯತೆಯನ್ನು ಕುರಿತು ಹೇಳಿದರು. "ನಾನು ಧಾರವಾಡಕ್ಕೆ ಒಂಟಿಯಾಗಿ ಯಾವುದೇ ಆರ್ಥಿಕ ನೆರವಿಲ್ಲದೇ ಧಾರವಾಡದಲ್ಲಿ ಯಾರ ಪರಿಚಯವೂ ಇಲ್ಲದೇ, ಛಂಡಸಾಹಸದಲ್ಲಿ ಕನ್ನಡ ಎಂ.ಎ. ಮಾಡಲು ಹೊರಟಿದ್ದೆ. ಮನೆಯವರು ನಮಗೆ ಅಷ್ಟೊಂದು ಓದಿಸಲು ಸಾಧ್ಯವಿಲ್ಲ ಎಂದು ಬಿಟ್ಟಿದ್ದರು. ಅಂದು ಧಾರವಾಡಕ್ಕೆ ಹೊರಟಾಗ ಅನಕೃ ಎಸ್.ಎಸ್. ಒಡೆಯರ್ ಅವರಿಗೆ ಕೊಟ್ಟ ಒಂದು ಕಾಗದ ಮಾತ್ರ. 'ಇವರಿಗೆ ಸಹಾಯ ಮಾಡಿದರೆ ನನಗೆ ಸಹಾಯ ಮಾಡಿದಂತೆ ಇವರು ನನ್ನ ಮಿತ್ರರು' ಎಂಬ ತಾರಕ ವಾಕ್ಯದ ಪತ್ರ. ಆ ಕಾಗದ ಕಂಡು ಬೆಕ್ಕಸ ಬೆರಗಾದ ಒಡೆಯರ್ ಕೃಷ್ಣರಾಯರ ಆತ್ಮೀಯತೆ ಹೊಂದಿದ ನೀವೇ ಭಾಗ್ಯವಂತರು ಅಂತ ಹೇಳಿ ಹಾಸ್ಟೆಲ್‌ನಲ್ಲಿ ಜಾಗಕೊಡಿಸಿ ಎಂ.ಎ. ಪ್ರವೇಶ ನೀಡಿದರು. ಅಭ್ಯರ್ಥಿಯಾಗಿ ಕಛೇರಿಯಲ್ಲಿ ಅರ್ಜಿ ಹಿಡಿದು ನಿಂತಿದ್ದ ನನ್ನನ್ನು ಅನಕೃ ಕಾಗದ ಕಂಡ ಮೇಲೆ ಕೂಡಿಸಿ ಚಹ ತರಿಸಿ ಪ್ರೀತಿಯಿಂದ ಮಾತನಾಡಿಸಿದರು" ಅನಕೃ ಮಹಿಮೆ ಅದು ಎಂದು ಹಿಂದಿನ ಘಟನೆಯನ್ನು ನೆನೆದರು.

ಗ್ರಂಥ ಸಂಪಾದನೆಯ ಕ್ಷೇತ್ರಕ್ಕೂ ಅನಾಜಿಯವರು ತಮ್ಮದೇ ಆದ ಕೊಡುಗೆಯನ್ನು ನೀಡಿರುವರು. ಅವರು ಸಂಪಾದಿಸಿರುವ ಶ್ರೀಶಂಕರ ಭಗವತ್ಪಾದರ "ಸೌಂದರ್ಯಲಹರೀ ಸ್ತೋತ್ರದೀಪಿಕೆ" ಮತ್ತು ಮಹಲಿಂಗರಂಗ ಕವಿಯ "ಅನುಭಾವಾಮೃತ ಕಾವ್ಯ" ಸಾರಸ್ವತಲೋಕಕ್ಕೆ ನೀಡಿರುವ ಅಮೂಲ್ಯ ಕೊಡುಗೆಗಳು. ಈ ಕೃತಿಗಳಲ್ಲಿರುವ ಸಂಪಾದಕರ ಮಾತು ಗಮನಿಸಿದರೆ ಒಂದು ಗ್ರಂಥ ಸಂಪಾದನೆಗೆ ಹೇಗೆ ಕಾರ್ಯೋನ್ಮುಖರಾಗಬೇಕೆಂಬುದನ್ನು ತಿಳಿಯಬಹುದು. ಇವರ ಗ್ರಂಥ ಸಂಪಾದನೆಯು ಶಾಸ್ತ್ರೀಯವಾಗಿದ್ದು, ಮುಂದಿನ ಗ್ರಂಥ ಸಂಪಾದಕರಿಗೆ ನಿದರ್ಶನವಾಗಿದೆ.

ಈ ರೀತಿಯಲ್ಲಿ ಅನಾಜಿಯವರು ತಮ್ಮ ೮೭ರ ಹರೆಯದಲ್ಲಿಯೂ ೨೭ರ ಉತ್ಸಾಹದಿಂದ ಕನ್ನಡ ಕೈಂಕರ್ಯದಲ್ಲಿ ತೊಡಗಿರುವುದು ಅತ್ಯಂತ ಶ್ಲಾಘನೀಯವಾದುದು, ಅನುಕರಣೀಯವಾದುದು. ಅವರಿಗೆ ಭಗವಂತನು ಆಯುರಾರೋಗ್ಯಗಳನ್ನಿತ್ತು ಶತಾಯುಷಿಗಳಾಗುವಂತೆ ಅನುಗ್ರಹಿಸಲೆಂದು ಹಾರೈಸುತ್ತೇನೆ.

****

ಕುಟುಂಬಕ್ಕೆ ಸಾಹಿತ್ಯ ಮಾರ್ಗದರ್ಶಿ

ಕೆ. ಆರ್. ಎಸ್. ಮೂರ್ತಿ
ಚರವಾಣಿ : ೯೮೪೫೩೯೦೬೭೫

ಕನ್ನಡ ಸಾಹಿತ್ಯದೀಪವನ್ನು ಸುಮಾರು ಆರೇಳು ದಶಕಗಳಿಂದ ನಂದಾದೀಪದಂತೆ ಬೆಳಗಿಸುತ್ತಾ, ಕನ್ನಡ ಸಾಹಿತ್ಯಕ್ಷೇತ್ರದ ಎಲ್ಲ ದಿಕ್ಕುಗಳಲ್ಲೂ ಪ್ರಖರ ಕಿರಣಗಳನ್ನು ಹರಡಿಸಿರುವ ಶ್ರೀಯುತ ಪ್ರೊ. ಅಶ್ವತ್ಥನಾರಾಯಣ ಜಿ. (ಅನಾಜಿ) ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಅರ್ಪಿಸಿ, ಅವರ ಆಶೀರ್ವಾದವನ್ನು ಈ ಮೂಲಕ ಕೋರುತ್ತಾ, ಅವರ ಬಗ್ಗೆ ನಾಲ್ಕಾರು ಸಾಲುಗಳನ್ನು ಬರೆಯುವುದು ಅತಿಸೂಕ್ತ ಎನಿಸುತ್ತದೆ.

ಒಂದು ನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆ ಆ ನಾಡಿನ ವಿವಿಧ ಕ್ಷೇತ್ರಗಳ ಪ್ರಜ್ಞಾವಂತರು, ಪಂಡಿತರುಗಳು ಹಾಗೂ ಪ್ರತಿಭಾವಂತ ಬರಹಗಾರರಲ್ಲಿ ಪ್ರತಿಬಿಂಬಿತವಾಗುತ್ತಾ ಎತ್ತರೆತ್ತರಕ್ಕೆ ಬೆಳೆದು ನಿಂತಿರುತ್ತದೆ. ನಮ್ಮ ಇಂದಿನ ಸಾಹಿತ್ಯ ಲೋಕದಲ್ಲಿ ಈ ಅಭಿಪ್ರಾಯಕ್ಕೆ ಪುಷ್ಟಿಕೊಡುವಂತೆ ಸಾಹಿತ್ಯದ ವಿವಿಧ ಪ್ರಕಾರಗಳ ಅಧ್ಯಯನ, ಅವಲೋಕನ ಮತ್ತು ವಿಮರ್ಶೆಗಳಂತಹ ಅನೇಕ ಸಾಹಿತ್ಯಕೃತಿಗಳನ್ನು ಸೃಷ್ಟಿಸಿಕೊಟ್ಟಂತಹವರು ಯಾರ್ಯಾರು ಇರಬಹುದು ಎಂದು ಆಲೋಚನೆ ಮಾಡಿದಾಗ, ಗಂಭೀರ ಚಿಂತಕರೂ, ಲೇಖಕರೂ, ಸಂಪಾದಕರೂ ಮತ್ತು ಶ್ರದ್ಧಾವಂತ ಗುರುಗಳೂ ಆಗಿರುವ ಪ್ರೊ. ಅಶ್ವತ್ಥನಾರಾಯಣ ಜಿ. ಅವರ ಹೆಸರು ಥಟಕ್ಕೆಂದು ಹೊರಹೊಮ್ಮುತ್ತದೆ. ಸಾಹಿತ್ಯದ ಬಗೆಗೆ ಇರುವ ಅವರ ನಿಷ್ಠೆ ಹಾಗೂ ಅಪಾರ ಪ್ರೇಮ ಅವರ ರಕ್ತದ ಕಣ ಕಣದಲ್ಲಿಯೂ ಹರಿಯುತ್ತಿದ್ದು, ಅದು ಅವರ ದಿನಚರ್ಯೆಯಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಸಹಸ್ರಾರು ಪುಸ್ತಕಗಳ ಸಂಗ್ರಹಣೆ, ಪಠನ, ವಿಶ್ಲೇಷಣೆ ಮತ್ತು ಟಿಪ್ಪಣಿಗಳು ಅವರ ಓದಿನ ತೀವ್ರತೆ ಮತ್ತು ಸೂಕ್ಷ್ಮತೆಯನ್ನು ತೆರೆದಿಡುತ್ತವೆ. "ಓದು ಅಂದರೆ ಕೇವಲ ಕಣ್ಣು ತೇಲಿಸುವುದಲ್ಲ. ಅದು ತಪಸ್ಸಿನಂತೆ. ಏಕಾಗ್ರಚಿತ್ತದ ಸೂಕ್ಷ್ಮ ಅವಲೋಕನ. ಅರ್ಥ-ಸಾರ್ಥಕತೆಗೆ ಅವಶ್ಯಕವಾದ ಮಾರ್ಗ" ಎಂಬ ರೀತಿಯ ದೃಷ್ಟಿ ಅವರದು. ಇದು ನನ್ನ ಬಹುಕಾಲದ ಗಮನಿಕೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿರುವ ಅನಾಜಿ ಅವರು ಐದು ದಶಕಗಳಿಂದ ನಮ್ಮ ಕುಟುಂಬಕ್ಕೆ ಆಪ್ತವಾಗಿರುವವರು. ಅವರ ಬಗ್ಗೆ ಬರೆಯುವುದು ಸುಲಭವಲ್ಲ. ಏಕೆಂದರೆ ಅವರ ಕಾರ್ಯವ್ಯಾಪ್ತಿ ಅಷ್ಟು ವಿಶಾಲವಾದದ್ದು. ಏನು ಬರೆದರೂ ಅದು ಕಡಿಮೆ ಆಯಿತೇನೋ ಎಂದೆನಿಸಿಬಿಡುತ್ತದೆ.

ನಾವು ಹಾಸನದಲ್ಲಿದ್ದಾಗ ನಮ್ಮ ಅಣ್ಣ ಶ್ರೀಯುತ ನಾಗರಾಜ್ ಅವರು ಸರ್ಕಾರಿ ಕಾಲೇಜಿನಲ್ಲಿ ಭೌತಶಾಸ್ತ್ರ ವಿಭಾಗದ ಉಪನ್ಯಾಸಕರಾಗಿದ್ದಾಗ, ಅನಾಜಿ ಅವರು ಕನ್ನಡ ಭಾಷೆ ಮತ್ತು ಸಾಹಿತ್ಯದ

ಉಪನ್ಯಾಸಕರು. ಅವರುಗಳ ಮಿತ್ರತ್ವ ಆಪ್ತವಾದಾಗ ನಮ್ಮ ಕುಟುಂಬಕ್ಕೆ ಬಹಳ ಹತ್ತಿರವಾದರು. ಅವರ ಉತ್ತೇಜನದಿಂದ ನಮ್ಮ ತಾಯಿ ಶ್ರೀಮತಿ ವಾಗೀಶ್ವರಿ ಶಾಸ್ತ್ರಿ ಅವರು ಅಪರೂಪದ "ಹೃದಯಸಂಪುಟ - ಸಂಪ್ರದಾಯ ಹಾಡುಗಳು" ಎಂಬ ಬೃಹತ್ ಗ್ರಂಥ ಸಂಪಾದಿಸಿ ಬಿಡುಗಡೆ ಮಾಡಲು ಸಾಧ್ಯವಾಯಿತು. ನಮ್ಮ "ವಾಗ್ದೇವಿ ಕಲಾನಿಕೇತನ" ಸಂಸ್ಥೆಯ ಅನೇಕ ಸಂಗೀತ ಮತ್ತು ಸಾಹಿತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಷ್ಟೇ ಅಲ್ಲದೆ, ಸ್ಫೂರ್ತಿ-ಉತ್ಸಾಹಗಳನ್ನು ತುಂಬುತ್ತಾ ಉತ್ತಮ ಸಲಹೆಗಳನ್ನು ನೀಡುತ್ತಿದ್ದರು.

ಮುಂದೆ, ಸಾಹಿತ್ಯಕ್ಷೇತ್ರದಲ್ಲಿ ಆಸಕ್ತಿ ಇದ್ದ ನಾನು ಕವನಗಳನ್ನು ರಚಿಸಿ ಅವರ ಮುಂದೆ ಇಟ್ಟಾಗ, ರಚನೆಗಳ ಪ್ರೌಢಿಮೆ, ಅರ್ಥ, ಭಾವ, ಅಲಂಕಾರಗಳ ಚೌಕಟ್ಟನ್ನು ಮೆಚ್ಚಿ, ಹಲವೆಡೆ ತಿದ್ದಲು ಸಹಕರಿಸಿ, ಇದು ಮುದ್ರಣವಾಗಲಿ ಎಂದು ಹಾರೈಸಿದರು. "ಖೇಚರ ವಿಹಾರ" ಎಂಬ ಆ ಸಂಕಲನಕ್ಕೆ ಮುನ್ನುಡಿ ಬರೆದುಕೊಡುವುದಷ್ಟೇ ಅಲ್ಲದೆ, ಅದರ ಬಿಡುಗಡೆಯನ್ನೂ ಮಾಡಿದ್ದರು. ಹಾಡಲು ಯೋಗ್ಯವಿರುವ ರಚನೆಗಳನ್ನು ಆ ಸಂದರ್ಭದಲ್ಲಿ ಶ್ರೀಮತಿ ಗೀತಾ ಬಾಲಸುಬ್ರಹ್ಮಣ್ಯ (ನನ್ನ ತಂಗಿ, ಸುಗಮ ಸಂಗೀತ ಕಲಾವಿದೆ) ಹಾಡಲಿ ಎಂಬ ಸಲಹೆ ನೀಡಿ, ಆ ಕಾರ್ಯಕ್ರಮ ಇಮ್ಮಡಿ ಯಶಸ್ವಿಯಾಗುವಂತೆ ಮಾಡಿದ್ದರು. ಅವರ ಉತ್ತೇಜನದಿಂದಲೇ ಮುಂದೆ ಇನ್ನೂ ಎರಡು ಕವನ ಸಂಕಲನಗಳು ಹೊರಬಂದವು. ಹಲವಾರು ಕತೆಗಳು ಮತ್ತು ಎರಡು ಕಾದಂಬರಿಗಳು ಧಾರಾವಾಹಿಯಂತೆ ತರಂಗದಲ್ಲಿ ಪ್ರಕಟಗೊಂಡವು. ನನ್ನ ಸಾಹಿತ್ಯಕ್ಷೇತ್ರದ ಬೆಳವಣಿಗೆಗೆ ಅವರ ಔಚಿತ್ಯಪೂರ್ಣ ಮಾರ್ಗದರ್ಶನವೇ ಕಾರಣ.

ಅನಾಜಿ ಅವರು ಅತ್ಯುತ್ತಮ ಮಾರ್ಗದರ್ಶಕರು. ನನ್ನಂತೆಯೇ ಬೆಳಕಿಗೆ ಬರಲಿಚ್ಛಿಸಿದ ಅನೇಕ ಕಿರಿಯ ಸಾಹಿತ್ಯಾಸಕ್ತರು ಅಥವಾ ಸಾಹಿತ್ಯಕರ್ಮಿಗಳಿಗೆ ಕ್ರಿಯಾಶೀಲತೆ, ಸೃಜನಶೀಲತೆಯ ಸೂಕ್ಷ್ಮಗಳನ್ನು ತಿಳಿಸಿಕೊಡುತ್ತಾ ವಿಶೇಷ ಸಲಹೆಗಳನ್ನು ನೀಡಿದಂತಹವರು.

ಇನ್ನು ಅನಾಜಿ ಅವರು ಒಬ್ಬ ಅತ್ಯುತ್ತಮ ವಾಗ್ಮಿ ಎಂದು ಹೇಳಲು ಅನುಮಾನವೇ ಇಲ್ಲ. ನಿರರ್ಗಳ ಮಾತಿನಿಂದ ವೈಶಿಷ್ಟ್ಯಪೂರ್ಣ, ಸ್ವಾರಸ್ಯಕರ ವಾಕ್ಯೋಕ್ತಿಗಳು ಮತ್ತು ತಮಾಷೆಯ ಚಟಾಕಿಗಳನ್ನು ಹಾರಿಸುತ್ತಾ ಭಾಷಣಕ್ಕೆ ನಿಂತರೆಂದರೆ ಸಾಕು, ನೆರೆದವರಿಗೆ ರಸದೂಟ! ಕೇಳುಗರಿಗೆ ಚಮತ್ಕಾರದ ಮಾತುಗಳ ಭಾಷಣಗಳೇ ಒಂದು ಆಕರ್ಷಣೆ!

ಅನಾಜಿ ಅವರ ಪರಿಶ್ರಮದಿಂದ ಜನ್ಮ ತಳೆದದ್ದು ಹಲವಾರು ಶ್ರೇಷ್ಠ ಸಾಹಿತ್ಯಕೃತಿಗಳು. ಅವು ಸಾಹಿತ್ಯಾವಲೋಕನಕ್ಕೆ ನಿರ್ಮಿಸಿದ ಸೇತುವೆಗಳಂತೆ. ಪ್ರಬಂಧ, ವಿಮರ್ಶೆ, ಸಂಶೋಧನಾ ಲೇಖನ, ಸಂಪಾದಕೀಯ, ಪ್ರಸ್ತಾವನೆ – ಈ ರೀತಿಯ – ಬರಹ ಅಥವಾ ಲೇಖನ ಯಾವುದೇ ರೂಪ ತಳೆದರೂ, ಅದನ್ನು ಜ್ಞಾನ, ಶ್ರದ್ಧೆ, ಪ್ರಾಮಾಣಿಕತೆ ಮತ್ತು ಸರಿಶ್ರಮಗಳಿಂದ ಶೋಧಿಸಿ ಸಿದ್ಧಪಡಿಸಿಕೊಟ್ಟ ಸಾಧಕರು. ಜೈನಸಾಹಿತ್ಯ, ದಾಸಸಾಹಿತ್ಯ, ವಚನ ಸಾಹಿತ್ಯ, ಪೌರಾಣಿಕ ಇತ್ಯಾದಿ ಪ್ರಕಾರಗಳಲ್ಲಿ ಕಳೆದ ಅನೇಕ ದಶಕಗಳ ಅವಧಿಯಲ್ಲಿ ಅವರು ರಚಿಸಿದ, ಸಂಪಾದಿಸಿದ ಕೃತಿಗಳೆಲ್ಲ ಬಹಳ ಮೌಲ್ಯಯುತವಾಗಿ ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಉತ್ಕೃಷ್ಟ ಕೊಡುಗೆಯಾಗಿರುವುದು ನಮ್ಮೆಲ್ಲರ ಭಾಗ್ಯ.

ಮಹೋನ್ನತ ಪಾಂಡಿತ್ಯ, ಸಮರ್ಥ ಬೋಧನಾ ನೈಪುಣ್ಯ, ಸಂಪಾದಕತ್ವ, ಮಾರ್ಗದರ್ಶನ ಮತ್ತು ಭಾಷಣಗಳ ಮೋಹಕತೆಗಳೊಂದಿಗೆ ಬೆಳಗುತ್ತಿರುವ ಸ್ಫೂರ್ತಿಚೇತನ ಶ್ರೀಯುತ ಪ್ರೊ. ಅನಾಜಿ ಅವರಿಗೆ ಈ ಅಭಿನಂದನಾ ಗ್ರಂಥದ ಮೂಲಕ ಕೃತಜ್ಞತಾಪೂರ್ವಕವಾಗಿ ನಮ್ಮೆಲ್ಲರ ಗೌರವವನ್ನು ಸಲ್ಲಿಸೋಣ.

****

ನೃತ್ಯಾಚಾರ್ಯ ಕೌಶಿಕರೊಡನೆ ಅನಾಜಿ

ಕೆ.ಎಸ್. ರಂಗನಾಥ್
ಚರವಾಣಿ : ೯೩೪೧೨೬೨೨೪೩

ಪ್ರೊಫೆಸರ್ ಜಿ. ಅಶ್ವತ್ಥನಾರಾಯಣ, ಅವರ ಜೀವನದ ಕುರಿತು ಅವರನ್ನು ನಿಕಟವಾಗಿ ಬಲ್ಲ ಸಾಹಿತ್ಯ ಕ್ಷೇತ್ರ, ಮತ್ತು ಇತರೆ ಸಾಂಸ್ಕೃತಿಕ ವಲಯದ ಅಭಿಮಾನಿಗಳು ಹೊರತರುತ್ತಿರುವ "ಅಭಿನಂದನಾ ಗ್ರಂಥ ಈ ನಾಡಿನಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಅನೇಕ ಹಿರಿಯ ಕವಿಗಳನ್ನು ಪರಿಚಯಿಸಿ, ತಮ್ಮ ಕೊಡುಗೆಯನ್ನೂ ನೀಡಿದ ಧೀಮಂತ ವ್ಯಕ್ತಿಯನ್ನು ಅವರ ಅಭಿಮಾನಿಗಳು ಅಭಿನಂದಿಸುತ್ತಿರುವುದು ಈ ನಾಡಿನ ಹೆಮ್ಮೆಯ ಸಂಗತಿ.

ಸನಾತನ ಕಲಾಕ್ಷೇತ್ರ ಎಂಬ ನೃತ್ಯಶಾಲೆಯನ್ನು 1946ರಲ್ಲಿ ಸ್ಥಾಪಿಸಿ, ನೃತ್ಯ ಕ್ಷೇತ್ರಕ್ಕೆ ಅ.ನ.ಕೃ., ಮ.ರಾಮಮೂರ್ತಿಯವರ ಪ್ರೇರಣೆಯಿಂದ ಡಿ.ವಿ.ಜಿ.ಯವರ ಅಂತಃಪುರ ಗೀತೆಗಳನ್ನು ಮತ್ತು ಪುರಂದರದಾಸರ ಕೃತಿಗಳನ್ನು ಹಾಗೂ ರಾಗ-ತಾಳಪಲ್ಲವಿಯನ್ನು ನೃತ್ಯ ಕ್ಷೇತ್ರಕ್ಕೆ ಪರಿಚಯಿಸಿ, ತಮ್ಮದೇ ಆದ ಕೊಡುಗೆಯನ್ನು ನೃತ್ಯ ಕ್ಷೇತ್ರಕ್ಕೆ ಪರಿಚಯಿಸಿದ ನನ್ನ ಚಿಕ್ಕಪ್ಪನವರಾದ (ತಂದೆಯವರ ತಮ್ಮ ಹಾಸನ ಜಿಲ್ಲೆಯ ಕೌಶಿಕ ಗ್ರಾಮದ ಸೀತಮ್ಮ ವೆಂಕಟನಾರಣಪ್ಪ ಅವರ ಎರಡನೆ ಸುಪುತ್ರ ನಾಟ್ಯಾಚಾರ್ಯ ವಿ.ಎಸ್. ಕೌಶಿಕ್ ಇವರಲ್ಲಿ ಕೆಲಕಾಲ ಕಳೆದ ಅಶ್ವತ್ಥ ನಾರಾಯಣ ಅವರ ಪರಿಚಯವಾಯಿತು. ಈ ಬರಹದ ಮೂಲಕ ವಿ. ಕೌಶಿಕ್ ಅವರ ಕುರಿತಾದ ನನ್ನ ಸ್ಮೃತಿ ಪಟಲದ ಕೆಲವು ಸಂಗತಿಗಳನ್ನು ಇಲ್ಲಿ ಕಾಣಿಸುತ್ತಿದ್ದೇನೆ. ಅದು 1966-67 ನೆ ಇಸವಿ ನನ್ನ ಚಿಕ್ಕಪ್ಪ ನಾಟ್ಯಾಚಾರ್ಯ ವಿ.ಎಸ್. ಕೌಶಿಕ್ ರವರು ತಮ್ಮ ನೃತ್ಯ ಶಾಲೆಗೆ ಅಂದಿನ ನಗರ ವಿಶ್ವಸ್ಥ ಮಂಡಳಿಯಿಂದ ಜಯನಗರ 4ನೇ ವಿಭಾಗದಲ್ಲಿ ಒಂದು ನಿವೇಶನವನ್ನು ಪಡೆದು ಕಟ್ಟಡವನ್ನು ಕಟ್ಟುತ್ತಿದ್ದರು. ಬೆಂಗಳೂರು ನಗರ ಕಾರ್ಪೋರೇಷನ್ ವತಿಯಿಂದ ಮಂಜೂರಾತಿ ಪಡೆದ ನಕ್ಷೆಯಂತೆ ನಿರ್ಮಿಸುತ್ತಿದ್ದ ಆ ಕಟ್ಟಡವನ್ನು, ಅಂದಿನ ಎಂ.ಎಸ್.ಆರ್.ಟಿ.ಸಿ ಇದು ಅನಧಿಕೃತವಾಗಿ ನಮ್ಮ ನಿವೇಶನವನ್ನು ಅತಿಕ್ರಮಿಸಿ ನಿರ್ಮಿಸುತ್ತಿದ್ದಾರೆ ಎಂದು ನೀಡಿದ ದೂರಿನ ಅನ್ವಯ ಧ್ವಂಸಗೊಳಿಸಿತು. ಹಾಲೀ ಕಟ್ಟಡದ ನಿವೇಶನವನ್ನು ಬದಲಿಯಾಗಿ ನೀಡಿತು. 1970-1971 ನೇ ಇಸವಿಯಲ್ಲಿ ಅಲ್ಲಿ ಕಟ್ಟಡವನ್ನು ನಿರ್ಮಿಸುತ್ತಿದ್ದ ಸಂದರ್ಭದಲ್ಲಿ ಅದರ ಉಸ್ತುವಾರಿಗೆ ನಾನು ಬರಬೇಕಾಯಿತು. ಆ ಸಂದರ್ಭದಲ್ಲಿ ನಾಟ್ಯಾಚಾರ್ಯ ವಿ.ಎಸ್. ಕೌಶಿಕರನ್ನು ಕಾಣಲು, ಅನೇಕ ಸಂಗೀತ-ನೃತ್ಯ-ಸಾಹಿತ್ಯವಲ್ಲದೆ ಸಿನಿಮಾ ಕ್ಷೇತ್ರದಲ್ಲಿನ ಧುರೀಣರು ಹಾಗೂ ಇತರ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಹಿರಿಯರು, ವಿದ್ವಾಂಸರು ಆಗಮಿಸುತ್ತಿದ್ದುದನ್ನು ಬೆರಗುಗಣ್ಣುಗಳಿಂದ ನೋಡುತ್ತಿದ್ದ ನಾನು. ಅವರುಗಳು ನನ್ನ ಚಿಕ್ಕಪ್ಪನವರೊಂದಿಗೆ ಸಂಭಾಷಿಸುತ್ತಿದ್ದ ಸಂದರ್ಭದಲ್ಲಿ ಕೆಲವೊಮ್ಮೆ ಶ್ರೀಯುತ ಪ್ರೊ.ಜಿ ಅಶ್ವತ್ಥ ನಾರಾಯಣರನ್ನೂ ಕಂಡಿದ್ದ ನೆನಪು.

"ನಾಟ್ಯಾಚಾರ್ಯ ದಿ. ವಿ.ಎಸ್. ಕೌಶಿಕರು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನ ಸಹಾಯ ಪಡೆದು ಭರತನಾಟ್ಯ ದಿಗ್ದರ್ಶನ ಎಂಬ ಗ್ರಂಥವನ್ನು ಮುದ್ರಿಸಿ, ನಾಡಿನ ಮುಖ್ಯ ಮಂತ್ರಿಗಳಾಗಿದ್ದ ದಿ. ಶ್ರೀ. ಆರ್. ಗುಂಡೂರಾವ್ ಅವರಿಂದ ಬಿಡುಗಡೆಗೊಳಿಸಿದ ಭರತ ನಾಟ್ಯ ದಿಗ್ದರ್ಶನ ಗ್ರಂಥದ, ಎರಡನೇ ಆವೃತ್ತಿಯನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಸಂಧರ್ಭದಲ್ಲಿ ಆಯ್ದ ನೂರು ಕೃತಿಗಳಲ್ಲಿ, ಒಂದಾಗಿ ಪರಿಗಣಿಸಿ, ಪರಿಷತ್ತಿನ ವತಿಯಿಂದ ಪುನರ್ಮುದ್ರಿಸಿ, ನೃತ್ಯಾಭಾಸಿಗಳಿಗೆ ಮತ್ತು ಆಸಕ್ತರಿಗೆ ಸುಲಭ ದರದಲ್ಲಿ ಲಭ್ಯವಾಗಲು ಪ್ರಮುಖವಾಗಿ ಕಾರಣೀಭೂತರಾದವರು ಪ್ರೊಫೆಸರ್ ಜಿ. ಅಶ್ವತ್ಥನಾರಾಯಣರವರು.

ದಿನಾಂಕ: 27-02-1983 ರಲ್ಲಿ ನಾಟ್ಯಾಚಾರ್ಯ ವಿ.ಎಸ್. ಕೌಶಿಕರು ನಿಧನ ಹೊಂದಿದ ನಂತರ, ಶ್ರೀಯುತ ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಪರಿಚಯ ಇನ್ನೂ ಗಾಢವಾಗಿ, ನಾಟ್ಯಾಚಾರ್ಯ ದಿ.ವಿ. ಎಸ್. ಕೌಶಿಕರ ಕನಸುಗಳಲ್ಲಿ ಒಂದಾದ ರಂಗ ಮಂದಿರ ನಿರ್ಮಿಸುವ ಕನಸನ್ನು ನನಸು ಮಾಡುವ ಸಂಧರ್ಭದಲ್ಲಿ, ಆದ ಅನೇಕ ಎಡರುತೊಡರುಗಳು, ಕಾನೂನು ಸಮರ ಇತ್ಯಾದಿಗಳಲ್ಲಿ, ತಮ್ಮ ಅಪಾರ ಬಿಡುವಿಲ್ಲದ ಸಮಯದಲ್ಲೂ, ನನ್ನನ್ನು ತಮ್ಮ ಮನೆಯಲ್ಲಿ ಉಪಚರಿಸಿ ಧೈರ್ಯ ತುಂಬಿದ ಕೆಲವೇ ವ್ಯಕ್ತಿಗಳಲ್ಲಿ ಶ್ರೀಯುತ, ಪ್ರೊಫೆಸರ್ ಜಿ.ಅಶ್ವತ್ಥ ನಾರಾಯಣರು ಮತ್ತು ಅವರ ಶ್ರೀಮತಿ ಎಂ.ಆರ್. ಲಕ್ಷ್ಮೀದೇವಿಯವರು ಮುಖ್ಯರು. ನೃತ್ಯ-ಸಂಗೀತ-ಚಿತ್ರಕಲೆಯಲ್ಲದೆ ಫೋಟೊಗ್ರಫಿಯವರಿಗೆ ಕೂಡ ಅನುಕೂಲವಾಗುವ ಆಕರ ಗ್ರಂಥಗಳಂತೆ ಭರತ ನಾಟ್ಯ ಎಂಬ ಗಂಥವನ್ನು ರಚಿಸಲು ಅಧ್ಯಾತ್ಮದ ನಂಟಿನ ಕುರಿತು ಸಲಹೆ ಮಾರ್ಗದರ್ಶನವನ್ನು ನೀಡಿದ್ದ, ಮಾನ್ಯ ಕೀರ್ತಿಶೇಷ ಶ್ರೀಯುತ ದೇವುಡುರವರ ಮತ್ತು ಶ್ರೀಯುತ ಅ.ನ.ಕೃ ಅವರ ವಂಶಜರನ್ನು ನನಗೆ ಪರಿಚಯಿಸಿದವರು ಸಹ ಪ್ರೊ ಜಿ. ಅಶ್ವತ್ಥನಾರಾಯಣ ಅವರು.

ಸನಾತನ ಕಲಾಕ್ಷೇತ್ರದ ಕನಕ ಸಭಾಂಗಣದಲ್ಲಿ ಹಮ್ಮಿಕೊಳ್ಳುತ್ತಿದ್ದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮವಲ್ಲದೆ, ಸಾಹಿತ್ಯಮನೋರಂಜನೆಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಮುಖ್ಯವಾಗಿ ತಮ್ಮ ಜ್ಞಾನವನ್ನು ತಮ್ಮ ಸ್ವಾನುಭವದೊಂದಿಗೆ ನೀಡಿದ ಅನೇಕ ಉಪನ್ಯಾಸಗಳನ್ನು ನೀಡಿದ ಪ್ರೊ ಜಿ. ಅಶ್ವತ್ಥನಾರಾಯಣ ಅವರ ಕಾರ್ಯ, ಉಲ್ಲೇಖನಾರ್ಹ.

ದಿ. ವಿ.ಎಸ್. ಕೌಶಿಕರ ನೆನಪಿನಲ್ಲಿ ಆಯೋಜಿಸುತ್ತಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿಯೂ ಪಾಲ್ಗೊಂಡು, ಸಮಾರಂಭದ ಹಿರಿಮೆಯನ್ನು ಹೆಚ್ಚಿಸಿದ ಕೀರ್ತಿ ಸಹ ಪ್ರೊ. ಅಶ್ವತ್ಥನಾರಾಯಣ ಅವರದು ಎಂದರೆ ಅತಿಶಯೋಕ್ತಿಯಲ್ಲ. ಶ್ರೀಯುತ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ದಿ. ಕೌಶಿಕರಲ್ಲಿ ನೃತ್ಯ ಶಿಷ್ಯರಾಗಿಯೂ ಕೆಲ ಕಾಲ ನೃತ್ಯದ ವಿವಿಧ ಆಯಾಮಗಳನ್ನು ಅಭ್ಯಸಿಸಿದ್ದನ್ನು ಅವರೇ ಹಲವು ಸಮಾರಂಭಗಳಲ್ಲಿ ತಮ್ಮದೇ ಹಾವ-ಭಾವಗಳೊಂದಿಗೆ ಸಭೆಗೆ ವಿವರಿಸಿದ್ದಾರೆ. ಒಂದು ಸಂಧರ್ಭದಲ್ಲಿ ಶ್ರೀಯುತ, ದಿ. ಪಿ.ಎಸ್. ಕೌಶಿಕರ ಕನಸಿನ ಕೂಸಾದ ಸಾರ್ವಜನಿಕ ಬಳಕೆಯ ರಂಗ ಮಂದಿರ ನಿರ್ಮಿಸಲು, ದಿ. ಹಾರನಹಳ್ಳಿ ರಾಮಸ್ವಾಮಿಯವರನ್ನೊಳಗೊಂಡ ಸಮಿತಿ ರಚಿಸಿ, ಅದಕ್ಕೂ ಪ್ರಯತ್ನ ಪಟ್ಟವರು ಪ್ರೊ. ಜಿ. ಅಶ್ವತ್ಥ ನಾರಾಯಣ ಅವರು. ಆದರೆ ಆ ಕನಸು ನನಸಾಗಲು ಕಾರಣಾಂತರದಿಂದ ಸಾಧ್ಯವಾಗಲಿಲ್ಲ.

ಇದೇ ಅಭಿನಂದನಾ ಸಮಾರಂಭದ ಸಂಧರ್ಭದಲ್ಲಿ ಶ್ರೀಯುತ ಪ್ರೊ. ಜಿ. ಅಶ್ವತ್ಥ ನಾರಾಯಣ ಅವರಿಗೆ ಭಗವಂತನು ದೀರ್ಘಾಯುಷ್ಯವನ್ನು ಕರುಣಿಸಲಿ, ಈ ನಾಡಿಗೆ ಇವರಿಂದ ಇನ್ನೂ ಹೆಚ್ಚಿನ ಸೇವೆ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಲಿ, ಮತ್ತು ಸಾಹಿತ್ಯ-ಸಂಗೀತ-ನೃತ್ಯ ಮತ್ತು ಇತರೆ ಕಲೆಗಳಲ್ಲಿ ತೊಡಗಿಸಿಕೊಂಡ

ಅನೇಕ ಕಲಾವಿದರ ಜೀವನದಲ್ಲಿ ಆಗುವ ಅನೇಕ ಎಡರು ತೊಡರುಗಳನ್ನು ನಿರ್ಭೀತಿಯಿಂದ ಎದುರಿಸಿ ಕಾಲ ಕಾಲಕ್ಕೆ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡವರ ಮನಸ್ಸನ್ನು ಅರಿತು ಅವರೊಂದಿಗೆ ಸಹ ಬಾಳ್ವೆ ಮಾಡುತ್ತಿರುವ ಶ್ರೀಮತಿ ಲಕ್ಷ್ಮೀದೇವಿಯವರು ಸಹ ಅತ್ಯುತ್ತಮ ವಾಗ್ಮಿಯಲ್ಲದೆ ಬಹು ಭಾಷಾ ಪರಿಣತರು, ಅವರೂ ಸಹ ಶಿಕ್ಷಣ ಕ್ಷೇತ್ರಕ್ಕೆ ಅತ್ಯುತ್ತಮ ಕೊಡುಗೆ ನೀಡಿದವರು, ತಮ್ಮ ವಿಶ್ರಾಂತ ಜೀವನದಲ್ಲೂ ಸಹ ತಮ್ಮ ಪ್ರೀತಿಯ ತಮ್ಮ ಅಭಿಮಾನದ ಅನಾಜಿಗೆ ಮೃದು ನುಡಿಗಳಿಂದ ಅನೇಕ ಸಂದರ್ಭದಲ್ಲಿ ನೀಡುವ ವ್ಯಾವಹಾರಿಕ ಎಚ್ಚರಿಕೆಗಳನ್ನು ಕೇಳಿ, ಮುದ್ದಣ ಮನೋರಮೆಯರ ಸರಸ ಸಲ್ಲಾಪ ಎಂಬ ಪಠ್ಯವನ್ನು ಓದಿದ್ದರ ನೆನಪಿನಲ್ಲಿ ಸಂಭ್ರಮಿಸಿದ್ದೇನೆ.

ಅನೇಕ ಸಮಾರಂಭಗಳನ್ನು ನಿರ್ವಹಿಸುವ ಹಾಗೂ ನನಗೂ ಸಭಾ ಕಂಪನವನ್ನು ನೀಗಿಸಿ ನನ್ನನ್ನು ತಿದ್ದಿ ತೀಡಿ ಹಲವು ರೀತಿಯಲ್ಲಿ ಮಾರ್ಗದರ್ಶನ ಮಾಡಿದ ರೀತಿ ಅತ್ಯಂತ ಗಮನಾರ್ಹ ಹಾಗೂ ಗಣನೀಯವಾದುದು. ಅದಕ್ಕಾಗಿ ನಾನು ಪ್ರೊ.ದಂಪತಿಗಳಿಗೆ ಚಿರಋಣಿ.

ನಾನೂ ನನ್ನ ಕುಟುಂಬವರ್ಗದವರೂ ಸೇರಿದಂತೆ ಸನಾತನ ಕಲಾಕ್ಷೇತ್ರದ ಎಲ್ಲ ಸದಸ್ಯರ ಪರವಾಗಿ ಶ್ರೀಯುತ ಅಶ್ವತ್ಥನಾರಾಯಣ ರವನ್ನು ಮತ್ತು ಅವರೊಂದಿಗೆ ಅವರ ಜೀವನ ಸಂಗಾತಿ ಮಾತೃಶ್ರೀ ಸಮಾನರಾದ ಶ್ರೀಮತಿ ಲಕ್ಷ್ಮೀದೇವಿಯವರನ್ನೂ ಸಾಷ್ಟಾಂಗ ಪೂರ್ವಕವಾಗಿ ನಮಸ್ಕರಿಸಿ, ಅವರ ಎಲ್ಲ ಕುಟುಂಬ ವರ್ಗದವರಿಗೆ ಈ ಸಂದರ್ಭದಲ್ಲಿ ಮನಸಾ ಅಭಿನಂದಿಸುತ್ತೇನೆ.

ಪ್ರೊ ಜಿ. ಅಶ್ವತ್ಥನಾರಾಯಣ ರವರ ಜೀವನ ಸಾಧನೆಯ ಸಂಧರ್ಭದಲ್ಲಿ "ಈ ಸಾಹಿತ್ಯ ಪರಿಚಾರಕ" ಎಂಬ ವಿಶಿಷ್ಟ ಅಭಿನಂದನಾ ಸಮಾರಂಭದ ಗ್ರಂಥ ಬಿಡುಗಡೆಯ ಸಂಧರ್ಭದಲ್ಲಿ ನನಗೂ ಈ ಅವಕಾಶವನ್ನು ಕಲ್ಪಿಸಿ ಕೊಟ್ಟ ಆತ್ಮೀಯರಾದ ಪ್ರೊ.ಜಿ. ಅಶ್ವತ್ಥ ನಾರಾಯಣ ಅವರ ಅಭಿನಂದನಾ ಗ್ರಂಥದ ಸಂಪಾದಕ ವರ್ಗದರಿಗೂ ಪ್ರಕಾಶಕರಿಗೂ ಮನಃಪೂರ್ವಕ ಧನ್ಯವಾದಗಳನ್ನು ಈ ಬರಹದ ಮೂಲಕ ಸಮರ್ಪಿಸುತ್ತೇನೆ.

****

ಅನಾಜಿ ಕುರಿತಾದ ನನ್ನ ಅನುಭವ

ಕೆ.ಪಿ. ರತ್ನಾಕರ ಭಟ್ಟ
ಚರವಾಣಿ : ೯೪೪೮೬೫೮೩೧೪

ನಾವುಗಳು ಚಿಕ್ಕಮಗಳೂರಿನಿಂದ 2011 ರಲ್ಲಿ ಬಂದ ಮೇಲೆ, 2014 ರಲ್ಲಿ ನನ್ನ ಮೂಲಕ ವಿರಚಿತವಾಗಿರುವ "ಶ್ರೀ ಶಂಕರಾಯಣ" ಎಂಬ ದಿವ್ಯ ಗ್ರಂಥವು ಬೆಂಗಳೂರಿನ ಅವರ್ಸ್ ಸ್ಕೂಲ್ ಎಂಬಲ್ಲಿ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾ ಸ್ವಾಮಿಗಳು, ದಕ್ಷಕ್ಷೇತ್ರ, ಹರಿಹರಪುರ, ಇವರಿಂದ ಲೋಕಾರ್ಪಣೆಯಾಯಿತು. ಅದರಿಂದೀಚೆಗೆ, ಚಿಕ್ಕಮಗಳೂರಿನವರೇ ಆಗಿ ಕೆನರಾ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿಯನ್ನು ಪಡೆದು, ಆಡಿಟರ್ ಆಗಿ ಸೇವೆ ಸಲ್ಲಿಸುತ್ತಿರುವ, ಬೆಂಗಳೂರಿನ ಜಯನಗರ 'ಟಿ' ಬ್ಲಾಕ್ ನಿವಾಸಿ ಶ್ರೀಯುತ ಶ್ರೀಧರ್ ಮೂಲಕ ಶ್ರೀಯುತ ಜಿ. ಅಶ್ವತ್ಥನಾರಾಯಣ ಅವರ ಪರಿಚಯವಾಯಿತು. ಅವರನ್ನು ಶ್ರೀಧರ್ ಅವರು ನಮ್ಮ ಮನೆಗೆ ಕೆಲವು ಬಾರಿ ಕರೆದುಕೊಂಡು ಬಂದಿದ್ದಾರೆ. ಅವರ ಅಗಾಧವಾದ ಸಾಧನೆಯನ್ನು ತಿಳಿದು ತುಂಬ ತುಂಬಾ ಸಂತೋಷಪಟ್ಟೆನು.

ಮುಂದೆ, ತ್ಯಾಗರಾಜನಗರದಲ್ಲಿ ಚಾತುರ್ಮಾಸ್ಯದ ವೇಳೆ ಹರಿಹರಪುರ ಶ್ರೀಗಳಿಂದಲೇ ಶ್ರೀ ಲಲಿತಾ ಸಹಸ್ರನಾಮ ಕುರಿತಾದ ಮೂರು ಸಂಪುಟಗಳ ಬೃಹತ್ ಗ್ರಂಥ ಹಾಗೂ ಎರಡು ಕಿರು ಕೃತಿಗಳು ಲೋಕಾರ್ಪಣೆಯಾದವು. ಈ ಎರಡೂ ಗ್ರಂಥಕ್ಕೆ ಅದ್ವೈತ ವಾಚಸ್ಪತಿ, "ಸತ್ಯದರ್ಶನ" ಖ್ಯಾತಿಯ ಹಾಗೂ ಬಹುಬಿರುದಾಂಕಿತ ವಿದ್ವಾನ್ ಡಾ. ಪಾವಗಡ ಪ್ರಕಾಶರಾಯರು ಬಹಳ ಆಸ್ಥೆಯಿಂದ ಮುನ್ನುಡಿಯೆಂಬ ಸನ್ನುಡಿಯನ್ನು ಕರುಣಿಸಿದ್ದಾರೆ. ಆ ಕಾರ್ಯಕ್ರಮಕ್ಕೂ ಶ್ರೀಯುತ ಜಿ. ಅಶ್ವತ್ಥನಾರಾಯಣ ಅವರು ಸ್ನೇಹಪೂರ್ಣರಾಗಿ ದಯಮಾಡಿಸಿದ್ದರು. ಅದಲ್ಲದೇ, ನಮ್ಮ ಮನೆಯ ವೈಯಕ್ತಿಕ ಕಾರ್ಯಕ್ರಮಗಳಿಗೂ ಬಂದಿದ್ದಲ್ಲದೇ ಯಾವ ಕಾರ್ಯಕ್ರಮಗಳಿಗೂ ತಪ್ಪಿಸದೇ ಬರುತ್ತಿದ್ದಾರೆ. ಅವರು ಮಾಡಿರುವ ಸಾಹಿತ್ಯ ಸರಸ್ವತಿಯ ಸೇವೆ, ಸಮಾಜ ಸೇವೆ, ಸಮಾಜಮುಖೀ ಕಳಕಳಿ, ಎಲ್ಲವೂ ಅತ್ಯದ್ಭುತ. ಅನೇಕ ಪ್ರಶಸ್ತಿಗಳನ್ನು ಪಡೆದಿರುವ ಶ್ರೀಯುತರಿಗೆ ಬಾಹ್ಯಾಲಂಕೃತವಾದ ಯಾವ ದಾಹವೂ ಕಾಣಿಸದು. ಒಮ್ಮೆ ಅವರು ಹೇಳಿದ್ದುಂಟು -- ಕೆಲವರು ಮಾತಿನಲ್ಲಿ, "ನನಗೆ ಯಾವ ಅಪೇಕ್ಷೆಯೂ ಇಲ್ಲ, ಇರಕೂಡದು" ಎನ್ನುತ್ತಾರೆ. ಆದರೆ, ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ಬಯಕೆಯ ಮಿಂಚೊಂದು ಇರುತ್ತದೆ. ಅದೂ ಇರಕೂಡದು -- ಎಂದಿದ್ದರು. ಅಂಥಾ ನಿಃಸ್ಪೃಹ ವ್ಯಕ್ತಿ ಕೇವಲ ವ್ಯಕ್ತಿಯಾಗಿರದೇ "ಅಭಿವ್ಯಕ್ತಿ" ಎಂದು ಧಾರಾಳವಾಗಿ ಹೇಳಬಹುದು. ಬಹಳ ಸರಳ ಸುಂದರ ಅಭಿವ್ಯಕ್ತತೆ. ಶ್ರೀಮದ್ಭಗವದ್ಗೀತಾ ತತ್ತ್ವಗಳನ್ನು ತಮ್ಮ ದಿನನಿತ್ಯದ ಆಚರಣೆಯಲ್ಲೇ ಅಳವಡಿಸಿಕೊಂಡಿರುವ ಮಹಾತ್ಮರು -- "ಆಚಾರಃ ಪ್ರಭವೋ ಧರ್ಮಃ। ಧರ್ಮಸ್ಯ ಪ್ರಭುಃ ಅಚ್ಯುತಃ"

ಎನ್ನುವುದು ಆರ್ಷವಾಣಿ. ಸದಾಚಾರವೇ ಧರ್ಮ -- "ಜ್ಞಾನಂ ಧಾರಣತ್ವಾತ್ ಇತಿ ಧರ್ಮಃ -- ಜ್ಞಾನದ ಧಾರಣೆ ಅಥವಾ ಅಳವಡಿಕೆಯೇ ಧರ್ಮ ಎನ್ನಲಾಗಿದೆ. ಅದನ್ನು ಅಕ್ಷರಶಃ ಪಾಲಿಸಿಕೊಂಡು ಬಂದಿರುವವರಿವರು.

ನಾನೊಮ್ಮೆ "ತೊರವೆ ರಾಮಾಯಣ" ನನ್ನಲ್ಲಿ ಇಲ್ಲ" ಎಂದೆ. ಕೂಡಲೇ ಎರಡು ಸಂಪುಟಗಳ ಗ್ರಂಥವನ್ನು ಕಳಿಸಿಯೇಬಿಟ್ಟರು. ಜೊತೆಗೆ, "ಕುಮಾರ ವಾಲ್ಮೀಕಿ ಪ್ರಶಸ್ತಿಯ" ಒಂದು ಗ್ರಂಥವನ್ನೂ ಮತ್ತು "ಸೌಂದರ್ಯ ಲಹರಿ"ಯ ವ್ಯಾಖ್ಯಾನವನ್ನೂ ದಯಪಾಲಿಸಿದರು. ನಾನು ಓದಿ ಹಿಂದಕ್ಕೆ ಕೊಡುತ್ತೇನೆ" ಎಂದಾಗ, "ಇಲ್ಲ ಇಲ್ಲ, ನಿಮಗೆಂದೇ ಕೊಟ್ಟಿದ್ದು" ಎಂದರು.

ಪ್ರಸ್ತುತ ಅವರಿಗೆ ತಿಳಿದಂತೆ, ಶ್ರೀಮದ್ ವಾಲ್ಮೀಕಿ ರಾಮಾಯಣದ 24,000 ಸಂಸ್ಕೃತ ಶ್ಲೋಕಗಳನ್ನೂ ಕನ್ನಡ ಭಾಮಿನೀ ಷಟ್ಪದಿ ಕಾವ್ಯ ಸಿದ್ಧಪಡಿಸಲಾಗಿದ್ದು, ಈಗ "ಶ್ರೀಕೃಷ್ಣಾಯಣ" ಎಂಬ ಗ್ರಂಥವನ್ನು ಗದ್ಯ ರೂಪದಲ್ಲಿ ಬರೆಯುತ್ತಿದ್ದೇನೆ. ಶ್ರೀಕೃಷ್ಣನ ದಿವ್ಯ ಸಂದೇಶಗಳು ನವ್ಯ ಜೀವನ ಶೈಲಿಗೆ ಹೇಗೆ ಪ್ರಸ್ತುತ ಮತ್ತು ಹೇಗೆ ಪ್ರಾಯೋಗಿಕ ಎಂಬುದನ್ನು ತಿಳಿಸಲಾಗಿದೆ. ಇದಕ್ಕೆ ಪೂರಕವಾದ ಅತ್ಯಮೂಲ್ಯ ಗ್ರಂಥಗಳು ಅವರ ತುದಿನಾಲಿಗೆಯಲ್ಲೇ ಇದ್ದು, ನನಗೆ ಒದಗಿಸಿಕೊಡುವುದಾಗಿ ತಿಳಿಸಿದ್ದಾರೆ.

ಅವರು ಮತ್ತು ಶ್ರೀಯುತ ಶ್ರೀಧರ್ ನಮ್ಮ ಮನೆಗೆ ಬಂದಾಗಲೆಲ್ಲಾ ಅದ್ಭುತವಾದ ಸಾಹಿತ್ಯಿಕ ಸಂವಾದವನ್ನು ಮಾಡಿ, ಏನೋ ಕಿಂಚಿತ್ ಆತಿಥ್ಯವನ್ನು ಮಾಡಿದಾಗ, ಬಹು ಸಂತೋಷದಿಂದ ಹೃದಯತುಂಬಿ ಹರಸುವರು. ಅವರ ಪರಿಚಯವು ನನಗೆ ಸ್ವಲ್ಪ ಕಾಲದ್ದಾದರೂ, ಬಹು ದೀರ್ಘವೆಂಬ ದಿವ್ಯಾನುಭವವನ್ನು ನೀಡಿದೆ. ನಾನು ನಿಜಕ್ಕೂ ಅವರಿಗೆ ಕೃತಜ್ಞನಾಗಿದ್ದೇನೆ.

ಪ್ರಸ್ತುತ, ಅವರ ಮಹತ್ತರವಾದ ಸಾಧನೆಯನ್ನು ಗುರುತಿಸಿದ ಸಹಸ್ರಾರು ಸಾಹಿತ್ಯಾಸಕ್ತರು ಒಂದಾಗಿ, ಅವರನ್ನು ಸನ್ಮಾನಿಸುತ್ತಿರುವುದು ಅತ್ಯಂತ ಶ್ಲಾಘನೀಯ. ಶ್ರೀಸರಸ್ವತಿಯನ್ನು ಆರಾಧನೆ ಮಾಡಿದಂತೆಯೇ. ಮಹನೀಯರಿಗೆ ಪರಮಾತ್ಮನು ಹೆಚ್ಚಿನ ಆಯಸ್ಸು, ಆರೋಗ್ಯ, ಐಶ್ವರ್ಯಾದಿ ಸಕಲ ಸೌಭಾಗ್ಯವನ್ನಿತ್ತು ಸಲಹಲಿ ಎಂದೂ ಮತ್ತು ಅವರಿಂದ ಹೆಚ್ಚಿನ ರೀತಿಯಲ್ಲಿ ಬಹುಮುಖ ಸೇವೆಯು ಸಮಾಜಕ್ಕೆ ದೊರೆಯಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿ ಹೃತ್ಪೂರ್ವಕವಾಗಿ ಅವರಿಗೂ ಅವರ ಕುಟುಂಬ ವರ್ಗಕ್ಕೂ ಶುಭವನ್ನು ಕೋರುತ್ತಿದ್ದೇನೆ.

॥ ಶುಭಂ ಭೂಯಾತ್ ॥

******

ಕನ್ನಡ ಸಾಹಿತ್ಯದ ಸವ್ಯಸಾಚಿ

ಕೃಷ್ಣ ಕೊಲ್ಹಾರ ಕುಲಕರ್ಣಿ
ಚರವಾಣಿ : ೯೩೪೨೦೮೯೪೭೦

ಹೌದು, ಅವರು ಕನ್ನಡ ಸಾಹಿತ್ಯದ ಸವ್ಯಸಾಚಿ, ಹಳೆಗನ್ನಡ, ನಡುಗನ್ನಡ, ವಚನಸಾಹಿತ್ಯ, ದಾಸಸಾಹಿತ್ಯ, ಮತ್ತು ಹೊಸಗನ್ನಡ -ಯಾವುದೇ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಮಾತನಾಡುವುದಿರಲಿ, ಬರೆಯುವುದಿರಲಿ ಅವರು ನಿರರ್ಗಳವಾಗಿ ಮಾತನಾಡುತ್ತಾರೆ. ಬರೆಯುತ್ತಾರೆ. ಅವರೆ ಬೆಂಗಳೂರು ನಿವಾಸಿ ಪ್ರೊ. ಅಶ್ವತ್ಥನಾರಾಯಣ ಯಾನೆ ಅನಾಜಿ,

ಅವರು ಕನ್ನಡ ಪ್ರಾಧ್ಯಾಪಕರಾಗಿದ್ದವರು, ಹಳೆಗನ್ನಡದ ಯಾವುದೇ ಕಾವ್ಯ ತೆಗೆದುಕೊಂಡರೂ, ಗಂಟೆಗಟ್ಟಲೆ ಅದರ ವೈಶಿಷ್ಟ್ಯ , ಶೈಲಿ ಇತ್ಯಾದಿಗಳನ್ನು ರಸವತ್ತಾಗಿ ಹೇಳುತ್ತಾರೆ. ಅಷ್ಟೇ ಸಲೀಸಾಗಿ ನಡುಗನ್ನಡ ಕಾವ್ಯಗಳು, ಗಮಕ, ವಚನ ಸಾಹಿತ್ಯ, ದಾಸಸಾಹಿತ್ಯ ಜೊತೆ ಹೊಸಗನ್ನಡದ ಹಿರಿಯರ ಸಾಹಿತ್ಯದ ಬಗ್ಗೆಯೂ ಆಳವಾದ ಜ್ಞಾನವಿದೆ. ಕಾಣಲು ಒಂದು ಸಾದಾ ಪ್ಯಾಂಟು, ಬುಶ್ ಶರ್ಟ್. ಶ್ರೀಸಾಮಾನ್ಯನಂತೆ ಕಾಣುವ ಈ ವ್ಯಕ್ತಿಯ ಹಿಂದೆ ಅದೆಂಥ ಜ್ಞಾನವಿದೆ ಎಂದು ನಾನು ಅನೇಕ ಸಲ ಆಶ್ಚರ್ಯಪಟ್ಟಿದ್ದೇನೆ.

ಅವರು ರಚಿಸಿದ ಗ್ರಂಥಗಳು, ಸಂಪಾದನೆಯ ಪುಸ್ತಕಗಳನ್ನು ಒಂದು ಸಲ ಕಣ್ಣು ಹಾಕಿದರೆ, ಅವರ ಆಳವಾದ ವಿದ್ವತ್ತು, ಜ್ಞಾನದ ಅರಿವಾಗುತ್ತದೆ. ಜೈನ ಸಾಹಿತ್ಯದಲ್ಲಿಯ ರತ್ನ ಕರಂಡಕ ಶ್ರಾವಕಾಚಾರ, ರತ್ನಾಕರನ ಮೂರು ಶತಕಗಳು, ಉತ್ತಮ ಕ್ಷಮಾ, ಜಾಗರೂಕರಾಗಿ ಜಾಣರಾಗಿ, ಜೊತೆಗೆ ಆದಿಪುರಾಣ, ಪಂಪಭಾರತ ಹೆಸರಿಸಬಹುದು. ನಡುಗನ್ನಡ ಸಾಹಿತ್ಯದಲ್ಲಿಯ ಅನುಭವಾಮೃತ ಟೀಕೆ, ಕುಮಾರವ್ಯಾಸನ ಭೀಷ್ಮಪರ್ವ, ಸೋಮೇಶ್ವರ ಶತಕದ ಟೀಕೆ, ಕಬ್ಬಿಗರ ಕಾವ್ಯದ ಟೀಕೆ, ಹರಿಶ್ಚಂದ್ರ ಕಾವ್ಯ, ಜೈಮಿನಿ ಭಾರತ ಹೆಸರಿಸಬಹುದು. ವಚನ ಸಾಹಿತ್ಯದಲ್ಲಿಯ ದೇವರದಾಸಿಮಯ್ಯನ ವಚನಗಳು, ಫ ಗು. ಹಳಕಟ್ಟಿ ಬಗೆಗಿನ ಕೃತಿಗಳನ್ನೂ ಹೇಳಬಹುದು.

ದಾಸ ಸಾಹಿತ್ಯದಲ್ಲಿ, ಎರಡು ಸಂಪುಟಗಳಲ್ಲಿ ವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು, ಪ್ರಸನ್ನ ಶ್ರೀನಿವಾಸದಾಸರ ಸಮಗ್ರ ಕೀರ್ತನೆಗಳು, ಕೆಲ್ಲಂಗೆರೆ ತಿಮ್ಮಪ್ಪದಾಸರ ಸಮಗ್ರ ಕೀರ್ತನೆಗಳು ಹರಿದಾಸರ ಸಮಾಜಮುಖಿ ಕೀರ್ತನೆಗಳು, ದಾಸ ಸಾಹಿತ್ಯ ಸೌರಭ,

ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು, ತಂದೆ ಪುರಂದರವಿಠಲರ ಕೀರ್ತನೆಗಳು ಇತ್ಯಾದಿ ಹೆಸರಿಸಬಹುದು.

ಹೊಸಗನ್ನಡ ಸಾಹಿತ್ಯದಲ್ಲಿಯ ವಿದ್ಯಾರ್ಥಿಗಳಿಗಾಗಿ ಡಿ.ವಿ.ಜಿ. ಕಗ್ಗದ ಪದ್ಯಗಳು, ಉಪ್ಪಾರಹಳ್ಳಿ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆ, ಗೀತೆಯ ತಿರುಳು, ವ್ಯಾಕರಣ ಸಂಗ್ರಹ, ಎಂವೀ.ಸಿ ಸಮಗ್ರ

ಜೀವನ ಚರಿತ್ರೆ, ಸಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣಗಳು, ಭಾಷೆ ಕಲಿಕೆ, ಸುಲಭ ಕನ್ನಡ ಲಿಪಿ ಕಲಿಕೆ, ಇತ್ಯಾದಿ. ಸಂಪಾದನೆಗಳಾಗಿದ್ದರೆ ಸ್ವತಂತ್ರವಾಗಿ ಬಿ.ಎಂ.ಶ್ರೀ. ಪರಿಚಯ, ದೇವುಡು ನರಸಿಂಹಶಾಸ್ತ್ರಿ, ಫ.ಗು. ಹಳಕಟ್ಟಿ, ಹುಮ ರಾಮಾರಾಧ್ಯ, ಹೊಸಕೆರೆ ಚಿದಂಬರಯ್ಯನವರು ಇತ್ಯಾದಿ ಕೃತಿಗಳನ್ನು ಹೇಳಬೇಕು.

ಎಂತಹ ವೈವಿಧ್ಯಮಯವಾದ ಸಾಹಿತ್ಯ ! ಒಬ್ಬ ವ್ಯಕ್ತಿ ಇಷ್ಟೆಲ್ಲ ಬರೆಯಬಹುದೆ ಎಂದು ಆಶ್ಚರ್ಯವಾಗುತ್ತದೆ. ಬರವಣಿಗೆ ಅತ್ಯಂತ ಸುಲಭ ಮತ್ತು ಶ್ರೀಸಾಮಾನ್ಯನಿಗೆ ತಿಳಿಯುವಂಥ ಬರವಣಿಗೆ, ಮಾದರಿಗಾಗಿ ಅವರ ಒಂದು ಪುಟ್ಟ ಕೃತಿ 'ವಚನ ತಪಸ್ವಿ ಫ.ಗು. ಹಳಕಟ್ಟಿ ಬಗ್ಗೆ ತಿಳಿಯೋಣ. ೧/೧೬, ೩೯ ಪುಟಗಳ ಪುಟ್ಟ ಪುಸ್ತಕವು ಹೀಗೆ ಪ್ರಾರಂಭವಾಗುತ್ತದೆ.

"ಇಳೆಗಿಳಿದ ಶರಣ, ಆಧುನಿಕ ಶರಣ, ಸತ್ಯ ಶರಣ, ಸಾವರಿಯದ ಶರಣ. ಭೂಮಿಯಲುದಿಸಿದ ಶರಣ, ಅಚ್ಚ ಶಿವರಾತ್ರಿಯ ನಿಚ್ಚ ಶರಣ, ೨೦ನೆಯ ಶತಮಾನದ ನೂತನ ಶರಣ ಇತ್ಯಾದಿಯಾಗಿ ಕನ್ನಡ ಸಾಹಿತಿ–ವಿದ್ವಾಂಸರು ಮನಸಾರೆ ಹೊಗಳಿ ಕೊಂಡಾಡಿದ ಫ.ಗು. ಹಳಕಟ್ಟಿ ಅವರು ಕನ್ನಡ ನಾಡಿನಲ್ಲಿ ಶರಣ ಸಂಸ್ಕೃತಿಯನ್ನು ಬದುಕಿನಲ್ಲಿ ಎತ್ತಿ ತೋರಿಸಿದ ವ್ಯಕ್ತಿ. ಬರಹದಲ್ಲಿ ಪ್ರತಿಪಾದಿಸಿದ ವ್ಯಕ್ತಿ. ನಡೆ ನುಡಿ ಎರಡರಲ್ಲು ಪೂಜ್ಯ ಓಜರಾದ ಹಳಕಟ್ಟಿ ಅವರು 'ಆನೆ ಇದ್ದರೂ ಸಾವಿರ ಸತ್ತರೂ ಸಾವಿರ' ಎಂಬಂತೆ ಅಂದಿಗೂ ಆದರ್ಶ ಪುರುಷರು, ಇಂದಿಗೂ ಆದರ್ಶ ಪುರುಷರು. ಕೇವಲ ವೀರಶೈವ ಸಮುದಾಯವಷ್ಟೇ ಅಲ್ಲ, ಇಡೀ ಕನ್ನಡನಾಡಿನ ಕನ್ನಡಿಗರಿಗೆಲ್ಲ ಕೃತಜ್ಞರಾಗಿರಬೇಕಾಗಿರುವಂಥ ವಚನ ನುಡಿಸೇವೆ ಮಾಡಿದವರು ಹಳಕಟ್ಟಿ ಅವರು."

ಅಶ್ವತ್ಥನಾರಾಯಣರು ತಿಳಿಯಾದ ಸರಳ ಕನ್ನಡ, ಪುಟ್ಟ ಪುಟ್ಟ ವಾಕ್ಯಗಳಲ್ಲಿ ಸಣ್ಣ ಸಣ್ಣ ಶಬ್ದಗಳಿಂದ ವ್ಯಕ್ತಿಯ ಚಿತ್ರವನ್ನು ಬಿಡಿಸುತ್ತಾರೆ. ವಾಸ್ತವದಲ್ಲಿ ಹಳಕಟ್ಟಿ ಅವರು ಮಾಡಿದ ಒಂದೊಂದು ಕೆಲಸವನ್ನು ಪ್ರತ್ಯೇಕವಾಗಿ ಸಂಪುಟದಲ್ಲಿ ಬರೆದಿಡಬೇಕಾದ ಕೆಲಸಕ್ಕೆ ಮುನ್ನುಡಿಯಾಗಿ ಪ್ರೊ ಅಶ್ವತ್ಥನಾರಾಯಣರು ಅವರ ಸಮಗ್ರ ಜೀವನವನ್ನು ಚಿತ್ರಿಸುತ್ತಾರೆ. ಯಾವುದನ್ನೂ ಬಿಟ್ಟಿಲ್ಲ. ಆಕಸ್ಮಿಕವಾಗಿ ಧಾರವಾಡದಿಂದ ವಕೀಲಿ ವೃತ್ತಿಗಾಗಿ ಬಿಜಾಪುರಕ್ಕೆ (ಇಂದಿನ ವಿಜಯಪುರ) ಬಂದ ಹಳಕಟ್ಟಿ ಅವರು, ತಮ್ಮ ವೃತ್ತಿಯೊಂದಿಗೆ ಕುಟುಂಬ ಸಹಿತವಾಗಿ ಸುಖದಿಂದ ಇರಬಹುದಾಗಿತ್ತು. ಆದರೆ ಹಳಕಟ್ಟಿ ಅವರು ಅದಕ್ಕೆ ಮನಸ್ಸು ಮಾಡಲಿಲ್ಲ. ವಚನ, ವಚನಕಾರರುಗಳ ಸಂಶೋಧನೆಯೇ ತಮ್ಮ ಮುಖ್ಯ ಸಾಧನೆ ಎಂದು ಅವರು ತಮ್ಮನ್ನು ತಾವು ಸಮರ್ಪಿಸಿಕೊಂಡರು. ಜೊತೆಗೆ ತಾವು ಇದ್ದ ನಗರದ ಪರಿಸ್ಥಿತಿ ಕಂಡು ಮರುಗಿದರು. ಅದರ ಸುಧಾರಣೆಗಾಗಿ ಶಿಕ್ಷಣ ಸಂಸ್ಥೆ ಕಟ್ಟಿದರು. ತಮಗೆ ಅಧಿಕಾರ ದೊರೆತಾಗ, ಮರಾಠಿಮಯವಾಗಿದ್ದ ವಿಜಾಪುರದಲ್ಲಿ ಕನ್ನಡ ಶಾಲೆಗಳನ್ನ ತೆರೆಯಲು ಕಾರಣರಾದರು. ಊರಲ್ಲಿ ಸಹಕಾರಿ ಬ್ಯಾಂಕು ಪ್ರಾರಂಭಿಸಿದರು. 'ಬರ' ಬಿದ್ದಾಗ ಬರ ನಿವಾರಣ ಸಂಸ್ಥೆ ಕಟ್ಟಿದರು. ಹೀಗೆ ಒಂದೇ ಎರಡೇ, ನಗರಕ್ಕೆ ಅವರೊಬ್ಬ ಅವತಾರೀ ಪುರುಷರಾಗಿ ಬಂದರು.

ಅಶ್ವತ್ಥನಾರಾಯಣರು ಅವರ ಬದುಕಿನ ಅತಿ ಚಿಕ್ಕ ಚಿಕ್ಕ ಸಂಗತಿಗಳನ್ನೂ ಬಿಡದೆ ಹೇಳಿದ್ದು, ವ್ಯಕ್ತಿ ಚಿತ್ರ ಬರೆಯುವವರಿಗೆ ಮಾದರಿಯಾಗಿದೆ. ಬಹುತೇಕ ಅವರು ರಚಿಸಿದ, ಸಂಪಾದಿಸಿದ ಎಲ್ಲ ಕೃತಿಗಳಲ್ಲೂ ಈ ಚಾಕಚಕ್ಯತೆ ಕಾಣಿಸುತ್ತದೆ. ಪ್ರೊ. ಜಿ ಅಶ್ವತ್ಥನಾರಾಯಣ ಅವರು ನೂರು ವರುಷ ಬಾಳಬೇಕು. ಕನ್ನಡ ಬೆಳಗಬೇಕು.

****

ನಾ ಕಂಡಂತೆ ಅನಂತನ ತಮ್ಮ

ಮಣೂರು ನರಸಿಂಹಮೂರ್ತಿ
ಚರವಾಣಿ : ೯೮೪೫೫೦೮೪೯

ನಾನು ಕಾಶಿ ಯಾತ್ರೆ ಮುಗಿಸಿ (ಒಂದು ನನ್ನ ಅನುಭವವನ್ನು) ಕಾಶೀ ತೀರ್ಥ ಎಲ್ಲರಿಗೂ ಒದಗಿಸುವ ಸುಲವಾಗಿ ಒಂದು ಸಮಾರಾಧನೆಯನ್ನು ಬಸವನಗುಡಿಯ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಮಾಡಬೇಕೆಂದು ತೀರ್ಮಾನಿಸಿ ಒಂದು ಕಿರುಹೊತ್ತಿಗೆ 'ಸರ್ವಂ ಶಿವಮಯಂ' ಪ್ರಕಟಿಸಬೇಕೆಂದು ನಿರ್ಧರಿಸಿದ್ದೀವಿ. ಆಗ ಪ್ರೊ. ಜಿ. ನಾರಾಯಣರವರ ಮಾರ್ಗದರ್ಶನದಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿ ಎಲ್ಲರಿಗೂ ಉಚಿತವಾಗಿ ಹಂಚಿದ್ದೀವಿ. ಮತ್ತೊಮ್ಮೆ ಗದ್ಯರೂಪದಲ್ಲಿ ಒಂದು ಪುಸ್ತಕ ದೊರಕಬಹುದೆ ಎಂದು ಅನಾಜಿ ಅವರಲ್ಲಿ ಪ್ರಸ್ತಾಪಿಸಿದಾಗ ಅವರ ಪುಸ್ತಕ ಭಂಡಾರದಿಂದ ಹಳೆಯದೊಂದು ಪುಸ್ತಕವನ್ನು ನನಗೆ ನೀಡಿದ ಸಹಾಯ ನಾನು ಮರೆಯಲಾರೆ ಮತ್ತು ಅವರು ಇದು ಐವತ್ತು ವರ್ಷಗಳ ಹಿಂದೆ ಮುದ್ರಣವಾದ ಪುಸ್ತಕವೆಂದು ಸರಳ ಕನ್ನಡದಲ್ಲಿ ಜ.ಚ.ನಿ. ಯವರು ರಚಿಸಿದರೆಂದು ಮರುಮುದ್ರಣ ಮಾಡಿಸಿ ಶಾಸ್ತ್ರ ದಾನ ಮಾಡಿದರೆ ನಿಮ್ಮ ಜೀವನ ನಿರ್ದೇಶಕವಾಗುವುದೆಂದು ಹೇಳಿ ನಿಡುಮಾಮಿಡಿ ಸ್ವಾಮೀಜಿಯವರ ಒಪ್ಪಿಗೆ ಸಹ ಕೊಡಿಸಿದರು.

ಮುದ್ರಣ ಸಮಯದಲ್ಲಿ ತುಂಬಾ ಆಸಕ್ತಿ ವಹಿಸಿ ತಪ್ಪುಗಳನ್ನು ಸರಿಪಡಿಸಿ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ನಮ್ಮ ಕಾರ್ಯ ಸುಗಮವಾಗಿ ನಡೆಯಲು ತುಂಬಾ ಶ್ರಮವಹಿಸಿ ಕಾಲ ಕಾಲಕ್ಕೆ ಪುಸ್ತಕ ಬಿಡುಗಡೆಯಾಗುವ ತನಕ ನಿರಂತರವಾಗಿ ಶ್ರಮಿಸಿದರು. ಅವರಲ್ಲಿ ನಾನು ಕಂಡದ್ದು ಅವರ ಸರಳ ವ್ಯಕ್ತಿತ್ವ. ಭಾವಾಭಿಮಾನ ಮತ್ತು ಏನೇ ಕೆಲಸವಿರಲಿ ಮುದ್ರಣವಾಗುವ ಪುಸ್ತಕದಲ್ಲಿ ತಪ್ಪುಗಳಿರಬಾರದೆಂದು ಅವರ ಮನಸ್ಸಿನಲ್ಲಿ ಮುದ್ರಣವಾದ ಮೇಲೆ ಯಾವ ರೀತಿ ಇರಬೇಕೆಂದು ಬಯಸಿದರೂ ಅದು ಆಗುವ ತನಕ ಸುಮ್ಮನೇ ಕೂತವರಲ್ಲ. ಅವರಲ್ಲಿ ಸಾಹಿತ್ಯದ್ದೇ ಕೆಲಸ ಮಾಡಬೇಕೆಂದು ಅರ್ಥಪೂರ್ಣತೆಯಿಂದ ಸಹಕರಿಸಿ ಕೊನೆಯ ಹಂತದವರೆಗೆ ಶ್ರಮಿಸುತ್ತಿದ್ದರು. ಅವರು ನಿರಾಡಂಬರ ಜೀವಿ. ಏನನ್ನೂ ಬಯಸಿದವರಲ್ಲ. ಮತ್ತು ತುಂಬಾ ಸರಳ ಮತ್ತು ಪ್ರಚಾರವನ್ನು ಬಯಸಿದವರಲ್ಲ. ಅವರಲ್ಲಿ ಎದ್ದು ಕಾಣುವುದು ಸಾಹಿತ್ಯಾಸಕ್ತಿ. ವಿಜಯಕರ್ನಾಟಕ ಪತ್ರಿಕೆಯಲ್ಲಿ ಅವರು ಹಿರಿಯ ಸಾಹಿತಿಗಳ ಬಗ್ಗೆ ದೇವುಡು ಮಾಸ್ತಿ, ರಾಜರತ್ನಂ, ಬೇಂದ್ರೆ, ಪು.ತಿ.ನ., ಶಿವರಾಮಕಾರಂತರ ಬಗ್ಗೆ ಬರೆಯುತ್ತಿದ್ದು ಓದುಗರಿಗೆ ಮೆಲುಕು ಹಾಕುವ ಹಾಗೆ ಮಾಡುತ್ತಿದ್ದರು.

ಇವರ ಶಿಷ್ಯಕೋಟಿ ಎಷ್ಟು ಅಂತ ಎಣಿಸಲಾರೆವು. ಆದರೆ ಇವರು ಮಾಡಿರುವ ಸೇವೆ ಬೂದಿ ಮುಚ್ಚಿದ ಕೆಂಡದಂತೆ ಪ್ರಸಾರವಾಗಿ ಅಜಾತ ಶತ್ರುವಾಗಿ ಉಳಿದಿದ್ದಾರೆ. ಸಾಹಿತ್ಯ ಲೋಕದಲ್ಲಿ ಇವರ ಬಗ್ಗೆ ಗಾಢವಾಗಿ ವಿಚಾರಮಾಡಿದಾಗ ನಮ್ಮ ಅನಿಸಿಕೆ 'ಆಡುಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಸಾಹಿತ್ಯಾನ್ವೇಷಣೆ ಮಾಡಿರುವುದು ಅಕ್ಷರಶಃ ಸತ್ಯ. ಜಾನಕಮ್ಮನವರ ಪುತ್ರರತ್ನನಿಗೆ ಜಯನಗರದ ಜನತೆ ಕನ್ನಡ ಸಾಹಿತ್ಯಸೇವೆ ನಿರಂತರವಾಗಿ ನೂರು ವರುಷಗಳ ಕಾಲ ಪಸರಿಸಲೆಂದು ದೀರ್ಘಾಯಸ್ಸು ಒದಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

****

ಮಾತೆಂಬ ಮಾಣಿಕ್ಯದ ಒಡೆಯ

ಡಾ. ಟಿ. ವಿ. ರಾಜು
ಚರವಾಣಿ : ೯೮೮೦೧೧೪೪೪೪೬

ಪ್ರೊ. ಜಿ. ಅಶ್ವತ್ಥನಾರಾಯಣ ಜಿ. ಸಾಹಿತ್ಯ ವಲಯದಲ್ಲಿ 'ಅನಾಜಿ' ಎಂದೇ ಪ್ರಖ್ಯಾತರು. ಇವರನ್ನು ಕಂಡಾಗಲೆಲ್ಲ ನನಗೆ ತಟ್ಟನೆ ಸರ್ವಜ್ಞನ ವಚನದ "ವಿದ್ಯೆಯುಳ್ಳವನ ಮುಖವು ಮುದ್ದು ಬರುವಂತಿಕ್ಕು" ಎಂಬ ಸಾಲು ನೆನಪಾಗುತ್ತದೆ. ಅವರೊಡನೆ ಮಾತನಾಡುತ್ತಿದ್ದರೆ "ಮಾತು ಬಲ್ಲಾತಂಗೆ ಮಾತೊಂದು ಮಾಣಿಕ್ಯವು" ಎಂಬ ಸತ್ಯದ ಸಾಕ್ಷಾತ್ಕಾರವಾಗುತ್ತದೆ. ಅವರ ಪ್ರಾಸಬದ್ಧವಾದ ಮಾತು, ಎದುರಿಗಿರುವವರನ್ನು ಆಕರ್ಷಿಸಿ ನಗೆಗಡಲಲ್ಲಿ ತೇಲಿಸುವ ರೀತಿ ಎಲ್ಲವೂ ಮಾತಿನ ಮೋಡಿಯಿಂದ ಎಂಬುದು ಅರಿವಾಗುತ್ತದೆ. ಇದರ ಮೂಲಚೂಲವನ್ನು ಅನ್ವೇಷಿಸಿದಾಗ ನನಗೆ ಸರ್ವಜ್ಞನ ವಚನ ನೆನಪಾಗುತ್ತದೆ :

"ಸರ್ವಜ್ಞನೆಂಬುವನು ಗರ್ವದಿಂದಾವನೆ
ಸರ್ವರೊಳೊಂದೊಂದು ನುಡಿಗಲಿತು ವಿದ್ಯದ
ಪರ್ವತವೆ ಆದ ಸರ್ವಜ್ಞ ॥"

ಹೀಗೆ ವಿದ್ಯೆಯ ಪರ್ವತವಾದುದು ನಿರಂತರ ಅಧ್ಯಯನ, ಸಾಹಿತಿಗಳ ಒಡನಾಟದಿಂದ. ಅವರಿಗೆ ಕುವೆಂಪು, ಮಾಸ್ತಿ, ಬೇಂದ್ರೆ, ಅನಕೃ ಅಂತಹ ಧೀಮಂತ ದಿಗ್ಗಜರಿಂದ ಆರಂಭಗೊಂಡು ಇಂದಿನ ಕಿರಿಯ ವಿದ್ಯಾರ್ಥಿಗಳೊಡನೆಯ ಇರುವ ಬಾಂಧವ್ಯವು ಹುಬ್ಬೇರಿಸುವಂಥಹುದು. ಒಬ್ಬ ಮುಸ್ಲಿಂ ವಿದ್ಯಾರ್ಥಿ ದಾಸಸಾಹಿತ್ಯದಲ್ಲಿ ಎಂ.ಫಿಲ್. ಮಾಡುವಂತಾದುದನ್ನು ಕಂಡಾಗ ಅವರ ಬೋಧನೆಯ ಪ್ರಭಾವದ ಅರಿವಾಗುತ್ತದೆ. ಅಂದರೆ, ಜಾತಿ, ಮತ, ಪಂಥಗಳನ್ನು ಮೀರಿ ಎತ್ತರವಾಗಿ ಬೆಳೆದಿರುವವರು ಅನಾಜಿ. ಇವರು ನಮ್ಮ ಅನಾಜಿ ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

ನಾನು ಆರ್.ವಿ.ಎಂ.ನ ನಿರ್ದೇಶಕನಾಗಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ನಿರ್ಮಾಣ, ಮಾನವೀಯ ಮೌಲ್ಯ, ಧಾರ್ಮಿಕ, ಸಾಂಸ್ಕೃತಿ, ದೈವಿಕ ಮೌಲ್ಯಗಳನ್ನು ತಿಳಿಸಲು ಕೃತಿಗಳನ್ನು ಪ್ರಕಟಿಸಬೇಕೆಂಬ ಆಲೋಚನೆಯು ಮೂಡಿ 'ಸಿಂಚನ' ಎಂಬ ಕನ್ನಡ ವೇದಿಕೆಯನ್ನು ೨೦೦೫ ರಲ್ಲಿ ಪ್ರೊ. ಜಿ. ಶ್ರೀನಿವಾಸ ರಾಜು ಅವರ ನೇತೃತ್ವದಲ್ಲಿ ಆರಂಭಿಸಿ ಮೊದಲು ಮಾನವನಾಗು, ಸಾಂಸ್ಕೃತಿಕ ಅನುಸಂಧಾನ, ಸಂತೃಪ್ತ ಬಾಳಿನ ಮಾರ್ಗದರ್ಶಿ, ಸಿರಿಗನ್ನಡ ಸರಳ ಭಗವದ್ಗೀತೆ, ೨೫ ಏಕಾಂಕಗಳು ಎಂಬ ಕೃತಿಗಳನ್ನು ಪ್ರಕಟಿಸಿದೆವು. ಅಷ್ಟರಲ್ಲಿ ವಿಧಿಯಾಟವೇ ಬೇರೆಯಾದಂತೆ ಪ್ರೊ॥ ಜಿ. ಶ್ರೀನಿವಾಸರಾಜು ಅವರು ಕಾಲನ ಕಡೆಗೆ ಓಗೊಟ್ಟು ನಮ್ಮನ್ನಗಲಿದರು. ನನಗೆ ಮುಂದೇನು

ಮಾಡಬೇಕೆಂಬ ಯೋಚನೆಯಾಯಿತು. ಆಗ ಕನ್ನಡ ಅಧ್ಯಾಪಕರಾದ ಪ್ರೊ॥ ಎಸ್. ಬಿಳಿಗಿರಿವಾಸನ್ ಅವರನ್ನು "ಸಿಂಚನ"ವನ್ನು ಮುನ್ನಡೆಸಲು ಹೇಳಿದಾಗ, ಅವರು ಪ್ರೊ. ಜಿ. ಅಶ್ವತ್ಥನಾರಾಯಣರ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿ, ಅವರ ನೇತೃತ್ವದಲ್ಲಿ 'ಸಿಂಚನ'ವನ್ನು ಮುನ್ನಡೆಸಬಹುದೆಂದು ತಿಳಿಸಿದರು. ಅದನ್ನು ಅನಾಜಿಯವರಲ್ಲಿ ಪ್ರಸ್ತಾಪಿಸಿದಾಗ, ಅವರು ಕನ್ನಡದ ಕಾರ್ಯಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಸೂಚಿಸಿದರು. ಅನಂತರ "ಸಿಂಚನ"ದ ಸಂಪಾದಕರಾಗಿ ಅದರ ಮೂಲಕ ಸುಮಾರು ಮೂವತ್ತು ಕೃತಿಗಳು ಪ್ರಕಟವಾಗಲು ಕಾರಣಕರ್ತರಾಗಿದ್ದಾರೆ. ನಾನು ವೃತ್ತಿಯಿಂದ ನಿವೃತ್ತಿ ಹೊಂದಿದ ನಂತರವೂ ಅನಾಜಿ ಹಾಗೂ ನನ್ನ ಸ್ನೇಹಸಂಬಂಧ ಅವಿರತವಾಗಿ ಮುನ್ನಡೆಯುತ್ತಿದೆ. ಅವರ ಮುಂದಾಳತ್ವದಲ್ಲಿ "ಪಾಂಡುಸ್ಮೃತಿ ಗ್ರಂಥಮಾಲೆ"ಯಲ್ಲಿ ನೂರು ಕೃತಿಗಳನ್ನು ಪ್ರಕಟಿಸುವ ಯೋಜನೆಯ ಅಂಗವಾಗಿ ಅನಾಜಿಯವರ ಸಾರಥ್ಯದಲ್ಲಿಯೇ ಉಳಿದ ಕೃತಿಗಳನ್ನು ಪ್ರಕಟಿಸಲಾಗುತ್ತದೆ.

ಇಂತಹ ಅನಾಜಿಯವರು ಆದರ್ಶ ಕನ್ನಡ ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ, ಸದಾ ಕನ್ನಡ ಕೈಂಕರ್ಯಕ್ಕೆ ಸಹಾಯಕರಾಗಿ ಯುವ ಸಾಹಿತಿಗಳಿಗೆ ಮಾರ್ಗದರ್ಶಕರಾಗಿ, ಅಪ್ರತಿಮ ಜ್ಞಾನಿಗಳಾಗಿ, ಸರಳಸಜ್ಜನ ಪರೋಪಕಾರಿಗಳಾಗಿ, ಹಸನ್ಮುಖಿಗಳಾಗಿ, ಸಮಾಜಪ್ರೀತಿಯುಳ್ಳವರಾಗಿದ್ದಾರೆ. ಅವರ ಕಾರ್ಯತತ್ಪರತೆ, ಶಿಸ್ತು, ವಿಮರ್ಶಾತ್ಮಕ ಚಿಂತನೆ, ಅವರ ಅಚ್ಚುಕಟ್ಟುತನ, ಪುಸ್ತಕ ಪ್ರಿಯತೆ ಅನುಕರಣೀಯ. ಅವರೊಂದಿಗೆ ಪ್ರಯಾಣ ಮಾಡಿದಾಗ ಅವರು ನೀಡುವ ಸ್ಥಳದ ಮಾಹಿತಿ, ದೇವಾಲಯಗಳ ಇತಿಹಾಸ, ಶಾಸನಗಳು, ಸಾಹಿತ್ಯಕೃತಿಗಳ ಮಾಹಿತಿಗಳು ಮಹತ್ತ್ವದ್ದಾಗಿವೆ. ಸಾಹಿತಿಗಳೊಂದಿಗಿನ ಅವರ ಒಡನಾಟಗಳ ರಸಪ್ರಸಂಗಗಳು ಕರ್ಣಾಮೃತವಾಗಿರುತ್ತದೆ.

ಅವರ ಪುಸ್ತಕ ಪ್ರಿಯತೆ ಅಪ್ರತಿಮವಾದುದು. ಜ್ಞಾನದ ಎಲ್ಲಾ ಶಾಖೆಗಳ ಕೃತಿಗಳನ್ನು ಸಂಗ್ರಹಿಸಿ ಸಹಸ್ರಾರು ಸಂಖ್ಯೆಯ ಕೃತಿಗಳ ಪುಸ್ತಕಾಲಯವನ್ನು ನಿರ್ಮಿಸಿದ್ದಾರೆ. ಸಾಹಿತ್ಯ ವಲಯದಲ್ಲಿ ಅವರ ಗ್ರಂಥ ಸಂಗ್ರಹವನ್ನು ಕುರಿತು ಮಾತೊಂದು ಪ್ರಚಲಿತವಾಗಿದೆ.

"ಅನಾಜಿಯವರಲ್ಲಿಲ್ಲದ ಕೃತಿಯಿಲ್ಲ. ಅವರಲ್ಲಿಲ್ಲದ ಕೃತಿ ಎಲ್ಲಿಯೂ ಇಲ್ಲ" ಎಂಬ ನಾಣ್ಣುಡಿ-ಯಾಗಿದೆ.

ಇಂತಹ ನನ್ನ ಪ್ರೀತಿಯ ಹಿರಿಯರಾದ ಅನಾಜಿಯವರು ಕನ್ನಡ ಕಿಂಕರರಾಗಿ, ನೂರ್ಕಾಲ ಬಾಳಿ ಕನ್ನಡವನ್ನು ಕನ್ನಡ ಸಾಹಿತ್ಯವನ್ನೂ ಬೆಳೆಸಿ ಉಳಿಸಲೆಂದು ಹಾರೈಸುತ್ತೇನೆ.

****

ನಡೆದಾಡುವ ಜ್ಞಾನಭಂಡಾರ

ಎಂ. ಕೆ. ಬದರೀನಾಥ್
ಚರವಾಣಿ : ೮೮೬೧೮೩೦೬೧೮

ಇವರನ್ನು ನಾನು ಸುಮಾರು ನಾಲ್ಕೈದು ದಶಕಗಳಿಂದ ಬಲ್ಲೆ. ಇವರು ಸರ್ಕಾರಿ ಡಿಗ್ರಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ನಮ್ಮ ಮನೆಯ ಸನಿಹದಲ್ಲೇ ವಾಸಿಸುತ್ತಿದ್ದಾರೆ. ಇವರಿಗೆ ಈಗ ಎಂಬತ್ತೇಳರ ಹರಯ. ಆದರೆ ಇವರ ಚಟುವಟಿಕೆ ನೋಡಿದರೆ, ಇವರಿಗೆ ಇನ್ನೂ ಅರವತ್ತು ವಯಸ್ಸಿರಬಹುದು ಅನ್ನಿಸುವುದು ಖಚಿತ.

ಇವರು ಬೆಂಗಳೂರಿನಲ್ಲಿಯೇ ಜನಿಸಿ, ಇಲ್ಲಿಯೇ ಶಿಕ್ಷಣ ಪಡೆದವರು. ಇವರು ಎಂ.ಎ. ಕನ್ನಡ, ಎಂಎ. ಸಮಾಜಶಾಸ್ತ್ರ, ಶಾಸನಶಾಸ್ತ್ರ ಡಿಪ್ಲೊಮಾ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ ಪದವಿಗಳನ್ನು ಪಡೆದಿದ್ದಾರೆ. ಇವರ ಪದವಿಗಳತ್ತ ಒಮ್ಮೆ ಕಣ್ಣು ಹಾಯಿಸಿದರೆ, ಎಂ.ಎ. ಕನ್ನಡ, ಎಂ.ಎ. ಸಮಾಜಶಾಸ್ತ್ರ, ಎಂ.ಎ. 'ಶಾಸನಶಾಸ್ತ್ರ, ಎಲ್ಲಿ, ಮೆಕ್ಯಾನಿಕಲ್ ಎಂಜಿನಿಯರಿಂಗ್ ಡಿಪ್ಲೊಮಾ ಎಲ್ಲಿ' ಎಂದು ಆಶ್ಚರ್ಯವಾಗುತ್ತದೆ! ಮಾಮರವೆಲ್ಲೋ ಕೋಗಿಲೆಯಲ್ಲೋ ಎಂಬ ಚಿತ್ರಗೀತೆ ನೆನಪಾಗುತ್ತದೆ!

ಇವರು ಸರ್ಕಾರಿ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಅಗೊಮ್ಮೆ ಈಗೊಮ್ಮೆ ಕಾಣಿಸುತ್ತಿದ್ದರು. ನನ್ನ ಸಹೋದರನ ಸ್ನೇಹಿತರಾದುದರಿಂದ ನಮ್ಮ ಮನೆಗೆ ಸಾಹಿತ್ಯಕ ಸಂಬಂಧಿತ ವಿಷಯಗಳನ್ನು ಚರ್ಚಿಸಲು ಬರುತ್ತಿದ್ದರು. ಇವರು ಸರ್ಕಾರಿ ಸೇವೆಯಿಂದ ನಿವೃತ್ತರಾದ ನಂತರ, ಈಚಿನ ಕೆಲ ವರ್ಷಗಳನ್ನು ಬಿಟ್ಟರೆ, ಪ್ರತಿನಿತ್ಯವೂ ಕಾಣಿಸುತ್ತಿದ್ದರು.

ಅಷ್ಟೇನೂ ಎತ್ತರವಲ್ಲದ, ಸದೃಢವಾದ, ಸಾಹಿತಿಗಳ ಬಹುಕಾಲದ ಒಡನಾಡಿಯಾದ ಹೆಗಲು ಚೀಲವನ್ನು ನೇತು ಹಾಕಿಕೊಂಡ ಮಹನೀಯರೊಬ್ಬರು ಕಾಣಿಸಿದರೆ, ಹೌದು ಅವರೇ ಅನಾಜಿ ಎಂಬ ಕಾವ್ಯ ನಾಮ ಇಟ್ಟುಕೊಂಡಿರುವ ಪ್ರೊಫೆಸರ್ ಜಿ.ಅಶ್ವತ್ಥನಾರಾಯಣ! ಇವರು ಹೆಗಲಿಗೆ ಚೀಲ ನೇತುಹಾಕಿಕೊಂಡಿರುವುದು, ಮನೆಗೆ ಯಾವುದೋ ಸಾಮಾನು-ಸರಂಜಾಮು ತರಕಾರಿ ಇತ್ಯಾದಿ ತರಲು ಅಲ್ಲ. ಅದರ ಒಳಗೆ ಯಾವುದಾದರೂ ಪುಸ್ತಕ ಅಥವಾ ಸಾಹಿತ್ಯಕ್ಕೆ ಸಂಬಂಧಿಸಿದ ವಸ್ತುಗಳು ಇರುತ್ತಿದ್ದವು. ಇವುಗಳೆಲ್ಲಾ ನನಗೆ ಅನುಭವ ವೇದ್ಯ, ನಿವೃತ್ತಿಗೆ ಮೊದಲು ನನಗೆ ಆಗೊಮ್ಮೆ ಈಗೊಮ್ಮೆ ದರ್ಶನ ಭಾಗ್ಯ ಕರುಣಿಸುತ್ತಿದ್ದ ಶ್ರೀಯುತರು, ನಿವೃತ್ತಿಯ ನಂತರ ಹೆಚ್ಚು ಕಡಿಮೆ ಪ್ರತಿದಿನ, ಬೆಳಿಗ್ಗೆ, ಮಧ್ಯಾಹ್ನ ಅಥವಾ ಸಂಜೆ ಕಾಣಸಿಗುತ್ತಿದ್ದರು. ಬಹುತೇಕ ಅವರು ಹೊರಗೆ ಹೋಗುತ್ತಿದ್ದುದು ಸಾಹಿತ್ಯದ, ಕನ್ನಡದ ಕೆಲಸಕ್ಕಾಗಿ, ಅಂದಿನಿಂದ ಇಂದಿನವರೆಗೂ ಕನ್ನಡವೇ ಅವರ ಉಸಿರು.

ಶ್ರೀ ಅಶ್ವತ್ಥನಾರಾಯಣ ಅವರು ನಮ್ಮ ಕುಟುಂಬದ ಹತ್ತಿರದ ಸ್ನೇಹಿತರು. ಬಹಳ ಕಾಲದಿಂದ ನಮ್ಮ ಮನೆಯ ಪಕ್ಕದ ರಸ್ತೆಯಲ್ಲೇ ವಾಸವಾಗಿರುವುದರಿಂದ, ನಮ್ಮ ಮನೆಯ ಎಲ್ಲರಿಗೂ ಪರಿಚಿತರು. ತುಂಬ ಸರಳ ವ್ಯಕ್ತಿ; ನಿಗರ್ವಿ, ನನ್ನ ದಿವಂಗತ ಹಿರಿಯ ಸಹೋದರ ಹಾಸ್ಯ ಸಾಹಿತಿಯಾಗಿದ್ದು, ಶ್ರೀ ಅನಾಜಿ ಅವರ ಜೊತೆ ನಿಕಟ ಸಂಬಂಧ ಹೊಂದಿದ್ದರು. ಶ್ರೀ ಅನಾಜಿಯವರನ್ನು ಸಂದರ್ಶಿಸಿ

ನನ್ನ ಹಿರಿಯ ಸಹೋದರ ತುಷಾರ ಮಾಸಪತ್ರಿಕೆಯಲ್ಲಿ ಒಂದು ಲೇಖನ ಸಹ ಬರೆದಿದ್ದ. ನನಗೆ ಸಾಹಿತ್ಯಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿದ್ದರೆ ಅಥವಾ ಪುಸ್ತಕಗಳ ಕರ್ತೃಗಳ ಹೆಸರು ಮರೆತಿದ್ದರೆ, ಶ್ರೀಯುತ ಅನಾಜಿಯವರನ್ನೇ ಸಂಪರ್ಕಿಸುತ್ತಿದ್ದೆ. ತತ್‌ಕ್ಷಣವೇ ಸಂದೇಹ ಪರಿಹಾರವಾಗುತ್ತಿತ್ತು. ಅವರ ಅದ್ಭುತ ಜ್ಞಾಪಕ ಶಕ್ತಿ, ಪಾಂಡಿತ್ಯ ಕಂಡು ನಾನು ಬೆರಗಾಗುತ್ತಿದ್ದೆ. ಅವರು, ನಾನು ವಾಕ್ ಮಾಡುವ ಪಾರ್ಕ್ನಲ್ಲೇ ವಾಕ್ ಮಾಡುತ್ತಿದ್ದರು. ಕೆಲವೊಮ್ಮೆ ಭೇಟಿಯಾದಾಗ, ಸಾಹಿತ್ಯ ಸಂಬಂಧಿತ ಒಂದಲ್ಲ ಒಂದು ವಿಷಯವನ್ನು ರಸವತ್ತಾಗಿ ಹೇಳುತ್ತಿದ್ದರು. ಆ ಕ್ಷಣಗಳು ನಿಜಕ್ಕೂ ಸ್ಮರಣೀಯ. ಶ್ರೀ ಅಶ್ವತ್ಥನಾರಾಯಣ ಎಲೆ ಮರೆಯ ಕಾಯಿಯಂತಿದ್ದು, ಅನೇಕ ಸಂಶೋಧನಾತ್ಮಕ ಲೇಖನಗಳನ್ನು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಪ್ರೊಫೆಸರ್ ಅಶ್ವತ್ಥನಾರಾಯಣ ಓರ್ವ ಅದ್ಭುತ ವಾಗ್ಮಿ. ಒಮ್ಮೆ ಕವಿ ನಿಸಾರ್ ಅಹ್ಮದ್ ಅವರಿಗೆ ನಮ್ಮ ಕನ್ನಡಸಂಘವೊಂದು ಸನ್ಮಾನಿಸಿದಾಗ, ಶ್ರೀ ನಿಸಾರ್ ಅವರನ್ನು ಕುರಿತು ಅನಾಜಿ ಮಾತನಾಡಿದರು. ನೆರೆದಿದ್ದ ಎಲ್ಲರೂ ಅವರ ಭಾಷಣವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು. ಅವರ ಪತ್ನಿ ಸಹ ಬೆಂಗಳೂರಿನ ಆಚಾರ್ಯ ಪಾಠಶಾಲೆಯಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರು ಅನೇಕ ಸಂಶೋಧನಾತ್ಮಕ ಲೇಖನಗಳನ್ನು ಬರೆದಿರುವುದಲ್ಲದೇ, ಕೆಲ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಆ ಪೈಕಿ ಪ್ರಮುಖವಾದುದೆಂದರೆ, ಕನ್ನಡದ ಮೊದಲ ಹರಿದಾಸಿ ಎಂದು ಖ್ಯಾತರಾದ 'ಗಲಗಲಿ ಅವ್ವ' ಕೃತಿ ಒಂದಾಗಿದೆ.

ಆದರೆ ಅಶ್ವತ್ಥನಾರಾಯಣ ಅವರ ಸಾಧನೆಗಳನ್ನು ನೋಡಿದರೆ, ಇಷ್ಟೆಲ್ಲಾ ಓರ್ವ ವ್ಯಕ್ತಿಯಿಂದ ಸಾಧ್ಯವೇ ಎಂಬ ಪ್ರಶ್ನೆ ಮೂಡುತ್ತದೆ. ಆದರೆ ಅದನ್ನು ಸಾಧ್ಯವಾಗಿಸಿರುವವರು ಶ್ರೀ ಅನಾಜಿ, ಕನ್ನಡ ಸಾಹಿತ್ಯ ಲೋಕದಲ್ಲಿ ಇವರಷ್ಟೇ ಪಾಂಡಿತ್ಯವಿರುವ ಇನ್ನೋರ್ವ ಮಹನೀಯರು ಇರಬಹುದು. ಆದರೆ ನನ್ನ ದೃಷ್ಟಿಯಲ್ಲಿ ಇವರಷ್ಟು ಸಾಧಿಸಿರುವವರು ಇಲ್ಲವೇ ಇಲ್ಲ ಎಂದರೂ ಅಚ್ಚರಿ ಇಲ್ಲ. ಅವರನ್ನು ಕುರಿತು ಅಭಿನಂದನಾ ಗ್ರಂಥ ತರುತ್ತಿರುವುದು ಸಂತೋಷದ ವಿಷಯ. ಸಾಧನೆಗಳ ಪಟ್ಟಿಯನ್ನು ಕೆಳಗೆ ಕೊಟ್ಟಿದ್ದೇನೆ. ಪರಾಮರ್ಶಿಸಿ.

ಶಬ್ದಕೋಶ: ಭಗವದ್ಗೀತಾ ಶಬ್ದಕೋಶ, ಬುಕ್ಕಾಂಬುಧಿ ಪ್ರಾದೇಶಿಕ ಶಬ್ದಕೋಶ.

ಸ್ವತಂತ್ರ ಗ್ರಂಥ ರಚನೆ: ಪರಿಷತ್ತು –೧೦೦, ಕನ್ನಡ ಸಾಹಿತ್ಯ ಮತ್ತು ಕರಡು ತಿದ್ದುವಿಕೆ, ಕನ್ನಡ ಸಾಹಿತ್ಯ ದಿಗ್ಗಜರು, ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು, ಬಿ.ಎಂ.ಶ್ರೀ. ಪರಿಚಯ, ದೇವುಡು ನರಸಿಂಹ ಶಾಸ್ತ್ರಿ, ಫ.ಗು.ಹಳಕಟ್ಟಿ, ಹು.ಮ. ರಾಮಾರಾಧ್ಯ, ಉತ್ತಮ ಕ್ಷಮಾ, ವ್ಯಾವಹಾರಿಕ ಕನ್ನಡ, ಹೊಸಕೆರೆ ಚಿದಂಬರಯ್ಯನವರು ಇತ್ಯಾದಿ, ನನಗೆ ಸವಿ ನೆನಪುಗಳು–ನಿಮಗೆ ರಸ ಪ್ರಸಂಗಗಳು, ಗಿಡ ಮರ ಬಳ್ಳಿಗಳ ನೀತಿ ಕಥೆಗಳು.

ಸಹ ಸಂಪಾದಕತ್ವ: ಆರ್.ವಿ.ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್‌ನ ಸಿಂಚನ ಕನ್ನಡ ವೇದಿಕೆಯಡಿಯಲ್ಲಿ ಡಿ.ಎ. ಪಾಂಡು ಸ್ಮೃತಿ ಗ್ರಂಥಮಾಲೆಯ ೩೧ ಕೃತಿಗಳು, ರಾಸದರ್ಶನ, ನಿಟ್ಟೂರು ಶ್ರೀನಿವಾಸರಾಯರ ಆತ್ಮಕಥೆ ಇತ್ಯಾದಿ.

ಈಗ ಹೇಳಿ, ಈ ಪ್ರಮಾಣದ ಸಾಧನೆಗಳನ್ನು ಮಾಡಿರುವ ಮತ್ತೊಬ್ಬ ಮಹನೀಯರು ಕನ್ನಡದಲ್ಲಿ ಇದ್ದಾರೆಂದು ನೀವು ಭಾವಿಸುತ್ತೀರಾ? ಇದ್ದರೂ ಬೆರಳಣಿಕೆಯಷ್ಟು ಮಾತ್ರ. ಇಷ್ಟಾಗಿಯೂ, ನನ್ನ ಅಭಿಪ್ರಾಯ ಏನೆಂದರೆ, 'ಕನ್ನಡಕ್ಕೊಬ್ಬನೇ ಅನಾಜಿ' (ಜಿ. ಅಶ್ವತ್ಥನಾರಾಯಣ).

ಈ ಶುಭ ಸಂದರ್ಭದಲ್ಲಿ ಹಿರಿಯರಾದ ಮತ್ತು ಗುರು ಸಮಾನರಾದ ಪ್ರೊಫೆಸರ್ ಜಿ. ಅಶ್ವತ್ಥನಾರಾಯಣ ಅವರಿಗೆ ಹಾರ್ದಿಕ ಶುಭಾಶಯಗಳು ಹಾಗೂ ಪ್ರಣಾಮಗಳು.

******

"ಕನ್ನಡ ವೃಕ್ಷ"

ರಾಣಿ ಗೋವಿಂದರಾಜು
ಚರವಾಣಿ : ೯೮೮೬೯೦೩೨೦೧

ಪ್ರೊ॥ ಜಿ. ಅಶ್ವತ್ಥನಾರಾಯಣರವರು ವಿದ್ಯಾಧಿದೇವತೆ ಶಾರದಾಮಾತೆಯ ಅನುಗ್ರಹಕ್ಕೆ ಪಾತ್ರರಾದ ಬಹುಮುಖ ಪ್ರತಿಭಾನ್ವಿತರು. ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆಯ ಅನೇಕ ಡಿಗ್ರಿ ಕಾಲೇಜುಗಳಲ್ಲಿ ಮೂರು ದಶಕಗಳ ಕಾಲ ಕನ್ನಡ ಬೋಧಕರಾಗಿ -ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಸಾಸಿರ-ಸಾಸಿರ ವಿದ್ಯಾರ್ಥಿಗಳಿಗೆ ನಲ್ಮೆಯ ಜನಪ್ರಿಯ ಮಾಸ್ತರರಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿ ಶಿಕ್ಷಣಕ್ಕೆ ಮಾರ್ಗದರ್ಶನ ನೀಡಿದ್ದಾರೆ. ಅಷ್ಟು ಸಾಲದೆಂಬಂತೆ ಐ.ಎ.ಎಸ್, ಕೆ.ಎ.ಎಸ್. ತರಗತಿಗಳಿಗೆ ಕನ್ನಡ ಭಾಷೆಯಲ್ಲಿ ಪರೀಕ್ಷೆಗಳನ್ನು ಬರೆದು ಅವರ ಶಿಷ್ಯಂದಿರು ಈಗಾಗಲೇ ಅನೇಕ ಹಿರಿಯ ಅಧಿಕಾರಿಗಳಾಗಿ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿ. ದೇವುಡು ನರಸಿಂಹಶಾಸ್ತ್ರಿ ಪ್ರತಿಷ್ಠಾನದ ಸಂಸ್ಥಾಪಕರಾಗಿ, ಕರ್ನಾಟಕ ಗಾನಕಲಾ ಪರಿಷತ್ತು, ಕರ್ನಾಟಕ ಗಮಕಕಲಾ ಪರಿಷತ್ತಿನ ಸ್ಥಾಪಕ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ ಸ್ತುತ್ಯಾರ್ಹವಾದ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

೧೯೮೦ ರ ದಶಕದಲ್ಲಿ ಬೆಂಗಳೂರಿನ ಕೇಂದ್ರ ಭಾಗದಲ್ಲಿರುವ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಪಿ.ಯು.ಸಿ. ಮತ್ತು ಬಿ.ಎ. ಪದವಿಯಲ್ಲಿ ಓದುತ್ತಿದ್ದ ಸಂದರ್ಭದಲ್ಲಿ ನಾನು ಐಚ್ಛಿಕ ಕನ್ನಡ ವಿಷಯದ ವಿದ್ಯಾರ್ಥಿನಿಯಾಗಿದ್ದಾಗ ಪ್ರೊ. ಅ.ರಾ. ಮಿತ್ರ, ಡಾ. ಕಮಲಾಹಂಪನಾ, ಯು.ಆರ್. ಲಲಿತಾ, ಪುಷ್ಪಲತಾ ಶೆಟ್ಟಿ, ಪ್ರೇಮಲತಾ, ಶೈಲಜಾ ಉಡುಚಣ ಹಾಗೂ ಪ್ರೊ. ಜಿ. ಅಶ್ವತ್ಥನಾರಾಯಣ ಮಾಸ್ತರರೆಲ್ಲರೂ ನನ್ನ ಅಚ್ಚುಮೆಚ್ಚಿನ ಗುರುಗಳಾಗಿದ್ದರು. ಆ ಸಂದರ್ಭದಲ್ಲಿ 'ಅಶ್ವತ್ಥಾಮ' ನಾಟಕ ಪಾಠ ತೆಗೆದುಕೊಳ್ಳುತ್ತಿದ್ದರು. ಒಮ್ಮೆ ನಮ್ಮ ತರಗತಿಗೆ ಬಂದಾಗ ನನ್ನ ಗೆಳತಿಯರು ಸೇರಿ 'ಗುರುಪುತ್ರ ಅಶ್ವತ್ಥಾಮ' ನಾಟಕ ಮಾಡಲು ಅಶ್ವತ್ಥನಾರಾಯಣರು ಬಂದರು ಎಂಬುದಾಗಿ ಹಾಸ್ಯ ಮಾಡುತ್ತಿದ್ದುದು ನನ್ನ ನೆನಪಿನಂಗಳದಲ್ಲಿ ಇಂದಿಗೂ ಮಾಸದೆ ಉಳಿದಿವೆ.

ಕರ್ನಾಟಕ ರಾಜ್ಯದಾದ್ಯಂತ ಕನ್ನಡನಾಡು-ನುಡಿ, ನೆಲ-ಜಲ, ಸಾಹಿತ್ಯ-ಸಂಸ್ಕೃತಿ, ಇತಿಹಾಸ, ಪರಂಪರೆಗಳನ್ನು ಬಿಂಬಿಸುವ ಸಾವಿರಾರು ಉಪನ್ಯಾಸಗಳನ್ನು ನಿರಂತರವಾಗಿ ಕ್ರಿಯಾಶೀಲರಾಗಿ ನೀಡುತ್ತಾ ಬಂದಿದ್ದಾರೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಜೈನಸಾಹಿತ್ಯವನ್ನು ಒಳಗೊಂಡಂತೆ 'ರತ್ನಾಕರವರ್ಣಿಯ ಮೂರು ಶತಕಗಳು', 'ಕನ್ನಡ ಸಾಹಿತ್ಯ ದಿಗ್ಗಜರು', 'ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು', 'ಬಿ.ಎಂ. ಶ್ರೀಕಂಠಯ್ಯ', 'ದೇವುಡು ನರಸಿಂಹಶಾಸ್ತ್ರಿ', ವಚನ ಸಾಹಿತ್ಯದ ಪಿತಾಮಹ 'ಫ. ಗು. ಹಳಕಟ್ಟಿ', 'ವ್ಯಾವಹಾರಿಕ ಕನ್ನಡ', 'ಭಗವದ್ಗೀತಾ ಶಬ್ದಕೋಶ', 'ವರ್ಗೀಕೃತ ಕನ್ನಡ-ಇಂಗ್ಲಿಷ್ ಶಬ್ದಕೋಶ',

'ಗಾದೆಗಳು', ವಚನ ಸಾಹಿತ್ಯದ ಆದ್ಯವಚನಕಾರ 'ಜೇಡರ ದಾಸಿಮಯ್ಯನ ವಚನಗಳು' ಇತ್ಯಾದಿ ಕೃತಿಗಳನ್ನು ಸಂಪಾದಿಸಿದ್ದಾರೆ.

ಸಮಗ್ರಗ್ರಂಥ ಉಪನ್ಯಾಸ ಮಾಲಿಕೆಯಡಿಯಲ್ಲಿ ಆದಿಕವಿ ಪಂಪನ ಆದಿಪುರಾಣ, ಪಂಪಭಾರತ, ರಸಋಷಿ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ', ಲಕ್ಷ್ಮೀಶನ 'ಜೈಮಿನಿ ಭಾರತ', ರಾಘವಾಂಕನ 'ಹರಿಶ್ಚಂದ್ರ ಕಾವ್ಯ' 'ಸೋಮೇಶ್ವರ ಶತಕ', ಎಂ.ವಿ. ಸೀತಾರಾಮಯ್ಯನವರ ಸಮಗ್ರ ಜೀವನಚರಿತ್ರೆ ಅನುವಾದ, ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣಗಳು, ಸೌಂದರ್ಯ ಲಹರೀ ದೀಪಿಕೆ, ದಾಸಸಾಹಿತ್ಯ ಸೌರಭ, ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು, ವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು, ಕುಮಾರವ್ಯಾಸನ ಭೀಷ್ಮ ಪರ್ವ, ಅನುಭವಾಮೃತ ಟೀಕೆ, 'ಸೋಮೇಶ್ವರ ಶತಕದ ಟೀಕೆ', ಆಂಡಯ್ಯ ಕವಿಯಯ 'ಕಬ್ಬಿಗರ ಕಾವ' ಕೃತಿಯ ಟೀಕೆ, 'ಕನ್ನಡದ ಭಗವದ್ಗೀತೆ' ಎಂದು ಜನಪ್ರಿಯತೆ ಗಳಿಸಿರುವ ವಿದ್ಯಾರ್ಥಿಗಳಿಗಾಗಿ ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ದ ಪದ್ಯಗಳು ಹೀಗೆ ಹತ್ತು ಹಲವಾರು ಗ್ರಂಥಗಳ ರಚನೆ, ಸಂಪಾದಿತ ಕೃತಿಗಳು, ಸಹಸಂಪಾದಕತ್ವದ ಕೃತಿಗಳನ್ನು ಕನ್ನಡನಾಡಿಗೆ ಅನಾವರಣಗೊಳಿಸಿರುವ ಪ್ರೊ॥ ಜಿ. ಅಶ್ವತ್ಥನಾರಾಯಣ ಗುರುಗಳು "ಗುರುಗಳಿಗೆ ಗುರುಗಳಾಗಿರುವ" ಸಾಹಿತ್ಯಶ್ರೇಷ್ಠರೂ ಹೌದು ಅಪಾರ ಶಿಷ್ಯವೃಂದಕ್ಕೆ ವಿಶ್ವವಂದ್ಯರೂ ಆಗಿರುವುದು ನಮ್ಮೆಲ್ಲರ ಸುಕೃತ ಫಲ.

'ಟಿ.ವಿ. ವೆಂಕಟಾಚಲಶಾಸ್ತ್ರಿ ವಿದ್ವತ್ ಪ್ರಶಸ್ತಿ' ಪುರಸ್ಕೃತರೂ, ಬಿ.ಬಿ.ಎಂ.ಪಿ.ಯ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ', 'ಕರ್ನಾಟಕ ಸಾಹಿತ್ಯ ಅಕಾಡೆಮಿ' ಪ್ರಶಸ್ತಿ, 'ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿ', 'ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ', 'ಕುವೆಂಪು ಶ್ರೀ ಪ್ರಶಸ್ತಿ'- ಈ ರೀತಿಯಾಗಿ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿರುವ ಬೆಂಗಳೂರಿನ ಕನ್ನಡಿಗರು, ಸಾಹಿತಿಗಳು, ವಿದ್ವಾಂಸರು, ವಿದ್ಯಾರ್ಥಿಗಳಿಗೆ ಸಂಶೋಧಕರಾಗಿ ಮಾರ್ಗದರ್ಶನ ನೀಡುತ್ತಿರುವ, ಕನ್ನಡದ ಅಸ್ಮಿತೆಯನ್ನು ಎತ್ತಿ ಹಿಡಿದು ತಮ್ಮ ಜೀವಮಾನದ ಸಾಧನೆಯನ್ನು ಕನ್ನಡನಾಡು ನುಡಿಯ ಸೇವಾಧುರೀಣರಾಗಿ ಶ್ರಮಿಸುತ್ತಿರುವ ಕನ್ನಡ ಚಳವಳಿಯ ಧೀಮಂತನಾಯಕರಾದ ಅ. ನ. ಕೃಷ್ಣರಾಯರು, ಕನ್ನಡ ಸೇನಾನಿ ಮ. ರಾಮಮೂರ್ತಿಯಂತಹ ಕಾರ್ಯಕರ್ತರಲ್ಲಿ ಒಬ್ಬರಾಗಿರುವ 'ಕನ್ನಡ ಕುಲದೀಪಕ' ಅಶ್ವತ್ಥವೃಕ್ಷದ ಕನ್ನಡಪರ ಹೋರಾಟದ ಬಿಳಲು ಬೇರಿನ 'ಕನ್ನಡವೃಕ್ಷ' ಪ್ರೊ॥ ಜಿ. ಅಶ್ವತ್ಥನಾರಾಯಣ ಗುರುಗಳಿಗೆ 'ನಾಡೋಜ ಪ್ರಶಸ್ತಿ' ಲಭಿಸಲಿ ಎಂದು ನಮ್ಮ ಎಲ್ಲಾ ಸಾಹಿತ್ಯ ಮಿತ್ರವೃಂದ ಹಾಗೂ ಕನ್ನಡಾಭಿಮಾನಿಗಳ ಪರವಾಗಿ ಎಪ್ಪತ್ತು ವರ್ಷಗಳ ಅವಿರತ ಸಾಧನೆಗಾಗಿ ಭಗವಂತನು ಅವರಿಗೆ ಶತಾಯುಷಿಗಳಾಗಿ ಆಯಸ್ಸು-ಆರೋಗ್ಯ ವರ್ಧಿಸುವಂತಾಗಲಿ ಎಂದು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

****

ಕನ್ನಡ ಅದಮ್ಯಚೇತನ

ಎಂ.ಆರ್. ಸತ್ಯನಾರಾಯಣ
ಚರವಾಣಿ : ೯೨೪೩೪೧೨೫೮೫

ನಮ್ಮ ಮನೆ ಇದ್ದದ್ದು ತ್ಯಾಗರಾಜನಗರದ ೪ನೇ ಮುಖ್ಯರಸ್ತೆಯಲ್ಲಿ, ಅದೇ ರಸ್ತೆಯಲ್ಲೇ ನಮ್ಮ ಅಶ್ವತ್ಥನಾರಾಯಣ ಅವರು ನಮ್ಮ ಮನೆಯ ಮುಂದೆಯೇ ಪ್ರತಿದಿನ ಕಾಣಿಸುತ್ತಿದ್ದರು. ನಾನು ಸಹ ಅವರು ಹೋಗಿ ಬರುವುದನ್ನು ಗಮನಿಸುತ್ತಿದ್ದೆ. ಇದು ೭೦ರ ದಶಕದ ಮಾತು. ಅಗಲೂ ಸಹ ಅವರ ಎಡಬದಿಯಲ್ಲಿ ಒಂದು ಬ್ಯಾಗ್ ಇರುತ್ತಿತ್ತು. ಅದು ಈಗಲೂ ಅಂದರೆ ೮೭ರ ಹರೆಯದಲ್ಲೂ ಇದೆ. ನನ್ನ ತಂದೆ ಗಮಕಿ ರಾಘವೇಂದ್ರರಾಯರ ಸಂಪರ್ಕ ಪ್ರೊ. ಅವರಿಗಿತ್ತು. ಅತ್ಯುತ್ತಮ ಅಧ್ಯಾಪಕರಾಗಿದ್ದ ಅವರ ಸೇವೆ ಗಮಕ ಕಲಾ ಪರಿಷತ್ತಿಗೂ ವಿಸ್ತರಿಸಿತ್ತು. ಪ್ರೊ. ಅಶ್ವತ್ಥನಾರಾಯಣ ಕೇವಲ ಕನ್ನಡ ಪ್ರಾಧ್ಯಾಪಕರೇ ಅಲ್ಲ. ಅವರ ಕಾರ್ಯಕ್ಷೇತ್ರ ಬಹು ವಿಸ್ತಾರವಾದುದು. ಪದವಿ ವಿದ್ಯಾರ್ಥಿಗಳು ಇವರ ಪಾಠಕ್ಕೆ ಮಾರುಹೋಗಿದ್ದರು. ಪ್ರೊ. ಅನಾಜಿ ಅವರ ಮಾತು ಕೇವಲ ಮಾತಲ್ಲ. ಅದೊಂದು ಜೋಗದ ಜಲಪಾತದಂತೆ ಭೋರ್ಗರೆಯುವ ಕನ್ನಡ ಜಲಧಾರೆ. ಅವರ ವಾಗ್ವೈಭವವನ್ನು ನಾನು ಕಣ್ಣಾರೆ ಕಂಡು ಕೇಳಿ ಸುಖಿಸಿದ್ದೇನೆ. ಶ್ರೀಯುತರಿಗೆ ಲಕ್ಷ್ಮೀಶ, ಹರಿಶ್ಚಂದ್ರ, ಕುಮಾರವ್ಯಾಸ, ಕುಮಾರ ವಾಲ್ಮೀಕಿ ಅಚ್ಚುಮೆಚ್ಚು. ಯಾವುದೇ ಕಾವ್ಯಗಳ ಬಗ್ಗೆ ಅಧಿಕಾರಯುತ್ತವಾಗಿ 'ಇದಮಿತ್ಥಂ' ಎಂದು ಹೇಳುವ ಜಾಣ್ಮೆ ಅವರದು. ಮಾತು ಅಸ್ಖಲಿತ, ಅವಿರತ, ಜಲಧಾರೆಯಿದ್ದಂತೆ. ನಮ್ಮಲ್ಲಿ ಕವಿ, ವಾದಿ, ವಾಗ್ಮಿ, ಗಮಕಿ ಎನ್ನುವ ಪರಿಪಾಠವಿದೆ. ಇದರಲ್ಲಿ ಪ್ರೊ. ಅನಾಜಿ ಅವರು ಪ್ರಖರ ವಾಗ್ಮಿಗಳು. ಶ್ರೀಯುತರ ಕಾರ್ಯವ್ಯಾಪ್ತಿ ಬಹಳ ದೊಡ್ಡದು, ನೂರಾರು ಕನ್ನಡ ಶಿಬಿರಗಳನ್ನು ನಡೆಸಿದ್ದಾರೆ. ಎಂ.ಎ., ಪಿ.ಎಚ್.ಡಿ., ಕೆ.ಎ.ಎಸ್. ಐ.ಎ.ಎಸ್. ಅಲ್ಲದೆ ಅನೇಕ ಎಂ.ಫಿಲ್., ವಿದ್ಯಾರ್ಥಿಗಳಿಗೆ ಕನ್ನಡ ಪಾಠವನ್ನು ಬೋಧಿಸಿದ್ದಾರೆ. ದೂರದ ಅಮೆರಿಕಾದಲ್ಲಿದ್ದ ಕನ್ನಡ ಮಕ್ಕಳಿಗೆ ಆಸಕ್ತಿಯಿಂದ ಕನ್ನಡವನ್ನು ಕಲಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಗೌ॥ ಕಾರ್ಯದರ್ಶಿಗಳಾಗಿ ಆ ಸಂಸ್ಥೆಯ ಶತಮಾನದ ಇತಿಹಾಸವನ್ನು ಕೂಡ ಬರೆದಿದ್ದಾರೆ. ಕನ್ನಡಪರವಾದ ಯಾವುದೇ ಕೆಲಸಗಳಿಗೂ ಮುನ್ನುಗ್ಗುವ ಪ್ರವೃತ್ತಿ ಅವರದು. ಕರ್ನಾಟಕ ಗಾನ ಕಲಾ ಪರಿಷತ್ತು, ದೇವುಡು ಪ್ರತಿಷ್ಠಾನಗಳ ಸ್ಥಾಪಕರಾಗಿ ಕನ್ನಡ ಚಳುವಳಿಯ ಆರಂಭದ ದಿನಗಳಲ್ಲಿ ಕಾರ್ಯಕರ್ತರಾಗಿ ದುಡಿದಿದ್ದಾರೆ.

ಪ್ರೊ. ಅನಾಜಿ ಅವರ ಸಾಧನಾವಲೋಕನ ಮಾಡುವುದು ಸುಲಭವಲ್ಲ. ಅವುಗಳಲ್ಲಿ ಕೆಲವನ್ನಾದರೂ ಇಲ್ಲಿ ಪ್ರಸ್ತಾಪಿಸಲೇಬೇಕು. ನಮ್ಮ ತಂದೆಯವರ ಜತೆಗೆ ಪರಿಷತ್ತಿನ ಗಮಕ ಪರೀಕ್ಷೆಗಳ ಪಠ್ಯ ಯೋಜನೆ, ತರಗತಿಗಳ ವ್ಯವಸ್ಥಾಪಕತ್ವದ ಜವಾಬ್ದಾರಿ ಹೊತ್ತಿದ್ದವರು. ಕನ್ನಡ ಸಂಸ್ಕೃತಿ ಇಲಾಖೆಯ ಆಡಳಿತ ಕನ್ನಡ ಶಿಬಿರಗಳ ನಿರ್ದೇಶಕರಾಗಿದ್ದವರು. ಮಿಗಿಲಾಗಿ ಸಂಸ್ಕೃತಿ ಇಲಾಖೆಯ ಸಮಗ್ರ ದಾಸಸಾಹಿತ್ಯದ ೩೦ ಸಂಪುಟಗಳ ಪರಿಶೀಲನೆ ಮತ್ತು ಮುದ್ರಣ ಕಾರ್ಯದ ಸಂಚಾಲಕ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದು, ಜೈನ ಸಾಹಿತ್ಯ ಗ್ರಂಥ ಸಂಪಾದನೆ, ದಾಸಸಾಹಿತ್ಯ ವಚನಸಾಹಿತ್ಯ ಅಲ್ಲದೆ ಸ್ವತಂತ್ರವಾಗಿ, ಅನೇಕ ಉಪಯುಕ್ತ ಗ್ರಂಥಗಳನ್ನು ಶ್ರೀಯುತರು ರಚಿಸಿರುವುದು

ಶ್ಲಾಘನೀಯ. ಸುಮಾರು ಐದು ದಶಕಗಳಿಂದ ಪ್ರೊ. ಅವರ ಕಂಡಿರುವ ನಾನು ಆಕಾಶವಾಣಿಗೂ ಕೆಲವು ಕಾರ್ಯಕ್ರಮಗಳಿಗೂ ಕರೆದದ್ದು ನೆನಪಿದೆ. ರಾಜಶೇಖರ ವಿಳಾಸಂ ಕಾವ್ಯದಲ್ಲಿ ಒಂದು ಕಂದ ಪದ್ಯವಿದೆ.

ಆರಾರೇರರ್ ಶಾಸ್ತ್ರ ಶ್ರೀರೋಹಣಗಿರಿಯನಲ್ಲಿ ನವಕವಿತಾ ಚಿಂತಾರತ್ನಂ ದೊರೆಗುಮೆ ಮಾ
ರಾರಿಯ ಕೃಪೆಯಿಲ್ಲದಂಗೆ ಧರಣೀತಳದೊಳ್

ಅಶ್ವತ್ಥನಾರಾಯಣ ಅವರ ಕನ್ನಡದ ಶ್ರೀಮಂತ ವಾಙ್ಮಯ ಸಂಪತ್ತಿಗೆ ಮಣಿಯದ ಮಾನ್ಯರಿಲ್ಲ. ತಲೆವಾಗದ ವಾದಿಗಳಿಲ್ಲ. ನುತಿಗೈಯ್ಯದ ಕನ್ನಡದ ಕೇಳುಗರಿಲ್ಲ. ಕವಿತೆಯಲ್ಲಿ ಚಮತ್ಕಾರ ಕಂಡರೆ ನಮ್ಮ ಪ್ರೊಫೆಸರ್ ಅವರ ಮಾತಿನಲ್ಲಿ ಚಮತ್ಕಾರ ಕಾಣಬಹುದು. ಅವರ ವಾಗ್ಝರಿ ನನ್ನಂತಹ ಸಾಧಾರಣನಿಂದ ವರ್ಣಿಸಲು ಸಾಧ್ಯವಿಲ್ಲ. ಪ್ರೊ. ಅವರ ದೊಡ್ಡಗುಣ ಎಂದರೆ ವಿಶ್ವಾಸ, ಆತ್ಮೀಯತೆ. ಮತ್ತೊಂದು ಮೆಚ್ಚಲೇಬೇಕಾದ ವಿಷಯವೆಂದರೆ ಅವರಿಗೆ ಕೊಡುವುದುದಷ್ಟೇ ಗೊತ್ತು. ಪಡೆಯುವುದಲ್ಲ. ಇಷ್ಟೊಂದು ಅಪಾರ ಪ್ರಮಾಣದ ಕನ್ನಡ ಪರ ಕೆಲಸಗಳನ್ನು ಮಾಡಿದರೂ ಕಿಂಚಿತ್ತೂ ಯಾವುದನ್ನೂ ಅಪೇಕ್ಷೆಪಡದ ಸ್ವಾಭಿಮಾನಿ ಕನ್ನಡಿಗರು ಶ್ರೀ ಅಶ್ವತ್ಥನಾರಾಯಣ ಅವರು. ಅವರೊಬ್ಬ ಆರ್ಯ ಅಧ್ಯಾಪಕರು, ಆರ್ಯ ಮಾರ್ಗದರ್ಶಕರು. ಯಾರ ಊಹೆಗೂ ನಿಲುಕದವರು.

ಕೆಲವು ನೆನಪು: ನಾನು, ಹೊಂಬಾಳೆ ಫಲ್ಗುಣ, ಡಾ. ಎಂ.ಎಸ್. ಮೂರ್ತಿ ಕೆಲವು ವರ್ಷಗಳ ಹಿಂದೆ 'ಕವಿ–ದನಿ' ಎಂಬ ಹೊಸಬಗೆಯ ಕಾರ್ಯಕ್ರಮಗಳನ್ನು ಪ್ರತಿ ತಿಂಗಳು ನಯನ ಸಭಾಂಗಣದಲ್ಲಿ ಆಯೋಜಿಸುತ್ತಿದ್ದೆವು. ಕವಿಯಿಂದ ಕವಿತಾ ವಚನ, ಆ ಕವನದ ಗಾಯನ ಆಯಾಯ ಕಾವ್ಯಗಳ ಗಮಕ ವಾಚನ ಈ ಕಾರ್ಯಕ್ರಮದ ರೂಪುರೇಷೆ, ರಚಿಸಿ ನಮಗೆ ಸಹಕಾರ ನೀಡಿದವರು. ಪ್ರೊ. ಜಿ. ಅಶ್ವತ್ಥನಾರಾಯಣ ಅವರು. ಕವಿ–ದನಿ ಸರಣಿ ಕಾರ್ಯಕ್ರಮ ಅತ್ಯಂತ ಯಶಸ್ವಿಯಾದುದಲ್ಲದೆ ಆ ಹೆಸರಿನಲ್ಲೇ ಪುಸ್ತಕವು ಪ್ರಕಟಣೆಯಾಯಿತು. ಈ ಸರಣಿಯ ಯಶಸ್ಸಿಗೆ ಪ್ರೊಫೆಸರ್ ಅವರ ಕಾಣಿಕೆ ಬಹಳ ಹಿರಿದು.

ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಒಂದು ಸಭೆಯಲ್ಲಿ ಲಕ್ಷ್ಮೀಶ ಕವಿಯನ್ನು ಕುರಿತ ವಿಚಾರ ಸಂಕಿರಣ ಏರ್ಪಾಡಾಗಿತ್ತು. ಆ ಸಂದರ್ಭದಲ್ಲಿ ಒಬ್ಬ ಆಧ್ಯಾಪಕರೇ ಲಕ್ಷ್ಮೀಶ ಕವಿಯ ಕಾವ್ಯದ ಬಗ್ಗೆ ಅಷ್ಟಾಗಿ ತಿಳಿದುಕೊಳ್ಳದೆ ಕೇವಲವಾಗಿ ಮಾತನಾಡಿದಾಗ ಕೂಡಲೇ ಎದ್ದು ನಿಂತ ಪ್ರೊಫೆಸರ್ ಆ ಉಪನ್ಯಾಸಕರನ್ನು ತರಾಟೆಗೆ ತೆಗೆದುಕೊಂಡದ್ದು. ಜೈಮಿನಿಭಾರತ ಅತ್ಯುತ್ತಮವಾದ ವಾರ್ಧಕ ಷಟ್ಪದಿ ಕಾವ್ಯ ಐದು ಮಾತ್ರೆಗಳ ಗಣ ಹಾಡುವುದಕ್ಕಂತೂ ಹೇಳಿ ಬರೆಸಿದ ಕಾವ್ಯದಂತೆ, ಆ ಕಾವ್ಯದ ಸೊಬಗು ಓದಿ ಅರ್ಥೈಸಿದವನಿಗೆ ಮಾತ್ರ ತಿಳಿಯಲು ಸಾಧ್ಯ. ಈ ಹಿನ್ನೆಲೆಯಲ್ಲಿ ಪ್ರೊಫೆಸರ್ ಅವರು 'ಮೊದಲು ಕಾವ್ಯವನ್ನು ಸರಿಯಾಗಿ ಓದಲಿ' ಎಂದು ಹೇಳಿದರಂತೆ.

ನಮ್ಮ ಅಚ್ಚುಮೆಚ್ಚಿನ ಪ್ರೊಫೆಸರ್ ಅವರಿಗೆ ೮೭. ಸಾಹಿತ್ಯ ಪರಿಚಾರಕರಾದ ಶ್ರೀಯುತರಿಗೆ ಒಂದು ಅಭಿನಂದನಾ ಗ್ರಂಥ ಹೊರಬರುತ್ತಿರುವುದು ತುಂಬಾ ಸಂತೋಷದ ವಿಷಯ. ಒಂದು ವರ್ಷ ಹಿಂದೆ ಅವರ ಸಂಪಾದಕತ್ವದಲ್ಲಿ ಹೊರಬಂದ 'ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥಪ್ರಕಾಶಿಕೆ' ಕುರಿತಂತೆ ಕೆಲವು ಮಾತುಗಳನ್ನು ಬರೆಯಲು ನನಗೆ ಹೇಳಿದಾಗ ನಾನು ಬರೆದು ಗಮಕ ಸಂಪದದಲ್ಲಿ ಬರಲು ಸಹಕರಿಸಿದ್ದೆ. ೭೦ ರ ದಶಕದಿಂದ ಇವರೆಗೆ ಅದೇ ಸಮಚಿತ್ತ ಸಮಭಾವ ಇದೆ. ನಾನು ಸದಾ ಗೌರವಿಸುವ ಅಗ್ರಮಾನ್ಯರಲ್ಲಿ ಪ್ರೊ. ಜಿ. ಅಶ್ವತ್ಥನಾರಾಯಣ ಒಬ್ಬರು ಎಂದು ಹೇಳಲು ತುಂಬಾ ಹೆಮ್ಮೆ ಎನಿಸುತ್ತದೆ.

******

ಅನಾಜಿ ಮತ್ತು ಮಕ್ಕಳ ಕೂಟ

ಕೆ. ಮೋಹನ್ ದೇವ್ ಆಳ್ವ

ನಾನು ಪ್ರೊಫೆಸರ್ ಜಿ. ಅಶ್ವತ್ಥ ನಾರಾಯಣರವರನ್ನು ಸರಿ ಸುಮಾರು 1956ನೇ ಇಸವಿಯಿಂದ ಬಲ್ಲೆ. ಶ್ರೀಯುತ ಅಶ್ವತ್ಥನಾರಾಯಣರವರ ಸಾಹಿತ್ಯಾಸಕ್ತಿಯ ಪ್ರತಿಭೆಯು ಚಿಕ್ಕ ವಯಸ್ಸಿನಿಂದಲೇ ಮಕ್ಕಳ ಕೂಟದ ಸಾಹಿತ್ಯ ಚಟುವಟಿಕೆಗಳಿಂದ ಅನಾವರಣವಾಯಿತು. ಕಲ್ಯಾಣಮ್ಮನವರೊಂದಿಗೆ ಕೂಟದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಲ್ಲದೆ, ಚಿಕ್ಕ ವಯಸ್ಸಿನಲ್ಲೇ ಕಾರ್ಯಕ್ರಮಗಳನ್ನು ನಡೆಸಲು ಸಹ ಸ್ವಯಂಸೇವಕರಾಗಿ ಸಹಕರಿಸುತ್ತಿದ್ದರು.ಈಗ ಇರುವ ಮಕ್ಕಳಕೂಟದ ಜಾಗವು ಹಿಂದಿನ ಬೆಂಗಳೂರು ಮುನಿಸಿಪಾಲಿಟಿ ಆಗಿದ್ದ ಸಮಯದಲ್ಲಿ ದೊರೆತು, ಅಲ್ಲಿ ಒಂದು ಕೊಠಡಿಯನ್ನು ಕಟ್ಟಲಾಯಿತು,ಹಾಗೂ ಮುಂದಿನ ವಿಶಾಲವಾದ ಜಾಗದಲ್ಲಿ ಸಿಮೆಂಟ್ ನಿರ್ಮಿತ ಜಗಲಿಯನ್ನು ನಿರ್ಮಿಸಲಾಯಿತು. ಕ್ರಮೇಣ ಅನಾಜಿಯವರು ಅಲ್ಲಿ ಮಕ್ಕಳಿಗೆ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದಲ್ಲದೆ ಪ್ರತಿ ತಿಂಗಳ ಶನಿವಾರದಂದು ನಡೆಸುತ್ತಿರುವ ಬಾಲ ಜಗತ್ ಕಾರ್ಯಕ್ರಮಗಳ ನೇತೃತ್ವವನ್ನು ವಹಿಸಿಕೊಂಡು ಮಕ್ಕಳಲ್ಲಿರುವ ಪ್ರತಿಭೆಯು ಹೊರ ಹೊಮ್ಮುವಂತೆ ಹಲವಾರು ಕಾರ್ಯಕ್ರಮಗಳನ್ನು ಅಳವಡಿಸಿ ಕೂಟದ ಅಭಿವೃದ್ಧಿಗೆ ಕಾರಣರಾಗಿದ್ದಾರೆ.

ಅನಾಜಿಯವರು ತಾವು ಒಳ್ಳೆಯವಾಗ್ಮಿಗಳಾಗಿರುವುದು ಶ್ರೀಮತಿ ಕಲ್ಯಾಣಮ್ಮನವರಿಂದ ಎಂದು ಆಗಾಗ್ಗೆ ಸ್ಮರಿಸುತ್ತಾರೆ. ನೀನು ಮಾತನಾಡು ನಾನು ಹೇಳಿಕೊಡುತ್ತೇನೆ, ಎಂದು ಆರ್. ಕಲ್ಯಾಣಮ್ಮನವರು ಅವರನ್ನು ಹುರಿದುಂಬಿಸಿ, ಅನಾಜಿಯವರು ತಾವು ಮೊದಲನೆಯ ಭಾಷಣದಲ್ಲಿ ಬಹುಮಾನ ಪಡೆದುದನ್ನು ನೆನಪಿಸಿಕೊಳ್ಳುತ್ತಾರೆ. ವಿದ್ಯಾರ್ಥಿ ದೆಸೆಯಿಂದಲೂ ಮಕ್ಕಳ ಕೂಟದ ಜೊತೆಗೆ ನಿಕಟ ಸಂಪರ್ಕದಲ್ಲಿದ್ದು ಕೂಟದ ಎಲ್ಲಾ ಸದಸ್ಯರಿಗೂ ಪರಿಚಿತರಾಗಿರುತ್ತಾರೆ. ಹಲವಾರು ಜಿಲ್ಲೆಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನೇಕ ಕೊಡುಗೆಗಳನ್ನು ನೀಡಿರುತ್ತಾರೆ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಮುಂತಾದ ಅನೇಕ ಸಂಘ-ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಅಖಿಲ ಕರ್ನಾಟಕ ಮಕ್ಕಳ ಕೂಟದ ಕಾರ್ಯನಿರ್ವಾಹಕ ಸಮಿತಿ ಸದಸ್ಯರಾಗಿ ಕೂಟದ ಪ್ರಗತಿಗೆ ಸಹಾಯ ಸಹಕಾರ ಮತ್ತು ಸಲಹೆಗಳನ್ನು ನೀಡುತ್ತಿದ್ದಾರೆ. ಅಲ್ಲದೆ ಮಕ್ಕಳ ಕೂಟದಲ್ಲಿ ದತ್ತಿ ನಿಧಿಯನ್ನು ಸ್ಥಾಪಿಸಿರುವ ಅವರು ಬರುವ ಬಡ್ಡಿಯಿಂದ ಕನ್ನಡ ಭಾಷಣ ಸ್ಪರ್ಧೆ, ಕನ್ನಡ ಉಕ್ತಲೇಖನ ಸ್ಪರ್ಧೆ ಕನ್ನಡ ಆಶುಭಾಷಣ ಸ್ಪರ್ಧೆಗಳನ್ನು ನಡೆಸಿ ವಿದ್ಯಾರ್ಥಿಗಳಲ್ಲಿ ಕನ್ನಡದ ಬಗೆಗೆ ಹೆಚ್ಚು ಆಸಕ್ತಿ ಮೂಡುವಂತೆ ಮಾಡುವಂತಹ ಕಾರ್ಯಕ್ರಮಗಳಿಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಅನೇಕ ಮಾಸಪತ್ರಿಕೆಗಳಲ್ಲಿ ಅಂಕಣಕಾರರಾಗಿ ಲೇಖನಗಳನ್ನು ಬರೆಯುತ್ತಾ ಕನ್ನಡ ನಾಡಿನ ಉದ್ದಗಲಕ್ಕೂ ಪರಿಚಿತರಾಗಿದ್ದಾರೆ .

ಮಕ್ಕಳಿಗಾಗಿ ಹೊರತರಲಾಗುವ ಸಂಚಿಕೆಗಳ ಸಂಪಾದಕರಾಗಿ ಅತ್ಯುತ್ತಮ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸಿ, ಕೂಟದ ಪೋಷಕರ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಹಾಗೂ ಮಕ್ಕಳ ಕೂಟದ ಎಲ್ಲಾ ವ್ಯವಹಾರಗಳು ಕನ್ನಡದಲ್ಲಿಯೇ ಇರಬೇಕೆಂದು ಒತ್ತಾಯಿಸಿರುತ್ತಾರೆ. ಈ ಇಳಿಯ ವಯಸ್ಸಿನಲ್ಲಿಯೂ ಸಹ ಶ್ರೀಯುತರು ಸದಾ ಚಟುವಟಿಕೆಯಿಂದ ಇದ್ದು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದು ಹೇಳಲು ಸಂತೋಷವಾಗುತ್ತದೆ.

****

ಕವಿತೆ ೬ – ಸಾಹಿತ್ಯ ಪರಿಚಾರಕನಿಗೆ ನಮನ

ಬಿ.ಎಸ್.ಎಲ್.ಜಿ.
ಚರವಾಣಿ : ೯೮೪೫೫೩೭೮೯೮

ಅನಾಜಿ ನೀವು ನಮಗೆಲ್ಲರಿಗೂ ಗುರೂಜಿ
ಅಶ್ವತ್ಥನಾರಾಯಣ ತಾವು ಕನ್ನಡ ಜಾಣ
ಅಲ್ಲಲ್ಲ ಕನ್ನಡ ಜಾಣರಲ್ಲಿ ಜಾಣ.
ತಾವು ಕನ್ನಡ ಕುಲಕೋಟಿಗೆ ಒಬ್ಬಟ್ಟಿನ ಹೂರಣ
ಅದ ಸವಿದ ಸರ್ವರಿಗೂ ಮುಕ್ತಿಯ ಸೋಪಾನ.

ನಿಮ್ಮ ವಾಚನ ವ್ಯಾಖ್ಯಾನ ಬೋಧನೆಯ ವೈಖರಿ
ಸಾವಿರ ಸಾವಿರ ಶಿಷ್ಯರ ತಲೆದೂಗಿಸಿ ತಂದಿದೆ ಅಚ್ಚರಿ
ತಮ್ಮ ಯಾವುದೇ ಉಪನ್ಯಾಸ ಭಾಷಣಗಳ ಅಭಿವ್ಯಕ್ತಿ
ಕೇಳುಗರ ಮೈ ಮನಮುದಗೊಳಿಸಿ ತರುವುದು ಮುಕ್ತಿ.

ಎಲೆಮರೆಯ ಕಾಯಾಗಿ ತಾವು ಮಾಡುತ್ತಿರುವ ಕನ್ನಡ ಕಾಯಕ
ಅದುವೇ ಕನ್ನಡ ಕುಲಬಾಂಧವರಿಗೆ ಮುಕ್ತಿದಾಯಕ
ನೀವೊಂದು ಕನ್ನಡದ ರತ್ನ ದೊರೆಯಲಿ ಕರ್ನಾಟಕ ರತ್ನ
ತಮ್ಮ ಮುಡಿಗೇರಲಿ ರಾಜ್ಯೋತ್ಸವ ಪ್ರಶಸ್ತಿ
ಆ ಮೂಲಕ ಉಂಟಾಗಲಿ ಪ್ರಶಸ್ತಿಗೆ ಉನ್ನತಿ
ನಿಮ್ಮ ಹೆಗಲಿನ ಜೋಳಿಗೆ ನಡಿಗೆಯ ಶೈಲಿ
ಅನನ್ಯ ಅನುಕರಣೀಯ ಅದು ನಮ್ಮ ಬಾಳಿಗೂ ಸಿಗಲಿ.

ತಮ್ಮ ಪುತ್ರಿ ಕ್ಷಮಾ ಭೂಮಿ ಮೀರಿಸಿದ ಕ್ಷಮಾಶೀಲೆ
ನಿಮ್ಮ ಧರ್ಮಪತ್ನಿ ಲಕ್ಷ್ಮೀದೇವಿ ಮುತ್ತಿನ ಮಾಲೆ.
ತಮ್ಮ ಕನ್ನಡ ಸಾಹಿತ್ಯ ಪರಿಚಾರಿಕೆಗೆ ಜ್ಞಾನ ವಿಜ್ಞಾನ
ಪ್ರತಿಭೆಗೆ ನಿಮಗಿದೋ ನಮ್ಮೆಲ್ಲರ ಕೋಟಿ ಕೋಟಿ ನಮನ.

****

ನನ್ನ ಸಾಹಿತ್ಯ ಸೇವಾಧಾರ

ಬುಕ್ಕಾಂಬುಧಿ ಕೃಷ್ಣಮೂರ್ತಿ
ನ್ಯೂಜರ್ಸಿ ಅಮೆರಿಕಾ

ಅನಾಜಿಯವರ ಜೊತೆ ನನ್ನ ಪರಿಚಯವಾದದ್ದು, ನಾನು ಅಮೆರಿಕಾಕ್ಕೆ ಬಂದ ಕೆಲವಾರು ವರ್ಷಗಳ ನಂತರ. ಕಾರಣ, ನಾನು ಇಲ್ಲಿಗೆ ಬರುವವರೆಗೂ ನನಗೆ ಬರವಣಿಗೆಯ ಹವ್ಯಾಸವೇ ಇರಲಿಲ್ಲ. ಒಂದೆರಡು ಕೃತಿಗಳನ್ನು ಬರೆದಮೇಲೆ ಒಂದು ಪುಸ್ತಕಕ್ಕೆ ಮುನ್ನುಡಿ ಬರೆಸಬೇಕಾದ ಸಂದರ್ಭ ಬಂತು. ಆಗ ಖ್ಯಾತ ಬರಹ. ಕಾಮ್ ಶೇಷಾದ್ರಿವಾಸು ಚಂದ್ರಶೇಖರನ್ ಅವರ ತಂದೆ ಅ.ನ.ಕೃ ಪರಮ ಭಕ್ತ ಕೆ.ಟಿ. ಚಂದ್ರಶೇಖರನ್ ಅವರು ಅನಾಜಿಯ ಪರಿಚಯ ಮಾಡಿಸಿದರು. ಇಬ್ಬರ ಮನೆಗಳೂ ಹತ್ತಿರವೇ ಇದ್ದರೂ ಒಬ್ಬರಿಗೊಬ್ಬರ ಪರಿಚಯ ಇರಲಿಲ್ಲ. ಹಾಗೆ ಪ್ರಾರಂಭವಾದದ್ದು ಬರುಬರುತ್ತ ನಿಕಟ ಸಂಬಂಧ ಬೆಳೆಯಿತು.

ನಾನು ಎರಡುವರ್ಷಕ್ಕೊಮ್ಮೆ ಬೆಂಗಳೂರಿಗೆ ಹೋದಾಗ, ನಾನು ಬರೆದ ಲೇಖನ ಅಥವಾ ಪುಸ್ತಕವನ್ನು ಅನಾಜಿಯವರಿಗೆ ತೋರಿಸಿ, ಇದನ್ನು ಸ್ವಲ್ಪ ನೋಡಿಕೊಡಿ, ತಿದ್ದುಪಡಿ ಮಾಡಿ ಎಂದು ಕೇಳುತ್ತಿದ್ದೆ. ತದನಂತರ, ನನ್ನ ಮೂರು ನಾಲ್ಕು ಪುಸ್ತಕಗಳಿಗೆ ಮುನ್ನುಡಿ ಬರೆದುಕೊಟ್ಟಿದ್ದಾರೆ. ನನ್ನ ಜೊತೆ ಬೆರೆತಾಗ, ಅವರ ಅಮೂಲ್ಯ ಕಾಲದಲ್ಲಿ ಸ್ವಲ್ಪವನ್ನಾದರೂ ನನಗೆ ಮೀಸಲಾಗಿಡುತ್ತಿದ್ದರು. ಅದು ನನ್ನ ಭಾಗ್ಯ.

ಅಮೆರಿಕಾದಿಂದ ಬೆಂಗಳೂರಿಗೆ ಬಂದಕೂಡಲೆ ಮೊದಲ ಭೇಟಿ ಅನಾಜಿಯವರೊಡನೆ. ಕೆಲವರು ಅಲ್ಲಿಗೆ ಬಂದಾಗ ಎರಡು ದಿವಸ ಮನೆಯಿಂದ ಹೊರಕ್ಕೇ ಬರುವುದಿಲ್ಲ, ಜೆಟ್‌ಲಾಗ್ ಅಂತ. ನನಗೆ ಜೆಟ್‌ಲಾಗ್ ಕಾಯಿಲೆ ಇಲ್ಲ. ಬಂದ ನಾಲ್ಕೈದು ಗಂಟೆಗಳಲ್ಲಿ ಹೊರಗೆ ಹೊರಡುವುದಕ್ಕೆ ಸಿದ್ಧವಾಗಿರುತ್ತೇನೆ. ಅನಾಜಿಯವರನ್ನು ನೋಡಿ ಸ್ವಲ್ಪಹೊತ್ತು ಮಾತನಾಡಿದರೆ ಮನಸ್ಸಿಗೆ ಹಿತವಾಗುತ್ತೆ.

ಚಿಕ್ಕಮಗಳೂರಿನಿಂದ ಬಂದು ಬೆಂಗಳೂರಿನಲ್ಲಿ ನೆಲಸಿರುವವರು ಕೆಲವರು, 'ಚಿಕ್ಕಮಗಳೂರು ಸಂಘ' ಎಂಬ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅವರೆಲ್ಲರೂ ಒಬ್ಬೊಬ್ಬರ ಮನೆಯಲ್ಲಿ ಆಗಾಗ್ಗೆ ಸೇರಿ ಮಾತುಕತೆಯನ್ನಾಡುತ್ತಾರೆ. ಅನಾಜಿಯವರು ನನ್ನನ್ನು ಕರೆದುಕೊಂಡುಹೋಗಿ ಎಲ್ಲರ ಪರಿಚಯ ಮಾಡಿಸಿದರು. ಕೆಲವರ ತಂದೆತಾಯಿಗಳನ್ನೂ ನೋಡಿದ್ದೆ ಚಿಕ್ಕಮಗಳೂರಿನಲ್ಲಿ. ಹಾಗಾಗಿ ಅನಾಜಿಯವರ ಸಂಪರ್ಕ ಹೆಚ್ಚುತ್ತಾ ಬಂತು.

ಒಂದುಬಾರಿ ಬೆಂಗಳೂರಿಗೆ ಬಂದಾಗ, ನಾನು ರಚಿಸುತ್ತಿರುವ "ಬುಕ್ಕಾಂಬುಧಿ ಕನ್ನಡ-ಇಂಗ್ಲಿಷ್ ಪದಕೋಶ"ದ ಕರಡು ಕೃತಿಯನ್ನು ಅವರ ಮುಂದಿಟ್ಟೆ. ಕೆಲವಾರು ಪುಟಗಳನ್ನು ತಿರುವಿಹಾಕಿ,

'ಇದನ್ನು ಮುಂದುವರಿಸಿ, ಇದು ಒಳ್ಳೆಯ ಕೃತಿಯಾಗುತ್ತೆ, ನಾನು ಸಹಾಯ ಮಾಡುತ್ತೇನೆ, ಸಹಸಂಪಾದಕನಾಗಿಯೂ ಇರಲು ಒಪ್ಪಿಕೊಳ್ಳುತ್ತೇನೆ'' ಎಂದು ಭರವಸೆ ಕೊಟ್ಟರು. ನನ್ನ ಸಂತೋಷಕ್ಕೆ ಪಾರವೇ ಇಲ್ಲ. ಅಂತಹ ಹಿರಿಯ ಸಾಹಿತಿಗಳು ನನಗೆ ಬೆಂಬಲ ಕೊಡಬಹುದೆಂಬ ನಂಬಿಕೆಯೇ ಇರಲಿಲ್ಲ. ಅವರ ಮುಂದೆ ನಾನಿನ್ನೂ ವಿದ್ಯಾರ್ಥಿ, ಕಾರಣ ನಾನು ಗ್ರಂಥಗಳ ಅಧ್ಯಯನ ಮಾಡಿದವನಲ್ಲ, ಸ್ವತಃ ವಿದ್ವಾಂಸನೂ ಅಲ್ಲ. ಆದರೆ, ಅನಾಜಿಯವರು ಕೊಟ್ಟ ಕುಮ್ಮಕ್ಕು, ಧೈರ್ಯದಿಂದಾಗಿ ನನ್ನ ಹುಮ್ಮಸ್ಸು, ಪ್ರತಿಬಾರಿ ಬೆಂಗಳೂರಿಗೆ ಬಂದಾಗಲೂ ಒಂದೊಂದು ಹಂತ ಮೇಲೇರುತ್ತಿತ್ತು.

"ಬುಕ್ಕಾಂಬುಧಿ ಕನ್ನಡ–ಇಂಗ್ಲಿಷ್ ಪದಕೋಶ" ಅನಾಜಿಯವರ ಬೆಂಬಲದಿಂದಾಗಿ ಒಂದು ರೂಪಕ್ಕೆ ಬಂದು, ಅದು ಅಮೆರಿಕಾದಲ್ಲಿ ಸದ್ಯದಲ್ಲೇ ನಡೆಯಲಿರುವ ನಾವಿಕ ಕನ್ನಡ ಸಮ್ಮೇಳನದಲ್ಲಿ ಬಿಡುಗಡೆಯಾಗುವ ಸೂಚನೆ ಇದೆ.

ಅನಾಜಿಯವರ ಮನೆಯಲ್ಲಿ ಅವರ ಪುಸ್ತಕರಾಶಿಯನ್ನು ಒಮ್ಮೆ ನೋಡಬೇಕು. ಅವರ ಮನೆಯ ಕೆಳಭಾಗದ ಒಂದು ಕೊಠಡಿಯಲ್ಲಿ ಪುಸ್ತಕಗಳನ್ನು ಪೇರಿಸಿದ್ದಾರೆ. ಅವರ ಓದು, ಬರವಣಿಗೆಯ ರೂಮಿನಲ್ಲೂ ಪುಸ್ತಕಗಳು, ಮಲಗುವ ಕೋಣೆಯಲ್ಲೂ ಪುಸ್ತಕಗಳು. ಕೆಳಭಾಗದ ಕೊಠಡಿಯೊಳಕ್ಕೆ ಸ್ವಲ್ಪ ದಪ್ಪನಾಗಿರುವವರು ಸಲೀಸಾಗಿ ಒಳಕ್ಕೆ ನುಗ್ಗುವುದಕ್ಕಾಗುವುದಿಲ್ಲ! ನಾನು ತೆಳ್ಳಗಿದ್ದರೂ ಒಂದುಬಾರಿ ಅಡ್ಡಡ್ಡಲಾಗಿ ಮೆತ್ತಗೆ ನುಗ್ಗಿಹೋಗಿದ್ದೆ.

ಅನಾಜಿಯವರ ಹೆಂಡತಿ ಹೇಳುವಂತೆ, ಅಡಿಗೆಮನೆಗೆ ಅವರ ಪುಸ್ತಕರಾಶಿಯನ್ನು ಇಡಲು ಪ್ರವೇಶ ಕೊಟ್ಟಿಲ್ಲವಂತೆ. ಕಾರಣ ಅಲ್ಲಿಯೂ ಪುಸ್ತಕಗಳನ್ನು ಇಟ್ಟಿದರೆ, ಅಡುಗೆ ಪದಾರ್ಥಗಳನ್ನು ಹುಡುಕುವುದೇ ಕಷ್ಟವಾಗುತ್ತೆ ಅವರಿಗೆ. ಆಗ ಅನಾಜಿಯವರ ಊಟ, ತಿಂಡಿ? ಆ ಭಯದಿಂದಾಗಿ ಹೆಂಡತಿಯ ಕರಾರಿಗೆ ಒಪ್ಪಿದ್ದಾರೆಂದು ವದಂತಿ!

ನಾನು ನೂರು ವರ್ಷಗಳ ತುದಿಯನ್ನು ಮುಟ್ಟಲಿದ್ದೇನೆ. ಇನ್ನೂ ನಾಲ್ಕಾರು ವರ್ಷಗಳು ಬದುಕಿರಬೇಕೆಂಬ ಆಸೆ ಇರುವುದರಿಂದ, ಅನಾಜಿಯವರ ಸ್ನೇಹವಾತ್ಸಲ್ಯ, ಕೃಪೆ ನನ್ನ ಮೇಲಿರಲಿ ಎಂದು ಆಶಿಸುತ್ತೇನೆ.

******

ನನ್ನ ನೆಚ್ಚಿನ ಸಹಪಾಠಿ

ಹೆಚ್. ಪಿ. ವಾಸುದೇವರಾವ್
ಚರವಾಣಿ : ೯೪೪೮೪೫೧೪೮೭

ಒಳ್ಳೆಯ ಬೋಧಕ, ಉತ್ತಮ ಲೇಖಕ, ಪುಸ್ತಕಗಳ ಸಂಗ್ರಾಹಕ ಮೊದಲಾದ ಬಹುಮುಖ ವ್ಯಕ್ತಿತ್ವವಿರುವ ಗೆಳೆಯ ಜಿ. ಅಶ್ವತ್ಥನಾರಾಯಣ ಮತ್ತು ನನ್ನ ಪರಿಚಯವಾಗಿ ಎಪ್ಪತ್ತು ವರ್ಷಗಳು ಸಂದವು. 1955 ರಲ್ಲಿ ನಾವಿಬ್ಬರೂ ಶ್ರೀ ಜಯಚಾಮರಾಜೇಂದ್ರ ಆಕ್ಯುಪೇಷನಲ್ ಸಂಸ್ಥೆಯ ವಿದ್ಯಾರ್ಥಿಗಳು. ಅವನು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿದ್ಯಾರ್ಥಿಯಾದರೆ, ನಾನು ಸಿವಿಲ್ ಇಂಜಿನಿಯರಿಂಗ್‌ನ ವಿದ್ಯಾರ್ಥಿ. ನಾವಿಬ್ಬರೂ ಪರಿಚಿತರಾಗಿ ಮುಂದೆ ಸ್ನೇಹಿತರಾಗಲು ಕಾರಣ, ನಮ್ಮಿಬ್ಬರ ಮನೋಧರ್ಮ ಮತ್ತು ಹವ್ಯಾಸಗಳು. ನಾವಿಬ್ಬರೂ ಸಾಹಿತ್ಯಾಸಕ್ತರು, ಜ್ಞಾನ ಭಿಕ್ಷುಕರು. ಹಾಗಾಗಿ ನಾವು ಸ್ನೇಹಿತರಾದೆವು. ಆ ಸ್ನೇಹ, ಆ ಅನುಬಂಧ ಕಳೆದ ಎಪ್ಪತ್ತು ವರ್ಷಗಳಿಂದ ಅವಿರತವಾಗಿ ನಡೆದು ಬಂದಿದೆ.

ಅದನ್ನು ಗೆಳೆಯ ಅಶ್ವತ್ಥನಾರಾಯಣ ತನ್ನ ಮೆಟ್ರಿಕ್ ಪರೀಕ್ಷೆ ಮುಗಿಸಿ ಎಸ್.ಜೆ. ಪಾಲಿಟೆಕ್ನಿಕ್‌ನಲ್ಲಿ ಸೇರಿಕೊಂಡು ವಿದ್ಯಾಭ್ಯಾಸ ಪಡೆದರೂ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಅವನಲ್ಲಿ ಇರುವ ಜ್ಞಾನದಾಹ ಅಲ್ಲಿಗೇ ವಿದ್ಯಾಭ್ಯಾಸ ಮುಗಿಸಲು ಬಿಡಲಿಲ್ಲ. ಅವನು ಪುನಃ ಆಗಿನ ಕಾಲದ ಇಂಟರ್ಮೀಡಿಯಟ್ ಸೇರಿಕೊಂಡು ಅದನ್ನು ಪಾಸು ಮಾಡಿ, ತದನಂತರ ಬಿ.ಎ. ಗೆ ಸೇರಿಕೊಂಡು ಅದನ್ನು ಪಾಸು ಮಾಡಿ, ಸಮಾಜ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ. ಅಶ್ವತ್ಥನಾರಾಯಣ ಸಮಾಜ ಶಾಸ್ತ್ರದ ಬೋಧಕನಾಗಿ ಕಾಲೇಜು ಶಿಕ್ಷಣ ಇಲಾಖೆ ಸೇರಬಹುದಾಗಿತ್ತು. ಆದರೆ, ಕನ್ನಡದ ಬಗ್ಗೆ ಇದ್ದ ಪ್ರೇಮ ತುಡಿತ ಅಲ್ಲಿಗೆ ಬಿಡಲಿಲ್ಲ. ಅವನು ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಗಳಿಸಿ ಕನ್ನಡದ ಬೋಧಕನಾಗಿ ಬಾಳು ಸವೆಸಬೇಕು ಎನ್ನುವ ಮನೋ ನಿರ್ಧಾರದಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಕೊಂಡು ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಕನ್ನಡದ ಬೋಧಕನಾಗಿ ಕಾಲೇಜು ಶಿಕ್ಷಣ ಸಂಸ್ಥೆಯನ್ನು ಸೇರಿಕೊಂಡ. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವಾಗಲೇ ಶಾಸನ ಶಾಸ್ತ್ರದ ಡಿಪ್ಲೊಮಾ ಪರೀಕ್ಷೆ ಪಾಸು ಮಾಡಿದ. ಇದರಿಂದ ವಿದ್ಯೆಯನ್ನು ಗಳಿಸುವುದರಲ್ಲಿ ಅಶ್ವತ್ಥನಾರಾಯಣನಿಗೆ ಇದ್ದ ಆಸಕ್ತಿ, ತುಡಿತ ನಾವು ನೋಡಬಹುದು. ಹಲವು ವಿಷಯಗಳ ಬಗ್ಗೆ ಅರಿವು ಇರುವ ಓರ್ವ ವ್ಯಕ್ತಿ ಉಪಾಧ್ಯಾಯನಾದರೆ, ಅದರ ಪರಿಣಾಮ ವಿದ್ಯಾರ್ಥಿಗಳ ಮೇಲೆ ಆಗುತ್ತದೆ. ಇದು ನಮಗೆ ಗೊತ್ತಿರುವ ವಿಷಯ. ಅಶ್ವತ್ಥನಾರಾಯಣ ಪದವಿ ಪಡೆದು ಕೆಲಸ ಗಿಟ್ಟಿಸಿಕೊಂಡು ತೃಪ್ತನಾಗಲಿಲ್ಲ. ಅವನ ಅಧ್ಯಯನ ಮುಂದುವರೆಯಿತು. ಅದೇ ವಿಷಯ, ಇದೇ ವಿಷಯ ಎಂದು ಸಂಕೀರ್ಣಗೊಳ್ಳದೆ ಹಲವು ವಿಷಯಗಳ ಅಧ್ಯಯನದಲ್ಲಿ ತೊಡಗಿದ. ಕೈಗೆ ಸಿಕ್ಕ ಪುಸ್ತಕವನ್ನೆಲ್ಲ ಓದಿದ. ಅಷ್ಟೇ ಅಲ್ಲ, ಹಾಗೆ ಓದಿದ ಪುಸ್ತಕಗಳನ್ನು ಸಂಗ್ರಹಿಸುತ್ತಾ ಹೋದ. ಹಾಗೆ ಸಂಗ್ರಹಿಸಿದ ಪುಸ್ತಕಗಳ ಸಂಖ್ಯೆ ಇಂದು ಲಕ್ಷಕ್ಕೂ ಮೀರಿದೆ. ಇದನ್ನು ಗಮನಿಸಿದಾಗ ಅಶ್ವತ್ಥನಾರಾಯಣನಿಗೆ ಜ್ಞಾನದ ಆಳದ ಅರಿವನ್ನು ನಾವು ಊಹಿಸಬಹುದು.

ಅಶ್ವತ್ಥನಾರಾಯಣ ಜ್ಞಾನದ ಕೃಷಿಯ ಪರಿಣಾಮವಾಗಿ ಅವನಿಂದ ಹಲವಾರು ಉತ್ಕೃಷ್ಟ ಗ್ರಂಥಗಳು ರಚನೆಗೊಂಡವು. 'ಸೌಂದರ್ಯ ಲಹರೀ ಸ್ತೋತ್ರ ದೀಪಿಕೆ, ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು, ರತ್ನಾಕರ ಮಹಾಕವಿಯ ಮೂರು ಶತಕಗಳು' ಇವೇ ಮೊದಲಾದ ಹಲವು ಗ್ರಂಥಗಳು ಅವನಿಂದ ರಚನೆಗೊಂಡವು. ಆಳವಾದ ಜ್ಞಾನ, ಅದಕ್ಕೆ ಅನುಗುಣವಾದ ವಾಕ್ ಚಾತುರ್ಯ ಇರುವುದರಿಂದ ನಾಡಿನಾದ್ಯಂತ ಹಾಗೂ ವಿದೇಶದಲ್ಲಿ ಬಹುಬೇಡಿಕೆ ಇರುವ ವ್ಯಕ್ತಿಯಾಗಿ ಇಂದೂ ಪ್ರಸಿದ್ಧಿ ಹೊಂದಿದ್ದಾನೆ.

ನನ್ನ ಸ್ನೇಹಿತರ ವಲಯದಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳೂ, ರಾಜಕಾರಣಿಗಳು, ಅತೀ ಶ್ರೀಮಂತರೂ ಇದ್ದಾರೆ. ಆದರೆ, ಸ್ನೇಹಿತನೆಂದು ಹೆಮ್ಮೆ ಪಡಬಹುದಾದ ವ್ಯಕ್ತಿ ಗೆಳೆಯ ಅಶ್ವತ್ಥನಾರಾಯಣ.

ಅಶ್ವತ್ಥನಾರಾಯಣನ ಸಾಧನೆಯನ್ನು ಗುರುತಿಸಿ ಹಲವು ಸಂಘ ಸಂಸ್ಥೆಗಳು ಅವನನ್ನು ಸನ್ಮಾನಿಸಿದೆ. ಗೌರವಿಸಿದೆ. ಗೆಳೆಯನ ಸಾಧನೆಯನ್ನು ಗುರುತಿಸಿ ಎಷ್ಟೆಲ್ಲಾ ಸಂಸ್ಥೆಗಳು ಸಮಾನಿಸಿರುವುದನ್ನು ನೆನಪು ನಾ ಮಾಡಿಕೊಂಡಾಗ ಮನಸ್ಸಿಗೆ ಮುದನೀಡುತ್ತದೆ, ಎದೆ ತುಂಬಿ ಬರುತ್ತದೆ.

ಅಶ್ವತ್ಥನಾರಾಯಣ ಹಲವಾರು ಗ್ರಂಥಗಳ ಸಂಪಾದನೆ ಮಾಡಿದ್ದಾನೆ. ಹಲವಾರು ಗ್ರಂಥಗಳ ರಚನೆ ಮಾಡಿದ್ದಾನೆ. ಅವೆಲ್ಲವೂ ಕಷ್ಟದಾಯಕವೂ, ಕ್ಲಿಷ್ಟಕರವಾದವೂ ಆಗಿರುವುದನ್ನು ನಾವು ಗುರುತಿಸಬೇಕು. ನಾವು ನಮ್ಮ ಸುತ್ತ ಮುತ್ತಲ ಸಮಾಜದಲ್ಲಿ ಧನ ಸಂಪಾದನೆ ಮಾಡುವವರನ್ನು ನೋಡುತ್ತೇವೆ. ಆದರೆ ಜ್ಞಾನ ಸಂಪಾದನೆಗೆ ತಮ್ಮ ಬಾಳನ್ನು ಮುಡಿಪಾಗಿರುವವರನ್ನು ನೋಡುವುದು ಅಪರೂಪ. ಹಾಗೆ ಬಂಗಾರ, ಬೆಳ್ಳಿ, ಹಣ ಇವುಗಳನ್ನು ಸಂಗ್ರಹಿಸುವವರನ್ನು ನೋಡಬಹುದು, ಆದರೆ ಪುಸ್ತಕಗಳನ್ನು ಸಂಗ್ರಹಿಸುವವರನ್ನು ನೋಡುವುದು ವಿರಳ, ಆದರೆ ವಿರಳಾತಿ ವಿರಳರಲ್ಲಿ ಒಬ್ಬ ನನ್ನ ಆತ್ಮೀಯ ಮಿತ್ರ ಅಶ್ವತ್ಥನಾರಾಯಣ. ಇದನ್ನು ಅತೀ ಹೆಮ್ಮೆ ಮತ್ತು ಅಭಿಮಾನದಿಂದ ಬರೆಯುತ್ತಿದ್ದೇನೆ. ಗೆಳೆಯ ಅಶ್ವತ್ಥನಾರಾಯಣ ಬರೆದ ಕೃತಿಗಳಾಗಲಿ, ಸಂಗ್ರಹಿಸಿದ ಪುಸ್ತಕಗಳಾಗಲಿ ಸರಳ ಸಾಮಾನ್ಯದವುಗಳಲ್ಲ. ಎಲ್ಲವೂ ಸಂಶೋಧನಾ ಗ್ರಂಥಗಳು, ಒಮ್ಮೆ ಓದಿ ಬದಿಗಿಡುವ ಗ್ರಂಥಗಳಲ್ಲ. ಎಲ್ಲವೂ ಸಂಗ್ರಹ ರೂಪದಲ್ಲಿ ಇಟ್ಟುಕೊಂಡು ಆಗಾಗ ಓದಿ ಮನನ ಮಾಡಿಕೊಳ್ಳಬೇಕಾದ ಗ್ರಂಥಗಳು. ಅವುಗಳಲ್ಲಿ ಕೆಲವನ್ನು ಉಲ್ಲೇಖಿಸುವುದಾದರೆ ಜೈನ ಸಾಹಿತ್ಯ। ಹಳೆಗನ್ನಡದ ಸಾಹಿತ್ಯ, ದಾಸ ಸಾಹಿತ್ಯ, ವಚನ ಸಾಹಿತ್ಯ, ಷಟ್ಪದಿ ಕಾವ್ಯಗಳು ಎಲ್ಲವೂ ಸಂಶೋಧನ ಳ ಗ್ರಂಥಗಳೇ! ಅಷ್ಟೇ ಅಲ್ಲ, ಕನ್ನಡದ ಉಳಿವಿಗಾಗಿ, ಕನ್ನಡದ ಬೆಳವಣಿಗೆಗಾಗಿ ಸದಾ ಸರ್ವದಾ ತನ್ನನ್ನು ತಾನು ಸಮರ್ಪಿಸಿಕೊಂಡವನು ಮಿತ್ರ ಅಶ್ವತ್ಥನಾರಾಯಣ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕನಾಗಿ ಹಲವರು ಎಂ.ಫಿಲ್ ಪದವಿ ಪಡೆಯಲು ಸಾಧ್ಯವಾಗಿದ್ದು ಒಂದಾದರೆ, ಐ.ಎ.ಎಸ್. ಕೆ.ಎ.ಎಸ್. ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶಕನಾಗಿ, ಅವರ ಏಳ್ಗೆಗೆ ಕಾರಣನಾಗಿರುವುದು, ಕನ್ನಡ ಸಾಹಿತ್ಯ ಪರಿಷತ್ತು, ಗಮಕ ಕಲಾ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಚಳುವಳಿಗಳೇ ಮೊದಲಾದವುಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದು... ಒಂದೇ, ಎರಡೇ? ಅವುಗಳನ್ನೆಲ್ಲಾ ಬರೆಯುತ್ತಾ ಹೋದರೆ ಅದೇ ಒಂದು ಗ್ರಂಥವಾಗಬಹುದು. ಅಷ್ಟು ಸಾಧನೆ ಗೆಳೆಯ ಅಶ್ವತ್ಥನಾರಾಯಣ ಮಾಡಿದ್ದಾನೆ. ಇವೆಲ್ಲದರಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುವುದರಿಂದಲೇ ಎಂಬತ್ತೇಳನೆಯ ವಯಸ್ಸಿನಲ್ಲಿಯೂ ನಿತ್ಯ ನಿರಂತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾನೆ. ಇದೇ ಚಟುವಟಿಕೆಯನ್ನು ಮುಂದುವರೆಸಿ ಶತ ವರುಷ ಬದುಕಿ ಬಾಳಲಿ ಎಂದು ಹಾರೈಸುತ್ತೇನೆ.

****

ನನ್ನ ಮೆಚ್ಚಿನ ಬಾಲ್ಯಮಿತ್ರ

ಎಂ.ಕೆ. ಧ್ರುವಕುಮಾರ್
ಚರವಾಣಿ : ೮೭೬೨೨೭೨೧೭

"ನನಗೊಂದು ಗೌರವ ಗ್ರಂಥ ಅರ್ಪಿಸುತ್ತಿದ್ದಾರೆ. ಅದಕ್ಕೆ ನೀನೊಂದು ಲೇಖನವನ್ನು ನನ್ನ ಬಗ್ಗೆ ಬರೆಯಬೇಕು. ಪ್ರೈಮರಿ ಸ್ಕೂಲಿನಿಂದ ಸ್ನೇಹಿತರು ನಾವು. ೭೫ ವರ್ಷಕ್ಕೂ ಹೆಚ್ಚು ಕಾಲದ ಸ್ನೇಹ ನಮ್ಮದು. ನಿಮ್ಮನೆ ಪಕ್ಕದಲ್ಲಿದ್ದ ಮಾವಿನ ತೋಪು ನಮ್ಮ ಆಟದಮೈದಾನ ಆಗಿತ್ತು. ಸ್ಕೂಲ್ ಬಿಟ್ಟರೆ ಸಂಜೆಯಲ್ಲಿ ಗೋಲಿ ಬುಗುರಿ ಚಿಣ್ಣಿಕೋಲು ಮಾವಿನ ತೋಪಲ್ಲಿ ಆಡ್ತಾ ಇದ್ದುದ್ದು ನನಗೆ ಚೆನ್ನಾಗಿ ನೆನಪಿದೆ" ಎಂದೆಲ್ಲಾ ನೀನೇನೋ ಹೇಳಿದೆ. "ಆದರೆ ನಿನ್ನ ಹಾಗೆ ಮಾತಾಡೋದು ಬರೆಯೋದು ಈ ಜನ್ಮದಲ್ಲಿ ನನಗೆ ಸಾಧ್ಯವಿಲ್ಲ" ಎಂದಿದ್ದಕ್ಕೆ "ನಿನಗೆ ತೋಚಿದ ಹಾಗೆ ಬರೆ. ಬಾಲ್ಯಮಿತ್ರರು ಈಗ ೩-೪ ಜನ ಮಾತ್ರ ಇದ್ದಾರೆ. ಅದರಲ್ಲಿ ನೀನೊಬ್ಬ. ನಿನ್ನಷ್ಟು ಓಲ್ಡ್ ಫ್ರೆಂಡ್ ಯಾರೂ ಇಲ್ಲ" ಅಂತ ಹೇಳಿ, ಬಲವಂತ ಮಾಡಿದ್ದಕ್ಕೆ ತೋಚಿದ ಎರಡು ಮಾತನ್ನು ಬರೀತಾ ಇದ್ದೀನಿ.

ನಿನ್ನ ಜತೆ ಕಾಲ ಕಳೆದ ಶಾಲಾದಿನಗಳನ್ನು ನೆನೆಸಿಕೊಂಡರೆ ಈಗಲೂ ಖುಷಿ ಆಗುತ್ತದೆ. ಚಾಮರಾಜಪೇಟೆಯಲ್ಲಿ ನಿಮ್ಮ ಮನೆ ೪ನೇ ರಸ್ತೆ ನಮ್ಮನೆ ೫ ನೇ ರಸ್ತೆ. ಸ್ಕೂಲ್ ಇದ್ದಿದ್ದು ೩ ನೇ ರಸ್ತೆ. ಎಲ್ಲಾ ೪ ನೇ ಕ್ರಾಸಿನಲ್ಲಿ ಸಾಲಾಗಿ ಇತ್ತು. ನೀನು ನಮ್ಮನೆಗೆ ಬಂದು, ನಂಜೊತೆ ಸ್ಕೂಲಿಗೆ ೪ ನೇ ರಸ್ತೆಯಿಂದ ೩ನೇ ರಸ್ತೆ ಸ್ಕೂಲಿಗೆ ಹೋಗಲು ೫ನೇ ರಸ್ತೆಗೆ ಬರುತ್ತಿದ್ದೆ. ನಿನ್ನ ಸ್ನೇಹಿತನ ಮನೇಲಿ ೩ನೇ ರಸ್ತೆಗೆ ಹೋಗಿ ಸ್ಕೂಲಿಗೆ ಬರ್ತೀಯ ಏಕೆ? ಕೊಂಕಣ ಸುತ್ತಿ ಮೈಲಾರ ಸುತ್ತಿದ ಹಾಗೆ ಎಂದು ನಮ್ಮ ಜೊತೆ ಇದ್ದ ಮಂಜುನಾಥ ಹೇಳಿದ್ದು ಕೇಳಿದ್ದಕ್ಕೆ ಆಗ ನೀನು ಹೇಳಿದ ಮಾತು ಈಗಲೂ ನನಗೆ ನೆನಪಿದೆ. ದೇವಸ್ಥಾನದಂತಹ ಮನೆಗೆ ಹೋಗಿ ಅವನ ಜತೆ ಸ್ಕೂಲಿಗೆ ಬರ್ತೀನಿ ಅಂದಿದ್ದೆ.

ನಿಜವಾದ ಸಂಗತಿ ಏನಪ್ಪಾ ಎಂದರೆ ನಿಮ್ಮನೇಲಿ ಬೆಳಿಗ್ಗೆ ತಿಂಡಿ ಮಾಡ್ತಾ ಇರಲಿಲ್ಲ. ನಮ್ಮ ಮನೇಲಿ ದಿನಾ ಬೆಳಿಗ್ಗೆ ತಿಂಡಿ ತಪ್ಪುತ್ತಿರಲಿಲ್ಲ. ಆದರೆ ನಮ್ಮಮ್ಮ ನಮಗಿಬ್ಬರಿಗೂ ಸಮನಾಗಿ, ಪ್ರೀತಿಯಿಂದ ತಿಂಡಿ ಕೊಡುತ್ತಿದ್ದುದು ಈಗಲೂ ನನ್ನ ನೆನಪಿನಲ್ಲಿದೆ. ನನಗೆ ನಿನಗೆ ಇಬ್ಬರಿಗೂ ಸಮವಾಗಿ ಒಂದೇ ಸಲ ತಿಂಡಿ ಕೊಡುತ್ತಿದ್ದರು. ನಮ್ಮಮ್ಮನಿಗೆ ನಿನ್ನ ಕಂಡರೆ ಎಷ್ಟು ಪ್ರೀತಿ ಎಂದರೆ ನೀನು ಬರುವವರೆಗೂ ನಮ್ಮಮ್ಮ ನನಗೆ ತಿಂಡಿ ಕೊಡ್ತಿರಲಿಲ್ಲ. ನಾನು ನಿನಗೆ "ದಿನಾ ಬೆಳಿಗ್ಗೆ ಬೇಗ ಬಾರೋ, ನೀನು ಬರೋವರೆಗೆ ನಮ್ಮಮ್ಮ ತಿಂಡಿ ಕೊಡೋಲ್ಲ" ಎನ್ನುತ್ತಿದ್ದೆ.

ಆವಾಗ ಕಾಮನ ಹಬ್ಬದ ಆಚರಣೆಯಲ್ಲಿ ಚಾಮರಾಜಪೇಟೇಲಿ ಪ್ರತಿ ರಸ್ತೇಲೂ ಕಾಮನನ್ನು ಸುಡುತ್ತಿದ್ದರು. ಎಲ್ಲರ ಮನೆಯಿಂದ ಒಣಗಿದ ಗರಿ, ಹಳೇಚಾಪೆ, ಸೌದೆ, ಬೆರಣಿ, ಪೊರಕೆ ಮೊರ ಸುಡುವಂಥ ಎಲ್ಲ ವಸ್ತುಗಳನ್ನು ಎಲ್ಲರ ಮನೆಯಿಂದ ತಂದು ಒಟ್ಟಿಗೆ ಸೇರಿಸಿ ಕಾಮನನ್ನು ಸುಡಲು

ಗೋಪುರವಾಗಿ ಎಲ್ಲಾ ಜೋಡಿಸುತ್ತಿದ್ದೆವು. "ಕಾಮಣ್ಣ ಕಟ್ಟಿಗೆ ಭೀಮಣ್ಣ ಬೆರಣಿ ಅಡಕೆ ಗೋಟು ಎಕ್ಕಡದೇಟು ವರ್ಷಕ್ಕೊಮ್ಮೆ ಬರುವೆವು ನಾವು ಸದಾ ಬರುವವರಲ್ಲಾ" ಎಂದೆಲ್ಲಾ ಕೂಗುತ್ತಾ ಬಾಯಿಬಡಿದುಕೊಳ್ಳುತ್ತಾ ಬೆಂಕಿಯಿಟ್ಟ ಗುಡ್ಡೆಗೆ ಸುತ್ತು ಹಾಕುತ್ತಿದ್ದ ಆ ದಿನಗಳನ್ನು ಈಗೆಲ್ಲಿ ಕಾಣೋಣ? ಮಹಾರಾಜರ ವರ್ಧಂತಿ ದಿನ ಬೆಳಿಗ್ಗೆ ಕಾಯೌ ಶ್ರೀಗೌರಿ ಹಾಡಿಸಿ ಎಲ್ಲರಿಗೂ ಲಾಡು ಹಂಚುತ್ತಿದ್ದರು. ಮುನಿಸಿಪಾಲಿಟಿ ಗಾಡಿಗಳಲ್ಲಿ ಲಾಡು ಬುಟ್ಟಿಗಳು ಸ್ಕೂಲಿಗೆ ಬಂದ ತಕ್ಷಣ ಹೋ ಲಾಡು ಬಂತು ಲಾಡು ಅಂತ ನಾವು ಕೂಗಿ ಕೊಂಡ ನೆನಪು ಈಗಲೂ ಇದೆ.

ಆಗ ಉದ್ದ ಮಣೆಗಳ ಮೇಲೆ ಕುಳಿತುಕೊಂಡು ಪಾಠ ಕೇಳುತ್ತಿದ್ದೆವು. ನೀನು ಯಾವಾಗಲೂ ನನ್ನ ಪಕ್ಕದಲ್ಲೇ ಕೂಡುತ್ತಿದ್ದೆ. ನಮ್ಮಿಬ್ಬರ ಪಕ್ಕ ವರದರಾಜ ಮಂಜುನಾಥ ನಾವು ನಾಲ್ಕು ಜನ ಸದಾ ಒಂದು ಗುಂಪು. ಈಗ ಅವರೆಲ್ಲೋ ನಾವೆಲ್ಲೋ. . . . ಹೀಗೆ ಹಲವಾರು ಸಂಗತಿಗಳು ನೆನಪಾದವು. ಉಳಿದವು ನೆನಪಾಗುತ್ತಿಲ್ಲ. ನೀನು ನನ್ನ ಬಾಲ್ಯದ ಶಾಲಾಗೆಳೆಯ. ಒಳ್ಳೆಯ ವಾಗ್ಮಿ, ಸಾಹಿತಿ, ಲೇಖಕ ಅನ್ನೋದನ್ನ ಹೇಳಿಕೊಳ್ಳೋಕೆ ಬಲು ಖುಷಿ ನನಗೆ. ನಿನ್ನ ಬಗ್ಗೆ ಒಂದು ಗೌರವಗ್ರಂಥ ತರುತ್ತಾರೆ ಅಂತ ಕೇಳಿ ನನಗೆ ಬಹಳ ಸಂತೋಷ ಆಯಿತು. ನೀನು ಏನನ್ನಾದರೂ ಬರೀಲೇಬೇಕು ಎಂದಿದ್ದಕ್ಕೆ ತೋಚಿದ್ದು ಗೀಚಿದ್ದೇನೆ. ನಿನಗೆ ಬೇಕಾದ ಹಾಗೆ ಸರಿಮಾಡಿಕೋ. ನಾನು ನಿನ್ನ ಹಾಗೆ ಬರಹಗಾರನಲ್ಲ. ಎಷ್ಟಾದರೂ ನೀನು ಲೇಖಕ ನಾನು ಓದುಗ, ನಿನ್ನ ಬಾಲ್ಯದ ಗೆಳೆಯ ಅಷ್ಟೆ ಅಲ್ಲವೇ?

****

ಆತ್ಮೀಯ ಸಾಹಿತ್ಯ ಸೋದರ

ಡಾ. ಜಿ.ವಿ. ಜಯರಾಜಶೇಖರ್
ಚರವಾಣಿ : ೯೯೮೬೦೩೨೮೨೪

ನಡೆದಾಡುವ ವಿಶ್ವಕೋಶ ಎನ್ನಬಹುದಾದಂತಹ ಘನವಿದ್ವಾಂಸರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಮೊಟ್ಟಮೊದಲು ನಮ್ಮ ಮನೆಗೆ ಬಂದದ್ದು ನನಗಿನ್ನೂ ನೆನಪಿದೆ. ಸುತ್ತೂರು ಮಠದ ಪ್ರಕಟಣೆ "ಅರ್ಚನ" ಹೆಸರಿನ ಬೃಹದ್ಗ್ರಂಥ ಇದ್ದರೆ ಬೇಕೆಂದು ನಮ್ಮ ಮನೆ ಹತ್ತಿರದಲ್ಲಿದ್ದುದರಿಂದ ತಾವೇ ಬಂದರು. ಅಂದೇ ನಾನು ಅವರನ್ನು ಮೊದಲು ನೋಡಿದ್ದು, ಪರಿಚಯವಾಗಿದ್ದು.

ಸಾಹಿತ್ಯಾಸಕ್ತರು, ಸೇರಿದರೆ ಕೇಳಬೇಕೆ! ಬೇಕಾದಷ್ಟು ಗ್ರಂಥಗಳ ಬಗೆಗೆ ಚರ್ಚೆ ಮಾಡಿದೆವು. ಮುಂದೆ ಅನೇಕ ಬಾರಿ ಮನೆಗೆ ಬಂದಿದ್ದಾರೆ. ನನ್ನ ಸಾಹಿತ್ಯ ಜ್ಞಾನವನ್ನು ಹೆಚ್ಚಿಸಿದ್ದಾರೆ. ನನ್ನ ರಚನೆಗಳಿಗೆ ಪೂರಕಗ್ರಂಥ, ವಿಷಯಗಳನ್ನು ನೀಡಿ, ಸಾಹಿತ್ಯದ ಕೆಲಸಗಳು ಇನ್ನೂ ಚೆನ್ನಾಗುವಂತೆ ಸಲಹೆ ಸೂಚನೆ ನೀಡಿದ್ದಾರೆ.

ಇದು ನನಗೊಬ್ಬಳಿಗೆ ಅಲ್ಲ, ಅವರಿಂದ ಸಹಾಯ, ಸಲಹೆ ಪಡೆದವರು ಬಹುಜನ. ಬಿಂಕ, ಬಿಗುಮಾನವಿಲ್ಲದ ಸರಳ ಸಜ್ಜನರು. ಅದಕ್ಕಿಂತ ಹೆಚ್ಚಾಗಿ ಮತ್ಸರರಹಿತರು. ಇಷ್ಟು ವರ್ಷಗಳನ್ನು ಅವರ ಪರಿಚಯದಲ್ಲಿ ಕಂಡದ್ದು, ಅವರು ಯಾರ ಬಗ್ಗೆಯೂ ಅನವಶ್ಯಕವಾಗಿ ಮಾತನಾಡದ, ತಮ್ಮ ಜ್ಞಾನದ ಲಾಭವನ್ನು ಬಯಸಿದವರಿಗೆಲ್ಲಾ ಹಂಚುವ ಅಪರೂಪದ ವ್ಯಕ್ತಿ.

ನನ್ನ ಅಭಿನಂದನಾ ಗ್ರಂಥ ೨೦೦೭ರಲ್ಲಿ "ಶೂನ್ಯಪಥಿಕಾ" ಬಂತು. ಅದರಲ್ಲಿ ಅವರು ಬರೆದಿರುವ ಲೇಖನ ಅತ್ಯಂತ ಹೃದಯಸ್ಪರ್ಶಿ. ಅದರಿಂದಲೇ ಅವರ ಬರವಣಿಗೆಯ ರೀತಿ, ಆತ್ಮೀಯತೆ, ವ್ಯಕ್ತಪಡಿಸಿರುವ ಸೂಕ್ಷ್ಮತೆ ತಿಳಿಯಬಹುದು.

ಮೊದಲ ಭೇಟಿಯ ಸಂದರ್ಭದ ಪರಿ:- ಮನೆಯ ಕೆಲಸದ ನಡುವೆ ಮಾತನಾಡುತ್ತಾ, ಸತ್ಕರಿಸುತ್ತಾ, ಸಾಹಿತ್ಯ ಚರ್ಚೆ ಮಾಡುತ್ತಾ ತಮ್ಮ ಮನೆಯವರನ್ನು ಪರಿಚಯ ಮಾಡಿಸುತ್ತಾ, ಮಗಳನ್ನು ವಿಚಾರಿಸುತ್ತಾ, ನಡೆದುಕೊಂಡ ರೀತಿ ಗೃಹಿಣಿಯೊಬ್ಬಳು ಹೇಗೆ ಮನೆಯವರನ್ನು, ಬಂದವರನ್ನು ಏಕಕಾಲದಲ್ಲಿ ಆದರ್ಶಪ್ರಾಯವಾಗಿ ನಿಭಾಯಿಸಬಹುದು ಎಂಬುದಕ್ಕೆ ಮಾದರಿ ಸಂಗತಿ ಆಗಿತ್ತು.

ನನ್ನ ಕೃತಿಗಳನ್ನೆಲ್ಲಾ ಓದಿ ಸಹೃದಯ ವಿಮರ್ಶೆ ಮಾಡಿದ್ದಾರೆ. ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಕನ್ನಡದ ಶ್ರೇಷ್ಠ ಕಲಾವಿದೆಯರಲ್ಲಿ, ಲೇಖಕಿಯರಲ್ಲೊಬ್ಬರು. ಇವರ ಸೇವೆ ವನಸುಮದಂತೆ ಎಂದು ಶ್ಲಾಘಿಸಿದ್ದಾರೆ.

"ಜಯಾ ಅವರನ್ನು ನೋಡಿದಾಗೆಲ್ಲ ನನಗೆ ಅಚ್ಚರಿ ಉಂಟುಮಾಡುವ ಸಂಗತಿ- ಸರಳತೆ. ಹೊರಗೆ ನೋಡಿದವರಿಗೆ, ಮಾತನಾಡಿಸಿದವರಿಗೆ ಈಕೆ ಇಷ್ಟು ಸಾಧನೆ ಮಾಡಿದ್ದಾರೆ ಎಂದು

ಅನ್ನಿಸುವುದಿಲ್ಲ. ಏಕೆಂದರೆ ಆಕೆಗೆ ಪ್ರದರ್ಶನ ಮನೋಭಾವವಿಲ್ಲ. ನಾನೊಂದು ಶ್ರೇಷ್ಠ ಕಾರ್ಯ ಮಾಡಿದ್ದೇನೆ ಎಂಬ ಆತ್ಮವಿಶ್ವಾಸವಿದ್ದರೂ ಅಹಂ ಇಲ್ಲ" ಎಂದು ನನ್ನ ಬಗ್ಗೆ ಅವರು ಬರೆದ ಲೇಖನದಲ್ಲಿ ಹೇಳಿರುವುದು ಅವರ ಸಹೃದಯತೆಗೆ ಸಾಕ್ಷಿ.

ನನಗೆ ಅವರೇನೂ ದೀರ್ಘಕಾಲದ ಪರಿಚಯದವರಲ್ಲ. ನನ್ನ ಕೃತಿಗಳನ್ನು ಓದಿ ಮೆಚ್ಚಿಕೊಂಡವರು. ಕಾವ್ಯವಾಚನ ಕೇಳಿ ಆನಂದಿಸಿದವರು ಅಷ್ಟೇ. ಕೆಲವೇ ಸಂದರ್ಭಗಳಲ್ಲಿ ಭೇಟಿ ಆದರೂ ಅವರ ಸೌಜನ್ಯಪೂರ್ಣ ವರ್ತನೆ, ನೇರ ಮಾತು, ಆತ್ಮೀಯ ಭಾವ ಮನ ಸೆಳೆದಿದೆ.

"ನಾನು ಬರೆದ ಗ್ರಂಥಗಳಲ್ಲಿ ಐದನೆಯ ಶೂನ್ಯಸಂಪಾದನೆ, ಎಲೆ ಮಲ್ಲಪ್ಪಶೆಟ್ಟರು, ನೆನಪಿನ ಸುಳಿಯಲ್ಲಿ ಗ್ರಂಥಗಳನ್ನು ತುಂಬಾ ಮೆಚ್ಚಿಕೊಂಡಿದ್ದಾರೆ. ಆ ಬಗ್ಗೆ ಮೆಚ್ಚಿನ ಮುನ್ನುಡಿಯನ್ನು ಬರೆದು ಉತ್ತೇಜಿಸಿದ್ದಾರೆ.

"ಕನ್ನಡದಲ್ಲಿ ಸದ್ದಿಲ್ಲದೆ ಶಿವಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆ ಕೊಟ್ಟಿರುವ, ಕೊಡಲಿರುವ ಒಬ್ಬ ಸಾಧ್ವೀ ಲೇಖಕಿ. ತೆರೆಮರೆಯ ಸದ್ಗೃಹಿಣಿ ನಮ್ಮೊಡನೆ ಇರುವುದು ಸಂತೋಷದ ಸಂಗತಿ. ಅರಮನೆ ಜೀವನ ಮಾಡಿದರೂ ಗುರುಮನೆ ಎಲೆಮನೆಗಳನ್ನು ಮರೆಯದ ಬಾಳು. ಅವರ ಅಂತರಂಗ ಒಂದು ಮಹಾಮನೆ. ಮೆಚ್ಚಿದ್ದನ್ನು ಹೇಳಲು ಜಿಪುಣತನವಿಲ್ಲ!" ಎಂದು ನನ್ನನ್ನು ಪ್ರಶಂಸಿಸಿದ್ದಾರೆ.

ಇನ್ನು ಹಿರಿಯರು, ಸಾಹಿತ್ಯ-ಸಂಗೀತ, ಗಮಕ ಸೋದರ-ಸೋದರಿಯರು ವಿಮರ್ಶಕರು ಮುಂತಾಗಿ ಹಿತೈಷಿಗಳು ಬರೆದಿರುವ (ಅವುಗಳಲ್ಲಿ ಕೆಲವು ಇಲ್ಲವಾಗಿವೆ) ಪತ್ರಗಳನ್ನು "ಪತ್ರಲೋಕ-ಭಾಗ ೨" ಹೆಸರಿನಲ್ಲಿ ಮತ್ತೊಂದು ಪುಸ್ತಕ ಮಾಡಿಸಲು ೨೦೧೫ ರಲ್ಲಿ ಮನಸ್ಸು ಮಾಡಿ ಕಾರ್ಯೋನ್ಮುಖಳಾದೆ. ಆಗ ಶ್ರೀ ಅಶ್ವತ್ಥನಾರಾಯಣ ಅವರಿಗೆ ವಿಷಯ ತಿಳಿಸಿದೆ. ಸುಮಾರು ೩೦೦ಕ್ಕೂ ಹೆಚ್ಚು ಪತ್ರಗಳ ಕರಡು ಪ್ರತಿ ತೋರಿಸಿ, ಅವರ ಸಲಹೆ, ಸೂಚನೆ ಪಡೆದೆ. ಆ ಕೆಲಸ ಮುಂದುವರಿದು ಅವರಿಗೆ "ಅಚ್ಚಿಗೆ ಸಿದ್ಧಪಡಿಸಿದ್ದೇನೆ. ತಾವು ಒಂದು ಮುನ್ನುಡಿ ಬರೆದು ಕೊಡಿ" ಎಂದು ಕೋರಿದೆ. ಅವರು "ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದ ಕಥೆಯನ್ನು ೧೦೦೦ ಪುಟಗಳಲ್ಲಿ ಸಿದ್ಧಪಡಿಸುತ್ತಿದ್ದೇನೆ. ಮುಂದಿನ ತಿಂಗಳವರೆಗೆ ಬಿಡುವಿಲ್ಲ" ಎಂದರು.

ತಿಂಗಳಾದ ಮೇಲೆ ಮತ್ತೆ ಫೋನ್ ಮಾಡಿದೆ. ಅವರ ಮುನ್ನುಡಿಗಾಗಿ ಪ್ರಿಂಟಿಂಗ್ ಕೆಲಸ ಮುಂದೂಡಿದೆ. ಆಗ ಅವರು ಬರೆಯುತ್ತಾರೆ – "ಸಹೃದಯಿ, ಸಜ್ಜನ ಗೃಹಿಣಿ, ಸಾಹಿತಿ, ಕಲಾವಿದೆ ಆಗಿರುವ ಕೋವಿದೆ, ಪ್ರೀತಿ ವಾತ್ಸಲ್ಯಗಳಿಂದ ಇಚ್ಛಿಸಿದಾಗ ಯಾರು ತಾನೇ ಇಲ್ಲವೆನ್ನಲು ಸಾಧ್ಯ? ನೀವೇ ಹೇಳಿ! ಎಂದು ಬೆಲೆಯುಳ್ಳ ಮುನ್ನುಡಿ ಬರೆದಿದ್ದಾರೆ. ಪತ್ರಲೋಕ – ಭಾಗ ೨ ರಲ್ಲಿ ಅವರು ಬರೆದಿರುವ ಮುನ್ನುಡಿ ನಿಜವಾಗಿಯೂ ಅವರು ಅದಕ್ಕಾಗಿ ಸಮಯ ಮೀಸಲಿಟ್ಟು ಪೂರಾ ಪತ್ರಗಳನ್ನು ಆ ಮೂಲವಾಗಿ ಓದಿ, ವ್ಯಕ್ತಪಡಿಸಿರುವ ರೀತಿಗೆ ಎಂತಹವರೂ ಬೆರಗಾಗಬೇಕು!

ಆ ಪತ್ರಗಳ ಬರಹದಿಂದ ಬರೆದವರ ಹಿರಿಮೆಯನ್ನು ಹೃದಯ ವೈಶಾಲ್ಯವನ್ನು ಅವರ ವ್ಯಕ್ತಿತ್ವ ಘನತೆಯನ್ನು ಉದಾಹರಿಸಿರುವ ರೀತಿ ನೋಡಿ :

"ಪ್ರಸಿದ್ಧ ನಟರೆಂದು ಹೆಸರಾಗಿದ್ದ ಬಳ್ಳಾರಿ ರಾಘವ ಅವರಿಗೆ, "ರಾಘವ, ಇಂಗ್ಲೆಂಡಿಗೆ ಹಡಗಿನಲ್ಲಿ ಇಲಿ ಹೆಗ್ಗಣಗಳೂ ಹೋಗುತ್ತವೆ. ಅದರಂತೆ ನೀನಾಗಬಾರದು. ನಿಜವಾದ ಭಾರತೀಯ ಕಲೆಯನ್ನು ತಿಳಿಸಲು ಹೋಗು, ನಮ್ಮದೇ ದೇಶದ ಶ್ರೇಷ್ಠತೆಯನ್ನು ಅವರಿಗೆ ತಿಳಿಸಿ ಬಾ" ಎಂದು ಜೋಳದರಾಶಿಯವರು ಹೇಳಿದರೆಂದು ಹೇಳಿದ್ದನ್ನು ತಿಳಿಸಿ, ವಿದೇಶಕ್ಕೆ ಸಾಮಾನ್ಯರು ಹೋದರೆ

ಪ್ರಯೋಜನವಿಲ್ಲ. ಸಂಸ್ಕೃತಿಯ ರಾಯಭಾರಿಗಳಾಗಿ ಹೋಗಬೇಕು. ಚಿಪ್ಪಿನಲ್ಲಿ ಬಿದ್ದ ಮಳೆಯ ಹನಿ ಯಾವಾಗಲೂ ಮುತ್ತಾಗುವುದಿಲ್ಲ. ಅದು ಸ್ವಾತಿಮಳೆಯಲ್ಲಿ ಬಿದ್ದಾಗ ಮಾತ್ರ ಮುತ್ತಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿ, ವಿದೇಶಕ್ಕೆ ಹೋಗುವ ವಿದ್ಯಾರ್ಥಿಗಳು, ರಾಜಕಾರಣಿಗಳು-ಪ್ರವಾಸಿಗಳು ಸರ್ಕಾರ ಮತ್ತು ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಹಾಗೆ ನಿಯೋಜಿಸಲ್ಪಟ್ಟವರು ವಿದೇಶಗಳಿಗೆ ಹೋಗುವಾಗ ಖಂಡಿತವಾಗಿ ಜೋಳದರಾಶಿಯವರು ಹೇಳಿರುವ ಮಾತುಗಳನ್ನು ಚೆನ್ನಾಗಿ ಮನನ ಮಾಡಬೇಕು" ಎಂದಿದ್ದಾರೆ.

ನಾನು ಐದನೆಯ ಶೂನ್ಯ ಸಂಪಾದನೆ ಸಂಕಲಿಸುತ್ತಿದ್ದಾಗ ಡಾ. ಎಂ.ಎಂ. ಕಲ್ಬುರ್ಗಿಯವರು ಸಲಹೆ, ಸೂಚನೆ ನೀಡಿ ಬರೆದ ಪತ್ರದ ಬಗೆಗೆ ಒಬ್ಬ ಮಹಾನ್ ಸಂಶೋಧಕ ಸಹೃದಯಿಯಾಗಿದ್ದರೆ ಅನ್ಯರ ಸಂಶೋಧನಾಕಾರ್ಯಕ್ಕೆ ಹೇಗೆ ನೆರವಾಗಬಲ್ಲ ಎಂಬುದನ್ನು ಈ ಮಾತುಗಳು ಸಾರುತ್ತವೆ ಎಂದು ಕಲ್ಬುರ್ಗಿಯವರ ಹಿರಿಮೆಯನ್ನು ಹೇಳಿದ್ದಾರೆ.

ಒಬ್ಬ ಸಹೃದಯ ವಿದ್ವಾಂಸ ಒಬ್ಬ ಸಜ್ಜನ ಕವಯತ್ರಿಗೆ ಸ್ಪಂದಿಸಿರುವ ಬಗೆಯನ್ನು ಶ್ರೀ ಕೆ.ಎಸ್. ನಾರಾಯಣಾಚಾರ್ಯರು (ಪ್ರಖ್ಯಾತ ವಿದ್ವಾಂಸರು) ಲೇಖಕಿಗೆ ಬರೆದ ಒಂದು ಪತ್ರಭಾಗವನ್ನೇ ಹಾಕಿ, ಅವರ ಹೃದಯ ವೈಶಾಲ್ಯವನ್ನು, ಆ ಮೆಚ್ಚುಗೆಯನ್ನು ಪಡೆದ ಲೇಖಕಿಯ ಧನ್ಯತೆಯ ಬಗೆಗೆ-

"ಎಷ್ಟು ಜನರಿಗೆ ಇಂಥ ಪ್ರಶಸ್ತಿ ನಮ್ಮ ಲೇಖಕಿಯರಲ್ಲಿ ದೊರೆತಿದೆ? ಒಂದೇ ಮಾತಿನಲ್ಲಿ ಹೇಳುವುದಾದರೆ "ಕನ್ನಡ ಪತ್ರ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ, ಮಾನವೀಯ ಮೌಲ್ಯಗಳು- ಲೇಖಕಿಯೊಬ್ಬಳ ಕೃತಿಗಳ ಬಗ್ಗೆ ಸಹೃದಯ ವಿಮರ್ಶೆ-ಈ ಪತ್ರ ಸಂಕಲನ" ಎಂದು ಹೇಳಿದರೆ ತಪ್ಪಾಗಲಾರದು" ಎಂದು ಬರೆದಿದ್ದಾರೆ.

ಆ ಗ್ರಂಥದ ಪ್ರಾರಂಭದಲ್ಲಿ "ಶ್ರೀಮತಿ ಜಯಾರಾಜಶೇಖರ್ ಅವರದು ಬಹುಮುಖ ವ್ಯಕ್ತಿತ್ವ, ಗಾಯಕಿ, ಗಮಕಿ, ವ್ಯಾಖ್ಯಾನ ನಿರೂಪಕಿ, ವೀಣಾವಾದಕಿ, ಲೇಖಕಿ, ಭಾಷಣಕಾರ್ತಿ, ಶೂನ್ಯಸಂಪಾದಕಿ, ಸಮಾಜ ಸೇವಕಿ ಹೀಗೆ ಕನ್ನಡದ ಸುಪುತ್ರಿ ಅವರು" ಎಂದು ಈ ಸೋದರಿಯ ಬಗೆಗೆ ಮೆಚ್ಚುಗೆಯಿಂದ ವಾತ್ಸಲ್ಯದ ಮಳೆಗರೆದಿದ್ದಾರೆ ಶ್ರೀಯುತ ಪ್ರೊ. ಜಿ. ಅಶ್ವತ್ಥನಾರಾಯಣ ಅವರು. ಅವರ ಸೂಕ್ಷ್ಮದೃಷ್ಟಿ ಸಮಗ್ರ ಅನ್ವೇಷಣೆ, ಸೂಕ್ಷ್ಮ ಸಂವೇದನೆ ವಿಶಿಷ್ಟವಾದವು.

ಜೊತೆಯಲ್ಲಿ ಹುಟ್ಟಿದವರಿಗೆ ಅಲ್ಲ, ದೈವ ಕೊಡುವ ಆತ್ಮೀಯ ಬಂಧುಗಳೂ ಸೋದರರಾಗಬಲ್ಲರು.

ಈ ವಿದ್ವಾಂಸ ಸೋದರ ಅಶ್ವತ್ಥನಾರಾಯಣ ಅವರಿಗೆ ಈ ಶುಭ ಸಂದರ್ಭದಲ್ಲಿ ಅವರಿಗೆ ಸಲ್ಲಲಿರುವ ಅಭಿನಂದನಾ ಗ್ರಂಥಕ್ಕೆ ನನ್ನದೊಂದು ಲೇಖನ ಬರೆಯುವ ಅಪೂರ್ವ ಅವಕಾಶ ದೊರೆತುದು ನನ್ನ ಸೌಭಾಗ್ಯವೆಂದು ತಿಳಿದಿದ್ದೇನೆ.

ಈ ಸಾಹಿತ್ಯ ಬಂಧುವಿಗೆ ಆರೋಗ್ಯ, ಪೂರ್ಣಾಯುಸ್ಸು, ನೆಮ್ಮದಿಯ ಜೀವನ ಅನವರತವೂ ದೊರೆಯಲೆಂದು ಹೃದಯಪೂರ್ವಕ ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ.

****

ಮಕ್ಕಳಕೂಟದಲ್ಲಿ ನಮ್ಮ ಕನ್ನಡ ಮೇಷ್ಟ್ರು

ಕೆ. ಚಂದ್ರಶೇಖರ್
ಚರವಾಣಿ : ೯೪೪೮೭೨೦೦೧೦

ಎಪ್ಪತ್ತರ ದಶಕದಲ್ಲಿ ನಾನು ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಡಿಗ್ರಿ ವ್ಯಾಸಂಗ ಮಾಡುತ್ತಿದ್ದೆ. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ನನ್ನ ಮನೆಯಿಂದ ಸುಮಾರು ೫ ಕಿ.ಮೀ. ನಡೆದು ಹೋಗುತ್ತಿದ್ದ ನಮಗೆ ಕನ್ನಡ ಪ್ರಾಧ್ಯಾಪಕರು ಅವರ ಪಾಠಗಳು ಸಾಕಷ್ಟು ಮುದನೀಡಿದ್ದವು. ಬಹಳ ಆಸಕ್ತಿ ಮತ್ತು ಆಕರ್ಷಣೆಯಿಂದ ಕೂಡಿದ್ದವು. ಶ್ರೀಯುತ ಜಿ. ಅಶ್ವತ್ಥನಾರಾಯಣರವರ ಜ್ಞಾನಭಂಡಾರ ಕೇವಲ ಪಾಠಗಳಲ್ಲದೇ ಸಾಹಿತ್ಯದ ವಿವಿಧ ಆಯಾಮಗಳನ್ನು ಪರಿಚಯಿಸಿತ್ತು. ಅವರ ತರಗತಿಯಲ್ಲಿ ಹಾಜರಾತಿ ಹೆಚ್ಚಿನ ಸಂಖ್ಯೆಯಲ್ಲಿರುತ್ತಿತ್ತು. ಅವರು ಪ್ರತಿ ತರಗತಿಯಲ್ಲೂ ಹೊಸ ಹೊಸ ವಿಚಾರಗಳನ್ನು ತಿಳಿಸಿ, ಕೇವಲ ಭಾಷೆ, ಪಠ್ಯ ಅಲ್ಲದೇ ಹಿರಿಯ ಕವಿಗಳ ಸಾಹಿತ್ಯ, ಬೇರೆ ಬೇರೆ ಗ್ರಂಥಗಳನ್ನು ಪರಿಚಯಿಸುತ್ತಿದ್ದರು. ಅವರು ಪಾಠ ಮಾಡುವ ವೈಖರಿ ಇನ್ನೂ ನನಗೆ ನೆನಪಿದೆ. ಅವರು ಉತ್ಸಾಹದ ಚಿಲುಮೆ ಮತ್ತು ನನ್ನ ಅಚ್ಚುಮೆಚ್ಚಿನ ಪ್ರಾಧ್ಯಾಪಕರು.

ನಾನು ಉದ್ಯೋಗದ ನಿಮಿತ್ತ ಬೇರೆ ಬೇರೆ ರಾಜ್ಯಗಳಲ್ಲಿ ಸೇವೆ ಸಲ್ಲಿಸಿ ಮರಳಿ ಬಂದ ಅನಂತರ ೨೦೧೦ನೇ ಇಸವಿಯಲ್ಲಿ ಬೆಂಗಳೂರಿನ ಮಕ್ಕಳಕೂಟದಲ್ಲಿ ಅವರ ಭೇಟಿಯಾಯಿತು. ಅನಾಜಿಯವರು ಅಲ್ಲಿ ನಡೆಯುವ ಮಕ್ಕಳ ಬೇಸಿಗೆ ಶಿಬಿರ, ಇತರ ಶೈಕ್ಷಣಿಕ, ಕಲಾ, ಕ್ರೀಡೆ ಹಾಗೂ ವ್ಯಕ್ತಿವಿಕಸನ ಶಿಬಿರಗಳಲ್ಲಿ ಅವರ ಭಾಷಾ ಪಾಂಡಿತ್ಯದಿಂದ ಎಲ್ಲಾ ಮಕ್ಕಳಿಗೂ ಜ್ಞಾನಧಾರೆ ಎರೆಯುತ್ತಿದ್ದರು. ಅವರ ಕೆಲವೇ ಕ್ಷಣಗಳ ಒಡನಾಟ ನಮ್ಮನ್ನು ಯಾವುದೋ ಲೋಕಕ್ಕೆ ಕರೆದೊಯ್ಯುತ್ತಿತ್ತು.

ಇತ್ತೀಚೆಗೆ ನಾನು ಶ್ರೀ ಜಯರಾಮ ಸೇವಾ ಮಂಡಳಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ನಮ್ಮ ಹಿರಿಯ ಅಧ್ಯಕ್ಷರಾದ ಶ್ರೀ ಎಸ್.ಕೆ. ಗೋಪಾಲಕೃಷ್ಣ ಅವರು ಶ್ರೀರಾಮನನ್ನು ಕುರಿತ ಕನ್ನಡ ಕೀರ್ತನೆಗಳನ್ನು ಸಂಗ್ರಹಿಸುವಂತೆ ಶ್ರೀ ಅನಾಜಿಯವರನ್ನು ವಿನಂತಿಸಿದ್ದರು. ಅವರು ವಿಶೇಷವಾಗಿ ದಾಸರು, ಸಂತರು ಹಾಗೂ ಮಹಿಳೆಯರು ರಚಿಸಿದ್ದಂತೆ ೧೯ನೇ ಶತಮಾನದ ಕೃತಿಗಳನ್ನು ಒಳಗೊಂಡಂತೆ ಸಂಗ್ರಹಿಸಿದರು. ಅನಂತರ ಶ್ರೀ ಜಯರಾಮ ಸೇವಾಮಂಡಳಿಯಲ್ಲಿ ಯಡತೊರೆ ಗುರುಗಳಿಂದ ಕೃತಿ ಲೋಕಾರ್ಪಣೆಗೊಂಡಿತು. ಈ ಕೀರ್ತನಸಂಗ್ರಹಕ್ಕೆ ಅಪಾರವಾದ ಮೆಚ್ಚುಗೆ ಸಂಘ ಸಂಸ್ಥೆಗಳಿಂದ ಸಂಗೀತಗಾರರಿಂದ ಲಿಖಿತರೂಪದಲ್ಲಿ ವ್ಯಕ್ತವಾಯಿತು.

ಶ್ರೀ ಅನಾಜಿಯವರು ಸಮಾಜಮುಖಿಯಾಗಿ ಯಾರಿಂದಲೂ ಯಾವುದೇ ಪ್ರಶಂಸೆ, ಬಿರುದು ಹಾಗೂ ಹಿರಿಮೆಯನ್ನು ನಿರೀಕ್ಷಿಸಿದವರಲ್ಲ. ಸಾಹಿತ್ಯಸೇವೆಯೇ ಅವರ ಪರಮ ಗುರಿಯಾಗಿದೆ. ಶ್ರೀ ದೇವುಡು ಪ್ರತಿಷ್ಠಾನದ ಗೌರವ ಸದಸ್ಯರಾಗಿದ್ದರು. ಅನಾಜಿಯವರ ಮನೆಯಲ್ಲಿ ಹೆಚ್ಚಿನ ಸ್ಥಳ

ಪುಸ್ತಕಗಳಿಗೇ ಮೀಸಲಾಗಿದೆ. ಅವರ ಜ್ಞಾಪಕ ಶಕ್ತಿ ಅಗಾಧವಾಗಿದ್ದು, ಈಗಲೂ ಯಾವ ಪುಸ್ತಕ ಯಾವ ಕಪಾಟಿನಲ್ಲಿದೆ ಎಂದು ಬಲ್ಲರು.

ಅವರ ದಣಿವರಿಯದ ಸಾಹಿತ್ಯಕೃಷಿ ನಿರಂತರವಾಗಿ ಮುಂದುವರೆದು, ಸಮಾಜದ ಬೇರೆ ಬೇರೆ ಆಯಾಮಗಳಲ್ಲಿ ಪ್ರಕಟಗೊಂಡು ಮುಂದಿನ ಪೀಳಿಗೆಗೆ ತಲುಪುವಂತಾಗಲಿ. ಈ ಅಭಿನಂದನಾ ಗ್ರಂಥ ಪ್ರಕಟನೆಯ ಸಂದರ್ಭದಲ್ಲಿ ಅವರಿಗೆ ಇನ್ನೂ ಹೆಚ್ಚಿನ ಉತ್ಸಾಹ, ಆರೋಗ್ಯ ಹಾಗೂ ಸಮಾಜದ ಮನ್ನಣೆ ದೊರೆಯಲೆಂದು ದೇವರಲ್ಲಿ ನನ್ನ ಪ್ರಾರ್ಥನೆ.

****

ಕವಿತೆ ೭ - ಹಾಸ್ಯ ಚಟಾಕಿಯ ಚತುರ

ಜಮುನ ರಮೇಶ್

ಚರವಾಣಿ : ೯೯೦೧೪೭೧೭೩೮

ಶಾಲಾ ಮುಖ್ಯೋಪಾಧ್ಯಾಯಿನಿ
ಹಾಸ್ಯ ಚಟಾಕಿಯ ಚತುರ
ಪ್ರೀತಿಯ ಚೆಲುವಿನ ಆಗರ
ವಾತ್ಸಲ್ಯದ ವಾರಸುದಾರ
ಸಹೃದಯತೆಯ ಸ್ನೇಹ ಸಾಕಾರ

ಹೊಸತನದ ಸ್ಫೂರ್ತಿಯ ಸಾಗರ
ಬೆಳಗುತ್ತಿರುವ ನವದೀಪ್ತಿ ಮಂದಿರ
ರನ್ನ ಬಾಳಿನ ಸವಿಭಾವದ ವಂಸತ
ನನ್ನ ಬಾಳಿನ ಅದಮ್ಯ ವಸಂತ

ನೀವು ನಮ್ಮೆಲ್ಲರ ಅಚ್ಚುಮೆಚ್ಚು
ಪ್ರೀತಿ ವಿಶ್ವಾಸಗಳ ಸಕ್ಕರೆಯಚ್ಚು
ಉದಾರ ನುಡಿಗಳ ಸುಮಗಳ ಕುಚ್ಚು
ಅನಾಜಿ ನೀವೇ ನಮ್ಮ ಹಿತೇಚ್ಛು

******

ಸ್ನೇಹದ ಕಡಲಲ್ಲಿ ಅನಾಜಿ

ಜಿ.ಎಸ್. ಸತ್ಯಮೂರ್ತಿ
ಚರವಾಣಿ : ೯೪೪೪೬೯೫೮೧

ಕನ್ನಡ ಸರಸ್ವತಿಯ ಲೋಕದಲ್ಲಿ ಅನಾಜಿ ಬಹು ಆತ್ಮೀಯ ನಾಮಧೇಯ, ವ್ಯಕ್ತಿತ್ವ, ತಿಳಿವು, ಅರಿವು, ಜ್ಞಾನ, ಪಂಡಿತ, ಕೋವಿದ, ವಿಶಾರದ ಇವು ಕಾಲಾನುಕ್ರಮದಲ್ಲಿ ವಯಸ್ಸಿಗೆ ಅನುಗುಣವಾಗಿ ಬಾಲ್ಯ, ಯೌವ್ವನ, ವಯಸ್ಕ, ಗೃಹಸ್ಥ, ಹಿರಿಯ ನಾಗರಕ ಹಂತಗಳಲ್ಲಿ ಬದಲಾಗುವುದು ಜೀವನ ಧರ್ಮ.

ನಾನು ಇವರನ್ನು ಕಂಡ ಮೊದಲಿನಲ್ಲಿ ತರುಣರಾಗಿದ್ದು, ಅನಕೃ, ರಾಮಮೂರ್ತಿರವರ ಕನ್ನಡ ಚಳವಳಿಯಲ್ಲಿ ಜಿ. ಅಶ್ವತ್ಥನಾರಾಯಣರವರು ಕಾರ್ಯಕರ್ತರಾಗಿದ್ದರು ವಿಮಾನಪುರದ ಕನ್ನಡ ಸೇವಾಸಮಾಜ ವಿಮಾನಪುರ ಸಂಸ್ಥೆಯಲ್ಲಿ ನಾನು ಕಾರ್ಯದರ್ಶಿಯಾಗಿದ್ದೆ, ವಿಮಾನಪುರದಲ್ಲಿ ಕನ್ನಡ ಎನ್ನಡ ಎನ್ನುವ ವಾತಾವರಣವಿತ್ತು ಕನ್ನಡಿಗರಲ್ಲಿ ಅಭಿಮಾನವನ್ನು ಹೆಚ್ಚಿಸುವ ಅಲ್ಲ ಕೆರಳಿಸುವ ಸಲುವಾಗಿ ಅನಕೃರವರ ಚಳವಳಿಯ ಸಭೆಯಲ್ಲಿ ಭಾಗವಹಿಸಿದ್ದರು. ತರುಣರಾದ ಇವರು ಮತ್ತು ನಾ.ಕೃರ. ಸತ್ಯನಾರಾಯಣರವರು ೧೯೬೨ರ ಸಭೆಯಲ್ಲಿ ನಮ್ಮ ಸಂಸ್ಥೆಯಿಂದ ಅಲ್ಲಿನ ಜೆಂಕ್‌ಷೀಟ್ ತಾರಸಿಯ ಶ್ರೀ ವೇಣುಗೋಪಾಲ ಮಂದಿರದಲ್ಲಿ ನಮ್ಮ ಸಂಸ್ಥೆಯು ಅಧ್ಯಕ್ಷರಾದ ಡಾ. ನಾರಾಯಣರಾವ್ ಪಿಸ್ಸೆಯವರ ಅಧ್ಯಕ್ಷತೆಯಲ್ಲಿ ಚಳವಳಿಗಾರರ ಸಭೆ ಆರಂಭವಾದ ತಕ್ಷಣವೇ ನಮ್ಮ ತಮಿಳು ಸ್ನೇಹಿತರಿಂದ ಜಲ್ಲಿಕಲ್ಲಿನ ಶಿಲಾವೃಷ್ಟಿ. ನಮ್ಮ ಕಾರ್ಯಕರ್ತರು ಆಚೆಯಲ್ಲಿ ಅವರ ಗಲಭೆಗಳನ್ನು ನಿಗ್ರಹಿಸಿದ ನಂತರ ಸದರಿ ಸಭೆಯು ಸುಲಲಿತವಾಗಿ ಅಡೆತಡೆ ಆಗದೆ ಮುಂದುವರಿಯಲು ಸಾಧ್ಯವಾಗುತ್ತಿತ್ತು.

ಈ ಸಭೆಯಲ್ಲಿ ಅಂದು ಅನಾಜಿಯವರು ತಮ್ಮ ಉಚ್ಚ ಕಂಠದಲ್ಲಿ ಕನ್ನಡಿಗರಲ್ಲಿ ಕನ್ನಡದ ಅಭಿಮಾನದ ಕಿಚ್ಚು ಹಚ್ಚುವ ಕಾಯಕದಲ್ಲಿ ತಮ್ಮ ಸಾಹಿತ್ಯ ಕೃಷಿಯ ವಸ್ತುಗಳನ್ನು ಅಲ್ಲಲ್ಲಿ ತೋರಿಸುತ್ತಿದ್ದರು. ಅವರ ಮಾತಿನ ಚಕಮಕಿಯಿಂದಾಗಿ ನಾನು ಅವರನ್ನು ಹೃದಯ ಸ್ನೇಹಿತರನ್ನಾಗಿ ಮಾಡಿಕೊಂಡೆ. ಇದಾದ ನಂತರ ನಾಯಕರಾದ ಅನಕೃ ಮತ್ತು ರಾಮಮೂರ್ತಿಯವರ ಸಿಡಿಲಮಾತು ಮೊಳಗಿತು.

ಇದಾದ ಕೆಲವು ವರ್ಷಗಳ ನಂತರ ನಮ್ಮ ಸಂಸ್ಥೆಯ ತಿಂಗಳ ಕಾರ್ಯಕ್ರಮಕ್ಕೆ ಪ್ರೊ. ಅನಾಜಿ ಅವರನ್ನು ನಾನು ಮತ್ತು ನನ್ನ ಗೆಳೆಯ ಶಿ.ನಾ. ಸುಬ್ಬರಾಯರು ತ್ಯಾಗರಾಜನಗರಲ್ಲಿ ಭೇಟಿಯಾದೆವು. ಆಗ ಅವರು ನಗರದ ಸುಪ್ರಸಿದ್ಧ ಸರ್ಕಾರಿ ಕಲೆ ಮತ್ತು ವಿಜ್ಞಾನ ಸಂಸ್ಥೆಯಲ್ಲಿ ಕನ್ನಡ ಬೋಧನೆಯಲ್ಲಿ ತೊಡಗಿಸಿಕೊಂಡಿದ್ದರು. ನಾವು ಅವರನ್ನು ಕುಮಾರವ್ಯಾಸ ಭಾರತ ಮತ್ತು ಅವರ ಶ್ರೀಮತಿಯವರಾದ ಎಂ.ಆರ್. ಲಕ್ಷ್ಮೀದೇವಿಯವರನ್ನು ಕುವೆಂಪುರವರ ರಾಮಾಯಣ ದರ್ಶನಂ ಬಗ್ಗೆ ಉಪನ್ಯಾಸ ನೀಡಲು ಆಮಂತ್ರಣ ನೀಡಿದೆವು.

ಆಗ ಅವರು ನಾನು ಈ ಕಾರ್ಯಕ್ರಮಕ್ಕೆ ಬರುವೆನೆಂದು ತಿಳಿಸಿ ಶ್ರೀಮತಿಯವರನ್ನು ಭವಿಷ್ಯಕಾಲದಲ್ಲಿ ಆಮಂತ್ರಿಸಲು ಸೂಚಿಸಿದರು. ಅಂತು ಆಗ ಇವರ ಕಾರ್ಯಕ್ರಮ ಕನ್ನಡ ಸೇವಾಸಮಾಜದಲ್ಲಿ ಏರ್ಪಟ್ಟಿತು. ಹಿಂದೆ ಅವರು ಮಾಡಿದ ಧೀಮಂತ ಕಂಠದ ಅಭಿಮಾನದ ಹುಚ್ಚು ಕನ್ನಡಿಗರಿಗೆ ನೀಡುವ ಮಾತುಗಳಿಗೆ ಇಂದು ಪ್ರಾಧ್ಯಾಪನದ ಬೋಧನಾನುಭವದಿಂದ ಕುಮಾರವ್ಯಾಸ ಭಾರತದ ಕೆಲವು ಭಾಗಗಳ ಉಪನ್ಯಾಸಕ್ಕೂ ಇದ್ದ ಪಾಂಡಿತ್ಯ, ವಿಶದೀಕರಣದ ಸೊಗಸು, ಭಾವನೆಗಳ ಹರಿವು- ಇವೆಲ್ಲ ಅಚ್ಚುಮೆಚ್ಚು ಆಗಿದ್ದು ಸತ್ಯ.

ಈ ಸಂದರ್ಭದಲ್ಲಿ ನಾನು ಇವರ ಸಾಹಿತ್ಯ ದಾಂಪತ್ಯದ ವಿಚಾರವನ್ನು ತರಬಯಸುವುದು ಸೂಕ್ತ. ಶ್ರೀಮತಿ ಎಂ.ಆರ್. ಲಕ್ಷ್ಮೀದೇವಿಯವರು ವಿವಾಹದ ಮೊದಲೇ ಆಚಾರ್ಯ ಪಾಠಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿದ್ದು ಕನ್ನಡ ಸೇವಾಸಮಾಜದಲ್ಲಿ ಮಹಿಳೆಯರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಆಗಲೇ ಅವರ ಕನ್ನಡ ಸಾಹಿತ್ಯದ ಬಗ್ಗೆ ಮಾತನಾಡುವ ಕಲೆಯನ್ನು ಬಹು ಚೆನ್ನಾಗಿಯೇ ರೂಪಿಸಿಕೊಂಡಿದ್ದರು. "ಮನಸು ಮನಸು ಕಲೆತರೇನೇ ಮನುಜ ಬಾಳು ಸುಖದ ಸೋನೆ" ಎಂಬಂತಿದೆ, ಈ ಸಾಹಿತ್ಯ ದಾಂಪತ್ಯದ ಬಾಳ ಪಯಣ.

ನನ್ನ ಅವರ ಗೆಳೆತನ ಯಾವುದೋ ಒಂದು ಹಂತದಲ್ಲಿ ದೂರವಾಗಿದ್ದು ಮತ್ತೆ ನಮ್ಮ ಸ್ನೇಹ ಸೇರುವಂತಾಗಿದ್ದು ನಿವೃತ್ತಿ ನಂತರ. ನಮ್ಮಿಬ್ಬರ ಗೆಳೆಯ ಶ್ರೀ ಎಂ.ಕೆ. ಗೋಪಿನಾಥ್‌ರವರಿಂದ. ಈ ಹಂತದಲ್ಲಿ ನಮ್ಮ ಬರಹ, ಓದು, ಕನ್ನಡದ ಅಭಿವೃದ್ಧಿಯ ವಿಧಾನಗಳಲ್ಲಿ ಹಲವು ರೂಪಾಂತರಗಳಾದ ವೈಜ್ಞಾನಿಕ ಮಾರ್ಪಾಡುಗಳಿಗೆ ಅನುಗುಣವಾಗಿ ಹೊಂದಿಕೊಳ್ಳುವುದು ಅನಿವಾರ್ಯವಾಗಿತ್ತು. ಸಂಕ್ಷಿಪ್ತ ಸಂದೇಶಗಳ ಯುಗದಲ್ಲಿ ಅಭಿನಂದನಾ ಗ್ರಂಥ ಬೃಹತ್ ಗ್ರಂಥವಾಗಿ ಬರುವುದು ಅಭಿನಂದನೀಯವೇ ಸರಿ.

ಹಲವು ದಿನಗಳು ನಾನು, ಅನಾಜಿ, ಗೋಪಿನಾಥ್‌ರವರು ೪ನೇ ಬ್ಲಾಕಿನ ಶಕ್ತಿಗಣಪತಿ ಉದ್ಯಾನವನದಲ್ಲಿ ಕಲ್ಲುಬೆಂಚಿನ ಮೇಲೆ ಕುಳಿತು ಕನ್ನಡದ ಪ್ರಗತಿ, ಸಾಹಿತ್ಯದ ಮಾರ್ಪಾಟುಗಳು, ಪ್ರಚಲಿತ ವಿಚಾರಗಳ ವಿನಿಮಯದ ಜೊತೆಗೆ ಹಾಸ್ಯದಿಂದ ಹರಟೆಗಳು ನಮ್ಮ ಬದುಕಿನ ಸಾಂಗತ್ಯದಲ್ಲಿ ಕಂಡು ಬಂದ ಸಂಗತಿಗಳು.

ಅಂದು ೧೯೬೬ ರಲ್ಲಿ ಕಂಡ ಅ.ನಾ.ಜಿ. ಅವರಿಗೂ ಇಂದು ನಾವು ನೋಡುತ್ತಿರುವ ಅನಾಜಿರವರಿಗೂ ಅಜಗಜಾಂತರ ವ್ಯತ್ಯಾಸ. ಇಂದು ಸಹಾ ಸಭೆ, ಸಮಾರಂಭಗಳಲ್ಲಿ ಅವರ ವಿದ್ವತ್ ಪೂರ್ಣ ಉಪನ್ಯಾಸಗಳಲ್ಲಿ ಮತ್ತು ಬಾಲಕರಿಗೆ ತಿಳಿಸುವ ಕತೆಗಳಲ್ಲಿ ಅವರ ಮಾತುಗಾರಿಕೆಯ ಮೊನಚು ಕಂಡುಬರುತ್ತದೆ. ಕೆಲವು ಬಾರಿ ಅವರ ನಿರೂಪಣೆಗಳು ಕೀರ್ತನಕಾರರ ರೂಪ ತಳೆಯುತ್ತವೆ.

ಅವರ ಪುಸ್ತಕಗಳ ಸಂಗ್ರಹಗಳ ಬಗೆಗೆ ಕೆಲವು ನುಡಿಗಳು ಪ್ರಸ್ತುತ. ನನ್ನ ಗೆಳೆಯ ಚಿರಂಜೀವಿಯವರು ತರಂಗದಲ್ಲಿದ್ದಾಗ ಬರೆದಿದ್ದು ನನ್ನ ನೆನಪು. ಇವರ ಮನೆಯಲ್ಲಿ ಸಾಹಿತ್ಯಪ್ರಕಾರದ ಗ್ರಂಥಗಳು, ಕೃತಿಗಳು, ವೃತ್ತಪತ್ರಿಕೆಗಳು ಹಲವು ಸಾವಿರಗಳಷ್ಟು. ಅವರ ಸಾಹಿತ್ಯ ದಾಂಪತ್ಯಕ್ಕೆ ಅಪ್ರತಿಮ ಕಾರ್ಯ. ಜೊತೆಗೆ ಅವರ ವಿದೇಶ ಪ್ರವಾಸಗಳು ಜೀವನದಲ್ಲಿ ಹೊಳಪು ನೀಡಿವೆ.

ಇಳಿವಯಸ್ಸಿನಲ್ಲಿ ಸಾಹಿತ್ಯಿಕ ಕಾರ್ಯಗಳನ್ನು ಮಾಡುತ್ತಿರುವ ಅಪಾರ ಸೇವೆಗಳಿಗೆ ಅಭಿವಂದನೆಗಳು. ನಮ್ಮೊಂದಿಗೆ ಇವರ ಕನಕಾವೃತ ಬದುಕು ಕರುಣಾಳು ಭಗವಂತನ ಕೃಪೆಯಿಂದ ಇನ್ನೂ ಬಹುದಿನಗಳು ನಿರಂತರವಾಗಿರಲಿ.

****

ಅನಾಜಿ : ಸರಳ ಸಜ್ಜನ ಸಾಹಿತ್ಯ ದಾಸೋಹಿ

ಕೆ.ಎಸ್. ಭಗವಾನ್
ಚರವಾಣಿ : ೯೮೮೦೮೮೬೫೦೬

ಅದು ಎರಡು ಸಾವಿರದ ಒಂದನೇ ಇಸವಿಯ ಡಿಸೆಂಬರ್ ತಿಂಗಳು. ನಾನು ಚೊಚ್ಚಲ ಪುಸ್ತಕ ಪ್ರಕಟಣೆಯ ಹುಮ್ಮಸಿನಲ್ಲಿದ್ದೆ. ಪ್ರಜಾವಾಣಿ ೧೯೬೬ ರ ದೀಪಾವಳಿ ಕಥಾಸ್ಪರ್ಧೆಯಲ್ಲಿ ಎರಡನೇ ಬಹುಮಾನ ತಂದುಕೊಟ್ಟ 'ಎಡಹೊಳೆಯ ಹನುಮ', ಕರ್ಮ ವೀರ ೧೯೯೩ರ ದೀಪಾವಳಿ ಕಥಾಸ್ಪರ್ಧೆಯಲ್ಲಿ ಮತ್ತೆ ಎರಡನೇ ಬಹುಮಾನ ತಂದುಕೊಟ್ಟ 'ಶಾಸನ ಬಂಡೆಯ ಸುತ್ತಮುತ್ತ' ಸೇರಿದಂತೆ ೧೧ ಕಥೆಗಳು ಸಿದ್ಧವಾಗಿದ್ದವು.ಈ ಹನ್ನೊಂದು ಕಥೆಗಳ ಸಂಕಲನ 'ಕಥಾಚೈತ್ರ'ವನ್ನು ಸ್ವಂತ ಖರ್ಚಿನಲ್ಲಿ ಪುಸ್ತಕವಾಗಿ ಹೊರತರುವ ತುಡಿತದಲ್ಲಿದ್ದು, ಒಬ್ಬರು ಖ್ಯಾತನಾಮರಿಂದ ಅದಕ್ಕೊಂದು ಮುನ್ನುಡಿ ಬರೆಸಿಕೊಳ್ಳದಿದ್ದರೆ ಚೊಚ್ಚಲ ಕೃತಿಗೆ ಶೋಭೆ ತಂದೀತೇ? ಸರಿ ಯಾರನ್ನು ಕೇಳುವುದು? ಓದುಗನಾಗಿ ನನಗೆ ಸುಮಾರು ಲೇಖಕರ ಪರೋಕ್ಷ ಪರಿಚಯವಿತ್ತೇ ವಿನಹ ಅವರ ನೇರ ಸ್ನೇಹವಿರಲಿ ಮುಖ ಪರಿಚಯವೂ ಇರಲಿಲ್ಲ. ಕಾರ್ಖಾನೆ ಗೆಳೆಯ ಎಂ.ಕೆ. ಗೋಪಿನಾಥ್ ಪ್ರಚಲಿತ ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ಆಗಾಗೆ ಕಥೆ, ಪ್ರಬಂಧಗಳನ್ನು ಬರೆಯುತಿದ್ದ ಅವನ ಬಳಿ ಹೋದರೆ ನಮ್ಮ ಮನೆಯ ಹಿಂದಿನ ಕ್ರಾಸಿನಲ್ಲಿ ಅನಾಜಿ ಇದ್ದಾರೆ. ಅಂತಹವರ ಹತ್ರ ಮುನ್ನುಡಿ ಬರೆಸಿದರೆ ಘನತೆ ಹೆಚ್ಚುತ್ತೆ' ಎನ್ನುತ್ತಿದ್ದರು. ಅನಾಜಿ ಅಂದ್ರೆ – ಜಿ. ಅಶ್ವತ್ಥನಾರಾಯಣ ಎಂಬುದರ ಸಂಕ್ಷಿಪ್ತ ನಾಮವೆಂದು ನನಗೆ ಆಗಲೇ ತಿಳಿದಿದ್ದು. ಕೈಬರಹ ರೂಪದಲ್ಲಿದ್ದ ಕಥೆಗಳ ಕಡತ ಹಿಡಿದು ಗೆಳೆಯರ ಜೊತೆ ಹೊರಟೆ. ಅನಾಜಿಯವರನ್ನೊಪ್ಪಿಸಿ ಕೊಟ್ಟು ಬಂದುದೇನೋ ಆಯಿತು. ಅವರು ಕಾಲೇಜುಗಳಲ್ಲಿ ಪಾಠ ಮಾಡಿದ ಪ್ರೊಫೆಸರ್; ನನ್ನ ಕಥೆಗಳನ್ನು ನಿಜಕ್ಕೂ ಓದ್ತಾರಾ ಎಂಬ ಸಣ್ಣ ಅನುಮಾನ ನನಗೆ. ಓದಿದರೂ ಏನನ್ನುವರೋ ಎಂಬ ಮುಜುಗರ; ಓದಲು ಸಮಯವಿರುತ್ತೋ ಇಲ್ಲವೋ ಎಂಬ ಕಳವಳ. ಆದರೆ ಹಾಗೇನೂ ಆಗದೆ ಬಹು ಬೇಗ, ಕೈಬರಹದಲ್ಲಿ ಮೂರು ಪುಟಗಳಷ್ಟು ಅಭಿಪ್ರಾಯ ಬರೆದುಕೊಟ್ಟರು. ಅದರಲ್ಲಿ ನವೋದಯ ಕಾಲದ ಬದುಕಿನ ರೋಮಾಂಚಕ ಸಂಗತಿಗಳ ಚಿತ್ರಣದ ಕತೆಗಳ ಸಾಲಿಗೆ ಸೇರಬಹುದಾದ ಇಲ್ಲಿಯ ಕತೆಗಳಲ್ಲಿ ಸಾಕಷ್ಟು ವಸ್ತುವೈವಿಧ್ಯ ಕಾಣಬಹುದು. ಭಗವಾನ್ ಅವರ ಮೊದಲ ಕಥಾ ಸಂಕಲನ ಇದಾಗಿದ್ದರೂ ಸಾಕಷ್ಟು ಪಳಗಿದ ಕೈ ಬರೆದಂತೆ ಕಥೆ ಬರೆಯತ್ತಾರೆ. ಭಗವಾನರ ಕಥೆಗಳಲ್ಲಿ ವ್ಯಕ್ತಿ ಚಿತ್ರಣ, ಪರಿಸರ ನಿರೂಪಣೆ, ಭಾವನೆಗಳ ತಾಕಲಾಟದಲ್ಲಿ ಸಾಕಷ್ಟು 'ಕನ್ನಡತನ' ಕಾಣುತ್ತಿರುವುದು ಸಂತೋಷದ ಸಂಗತಿ.

ಭಾರತೀಸುತರ ಕಥೆಗಳನ್ನೋದಿ ಪ್ರಭಾವಿತರಾದ ಇವರು ಕಥೆಗಾರರಾಗಿ ರೂಪುಗೊಂಡಿರುವುದು ಒಂದು ವಿಸ್ಮಯವೆಂದರೆ ತಪ್ಪಲ್ಲ' ಹೀಗೆಲ್ಲ ಧನಾತ್ಮ ಮಾತುಗಳನ್ನಾಡುವುದರ ಜೊತೆಗೆ' ಬಹುಶಃ

'ಕಥಾತಂತ್ರಕ್ಕೆ ಹೆಚ್ಚು ಗಮನ ಕೊಡದಿರುವುದೂ, ಮಾತುಗಳು ಧಾರಾಳವಾಗಿ- ಕೆಲವೊಮ್ಮೆ ದುಂದಾಗಿ ಕಂಡುಬಂದರೂ, ವಿವರಗಳು ಓದುಗರಿಗೆ ಕಣ್ಮುಂದೆ ಪೂರ್ಣ ಚಿತ್ರ ನೀಡಲು ನೆರವಾಗುತ್ತವೆ' ಅಂತಲೂ ಅಭಿಪ್ರಾಯ ಪಟ್ಟಿದ್ದಾರೆ. ಹನ್ನೊಂದು ಕಥೆಗಳ ಕುರಿತ ಸಂಕ್ಷಿಪ್ತ ನೋಟವಿದೆ. ನನ್ನ ಬರಹದ ಉತ್ಸಾಹಾಶ್ವ ಮುನ್ನಡೆಯಲು ಇಷ್ಟು ಸಾಕಲ್ಲವೇ? ಅಂತೂ ನನ್ನ ಮೊದಲ ಕಥಾ ಸಂಕಲನ ೨೦೦೨ ರ ಫೆಬ್ರವರಿ ೬ ರಂದು ಬಿಡುಗಡೆಯಾಯಿತು. ಅಲ್ಲಿಂದ ಮೊದಲಾಯಿತು ನನ್ನ-ಅನಾಜಿ ಸ್ನೇಹ.

ಪ್ರೊ. ಅಶ್ವತ್ಥನಾರಾಯಣ ಅವರನ್ನು ಅಕಾಡೆಮಿಕ್ ವಲಯದಲ್ಲಾಗಲಿ, ಸಾಹಿತ್ಯ ವಲಯ-ದಲ್ಲಾಗಲಿ, ಸಂಘ ಸಂಸ್ಥೆಗಳಲ್ಲಾಗಲಿ ಗುರ್ತಿಸೋದು 'ಅನಾಜಿ'' ಅಂತಾನೇ..ವಯಸ್ಸಿನಿಂದ, ಲೋಕಾನುಭವದಿಂದ, ಸಾಹಿತ್ಯಕ ಸಂಪರ್ಕದಿಂದ ಇವರು ನನಗಿಂತ ಹಿರಿಯರು. ನಾನು ಇವರ ಕಾಲೇಜು ವಿದ್ಯಾರ್ಥಿಯಲ್ಲ, ಬಂಧುವೂ ಅಲ್ಲ. ಸಾಹಿತ್ಯ ಪರಿಚಾರಿಕೆಯಲ್ಲಿ ಅವರು ನನಗೆ ತಕ್ಕಮಟ್ಟಿನ ಮಾರ್ಗದರ್ಶಿ ಎಂದರೆ ನಡೆದೀತು. ಅವರ ಸಂಕ್ಷಿಪ್ತ ನಾಮದ ಕೊನೆಯಲ್ಲಿನ ಜಿ ಅನ್ನು ಧೀರ್ಘಗೊಳಿಸಿ 'ಅನಾಜೀ' ಎಂದು ಗೌರವದಿಂದ ಕರೆಯಬಹುದಾಗಿದೆ. ನನ್ನ ವಿದ್ಯಾರ್ಥಿ ದಿನಗಳಲ್ಲಿ ಭಾಷಾಭಿಮಾನ ಹುಟ್ಟಿದ್ದು ಪ್ರಾಯಶಃ ಅ.ನ.ಕೃ. ಭಾಷಣಗಳನ್ನು ಕೇಳಿ ಎಂಬುದರಲ್ಲಿ ಅನುಮಾನವಿಲ್ಲ. ಅನಾಜಿಯವರಾದರೋ ಅ.ನ.ಕೃ. ಅವರ ಒಡನಾಟ ಇಟ್ಟುಕೊಂಡಿದ್ದವರು. ಧಾರವಾಡ ವಿಶ್ವವಿದ್ಯಾಲಯಕ್ಕೆ ಕನ್ನಡ ಎಂ.ಎ. ವಿದ್ಯಾರ್ಥಿಯಾಗಿ ಸೇರಿಕೊಳ್ಳುವ ಮೊದಲು ಅ.ನ.ಕೃ. ಅವರಿಂದ ಒಂದು ಶಿಫಾರಸು ಪತ್ರ ಪಡೆದುಕೊಂಡು ಹೋಗಿದ್ದರಂತೆ. ಚಂದ್ರಶೇಖರ್, ಶಾ.ಮಂ. ಕೃಷ್ಣರಾವ್ ಮುಂತಾದ ಅಭಿಮಾನಿ ಗೆಳೆಯರೊಂದಿಗೆ ಆರಂಭಿಸಿದ 'ಅ.ನ.ಕೃ. ಪ್ರತಿಷಾನ'ವು ಪ್ರತಿ ವರ್ಷ ಸಾಹಿತ್ಯ ಸಾಧಕರೊಬ್ಬರಿಗೆ ಪ್ರಶಸ್ತಿ ನೀಡುತ್ತ ಬಂದಿದೆ. ಈ ಮಹತ್ವದ ಪ್ರತಿಷ್ಠಾನದ ಸಂಸ್ಥಾಪಕರಲ್ಲಿ ಅನಾಜಿ ಮಾರ್ಗದರ್ಶಿ ಎಂದರೆ ತಪ್ಪಾಗದು.

ತಮ್ಮ ವೃತ್ತಿ ಬದುಕನ್ನು ಕನ್ನಡ ಪ್ರಾಧ್ಯಾಪಕರಾಗಿಯೇ ಕಳೆದಿರುವ ಅನಾಜಿ ಉಪನ್ಯಾಸಕರಾಗಿ ಕಾರ್ಯ ಕ್ರಮ ಆಯೋಜಕರಾಗಿ-ನಿರೂಪಕರಾಗಿ-ಪಠ್ಯ ಪುಸ್ತಕಗಳ ಆಯ್ಕೆ ಸಮಿತಿಯ ಸದಸ್ಯರಾಗಿ, ಪ್ರಶಸ್ತಿಗಳ ಆಯ್ಕೆಗಾರರಾಗಿ-ಪ್ರಶಸ್ತಿ ಪತ್ರಗಳ ಮಾದರಿ ವಿನ್ಯಾಸಕರಾಗಿ - ಆಕಾಶವಾಣಿಯ ವಿಚಾರ ಸರಣಿ ರೂಪಕರಾಗಿ ಸಂಘ ಸಂಸ್ಥೆಗಳ ಸಂಘಟಕರಾಗಿ ತೊಡಗಿಸಿಕೊಂಡರೇ ವಿನಃ ಪುಸ್ತಕ ರಚನೆಯತ್ತ ಅಷ್ಟಾಗಿ ಗಮನ ಕೊಡಲಿಲ್ಲ ಎನ್ನಬಹುದು. ಅದಕ್ಕೆಲ್ಲ ಸಮಯ, ವ್ಯವಧಾನ ಎರಡೂ ಇದ್ದಿರಲಾರದು. ಆದರೆ ಪುಸ್ತಕ ಬರೆಯುವವರಿಗಾಗಿ ಉತ್ತಮ ಮಾರ್ಗದರ್ಶಿ ಎಂಬುದನ್ನು ಪ್ರತ್ಯಕ್ಷ ಅನುಭವದಿಂದ ತಿಳಿಸಬಯಸುತ್ತೇನೆ. ಇವರ ಶ್ರೀಮತಿ ಪ್ರೊ. ಲಕ್ಷ್ಮೀದೇವಿ ಅವರು ಮಹಾರಾಣಿ ಕಾಲೇಜಿನಲ್ಲಿ ಉಪನ್ಯಾಸಕಿ ಆಗಿದ್ದರಷ್ಟೆ ಅಲ್ಲ, ಸಾಹಿತ್ಯ ವಿಮರ್ಶಕಿಯಾಗಿ, ಉತ್ತಮ ಗೃಹಿಣಿಯಾಗಿಯೂ ಅನಾಜಿ ಅವರಿಗೆ ಅನ್ಯೋನ್ಯ ಬಾಳಸಂಗಾತಿ ಎನಿಸಿದ್ದಾರೆ. ನನ್ನ ಕೆಲವೊಂದು ಪ್ರಬಂಧ ಸಂಕಲನಗಳನ್ನು, ಪ್ರವಾಸಾನುಭವ ಲೇಖನಗಳನ್ನು ಓದಿ ಮೆಚ್ಚಿಕೊಂಡವರು ಕೂಡಾ. ತಮ್ಮ ಮನೆಗೆ ಬಂದ ಅತಿಥಿಗಳಿಗೆ, ಸಾಹಿತ್ಯ ಮಿತ್ರರಿಗೆ ಒಂದು ಲೋಟ ಬಾದಾಮಿ ಹಾಲು ನೀಡದೆ ಕಳಿಸಲಾರರು. ಆಕೆಯ ಸೋದರ ಮಾವ ದಿ. ಕೆ. ಗೋಪಾಲಕೃಷ್ಣರಾಯರ ಸಂಸ್ಮರಣ ಗ್ರಂಥವನ್ನು ಪ್ರಕಟಿಸುವಲ್ಲಿ ಅನಾಜಿ ಅವರ ಮುತುವರ್ಜಿಯನ್ನು ಯಾರಾದರೂ ಮೆಚ್ಚಬೇಕು. ಕೆ. ಗೋಪಾಲಕೃಷ್ಣರಾಯರು ಅ.ನ.ಕೃ. ಅವರ ಭಾಷೆ ಮತ್ತು ರಚನಾ ಶೈಲಿಯನ್ನು ಅನುಸರಿಸಿ ಸ್ವತಂತ್ರ ಕಥೆಗಳನ್ನೂ, ನಾಟಕಗಳನ್ನೂ ಬರೆದವರು.

ಆಗೊಮ್ಮೆ ಅನಾಜಿಯವರು ಕೆ.ಗೋ. ರಾಯರ ಸಮಗ್ರ ನಾಟಕಗಳ ಸಂಕಲನವನ್ನು ನನಗೊಪ್ಪಿಸಿ ಅವುಗಳ ಕುರಿತಂತೆ ಒಂದು ಅಭಿಪ್ರಾಯ ಲೇಖನವನ್ನು ಸಿದ್ಧಪಡಿಸಲು ತಿಳಿಸಿದರು. ಆವರೆಗೆ ನಾನು ಆ ಮಹನೀಯರ ಯಾವ ನಾಟಕವನ್ನೂ ಓದಿದ್ದವನಲ್ಲ; ಈಗ ಓದುವ ಅಗತ್ಯ, ಅನಿವಾರ್ಯತೆ! ಈ ಮೂಲಕ ಅವರ ನಾಟಕಗಳನ್ನು ಒಮ್ಮೆ ಓದುವ ಅವಕಾಶ ಒದಗಿಬಂದಿತು. ನಾನು ಬರೆದು ಕೊಟ್ಟಿದ್ದು ಒಂದು ವಿಮರ್ಶೆಯೋ, ಅಭಿಪ್ರಾಯ ಲೇಖನವೋ ಅದನ್ನೋದಿದವರು ಹೇಳಬೇಕಷ್ಟೆ. ಈ ಸಂಬಂಧದಲ್ಲಿ ಗೋವಾದಿಂದ ಬೆಂಗಳೂರಿಗೆ ಬಂದುಹೋಗುತ್ತಿದ್ದ ಅವರ ಮಗಳು, ಮೊಮ್ಮಗ ಪರಿಚಯವಾದರು. ಜೊತೆಗೆ ಸಂಸ್ಮರಣ ಗ್ರಂಥದ ಪ್ರಕಾಶಕರಾಗಿದ್ದ ಅಚ್ಯುತ ಸಂಕೇತಿ (ತುಲನ ಪ್ರಕಾಶನ) ಅವರು ಹೊಸ ಗೆಳೆಯರಾದರು. ಮುಂದೆ ಅದೇ ಪ್ರಕಾಶನದಲ್ಲಿ ನನ್ನದೊಂದು ಪುಸ್ತಕ 'ಟಿಪಿಕಲ್ ಟಿ.ಪಿ. ಕೈಲಾಸಂ' ಹೊರಬಂತು.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎನಿಸಿರುವ ಕನ್ನಡ ಸಾಹಿತ್ಯ ಪರಿಷತ್ತು, ನೂರು ವರ್ಷ ತುಂಬಿದ ಸಂದರ್ಭದಲ್ಲಿ ಹಳೆಗನ್ನಡದಿಂದ ಮೊದಲಾಗಿ ಆಧುನಿಕ ಕನ್ನಡದವರೆಗೆ ಹೊರಬಂದಿರುವ ಅಪೂರ್ವ ಹಾಗೂ ಮೌಲಿಕ ಸಾಹಿತ್ಯ ಕೃತಿಗಳನ್ನು ಮರು ಪ್ರಕಟಿಸುವ ಕಾರ್ಯ ಯೋಜನೆ ಹಾಕಿಕೊಂಡಿತು. ಪುಸ್ತಕಗಳ ಆಯ್ಕೆ ಸಮಿತಿಯಲ್ಲಿ ಪ್ರಮುಖವಾಗಿ ಅನಾಜಿಯವರ ಪರಿಶ್ರಮವನ್ನು ಮರೆಯಲಾಗದು. ಇಂಥ ಶ್ರಮದ ಕಾರ್ಯ ಸಾಮಾನ್ಯರಿಂದ ಸಾಧ್ಯವಾಗದು. ಸಾಹಿತಿ ಹಾಗೂ ಸಾಹಿತ್ಯ ಜ್ಞಾನ ಬೇಕಾಗುತ್ತದೆ. ಅನಾಜಿ ಅವರ ಬಹು ದೊಡ್ಡ ಶಕ್ತಿ ಎಂದರೆ ಅವರ ವಿದ್ವತ್ಪೂರ್ಣ-ಲಯಭರಿತ-ಪ್ರಾಸಭರಿತ ಭಾಷಣ ಕಲೆ. ಅಷ್ಟೇ ಏಕೆ, ಇವರು ಅಸಂಖ್ಯಾತ ವಿದ್ಯಾರ್ಥಿಗಳಿಗೆ ಭಾಷಣ ಕಲಿಕಾ ತರಗತಿಗಳನ್ನು ನಡೆಸಿಕೊಟ್ಟಿದ್ದಾರೆ ಕೂಡಾ. ಅವರೊಡನೆ ನನ್ನಂಥವರು ಮಾತಾಡುವಾಗ ಮಾತು ಏಕಮುಖಿ ಆಗಿಬಿಡುವಷ್ಟರ ಮಟ್ಟಿಗೆ ಅವರು ಡಾಮಿನೆಂಟ್ ಆಗಿಬಿಡುತ್ತಾರೆ! ಅಷ್ಟು ಉತ್ಸಾಹ, ಅಷ್ಟು ಹುಮ್ಮಸ್ಸು! ಎರಡು ತಿಂಗಳ ಹಿಂದೆ ಅವರಿಗೊಂದು ಶಸ್ತ್ರಚಿಕಿತ್ಸೆಯಾಗಿತ್ತು. ವೈದ್ಯರು ಸಂಪೂರ್ಣ ವಿಶ್ರಾಂತಿಗೆ ಆದೇಶಿಸಿದ್ದರು ಸಾಹಿತ್ಯ ಮಿತ್ರರು ಮನೆಗೆ ಬರುವುದು ಬೇಡವೆಂದಾದರೆ ದೂರವಾಣಿಯ ಸಂಭಾಷಣೆ ಆದೀತಲ್ಲಾ? ಹೆಚ್ಚು ಹೊತ್ತು ನಿಲ್ಲಬಾರದು, ಕೂಡಬಾರದು ಆದರೇನಂತೆ ? ಒರೆಯಾಗಿ ಮಲಗಿ ಮಾತಾಡಬಹುದಲ್ಲ!

ಜಯನಗರ ಆರ್.ವಿ. ಮೇನೇಜ್ಮೆಂಟ್ ಅಕಾಡೆಮಿ ಕಾಲೇಜಿನಲ್ಲಿ ಕನ್ನಡ ಸಾಹಿತ್ಯದ ವಾತಾವರಣ, ಸಂಭ್ರಮಗಳನ್ನು ಹುಟ್ಟುಹಾಕಿ ಪೋಷಿಸಿದವರು ಅನಾಜಿ ಎಂದರೆ ತಪ್ಪಾಗದು. ಸಂಸ್ಥೆಯ ಆಡಳಿತಾಧಿಕಾರಿಯಾಗಿ- ಈಗ ನಿವೃತ್ತರಾಗಿರುವ ಡಾ. ಟಿ.ವಿ. ರಾಜು ಅವರು 'ವಿನಯ್ ಫೌಂಡೇಷನ್' ಸ್ಥಾಪಿಸಿ, ಅದರಡಿಯಲ್ಲಿ ವಾರ್ಷಿಕವಾಗಿ ಗಣ್ಯರೊಬ್ಬರಿಗೆ ಪ್ರಶಸ್ತಿ ನೀಡುವ, ಮತ್ತು ಹೊಸ ಪುಸ್ತಕವೊಂದನ್ನು ಪ್ರಕಟಿಸುವ ಅಭಿಯಾನ ಇರಿಸಿಕೊಂಡಿದ್ದು, ಅದಕ್ಕೆ ಅನಾಜಿ ಅವರನ್ನು ಮುಖ್ಯ ಸಲಹೆಗಾರರನ್ನಾಗಿ ನೇಮಿಸಿಕೊಂಡಿದ್ದಾರೆ. ಈ ಯೋಜನೆಯಡಿ ಕಳೆದ ಆಗಸ್ಟ್ ೨ ರಂದು 'ಕನ್ನಡ ಪ್ರಶ್ನೋತ್ತರ ಪದವಿಹಾರ' ಎಂಬ ನನ್ನದೊಂದು ಪುಸ್ತಕವನ್ನು 'ವಿನಯ್ ಫೌಂಡೇಷನ್' ಪ್ರಕಟಿಸುವಲ್ಲಿ ಅವರದು ಪ್ರಮುಖ ಪಾತ್ರವಾಗಿತ್ತು. ಈ ಕೃತಿಯು ಫೌಂಡೇಷನ್ ಪ್ರಟಿಸಿದ ೩೦ ನೇ ಪುಸ್ತಕವಾಗಿದೆ.

ಹತ್ತಾರು ವರುಷಗಳಿಂದ ನಗರದ ಬಿ.ಎಂ.ಶ್ರೀ. ಪ್ರತಿಷ್ಠಾನವು ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಎಂ.ಫಿಲ್. ತರಗತಿಗಳನ್ನು ನಡೆಸುತ್ತಿದ್ದು, ಇವರು ಅಲ್ಲಿ ಹಲವಾರು

ವಿದ್ಯಾರ್ಥಿಗಳಿಗೆ ಮಾರ್ಗ ದರ್ಶನ ಮಾಡಿದ್ದಾರೆ. ಅಷ್ಟಲ್ಲದೆ ಐ.ಎ.ಎಸ್, ಕೆ.ಎ.ಎಸ್. ಪರೀಕ್ಷಾರ್ಥಿಗಳಿಗೆ ಮಾರ್ಗ ದರ್ಶನ ನೀಡಿದ್ದಾರೆ. ಗಮಕ ಕಲಾ ಪರಿಷತ್ತಿನ ಪಠ್ಯ ಯೋಜನೆ ರೂಪಿಸುವಲ್ಲಿ ಹಾಗೂ ತರಗತಿಗಳಿಗೆ ವ್ಯವಸ್ಥಾಪಕರಾಗಿಯೂ ಶ್ರಮಿಸಿದವರು. ಅವರ ಸಾಹಿತ್ಯ ಪರಿಚಾರಿಕೆ ನಾನಿಲ್ಲಿ ತಿಳಿಸಿರುವುದಕ್ಕಿಂತ ಹೆಚ್ಚು ವಿಸ್ತಾರವಾದುದು. ಇಷ್ಟರ ಜೊತೆಗೆ ಅನಾಜಿ ಏಕವ್ಯಕ್ತಿ ನಿರ್ವಹಣೆಯ ಗ್ರಂಥ ಪಾಲಕರೂ ಹೌದು. ಅಂದರೆ ತಮ್ಮ ಮನೆಯಲ್ಲೇ ಹದಿನೈದು ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿ ಶಿಸ್ತುಬದ್ಧವಾಗಿ ನಿರ್ವಹಿಸುತ್ತ ಬಂದಿದ್ದಾರೆ. ಬೇರೆಡೆ ಲಭ್ಯವಿರದ, ಹಳೆಯ, ಅಪರೂಪದ ಪುಸ್ತಕದ ಅಗತ್ಯವಿರುವವರು ಇವರನ್ನು ಖಂಡಿತ ಸಂಪರ್ಕಿಸಬಹುದು. ಕಳೆದ ಹತ್ತು ವರ್ಷಗಳಿಂದ ಪುಸ್ತಕ ರಚನೆಯಲ್ಲೂ, ಗ್ರಂಥ ಸಂಪಾದನೆಯಲ್ಲೂ ಇವರು ತೊಡಗಿರುವುದು ಹೊಸ ಬೆಳವಣಿಗೆ. ಇಂಥ ಕ್ರಿಯಾಶೀಲ ವಿದ್ವಾಂಸರು ತಮ್ಮ ಅಧ್ಯಯನ, ಅಧ್ಯಾಪನಗಳಿಂದ ಆರ್ಜಿಸಿದ ಅನುಭವಗಳಿಗೆ ಅಕ್ಷರ ರೂಪ ಕೊಟ್ಟರೆ ಅವು ಮುಂದಿಗೆ ಪೀಳಿಗೆಗೂ ತಲುಪುತ್ತವಲ್ಲವೇ?

******

ನನ್ನ ಸವಿ ನೆನಪು

ಮಾಧವ ತಾಳಿಕೋಟೆ (ಮಾತಾ)
ಚರವಾಣಿ : ೯೮೪೪೦೩೫೭೬೪

೧೯೭೧-೭೨ ರ ಶೈಕ್ಷಣಿಕ ವರ್ಷ. ಹಾಸನದ ಪ್ರಥಮ ದರ್ಜೆಯ ಕಾಲೇಜಿನಲ್ಲಿ ಮೊದಲ ಪಿಯೂಸಿ ವಿದ್ಯಾರ್ಥಿ ನಾನಾಗಿದ್ದೆ.

ಐದು ದಶಕಗಳ ನಂತರವೂ ತಮ್ಮ ಮೂರ್ತಿ ಕಣ್ಣ ಮುಂದೆ ಕಟ್ಟಿದೆ.

ಚಂದ್ರಹಾಸ ನಾಟಕದ ಪ್ರತಿ ಅಂಕವನ್ನು ಅರ್ಥಮಾಡಿಸಿ ಮನದಲ್ಲಿ ಮೂಡಿಸಿದ್ದೀರಿ. ತಮ್ಮ ಹಾಸ್ಯಪ್ರಜ್ಞೆಯಿಂದ ತರಗತಿಯಲ್ಲಿ ನಗೆಹೊನಲು ಹರಿದರೂ ಗಂಭೀರ ವದನದಲ್ಲಿ ಒಂದು ಗೆರೆ ಎಂದೂ ಮೂಡಲಿಲ್ಲ, ತಪಸ್ಸು ಎನ್ನಲೇ.

ಒಂದು ದಿನ ತರಗತಿಯಲ್ಲಿ ತಲೆಯ ಮೇಲಿಂದ ಕೊಳವೆ ದೀಪ ಕಳಚಿಬಿದ್ದು ಎಲ್ಲರೂ ಹೌಹಾರಿದಾಗ ಸ್ಥಿತಪ್ರಜ್ಞರಾದ ತಾವು ರಾಜಗಾಂಭೀರ್ಯದಿಂದ "ಅದು Tubelight ನೀವು Bright lights'' ಅನ್ನುತ್ತ ಪಾಠ ಮುಂದುವರಿಸಿ ಅಂದು ಹಚ್ಚಿದ ದೀವಿಗೆ ಇಂದೂ ಕನ್ನಡ ಕಲಿಕೆಯ ದಾರಿದೀಪವಾಗಿದೆ

ಅನಂತ ವಂದನೆಗಳು

****

ಆದರ್ಶ ಬೋಧಕ, ಸಾಹಿತ್ಯ ಬೋಧಕ

ಕೆ. ಎನ್. ಮಹಾಬಲ

ಪ್ರೊ. ಜಿ ಅಶ್ವತ್ಥನಾರಾಯಣ ಅವರನ್ನು ನಾನು ಮೊದಲು ಭೇಟಿಯಾದದ್ದು ೧೯೭೪ ರ ಸೆಪ್ಟೆಂಬರಿನಲ್ಲಿ. ಅವರ ನಿರ್ದೇಶಕತ್ವದಲ್ಲಿ ನಾನು ಉದ್ಯೋಗದಲ್ಲಿದ್ದ ಭಾರತೀಯ ಸ್ಟೇಟ್ ಬ್ಯಾಂಕ್ ಏರ್ಪಡಿಸಿದ್ದ ಕನ್ನಡ ಬೋಧಕರ ಶಿಬಿರದಲ್ಲಿ .

ಒಂದು ವಾರ ಕಾಲ ನಡೆದ ಆ ಕಾರ್ಯಕ್ರಮದಲ್ಲಿ ಅನಾಜಿಯವರು ಕನ್ನಡ ಬಾರದವರಿಗೆ ಕಲಿಸುವ ಬೋಧಕರಿಗೆ ಇರಬೇಕಾದ ಗುಣಧರ್ಮಗಳು, ಅನುಸರಿಸಬೇಕಾದ ಮಾರ್ಗೋಪಾಯಗಳು ಮುಂತಾದುವನ್ನು ಬಹಳ ಸ್ವಾರಸ್ಯಕರವಾದ ಶೈಲಿಯಲ್ಲಿ ಶಿಬಿರಾರ್ಥಿಗಳ ಮನಮುಟ್ಟುವಂತೆ ತಿಳಿಸಿಕೊಟ್ಟದ್ದು ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿದೆ.

ಪ್ರೊ. ಅಶ್ವತ್ಥನಾರಾಯಣ ಅವರು ಬಿ.ಎಂ.ಶ್ರೀ. ಪ್ರತಿಷ್ಠಾನದ ಸಭಾಂಗಣದಲ್ಲಿ ನಡೆಯುವ ಉಪನ್ಯಾಸಗಳಲ್ಲಿ ಭಾಗವಹಿಸಿ ಕನ್ನಡ ಸಾಹಿತ್ಯದ ಹಲವಾರು ಉಪಯುಕ್ತ ವಿಷಯಗಳನ್ನು ತಮ್ಮ ಪಾಂಡಿತ್ಯಪೂರ್ಣವಾದ ಧಾಟಿಯಲ್ಲಿ ವಿವರಿಸಿದ್ದನ್ನು ಕೇಳಿ ಉಪಕೃತನಾಗಿದ್ದೇನೆ. ಸಾಹಿತಿಗಳ ಜೀವನದ ರಸಪ್ರಸಂಗಗಳನ್ನು ವಿವರಿಸುವಲ್ಲಿ, ಮಾಹಿತಿ ಹಾಗೂ ಅಂಕಿಅಂಶ ನೀಡುವಲ್ಲಿ ಅನಾಜಿ ಅವರಿಗೆ ಇರುವ ಸಿದ್ಧತೆ ಹಾಗೂ ಬದ್ಧತೆ ಅನ್ಯತ್ರ ದುರ್ಲಭ.

ನಮ್ಮ ಬ್ಯಾಂಕಿನ ಕನ್ನಡ ಸಂಘಗಳು ಹಾಗೂ ಇತರ ಸಾಂಸ್ಕೃತಿಕ ವೇದಿಕೆಗಳ ಆಶ್ರಯದಲ್ಲಿ ನಡೆದಿರುವ ಹಲವು ಕಾರ್ಯಕ್ರಮಗಳಲ್ಲಿ ಪ್ರೊ. ಅಶ್ವತ್ಥ ನಾರಾಯಣ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ಮಾರ್ಗದರ್ಶನ ನೀಡಿದ್ದಾರೆ.

ನಾನು ಒಮ್ಮೆ ಅವರ ಮನೆಗೆ ಭೇಟಿ ನೀಡಿದ್ದಾಗ ಕವಿ ಆಂಡಯ್ಯನ ಬಗ್ಗೆ ಒಂದು ಅಧ್ಯಯನ ಗ್ರಂಥವೊಂದನ್ನು ಅವರು ಬರೆಯುತ್ತಿರುವುದಾಗಿ ತಿಳಿಯಿತು. ಆಗ ನಾನು ನಮ್ಮ ಬ್ಯಾಂಕ್ ಕನ್ನಡ ಸಂಘದ ವಾರ್ಷಿಕ ಸಾಹಿತ್ಯ ಸಂಚಿಕೆ "ಮಂದಾರ"ಕ್ಕೆ ಕವಿ ಆಂಡಯ್ಯನ ಅಚ್ಚಕನ್ನಡ ನಿಷ್ಠೆ ಎಂಬ ವಿಷಯ ಕುರಿತು ಬರೆದಿರುವುದಾಗಿ ತಿಳಿಸಿದೆ. ತಕ್ಷಣ ಅವರು ಕುತೂಹಲ ವ್ಯಕ್ತಪಡಿಸಿ "ನನಗೆ ಅದರ ಒಂದು ಪ್ರತಿ ಕೊಡಿ" ಎಂದು ಹೇಳಿ ನನ್ನಿಂದ ತರಿಸಿಕೊಂಡರು. ನನ್ನಂಥ ಸಾಹಿತ್ಯ ಲೋಕದ ಒಬ್ಬ ಕಿರಿಯನ ಬಗ್ಗೆ ಅವರು ತೋರಿದ ಪ್ರೀತ್ಯಾದರ ಕಂಡು ಹೃದಯ ತುಂಬಿ ಬಂತು.

ಅನಾಜಿಯವರು "ಜ್ಞಾನವಾಣಿ" ಸಮುದಾಯ ರೇಡಿಯೋ ಕೇಂದ್ರದ ಮೂಲಕ ಮರೆಯಬಾರದ ಸಾರಸ್ವತ ಗಣ್ಯರುಗಳ ಕುರಿತು ಪ್ರತಿವಾರ ಬಿತ್ತರಿಸುತ್ತಿದ್ದ ಕಾರ್ಯಕ್ರಮಗಳು ಎಲ್ಲ ಸಾಹಿತ್ಯಾಸಕ್ತರಿಗೆ ಉಪಯುಕ್ತವಾಗಿದ್ದವು ಎಂಬುದರಲ್ಲಿ ಎರಡು ಮಾತಿಲ್ಲ. ಅವರು ಈ ಉಪನ್ಯಾಸಗಳಲ್ಲಿ ತಿಳಿಸಿದ ಎಷ್ಟೋ

ವಿಷಯಗಳು ನನ್ನಂಥವನಿಗೆ ಅಂಥ ಸಾರಸ್ವತಗಣ್ಯರ ಬಗ್ಗೆ ಅಧಿಕಾರಯುತವಾಗಿ ಮಾತನಾಡಲು ಪ್ರೇರಣೆಯನ್ನು ನೀಡಿವೆ.

****

ಸಾವಿರದೊಂದು ನಮನ

ಶ್ರೀ ಗಿರೀಶ್ ಪಿ. ಹೆಚ್

ಹಳಗನ್ನಡ ಪಾಠಗಳ ಪದವಿಭಾಗ ಬಿಡಿಸಿ
ಮನಸ್ಸಿನಾಳಕ್ಕೆ ತೂಗಿಸಿದ ಸೊಬಗು
ನೀರೊಳಗಿನ ಹಂಸವೇ ನಾಚುವಂತೆ
ಬೋಧನೆಯ ಶಿಸ್ತಿನ ಹರಿವು
ಹದಿಹರೆಯದ ಯುವಕರು ನಾವು
ನೋಡಿ ನಕ್ಕು ನಲಿಸಿದ ನೀವು
ತಿಳಿನುಡಿಗಳನ್ನು ಹಿತವಾಗಿಸುತ್ತ
ನಮ್ಮನು ಆಸೆಗಳತ್ತ ಹೊರಳಿಸಿದ ತಾವು
ಬುದ್ಧಿಜ್ಞಾನದ ವಿಕಾಸಕ್ಕೆ ನೀರೆರೆದ ಗುರುವರ್ಯರೇ
ಬರುವ ಶತಾಯುಷದ ಜ್ಯೋತಿಯಲ್ಲಿರಲಿ ನೀವು
ಹರಸುತ್ತಲೇ ಇರಿ ನಮ್ಮ ತೆವಳುವಿಕೆಗೆ
ನಮಗೆ ಮುಗಿಯದಿರಲಿ ನಿಮ್ಮಿಂದ ಕಲಿಕೆ
ನಮ್ಮ ನಡೆನುಡಿಯ ಕಳಸವ ಹೊತ್ತಿರುವಿರಿ
ಬದುಕಿಗೆ ಭವಿಷ್ಯದ ಕನಸುಗಳ ಕೊಟ್ಟಿರುವಿರಿ
ನೀವು ಹಾಕಿಕೊಟ್ಟ ಲಕ್ಷ್ಮಣರೇಖೆಯ ಗಮನ
ರಾಮದರ್ಶನದಂತೆ ಇರುವ ಗುರುವರ್ಯರೇ
ನಿಮಗೆ ಸಾವಿರದೊಂದು ನಮನ
ನಿಮಗೆ ಸಾವಿರದೊಂದು ನಮನ!

******

ನಾ ಕಂಡಂತೆ ಅನಾಜಿ

ಎನ್. ಎಸ್. ದಿನೇಶ್
ಚರವಾಣಿ : ೯೪೪೯೮೭೫೩೦೭೨

ನನಗೆ ಮಾನ್ಯ ಪ್ರೊ. ಅಶ್ವತ್ಥನಾರಾಯಣ ಅವರ ಪರಿಚಯ ಹಲವು ದಶಕಗಳಷ್ಟು ಹಳೆಯದು. ನನ್ನ ತಂದೆ ದಿ. ಡಾ. ನ. ಸುಬ್ರಹ್ಮಣ್ಯಮ್ ಅವರು ಮಂಡ್ಯದ ಸರ್ಕಾರೀ ಕಾಲೇಜಿನಲ್ಲಿ ಕನ್ನಡ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾಗ ಮಾನ್ಯರು ಅವರ ಸಹೋದ್ಯೋಗಿಗಳಾಗಿದ್ದರು ಮತ್ತು ನಮ್ಮ ಕುಟುಂಬಕ್ಕೆ ಬಹು ಆಪ್ತರು. ಅವರು ನಮಗೆ ಅನಾಜಿ ಎಂದೇ ಪರಿಚಿತರು. ನಾನು ಇಂಜಿನಿಯರಿಂಗ್ ಅಧ್ಯಯನದ ಹಾದಿ ಹಿಡಿದುದರಿಂದ ಅಂದು ನಾನು ಮಾನ್ಯರ ಬಳಿ ಕನ್ನಡ ಸಾಹಿತ್ಯವನ್ನು ಕಲಿಯುವ ಅವಕಾಶದಿಂದ ವಂಚಿತನಾದೆ. ಹೀಗಾಗಿ ಅವರ ಸಾಹಿತ್ಯ ಕೃಷಿಯ ಬಗೆಗೆ ನನಗೆ ನೇರವಾಗಿ ಅವರಿಂದ ತಿಳಿಯಲಾಗದಿದ್ದರೂ ನನ್ನ ತಂದೆಯವರ ಮೂಲಕ ಅವರ ಸಾಧನೆಗಳ ಬಗೆಗೆ ಮತ್ತು ಅವರ ಜನಪ್ರಿಯ ಅಧ್ಯಾಪನದ ಬಗೆಗೆ ಅಲ್ಪ ಸ್ವಲ್ಪ ತಿಳಿಯುತ್ತಿತ್ತು. ನನ್ನ ವ್ಯಾಸಂಗ ಮುಗಿಸಿ ವೃತ್ತಿಪರನಾದಾಗ ನನಗೆ ಸಾಹಿತ್ಯದಲ್ಲಿ ಗಮನಾರ್ಹವಾದ ಆಸಕ್ತಿಯೇನೂ ಮೂಡಿರಲಿಲ್ಲ.

ಸುಮಾರು ಹದಿನೈದು ವರ್ಷಗಳ ಹಿಂದೆ ಸಂತ ಶಿಶುನಾಳ ಶರೀಫರ ಕಾವ್ಯದ ಪರಿಚಯವಾಗಿ ಆ ಕುರಿತು ಸಂಶೋಧನೆಯಲ್ಲಿ ತೊಡಗಿಕೊಂಡೆ. ಈ ಸಮಯದಲ್ಲಿ ನನ್ನ ತಂದೆಯವರ ಸಲಹೆಯಂತೆ ಕೆಲವು ಆಕರ ಗ್ರಂಥಗಳಿಗಾಗಿ, ಮತ್ತು ಸಂಶೋಧನಾ ಲೇಖನಗಳಿಗಾಗಿ ಮಾನ್ಯ ಅನಾಜಿಯವರನ್ನು ಭೇಟಿ ಮಾಡಿದೆ. ಸಾಹಿತ್ಯಾಸಕ್ತಿಯಿಂದ ಅವರನ್ನು ಸಂಪರ್ಕಿಸಿದುದು ಅದೇ ಮೊದಲ ಬಾರಿ. ಹೀಗೆ ಪ್ರಾರಂಭದಲ್ಲಿ ಅವರನ್ನು ಆತ್ಮೀಯ ಬಂಧುವಂತೆ ಮಾತ್ರ ಕಂಡ ನನಗೆ ಅವರ ವ್ಯಕ್ತಿತ್ವದ ಹಲವು ಆಯಾಮಗಳು ತೆರೆದುಕೊಳ್ಳುತ್ತಾಹೋದವು. ಸಾಹಿತ್ಯವನ್ನು ಕುರಿತ ನನ್ನ ಸಂಶೋಧನೆ ಆಗಿನ್ನೂ ಶೈಶವಾವಸ್ಥೆಯಲ್ಲಿದ್ದು ಅದನ್ನು ಗಮನಿಸಿದ ಅವರು ನನ್ನ ಕಾರ್ಯದಲ್ಲಿ ಹೆಚ್ಚು ತೊಡಗಿಕೊಳ್ಳಲು ಹುರಿದುಂಬಿಸಿದರು. ಅವರ ಜ್ಞಾಪಕ ಶಕ್ತಿ ಅಸಾಮಾನ್ಯವಾದುದು. ಆಕರ ವಸ್ತುಗಳ ಶೀರ್ಷಿಕೆ, ಅದರ ಲೇಖಕರು, ಪ್ರಕಟವಾದ ವರ್ಷ, ಪ್ರಕಾಶಕರು, ಆವೃತ್ತಿಗಳ ವಿವರಗಳನ್ನು ಮತ್ತು ಅವು ಎಲ್ಲಿ ದೊರೆಯಬಹುದು ಎನ್ನುವುದನ್ನೆಲ್ಲ ನಿರರ್ಗಳವಾಗಿ ಹೇಳಿಬಿಡುತ್ತಿದ್ದರು. ಇವರ ಪುಸ್ತಕಗಳ ಮೇಲಿನ ಅಪಾರ ಪ್ರೇಮ ಮನೆಯಲ್ಲಿಯೇ ಒಂದು ಅಮೂಲ್ಯ ಗ್ರಂಥ ಭಂಡಾರಕ್ಕೆ ಕಾರಣವಾಗಿದೆ. ಇಂದಿಗೂ ಅನೇಕ ಸಂಶೋಧಕರು ಈ ಪುಸ್ತಕಭಂಡಾರದ ಸಹಾಯವನ್ನು ಪಡೆಯುತ್ತಿದ್ದಾರೆ. ನಾನು ಇದರಿಂದ ಬಹಳ ಲಾಭ ಪಡೆದಿದ್ದೇನೆ. ಶ್ರೀಯುತರ ಹಾಸ್ಯಪ್ರಜ್ಞೆ, ಅದಮ್ಯ ಉತ್ಸಾಹ, ಕಿರಿಯರೊಡನೆ ನಡೆಸುವ ಮುಕ್ತವಾದ ಚರ್ಚೆಗಳು, ಅವರು ನೀಡುವ ಪ್ರೋತ್ಸಾಹಗಳು ಅವರನ್ನು ಒಬ್ಬ ಶ್ರೇಷ್ಠ ಅಧ್ಯಾಪಕರನ್ನಾಗಿಸಿದೆ. ಇಂಥವರ ಬಳಿ ಕಲಿಯುವ ಅವಕಾಶ ಸಿಗುವುದು ಅತಿ ದುರ್ಲಭವೆಂದೇ ನನ್ನ

ಅಭಿಪ್ರಾಯ. ನನ್ನ ತಂದೆ ಮಾನ್ಯರಲ್ಲಿ ಅಡಗಿದ ಅಪಾರ ಉತ್ಸಾಹವನ್ನು ಆಗಾಗ ನೆನೆಸಿಕೊಳ್ಳುತ್ತಿದ್ದರು ಮತ್ತು ಅವರ ಪುಸ್ತಕ ಭಂಡಾರದ ಪ್ರಯೋಜನವನ್ನು ಪಡೆದಿದ್ದರು ಮತ್ತು ನನಗೂ ಅವರ ಸಹಾಯ ಪಡೆಯಲು ಸಲಹೆ ನೀಡಿದ್ದರು.

ಕೆಲವು ವರ್ಷಗಳ ನನ್ನ ಸಂಶೋಧನೆಯ ಪ್ರತಿಫಲವಾಗಿ ನಾನು ಒಂದು ಹೊತ್ತಿಗೆಯನ್ನು ರಚಿಸುವಂತಾಯಿತು. ಅದರ ಕರಡು ಪ್ರತಿಯನ್ನು ಅವರ ಬಳಿ ಒಯ್ದು ಅವರ ವಿಮರ್ಶೆಗಾಗಿ ವಿನಂತಿಸಿಕೊಂಡೆ. ಹೊತ್ತಗೆಯ ರಚನೆಯಲ್ಲಿ ಮತ್ತು ಕರಡು ಪ್ರತಿಯನ್ನು ತಿದ್ದುವ ವಿಷಯದಲ್ಲಿ ನನಗೆ ದೀರ್ಘವಾಗಿ ವಿವರಿಸಿ ಆ ಕುರಿತು ತಾವು ರಚಿಸಿದ ಒಂದು ಪುಸ್ತಕವನ್ನು ನನಗೆ ಉಡುಗೊರೆಯಾಗಿ ನೀಡಿದರು. ಮುಂದೆ ನನ್ನ ಪುಸ್ತಕದ ಲೋಕಾರ್ಪಣೆಯ ಸಮಾರಂಭಕ್ಕೆ ಅವರೇ ಅಧ್ಯಕ್ಷತೆ ವಹಿಸಲು ಪ್ರೀತಿಯಿಂದ ಒಪ್ಪಿ ಸಮಾರಂಭವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಅವರಿತ್ತ ಪ್ರೀತಿ, ಪ್ರೋತ್ಸಾಹಗಳಿಗೆ ನಾನು ಆಭಾರಿಯಾಗಿದ್ದೇನೆ.

ಮಾನ್ಯ ಅನಾಜಿಯವರಂಥ ಸಜ್ಜನರು, ಚಿಂತಕರು, ಸಾಧಕರು ವಿರಳ. ವಿಶ್ವದಲ್ಲಿ ಸಾಧಕರ ಯಶಸ್ಸಿಗೆ ಅವರ ಕುಟುಂಬದ ಬೆಂಬಲ, ಪ್ರೋತ್ಸಾಹಗಳು ಸಹಜವಾಗಿ ಆವಶ್ಯಕವಾಗುತ್ತವೆ. ಮಾನ್ಯ ಅನಾಜಿಯವರ ಧರ್ಮಪತ್ನಿ ಪ್ರೊ. ಲಕ್ಷ್ಮೀಯವರು ಸ್ವತಃ ಕನ್ನಡ ಸಾಹಿತ್ಯದಲ್ಲಿ ಬಹಳ ಕೃಷಿ ಮಾಡಿದವರು. ನನ್ನ ಹಲವು ಬರಹಗಳನ್ನು ಬಲು ತಾಳ್ಮೆಯಿಂದ, ಶ್ರದ್ಧೆಯಿಂದ, ಪ್ರೀತಿಯಿಂದ ಓದಿ, ದೋಷಗಳನ್ನು ಸರಿಪಡಿಸಿ, ತಮ್ಮ ಮುಕ್ತ ವಿಮರ್ಶೆಯನ್ನು ನೀಡಿದ್ದಾರೆ ಮತ್ತು ಹಲವು ವಿಷಯಗಳನ್ನು ಕುರಿತು ನನ್ನೊಡನೆ ಸುದೀರ್ಘವಾಗಿ ಚರ್ಚಿಸಿದ್ದಾರೆ. ಈ ದಂಪತಿಗಳು ನನ್ನಲ್ಲಿ ತೋರಿದ ಪ್ರೀತಿ ವಾತ್ಸಲ್ಯಗಳಿಗೆ ನಾನು ಆಭಾರಿಯಾಗಿದ್ದೇನೆ. ಇವರಿಬ್ಬರಿಗೂ ಪರಮಾತ್ಮ ಆನಂದಮಯ ಜೀವನವನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

******

ನಾ ಕಂಡಂತೆ ನನ್ನ ಕಾಲೇಜಿನ ಸಹೋದ್ಯೋಗಿ

ಡಾ. ಎಸ್. ಗುರುಮೂರ್ತಿ

ಚರವಾಣಿ : ೯೯೭೨೦೩೨೪೭೫

ಪ್ರೊ ಜಿ. ಅಶ್ವತ್ಥನಾರಾಯಣರವರು ಸಾರಸ್ವತ ಲೋಕದಲ್ಲಿ 'ಅನಾಜಿ' ಎಂದೇ ಚಿರಪರಿಚಿತ. ಸರಳತೆಯನ್ನು ಮೈಗೂಡಿಸಿಕೊಂಡು, ವೇಷಭೂಷಣಗಳಿಗೆ ಮಾರು ಹೋಗದೆ. ಸಾಹಿತ್ಯದಲ್ಲಿ ತೊಡಗಿಸಿಕೊಂಡು ಎಲೆಮರೆ ಕಾಯಿಯಂತೆ ಜೀವನವನ್ನು ಸಾಗಿಸುತ್ತಿರುವ ಅಪರೂಪದ ವ್ಯಕ್ತಿತ್ವ ಇವರದು.

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ೧೯೬೬-೬೭ರಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕಗೊಂಡ ಶ್ರೀಯುತರು ೩೦ ವರ್ಷಗಳಿಗೂ ಮಿಗಿಲಾಗಿ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅರ್ಥಪೂರ್ಣ ಸೇವೆ ಸಲ್ಲಿಸಿ ಪ್ರಾಧ್ಯಾಪಕರಾಗಿ ೧೯೯೬ರಲ್ಲಿ ನಿವೃತ್ತಿಗೊಂಡಿರುತ್ತಾರೆ. ನಾನು ಕೂಡ ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕನಾಗಿ ಸೇವೆ ಸಲ್ಲಿಸಿದ್ದರಿಂದಾಗಿ ಸ್ವಾಭಾವಿಕವಾಗಿಯೇ ಹಿರಿಯ ಸಹೋದ್ಯೋಗಿ ಅನಾಜಿ ಅವರ ವ್ಯಕ್ತಿತ್ವ ಹಾಗೂ ಪಾಂಡಿತ್ಯದ ಬಗ್ಗೆ ಸಮೀಪದಿಂದ ಬಲ್ಲೆ. ಅವರ ಹಮ್ಮುಬಿಮ್ಮು ಇಲ್ಲದ ನಡೆನುಡಿ ಸೂಜಿಗಲ್ಲಿನಂತೆ ನನ್ನನ್ನೂ ಅವರತ್ತ ಸೆಳೆಯಿತು. ಜಾತಿ ಧರ್ಮಗಳ ಭೇದಭಾವಗಳಿಲ್ಲದೆ ಎಲ್ಲರನ್ನೂ ಸಮತೋಲನದಿಂದ ಕಾಣುವ ನಡತೆಯಿಂದಾಗಿ ಹಲವಾರು ದಶಕಗಳಿಂದ ಶ್ರೀಯುತರ ಒಡನಾಟ ಬೆಳೆದು ಬಂತು. ಇವರೊಬ್ಬ ಅಜಾತ ಶತ್ರು, ನಿಷ್ಠೂರದ ವ್ಯಕ್ತಿ, ಜೀಹುಜೂರ್ ಸಂಪ್ರದಾಯದಿಂದ ಬಹುದೂರ, ಹಾಗಾಗಿ ತಮ್ಮ ಸೇವಾವಧಿಯಲ್ಲಿ ಹಲವಾರು ಉತ್ತಮ ಅವಕಾಶಗಳನ್ನು ಕಳೆದುಕೊಂಡಿದ್ದೂ ಉಂಟು. ಗಳಿಸಿದ್ದೆಷ್ಟು ಉಳಿಸಿದ್ದೆಷ್ಟು ಎನ್ನುವುದಕ್ಕಿಂತ ಯಾವುದೇ ಅಪಸ್ವರಗಳಿಲ್ಲದೇ ಬದುಕಿದ್ದೆಷ್ಟು ಎನ್ನುವುದೇ ಮುಖ್ಯ. ಅನಾಜಿಯವರು ಹೆಸರಾಂತ ವಾಗ್ಮಿ. ಕನ್ನಡದಲ್ಲಿ ಅವರ ಭಾಷಣವನ್ನು ಆಲಿಸುವುದೇ ಒಂದು ಪುಣ್ಯ. ಕನ್ನಡ ಭಾಷೆ ಹೇಳಿಕೇಳಿ ಒಂದು ಸೌಮ್ಯ ಭಾಷೆ. ಕನ್ನಡ ಭಾಷೆಯನ್ನು ಕಲಬೆರಕೆ ಮಾಡದೇ, ಕನ್ನಡ ಪದಪುಂಜವನ್ನು ಅಚ್ಚುಕಟ್ಟಾಗಿ ಜೋಡಿಸುವ ಇವರ ಭಾಷಣದ ವೈಖರಿಯನ್ನು ಕೇಳಿದರೆ ಕನ್ನಡ ಭಾಷೆಯಲ್ಲೂ ಇಷ್ಟೊಂದು ಅಗಾಧ ಶಕ್ತಿ ಮತ್ತು ಪೌರುಷ ಅಡಗಿದೆಯೇ ಎಂದೆನಿಸುತ್ತದೆ.

ಅನಾಜಿಯವರು ಆಡು ಮುಟ್ಟದ ಸೊಪ್ಪಿಲ್ಲ ಎಂಬ ನಾಣ್ಣುಡಿಯಂತೆ ಜೈನಸಾಹಿತ್ಯ, ದಾಸಸಾಹಿತ್ಯ, ವಚನಸಾಹಿತ್ಯ ಶಬ್ದಕೋಶ, ಗ್ರಂಥಸಂಪಾದನೆ, ಸ್ವತಂತ್ರ ಗ್ರಂಥ ರಚನೆ, ಸಹಸಂಪಾದಕತ್ವ, ಲೇಖಕ, ಸಂಶೋಧಕ, ಮಾರ್ಗದರ್ಶಕರಾಗಿ ಹಾಗೆಯೇ ಅನೇಕ ಸಂಘ ಸಂಸ್ಥೆಗಳಲ್ಲಿ ಜವಾಬ್ದಾರಿಯುತ ಸ್ಥಾನಗಳನ್ನು ಅಲಂಕರಿಸಿ, ಅರ್ಥಪೂರ್ಣ ಸೇವೆ ಸಲ್ಲಿಸಿರುವ ಇವರು, ಕನ್ನಡ ಸಾರಸ್ವತ ಲೋಕದ ಎಲ್ಲಾ

ಪ್ರಕಾರಗಳಲ್ಲಿ ಕೈಯಾಡಿಸಿದ್ದಾರೆ. ಕನ್ನಡ ಭಾಷೆಗೆ ಚೈತನ್ಯ ತುಂಬುತ್ತಿರುವ ವಿದ್ವಾಂಸರಲ್ಲೊಬ್ಬರಾಗಿದ್ದಾರೆ.

ನನಗೆ ಬಹಳ ಹಿಡಿಸಿದ ಶ್ರೀಯುತರ ಕಾರ್ಯವೆಂದರೆ, ೧೯೭೮-೭೯ ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದ ಸಂದರ್ಭದಲ್ಲಿ ಇವರು ಹೊರತಂದಿರುವ ಬಹು ಅಮೂಲ್ಯವಾದ "ಕನ್ನಡ ಸಾಹಿತ್ಯ ಪರಿಷತ್ತು -೧೦೦ (೧೯೧೫-೨೦೧೫) ಗ್ರಂಥ". ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಪುಂಡಲೀಕ ಹಾಲಂಬಿ ಅವರ ಮಾತಿನಲ್ಲೇ ಹೇಳುವುದಾದರೆ:

"ಇದೊಂದು ಮೌಲಿಕ ಬರವಣಿಗೆ, ಹೀಗೆ ಆಧಾರ ಗ್ರಂಥ. ಅಪಾರ ಆಕರ ಸಾಮಾಗ್ರಿ, ಶೋಧನೆ, ಅದರ ವರ್ಗೀಕರಣ, ಪರಿಷತ್ತಿನ ಬಗ್ಗೆ ಲಭ್ಯವಿರುವ ಅಪಾರ ಮಾಹಿತಿಯ ಅರಿವಾಗುವುದರೊಂದಿಗೆ ಒಂದು ಕ್ರಿಯಾಶೀಲ ಸಂಸ್ಥೆಯ ಒಂದು ಮಹಾ ಪ್ರಬಂಧವಾಗಿ ಇದು ಸಿದ್ಧಗೊಂಡಿದೆ. ಈ ಗ್ರಂಥ ಹರಹನ್ನು ಗಮನಿಸಿದರೆ ಇತಿಹಾಸ ಎಷ್ಟು ಅಧ್ಯಯನ ಯೋಗ್ಯ ಎಂಬುದು ಮನದಟ್ಟಾಗುತ್ತದೆ" ಪರಿಷತ್ತಿನ ಪ್ರಕಟಣೆಗಳ ದತ್ತಿಗಳ ಸಮಗ್ರ ಪಟ್ಟಿಯನ್ನು ಸಂಗ್ರಹಿಸಿರುವುದು ಈ ಗ್ರಂಥದ ಮತ್ತೊಂದು ಮೈಲಿಗಲ್ಲು. ಹಾಗಾಗಿ ಇದು ಸರ್ವಕಾಲಕ್ಕೂ ಸಲ್ಲುವ ಚಿರಸ್ಮರಣೀಯ ಗ್ರಂಥ.

ಶ್ರೀಯುತರ ಸಾರಸ್ವತ ತೋಟದಲ್ಲಿ ಬೆಳೆದುನಿಂತು ನಳನಳಿಸುತ್ತಿರುವ ಹಲವಾರು ಚೆಲುವಾದ ಗ್ರಂಥಗಳು ಪ್ರಕಟವಾಗಿವೆ. ಅವರು ಕರ್ನಾಟಕ ಸರ್ಕಾರ ಹಾಗೂ ವಿವಿಧ ಸಂಘ ಸಂಸ್ಥೆಗಳು ಸೇರಿದಂತೆ ನೀಡಿರುವ ಹತ್ತಾರು ಪ್ರಮುಖ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಇವುಗಳಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕುವೆಂಪು ಶ್ರೀ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿ, ಇತ್ಯಾದಿಗಳನ್ನು ಹೆಸರಿಸಬಹುದಾಗಿದೆ.

ಅನಾಜಿಯವರು ನನ್ನ ಎಲ್ಲಾ ಕೃತಿಗಳಿಗೆ ಮಾರ್ಗದರ್ಶನ ನೀಡುವುದರೊಂದಿಗೆ ತಪ್ಪುಗಳನ್ನು ತಿದ್ದಿ, ತೀಡಿ ಪ್ರೋತ್ಸಾಹ ನೀಡಿದ್ದಾರೆ. ಶ್ರೀಯತರು ನಿಜವಾಗಿ "ನನ್ನ ಮಾನಸ" ಗುರುಗಳಾಗಿದ್ದಾರೆ. ಶ್ರೀಯುತರ ಮತ್ತೊಂದು ಹೆಗ್ಗಳಿಕೆಯೆಂದರೆ, ೨೦ ಸಾವಿರಕ್ಕೂ ಮಿಗಿಲಾಗಿ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದ ಕನ್ನಡ ಪುಸ್ತಕಗಳನ್ನು ಕ್ರಮಬದ್ಧವಾಗಿ ಅಣಿಯಾಗಿಟ್ಟಿರುವ ಇವರ ವೈಯುಕ್ತಿಕ ಸಂಗ್ರಹಿಸಿದ ಒಂದು ಮಿನಿ ಅಮೂಲ್ಯ ಗ್ರಂಥಾಲಯವಾಗಿದೆ. ಇದು ಜ್ಞಾನದ ಭಂಡಾರವೂ ಹೌದು. ಅನಾಜಿಯವರ ಬಲಗೈಯಂತೆ ಇವರ ಎಲ್ಲಾ ಸಾಹಿತ್ಯ ಕೈಂಕರ್ಯಗಳನ್ನು ಪೋಷಿಸುತ್ತಿರುವ ಶ್ರೀಯುತರ ಶ್ರೀಮತಿ ಪ್ರೊ. ಎಂ. ಆರ್. ಲಕ್ಷ್ಮೀದೇವಿಯವರ ಕೊಡುಗೆ ಕಡಿಮೆಯೇನಿಲ್ಲ. ಅವರಿಗೂ ನನ್ನ ನಮನಗಳು.

ಈಗ ಅನಾಜಿ ಅವರಿಗೆ ೮೮ ವರ್ಷದ ಪ್ರಾಯ. ಕನ್ನಡ ನಾಡು ನುಡಿಗಳಿಗೆ ಸಲ್ಲಿಸಿದ ಸೇವೆಗಾಗಿ ಕೃತಜ್ಞತೆಗಳನ್ನು ನಾಡಿನ ಪರವಾಗಿ (ತಡವಾದರು ಸಹ) ಸಲ್ಲಿಸಲು 'ಸಾಹಿತ್ಯ ಪರಿಚಾರಕ' ಎಂಬ ಅಭಿನಂದನಾ ಗ್ರಂಥವನ್ನು ಹೊರತರುತ್ತಿರುವುದು ಬಹಳ ಸಂತಸದ ಸಂಗತಿ. ಗ್ರಂಥ ಸಂಪಾದಕರ ಹಾಗೂ ಸಮಿತಿಯ ಈ ಕಾರ್ಯ ಶ್ಲಾಘನೀಯ ಹಾಗೂ ಅತುಲನೀಯ.

ಅನಾಜಿಯವರು ಬಹುಕಾಲ ಬದುಕಿ ಬಾಳಲಿ, ಮತ್ತಷ್ಟು ಕನ್ನಡಾಂಬಿಕೆಯ ಸೇವೆ ಮುಂದುವರೆಸಲಿ.

****

ಸಾಹಿತಿ ಅನಾಜಿ

ಜಿ. ನಾರಾಯಣಸ್ವಾಮಿ
ಚರವಾಣಿ : ೯೧೭೭೮೦೯೮೨೬

ಪ್ರೊ. ಜಿ. ಅಶ್ವತ್ಥನಾರಾಯಣ ಇವರ ಪರಿಚಯ ಪತ್ರ ಓದಿ ನನಗೆ ತುಂಬಾ ಸಂತೋಷವಾಯಿತು. ನನ್ನ ಒಬ್ಬ ಬೆಂಗಳೂರು ಗೆಳೆಯನಿಂದ, ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಪರಿಚಯವಾಯಿತು. ನಾನು ಚೀಫ್ ಇಂಜಿನಿಯರಾಗಿ ನಿವೃತ್ತಿಯಾದ ಬಳಿಕ ಕರ್ನಾಟಕವನ್ನು ಬಿಟ್ಟು ಹೈದ್ರಾಬಾದ್‌ನಲ್ಲಿ ವಾಸಿಸುತ್ತಿದ್ದೇನೆ. ನಾನು ನನ್ನ ಆತ್ಮಕಥೆ ಹಾಗೂ ಇತರ ಪುಸ್ತಕಗಳನ್ನು ಬರೆದಿದ್ದೇನೆ. ಆದರೆ, ಈ ಪುಸ್ತಕಗಳಿಗೆ ಮುನ್ನುಡಿ/ಬೆನ್ನುಡಿಯನ್ನು ಬರೆದುಕೊಡಲು ಇಲ್ಲಿ ಯಾವ ಕನ್ನಡ ಲೇಖಕರು ಸಿಗಲಿಲ್ಲ. ಹೀಗಾಗಿ ನಾನು ಪ್ರೊ. ಜಿ. ಅಶ್ವತ್ಥನಾರಾಯಣ ಇವರಿಗೆ ಬೆನ್ನುಡಿ/ಮುನ್ನುಡಿ ಬರೆದುಕೊಡಲು ಕೇಳಿಕೊಂಡಾಗ ಅವರು ತುಂಬಾ ಸಂತೋಷದಿಂದ ಒಪ್ಪಿಕೊಂಡು ಅದರಂತೆ ನನ್ನ ಪುಸ್ತಕಗಳಿಗೆ ಬೆನ್ನುಡಿ/ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಇದರಲ್ಲಿ ನಾನು ಬರೆದ "ಅಂಬೇಡ್ಕರ್ ಮೈ ಗ್ರ್ಯಾಂಡ್‌ಸನ್" ಎಂಬ ಪುಸ್ತಕಕ್ಕೆ ತುಂಬಾ ಸುಂದರವಾಗಿ ಬೆನ್ನುಡಿ ಬರೆದುಕೊಟ್ಟಿದ್ದಾರೆ. ಬಹುಶಃ ಇದೇ ಕಾರಣ ಇರಬೇಕು, ನನ್ನ ಈ ಪುಸ್ತಕವನ್ನು ಕರ್ನಾಟಕ ಸರ್ಕಾರದ ಸೆಂಟ್ರಲ್ ಲೈಬ್ರರಿ ಕಮಿಟಿ, ಬೆಂಗಳೂರು ಇವರು ಆಯ್ಕೆ ಮಾಡಿದ್ದಾರೆ. ಅಲ್ಲದೇ ಮುನ್ನೂರು ಪುಸ್ತಕಗಳನ್ನು ಖರೀದಿಸಿದ್ದಾರೆ. ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಯಾವಾಗಲೂ ಸಾಹಿತ್ಯದ ಬಗ್ಗೆ, ಅವರು ಬರೆದ ಪುಸ್ತಕಗಳ ಬಗ್ಗೆ, ಮುಂದೆ ಬರೆಯಬೇಕಾದ ವಿಷಯಗಳ ಬಗ್ಗೆ ಬಹಳ ಆಸಕ್ತಿಯಿಂದ ಮಾತನಾಡುತ್ತಿರುತ್ತಾರೆ. ಈ ವಯಸ್ಸಿನಲ್ಲಿ ಬರವಣಿಗೆಯ ಬಗ್ಗೆ ಇರುವ ಅವರ ಆಸಕ್ತಿ, ಶ್ರದ್ಧೆ ನೋಡಿ ಬಹಳ ಆಶ್ಚರ್ಯವಾಗುತ್ತದೆ. ಅವರು ಮುಂದೆ ಕೂಡಾ ಇದೇ ರೀತಿ ಬರವಣಿಗೆಯನ್ನು ಮುಂದುವರಿಸಲಿ, ಭಗವಂತ ಅವರಿಗೆ ಆಯುಷ್ಯ, ಆರೋಗ್ಯವನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

****

ಆತ್ಮೀಯ ಮಿತ್ರ - ಅನಾಜಿ

ಪದ್ಮಾ ಗುರುದತ್
ಚರವಾಣಿ : ೯೬೮೬೬೮೪೨೮೦

ತಮ್ಮ ಆತ್ಮೀಯ ಮಿತ್ರ, ಶಿಷ್ಯ ವರ್ಗಕ್ಕೆ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ನಲ್ಮೆಯ ಅ.ನಾ.ಜಿ. ಆಗಿದ್ದಾರೆ. “ನಾನು ಸಾಹಿತ್ಯ ವರ್ಗಕ್ಕೂ, ಹಿರಿಯ ವರ್ಗಕ್ಕೂ ಸಲ್ಲುವುದಿಲ್ಲ”. ಆದರೂ ಸಂಕೋಚದಿಂದ ಧೈರ್ಯಮಾಡಿ ನನ್ನ ಅನಿಸಿಕೆಯನ್ನು ಹಂಚಿಕೊಳ್ಳುತ್ತಿರುವೆ.

ಸಾಹಿತ್ಯ ದಂಪತಿಗಳಾದ ಪ್ರೊ. ಲಕ್ಷ್ಮೀಯವರು ಮತ್ತು ಪ್ರೊ. ಅಶ್ವತ್ಥನಾರಾಯಣ ಅವರು ಮೊದಲಿಗೆ ನನಗೆ ಪರಿಚಯವಾದುದು ಲಕ್ಷ್ಮೀಯವರಿಂದ. ಆಚಾರ್ಯ ಕಾಲೇಜು ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿದ್ದ ಲಕ್ಷ್ಮೀಯವರು ಅವರ ಮಗಳಿಗೆ ಸಂಗೀತ ಪಾಠಕ್ಕೆ ಕರೆತಂದು ಪರಿಚಯಿಸಿಕೊಂಡರು. ನಮ್ಮ ಮನೆಯ ಸಮೀಪವೇ ಇದ್ದ ಲಕ್ಷ್ಮೀ–ಅನಾಜಿ ಅವರುಗಳು ಕ್ರಮೇಣ ನನ್ನನ್ನೂ ಅವರ ಆಪ್ತವರ್ಗಕ್ಕೆ ಬೆಸೆದುಕೊಂಡರು.

ಸಾಹಿತ್ಯ–ಸಂಗೀತದಲ್ಲಿ ನನಗೆ ಆಗಾಗ್ಗೆ ಮೂಡಿ ಬರುತ್ತಿದ್ದ ಸಂದೇಹಗಳನ್ನು ಬಹಳ ತಾಳ್ಮೆಯಿಂದ ಕೇಳಿ ನಿಖರವಾಗಿ ಪರಿಹರಿಸಿ ಮಾರ್ಗದರ್ಶನ ಮಾಡುತ್ತಿದ್ದರು. ಅವರ ಮನೆಯಲ್ಲಿ ಅವರು ಆಸ್ಥೆಯಿಂದ ಸಂಗ್ರಹಿಸಿ, ಅಚ್ಚುಕಟ್ಟಾಗಿ ಅಣಿಗೊಳಿಸಿ ಇಟ್ಟಿದ್ದ ಅವರ ಗ್ರಂಥಗಳು, ಸಂಗ್ರಹಿಸಿಟ್ಟಿದ್ದ ರೀತಿ–ನೀತಿ ನನ್ನನ್ನು ಬಹಳವಾಗಿ ಆಕರ್ಷಿಸಿತು. ದಾಸರಪದ ಶರಣರ ವಚನ ಮೊದಲಾಗಿ ಅನೇಕ ವಿಷಯಗಳನ್ನೊಳಗೊಂಡ ಆ ಸಂಗ್ರಹ “ಜ್ಞಾನಸಾಗರ”ದಂತೆ ಭಾಸವಾಗುತ್ತಿತ್ತು. ಸಾಹಿತ್ಯಾರ್ಥ ಕೆಡದಂತೆ, ಭಾವಕ್ಕೆ ತಕ್ಕಂತೆ ಪದಗಳನ್ನು ಬಿಡಿಸಿಕೊಂಡು ನಮ್ಮ ಸಂಗೀತವಿದ್ದರೆ ಎಷ್ಟು ಅರ್ಥಪೂರ್ಣವೆಂಬುದಕ್ಕೆ ಬಹಳ ಒತ್ತುಕೊಟ್ಟು ವಿವರಿಸುತ್ತಿದ್ದರು. ವಿಷಯ ಸಂಗ್ರಹಣೆ ಹೇಗೆ ಮಾಡಬೇಕು, ರಕ್ಷಿಸಬೇಕು, ದಾಖಲಿಸಿ ಮುಂದಿನ ಪೀಳಿಗೆಗೆ ತಲುಪಿಸಬೇಕೆಂಬುದನ್ನು ಇವರಿಂದ ನಾನು ಕಲಿಯುವ ಸೌಭಾಗ್ಯ ದೊರಕಿತು.

ಅಷ್ಟೇ ಅಲ್ಲದೇ ಮನೆಗೆ ಹೋದಾಗ ತುಂಬು ಹೃದಯದಿಂದ ದಂಪತಿಗಳು ನೀಡುತ್ತಿದ್ದ ಉಪಾಹಾರ, ಪಾನೀಯ ಇತ್ಯಾದಿ ಆತಿಥ್ಯವನ್ನು ಮರೆಯುವಂತೆಯೇ ಇಲ್ಲ. ಇವರ ಮನೆಗೆ ಹಿರಿಯ ಕಿರಿಯ ಸಾಹಿತಿಗಳು, ಮಿತ್ರರು, ಸಂಘ–ಸಂಸ್ಥೆಗಳ ವ್ಯವಸ್ಥಾಪಕರು, ಇವರಿಂದ ಬರವಣಿಗೆ ಪಡೆಯಲು ಕಾದು ನಿಂತ ಸಾಹಿತ್ಯಾಸಕ್ತರು ಮೊದಲಾಗಿ ಅನೇಕರು ಸದಾ ಬರುವುದು ಸಹಜ. ಎಲ್ಲರನ್ನೂ ಸಮಭಾವದಿಂದ ಮುಗುಳ್ನಗೆಯಿಂದ ಸ್ವಾಗತಿಸುವ ಗುಣ ನಮ್ಮ ಅ.ನಾ.ಜಿ.ಯವರದು. ಡಾಕ್ಟರೇಟ್ ಮಾಡಿರುವ, ಮಾಡುತ್ತಿರುವ ಅನೇಕರು ಇವರ ಮಾರ್ಗದರ್ಶನದಿಂದ ಉಪಕೃತರಾಗಿವವರೆಂದು

ತಿಳಿಸಲು ಹೆಮ್ಮೆ ಎನಿಸುತ್ತದೆ. ಇವರು ಮಾತ್ರ ಸರ್ವದಾ ಸರಳಾತಿಸರಳರು. ಎಡಭುಜಕ್ಕೊಂದು ತೂಗಾಡುವ ಚೀಲ, ಅದರಲ್ಲಿ ನೆರಳಚ್ಚಿಗೆ ಹೋಗಬೇಕಾದ ಹಾಳೆಗಳು / ಅಚ್ಚಿಗೆ ಕೊಡಬೇಕಾದ/ ಕೊಂಡು ತಂದ ಪುಸ್ತಕಗಳನ್ನೋ ಇಟ್ಟುಕೊಂಡು, ಸಂಘ, ಸಂಸ್ಥೆ ಅಥವಾ ಗಮ್ಯ ಕಾರ್ಯಕ್ಷೇತ್ರಗಳಿಗೆ ನಮ್ಮ ಮನೆ ಮುಂದೆ ನಡೆದು ಸಾಗುವ ಚಿತ್ರ, ನನಗೆ ರಸದೌತಣ, ಸಮಯದ ಪರಿವೆಯಿಲ್ಲದೆ, ನಡೆದು , ಸರ್ಕಾರಿ ಬಸ್ಸು, ಆಟೋ ಹೀಗೆ ನಿಸ್ವಾರ್ಥವಾಗಿ ತೊಡಗಿಸಿಕೊಳ್ಳುವ ಪರಿ ಇವರದು. ನಮ್ಮ ಬಡಾವಣೆ ನಮ್ಮ ರಸ್ತೆಯಲ್ಲಿ ಅವರಿರುವುದೇ ನಮಗೆ ಹೆಮ್ಮೆ.

"ಸುತ್ತು ಕೆಲಸ ಮಾಡುವವ ನುಚ್ಚುಗಿಂತಲೂ ಕಡೆ" ಎಂಬುದೊಂದು ಉಕ್ತಿ. ಹಾಗೇ ಅಭಿನಂದನಾ ಕಾರ್ಯಕ್ರಮ, ಗ್ರಂಥ ಸಮರ್ಪಣೆ/ಲೋಕಾರ್ಪಣೆ ನಿರ್ವಿಘ್ನವಾಗಿ ವಿಜೃಂಭಣೆಯಿಂದ ನೆರವೇರಲಿ.

॥ ಶುಭಂ ಭವತು ॥

****

ಆತ್ಮೀಯ ಸಾಹಿತಿ

ಸಾಯಿಬಿಂದು
ಚರವಾಣಿ : ೯೯೮೦೭೪೦೮೯೪

ಪ್ರೊ. ಅಶ್ವತ್ಥನಾರಾಯಣರವರ ಪರಿಚಯ, ಸಂಬಂಧ, ಒಡನಾಟಗಳು, ಹಿರಿಯ ಅಧಿಕಾರಿಯಾಗಿದ್ದ ನಾನು ೧೯೯೬ ರಲ್ಲಿ ಮುಂಬೈ ನಗರದ ಕೆನರಾ ಬ್ಯಾಂಕಿನಿಂದ ಉದ್ಯೋಗ ನಿವೃತ್ತಿ ಪಡೆದ ನಂತರ ನನ್ನ ಸ್ವಂತ ಊರಾದ ಬೆಂಗಳೂರಿಗೆ ಬಂದು ರಾಜಾಜಿನಗರದಲ್ಲಿ ನೆಲೆಸಿದೆ. ರಾಜಾಜಿನಗರದ ವಾಣಿಜ್ಯ ವಿದ್ಯಾಸಂಸ್ಥೆಯಲ್ಲಿ ಪುಸ್ತಕ ಬಿಡುಗಡೆಯ ಸಮಾರಂಭವಿತ್ತು. ಅದಕ್ಕೆ ಶ್ರೀ ಅಶ್ವತ್ಥನಾರಾಯಣರವರು ವಿಶೇಷ ಅತಿಥಿಗಳಾಗಿ ಆಹ್ವಾನಿತರಾಗಿದ್ದರು. ಆ ಸಮಾರಂಭಕ್ಕೆ ನಾನು ಹೋದದ್ದು ಆಕಸ್ಮಿಕ. ಮಿತ್ರರ ಗಂಗಾ ಪ್ರವಾಹದಂತಹ ಮಾತುಗಳು. ಮಿಂಚಿನ ಭಾಷಣ, ಅಳಿಸಲಾಗದ ಛಾಪನ್ನು ಮೂಡಿಸುವ ವಿಷಯ ಪ್ರತಿಪಾದನೆ, ಎಲ್ಲವೂ ಸುಲಲಿತವಾಗಿ ಹೊರಹೊಮ್ಮಿ ನನ್ನನ್ನು ದಿಙ್ಮೂಢನನ್ನಾಗಿ ಮಾಡಿದುದೇ ಅಲ್ಲದೇ, ಅವರ ಮಾತುಗಳು ನನ್ನನ್ನು ಆಯಸ್ಕಾಂತದಂತೆ ಸೆಳೆದಿತ್ತು. ಒಂದು ರೀತಿಯಲ್ಲಿ ಕನ್ನಡ ಸಾಹಿತ್ಯದಲ್ಲಿ, ಅದರ ವ್ಯಾಪ್ತಿ, ವಿನ್ಯಾಸಗಳನ್ನು ತಿಳಿಯುವ ಹಂಬಲ, ತಿಳಿದ ಕೆಲವನ್ನು ಮೆಲುಕು ಹಾಕಿ ಸವಿಯುವ ನಡಾವಳಿ, ಎಲ್ಲವೂ ನನಗೆ ಆದದ್ದು ಶ್ರೀಗಳಿಂದ ಎಂದು ಹೇಳಿದರೆ ಅತಿಶಯವಾಗಲಾರದು. ಅವರ ಪರಿಚಯ ಮಾಡಿಕೊಂಡೆ, ಅವರ ಕೆಲವೊಂದು ಉಪನ್ಯಾಸಗಳನ್ನು ಕೇಳಿ ಸಂಪನ್ನನಾದೆ. ಅವರೆಲ್ಲಿ, ನಾನೆಲ್ಲಿ? ಅವರದು ಸಾಹಿತ್ಯ, ನನ್ನದು ವಾಣಿಜ್ಯ. ಎಲ್ಲವೂ ಧರ್ಮ-ಕರ್ಮ ಸಂಯೋಗ. ಅವರ ದಿಟ್ಟ, ನೇರ, ಸರಳ ವ್ಯಕ್ತಿತ್ವದಲ್ಲಿ ಯಾವುದೇ ತೆರನಾದ ಹಮ್ಮು-ಬಿಮ್ಮುಗಳೂ ಇರದಿದ್ದುದು, ನನ್ನ ಅವರ ಮಿತ್ರ ಸಂಬಂಧದ ಬಂಗಾರದ ಬೆಸುಗೆಯೂ ಆಯಿತು. ಹೀಗೆಯೇ ಅವರು ನೂರಾರು ಮಂದಿ ಶಿಷ್ಯ-ಮಿತ್ರರನ್ನು ಹೊಂದಿರುವುದು, ಅವರ ಮೇರು ವ್ಯಕ್ತಿತ್ವವನ್ನು ಬಿಂಬಿಸುತ್ತದೆ.

ಒಮ್ಮೆ ಅವರ ಮನೆಗೆ ಹೋಗುವ ಅವಕಾಶವು ಅವರ ಮನೆ ಕೇವಲ, ಗೃಹಾಲಯವೇ ಆಗಿರದೆ, ಸಾವಿರ ಸಾವಿರ ಅಮೂಲ್ಯ ಪುಸ್ತಕಗಳ ಗ್ರಂಥಾಲಯವೂ ಆಗಿತ್ತು. "ಹೀಗೂ ಉಂಟೇ?" ಎಂದು ಅಚ್ಚರಿಗೊಂಡೆ. ಅಶ್ವತ್ಥನಾರಾಯಣರವರು ಯಾವ ರೀತಿಯಲ್ಲೂ ಪ್ರದರ್ಶನ ಮಾಡುವ ಮನುಷ್ಯರೇ ಅಲ್ಲ. ಎಲ್ಲ ಪುಸ್ತಕಗಳನ್ನು ಓದಿದವರು ಮಾತ್ರವೇ ಅಲ್ಲದೇ, ಅವುಗಳನ್ನು ಕ್ರಮಬದ್ಧವಾಗಿ ಅಚ್ಚುಕಟ್ಟಾಗಿ ಜೋಡಿಸಿದ್ದರು. ಯಾವುದೇ ವಿಚಾರವನ್ನು ತಿಳಿಯಬೇಕಾದರೆ ಅವರನ್ನು ಸುಮ್ಮನೆ ಕೇಳಿದರೆ ಸಾಕು, ಅಗತ್ಯವಾದುದನ್ನು ಆಮೂಲಾಗ್ರವಾಗಿ ತಿಳಿಸಿಬಿಡುತ್ತಿದ್ದರು. ಉದಾಹರಣೆಗಾಗಿ ಭಗವದ್ಗೀತಾ ಗ್ರಂಥ. ಅದರ ಬಗ್ಗೆ ಇದುವರೆಗೂ ಎಷ್ಟು ವ್ಯಾಖ್ಯಾನಗಳಾಗಿದೆ, ಯಾರ್ಯಾರು ಯಾವಾಗ ಮಾಡಿದ್ದಾರೆ,

ಪ್ರತಿಯೊಂದರ ವಿಶೇಷತೆಯೇನು ಎಂಬುದೆಲ್ಲವನ್ನೂ ವಿವರವಾಗಿ ಮಾಹಿತಿಯ ರೂಪದಲ್ಲಿ ಕೊಡುತ್ತಿದ್ದರು.

ಅಶ್ವತ್ಥನಾರಾಯಣ ಎಂಬ ಅವರ ನಾಮಕರಣ ಪ್ರೊ. ಅವರಿಗೆ ಒಂದು ಅನ್ವರ್ಥನಾಮವೇ ಆಗಿದೆ. ಅಶ್ವತ್ಥ ಎಂದರೆ ವಿಶ್ವ ವ್ಯಾಪಕಗುಣದ ಬೃಹತ್‌ವೃಕ್ಷ. ಎಲ್ಲೆಲ್ಲೂ ಬೇರುಗಳು ಮತ್ತು ಎಲ್ಲೆಲ್ಲೂ ಚಿಗುರುಗಳು. ನಾರಾಯಣ ಎಂದರೆ ವಿಶ್ವನಾಥ. ಅಂತೆಯೇ ಅಶ್ವತ್ಥನಾರಾಯಣರ ವ್ಯಕ್ತಿತ್ವವು ವ್ಯಾಪಕವಾದದ್ದು. ಅವರ ಜ್ಞಾನ ದಾಹ ಮತ್ತು ಹರಿವು ನಿರಂತರವಾಗಿ ಆಗುತ್ತಾ, ಅವರನ್ನು ಕನ್ನಡದ ವಿಶ್ವಕೋಶ ಎಂದು ಹೇಳಬಹುದು. ಕನ್ನಡಕ್ಕೆ ಅವರೊಬ್ಬ ಧೀಮಂತ ವ್ಯಕ್ತಿ ಮತ್ತು ಆಸ್ತಿ. ಎಷ್ಟೋ ಜನ ಲೇಖಕರಿಗೂ ಅವರು ಸ್ಫೂರ್ತಿ ಮತ್ತು ಮಾರ್ಗದರ್ಶಕರು. ಈ ನಿಟ್ಟಿನಲ್ಲಿ ಲೇಖಕನಾದ ನಾನೂ ಸಹ ಅವರ ಸಲಹೆ ಮತ್ತು ಮಾರ್ಗದರ್ಶನ ಪಡೆದಿದ್ದೇನೆ.

ಅಶ್ವತ್ಥನಾರಾಯಣರವರು ಸಾತ್ವಿಕ ಸಜ್ಜನರು. ಎಲ್ಲರಿಗೂ ಬೇಕಾದ ಶ್ರೇಷ್ಠ ವ್ಯಕ್ತಿಯಾಗಿದ್ದಾರೆ. ಅವರಲ್ಲಿ ಯಾವ ತಾರತಮ್ಯವೂ ಇರಲಿಲ್ಲ. ಅವರನ್ನು ಎಷ್ಟೋ ಬಾರಿ ಸಂದರ್ಶಿಸಿದರೂ ಕಿಂಚಿತ್ತೂ ಬೇಜಾರು ಮಾಡಿಕೊಂಡವರಲ್ಲ. ಅತ್ಯಂತ ನಿಗರ್ವಿಗಳು. ಜ್ಞಾನದಾಹಿಗಳಿಗೆ ಜ್ಞಾನ ದಾಸೋಹ ಎಂಬಂತೆ ಅವರು ಸಾಹಿತ್ಯಕ್ಕೆ ಸಹಾಯಹಸ್ತ. ಸರಳ ಜೀವನ ಉನ್ನತ ಚಿಂತನ- ಎಂಬುದು ಅವರ ಬದುಕಿನ ಕಲೆ ಮತ್ತು ಜೀವನ ಶೈಲಿ. ಉತ್ಸುಕರು. ಯಾವುದೇ ವಿಚಾರವನ್ನು ಎತ್ತಿದರೆ ಸಾಕು, ಬಹುಶಃ ಅವರಿಗೆ ಹಸಿವೇ ಆಗುತ್ತಿರಲಿಲ್ಲ. "ಸಾಕು-ಸಾಕು ತೃಪ್ತಿಯಾಯಿತು" ಎಂದು ತಿಂದು ತೇಗುವಷ್ಟು ವಿಚಾರ ಧಾರೆಯಾಗುತ್ತಿತ್ತು. ಶ್ರೀ ಶಾರದೆಯ ಕೃಪಾ ವಿಶೇಷರಾದ ಇವರು ಕನ್ನಡ ಕುಲಕುವರರು.

ಕನ್ನಡ ನಾಡಿಕ ಕವಿ ಕುಲೋತ್ತಮರಾದ ಹೊಸಕೆರೆ ಚಿದಂಬಯ್ಯನವರ (ಕಾಲಾಧೀನ ೧೯೩೮) ಕಳೆದು ಹೋಗಿದ್ದ ಕೆಲವೊಂದು ಗ್ರಂಥಗಳನ್ನು ಹೊರತೆಗೆದು ಅವುಗಳ ಸಂಪಾದಕರಾಗಿ ಅವು ಪ್ರಕಾಶಕ್ಕೆ ಬರಲು, ವಿಶೇಷವಾಗಿ ಆಸಕ್ತಿ, ಪ್ರಯತ್ನ ಶ್ರೀ ಅಶ್ವತ್ಥನಾರಾಯಣರವರದು. ಯಾವುದೋ ಪೂರ್ವಪುಣ್ಯರಿಂದ ನಾನು ಆ ಹೊಸಕೆರೆಗೆ ಸೇರಿದವನು. ಚಿದಂಬರಯ್ಯನವರು ನನ್ನ ತಾಯಿಯ ಕಡೆಯ ಸಂಬಂಧವೂ ಹೌದು. ಅವರು ನನಗೆ ಮುತ್ತಾತನ ಪರಿ. ಆದರೂ ಅವರ ವಿಚಾರವು ಬಾಲ್ಯಾವಸ್ಥೆಯಲ್ಲಿ ನನಗೆ ತಿಳಿಯದೇ ಹೋಯಿತು. ಎಲ್ಲಕ್ಕೂ ಕಾಲ ಕೂಡಿ ಬರಬೇಕು. ಅಶ್ವತ್ಥನಾರಾಯಣ, ಅಂತಹವರ ಒಡನಾಟಗಳಿಂದ ನಾನು ಚಿದಂಬರಯ್ಯನವರ ಕುಲದಲ್ಲೇ ಜನಿಸಿದನೆಂಬ ಹೆಮ್ಮೆ, ಸಂತೋಷ ಒಟ್ಟಿಗೇ ಆಯಿತು.

ಒಮ್ಮೆ ಹೊಸಕೆರೆ ಚಿದಂಬರಯ್ಯನವರ ಸ್ಮರಣಾರ್ಥ ಕೆಲವೊಂದು ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕೆಂಬ ಹಂಬಲವು ಉತ್ಸುಕರಲ್ಲಿ ಉಂಟಾಗಿ, ಅದರ ಸಾರಥ್ಯವನ್ನು ಶ್ರೀ ಜಿ.ಎನ್. ಲಕ್ಷ್ಮೀನಾರಾಯಣರಾವ್‌ರವರು ವಹಿಸಿಕೊಳ್ಳಲಾಗಿ, ಅದರ ಪ್ರಥಮ ಒಕ್ಕೂಟವನ್ನು ಹೊಸಕೆರೆಯಿಂದಲೇ ಪ್ರಾರಂಭಿಸಿದಾಗ, ಮಾರ್ಗದರ್ಶಕ ಶ್ರೀ ಅಶ್ವತ್ಥನಾರಾಯಣರವರ ಸಮೇತ ನಾವೊಂದಷ್ಟು ಜನ ಬೆಂಗಳೂರಿಂದ ಹೊಸಕೆರೆಗೆ ಹೋಗಿದ್ದೆವು. ಅದಕ್ಕೆ ನನ್ನನ್ನೂ ಸಹ ಕರೆದುಕೊಂಡು ಹೋಗಿದ್ದರು. ಅದು ನನ್ನ ಭಾಗ್ಯ. ಬೆಂಗಳೂರಲ್ಲಿ ಆ ಪ್ರತಿಷ್ಠಾನದ ಕಾರ್ಯಕ್ರಮಗಳನ್ನು ಮಾಡಲಾಗಿತ್ತು. ಶ್ರೀಯುತ ಅಶ್ವತ್ಥನಾರಾಯಣರ ಅಧ್ಯಕ್ಷತೆಯಲ್ಲೇ ನಡೆದ ಆ ಕಾರ್ಯಕ್ರಮಗಳ ವೇದಿಕೆಯಲ್ಲಿ ನನಗೂ ಒಂದು ಸ್ಥಾನವಿದ್ದುದು ನನ್ನ ವಿಶೇಷ ಭಾಗ್ಯ.

ಸರ್ಕಾರಿ ಮತ್ತು ಸಾರ್ವಜನಿಕ ಸಂಸ್ಥೆಗಳಿಗೂ ಸುಲಭವಲ್ಲದ ಕಾರ್ಯ, ಶ್ರೀ ಅಶ್ವತ್ಥನಾರಾಯಣರವರದು. ಅವರು ನಿಜಕ್ಕೂ ಕೇವಲ ವ್ಯಕ್ತಿಯಾಗಿರದೆ, ಒಂದು ಸಂಸ್ಥೆಯೇ ಆಗಿದ್ದರು.

ಸಾಹಿತ್ಯದ ಗಂಧವೇ ಇರದಿದ್ದ ನಾನು, ವಾಣಿಜ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಕಾರಣ, ಒಮ್ಮೆ ನನಗೆ ಜೀವನದಲ್ಲಿ ಏನೋ ಅತೃಪ್ತಿ, ಅಸಮಾಧಾನ ಉಂಟಾಗಿ ಒಂದು ಅವ್ಯಕ್ತ ಅನ್ವೇಷಣೆಯಲ್ಲಿ ತೊಡಗಿಸಿಕೊಂಡಿದ್ದೆ. ಅದೊಂದು ಸದ್ಗುರು ಮಿಲನ ಮತ್ತು ಕೃಪೆ. ಯಾವುದೋ ಹೊಸ ಚೈತನ್ಯ ಮತ್ತು ಪ್ರೇರಣೆ. ಬರೆಯುವುದೂ ಸಹ ಹವ್ಯಾಸವಾಗಿ, ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ಸಾಯಿಬಿಂದು ಎಂಬ ಕಾವ್ಯನಾಮದಲ್ಲಿ ಸುಮಾರು ೨೩ ಗ್ರಂಥಗಳನ್ನು (ಅಧ್ಯಾತ್ಮ ಮತ್ತು ಕಾವ್ಯ ಸಂಕಲನ) ರಚಿಸಿ, ಗಣ್ಯರ ಪ್ರಶಂಸೆಗೂ ಪಾತ್ರನಾಗಿದ್ದೆ. ಆ ನಿಟ್ಟಿನಲ್ಲಿ ನನ್ನನ್ನು ತಿದ್ದಿ ನಡೆಸಿದವರು ಪ್ರೊ. ಅಶ್ವತ್ಥನಾರಾಯಣರವರು. ಮೌಲ್ಯಗಳನ್ನು ಪ್ರತಿಪಾದಿಸುವ ಅವರ ಉನ್ನತ ಸ್ತರದ ಮುನ್ನುಡಿಯು, ನನ್ನ ಕಾವ್ಯ ಸಂಕಲನ-ಕೃತಿ "ಆತ್ಮ ಲಕ್ಷ್ಮಿ "ಗೆ ಮೆರುಗನ್ನು ಕೊಡುವುದೇ ಅಲ್ಲದೇ, ಪೂರ್ಣತೆಯನ್ನೂ ದಯಪಾಲಿಸಿದೆ.

ಅಶ್ವತ್ಥನಾರಾಯಣರವರ ಉತ್ಸಾಹ, ಜನಾನುರಾಗ, ಹಾಸ್ಯ-ವಿನೋದ, ಎಲ್ಲರನ್ನೂ ಹುರಿದುಂಬಿಸಿ, ಚೇತನ ತುಂಬುತ್ತಿತ್ತು. "ಹೂವಿನೊಡನೆ ನಾರು ಸ್ವರ್ಗ ಸೇರಿತು" ಎಂಬಂತೆ, ಅವರೊಂದಿಗಿನ ಅವರೊಡನಾಟ ಒಂದು ರೀತಿಯ ಸಾರ್ಥಕ ಭಾವವನ್ನು ನನಗೆ ತರುತ್ತಿತ್ತು.

ಸಾಮಾನ್ಯವಾಗಿ ಜನರನ್ನು (೧) ಕಾರ್ಯವಲಯ (೨) ಭಾವನಾವಲಯ (೩) ವಿಚಾರವಲಯ ಎಂಬುದರೊಳಗೆ ಗುರುತಿಸಬಹುದು. ಅಶ್ವತ್ಥನಾರಾಯಣರು ವಿಚಾರ-ಸಾಗರವೇ ಆಗಿರುತ್ತಾರೆ. ಅವರ ಬಗೆ/ವಿಚಾರಗಳನ್ನು ದಾಖಲಿಸುವ ವಿದ್ವಜ್ಜನರು ಇರುವುದು ಸಹಜ. ಆದರೆ ನನ್ನ ಅನಿಸಿಕೆಗಳು ಬಹುತೇಕ, ಭಾವನಾವಲಯದಿಂದ ಹೊರಹೊಮ್ಮಿರುವವು. ಕಾರಣ ಅವರು ನನಗೆ ಹಿರಿಯರು, ಅಭಿಮಾನಿಗಳು, ಚೇತಕರು ಮತ್ತು ಪ್ರೀತಿಯುಳ್ಳವರು. ಆದ್ದರಿಂದ, ಅವರ ಮೇಲೆ ನನಗಿರುವುದು ಪೂಜ್ಯ ಭಾವ.

ಕೇವಲ ವಿದ್ಯಾವಂತರಾದರೆ ಸಾಲದು. ವಿದ್ಯಾವಂತರು, ಬುದ್ಧಿವಂತರು ಈ ಜಗವನ್ನು ತುಂಬಿದ್ದರೂ, ಜಗತ್ತು ಅಶಾಂತಿ ಮತ್ತು ಅತೃಪ್ತಿಯಿಂದ ಬಳುತ್ತಿರುವುದು ವಿಸ್ಮಯ. ಆ ಕೊರತೆಯನ್ನು ನೀಗಿ, ಜಗತ್ತನ್ನು ಶ್ರೀಮಂತಗೊಳಿಸಬೇಕಾದರೆ, ಸು-ಸಂಸ್ಕೃತ ಜನರು ಬೇಕು. ಅಂತಹ ಜನರಲ್ಲಿ ಶ್ರೇಷ್ಠರಾದವರು ಇವರೊಬ್ಬರು. ಅಂತಹವರು ಜನತೆಗೆ ಸಿಗುತ್ತಿರಬೇಕು. ಅವರು ಜನ ಮಾನಸದಲ್ಲಿ ವಿರಾಜಮಾನವಾಗಿ ಬೆಳಗುತ್ತಾರೆ ಎಂಬುದಕ್ಕೆ ಈಗ ಹೊರಬರುತ್ತಿರುವ ಗೌರವಗ್ರಂಥ ಸಾಕ್ಷಿಯಾಗಲಿದೆ.

ಈ ಸಂಚಿಕೆಯು ಹೆಚ್ಚು ಜನರ ಕೈ ಸೇರಿ, ಅವರ ಹೃನ್ಮಂದಿರದಲ್ಲಿ ವಿದ್ಯುತ್ ಸಂಚಲನ (ವಿದ್ವತ್ ಸಂಚಲನ) ಉಂಟುಮಾಡಲಿ ಎಂದು ಹಾರೈಸುತ್ತಾ, ಭಗವಂತನು ಅವರಿಗೆ ಮತ್ತು ಅವರ ಕುಟುಂಬಕ್ಕೆ ಸಕಲ ಶ್ರೇಯೋಭಾಗ್ಯಗಳನ್ನಿತ್ತು, ಕಾಪಾಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಈ ಲೇಖನವನ್ನು ಬರೆದುಕೊಡುವ ಸದಾವಕಾಶವನ್ನು ನನಗೆ ನೀಡಿದ್ದಕ್ಕೆ ನನ್ನ ಧನ್ಯವಾದಗಳು.

****

ಪ್ರಭಾವಶಾಲಿ ವಾಗ್ಮಿ

ಎಸ್. ಶಂಕರ
ಚರವಾಣಿ : ೯೯೪೫೨೮೦೪೦೮

ಪ್ರೊ.ಜಿ. ಅಶ್ವತ್ಥನಾರಾಯಣರ ಜೀವನ, ಸಾಧನೆಗಳನ್ನೊಳಗೊಂಡ "ಸಾಹಿತ್ಯ ಪರಿಚಾರಕ" ಎಂಬ ಅಭಿನಂದನಾ ಗ್ರಂಥ ಪ್ರಕಟವಾಗುತ್ತಿರುವುದು ಬಹಳ ಸಂತಸದ ವಿಷಯ.

ಇಗ್ನೋ ಶೈಕ್ಷಣಿಕ ಸಂಸ್ಥೆಯ ಅಂಗವಾಗಿ "ಜ್ಞಾನವಾಣಿ" ಎಂಬ ಬಾನುಲಿ ಕೇಂದ್ರದಿಂದ ಪ್ರಸಾರವಾಗುತ್ತಿದ್ದ ಶ್ರೀಯುತರ ಕನ್ನಡ ಸಾಹಿತ್ಯ ದಿಗ್ಗಜರ ವ್ಯಕ್ತಿತ್ವ, ಕೊಡುಗೆಗಳ ಬಗೆಗೆ ಬಹಳ ರಸವತ್ತಾಗಿರುತ್ತಿದ್ದ ಐವತ್ತು ಭಾಷಣಗಳನ್ನು ಕೇಳಿ ಬಹಳ ಪ್ರಭಾವ ಹೊಂದಿದ ನನಗೆ ಒಮ್ಮೆ ಅವರನ್ನು ನೇರವಾಗಿ ಭೇಟಿ ಮಾಡುವ ಸುಸಂದರ್ಭ ಒದಗಿ ಬಂತು. ಅವರ ಸಾಹಿತ್ಯ ಕೃಷಿ ಬಹುಮುಖವಾದದ್ದು. ಅವರೇ ಬರೆದ ಗ್ರಂಥಗಳು ಅವರ ಸಂಪಾದಕತ್ವದಲ್ಲಿ ಬಂದ ಪುಸ್ತಕಗಳು ಅನೇಕ. ದಾಸ ಸಾಹಿತ್ಯ-ವಚನ ಸಾಹಿತ್ಯ- ಮುಂತಾದ ವಿಭಾಗಗಳಲ್ಲಿ ಅವರ ಕೊಡುಗೆ ಅವರ ಕೊಡುಗೆ ಅಪಾರ-ಅಮೂಲ್ಯ. ನನಗೆ ಅವರು ಅವರ ಹಲವಾರು ಪುಸ್ತಕಗಳನ್ನು ನೀಡಿದ್ದಾರೆ. ಅದರ ಪ್ರಯೋಜನವನ್ನು ಪಡೆಯುತ್ತಿದ್ದೇನೆ. ಅನೇಕ ಯುವಕರಿಗೆ ಬರವಣಿಗೆಗೆ ಮಾರ್ಗದರ್ಶನ ಮಾಡುತ್ತಿರುವುದು, ಮುನ್ನುಡಿಗಳನ್ನು ಬರೆದು ಉತ್ತೇಜಿಸುತ್ತಿರುವುದನ್ನು ಬಲ್ಲೆ. ಈ ವಿಷಯದಲ್ಲಿ ಅವರ ಹೃದಯ ವೈಶಾಲ್ಯವನ್ನು ಕಾಣಬಹುದಾಗಿದೆ.

ಇವರ ಕನ್ನಡ ಸೇವೆಗೆ, ಅವರಿಗೆ ದೊರಕಿರುವ ಪುರಸ್ಕಾರಗಳು ಕಡಿಮೆ ಎಂದೇ ಹೇಳಬೇಕು.

ಅವರ ನಿಸ್ವಾರ್ಥಸೇವೆಗೆ ಇನ್ನೂ ಪ್ರಶಸ್ತಿಗಳು ದೊರಕಲಿ ಎಂದು ಆಶಿಸುವೆ.

ಭಗವಂತನು ಅವರಿಗೆ ದೀರ್ಘಾಯುಷ್ಯವನ್ನು ನೀಡಿ ಅವರ ಸಾಹಿತ್ಯ ಪಯಣಕ್ಕೆ ಬೇಕಾದ ಸಕಲ ಸೌಕರ್ಯಗಳು ಒದಗಿ ಬರಲೆಂದು ಪ್ರಾರ್ಥಿಸುತ್ತೇನೆ.

****

ಕನ್ನಡ ಕಿಂಕರ

ಗೀತಾ ಶೇಷಾದ್ರಿ
ಚರವಾಣಿ : ೯೪೪೯೮೪೮೯೪೯

ಕನ್ನಡ ಸಾರಸ್ವತ ಲೋಕದ ದಿಗ್ಗಜರಾದ ಪ್ರೊ. ಅಶ್ವತ್ಥನಾರಾಯಣ. ಜಿ. ಅವರು 'ಅನಾಜಿ' ಎಂದೇ ಅವರ ಆಪ್ತ ವಲಯದಲ್ಲಿ ಪ್ರಸಿದ್ಧರು. ೮೭ ವಸಂತಗಳನ್ನು ಕಂಡಿರುವ ಶ್ರೀಯುತರನ್ನು ಸಾಹಿತ್ಯ ವಲಯದ ಭೀಷ್ಮರೆಂದು ಗುರುತಿಸಬಹುದು. ಚೈತನ್ಯದ ಚಿಲುಮೆಯಾದ ಅವರಿಗೆ ಈ ಇಳಿವಯಸ್ಸಿನಲ್ಲಿಯೂ ಇರುವ ಉತ್ಸಾಹ, ಕನ್ನಡ ಭಾಷಾಭಿಮಾನ, ಕನ್ನಡಕ್ಕೆ ಸಲ್ಲಿಸುತ್ತಿರುವ ಸೇವೆ, ಇವೆಲ್ಲವೂ ನಮ್ಮಂಥವರನ್ನು ನಾಚಿಸುವಂತಿವೆ. ಸದಾ ನಗೆ ಪಟಾಕಿಯ ಚಟಾಕಿಗಳನ್ನು ಹಾರಿಸುತ್ತಾ, ತನ್ನ ಸುತ್ತ-ಮುತ್ತಲಿನವರನ್ನು ಉಲ್ಲಾಸಗೊಳಿಸುತ್ತಾ ಇರುವ ಸರಳ, ವಿರಳ, ನಿರಾಡಂಬರ ಮತ್ತು ಎಲ್ಲರಲ್ಲಿಯೂ ಬೆರೆಯುವ ಔದಾರ್ಯವೇ ಅವರಲ್ಲಿರುವ ಹಿರಿಮೆ. ಅವರ ಈ ವ್ಯಕ್ತಿತ್ವ ಆಗಸದಷ್ಟೇ ಎತ್ತರ, ಅಗಾಧ ಮತ್ತು ಅನಂತ.

ಶ್ರೀಯುತರ ಪರಿಚಯ ನಮಗೆ ಆದದ್ದು ಹೇಗೆಂದರೆ – ೨೦೧೨ರಲ್ಲಿ ನಾನು ರಚಿಸಿದ ಕೀರ್ತನಾ ಕೃತಿಯ ಮುನ್ನುಡಿಗಾಗಿ ನನ್ನ ಪತಿ ಶೇಷಾದ್ರಿಯವರು, ನಾನು ಹಾಗೂ ಲಾಯರ್ ತಿಮ್ಮಪ್ಪನವರು ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಅನಾಜಿ ಅವರನ್ನು ಭೇಟಿ ಮಾಡಿ ಮುನ್ನುಡಿಗಾಗಿ ವಿನಂತಿಸಿದಾಗ ಅವರು ನಗುಮುಖದಿಂದಲೇ ನನ್ನ ಬರವಣಿಗೆಯ ಬಗ್ಗೆ ವಿಚಾರಿಸಿ, ಕೊನೆಯಲ್ಲಿ "ಛಂದೋಬದ್ಧವಾಗಿ ಬರೆದಿರುವಿರಾ?" ಎಂದು ಕೇಳಿದರು ಅಷ್ಟೇ! ನೀರೇ ಇಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಯಿತು ನನ್ನ ಸ್ಥಿತಿ. ಛಂದಸ್ಸು ಎಂದರೇನೆಂದೇ ಅರಿಯದ ನಾನು ಕಕ್ಕಾಬಿಕ್ಕಿಯಾದೆ. ಕಡೆಗೆ ಏನೋ ಹೇಳಿ ನಾವು ಅಲ್ಲಿಂದ ತಪ್ಪಿಸಿಕೊಂಡು ಬಂದೆವು. ನಮ್ಮ ಮೊದಲ ಭೇಟಿಯ ಅವರ ಮಾತೇ ನಾನು ಛಂದಸ್ಸು ಕಲಿಯಲು ಪ್ರೇರಣೆಯಾಯಿತು. ಅಂದಿನಿಂದ ನಾನವರನ್ನು ಗುರುಗಳೆಂದೇ ಭಾವಿಸಿರುವೆ ಏಕಲವ್ಯನ ತೆರದಿ! ನಂತರದ ನನ್ನೆಲ್ಲಾ ಕೃತಿಗಳಿಗೂ ಅವರು ಮುನ್ನುಡಿ, ಬೆನ್ನುಡಿ ಅಥವ ಸವಿನುಡಿ ಬರೆದು, ತಪ್ಪುಗಳನ್ನು ತಿದ್ದಿ ಒಪ್ಪಮಾಡಿ, ನನ್ನನ್ನು ಆಶೀರ್ವದಿಸಿದ್ದಾರೆ ಮತ್ತು ಬರೆಯುವ ಮುನ್ನ ಹೇಗೆ ತಯಾರಿ ಮಾಡಿಕೊಳ್ಳಬೇಕೆಂಬುದನ್ನೂ ತಿಳಿಸಿಕೊಟ್ಟಿದ್ದಾರೆ. ಅವರ ಈ ವಿಶ್ವಾಸ ಮತ್ತು ಆತ್ಮೀಯತೆಗಾಗಿ ನಾವು ದಂಪತಿಗಳಿಬ್ಬರೂ ಮೂಕವಿಸ್ಮಿತರಾಗಿದ್ದೇವೆ. ಅವರ ಶ್ರೀಮತಿಯವರೂ ಸಹ ನಮ್ಮನ್ನು ಅಷ್ಟೇ ಆದರದಿಂದ ಕಾಣುತ್ತಾರೆ. ದಿವ್ಯ ದಂಪತಿಗಳವರು!

ಸೂರ್ಯ, ಚಂದ್ರ, ಮಿನುಗು ತಾರೆಗಳು, ಕಂಪಿನಿಂದ ಕಂಗೊಳಿಸುವ ಪುಷ್ಪಗಳು, ರಸಭರಿತ ಹಣ್ಣುಗಳು, ಇತ್ಯಾದಿಗಳಿಗೆ ಪರಿಚಯದ ಹಂಗು ಬೇಕಿದೆಯೇ? ಅವೆಲ್ಲವೂ ಸ್ವಪ್ರಕಾಶಿತವಾದವುಗಳು. ಅಂತೆಯೇ ಅನಾಜಿ ಅವರೂ ಕೂಡ ಕನ್ನಡ ಸಾಹಿತ್ಯಲೋಕದಲ್ಲಿ ವಿಭಿನ್ನ ವ್ಯಕ್ತಿತ್ವ ಹೊಂದಿರುವ,

ಬಹು ಅಪರೂಪದ ಸ್ವಪ್ರಕಾಶಿತ ವ್ಯಕ್ತಿ. ಹಮ್ಮು-ಭಿಮ್ಮಿಲ್ಲದ ಸರಳತೆ, ಹಣ ಮತ್ತು ಹೆಸರಿನ ಬಗ್ಗೆ ವಾಂಛೆಯಿಲ್ಲದ ನಿರ್ಲಿಪ್ತತೆ, ಇವೇ ಅವರ ವಿಶೇಷತೆ. ಇದಕ್ಕೆ ನಿದರ್ಶನವೇ ಅವರು ಜೀವನ ನಡೆಸುತ್ತಿರುವ ವೈಖರಿ. ಪ್ರತಿಷ್ಠಿತ ಬೆಂಗಳೂರಿನ ಜಯನಗರ ಬಡಾವಣೆಯಲ್ಲಿ ಬಹು ದೊಡ್ಡದಾದ ಮನೆ; ಅದರ ನೆಲಅಂತಸ್ತಿನ ತುಂಬಾ ಕಪಾಟುಗಳಲ್ಲಿ ವ್ಯವಸ್ಥಿತವಾಗಿ ಜೋಡಿಸಿಟ್ಟಿರುವ ಸಹಸ್ರಾರು ಗ್ರಂಥಗಳ ಜೋಡಣೆ; ಅವು ಹಾಳಾಗದಂತೆ ಸಂರಕ್ಷಣೆ ಮಾಡುವ ಹೊಣೆ; ಅಬ್ಬಬ್ಬಾ.... . ಒಂದೇ. . ಎರಡೇ. . ! ಕಬ್ಬನ್ ಪಾರ್ಕ್ ಪುಸ್ತಕ ಭಂಡಾರದಲ್ಲಿನ ಅರ್ಧಕ್ಕಿಂತಲೂ ಹೆಚ್ಚು ಗ್ರಂಥಗಳು ಅನಾಜಿ ಅವರ ಪುಸ್ತಕ ಭಂಡಾರದಲ್ಲಿವೆ ಎಂಬುದು ನನ್ನ ಊಹೆ. ಧನದಾಹಿಯಾಗಿದ್ದರೆ, ಆ ಜಾಗವನ್ನು ಬಾಡಿಗೆಗೆ ಬಿಟ್ಟು, ತಿಂಗಳಿಗೆ ಲಕ್ಷಗಳಲ್ಲಿ ಹಣ ಎಣಿಸಬಹುದಿತ್ತು. ಆದರೆ ಜ್ಞಾನನಿಧಿಯಾದ ಶ್ರೀಯುತರಿಗೆ ಪುಸ್ತಕಗಳೇ ಕರಗದ ಸಂಪತ್ತು. ಇದರಿಂದಲೇ ಅರಿಯಬಹುದಲ್ಲವೇ ಅವರು ಹಣಕ್ಕೆ ಎಷ್ಟು ಪ್ರಾಮುಖ್ಯತೆ ನೀಡುವರೆಂದು?

ನಾನು ಅರಿತಂತೆ, ಡಾ॥ ಅಶ್ವತ್ಥನಾರಾಯಣ ಅವರ ಜನನ ೧೯೩೮ ರಲ್ಲಿ. ಅವರ ಮಾತಾ-ಪಿತೃಗಳು ಶ್ರೀಮತಿ ಜಾನಕಮ್ಮ ಮತ್ತು ಶ್ರೀ ಹೆಚ್. ಗುಂಡಪ್ಪನವರು. ಇವರ ಶಿಕ್ಷಣ ಎಂ.ಎ. ಕನ್ನಡ, ಎಂ.ಎ. ಸಮಾಜಶಾಸ್ತ್ರ, ಶಾಸನಶಾಸ್ತ್ರ ಡಿಪ್ಲೊಮಾ, ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ. ಶಿಕ್ಷಣ ಇಲಾಖೆಯ ಅನೇಕ ಡಿಗ್ರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರು ಹಾಗೂ ಪ್ರಧ್ಯಾಪಕರಾಗಿ ೩೦ ವರ್ಷಗಳ ಕಾಲ ಸೇವೆ ಸಲ್ಲಿಸಿ, ೧೯೯೬ ರಲ್ಲಿ ನಿವೃತ್ತರಾಗಿರುತ್ತಾರೆ. ನಂತರವು ಶ್ರೀಯುತರು ಮನೆಯಲ್ಲಿ ಸುಮ್ಮನೆ ಕೂರದೆ, ಕನ್ನಡಮ್ಮನ ಸೇವೆ ಮಾಡುತ್ತಾ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಅನುಭವವನ್ನು ಧಾರೆಯೆರೆಯುತ್ತಾ ಬಂದಿದ್ದಾರೆ. ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯಕಾರಿ ಸಮಿತಿಯ ಸದಸ್ಯರು, ಹಳೆಗನ್ನಡ ಸಾಹಿತ್ಯದ ಸಂಶೋಧಕರು, ಅಮೇರಿಕಾದಲ್ಲಿ ಕನ್ನಡದ ಮಕ್ಕಳಿಗೆ ಕನ್ನಡ ಕಲಿಸಿದ ಗುರುಗಳು, ಎಂ.ಎ., ಪಿಹೆಚ್.ಡಿ., ಕೆ.ಎ.ಎಸ್., ಐ.ಎ.ಎಸ್., ತರಗತಿಗಳಿಗೆ ಕನ್ನಡ ಪಾಠ ಹೇಳುತ್ತಾ, ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿ ಶಿಕ್ಷಣಕ್ಕೆ ಕನ್ನಡ ಮಾರ್ಗದರ್ಶನ ನೀಡುತ್ತಾ, ಹಾಗೂ ಅನೇಕ ಧಾರ್ಮಿಕ, ಶೈಕ್ಷಣಿಕ, ಸಂಘ ಸಂಸ್ಥೆಗಳಲ್ಲಿ ಕನ್ನಡ ಸಾಹಿತ್ಯಕ್ಕೆ ತಮ್ಮ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಧುರೀಣರು.

ಪ್ರೊ. ಅಶತ್ಥನಾರಾಯಣ ಅವರು ಕನ್ನಡ ಲೇಖಕ, ವಾಗ್ಮಿ, ಅಧ್ಯಾಪಕ, ಪ್ರಾಧ್ಯಾಪಕ, ಸಂಶೋಧಕ, ವಿದ್ವಾಂಸ, ಮಾರ್ಗದರ್ಶಕರಾಗಿ ಸುಮಾರು ೭ ದಶಕಗಳಿಂದ ಕನ್ನಡ ನಾಡುನುಡಿಗಾಗಿ ಸೇವೆ ಸಲ್ಲಿಸುತ್ತಿರುವ ಕನ್ನಡಮ್ಮನ ಹೆಮ್ಮೆಯ ಕುವರರು. ಅನಾಜಿ ಅವರ ಕಾರ್ಯ ಚಟುವಟಿಕೆಗಳು ಬಹುಮುಖ. ಅವುಗಳನ್ನು ನಿರ್ವಹಿಸುವ ಅವರ ಪರಿ ಕೂಡ ನಿಜಕ್ಕೂ ಶ್ಲಾಘನೀಯವಾದುದು. ಅನೇಕ ಗ್ರಂಥಗಳ ರಚನೆ, ಸಂಪಾದನೆ ಮತ್ತು ಅನುವಾದನೆ ಮಾಡಿರುತ್ತಾರೆ. ದಾಸ ಸಾಹಿತ್ಯ, ವಚನ ಸಾಹಿತ್ಯದಲ್ಲಿ ಹಲವಾರು ಗ್ರಂಥಗಳನ್ನು ಸಂಪಾದಿಸಿದ್ದಾರೆ ಹಾಗೂ ಜೈನ ಸಾಹಿತ್ಯದಲ್ಲಿ ಹಲವು ಗ್ರಂಥಗಳನ್ನು ಅನುವಾದಿಸಿದ್ದಾರೆ. ಅವರ ಕನ್ನಡಾಭಿಮಾನಕ್ಕೆ ಇದೇ ಸಾಕ್ಷಿ. "ಸಿಂಚನ ಕನ್ನಡ ವೇದಿಕೆ" ಯಡಿ ೩೦ ಗ್ರಂಥಗಳನ್ನು ಸಂಪಾದಿಸುವುದರ ಜೊತೆಗೆ ಜ್ಞಾನಜ್ಯೋತಿ ರೇಡಿಯೋ ಕಾರ್ಯಕ್ರಮದ ಮೂಲಕ ೫೦ ಸಾಹಿತ್ಯೋಪನ್ಯಾಸಗಳನ್ನು ನೀಡಿ ಕನ್ನಡ ಸಾಹಿತ್ಯದ ದಿಗ್ಗಜರನ್ನು ಪರಿಚಯಿಸಿದ್ದಾರೆ. ಕರ್ನಾಟಕ ಸರ್ಕಾರ ಪ್ರಕಟಿತ "ಸಮಗ್ರ ದಾಸ ಸಾಹಿತ್ಯ" ದ ೫೦ ಸಂಪುಟಗಳಿಗೆ ಸಹಸಂಪಾದಕರಾಗಿ ಗ್ರಂಥಗಳನ್ನು ಅಚ್ಚಿಗೆ ಸಿದ್ಧಪಡಿಸಿದ್ದಾರೆ. ಕೆಲವು ಶಬ್ದಕೋಶಗಳನ್ನೂ ಹೊರತಂದಿದ್ದಾರೆ. ಅಯೋಧ್ಯೆಯ

ಶ್ರೀರಾಮಮಂದಿರ ಪ್ರಾರಂಭೋತ್ಸವದ ದಿನಕ್ಕಾಗಿ "ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು" ಎಂಬ ಕೃತಿಯನ್ನು ಸಂಪಾದಿಸಿ, ಶ್ರೀ ಜಯರಾಮ ಸೇವಾ ಮಂಡಲಿಯ ಸಹಯೋಗದಲ್ಲಿ ಪ್ರಕಟಗೊಳಿಸಿದ್ದಾರೆ.

ಶ್ರೀಯುತರ ಸಾಧನೆಯ ಹರವು ವ್ಯಾಪಕವಾದುದು ಮತ್ತು ಮೌಲ್ಯಯುತವಾದುದು. ಪ್ರತಿಭಾನ್ವಿತರಾದ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿಗಳು, ಕುವೆಂಪುಶ್ರೀ ಪ್ರಶಸ್ತಿ, ಕನ್ನಡಶ್ರೀ ಪ್ರಶಸ್ತಿ, ದಾಸಸಾಹಿತ್ಯ ಪ್ರಶಸ್ತಿ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಮತ್ತೂ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡ ಮೇಧಾವಿ. ಸಾಹಿತ್ಯದ ಭಂಡಾರವೆನಿಸಿರುವ ಇವರು ಮಹಾನ್ ವಾಗ್ಮಿಗಳೂ ಹೌದು. ಕನ್ನಡ ನಾಡುನುಡಿಯ ಬಗ್ಗೆ ನಾಡಿನಾದ್ಯಂತ ಸಹಸ್ರಾರು ಉಪನ್ಯಾಸಗಳನ್ನು ನೀಡಿದ ಧುರಂಧರರು. ಸರಳ-ಸುಶೀಲ, ಚಿಂತನಶೀಲ ಹಾಗೂ ಚೇತನಶೀಲರಾದ ಅನಾಜಿ ಅವರು ಶಕ್ತಿಶಾರದೆಯಿಂದ ಅನುಗ್ರಹಿತರಾದ ನುರಿತ, ಅರಿತ, ಸಾಹಿತ್ಯದ ಉಪಾಸಕರು. ಇಂತಹ ವ್ಯಕ್ತಿ ನಾಡಿನ ಭಾಗ್ಯವೇ ಸರಿ.

ಊಲನೇ ವಸಂತಕ್ಕೆ ಕಾಲಿಟ್ಟಿರುವ ಅನಾಜಿ ಅವರು ದಣಿವರಿಯದ ಅಕ್ಷರಯೋಗಿ ಮತ್ತು ಸಾರ್ಥಕ ಬದುಕಿನ ಸಾಧಕರು. ಇವರ ವ್ಯಕ್ತಿತ್ವವೆಂದೂ ಹೊಗಳಿಕೆಗೆ ನಿಲುಕುವಂತಹದ್ದಲ್ಲ. ತಾನು ಸಾಹಿತ್ಯದ ಮೇರು ಶೃಂಗವಾದರು, ಹಿರಿ-ಕಿರಿಯರೆಂಬ ಬೇಧ ತೋರದೆ, ಕಿಂಚಿತ್ತೂ ಬೀಗದೆ, ಬಾಗಿ ನಡೆಯುವ ಗುಣಾಢ್ಯರು, ಹದವರಿತು ಮುದ ನೀಡುವ ಸಾತ್ವಿಕ ಜೀವಿ. ಆವ ನಿರೀಕ್ಷೆಯೂ ಇಲ್ಲದೆ, ಯಾವುದಕ್ಕೂ ಹಂಬಲಿಸದೆ, ತಾವಾಯಿತು ತಮ್ಮ ಪಾಡಾಯಿತು ಎಂಬಂತೆ ಸದ್ದುಗದ್ದಲವಿಲ್ಲದೆ ಕನ್ನಡ ಸಾಹಿತ್ಯಕ್ಕೆ ಮತ್ತು ಕನ್ನಡ ನಾಡುನುಡಿಗಾಗಿ ಪ್ರಾಮಾಣಿಕವಾಗಿ ಅಹರ್ನಿಶಿ ಸೇವೆ ಸಲ್ಲಿಸುತ್ತಿರುವ ನಿಷ್ಕಾಮಕರ್ಮಿ ಮತ್ತು ಕನ್ನಡದ ಭೀಷ್ಮರಿಗೆ ಸಾವಿರ ಸಾವಿರ ಅಭಿಮಾನಪೂರ್ವಕ ಪ್ರಣಾಮಗಳು. ಆ ಭಗವಂತ ಆಯುರಾರೋಗ್ಯ ಭಾಗ್ಯವನ್ನು ನೀಡಿ ಸದಾಕಾಲ ಅವರನ್ನು ಹರಸಲಿ ಮತ್ತು ಅವರ ಬರಹಗಳಿಂದ ನಮ್ಮ ಸಾರಸ್ವತಲೋಕ ಇನ್ನೂ ಶ್ರೀಮಂತವಾಗಲಿ ಎಂದು ಹಾರೈಸುತ್ತಾ ಶುಭ ಕೋರುತ್ತೇನೆ.

ಅನಾಜಿ ಅವರಂಥ ಧೀಮಂತ ವ್ಯಕ್ತಿಗೆ ಈ ಅಭಿನಂದನಾ ಗ್ರಂಥ ಸಮರ್ಪಿಸುವ ಸಲುವಾಗಿ ಶ್ರಮಿಸುತ್ತಿರುವ ಎಲ್ಲ ಸಂಪಾದಕ ಮಂಡಲಿಯವರಿಗೆ ಅನಂತ ವಂದನೆಗಳು. ತಮ್ಮ ಈ ಸತ್ಕಾರ್ಯದಲ್ಲಿ ಯಶಸ್ಸು ಸಿಗಲೆಂದು ಹೃದಯಪೂರ್ವಕ ಹಾರೈಸುತ್ತೇನೆ.

****

ನಮಗೆಲ್ಲ ತುಂಬಾ ಹತ್ರ ಕುಟುಂಬ ಮಿತ್ರ

ಅನ್ನಪೂರ್ಣ ಕೆ ಆರ್
ಚರವಾಣಿ : ೯೮೮೬೪೬೪೦೬೬

ಚಟ ಚಟ ಪಟ ಪಟ ಅಂತ ಚಟಾಕಿ ಹಾರಿಸಿ ಅರಳು ಹುರಿದಂತೆ ಮಾತಿನ ಮೋಡಿಯಲ್ಲಿ ಸಿಲುಕಿಸುವ ಚತುರ, ಕನ್ನಡದ ಸೊಲ್ಲು ಬಲ್ಲ ಮಾತಿನ ಮಲ್ಲನೇ ಪ್ರೊ. ಅಶ್ವತ್ಥನಾರಾಯಣ ಜಿ. ಅವರು.

1960ರಲ್ಲಿ ನಮ್ಮ ತಂದೆಯವರಿಗೆ ಗೊರೂರಿನಿಂದ ಹಾಸನಕ್ಕೆ ವರ್ಗವಾಗಿ ಮಕ್ಕಳೆಲ್ಲರ ವಿದ್ಯಾಭ್ಯಾಸ ಹಾಸನದಲ್ಲಿ ಮುಂದುವರೆದಿತ್ತು. 1969ರಲ್ಲಿ ನನ್ನ ತಮ್ಮ ನಾಗರಾಜ ಭೌತಶಾಸ್ತ್ರದಲ್ಲಿ ಎಂ.ಎಸ್.ಸಿ. ಮಾಡಿ ಹಾಸನದ ಫಸ್ಟ್ ಗ್ರೇಡ್ ಪದವಿ ಕಾಲೇಜಿನಲ್ಲಿ ನೌಕರಿಗೆ ಸೇರಿದ್ದ. ಅವನಿಗೆ ಅಲ್ಲೇ ಶ್ರೀ ಅಶ್ವತ್ಥನಾರಾಯಣ ಅವರ ಪರಿಚಯವಾಗಿ, ಇಬ್ಬರೂ ಉತ್ತಮ ಸ್ನೇಹಿತರಾಗಿ ಹೆಚ್ಚು ನಿಕಟವಾಗಿ ಅವರೂ ಸಹ ಮನೆಯ ಸದಸ್ಯರಂತಾಗಿದ್ದರು. ನಮ್ಮ ತಂದೆಯವರ ಕೆಲಸ ಕಾರ್ಯ ಅವರಿಗೆ ತುಂಬಾ ಹಿಡಿಸಿತ್ತು. ಬಹಳ ಗೌರವಿಸುತ್ತಿದ್ದರು. ನಮ್ಮ ಅಮ್ಮ ಕೂಡ ಮಾತುಗಾರ್ತಿ. ಆದ್ದರಿಂದ ಅಮ್ಮನ ಹತ್ತಿರವೂ ಅನೇಕ ವಿಚಾರಗಳು ವಿನಿಮಯವಾಗುತ್ತಿದ್ದವು.

ನನ್ನ ಅಕ್ಕ ಶೈಲಳ ಮಗಳು ಲಲಿತ ನಮ್ಮ ಮನೆಯಲ್ಲೇ ನಾಲ್ಕೈದು ತಿಂಗಳ ಮಗುವಿನಿಂದಲೂ ಬೆಳೆಯುತ್ತಿದ್ದು ಎಲ್ಲರಿಗೂ ಅಚ್ಚು ಮೆಚ್ಚು. ಅಂತೆಯೇ ಅನಾಜಿ ಅವರಿಗೂ ಅವಳನ್ನು ಕಂಡರೆ, ತುಂಬಾ ಪ್ರೀತಿ. ಮಗುವಿಗೆ ಎರಡು ವರ್ಷವಾಗಿ ಮುದ್ದು ಮಾತನಾಡುತ್ತಾ ಅವರನ್ನು "ಮಾಮಾ, ಮಾಮಾ" ಎಂದು ತನ್ನ ಸೋದರ ಮಾವ ನಾಗರಾಜನ ಜೊತೆ ಇದ್ದಾಗ ಕರೆಯುತ್ತಿದ್ದಳು. ಅವಳಿಗೆ ಅನಾಜಿಯವರ ಮೀಸೆಯ ಬಗ್ಗೆ ಆಶ್ಚರ್ಯ. "ಮೀಸೆ ಮಾಮ" ಎನ್ನುತ್ತಾ, ಅವರು ಬಂದರೆ ತೆಲುಗಿನಲ್ಲಿ "ಮಾಮ ವಚ್ಚ, ಮಾಮ ವಚ್ಚ" ಎಂದನ್ನುತ್ತಾ ಕುಣಿಯುತ್ತಿದ್ದಳು. ಅದು ಅವರಿಗೆ ಖುಷಿ ಕೊಡುತ್ತಿತ್ತು. ಅವರು ಮನೆಗೆ ಬಂದಾಗಲೆಲ್ಲಾ ಚಪ್ಪಲಿ ಬಿಡುವುದು, ಮತ್ತು ಹೊರಡುವಾಗ ಚಪ್ಪಲಿ ಹಾಕಿಕೊಳ್ಳುವುದನ್ನು ದಿಟ್ಟಿಸಿ ನೋಡುವ ಪರಿಪಾಠ. ಒಮ್ಮೆ ಅನಾಜಿ ಅವರು ರಜೆಯಲ್ಲಿ ಬೆಂಗಳೂರಿಗೆ ಹೋದಾಗ ನನ್ನ ತಮ್ಮನಿಗೆ ಪತ್ರ ಬರೆದು "ನಿಮ್ಮ ಕುಟುಂಬದ ಕಣ್ಮಣಿ, ಮುದ್ದು ಮಾತಿನ ಮನೋನ್ಮಣಿ, ಪಾದರಕ್ಷಾ ವೀಕ್ಷಣಿ ಲಲ್ಲಿ ಹೇಗಿದ್ದಾಳೆ, ಏನಂತಾಳೆ?" ಎಂದು ವಿಚಾರಿಸಿದ್ದರು.

ಹಬ್ಬದ ದಿನಗಳಲ್ಲಿ ನಮ್ಮ ಮನೆ ಮುಂದೆ ಮತ್ತು ಒಳಗೆ ಹಸಿ ಹಿಟ್ಟಿನ ರಂಗೋಲಿ ಕಂಗೊಳಿಸುತ್ತಿರುತ್ತಿತ್ತು. ಅದನ್ನು ನೋಡಿದಾಗ ಅನಾಜಿ ಅವರು "ಓಹೋ ರಂಗೋಲಿಯೇ ನಮ್ಮನ್ನು ಸ್ವಾಗತಿಸುತ್ತಿದೆ" ಎಂದೆನ್ನುತ್ತಾ, ಅದಕ್ಕೆ ಮತ್ತಷ್ಟು ಸೊಗಸಾದ ಪ್ರಾಸಬದ್ಧ ಮಾತುಗಳನ್ನು ಸೇರಿಸಿಬಿಡುತ್ತಿದ್ದರು. ಹಬ್ಬದ ದಿನಗಳಲ್ಲಿ ಅವರು ಮನೆಗೆ ಬಂದು ಪೂಜೆ, ವ್ರತಗಳಲ್ಲಿ ಭಾಗವಹಿಸುತ್ತಿದ್ದಾಗ ಅಮ್ಮ ಹಾಡುತ್ತಿದ್ದ ಸಂಪ್ರದಾಯದ ಹಾಡುಗಳನ್ನು ಕೇಳಿ ಕೇಳಿ ಆಕರ್ಷಿತರಾಗಿ, ಕನ್ನಡ ಭಾಷೆಯ

ಉಪನ್ಯಾಸಕರಾಗಿದ್ದುದರಿಂದ ಹೆಚ್ಚಿನ ಆಸಕ್ತಿವಹಿಸಿ, ಆ ಹಾಡುಗಳ ರಚನಾ ಶೈಲಿ ಇತ್ಯಾದಿಗಳನ್ನು ಅಧ್ಯಯನದ ದೃಷ್ಟಿಯಿಂದ ನೋಡಿ ಅಮ್ಮನಿಗೆ ಸಲಹೆ ನೀಡುತ್ತಾ, "ನೀವು ಯಾಕೆ ಇದನ್ನೆಲ್ಲಾ ಬರೆದಿಡಬಾರದು? ಈ ಸಾಹಿತ್ಯ ಮತ್ತು ಸಂಗೀತ ನಶಿಸಿಹೋಗಬಾರದು. ಮುಂದೆ ಉಪಯೋಗಕ್ಕೆ ಬರುವಂತದ್ದು. ಮೊದಲು ಪುಸ್ತಕದಲ್ಲಿ ಬರೆದಿಡಿ" ಎಂದು ಪ್ರೋತ್ಸಾಹಿಸುತ್ತಿದ್ದರು.

ಮುಂದೆ ಕೆಲವು ವರ್ಷಗಳ ನಂತರ ಅಮ್ಮ ಬೆಂಗಳೂರು ಸೇರಿದಾಗ ಹಾಡುಗಳನ್ನು ಬರೆದು ಸಂಗ್ರಹಿಸಿ ಆರು ಭಾಗಗಳಾಗಿ ವಿಂಗಡಿಸಿ ವಿವರಣೆಗಳನ್ನು ಬರೆದಾಗ "ಹೃದಯಸಂಪುಟ" ಎಂಬ ಗ್ರಂಥ ಸಿದ್ಧವಾಯಿತು. ಇದಕ್ಕೆ ಮೂಲ ಪ್ರೇರಕರೇ ಶ್ರೀಯುತ ಅಶ್ವತ್ಥನಾರಾಯಣ ಜಿ. ಅವರು.

ಅನಾಜಿಯವರು ಎಲೆ ಮರೆಯ ಕಾಯಿನಂತೆ ಹೆಚ್ಚಿನ ಅಬ್ಬರ, ಆಡಂಬರ ಯಾವುದನ್ನೂ ಬಯಸದೆ, ಕೇವಲ ಕನ್ನಡದ ಸೇವಕನಾಗಿ, ಪರಿಚಾರಕನಾಗಿ ಸಂಶೋಧನೆಗಳನ್ನು ನಡೆಸುತ್ತಾ ಜೈನಸಾಹಿತ್ಯ, ದಾಸಸಾಹಿತ್ಯ, ವಚನಸಾಹಿತ್ಯ ಕ್ಷೇತ್ರಗಳಲ್ಲಿ ದುಡಿದು, ಕಾರ್ಯಾಗಾರಗಳನ್ನು ನಡೆಸಿ ಕನ್ನಡ ಸಾಹಿತ್ಯ ಸರಸ್ವತಿಯ ಭಂಡಾರಕ್ಕೆ ಅಪಾರ ಕೊಡುಗೆಗಳನ್ನು ನೀಡುತ್ತ, ನಿರಂತರ ಸೇವೆ ಸಲ್ಲಿಸಿದ್ದಾರೆ. ಅನೇಕ ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಅನಾಜಿ ಅವರು ಭಾಷಣಕ್ಕಾಗಿಯೇ ತುಂಬಾ ಪ್ರಸಿದ್ಧರು. ಪ್ರಾಸಬದ್ಧವಾದ, ಗತಿಬದ್ಧವಾದ ಶಬ್ದಭಂಡಾರಗಳಿಂದ, ನಿರರ್ಗಳವಾಗಿ ಸ್ಫುರಿತ-ಸುಲಲಿತ-ಸುಂದರ ವಾಗ್ಝರಿಯಿಂದ ಕೂಡಿದ ಮಾತುಗಳನ್ನು ಕೇಳುವುದೇ ತುಂಬಾ ಆಹ್ಲಾದಕರ. ಕಾಲೇಜಿನಲ್ಲೂ ಸಹ ಎಲ್ಲಾ ವಿದ್ಯಾರ್ಥಿಗಳು ಅವರ ಮಾತಿಗೆ ಬೆರಗಾಗುತ್ತಿದ್ದು, ಕನ್ನಡದ ವಿದ್ಯಾರ್ಥಿಗಳಷ್ಟೇ ಅಲ್ಲದೆ ಇತರ ತರಗತಿಗಳ ವಿದ್ಯಾರ್ಥಿಗಳೂ ಸಹ ಅವರ ತರಗತಿಗೆ ಬಂದು ಕೂರುತ್ತಿದ್ದರೆಂಬ ವಿಷಯವೂ ಸೋಜಿಗ! ಇದನ್ನು ಅವರ ಪಟ್ಟ ಶಿಷ್ಯೆ, ನನ್ನ ತಂಗಿ ವಿಜಯಲಕ್ಷ್ಮಿಯಿಂದ ತಿಳಿದು ನಾವು ಆಶ್ಚರ್ಯಪಡುತ್ತಿದ್ದೆವು.

"ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗು ನೀ ಕನ್ನಡವಾಗಿರು" ಎನ್ನುವಂತೆ ಕನ್ನಡದ ಉಳಿವು, ಬೆಳವಿಗಾಗಿ ಶ್ರಮಿಸುತ್ತಿರುವ ಅನಾಜಿಯವರಿಗೆ ಅವರ ಪತ್ನಿ ಶ್ರೀಮತಿ ಲಕ್ಷ್ಮೀದೇವಿ ಅವರು ಸಹ ಬಹಳ ಸಹಕರಿಸಿದ್ದಾರೆ. ನಮಗೆ ಆತ್ಮೀಯ ಗೆಳತಿಯಾಗಿದ್ದಾರೆ. ಅವರ ಮನೆಯೇ ಒಂದು ದೊಡ್ಡ ಗ್ರಂಥಭಂಡಾರವಾಗಿದೆ. ಕೊಂಡುಕೊಂಡ ಎಲ್ಲಾ ಪುಸ್ತಕಗಳನ್ನು ಓದಿ ಅಧ್ಯಯನ ನಡೆಸಿರುವ ಅಶ್ವತ್ಥನಾರಾಯಣ ಜಿ. ಅವರಿಗೆ ಸಲ್ಲುತ್ತಿರುವ "ಅಭಿನಂದನಾ ಸಮಾರಂಭ" ನಿಜಕ್ಕೂ ಸ್ವಾಗತಾರ್ಹ ಮತ್ತು ಪ್ರಶಂಸನೀಯ. ಈ ಸಂದರ್ಭದಲ್ಲಿ, ಈ ಸಮರ್ಪಣೆಯಲ್ಲಿ ನಾನೂ ಭಾಗಿಯಾಗಿ ನಾಲ್ಕು ಮಾತುಗಳನ್ನು ಹಂಚಿಕೊಳ್ಳುವ ಅವಕಾಶ ಸಿಕ್ಕಿರುವುದು ತುಂಬಾ ಸಂತೋಷ.

ನಮ್ಮ ತಾಯಿಯವರು ಹುಟ್ಟು ಹಾಕಿದ "ವಾಗ್ದೇವಿ ಕಲಾನಿಕೇತನ" ನಡೆಸಿದ ಎಲ್ಲಾ ಕಾರ್ಯಕ್ರಮಗಳಲ್ಲೂ, (ಪುಸ್ತಕಗಳ ಬಿಡುಗಡೆ ಧ್ವನಿಸುರುಳಿ, ವಿಡಿಯೋ ಸುರುಳಿಗಳ ಬಿಡುಗಡೆ) ಶ್ರೀ ಅನಾಜಿಯವರು ಇರಲೇ ಬೇಕು. ಅವರಿಲ್ಲದೆ ಕಾರ್ಯಕ್ರಮವೇ ಇಲ್ಲ. ಅವರು ಅಮ್ಮನ ಗ್ರಂಥಗಳಿಗೆ ಮುನ್ನುಡಿ, ಹಿನ್ನುಡಿ ... ಹೀಗೆ ತಮ್ಮ ಕೊಡುಗೆ ನೀಡಿ ಸಹಕರಿಸಿದ್ದಾರೆ. ಆ ಕಾರ್ಯಕ್ರಮಗಳಲ್ಲಿ ವೇದಿಕೆಯನ್ನು ಹಂಚಿಕೊಳ್ಳುತ್ತಿದ್ದ ಸಾಹಿತಿಗಳು, ಕವಿಗಳು ಮತ್ತು ಗಣ್ಯರ ಪರಿಚಯ ಮಾಡಿಕೊಡುವ, ನಿರೂಪಣೆಯನ್ನು ಮಾಡಿಕೊಡುವ ಕೆಲಸ ನನ್ನದಾಗಿದ್ದುದು ನನ್ನ ಭಾಗ್ಯವೇ ಸರಿ.

ನಮ್ಮ ಪರಿವಾರದ ಎಲ್ಲ ಸಂದರ್ಭಗಳಲ್ಲಿಯೂ ಭಾಗಿಯಾಗಿರುವ ಶ್ರೀಯುತ ಅನಾಜಿ ಅವರಿಗೆ ಭಗವಂತನು ಇನ್ನೂ ಹೆಚ್ಚಿನ ಆರೋಗ್ಯ, ಯಶಸ್ಸು ಮತ್ತು ಗೌರವಗಳನ್ನು ಕೊಟ್ಟು ಕಾಪಾಡಲಿ ಎಂದು ಹಾರೈಸಿ, ನಮಸ್ಕರಿಸಿ ವಿರಮಿಸುತ್ತೇನೆ.

******

ಸಾಹಿತ್ಯ ಮಾಹಿತಿ ಮಾರ್ಗದರ್ಶಿ

ಎಂ. ಎ. ರವೀಂದ್ರ
ಚರವಾಣಿ : ೯೬೩೨೪೪೮೦೭೯೬

ಶ್ರೀಯುತ ಜಿ. ಅಶ್ವತ್ಥನಾರಾಯಣ ಅವರು ನನಗೆ ನಾಲ್ಕು ವರ್ಷಗಳಿಂದಲೂ ಪರಿಚಿತರು. ಅವರು ಸರಳ ಸಜ್ಜನರು ಮಿತಭಾಷಿಗಳು, ಹೋಗವಿಲ್ಲದವರು ಹಸನ್ಮುಖಿಗಳು ಈ ಇಳಿ ವಯಸ್ಸಿನಲ್ಲಿಯೂ ಅವರ ಆರೋಗ್ಯ ಉತ್ತಮವಾಗಿದೆ.

ಅವರ ಪ್ರತಿಭೆ ಬಹುಮುಖವಾದುದು. ವಿದ್ವಾಂಸ, ಲೇಖಕ, ವಾಗ್ಮಿ, ಮಾರ್ಗದರ್ಶಕ ಹೀಗೆ ಹಲವು ಮುಖಗಳಲ್ಲಿದೆ. ಅವರ ಮಹಲಿಂಗ ರಂಗನ ಅನುಭವಾಮೃತ ವಿಶಿಷ್ಟ ಕೃತಿ ನಾನು ನಮ್ಮ ಊರಿನಲ್ಲಿ ವೈದ್ಯ ವೃತ್ತಿಯಲ್ಲಿದ್ದೇ. ಅರವತ್ತು ವರ್ಷಗಳ ನಂತರ ಅನುವಾದ ಪ್ರಾರಂಭಿಸಿದೆ. ಅದಕ್ಕೆ ನನಗೊಬ್ಬ ಮಾರ್ಗದರ್ಶಕರ ಸಹಾಯ ಬೇಕಿತ್ತು, ಶ್ರೀ ಅಶ್ವತ್ಥನಾರಾಯಣ ಅವರು ಸರಿಯಾದ ಸಮಯಕ್ಕೆ ದೊರೆತರು. ಒಂದೆರಡು ಉದಾಹರಣೆಗಳು

೧. ವಾಲ್ಮೀಕಿ ರಾಮಾಯಣ ಸಮಗ್ರ ಅನುವಾದಿಸಬೇಕೆಂದು ಆಸೆ ಇತ್ತು. ಅವರನ್ನು ಕೇಳಿದೆ. ಅವರು ವಾಲ್ಮೀಕಿ ರಾಮಾಯಣ ಅನುವಾದ ಮಾಡಲು ಸಲಹೆ ಕೊಟ್ಟರು. ಅದನ್ನು ಅರವತ್ತು ವರ್ಷಗಳಲ್ಲಿ ಮುಗಿಸಿದೆ.

೨. ರಘು ವಂಶ (19 ಸರ್ಗಗಳು) ಅವರ ಹತ್ತಿರವೇ ಇತ್ತು ಅದನ್ನು ಕಳಿಸಿಕೊಟ್ಟರು. ಅದನ್ನೂ ಈ ಅರವತ್ತು ವರ್ಷಗಳಲ್ಲಿ ಮುಗಿಸಿದೆ. ಇವುಗಳ ಅನುವಾದದ ಕಾರ್ಯದಲ್ಲಿ ಸಲಹೆ ನೀಡಬಲ್ಲ ಒಬ್ಬ ವಿದ್ವಾಂಸನ ಮಾರ್ಗದರ್ಶನದ ಅವಶ್ಯಕತೆ ನನಗಿತ್ತು. ಅವರು ಅದನ್ನು ಪೂರೈಸಿದರು.

೩. ಅವರು ಹೆಚ್ಚಾಗಿ ಸಾಹಿತ್ಯ ಸಭೆಗಳಲ್ಲಿ ಭಾಗವಹಿಸುತ್ತಾರೆ. ಈಗ ಅವರು ಮುದ್ದಣನ ರಾಮಾಶ್ವಮೇಧ ಕೃತಿಯ ಗದ್ಯಾನುವಾದವನ್ನು ಅಧ್ಯಯನಕ್ಕೆಂದು ಕೊಟ್ಟಿದ್ದಾರೆ.

ಯಾವುದೇ ಗ್ರಂಥವನ್ನು ಕುರಿತು ಅವರಲ್ಲಿ ಕೇಳಿದರೂ ಇಂಥ ಗ್ರಂಥ ಇಲ್ಲಿ ಸಿಗುತ್ತದೆ ಎಂದು ಕೂಡಲೇ ಪ್ರಕಾಶಕರ ವಿವರವನ್ನು ಕೊಡುತ್ತಿದ್ದರು. ಇದರಿಂದ ನನಗೆ ಬಹಳ ಅನುಕೂಲವಾಯಿತು ಇಂತಹ ಮಾರ್ಗದರ್ಶಕರು ವಿರಳ. ಅವರು ಹಿಂದೆ ಒಬ್ಬ ವಿದ್ಯಾರ್ಥಿಗೆ ಇಂಗ್ಲಿಷಿನಲ್ಲಿ ಕನ್ನಡ ಸಾಹಿತ್ಯ ಎನ್ನುವ ವಿಷಯವನ್ನು ಮಹಾ ಪ್ರಬಂಧ ರಚನೆಗೆ ಕೊಟ್ಟಿದ್ದರಂತೆ.

ಯಾವಾಗ ಸಂಪರ್ಕಿಸಿದರೂ ಸುಲಭವಾಗಿ ಸಿಗುತ್ತಾರೆ. ಸೂಕ್ತ ಉತ್ತರವನ್ನು ಮಿತ ಭಾಷೆಯಲ್ಲಿ ಹೇಳುತ್ತಾರೆ. ಅವರಿಂದ ನನಗೆ ಬಹಳ ಅನುಕೂಲವಾಯಿತು. ಅವರಿಗೆ ನನ್ನ ಕೃತಜ್ಞತೆಗಳು

ಅವರ ಪತ್ನಿ ಶ್ರೀಮತಿ ಲಕ್ಷ್ಮಿಯವರು ಎ.ಪಿ.ಎಸ್. ಕಾಲೇಜಿನಲ್ಲಿ ಅಧ್ಯಾಪಕಿಯಾಗಿದ್ದು, ನಿವೃತ್ತರಾಗಿದ್ದಾರೆ. ಅವರು ಸಾಹಿತ್ಯ ಹಾಗೂ ಆಧ್ಯಾತ್ಮದಲ್ಲೂ ಪರಿಣಿತರು, ಅವರಿಗೆ ಎಲ್ಲಾ ಶುಭಗಳು ಉಂಟಾಗಲಿ ಎಂದು ಹಾರೈಸುತ್ತೇನೆ.

****

ಆತ್ಮೀಯ ಅಧ್ಯಾಪಕ ಮಿತ್ರ

ಮೇಜರ್ ವಿ. ಗುಂಡಣ್ಣ

ಪ್ರಿಯ ಪ್ರೊ. ಜಿ. ಅಶ್ವತ್ಥನಾರಾಯಣ ಕಾಲೇಜಿನ ಗೆಳೆಯರು. ಬೇರೆ ಸರ್ಕಾರಿ ಕಾಲೇಜಿನಿಂದ ಬಂದು ಮೈಸೂರಿನಲ್ಲಿ ನಮ್ಮ ಮನೆಯಲ್ಲಿದ್ದು ವಿಶ್ವವಿದ್ಯಾನಿಲಯದವರು ನಡೆಸಿದ ಪರೀಕ್ಷೆಗಳ ಮತ್ತು ಅದರ ಮೌಲ್ಯಮಾಪನಕ್ಕಾಗಿ ಕೆಲಸ ಮಾಡಿದವರು. ಅವರು ಒಂದು ಕೆಲಸ ಮಾಡುವುದು ಮಾತ್ರವಲ್ಲ ಬರೆಯುವುದು, ಓದುವುದು ಎಲ್ಲವೂ ಇರುತ್ತಿತ್ತು. ಕನ್ನಡದಲ್ಲಿ ಯಾವುದೇ ಕೆಲಸನ್ನು ಮಾಡುವುದರಲ್ಲಿ ಅದಕ್ಕೆ ಬೇಕಾದ ಸಿದ್ಧತೆ, ಮೌಲ್ಯಮಾಪನಕ್ಕೆ ಮಾಡುವ ಸಿದ್ಧತೆ, ತಮ್ಮದು ಮಾತ್ರವಲ್ಲ, ಜೊತೆಗಾರರದೂ ಇದ್ದೇ ಇರುತ್ತದೆ, ಪಂಪ, ರನ್ನರಾಗಲಿ, ವಚನಕಾರರಾಗಲಿ, ಹಳಗನ್ನಡ ಸಾಹಿತ್ಯವಾಗಲಿ, ಹೊಸಗನ್ನಡ ಸಾಹಿತ್ಯವಾಗಲಿ, ಜೊತೆಗಾರರ ಜೊತೆ ಚರ್ಚೆ ಇರಲಿ, ಎಲ್ಲದಕ್ಕೂ ಸಿದ್ಧವಾಗಿರುತ್ತಾರೆ. ಮೈಸೂರಿನಲ್ಲಿ ವಿಶ್ವವಿದ್ಯಾನಿಲಯದ ಮಹಾರಾಜಾ ಕಾಲೇಜಿನ ಕನ್ನಡ ರೂಮಿನಲ್ಲಿ ಮೌಲ್ಯಮಾಪನ ನಡೆಯಿತು. ಅದಕ್ಕೆ ಅಶ್ವತ್ಥನಾರಾಯಣರು ಸೇರಿದರು. ನನ್ನ ಬಹು ಕೆಲಸವನ್ನು ಅವರೇ ಒಂದು ಕ್ರಮದಲ್ಲಿ ಮಾಡಿದರು. ನೀವು ಮಾಡುವ ಕೆಲಸವನ್ನು ನೋಡಿದ ಮಹಾರಾಜಾ ಕಾಲೇಜಿನವರು ವಿಶ್ವವಿದ್ಯಾನಿಲಯದವರು ಎಲ್ಲರೂ ಮೆಚ್ಚಬೇಕು ಹಾಗಿರಬೇಕು. ಇದ್ದವರಲ್ಲಿ ಒಬ್ಬೊಬ್ಬರ ಮನೆಯಿಂದ ಒಂದು ದಿನ ಕೆಲಸವೂ ಅಲ್ಲೇ, ಊಟವೂ ಅಲ್ಲೇ. ಕಡೆಯ ದಿನ ಮಾತ್ರ ಎಲ್ಲರಿಗೂ ನಮ್ಮ ಮನೆಯಲ್ಲೇ, ಮುಂದೆಯೂ ಅವರನ್ನೇ ಕರೆಸಬೇಕೆಂದು ತೀರ್ಮಾನಿಸಿದೆವು, ಯಾವುದಾದರೂ ಕಷ್ಟದ ವಿಷಯ ಬಂದರೆ ಅಶ್ವತ್ಥನಾರಾಯಣರನ್ನು ಕೇಳುವುದು, ಅದು ಬೇಗ ಪರಿಹಾರವಾಗುವುದು ಅವರ ಉಳಿಯತ್ತಾರೆ ಎಂದಾದರೆ ಅವರ ಮನೆಗೆ ಹೋಗಿ ಓದುವುದು, ನಂತರ ಚರ್ಚಿಸುವುದು ನಡೆಯುತ್ತಿತ್ತು. ಅವರ ಬಳಿ ಹತ್ತು ಸಾವಿರಕ್ಕಿಂತ ಹೆಚ್ಚು ಪುಸ್ತಕಗಳಿವೆ, ಇದನ್ನು ತಿಳಿದವರು ಓದುವುದಕ್ಕೆ ಬರುತ್ತಿರುತ್ತಾರೆ.

ಬರುವಾಗ ಯಾವುದಾದರೂ ಕಾಲೇಜು ಸಿಕ್ಕಿದರೆ ಅಲ್ಲಿ ನುಗ್ಗಿ ಕಾಲೇಜಿನ ಪ್ರಾಂಶುಪಾಲರನ್ನೂ, ಪರಿಚಿತರನ್ನೂ, ಕನ್ನಡ ಅಧ್ಯಾಪಕರನ್ನು ಮಾತಾಡಿಸಿಕೊಂಡು ಬರುವುದು. ದೊಡ್ಡವರು. ಚಿಕ್ಕವರು ಎಲ್ಲರೂ ಅವರಿಗೆ ಗೆಳೆಯರು. ಅವರೊಡನೆ ಮಾತನಾಡುವವರು ಮಾತನಾಡಲು ಶುರು ಮಾಡಿದರೆ ಅದನ್ನು ನಿಲ್ಲಿಸುತ್ತಲೇ ಇರಲಿಲ್ಲ.

ನನ್ನ ಮಗನನ್ನು ನೀನು ಏನು ಓದುತ್ತಿದ್ದೀಯಾ ಎಂದು ಕೇಳಿದರು. ಬಿ.ಇ. (B.E) ಎಂದು ಹೇಳಿದಾಗ ಅವನಿಗೆ ಕೆಲಸಕ್ಕೆ ನೆರವಾಗಲಿ ಎಂದು ಕೆಲವು ಸ್ಪ್ಯಾನರ್, ಸುತ್ತಿಗೆ ಚಿಕ್ಕದು, ಸುತ್ತಿಗೆ ದೊಡ್ಡದು. ಇನ್ನೂ ಕೆಲವು ಪದಾರ್ಥಗಳನ್ನು ತಂದುಕೊಟ್ಟರು. ಕೆಲವರಿಗೆ ಅಶ್ವತ್ಥನಾರಾಯಣ ಎಂದು ಬರೆಯಲು ಬರುತ್ತಿರಲಿಲ್ಲ ಅಶ್ವತ್ತನಾರಾಯಣ ಎಂದೇ ಬರೆಯುತ್ತಿದ್ದರು. ಅಶ್ವತ್ಥ ಎಂದರೆ ಅರಳಿಮರವೆಂದೂ, ಅಶ್ವತ್ಥಾಮ ಎಂದರೆ ಕುದುರೆಯ ಶಕ್ತಿ, ವೇಗದೂತರ ಮಗ, ಎಂದು

ಬರೆಯುತ್ತಿದ್ದರು. ಜನಪ್ರಿಯರಾಗಿದ್ದ ಅಶ್ವತ್ಥನಾರಾಯಣ ಅವರು ದಾರಿಯಲ್ಲಿ ಎಲ್ಲಾದರೂ, ಯಾರ ಮನೆಯಲ್ಲಾಗಲಿ, ಎಲ್ಲಾಗಲಿ ಮಿತ್ರಜನರಿದ್ದರೆ ಅಲ್ಲಿ ಸೇರಿ ಬಿಡುತ್ತಿದ್ದರು. ಕೆಲವರೊಡನೆ ಕೊರೆಯಲು ಆರಂಭಿಸುತ್ತಿದ್ದರು. ಅವರ ಹತ್ತಿರ ಪದಗಳು ಸಿಗುತ್ತಲೇ ಇರುತ್ತದೆ. ದೇವರು ಅವರಿಗೆ ಎಲ್ಲಾ ಶಕ್ತಿಯನ್ನು ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ.

****

ಅನಂತ ಅನಾಜಿ

ಎ. ಲಕ್ಷ್ಮೀಕಾಂತ್

ಚರವಾಣಿ : ೯೯೮೬೨೨೨೪೦೨

'ಅನಾಜಿ' ಎಂದರೆ ಅನಂತ ನಾಲೆಡ್ಜ್. ಕನ್ನಡ ಸಾಹಿತ್ಯದಲ್ಲಿ ಅನನ್ಯ ಸಂಶೋಧಕರಾಗಿ, ನಿವೃತ್ತರಾದ ಮೇಲೂ ಸುಮ್ಮನಿರದೆ ಬರಹದಲ್ಲಿ ಪುಸ್ತಕಗಳ ಹುಡುಕಾಟದಲ್ಲಿ ಸಂಶೋಧನೆಯಲ್ಲಿ ಸದಾ ನಿರತರಾಗಿರುವ ವ್ಯಕ್ತಿ. ಕನ್ನಡದ ವಿದ್ವಾಂಸರ ಪಟ್ಟಿಯಲ್ಲಿ ನಿಸ್ಸಂದೇಹವಾಗಿ ನಿಲ್ಲುವವರು. ಓದು-ಬರಹ ಮಾತ್ರವೇ ಅಲ್ಲ. ಮಾತು ಸಹ ನಿರರ್ಗಳ. ಉತ್ತಮ ವಾಗ್ಮಿ. ಮಾತೆಂದರೆ ಕೇವಲ ಮಾತಲ್ಲ. ಅಂಕಿ ಅಂಶಗಳ ಜೊತೆಗೆ ಪ್ರಾಸಬದ್ಧವಾಗಿ, ಅರ್ಥಪೂರ್ಣವಾಗಿ ಭಾಷಣ ಮಾಡುವ ಪ್ರತಿಭಾವಂತರು. ಅವರ ಪ್ರತಿಭೆಗೆ ಕಾರಣ ನಿರಂತರ ಓದು. ಹಳೆಗನ್ನಡದಿಂದ ಹೊಸಗನ್ನಡದ ತನಕ ಎಲ್ಲವನ್ನೂ ಅರೆದು ಕುಡಿದಿರುವ ಅನಾಜಿ ನಮ್ಮ ನಡುವಿರುವ ಅಪರೂಪದ ವ್ಯಕ್ತಿ. ಕನ್ನಡ ಸಾಹಿತ್ಯದಲ್ಲಿ ಏನಾದರೂ ಸಂಶಯ, ಸಂದೇಹ ಬಂದಕೂಡಲೇ ನಾನು ಕರೆ ಮಾಡುವ ಮೊದಲ ವ್ಯಕ್ತಿ 'ಅನಾಜಿ'. ಕೇಳಿದ ಸಂದೇಹಗಳಿಗೆ, ಪ್ರಶ್ನೆಗಳಿಗೆ ತಕ್ಷಣವೇ ಉತ್ತರ ನೀಡಬಲ್ಲ, ಅದ್ಭುತ ನೆನಪಿನ ಶಕ್ತಿ ಇರುವ ಅನಾಜಿಯವರ ಸ್ನೇಹ ದೊರೆತದ್ದು ನನ್ನ ಪುಣ್ಯವೆಂದೇ ಭಾವಿಸುತ್ತೇನೆ. ಅನಾಜಿಯವರ ಪ್ರತಿಭೆ ಕನ್ನಡಕ್ಕೆ ಮತ್ತಷ್ಟು ಸಿಗಲಿ. ಅವರ ಜ್ಞಾನ, ತಿಳವಳಿಕೆಯ ಉಪಯೋಗ ಕನ್ನಡಿಗರಿಗೆ ಅನಂತಾನಂತವಾಗಿ ಸಿಗಲಿ ಎಂದು ಹಾರೈಸುತ್ತಾ "ಶ್ರೀ ಅಶ್ವತ್ಥನಾರಾಯಣ. ಜಿ" ಯವರು ನೂರು ವರ್ಷಗಳನ್ನು ಪೂರೈಸಲಿ ಎಂದು ಶುಭ ಕೋರುತ್ತೇನೆ.

****

ಹಳೆಯ ಒಡನಾಟದ ಗೆಳೆಯ

ಪಿ.ವಿ. ಕೃಷ್ಣ ಭಟ್ಟ

ಶ್ರೀ ಜಿ. ಅಶ್ವತ್ಥನಾರಾಯಣ ಅವರೊಂದಿಗಿನ ನನ್ನ ಒಡನಾಟ ಸುಮಾರು ೬೦ ವರ್ಷಗಳಷ್ಟು ಹಳೆಯದು. ನಾನು ಮತ್ತು ಅವರು ಜೊತೆಯಾಗಿ ಸಮಾಜಶಾಸ್ತ್ರ ವಿಭಾಗದಲ್ಲಿ ಎಂ.ಎ. ವ್ಯಾಸಂಗ ಮಾಡುತ್ತಿದ್ದಾಗ. ವ್ಯಾಸಂಗದ ಅವಧಿ ಮುಗಿದ ನಂತರ ನಮ್ಮ ಕಾರ್ಯಕ್ಷೇತ್ರಗಳು ಬೇರೆ ಬೇರೆ ಆಗಿದ್ದರಿಂದ ನಾನು ಭೇಟಿಯಾಗಿದ್ದು ನಡುವೆ ಒಂದೋ, ಎರಡೋ ಸಂದರ್ಭಗಳಲ್ಲಿ ಮಾತ್ರ. ಆದರೆ ಅಷ್ಟು ದೀರ್ಘ ಅವಧಿಯ ಅಂತರದ ನಂತರವೂ ಅವರ ಆತ್ಮೀಯತೆ, ಸ್ನೇಹಪೂರ್ಣ ನಡವಳಿಕೆಯಲ್ಲಿ ಕಿಂಚಿತ್ತು ವ್ಯತ್ಯಾಸವನ್ನು ನಾನು ಕಾಣಲಿಲ್ಲ.

ಶ್ರೀ ಅಶ್ವತ್ಥನಾರಾಯಣ ಅವರು ಸಮಾಜಶಾಸ್ತ್ರ ಎಂ.ಎ. ವ್ಯಾಸಂಗಕ್ಕೆ ಬರುವ ಮುಂಚೆಯೇ ಕನ್ನಡ ಸಾಹಿತ್ಯದಲ್ಲಿ ಎಂ.ಎ. ಮುಗಿಸಿದ್ದರೆಂದು ಕಾಣುತ್ತಿತ್ತು. ಕನ್ನಡದಲ್ಲಿ ಅರಳು ಹುರಿದಂತೆ ಮಾತನಾಡುವ ಅವರ ಶೈಲಿ ಸಹಜವಾಗಿ ಎಲ್ಲರನ್ನು ಆಕರ್ಷಿಸುವಂತಿರುತ್ತಿತ್ತು. ಆ ದಿನಗಳಲ್ಲಿ ಬೆಂಗಳೂರು ಹಾಗೂ ಇತರ ವಿಶ್ವವಿದ್ಯಾಲಯಗಳಲ್ಲಿ ಅಂತರ ಕಾಲೇಜು ಚರ್ಚಾಸ್ಪರ್ಧೆಗಳಲ್ಲಿ ಅವರದೇ ಪ್ರಭಾವ. ಭಾಗವಹಿಸಿದ ಸ್ಪರ್ಧೆಗಳಲ್ಲೆಲ್ಲ ಬೇರೆಯವರಿಗೆ ಬಿಟ್ಟು ಕೊಡದೆ ಪ್ರಥಮ ಬಹುಮಾನ ಬಾಚುವ ಪ್ರತಿಭೆ ಅವರದು. ಒಂದೆರಡು ಕಡೆಗಳಲ್ಲಿ ಅವರೊಂದಿಗೆ ನಾನು ಕಾಲೇಜು ಮಟ್ಟದ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಿದಂತೆ ನೆನಪು.

ದೀರ್ಘಕಾಲದ ಅಧ್ಯಾಪನ ವೃತ್ತಿಯ ಜೊತೆಗೆ ಅಶ್ವತ್ಥನಾರಾಯಣ ಅವರು ಜನಪ್ರಿಯ ವಾಗ್ಮಿಯಾಗಿ, ಲೇಖಕರಾಗಿ, ವಿದ್ವಾಂಸರಾಗಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅವರೊಂದಿಗಿನ ಸ್ನೇಹಭಾವನೆ ಗಾಢವಾಗಿದ್ದರೂ ಒಡನಾಟ ಕಡಿಮೆ ಇರುವುದರಿಂದ ಅವರ ಸಾಧನೆಗಳ ಕುರಿತಾಗಿ ಆಗಾಗ ಇತರರ ಮೂಲಕ ಅಥವಾ ಮಾಧ್ಯಮಗಳ ಮೂಲಕ ಅಲ್ಪ ಸ್ವಲ್ಪ ಮಾಹಿತಿಯನ್ನು ಪಡೆಯುವುದರ ಹೊರತಾಗಿ ಹೆಚ್ಚು ವಿಷಯಗಳನ್ನು ತಿಳಿಯಲು ಸಾಧ್ಯವಾಗಲಿಲ್ಲ. ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಅವರು ಗ್ರಂಥಗಳನ್ನು ರಚಿಸಿದ್ದಾರೆಂದು, ದಾಸಸಾಹಿತ್ಯ ವಚನಸಾಹಿತ್ಯಕ್ಕೆ ಸಂಬಂಧಿಸಿದಂತೆ ಆಗಾಧವಾದ ಕೆಲಸ ಮಾಡಿದ್ದಾರೆಂದು ಕೇಳಿದ್ದೇನೆ. ಅವರ ಸಾಧನೆಗಳನ್ನು ಕುರಿತು ಅಭಿನಂದನಾ ಗ್ರಂಥವೊಂದನ್ನು ಹೊರತರುತ್ತಿರುವ ವಿಷಯ ತಿಳಿದು ಸಂತೋಷವಾಯಿತು. ಗ್ರಂಥವು ಅವರ ಬಹುಮುಖ ಪ್ರತಿಭೆ, ಸಾಧನೆಗಳ ಮೇಲೆ ಬೆಳಕು ಚೆಲ್ಲುವಂತಾಗುವುದೆಂದು ಆಶಿಸುತ್ತೇನೆ. ಸರ್ವ ಶಕ್ತನಾದ ಪರಮೇಶ್ವರನು ಅವರಿಗೆ ದೀರ್ಘಾಯಸ್ಸು, ಆರೋಗ್ಯ ನೀಡಿ ಅವರಿಂದ ಇನ್ನಷ್ಟು ಕಾಲ ಸಮಾಜೋಪಯೋಗಿ ಕಾರ್ಯ ನಡೆಯುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

******

ವಿದ್ವತ್ತು ಮತ್ತು ವಿನಯಗಳ ವ್ಯಕ್ತಿತ್ವ

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ತೊಂಬತ್ತರ ದಶಕದಲ್ಲಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಹಾಸನಕ್ಕೆ ಆಗಾಗ ಬರುತ್ತಿದ್ದರು. ನಾನು ಆ ಸಮಯದಲ್ಲಿ ಅಲ್ಲಿಯ 'ಮಿತ್ರವೃಂದ'ದ ಅಧ್ಯಕ್ಷನಾಗಿದ್ದೆ. ಸಾಹಿತ್ಯ ಕಾರ್ಯಕ್ರಮಗಳಲ್ಲಿ ಅವರ ಉಪನ್ಯಾಸವೆಂದರೆ ನಮಗೆಲ್ಲರಿಗೂ ಆಕರ್ಷಣೆ. ಪ್ರೌಢವಾದ ಭಾಷೆ, ಪ್ರಾಚೀನಕಾವ್ಯಗಳ ರಸಘಟ್ಟಗಳ ವರ್ಣನೆ, ಹಾಸ್ಯಪ್ರಸಂಗಗಳ ಒಗ್ಗರಣೆ, ಹಿರಿಯ ಸಾಹಿತಿಗಳ ಒಡನಾಟದ ಉಲ್ಲೇಖ, ವಿದ್ವತ್ತು ಮತ್ತು ವಿನಯಗಳ ವ್ಯಕ್ತಿತ್ವಗಳಿಂದ ಅವರು ನಮಗೆಲ್ಲ ತುಂಬಾ ಆತ್ಮೀಯರಾಗಿದ್ದರು. ಅಲ್ಲಿ ನಡೆಯುತ್ತಿದ್ದ ಗಣೇಶೋತ್ಸವ, ರಾಮನವಮಿ, ಶಂಕರಜಯಂತಿ ಮುಂತಾದ ಸಂದರ್ಭಗಳಿಗೆ ಸಾಂಸ್ಕೃತಿಕ ಮೌಲ್ಯವಿರುತ್ತಿತ್ತು. ಅಲ್ಲಿಯ ಹಿರಿಯ ಸಂಸ್ಕೃತಿ ಪೋಷಕರಾದ ಎಂ.ಸಿ. ಗುಂಡೂರಾವ್, ಅಡ್ವೊಕೇಟ್ ಅನಂತರಾಮಯ್ಯ, ಸಿ.ಎಸ್. ಕೃಷ್ಣಸ್ವಾಮಿ, ಎಂ. ಬಾಲಕೃಷ್ಣ ಆಚಾರ್ ಮೊದಲಾದ ಮಹನೀಯರು ನಮಗೆ ಬೆಂಬಲವಾಗಿದ್ದರು. ಹಾಗಾಗಿ ಪ್ರೊ. ಅನಾಜಿ ಅವರಂತಹ ವಿದ್ವನ್ಮಣಿಗಳನ್ನು ಹಾಸನಕ್ಕೆ ಕರೆಸಲು ನಮಗೆ ಸಾಧ್ಯವಾಗಿತ್ತು. ಆ ಸಂದರ್ಭಗಳಲ್ಲಿ ಅವರೊಂದಿಗೆ ಕಳೆದ ಕ್ಷಣಗಳು ಈಗಲೂ ನೆನಪಿಗೆ ಬರುತ್ತವೆ. ಉಪನ್ಯಾಸದ ಹೊರತಾಗಿಯೂ ನಾವು ಪಂಪ, ರನ್ನ, ಕುಮಾರವ್ಯಾಸ, ಪುರಂದರ-ಕನಕರ ಬಗೆಗೆ, ಕನ್ನಡ ಭಾಷೆಯ ಸೌಂದರ್ಯದ ಬಗೆಗೆ ಸಾಹಿತ್ಯ ಸಲ್ಲಾಪ ನಡೆಸುವುದು ಸಾಧ್ಯವಾಗಿತ್ತು.

ಪ್ರೊ. ಅನಾಜಿಯವರೊಂದಿಗಿನ ಮಾತುಕತೆಗಳ ಕೆಲವು ನೆನಪುಗಳನ್ನು ಹೀಗೆ ಹಂಚಿಕೊಳ್ಳಬಹುದು. ಅವರು ತರುಣರಾಗಿದ್ದಾಗ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿದ್ದವರು. ಅಗ ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಧರ್ಮಸ್ಥಳದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು. ಹಗಲೆಲ್ಲಾ ಸಮ್ಮೇಳನದ ಪೂರ್ವಭಾವಿ ಸಿದ್ಧತೆ ನಡೆಸಿದ್ದ ಪ್ರೊ. ಅನಾಜಿಯವರು ರಾತ್ರಿ ಹತ್ತು ಗಂಟೆಗೆ ಕೊಠಡಿಗೆ ಹಿಂತಿರುಗಿ ನಿದ್ರೆಗೆ ಜಾರಿದ್ದರಂತೆ. ಆಮೇಲೆ ಅಲ್ಲಿಗೆ ಬಂದ ಗೋಪಾಲಕೃಷ್ಣ ಅಡಿಗರು ಇವರ ಗೊರಕೆಯ ಸದ್ದಿಗೆ ನಿದ್ರೆಮಾಡಲಾಗದೆ ಒದ್ದಾಡಿದರಂತೆ! ಮರುದಿನ ಬೆಳಗ್ಗೆ ಅಡಿಗರು ಅನಾಜಿಯವರನ್ನು ಕರೆದು "ಏನಪ್ಪಾ! ಸಮ್ಮೇಳನಾಧ್ಯಕ್ಷ ನಾನೋ? ನೀನೋ? ನನ್ನನ್ನು ಗಮನಿಸಬೇಕಾದ ನಿನ್ನನ್ನು ನಾನೇ ನೋಡಿಕೊಳ್ಳುವಂತಾಯಿತಲ್ಲಾ? ನಾಳೆಯಿಂದ ನಾನು ಮಲಗಿದ ಮೇಲೆ ನೀನು ಮಲಗಬೇಕು" ಎಂದು ನಗೆಚಾಟಿ ಬೀಸಿದರಂತೆ!

ಹಾಸನದಲ್ಲಿ ಪ್ರೊ. ಅನಾಜಿಯವರು ಉಪನ್ಯಾಸಕ ವೃತ್ತಿಯಲ್ಲಿದ್ದ ದಿವಸಗಳು. ಆಗ ಗೊರೂರು ರಾಮಸ್ವಾಮಿ ಅಯ್ಯಂಗಾರರು ಅಲ್ಲಿಗೆ ವಾರದಲ್ಲಿ ಐದು ದಿವಸ ತಪ್ಪದೇ ಬರುತ್ತಿದ್ದರಂತೆ. ಸಹಜವಾಗಿ ಸಾಹಿತಿಗಳ ಸಮ್ಮುಖದಲ್ಲಿ ಹರಟೆ ಹಾಸ್ಯಗಳ ಸಮಾರಾಧನೆ. ಗೊರೂರರ ವಿನೋದಭರಿತ

ಮಾತುಗಳೆಂದರೆ ಎಲ್ಲರಿಗೂ ಇಷ್ಟ. ಒಮ್ಮೆ ಅವರು ಹರಟೆಯಾಡುತ್ತಾ ಸಂದರ್ಭವನ್ನು ದಕ್ಷಿಣಕನ್ನಡ ಜಿಲ್ಲೆಯ ಊರೊಂದಕ್ಕೆ ಹೋಗಿದ್ದ ವಿವರಿಸಿದರಂತೆ. ಅವರು ಹೋಗಿದ್ದು ಅಭಿಮಾನಿಯೊಬ್ಬರ ಮನೆಯಲ್ಲಿ ನಡೆದಿದ್ದ ವಿಷ್ಣುಸಹಸ್ರನಾಮ ಪಾರಾಯಣದ ಧಾರ್ಮಿಕ ಸಮಾರಂಭಕ್ಕೆ, ಮಹಿಳೆಯರೇ ತುಂಬಿಕೊಂಡಿದ್ದ ಚಪ್ಪರದಲ್ಲಿ ಗೊರೂರರು ಹಿಂಬದಿಯ ಸಾಲಿನಲ್ಲಿ ಕುಳಿತಿದ್ದರಂತೆ. ಆಗ ಆ ಹೆಂಗಸರು ಮುಡಿದ ಮಲ್ಲಿಗೆ ಹೂವಿನ ಸುಗಂಧದಲ್ಲಿ ಗೊರೂರರ ಮನಸ್ಸು ತೇಲತೊಡಗಿ 'ವಿಶ್ವಂ ವಿಷ್ಣುರ್ವಷಟ್ಕಾರೋ' ಕೇಳಿಸಲೇ ಇಲ್ಲವಂತೆ! ಸಹಸ್ರನಾಮ ಪಾರಾಯಣ ಮುಗಿದ ಮೇಲೆ ಸಭಾಸದರನ್ನು ಉದ್ದೇಶಿಸಿ ಭಾಷಣ ಮಾಡಬೇಕೆಂದು ಆತ್ಮೀಯರು ಒತ್ತಾಯಿಸಿದಾಗ ಏನು ಮಾತಾಡುವುದೆಂದೇ ತಿಳಿಯದ ಅವರು ಇಲ್ಲಿ ಸೇರಿದ ಸುವಾಸಿನಿಯರೇ' ಎಂದು ಭಾಷಣವನ್ನು ಆರಂಭಿಸಿದರಂತೆ! ಗೊರೂರರ ಪದಪ್ರಯೋಗ ವೈಶಿಷ್ಟ್ಯವನ್ನು ಸನ್ನಿವೇಶದ ಹಿನ್ನೆಲೆಯಲ್ಲಿ ಗ್ರಹಿಸಬೇಕೆನ್ನುವ ಪ್ರೊ. ಅನಾಜಿಯವರ ಮಾತು ಗಮನಾರ್ಹವಾದುದು. 'ಶಬ್ದದ ಅರ್ಥದಲ್ಲಿ ವಿರಮಿಸಬಾರದು; ರಮಿಸಬೇಕು' ಎನ್ನುವುದು ಇದರಿಂದ ಸುವ್ಯಕ್ತ.

ಪ್ರೊ. ಅನಾಜಿಯವರು ಭಾಷೆ, ವ್ಯಾಕರಣಗಳ ಬಗೆಗೆ ತುಂಬಾ ಮಹತ್ವ ನೀಡುವವರು. ಕಾವ್ಯದ ರಸಗ್ರಹಣಕ್ಕೆ ಅವರ ಮಾತುಗಳು ದಾರಿದೀಪವಾಗುತ್ತವೆ. ರತ್ನಾಕರವರ್ಣಿಯ ಶತಕತ್ರಯ, ಕಬ್ಬಿಗರ ಕಾವ ಮುಂತಾದ ಗ್ರಂಥಗಳು, ರಾಘವಾಂಕನ ಹರಿಶ್ಚಂದ್ರಕಾವ್ಯ, ಜೈಮಿನಿಭಾರತ ಇತ್ಯಾದಿ ಉಪನ್ಯಾಸಮಾಲಿಕೆಗಳು ಇದಕ್ಕೆ ಸಾಕ್ಷಿ, ಸಾಹಿತ್ಯದ ಬರವಣಿಗೆಯಲ್ಲಿ 'ಕರಡು ತಿದ್ದುವಿಕೆ ಹೇಗಿರಬೇಕು ಎಂಬುದರ ಕುರಿತಾಗಿಯೇ ಅವರು ಕೃತಿ ರಚಿಸಿದವರು. ಆ ಬಗ್ಗೆ ದಿವ್ಯನಿರ್ಲಕ್ಷ್ಯ ತಾಳಿರುವ ಸಮಕಾಲೀನ ಸಾಹಿತಿಗಳು ಮತ್ತು ಪುಸ್ತಕಪ್ರಕಾಶಕರು ಈ ಕೃತಿಯನ್ನು ಅವಶ್ಯವಾಗಿ ಓದಬೇಕು ಮತ್ತು ಗಂಭೀರವಾದ ಕಾಳಜಿ ವಹಿಸಿ ಕನ್ನಡ ಪ್ರೀತಿಯನ್ನು ತಾಳಬೇಕು. ಪುಸ್ತಕ ಪ್ರಕಟಿಸುವ ಶ್ರದ್ಧೆ ಕರಡು ತಿದ್ದುವುದರಲ್ಲೂ ನಮಗಿರಬೇಕು. ಇದೇ ಪ್ರೊ. ಅನಾಜಿಯವರಿಗೆ ನಾವು ತೋರುವ ನಿಜವಾದ ಗೌರವ.

******

ಹಿರಿಯ ಚೇತನಕ್ಕೊಂದು ನಮನ

ಡಾ. ರೇಖಾ ಕಾಖಂಡಕಿ
ಚರವಾಣಿ : ೯೯೪೫೫೩೧೫೪೮

ನಾವು ಹೈಸ್ಕೂಲಿನಲ್ಲಿ ಓದುತ್ತಿದ್ದಾಗಿನ ಮಾತು. ನಮ್ಮ ಕನ್ನಡ ತರಗತಿಗೆ ಲಕ್ಷ್ಮೀದೇವಿ ಎನ್ನುವ ಅಧ್ಯಾಪಕರು ಬರುತ್ತಿದ್ದರು. ಬಹುಶಃ ನಮಗೆ ಕನ್ನಡದ ಮೇಲೆ ಪ್ರೀತಿ ಹುಟ್ಟಿದ್ದೆ ಅವರು ಪಾಠಗಳನ್ನು ಕಲಿಸುತ್ತಿದ್ದ ರೀತಿಯಿಂದ. ಅವರು ಪಾಠ ಮಾಡುವಾಗ ಒಂದು ಸೂಜಿ ಬಿದ್ದರು, ಶಬ್ದವಾಗುತ್ತದೆ ಏನೋ ಎನ್ನುವಷ್ಟು ಕ್ಲಾಸಿನಲ್ಲಿ ನಿಶ್ಶಬ್ದತೆ ಅಡಗಿರುತ್ತಿತ್ತು. ಅವರ ಕ್ಲಾಸುಗಳಿದ್ದ ದಿನ ನಮಗೆ ಹಬ್ಬವಿದ್ದಂತೆ. ಅಂತಹ ಕನ್ನಡದ ಬಗ್ಗೆ ಆಸಕ್ತಿಯನ್ನು ಹುಟ್ಟಿಸಿದ ಅವರ ಭಾಷೆಯ ಪ್ರಾವೀಣ್ಯತೆ ಮುಂದೊಂದು ದಿನ ನನ್ನನ್ನು ಕೂಡಾ ಕನ್ನಡದ ಸಾಹಿತ್ಯದತ್ತ, ಬರವಣಿಗೆಯತ್ತ ಕರೆದುಕೊಂಡು ಹೋಗುತ್ತದೆ ಎನ್ನುವ ಕಲ್ಪನೆ ಕೂಡಾ ಇರಲಿಲ್ಲ.

ಮುಂದೆ ನನ್ನ ಹತ್ತನೇ ತರಗತಿ ಮುಗಿದ ಮೇಲೆ ನಾಲ್ಕೈದು ವರ್ಷಗಳು ನಾನು ಕಾಲೇಜಿಗೆ ಹೋಗಲು ಸಾಧ್ಯವಾಗಲಿಲ್ಲ. ಅದಾದ ಮೇಲೆ ನಾನು ಮತ್ತೆ ಆಚಾರ್ಯಪಾಠಶಾಲೆಯ ಕಾಲೇಜು ಸೇರಿದೆ. ಅದೃಷ್ಟವೆಂಬಂತೆ ಅಲ್ಲಿಯೂ ಕೂಡಾ ಲಕ್ಷ್ಮೀದೇವಿಯವರೇ ನನಗೆ ಪ್ರಾಧ್ಯಾಪಕರಾಗಿ ಬಂದರು. ಕನ್ನಡವನ್ನೇ ನನ್ನ ವಿಶೇಷ ಆಸಕ್ತಿಯ ವಿಷಯವಾಗಿ ತೆಗೆದುಕೊಂಡಿದ್ದೆ. ಆಗಲೇ ಅವರಿಗೆ ವಿವಾಹವಾಗಿದ್ದು ನಮಗೆಲ್ಲ ಕುತೂಹಲ, ಅವರು ಯಾರನ್ನು ಮದುವೆಯಾಗಿದ್ದಾರೆ ಎನ್ನುವದು. ಯಾರೋ ಸ್ನೇಹಿತೆ ಹೇಳಿದಳು, "ಅವರ ಯಜಮಾನರ ಹೆಸರು ಅಶ್ವತ್ಥನಾರಾಯಣ್ ಅಂತೆ. ಅವರು ಅಧ್ಯಾಪಕರು. ತುಂಬಾ ಟ್ಯಾಲೆಂಟೆಡ್" ಅಂತೆ. ಹೀಗೆ ಲಕ್ಷ್ಮೀದೇವಿಯ ಮೂಲಕ ಅಶ್ವತ್ಥನಾರಾಯಣರೂ ಕೂಡ ನಮ್ಮ ಪರಿಚಯದ ವ್ಯಾಪ್ತಿಗೆ ಬಂದರು.

ಮುಂದೆ ನಾವು ಕೂಡಾ ದಾಸಸಾಹಿತ್ಯದಲ್ಲಿ ತೊಡಗಿಕೊಂಡಾಗ ಅವರ ವ್ಯಾಪಕವಾದ ಅಧ್ಯಯನ ನಮಗೆ ಪರಿಚಯವಾಗುತ್ತ ಬಂತು. ನಿಜ ಅಂದರೆ ಲಕ್ಷ್ಮಿಯ ಮೂಲಕವೆ ನಮಗೆ ನಾರಾಯಣರ ಪರಿಚಯ ಆಳವಾಗುತ್ತಾ ಹೋಯಿತು. ಅವರ ಜ್ಞಾನದ ಅರಿವಿನ ಆಳಕ್ಕೆ ಚೌಕಟ್ಟೇ ಇಲ್ಲವೇನೋ ಎನ್ನುವಂತೆ ಅವರ ವ್ಯಕ್ತಿತ್ವದ ಪರಿಚಯ ಆಗುತ್ತಾ ಹೋಯಿತು.

ಅವರೊಬ್ಬರ ಕನ್ನಡ ಲೇಖಕರು ಒಂದೇ ಅಲ್ಲ ಒಳ್ಳೆಯ ವಾಗ್ಮಿ. ನುರಿತ ಅಧ್ಯಾಪಕರು. ಜೊತೆಗೆ ಹಲವಾರು ವಿಷಯಗಳಲ್ಲಿ ಸಂಶೋಧನೆಗೆ ತೊಡಗಿಕೊಂಡವರು. ಅಲ್ಲದೇ ಎಂ.ಎ, ಪಿ.ಎಚ್.ಡಿ, ಕೆ.ಎ.ಎಸ್., ಐ.ಎ.ಎಸ್., ವಿದ್ಯಾರ್ಥಿಗಳಿಗೆ ಕನ್ನಡ ಪಾಠ ಹೇಳಿಕೊಟ್ಟ ನೈಪುಣ್ಯ ಅವರದು. ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನದ ಗ್ರಂಥವನ್ನು ರಚಿಸಿ ಕನ್ನಡದ ಅನುಪಮ ಸೇವೆಮಾಡಿದ್ದು

ಸಾಮಾನ್ಯವಾದ ವಿಷಯವಲ್ಲ. ಅದರ ಆಳ ಅಗಲ ತಿಳಿದವರು ಮಾತ್ರ ಅಂತಹ ಅಗಾಧವಾದ ಕೆಲಸ ಮಾಡಲು ಸಾಧ್ಯ. ಅಂತೆಯೇ ಅವರ ಕನ್ನಡದ ಸೇವೆಗಾಗಿ ಹಲವಾರು ಪ್ರಶಸ್ತಿಗಳು ದೊರೆತು ಪ್ರತಿಷ್ಠಿತ ಗೌರವಕ್ಕೆ ಪಾತ್ರರಾಗಿದ್ದಾರೆ.

ಮುಖ್ಯವಾಗಿ ಅವರ ಕನ್ನಡ ಸೇವೆಯಲ್ಲಿ ಮೈಲುಗಲ್ಲಾಗಿ ನಿಂತಿರುವುದು ದಾಸಸಾಹಿತ್ಯದ ಪ್ರಸಾರಕಾರ್ಯ. ಗ್ರಂಥಗಳ ಸಂಪಾದನೆಯಲ್ಲಿ ಜೈನಸಾಹಿತ್ಯದ ಪ್ರಕಾರ ಹಾಗೂ ಅನುಭವಾಮೃತ ಟೀಕೆ, ಕುಮಾರವ್ಯಾಸನ ಭೀಷ್ಮಪರ್ವ, ಕಬ್ಬಿಗರ ಕಾವ್ಯಟೀಕೆ, ಡಿವಿಜಿಯವರ ಕಗ್ಗದ ಪದ್ಯಗಳು ಇಂತಹ ಹಲವಾರು ವಿಶೇಷವಾದ ಕೃತಿಗಳ ಸಂಪಾದನೆ ಮಾಡಿದ್ದಾರೆ.

ಇವರ ದಾಸಸಾಹಿತ್ಯದ ಪರಿಕರವನ್ನು ತೆಗೆದುಕೊಂಡಾಗ ಬಹಳ ವಿಶೇಷವಾದ ಕಾರ್ಯಕ್ಷಮತೆಯನ್ನು ಕಾಣಬಹುದು. ಕರ್ನಾಟಕ ಸರ್ಕಾರ(ಕನ್ನಡ ಮತ್ತು ಸಂಸ್ಕೃತಿ ಅಧ್ಯಯನ ನಿರ್ದೇಶನಾಲಯ) ಪ್ರಕಟಿಸಿರುವ ಐವತ್ತು (೫೦) ಸಂಪುಟಗಳ ಸಮಗ್ರ ದಾಸಸಾಹಿತ್ಯದ ಸಹಸಂಪಾದಕರಾಗಿ ಅಚ್ಚಿಗೆ ಹೋಗುವ ತನಕ ಕೆಲಸ ನಿರ್ವಹಿಸಿದ್ದು ಸಾಮಾನ್ಯ ಸಂಗತಿಯಲ್ಲವೆಂದೇ ಹೇಳಬೇಕು. ಅಲ್ಲದೇ ವಿಶೇಷವಾಗಿ "ಶ್ರೀ ವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು" ಎನ್ನುವ ಸಮಗ್ರ ಗ್ರಂಥ ಇವರ ಸಂಪಾದಕತ್ವದಲ್ಲಿ ಹೊರಬಂದು ಜನ-ಮನಕ್ಕೆ ತಲುಪಿಸಿದ್ದು ಇವರ ಬಹುದೊಡ್ಡ ಸಾಧನೆ ಜೊತಗೆ ಇದರ ಹಿಂದೆ ತುಂಬಾ ಪರಿಶ್ರಮವಾದ ಕೆಲಸವೂ ಇದೆ. ಅದಕ್ಕಿಂತ ಮೊದಲು ದಾಸಸಾಹಿತ್ಯದ ಕೀರ್ತನೆಗಳು ಇಡಿಯಾಗಿ, ಸಮಗ್ರವಾಗಿ ಲಭ್ಯವಾಗುವುದು ಬಹಳ ಕಷ್ಟಸಾಧ್ಯವಾಗಿತ್ತು. ಅನಂತರ ಸರ್ಕಾರ ಕೈಗೊಂಡ ಈ ಮಹಾತ್ಕಾರ್ಯದಲ್ಲಿ ಇವರು ಕೈಜೋಡಿಸಿದ್ದು ದಾಸಸಾಹಿತ್ಯಕ್ಕೆ ಇವರಿಂದ ಸಂದ ಅಪಾರವಾದ ಕೊಡುಗೆ ಎನ್ನಬಹುದು.

ಇವುಗಳ ಜೊತೆ ಕಲ್ಲಂಗೆರೆ ತಿಮ್ಮಪ್ಪದಾಸರ ಕೀರ್ತನೆಗಳು, ಶ್ರೀ ಚಿದಂಬರಯ್ಯನವರ ಭಕ್ತಿಗೀತೆಗಳು. ಹರಿದಾಸರ ಸಮಾಜಮುಖಿ ಕೀರ್ತನೆಗಳು ಭಾಗ-೪, ದಾಸಸಾಹಿತ್ಯ ಸೌರಭ, ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು ಇವೆಲ್ಲ ಇವರ ಸಂಪಾದನೆಯ ಅತ್ಯಮೂಲ್ಯ ಕೊಡುಗೆಗಳಾಗಿವೆ. ಇನ್ನು ವಚನ ಸಾಹಿತ್ಯದಲ್ಲಿಯೂ ಇವರ ಆಸಕ್ತಿ ಬಹುಶ್ರುತವಾದದ್ದು. ವಚನ ಸಾಹಿತ್ಯದಲ್ಲಿ ದೇವರ ದಾಸಿಮಯ್ಯನ ವಚನಗಳು, ಫ.ಗು. ಹಳಕಟ್ಟಿ ಅವರ ಸಾಹಿತ್ಯದ ಸವಿಯನ್ನು ಕೂಡ ವಿಶಿಷ್ಟರೀತಿಯಲ್ಲಿ ಪರಿಚಯಿಸಿದ್ದಾರೆ.

ಇದರ ಜೊತೆ 'ಸಮಗ್ರಗ್ರಂಥ' ಉಪನ್ಯಾಸಮಾಲಿಕೆಯಲ್ಲಿ "ಆದಿಪುರಾಣ" "ಪಂಪಭಾರತ" "ರಾಮಾಯಣದರ್ಶನ" "ಹರಿಶ್ಚಂದ್ರ ಕಾವ್ಯ" "ಜೈಮಿನಿ ಭಾರತ" "ಸೋಮೇಶ್ವರ ಶತಕ" ಕುರಿತ ಉಪನ್ಯಾಸ ಮಾಲೆಗಳು ಮಹತ್ವಪೂರ್ಣವಾದವು. ಜೊತೆಗೆ ಭಾಷೆ ಕಲಿಕೆ, ಲಿಪಿ ಕಲಿಕೆ ಮುಂತಾದವು ಮುಖ್ಯವಾದ ಸ್ವರೂಪವನ್ನು ಪಡೆದುಕೊಂಡು ಇವರ ಕಾರ್ಯವೈಖರಿಯಾಗಿ ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಇದಲ್ಲದೆ ಭಗವದ್ಗೀತಾ ಶಬ್ದಕೋಶವನ್ನು ಕೂಡಾ ಅರ್ಥಪೂರ್ಣವಾಗಿ ಆಸಕ್ತರ ಮುಂದೆ ತೆರೆದಿಟ್ಟಿದ್ದಾರೆ. ಇನ್ನೂ ಹಲವಾರು ಸ್ವತಂತ್ರ ಗ್ರಂಥರಚನೆಗಳಲ್ಲಿ ಇವರ ಸೃಜನಶೀಲತೆ ಬಿಂಬಿತಗೊಂಡಿವೆ ಎನ್ನಬಹುದು. ಕನ್ನಡ ಸಾಹಿತ್ಯ ಪರಿಷತ್ತು-೧೦೦, "ಕನ್ನಡ ಸಾಹಿತ್ಯ ದಿಗ್ಗಜರು", "ನಾ ಕಂಡಂತೆ ಕನ್ನಡ ಸಾಹಿತಿಗಳು" ಕೃತಿಯಲ್ಲಿ ಬಿ.ಎಂ.ಶ್ರೀ, ದೇವುಡು ನರಸಿಂಹ ಶಾಸ್ತ್ರಿ, ಫ.ಗು. ಹಳಕಟ್ಟಿ ಮುಂತಾದ ಹಲವಾರು ಮಹನೀಯರ ಬಗ್ಗೆ ಗಟ್ಟಿಯಾದ ವ್ಯಕ್ತಿಚಿತ್ರಗಳನ್ನು ಕಟ್ಟಿಕೊಟ್ಟಿದ್ದಾರೆ. ಅಲ್ಲದೇ ಹಲವಾರು ಮಹತ್ವದ ಕೃತಿಗಳ ಸಹಸಂಪಾದಕತ್ವದಲ್ಲಿಯೂ ಕೂಡಾ ಕೈಜೋಡಿಸಿದ್ದಾರೆ.

ನಿಜ ಜೀವನದಲ್ಲಿ ಲಕ್ಷ್ಮೀದೇವಿ ಕೈಹಿಡಿದಂತೆ ಸಾಹಿತ್ಯಿಕ ಜೀವನದಲ್ಲಿ ಸರಸ್ವತಿಯೂ ಇವರ ಬದುಕಿನುದ್ದಕ್ಕೂ ಕೈಹಿಡಿದು ನಡೆಸಿದ್ದಾಳೆ; ಮನ ಲಕ್ಷ್ಮಿಯದಾದರೆ ಮನೆ ಸರಸ್ವತಿಯದು ಎಂಬಂತೆ. ಇವರ ಮನೆಯಲ್ಲಿ ಅಗಾಧವಾದ ಪುಸ್ತಕಗಳ ಸಂಗ್ರಹವಿದೆ. ಇವರ ಮನೆಯಲ್ಲಿಯ ಪುಸ್ತಕಗಳ ರಾಶಿ ನೋಡಿದರೆ ಎಷ್ಟರ ಮಟ್ಟಿಗೆ ಇವರ ಪುಸ್ತಕದ ಆಸಕ್ತಿ ಇವರ ಒಳತೋಟಿಯನ್ನು ತುಂಬಿಕೊಂಡು ಸಮೃದ್ಧತೆಯನ್ನು ಪಡೆದಿದೆ ಎನ್ನುವುದನ್ನು ತಿಳಿಯಬಹುದು. ಈ ಪುಸ್ತಕಗಳ ಸಂಗ್ರಹದಿಂದ ಬೇಕಾದಷ್ಟು, ಸಂಶೋಧನ ವಿದ್ಯಾರ್ಥಿಗಳು ಅನುಕೂಲಪಡೆಯಬಹುದು. ನಾನು ಕೂಡಾ ಪಿ.ಎಚ್.ಡಿ. ಪ್ರಬಂಧಕ್ಕೆ ಇವರ ಪುಸ್ತಕ ಸಂಗ್ರಹಕ್ಕೆ ಕೈ ಹಾಕಿದ್ದೆ. ಏಕತ್ವದಲ್ಲಿ ಬಹುತ್ವ ಎನ್ನುವಂತೆ ಈ ಒಬ್ಬ ವ್ಯಕ್ತಿಯಲ್ಲಿ ಬಹುಮುಖ ಪ್ರತಿಭೆ ಅಪರೂಪ, ಅನಂತ, ಅನನ್ಯವಾದುದು. ಸರಸ್ವತಿಯ ಉಡಿಯಲ್ಲಿ ಈ ಲಕ್ಷ್ಮೀನಾರಾಯಣ ದಂಪತಿ ಆ ಸರಸ್ವತಿಯ ಮಕ್ಕಳಂತೆ ಕಂಗೊಳಿಸುತ್ತಿದ್ದಾರೆ. ದೇವರು ಇವರಿಬ್ಬರಿಗೂ ಆಯಸ್ಸು, ಆರೋಗ್ಯ ನೀಡಿ ನಿರಂತರ ಕಾಪಾಡಲಿ ಎನ್ನುವುದು ಈ ಕಿರಿಯಳ ಹಾರೈಕೆ.

****

ಕನ್ನಡ ಸಾಹಿತ್ಯ ಲೋಕದ ನಿಕಟವರ್ತಿ ಸಾಧಕ ಸಾಹಿತಿ

ಎಸ್. ಮುರಳಿ ಮೋಹನ್
ಚರವಾಣಿ : ೯೩೪೮೯೦೬೫೧೭

ಕನ್ನಡ ಭಾಷೆಯ ಅಚ್ಚುಕಟ್ಟುತನಕ್ಕೆ ಮತ್ತೊಂದು ಹೆಸರೇ ಶ್ರೀ ಅ.ನಾ.ಜಿ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಶ್ರೀ ಅನಾಜಿಯವರ ಬರವಣಿಗೆಯಲ್ಲಿ ಪದಗಳ ಜೋಡಣೆಯಲ್ಲಿ, ಮಾತನಾಡುವಾಗ ಸಮಾನಾರ್ಥಕ ಪದಗಳನ್ನು ಪ್ರಾಸಬದ್ಧವಾಗಿ ಚಟಪಟನೆ ಹೇಳುವ ಕಲೆಯಲ್ಲಿ, ಲೇಖನಗಳು ಮುದ್ರಣಕ್ಕೆ ಹೋಗುವಮುನ್ನ ಕರಡು ಪ್ರತಿಯನ್ನು ತಿದ್ದುವ ಪರಿಯಲ್ಲಿ ವಿಶೇಷ ವೈಖರಿಯನ್ನು ಕಾಣಬಹುದು. ಇದೇ ಅವರ ಅಚ್ಚುಕಟ್ಟುತನ.

ನನಗೆ ಶ್ರೀ ಅನಾಜಿಯವರ ಪರಿಚಯ ಡಾ॥ ಟಿ.ವಿ. ರಾಜುರವರ ಮೂಲಕವಾದದ್ದು ಮತ್ತು ಈ ಪರಿಚಯ ಬಹಳ ದಿನಗಳದ್ದಾಗಿದ್ದರೂ ಒಡನಾಟ ಕೇವಲ ಒಂದು ದಶಕದ್ದಿರಬಹುದು.

ದೊಡ್ಡಬಳ್ಳಾಪುರ ತಾಲ್ಲೂಕಿನ ರಾಜಘಟ್ಟದಲ್ಲಿ ಶ್ರೀ ಮಾರುತಿ ಎಜುಕೇಶನಲ್ ಟ್ರಸ್ಟಿನ ಆಶ್ರಯದಲ್ಲಿ ಶ್ರೀ ಮಾರುತಿ ಪ್ರೌಢ ಶಾಲೆ, ತಾಲ್ಲೂಕಿನ ಪ್ರೌಢಶಾಲಾ ಶಿಕ್ಷಕರಿಗೆ ವಿಷಯವಾರು ವಿಷಯಸಂಪದೀಕರಣ ಕಾರ್ಯಕ್ರಮವನ್ನು ದಿನಕ್ಕೊಂದು ಪಠ್ಯವಿಷಯದಂತೆ ಒಂದು ವಾರಗಳ ಕಾಲ ನಡೆಸಿಕೊಡುವಂತೆ ಶಿಕ್ಷಣ ಇಲಾಖೆಯ ಕ್ಷೇತ್ರಶಿಕ್ಷಣಾಧಿಕಾರಿಗಳು ಕೋರಿದರು. ಸಹಜವಾಗಿ ಇಲಾಖೆಯ ವಿಷಯಸಂಪದೀಕರಣ ಕಾರ್ಯಾಗಾರವು ಅರ್ಧದಿನದ್ದಾಗಿದ್ದು ಕೇವಲ ಹತ್ತನೇ ತರಗತಿಯ ಮಕ್ಕಳನ್ನು ಪರೀಕ್ಷೆಯಲ್ಲಿ ಉತ್ತೀರ್ಣರಾಗಿಸಲು ಬೇಕಾದ ವಿಷಯಕ್ಕಷ್ಟೇ ಸೀಮಿತವಾಗಿರುತ್ತಿತ್ತು. ಈ ಕಾರ್ಯಕ್ರಮ ನಡೆಸಿಕೊಡಲು ನನ್ನದೊಂದು ನಿಬಂಧನೆಯನ್ನೂ ಕ್ಷೇತ್ರಶಿಕ್ಷಣಾಧಿಕಾರಿಗಳಲ್ಲಿರಿಸಿದೆ. ಆ ನಿಬಂಧನೆಯಂತೆ ಶಿಕ್ಷಕರಿಗೆ ಪ್ರತಿದಿನವೂ ತಮ್ಮ ತಮ್ಮ ಬೋಧನಾ ವಿಷಯ ಸಂಪದೀಕರಣದ ಅವಧಿಯ ನಂತರ ವಿಶೇಷ ಅವಧಿಯ ತಮ್ಮ ಕಾರ್ಯತತ್ಪರತೆಯ ಬಗ್ಗೆ ಮನವರಿಕೆ ಮಾಡುವ ಉದ್ದೇಶದಿಂದ ವಿವಿಧ ಕ್ಷೇತ್ರಗಳ ಪ್ರಖ್ಯಾತ ಜ್ಯೇಷ್ಠಶಿಕ್ಷಕರ ಅವಧಿಯೊಂದನ್ನು ಜೋಡಿಸಿ ಅವರಿಂದ ಪ್ರವಚನ/ಸಂವಾದಗಳನ್ನು ನಡೆಸಿಕೊಡುವ ನನ್ನ ಇಂಗಿತಕ್ಕೆ ತಮ್ಮ ಸಮ್ಮತಿ ಸೂಚಿಸಿದರು.

ಈ ಯೋಜನೆಯಂತೆ ಪ್ರತಿದಿನವೂ ಬೇರೆ ಬೇರೆ ಮಹನೀಯರನ್ನೂ ಜೋಡಿಸಿಯಾಗಿತ್ತು. ವಿಜ್ಞಾನ ವಿಷಯ ಸಂಪದೀಕರಣದ ನಂತರ ವಿಶೇಷ ಅವಧಿಗೆ ಶ್ರೀ ಅ.ನಾ.ಜಿ. ಯವರನ್ನು ಆಹ್ವಾನಿಸಲಾಗಿತ್ತು. ಶ್ರೀ ಅ.ನಾ.ಜಿ. ಅವರು ತಮ್ಮ ಅವಧಿಯಲ್ಲಿ ಕನ್ನಡ ಸಾಹಿತ್ಯದ ಲೋಕದಲ್ಲಿ ಟಿ. ಎಸ್. ವೆಂಕಣ್ಣಯ್ಯ, ಬಿ.ಎಂ ಶ್ರೀಕಂಠಯ್ಯ, ದ.ರಾ ಬೇಂದ್ರೆ, ಜಿ.ಪಿ ರಾಜರತ್ನಂ, ತ.ಸು. ಶಾಮರಾಯರು, ತರಾಸು, ಅ.ನಾ.ಕೃ, ಗೊರೂರು ರಾಮಸ್ವಾಮಿ ಐಯಂಗಾರ್ ಇನ್ನೂ ಮುಂತಾದ ಅನೇಕ ದಿಗ್ಗಜರುಗಳ

ಜೀವನದಲ್ಲಿ ಆವರ ಕಾರ್ಯತತ್ಪರತೆಯ ವೈಖರಿಗಳನ್ನು ಉದಾಹರಣೆಗಳ ಮೂಲಕ ವಿವರಿಸಿದರು. ಅವರೆಲ್ಲ ತಮ್ಮ ತಮ್ಮ ಸಾಹಿತ್ಯ ರಚನೆಯ ಕಾಲದಲ್ಲಿ ಎಂತಹಾ ಕ್ಲಿಷ್ಟಕರ ಸನ್ನಿವೇಶಗಳಲ್ಲೂ ಮೌಲ್ಯಯುತ ಬದುಕು ನಡೆಸಿದ ಪರಿಯನ್ನು ರಸವತ್ತಾಗಿ ವರ್ಣಿಸಿದರು. ತಮ್ಮ, ಅವರ ಒಡನಾಟದ ಕ್ಷಣಗಳ ಬಗ್ಗೆ ಹಾಸ್ಯಮಯವಾಗಿ, ಆಕರ್ಷಣೀಯವಾಗಿ, ಮನಮುಟ್ಟುವಂತೆ ಹೇಳಿದ ಘಟನೆಗಳ ವಿವರಗಳಿಂದ ಅನೇಕ ಶಿಕ್ಷಕರು ಆ ಶ್ರೇಷ್ಠ ಸಾಹಿತಿಗಳ ಕಾರ್ಯತತ್ಪರತೆಗೆ ಮಾರುಹೋದರು. ಒಡನಾಡಿಯೊಬ್ಬರಿಂದ ಅನೇಕರ ಜೀವನಮೌಲ್ಯಗಳನ್ನು ಅರಿತ ಧನ್ಯತೆಯಿಂದಲೂ, ಜ್ಯೇಷ್ಠ ಸಾಹಿತಿಗಳ ದರ್ಶನಭಾಗ್ಯದಿಂದಲೂ ಕೃತಾರ್ಥರಾದರು. ಆ ಬಗ್ಗೆ ಇಂದಿಗೂ ಅವರನ್ನೂ ಅವರ ನುಡಿಗಳನ್ನೂ ಸದಾ ಸ್ಮರಿಸುತ್ತಾರೆ. ಇದೇ ಅವರ ಅಚ್ಚುಕಟ್ಟುತನದ ಮಾತುಗಾರಿಕೆಗೆ ಸಾಕ್ಷಿ, ಇದಕ್ಕೆ ಮತ್ತೊಂದು ಹೆಸರೇ ಶ್ರೀ ಅ.ನಾ.ಜಿ.

****

ಸರ್ಕಾರಿ ಕಾಲೇಜಿನ ಕನ್ನಡ ಮಿತ್ರ

ಪ್ರೊ. ಎಂ. ಎಸ್. ರಘುನಾಥ್

ಶ್ರೀ ಅಶ್ವತ್ಥನಾರಾಯಣ್ ಅವರು ನನ್ನ ವೃತ್ತಿ ಜೀವನದ ಆರಂಭದಲ್ಲೇ ಅಂದರೆ ೧೯೭೨ ರಿಂದಲೇ ಸಹೋದ್ಯೋಗಿಯಾದವರು. ಮೊದಲ ಪರಿಚಯದಲ್ಲೇ ಎಂತಹವರಿಗೂ ಗೋಚರವಾಗುವುದು, ಅವರ ವಾಚಾಳಿತನ. ಅವರಿಗೋ ಮಾತಾಡುವ ಚಟ. ಬಹಳ ಸ್ನೇಹಶೀಲ. ಇನ್ನು ಪುಸ್ತಕ ಪ್ರಿಯ. ವಾದ ಶುರು ಮಾಡಿದರೆಂದರೆ, ಸುಮ್ಮನೆ ಬಿಡುವವರಲ್ಲ. ಅವರ ಮಾತಿನ ಮತ್ತೊಂದು ಧಾಟಿಯೆಂದರೆ ಪ್ರಾಸ ಅನುಪ್ರಾಸಗಳ ಬಳಕೆಯಿಲ್ಲದೆ ಅವರಿಗೆ ಮಾತನಾಡಲು ಬರುವುದೇ ಇಲ್ಲವೇನೋ ಎಂಬಂತೆ ಅವರ ಮಾತು ಎಂದಿನಿಂದಲೂ ಇರುವಂತಹದೇ. ನಾವು ಕೆಲಸ ಮಾಡಿದ್ದು ಸರ್ಕಾರಿ ಕಾಲೇಜಿನಲ್ಲಾದ್ದರಿಂದ, ನಮಗೆ ಆಗಾಗ ವರ್ಗಾವಣೆಯಾಗುತ್ತಿತ್ತು. ಹಾಗಾಗಿ ಆಗಾಗ ನಮ್ಮ ಸಂಪರ್ಕ ಕಡಿಮೆಯಾಗುತ್ತಿತ್ತು ಆದರೂ, ವಾರ್ಷಿಕ ಮೌಲ್ಯಮಾಪನ ಕೇಂದ್ರದಲ್ಲಿ ಒಮ್ಮೊಮ್ಮೆ ನಾವು ಭೇಟಿ ಮಾಡುತ್ತಿದ್ದೆವು.

ಶ್ರೀಯುತರ ಆಸಕ್ತಿಯ ಕ್ಷೇತ್ರ ಹಳಗನ್ನಡ ಸಾಹಿತ್ಯ. ಅವರು ಅದರಲ್ಲಿ ಪಾಂಡಿತ್ಯವನ್ನೂ ಗಳಿಸಿದವರು. ಹಳಗನ್ನಡ ಸಾಹಿತ್ಯದಲ್ಲಂತೂ ಈಗ ಆಸಕ್ತಿ ಕಡಿಮೆಯಾಗುತ್ತಿದೆ ಅಧ್ಯಾಪಕರಿಗೇ ಅದು ಬೇಕಿಲ್ಲವಾಗಿದೆ. ಆದರೆ, ಅನಾಜಿಯವರಿಗೆ ಮಾತ್ರ ಅದರಲ್ಲಿನ ಆಸಕ್ತಿ ಎಳ್ಳಷ್ಟೂ ಕಡಿಮೆಯಾಗಿಲ್ಲ ಅದನ್ನು ಪಾಠ ಮಾಡುವುದೆಂದರೆ, ಪಂಚಪ್ರಾಣ. ಈಗಲೂ ಬೆಂಗಳೂರಿನ ಬಿ.ಎಂ.ಶ್ರೀ. ಪ್ರತಿಷ್ಠಾನ ಏರ್ಪಡಿಸುವ ಹಳಗನ್ನಡ ತರಗತಿಗಳನ್ನು ತೆಗೆದು ಕೊಳ್ಳುವವುದರ ಬಗ್ಗೆ, ಅವರಿಗೆ ಎಲ್ಲಿಲ್ಲದ ಸಡಗರ.

ಅನಾಜಿಯವರ ಮತ್ತೊಂದು ಹವ್ಯಾಸ, ಪುಸ್ತಕ ಸಂಗ್ರಹ. ಪುಸ್ತಕಗಳನ್ನು ಕೊಂಡು ಓದಬೇಕು ಎಂಬ ಹೇಳಿಕೆಗೆ ತಕ್ಕಂತೆ, ಅನಾಜಿಯವರು ಪುಸ್ತಕ ಕೊಳ್ಳಲು ಹಿಂದೆ ಮುಂದೆ ನೋಡುವುದೇ ಇಲ್ಲ ಮೊದಲಿನಿಂದಲೂ, ಪುಸ್ತಕಗಳನ್ನು ಕೊಂಡುಕೊಳ್ಳುವ ಖುಷಿ ಅವರಿಗೆ ಇದ್ದೇ ಇದೆ. ಎಲ್ಲರಿಗೂ ಅವರು ಪುಸ್ತಕ ಕೊಡುವುದಿಲ್ಲ ಆದರೆ ಪುಸ್ತಕಗಳನ್ನು ಪರಾಮರ್ಶೆ ಮಾಡುವವರಿಗೆ, ತಮ್ಮಲ್ಲಿರುವ ಪುಸ್ತಕಗಳನ್ನು ಕೊಟ್ಟು ಮಾರ್ಗದರ್ಶನ ಮಾಡುತ್ತಾರೆ. ಅನೇಕ ಯುವ ಲೇಖಕರಿಗಂತೂ, ಅವರು ನೀಡಿರುವ ಮಾರ್ಗದರ್ಶನ ಅಷ್ಟಿಷ್ಟಲ್ಲ.

ಅನಾಜಿಯವರಿಗೂ ಸಾಹಿತ್ಯ ಪರಿಷತ್ತಿಗೂ, ದೀರ್ಘಕಾಲದ ನಂಟು. ಹಿಂದೆ ಅವರೊಮ್ಮೆ ಅದರ ಪದಾಧಿಕಾರಿಗಳೂ ಆಗಿದ್ದರು. ಪರಿಷತ್ತಿನ ಬಗ್ಗೆ ಅವರೊಂದು ಪುಸ್ತಕವನ್ನೂ ಬರೆದಿದ್ದಾರೆ.

ನಾನೊಮ್ಮೆ ನನ್ನ ಇಂಗ್ಲೆಂಡ್ ಪ್ರವಾಸದ ಪುಸ್ತಕವನ್ನು ಅವರಿಗೆ ಕೊಟ್ಟೆ. ಮಾರನೆಯ ವಾರವೇ ಅವರು ಅದನ್ನು ಓದಿ, ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಲ್ಲದೇ ಅಲ್ಲಲ್ಲಿ ನುಸುಳಿದ್ದ, ಕಣ್ತಪ್ಪಿ ಬಂದಿದ್ದ

ಮುದ್ರಾ ರಾಕ್ಷಸನ ಹಾವಳಿಯನ್ನೂ ನನ್ನ ಗಮನಕ್ಕೆ ತಂದು ಅವುಗಳನ್ನು ನಿವಾರಿಸಬಹುದಿತ್ತಲ್ಲವೇ, ಎಂದೂ ಸಹ ಹೇಳುವುದನ್ನು ಮರೆಯಲಿಲ್ಲ.

ಅನಾಜಿಯವರು ನಿಜವಾದ ಅರ್ಥದಲ್ಲಿ ಓರ್ವ ಸಾಹಿತ್ಯ ಪರಿಚಾರಕ. ಸಾಹಿತ್ಯ ಕಾರ್ಯಕ್ರಮಗಳಾಗಲಿ, ಸಾಹಿತಿಗಳ ಬಗ್ಗೆ ವಿಚಾರ ಸಂಕಿರಣ, ಪುಸ್ತಕ ಲೋಕಾರ್ಪಣೆ ಮುಂತಾದ ಕಾರ್ಯಕ್ರಮಗಳಾಗಲಲೀ ಅದರ ಬಗ್ಗೆ ಸೂಕ್ತ ಸಲಹೆ, ಮಾರ್ಗದರ್ಶನ ನೀಡಲು ಅವರು ಸದಾ ಸಿದ್ದ. ಕನ್ನಡ ಕೈಂಕರ್ಯದ ವಿಷಯದಲ್ಲಿ ಅಪಾರ ಕಾಳಜಿ, ಅದರ ಮುಂಚೂಣಿಯಲ್ಲಿರುವವರು. ಅವರ ದೇಹಕ್ಕೆ ವಯಸ್ಸೇ ಹೊರತು, ಕನ್ನಡ ಪರ ಮನಸ್ಸಿಗೆ, ಕಾಳಜಿಗೆ, ತಾತ್ವಿಕ ವಿಚಾರಗಳ ಹೋರಾಟಕ್ಕೆ ಇನ್ನೂ ಯೌವನ. ಇಂತಹ ಅಶ್ವತ್ಥನಾರಾಯಣ ಅವರಿಗೆ, ಆರೋಗ್ಯಭಾಗ್ಯ ಕರುಣೆಯಾಗಿ, ಅವರ ಕನ್ನಡ ಸೇವೆ ಅವಿಚ್ಛಿನ್ನವಾಗಿ ನಡೆಯುತ್ತಿರಲಿ ಎಂಬುದೇ ನಮ್ಮೆಲ್ಲರ ಹಾರೈಕೆ.

****

ನನ್ನ ಮೆಚ್ಚಿನ ಕನ್ನಡ ಅಧ್ಯಾಪಕರು

ಸುರೇಶ್ ರಾಮಚಂದ್ರ,
ಮೇರಿಲ್ಯಾಂಡ್ ಅಮೆರಿಕಾ

ಪ್ರೊ. ಜಿ. ಅಶ್ವತ್ಥನಾರಾಯಣ – ಕನ್ನಡದ ಜ್ಞಾನ ಭಂಡಾರ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ. ಕನ್ನಡಕ್ಕಾಗಿ ಹಲವಾರು ರೀತಿಯ ಸೇವೆ ಸಲ್ಲಿಸಿದ್ದಾರೆ. ಕನ್ನಡ ಪ್ರಾಧ್ಯಾಪಕರಾಗಿ, ಬರಹಗಾರರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಭಾಷಣಕಾರರಾಗಿ, ಕನ್ನಡದ ವಿಶ್ವಕೋಶವಾಗಿದ್ದಾರೆ.

ನನಗೆ ಅವರ ಪರಿಚಯವಾಗಿದ್ದು ೧೯೭೨–೭೪ ರ ಸಮಯದಲ್ಲಿ. ಆಗ ಅವರು ಬೆಂಗಳೂರು ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು. ಅಂದಿನ ದಿನಗಳಲ್ಲಿ ಕಾಲೇಜಿಗೆ ಬಂದರೂ ವಿದ್ಯರ್ಥಿ ಮಿತ್ರರು ಯಾರೂ ತರಗತಿಗಳಿಗೆ ಹಾಜರಾಗುತ್ತಿರಲಿಲ್ಲ. ಹೊರಗಡೆ ಕಟ್ಟೆಯ ಮೇಲೆ ಕುಳಿತು ಹರಟುತ್ತಿದ್ದ ಕಾಲ. ಜೊತೆಗೆ ಸರ್ಕಾರೀ ಕಾಲೇಜಿನಲ್ಲಿ ವರ್ಷಕ್ಕೆ ಮೂರು ತಿಂಗಳು ಚಳುವಳಿ ನಡೆಯುತ್ತಿದ್ದ ಕಾಲ. ಈ ವಾತಾವರಣದಲ್ಲಿ ಕನ್ನಡದ ಕ್ಲಾಸಿಗೆ ಹೋಗುತ್ತಿದ್ದುದು ಅಪರೂಪ. ಆದರೆ ಅಶ್ವತ್ಥನಾರಾಯಣ ಅವರ ತರಗತಿಯಲ್ಲಿ ಮಾತ್ರ ಹಾಜರಾತಿ ೯೦ ಭಾಗ ಇರುತ್ತಿತ್ತು. ಕಾರಣ ಅವರ ವಿಶಿಷ್ಟ ಶೈಲಿ ಹಾಗೂ ಪುಸ್ತಕದಿಂದ ಮಾತ್ರವಲ್ಲದೆ ವಿದ್ಯಾರ್ಥಿಗಳ ಮನ ಮುಟ್ಟುವ ರೀತಿಯಲ್ಲಿ ಪಾಠ ಮಾಡುತ್ತಿದ್ದರು. ಬೇರೆ ಯಾವ ತರಗತಿಗಳಿಗೂ ಅಷ್ಟು ಹಾಜರಾತಿ ಇರುತ್ತಿರಲಿಲ್ಲ.

ಹೀಗೆ ಒಂದು ದಿನ ಕ್ಲಾಸ್ ಮುಗಿದ ಮೇಲೆ ಅವರ ಜೊತೆ ಮಾತನಾಡುತ್ತಿದ್ದಾಗ ಅವರು ನಮ್ಮ ದೊಡ್ಡಣ್ಣ (ಗುರುರಾಜ) ಅವರ ಶಾಲೆಯ ದಿನಗಳಲ್ಲಿ ಅವರ ಸಹಪಾಠಿಯಾಗಿದ್ದ ವಿಷಯ ತಿಳಿಯಿತು. ಇದರಿಂದ ಅವರ ಮೇಲಿನ ಗೌರವ ಇನ್ನೂ ಹೆಚ್ಚಾಯಿತು. ಹೀಗೆ ನಮ್ಮ ಒಡನಾಟ ಹೆಚ್ಚಾದಾಗ ಒಂದು ದಿನ ಅವರೂ ನನ್ನನ್ನು ಅವರ ಮನೆಗೆ ಆಹ್ವಾನಿಸಿದರು. ಅವರ ಮನೆ ಆಗ ಆಚಾರ್ಯ ಪಾಠಶಾಲೆಯ ಹತ್ತಿರ ಇತ್ತು. ನಾನು ಅವರ ಮನೆಗೆ ಹೋದಾಗ ಅವರ ಶ್ರೀಮತಿ ಲಕ್ಷ್ಮೀದೇವಿ ಅವರ ಪರಿಚಯವಾಯಿತು. ಅವರು ಸಹ ಆಚಾರ್ಯ ಪಾಠಶಾಲೆಯಲ್ಲಿ ಕನ್ನಡ ಉಪನ್ಯಾಸಕಿಯಾಗಿದ್ದರು. ಆಗ ನಮ್ಮ ಗುರುಗಳಾಗಿದ್ದ ಅಶ್ವತ್ಥನಾರಾಯಣ ಅವರು ನನಗೆ ಅವರ ಕನ್ನಡ ಪುಸ್ತಕಗಳ ಲೈಬ್ರರಿಯನ್ನು ತೋರಿಸಿದರು. ಸುಮಾರು ಕೆಲವು ಸಾವಿರ ಪುಸ್ತಕಗಳಿಗಿಂತ ಹೆಚ್ಚು ಪುಸ್ತಕಗಳನ್ನು ನೋಡಿ ಆಶ್ಚರ್ಯ ಮತ್ತು ಗಾಬರಿಯಾಯಿತು. ನಮ್ಮ ಕಾಲೇಜಿನ ಲೈಬ್ರರಿಯಲ್ಲೂ ಅಷ್ಟು ಕನ್ನಡ ಪುಸ್ತಕಗಳಿರಲಿಲ್ಲ! ವೇದ, ಉಪನಿಷತ್, ಜೈನಧರ್ಮ, ಪುರಂದರ ದಾಸರು, ಎಲ್ಲ ವಿಷಯಗಳಲ್ಲೂ ಇದ್ದವು. ಬರಿ ಪ್ರದರ್ಶನಕ್ಕಲ್ಲದೆ ಎಲ್ಲ ಪುಸ್ತಕಗಳನ್ನು ಅಶ್ವತ್ಥನಾರಾಯಣ ಅವರು ಓದಿದ್ದರು! ಅವರನ್ನು ಕನ್ನಡದ ಜ್ಞಾನ ಭಂಡಾರ ಎಂದರೆ ಆಶ್ಚರ್ಯವಿಲ್ಲ!!

ನಾನು ೧೯೮೬ರಲ್ಲಿ ಬೆಂಗಳೂರು ಬಿಟ್ಟು ಅಮೆರಿಕ ದೇಶಕ್ಕೆ ಬಂದೆ. ಅನೇಕ ವರ್ಷಗಳು ಅವರ ವಿಷಯ ತಿಳಿಯಲಿಲ್ಲ. ಹೀಗೆಯೇ ಒಮ್ಮೆ ಭಾರತಕ್ಕೆ ಭೇಟಿ ಕೊಟ್ಟಾಗ ಒಬ್ಬ ಗೆಳೆಯರು ನನಗೆ ಪುರಂದರ ದಾಸರ ನಾಲ್ಕು ಪುಸ್ತಕಗಳನ್ನು ಕರ್ನಾಟಕ ಸರ್ಕಾರದ ಸಹಾಯದಿಂದ ಪ್ರಕಟಿಸಲಾಗಿದೆ. ಬಹಳ ಚೆನ್ನಾಗಿದೆ, ಕೊಂಡುಕೊಳ್ಳಿ ಅಂತ ಸಲಹೆ ಮಾಡಿದರು. ನಾನು ಆ ಪುಸ್ತಕಗಳನ್ನು ಕೊಂಡುಕೊಂಡೆ. ನಂತರ ಅಮೆರಿಕಕ್ಕೆ ಬಂದು ಓದಲು ಶುರು ಮಾಡಿದೆ. ಪುಸ್ತಕದ ಸಂಪಾದಕರು ಪ್ರೊಫೆಸರ್ ಎಸ್. ಕೆ. ರಾಮಚಂದ್ರರಾಯರು. ಮುನ್ನುಡಿ ಓದುತ್ತಿದ್ದಾಗ, ಅವರು ಪುಸ್ತಕದ ಯಶಸ್ಸಿಗೆ ಕಾರಣಕರ್ತರಲ್ಲಿ ಒಬ್ಬರಾದ ಅಶ್ವತ್ಥನಾರಾಯಣ ಅವರನ್ನು ಸ್ಮರಿಸಿದ್ದರು. ಅದನ್ನು ಓದಿ ನನಗೆ ಗುರುಗಳ ಬಗ್ಗೆ ಹೆಮ್ಮೆಯಾಯಿತು.

ನಾನು ಅಮೆರಿಕಕ್ಕೆ ಬಂದಾಗಿನಿಂದ ಅವರ ಸಂಪರ್ಕ ತಪ್ಪಿ ಹೋಗಿತ್ತು. ಅನೇಕ ವರ್ಷಗಳ ನಂತರ ೨೦೦೪ ರ ಸುಮಾರಿಗೆ ಒಂದು ದಿನ ಆಶ್ಚರ್ಯ ಕಾದಿತ್ತು. ಕ್ಷಮಾ ಅವರಿಂದ ದೂರವಾಣಿ ಕರೆ ಬಂದಿತ್ತು. ತಮ್ಮ ಪರಿಚಯ ಮಾಡಿಕೊಂಡ ಅವರು ನಮ್ಮ ತಂದೆ, ತಾಯಿ ಬಂದಿದ್ದಾರೆ ತಮ್ಮನ್ನು ಭೇಟಿ ಮಾಡಲು ಇಚ್ಛಿಸುತ್ತಾರೆ ಎಂದು ತಿಳಿಸಿದರು. ಅವರು ಮೇರಿಲ್ಯಾಂಡ್ ರಾಜ್ಯದ ಕೊಲಂಬಿಯಾ ನಗರದಲ್ಲಿ ವಾಸವಾಗಿದ್ದರು.

ನಾನು ಕ್ಷಮಾ ಮತ್ತು ಜಯರಾಮ್ ಅವರ ಮನೆಗೆ ಹೋಗಿ ಅವರನ್ನು ಭೇಟಿ ಮಾಡಿದೆ. ಬಹಳ ಸಂತೋಷವಾಯಿತು. ಸುಮಾರು ಇಪ್ಪತ್ತು ವರ್ಷಗಳ ನಂತರ ಅವರ ಭೇಟಿ. ಚೆನ್ನಾಗಿ ಹರಟೆ ಹೊಡೆದು ಎಲ್ಲ ವಿಷಯಗಳ ಬಗ್ಗೆ ಮಾತಾಡಿದೆವು. ನನ್ನ ನಾಸಾ ಕೆಲಸದ ಅನುಭವಗಳನ್ನು ಹಂಚಿಕೊಂಡೆ. ಅವರ ಪ್ರಶ್ನೆ ಕನ್ನಡಲ್ಲಿ ಬರೆಯುವುದು ಬಿಟ್ಟಿದ್ದೀಯ ಅಂತ ಕೇಳಿದರು. ನಾನು "ಇಲ್ಲ, ಕೆಲವು ಕವನಗಳನ್ನು ಬರೆದಿದ್ದೇನೆ" ಎಂದು ಹೇಳಿ ಬರಹಗಳನ್ನು ತಂದು ತೋರಿಸಿದೆ. ಒಂದು ದಿನ ಅವರನ್ನು ಕರೆದು ನಮ್ಮ ಮನೆಯಲ್ಲಿ ಸುಮಾರು ೫೦-೬೦ ಮಿತ್ರರೊಂದಿಗೆ ಅವರ ಭಾಷಣ ಏರ್ಪಾಡು ಮಾಡಿದ್ದೆ. ಅವರ ಪತ್ನಿ ಲಕ್ಷ್ಮೀದೇವಿ ಅವರು ಮಾತನಾಡಿದರು. ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿ ಬಂದಿತು. ಅದಾದ ನಂತರ ಹಲವು ಬಾರಿ ಭೇಟಿ ಮಾಡಿ ಹಳೆಯ ವಿಷಯಗಳು ಹಾಗು ಕನ್ನಡ ಸಾಹಿತ್ಯದ ಬಗ್ಗೆ ಮಾತನಾಡಿದೆವು.

ಅಶ್ವತ್ಥನಾರಾಯಣ ಅವರು ಸಂಚರಿಸುವ ಕನ್ನಡದ ಗ್ರಂಥ ಭಂಡಾರ. ಅವರ ಪುಸ್ತಕ ಪ್ರೇಮ, ಆಳವಾದ ಜ್ಞಾನ, ಜೈನಧರ್ಮದ ಬಗ್ಗೆ ಅವರಿಗಿರುವ ಅರಿವು, ದಾಸ ಸಾಹಿತ್ಯ, ವಚನ ಸಾಹಿತ್ಯ- ಬರೆಯುತ್ತ ಹೋದರೆ ಒಂದು ಪುಸ್ತಕವಾಗಬಹುದು. ಅವರ ಕನ್ನಡ ಪ್ರೇಮ ಹಾಗು ಸೇವೆ ಅತ್ಯಂತ ಸ್ತುತ್ಯಾರ್ಹವಾದುದ್ದು. ಇಂತಹ ಮಹನೀಯರನ್ನು ಪಡೆದ ಕನ್ನಡ ನಾಡು ಧನ್ಯ. ಇವರ ಪರಿಚಯವಾಗಿದ್ದು ಇವರಿಂದ ಕನ್ನಡ ಭಾಷಾಭಿಮಾನ ಬೆಳೆಸಿಕೊಂಡಿದ್ದು ನನ್ನ ಸೌಭಾಗ್ಯವೇ ಸರಿ.

******

ನಮ್ಮ ಕುಟುಂಬದ ಸಾಹಿತ್ಯ ಮಿತ್ರ

ಕೆ. ಆರ್. ಶ್ರೀಧರಮೂರ್ತಿ

ಕನ್ನಡ ಸಾಹಿತ್ಯದೀಪವನ್ನು ಸುಮಾರು ಆರೇಳು ದಶಕಗಳಿಂದ ನಂದಾದೀಪದಂತೆ ಬೆಳಗಿಸುತ್ತಾ, ಕನ್ನಡ ಸಾಹಿತ್ಯಕ್ಷೇತ್ರದ ಎಲ್ಲ ದಿಕ್ಕುಗಳಲ್ಲೂ ಪ್ರಖರ ಕಿರಣಗಳನ್ನು ಹರಡಿಸಿರುವ ಶ್ರೀಯುತ ಪ್ರೊ. ಅಶ್ವತ್ಥನಾರಾಯಣ ಜಿ. (ಅನಾಜಿ) ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಅರ್ಪಿಸಿ, ಅವರ ಆಶೀರ್ವಾದವನ್ನು ಈ ಮೂಲಕ ಕೋರುತ್ತಾ, ಅವರ ಬಗ್ಗೆ ನಾಲ್ಕಾರು ಸಾಲುಗಳನ್ನು ಬರೆಯುವುದು ಅತಿಸೂಕ್ತ ಎನಿಸುತ್ತದೆ.

ಒಂದು ನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆ ಆ ನಾಡಿನ ವಿವಿಧ ಕ್ಷೇತ್ರಗಳ ಪ್ರಜ್ಞಾವಂತರು, ಪಂಡಿತರು ಹಾಗೂ ಪ್ರತಿಭಾವಂತ ಬರಹಗಾರರಲ್ಲಿ ಪ್ರತಿಬಿಂಬಿತವಾಗುತ್ತಾ ಎತ್ತರೆತ್ತರಕ್ಕೆ ಬೆಳೆದು ನಿಂತಿರುತ್ತದೆ. ನಮ್ಮ ಇಂದಿನ ಸಾಹಿತ್ಯ ಲೋಕದಲ್ಲಿ ಈ ಅಭಿಪ್ರಾಯಕ್ಕೆ ಪುಷ್ಟಿಕೊಡುವಂತೆ ಸಾಹಿತ್ಯದ ವಿವಿಧ ಪ್ರಕಾರಗಳ ಅಧ್ಯಯನ, ಅವಲೋಕನ ಮತ್ತು ವಿಮರ್ಶೆಗಳಂತಹ ಅನೇಕ ಸಾಹಿತ್ಯಕೃತಿಗಳನ್ನು ಸೃಷ್ಟಿಸಿಕೊಟ್ಟಂತಹವರು ಯಾರು ಇರಬಹುದು ಎಂದು ಆಲೋಚನೆ ಮಾಡಿದಾಗ, ಗಂಭೀರ ಚಿಂತಕರೂ, ಲೇಖಕರೂ, ಸಂಪಾದಕರೂ ಮತ್ತು ಶ್ರದ್ಧಾವಂತ ಗುರುಗಳೂ ಆಗಿರುವ ಪ್ರೊ. ಅಶ್ವತ್ಥನಾರಾಯಣ ಜಿ. ಅವರ ಹೆಸರು ಥಟಕ್ಕೆಂದು ಹೊರಹೊಮ್ಮುತ್ತದೆ. ಸಾಹಿತ್ಯದ ಬಗೆಗೆ ಇರುವ ಅವರ ನಿಷ್ಠೆ ಹಾಗೂ ಅಪಾರ ಪ್ರೇಮ ಅವರ ರಕ್ತದ ಕಣ ಕಣದಲ್ಲಿಯೂ ಹರಿಯುತ್ತಿದ್ದು, ಅದು ಅವರ ದಿನಚರ್ಯೆಯಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಸಹಸ್ರಾರು ಪುಸ್ತಕಗಳ ಸಂಗ್ರಹಣೆ, ಪಠನ, ವಿಶ್ಲೇಷಣೆ ಮತ್ತು ಟಿಪ್ಪಣಿಗಳು ಅವರ ಓದಿನ ತೀವ್ರತೆ ಮತ್ತು ಸೂಕ್ಷ್ಮತೆಯನ್ನು ತೆರೆದಿಡುತ್ತವೆ. "ಓದು ಅಂದರೆ ಕೇವಲ ಕಣ್ಣು ತೇಲಿಸುವುದಲ್ಲ. ಅದು ತಪಸ್ಸಿನಂತೆ. ಏಕಾಗ್ರಚಿತ್ತದ ಸೂಕ್ಷ್ಮ ಅವಲೋಕನ. ಅರ್ಥ-ಸಾರ್ಥಕತೆಗೆ ಅವಶ್ಯಕವಾದ ಮಾರ್ಗ" ಎಂಬ ರೀತಿಯ ದೃಷ್ಟಿ ಅವರದು. ಇದು ನನ್ನ ಬಹುಕಾಲದ ಗಮನಿಕೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿರುವ ಅನಾಜಿ ಅವರು ಐದು ದಶಕಗಳಿಂದ ನಮ್ಮ ಕುಟುಂಬಕ್ಕೆ ಆಪ್ತವಾಗಿರುವವರು. ಅವರ ಬಗ್ಗೆ ಬರೆಯುವುದು ಸುಲಭವಲ್ಲ. ಏಕೆಂದರೆ ಅವರ ಕಾರ್ಯವ್ಯಾಪ್ತಿ ಅಷ್ಟು ವಿಶಾಲವಾದದ್ದು. ಏನು ಬರೆದರೂ ಅದು ಕಡಿಮೆ ಆಯಿತೇನೋ ಎಂದೆನಿಸಿಬಿಡುತ್ತದೆ.

ನಾವು ಹಾಸನದಲ್ಲಿದ್ದಾಗ ನಮ್ಮ ಅಣ್ಣ ಶ್ರೀಯುತ ನಾಗರಾಜ್ ಅವರು ಸರ್ಕಾರಿ ಕಾಲೇಜಿನಲ್ಲಿ ಭೌತಶಾಸ್ತ್ರ ವಿಭಾಗದ ಉಪನ್ಯಾಸಕರಾಗಿದ್ದಾಗ, ಅನಾಜಿ ಅವರು ಕನ್ನಡ ಉಪನ್ಯಾಸಕರು. ಅವರುಗಳ

ಮಿತ್ರತ್ವ ಆಪ್ತವಾದಾಗ ನಮ್ಮ ಕುಟುಂಬಕ್ಕೆ ಬಹಳ ಹತ್ತಿರವಾದರು. ಅವರ ಉತ್ತೇಜನದಿಂದ ನಮ್ಮ ತಾಯಿ ಶ್ರೀಮತಿ ವಾಗೀಶ್ವರಿ ಶಾಸ್ತ್ರಿ ಅವರು ಅಪರೂಪದ "ಹೃದಯಸಂಪುಟ - ಸಂಪ್ರದಾಯ ಹಾಡುಗಳು" ಎಂಬ ಬೃಹತ್ ಗ್ರಂಥ ಸಂಪಾದಿಸಿ ಬಿಡುಗಡೆ ಮಾಡಲು ಸಾಧ್ಯವಾಯಿತು. ನಮ್ಮ "ವಾಗ್ದೇವಿ ಕಲಾನಿಕೇತನ" ಸಂಸ್ಥೆಯ ಅನೇಕ ಸಂಗೀತ ಮತ್ತು ಸಾಹಿತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಷ್ಟೇ ಅಲ್ಲದೆ, ಸ್ಫೂರ್ತಿ-ಉತ್ಸಾಹಗಳನ್ನು ತುಂಬುತ್ತಾ ಉತ್ತಮ ಸಲಹೆಗಳನ್ನು ನೀಡುತ್ತಿದ್ದರು.

ಮುಂದೆ, ಸಾಹಿತ್ಯಕ್ಷೇತ್ರದಲ್ಲಿ ಆಸಕ್ತಿ ಇದ್ದ ನಾನು ಕವನಗಳನ್ನು ರಚಿಸಿ ಅವರ ಮುಂದೆ ಇಟ್ಟಾಗ, ರಚನೆಗಳ ಪ್ರೌಢಿಮೆ, ಅರ್ಥ, ಭಾವ, ಅಲಂಕಾರಗಳ ಚೌಕಟ್ಟನ್ನು ಮೆಚ್ಚಿ, ಹಲವೆಡೆ ತಿದ್ದಲು ಸಹಕರಿಸಿ, ಇದು ಮುದ್ರಣವಾಗಲಿ ಎಂದು ಹಾರೈಸಿದರು. "ಖೇಚರ ವಿಹಾರ" ಎಂಬ ಆ ಸಂಕಲನಕ್ಕೆ ಮುನ್ನುಡಿ ಬರೆದುಕೊಡುವುದಷ್ಟೇ ಅಲ್ಲದೆ, ಅದರ ಬಿಡುಗಡೆಯನ್ನೂ ಮಾಡಿದ್ದರು. ಹಾಡಲು ಯೋಗ್ಯವಿರುವ ರಚನೆಗಳನ್ನು ಆ ಸಂದರ್ಭದಲ್ಲಿ ಶ್ರೀಮತಿ ಗೀತಾ ಬಾಲಸುಬ್ರಹ್ಮಣ್ಯ (ನನ್ನ ತಂಗಿ, ಸುಗಮ ಸಂಗೀತ ಕಲಾವಿದೆ) ಹಾಡಲಿ ಎಂಬ ಸಲಹೆ ನೀಡಿ, ಆ ಕಾರ್ಯಕ್ರಮ ಇಮ್ಮಡಿ ಯಶಸ್ವಿಯಾಗುವಂತೆ ಮಾಡಿದ್ದರು. ಅವರ ಉತ್ತೇಜನದಿಂದಲೇ ಮುಂದೆ ಇನ್ನೂ ಎರಡು ಕವನ ಸಂಕಲನಗಳು ಹೊರಬಂದವು. ಹಲವಾರು ಕತೆಗಳು ಮತ್ತು ಎರಡು ಕಾದಂಬರಿಗಳು ಧಾರಾವಾಹಿಯಂತೆ ತರಂಗದಲ್ಲಿ ಪ್ರಕಟಗೊಂಡವು. ನನ್ನ ಸಾಹಿತ್ಯಕ್ಷೇತ್ರದ ಬೆಳವಣಿಗೆಗೆ ಅವರ ಔಚಿತ್ಯಪೂರ್ಣ ಮಾರ್ಗದರ್ಶನವೇ ಕಾರಣ.

ಅನಾಜಿ ಅವರು ಅತ್ಯುತ್ತಮ ಮಾರ್ಗದರ್ಶಕರು. ನನ್ನಂತೆಯೇ ಬೆಳಕಿಗೆ ಬರಲಿಚ್ಛಿಸಿದ ಅನೇಕ ಕಿರಿಯ ಸಾಹಿತ್ಯಾಸಕ್ತರು ಅಥವಾ ಸಾಹಿತ್ಯಕರ್ಮಿಗಳಿಗೆ ಕ್ರಿಯಾಶೀಲತೆ, ಸೃಜನಶೀಲತೆಯ ಸೂಕ್ಷ್ಮಗಳನ್ನು ತಿಳಿಸಿಕೊಡುತ್ತಾ ವಿಶೇಷ ಸಲಹೆಗಳನ್ನು ನೀಡಿದಂತಹವರು.

ಇನ್ನು ಅನಾಜಿ ಅವರು ಒಬ್ಬ ಅತ್ಯುತ್ತಮ ವಾಗ್ಮಿ ಎಂದು ಹೇಳಲು ಅನುಮಾನವೇ ಇಲ್ಲ. ನಿರರ್ಗಳ ಮಾತಿನಿಂದ ವೈಶಿಷ್ಟ್ಯಪೂರ್ಣ, ಸ್ವಾರಸ್ಯಕರ ವಾಕ್ಯೋಕ್ತಿಗಳು ಮತ್ತು ತಮಾಷೆಯ ಚಟಾಕಿಗಳನ್ನು ಹಾರಿಸುತ್ತಾ ಭಾಷಣಕ್ಕೆ ನಿಂತರೆಂದರೆ ಸಾಕು, ನೆರೆದವರಿಗೆ ರಸದೂಟ! ಕೇಳುಗರಿಗೆ ಚಮತ್ಕಾರದ ಮಾತುಗಳ ಭಾಷಣಗಳೇ ಒಂದು ಆಕರ್ಷಣೆ!

ಅನಾಜಿ ಅವರ ಪರಿಶ್ರಮದಿಂದ ಜನ್ಮ ತಳೆದದ್ದು ಹಲವಾರು ಶ್ರೇಷ್ಠ ಸಾಹಿತ್ಯಕೃತಿಗಳು. ಅವು ಸಾಹಿತ್ಯಾವಲೋಕನಕ್ಕೆ ನಿರ್ಮಿಸಿದ ಸೇತುವೆಗಳಂತೆ. ಪ್ರಬಂಧ, ವಿಮರ್ಶೆ, ಸಂಶೋಧನಾ ಲೇಖನ, ಸಂಪಾದಕೀಯ, ಪ್ರಸ್ತಾವನೆ – ಈ ರೀತಿಯ – ಬರಹ ಅಥವಾ ಲೇಖನ ಯಾವುದೇ ರೂಪ ತಳೆದರೂ, ಅದನ್ನು ಜ್ಞಾನ, ಶ್ರದ್ಧೆ, ಪ್ರಾಮಾಣಿಕತೆ ಮತ್ತು ಸರಿಶ್ರಮಗಳಿಂದ ಶೋಧಿಸಿ ಸಿದ್ಧಪಡಿಸಿಕೊಟ್ಟ ಸಾಧಕರು. ಜೈನಸಾಹಿತ್ಯ, ದಾಸಸಾಹಿತ್ಯ, ವಚನ ಸಾಹಿತ್ಯ, ಪೌರಾಣಿಕ ಇತ್ಯಾದಿ ಪ್ರಕಾರಗಳಲ್ಲಿ ಕಳೆದ ಅನೇಕ ದಶಕಗಳ ಅವಧಿಯಲ್ಲಿ ಅವರು ರಚಿಸಿದ, ಸಂಪಾದಿಸಿದ ಕೃತಿಗಳೆಲ್ಲ ಬಹಳ ಮೌಲ್ಯಯುತವಾಗಿ ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಉತ್ಕೃಷ್ಟ ಕೊಡುಗೆಯಾಗಿರುವುದು ನಮ್ಮೆಲ್ಲರ ಭಾಗ್ಯ.

ಮಹೋನ್ನತ ಪಾಂಡಿತ್ಯ, ಸಮರ್ಥ ಬೋಧನಾ ನೈಪುಣ್ಯ, ಸಂಪಾದಕತ್ವ, ಮಾರ್ಗದರ್ಶನ ಮತ್ತು ಭಾಷಣಗಳ ಮೋಹಕತೆಗಳೊಂದಿಗೆ ಬೆಳಗುತ್ತಿರುವ ಸ್ಫೂರ್ತಿಚೇತನ ಶ್ರೀಯುತ ಪ್ರೊ. ಅನಾಜಿ ಅವರಿಗೆ ಈ ಅಭಿನಂದನಾ ಗ್ರಂಥದ ಮೂಲಕ ಕೃತಜ್ಞತಾಪೂರ್ವಕವಾಗಿ ನಮ್ಮೆಲ್ಲರ ಗೌರವವನ್ನು ಸಲ್ಲಿಸೋಣ.

****

ಸಕಲ ಜನರ ಸ್ನೇಹ ಸೇತುವೆ

ಡಿ. ನಂ. ವೆಂಕಟರಮಣಯ್ಯ

ಅಶ್ವತ್ಥ ವೃಕ್ಷ ವಿಶೇಷವಾದ ಪೂಜ್ಯವಾದ ಪ್ರತಿಷ್ಠಿತ ಮರ ಎಂದು ನೀವೆಲ್ಲ ಬಲ್ಲಿರಿ. ಅಶ್ವತ್ಥ ವೃಕ್ಷವನ್ನು ಯಾರೂ ಬೀಜ ಬಿತ್ತಿ ನೀರುಣಿಸಿದವರಿಲ್ಲ. ಗಾಳಿ ಬೀಸಿಯೋ ಪಕ್ಷಿಗಳ ಮೂಲಕವೋ ಭೂಮಿಗೆ ಬೀಜ ಬಿದ್ದು ಸಸಿಯಾಗಿ ಮೇಲೆ ಏಳುತ್ತದೆ. ಅಷ್ಟೇಕೆ ಗೋಪುರಗಳ ಮೇಲೆ ಗೋಡೆಗಳ ಬಿರುಕಿನಲ್ಲೂ ಸಸಿ ಮೂಡುತ್ತದೆ. ಅರಳಿಮರದ ನೆರಳು ಅರ್ಥಾತ್ ಅಶ್ವತ್ಥವೃಕ್ಷದ ಆಶ್ರಯ ಪ್ರಯಾಣಿಕರು ಸುಧಾರಿಸಿಕೊಳ್ಳಲು, ಮರದಲ್ಲಿ ಪಕ್ಷಿಗಳು ವಾಸಿಸಲು ಮರದ ಬುಡದಲ್ಲಿ ಪಶು ಪ್ರಾಣಿಗಳು ವಿಶ್ರಮಿಸಿಕೊಳ್ಳಲು ನಿಲ್ದಾಣವಾಗಿರುತ್ತದೆ. ಹಳ್ಳಿಗಳಲ್ಲಿ ಹರಟೆಕಟ್ಟೆ ಪಂಚಾಯಿತಿ ಸಭೆಗಳ ಸಭಾಭವನ ಎಂದರೆ ಅರಳಿಕಟ್ಟೆ ಅರ್ಥಾತ್ ಅಶ್ವತ್ಥವೃಕ್ಷ.

ಇಷ್ಟೆಲ್ಲಾ ಮಾತುಗಳನ್ನು ಏಕೆ ಹೇಳಲು ಹೊರಟೆ ಎಂದರೆ ಅಶ್ವತ್ಥವೃಕ್ಷವಿದ್ದಂತೆ ಅಶ್ವತ್ಥನಾರಾಯಣ ಎಂಬ ಪದದಲ್ಲಿ ಅಶ್ವತ್ಥ ಮಾತಿಗೆ ವಿಶಿಷ್ಟ ಅರ್ಥ ವಿಶೇಷವಿದ್ದು ವಿಶಾಲ ಅರ್ಥವೂ ಇದೆ. ಅಶ್ವತ್ಥನಾರಾಯಣ ಅವರು ಅಶ್ವತ್ಥ ವೃಕ್ಷದಂತೆ ಕಿರಿಯರಿಗೆ ಮಾರ್ಗದರ್ಶಿಗಳು, ಹಿರಿಯರಿಗೆ ಆಪ್ತರು. ಸಮಾನ ಮನಸ್ಕರಿಗೆ ಹತ್ತಿರದವರು ಆಗಿದ್ದಾರೆ. ಹೊಸ ಸಾಹಿತ್ಯಾಭಿಮಾನಿಗಳಿಗೆ ಪ್ರೋತ್ಸಾಹಕರು. ತಾನು ಬೆಳೆದುದಕ್ಕಿಂತ ಕಿರಿಯ ವಿದ್ಯಾರ್ಥಿಗಳು ಬೆಳೆಯಬೇಕು ಎಂಬುದು ಅವರ ಧ್ಯೇಯ.

'ಸಕಲ ಜನರ ಸ್ನೇಹದ ತೋಟ' ಅವರು ಆದ್ದರಿಂದಲೇ ಕನ್ನಡ ಭಾಷೆ, ಸಾಹಿತ್ಯಕ್ಕೆ ಸೇವೆ ಸಲ್ಲಿಸುವವರು. ಆಸಕ್ತಿ ತಳೆದವರು ಯಾರೇ ಆಗಿರಲಿ ಅವರನ್ನು ಕಂಡರೆ ಸ್ನೇಹ ಗಳಿಸುತ್ತಾರೆ, ಪ್ರೋತ್ಸಾಹಿಸುತ್ತಾರೆ. ನಲಿವಿನಿಂದ ವರ್ತಿಸುತ್ತಾರೆ ಅವರ ಸಾಧನೆಗಳನ್ನು ಮೆಚ್ಚಿಕೊಳ್ಳುತ್ತಾರೆ. ಹಾಗಾಗಿ ಅವರಿಗೆ ಕವಿಗಳು, ಸಾಹಿತಿಗಳು, ಕಲಾವಿದರು, ಕಾರ್ಯಕರ್ತರು ಶಿಕ್ಷಣ ತಜ್ಞರು ವಿದ್ವಾಂಸರು ಇವರೆಲ್ಲರ ಪರಿಚಯ ಇವರಿಗಿದೆ. ವಿಶೇಷವಾಗಿ ಸಾಹಿತಿಗಳ ಬಗ್ಗೆ ವಿದ್ವಾಂಸರ ಬಗ್ಗೆ ಎಷ್ಟೊಂದು ಅಭಿಮಾನ ಆಸಕ್ತಿ ಗೌರವಗಳಿವೆ ಎಂದರೆ ಅವರೆಲ್ಲರ ಬಗ್ಗೆ ಸೊಗಸಾದ ವ್ಯಕ್ತಿಚಿತ್ರಗಳನ್ನು ಬರೆದಿದ್ದರು. ಕನ್ನಡ ಸಾಹಿತ್ಯ ದಿಗ್ಗಜರಲ್ಲಿ ೧೯ನೇ ಶತಮಾನದ ಸಾಹಿತಿಗಳ ಬಗ್ಗೆ ಅಧ್ಯಯನದ ಬಲದಿಂದ ಲೇಖನಗಳನ್ನು ಬರೆದರೆ ತಾವು ಕಂಡ ೨೦ನೇ ಶತಮಾನದ ಪ್ರಸಿದ್ಧ ಪ್ರತಿಭಾವಂತ ಲೇಖಕರೊಡನೆ ಸವಿನೆನಪುಗಳನ್ನು 'ನಾ ಕಂಡ ಸಾಹಿತಿಗಳ ಸವಿ ನೆನಪುಗಳು ನಿಮಗೆ ರಸಪ್ರಸಂಗಗಳು'' ಕೃತಿಯಲ್ಲಿ ಸಮಕಾಲೀನ ಸಾಹಿತಿಗಳ ಬಗ್ಗೆ ಬರೆದಿದ್ದಾರೆ.

ಅಶ್ವತ್ಥ ನಾರಾಯಣ ಅವರು ಲೇಖಕರಿಗೆ ಸೇವೆ ಸಲ್ಲಿಸಿದಂತೆಯೇ ಸಂಘ ಸಂಸ್ಥೆಗಳಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಗಾನಕಲಾ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಕರ್ನಾಟಕ ಮಕ್ಕಳ ಕೂಟ, ಗಮಕ ಕಲಾ ಪರಿಷತ್ತು ಮುಂತಾದ ಕಡೆಗಳಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದಾರೆ.

ನಮ್ಮ ಸಂಸ್ಥೆ ಮೈಸೂರು ಪೌರ ಮತ್ತು ಸಾಮಾಜಿಕ ಪ್ರಗತಿ ಸಂಸ್ಥೆ (೧೯೧೬ ಸ್ಥಾಪನೆ) ಮತ್ತು ಲೋಕಮಾನ್ಯ ಸಂಸ್ಥೆ (ಸ್ಥಾಪನೆ ೧೯೪೬) ಲೋಕಮಾನ್ಯ ಸಂಸ್ಥೆ (೧೯೪೬) ಮುಂತಾದ ಸಂಸ್ಥೆಗಳಲ್ಲಿ ಉಪನ್ಯಾಸಕರಾಗಿ ಅನೇಕ ಬಾರಿ ಪಾಲ್ಗೊಂಡಿದ್ದಾರೆ.

ಅನಾಜಿ ಅವರ ಅಧ್ಯಯನ ಪ್ರೇಮ-ಕನ್ನಡ ಪುಸ್ತಕಾಭಿಮಾನ ಅಪಾರ. ಮನೆಯಿಂದ ಹೊರಗೆ ಹೊರಟರೆ ಎಡಕ್ಕೆ ಭುಜದ ಮೇಲೆ ಎಡಬಿಡದೆ ಬಗಲು ಚೀಲ ಇರುತ್ತದೆ. ಹರಿದಾಸರಿಗೆ ಜೋಳಿಗೆ ಇದ್ದಂತೆ. ಆ ಚೀಲದ ತುಂಬ ಸದಾ ತುಂಬಿರುವುದೇನು ತಿಳಿದಿರುವಿರಾ? ಪುಸ್ತಕಗಳು (ಸ್ವಂತ ಅಧ್ಯಯನದ್ದು ಇಲ್ಲವೇ ಕೊಂಡಿದ್ದು ಅಥವಾ ಎರವಲು ತಂದಿದ್ದು) ಇದ್ದೇ ಇರುತ್ತದೆ. ಖಾಲಿ ಬಗಲು ಚೀಲ ಎಂದೂ ಖಾಲಿ ಇರದು.

ಕೊಂಡ, ಕಾಣಿಕೆಯಾಗಿ ಬಂದ ಪುಸ್ತಕಗಳಿಗೆ ರಟ್ಟು ಹಾಕಿ ಕ್ರಮಸಂಖ್ಯೆ ಕೊಟ್ಟು ವಿಷಯವನ್ನು ದಾಖಲಿಸಿ ದಿನಾಂಕದೊಡನೆ ಓದುವುದು ಅನಾಜಿ ಗ್ರಂಥ ಸಂಗ್ರಹ ಸೀಲು ಹಾಕಿ ಪುಸ್ತಕಪಟ್ಟಿಯಲ್ಲಿ ದಾಖಲಿಸುತ್ತಾರೆ. ಓದಿದಾಗ ಅಲ್ಲಲ್ಲೇ ಟಿಪ್ಪಣಿ ಮಾಡುತ್ತಾರೆ. ಚೆನ್ನಾಗಿದ್ದ ಪುಸ್ತಕಗಳನ್ನು ಇತರರಿಗೆ ಹೇಳುತ್ತಾರೆ.

ಇವರ ಸಹಧರ್ಮಿಣಿ ಎಂ. ಆರ್. ಲಕ್ಷ್ಮೀದೇವಿ ಎ.ಪಿ.ಎಸ್. ಕಾಲೇಜಿನಲ್ಲಿ ಇವರಂತೆ ಕನ್ನಡ ಅಧ್ಯಾಪಕರು ಲೇಖನಗಳನ್ನು ಬರೆದಿದ್ದಾರೆ. ಗಲಗಲಿ ಅವ್ವ, ಲಕ್ಷ್ಮೀಶ ಇತ್ಯಾದಿ ಹತ್ತಾರು ಪುಸ್ತಕಗಳನ್ನು ಬರೆದಿದ್ದಾರೆ. ಮನೆಗೆ ಬಂದವರಿಗೆ ಆತಿಥ್ಯ ನೀಡುವುದರಲ್ಲಿ ಬಲು ಖುಷಿ ಇವರಿಗೆ. ಅಶ್ವತ್ಥ ನಾರಾಯಣ ಅವರು ಬರೆದಿರುವ ಲೇಖನ, ಸಂಪಾದಿಸಿರುವ ಪುಸ್ತಕಗಳ ಮೊದಲ ಓದುಗರು, ವಿಮರ್ಶಕರು ಲಕ್ಷ್ಮೀದೇವಿ ಅವರೇ ಆಗಿದ್ದಾರೆ. ಈ ದಂಪತಿಗಳಿಗೆ ದ್ವೇಷ, ಕೋಪ, ಅಸೂಯೆ ಇತ್ಯಾದಿ ಏನೂ ಇಲ್ಲ. ಎಲ್ಲಲ್ಲೂ ಕ್ಷೇಮ ವಿಚಾರಿಸುವವರು ಉದಾರ ಭಾವದಿಂದ. ವರ್ತಿಸುವರು ಹಾಗಾಗಿ ಇವರ ಏಕೈಕ ಮಗಳಿಗೆ ಇಟ್ಟ ಹೆಸರು 'ಕ್ಷಮಾ'. ಮನೆಯ ಹೆಸರೂ 'ಕ್ಷಮಾ ಮನೆ'. ಅಮೆರಿಕೆಯಲ್ಲಿ ಉದ್ಯೋಗಿಯಾಗಿರುವ ಕ್ಷಮಾ ಸಾಹಿತ್ಯದಲ್ಲಿ ಆಸಕ್ತಿ. ಡಾಕ್ಟರೇಟ್ ಪಡೆದಿರುವ ವಿಜ್ಞಾನಿ.

ಅಶ್ವತ್ಥ ನಾರಾಯಣ ಅವರ ಮನೆ ಸರಸ್ವತೀಸದನ. ಮನೆಯಲ್ಲಿ ಎಲ್ಲೆಂದರಲ್ಲಿ ಅಚ್ಚುಕಟ್ಟಾಗಿ ಜೋಡಿಸಿರುವುದು ಕಾಣುತ್ತದೆ. ಅತ್ಯಂತ ಹಳೆಯದಾದ ಪುಸ್ತಕಗಳು, ಇತ್ತೀಚೆಗೆ ಬಂದಿರುವ ಹೊಸ ಪುಸ್ತಕಗಳು ಇವರಲ್ಲಿವೆ. ಅನಾಜಿ ಗ್ರಂಥ ಸಂಗ್ರಹದ ಪ್ರಯೋಜನವನ್ನು ಚಿದಾನಂದಮೂರ್ತಿ ಅವರಿಂದ ಮೊದಲ್ಗೊಂಡು ಶಾಲಾ ಅಧ್ಯಾಪಕರವರೆಗೆ ಎಲ್ಲರೂ ಪಡೆದಿದ್ದಾರೆ. ಸಾಹಿತ್ಯ ಸಂಶೋಧಕರಿಗೆ ಆಕರಗ್ರಂಥಗಳ ಲಭ್ಯ ಕೇಂದ್ರ.

ನಾಡಿನಲ್ಲೆಲ್ಲಾ ಸಂಚರಿಸಿ ಸಾಹಿತ್ಯದ ಎಲ್ಲ ವಿಷಯಗಳ ಬಗ್ಗೆ ಅಧ್ಯಯನ ಮಾಡಿ ಆಳವಾಗಿ ಮಾಹಿತಿ ಪೂರ್ಣವಾಗಿ ಕೇಳುವವರು ಆನಂದಿಸುವಂಥ ವಾಗ್ಮಿಗಳು ಇವರು. ಸಕಾಲಕ್ಕೆ ಸಭೆಗಳಿಗೆ ಆಗಮಿಸುವ ಅಧ್ಯಯನ ಮಾಡಿ ಮಾತಾಡುವ ಇವರನ್ನು ಕಂಡರೆ ಸಂಘ ಸಂಸ್ಥೆಗಳಿಗೆ ಜನಾದರಣೀಯ ವ್ಯಕ್ತಿ ಆಗಿದ್ದಾರೆ. ಈ ಭಾಷಣ ಕಲೆ ಅ.ನ.ಕೃ., ಜಿ.ಪಿ. ರಾಜರತ್ನಂ, ಗೊರೂರು, ಬೀಚಿ, ಬೇಂದ್ರೆ, ತಿ.ತಾ. ಶರ್ಮ, ವಿ.ಸೀ. ಮುಂತಾದ ವಿದ್ವಾಂಸರ ಸಾಹಿತಿಗಳ ಉಪನ್ಯಾಸಗಳನ್ನು ಎಡಬಿಡದೆ ಕೇಳಿದ್ದರ ಫಲ ಎನ್ನುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಶಾಲಾ ದಿನಗಳಿಂದಲೂ ಹೋಗುತ್ತಿರುವ ಅಲ್ಲಿಯ ಎಲ್ಲಾ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವ ಕಾರಣ ಸಾಹಿತಿಗಳಿಗೆ ಪರಿಚಿತರಾಗಿದ್ದಾರೆ.

ಗೌರವ ಕಾರ್ಯದರ್ಶಿಗಳಾಗಿ, ಪರಿಷತ್ತಿನ ೧೦೦ ವರ್ಷದ ಇತಿಹಾಸದ ಬೃಹದ್‌ಗ್ರಂಥ ರಚಿಸಿದ್ದಾರೆ. ಈಗಿನ ಯುವಜನರಲ್ಲಿ ಕನ್ನಡ ಸಾಹಿತ್ಯದ ಹಿರಿಮೆಯನ್ನು ಪರಿಚಯಿಸುವುದರಲ್ಲಿ ನಿಷ್ಣಾತರಾಗಿದ್ದಾರೆ.

ಅನಕೃ ಅವರು ಅಶ್ವತ್ಥ ನಾರಾಯಣರಿಗೆ ಗುರುಸಾಗರ ಅನಕೃ-ರಾಮಮೂರ್ತಿ ಚಳವಳಿಯಲ್ಲಿ ಭಾಗವಹಿಸಿದವರು. ಅವರೊಡನೆ ಎಲ್ಲೆಡೆ ಕನ್ನಡ ನಾಡು-ನುಡಿಗಳ ಬಗ್ಗೆ ಉಪನ್ಯಾಸ ನೀಡಿದ್ದಾರೆ. ಕನ್ನಡ ನಾಡಿನ ಸಾಹಿತಿ ವಿದ್ವಾಂಸರ ಗ್ರಂಥಗಳನ್ನು ಓದಿ ಭಾಷಣಗಳನ್ನು ಕೇಳಿ ಪ್ರಭಾವಿತರಾದ ಇವರು ಮೆಕಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ ಮಾಡಿದ ಮೇಲೆ ಕೆಲಸಕ್ಕೆ ಹೋಗದೆ ಪಿಯುಸಿಯಿಂದ ಡಿಗ್ರಿ ಮುಗಿಸಿ ಕನ್ನಡ ಅಧ್ಯಾಪಕ ಆಗಲೇಬೇಕೆಂದು ಕನ್ನಡ ಎಂ.ಎ. ಮಾಡಲು ಸಮಾಜಶಾಸ್ತ್ರ ಎಂ.ಎ. ಮಾಡಿದವರು. ದಿಟ್ಟರು ಇವರು.

ಮಕ್ಕಳ ಚಟುವಟಿಕೆಗಳಲ್ಲಿ ಮಕ್ಕಳ ಕೂಟದಲ್ಲಿ ಸ್ಥಾಪಕಿ ಆರ್. ಕಲ್ಯಾಣಮ್ಮನವರ ಜತೆ ಬಾಲಜಗತ್ ಎಂಬ ಮಕ್ಕಳ ಸಾಹಿತ್ಯದ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಮಕ್ಕಳ ಸಾಹಿತ್ಯ ಸಮ್ಮೇಳನ ನಡೆಸಲು ನೆರವಾಗಿದ್ದಾರೆ.

ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಅಲ್ಲಿ ಡಿ. ಪದ್ಮನಾಭ ಶರ್ಮರೆಂಬ ಕನ್ನಡ ಅಧ್ಯಾಪಕರು ಇವರ ಸಾಹಿತ್ಯ ಚಟುವಟಿಕೆಗಳಿಗೆ ಪ್ರೋತ್ಸಾಹವಿತ್ತರು. ಚರ್ಚಾಕೂಟಗಳಲ್ಲಿ ಇವರು ಬಹುಮಾನ ಗಳಿಸಿದರು. ಜೈನ ಸಾಹಿತ್ಯವನ್ನು ಓದಲು ಶುರು ಮಾಡಿದರು. ೨೫೦೦ನೇ ಮಹಾವೀರ ಜಯಂತಿ ಕಾಲದಲ್ಲಿ ನಾಡಿನಾದ್ಯಂತ ಸಂಚರಿಸಿ ಮಹಾವೀರನನ್ನು ಕುರಿತು ಅದ್ಭುತವಾಗಿ ಭಾಷಣಗಳನ್ನು ಮಾಡಿದರು. ಜಗತ್ತಿನಲ್ಲೇ ವಿಶಿಷ್ಟವೆನಿಸಿದ ಎಲ್ಲಪ್ಪಶಾಸ್ತ್ರಿ, ಕರ್ಲಮಂಗಲಂ ಶ್ರೀಕಂಠಯ್ಯ, ಕೆ. ನಾಗರಾಜ್ ಈ ಮೂವರ ಪರಿಶ್ರಮದ ಫಲವಾಗಿ ಬೆಳಕಿಗೆ ಬಂದ ಸಿರಿಭೂವಲಯ ಗ್ರಂಥಕ್ಕೆ ಸೇವೆ ಸಲ್ಲಿಸಿದ್ದಾರೆ.

ಕರುಣಾ ಹೃದಯಿ ಅಧ್ಯಾತ್ಮಪ್ರೇಮಿ, ಸ್ನೇಹಜೀವಿ ಪುಸ್ತಕಾಭಿಮಾನಿ ಕನ್ನಡ ಅಧ್ಯಾಪಕ ಪುಸ್ತಕ ಸಂಗ್ರಹಕಾರ ಜ್ಞಾನವಿತರಕ ದೇಶಸಂಚಾರಿ ಆಗಿರುವ ಅಶ್ವತ್ಥ ನಾರಾಯಣ ಅವರಿಗೆ ಸಾಹಿತ್ಯ ಪರಿಚಾರಕನೆಂಬ ಗೌರವ ಗ್ರಂಥವನ್ನು ಅರ್ಪಿಸುತ್ತಿರುವುದು ನನಗೆ ಬಹಳ ಸಂತೋಷ ತಂದಿದೆ.

****

ಕೃತಿ ಸಮೀಕ್ಷೆ

ಕರಡಚ್ಚು ತಿದ್ದುವಿಕೆ ಮತ್ತು ಕನ್ನಡ ಭಾಷೆ

ಪ್ರಣತಾರ್ಥಿ ಹರನ್ ಬಿ.ಎಸ್.
ಚರವಾಣಿ : ೯೧೮೦೩೨೯೬೯೬

ವರಕವಿ ಬೇಂದ್ರೆಯವರು ದಶಕಗಳ ಹಿಂದೆ 'ಕನ್ನಡವನ್ನು ಬಳಸಿ, ಉಳಿಸಿ, ಬೆಳೆಸಿ' ಎಂದು ಕರೆಕೊಟ್ಟಿದ್ದರು. ಆ ನುಡಿಯನ್ನು ಇಂದು ಹೆಚ್ಚುಹೆಚ್ಚು ಪ್ರಚಾರ ಮಾಡಲಾಗುತ್ತಿದೆ. ಕನ್ನಡಕ್ಕೆ ಒದಗಬಹುದಾದ ಅಪಾಯವನ್ನು ವರಕವಿಯು ಎಂದೋ ಊಹಿಸಿದ್ದರು; ಇಂದು ಆ ಅಪಾಯವು ಕಾಣಿಸಿಕೊಂಡಿದೆ ಮತ್ತು ದಿನದಿನಕ್ಕೆ ಹೆಚ್ಚುತ್ತಿದೆ.

ಇಂಥ ಅಪಾಯದ ಕಾಲದಲ್ಲಿಯೇ ಆಡಳಿತ ಕನ್ನಡ, ವ್ಯವಹಾರ ಕನ್ನಡ, ವಾಣಿಜ್ಯ ಕನ್ನಡ, ವಿಜ್ಞಾನ ಕನ್ನಡ ಎಂಬ ಒತ್ತುಕೊಟ್ಟು ಭಾಷೆಯನ್ನು ಬಲಗೊಳಿಸಲಾಗುತ್ತಿದೆ. ಇವುಗಳ ಸಾಲಿಗೆ ಸೇರಿರುವ ಇನ್ನೊಂದು ಕ್ಷೇತ್ರ ಕರಡಚ್ಚು ತಿದ್ದುವ ಬಗೆಗಿನದು, ಒಂದು ಕಡೆ ಕನ್ನಡವು ಬಳಕೆಯಿಂದ ತಪ್ಪಿಹೋಗುತ್ತಿರುವುದೂ ನಿಜ; ಇನ್ನೊಂದು ಮಗ್ಗುಲಿನಲ್ಲಿ ಕನ್ನಡ ಭಾಷೆಯು ದೃಢವಾದ ಅಚ್ಚುಕಟ್ಟು ಪಡೆಯುತ್ತಿರುವುದೂ ಕಾಣುತ್ತಿದೆ.

ಕರಡಚ್ಚು ತಿದ್ದುವುದು ಒಂದು ಶಾಸ್ತ್ರ, ಆಡಳಿತ ಕನ್ನಡಕ್ಕೆ ಸಂಬಂಧಿಸಿದಂತೆ ತರಬೇತಿ ಶಿಬಿರಗಳು ನಡೆಯುತ್ತವೆ. ವಿಜ್ಞಾನ ಲೇಖನಗಳನ್ನು ಬರೆಯುವ ಕಾರ್ಯಾಗಾರಗಳು ನಡೆಯುತ್ತವೆ. ಕರಡಚ್ಚು ತಿದ್ದುವುದೂ ಸೇರಿದಂತೆ ಪ್ರಾಯೋಗಿಕ ಕನ್ನಡಕ್ಕಾಗಿಯೇ ಪಾಠವನ್ನು ರೂಪಿಸಿ ಎಂ.ಎ. ಪದವೀಧರರನ್ನು ಸಿದ್ಧಪಡಿಸಬೇಕಾದುದು ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಅಗತ್ಯ

ಒಮ್ಮೆ ದೇಜಗೌ ಅವರಲ್ಲಿ ಕೇಳಿದೆ, 'ಎಲ್ಲ ಸ್ನಾತಕೋತ್ತರ ಕೇಂದ್ರಗಳೂ, ವಿಶ್ವವಿದ್ಯಾಲಯಗಳೂ ಕುಟ್ಟಿದ್ದನ್ನೇ ಕುಟ್ಟುತ್ತಿರುತ್ತವೆ. ಹೊಸತನ್ನೇಕೆ ಮಾಡವು?' ತಕ್ಷಣ ಉದ್ಗರಿಸಿದರು. 'ಕಷ್ಟಪಟ್ಟು ತಯಾರಿ ಮಾಡಿಕೊಳ್ಳಬೇಕಾಗುತ್ತದಲ್ಲ!' ಕಷ್ಟಪಟ್ಟು ಹೊಸ ಸಾಧನೆಗಳನ್ನು ಮಾಡಿ ಕನ್ನಡಭಾಷೆಗೂ ಸಾಹಿತ್ಯಕ್ಕೂ ಹೊಸ ಆಯಾಮವನ್ನು ಕಲ್ಪಿಸುವವರು ಮತ್ತು ತೇಜಸ್ಸನ್ನು ತುಂಬುವವರು ನಮ್ಮ ನಡುವೆಯೇ ಇದ್ದಾರೆ. ಅಂಥ ಅಪರೂಪದ ವಿದ್ವಾಂಸರಲ್ಲಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರೂ ಸೇರಿದ್ದಾರೆ.

ಪುಸ್ತಕಸೃಷ್ಟಿಯೇ ಬೇರೆ, ಪರಿಷ್ಕಾರವೇ ಬೇರೆ; ಆದರೆ ಎರಡೂ ಸೃಜನಶೀಲ ಕ್ರಿಯೆಗಳೇ. ಯಾವುದು ಹೆಚ್ಚು ಪ್ರಾಧಾನ್ಯದ್ದು? ಪುಸ್ತಕವೇ ಸೃಷ್ಟಿಯಾಗದಿದ್ದರೆ ಪರಿಷ್ಕಾರದ ಮಾತಿಲ್ಲ, ಪರಿಷ್ಕಾರವಾಗದಿದ್ದರೆ ಪುಸ್ತಕವು ಪೂರ್ಣವಾಗುವುದಿಲ್ಲ. ಅರ್ಥಪೂರ್ಣವಾಗುವುದಿಲ್ಲ ಎಂದೇ ಹೇಳಬೇಕು.

ಗ್ರಂಥಕರ್ತನಿಗೆ ಪರಿಷ್ಕಾರದ ಸ್ವಲ್ಪವಾದರೂ ಜ್ಞಾನವಿರಬೇಕಾದುದು ಅಗತ್ಯ. ಪರಿಷ್ಕಾರ ಮಾಡುವವನಿಗೆ ಸಾಹಿತ್ಯದ ಅಂತರಂಗದ ಸಂಸ್ಕಾರ ಇರಬೇಕಾದುದೂ ಅಗತ್ಯ. ಪರಿಷ್ಕಾರ ನಿಪುಣನು

ಮೂಲಗ್ರಂಥವನ್ನೇ ಸೃಷ್ಟಿಸುವ ಶಕ್ತನಲ್ಲದಿರಬಹುದು, ಆದರೆ ಮೂಲಗ್ರಂಥದ ಸೊಗಸನ್ನು ಹೆಚ್ಚಿಸಿ ದೋಷವನ್ನು ತೊಡೆಯುವ ಅವನ ಕೈಯಾಡಿಕೆ ಕಡಿಮೆ ಮಹತ್ತ್ವದ್ದಲ್ಲ. ಮೂಲಗ್ರಂಥಕರ್ತನು ಪರಿಷ್ಕಾರ ನಿಪುಣನೂ ಆಗಿರುವ ಸ್ವಾರಸ್ಯಕರ ನಿದರ್ಶನಗಳನ್ನು ಪ್ರೊ. ಅನಾಜಿ ತಮ್ಮ ಕೃತಿಯಲ್ಲಿ ಕಾಣಿಸಿದ್ದಾರೆ.

'ಪರಿಷ್ಕಾರ' ಎನ್ನುವುದರಲ್ಲಿ 'ಕರಡಚ್ಚು ತಿದ್ದುವಿಕೆಯೂ ಸೇರಿದೆ. ಕರಡಚ್ಚು ತಿದ್ದುವ ಕಲೆಯ ಎಲ್ಲೆಯರಿಯದ ವ್ಯಾಪ್ತಿ ಮತ್ತು ಸೂಕ್ಷ್ಮತೆಯ ವಲಯಕ್ಕೇ ಪರಿಷ್ಕಾರ' ಎನ್ನುವುದು. ಕೇವಲ ಅಲ್ಪವಿರಾಮ, ಅರ್ಧವಿರಾಮ, ಭಾವಸೂಚಕ ಚಿಹ್ನೆಗಳ ಸೂಕ್ತತೆಯನ್ನು ನಿರ್ಣಯಿಸಲೂ ಔಚಿತ್ಯಪ್ರಜ್ಞೆ ಬೇಕು. ಆ ಪ್ರಜ್ಞೆ ಸಿದ್ಧಿಸಲು ಸಾಹಿತ್ಯದ ಗರಡಿಯಲ್ಲಿ ನುರಿಯಬೇಕು.

ಅಕ್ಷರಮಾಲೆಯ ಸರಿಯಾದ ಅರಿವಿನಿಂದ ತೊಡಗಿ ವ್ಯಾಕರಣ ಛಂದಸ್ಸುಗಳಲ್ಲಿ ಹಾದು ವಿವಿಧ ಭಾಷೆಗಳು ಮತ್ತು ಜ್ಞಾನಕ್ಷೇತ್ರಗಳಲ್ಲಿ ಪರಿಶ್ರಮ ಇರಬೇಕಾದುದು ಪರಿಷ್ಕಾರಕ್ಕೆ ಬೇಕಾದ ಕನಿಷ್ಠ ಸಿದ್ಧತೆ. ಜತೆಗೆ ವಿವಿಧ ಕೋಶಗಳು ಮತ್ತು ಅವುಗಳನ್ನು ಬಳಸುವ ಚಾತುರ್ಯ! 'ಪಠ್ಯಪುಸ್ತಕಕಾರರು', 'ಓದುಗ–ವಿಮರ್ಶಕರು' ಪುಸ್ತಕ ಪರಿಷ್ಕರಣಕ್ಕೆ ದೊರೆತರೆ ಅಂಥ ಗ್ರಂಥಕರ್ತನು ಪುಣ್ಯವಂತನೇ ಸರಿ.

ಗ್ರಂಥಕರ್ತನು ತನ್ನ ಗ್ರಂಥದ ಆಶಯ, ಓಟದ ಎಳೆ, ಮಿಡಿತ, ಶಬ್ದಸಂಗೀತವನ್ನು ಉಳಿಸಿಕೊಳ್ಳುವಷ್ಟು ಜಾಗೃತನಾಗಿರಬೇಕು. ಜತೆಗೆ ಪರಿಷ್ಕಾರಕರ್ತನಿಗೆ ಶರಣಾಗಲೂಬೇಕು.

ಪ್ರೊ. ಅನಾಜಿ ಅವರು ಸಿದ್ಧಪಡಿಸಿರುವ ಈ ಕೃತಿ ಎಂಟು ಪರಿಚ್ಛೇದಗಳಲ್ಲಿ ಇವನ್ನೆಲ್ಲಾ ಬಿಡಿಸಿಟ್ಟಿದೆ. ಅವರು ಕನ್ನಡ ಪ್ರಾಧ್ಯಾಪಕರಾಗಿ ದಶಕಗಳ ಕಾಲ ಪದವಿ ವಿದ್ಯಾರ್ಥಿಗಳಿಗೆ ಕನ್ನಡವನ್ನು ಕಲಿಸಿರುವವರು. ಸಾವಿರಾರು ಗ್ರಂಥಗಳ ಭಂಡಾರವನ್ನು ಮನೆಯಲ್ಲೇ ರೂಪಿಸಿ, ಬೇಕೆಂದಾಗ ಅವನ್ನು ಹೆಕ್ಕಿ ತೆಗೆದು ಬಳಸಬಹುದಾದಷ್ಟು ಶಿಸ್ತುಗಾರ, ಪುಸ್ತಕಪ್ರೇಮಿ, ಓದಾಳಿ, ಅವರ ನೆನಪಿನ ಶಕ್ತಿಯೂ ಅಗಾಧವಾದುದು. ಎಂಬತ್ತರ ಹರಯದಲ್ಲೂ ಕ್ರಿಯಾಶೀಲ, ಉಪನ್ಯಾಸ, ಗೋಷ್ಠಿ, ಬಾನುಲಿ ದೂರದರ್ಶನಗಳಲ್ಲಿ ಪ್ರಸಾರ, ಕಾರ್ಯಕ್ರಮಗಳ ಯೋಜನೆ ಮತ್ತು ನಿರ್ವಹಣೆ, ಹೀಗೆ ಅವರದು ವೈವಿಧ್ಯಪೂರ್ಣವೂ ವ್ಯಾಪಕವೂ ಆದ ಕಾರ್ಯಕ್ಷೇತ್ರ. ಎಲ್ಲಕ್ಕಿಂತ ಅತಿಶಯವಾದುದು ಇನ್ನೊಬ್ಬರನ್ನು ಬೆಳೆಸಿ ಆನಂದಪಡುವ ಉದಾರಬುದ್ಧಿ. ಈ ಗುಣಸಮುಚ್ಚಯದ ಪಕ್ವನೆಲೆಯಲ್ಲಿ ನಿಂತು ಅವರು ಈ ಕೃತಿಯನ್ನು ಸಿದ್ಧಪಡಿಸಿದ್ದಾರೆ.

*****

ಸರ್ವ ಕಾಲಕ್ಕೂ ಪ್ರಸ್ತುತವಾದ ಆಕರ ಗ್ರಂಥ

ಸುಬ್ಬಲಕ್ಷ್ಮಿ ಎಚ್. ಕೆ.
ಮೊಬೈಲ್ : ೯೪೪೯೯೭೭೪೧೨೩

ಎಲ್ಲಾ ವೃತ್ತಿಗಳಂತೆಯೇ ಕರಡಚ್ಚು ತಿದ್ದುವಿಕೆಯೂ ಒಂದು ವೃತ್ತಿ ಆಗಿದೆ. ಆದರೆ ಇದರಲ್ಲಿ ಆಸಕ್ತಿ, ಶ್ರದ್ಧೆ, ನೈಪುಣ್ಯತೆ ಗಳಿಸಿಕೊಳ್ಳಬೇಕಾದರೆ ಕರಡಚ್ಚು ಪ್ರತಿ ತಿದ್ದುವವರು ಅದರಲ್ಲಿ ವೃತ್ತಿ ಕೌಶಲ ಗಳಿಸಿಕೊಳ್ಳಬೇಕಾಗಿದೆ, ಅದಕ್ಕೆ ತರಬೇತಿಯೂ ಬೇಕು. ಅದಕ್ಕಾಗಿ ಇಂತಹ ಮಾರ್ಗದರ್ಶನ ಕೃತಿಗಳು ಅತೀ ಅವಶ್ಯ.

ಇಂದು ಸಾಕಷ್ಟು ಪುಸ್ತಕಗಳು ಹೊರಬರುತ್ತಿವೆ. ಆದರೆ ಮುದ್ರಣ ದೋಷಗಳಿಲ್ಲದ ಪುಸ್ತಕಗಳು ಕಡಿಮೆ. ಕಾರಣ ಕರಡಚ್ಚು ದೋಷಗಳನ್ನು ತಿದ್ದುವಿಕೆಯಲ್ಲಿ ಸಾಕಷ್ಟು ನಿಪುಣರು ಇರುವುದಿಲ್ಲ.

ಆ ಕೌಶಲ ಕಡಿಮೆಯಾಗುತ್ತಿರುವುದು ದುರಂತದ ವಿಷಯ. ನಾನು ಮಾಡಿದ್ದೇ ಸರಿಯೆಂಬ ಧೋರಣೆಯೂ ಇದಕ್ಕೆ ಕಾರಣವಾಗುತ್ತವೆ. ಆದರೆ ಹಂತ ಹಂತವಾಗಿ ನಿಖರವಾಗಿ ಕರಡಚ್ಚು ಪ್ರತಿಗಳನ್ನು ತಿದ್ದಬೇಕಾದರೆ ಅದರ ಬಗ್ಗೆ ಮಾರ್ಗದರ್ಶನ ಖಂಡಿತ ಅಗತ್ಯ. ಅಂತಹಾ ಮಾರ್ಗದರ್ಶನದ ಕೊರತೆ ಇರುವ ಕಾಲದಲ್ಲಿ ಬಂದಿರುವ ಅತ್ಯಂತ ಉಪಯುಕ್ತವಾದ ಪುಸ್ತಕ ಇದಾಗಿದೆ.

ಕರಡಚ್ಚು ಪ್ರತಿ, ಕರಡೋಲೆಯೋದುಗ, ಕರಡೋಲೆ ಇದೆಲ್ಲ ಪದಗಳೇ ಇಂದು ಆಶ್ಚರ್ಯಕರವಾದ ಪದಗಳೇನೋ ಎಂಬಷ್ಟು ಬಳಕೆಯಲ್ಲಿ ಕಡಿಮೆಯಾಗುತ್ತಿದೆ. ಬರೆಯುವುದೂ ಕಡಿಮೆಯಾಗುತ್ತಿದೆ. ಸೀದಾ ಕಂಪ್ಯೂಟರಿನಲ್ಲಿ ಟೈಪಿಸುವುದು ಎನ್ನುವುದು ಹೆಮ್ಮೆಯ ಸಂಗತಿಯಾಗುತ್ತಿದೆ. ಆದರೆ ಶುದ್ಧ ಕೈ ಬರಹದ ಕೃತಿಗಳೇ ಮುಖ್ಯವಾಗಿ ಬೇಕಾಗಿರುವುದು.

ಕಂಪ್ಯೂಟರಿನಿಂದ ಸೀದಾ ಮುದ್ರಣಕ್ಕೆ ಹೋಗುತ್ತಿರುವುದೇ ಹೆಚ್ಚಾಗುತ್ತಿದ್ದು ದೋಷಗಳು ದೋಷಗಳಾಗಿಯೇ ಉಳಿದುಬಿಡುತ್ತಿವೆ. ದೌರ್ಭಾಗ್ಯವೆಂದರೆ ಆ ದೋಷಗಳನ್ನು ಪ್ರಕಾಶಕರಾಗಲೀ, ಸಂಪಾದಕರಾಗಲೀ, ಮುದ್ರಕರಾಗಲಿ, ಲೇಖಕರಾಗಲೀ ದೋಷಗಳೆಂದು ಪರಿಗಣಿಸುವುದೇ ಇಲ್ಲ. ಹಾಗೆಯೇ ಸ್ವೀಕರಿಸಿಬಿಡುತ್ತಾರೆ! ಈಗ ಹೆಚ್ಚಾಗಿ ಆಗುತ್ತಿರುವುದು ಇದೇ ರೀತಿ.

ಕರಡಚ್ಚು ಪ್ರತಿಗಳನ್ನು ತಿದ್ದುವಲ್ಲಿ ಇರುವಂತಹ ಕ್ಲಿಷ್ಟತೆಗಳು, ಮಿತಿಗಳು, ಸಮಯದ ಕೊರತೆ, ಲೇಖಕರ ಧೋರಣೆ, ಸಾಹಿತ್ಯದ ಗಂಧ ಗಾಳಿ ಇಲ್ಲದೇ ಕೇವಲ ಯಂತ್ರಗಳಲ್ಲಿನ ಕುಶಲತೆ–ಹೀಗೆ ಎಲ್ಲಾ ಕೋನಗಳನ್ನೂ ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಉದಾಹರಣೆಗಳೊಂದಿಗೆ ಕೊಡಲಾಗಿದೆ. ನಿಜವಾಗಿಯೂ ಇದು ಅತ್ಯಂತ ಕುತೂಹಲದ ವಿಷಯ. ಆಕರ್ಷಕವಾಗಿದೆ. ಆಸಕ್ತಿ ಬೆಳೆಸಿಕೊಳ್ಳುವವರಿಗೆ

ಮೂಲ ಆಕರವಾಗಿದೆ. ಆ ದೃಷ್ಟಿಯಿಂದ ಈ ಪುಸ್ತಕ ಇನ್ನೂ ಬೇಗನೇ ಬರಬೇಕಿತ್ತು. ಈಗಲಾದರೂ ಬಂದಿದೆಯೆಲ್ಲಾ ಅದೇ ಸಮಾಧಾನ.

ಇನ್ನೊಂದು ವಿಷಾದದ ಸಂಗತಿಯೆಂದರೆ ಈಗಿನ ಕಾಲದ ಬಹುತೇಕ ಮಂದಿಗೆ ಹಳಗನ್ನಡದ ಗ್ರಂಥಗಳಾಗಲೀ, ಶಾಸ್ತ್ರ, ವ್ಯಾಕರಣ, ಜ್ಯೋತಿಷ್ಯ, ಮಂತ್ರ ಇತ್ಯಾದಿಗಳ ಬಗ್ಗೆಯಾಗಲೀ ಪರಿವೇ ಇಲ್ಲ. ಅದು ಬೇಕಾಗಿಯೂ ಇಲ್ಲ ಎಂಬ ಧೋರಣೆ ಅವರದಾಗಿದೆ.

ಹೀಗಾಗಿ ಇವುಗಳ ಉಪಯೋಗ, ಅವಶ್ಯಕತೆಗಳ ಅರಿವು ಈಗ ಅಲ್ಲದಿದ್ದರೂ ಮುಂದೆ ಎಂದಾದರೊಮ್ಮೆ ಬೇಕೇ ಬೇಕು ಎನ್ನಿಸುವುದೂ ಉಂಟು. ಆದರೆ ಅಂತಹ ಉತ್ತಮ ಗ್ರಂಥಗಳು ಹೊರಬರಬೇಕಾದರೆ ಕರಡಚ್ಚು ಪ್ರತಿ ತಿದ್ದುವಿಕೆಯ ತಜ್ಞರೂ ಅತಿ ಅವಶ್ಯವೆಂಬುದು ತಿಳಿದಿರಬೇಕು. ಆ ತಜ್ಞರಿಗೆ ಸದಾಕಾಲ ದಾರಿದೀವಿಗೆಯಾಗುವಲ್ಲಿ ಈ ಕೃತಿ ಸಾರ್ಥಕವಾಗಿದೆ.

ಈ ಪುಸ್ತಕದಲ್ಲಿ ಒಟ್ಟು ೮ ಅಧ್ಯಾಯಗಳಲ್ಲಿ ವಿವರವಾಗಿ ಕರಡಚ್ಚುಪ್ರತಿ ದೋಷಗಳನ್ನು, ವಹಿಸಬೇಕಾದ ಜಾಗರೂಕತೆಗಳನ್ನು ತಿಳಿದಿರಬೇಕಾದ ಸಾಹಿತ್ಯಿಕ ಅಂಶಗಳನ್ನು ವಿವಿಧ, ಗ್ರಂಥಗಳ, ಲೇಖಕರ ಬಗ್ಗೆ ವಿಸ್ತಾರವಾಗಿ ವಿವೇಚಿಸಿದ್ದಾರೆ. ಓದುತ್ತ ಹೋದಂತೆ ನಮಗನಿಸುತ್ತದೆ-ಈ ಕೃತಿಯ ರಚನೆ ಮಾಡುವಲ್ಲಿ ಅದೆಷ್ಟೊಂದು ಆಕರ ಗ್ರಂಥಗಳನ್ನು ನೋಡಲಾಗಿದೆ, ಸೂಕ್ತ ಉದಾಹರಣೆಗಳನ್ನು ಕೊಡಲಾಗಿದೆ, ಅವುಗಳನ್ನು ವ್ಯವಸ್ಥಿತವಾಗಿ ಆಯ್ಕೆ ಮಾಡಿ ಜೋಡಿಸಿಡಲಾಗಿದೆಯೆಂದರೆ ರಚನಾಕಾರರ ಬುದ್ಧಿಮತ್ತೆಗೆ ಎಷ್ಟು ತಲೆಬಾಗಿ ನಮಿಸಿದರೂ ಸಾಲದು!

ವ್ಯಾವಹಾರಿಕ ಪ್ರಪಂಚದಲ್ಲಿನ ಎಲ್ಲಾ ವಿಷಯಗಳಲ್ಲೂ ನಾವು ಬಳಸುವ ಭಾಷೆ, ಸಂಕೇತಾಕ್ಷರಗಳು, ಕಾಲಸೂಚಿಗಳು, ಸುತ್ತ ಕಾಣುವ ಹಲವಾರು ಚಿನ್ಹೆಗಳು, ಗುರುತುಗಳು ಒಂದೆರಡಲ್ಲ, ಹತ್ತು ಹಲವು ಸಂಗತಿಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಹೀಗಾಗಿ ಕೇವಲ ಭಾಷೆಗೆ ಮಾತ್ರ ಸೀಮಿತವಾಗದೇ ಅಥವಾ ಸಾಹಿತ್ಯಿಕ ಗ್ರಂಥಗಳಿಗೆ/ಶಾಸ್ತ್ರ ಗ್ರಂಥಗಳಿಗೆ ಮಿತಿಯಾಗದೇ ಜೀವನಕ್ಕೆ ಬೇಕಾದ ಸಕಲ ವಿಷಯಗಳಲ್ಲಿಯೂ ದೋಷ ರಹಿತವಾದ, ಶುದ್ಧವಾದ, ಸ್ಪಷ್ಟವಾದ ಗ್ರಂಥಗಳನ್ನು ಹೊರತರುವಲ್ಲಿ ಈ ಕರಡಚ್ಚುಪ್ರತಿ ತಿದ್ದುವಿಕೆ ತುಂಬಾ ಅಮೂಲ್ಯವಾಗಿದೆ.

ಈ ಪುಸ್ತಕವನ್ನು ಇತ್ತೀಚಿನ ಲೇಖಕರು, ಮುದ್ರಕರು, ಕಂಪ್ಯೂಟರ್ ಲಿಪಿಕಾರರು, ಪ್ರಕಾಶಕರು ಒಮ್ಮೆಯಾದರೂ ಕಣ್ಣಾಡಿಸಿದ್ದಲ್ಲಿ ಇದರ ಅಗತ್ಯತೆ ಅವರಿಗೇ ಅರ್ಥವಾಗುತ್ತದೆ.

ಒಟ್ಟಿನಲ್ಲಿ ಕೃತಿಯು ಒಂದು ಅರ್ಥದಲ್ಲಿ ವಿಶ್ವಕೋಶದಂತಿದೆ. ಕೊನೆಗೆ ಕೊಟ್ಟಿರುವ ಸೂಚೀಗ್ರಂಥಗಳ ಪಟ್ಟಿ ಉಪಯುಕ್ತವಾಗಿದೆ. ಕೆಲವು ಉದಾಹರಣೆಗಳು ತೆಳುಹಾಸ್ಯದ ಲೇಪನದಿಂದಾಗಿ ಮನಸೆಳೆದರೆ ಮತ್ತೆ ಕೆಲವು ಚಿಂತನೆಗೆ ಹಚ್ಚುವಷ್ಟು ಗಂಭೀರವಾಗಿದೆ.

ಉದಾಹರಣೆಗೆ ವಿಶ್ವೇಶ್ವರಯ್ಯನವರ "ಚುಕ್ಕಿ ಮಾಯವಾಗಿದೆ" ಪ್ರಸಂಗ. ಹೇಳುತ್ತಾ ಹೋದರೆ ಪುಟಗಳು ಸಾಲವು. ಪುಸ್ತಕವನ್ನೇ ಕೈಯಲ್ಲಿ ಹಿಡಿದಾಗ ಮಾತ್ರವೇ ಅದರ ಬಾಹ್ಯ ತೂಕಕ್ಕಿಂತ ಆಂತರಿಕ ತೂಕ, ಮೌಲ್ಯಗಳ ಅರಿವಾಗುತ್ತದೆ.

*****

ಕನ್ನಡ ಸಾಹಿತ್ಯ ಪರಿಷತ್ತು-೧೦೦

ಶಾ. ಮಂ. ಕೃಷ್ಣರಾವ್,
ಚರವಾಣಿ : ೭೦೧೯೪೩೩೩೭೪

೧೯೧೫ ರಲ್ಲಿ ಆರಂಭವಾದ ಕನ್ನಡ ಸಾಹಿತ್ಯ ಪರಿಷತ್ತು ಮುಂದೆ ಮುಂದೆ ಹೆಜ್ಜೆ ಹಾಕುತ್ತಿದೆ. ಒಂದು ಸಂಸ್ಥೆ ನೂರು ವರ್ಷ ಬದುಕಿದೆ ಎಂಬುದೊಂದು ಸೋಜಿಗ. ಅದೂ ಕನ್ನಡ ಸಂಸ್ಥೆ? ಹಿರಿಯ ಕನ್ನಡಿಗರು, ಉದಾರಿಗಳು, ಕನ್ನಡ ಪ್ರೇಮಿಗಳು ಇದನ್ನು ಬದುಕಿಸಿದ್ದಾರೆ. ಈ ನೂರು ವರುಷಗಳು ಎಷ್ಟು ಜನ ಬಂದು ಹೋದರು, ಎಷ್ಟೊಂದು ಘಟನೆಗಳು ನಡೆದವು. ಏನೇನು ಸ್ಥಿತ್ಯಂತರಗಳಾದವು. ಅದು ಬೆಳೆದು ಬಂದ ಬಗೆಯನ್ನು ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಕೂಲಂಕಷ ಅಧ್ಯಯನ ಮಾಡಿ ಒಂದು ಉಪಯುಕ್ತ ಗ್ರಂಥ ರಚಿಸಿಕೊಟ್ಟಿದ್ದಾರೆ.

ಇಂದು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿಗಷ್ಟೇ ಸೀಮಿತವಾಗಿಲ್ಲ. ಅದರ ಶಾಖೆಗಳು ಜಿಲ್ಲೆ, ತಾಲ್ಲೂಕುಗಳಿಗೂ ಪಸರಿಸಿವೆ. ಸಾಂಸ್ಕೃತಿಕ ಸಂಸ್ಥೆಯಾಗಿ ಕನ್ನಡಿಗರ ಆಶೋತ್ತರಗಳನ್ನು ಬಿಂಬಿಸುವ ಏಕೈಕ ಸಂಸ್ಥೆಯಾಗಿ ಬೆಳೆದು ನಿಂತಿದೆ. ಒಂದು ಕಾಲದಲ್ಲಿ ವಿದ್ವನ್ಮಣಿಗಳ ಕೂಟವಾಗಿದ್ದ ಈ ಸಂಘಟನೆ ಜಿಲ್ಲಾ, ತಾಲ್ಲೂಕು ಕೇಂದ್ರಗಳಿಗೂ ಪಸರಿಸಿ ಸ್ಥಳೀಯ ಕನ್ನಡಿಗರ ಧ್ವನಿಯಾಗಿ, ಅಭಿವ್ಯಕ್ತಿಯ ವೇದಿಕೆಯಾಗಿ ನಿಂತಿದೆ. ಸಾಹಿತ್ಯದ ಸಂವಾದಗಳು, ಸಮ್ಮೇಳನ, ಪ್ರಕಟಣೆ, ಸಂಶೋಧನೆಯ ತವರುಮನೆಯಾಗಿ ಬೆಳೆಯುತ್ತಿರುವ ಇಂದಿನ ದಿನಗಳಲ್ಲಿ ಹಿಂದಿನ ದಿನಗಳ ನೆನಪು ಮರೆಯದಂತೆ ಮಾಡಲು ಈ ಬೃಹದ್ಗ್ರಂಥ ರೂಪುಗೊಂಡಿದೆ.

೧/೪ ಕಿರೀಟ ಆಕಾರದ ಒಟ್ಟು ೬೦೮ ಪುಟಗಳಲ್ಲಿ ೧) **ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ.** ಪರಿಷತ್ತಿನ ನಿಬಂಧನೆಗಳು, ಪರಿಷತ್ತಿನ ಕಟ್ಟಡಗಳು, ಪರಿಷತ್ತಿನ ದತ್ತಿ ನಿಧಿಗಳು ಮತ್ತು ಶಾಶ್ವತನಿಧಿಗಳು, ಸಮ್ಮೇಳನಾಧ್ಯಕ್ಷರ ಭಾಷಣಗಳಲ್ಲಿ ಪರಿಷತ್ತು, ವಾರ್ಷಿಕಾಧಿವೇಶನ ವರದಿಗಳಲ್ಲಿ ಪರಿಷತ್ತು, ಪರಿಷತ್ತಿನ ಪ್ರಕಟಣೆಗಳು, ಏಕೀಕರಣ ಚಳುವಳಿ, ಪರಿಷತ್ತಿನ ಅಧ್ಯಕ್ಷರುಗಳ ಜೀವನ ಸಾಧನೆಗಳು ಎಂಬ ಹತ್ತು ಅಧ್ಯಾಯಗಳಿವೆ.

ಸಾಹಿತ್ಯ ಪರಿಷತ್ತಿನ ವಿವರಗಳು ನೂರು ವರ್ಷಗಳಲ್ಲಿ ನಾಡಿನ ಪತ್ರಿಕೆಗಳಲ್ಲಿ ಚದುರಿಬಿದ್ದಿವೆ. ನೂರಾರು ಗ್ರಂಥಗಳಲ್ಲಿ ಅಲ್ಲಲ್ಲಿ ಪರಿಷತ್ತಿನ ಕುರಿತ ಲೇಖನಗಳಿವೆ. ಪರಿಷತ್ತಿನಲ್ಲಿ ದುಡಿದ ಮಹನೀಯರ ಅನಿಸಿಕೆಗಳು ಬರೆದಿಡದೆ ಇತಿಹಾಸದ ಸಾತತ್ಯ ನಷ್ಟವುಂಟು ಮಾಡಿದೆ. ಜಿಲ್ಲಾ ಕೇಂದ್ರಗಳಲ್ಲೂ ಆ ಕಾಲದ ಚಟುವಟಿಕೆಗಳ ನಿಖರವಾದ ಮಾಹಿತಿ ಲಭ್ಯವಿಲ್ಲ. ಕೆಲವು ಸ್ಮರಣ ಸಂಚಿಕೆಗಳೂ ಇತರ ದಾಖಲೆಗಳೂ ಲಭ್ಯವಿಲ್ಲ. ಕೇಂದ್ರ ಕಚೇರಿಯಲ್ಲಿಯೇ ಪರಿಷತ್ ಪತ್ರಿಕೆ ಕನ್ನಡ ನುಡಿಯ ಎಲ್ಲ ಸಂಚಿಕೆಗಳೂ ಲಭ್ಯವಿಲ್ಲ. ಅದನ್ನು ಶಾಶ್ವತವಾಗಿ ಕಾದಿಡುವ ಪ್ರಯತ್ನಗಳೂ ಆಗಿಲ್ಲ. ಅಚ್ಚುಕೂಟದಲ್ಲಿ ನಿಘಂಟಿನ ಪ್ರಕಟಣ ವಿಭಾಗದಲ್ಲಿ, ಪರಿಷತ್ತಿನ ಕಚೇರಿಯಲ್ಲಿ ದುಡಿದವರು ಈಗಿಲ್ಲ. ಹಿಂದಿನ

ಘಟನೆಗಳನ್ನು ಹೇಳುವವರೂ ಇಲ್ಲ. ಇಂಥ ಬಿಕ್ಕಟ್ಟಿನ ಸ್ಥಿತಿಯಲ್ಲಿ ಪರಿಷತ್ತಿನ ಸಮಗ್ರ ಇತಿಹಾಸವನ್ನು ದಾಖಲಿಸುವುದು ಒಂದು ಮಹಾ ಸಾಹಸವೇ ಎನ್ನಬಹುದು.

ಶತಮಾನೋತ್ಸವ ಸಂಭ್ರಮವನ್ನು ಆಚರಿಸುವ ಭಾಗ್ಯ ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪುಂಡಲೀಕ ಹಾಲಂಬಿಯವರಿಗೆ ಒದಗಿ ಬಂತು. ಶತಮಾನೋತ್ಸವದ ಅಂಗವಾಗಿ ಒಂದು ವರ್ಷ ಆಚರಣೆಯಲ್ಲಿ ಹಲವಾರು ಐತಿಹಾಸಿಕ ಯೋಜನಾಂತರ್ಗತವಾಗಿ ಈ ಗ್ರಂಥ ಹೊರಬಂದಿದೆ.

ಕನ್ನಡ ಉಳಿಸಿ-ಬೆಳೆಸುವ ಮಹತ್ಕಾರ್ಯಗಳಲ್ಲಿ ಅನೇಕ ವಿದ್ವಾಂಸರು ದುಡಿದಿದ್ದಾರೆ. ಅವರು ಬೇರೆ-ಬೇರೆ ಸಮಿತಿಯಲ್ಲಿದ್ದು ಕೆಲಸ ಮಾಡಿದವರು. ಅವುಗಳ ದಾಖಲೆ ಸಂಗ್ರಹಿಸುವುದು ಕಠಿಣ.

ಕನ್ನಡ ಸಾಹಿತ್ಯ ಪರಿಷತ್ತು ಇದುವರೆಗೆ ಸುಮಾರು ೧೫೦೦ ಪ್ರಕಟಣೆಗಳನ್ನು ಹೊರತಂದಿದೆ. ಅವುಗಳಲ್ಲಿ ಕೆಲವು ಈಗ ನೋಡಲೂ ಸಿಗುವುದಿಲ್ಲ. ಅದರಲ್ಲಿ ಕಲೆ, ಸಾಹಿತ್ಯ, ವಿಜ್ಞಾನಕ್ಕೆ ಸಂಬಂಧಿಸಿದ ಮಹತ್ವಪೂರ್ಣ ಗ್ರಂಥಗಳೂ ಇವೆ.

ಕನ್ನಡ ಸಾಹಿತ್ಯ ಪರಿಷತ್ತು ಏಕೆ ಸ್ಥಾಪನೆಯಾಯಿತು? ಹೇಗೆ ಸ್ಥಾಪನೆಯಾಯಿತು ಎಂದು ಹೇಳುತ್ತ ಬ್ರಿಟಿಷರು ಟಿಪ್ಪುವನ್ನು ಸೋಲಿಸಿ ಮೈಸೂರು ರಾಜ್ಯವನ್ನು ವಶಪಡಿಸಿಕೊಂಡ ಮೇಲೆ ೧೮೮೧ ರಲ್ಲಿ ಚಾಮರಾಜೇಂದ್ರ ಒಡೆಯರ್ ಪಟ್ಟಕ್ಕೆ ಬಂದರು. ಆಗಿನಿಂದ ದಿವಾನರ ಆಡಳಿತ ಪ್ರಾರಂಭವಾಯಿತು. ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್, ಸರ್.ಎಂ. ವಿಶ್ವೇಶ್ವರಯ್ಯನವರು ೧೯೧೨ ರಲ್ಲಿ ದಿವಾನರಾದರು. ಅವರ ಅಧಿಕಾರಾವಧಿ ೧೯೧೨ ರಿಂದ ೧೯೧೮ರವರೆಗೆ ಆರು ವರ್ಷಗಳು. ಈ ಮುಂಚೆ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನಕ್ಕೆ ಚೀಫ್ ಇಂಜಿನಿಯರರಾಗಿ ೧೯೦೯ ರಲ್ಲಿ ನೇಮಕಗೊಂಡಿದ್ದರು. ಅನಂತರ ಮೈಸೂರು ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ೧೯೧೧ ರಲ್ಲಿ ಮೈಸೂರು ಸಂಪದಭಿವೃದ್ಧಿ ಸಮಾಜ (ಮೈಸೂರು ಇಕನಾಮಿಕ್ಸ್ ಕಾನ್ಫರೆನ್ಸ್) ಎಂಬ ಸಂಸ್ಥೆಯನ್ನು ಸ್ಥಾಪಿಸಲು ಮಹಾರಾಜರಿಗೆ ಸಲಹೆ ಕೊಟ್ಟಾಗ ಮಹಾರಾಜರು ಅದನ್ನೊಪ್ಪಿದ್ದರು. ಅದಕ್ಕನುಸಾರವಾಗಿ ಆ ಸಂಸ್ಥೆಯ ಅಂಗವಾಗಿ ಮೂರು ಸಮಿತಿಗಳು ಏರ್ಪಟ್ಟವು.

ಅದರಲ್ಲಿಯ ವಿದ್ಯಾಸಮಿತಿ ಎರಡು ಮುಖ್ಯ ಯೋಜನೆಗಳನ್ನು ರೂಪಿಸಿತು.

೧. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ

೨. ಕನ್ನಡ ಅಕಾಡೆಮಿ ಅಥವಾ ಇಂದಿನ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆ.

ಪರಿಷತ್ತಿನ ಸ್ಥಾಪನೆಯಾದದ್ದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಎದುರುಗಡೆಯಿರುವ ಈಗಿನ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು ಕಟ್ಟಡದ ನಡುವಣ ಸಭಾಮಂದಿರದಲ್ಲಿ (ಜ್ಞಾಪಕ ಚಿತ್ರ ಶಾಲೆ- ಪು-೫೭ ಡಿವಿಜಿ).

ಈ ಸಮಾರಂಭಕ್ಕೆ ಕರ್ನಾಟಕದ ವಿವಿಧ ಭಾಗಗಳಿಂದ ಗಣ್ಯರು ಆಗಮಿಸಿದ್ದರು, ಮ। ರಾ। ರಾಜಮಂತ್ರಪ್ರವೀಣ ಎಚ್. ವಿ. ನಂಜುಂಡಯ್ಯನವರು ಪ್ರಥಮ ಸಮ್ಮೇಳನದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು. ಆದರೆ ಅವರ ಅಧ್ಯಕ್ಷೀಯ ಭಾಷಣ, ಮಾತ್ರ ಇಂಗ್ಲಿಷಿನಲ್ಲಿತ್ತು, ಇಂಥ ಸ್ವಾರಸ್ಯಕರ ಸೂಕ್ಷ್ಮ ವಿವರಗಳು ಈ ಗ್ರಂಥದಲ್ಲಿವೆ.

ಬೆಂಗಳೂರಿನಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ಮಾಡಿದ ಪ್ರಯತ್ನಗಳೂ ಎಚ್.ವಿ. ನಂಜುಂಡಯ್ಯ, ಬೆಳ್ಳಾವೆ ವೆಂಕಟನಾರಾಯಣಪ್ಪ ಕರ್ಪೂರ ಶ್ರೀನಿವಾಸರಾವ್, ಅಚ್ಯುತರಾವ್,

ಬಹದ್ದೂರ್ ಶಾಮರಾವ್, ರಾ.ಹ. ದೇಶಪಾಂಡೆ ಇನ್ನು ಅನೇಕರು ಸೇರಿ ಅಹರ್ನಿಶಿ ನಡೆಸಿದ ಚಿಂತನೆ ಪರಿಶ್ರಮಗಳಿಂದ ಕನ್ನಡ ಸಾಹಿತ್ಯ ಪರಿಷತ್ತು ರೂಪುಗೊಂಡು ಸ್ಥಾಪನೆಯಾಗಿವೆ. ಇದರ ಕಾರ್ಯದಲ್ಲಿ ಆಲೂರು ವೆಂಕಟರಾಯರ ಪಾತ್ರ ಪ್ರಮುಖವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಇದೇನೇ ಇರಲಿ ಕನ್ನಡ ಸಾಹಿತ್ಯ ಪರಿಷತ್ತು ಮೊದಲನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ೫ನೆಯ ಮೇ ೧೯೧೫ ರಲ್ಲಿ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿತು, (ಕ.ಸಾ.ಪ ೧೦೦ ಪುಟ ೨೩)

ಮುಂದೆ ಪರಿಷತ್ತಿನ ನಿಬಂಧನೆಗಳ ರಚನೆಯ ಹಿನ್ನಲೆ, ನಿಬಂಧನೆಗಳು, ಪರಿಷತ್ತಿನ ಮೊದಲ ಕಾರ್ಯಕಾರಿ ಸಮಿತಿ, ನಿಬಂಧನೆಗಳಿಗೆ ಆಗಾಗ ನಡೆದ ತಿದ್ದುಪಡಿಗಳು, ಪರಿಷತ್ತಿನ ಕಾರ್ಯಕಾರಿ ಸಮಿತಿ ಇತ್ಯಾದಿ ವಿವರಗಳು ಇವೆ. ಡಾ. ಕೆ.ವಿ. ಪುಟ್ಟಪ್ಪ (೧೯೮೫) ರಿಂದ ಕಯ್ಯಾರ ಕಿಞ್ಞಣ್ಣ ರೈ (೨೦೦೯) ರವರೆಗೆ ಹದಿನೇಳು ಜನರು ಮಾತ್ರ ಗೌರವಸದಸ್ಯರಾಗಿ ನಿಯುಕ್ತರಾಗಿದ್ದಾರೆ.

ಮೂರನೆಯ ಅಧ್ಯಾಯದಲ್ಲಿ ಪರಿಷತ್ತು ಮೊದಲು ಎಲ್ಲಿ ಯಾರ ಮನೆಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿತ್ತು ಎಂಬಲ್ಲಿಂದ ಆರಂಭಿಸಿ ಕೃಷ್ಣರಾಜ ಪರಿಷನ್ಮಂದಿರಕ್ಕೆ ಜಾಗ ದೊರೆತ ಬಗೆ, ಪರಿಷನ್ಮಂದಿರ ನಿರ್ಮಾಣ, ವೇದಿಕೆ, ರಂಗ ಪರದೆ, ಸಭಾಂಗಣಗಳ ಸುವರ್ಣ ಕಟ್ಟಡ ನಿರ್ಮಾಣವಾದ ಮೇಲೆ ಅದರಲ್ಲಿರುವ ವಿಭಾಗಗಳು, ಪರಿಷತ್ತಿನ ಜಿಲ್ಲಾ ಭವನಗಳು, ಕೇಂದ್ರ ಕಚೇರಿಯ ಸ್ಥಿರಚರ ಆಸ್ತಿ, ಸಭಾಂಗಣದ ಸಾಹಿತಿಗಳ ಭಾವಚಿತ್ರಗಳು, ಈ ಶತಮಾನದ ಸಂಶೋಧಕರು ಗ್ರಂಥಪಾಲಕರು ಮೊದಲಾದವರ ಯಾದಿ ಕೆಲವು ಭಾವಚಿತ್ರಗಳೊಂದಿಗೆ ಮುದ್ರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಪರಿಷತ್ತಿನ ದತ್ತಿನಿಧಿಗಳು ಮತ್ತು ಶಾಶ್ವತನಿಧಿಗಳು ಎಂಬ ಶೀರ್ಷಿಕೆಯಡಿ ಅನೇಕ ದತ್ತಿನಿಧಿಗಳ ವಿವರ ಇದೆ. ಕೊಟ್ಟವರ ಹೆಸರು, ಕೊಟ್ಟ ದಿನಾಂಕ, ದತ್ತಿಯ ಮೊತ್ತ, ಉದ್ದೇಶ ಇವುಗಳ ಸುದೀರ್ಘ ಯಾದಿ ೮೬೨ ನೆಯ ಪುಟದಿಂದ ೯೪೬ ನೆಯ ಪುಟದವರೆಗೆ ವ್ಯಾಪಿಸಿದೆ.

ಕರ್ನಾಟಕದ ೨೮ ಜಿಲ್ಲೆಗಳಿಂದ ಸಂಗ್ರಹಿಸಿದ ದತ್ತಿನಿಧಿಯ ವಿವರಗಳು ಅವುಗಳು ಉದ್ದೇಶವೂ ಸ್ಪಷ್ಟವಾಗಿ ನಮೂದಾಗಿದೆ. ದಾನಿಗಳು ತಮ್ಮ ಹಿರಿಯರ ಸ್ಮರಣಾರ್ಥವಾಗಿ ದತ್ತಿಗಳನ್ನು ಇಟ್ಟರೋ ಅವುಗಳ ಉದ್ದೇಶ ವಿಭಿನ್ನವಾಗಿದೆ. ಆ ಉದ್ದೇಶಗಳಲ್ಲಿ ಸಿಹಿ ಹಂಚಿಕೆ, ದೇಶಪ್ರೇಮ, ಸ್ಥಳ ಪ್ರೇಮ, ಗಮಕ ಸಾಹಿತ್ಯ, ಜೈನ ಸಾಹಿತ್ಯ, ಕ್ರೈಸ್ತ ಸಾಹಿತ್ಯ, ಜಾನಪದ ಸಾಹಿತ್ಯ, ಹಾಸ್ಯ ಸಾಹಿತ್ಯ, ನಾಟಕ ಸಾಹಿತ್ಯ ಮೊದಲಾದ ದತ್ತಿಗಳಲ್ಲದೆ ಲೇಖಕಿಯ ಪ್ರಶಸ್ತಿ, ಡಾ॥ ರಾಜಕುಮಾರ ಸಂಸ್ಕೃತಿ ದತ್ತಿ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ಮನುಶ್ರೀ ರಾಷ್ಟ್ರೀಯ ದತ್ತಿ ಪ್ರಶಸ್ತಿ, ಅಂಕಿತ ಪುಸ್ತಕ ಪುರಸ್ಕಾರ, ಪ್ರಕಾಶಕ ಆರ್.ಎಸ್. ಹಬ್ಬು ದತ್ತಿ ಪ್ರಶಸ್ತಿಯಂತಹ ಅನೇಕ ದತ್ತಿಗಳು ಇವೆ.

ಐದನೆಯ ಅಧ್ಯಾಯದಲ್ಲಿ ಇದುವರೆಗೆ ನಡೆದ ತಾರಾ ಸಮ್ಮೇಳನಗಳ ಊರು, ದಿನಾಂಕ, ಅಧ್ಯಕ್ಷರ ಯಾದಿ ಕೊಡಲಾಗಿದೆ. ಅಲ್ಲದೇ ಸಮ್ಮೇಳನಾಧ್ಯಕ್ಷರ ಭಾಷಣದ ಮುಖ್ಯಾಂಶಗಳನ್ನು ಕೊಡಲಾಗಿದೆ.

'ಆರನೆಯ ಅಧ್ಯಾಯದಲ್ಲಿ ಸಮ್ಮೇಳನಗಳಲ್ಲಿ ತೆಗೆದುಕೊಂಡ ನಿರ್ಣಯಗಳ ದಾಖಲೆ ನೀಡಲಾಗಿದೆ. ನಾಡು-ನುಡಿ, ಗಡಿ, ಶಿಕ್ಷಣಮಾಧ್ಯಮ, ಇತಿಹಾಸ, ಭಾಷೆ, ಆಡಳಿತ, ಮೊದಲಾದ ವಿಷಯಗಳ ಕುರಿತು ರಾಜ್ಯ-ರಾಷ್ಟ್ರ ಸರಕಾರಗಳು ಮಾಡಬೇಕಾದ ಕೆಲಸಗಳನ್ನು ನಿರ್ಣಯದ ರೂಪದಲ್ಲಿ ಮಂಡಿಸಲಾಗಿದೆ, ಜೊತೆಗೆ ಪರಿಷತ್ತಿನಿಂದ ಜನತೆ ಏನು ಅಪೇಕ್ಷಿಸುತ್ತಿದೆಯೆಂಬುದನ್ನು ಉಲ್ಲೇಖಿಸಲಾಗಿದೆ.

ಲೇಖಕರು ಸ್ಪಷ್ಟಮತವಾದಿಗಳು, ಅವರ ಅನೇಕ ನಿರ್ಣಯಗಳನ್ನು ಮತ್ತೆ ಮತ್ತೆ ಮಂಡಿಸಲಾಗಿದೆ. ಎಷ್ಟೋ ನಿರ್ಣಯಗಳನ್ನು ಜಾರಿ ಮಾಡಲು ಉಪಸಮಿತಿಗಳನ್ನು ರಚಿಸಲಾಗಿದೆ. ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಿ, ಚರ್ಚಿಸಿ, ಕಾರ್ಯರೂಪಕ್ಕೆ ತರಲಾಗಿದೆ, ಆದರೂ ಎಷ್ಟೋ ನಿರ್ಣಯಗಳನ್ನು ಜಾರಿಗೆ ತಂದಿಲ್ಲ, ಪರಿಷತ್ತು ಸಮ್ಮೇಳನಗಳಲ್ಲಿ ಮಂಡಿಸಿ ಅನೇಕ ನಿರ್ಣಯಗಳು ಏನೆಂಬುದನ್ನು ಕೆಲವೊಮ್ಮೆ ಮರೆತಿದೆ.

ನೂರು ವರುಷಗಳಲ್ಲಿ ಪರಿಷತ್ತು ಏನು ಮಾಡಬೇಕು, ಏನು ಮಾಡಿದೆ ಎಂಬುದರ ಸ್ಪಷ್ಟ ಚಿತ್ರಣ ಇಲ್ಲಿಯ ಪರಿಷತ್ ಬಗೆಗಿನ ನಿರ್ಣಯಗಳಲ್ಲಿ ಕಂಡುಬರುತ್ತದೆ. ಶತಮಾನದ ಗತಿ ಪ್ರಗತಿಗಳನ್ನು ಅವಲೋಕಿಸುವಲ್ಲಿ ಈ ಪರಿಷತ್ ಕುರಿತ ಸಮ್ಮೇಳನದ ನಿರ್ಣಯಗಳು ಕಣ್ತೆರೆಸಬಲ್ಲವು. ಪರಿಷತ್ತು ಮಾಡಬೇಕಾದ ಕೆಲಸಗಳು, ಅಪೂರ್ಣವಾಗಿ ಮಾಡಿದ ಕಾರ್ಯಗಳಾದವುವು ಎಂಬುದು ತಿಳಿಯುತ್ತದೆ.

ಈ ಗ್ರಂಥದಲ್ಲಿ ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳನ್ನಷ್ಟೇ ಆಯ್ದು ಪ್ರಕಟಿಸಲಾಗಿದೆ.

ಹೀಗೆ ಆಯ್ಕೆ ಮಾಡಿ ಪ್ರಕಟಿಸುವ ಬದಲು ಎಲ್ಲಾ ನಿರ್ಣಯಗಳನ್ನು ಪ್ರಕಟಿಸಿದ್ದರೆ ಒಳಿತಾಗುತ್ತಿತ್ತು. ಒಂದು ಕಡೆ ದಾಖಲೆಯಾದರೂ ಉಳಿಯುತ್ತಿತ್ತು.

ಏಳನೆಯ ಅಧ್ಯಾಯದಲ್ಲಿ ವಾರ್ಷಿಕ ಅಧಿವೇಶನಗಳ ವರದಿಯ ವಿವರಗಳಿವೆ.

ಸಾಹಿತ್ಯ ಪರಿಷತ್ತಿನ ೯೮ ವರದಿಗಳನ್ನು ಗಮನಿಸಿದರೆ ಅದರ ಐತಿಹಾಸಿಕ ಬೆಳವಣಿಗೆಯನ್ನು ಅಧಿಕೃತವಾಗಿ ಗುರುತಿಸಬಹುದು. ವಾರ್ಷಿಕ ವರದಿಯಲ್ಲಿ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ವರ್ಷವೆಲ್ಲ ಏನೇನು ಕಾರ್ಯಸಾಧಿಸಿತು, ಯಾವ ಯಾವ, ಕಾರ್ಯಗಳನ್ನು ಮಾಡಲಾಗಲಿಲ್ಲ, ಏಕೆ ಎಂಬ ವಿವರಗಳು ಒಂದು ಭಾಗವಾದರೆ, ಸದಸ್ಯರು ಕಳೆದ ವಾರ್ಷಿಕ ಸಭೆಯಲ್ಲಿ ಚರ್ಚಿಸಿ ನಿರ್ಧರಿಸಿದ ನಿರ್ಣಯಗಳೇನು? ಅದಕ್ಕೆ ಕಾರ್ಯಕಾರಿ ಸಮಿತಿ ಏನು ಕ್ರಮ ತೆಗೆದುಕೊಂಡಿತು ಎಂಬುದು ಇನ್ನೊಂದು ಎಂದು ಲೇಖಕರು ಹೇಳುವಂತೆ ಈ ವರದಿ ಪರಿಷತ್ತು ನಡೆದು ಬಂದ ದಾರಿಯ ಪುನರಾವಲೋಕನವೆನ್ನಬಹುದು. ಇದರಲ್ಲಿ ಲೆಕ್ಕ ಪರಿಶೋಧಕನ ಸಲಹೆ ಸೂಚನೆಗಳು ಸೇರುತ್ತವೆ.

ಎಂಟನೆಯ ಅಧ್ಯಾಯ ಪರಿಷತ್ತಿನ ಪ್ರಕಟಣೆಗಳ ಬಗ್ಗೆ ಹೇಳುತ್ತದೆ.

ಪರಿಷತ್ತಿನ ಪ್ರಕಟಣೆಗಳಲ್ಲಿ ಜೈನಸಾಹಿತ್ಯ, ವೈಷ್ಣವ ಸಾಹಿತ್ಯ ವೀರಶೈವ ಸಾಹಿತ್ಯ, ವಚನ ಸಾಹಿತ್ಯ, ಕೀರ್ತನ ಸಾಹಿತ್ಯ, ನಿಘಂಟುಗಳು, ಅಲಂಕಾರ, ಛಂದಸ್ಸು, ವ್ಯಾಕರಣ, ವಿಮರ್ಶೆ, ಸುಭಾಷಿತ, ಪ್ರಬಂಧ, ಗದ್ಯಾನುವಾದ, ಮಕ್ಕಳ ಸಾಹಿತ್ಯ, ಮಹಿಳಾ ಸಾಹಿತ್ಯ, ಗೌರವಗ್ರಂಥಗಳು, ಕಾವ್ಯ, ಕವಿತೆ, ನಾಟಕ, ಶಿಲ್ಪ, ಸಂಗೀತ, ಜೀವನ ಚರಿತ್ರೆ, ಭಾಷಾಶಾಸ್ತ್ರ, ಆತ್ಮಕಥೆಗಳು, ಕತೆ ಕಾದಂಬರಿ, ಜಾನಪದ, ವಿಜ್ಞಾನ, ವಿಶೇಷ ಸಂಚಿಕೆಗಳು, ಕಲೆ ಇತ್ಯಾದಿಗಳು ಸ್ಥಾನ ಪಡೆದಿವೆ.

ಇಲ್ಲಿ ೧೪೨೩ ಗ್ರಂಥಗಳ ಹೆಸರು, ಲೇಖಕರ ಹೆಸರು ಪ್ರಕಟಿಸಲಾಗಿದೆ. ಪ್ರಕಟಣೆಯ ವರ್ಷ ಕೊಟ್ಟಿದ್ದರೆ ಇನ್ನಷ್ಟು ಉಪಯುಕ್ತವಾಗುತ್ತಿತ್ತು.

ರಾಜ್ಯ, ಜಿಲ್ಲಾ ಮತ್ತು ತಾಲೂಕು ಮಟ್ಟದ ಸಮ್ಮೇಳನಗಳ ವಿಶೇಷ ಸಂಚಿಕೆಗಳ ಅಪೂರ್ಣ ಯಾದಿ ಕೊಟ್ಟಿದ್ದಾರೆ. ಇನ್ನುಳಿದ ಅನೇಕ ಸಂಚಿಕೆಗಳು ಈ ಯಾದಿಯಿಂದ ತಪ್ಪಿಸಿಕೊಳ್ಳಲು ಕಾರಣಗಳೇನು

ಗೊತ್ತಾಗುವುದಿಲ್ಲ. ಇದರೊಂದಿಗೆ ಇತರ ವಿಶೇಷ ಸಂಚಿಕೆಗಳು ತಾಳೆಗರಿ ಪಟ್ಟಿ ಶತಮಾನೋತ್ಸವ ಸಂದರ್ಭದಲ್ಲಿ ಪ್ರಕಟಿಸಿದ ನೂರು ಪುಸ್ತಕಗಳ ಯಾದಿ ನೀಡಿದ್ದಾರೆ.

ಕನ್ನಡ ನಿಘಂಟುಗಳು ಎಂಬ ಶೀರ್ಷಿಕೆಯಲ್ಲಿ ಕನ್ನಡ ನಿಘಂಟು-ಎಂಟು ಸಂಪುಟಗಳು, ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ರತ್ನಕೋಶ, ಜೈನ ಪರಿಭಾಷಾ ಕೋಶ, ಕೊಡವ ಕನ್ನಡ ನಿಘಂಟು, ಕನ್ನಡ ಜಾನಪದ, ವಿಶ್ವಕೋಶ ಅವಳಿ ಪಡೆನುಡಿ ಕೋಶ, ಕನ್ನಡ ಕನ್ನಡ ಇಂಗ್ಲಿಷ್ ನಿಘಂಟು, ಹಳೆಗನ್ನಡ ಪದ ಸಂಪತ್ತು, ಕುಂಬಾರಿಕೆ ವೃತ್ತಿ ಪದಕೋಶ, ವರ್ಗೀಕೃತ ಪದಕೋಶ, ದ್ರಾವಿಡ ಭಾಷಾ-ಜ್ಞಾತಿ ಪದಕೋಶ, ಹೀಗೆ ಪ್ರಕಟಿತ ವರ್ಷದೊಂದಿಗೆ ನೀಡಿದ್ದಾರೆ. ಮುಂದೆ ನಿಘಂಟಿನ ವಿವರಗಳು, ನಿಘಂಟು ಸಂಪಾದಕ ಸಮಿತಿ ಸದಸ್ಯರ ಯಾದಿ, ಇತ್ಯಾದಿ ವಿವರಗಳಿವೆ. ಅನಂತರ ಪರಿಷತ್ಪತ್ರಿಕೆ, ಕನ್ನಡನುಡಿ ಸಂಪಾದಕರ ವಿವರಗಳಿವೆ.

ಒಂಭತ್ತನೆಯ ಅಧ್ಯಾಯದಲ್ಲಿ ಏಕೀಕರಣ-ಚಳುವಳಿಯಲ್ಲಿ ಪರಿಷತ್ತು ಹೇಗೆ ತೊಡಗಿಕೊಂಡಿದೆ ಎಂಬ ವಿವರಗಳಿವೆ.

ಹತ್ತನೆಯ ಅಧ್ಯಾಯ ಪರಿಷತ್ತಿನ ಅಧ್ಯಕ್ಷರುಗಳ ಜೀವನ ಸಾಧನೆಗಳಿಗೆ ಮೀಸಲಾಗಿಟ್ಟಿದೆ. ಅದರಲ್ಲಿ ಪರಿಷತ್ತಿನ ಅಧ್ಯಕ್ಷರ ಉಪಾಧ್ಯಕ್ಷರು ಆಡಳಿತಾಧಿಕಾರಿಗಳು ಕಾರ್ಯದರ್ಶಿಗಳು ಗೌರವ ಕೋಶಾಧಿಕಾರಿಗಳ ಯಾದಿಯೊಂದಿಗೆ ಪರಿಷತ್ತಿನ ಅಧ್ಯಕ್ಷರ ಸಾಧನೆಗಳ ವಿವರಗಳನ್ನು ದಾಖಲಿಸಲಾಗಿದೆ ಕೆಲವೆಡೆ ಅಧ್ಯಕ್ಷರ ಭಾವಚಿತ್ರಗಳು ಬಿಟ್ಟುಹೋಗಿವೆ. ಅನುಬಂಧದಲ್ಲಿ ಹಿಂದೆಯೇ ಹೇಳಿದಂತೆ ದತ್ತಿನಿಧಿಗಳ ಸಂಪೂರ್ಣ ತಃಖ್ತೆಯಿದೆ.

ಈ ಕೆಲಸಕ್ಕೆ ತುಂಬ ತಾಳ್ಮೆ ಬೇಕು. ಸಂಶೋಧನಾ ದೃಷ್ಟಿ, ವಿವರಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಅಲ್ಲಲ್ಲಿ ಜೋಡಿಸುವ ಜಾಣ್ಮೆ, ಎಲ್ಲಕ್ಕಿಂತ ಮಿಗಿಲಾಗಿ ಲೇಖಕರಲ್ಲಿ ಕನ್ನಡದ ಪ್ರೀತಿ, ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ಆತ್ಮೀಯತೆ ಇರಬೇಕು. ಪ್ರೊ. ಜಿ. ಅಶ್ವತ್ಥನಾರಾಯಣರು ಪರಿಷತ್ತಿನೊಂದಿಗೆ ಅರವತ್ತು ವರ್ಷ ನಿಕಟ ಸಂಪರ್ಕ ಇಟ್ಟುಕೊಂಡವರು ಕೆಲವು ಕಾಲ ಕಾರ್ಯದರ್ಶಿಯಾಗಿ ಕೆಲಸ ಮಾಡಿದವರು. ಅ.ನ.ಕೃಷ್ಣರಾಯರೊಂದಿಗೆ ಕನ್ನಡ ಚಳುವಳಿಯಲ್ಲಿ ದುಡಿದವರು. ಸರಕಾರಿ ಕಾಲೇಜುಗಳಲ್ಲಿ ಮೂರು ದಶಕ ಕನ್ನಡ ಬೋಧನೆ ಮಾಡಿದವರು. ಅಮೇರಿಕೆಯ ಮಕ್ಕಳಿಗೂ ಕನ್ನಡ ಕಲಿಸಿದವರು.

ಅವರ ಕನ್ನಡ ಪ್ರೀತಿ ಎಷ್ಟಿದೆಯೆಂದರೆ ಅವರ ಮನೆಯಲ್ಲಿ ಸಾವಿರಾರು ಕನ್ನಡ, ಹಿಂದಿ, ಸಂಸ್ಕೃತ ಪುಸ್ತಕಗಳಿವೆ. ಮನೆಯ ಒಂದು ಅಂತಸ್ತು ಪುಸ್ತಕಗಳಿಗಾಗಿ ಮೀಸಲಾಗಿದೆ. ವಿವಿಧ ವ್ಯಾಖ್ಯಾನದ ಮೂರು ನೂರು ಭಗವದ್ಗೀತೆಗಳಿವೆ ಬೇರ ಬೇರೆಯವರು ಬರೆದು ಐದು ನೂರು ರಾಮಾಯಣ, ಮಹಾಭಾರತ, ಭಾಗವತ ಗ್ರಂಥಗಳಿವೆ. ಹೆಸರಾಂತ ಭಾಷಣಕಾರರಾಗಿ ಕರ್ನಾಟಕದ ತುಂಬಾ ಓಡಾಡಿದ್ದಾರೆ. ಸುಮಾರು ಮೂವತ್ತಕ್ಕೂ ಮೇಲ್ಪಟ್ಟು ಶಾಸ್ತ್ರೀಯ-ಸಂಶೋಧನಾತ್ಮಕ ಗ್ರಂಥ ಬರೆದಿದ್ದಾರೆ.

ಇಂಥ ಘನ ವಿದ್ವಾಂಸರು ಕನ್ನಡ ಸಾಹಿತ್ಯ ಪರಿಷತ್ತಿನ ನೂರು ವರ್ಷಗಳ ಚರಿತ್ರೆ ಸೂಕ್ತ ದಾಖಲೆಗಳೊಂದಿಗೆ ಪ್ರಕಟಿಸಿ ಮಹದುಪಕಾರ ಮಾಡಿದ್ದಾರೆ. ಅಧ್ಯಕ್ಷರಾದ ಪುಂಡಲೀಕ ಹಾಲಂಬಿಯವರು ಈ ಗ್ರಂಥ ಯೋಜನೆ ರೂಪಿಸಿ, ಅಂದವಾಗಿ ಪ್ರಕಟಿಸಿ ನಾಲ್ಕು ಕಾಲ ನಿಲ್ಲುವ ಕೆಲಸ ಮಾಡಿದ್ದಾರೆ.

*****

ಅನಾಜಿ ಚೊಚ್ಚಲ ಕೃತಿ 'ಉತ್ತಮಕ್ಷಮಾ'

ಡಾ. ಎಸ್. ಗಂಗಾಂಬಿಕೆ ಗೋವರ್ಧನ
ಚರವಾಣಿ: ೯೭೪೦೧೯೨೭೦೬.

ಹಲವಾರು ಕೃತಿಗಳನ್ನು ಬರೆದಿರುವ ಪ್ರೊ. ಅಶ್ವತ್ಥನಾರಾಯಣ. ಜಿ. ಅವರನ್ನು ನಾವಿಂದು ನೋಡುತ್ತಿದ್ದೇವೆ. ಆದರೆ ಅವರ ಮೊದಲ ಕೃತಿ ಯಾವುದು? ಅದರ ವಸ್ತು ವಿಷಯಗಳೇನು? ಅದು ಅವರ ಎಷ್ಟನೇ ವಯಸ್ಸಿನಲ್ಲಿ ಪ್ರಕಟವಾಯಿತು? ಈ ಮುಂತಾದ ಕುತೂಹಲಗಳು ಯಾವುದೇ ಲೇಖಕರ ಬಗ್ಗೆಯೂ ಇರುವ ಹಾಗೆಯೇ ಅಶ್ವತ್ಥನಾರಾಯಣ ಅವರ ಬಗ್ಗೆಯೂ ಹುಟ್ಟುವಂತಹುದೇ. ಹಾಗಾಗಿ ಅವರ 'ಉತ್ತಮಕ್ಷಮಾ' ಎಂಬ ಪುಟ್ಟ ಕೃತಿಯು ಪ್ರೊ. ಜಿ. ಅಶ್ವತ್ಥನಾರಾಯಣರವರ ಬರಹ ಜೀವನದ ಚೊಚ್ಚಲ ಕೃತಿ. ಆದ್ದರಿಂದ ಈ ಕೃತಿಗೆ ಉಳಿದ ಕೃತಿಗಳಿಗಿಂತ ವಿಶೇಷವಾದ ಸ್ಥಾನವಿದೆ. ಪ್ರೊ ಅನಾಜಿಯವರ ಬಹುಶ್ರುತ ಜ್ಞಾನವು ಆಗಲೇ ಮೇರೆವರಿದಿರುವುದಕ್ಕೆ ಈ ಕೃತಿ ಮತ್ತೊಂದು ಸಾಕ್ಷಿಯಾಗಿದೆ. ಅನಾಜಿಯವರ ಜೈನಧರ್ಮದಲ್ಲಿನ ಅಭಿರುಚಿ ಮತ್ತು ಆಸಕ್ತಿಗಳ ಜೊತೆಗೆ ಅಪಾರ ಗೌರವಗಳಿಟ್ಟುಕೊಂಡಿರುವುದರಿಂದ ಇಂತಹ ಉತ್ತಮ ಕೃತಿಯೊಂದರ ನಿರ್ಮಿತಿ ಸಾಧ್ಯವಾಗಿದೆ

ಉತ್ತಮಕ್ಷಮಾ ಕೃತಿಯು ದಿನಾಂಕ ೧೧-೦೧-೧೯೭೬ ರಂದು ಪ್ರಕಟವಾಯಿತು. ಇದರ ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತವರು ಹೊಳಲ್ಕೆರೆಯ ಪ್ರಸಿದ್ಧ ಮನೆತನವಾದ ದಿವಂಗತ ಶ್ರೀಪಾಲಶೆಟ್ಟರ ಮನೆಯವರು. ಅವರು ಕೊಪ್ಪಳದ ಶ್ರೇಷ್ಠಿವಂಶದವರು. ದಿ॥ ಶ್ರೀ ಶ್ರೀ ೧೦೮ ಸ್ಯಾದ್ವಾದಕೇಸರಿ ಶ್ರೀಪಾಯಸಾಗರಮುನಿಗಳು ಇವರಿಗೆ ಮಾರ್ಗದರ್ಶಕರಾಗಿದ್ದರು. ಅವರು ತಮ್ಮ ಜೀವನಪರ್ಯಂತ ಉತ್ತಮ ಚಾರಿತ್ರ್ಯವಂತರಾಗಿ ಬಾಳಿದವರು. ಜಿನಧರ್ಮಸೇವೆಯು ಅವರ ಬದುಕಿನ ಮುಖ್ಯ ಆಸಕ್ತಿಯಾಗಿದ್ದಿತು. ಹೊಳಲ್ಕೆರೆಯ ಜಿನಮಂದಿರದಲ್ಲಿ ಪಂಚಕಲ್ಯಾಣವನ್ನು ಅಗ್ರೇಸರರಾಗಿ ನಿಂತು ನೆರವೇರಿಸಿ ಸಮಾಜಕ್ಕೆ ಮಾದರಿಯಾದವರು. ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ದಿವಂಗತರಾದ ಇವರ ಸ್ಮರಣಾರ್ಥವಾಗಿ ಅವರ ಧರ್ಮಪತ್ನಿಯವರಾದ ಶ್ರೀಮತಿ ಪದ್ಮಾವತಮ್ಮ ಮತ್ತು ಮಕ್ಕಳು ಈ ಕೃತಿಯ ಪ್ರಕಾಶಕರು. ಈ ಕುಟುಂಬದ ಧಾರ್ಮಿಕ ಆಸಕ್ತಿಯು ಶೈಕ್ಷಣಿಕ ಮತ್ತು ಸಂಶೋಧನಾ ಮಾರ್ಗದಲ್ಲಿ ಈ ಕೃತಿಯ ಮೂಲಕ ಹೊರಹೊಮ್ಮಿರುವುದು ಅನುಕರಣೀಯ. ಆಗ ಇದರ ಮುಖಬೆಲೆ ಎರಡು ರೂಪಾಯಿಗಳು.

ಚಾರಿತ್ತಂ ಖಲುಧಮ್ಮೋ ಧಮ್ಮೋ ಜೋ ಸೋ ಸವೋತ್ತಿಣಿದ್ದಿಟ್ಠೋ
ಮೋಹಕ್ಖೋಹ ವಿಹೀಣೋ, ಪರಿಣಾಮೋ ಅಪ್ಪಣೋಹು ಸಮೋ

ಎಂದು ಭಗವತ್ ಕುಂದಕುಂದಾಚಾರ್ಯರು ತಮ್ಮ ಪ್ರವಚನಸಾರದಲ್ಲಿ ಹೇಳಿದ್ದಾರೆ. ನಿಜವಾದ ಧರ್ಮವೆಂದರೆ ಅದು ಸಚ್ಚಾರಿತ್ರ್ಯವೇ ಆಗಿದೆ. ರಾಗದ್ವೇಷಾದಿ ವಿಕಾರಗಳನ್ನು ಕಳೆದುಕೊಂಡು ಬದುಕುವ

ಆತ್ಮವು ಸಮ್ಯಕ್ತ್ವವೆನಿಸುತ್ತದೆ. ಈ ಬಗೆಯ ಪರಿಶುದ್ಧ ಚಾರಿತ್ರ್ಯಕ್ಕೆ ಉತ್ತಮಕ್ಷಮಾದಿ ದಶಧರ್ಮಗಳು ಪೂರಕವಾಗಿವೆ. ಈ ದಶಧರ್ಮಗಳಲ್ಲಿ ಉತ್ತಮಕ್ಷಮಾ ಎಂಬ ಧರ್ಮದ ವಿಚಾರವನ್ನು ಕುರಿತು ಈ ಗ್ರಂಥದಲ್ಲಿ ಅತ್ಯಂತ ವಿವರಣಾತ್ಮಕವಾಗಿ, ನಿರ್ದಿಷ್ಟವಾಗಿ ವಿಶ್ಲೇಷಣಾತ್ಮಕವಾಗಿ ತಿಳಿಸಲಾಗಿದೆ.

ಲೇಖಕರು ದಿನಾಂಕ ೧೦-೦೯-೧೯೭೫ ರಂದು ಮಹಾವೀರ ಮಿಷನ್ನಿನ ಆಶ್ರಯದಲ್ಲಿ ಏರ್ಪಟ್ಟ ದಶಲಕ್ಷಣಪರ್ವದ ೧೦ ದಿನಗಳ ಕಾರ್ಯಕ್ರಮದಲ್ಲಿ ಮೊದಲನೆಯ ದಿವಸ ಉತ್ತಮಕ್ಷಮಾ ಧರ್ಮದ ಬಗ್ಗೆ ಮಾಡಿದ ಭಾಷಣ ಮತ್ತು ಆ ಬಗ್ಗೆ ಸಿದ್ಧಪಡಿಸಿದ ಟಿಪ್ಪಣಿಗಳ ವಿಸ್ತೃತರೂಪ ಈ ಕೃತಿಯಾಗಿ ಹೊರಹೊಮ್ಮಿದೆ.

ಈ ಕೃತಿ ಮತ್ತು ಕೃತಿ ಬಿಡುಗಡೆಯ ಸಂದರ್ಭಗಳು ಅನಾಜಿಯವರ ಜೀವನದಲ್ಲಿ ಬಹಳ ಮಹತ್ತ್ವದವು. ಏಕೆಂದರೆ, ಉತ್ತಮಕ್ಷಮಾ ಗ್ರಂಥವು ಬಿಡುಗಡೆಯಾದ ದಿನವೇ ಅವರ ಪುತ್ರಿಯು ಜನಿಸಿದಳು. ಆ ಸವಿನೆನಪಿಗಾಗಿ ಅನಾಜಿಯವರು ತಮ್ಮ ಮಗಳಿಗೆ ಕ್ಷಮಾ ಎಂತಲೇ ನಾಮಕರಣ ಮಾಡಿದರು. ಇನ್ನೊಂದು ಸುಸಂಗತಿಯೆಂದರೆ, ತಮ್ಮ ಮನೆಗೂ ಸಹ ಕ್ಷಮಾ ಮನೆ ಎಂದು ಹೆಸರನ್ನಿಟ್ಟಿದ್ದಾರೆ. ಪ್ರೊ. ಅನಾಜಿಯವರ ಮೊದಲ ಕೃತಿಯ ಹೆಸರು, ಮಗಳ ಹೆಸರು, ಮನೆಯ ಹೆಸರು ಹೀಗೆ ಮೂರು ವಿಶೇಷ ವಿಚಾರಗಳು 'ಉತ್ತಮಕ್ಷಮಾ'ದ ಕಾರಣಕ್ಕಾಗಿ ಮುಪ್ಪುರಿಗೊಂಡಿವೆ.

ಈ ಕೃತಿಯ ಮೊದಲ ಕೆಲವು ಪುಟಗಳಲ್ಲಿ ತಿಳಿಸಿರುವಂತೆ ಬಾಹುಬಲಿ, ಶ್ರೀ ಪದ್ಮಾವತಿದೇವಿ ಮತ್ತು ದಿ॥ ಶ್ರೀ ಜಿ. ಎಸ್. ಶ್ರೀಪಾಲಶೆಟ್ಟರ ಚಿತ್ರಗಳಿವೆ. ಇವುಗಳಲ್ಲಿ ಶ್ರೀ ಪದ್ಮಾವತಿ ಅಮ್ಮನವರ ಚಿತ್ರವು ಅತ್ಯಂತ ಹಳೆಯ ಚಿತ್ರವಾಗಿದ್ದು ವಿಶೇಷವಾಗಿದೆ.

ಉತ್ತಮಕ್ಷಮಾ ಕೃತಿಯಲ್ಲಿ ಒಟ್ಟು ನಾಲ್ಕು ಅಧ್ಯಾಯಗಳಿವೆ. ಪ್ರಥಮ ಅಧ್ಯಾಯವು ದಶಲಕ್ಷಣಪರ್ವದ ಮಹತ್ವದ ಬಗ್ಗೆ ಸಮಗ್ರ ಪರಿಚಯವನ್ನು ಕುರಿತಾಗಿದೆ. 'ದಿವ್ಯಧ್ವನಿ'ಯ ವಿಶೇಷ ಸಂಚಿಕೆಗಾಗಿ ಸಿದ್ಧಪಡಿಸಿದ ಲೇಖನವಾಗಿದ್ದು ಇಲ್ಲಿ ಒಂದು ಪ್ರವೇಶಿಕೆಯಾಗಿದೆ. ಹಬ್ಬ ಮತ್ತು ಪರ್ವಗಳಿಗಿರುವ ವ್ಯತ್ಯಾಸವನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ. ಹಬ್ಬಗಳು ಸಂಭ್ರಮ ಮತ್ತು ಸಡಗರಗಳಿಗೆ ಮೀಸಲಾದರೆ ಪರ್ವಗಳಲ್ಲಿ ವ್ರತ, ಉಪವಾಸ, ಪೂಜೆ, ಮಂತ್ರಪಠಣ ಮೊದಲಾದ ಧಾರ್ಮಿಕ ವಿಧಿವಿಧಾನಗಳಿಗೆ ಮುಡಿಪಾಗಿರುವ ಸಂಗತಿಯನ್ನು ಅರುಹಲಾಗಿದೆ. ದಶಲಕ್ಷಣಪರ್ವವನ್ನು ಭಾದ್ರಪದಮಾಸದಲ್ಲಿ ಆಚರಿಸುವುದರಿಂದ ಆ ಮಾಸದ ಹಿನ್ನೆಲೆಯನ್ನು ಹೇಳುವಾಗ, "ಧರ್ಮಾಚರಣೆಯ ಚಾತುರ್ಮಾಸದ ಮುನಿಗಳೂ, ಪಾಪಪುಣ್ಯಗಳ ಪರ್ವೇಕ್ಷಣದ ವರ್ಷಾಯೋಗದ ಶ್ರಾವಕರೂ ಒಂದೆಡೆ ಸೇರುವ ಈ ಭಾದ್ರಪದ ಮಾಸವು ಅನೇಕ ವ್ರತೋತ್ಸವಗಳ ಮಾಸವಾಗಿರುವುದರ" ಔಚಿತ್ಯದ ಕಡೆಗೆ ಗಮನಸೆಳೆಯಲಾಗಿದೆ. ಕ್ಷಮಾ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಅಕಿಂಚನ್ಯ, ಬ್ರಹ್ಮಚರ್ಯ ಇವು ದಶಲಕ್ಷಣದ ಹತ್ತು ಧರ್ಮಗಳಾಗಿವೆ. ಈ ಹತ್ತುಗುಣಗಳ ಮಹತ್ವವನ್ನು, ಪ್ರತಿಯೊಂದು ಧರ್ಮಾಚರಣೆಗೂ ಅವಶ್ಯವಿರುವ ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಸವಿವರಗೊಳಿಸಲಾಗಿದೆ. 'ದಶ', 'ಉತ್ತಮ', 'ಕ್ಷಮಾ' ಎಂಬ ಪರಿಕಲ್ಪನೆಗಳ ಮಹತ್ವದ ತಾರ್ಕಿಕ, ವಿಶ್ಲೇಷಣಾತ್ಮ ನಿರೂಪಣೆಗಳು ಬೆರಗು ಮೂಡಿಸುತ್ತವೆ. "ಪರುಷ್ಯಣ ಅಥವಾ ದಶಲಕ್ಷಣಪರ್ವವು ಕೇವಲ ಜೈನಧರ್ಮಕ್ಕಷ್ಟೇ ಮೀಸಲಾದ ಪರ್ವವಾಗಬೇಕಿಲ್ಲ. ಏಕೆಂದರೆ ಅದು ಸರ್ವ ಜನಾಂಗದ ಜನಾದರಣೀಯವಾಗಬಲ್ಲ ವಿಶ್ವಧರ್ಮದ ಲಕ್ಷಣಗಳನ್ನು ಹೊಂದಿರುವುದಲ್ಲದೆ

ಇಂದಿನ ನಮ್ಮ ರಾಷ್ಟ್ರೀಯ ಸಮಸ್ಯೆಗಳಿಗೆಲ್ಲಾ ಆರ್ಥಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಕಂಡುಬರುತ್ತಿರುವ ಕುಂದುಕೊರತೆಗಳಿಗೆ ಪರಿಹಾರ ನೀಡಿ ರಾಷ್ಟ್ರಕಲ್ಯಾಣ, ಮಾನವಕಲ್ಯಾಣವನ್ನು ಏಕಕಾಲದಲ್ಲಿ ಸಾಧಿಸುವ ದಿವ್ಯ ಸಂಜೀವಿನಿ ಆಗಿದೆ. . . . ದಶಲಕ್ಷಣಪರ್ವವು ಜಗತ್ತಿಗೆ ಭಾರತವಿತ್ತ ವಿಶ್ವಧರ್ಮಕ್ಕೆ ಜೈನಧರ್ಮವಿತ್ತ ಶ್ರೇಷ್ಠ ಸಾಂಸ್ಕೃತಿಕ ಕೊಡುಗೆ" ಎಂಬ ಮಾತುಗಳು ಅತ್ಯಂತ ಚಿಂತನಾರ್ಹವೆನಿಸಿವೆ; ಇಂದಿಗೂ ಪ್ರಸ್ತುತವೆನಿಸಿವೆ.

ಎರಡನೆಯ ಅಧ್ಯಾಯದಲ್ಲಿ ದಶಲಾಕ್ಷಣಿಕ ನೋಂಪಿಯ ಕಥೆಯನ್ನು ದೀರ್ಘವಾಗಿ ಪರಿಚಯ ಮಾಡಲಾಗಿದೆ. ಹಳಗನ್ನಡ ರೂಪದಲ್ಲಿದ್ದ ಪರಂಪರಾಗತ ಕಥೆಯನ್ನು ಹೊಸಗನ್ನಡದಲ್ಲಿ ಕೊಡಲಾಗಿದೆ. ವ್ರತದಿನ ಎಲ್ಲರೂ ಓದಿ ತಿಳಿಯಲು ಸುಲಭವಾಗಲಿ ಎಂಬ ಸದುದ್ದೇಶದಿಂದ ಲೇಖಕರು ಹೀಗೆ ಮಾಡಿದ್ದಾರೆ. ಕಥೋಕ್ತವಾದ ಶ್ರೇಣಿಕ ಮಹಾರಾಜ, ಚೇಳಿನಿ ಮಹಾರಾಣಿ, ರಾಜ ಪ್ರಿಯಕರ, ರಾಣಿ ಪ್ರಿಯಕರಿ, ಮೃಗಾಂಕರೇಖೆ, ಮಣಿಶ್ರೇಣಿಕರ, ಲಕ್ಷಭಟ, ಚಂದ್ರರೇಖೆ, ಮದನರೇಖೆ, ರೋಹಿಣಿ, ವಸಂತಸೇನ ಮಹಾಮುನಿಗಳು, ಸ್ಥೂಲಭದ್ರ, ಶೀಲಸಾಗರ ಭಟ್ಟಾರಕ ಮಹಾಸ್ವಾಮಿಗಳು ಮೊದಲಾದ ಪಾತ್ರಗಳು ಮತ್ತು ಅವುಗಳನ್ನೊಳಗೊಂಡಂತೆ ನೇಯ್ದಿರುವ ಸನ್ನಿವೇಶ ನಿರ್ಮಾಣಗಳು ಕಾವ್ಯಾಭ್ಯಾಸಿಗಳಿಗೆ ಇನಿದಾಗಿವೆ. ಸಾಮಾನ್ಯವಾಗಿ ಜೈನ ಧಾರ್ಮಿಕ ಕತೆಗಳಲ್ಲಿ ಕಂಡುಬರುವಂತೆ ಶ್ರೇಣಿಕ ಮಹಾರಾಜನು ತನ್ನ ಪರಿವಾರದೊಡನೆ ವಿಪುಲಾಚಲಕ್ಕೆ ಬಂದು ಅಲ್ಲಿ ವಿರಾಜಮಾನವಾದ ಶ್ರೀ ವೀರವರ್ಧಮಾನ ಸ್ವಾಮಿಯ ಸಮವಸರಣಕ್ಕೆ ವಂದಿಸಿ, ಸೇವೆಗೈದು ಯಾವುದಾದರೂ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಬಿನ್ನವಿಸುವ ಕಥಾರೀತಿಯೂ ಇಲ್ಲಿ ಸಹಾ ಅನುರಣಿಸಿದೆ. ಹಾಗೆ ರಾಜನು " ಹೇ! ಸ್ವಾಮಿಯೇ, ಸಂಸಾರ ಬಂಧನದ ವಿಚ್ಛೇದನಕ್ಕೆ ಕಾರಣವಾದ ನೋಂಪಿಯೊಂದನ್ನು ಅಪ್ಪಣೆಮಾಡಿ" ಎಂದು ವಿಜ್ಞಾಪನೆ ಮಾಡಿಕೊಳ್ಳುತ್ತಾನೆ. ಆಗ ಗೌತಮ ಮುನೀಶ್ವರರು ಈ ದಶಲಕ್ಷಣ ನೋಂಪಿಯ ಕಥೆಯನ್ನು ನಿರೂಪಿಸುತ್ತಾರೆ. ಸಕಲ ಸಂಪತ್ತು ಸೌಭಾಗ್ಯಗಳನ್ನು ಅನುಭವಿಸಿದ ಸ್ಥೂಲಭದ್ರ ಮತ್ತು ಅವನ ಮಕ್ಕಳು ಅಶಾಶ್ವತ ಸುಖದ ಚಿಂತನೆಯಲ್ಲಿ ತೊಡಗುತ್ತಾರೆ.

ಮೂರನೆಯ ಅಧ್ಯಾಯವು ದಶಲಕ್ಷಣನೋಂಪಿಯ ಆಚರಣೆ ಬಗ್ಗೆ ಕೆಲವು ವಿವರಗಳನ್ನು ನೀಡುತ್ತದೆ. ಧರ್ಮಾಭಿಮಾನಿಗಳಿಗೆ ಈ ಪರ್ವದ ಧಾರ್ಮಿಕ ವಿಧಾನದ ಲಘು ಪರಿಚಯವನ್ನು ನೀಡುವುದು ಇಲ್ಲಿನ ಮುಖ್ಯ ಆಶಯವಾಗಿದೆ. ನೋಂಪಿಯ ಪ್ರಧಾನವಾದ ಉದ್ದೇಶ ಆತ್ಮಶುದ್ಧಿಯನ್ನು ಸಾಧಿಸುವುದು. ಈ ಆತ್ಮಶುದ್ಧಿಗೆ ಸಾಧನವಾದ ಆಚರಣೆಗಳೇ ಸಮ್ಯಕ್ ಚಾರಿತ್ರ್ಯ. ಹಾಗೆಯೇ ದಶಲಕ್ಷಣ ನೋಂಪಿಯು ಸಹ ಸಮ್ಯಕ್ ಚಾರಿತ್ರದ ಒಂದು ಅಂಗ. "ನೋಂಪಿಯನ್ನು ಆಚರಿಸುವವರು ಅಭಿಷೇಕ ಪೂಜೆ ಮೊದಲಾದ ಕ್ರಿಯೆಗಳಾದ ಮೇಲೆ, ಹಸ್ತಶುದ್ಧಿ, ಕಂಕಣ ಬಂಧನ ದರ್ಭಾಸನ ನ್ಯಾಸ, ಪುಂಜ, ಮಂಗಳಾರತಿ, ಪುಷ್ಪಾಂಜಲಿ, ಪಂಚ ಜಲಧಾರೆ ಇಷ್ಟನ್ನು ಮಾಡಬೇಕು. ಆನಂತರ ಪಂಚಪರಮೇಷ್ಠಿಗಳ ಪ್ರತ್ಯೇಕ ಪೂಜೆ, ಮೂಲಸ್ವಾಮಿ ಪೂಜೆ, ನವದೇವತಾ ಪೂಜೆ, ತ್ರಿಕಾಲ ತೀರ್ಥಂಕರ ಸಮುದಾಯ ಪೂಜೆ, ನೋಂಪಿ ದೇವರಪೂಜೆ, ಬಾಹುಬಲಿಸ್ವಾಮಿ ಮೊದಲಾದ ಪೂಜೆಗಳು, ಶ್ರುತಗಣಧರ ಪೂಜೆ, ನೋಂಪಿ ದೇವರ ಯಕ್ಷಯಕ್ಷಿಯರ ಪೂಜೆ, ಶಾಸನದೇವತೆಗಳ ಪೂಜೆ, ಬ್ರಹ್ಮದೇವ ಪದ್ಮಾವತಿ ಮೊದಲಾದ ಪೂಜೆ, ದ್ವಾರಪಾಲಕರ ಪೂಜೆ, ಮಹಾರ್ಘ್ಯ, ಮಹಾಶಾಂತಿ ಮಂತ್ರ, ವಿಸರ್ಜನೆ ಈ ೧೪ ವಿಧಿಗಳನ್ನು ಆಚರಿಸಬೇಕು. ಇಷ್ಟೊಂದು ಪೂಜಾ ಕಾರ್ಯಕ್ರಮಗಳನ್ನು ಬಸದಿಗಳಲ್ಲಿ ಕ್ರಮವಾಗಿ ಮಾಡಲಾಗುತ್ತಿತ್ತು." ಇದರ ಆಚರಣಾ ವಿಧಾನಗಳ

ಬಗ್ಗೆ ಸಹ ನಿಡಿದಾದ ವಿವರಣೆಯನ್ನು ಕಾಣಬಹುದು. ಭಾದ್ರಪದ ಮಾಸದ ಶುದ್ಧ ಪಂಚಮಿಯ ಮೊದಲ ದಿನದಿಂದ ಚತುರ್ದಶಿಯವರೆಗೆ ಈ ನೋಂಪಿಯನ್ನು ಆಚರಿಸಲಾಗುತ್ತದೆ. ಮೊದಲ ದಿನ ಪಂಚಮಿಯಂದು ಉತ್ತಮಕ್ಷಮಾ, ಷಷ್ಠಿಯಂದು ಉತ್ತಮ ಮಾರ್ದವ, ಸಪ್ತಮಿಯಂದು ಉತ್ತಮ ಆರ್ಜವ, ಅಷ್ಟಮಿಯಂದು ಉತ್ತಮ ಶೌಚ, ನವಮಿಯಂದು ಉತ್ತಮಸತ್ಯ, ದಶಮಿಯಂದು ಉತ್ತಮ ಸಂಯಮ, ಏಕಾದಶಿಯಂದು ಉತ್ತಮ ತಪ, ದ್ವಾದಶಿಯಂದು ಉತ್ತಮ ತ್ಯಾಗ, ತ್ರಯೋದಶಿಯಂದು ಉತ್ತಮ ಆಕಿಂಚನ್ಯ, ಚತುರ್ದಶಿಯಂದು ಉತ್ತಮ ಬ್ರಹ್ಮಚರ್ಯೆ ಮತ್ತು ಕ್ಷಮಾಯಾಚನೆ ಎಂಬ ದಶಧರ್ಮಗಳನ್ನು ಆಚರಿಸುವುದರ ಕಡೆಗೆ ಲೇಖಕರು ಬೆಳಕು ಚೆಲ್ಲಿದ್ದಾರೆ. ಕೇವಲ ಈ ಧಾರ್ಮಿಕ ಆಯಾಮವನ್ನು ಹೇಳದೆ ನೋಂಪಿಯ ಹಿಂದಿರುವ ಮಾನವೀಯ ಮತ್ತು ಸಾಮಾಜಿಕ ಆಯಾಮವನ್ನು ಗ್ರಂಥಕರ್ತರು ಸಹೃದಯರಿಗೆ ತೋರಿಸಿರುವುದು ಕೃತಿಯ ಮತ್ತು ಕೃತಿಕಾರರ ಘನತೆಯನ್ನು ಹೆಚ್ಚಿಸಿದೆ. ಜೈನಧರ್ಮದಲ್ಲಿ ಅಂತಸ್ಥವಾಗಿರುವ ಜೀವದಯೆ, ಜೀವಕಾರುಣ್ಯಗಳು ಇಂದಿನ ಸಮಾಜಕ್ಕೆ ಅತ್ಯಗತ್ಯ ಎಂಬ ಧ್ವನಿಯನ್ನು ಬಲವಾಗಿ ಪ್ರತಿಪಾದಿಸಿದ್ದಾರೆ. ಅವರೇ ಹೇಳುವಂತೆ", ವರ್ಧಮಾನ ಮಹಾವೀರರು 'ಬದುಕು ಮತ್ತು ಬದುಕಗೊಡು' ಎಂದರು. ಅರ್ಥಾತ್ "ನೀನು ದೋಷರಹಿತನಾದರೆ ಉಳಿದವರನ್ನು ಕ್ಷಮಿಸಿ ಅವರನ್ನು ಬದುಕಗೊಡು ಇಲ್ಲವೇ ನೀನು ತಪ್ಪಿತಸ್ಥನಾಗಿದ್ದರೆ ಕ್ಷಮಾಪಣೆ ಕೇಳಿಕೊಂಡು ಬದುಕು ಎಂದರು. ಆದ್ದರಿಂದ ಕ್ಷಮಾದಾನಿಯಾಗುವುದು ಇಲ್ಲವೇ ಕ್ಷಮಾಪಾತ್ರನಾಗುವುದು ಲೋಕದ ಮಾನವರ ಧರ್ಮವಾಗಿದೆ. ಕ್ಷಮಾಯಾಚನಾ ಕಾರ್ಯವೆಂದಾಗ ವೈರನಾಶದ ದಿನ, ಅಕ್ರೋಧದ ದಿನ ಎಂದು ನೆನಪಿಡಬೇಕು. ಕ್ಷಮೆ ಹೊಂದಲು ಕ್ಷಮೆ ನೀಡಲು ಧಾರ್ಮಿಕ ಅವಕಾಶವನ್ನು ಕಲ್ಪಿಸಲು ಕ್ಷಮಾದಿನ ಮತ್ತು ಕ್ಷಮಾಯಾಚನಾ ದಿನಗಳನ್ನು ದಶಲಕ್ಷಣಪರ್ವದಲ್ಲಿ ಕಾಣುತ್ತೇವೆ." ಎಂತಹ ಅದ್ಭುತವಾದ ಮಾನವೀಯತೆಯ ಪರಾಕಾಷ್ಠತೆಯನ್ನು ವಿಜೃಂಭಿಸುವ ಮಾತುಗಳಲ್ಲವೆ!

ನಾಲ್ಕನೆಯ ಅಧ್ಯಾಯವು ಉತ್ತಮಕ್ಷಮಾ ಧರ್ಮದ ಸ್ವರೂಪ, ಮಹತ್ವ, ಉಪಯೋಗ ಮೊದಲಾದ ಅಂಶಗಳನ್ನು ಅತ್ಯಂತ ವಿಸ್ತಾರವಾಗಿ ನಿರೂಪಿಸುತ್ತದೆ. ಜೈನಧರ್ಮದ ಪರ್ವ ಮತ್ತು ತತ್ವಗಳ ಅಂಗವಾಗಿ ಬರುವ ಧರ್ಮದ ಗುಣಗಳಲ್ಲಿ ಒಂದಾದ ಉತ್ತಮ ಕ್ಷಮಾಧರ್ಮವು ರತ್ನಕರಂಡಕ ಶ್ರಾವಕಾಚಾರವು ಹೇಳುವ ಭಾವನಾಧಿಕಾರದ ಅಂಗವಾಗಿರುವ ಬಗ್ಗೆ ತಿಳಿಸಿರುವುದು ಕೌತುಕಪೂರ್ಣವಾಗಿದೆ. ಭಾವನೆಯಿಂದಲೇ ಶುಭಾಶುಭಗಳು, ಕಾರ್ಯ-ಕಾರಣಗಳು, ಧರ್ಮಾಧರ್ಮಗಳ ಗುಣಗಳು ಉತ್ಪನ್ನವಾಗುತ್ತವೆ ಎಂದು ಅನಾಜಿಯವರು ಹೇಳಿರುವ ರೀತಿಯು ಮನೋವೈಜ್ಞಾನಿಕ ವಿಶ್ಲೇಷಣೆಯ ಮಾದರಿಯಲ್ಲಿದೆ. ದಶಧರ್ಮಗಳು ಸಗುಣರೂಪದಲ್ಲಿ ಚಾರಿತ್ರ್ಯಕ್ಕೆ, ನಿರ್ಗುಣ ರೂಪದಲ್ಲಿ ಜ್ಞಾನ, ದರ್ಶನಗಳಿಗೆ ಸಂಬಂಧಿಸಿವೆ. ಆದ್ದರಿಂದಲೇ ಅವುಗಳನ್ನು ರತ್ನತ್ರಯ ವಿಭಾಗದಲ್ಲಿ ಸಮಾವೇಶಗೊಳಿಸಲಾಗಿದೆ ಎಂತಲೂ, ಸಪ್ತತತ್ವಗಳಲ್ಲಿ ಸಂವರ ತತ್ತ್ವದ ಅಂಗವಾಗಿದೆ ಎಂತಲೂ ತಿಳಿಸುವ ಅನಾಜಿಯವರು ಜೈನದರ್ಶನದ ಹಿನ್ನೆಲೆಯಲ್ಲಿ ಈ ದಶಲಕ್ಷಣ ಪರ್ವದ ಪ್ರಭಾವಳಿಯನ್ನು ಬಹಳ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಕ್ಷಮೆಗೂ ಉಳಿದ ನವಧರ್ಮಗಳಿಗೂ ಇರುವ ನಿಕಟವಾದ ಸಂಬಂಧವನ್ನೂ, ತತ್ತ್ವಾರ್ಥಸೂತ್ರದಲ್ಲಿ, ಅಷ್ಟಾವಕ್ರಗೀತೆಯಲ್ಲಿ, ವಾಲ್ಮೀಕಿ ರಾಮಾಯಣದಲ್ಲಿ, ಶ್ರಮಣಸೂಕ್ತದಲ್ಲಿ, ಅನೇಕ ಸುಭಾಷಿತಗಳಲ್ಲಿ, ತುಕಾರಾಮರ ಅಭಂಗದಲ್ಲಿ, ಪಂಡಿತ ಕೆ. ಭುಜಬಲಶಾಸ್ತ್ರಿಯವರ ಅಭಿಪ್ರಾಯದಲ್ಲಿ, ಮಹಮದ್ ಪೈಗಂಬರರ ಒಂಬತ್ತು ದೈವಾಜ್ಞೆಗಳಲ್ಲಿ ಹೀಗೆ ವಿವಿಧ ಉಲ್ಲೇಖಗಳಲ್ಲಿ ಕ್ಷಮಾ ಗುಣಕ್ಕೆ ಇರುವ ಪ್ರಾಧಾನ್ಯತೆಯನ್ನು ಅತ್ಯಂತ

ನವಿರಾಗಿ ಕೊಂಡಾಡಿದ್ದಾರೆ. ಈ ಬಗೆಯ ಅನಾಜಿಯವರ ನಿರೂಪಣೆಗಳು ಅವರ ಬಹುಜ್ಞತೆಗೆ ಹಿಡಿದ ದರ್ಪಣವಾಗಿದೆ.

ಅನಾಜಿಯವರು ಇಷ್ಟಕ್ಕೆ ನಿಲ್ಲದೆ ಕ್ಷಮೆ ಎಂದರೇನು? ಎಂಬ ಪ್ರಶ್ನೆ ಹಾಕಿಕೊಂಡು ಒಂದು ಸ್ಥೂಲ ಕಲ್ಪನೆಯನ್ನು ನೀಡಿರುವುದು ಭಾಷಾಭ್ಯಾಸಿಗಳು ಹೇಗೆ ಪದಗಳ ಬೆನ್ನುಹತ್ತಬೇಕು ಎಂಬುದಕ್ಕೆ ಮಾದರಿ! "ಕ್ಷಮೆ ಎಂಬ ಪದವನ್ನು ಶಬ್ದಾರ್ಥ ಕೌಸ್ತುಭವೆಂಬ ಶಬ್ದಕೋಶ ಹೀಗೆ ವಿವರಿಸಿದೆ: ಇತರರು ಎಷ್ಟೇ ಕೋಪಿಸಿಕೊಂಡರೂ ಹೊಡೆದು ಬಡಿದರೂ ಅವರ ವಿಷಯದಲ್ಲಿ ಸ್ವಲ್ಪವೂ ಕೋಪಿಸಿಕೊಳ್ಳಲೂ ಹೊಡೆಯಲೂ ಯತ್ನಿಸದೆ ಅವೆಲ್ಲವನ್ನೂ ಶುದ್ಧವಾದ ಮನೋವಾಕ್ಕಾಯಗಳಿಂದ ಸಹಿಸಿಕೊಳ್ಳುವುದು ಕ್ಷಮೆಯೆನಿಸುವುದು" ಎಂದು ವಿವರಿಸುವುದರಿಂದ ಹಿಡಿದು 'ಸಮಣ ಸುತ್ತ', 'ಆದಿಪುರಾಣ', 'ವ್ರತಪೂಜಾ ವಿಧಿ', 'ತತ್ತ್ವ ರತ್ನಪ್ರದೀಪಿಕೆ', ಶ್ರೀ ಎಸ್. ಬಿ. ಜಿನಚಂದ್ರಶಾಸ್ತ್ರಿಗಳು ಹಾಗೂ ಜಿ.ಪಿ. ರಾಜರತ್ನಂ ಅವರ ಅಭಿಪ್ರಾಯಗಳವರೆಗೂ ಕ್ಷಮೆಯ ವ್ಯಾಖ್ಯಾನಗಳನ್ನು ಉಣಬಡಿಸಿರುವುದು ಜ್ಞಾನಾಕಾಂಕ್ಷಿಗಳಿಗೆ ರಸದೂಟವೇ ಸರಿ. ಮುಂದುವರಿದು ಕ್ಷಮಾವಂತರ ಸ್ವರೂಪವನ್ನು ಹೇಳುತ್ತಾ ಸ್ತ್ರೀಯರು ಸಹನೆ ಮತ್ತು ತಾಳ್ಮೆಗಳ ಪ್ರತಿರೂಪ ಎಂದು ನಿದರ್ಶನವನ್ನು ವಿವೇಚಿಸಿರುವುದು ಅನಾಜಿಯವರ ಸ್ತ್ರೀವಾದಿ ದೃಷ್ಟಿಕೋನವನ್ನು ಅರುಹುತ್ತದೆ. ಕ್ಷಮಾ ಗುಣದ ತದ್ವಿರುದ್ಧ ರೂಪವಾಗಿರುವ ಕ್ರೋಧದ ಸ್ವರೂಪ, ಕ್ರೋಧದ ದುಷ್ಪರಿಣಾಮಗಳು, ಕ್ರೋಧವನ್ನು ಗೆಲ್ಲುವ ಬಗೆಗಳನ್ನು ಕುರಿತ ಅನಾಜಿಯವರ ನಿರೂಪಣೆ ಓದುಗರನ್ನು ಆತ್ಮಾವಲೋಕನದೆಡೆಗೆ ತಿರುಗಿಸುವ ತೋರುಬೆರಳಾಗಿದೆ.

ಕೃತಿಕಾರರೇ ಹೇಳುವಂತೆ "ಕ್ಷಮಾಧರ್ಮವನ್ನು ಎಲ್ಲಾ ಧರ್ಮಗಳು ಎತ್ತಿಹಿಡಿದಿರುವುದರಿಂದ ಆ ಬಗ್ಗೆ ಸುಂದರ ಸೂಕ್ತಿ-ಸಂಗತಿಗಳು ಅನೇಕ ಕಡೆ ದೊರಕುವುದರಿಂದ ಇಲ್ಲಿ ಕೇವಲ ಜೈನ-ಶಾಸ್ತ್ರಗಳನ್ನಷ್ಟೇ ಗಮನಿಸದೆ ಉಳಿದ ಧರ್ಮಗಳ ಹಾಗೂ ಸಾಹಿತ್ಯಗ್ರಂಥಗಳಿಂದ ಧಾರಾಳವಾಗಿ ವಿಷಯಸಂಗ್ರಹ ಮಾಡಿದೆ."

ಪ್ರೊ ಅನಾಜಿಯವರು ಮತ್ತೊಂದು ಮುಖ್ಯವಾದ ವಿಷಯದ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತಾರೆ. ಅದೇನೆಂದರೆ, "ಕನ್ನಡದಲ್ಲಿ ದಶಲಕ್ಷಣಪರ್ವದ ಬಗ್ಗೆ **ಅಮೋಲ** ದಶಧರ್ಮ, ರತ್ನಕರಂಡಕ ಶ್ರಾವಕಾಚಾರದಂತಹ ಒಂದೆರಡು ಗ್ರಂಥಗಳೂ ಇನ್ನು ಕೆಲವು ಸಣ್ಣಪುಟ್ಟ ಗ್ರಂಥಗಳನ್ನೂ ಲೇಖನಗಳನ್ನೂ ಬಿಟ್ಟರೆ ಈ ಬಗ್ಗೆ ವಿಸ್ತೃತ ಸಮಗ್ರ ವಿವೇಚನೆಯ ಗ್ರಂಥಗಳೇ ಇಲ್ಲ. ಅದರಲ್ಲೂ ದಶಧರ್ಮಗಳಲ್ಲಿ ಒಂದೊಂದರ ಬಗ್ಗೆಯಂತೂ ಪ್ರತ್ಯೇಕ ಗ್ರಂಥಗಳು ಇಲ್ಲವೆನ್ನಬಹುದು. ಉತ್ತಮಕ್ಷಮಾ ಧರ್ಮಗ್ರಂಥ ಈ ಕೊರತೆಯನ್ನು ನಿವಾರಿಸುವುದರಲ್ಲಿ ಮೊದಲ ಗ್ರಂಥ".

ಕೃತಿಯ ಅಂತ್ಯದಲ್ಲಿ ವ್ರತಪೂಜಾವಿಧಿ ಎಂಬ ಗ್ರಂಥದಿಂದ ಸಂಗ್ರಹಿಸಿದ ಕ್ಷಮಾಧರ್ಮದ ಜಯಮಾಲೆ ಎಂಬ ಪದ್ಯವನ್ನು ಹಾಕಿರುವುದು ಉತ್ತಮ ಅನುಬಂಧದ ಸ್ವರೂಪಕ್ಕೆ ಉದಾಹರಣೆಯಾಗಿದೆ.

ಈ ಮೊದಲೇ ತಿಳಿಸಿದಂತೆ 'ಉತ್ತಮಕ್ಷಮಾ' ಕೃತಿಯು ಪ್ರೊ ಅನಾಜಿಯವರ ಚೊಚ್ಚಲ ಕೃತಿಯಾಗಿದ್ದರೂ ಯಾರೇ ಅದನ್ನು ಅಭ್ಯಾಸ ಮಾಡಿದಾಗ ಖಂಡಿತವಾಗಿ ಇದು ಗ್ರಂಥಕರ್ತನೊಬ್ಬನ ಮೊದಲ ಕೃತಿ ಎಂದು ಹೇಳಲು ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ವಿದ್ವತ್ಪೂರ್ಣವೂ, ವಿವರಣಾತ್ಮಕವೂ, ವಿಷಯಪೂರಿತವೂ ಆಗಿ ಈಗಾಗಲೇ ಬರಹಗಾರರಾಗಿ ಅಚ್ಚೊತ್ತಿದ ಕೃತಿಕಾರನ ಗ್ರಂಥ ಎಂಬ ಭಾವನೆ ಮೂಡಿಸದೇ ಇರದು. ಆ ಉನ್ನತಮಟ್ಟದ ಶ್ರದ್ಧೆ, ಶ್ರಮ, ಪ್ರತಿಭೆಗಳು ಇಲ್ಲಿ ಮೇರೆವರಿದಿವೆ.

******

Shri Prasanna Shrinivasa Dasara Keerthanegalu

Parimala Raghavendra

Mobile : 9036886719

The book titled " Shri Prasanna Shrinivasa Dasara keerthanegalu" published under the series "Samagra Dasa sahitya" Book number 22 is the work under consideration. This book was compiled and edited by Prof Dr G. Ashwathanarayana. He has put in a lot of efforts to research the handwritten works and convert them to a form fit for publication. His introduction to the work clearly portrays the deep study and interest in Dasa sahitya and specifically about shri Prasanna Shrinivasa dasaru.

Life and works of Shri Prasanna Shrinivasa Dasa Shri Prasanna Srinivasa dasaru lived in the period 1906 to 1995. The current study traces the life and teachings of Shri Prasanna Srinivasa dasa. The matter being very vast and the depth of the content in the works of Prasanna Srinivasa dasa make it a valuable study. Since he is quite contemporary to the present times his works seem very relevant to the current requirements of the people to deepen their devotion and get spiritually uplifted. The place of origin of Shri Prasanna Srinivasa dasaru is Tirupanittur, Cochin. Shri Venkata Purushottama Sharma the grandfather of Shri Prasanna Shrinivasa dasaru was a great Saamaveda scholar. He was the court pandit of the Tiruvaankur kingdom. His elder paternal uncle, Shri Venkataranga Sharma was also the court pandit of the same Tiruaankur kingdom. The lineage of the Sharma family was enjoying the continued support of the kingdom. He was born to Shri Venkata Krishna murthy and Smt Seetha in the village named Sulur near Coimbatore ,between the two rivers cauvery and Tambaram in the year 1906.He belonged to Koushika gotra with Saama shaka. The well known scholar Dr. Shri B.N. Sharma was his cousin.His daughter Smt Seetha Shastri Soori who holds a Phd in Sanskrit and teaches Madhwa siddantha to many students lives at Uudpi with her husband Shri Ramakrishna Shastri. He lived a fruitful life upto the age of 90 during which he has continuously striven to walk the spiritual path taking those who came in contact with him along this highway. He is a man of quite uncommon abilities. Even during his childhood he used to comment on certain subtle topics which a boy of that age would not even be able to understand .He had said that words which were uttered aong time back could be retrieved by one who is intuitively tuned to the persons who

uttered them or to the subject that is being spoken of. The same thing holds for words spoken today also. This was quite unthinkable at that time when there was no way of recording and storing voice. The subtle records of sounds are stored in aakashic records and this comment was passed by the five year old very confidently. He was not well versed in written Kannada but it is absolutely mind blowing that he composed many texts in poetic form in the language in which he was not literate. He used to listen to the songs sung by his mother Sitamma. It is said that at one time when she was singing Sri Rama Charitra he obtained the darshan of Ramachandra and Sita Devi . It is also said that he had the darshan of Vadiraja Guru. It is also believed that he obtained his Ankita at Tirupati and it was just Srinivasa later he went to seek the blessings of the then Vyasa Raja Mata pontiff who instructed him to prefix Prasanna to Srinivasa and compose devaranamas to sing the glory of Paramatma. Initially he studied Sanskrit and Astrology under his teacher by the name Shri Rama Shastri of Coimbatore. He was very intelligent and soon achieved mastery in these two subjects. Then he moved to Bangalore where he studied under Shri Delhi Ramarayaru . He studied the Sanskrit literature, Vedanta and its accompanying texts under this Guru. His guru was also immensely pleased with the brilliant intellect of Purushottam Rao as he was called before obtaining his ankita. His Guru also was much impressed that he had the grace of Hari Vayu and Guru as was evident from his insightful speeches and discussions. He also attended normal school and completed his medical education which was then known by the name -L.M.P. He did not go into the medical service at the behest of his mother. Instead, after completing his studies he joined the government service with the Posts and Telegraphs. At that time he used to scribble the names of God and short phrases and small snippets of poems on any paper that he used to have at the time on his table. This was witnessed by his colleague Sri Anand Rao . Whenever Anand Rao used to read these small and short literary compositions he used to become dumbfounded at the extraordinary acumen of Dasaru. Being a great devotee of Mantralaya Prabhu Sri Raghavendra Swamy he used to visit and perform seva there often. At one time he was suddenly taken with chest pain and at the advice of his wife he decided to seek the grace of Rayaru. It is said that he composed a devarnama on Rayaru seeking his grace. He later offered it to Rayaru after he had been graced with his Ankita. In a similar manner heused to visit Tirupati quite often. On one such occasion when he had gone there with his wife and son he was residing at the Mysore Chatra/shelter for pilgrims. This Mysore shelter was built by Sri Krishnaraja Wodeyaru to enable brahmins to reside and obtain the darshan of Sri Venkateswara Swamy. He came across a manuscript there ,which contained a devarnama of Shri Gopaladasaru's brother. In that song there was an earnest entreaty to paramatma seeking his Grace to sing His glory.. Dasaru who was much moved by this and was inspired to ask the Lord in an honest manner to Grace him to sing the songs speaking of his Glory The beginning of the following

song is said to be an outpour of his devotion at that time. Palisennanu Srihariye Sridevi dhoreye It was continued by Shri Delhi Ramarayaru , his guru.

Sarasi jasana pita ne
Partha sarathy pannagagiri nilaya
Pavamana vandhya Shri Bhu ramanane
Srishti godayane Aadi karana atula Mahimane
Bhajipa bhakthara klesha kaleyuva
Khaitabari Karuna sharadhiye

In this manner he composed a song with Pallavi . He was continuously contemplating on the form of Sri Srinivasa and it appeared to him to be highly pleasing Prasanna Srinivasa at that time his happiness knew no bounds and felt completely fulfilled. Dasaru also had the special grace of the peetaadipati of Vyasaraja mutt. He has been given the vigrah of Shri Prasanna Srinivasa devuru by Sri Vidya Prasanna theertharu who was the reigning peethadipati of Vyasaraja mutt at that time. An idol of "Ramaa devi" was given by Shri Vibhudatheertha of Adamaru mutt. He also had been given an idol of Kamalavaasini Padmavathi by his guru "Shri Delhi Rama rayaru". Later he also gave him Shri Bhu sameta Shri Janardhana idols. He also had obtained the idol Shri Lakshmi Narasimha from Chintalavadi temple. He also had been gifted the idol of Navaneeta Krishna from one of the Udupi mutt. He also obtained another Janardhana idol gifted to him by a grahasta.He used to perform the worship of these idols with great devotion. He used to visit different pilgrim centers and has composed many songs to describe the glory of the deities present there. He used to visit one temple of Veeraraghava at Tiruvallur which is enroute to Chennai from Bangalore near Vellore. He used to offer a brick of jaggery at the temple tank on almost all the Amavasya days as far as possible. It is said that offering jaggery would fulfil the wishes of the devotees and bring the grace of Lord Rama on them. He visited Parikal near Tirukoilur and composed a song on Parikal Narasimha. Similarly He has composed on Kanchi Varadaraja, Madurai Meenakshi, Chintalawadi Narsimha, Namakkal Namagiri and many more. As one can notice when one studies his works is that most of his compositions are in direct speech. It is indeed unique that he could visualise the form of God and speak to him with words of devotion. This approach to render one's heart's devotion to paramathma endears him to the seeker. His song which describes the Vishnu sahasranama and is the main topic for this study also follows this type of direct speech. After the first song with the Pallavi at Bangalore in the presence of his Shri Delhi Rama Rao in the praise of the Lord of Tirupathi. This was followed by many more compositions which were in the form of devaranama and also longer works spread over many chapters which he named as sandhis. He had many disciples

and it was a daily routine for him to perform japa for the well being of all his acquaintances and disciples. His daughter was also bestowed with an Ankita – gopi vallabha. Some of his disciples were Sridhar murthy, Anand Rao, Narayana achar etc. Works of Shri Prasanna Shrinivasa Dasaru : –

- Bhagvathaamritasara
- Vishnu sahasranama stotra rupabhashya
- Bhagavad Gitaamritasara
- Shri Hari praaturbhaavagalu
- Yati mattu Dasara chartitregalu
- Apoorva Bhagavad Roopa devaranamas
- Devaranamas on different dieties
- Devaraanamas at different kshetras
- Devaranamas on Surya and other grahas, on samvatsaras

Bhagavathaamruthasaara : This is a separate work not included in that connection. It is said that he had composed this work spanning over all the twelve skandas of the Bhagavatha purana. But unfortunately only the first skanda was published and few copies of this text are to be found amongst a close circle of shishyas. The first skanda of the Bhagavatha spans to 20 chapters. The first chapter is like an invocation to Paramamtma, other deities, yatis seeking their grace in the completion of this work. The remaining nineteen chapters match with the nineteen chapters in the Purana and consists of Kannada verses describing the details as told in the Bhagavatha purana itself. It will be indeed fortunate if we can recover the rest of this work. Vishnu sahasranama stotra rupabhashya In the first sandhi he gives an introduction to Vishnusahasranama and then goes on to explain the design of this work . He also explains that each verse in this work contains the word "namah" and the words and phrases that come before this word are all explanations based on the Brihati sahasra while those words and phrases which follow this are all explanations related to this and other meanings of this word. This is explained in detail in the chapters dedicated to the discussion of this work. Yati mattu Dasara chartitregalu: The biography of Saints and Haridasas. Prasanna Srinivasa Dasaru composed many long poems which describe the life and teachings of many saints and Haridasas of the Madhwa lineage . This work has been published as a book by itself. It is also available on the official Dasa sahitya website . A brief overview of some of the keerthanas has been taken up for this study. I have included a list of all these songs which were published by the Government of Karnataka. A brief summary or a discussion of the first and last verse known as aadi antya slokas of some of these long kritis will be taken for analysis. The names of the keerthana's are as follow: – 1) Sri Padmanabhatheerthara Vijaya – 2) Shri Narahari tirtha Vijaya – 3) Shri Akshobya tirtha Charitra 4) Shri Jayatirthara Vijaya – 5) Sri Brahmanya theertha stotra – 6) Shripada rajara anucharitra – 7) Shripada rajara Stuti – 8) Shri vyasarajharu – 9) Shri she-

sha Chandrikacharyara stotra – 10) Shri Keshava tirtha stotra 23 – 11) Bhavi Sameera Shri Vadirajara stotra – 12) Sri VijayIndra theerthara Charitra – 13) Shri sudhindra Charitra – 14) Sri Raghavendra vilasa – 15) Sri Guru Raghavendra – 16) Shri Dhirendra tirthacharya Charitra 17) Vidyadheesha theertha Vijaya – 18) Srivyaasatatvagnyara stotra – 19) Shri varadendra Vijaya – 20) Shri raghutama tirthara Vijaya – 21) Sri Sathya Priya tirtha Vijaya – 22) Satya Vijaya tirtha Charitra – 23) Sri sathyabodhatirtha Vijaya – 24) Sri Satyasandha tirthara Vijaya – 25) Sri Satya Dharma tirthara Charitra – 26) Sri Vishnu tirtha Vijaya – 27) Sri purandara Das Arya stotra – 28) Shri Vijay Das Arya Charitra – 29) Shri Gopala Das Arya Charitra – 30) Jagannath Dasara charitre – 32) Ibaramapura Krishna Acharyara Stotra

Here is a summary of his work on Sripadarajaru

Prasanna Sreepadaraja Anu Vijaya It consists of three chapters. The first chapter spread over 29 versus the second of 36 versus the last one of 24 verses. The aadi antya slokas of all chapters are the same. ShripadaRaja Guru sarvbhaumara pada Na pondi sharanade yemma paaliparu Shripa Narhari Shimshumaara Rama Gopi vallabha Ranga olida Mahanta. He surrenders to the feet of the eminent Guru Shripadaraja who has the grace of the consort of Lakshmi who appeared as Narasimha , Shimshumara who is the support for the Dhruva mandala which was bestowed on Dhruva by Shri Vasudeva. He is the amsha of Dhruva. He also had the abundant grace of Hayagreeva, Rama and Ranganatha of Sri Ranga who is non different from paramathma. He traces Shripada Rajaru's place in the lineage saying that Padmanabha teertha's disciple Sri Lakshmihara theertha's disciple was Swarna Varna teertha whose disciple is Sreepadharaju. His intelligence and acumen were spotted by his Guru at a very young age when he replied to a query by the Guru to the boy who was grazing cattle. His scholarship under the tutelage of his Guru soon shone brilliantly. The stalwarts of Tatvavada like Vibhudindra tirtha and Raghunath tirtha were impressed by his scholarship and gave him the title Sreepadaraja. He travelled on a victorious journey to Kashi, Pandrapur and other important places speaking about the glory of Srihari as disclosed by Acharya Madhava. He walked and preached the path of devotion through Bhagavata Dharma. He brought Ganga to the Narasimha theertha at Mulbagal with a view to enable old and feeble people who wanted to take a dip in the Ganga but had a lack of finances or lack of good health. His great contributions to society was being the teacher of Shri Vyasa Raja who wrote the Chandrika, Nyayamruta and Tarka Tandava. He had the fortune of obtaining the vigrahas of Sri Ranga vittala along with Rukmini and Satyabhama whom he worshipped with great devotion. He also started composing songs on Sri Hari which spoke about His supremacy, His infinite auspicious attributes, His creatorship, doership etc. He composed every song with complete focus and offered it to the Supreme Lord through his ankita, Ranga vittala . The songs are so powerful that contemplation on them can earn rich rewards in the form of knowledge and devotion to Srihari. Da-

saru sites the song which begins as follows Smarisuvavara kaava namma Suryaaneka prabhava Sura Munigala sanjiva Sri venkatesa namma poreva, He proclaims that if one listens to this song with devotion then there will be showers of fortune. He describes the worth of this keerthana in more than 3 verses which points to the fact that it might have been his own experience. Then he goes on to describe the compositions of Madhwanama by Sreepadaraja. He attained samadhi in the year 1408 on the 14th day of the bright half of the fortnight in the month of Jyeshta.He concludes with the following padya Rajiva Bhava pita rajarajeshwara Rajivaalaya patiyu shri Prasanna Srinivasa Prajwalisutiha madhva Raja Saha Sreepadarajarolu ivaralli sharanu Sharanade He says that Paramathma , the consort of Mahalakshmi ,who is his inner controller, known by the name Sri Prasanna Srinivasa is the lord who resides along with Madhwa in this Shripadaraja andreveals himself radiantly to his chosen devotees. He is the father of Brahma. He has the Vibhuti rupa named Rajarajeshwara which gives the power of control to a king . In this context it is worthy to note that Sreepadaraja was a king among sanyasis.

Kshetrasta devatha stotras • Shri Ranga puravasa Sri venkatesa • Thiruvallur Sri veeraraghava stotra • Kodala manikya Kshetra bharatha Pradyumna • Shri Dharmapuri Kshetra pura Vasudeva stotra • Shri Tandoni venkataramana • Shri Sethu madhava stotra • Shri namagiri Amma • Shri Namakkal Narasimha • Shri Bhawani ksethrasta sangameshwar stotra • Shri vridhachalam Ishwar • Sri Madurai Meenakshi stotra • Kanchi Kamakshi stotra • Shri Kanchi Varadaraja • Shri Chintalavadi Narasimha • Shri Panchamukhi Hanuman Apoorva stotras • Lakshmi Narayana Stuti • Bhuvaraha stuti • Shree Varaha Narahari Dhanvantri mantra • Shreekara Narayana mantra • Sree Narasimha MantraSree Narasimha • Sri vamana • Nirvaishamya yachana stotra • Shri ashtakshara vamana Mantra • Sri Rama Mantra • Shri Krishna • Shri Vyasa Raja narthana gopalakrishna Stotra Sri Prasanna Srinivasa Stuti • Sri Srinivasa devaru • Shri rajarajeshwara stotra hagu Sri kapila • Sri Ramadeva antryami • Shri pranamanarayana Krishna agamana stotra • Sayudha Chaturvimshati Vishnu roop stotra • Dhanaprada Shrikara karunya stotra • Srihari stotra • Shri Vishwa Parmatma stotra • Sri veeraraghava • Hayagreeva Mantra Stotra

Shree Prasanna Shrinivasa dasaru has composed quite a few kritis on Narasimha, all of which are very powerful and potent in conveying the emotional fervor which accompanies the knowledge of Hari's great and boundless glory. The following is one such kriti. jaya jaya jaya narasiMha jaya jaya mahAlakshmi ramaNa jaya nirAmaya sarvOtkrishTa aaha jaya kamalaja mriDadyamaravandyane namO bhayabahbhandahara bhakta janara rakshaka swAmi O Narasimha ,You are ever victorious . You are the giver of joy to Mahalakshmi who has wonderful lakshanas . You are flawless and Supreme. Ah! You are constantly worshipped by Brahma born of the lotus, Rudra and others. I offer my repeated obeisances to You, O Master, who unshackles the chain of fear and bondage of His devotees and protects them.

The word 'Narasimha" can be split as "nara" + "simha". With "n" having the meaning "nivritti" and "ara" being flawless. Simha is from the dhatu sihi himsaayaam. So it comes that Narasimha jostles the negativity in the minds and antahkaranas of His devotees. He puts them in samsaara, makes them experience in a way that they become free of defects. Just as the gold is heated and fired to become pure, the Lord places the souls in samsaara and puts them through expereinces of different kinds and uplifts them by giving them knowledge. He is always free from defects and is the supreme among such defectless beings as he is the only Independent entity who remains defectless effortlessly. Even Lakshmi is dependent on him as seen by the address "Lakshmiramana". This word also shows that He is not dependent on anyone even Lakshmi to obtain bliss and exists in that constant state of flawless bliss effortlessly. Further the word "kamala" expands to "kam" sukham , mam-jnaanam and ;laati meaning that which enables or brings. This Brahmaanda is the substratum for all jivas to perform sadhana and move to their eternal abodes. Brahma who is born from the lotus, is the abhimani for the Brahmanda it is his body. In other words He knows the kamala-14 worlds intimately and can understand to a certain extent the great abilities of the one who creates and sustains it. It is no wonder that Brahma sings His glory all the time. Similarly with Rudra- who is the controller of the mind. The embodied jiva's life is more or less defined by the way one uses the mind. If the mind itself has so much power, how much would its controller Rudra have? How much more infinite power would Rudra's srusti and sthithi have? It is really mystfying and humbling at the same time. We don't recall what we thought about a few minutes ago too, Rudra knows exactly what we should think about each moment and executes it to the second without any mistakes. We cannot remember our own thoughts, but Rudra remembers the thoughts of everyone and guides the direction of thought as suitable for their particular station in life. It is truly marvelous! Such a Rudra too constantly worships Hari, Narasimha, deeply in tune with magnitude of the workings of His infinite power through himself . It is no wonder that Brahma sings Hari's glory all the time and making the minds of all others function as they should. All other devathas like Indra,Kama, Yama etc are all also singing His praise being aware of His immense capabilities and overall Control.

Thus we conclude that the works of Prasanna Shrinivasa dasa have contributed well to the richness of Haridasa literature. The style of his work is in the form of Upasana as told in Upanishad. It has more to do with the mental talks with the diety he is singing of and is mostly in direct speech. The expression of the glories of God are well enunciated and hence very helpful for the common man to enhance his devotion through a focussed singing of these devotional hymns.

******

ಕೆಲ್ಲಂಗೆರೆ ತಿಮ್ಮಪ್ಪದಾಸರ ಕೀರ್ತನೆಗಳು

ಡಾ. ವಾಣಿಶ್ರೀ ಬಿ. ಎಂ.

ಕನ್ನಡ ತಾಯಿ ಭುವನೇಶ್ವರಿಯ ಮಡಿಲಲ್ಲಿ ಅನೇಕಾನೇಕ ಸಾಧಕರು ಜನಿಸಿ, ನಾಡು ನುಡಿಗೆ ಅಮೂಲ್ಯ ಸೇವೆ ಸಲ್ಲಿಸುವ ಮೂಲಕ ಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. ಧೀಮಂತ ವ್ಯಕ್ತಿತ್ವವುಳ್ಳ ಅನೇಕ ಸಾಹಿತ್ಯ ಪರಿಚಾರಕರು ಇಂದಿಗೂ ಸೇವೆ ಸಲ್ಲಿಸುತ್ತಿದ್ದಾರೆ. ಅಂತಹ ಸಾಧಕರಲ್ಲಿ ಪ್ರೊ. ಜಿ ಅಶ್ವತ್ಥನಾರಾಯಣ ಅವರೂ ಒಬ್ಬರು. ಅಧ್ಯಾಪಕರು, ಸಂಶೋಧಕರು, ಮಾರ್ಗದರ್ಶಕರೂ ಆದ ಶ್ರೀಯುತರು ಉತ್ತಮ ವಾಗ್ಮಿಗಳೂ, ಹೆಸರಾಂತ ಲೇಖಕರೂ ಆಗಿದ್ದಾರೆ. ಪದವಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ, ಅಮೇರಿಕಾದ ಕನ್ನಡ ಮಕ್ಕಳಿಗೂ ಕನ್ನಡದ ಪಾಠ ಹೇಳಿದ್ದಾರೆ. ಸರ್ಕಾರಿ ಸಿಬ್ಬಂದಿಗಳಿಗೆ ಆಡಳಿತ ಕನ್ನಡ ಶಿಬಿರ, ಕೆ.ಎ.ಎಸ್, ಐ.ಎ.ಎಸ್, ಪಿ.ಎಚ್.ಡಿ, ಎಂ.ಫಿಲ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ, ರೇಡಿಯೋ ಕಾರ್ಯಕ್ರಮಗಳನ್ನು ನೀಡಿ ಹಲವು ರೀತಿಗಳಲ್ಲಿ ಸಾಹಿತ್ಯದ ಉನ್ನತಿಗೆ ಶ್ರಮಿಸಿದ್ದಾರೆ. ಅವಿರತವಾಗಿ ಸಾಹಿತ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಕನ್ನಡ ನೆಲ, ಜಲ, ನುಡಿಗೆ ಅವರು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಅವರಿಗೆ 'ಸಾಹಿತ್ಯ ಪರಿಚಾರಕ' ಅಭಿನಂದನಾ ಗ್ರಂಥ ಪ್ರಕಟವಾಗುತ್ತಿರುವುದು ಸಂತಸದ ಸಂಗತಿ. ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಪಿ.ಎಚ್.ಡಿ. ಪದವಿಗಾಗಿ ಅಧ್ಯಯನ ನಡೆಸುವಾಗ ಅವರ ಪರಿಚಯವಾಯಿತು. ನಮ್ಮ ತರಬೇತಿ ತರಗತಿಗಳಲ್ಲಿ ಷಾಣ್ಮಾಸಿಕ ವರದಿ ಮಂಡಿಸುವ ಕಾಲದಲ್ಲಿ ತಪ್ಪದೇ ಹಾಜರಿರುತ್ತಿದ್ದ ಅವರು ನಮ್ಮ ಅಧ್ಯಯನದಲ್ಲಿನ ತಪ್ಪುಗಳನ್ನು ಗುರುತಿಸಿ ಒಳ್ಳೆಯ ವಿಚಾರಗಳನ್ನು ಅಭಿನಂದಿಸಿ ಹುರುಪು ತುಂಬುತ್ತಿದ್ದರು. ಎಂತಹ ಸಂದರ್ಭದಲ್ಲೂ ಯಾವುದೇ ಮಾಹಿತಿ ಬೇಕಾದರೂ ಅವರನ್ನು ಸಂಪರ್ಕಿಸಲು ಹಿಂಜರಿಯಬೇಕಾಗಿರಲಿಲ್ಲ. ಯಾವ ವಿಷಯವೇ ಆದರೂ ಅದರ ಬಗ್ಗೆ ನಿರರ್ಗಳವಾಗಿ ಮಾತನಾಡುವ ಅವರ ಶಕ್ತಿ ನಿರಂತರ ಅಧ್ಯಯನದ ಫಲ. ಒಮ್ಮೆ ಎ.ಪಿ.ಎಸ್. ಕಾಲೇಜಿನ ಮೂರ್ನಾಲ್ಕು ಕನ್ನಡ ಅಧ್ಯಾಪಕರು ಅವರಿಗೆ ದಾರಿಯಲ್ಲಿ ಒಟ್ಟಿಗೆ ಸಿಕ್ಕಾಗ 'ದಾಸ ಸಾಹಿತ್ಯದವರು' ಎಂಬ ತುಂಬು ಅಭಿಮಾನದಿಂದ ಮಾತನಾಡಿಸಿ ಸಂತಸಪಟ್ಟವರು. ವಿದ್ಯಾರ್ಥಿಗಳಿಗೆ ಸಮರ್ಥ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ಅವರು ಎಂದೂ ಹಿಂದೆ ಸರಿಯುತ್ತಿರಲಿಲ್ಲ. 'ಅನಾಜಿ' ಎಂದೇ ಇವರು ಪ್ರಸಿದ್ಧರು.

ಅನಾಜಿ ಅವರು ಕನ್ನಡಕ್ಕೆ ಸಲ್ಲಿಸಿರುವ ಮಹತ್ವದ ಸೇವೆಗಳಲ್ಲಿ ಗ್ರಂಥ ಸಂಪಾದನೆಯೂ ಒಂದು. ಹರಿದಾಸ ಸಾಹಿತ್ಯ ಸಂಪಾದನೆಯಲ್ಲೂ ಅವರ ಸೇವೆ ಅನುಪಮವಾದುದು. ಅವರ ಹಲವು ಹರಿದಾಸ ಸಾಹಿತ್ಯ ಸಂಪಾದನೆಯಲ್ಲಿ ಕೆಲ್ಲಂಗೆರೆ ತಿಮ್ಮಪ್ಪದಾಸರ ಕೀರ್ತನೆಗಳ ಸಂಪುಟವೂ ಒಂದು.

ಕೆಲ್ಲಂಗೆರೆ ತಿಮ್ಮಪ್ಪದಾಸರು: ೧೮೪೩-೧೯೨೬,

ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನಲ್ಲಿರುವ ಗ್ರಾಮ ಕಲ್ಲಂಗೆರೆ, ರಮಣೀಯ ಪ್ರಕೃತಿ ಸೌಂದರ್ಯದಿಂದ ಕೂಡಿದ ಸುಂದರ ಗ್ರಾಮ. ಚೋಳರಾಜ ತನ್ನ ಅರಸಿಯ ಹೆಸರಿನಲ್ಲಿ ಕಟ್ಟಿಸಿದ ಕೆರೆ ಅರಸೀಕೆರೆ ಎಂಬುದಕ್ಕೆ ಶಾಸನಗಳ ಆಧಾರವಿದೆ. ಕೆರೆಯ ಮಧ್ಯೆ ದ್ವೀಪದಂತಿರುವ ಶಿವನ ಗುಡಿ, ಗ್ರಾಮದೇವತೆ ಭ್ರಮರಾಂಬಿಕೆ. ಅಲ್ಲಿನ ಪ್ರಮುಖ ದೇವಾಲಯ ಶ್ರೀ ಲಕ್ಷ್ಮೀನಾರಾಯಣ, ಆಂಜನೇಯ, ಬಸವಣ್ಣ, ಶಿವ, ವೀರಭದ್ರ, ಅಂತರಗಟ್ಟೆ ಅಮ್ಮ, ಮೊದಲಾದ ದೇಗುಲಗಳೂ ಇಲ್ಲಿವೆ. ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬಗಳು ಧ್ಯಾನ, ಸಂಧ್ಯಾವಂದನೆ, ಜಪ, ತಪ, ಮಾಡುವ ತಾಣವಾಗಿತ್ತು.

ಅಲ್ಲಿನ ಜನಜೀವನ ಪರಸ್ಪರ ಸಹಕಾರದಿಂದ ಸಾಗುತ್ತಿತ್ತು. ಬೆಳೆದದ್ದನ್ನು ಮಾರಾಟ ಮಾಡುವ ಪರಿಪಾಠವಿರಲಿಲ್ಲ. ಮಾರುವುದು ಅವಮಾನದ ಕೆಲಸ ಎಂಬುದು ಅವರ ಭಾವನೆ. ದಾನ ಧರ್ಮಗಳು ನಿರಂತರ ನಡೆಯುತ್ತಿದ್ದವು. ವೇದಾಧ್ಯಯನ, ಕೂಲಿಮಠವೆಂಬ ಶಿಸ್ತಿನ ಶಾಲೆ ಇತ್ತು. ಪ್ರತಿ ಮನೆಯಲ್ಲೂ ವೇದಘೋಷ, ಅಮರಕೋಶ ಪಠನೆ ನಡೆಯುತ್ತಿತ್ತು. ಅಂದಿನ ಕಾಲದಲ್ಲಿ ಈ ಅಗ್ರಹಾರ ಒಂದು ವಿದ್ಯಾ ಕೇಂದ್ರವಾಗಿತ್ತು. ಇಲ್ಲಿ ಶ್ಯಾನುಭೋಗ ವೆಂಕಟಕೃಷ್ಣಪ್ಪನವರು ತಮ್ಮ ಇಬ್ಬರು ಪತ್ನಿಯರೊಂದಿಗೆ ನೆಲೆಸಿದ್ದರು. ಮಕ್ಕಳಿಲ್ಲದ ಅವರು ಎಳವಾರೆ ದಾಸಪ್ಪ ಅವರನ್ನು ದತ್ತು ಸ್ವೀಕಾರ ಮಾಡಿದರು. ಮನೆತನದ ಪಾರಂಪರಿಕ ಶ್ಯಾನುಭೋಗತನ, ಸಮಸ್ತ ಆಸ್ತಿ ಪಾಸ್ತಿಗೆ ದಾಸಪ್ಪನೇ ವಾರಸುದಾರರಾದರು. ಅವರ ಮಗನೇ ತಿಮ್ಮಪ್ಪದಾಸರು

೧೮೩೪ ರಲ್ಲಿ ತಿಮ್ಮಪ್ಪದಾಸರು ಜನಿಸಿದರು, ಆತ್ರೇಯಸ ಗೋತ್ರದ ಹೊಯ್ಸಳ ಕರ್ನಾಟಕ ಪಂಗಡದವರು, ಮಾಲೇಕಲ್ಲು ತಿರುಪತಿಯ ವೆಂಕಟರಮಣನ ಅನನ್ಯ ಭಕ್ತರು. ತಿಮ್ಮಪ್ಪದಾಸರ ಪತ್ನಿ ಶ್ಯಾನುಭೋಗ ಶಾಮಣ್ಣನವರ ಮಗಳಾದ ಸುಬ್ಬಲಕ್ಷ್ಮಮ್ಮ. ಸತ್ಕುಲ ಪ್ರಸೂತೆಯಾದ ಈಕೆ ಬಿಳೇಕಲ್ಲು ರಂಗನಾಥನ ಪರಮ ಭಕ್ತೆ. ದಾಸರಿಗೆ ಒಟ್ಟು ಹನ್ನೊಂದು ಮಕ್ಕಳು. ಐದು ಹೆಣ್ಣು. ಆರು ಗಂಡು, ಮನೆಯ ಸಂಪ್ರದಾಯದಂತೆ ವೇದೋಪನಿಷತ್ತುಗಳ. ಅಧ್ಯಯನ, ಅಧ್ಯಾಪನ ಮಾಡಿ ದಾಸರು ಶಾಸ್ತ್ರ ಪಾರಂಗತರೆನಿಸಿದರು. ತಿಮ್ಮಪ್ಪದಾಸರಿಗೆ ೧೭-೧೮ ವರ್ಷವಾಗುವ ಹೊತ್ತಿಗೆ ತಂದೆ ನಿಧನರಾದರು. ಆ ವೇಳೆಗಾಗಲೇ ದಾಸರು ವ್ಯವಹಾರ, ಬರವಣಿಗೆ, ಸಾಹಿತ್ಯಗಳಲ್ಲಿ ಅದ್ವಿತೀಯ ಪಾಂಡಿತ್ಯ ಸಂಪಾದಿಸಿದ್ದರು.

ಅಂದಿನ ದಿನಗಳಲ್ಲಿ ಭೂಮಿಯ ಉತ್ಪತ್ತಿಯಿಂದ ಜೀವನ ನಿರ್ವಹಣೆ ಕಷ್ಟ ಸಾಧ್ಯವಾಗಿದ್ದಿತು. ತಿಮ್ಮಪ್ಪದಾಸರು ಅನ್ಯ ಮಾರ್ಗಗಳಿಂದ ಸಂಪಾದಿಸಲು ಪ್ರಯತ್ನ ಮಾಡಬೇಕಾಯಿತು. ತಮ್ಮ ಮಿತ್ರ ಅರಸೀಕೆರೆ ಶ್ಯಾನುಭೋಗರು ದಾಸಪ್ಪನವರಿಗೆ ಶ್ಯಾನುಭೋಗಿಕೆ ಲೆಕ್ಕ ಬರೆಯುವ ಕೆಲಸವನ್ನು ನೀಡಿದರು. ಮಕ್ಕಳಲ್ಲಿ ಹಿರಿಯ ಮಗ ಉಪಾಧ್ಯಾಯನಾದನು ಜೀವನೋಪಾಯಕ್ಕೆ ಅನೇಕ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಇದರ ಜೊತೆಗೆ ದಾಸರು ಸಂಗೀತ ವಿದ್ವಾನ್ ರಾಮಣ್ಣಾರ್ಯರಲ್ಲಿ ಸಂಗೀತಾಭ್ಯಾಸ ಮಾಡಿದರು. ಶಿಷ್ಯನ ಪ್ರತಿಭೆಗೆ ಮಾರುಹೋಗಿ ರಾಮಣ್ಣಾರ್ಯರು ತಮ್ಮಲ್ಲಿದ್ದ ವಿದ್ಯೆಯ ಜೊತೆಗೆ ಅಮೂಲ್ಯ ಸಂಗೀತ ಶಾಸ್ತ್ರದ ಪುಸ್ತಕಗಳನ್ನು ತಿಮ್ಮಪ್ಪದಾಸರಿಗೆ ನೀಡಿದರು ನಂತರ ಸ್ವಂತ ಪ್ರತಿಭೆಯಿಂದ ಅಧ್ಯಯನ ಮಾಡಿ ದಾಸರು ಕೀರ್ತನಕಾರರಾಗಿ ರೂಪುಗೊಂಡರು. ಕ್ರಮೇಣ ಅವರ ಹಿರಿಯ ಮಗ ದಾಸಪ್ಪನಿಗೆ ಸಂಸಾರದ ಸಂಪೂರ್ಣ ಜವಾಬ್ದಾರಿ ವಹಿಸಿದರು. ಸದಾ ದೈವ ಚಿಂತನೆ,

ಪುರಾಣ, ಪುಣ್ಯಕಥೆ, ಭಾರತ, ಭಾಗವತಗಳಲ್ಲಿ ತಲ್ಲೀನರಾಗಿ ಹರಿಕಥಾ ಕಾಲಕ್ಷೇಪ ಮಾಡುತ್ತಿದ್ದರು. ಇವರ ವಿದ್ವತ್ಪೂರ್ಣ ಹರಿಕಥೆ ಕೇಳಲು ದೂರದ ಊರುಗಳಿಂದಲೂ ಜನ ಬಂದು ಸೇರುತ್ತಿದ್ದರು. ಉಭಯಭಾಷಾ ಕೋವಿದರಾದ ತಿಮ್ಮಪ್ಪದಾಸರ ಸಂಸ್ಕೃತ ರಚನೆಗಳು, ಸಂಸ್ಕೃತ ಕೀರ್ತನೆಗಳು, ಗೀತ ಶ್ಲೋಕಗಳನ್ನು ಸಂಸ್ಕೃತ ಗ್ರಾಮ ಮತ್ತೂರಿನ ಜನ ಬಹುವಾಗಿ ಶ್ಲಾಘಿಸಿದ್ದರು. ಡಿ.ವಿ.ಜಿ. ಅವರೂ ತಿಮ್ಮಪ್ಪದಾಸರ ಅಧ್ಯಾತ್ಮ ರಾಮಾಯಣ ಗ್ರಂಥವನ್ನು ಓದಿಸಿ ಕೇಳಿ ಮೆಚ್ಚಿದ್ದರು.

ಒಮ್ಮೆ ಉಡುಪಿ ಕ್ಷೇತ್ರಕ್ಕೆ ಭೇಟಿ ನೀಡಿದ್ದಾಗ ಪರ್ಯಾಯ ಶ್ರೀಗಳು 'ಶ್ರೀಕೃಷ್ಣ ಲೀಲಾಮೃತ' ಕೃತಿಯನ್ನು ಕೇಳಿ ಅನುಗ್ರಹಿಸಿದ್ದರು. ದಾಸರು ಬರೆದಿರುವ ಅಧ್ಯಾತ್ಮ ರಾಮಾಯಣವು ಒಂದು ಸುಂದರ ಯಕ್ಷಗಾನ ಹರಿಕಥಾ ರೂಪಕ. ಮತ್ತೂರಿನ ಸಂಸ್ಕೃತ ವಿದ್ವಾಂಸರಿಗೆಂದೇ ಬರೆದ ವಿದ್ವತ್ಪೂರ್ಣ ಶ್ಲೋಕ ಹಾಗೂ ಸಂಸ್ಕೃತ ಪದ್ಯಗಳನ್ನು ಒಳಗೊಂಡ ಕೃತಿ. ದಾಸರದ್ದು ಬಹುಮುಖ ಪ್ರತಿಭೆ, ಕೀರ್ತನಕಾರರೂ, ಸಂಗೀತಗಾರರೂ, ವೇದ ಪಾರಂಗತರೂ ಆಗಿದ್ದ ಅವರು ನಾಟಕ ಕಂಪನಿಯನ್ನು ಸ್ಥಾಪಿಸಿದ್ದರು. ಚಿತ್ರಕಲೆಯಲ್ಲೂ ಅವರಿಗೆ ಪರಿಶ್ರಮವಿತ್ತು.

ತಿಮ್ಮಪ್ಪದಾಸರ ಕೃತಿಗಳು:

ತಿಮ್ಮಪ್ಪದಾಸರು ವರ್ಷಪೂರ್ತಿ ಅಂದರೆ ೩೬೫ ದಿನಗಳ ಕಾಲ ಮಾಡುವಂತಹ ೩೬೫ ಹರಿಕಥಾ ರೂಪಕಗಳನ್ನು ರಚಿಸಿದ್ದಂತೆ ತಿಳಿದುಬರುತ್ತದೆ. ಮಕ್ಕಳಿಗಾಗಿ ಚಿಕ್ಕ ಚಿಕ್ಕ ಹರಿಕಥೆಗಳನ್ನು ಬರೆದಿದ್ದಾರೆ. ಮಕ್ಕಳು ಚಿಕ್ಕ ವಯಸ್ಸಿನಿಂದಲೇ ಭಕ್ತಿ ಮಾರ್ಗದಲ್ಲಿ ಬೆಳೆದು ನೀತಿವಂತರಾಗಬೇಕೆಂಬುದು ಅವರ ಅಭಿಲಾಷೆಯಾಗಿತ್ತು. ಭಕ್ತ ಪ್ರಹ್ಲಾದ, ಚಂದ್ರಹಾಸ, ಹರಿಶ್ಚಂದ್ರ, ಶ್ರೀಕೃಷ್ಣಬಾಲಲೀಲೆ ಮೊದಲಾದವು ಮಕ್ಕಳಿಗಾಗಿ ಬರೆದ ಕೃತಿಗಳು. ಹರಿದಾಸ ಕೃತಿಗಳ ಕುರಿತು ಹೇಳುವುದಾದರೆ, ಸುಮಾರು ೩೭ ಕೀರ್ತನೆಗಳನ್ನು ವಿವಿಧ ದೇವತೆಗಳ ಕುರಿತಾಗಿ ರಚಿಸಿದ್ದಾರೆ. ಆರತಿ ಹಾಡುಗಳೂ, ಲಾಲಿ ಪದ, ಆಶೀರ್ವಾದದ ಹಾಡು, ಬೀಗರ ಹಾಡುಗಳು, ಹಸೆಗೆ ಕರೆಯವ ಹಾಡು ಮೊದಲಾದ ಸಂಪ್ರದಾಯದ ಹಾಡುಗಳನ್ನು ರಚಿಸಿದ್ದರೂ ಅವುಗಳನ್ನು ಸಂಗ್ರಹಿಸಿಲ್ಲ. ಅಧ್ಯಾತ್ಮ ರಾಮಾಯಣ ಮತ್ತು ಶಶಿರೇಖಾ ಪರಿಣಯ ಎಂಬ ಹರಿಕಥಾ ರೂಪಕಗಳು ಮಾತ್ರ ಉಪಲಬ್ಧವಾಗಿವೆ.

ತಿಮ್ಮಪ್ಪದಾಸರ ಕೆಲವು ಕೀರ್ತನೆಗಳ ವಿಶ್ಲೇಷಣೆಯನ್ನು ಮಾಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ತಿರುಪತಿಯ ಶ್ರೀನಿವಾಸನ ಭಕ್ತರಾದ ದಾಸರ ಅಂಕಿತ 'ಸುರಗಿರೀಶ', 'ಸುರಶೈಲವಾಸ', 'ಸಹ್ಯಾದ್ರಿ ವಿಹಾರ' ಎಂದು ಗುರುತಿಸಬಹುದಾಗಿದೆ. ಇವರ ಕೃತಿಗಳಲ್ಲಿ ಹರಿ, ಹರ, ಪಾರ್ವತಿ, ಗಣಪತಿ, ದಶಾವತಾರ, ಆತ್ಮನಿವೇದನೆ, ಅರಿಷಡ್ವರ್ಗಗಳು ಲೋಕನೀತಿ ಮೊದಲಾದವುಗಳನ್ನು ಗುರುತಿಸಬಹುದು. ಶ್ರೀಹರಿಯ ಕೃತಿಗಳಲ್ಲಿ ರಾಮನನ್ನು ಕುರಿತ ಕೀರ್ತನೆಗಳು ಅಧಿಕವಾಗಿವೆ. ನಂತರ ಕೃಷ್ಣನನ್ನು ಕೊಂಡಾಡಿದ್ದಾರೆ.

ಎತ್ತಹೋದರು ಕಾವರಿಲ್ಲ ನೋಳ್ಪರಿಲ್ಲ ಸ
ರ್ವೋತ್ತಮ ನಿನ್ಹೊರತಿನ್ನೊಬ್ಬರಿಲ್ಲ
ಮೃತ್ಯು ಬಾಯ್ದೆರೆದಿಹುದಲ್ಲ ಈಗಾರಿಲ್ಲ ನಿನ್ನ
ಹಸ್ತದಿಂದ ಅಭಯನೀಡೋ ಸಿರಿನಲ್ಲ

ನಾನಾ ಜನ್ಮಗಳಲ್ಲಿ ಬಳಲಿ, ದುಷ್ಟ ವಿಷಯಗಳಲ್ಲಿ ಮುಳುಗಿ, ಬದುಕಿನಲ್ಲಿ ಏನೊಂದು ಸುಖವಿಲ್ಲದೆ ತೊಳಲುತ್ತಿರುವ ತನ್ನನ್ನು ದಯೆ ತೋರಿ ಪೊರೆಯಬೇಕಾದ ಹೊಣೆ ದೀನ ರಕ್ಷಕನೆಂಬ ಬಿರುದು ಹೊಂದಿದ ಸುರಗಿರಿ ವೆಂಕಟನದ್ದು ಎಂದಿದ್ದಾರೆ. ತಮ್ಮ ಮನಸ್ಸಿನ ಹತಾಶೆ, ನೋವುಗಳನ್ನು ಶ್ರೀಹರಿಯಲ್ಲಿ ಹೇಳಿಕೊಂಡು, ತಮ್ಮ ತಪ್ಪುಗಳಿಗೆ ಪರಿತಪಿಸಿ ಆತ್ಮನಿವೇದನೆ ಮಾಡಿಕೊಂಡಿದ್ದಾರೆ. ಇದರ ನಂತರ ಕೃಷ್ಣನ ಬಾಲಲೀಲೆಗಳನ್ನು ಹಾಡಿರುವ ಕೃತಿಗಳಿವೆ.

ಹರಿದಾಸ ಸಾಹಿತ್ಯದ ಸಂಪ್ರದಾಯದಲ್ಲಿ ವಾಯುದೇವರ ಅವತಾರತ್ರಯಗಳನು ಹಾಡಿ ಹೊಗಳುವ ಪರಿಪಾಠವಿದೆ, ಭಾಗವತ ಸಂಪ್ರದಾಯದ ಕೆಲವು ಹರಿದಾಸರು (ಹೆಳವನ ಕಟ್ಟೆ ಗಿರಿಯಮ್ಮ, ಅದ್ವೈತದ ಕೆಲವು ಹರಿದಾಸರು, ತಿಮ್ಮಪ್ಪದಾಸರು ಮೊದಲಾದವರು) ಹನುಮನನ್ನು ಮಾತ್ರ ಸ್ತುತಿಸಿರುವುದು ಕಂಡುಬರುತ್ತದೆ. ತಿಮ್ಮಪ್ಪದಾಸರು ರಾಮಭಂಟ ತ್ರೇತಾಯುಗದ ಹನುಮಂತನನ್ನು ಸ್ಮರಿಸಿದ್ದಾರೆ. ಹನುಮಂತ ಶರಧಿ ದಾಟಿ, ಲಂಕೆ ಸುಟ್ಟು, ಸೀತೆಗೆ ಉಂಗುರು ನೀಡಿದ ವಿಚಾರಗಳನ್ನು ಹೇಳುತ್ತಾ

ರಘು ಕುಲೇಶ್ವರನ್ನ ನಿನ್ನ ಪೆಗಲೊಳಗೇರಿಸಿ । ಜಗದ
ಭಾರ ಇಳುಹಿದ್ಯೆ ಪರಮ ಸಾಹಸೀ

ಎಂದು ಹನುಮನನ್ನು ಭಕ್ತಿ ಭಾವದಿಂದ ಸ್ತುತಿಸಿದ್ದಾರೆ. ತನ್ನ ಹೆಗಲಿನಲ್ಲಿ ಸ್ವಾಮಿಯನ್ನು ಹೊತ್ತು ಮಾರುತಿಯಂತೆ ಪ್ರಭು ಶ್ರೀರಾಮನನ್ನು ಒಲಿಸಿಕೊಳ್ಳಲು ಮತ್ತಾರಿಗೆ ಸಾಧ್ಯ? ಅಂತಹ ಮಾರುತಿಯಲ್ಲಿ ಸುರ ಗಿರೀಶನನ್ನು ಭಜಿಸಿ ಮೆಚ್ಚಿಸುವ ದಾರಿ ತೋರು ಎಂದು ಪ್ರಾರ್ಥಿಸಿದ್ದಾರೆ.

ಗಣೇಶ, ಶಿವ, ಪಾರ್ವತಿಯರ ಕುರಿತ ಕೃತಿಗಳು ಕೆಲವಿವೆ. ಗಣಪತಿಯನ್ನು ಹರಿಕಥೆ ಮಾಡುವ ಮೊದಲಲ್ಲಿ ಸ್ಮರಿಸಿದ್ದಾರೆ. ಜಗನ್ಮಾತೆ ಪಾರ್ವತಿಯನ್ನು

ಜಗವೆಲ್ಲ ನನದೆಂದು ಗರ್ವದೊಳಿಂದು
ಎನಗೆ ಸರಿಯಾರು ಎಂದು ।
ವಿಗಡತನದಲಿ ನಗುತಲಿರುವೆ ನೀನೆ
ನ್ನಘವು ಪೋಗುವ ಬಗೆಯಾವುದೋ
ನಗೆಯ ಮಾಡದಿರು ಹಗಲಿರುಳು ನಿ
ನ್ನಗಲದೇ ಧ್ಯಾನಿಸುವೆ ಶಂಕರಿ.

ಅಹಿವೇಣಿ, ಸರಸಿಜಮುಖಿ ವಿಮಲ ಚರಿತೆ ಎಂದೆಲ್ಲ ಹೇಳಿ ಶರಣಾಗತ ಭಾವದಿಂದ ತನ್ನ ಭಾರ ವಹಿಸಿಕೊಂಡು ಸಲಹೆಂದು ಬೇಡಿದ್ದಾರೆ. ಸುರ ಗಿರೀಶನ ಸೋದರಿ ಉದ್ಧರಿಸು ಎಂದು ಬೇಡಿದ್ದಾರೆ. ಬನಶಂಕರಿ ದೇವಿಯನ್ನು ಕುರಿತ ಒಂದು ಕೀರ್ತನೆಯಿದೆ.

ಇನ್ನು ರುದ್ರದೇವರ ಕುರಿತ ಕೀರ್ತನೆಯಲ್ಲಿ

'ಸದಾಶಿವನ ಕೊಂಡಾಡೊ ಎಲೆ ಮನ ' ಎಂದು ಪ್ರಾರಂಭಿಸಿ

ಹಿಮಾಂಶುಧರ ಹರ ಹಿಮಾದ್ರಿಜಾ ವರ
ಕಾಮಾರಿ ಕಾಲಹರ ಎಲೆಮನ.

ಚಂದ್ರನನ್ನು ಧರಿಸಿದವನಾಗಿ, ಹಿಮಾದ್ರಿಯ (ಪರ್ವತರಾಜ) ಪುತ್ರಿಯ ವರನಾಗಿ, ಕಾಲಹರನಾಗಿ ಯಮನಿಗೆ ಸೋಲುಂಟು ಮಾಡಿದ ರುದ್ರದೇವನನ್ನು ಮಂದಾಕಿನಿಯನ್ನ ಧರಿಸಿದ, ಸಿಂಧೂರನನ್ನು ಸಂಹರಿಸಿದ, ನಂದಿವಾಹನನಾದ ಶಂಕರನನ್ನು ಸದಾನಂದ ಎಂದು ಮನದುಂಬಿ ಸ್ತುತಿಸಿದ್ದಾರೆ. ಈ ಕೀರ್ತನೆಯಲ್ಲಿ ವೆಂಕಟೇಶ್ವರನ ಸಖ ಎಂದಿದೆ. ತಿಮ್ಮಪ್ಪದಾಸರ ಸುರಗಿರೀಶ ಎಂಬ ಅಂಕಿತವಿಲ್ಲ. ಆದರೆ ಅವರ ಕಡೆಯ ಮಗಳು ಇದು ತಮ್ಮ ತಂದೆಯವರ ರಚನೆ ಎಂದಿರುವುದಾಗಿ ತಿಳಿದು ಬರುತ್ತದೆ.

ದಾಸರ ರಚನೆಗಳಲ್ಲಿ ಶ್ರೀಹರಿಯ ದಶಾವತಾರಗಳು, ಆತ್ಮನಿವೇದನಾತ್ಮಕ ಕೃತಿಗಳು, ಲೋಕನೀತಿ, ಮೊದಲಾದ ಕೀರ್ತನೆಗಳಿವೆ. ಲಾಲಿ ಹಾಡಿನಲ್ಲಿ ಶ್ರೀಹರಿಯ ದಶಾವತಾರಗಳನ್ನು ತಂದಿದ್ದಾರೆ. ಐದು ನುಡಿಗಳಲ್ಲಿ ಹತ್ತು ಅವತಾರಗಳನ್ನು ಹೇಳಿದ್ದಾರೆ. ರಾಮಾವತಾರದಲ್ಲಿ ಅಹಲ್ಯೆಯ ಶಾಪ ವಿಮೋಚನೆ ಮಾಡಿದ ವಿಚಾರ ಅರುಹುತ್ತಾರೆ. ರಾಮ ಪಾದಸ್ಪರ್ಶದಿಂದ ಪುನೀತಳಾಗಿ ಮೂಲ ರೂಪ ಪಡೆದ ಆ ತಪಸ್ವಿನಿಗೆ ರಾಮರ ದಿವ್ಯ ದರುಶನದ ವಿನಾ ಬೇರೇನೂ ಬೇಡ. ಬ್ರಹ್ಮ ಜ್ಞಾನ ಪಡೆದ ಅಹಲ್ಯೆಯು ಅವನ ಮೂರ್ತಿ ಕಂಡ ಕೂಡಲೆ ಭಗವಂತನನ್ನು ಅನನ್ಯವಾಗಿ ಸ್ತುತಿಸುತ್ತಾಳೆ. ಈ ಕೃತಿಯಲ್ಲಿ ಅಹಲ್ಯೆಯ ಮೂಲಕ ದಾಸರು ಸ್ವಾಮಿಯ ಸೃಷ್ಟಿ, ಸ್ಥಿತಿ, ಲಯವೇ ಮೊದಲಾದ ಶ್ರೀಹರಿಯ ವ್ಯಾಪಾರಗಳನ್ನು ವಿವರಿಸಿದ್ದಾರೆ.

ಆತ್ಮ ನಿವೇದನೆ ಹರಿ ದಾಸ್ಯದ ಮೊದಲ ಮೆಟ್ಟಿಲು. ಭಕ್ತನು ತನ್ನ ಆತ್ಮ ಶೋಧನೆ ಮಾಡಿಕೊಂಡು ತಪ್ಪುಗಳನ್ನು ಅರಿತು, ಒಪ್ಪಿಕೊಂಡು ಶ್ರೀಹರಿಯಲ್ಲಿ ನಿವೇದಿಸಿ, ಪಶ್ಚಾತ್ತಾಪಪಟ್ಟು ಅನನ್ಯವಾಗಿ ಅವನಿಗೆ ಶರಣಾಗುತ್ತಾನೆ. ಆಗ ಆತ್ಮನಿವೇದನೆಯ ಕೀರ್ತನೆಗಳು ರಚಿತವಾಗುತ್ತವೆ. ತಿಮ್ಮಪ್ಪದಾಸರ ಹಲವಾರು ಕೃತಿಗಳು ಆತ್ಮ ನಿವೇದನಾತ್ಮಕವಾಗಿವೆ.

ಅರಿಷಡ್ವರ್ಗಗಳು ಅಷ್ಟಮದಗಳು ತಮ್ಮನ್ನು ಹೇಗೆ ಕಾಡುತ್ತವೆ ಎಂಬುದನ್ನು ದಾಸರು ದೈನ್ಯದಿಂದ ನಿವೇದಿಸಿಕೊಳ್ಳುತ್ತಾರೆ.

ಆರು ಮಂದಿಯ ಕೂಡೆ । ಹೋರಾಡಿ ಬಳಲಿದೆ ।
ಯಾರೀಗ ಬಿಡಿಸುವರಿಲ್ಲ । ನಿನ್ನೊರತೊಬ್ಬರಿಲ್ಲ ।
ಎಂಟು ಆಸೆಗಳು ಬೆ ।ನ್ನಂಟಿ ಬಾಧಿಸುತಿವೆ
ನೆಂಟರಿಷ್ಟರು ಬಿಡಿಪರಿಲ್ಲ । ನಿನ್ನೊರತೊಬ್ಬರಿಲ್ಲ ।

ಎಷ್ಟು ಹೋರಾಡಿದರೂ ಬಿಡಿಸಲು ಯಾರೂ ಇಲ್ಲ ಹರಿಯನ್ನು ಬಿಟ್ಟರೆ ಅನ್ಯತ್ರ ಗತಿ ಇಲ್ಲ ಎಂಬ ದೈನ್ಯ ಇಲ್ಲಿದೆ.

ಇನ್ನೊಂದು ಕೀರ್ತನೆಯಲ್ಲಿ

ಮಾಡಬಾರದಾ ಖೋಡಿ ಕರ್ಮವ
ಮಾಡಿ ನಿಂದು ತಾನಾದೆನ್ನೈಯನೆ
ನೋಡದಿರು ಎನ್ನ ಗಾಢ ರೋಷವನ್ನ
ಮೂಢನಾಗಿ ನಿನ್ನ ಬೇಡಿಕೊಂಬೆನಯ್ಯ

ಇಂದ್ರಿಯಂಗಳ ಸುಖಕ್ಕಾಗಿ ಹರಿಯಿಂದ ದೂರವಾಗಿ, ಹಿಂದು ಮುಂದು ಆಲೋಚಿಸದೆ ಮಾಡಬಾರದ್ದನ್ನು ಮಾಡಿ ನೊಂದಿದ್ದೇನೆ. ಈಗ ನಿನ್ನ ಮೊರೆ ಹೊಕ್ಕಿದ್ದೇನೆ ಬಿಡದೆ ರಕ್ಷಿಸು, ಪಾರುಗಾಣಿಸು ಎಂದು ಬೇಡಿದ್ದಾರೆ. ಮಾನವ ಜನ್ಮದಲ್ಲಿ ಮತ್ತ ಮತ್ತೆ ಬಂದು ತೊಳಲಿ ಬಳಲುವುದಕ್ಕಿಂತ ಮುಕ್ತಿಯೇ ಲೇಸು. ಪರಮನಲ್ಲಿ ಮನವ ನಿಲ್ಲಿಸಿ ಅವನ ಧಾಮ ಸೇರಿ ಶಾಶ್ವತ ಸುಖ ಪಡೆಯುವ ಆಸೆ ದಾಸರದ್ದು.

ಮುಕ್ತಿಯೇ ಸುಖವಲ್ಲದಿನ್ನಿಲ್ಲ ಸುಜನರಿಗೆ
ಭಕ್ತಿಯೆಂಬುದು ಬಹುದು ಸಟೆಯಲ್ಲ.
ಅತ್ಯಧಿಕ ಕಾಮ್ಯದಲೆ ಬಹುಲೋಕೋತ್ತರಂಗಳ ಪಡೆದು ಕಡೆಯಲಿ
ಮೃತ್ಯುವಶವಾಗುವರು ಪುನರಾವೃತ್ತಿರಹಿತದಿ ಸತ್ಯವಾಗಿಹ

ಮುಕ್ತಿಯೇ ಸತ್ಯ ಅದೇ ಪರಮ ಸಂತಸಕರ. ರಾತ್ರಿ ಕಂಡ ಬಾವಿಯಲ್ಲಿ ಹಗಲು ಬೀಳುವರುಂಟೆ ಎಂಬಂತೆ ಜಗತ್ತಿನ ಸುಖವೇ ಶಾಶ್ವತವೆಂದು ತಿಳಿದು ಮನುಷ್ಯನು ಮೆರೆಯುತ್ತಾನೆ. ಹರಿದ ನೀರು ಮತ್ತೆ ತಿರುಗಿಬಾರದು ಅಂತೆಯೇ ಒಮ್ಮೆ ಬಂದ ಜನ್ಮ ಮತ್ತೆ ಬಾರದು ಮನುಷ್ಯ ಜನ್ಮ ಬಂದಾಗ ಐಹಿಕ ಸುಖಕ್ಕೆ ಮಾರು ಹೋಗದೆ ಲಕ್ಷ್ಮೀವಲ್ಲಭನೇ ದಿಟವೆಂದು ನಂಬಿ ಭಕ್ತಿ ವಿರಕ್ತಿಯಿಂದ ಮನಸ್ಸನ್ನು ಅವನಲ್ಲಿ ನಿಲ್ಲಿಸಿ ಶಾಶ್ವತ ಸುಖ ಮುಕ್ತಿಯನ್ನು ಹೊಂದಲು ದಾಸರು ತಿಳಿ ಹೇಳುತ್ತಾರೆ.

ಹರಿದಾಸ ಸಾಹಿತ್ಯದಲ್ಲಿರುವಂತೆ ನೀತಿ ಬೋಧಕ ಕೀರ್ತನೆಗಳನ್ನು ದಾಸರು ರಚಿಸಿದ್ದಾರೆ. ಜಗತ್ತಿನಲ್ಲಿ ಹರಿಚರಣ ನಂಬಿ ನಡೆಯುವುದೇ ಮುಕ್ತಿ ಮಾರ್ಗ ಸಂಸಾರದ ಕ್ಷಣಿಕ ಸುಖಕ್ಕೆ ವಶನಾಗಿ ದುರಾಸೆಯಿಂದ ಎಷ್ಟು ಗಳಿಸಿದರೂ ಹೋಗುವಾಗ ಒಯ್ಯಲು ಸಾಧ್ಯವಿಲ್ಲ ಮುಕ್ತಿ ಮಾರ್ಗವನ್ನು ಅರಿಯುವುದರಲ್ಲೇ ಜೀವಿತ ಕಳೆದು ಹೋಗಿರುತ್ತದೆ. ಅಶಾಶ್ವತವಾದ ಲೌಕಿಕ ಕಾಮನೆಗಳನ್ನು ವರ್ಜಿಸಿ, ಮುಕುತಿ ಸುಖ ಬಯಸಿ ಸುರಗಿರೀಶನ ಧ್ಯಾನ ಮಾಡುವುದೇ ಜಾಣತನ ಎನ್ನುತ್ತಾರೆ. ಕಾಯಲು ಹರಿ ಇರುವಾಗ ವ್ಯರ್ಥ ಚಿಂತೆ ಏಕೆ ಎಂಬ ಪ್ರಶ್ನೆ ದಾಸರದು.

ಚಿಂತೆ ಯಾಕೋ ಬಯಲ ಭ್ರಾಂತಿ ಯಾತಕೆ
ಅಂತರಂಗದೊಳರಿತು ನಿಶ್ಚಿಂತನಾಗಿ ಹರಿಯ ಭಜಿಸು
ಯಾರಿಗಾಗಿ ಶೋಕಿಸುವೆ? ಬಂಧು ಬಳಗ ಯಾರು?
ಜಲದ ಬೊಬ್ಬುಳಿಯಂತಹ ದೇಹಕ್ಕಾಗಿ ಏಕೆ ತವಕ ಪಡುವೆ.
ಜಾಳು ವಿಷಯಗಳನೆ ಬಯಸೀ ಕೀಳು ಕರ್ಮಗಳನೆ ಮಾಡಿ
ಬೀಳಬೇಡ ಜನನ ಕೊಳವೆಂಬ ಸೆರೆಯೊಳಗೀಗ

ಎನ್ನುತ್ತಾ, ಆರು ವೈರಿಗಳನ್ನು ನಿಗ್ರಹಿಸಿ ತ್ಯಜಿಸಿ, ಮಮತೆ ಬಿಟ್ಟು ಹರಿಪಾದ ನೆನೆದರೆ ಮುಕ್ತಿ ಸುಖದ ಉಡುಗೊರೆಯ ಭಾಗ್ಯವನ್ನು ನೀಡುವನು. ಎಂದು ವೈರಾಗ್ಯದ ನುಡಿಗಳನ್ನಾಡುತ್ತಾರೆ. ಕೋಪದ ಕುರಿತು ಹೇಳುವ ಕೀರ್ತನೆಯಲ್ಲಿ ಹಿರಿಯರನ್ನು ಗೌರವಿಸಬೇಕೆಂಬ ನೀತಿಯಿದೆ ಕೋಪದಿಂದಾಗುವ ಅನರ್ಥ ಪರಂಪರೆಯನ್ನು

ಕೋಪದಿಂದ ಸಂತಾಪಗಳೂ । ಕೋಪದಿಂ ಸರ್ವ ಬಂಧಗಳೂ । ದುಷ್ಟ
ಕೋಪದಿಂ ನಾಶ ಧರ್ಮಗಳು। ತಮ್ಮ ಕೋಪವೇ ಯಮನ ವೈತರಣಿ
ಎಂಬುದೆ ತೃಷ್ಣೆಯೀ ಪರ್ಯಂತು ನಿಷ್ಕೋಪನಾಗಿರು ಕಂಡ್ಯ

ಎಂದು ರಾಮ ಲಕ್ಷ್ಮಣನಿಗೆ ಹೇಳುವುದನ್ನು ದಾಸರು ಅರುಹುತ್ತಾರೆ. ಆ ಮೂಲಕ ಕೋಪವು ಎಂತಹ ಅನರ್ಥಗಳನ್ನು ಮಾಡಬಲ್ಲವೆಂಬುದನ್ನು ಹೇಳಿ ಎಚ್ಚರಿಸುತ್ತಾರೆ.

ತಿಮ್ಮಪ್ಪದಾಸರು ಸಂಸ್ಕೃತ-ಕನ್ನಡ ಭಾಷಾ ಕೋವಿದರು. ತಮ್ಮ ಕೀರ್ತನೆಗಳಿಗೆ ರಾಗ ತಾಳ ನಿರ್ದೇಶನವನ್ನು ಮಾಡಿದ್ದಾರೆ. ಭಾಮಿನೀ ಷಟ್ಪದಿ,, ವಾರ್ಧಕ, ಶ್ಲೋಕ, ವಚನ ಆರ್ಯವೃತ್ತ, ಕಂದ ಪದ್ಯಗಳನ್ನು ಬಳಸಿ ಛಂದೋಬದ್ಧವಾಗಿ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳಲ್ಲಿ ಆದಿಪ್ರಾಸ, ಅಂತ್ಯಪ್ರಾಸ, ಹಾಗೂ ಅಂತಃಪ್ರಾಸಗಳು ಕಂಡುಬರುತ್ತವೆ. ಪದಸಂಪತ್ತು ಮನೋಜ್ಞವಾಗಿದೆ. ಲಾವಣೀ ಪ್ರಕಾರದ ಕೀರ್ತನೆಗಳೂ ಇವೆ. ಕೆಲವು ಕೀರ್ತನೆಗಳು ಹರಿಕಥೆಯ ಭಾಗವಾಗಿ ಬರೆದ ಕೀರ್ತನೆಗಳಾಗಿವೆ.

ತಿಮ್ಮಪ್ಪದಾಸರು 92 ವರ್ಷಗಳ ತುಂಬು ಜೀವನ ನಡೆಸಿದ ಧನ್ಯಜೀವಿಗಳು ಎಲೆಮರೆಯ ಕಾಯಿಯಂತೆ ಗುಪ್ತವಾಗಿ ಸಾಧನೆ ಮಾಡಿದವರು. ಜೀವಮಾನವಿಡೀ ಭಗವಂತನ ಚಿಂತನೆಯಲ್ಲೇ ಕಾಲ ಕಳೆದವರು ಇಳಿವಯಸ್ಸಿನಲ್ಲೂ ವೇದಾಂತ, ಗ್ರಂಥ ಪಠಣ ಚಿಂತನೆ ಪ್ರವಚನಾದಿಗಳಲ್ಲಿ ತೊಡಗಿದ್ದರು. ಚಿಕ್ಕ ವಯಸ್ಸಿನಲ್ಲೇ ಸಂಸಾರ ಭಾರ ಹೊತ್ತವರಾದ್ದರಿಂದ ಬದುಕಿನ ಕಷ್ಟ ಕಾರ್ಪಣ್ಯಗಳನ್ನು ಕಂಡಿದ್ದರು. ಅವಿಭಕ್ತ ಕುಟುಂಬ ನಿರ್ವಹಣೆಯಲ್ಲೂ ಅವರು ಸಮರ್ಥರು. ಸಂಸಾರ ನಶ್ವರವೆಂದು ಹೇಳಿದರೂ ಸಂಸಾರ ಬಿಟ್ಟು ಪಲಾಯನ ಮಾಡಲು ಹೇಳಲಿಲ್ಲ. ಯದೃಷ್ಟಾಲಾಭ ಸಂತುಷ್ಟರಾಗಿ, ಸುಖದುಃಖಗಳ ದ್ವಂದ್ವಗಳಿಗೆ ವಿಚಲಿತರಾಗದೆ ಸಮ ಬುದ್ಧಿಯಿಂದ ಬದುಕು ಸಾಗಿಸಿದ ಮಹಾನ್ ಚೇತನವಾಗಿದ್ದರು. ಪರಮ ದೈವಭಕ್ತರಾದ ದಾಸರು ಕಾವ್ಯ, ಸಾಹಿತ್ಯ ಕಲೆಗಳನ್ನು ಒಂದು ತಪಸ್ಸಿನಂತೆ ಆಚರಿಸಿದರು. ನಡೆ ನುಡಿ ಒಂದಾದ ಅವರ ಬದುಕು ಸರ್ವರಿಗೂ ಅನುಕರಣೀಯ. ಆಡಂಬರವಿಲ್ಲದ ಸರಳ ಜೀವನ ನಡೆಸಿ ಎಲ್ಲರಿಗೂ ಮಾದರಿಯಾಗಿ, ದೈವಭಕ್ತಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದರು. ಹುಟ್ಟಿದ ಸಮಾಜದ ಋಣ ತೀರಿಸಲು ವ್ಯಕ್ತಿಯು ಹೇಗಿರಬೇಕೆಂಬ ನೀತಿಯನ್ನು ಹೇಳಿ ತಾವೂ ನುಡಿದಂತೆ ನಡೆದು ಮಾದರಿಯಾದರು. ಹರಿದಾಸರು ಹೇಗೆ ಬಾಳಿ ಬದುಕುತ್ತಾರೆ ಆ ಮೂಲಕ ಹೇಗೆ ಸಮಾಜದ ಕಣ್ಣಾಗುತ್ತಾರೆ ಎಂಬುದಕ್ಕೆ ತಿಮ್ಮಪ್ಪದಾಸರ ಜೀವನ ಒಂದು ಶ್ರೇಷ್ಠ ಉದಾಹರಣೆಯಾಗಿದೆ. ಇತಿಹಾಸದ ಗರ್ಭದಲ್ಲಿ ಹುದುಗಿ ಹೋಗಿರುವ ಇಂತಹ ಇನ್ನೂ ಅನೇಕ ಅಮೂಲ್ಯ ರತ್ನಗಳನ್ನು ಹೆಕ್ಕಿ ತೆಗೆಯುವ ಕಾರ್ಯ ಇಂದು ಆಗಬೇಕಿದೆ.

******

ತಂದೆ ಪುರಂದರ ವಿಠಲ ಮತ್ತು ಗುರು ತಂದೆ ಪುರಂದರ ವಿಠಲರ ಕೀರ್ತನೆಗಳು

ಡಾಕ್ಟರ್ ಅನಂತ ಪದ್ಮನಾಭರಾವ್
ಚರವಾಣಿ : ೯೪೪೯೩೮೦೯೧೫

ಹರಿದಾಸರ ಸಾಹಿತ್ಯ ಸಂಪಾದನೆಯಲ್ಲಿ ಹಲವಾರು ಸಮಸ್ಯೆಗಳಿವೆ. ಅವುಗಳಲ್ಲಿ ಒಂದು ಮುಖ್ಯ ಸಮಸ್ಯೆ ಅಂಕಿತ ಪಲ್ಲಟ. ಎಂದರೆ ಒಬ್ಬರ ಅಂಕಿತದ ಕೀರ್ತನೆಗಳು ಇನ್ನೊಬ್ಬರ ಅಂಕಿತದಲ್ಲಿ ಪ್ರಕಟವಾಗಿರುವುದು. ಈಗಾಗಲೇ ಪುರಂದರದಾಸರ ಕೀರ್ತನ ಸಂಗ್ರಹದಲ್ಲಿ ಸೇರಿರುವ ಕನಕದಾಸರ ಕೀರ್ತನೆಗಳು ಯಾವುವು ಮತ್ತು ಕನಕದಾಸರ ಕೀರ್ತನೆಗಳಲ್ಲಿ ಸೇರಿರುವ ಪುರಂದರ ದಾಸರ ಕೀರ್ತನೆಗಳು ಯಾವವು ಎಂಬ ಚರ್ಚೆ ವಿದ್ವಾಂಸರ ವಲಯದಲ್ಲಿ ಸಾಕಷ್ಟು ನಡೆದಿದೆ.

ಇಂಥದೇ ಅಂಕಿತ ಪಲ್ಲಟ ವಿಚಾರ ಪುರಂದರದಾಸರ ಕೀರ್ತನೆಗಳಲ್ಲಿ ತಂದೆ ಪುರಂದರ ವಿಠಲ ಎಂಬ ಅಂಕಿತದ ಕೀರ್ತನೆಗಳು ಸೇರಿ ಹೋಗಿವೆ ಎಂಬ ವಿಚಾರ ಒಪ್ಪಿತವಾಗಿದ್ದರೂ ಅವು ಯಾವ ಯಾವ ಕೀರ್ತನೆಗಳು ಎಂಬುದು ನಿರ್ಧಾರವಾಗಿರಲಿಲ್ಲ.

ದಾಸ ಸಾಹಿತ್ಯ ಪ್ರೇಮಿಗಳಾದ ಪ್ರೊ. ಜಿ. ಅಶ್ವತ್ಥ ನಾರಾಯಣ ಅವರಿಗೆ 1970 ರಲ್ಲಿ ಹಳೆಯ ಪುಸ್ತಕದ ಅಂಗಡಿಯಲ್ಲಿ 1938 ರಲ್ಲಿ ಅಚ್ಚಾದ ಸಂಸ್ಕೃತ ಲಿಪಿಯಲ್ಲಿದ್ದ ತಂದೆ ಪುರಂದರದಾಸರ ಕೀರ್ತನೆಗಳು ಎಂಬ ಗ್ರಂಥ ದೊರಕಿತು. ಅದರಲ್ಲಿ 111 ಕೀರ್ತನೆಗಳು, 20 ಉಗಾಭೋಗಗಳು, ಸುಳಾದಿಗಳ ಅಂತ್ಯದಲ್ಲಿ ಬರುವ ಜೊತೆಗಳಂತಹ 30 ದ್ವಿಪದಿಗಳು ಇವೆ. ಇವು ಸುಳಾದಿಯ ಖಂಡ ಭಾಗಗಳಂತೆ ಇವೆ. ದೇವನಗರಿ ಲಿಪಿಯಲ್ಲಿರುವ ದಾಸರ ಕೀರ್ತನೆಗಳ ಮೊದಲ ಭಾಗವಾಗಿ 1938 ರಲ್ಲಿ ಪ್ರಕಟವಾದ ಗ್ರಂಥದ ಅನಂತರ ಎರಡನೆಯ ಭಾಗವು ಪ್ರಕಟವಾಯಿತೋ ಇಲ್ಲವೋ ತಿಳಿಯದು. ಒಂದನೇ ಭಾಗ ಪ್ರಕಟವಾದಾಗ ದಾಸರಿಗೆ 70 ವರ್ಷವಾಗಿತ್ತು ಎಂದು ದಾಸರ ಕೀರ್ತನೆಗಳನ್ನು ಬರೆದುಕೊಂಡು ಸಂಗ್ರಹಿಸಿದ, ಅವರ ಶಿಷ್ಯರಲ್ಲಿ ಒಬ್ಬರಾದ, ಸಿ.ಎನ್. ಲಕ್ಷ್ಮಣರಾಯರು ತಿಳಿಸಿದ್ದಾರೆ.

ಅವರು ತಿಳಿಸಿದಂತೆ ಪಿ. ವೈ. ಶಾಮರಾಯರ ಜನ್ಮಸ್ಥಳ ಕೊಯಮತ್ತೂರು. ಜನಿಸಿದ್ದು 25. 4. 1861. ತಂದೆಯ ಹೆಸರು ಯದುಪತಿ ಆಚಾರ್ಯರು. ಶಾಮರಾಯರು ಕೆಲವು ದಿನ ಲೌಕಿಕ ವೃತ್ತಿಯಲ್ಲಿದ್ದು ಪುರಂದರದಾಸರಿಂದ ಸ್ವಪ್ನಾಂಕಿತ ಪಡೆದರು. 'ಪೂರ್ವದಲ್ಲಿ ಕಲ್ಲು ಹನುಮಗೆ ಅನ್ನ ಉಣಿಸಿದ ಪ್ರಿಯ ಕಂದ' ಎಂದು ಕರೆದು ನೀ ದಾಸನಾಗು ಎಂದು ಪುರಂದರದಾಸರು ಆಜ್ಞಾಪಿಸಿದರಂತೆ. ತಂದೆ ಪುರಂದರವಿಠಲ ಎಂಬ ಮುದ್ರಿಕೆ ಪಡೆದು ಹರಿದಾಸರಾದರಂತೆ. ಪೂರ್ವಜನ್ಮದಲ್ಲಿ ತಾವು ಪುರಂದರದಾಸರ ಮಗನೆಂದು ಅನೇಕ ಕೀರ್ತನೆಗಳಲ್ಲಿ ದಾಸರು ಹೇಳಿಕೊಂಡಿದ್ದಾರೆ.

"ದೂರ ಮಾಡದೆ ತ್ವರಿತದೆ ಕಾಯೋ ತಂದೆ
ಪುರಂದರ ವಿಠಲನ ನಿಜ ದಾಸಯ್ಯ "॥ (ಕೀರ್ತನೆ 1)
ತಂದೆ ಪುರಂದರ ವಿಠಲನ ಪಾದಂಗಳ (ಕೀರ್ತನೆ 32)
ಕೊಟ್ಟ ಕೊನೆಯಲ್ಲಿ ಇಪ್ಪ ತಂದೆ ಪುರಂದರ ವಿಠಲ (ಕೀರ್ತನೆ 62)
ತಂದೆ ಪುರಂದರ ವಿಠಲ ರಾಯ ಬಂದೆನ್ನ ಕಾಯಬೇಕೋ (ಕೀರ್ತನೆ 44)

ದಾಸರಿಗೆ ಶ್ರೀ ಮಂತ್ರಾಲಯದ ರಾಯರು ಮತ್ತು ತಿರುಕೋಯಿಲೂರಿನ ರಘೋತ್ತಮ ತೀರ್ಥರು ಒಲಿದಿದ್ದರಂತೆ.

ತಮ್ಮ ಉಪಾಸನಾ ಮೂರ್ತಿ ಮುದ್ದು ಕೃಷ್ಣನ ಬಾಲ ಲೀಲೆಗಳನ್ನು ಬಣ್ಣಿಸುವುದರಲ್ಲಿ ತಲ್ಲೀನತೆಯ ಸುಖಾನುಭವವನ್ನು ಪಡೆದವರು ಇವರು. ಜಗನ್ನಾಥದಾಸರು ರಂಗ ಒಲಿದ ದಾಸ ಎಂದು ಪ್ರಸಿದ್ಧರಾದಂತೆ ಶಾಮರಾಯರು ರಂಗ ಒಲಿದ ಚಿಕ್ಕ ದಾಸರೆಂದೇ ಗೌರವಿಸಲ್ಪಟ್ಟರು.

ದಾಸಸಾಹಿತ್ಯ ಸಂಗ್ರಾಹಕರಾಗಿದ್ದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿಗಳು ತಮ್ಮ ಬಳಿ ತಂದೆ ಪುರಂದರ ವಿಠಲ ದಾಸರ ಹಸ್ತಪ್ರತಿ ಇದೆ ಎಂದು ಹೇಳಿದ್ದರು. ಅವರು ತಮ್ಮ 'ಗುರುಸಾರ್ವಭೌಮ ರಾಘವೇಂದ್ರ ತೀರ್ಥರು' ಗ್ರಂಥದಲ್ಲಿ ಶಾಮರಾಯರ ನಾಲ್ಕು ಕೀರ್ತನೆಗಳನ್ನು ಪ್ರಕಟಿಸಿದ್ದಾರೆ. ದಾಸರಿಗೆ ಹಲವಾರು ಶಿಷ್ಯರು ಇದ್ದಂತೆ ಕಾಣುತ್ತದೆ. ಆ ಪೈಕಿ ಒಬ್ಬರು ಗುರು ತಂದೆ ಪುರಂದರ ವಿಠಲ ಅಂಕಿತದ ದಾಸರು. ಗುರು ತಂದೆ ಪುರಂದರವಿಠಲ ಅಂಕಿತದ ಹಲವಾರು ಕೀರ್ತನೆಗಳು ದೊರಕಿವೆ. ಆ ಪೈಕಿ ಕೀರ್ತನೆಗಳು ಭಾಗ-1 ಗ್ರಂಥದಲ್ಲಿ ಪ್ರಕಟವಾಗಿರುವ 30 ಕೀರ್ತನೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಕನ್ನಡದ ಹರಿದಾಸರು ಕಾರಣಾಂತರಗಳಿಂದ ತಮಿಳುನಾಡಿನ ಹಲವು ಭಾಗಗಳಲ್ಲಿ ನೆಲೆಸಿದಂತೆ ಕಂಡು ಬರುತ್ತದೆ. ಶಾಮರಾಯರು ಕೊಯಮತ್ತೂರು ಮತ್ತು ಕಡಲೂರು ಪ್ರದೇಶಗಳಲ್ಲಿ ಇದ್ದರು. ಅವರಿಗೆ ಕನ್ನಡ ಆಡುಭಾಷೆಯ ಪರಿಚಯವಿದ್ದು ಕನ್ನಡ ಲಿಪಿಯಲ್ಲಿ ಬರೆಯುವ ಅಭ್ಯಾಸ ಇದ್ದಿರಲಾರದು.ಈಗಲೂ ಮಧುರೆ, ಕುಂಭಕೋಣ, ಕೊಯಿಮತ್ತೂರು ಗಳಲ್ಲಿರುವ ಅನೇಕ ಮಾಧ್ವರ ಮನೆಮಾತು ಕನ್ನಡವಾದರೂ ಬರವಣಿಗೆಗೆ ಸಂಸ್ಕೃತ ಅಥವಾ ತಮಿಳು ಲಿಪಿಗಳನ್ನು ಬಳಸುತ್ತಾರೆ.

ತಂದೆ ಪುರಂದರ ವಿಠಲರ ಕೀರ್ತನೆಗಳು ಪುರಂದರದಾಸರ ಕೀರ್ತನೆಗಳಂತೆ ಅದೇ ಶೈಲಿಯಲ್ಲಿ ರಚಿತವಾಗಿರುವುದರಿಂದ ಹೊರನೋಟಕ್ಕೆ ಪುರಂದರದಾಸರ ಕೀರ್ತನೆಗಳು ಎಂದೇ ಎನಿಸುತ್ತದೆ. ಪಾವಂಜೆಯವರು ಪ್ರಕಟಿಸಿದ ಪುರಂದರದಾಸರ ಐದು ಸಂಪುಟಗಳಲ್ಲಿ (1917ರಿಂದ 1952) 1024 ಕೀರ್ತನೆಗಳು 151 ಉಗಾಭೋಗಗಳು ಪ್ರಕಟವಾದವು. ಇದರಲ್ಲಿ 52 ಕೀರ್ತನೆಗಳು ತಂದೆ ಪುರಂದರವಿಠಲ ಅಂಕಿತದಲ್ಲಿವೆ. ಪುರಂದರದಾಸರು ಪುರಂದರ ವಿಠಲ ಅಂಕಿತಕ್ಕೆ ಪೂರ್ವದಲ್ಲಿ ತಂದೆ ಎಂಬ ಸಂಬಂಧ ವಾಚಕವನ್ನು ಬಳಸಿ ಹಲವು ಕೀರ್ತನೆಗಳನ್ನು ರಚಿಸಿದ್ದಾರೆ. ಇತರ ವಿಶೇಷಣಗಳನ್ನು ಚೆಲುವ ಶ್ರೀ ಪ್ರಸನ್ನ ಇತ್ಯಾದಿ 70ಕ್ಕೂ ಹೆಚ್ಚು ವಿಶೇಷಣಗಳನ್ನು ಬಳಸಿ ರಚಿಸಿದ ಕೀರ್ತನೆಗಳು ಇವೆ.

ತಂದೆ, ತಂದೆ ಶ್ರೀ ಅಂಕಿತ ಸಾದೃಶ್ಯದಿಂದ ಶಾಮರಾಯರು ರಚಿಸಿದ ತಂದೆ ಪುರಂದರ ವಿಠಲ ಅಂಕಿತದ ಕೀರ್ತನೆಗಳು ಪುರಂದರದಾಸರ ಪ್ರಕಟಣೆಗಳಲ್ಲಿ ಬೆರಕೆಯಾಗಿವೆ. ಪಾವಂಜೆ

ಅವರ ಸಂಕಲನದಲ್ಲಿ ಬೆಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿ ಹುಚ್ಚೂರಾಯರು ಸಂಪಾದಿಸಿದ ಪುರಂದರದಾಸರ ಕೀರ್ತನೆಗಳ ಸಂಕಲನಗಳಲ್ಲಿ ಅಂತೆಯೇ ಎಸ್.ಕೆ. ರಾಮಚಂದ್ರರಾಯರ ನಾಲ್ಕು ಸಂಪುಟಗಳಲ್ಲಿ, ಇನ್ನಿತರ ಪುರಂದರದಾಸರ ಕೀರ್ತನೆಗಳ ಸಂಗ್ರಹಗಳಲ್ಲಿ ಶಾಮರಾಯರ ಪುರಂದರ ವಿಠಲ ಅಂಕಿತದ ಕೀರ್ತನೆಗಳು ಸೇರಿ ಹೋಗಿವೆ.

ತಂದೆ ಪುರಂದರ ವಿಠಲರ ಕೀರ್ತನೆಗಳನ್ನು ಪ್ರಕಟಿಸಿದ ಸಂಪಾದಕರು ಪಾವಂಜೆ ಅವರ ಪುರಂದರದಾಸರ ಕೀರ್ತನೆಗಳ ಸಂಗ್ರಹದಲ್ಲಿ ಪ್ರಕಟವಾದ ತಂದೆ ಪುರಂದರ ವಿಠ್ಠಲ ಅಂಕಿತದ 52 ಕೀರ್ತನೆಗಳಲ್ಲಿ 22 ಕೀರ್ತನೆಗಳು ಶಾಮರಾಯರದೆಂದು ಗುರುತಿಸಿದ್ದಾರೆ. ಅವು ಹೀಗಿವೆ :

ಪಾವಂಜೆಯವರ ಪುರಂದರದಾಸರ ಕೀರ್ತನೆಗಳ 2010ರ ಮುದ್ರಣದ ಪ್ರತಿಯಲ್ಲಿ ಕಂಡುಬರುವ ತಂದೆ ಪುರಂದರ ವಿಠಲ ಅಂಕಿತದ ಕೀರ್ತನೆಗಳಲ್ಲಿ ಪುರಂದರದಾಸರದಲ್ಲದ ಶಾಮರಾಯರು ರಚಿಸಿರುವ ಕೀರ್ತನೆಗಳ ಪಟ್ಟಿ (ಅಪೂರ್ಣ) ಹೀಗಿದೆ:

1	ಅಪ್ಪಪ್ಪಾ ನೀ ನೋಡಪ್ಪ	44
2	ಆಡಿದ ರಂಗನಾಡಿದ	64
3	ಇತ್ತತ್ತು ಓಡಿ ನೀ	97
4	ಏಕೆ ನಿರ್ದಯನಾಗುವೆ	196
5	ಏನಣ್ಣ ನಿನಗೇನಣ್ಣ	202
4	ಒಮ್ಮೆ ನೆನೆಯಲು	242
7	ಕಂದ ಬೇಡವೋ	262
8	ಕರುಣಾಬ್ಧಿ ನೀನಂತೆ	278
9	ಬಾಲಕೃಷ್ಣ	313
10	ಗಜ್ಜುಗವಾಡುತಲಿದ್ದರು	345
11	ನಂದನ ಕಂದನೆ	479
12	ನಳಿನನಾಭನ ನೀನು ಪಾಡೋ	500
13	ನಿನ್ನ ಒಲುಮೆಗೆ ನಾನು	530
14	ಬಾಲಕೃಷ್ಣನೆ ಬಾರೋ	649
15	ಬಿಲ್ಲುಗಾರನು ಅದನು	652
16	ಮುಟ್ಟ ಬಾರೋ ಎನ್ನನು	738
17	ಮುಟ್ಟಬೇಡವೋ ಎನ್ನನು	739
18	ಹಣ್ಣು ಕೊಂಡನು	927
19	ಹರಿಯೆ ಪರದೈವ	966

ಈ ಕೀರ್ತನೆಗಳು ಶಾಮರಾಯರ ಅಚ್ಚಾದ ಕೀರ್ತನ ಸಂಗ್ರಹ ಭಾಗ ಒಂದರಲ್ಲಿ ಇವೆ.

1861 ರಲ್ಲಿ ಶಾಮರಾಯರು ಜನಿಸಿದ್ದರಿಂದ ಅವರಿಗೆ ಮುಂಚೆ ಪ್ರಕಟವಾದ ಅವರ ಕೀರ್ತನೆಗಳ ಪರಿಚಯವಿಲ್ಲದ ಹರ್ಮನ್ ಮೋಗ್ಲಿಂಗ್ ಸಂಗ್ರಹಿಸಿದ ದಾಸರ ಕೀರ್ತನೆಗಳಲ್ಲೂ, ಹೊಳಕಲ್ಲು ನರಸಿಂಹಯ್ಯನವರ ದಾಸರ ಕೀರ್ತನೆಗಳ ಸಂಗ್ರಹದಲ್ಲಿ, ಸುಬೋಧ ರಾಮರಾಯರ ಪುರಂದರದಾಸರ ಕೀರ್ತನೆಗಳ ಸಂಗ್ರಹದಲ್ಲಿ, ಕಂಡು ಬರುವ ತಂದೆ ಪುರಂದರ ವಿಠಲ ಅಂಕಿತದ ಕೀರ್ತನೆಗಳು ನಿಜವಾಗಿ ಪುರಂದರ ದಾಸರು ರಚಿಸಿದ ಕೀರ್ತನೆಗಳೇ ಆಗಿವೆ.

ದಾಸರ ಕೀರ್ತನೆಗಳಲ್ಲಿ ಒಂದೇ ಅಂಕಿತವನ್ನು ಹಲವರು ಬಳಸಿದ ಉದಾಹರಣೆಗಳು ಸಾಕಷ್ಟು ಇವೆ. ಆ ಬಗ್ಗೆ ಸಂಶೋಧನಾ ಕಾರ್ಯ ನಡೆಯಬೇಕು. ಆ ದಿಶೆಯಲ್ಲಿ ಕಿರು ಯತ್ನದ ಫಲ ಪ್ರಸ್ತುತ ಗ್ರಂಥ. ಇದಕ್ಕಾಗಿ ಸಂಪಾದಕದ್ವಯರು ಅಭಿನಂದನಾರ್ಹರು.

******

೨೦ನೇ ಶತಮಾನದ ಹರಿದಾಸರ ಸಮಾಜಮುಖಿ ಕೀರ್ತನೆಗಳು

ಡಾ. ನಾ. ಗೀತಾಚಾರ್ಯ
ಚರವಾಣಿ : ೯೪೪೮೬೭೧೦೪೯

ಕನ್ನಡ ಶಾರದೆಯ ಎರಡು ಕಣ್ಣುಗಳು ಶರಣಸಾಹಿತ್ಯ ಮತ್ತು ದಾಸಸಾಹಿತ್ಯ. ವಿಶ್ವಸಾಹಿತ್ಯಕ್ಕೆ ಕನ್ನಡನಾಡು ಕನ್ನಡ ಸಂಸ್ಕೃತಿ ಕೊಟ್ಟ ವಿಶಿಷ್ಟ ಕೊಡುಗೆ ದಾಸಸಾಹಿತ್ಯ , ಕೀರ್ತನ ಸಾಹಿತ್ಯ, ವಚನ ಸಾಹಿತ್ಯಗಳು. ವಚನಸಾಹಿತ್ಯ ವಿಶೇಷವಾಗಿ ಸಮಾಜದ ಕೆಳವವರ್ಗದವರನ್ನು ಮೇಲೆತ್ತುವಲ್ಲಿ ನೆರವಾದರೆ ದಾಸಸಾಹಿತ್ಯ ಮಧ್ಯಮ ವರ್ಗದ ಜನರುದ್ಧಾರಕ್ಕೆ ಶ್ರಮಿಸಿದೆ. ವಚನಸಾಹಿತ್ಯ ವೀರಶೈವಕ್ಕೆ ಸೀಮಿತವಲ್ಲ; ದಾಸಸಾಹಿತ್ಯ ಬ್ರಾಹ್ಮಣ ವರ್ಗಕ್ಕೆ ಕಟ್ಟಿಟ್ಟಿದ್ದಲ್ಲ. ಇವೆರಡಲ್ಲೂ ಇರುವ ಸಮಾಜೋದ್ಧಾರ ಕುರಿತ ವಚನ-ಕೀರ್ತನೆಗಳು ಇಡೀ ಮಾನವ ಸಮಾಜದ ಉದ್ಧಾರಕ್ಕೆ ಮೀಸಲಾಗಿದೆ. ಆದರೆ ದಾಸಸಾಹಿತ್ಯದಲ್ಲಿ ಜೀವನ ಮೌಲ್ಯಗಳನ್ನು ಸಾರುವ ವಿಶ್ವಸಾಹಿತ್ಯಕ್ಕೆ ಕೊಡುಗೆಯೆನಿಸುವ ಕೀರ್ತನೆಗಳನ್ನು ಹೆಕ್ಕಿ ಜನಕ್ಕೆ ಕೊಡುವ ಕೆಲಸ ಸಾಕಷ್ಟು ಆಗಿಲ್ಲ. ಈ ದೆಸೆಯಲ್ಲಿ ಈಗಾಗಲೇ ಹಲವಾರು ಪ್ರಯತ್ನಿಸಿದ್ದಾರೆ. ಪ್ರಸ್ತುತ ಸಂಪುಟಕ್ಕೆ ಹಿನ್ನೆಲೆಯಾಗಿ ಕೆಲವು ಸಮಾಜಮುಖಿ ಕೀರ್ತನ ಸಂಗ್ರಹಗಳನ್ನು ಇಲ್ಲಿ ಪ್ರಸ್ತಾಪಿಸಿದೆ.

ಮೊದಲಿಗೆ ಈ ಬಗೆಯ ಪ್ರಯತ್ನ ಮಾಡಿದವರು ರಂಗರಾವ್ ಸುಬ್ರಾಯ ದಿವಾಕರರು. ೧೯೩೮ರಲ್ಲಿ ಹರಿಭಕ್ತಿಸುಧೆ ಎಂಬ ಗ್ರಂಥವನ್ನು ಪ್ರಕಟಿಸಿದರು. ಅದರಲ್ಲಿ ಸಮಾಜಮುಖಿ ಕೀರ್ತನೆಗಳನ್ನು ಎಂದರೆ ಮಾನವ ಕುಲಕ್ಕೆ, ಭಾರತೀಯರಿಗೆ, ಕನ್ನಡಿಗರಿಗೆ ಉಪಯುಕ್ತವೆನಿಸಿದ ಕೀರ್ತನೆಗಳನ್ನು ಪ್ರಾತಿನಿಧಿಕವಾಗಿ ಆಯ್ಕೆ ಮಾಡಿ ಹರಿಭಕ್ತಿಸುಧೆ ಗ್ರಂಥವನ್ನು ಪ್ರಕಟಿಸಿದರು. ಅದರ ಮುನ್ನುಡಿಯಲ್ಲಿ ಹೇಳಿರುವ ಮಾತುಗಳು ಗಮನಾರ್ಹವಾಗಿದೆ.

''ದಾಸರು ಯಾವ ಯಾವ ಬಗೆಯ ಭಕ್ತಿಭಾವನೆಗಳನ್ನು ವ್ಯಕ್ತಪಡಿಸಿದ್ದರೋ ಅವುಗಳನ್ನು ವಿವೇಚಿಸಿ ಆಯಾಭಾವದ ಅವರ ಉತ್ತಮ ಕೀರ್ತನೆಗಳನ್ನು ಆರಿಸಿ ಚೆನ್ನಾಗಿ ಆಯಾ ಭಾವದ ಗುಣಗ್ರಹಣವಾಗುವಂತೆ ಜನರ ಮುಂದಿಡುವುದೆ ನನ್ನ ಉದ್ದೇಶವಾಗಿದೆ'' ದಾಸವಾಙ್ಮಯದ ಹಾಗೂ ಮಧ್ಯಮಮವರ್ಗದ ಅಭ್ಯಾಸಕ್ಕೆ ಒಳ್ಳೆಯ ಸಹಾಯವಾಗುವಂತೆ ಆಯಾ ಪದ್ಯಗಳ ವಿಷಯ ಮತ್ತು ಭಾವಗಳಿಗೆ ಅನುಸರಿಸಿ ೨೬ ವಿಭಾಗಗಳಲ್ಲಿ ಕೊಟ್ಟಿದ್ದೇನೆ.

ಎಲ್ಲ ದಾಸರ ಪದಗಳನ್ನು ಅವರವರ ೧) ಕಾಲಾನುಕ್ರಮ ೨) ವಿಷಯಾನುಕ್ರಮ ೩) ಭಾವಾನುಕ್ರಮ ೪) ಆತ್ಮಾನುಭವ ಕ್ರಮವೆಂಬ ೪ ವಿಧಾನಗಳಲ್ಲಿ ಅಧ್ಯಯನ ಮಾಡಬಹುದು. ಆದರೆ ನಾನಿಲ್ಲಿ ಭಾವಾನುಕ್ರಮವನ್ನಷ್ಟೆ ಅನುಸರಿಸಿರುವೆ (ಮುನ್ನುಡಿ, ಹರಿಭಕ್ತಿಸುಧೆ, ಪು. ೭-೧೦)

ದಿವಾಕರರು ಕೊಟ್ಟಿರುವ ವಿಷಯ ವರ್ಗೀಕರಣ ಸ್ಥೂಲವಾಗಿ ಹೀಗಿದೆ:

ಮಹಿಮಾ ಪ್ರಕರಣ : ಪೀಠಿಕಾ ಪ್ರಕರಣ-ಗುರುಮಹಿಮೆ-ಭಕ್ತಿ ಮಹಿಮೆ, ನಾಮ ಮಹಿಮೆ, ಸ್ಮರಣ ಕೀರ್ತನೆಗಳ ಮಹಿಮೆ-ಸ್ಮರಣ ಕೀರ್ತನೆಗಳ ಮಹಿಮೆ-ನವವಿಧ ಭಕ್ತಿಮಹಿಮೆ.

ದಶಭಾವಗಳೇ ಪ್ರಕರಣ : ಆರ್ಥಭಾವ, ವೈರಾಗ್ಯಭಾವ, ಮುಮಕ್ಷು ಭಾವ, ವ್ಯಾಕುಲ ಭಾವ, ಶಾಂತ ಭಾವ, ದಾಸ್ಯ ಭಾವ, ಸಖ್ಯ ಭಾವ, ವಾತ್ಸಲ್ಯ ಭಾವ, ಮಧುರ ಭಾವ, ಸಮರ್ಪಣ ಭಾವ.

ಸಾಧನಾ ಪ್ರಕರಣ : ದರ್ಶನ, ಸಾಕ್ಷಾತ್ಕಾರ, ಸಿದ್ಧಭಾವ, ಮೋಕ್ಷಸಾಧನ, ಜಗತ್ತಿನ ರೀತಿ, ರೀತಿನೀತಿ, ಮನಸ್ಸಿನುದಿದೇಶ, ಕುಲವಿಚಾರ, ಸಿದ್ಧಾಂತ ಹಾಗೂ ಸಂಪ್ರದಾಯ-ಸಂಕರ್ಣ.

ಮೂರನೇ ಆವೃತ್ತಿ ೧೯೫೭ರಲ್ಲಿ ಹೇಳಿರುವ ಮಾತಿದು:

''ಅಮೃತೋಪಮವಾದ ದಾಸವಾಙ್ಮಯವನ್ನು ಭಕ್ತಿಶಾಸ್ತ್ರದ ತತ್ವಗಳಿಗನುಸರಿಸಿ ವರ್ಗೀಕರಿಸಿ ಪ್ರತಿವರ್ಗಕ್ಕೆ ಟಿಪ್ಪಣಿ ಬರೆದು ಪ್ರಕಟಿಸಲ್ಪಟ್ಟ ಗ್ರಂಥವು (ಕನ್ನಡದಲ್ಲಿ) ಇದೇ ಮೊದಲನೆಯದು. ಅನುಭವದ ಗೂಢರಹಸ್ಯ, ಭಕ್ತಿಯ ಪರಮ ಆನಂದ, ಅವುಗಳೊಡನೆ ವಿಮರ್ಶಾತ್ಮಕ ಬುದ್ಧಿಗೆ ಆಗುವ ಸಮಾಧಾನ. ಇವೆಲ್ಲವನ್ನು ಏಕಕಾಲಕ್ಕೆ ಈ ಗ್ರಂಥದಲ್ಲಿ ಅನುಭವಿಸಲು ಆಸ್ಪದವಿರುವುದು."

೨. ಹರಿಭಕ್ತಿವಾಹಿನಿ (೧೯೮೩) ಜಿ. ವರದರಾಜರಾವ್

ಸಮಾಜಮುಖಿ ದೃಷ್ಟಿಯಿಂದ ಹರಿದಾಸ ಸಾಹಿತ್ಯವನ್ನು ಆಯ್ಕೆ ಮಾಡಿ ಸಾರ್ವತ್ರಿಕ ರೂಪದಲ್ಲಿ ಮೊದಲು ಗ್ರಂಥವನ್ನು-ದಿವಾಕರರು ಹರಿಭಕ್ತಿ ಸುಧೆಯನ್ನು ಪ್ರಕಟಿಸಿದರಷ್ಟೆ. ಅದು ಒಂದು ಮೈಲಿಗಲ್ಲಿನ ಗ್ರಂಥವಾಯಿತು. ಅದನ್ನು ಕುರಿತು, ಪ್ರಸಿದ್ಧ ದಾಸಸಾಹಿತಿಗಳಾದ ಜಿ. ವರದರಾಜರಾಯರು ತಮ್ಮ ಹರಿಭಕ್ತಿವಾಹಿನಿ ಗ್ರಂಥದಲ್ಲಿ (೧೯೮೩) ಹೇಳಿರುವುದು ಹೀಗೆ ''ಕನ್ನಡ ಹರಿದಾಸ ಸಾಹಿತ್ಯವನ್ನು ಸಾಂಪ್ರದಾಯಿಕ ದೃಷ್ಟಿಯಿಂದ ತಾರತಮ್ಯ ತತ್ವಕ್ಕೆ ಅನುಸಾರವಾಗಿ ಸಿದ್ಧಪಡಿಸಿರುವ ಅನೇಕ ಸಂಕಲನಗಳು ಈಗಾಗಲೇ ಪ್ರಕಟವಾಗಿವೆ. ಆದರೆ ಹರಿದಾಸ ಸಾಹಿತ್ಯದಲ್ಲಿ ವಿದಿತವಾಗುವ ಭಾವ ವೈವಿಧ್ಯವನ್ನು ಮಾತ್ರವೇ ಲಕ್ಷ್ಯದಲ್ಲಿಟ್ಟುಕೊಂಡು ದಾಸರ ರಚನೆಗಳನ್ನು ವಿಭಜನೆ ಮಾಡಿರುವ ಸಂಕಲನಗಳಲ್ಲಿ ಶ್ರೀ ರಂಗನಾಥ ರಾಮಚಂದ್ರ ದಿವಾಕರರ ಹರಿಭಕ್ತಿವಾಹಿನಿ ಈ ಹರಿಭಕ್ತಿಸುಧೆಯು (೧೯೩೮) ಬಹಳ ಹಳೆಯದೂ ಅಮೂಲ್ಯವೂ ಆದುದು ಎಂದು ನನ್ನ ಎಣಿಕೆ" ಎಂದಿದ್ದಾರೆ. ಅನಂತರದಲ್ಲಿ ಈ ಬಗೆಯ ಸಂಕಲನಗಳಿಗೆ ಈ ಕೃತಿ ಮಾರ್ಗದರ್ಶಿ ಕೃತಿಯಾಯಿತು ಎಂದರೆ ತಪ್ಪಲ್ಲ.

ಜಿ. ವರದರಾಜರಾಯರು ತಮ್ಮದೇ ಆದ ವಿಧಾನದಲ್ಲಿ ಸಮಗ್ರ ಹರಿದಾಸ ಸಾಹಿತ್ಯವನ್ನು ಅಧ್ಯಯನ ದೃಷ್ಟಿಯಿಂದ ಬೇರೆ ಬೇರೆ ದೃಷ್ಟಿಕೋನಗಳಿಗೂ ಪರಿಶೀಲಿಸಿ ವಿಂಗಡಿಸಿದರು. ಅವರು ತಮ್ಮ ವಿಧಾನವನ್ನು ಹೀಗೆ ವಿವರಿಸಿದ್ದಾರೆ.

''ಅಪರೋಕ್ಷ ಜ್ಞಾನಿಗಳಾದ ಹರಿದಾಸರ ಭಕ್ತಿ ಕೈಂಕರ್ಯ ಹೇಗೆ ಕುಡಿಯೊಡೆದು ಕ್ರಮ ಕ್ರಮವಾಗಿ ಪ್ರವರ್ಧಿಸಿ ಪ್ರಕಾಶಕ್ಕೆ ಬರುವುದೆನ್ನುವುದನ್ನು ಗಮನದಲ್ಲಿಟ್ಟುಕೊಂಡು ಆತ್ಮನಿವೇದನ ಅಪರೋಕ್ಷಾನುಭವ ಮತ್ತು ಆರಾಧನ ವೈವಿಧ್ಯಗಳೆಂಬ ವಿಭಾಗಗಳನ್ನು ಅಣಿಗೊಳಿಸಿದೆ. ಭಕ್ತ-ಭಗವಂತರ ಸಂಬಂಧವನ್ನು ವಿಶ್ಲೇಷಿಸುವಲ್ಲಿ ಚೈತನ್ಯ ಪಂಥದವರ ಪಂಚವಿಧ ಭಾವಗಳ ಪೃಥಕ್ಕರಣೆ ಹೆಚ್ಚು ಪರಿಣಾಮಕಾರಿಯಾಗಿ ತೋರಿ ಬಂದುದರಿಂದ ಆ ಸಂವಿಧಾನವನ್ನು ಸ್ವಲ್ಪಮಟ್ಟಿಗೆ ಮಾರ್ಪಡಿಸಿಕೊಂಡು ಇಲ್ಲಿ ಅನುಸರಿಸಿದೆ.

ಹರಿದಾಸರ ಕೃತಿಗಳಲ್ಲಿ ಹುದುಗಿರುವ ದ್ವೈತಸಿದ್ಧಾಂತದ ಪ್ರಮುಖವಾದ ಪ್ರಮೇಯಗಳನ್ನೂ ಈ ಹರಿಭಕ್ತರು ದೇವತೆಗಳಿಂದ ಮೊದಲ್ಗೊಂಡು ತೀರ್ಥಕ್ಷೇತ್ರದವರೆಗೆ ಮಾಡಿರುವ ಸ್ತುತಿಗಳನ್ನೂ ಇಲ್ಲಿ ಪರಿಚಯ ಮಾಡಿಕೊಟ್ಟಿದೆ.

ಈ ದೈವಭಕ್ತರು ಊರೂರು ಕೇರಿ ಕೇರಿಗಳಲ್ಲಿ ಸಂಚರಿಸಿ ನಿತ್ಯಜೀವನದ ಓರೆಕೋರೆಗಳನ್ನು ಹೇಗೆ ಮನಗಂಡಿರುವರು ಎನ್ನುವುದನ್ನೂ ಅವರು ಮಾನವ ಸಮುದಾಯದ ಆತ್ಮೋನ್ನತಿಗಾಗಿ ಹೇಳಿರುವ ಹಿತೋಕ್ತಿಗಳನ್ನೂ ನೀಡಿರುವ ಸಾರ್ವತ್ರಿಕ ಸಂದೇಶವನ್ನೂ ಬೇರೆ ಬೇರೆಯಾಗಿ ಸಂಕಲಿಸಿದೆ.

ಶ್ರೀಪಾದರಾಜರಿಂದ (ಕ್ರಿ.ಶ. ೧೪೫೦) ಮೊದಲ್ಗೊಂಡು ಶ್ರೀದವಿಠಲವರೆಗಿನ (ಕ್ರಿ.ಶ. ೧೮೦೦) ಕೃತಿಗಳನ್ನು ಪರಿಮಿತಿಯಾಗಿ ಇಟ್ಟುಕೊಂಡು ಈ ಸಂಕಲನವನ್ನು ಸಿದ್ಧಪಡಿಸಿದೆ. (ಅರಿಕೆ ೭-೮)

ದಾಸಸಾಹಿತ್ಯ ಸೌರಭ (೨೦೦೭) ಟಿ. ಎನ್. ನಾಗರತ್ನ

ಪ್ರಸಿದ್ಧ ದಾಸಸಾಹಿತ್ಯ ಸಂಶೋಧಕರಾದ ಡಾ. ಟಿ.ಎನ್. ನಾಗರತ್ನ ಅವರು ೨೦೦೭ರಲ್ಲಿ ದಾಸಸಾಹಿತ್ಯ ಸೌರಭವೆಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ ಶ್ರೀಪಾದರಾಜರಿಂದ (ಕ್ರಿ.ಶ. ೧೪೦೪) ಮೊದಲ್ಗೊಂಡು ರಾಮದಾಸರವರೆಗೆ (೧೮ನೇ ಶತಮಾನದ ಉತ್ತರಾರ್ಧ) ಪ್ರಮುಖ ದಾಸರಾದ ವ್ಯಾಸರಾಯರು (೧೪೪೭-೧೫೩೯) ವಾದಿರಾಜರು (೧೪೮೦-೧೬೦೦) ಪುರಂದರದಾಸರು (೧೪೮೪-೧೫೬೪) ಕನಕದಾಸರು (೧೫೦೮-೧೬೦೬) ಪ್ರಸನ್ನ ವೆಂಕಟದಾಸರು (೧೬೮೦-೧೭೫೨) ವಿಜಯದಾಸರು (೧೬೮೨-೧೭೫೫) ಗೋಪಾಲದಾಸರು (೧೭೨೨-೧೭೬೨) ಹೆಳವನಕಟ್ಟೆ ಗಿರಿಯಮ್ಮ (೧೮ನೇ ಶತಮಾನದ ಪೂರ್ವಾಧ) ಜಗನ್ನಾಥದಾಸರು (೧೭೨೮-೧೮೦೯) ಹರಪನಹಳ್ಳಿ ಭೀಮವ್ವ (೧೮೨೩-೧೯೦೩) ಇವರನ್ನು ಒಳಗೊಂಡು ೧೫ನೇ ಶತಮಾನದಿಂದ ೧೯ನೇ ಶತಮಾನದವರೆಗೂ ಕಾಲಾವಧಿಯಲ್ಲಿ ರಚಿತವಾದ ಆಯ್ದ ಕೀರ್ತನೆಗಳನ್ನು ಸಂಕಲನ ಮಾಡಿದ್ದಾರೆ. ಉಪಯುಕ್ತ ಅನುಬಂಧಗಳನ್ನು ನೀಡಿದ್ದಾರೆ. ಸಮಗ್ರ ದಾಸಸಾಹಿತ್ಯದ ಸಾರಲೇಖನವೆಂಬಂತೆ ಬರೆದಿರುವ ಪ್ರಸ್ತಾವನೆಯಲ್ಲಿ ಈ ಗ್ರಂಥ ರನೆಯ ಆಶಯವನ್ನು ಹೀಗೆ ತಿಳಿಸಿದ್ದಾರೆ.

''ಹರಿದಾಸರ ಎಲ್ಲ ರೀತಿಯ ಕೃತಿಗಳೂ ಒಟ್ಟಾಗಿ ಅವರ ಮನದ ಭಕ್ತಿಯ ತುಡಿತ, ಆಧ್ಯಾತ್ಮಿಕ ಸಾಧನೆ, ಭಕ್ತಿ ತತ್ತ್ವಬೋಧನೆ ಸಾಮಾಜಿಕ ಕಳಕಳಿ, ಉತ್ತಮ ಮೌಲ್ಯಗಳ ಬಗೆಗಿನ ಕಾಳಜಿ- ಎಲ್ಲವನ್ನೂ ಹೇಳುತ್ತವೆ... ಸಂಪದ್ಭರಿತವಾದ ಸುವರ್ಣಯುಗದಲ್ಲಿ ಯಾವ ರಾಜ ಮಹಾರಾಜರೂ ಮಾಡಲಾಗದಿದ್ದ ಈ ಕೆಲಸವನ್ನು ಬರಿಗೈಯಲ್ಲಿ ಚಿಟಿಕಿ, ತಂಬೂರಿ ಗೋಪಾಳ ಬುಟ್ಟಿಗಳನ್ನು ಹಿಡಿದು ಹೊರಟ ಈ ಸಂತರು ಮಾಡಿದರು. ಜನರಲ್ಲಿ ಸಾಮಾಜಿಕ ಎಚ್ಚರಿಕೆ ಮೂಡಿಸುವ ಜವಾಬ್ದಾರಿ ಹೊತ್ತು ಸಮರ್ಥವಾಗಿ ನಿರ್ವಹಿಸಿದರು. ಹರಿಭಕ್ತಿಯ ಲೇಪನದಿಂದ ಜನರ ಕದಡಿದ ಮನ ತಿಳಿಯಾಗುವಂತೆ ನೋಡಿಕೊಂಡರು. ಉತ್ತಮ ಮೌಲ್ಯಗಳನ್ನು ಮತ್ತೆ ಮತ್ತೆ ಒತ್ತಿ ಹೇಳುವ ಮೂಲಕ ಜನರಲ್ಲಿ ಉತ್ತಮ ಜೀವನಾಭಿರುಚಿ ಬೆಳೆಯಲು ಕಾರಣರಾದರು...

ಈ ಒಂದು ಸದಾಶಯದಿಂದ ಹರಿದಾಸರ ಅಂತರ್ಯದ ಭಾವನೆ ವಿಚಾರಗಳನ್ನು ಆಸಕ್ತರಿಗೆ ಪರಿಚಯ ಮಾಡಿಕೊಡುವ ಸಲುವಾಗಿ ಪ್ರಮುಖ ಹರಿದಾಸರ ಆಯ್ದ ಕೀರ್ತನೆಗಳೊಂದಿಗೆ ಅವರ ಜೀವನದ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡುವ ದಾಸಸಾಹಿತ್ಯ ಸೌರಭ ತಮ್ಮೆದುರಿನಲ್ಲಿದೆ (ಪುಟ ೧೪ ಪ್ರಸ್ತಾವನೆ)

೪. ಸಮಗ್ರ ಹರಿದಾಸ ವಾಙ್ಮಯ ಕೋಶ (೨೦೧೪)

೨೦ನೇ ಶತಮಾನದಲ್ಲಿನ ಸಾಹಿತ್ಯ ಸಂಶೋಧಕರಲ್ಲಿ ಅಗ್ರಗಣ್ಯರಾದ ಶ್ರೀನಿವಾಸ ಹಾವನೂರ ಅವರು ಸಮಗ್ರ ಹರಿದಾಸ ಸಾಹಿತ್ಯ ಸಂಕಲನ ಮತ್ತು ಸಂಪಾದನೆಯನ್ನು ನಾಡಿನ ಹರಿದಾಸ ವಿದ್ವಾಂಸರ ನೆರವಿನೊಡನೆ ಸಂಪಾದಿಸಿದ್ದಾರೆ. ೧೫೫೦೦ ಕೀರ್ತನೆಗಳನ್ನು ೫೦ ಸಂಪುಟಗಳಲ್ಲಿ ಕರ್ನಾಟಕ ಸರ್ಕಾರ ಪ್ರಕಟಿಸಿದೆ. ಸಮಗ್ರ ಹರಿದಾಸ ಸಾಹಿತ್ಯದ ಸಮಗ್ರ ಸೂಚಿಯನ್ನು ಸಮಗ್ರ ಹರಿದಾಸ ವಾಙ್ಮಯ ಕೋಶವನ್ನು ಅಪಾರ ಪರಿಶ್ರಮದಿಂದ ಸಿದ್ಧಪಡಿಸಿ ೨೦೧೪ರಲ್ಲಿ ಪ್ರಕಟಿಸಿದರು. ಇದರಲ್ಲಿ ೧೫೫೦೦ ಕೀರ್ತನೆಗಳ ಮೊದಲ ಸಾಲುಗಳ ಸೂಚಿ ಈ ಕೀರ್ತನೆಗಳಲ್ಲಿ ಕಂಡುಬರುವ ೮೩೬ ನಿರ್ದಿಷ್ಟ ವಿಷಯಗಳ ಪಟ್ಟಿ, ೧೪೬ ಹರಿದಾಸರ ಕಿರುಪರಿಚಯ, ಹರಿದಾಸ ಸಾಹಿತ್ಯದ ಸಾರಸಮೀಕ್ಷೆ ಹರಿದಾಸ ಸಾಹಿತ್ಯದ ಮೇಲಿನ ಪ್ರಮುಖ ವಿಮರ್ಶನ ಗ್ರಂಥಸೂಚಿ ನೀಡಿದ್ದಾರೆ. ದಾಸಸಾಹಿತ್ಯದ ವಿಶ್ವಕೋಶ ದರ್ಶನ ಮಾಡಿಸಿದ್ದಾರೆ.

ಈ ಗ್ರಂಥದಲ್ಲಿ (ಪುಟ ೫೫-೫೭) ಸಮಾಜಮುಖಿ ಕೀರ್ತನೆಗಳನ್ನು ಆತ್ಮನಿವೇದನೆ, ಲೋಕನೀತಿ, ನೀತಿಬೋಧೆ, ಪ್ರಾಪಂಚಿಕ ಎಂದು ೪ ಬಗೆಯಾಗಿ ವರ್ಗೀಕರಿಸಿದ್ದಾರೆ. ಇದರಲ್ಲಿ ಬರುವ ವಿಷಯಗಳನ್ನು ಸ್ಥೂಲವಾಗಿ ಆಚಾರ್ಯರು, ಋಷಿಮುನಿಗಳು, ಐತಿಹಾಸಿಕ, ಕವನ ಪ್ರಕಾರಗಳು ಕ್ಷೇತ್ರಗಳು, ಜ್ಯೋತಿರ್ ವಿಷಯಗಳು ಧಾರ್ಮಿಕ ವಿಧಿಗಳು, ರಾಮಾಯಣ, ಭಾರತ ಕೀರ್ತನೆಗಳು, ಮಾಧ್ವ ಗ್ರಂಥಪಂಥದ ಹರಿದಾಸರು... ಹೀಗೆ ಅಖಿಲ ವಿಷಯಗಳನ್ನು ಪಟ್ಟಿ ಮಾಡಿದ್ದಾರೆ. ಈ ಪೈಕಿ ಸಮಾಜಮುಖಿ ಕೀರ್ತನೆಗಳನ್ನು ಲೋಕನೀತಿ/ನೀತಿಬೋಧೆ (ಪುಟ ೩೫೧) ಲೌಕಿಕ, ಆಧುನಿಕ ಎಂದು ವರ್ಗೀಕರಿಸಿ ಸಮೀಕ್ಷಿಸಿದ್ದಾರೆ(ಪುಟ ೫೫೩-೫೬೫). ಸುಮಾರು ೨೦೦೦ಕ್ಕೂ ಮಿಕ್ಕು ಸಮಾಜಮುಖಿ ಕೀರ್ತನೆಗಳ ಪಟ್ಟಿ ಕೊಟ್ಟಿದ್ದಾರೆ. ಸಮಾಜಮುಖಿ ಕೀರ್ತನೆಗಳ ಅಧ್ಯಯನಕಾರರಿಗೆ ಏಕೈಕ ಬೃಹತ್ ಸಮಗ್ರ ಆಕರಣ ಸೂಚಿ ಗ್ರಂಥ. ಇದರ ಸಮಗ್ರ ಹರಿದಾಸ ಸಾಹಿತ್ಯದ ಸಾರಸಮೀಕ್ಷೆ (ಪುಟ ೫೪೦-೫೬೬) ಅಧ್ಯಾಯದಲ್ಲಿ ಸಮಾಜಮುಖಿ ಕೀರ್ತನೆಗಳ ಸ್ವರೂಪ ಲಕ್ಷಣಗಳನ್ನು ವಿವರಿಸಿದ್ದಾರೆ.

೨೦ನೇ ಶತಮಾನದ ಸಮಾಜಮುಖೀ ಕೀರ್ತನೆಗಳನ್ನು ಕುರಿತು ಶ್ರೀನಿವಾಸ ಹಾವನೂರರು ದಾಸಸಾಹಿತ್ಯದಲ್ಲಿ ಆಧುನಿಕತೆ ಶೀರ್ಷಿಕೆಯಲ್ಲಿ ಈ ಮಾತುಗಳನ್ನು ಹೇಳಿರುವದು ಗಮನಾರ್ಹವಾಗಿದೆ. (ಪುಟ ೫೬೩)

''ಈಚಿನ ಕಾಲದ ಹರಿದಾಸರು ಹಿಂದಿನವರಂತೆ ತಂಬೂರಿ-ತಾಳ ಹಿಡಿದುಕೊಂಡು (ಹರಿದಾಸ ವೇಷ ಹಾಕಿಕೊಂಡು) ಊರೂರುಗಳಿಗೆ ಹೋಗಿ ಕೀರ್ತನ ಕಾರ್ಯ ಮಾಡುವವರಲ್ಲಿ ಬದಲಿಗೆ ಕೈಯಲ್ಲಿ ಪೆನ್ನು ಹಿಡಿದು ಸರಕಾರಿ ನೌಕರರೋ ಶಿಕ್ಷಕರೋ ಆಗಿದ್ದವರೇ ಬಹುವಾಗಿ ಕಾಣಿಸುತ್ತಾರೆ. ಆಧುನಿಕ ವಿಚಾರಗಳನ್ನು ಕೀರ್ತನೆಗಳಲ್ಲಿ ತಂದುಕೊಟ್ಟರು ಮಾತ್ರ ಪೀಠಸ್ಥ ಯತಿಗಳು. ''ಇನ್ನು ವೃತ್ತಿಯಲ್ಲಿ ಸಾಹಿತ್ಯಕಾರರಾದವರು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಏಕೀಕರಣದಲ್ಲಿ, ದಾಸಸಾಹಿತ್ಯವನ್ನು ವಿಶೇಷವಾಗಿ ಅಧ್ಯಯನ ಮಾಡಿದವರು, ಹಲವಾರು ಮಂದಿ ಇದ್ದಾರೆ. ಇವರೆಲ್ಲ ಆಧುನಿಕ ಜೀವನವನ್ನು ಚಿತ್ರಿಸುತ್ತಲೇ ದೇವರಲ್ಲಿ ತಮ್ಮ ಭಕ್ತಿ ಭಾವವನ್ನು ಅಚ್ಚಳಿಯದೇ ಉಳಿಸಿಕೊಂಡಿದ್ದಾರೆ.'' ದಾಸಸಾಹಿತ್ಯಕ್ಕೆ ಭಕ್ತಿಭಾವವೇ ಮುಖ್ಯ ಪ್ರೇರಣೆ. ಅದರ ವಾಹಕಗಳೆಂದರೆ ಸಂಗೀತ ಮತ್ತು ಸಾಹಿತ್ಯ. ಮತ್ತು ನಾನಾ ವಿಷಯಗಳ ವ್ಯಾಪ್ತಿ ವಿಸ್ತಾರ ಹಾಗೂ ತಮಗನ್ನಿಸಿದ್ದನ್ನು ನೇರವಾಗಿ ಹೇಳಿಬಿಡುವ ಪ್ರಾಮಾಣಿಕತೆ. ಹೀಗಾಗಿ ೨೦ನೇ ಶತಮಾನದ ಕೀರ್ತನೆಗಳನ್ನು ಧಾರ್ಮಿಕ

ಎಂದು ಸಾರಾ ಸಗಟಾಗಿ ಹೇಳುವುದು ತಪ್ಪಾಗುತ್ತವೆ. ಅವರ ಕೀರ್ತನೆಗಳು ಕನ್ನಡ ಕಾವ್ಯಸಾಹಿತ್ಯದ ಅವಿಭಾಜ್ಯ ಅಂಗವಾಗಿದೆ. ಶ್ರೀನಿವಾಸ ಹಾವನೂರರ ಮಾತುಗಳಲ್ಲಿ ಸಮಾಜಮುಖಿ ಕೀರ್ತನೆಗಳ ಮುಖ್ಯ ಲಕ್ಷಣಗಳನ್ನು ಕಾಣುತ್ತೇವೆ."

೨೦ನೇ ಶತಮಾನದ ಕೀರ್ತನ ರಚಯಿತರನ್ನು ೬ ರೀತಿಗಳಲ್ಲಿ ಶ್ರೀನಿವಾಸ ಹಾವನೂರು ಗುರುತಿಸಿದ್ದಾರೆ. ೧) ಯತಿವರ್ಯರು ೨) ಹರಿದಾಸ ಮಹಿಳೆಯರು ೩) ಮಾಧ್ವ ಸಂಪ್ರದಾಯ. ೧೯ನೇ ಶತಮಾನದವರೆಗೆ ದಾಸಸಾಹಿತ್ಯದ ಪ್ರಾರಂಭದಿಂದ ಈ ೩ ವರ್ಗದವರೇ ಕಂಡುಬರುತ್ತಾರೆ.

೪ ಶ್ರೀ ವೈಷ್ಣವ ಸಂಪ್ರದಾಯರು, ೫) ಅದ್ವೈತ ಪಂಥದವರು, ೬ ಶೈವ-ವೈಷ್ಣವ ಎರಡೂ ವರ್ಗಗಳನ್ನು ಸಮಾನವಾಗಿ ಕಂಡ ಹರಿದಾಸರು (ಭಾಗವತ ಪಂಥದವರು ಅಥವಾ ಹರಿಹರ ಪಂಥದವರು). ಈ ಪೈಕಿ ೪, ೫, ೬ನೇ ವರ್ಗದವರು ೨೦ನೇ ಶತಮಾನದಲ್ಲಿ ಮೊದಲ ಬಾರಿಗೆ ಬೆಳಕಿಗೆ ಬಂದಿದ್ದಾರೆ. ಇಂದು ಹರಿದಾಸರೆಂದರೆ ಈ ಆರು ವರ್ಗದವರೂ ಸೇರ್ಪಡೆಯಾಗಿದ್ದಾರೆ.

೫. ಹರಿದಾಸರ ಸಮಾಜಮುಖಿ ಕೀರ್ತನೆಗಳು

ಬೆಂಗಳೂರಿನಲ್ಲಿ ೨೦೨೦ರಲ್ಲಿ ಅಖಿಲ ಕರ್ನಾಟಕ ಹರಿದಾಸ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆ ಆದ ಹರಿದಾಸರ ಸಮಾಜಮುಖಿ ಕೀರ್ತನೆಗಳು ಭಾಗ-೧ ಗ್ರಂಥವನ್ನು ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಮತ್ತು ಡಾ. ಸುಭಾಷ್ ಕಾಖಂಡಕಿ ಅವರು ಸಂಪಾದಿಸಿದ್ದಾರೆ.

ಈ ಗ್ರಂಥ ಪ್ರಕಟಣೆಯ ಆಶಯವನ್ನು ಸಂಪಾದಕರು ತಿಳಿಸಿರುವುದು ಹೀಗೆ ''ದಾಸರು ಮಾಧ್ವರ ಜನ್ಮ ದೊಡ್ಡದು ಇದ ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ' ಎಂದು ಹೇಳಲಿಲ್ಲ. ಅವರು ಹೇಳಿದ್ದು ''ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಬೇಡಿ. ಹುಚ್ಚಪ್ಪಗಳಿರಾ" ಎಂದರು. ದಾಸರ ಕೀರ್ತನೆಗಳಲ್ಲಿ ಬರದೇ ಇದ್ದ ವಿಚಾರಗಳೇ ಇಲ್ಲ. ಧರ್ಮ, ನೀತಿ, ಸಂಸಾರ, ವೇದಾಂತ ರಾಜಕಾರಣ, ಅರ್ಥನೀತಿ, ಸಾಮಾನ್ಯ ನೀತಿ, ವಿನೋದ ಎಲ್ಲವೂ ಇವೆ. ಮುಖ್ಯವಾಗಿ ಜೀವನಗಂಗೆಯ ಬೃಹದ್ದರ್ಶನವನ್ನು ಅವರು ತಮ್ಮ ಸಾಹಿತ್ಯದಲ್ಲಿ ಮಾಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಗ್ರಹ ಹರಿದಾಸ ಸಮಾಜಮುಖಿ ಕೀರ್ತನೆಗಳು ಭಾಗ-೧ ಪ್ರಕಟಿಸಲು ಸಂತೋಷವೆನಿಸುತ್ತದೆ" ಎಂದಿದ್ದಾರೆ.

ಈ ಗ್ರಂಥದಲ್ಲಿ ಶ್ರೀ ಪಾದರಾಜರು, ವ್ಯಾಸರಾಯರು, ವಾದಿರಾಜರು, ಪುರಂದರದಾಸರು, ಬೇಲೂರು ವೈಕುಂಠದಾಸರು, ಕನಕದಾಸರು, ಕಾಖಂಡಕಿ ಮಹೀಪತಿರಾಯರು, ಕಾಖಂಡಕಿ ಕೃಷ್ಣದಾಸರು, ಪ್ರಸನ್ನ ವೆಂಕಟ ದಾಸರು ರಚಿಸಿರುವ ಕೀರ್ತನೆಗಳ ಪೈಕಿ ೨೬೨ ಕೀರ್ತನೆಗಳನ್ನು ಸಂಕಲಿಸಲಾಗಿದೆ. ೧೫ನೇ ಶತಮಾನದಿಂದ ೧೮ ಶತಮಾನದವರೆಗೆ ೯ ದಾಸರ ಕೀರ್ತನೆಗಳು ಸಮಾಜಮುಖಿ ಕೀರ್ತನೆಗಳನ್ನು ಆಯ್ಕೆ ಮಾಡಿದ್ದಾರೆ.

೧೮, ೧೯ ಮತ್ತು ೨೦ನೆಯ ಘಟ್ಟಗಳ ಹರಿದಾಸರ ಸಮಾಜಮುಖಿ ಕೀರ್ತನೆಗಳ ಸಂಕಲನ ಪ್ರಕಟಿಸುವ ಹಂಬಲವಿದೆ ಎಂದು ತಿಳಿಸಿದ್ದಾರೆ.

ಸಮಾಜಮುಖಿ ಕೀರ್ತನೆಗಳ ಗ್ರಂಥಗಳನ್ನು ರಚಿಸಿದ ಮೇಲ್ಕಂಡ ೫ ಜನ ಸಂಕಲನಕಾರರ ಜತೆಗೆ, ತಾರತಮ್ಯೋಕ್ತ ಭಜನಾಸಂಗ್ರಹಗಳು ಸಾಕಷ್ಟು ಗ್ರಂಥಗಳು ಕನ್ನಡದಲ್ಲಿವೆ. ಒಬ್ಬೊಬ್ಬ ಹರಿದಾಸರ ಸಮಗ್ರಕೃತಿಗಳ ಸಂಕಲನಗಳು ಪ್ರಕಟವಾಗಿವೆ. ಒಬ್ಬೊಬ್ಬ ದಾಸರ ಸಾಹಿತ್ಯದ ಬಗ್ಗೆ ಪಿ.ಎಚ್.ಡಿ. ಗ್ರಂಥಗಳು ಬಂದಿವೆ. ವಿಮರ್ಶಾ ಲೇಖನಗಳು ನೂರಾರು ಪ್ರಕಟವಾಗಿವೆ. ೧೯ ನೇ ಶತಮಾನದ ಸಾಹಿತ್ಯಾಧಾರಿತ

ದಾಸಸಾಹಿತ್ಯ ಚರಿತ್ರೆಗಳು ಪ್ರಕಟವಾಗಿವೆ. ಆದರೆ ೨೦ನೇ ಶತಮಾನದ ಸಮಗ್ರ ಕೀರ್ತನೆಗಳ ಪ್ರಕಟಣೆ ಆಗಿಲ್ಲ, ಸಮೀಕ್ಷೆ ಆಗಿಲ್ಲ. ೨೦ನೇ ಶತಮಾನದ ದಾಸಪೀಳಿಗೆಯನ್ನಾಗಲೀ ಕೀರ್ತನ ಸಂಗ್ರಹಗಳ ಪಟ್ಟಿಯನ್ನಾಗಲೀ ಯಾರೂ ಸಿದ್ಧಪಡಿಸಿಲ್ಲ. ಇದುವರೆಗೆ ಕನ್ನಡದಲ್ಲೇ ಬಂದಿರುವ ಸಂಶೋಧನಾತ್ಮಕ, ಸಾಹಿತ್ಯಾತ್ಮಕ, ಸಂಗ್ರಹಾತ್ಮಾಕ, ವಿಮರ್ಶಾತ್ಮಕ ಮತ್ತು ಪರಿಚಯಾತ್ಮಕ ಸಾಹಿತ್ಯವೆಲ್ಲ ಶ್ರೀಪಾದಾರವಿಂದ ಗುರುಗೋವಿಂದ ದಾಸರವರೆಗೆ ೧೫ನೇ ಶತಮಾನದಿಂದ ೧೯ನೇ ಶತಮಾನದ ಅಂತ್ಯದವರೆಗಿನ ದಾಸಸಾಹಿತ್ಯಕ್ಕೆ ಸೀಮಿತವಾಗಿವೆ.

೨೦ನೇ ಶತಮಾನದ ದಾಸಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಮೊದಲ ಪ್ರಾತಿನಿಧಿಕ ಗ್ರಂಥ ಇದೇನೆಂದರೆ ತಪ್ಪಾಗದು.

ಖಂಡಖಂಡವಾಗಿ ಅಲ್ಲಲ್ಲಿ ೨೦ನೇ ಶತಮಾನದ ಕೀರ್ತನೆ ಗ್ರಂಥಗಳ ಹರಿದಾಸರ ಪ್ರಸ್ತಾಪದ ದಾಸಸಾಹಿತ್ಯ ಸೂಚಿ, ಕೀರ್ತನೆಗಳ ಸಂಗ್ರಹ ಕಾಣುತ್ತೇವೆ. ಸಮಗ್ರವಾಗಿ ಬಂದಿಲ್ಲ.

ಇದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ೧೦ನೇ ಶತಮಾನದ ಅಂತ್ಯದವರೆಗೆ ಬಹುತೇಕ ಹರಿದಾಸರು ಮತ್ತು ಹರಿದಾಸಸಾಹಿತ್ಯ ಮಾಧ್ವ ಸಿದ್ಧಾಂತ ಸುತ್ತ ಕೇಂದ್ರೀಕೃತವಾಗಿತ್ತು. ಕೀರ್ತನ ಸಾಹಿತ್ಯವನ್ನು ನಿಜಗುಣರಂಥವರು ರಚಿಸಿದ್ದರೂ ಅನೇಕ ತತ್ವಪದಗಳನ್ನು ಹಾಡಿದ್ದರೂ ಸಾಂಪ್ರದಾಯಕ ಹಾಡುಗಳಲ್ಲಿ ಕಂಡುಬಂದರೂ ಅದನ್ನು ಗಮನಿಸಿರಲಿಲ್ಲ. ಮಾಧ್ವ ಸಾಹಿತ್ಯವೇ ಕೀರ್ತನ ಸಾಹಿತ್ಯ ಎಂದು ದಾಸಸಾಹಿತ್ಯದ ಲೇಖಕರ ದೃಷ್ಟಿ-ನಂಬಿಕೆ ಆಗಿತ್ತು.

ಆದರೆ ೨೦ನೇ ಶತಮಾನದಲ್ಲಿ ವಿಜ್ಞಾನ-ತಂತ್ರಜ್ಞಾನ ಮುನ್ನಡೆಯಿಂದ ಸ್ವತಂತ್ರಭಾರತ ರೂಪಿತವಾಗಿ ವಿಶ್ವವೇ ಹಳ್ಳಿ ಆಗುವ ಸಂಸ್ಕೃತಿ ಹಬ್ಬಿದ್ದರಿಂದಲೂ ಅದ್ವೈತ, ವಿಶಿಷ್ಟಾದ್ವೈತದ ಹರಿದಾಸರೂ ಬೆಳಕಿಗೆ ಬರುವುದರ ಜೊತೆಗೆ ೨-೩ ಜನರಲ್ಲಿ ೧೦೦ಕ್ಕೂ ಹೆಚ್ಚು ಹರಿದಾಸಿಯರು ಕೀರ್ತನೆಗಳನ್ನು ರಚಿಸಿರುವುದು ಬೆಳಕಿಗೆ ಬಂದಿದ್ದರಿಂದ ೨೦ನೇ ಶತಮಾನದ ಹರಿದಾಸ ಸಾಹಿತ್ಯವು ಮುಂಚಿನ ದಾಸಸಾಹಿತ್ಯಕ್ಕಿಂತ ವಿಭಿನ್ನವೂ ವಿಶಿಷ್ಟವೂ ಆಧುನಿಕವೂ ಆಗಿದೆ.

ಹರಿದಾಸರು ಅಂದು ಇಂದು

ಹರಿದಾಸ ಸಾಹಿತ್ಯದಲ್ಲಿ ಶಾಸ್ತ್ರ ಪಾಂಡಿತ್ಯದ ವಿದ್ವಾಂಸರ, ಯತಿಗಳ ವ್ಯಾಸಕೂಟ ಒಂದೆಡೆಯಾದರೆ ಇನ್ನೊಂದೆಡೆ ಸಾಹಿತ್ಯ ಸಂಗೀತಗಳಿಂದ ಸದ್ಗೃಹಸ್ಥರಾದವರು ಪ್ರಚುರಗೊಳಿಸಿದ ದಾಸಕೂಟ ಇನ್ನೊಂದೆಡೆ ಇತ್ತು. ಒಂದೇ ಹಕ್ಕಿಯ ೨ ರೆಕ್ಕೆಗಳಂತೆ ಇವೆರಡೂ ಸೇರಿ ಹರಿದಾಸ ಸಾಹಿತ್ಯವಾಗಿವೆ. ಯತಿದಾಸರು, ಹರಿದಾಸರು, ಹರಿದಾಸಿಯರು, ಮಾನವರ ಬಗ್ಗೆ ಭಕ್ತರನ್ನು ದಾಸಸಾಹಿತ್ಯದಲ್ಲಿ ಕಾಣುತ್ತೇವೆ. ಸಂಪ್ರದಾಯ ಶರಣರಾದ ಹರಿದಾಸರು ೧೯ನೇ ಶತಮಾನದವರೆಗೆ ಪ್ರಕಾಶಿಸಿದರು. ೨೦ನೇ ಶತಮಾನದಲ್ಲಿ ಗುರುಗಳಿಂದ ದೀಕ್ಷೆ ಪಡೆದು ಅಂಕಿತ ಹೊಂದಿ ವಿಶಿಷ್ಟ ಹರಿದಾಸವೇಷದಲ್ಲಿ ಮಧುಕರಿ ವೃತ್ತಿ ಕೈಗೊಂಡು ಹರಿದಾಸ ವೃತ್ತಿಯನ್ನೇ ದೇವಾರಾಧನೆಯ ಸಾಧನ ಮಾಡಿಕೊಂಡ ಜನರು ವಿಶೇಷವಾಗಿ ೧೯ನೇ ಶತಮಾನದಲ್ಲಿ, ೨೦ನೇ ಶತಮಾನದ ಪ್ರಾರಂಭದಲ್ಲಿ ಅಲ್ಲಲ್ಲಿ ಕಾಣುತ್ತೇವೆ.

"೨೦ನೇ ಶತಮಾನದಲ್ಲಿ ಕ್ರಮಬದ್ಧವಾದ ದಾಸದೀಕ್ಷೆಯನ್ನು ಪಡೆಯದೆ ಅನೇಕ ಜನ ಈ ವೃತ್ತಿಯನ್ನು ಅವಲಂಬಿಸುತ್ತಿದ್ದವರು ಇದ್ದಾರೆ. ವೈಷ್ಣವ ಧರ್ಮಕ್ಕೆ ಸೇರಿದ ಎಲ್ಲಾ ಪಂಗಡದ ಜನರು ಪಟ್ಟಣಗಳಲ್ಲಿ ಹಳ್ಳಿಗಳಲ್ಲಿ ಭಿಕ್ಷುಕ ವೃತ್ತಿ ಕೈಗೊಂಡು ದಾಸರ ಪದಗಳನ್ನು ಹಾಡಿ ಪ್ರಚಾರ

ಮಾಡಿದರು. ಭಕ್ತಿ ಪಂಥದಲ್ಲಿ ಜಾತಿ-ಕುಲದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇಂತಹ ಬಿಡಿದಾಸರು ತಮ್ಮ ಶಕ್ತ್ಯಾನುಸಾರ ಜನತಾಶಿಕ್ಷಣ ನೀಡಿದರು". (ದಾಸ ಸಾಹಿತ್ಯ ಕೊಡುಗೆ ಪಿ ೧೧೪-೧೧೫ ಕೆ. ಸಂಪದ್ಗಿರಿರಾವ್)

ದಾಸಸಾಹಿತ್ಯದಲ್ಲಿ ಸಂಶೋಧನೆ ನಡೆಸಿರುವವರೊಬ್ಬರು ಅಂಕಿತ ಪಡೆದ ಹರಿದಾಸರು ಸುಮಾರು ೨೦೦ ಜನರೆಂದು ಪಟ್ಟಿ ಮಾಡಿದ್ದಾರೆ. ಆದರೆ ಕೀರ್ತನೆಗಳ ರಚನೆಗಳಲ್ಲಿ ಅಂಕಿತ ಬಳಸಿದರೂ, ದಾಸದೀಕ್ಷೆಯಿಂದ ಅಂಕಿತ ಪಡೆಯದವರು ನೂರಾರು ಜನರಿದ್ದಾರೆ. ಇವರಲ್ಲಿ ಅನೇಕರು ಶ್ರೇಷ್ಠ ಕೀರ್ತನೆಗಳನ್ನು ರಚಿಸಿದ್ದಾರೆ. ಇವರೆಲ್ಲಾ ಅಂಕಿತವನ್ನು (ಕಾವ್ಯನಾಮದಂತೆ) ಅವರೇ ಇಟ್ಟುಕೊಂಡಿದ್ದಾರೆ. ಕಾವ್ಯರಚನೆಗೆ ಅಂಕಿತ ಎನ್ನಬಹುದು. ಸಾಹಿತ್ಯ ರಚನೆಗೆ ಬಳಸುವ ನಾಮವನ್ನೇ ಕಾವ್ಯನಾಮ ಎನ್ನುತ್ತಾರೆ.

ಈ ರೀತಿಯಲ್ಲಿ ಆಧುನಿಕ ಹರಿದಾಸ ಕೀರ್ತನೆಗಳನ್ನು ಬರೆದವರಿಗೆ ಹಿರಿಯ ಹರಿದಾಸರ ದೇವರ ನಾಮಗಳೇ ಮುಖ್ಯ ಸಾಮಗ್ರಿ-ಇವರೆಲ್ಲರೂ ದಾಸವರ್ಗಕ್ಕೆ ಸೇರಿದವರೆಂದೇ ಹೇಳಬೇಕು.

ಧಾರ್ಮಿಕ ಪಾರಮಾರ್ಥಿಕ ಜೀವನದ ಕಡೆ ಜನರ ಮನಸ್ಸನ್ನು ಸೆಳೆಯುವುದೇ ಇವರ ಉದ್ದೇಶ ಎನ್ನುತ್ತಾರೆ, ಕೆ.ಸಂಪದ್ಗಿರಿರಾಯರು.

ಏಕದೇವತಾಸ್ತುತಿ

ಏಕದೇವತಾಸ್ತುತಿ ಬಹುದೇವತಾಸ್ತುತಿ ಎಂದು ದೇವಸ್ತುತಿ ಕೀರ್ತನೆಗಳಲ್ಲಿ ಎರಡು ಬಗೆ ಕಾಣುತ್ತೇವೆ. ೨೦ನೇ ಶತಮಾನದವರೆಗಿನ ಕೀರ್ತನೆಗಳು ಬಹುಮಟ್ಟಿಗೆ ಏಕದೇವತಾ ವಿಶೇಷವಾಗಿ ಇಷ್ಟದೇವತಾಸ್ತುತಿಗಳನ್ನೇ ಕಾಣುತ್ತೇವೆ. ಆದರೆ ೨೦ನೇ ಶತಮಾನದ ಕೀರ್ತನಕಾರರಲ್ಲಿ ಬಹುದೇವತಾ ಸ್ತುತಿಗಳನ್ನು ಸಾಕಷ್ಟು ಕಾಣುತ್ತೇವೆ. ಈ ಪೈಕಿ ಹರಿಹರ ಉಭಯತ್ರರ ಸ್ತೋತ್ರಗಳೇ ಹೆಚ್ಚು. ಹರಿಹರ ಅಭೇದದ ಭಾಗವತಧರ್ಮದ ಕೀರ್ತನೆಗಳು ೨೦ನೇ ಶತಮಾನದ ವೈಶಿಷ್ಟ್ಯವೂ ಹೌದು. ಅನಿವಾರ್ಯವೂ ಹೌದು. ಇಂಥ ಕೀರ್ತನೆಗಳಲ್ಲಿ ಹರಿ ಹರನ ಸಾಮ್ಯಾಂಶಗಳನ್ನು ತಿಳಿಸುವ ಕೀರ್ತನೆಗಳು ಇವೆ.

ಉದಾ: ಕೀರ್ತನೆ (ಪುಟ ೨೬೯, ರತ್ನಾಮೂರ್ತಿ)

ಬಹು ಅಂಕಿತ ಕೀರ್ತನಗಾರ್ತಿಯರು

ಸಾಮಾನ್ಯವಾಗಿ ಒಬ್ಬರಿಗೆ ಒಂದು ಸಲ ಅಂಕಿತೋಪದೇಶವಾಗಿ ಒಂದು ಅಂಕಿತವಿರುತ್ತದೆ. ೨೦ನೇ ಶತಮಾನದವರೆಗೆ ಹರಿದಾಸ ದೀಕ್ಷೆಯಲ್ಲಿ ಈ ಸಂಪ್ರದಾಯ ಕಾಣಬಹುದು. ಆದರೆ ಇಪ್ಪತ್ತನೇ ಶತಮಾನದಲ್ಲಿ ಇಬ್ಬರಿಂದ ಉಪದೇಶ ಪಡೆದು ಎರಡು ಬಗೆ ಅಂಕಿತ ಬಳಸದವರಿದ್ದಾರೆ.

ಉದಾಹರಣೆಗೆ ಜಯಶ್ರೀಕೃಷ್ಣಮೂರ್ತಿ ದಂಡಿನ್(೧೯೪೪ ಜ) ಅಲ್ಲಿದ್ದ ಅವರ ಚಿಕ್ಕಮ್ಮ ದೊಡ್ಡ ಗುಂಡಮ್ಮನವರ ಮನೆಯಲ್ಲಿ ಉತ್ತರಾದಿ ಮಠದ ಶ್ರೀ ಸತ್ಯಪ್ರಮೋದ ತೀರ್ಥರಿಂದ ಗುರೂಪದೇಶವಾಗಿ ಕನಸಿನಲ್ಲಿ ತಂದೆಯವರಿಂದ 'ರಘುಪತಿಸುತೆ' ಅಂಕಿತ ಲಭ್ಯವಾಯಿತು. ಅನಂತರ ಧೀರವಿಠಲಾಂಕಿತ ಕಂಪ್ಲಿ ಧೀರಣ್ಣ ವೈದ್ಯರು ಜಯಶ್ರೀ ಅವರಿಗೆ ಆಧ್ಯಾತ್ಮಿಕ ಗುರುಗಳಾಗಿ ತಂದೆ 'ರಘುಪತಿ' ಎಂಬ

ಅಂಕಿತವನ್ನು ಅನುಗ್ರಹಿಸಿದರು. ಜಯಶ್ರೀ ಅವರ ಪ್ರಥಮ ಕೀರ್ತನೆ ರಘುಪತಿಸುತೆ ಅಂಕಿತದಲ್ಲೂ ಅನಂತರದ ಕೀರ್ತನೆಗಳು ತಂದೆ ರಘುಪತಿ ಅಂಕಿತದಲ್ಲೂ ರಚಿತವಾಗಿವೆ. (ದಾಸಸಾಹಿತ್ಯದಲ್ಲಿ ವನಿತೆಯರು ಪುಟ ೫೪೬)

ಚರಣಗಳ ಸಾಹಿತ್ಯ: ಸಮಸಂಖ್ಯೆಯಲ್ಲಿ ಅಧಿಕ

ಕೀರ್ತನೆಗಳಲ್ಲಿ ಚರಣಗಳೆಷ್ಟಿರಬೇಕು ಎಂಬುದರ ಜತೆಗೆ ಬೆಸಸಂಖ್ಯೆಯಲ್ಲಿ (೧, ೩, ೫, ೭, ೯, ೧೧) ಇರುವುದನ್ನು ೧೯ನೇ ಶತಮಾನದವರೆಗಿನ ರಚನೆಗಳಲ್ಲಿ ಕಾಣುತ್ತೇವೆ. ಅದು ದಾಸ ಸಂಪ್ರದಾಯವೂ ಆಗಿದೆ. ಆದರೆ ೧೯ನೇ ಮುಂಚಿನ ಹರಿದಾಸರಲ್ಲಿ ಏಕಚರಣದ ಕೀರ್ತನೆಗಳೂ ಸಮಸಂಖ್ಯೆಯ ಕೀರ್ತನೆಗಳು ಇಲ್ಲವೆಂದಲ್ಲ. ಆದರೆ ಅತಿವಿರಳ ಎಂದು ನನ್ನೆಣಿಕೆ. ಇಲ್ಲಿ ಒಂದು ಪ್ರಶ್ನೆ ಏಳುತ್ತವೆ. ಕೀರ್ತನೆಗಳಲ್ಲಿ ಚರಣಗಳು ಬೆಸಸಂಖ್ಯೆಯಲ್ಲೇ ಏಕಿರಬೇಕು? ಇದಕ್ಕೆ ಖಂಡಿತ ಉತ್ತರ ಸಿಕ್ಕಿಲ್ಲ. ಇನ್ನು ೨೦ನೇ ಶತಮಾನದ ಕೀರ್ತನೆಗಳಲ್ಲಿ ಸಮಸಂಖ್ಯೆಯ ಚರಣಗಳಿರುವ ಕೀರ್ತನೆಗಳು ಅಧಿಕ ಸಂಖ್ಯೆಯಲ್ಲಿ (೨, ೪, ೬, ೮ ಇತ್ಯಾದಿ) ಸಿಗುತ್ತವೆ. ಇದಕ್ಕೆ ಕಾರಣವೇನು? ಚರಣಗಳು ಬೆಸಸಂಖ್ಯೆಯಲ್ಲಿರಬೇಕೇ ಸಮಸಂಖ್ಯೆಯಲ್ಲಿರಬೇಕೇ ಎಂಬುದರೆ ಕಡೆ ಯಾರೂ ವಿಶೇಷ ಲಕ್ಷ್ಯ ಹರಿಸದಿರುವುದು ಕಂಡು ಬರುತ್ತವೆ.

ಅಂಕಿತ ವಿಚಾರ

ಅಂಕಿತ ನೀಡುವುದು, ಅಂಕಿತವಿಟ್ಟುಕೊಳ್ಳುವುದು, ಸ್ವಪ್ನಾಂಕಿತವಾಗುವುದು ಮೂರು ಪದ್ಧತಿಗಳನ್ನು ನಾವು ೨೦ನೇ ಶತಮಾನದಲ್ಲಿ ಕಾಣುತ್ತೇವೆ. ಹರಿದಾಸ ಗುರುಗಳಿಂದ ಯತಿಗಳಿಂದ ಅಂಕಿತ ಪಡೆಯುವ ಸಾಂಪ್ರದಾಯಿಕ ಪದ್ಧತಿಯನ್ನು ವಿಶೇಷವಾಗಿ ೧೯೦೦ರ ಹಿಂದಿನ ಹರಿದಾಸರಲ್ಲಿ ಕಾಣುತ್ತೇವೆ.

ಆಧುನಿಕ ಕೀರ್ತನಕಾರರಲ್ಲಿ ಸಾಹಿತಿಗಳು ಕಾವ್ಯನಾಮ ಇಟ್ಟುಕೊಂಡಂತೆ. ಪತ್ರಿಕಾ ಸಂಪಾದಕರು ಒಬ್ಬರೇ ಹಲವಾರು ಲೇಖನಗಳನ್ನು ಬರೆಯುವ ಕಾಲಕ್ಕೆ ಬೇರೆಬೇರೆ ಹೆಸರುಗಳನ್ನು ಬಳಸುವಂತೆ ಅಂಕಿತವಿಟ್ಟುಕೊಳ್ಳುವುದನ್ನು ಕಾಣಬಹುದು.

ಅಂಕಿತವಿಟ್ಟುಕೊಳ್ಳುವುದಕ್ಕೆ ಒಂದು ಪದ್ಧತಿ, ಸಂಪ್ರದಾಯ ಅಷ್ಟಾಗಿ ಹಿಂದಿನ ಪದ್ಧತಿಯನ್ನು ಅನುಸರಿಸುವುದನ್ನು ಅಲ್ಲಲ್ಲೇ ಕಾಣುತ್ತೇನೆ. ಹೆಚ್ಚಿಲ್ಲ. ಆದರೆ ವೈಯಕ್ತಿಕ ಕಾರಣಗಳಿಂದ ಅಂಕಿತ ಇಟ್ಟುಕೊಂಡು ಕೀರ್ತನೆಗಳನ್ನು ರಚಿಸುವವರು ೨೦ನೇ ಶತಮಾನದಲ್ಲಿ ಕಂಡುಬರುತ್ತಾರೆ.

ಉದಾಹರಣೆಗೆ ಮುಂಡಿಗೆಗಳನ್ನು ಅಧಿಕ ಸಂಖ್ಯೆಯಲ್ಲಿ ಕನಕದಾಸರ ನಂತರ ಬರೆದವರೂ, ೧೦೦೦ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ ಮಹಿಳೆ ಎಂದು ಖ್ಯಾತಿ ಪಡೆದ ರತ್ನಾಮೂರ್ತಿ ಅವರು ತಮ್ಮ ಕೀರ್ತನೆಗಳಲ್ಲಿ 'ಚೆನ್ನಕೇಶವ', 'ತ್ರಿಪುರ ಸುಂದರಿ' ಎಂಬ ಆ ಎರಡು ಅಂಕಿತಗಳನ್ನು ಬಳಸಿದ್ದಾರೆ. ಮೊದಲನೇ ಅಂಕಿತ ಚೆನ್ನಕೇಶವ ಅವರ ಹಿರಿಯರ ಮನೆದೇವರು ಹಾಸನದ ಬೇಲೂರಿನ ಚೆನ್ನಕೇಶವರ ನೆನಪಿನಲ್ಲಿ ಇಟ್ಟುಕೊಂಡಿದ್ದು ಅನಂತರ ಕೀರ್ತನಕಾರರಲ್ಲಿ ದೇವಿಯರ ಅಂಕಿತ ಯಾರೂ ಇಟ್ಟುಕೊಂಡಿಲ್ಲ ಎಂದು ಭಾವಿಸಿ ತಾವಾಗಿ ಇಟ್ಟುಕೊಂಡ ಅಂಕಿತ ತ್ರಿಪುರ ಸುಂದರಿ ನಾಮ. ಅದನ್ನೇ ಏಕಿಟ್ಟುಕೊಂಡಿರಿ ಎಂದು ಕೇಳಿದಾಗ ಆ ಸಮಯದಲ್ಲಿ ಹೊಳೆದಿದ್ದು ಎಂದಿದ್ದಾರೆ. ಹೀಗೆ ನಾನಾ ಕಾರಣಗಳಿಂದ ಅಂಕಿತ ಬಳಸಿರುವುದನ್ನು ೨೦ನೇ ಶತಮಾನದ ಕೀರ್ತನಕಾರರಲ್ಲಿ

ಕಾಣುತ್ತೇವೆ. ಸಂಪ್ರದಾಯ ಮೀರಿದ ಸಂಗತಿಗಳಿಗೆ ೨೦ನೇ ಶತಮಾನದ ನಿದರ್ಶನವಾಗಿದೆ ಎನ್ನಲು ತ್ರಿಪುರ ಸುಂದರಿ ಅಂಕಿತ ಒಂದು ಉದಾಹರಣೆ ಆಗಿದೆ.

ಸ್ತ್ರೀ ಅಂಕಿತವೇಕಿಲ್ಲ?

ದಾಸಸಾಹಿತ್ಯದಲ್ಲಿ ಅಂಕಿತಗಳೆಲ್ಲ ಪುರುಷನಾಮಗಳೇ ಆಗಿವೆ. ಅದು ದೇವರ ಹೆಸರು, ಗುರುಗಳ ಹೆಸರು ಯಾವುದಾದರೂ ಆಗಿರಬಹುದು. ಆದರೆ ಸ್ತ್ರೀನಾಮವಾಗಿಲ್ಲ ಹರಿದಾಸಿಯರೂ ಪುರುಷಾಂಕಿತಗಳನ್ನಿಟ್ಟುಕೊಂಡಿದ್ದಾರೆ. ಏಕೆ ಸ್ತ್ರೀ ಅಂಕಿತವಿಲ್ಲ? ಬಹುಶಃ ಅಂಕಿತ ನೀಡಿದ ಗುರುಗಳೆಲ್ಲ ಪುರುಷರೇ ಆಗಿರುವುದು ಕಾರಣವಿರಬೇಕು.

ಆದರೆ ೧೯ನೇ ಶತಮಾನದಲ್ಲಿ ನಾಡಿಗರ ಶಾಂತಿಬಾಯಿ (ಶಿವಮೊಗ್ಗ ಜಿಲ್ಲೆಯ ಸಾಗರದ ಕೊಪ್ಪದ ಗೃಹಿಣಿ), ೨೭ ಕೀರ್ತನೆಗಳು ದೊರೆತಿವೆ (ನೋಡಿ ಕರ್ನಾಟಕ ಶ್ರೀ ಹರಿದಾಸರ ಪರಂಪರೆ ಪೀಳಿಗೆ ನಕ್ಷೆ ಶ್ರೀವರದೇಂದ್ರ ಹರಿದಾಸ ಸಾಹಿತ್ಯ ಮಂಡಲ ೧೯೪೪ ಇ. (ಲಿಂಗಸಗೂರು).

ಶಾಂತಿನಾಡಿಗೀರ ಅವರ ಅಂಕಿತ ಶಾಂತಿ ಏಕೈಕ ಸ್ತ್ರೀ ಅಂಕಿತ ನಾಡಿಗರ ಶಾಂತಿಬಾಯಿ(೧೮೬೦-೧೯೦೧).

ಇನ್ನೊಂದು ನಿದರ್ಶನ: ರತ್ನಾಮೂರ್ತಿ ೨೦ನೇ ಶತಮಾನದಲ್ಲಿ ಅತಿಹೆಚ್ಚಿನ ಮುಂಡಿಗೆಗಳ್ನು ರಚಿಸಿದಾಕೆ. ಯಾರೂ ಸ್ತ್ರೀ ಅಂಕಿತದಲ್ಲಿ ಕೀರ್ತನೆ ರಚಿಸಿಲ್ಲ ಎಂಬ ಕಾರಣದಿಂದ ತಕ್ಷಣ ಮನಸ್ಸಿಗೆ ಹೊಳೆದ ತ್ರಿಪುರಸುಂದರಿ ಅಂಕಿತದಲ್ಲಿ ೨೦ಕೀರ್ತನೆ ರಚಿಸಿದ್ದಾರೆ. ಜಗತ್ಸೃಷ್ಟಿಗೆಲ್ಲ ಆದಿಶಕ್ತಿಯೇ ಓಂಕಾರರೂಪಿಣಿಯೇ ಕಾರಣ ಎಂಬ ಭಾವನೆಯಿಂದ ಸ್ತ್ರೀ ಅಂಕಿತ ಇಟ್ಟುಕೊಂಡೆ ಕೀರ್ತನೆ ರಚನೆಗೆ, ಎಂದಿದ್ದಾರೆ ರತ್ನಾಮೂರ್ತಿ ಅವರು.

ಚರಣಗಳ ಸಂಖ್ಯೆ

೨೦ನೇ ಸತಮಾನದ ಕೀರ್ತನಕಾರರಲ್ಲಿ ಪಲ್ಲವಿ ಅನುಪಲ್ಲವಿ ಇರುವ ರಾಗತಾಳಗಳನ್ನು ಸೂಚಿಸಿರುವ ಆ ಕೀರ್ತನೆಗಳಿಗೆ ಸ್ವರಪ್ರಸ್ತಾರ ಹಾಕಿರುವ ವಾಗ್ಗೇಯಕಾರರು ಕೆಲವೇ ಮಂದಿ. ಗಾಯಕರೂ ವಾದಕರೂ ವಾಗ್ಗೇಯಕಾರರೂ ಆದವರು ವಿರಳ. ಪ್ರೊ. ಆರ್.ಎನ್. ದೊರೆಸ್ವಾಮಿಗಳು (ಜ.೧೯೧೬) ಆ ಪೈಕಿ ಒಬ್ಬರು ಮತ್ತು ರಾಗವಿಸ್ತಾರಕ್ಕೆ ಆಲಾಪನೆಗೆ ಹೆಚ್ಚು ಪ್ರಾಶಸ್ತ್ಯ ನೀಡಿದ ಕಾರಣದಿಂದಲೋ ಏನೋ (ಅದು ಆ ಕಾಲದ ಅರಸಯುಗದ ಗಾಯನಶಿಖಾಮಣಿಗಳ ಪದ್ಧತಿ ಆಗಿತ್ತೆಂದು ಕಾಣುತ್ತದೆ. ಕೀರ್ತನೆಯಲ್ಲಿ ಚರಣ ಒಂದೇ ಒಂದು ಇರುತ್ತಿತ್ತು. ದೊರೆಸ್ವಾಮಿ ಅವರ ರಚನೆಗಳಲ್ಲಿ ಪಲ್ಲವಿ ಅನುಪಲ್ಲವಿ ಏಕಚರಣ ಗೀತೆಗಳನ್ನು ಕಾಣುತ್ತೇವೆ.

ಇದೇ ರೀತಿ ಏಕಚರಣ ಗೀತೆಗಳನ್ನು ರಚಿಸಿದ ಗಾಯಕರು, ವಾದಕರು, ವಾಗ್ಗೇಯಕಾರರು ಆದವರು ಬೆಂಗಳೂರಿನ ಮೂಡ್ನೂರು ವಿ. ರಘುರಾಮಾ (ಜ ೧೯೪೪) ಅವರು. ಏಕಚರಣದ ನೂರಾರು ಕೀರ್ತನೆಗಳನ್ನು ರಚಿಸಿರುವ ಅವರು ಕೊಡುವ ಕಾರಣ ಸಮಕಾಲೀನವಾದುದು. ೨೦ನೇ ಶತಮಾನದಲ್ಲಿ ಬಹುಮಂದಿ ಪಲ್ಲವಿ ಅನುಪಲ್ಲವಿ ಮೊದಲ ಚರಣ ಮತ್ತು ಕೊನೆಯ ಚರಣ ಹಾಡುತ್ತಾರೆ. ಕೆಲವರಂತೂ ಒಂದೇ ಚರಣ ಹಾಡುತ್ತಾರೆ. ಆದಕಾರಣ ಸಂಪ್ರದಾಯದಂತೆ ೩, ೫, ೭, ೯, ೧೧ ಇತ್ಯಾದಿ ಬೆಸಸಂಖ್ಯೆಗಳ ಕೀರ್ತನೆಗಳನ್ನು ಹೆಚ್ಚಾಗಿ ರಚಿಸದೆ ಏಕಚರಣ, ಪಲ್ಲವಿ ಅನುಪಲ್ಲವಿ ಒಳಗೊಂಡ ಕೀರ್ತನೆಗಳನ್ನೇ ರಚಿಸಿರುವೆ ಎಂದು ತಿಳಿಸಿದ್ದಾರೆ.

ಇನ್ನು ಇಡೀ ಕೀರ್ತನೆಯನ್ನು ೩, ೫, ೭ ಇತ್ಯಾದಿ ಬಹುಚರಣಗಳ ಕೀರ್ತನೆಗಳನ್ನು ಹಾಡುವರು ಬಹಳ ಅಪರೂಪವಾಗುತ್ತಿದ್ದಾರೆ. ಭಜನೆ ಮಾಡುವವರು, ಮನೆಮನೆಗೆ ಮಧುಕರಿ ವೃತ್ತಿಮಾಡುವ ಸಂಪ್ರದಾಯದ ಹರಿದಾಸರು ಹಾಡುವುದನ್ನಷ್ಟೇ ನಾನು ಕೇಳಿರುವುದು. ಸಮಾಜಮುಖಿ ಕೀರ್ತನೆಗಳನ್ನು (ಎಲ್ಲಾ ಚರಣಗಳನ್ನು) ಪೂರ್ಣವಾಗಿ ಹಾಡುವುದು ಅಗತ್ಯ. ಇಲ್ಲದಿದ್ದರೆ ಅಪೂರ್ಣ ಸಮಾಜಮುಖಿ ಕೀರ್ತನೆಗಳನು ಸಾಕ್ಷಿಯಾಗಿವೆ.

ದಾಸಸಾಹಿತ್ಯದ ಇಂದಿನ ಸ್ಥಿತಿ ಗತಿ

ಈ ಸಂಗ್ರಹವನ್ನು ಅತ್ಯಲ್ಪ ಅವಧಿಯಲ್ಲಿ ಸಿದ್ಧಪಡಿಸಿದೆ. ಪ್ರಧಾನ ಸಂಪಾದಕರೂ ನಿರ್ದಿಷ್ಟ ಕಾಲಾವಧಿಯಲ್ಲಿ ಆದಷ್ಟು ಕೀರ್ತನೆಗಳ ಸಂಗ್ರಹವನ್ನು ನೀಡಬೇಕೆಂದು ಆದೇಶಿಸಿದ್ದರು. ಹೀಗಾಗಿ ಕ್ಷೇತ್ರಕಾರ ಮಾಡಿ ಹತ್ತಾರು ಕೀರ್ತನಕಾರರ ಕೃತಿಗಳನ್ನು ಇಲ್ಲಿ ಸೇರಿಸಲಾಗಿದ್ದಕ್ಕೆ ವಿಷಾದಿಸುತ್ತೇವೆ. ಇದು ಅಪೂರ್ಣಗ್ರಂಥ. ಸಮಗ್ರಸಮಾಜಮುಖಿ ಕೀರ್ತನೆಗಳ ಸಂಪುಟ ಹೊರಬರಲು ಇದೊಂದು ನಾಂದಿ ಗ್ರಂಥವೆಂದು ತಿಳಿಸಬಯಸುತ್ತೇನೆ. ಸಮಾಜಮುಖಿ ಕೀರ್ತನಕಾರರಿಗೆ ಮತ್ತು ದಾಸಸಾಹಿತ್ಯ ಗ್ರಂಥಕಾರರಿಗೆ ನಾವು ಚಿರಋಣಿಗಳು. ವಿಶೇಷವಾಗಿ ಬಿ.ಕೆ. ಶ್ರೀಮತಿ ರಾವ್ ಮತ್ತು ಎಚ್.ಎಸ್. ಶಾಂತಾ, ಶ್ರೀನಿವಾಸ ಹಾವನೂರ ಮುಂತಾದವರ ಗ್ರಂಥಗಳಿಂದ ತುಂಬಾ ನೆರವು ದೊರೆತಿದೆ. ಅವರಿಗೆ ನಾವು ಆಭಾರಿಗಳಾಗಿದ್ದೇವೆ. ೨೦ನೇ ಶತಮಾನದ ದಾಸಸಾಹಿತ್ಯ ಸೂಚಿ ಮೊದಲು ಸಿದ್ಧವಾಗಬೇಕಿದೆ. ದಾಸಸಾಹಿತ್ಯ ಪೀಳಿಗೆ ವಿವರಗಳಲ್ಲಿ ಪ್ರತಿಯೊಬ್ಬರ ಜೀವಿತಾವಧಿ ನಮೂದು ಆಗಬೇಕಿದೆ. ಕಾಲ ನಿರ್ದೇಶವಿಲ್ಲದೆ ೨೦ನೇ ಶತಮಾನದ ಕೀರ್ತನಕಾರರೇ ಆಗಿದ್ದರೂ ಹಲವರ ಕೀರ್ತನೆಗಳು ದೊರೆತಿದ್ದರೂ ನಿರ್ಣಯಿಸಲು ಆಧಾರವಿಲ್ಲದೆ ಜೀವನವಿವರವಿಲ್ಲದೆ ಅವನ್ನು ಕೈಬಿಟ್ಟಿದ್ದೇವೆ. ಅಪೂರ್ಣ ಮಾಹಿತಿಯನ್ನು ಒಳಗೊಂಡಿದ್ದರೂ ಜನನ ದಿನಾಂಕ ದೊರೆತವರ ಕೀರ್ತನೆಗಳನ್ನಷ್ಟೇ ಆಯ್ಕೆ ಮಾಡಿದ್ದೇವೆ. ಜೀವಂತವಿರುವ ಅನೇಕ ಕೀರ್ತನಕಾರರಲ್ಲಿ ಅನೇಕರ ವಿಳಾಸ-ವಿವರ ನಮಗೆ ದೊರೆತಿಲ್ಲ. ವಿವರ ವಿಳಾಕ ಸಿಕ್ಕ ಸಮಕಾಲೀನ ಕೀರ್ತನಕಾರರೆಲ್ಲ ಸಂತೋಷದಿಂದ ತಮ್ಮ ಅನುಮತಿ ನೀಡಿ ಸಂತೋಷ ವ್ಯಕ್ತಪಡಿಸಿದ್ದಾರೆ. ಕೀರ್ತನಕಾರರು ಅನೇಕ ಶ್ರೇಷ್ಠ ಸಮಾಜಮುಖಿ ಕೀರ್ತನೆಗಳನ್ನು ರಚಿಸಿರುವುದು ನಮ್ಮ ಗಮನಕ್ಕೆ ಬಂದಿದ್ದರೂ ಪುಟಗಳ ಮಿತಿಯ ಕಾರಣ ಕೆಲವನ್ನೇ ಪ್ರಾತಿನಿಧಿಕವಾಗಿ ಸಂಗ್ರಹದಲ್ಲಿ ಸೇರಿಸಿದ್ದೇವೆ. ಮತ್ತೆ ಕೆಲವು ಕೀರ್ತನಕಾರರು ನೂರಾರು ಕೀರ್ತನೆಗಳನ್ನು ರಚಿಸಿದ್ದರೂ ಅವು ಶ್ರೇಷ್ಠವಾಗಿದ್ದರೂ ಸಮಾಜಮುಖಿ ಕೀರ್ತನೆಗಳಲ್ಲದೆ ಅವೆಲ್ಲಾ ಹರಿ ಗುರು ಸ್ತುತಿಗಳಾಗಿರುವುದರಿಂದ ಕೈ ಬಿಡಲಾಗಿದೆ. ೨೦ನೇ ಶತಮಾನದಲ್ಲಿ ರಚಿತವಾಗಿರುವ ಕೀರ್ತನೆಗಳ ಸಂಖ್ಯೆ ಹತ್ತು ಸಾವಿರಕ್ಕೂ ಹೆಚ್ಚಾಗಿವೆ. ಕೆಲವು ಕೀರ್ತನಕಾರರು ೧೦೦೦ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ.

ಈ ೨೦ನೇ ಶತಮಾನದ ಕೀರ್ತನೆಗಳಲ್ಲಿ ವೈವಿಧ್ಯ ಹೆಚ್ಚಾಗಿದೆ. ರೈಲು, ಸ್ಕೂಟರ್‌ಗಳನ್ನು ಆಧ್ಯಾತ್ಮಕ್ಕೆ ನಿದರ್ಶನಗಳಾಗಿ ಬಳಸಿದ್ದಾರೆ. ೧೯ನೇ ಶತಮಾನದವರೆಗೆ ಮೂರೇ ಮೂರು ಜನ ಹರಿದಾಸಿಯರು ಗಲಿಗಲಿ ಗಂಗವ್ವ, ಹರಪನಹಳ್ಳಿ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮ ವಿದ್ವಾಂಸರ, ಹರಿದಾಸಸಾಹಿತ್ಯ ಚರಿತ್ರಕಾರರ ಕಣ್ಣಿಗೆ ಬಿದ್ದಿದ್ದಾರೆ. ಶರಣ ಸಾಹಿತ್ಯದಲ್ಲಿ ಕಂಡು ಬರುವಷ್ಟು ಮಹಿಳೆಯರು ಇಲ್ಲಿಲ್ಲ. ಆದರೆ ೨೦ನೇ ಶತಮಾನದಲ್ಲಿ ೫೦ಕ್ಕೂ ಹೆಚ್ಚಿನ ದಾಸಸಾಹಿತ್ಯ ಹಾಗೂ ಕೀರ್ತನ ಸಾಹಿತ್ಯ ರಚಿಸಿದವರು ಕಂಡು ಬರುತ್ತಾರೆ. ಆ ರಚನೆಗಳಲ್ಲಿ ಪರಂಪರೆಯ ಅನುಕರಣೆ ಕೀರ್ತನೆಗಳೂ ಇವೆ. ನಾವೀನ್ಯದ ಸಮಕಾಲದ ಸಮಾಜದ ಬದುಕಿನ ಚಿತ್ರಣದ ಕೀರ್ತನೆಗಳೂ ಇವೆ. ಮಹಿಳಾ ಹರಿದಾಸಿಯರಲ್ಲಿ

೩೦೦೦ ಕೀರ್ತನೆ ಬರೆದವರಿದ್ದಾರೆ. ಕನಕದಾಸರನಂತರ ಮುಂಡಿಗೆಗಳನ್ನು ಅಧಿಕ ಸಂಖ್ಯೆಯಲ್ಲಿ ರಚಿಸಿದ ಏಕೈಕ ಲೇಖಕಿ ರತ್ನಾಮೂರ್ತಿ ಇದ್ದಾರೆ. ಬಹಿರಂಗದಲ್ಲಿ ಲೌಕಿಕ ಜೀವನದಲ್ಲಿ ಮುಳುಗಿದ್ದರೂ ಅಂತರಂಗದಲ್ಲಿ ಹರಿದಾಸತ್ವ ಹೊಂದಿದವರು ಅನೇಕರಿದ್ದಾರೆ. ಹೀಗಾಗಿ ಅಂಥವರನ್ನು ಗುರುತಿಸುವುದೇ ಕಷ್ಟವಾಗಿದೆ. ಈಗ ಹರಿದಾಸ ವೃತ್ತಿ ಕೈಗೊಂಡವರು ದಾಸವೇಷಧಾರಿಗಳು ಸಂಪ್ರದಾಯಿಕ ಅಂಕಿತೋಪದೇಶ ಪಡೆದವರು. ೨೦ನೇ ಶತಮಾನದ ಪ್ರಾರಂಭದಲ್ಲಿದ್ದಷ್ಟು ಈಗಿಲ್ಲ. ಎಷ್ಟೋ ಜನ ಗುಪ್ತ ಸಾಧಕರಾಗಿದ್ದಾರೆ. ನೂರಕ್ಕೆ ತೊಂಭತ್ತರಷ್ಟು ಭಜನಾನಿರತರಾಗಿದ್ದು ತಾರತಮ್ಯ ಪದ್ಧತಿಯಿಂದ ಹೊರಬಂದಿಲ್ಲ. ಬಹುದೇವತೋಪಾಸಕರು ಕೀರ್ತನರಚಕರು ಹೆಚ್ಚಿಲ್ಲ. ೨೦ನೇ ಶತಮಾನದಲ್ಲಿ ಸಾವಿರಕ್ಕೂ ಮೀರಿ ದಾಸಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು ರಚಿತವಾಗಿದ್ದರೂ ಅವೆಲ್ಲಾ ಒಂದು ಕಡೆ ಯಾರ ಬಳಿಯೂ ಇಲ್ಲ. ನಮ್ಮಲ್ಲಿರುವ ಮಠಾಧಿಪತಿಗಳೂ ಮನಸ್ಸು ಮಾಡಿದ್ದಲ್ಲಿ ಸಮಗ್ರ ದಾಸಸಾಹಿತ್ಯ ಲೈಬ್ರರಿ ಮಾಡಲು ಶಕ್ಯ. ಏಕೆಂದರೆ ಅದಕ್ಕೆ ಕಟ್ಟಡ, ಸಿಬ್ಬಂದಿ ನಿರ್ವಹಣೆ ವೆಚ್ಚ ಪುಸ್ತಕ ಕೊಂಡು ಸಂಗ್ರಹಿಸಲು ಅಪಾರ ಹಣ ಬೇಕು ಇದನ್ನು ಯಾರೇ ವ್ಯಕ್ತಿ ಸಂಘ ಸಂಸ್ಥೆ ಮಾಡಲು ಸಾಧ್ಯವಿಲ್ಲ. ಆ ಕಾಲ ಎಂದು ಬಂದೀತೋ ಕಾಯಬೇಕಾಗಿದೆ. ಅಲ್ಲಿಯವರೆಗೆ ದಾಸಸಾಹಿತ್ಯ ಅಪೂರ್ಣಮಾಹಿತಿಗಳಿಂದ ಪ್ರಕಟವಾಗುತ್ತಿರುತ್ತವೆ.

******

ಶೈಲಜಾ ಕೀರ್ತನೆಗಳು

ಕೆ. ಎಸ್. ರಾಮಮೂರ್ತಿ
ಚರವಾಣಿ : ೯೪೪೯೭೫೦೬೧೮

ಭಾರತದ ಸಂಗೀತ ಪರಂಪರೆಯಲ್ಲಿ ಕರ್ನಾಟಕ ಸಂಗೀತ ವಿಶಿಷ್ಟವಾಗಿದ್ದು, ಸಂಗೀತ ಪ್ರೇಮಿಗಳ ಪಾಲಿಗೆ ನಾದಾಮೃತವೆನಿಸಿದೆ. ಈ ಹೆಗ್ಗಳಿಕೆಗೆ ಕಾರಣೀಭೂತರಾದವರು ಸಂಗೀತ ವಿದ್ವಾಂಸರು-ವಿದುಷಿಗಳು ಹಾಗೂ ವಾಗ್ಗೇಯಕಾರರು-ವಾಗ್ಗೇಯಕಾರ್ತಿಯರು.

ಕರ್ನಾಟಕ ಸಂಗೀತ ಪಿತಾಮಹರಾದ ಪುರಂದರದಾಸರಿಂದ ಮೊದಲ್ಗೊಂಡು ಇಂದಿನ ಆಧುನಿಕ ಯುಗದಲ್ಲೂ ವಾಗ್ಗೇಯಕಾರರ ಪರಂಪರೆ ಮುಂದುವರೆದಿದೆ.

ಕನಕ ಪುರಂದರದಾಸರು, ಜಗನ್ನಾಥದಾಸರು, ವಾದಿರಾಜರು, ಶ್ರೀ ರಾಘವೇಂದ್ರ ಸ್ವಾಮಿಗಳು, ವ್ಯಾಸರಾಯರು, ಮಹೀಪತಿದಾಸರು, ತ್ಯಾಗರಾಜರು, ಶಾಮಶಾಸ್ತ್ರಿಗಳು, ಮುತ್ತು ಸ್ವಾಮಿ ದೀಕ್ಷಿತರು, ತಾಳ್ಳಪಾಕ ಅನ್ನಮಾಚಾರ್ಯರು, ಭದ್ರಾಚಲರಾಮದಾಸರು, ತರಿಗೊಂಡವೆಂಗಮಾಂಬ ಮೊದಲಾದವರು ಅನನ್ಯವಾದ ಸಂಗೀತಕೃತಿರತ್ನಗಳನ್ನು ವಿರಚಿಸಿದ್ದಾರೆ.

ಆಧುನಿಕ ಯುಗದಲ್ಲೂ ವಾಗ್ಗೇಯಕಾರರ ಪರಂಪರೆ ಮುಂದುವರೆದಿದ್ದು, ಕರ್ನಾಟಕ ಸಂಗೀತವನ್ನು ಶ್ರೀಮಂತಗೊಳಿಸಿದೆ. ಇವರಲ್ಲಿ ಹೆಸರಿಸಬಹುದಾದವರೆಂದರೆ ಬಿಡಾರಂ ಕೃಷ್ಣಪ್ಪ, ಮೈಸೂರು ವಾಸುದೇವಾಚಾರ್ಯರು, ಮೈಸೂರು ಸದಾಶಿವರಾಯರು, ಸಂಗೀತಕಳಾನಿಧಿ. ಟಿ., ಚೌಡಯ್ಯನವರು, ಜಿ. ಎನ್. ಬಾಲಸುಬ್ರಮಣ್ಯ, ಸದಾಶಿವ ಬ್ರಹ್ಮೇಂದ್ರರು, ತಿರುವಾಂಕೂರಿನ ಸ್ವಾತಿ ತಿರುನಾಳ್ಮಹಾರಾಜರು ಮೊದಲಾದವರು.

ಈ ಕ್ಷೇತ್ರದಲ್ಲಿ ಮಹಿಳೆಯರು ಸಹ ಅದ್ಭುತವಾದ ಸಂಗೀತಕೃತಿಗಳನ್ನು ರಚಿಸಿ ಸೈ ಎನಿಸಿಕೊಂಡಿದ್ದಾರೆ. ಗಲಗಲಿ ಅವ್ವ(ರನೂಬಾಯಿ) ಸಾಧ್ವಿತಿಮ್ಮಮ್ಮ, ಹೆಳವನಕಟ್ಟೆಗಿರಿಯಮ್ಮ, ಹರಪನಹಳ್ಳಿ ಭೀಮವ್ವ, ತುಳಸಾಬಾಯಿ, ನಿಡಗುರಕಿ ಜೀವೂಬಾಯಿ, ಉಡುಪಿ ಯಶೋದಮ್ಮ, ಕಳಸದ ಸುಂದರಮ್ಮ, ಪದ್ಮಾಬಾಯಿ ಕೋಲಾರ, ರುಕ್ಮಿಣಿಗಿರಿಮಾಜಿ. ಮೊದಲಾದ ವಾಗ್ಗೇಯಕಾರ್ತಿಯರು ಇಂತಹ ವಾಗ್ಗೇಯಕಾರ್ತಿಯರ ಪಂಕ್ತಿಗೆ ಸೇರಿದವರು ವಿದುಷಿ ಶ್ರೀಮತಿ ಶೈಲಜಾ ಶ್ರೀಕಂಠಯ್ಯ.

ವನಸುಮದಂತೆ ಬದುಕಿ, ನಾದಾಮೃತವನ್ನು ಹಂಚಿದ ವಿದುಷಿ ಶೈಲಜಾ ನಮ್ಮ ನಾಡು ಹೆಮ್ಮೆಪಡುವಂತಹ ವಾಗ್ಗೇಯಕಾರ್ತಿ, ಕನ್ನಡ-ಸಂಸ್ಕೃತ ಮತ್ತು ತೆಲುಗುಭಾಷೆಗಳಲ್ಲಿ ಅನೇಕ ಸಂಗೀತಕೃತಿಗಳನ್ನು ರಚಿಸಿ ಹಾಡಿ ತೋರಿಸಿದ್ದಾರೆ.

ಹೊಯ್ಸಳ ಸಾಮ್ರಾಜ್ಯದ ಕೇಂದ್ರನೆಲೆಯೆನಿಸಿದ ಹಾಸನ ಜಿಲ್ಲೆಯ ಕೊಣನೂರು ರಾಮಕೃಷ್ಣಶಾಸ್ತ್ರಿ–ವಾಗೀಶ್ವರೀ ಶಾಸ್ತ್ರಿ ದಂಪತಿಗಳ ಹಿರಿಯಪುತ್ರಿ ಜನಿಸಿದ್ದು ೧೯೪೪ ರಲ್ಲಿ. ಸಂಗೀತ ಮನೆತನದಲ್ಲಿ ಹುಟ್ಟಿ ಅರಳಿದ ಈ ಪ್ರತಿಭೆಯ ಸಂಗೀತಯಾನ ಮಧುರವಾಗಿದ್ದು ಸಂಗೀತಗಾರರಿಗೆ ಆದರ್ಶಪ್ರಾಯವಾಗಿದೆ.'

ಇವರ ತಂದೆ ಕೊಣನೂರು ರಾಮಕೃಷ್ಣಶಾಸ್ತ್ರಿಗಳು ಸಂಗೀತ ವಿದ್ವಾಂಸರು. ಸಂಪ್ರದಾಯ ಹಾಡುಗಳ ಗಣಿಯೆನಿಸಿದ ವಾಗೀಶ್ವರೀ ಶಾಸ್ತ್ರೀ ಇವರ ತಾಯಿ. ಬಾಲ್ಯದಲ್ಲೇ ತಂದೆಯವರಿಂದ ಸಂಗೀತ ಶಿಕ್ಷಣ ಪಡೆದು, ಸಂಗೀತಯಾನವನ್ನು ಮುಂದುವರೆಸಿ, ಸಂಗೀತವನ್ನು ಒಂದು ವ್ರತದಂತೆ ಭಾವಿಸಿ, ಸಂಗೀತಕ್ಕೆ ತಮ್ಮ ಜೀವನವನ್ನು ಮುಡುಪಾಗಿಟ್ಟರು. ನಿಂತರೆ, ಕುಳಿತರೆ, ಕೆಲಸ ಮಾಡುವಾಗಲೆಲ್ಲ ಸಂಗೀತವನ್ನೇ ಧ್ಯಾನಿಸುತ್ತಿದ್ದರು.

ಬಾಲಕಿಯಾಗಿದ್ದಾಗಲೇ ಸಂಗೀತದ ರಸಯಾತ್ರೆಯನ್ನು ಆರಂಭಿಸಿದ ಶೈಲಜಾ, ಸಾರ್ವಜನಿಕ ಸಮಾರಂಭಗಳಲ್ಲಿ ಮಠ–ಮಂದಿರಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸಿ ಸಂಗೀತ ರಸಿಕರ ಮೆಚ್ಚುಗೆಗೆ ಪಾತ್ರರಾಗಿದ್ದರು. ಶೃಂಗೇರಿ ಶಾರದಾಪೀಠದ ೩೫ ನೇ ಪೀಠಾಧಿಪತಿಗಳಾಗಿದ್ದ ಶ್ರೀಶ್ರೀ ಅಭಿನವ ವಿದ್ಯಾತೀರ್ಥರ ದಿವ್ಯಸಮ್ಮುಖದಲ್ಲಿ ಹಾಡಿ ಗುರುಗಳ ಅನುಗ್ರಹಕ್ಕೆ ಪಾತ್ರರಾಗಿದ್ದರು. ಶೈಲಜಾ ಅವರ ಸಂಗೀತವನ್ನು ಪ್ರಶಂಸಿಸಿದ ಗುರುಗಳು, ಚಿನ್ನದ ಕಾಸು, ಕಾಶೀ ಪೀತಾಂಬರದ ಶಾಲುಹೊದಿಸಿ ಆಶೀರ್ವದಿಸಿದರು. ಚೆನ್ನೈನ ಆಕಾಶವಾಣಿಯ ಕಲಾವಿದರಾಗಿ ಮಾನ್ಯತೆ ಪಡೆದು ಹಲವು ವರ್ಷಗಳ ಕಾಲ ಸಂಗೀತ ಕಛೇರಿಗಳನ್ನು ನಡೆಸಿಕೊಟ್ಟಿದ್ದರು.

ಸದ್ಗೃಹಿಣಿಯಾಗಿ, ಆದರ್ಶಮಾತೆಯಾಗಿ, ಸಂಗೀತ ವಿದುಷಿಯಾಗಿ ಮೌಲಿಕವಾದ ಸಂಗೀತಕೃತಿಗಳನ್ನು ರಚಿಸಿದ ವಾಗ್ಗೇಯಕಾರ್ತಿ ಶೈಲಜಾ ೨೦೦೬ ರಲ್ಲಿ ಅಕಾಲ ಮರಣಕ್ಕೆ ತುತ್ತಾದರು.

ತಂದೆ ತಾಯಿಯ ಪ್ರೋತ್ಸಾಹ, ಮನೆಯಲ್ಲಿನ ಸಂಗೀತ ಕಲರವ, ರಾಮಕೃಷ್ಣಪರಮಹಂಸರ ಬೋಧನೆಗಳಿಂದ ಹಾಗೂ ಚಿಂತಕ ಯು.ಜಿ. ಕೃಷ್ಣಮೂರ್ತಿಯವರ ಆಧ್ಯಾತ್ಮಿಕ ಚಿಂತನೆಗಳಿಂದ ಪ್ರೇರಿತರಾಗಿ ಕೀರ್ತನೆಗಳನ್ನು ರಚಿಸಿರುವರು. ದೇವಾಲಯಗಳನ್ನು ಸಂದರ್ಶಿಸಿದ ಸಂದರ್ಭದಲ್ಲಿ ಭಕ್ತಿ ಪರವಶರಾಗಿ ಹಾಡುಗಳನ್ನು ರಚಿಸಿ ರಾಗಸಂಯೋಜಿಸಿ ಹಾಡಿರುವರು. ಇದಕ್ಕೆ ನಿದರ್ಶನವೆಂದರೆ ಗುಡ್ಡದಹಳ್ಳಿ ಹನುಮನನ್ನು ಕಂಡಾಗ, ದಸರೀಘಟ್ಟದ ಚೌಡೇಶ್ವರಿಯನ್ನು ದರ್ಶಿಸಿದಾಗ ರಚಿಸಲಾಗಿರುವ ಕೀರ್ತನೆಗಳು.

ಜನಪದ ಧಾಟಿಯಲ್ಲಿ ಹರಿದಾಸರಂತೆ ಕೀರ್ತನೆಗಳನ್ನು ರಚಿಸಿರುವರು. ಉಗಾಭೋಗಗಳನ್ನು ರಚಿಸಿ ವಿಶಿಷ್ಟ ವಾಗ್ಗೇಯಕಾರರಾಗಿರುವರು. ಸರಳ, ಜಂಟಿ ವರಸೆಗಳಿಗೆ ಸಾಹಿತ್ಯ ರೂಪ ನೀಡಿರುವುದಲ್ಲದೆ ವರ್ಣ, ಕೃತಿ, ತಿಲ್ಲಾನ, ದೇವರನಾಮ, ಭಾವಗೀತೆ, ದೇಶಭಕ್ತಿಗೀತೆ, ತತ್ವಪದಗಳ ಧಾಟಿಯಲ್ಲಿ ಪದಗಳನ್ನು ರಚಿಸಿರುವರು. ಅನೇಕ ಕೃತಿಗಳಿಗೆ ಸುಂದರವಾದ ಚಿಟ್ಟೆಸ್ವರಗಳನ್ನು ಅಳವಡಿಸಿದ್ದಾರೆ.

ಗಣಪತಿ, ಶಿವ, ರಾಮ, ಕೃಷ್ಣ, ಆಂಜನೇಯ, ಸುಬ್ರಹ್ಮಣ್ಯ, ಗುರುರಾಘವೇಂದ್ರರು, ಚೌಡೇಶ್ವರಿದೇವಿ, ಶ್ರೀದೇವಿ ಮೊದಲಾದ ದೈವಗಳನ್ನು ಕುರಿತು ಕೀರ್ತನೆಗಳನ್ನು ಶ್ಲೋಕಗಳನ್ನು ಸ್ತುತಿಗಳನ್ನು ರಚಿಸಿದ್ದಾರೆ. ತೆಲುಗುಭಾಷೆಯಲ್ಲೂ ಸಹ ಸಂಗೀತಕೃತಿಗಳನ್ನು ಸೃಜಿಸಿರುವರು. ದಸರೀಘಟ್ಟದ ಚೌಡೇಶ್ವರಿ ದೇವಿಯ ಬಗ್ಗೆ ಸುಪ್ರಭಾತವನ್ನು ರಚಿಸಿರುವರು.

'ಶೈಲಜಾ'ಎಂಬ ಅಂಕಿತನಾಮದಿಂದ ರಚಿಸಲಾಗಿರುವ ಸಂಗೀತಕೃತಿಗಳಲ್ಲಿ ಭಕ್ತಿಪರಾಮ್ಯತೆಯಿದೆ, ತಾಯಿಯ ಮಮತೆಯಿದೆ, ಪ್ರೀತಿ, ದೈನ್ಯತೆ, ಗಂಭೀರಜೀವನ ತತ್ವವಿದೆ, ಲಘುಹಾಸ್ಯ, ವಿನೋದಗಳಿವೆ. ಉತ್ತಮಸಾಹಿತ್ಯ, ವಿವಿಧಭಾವಗಳು, ಸರಳ ಸುಂದರವಾದ ಶೈಲಿ, ಗೇಯಗುಣ, ಪ್ರಾಸವೈಭವದಿಂದ ಕೂಡಿವೆ ಇವರ ಕೀರ್ತನೆಗಳು. ಸಂದರ್ಭೋಚಿತವಾಗಿ ಹಾಡನ್ನು ರಚಿಸಿ, ಅದಕ್ಕೆ ರಾಗವನ್ನು ಹಾಕಿ ಹಾಡಿ ತೋರುವ ಕಲೆಗಾರಿಕೆ ಚಾತುರ್ಯ ಶೈಲಜಾ ಅವರಲ್ಲಿತ್ತು. ಅವರು ಗಾನಕೋಗಿಲೆಯಾಗಿದ್ದರು, ವಾಗ್ಗೇಯಕಾರ್ತಿಯಾಗಿದ್ದರು. ಸಂಗೀತ-ಸಾಹಿತ್ಯಗಳ ಆರಾಧಕಿಯೂ ಆಗಿದ್ದರು.

ಶೈಲಜಾ ಅವರ ನಿಧನದ ನಂತರ, ಅವರು ರಚಿಸಿದ 'ಚೌಡೇಶ್ವರಿ ಸುಪ್ರಭಾತ' ಮತ್ತು ಕೆಲವು ಭಕ್ತಿಗೀತೆಗಳ ಧ್ವನಿ ಸುರುಳಿಗಳನ್ನು ಬೆಂಗಳೂರಿನ ವಾಗ್ದೇವಿಕಲಾನಿಕೇತನದ ವತಿಯಿಂದ ಹೊರತರಲಾಯಿತು.

ಶೈಲಜಾ ಅವರ ತಂಗಿ ಗೀತಾಬಾಲಸುಬ್ರಹ್ಮಣ್ಯಂ, ಹಸ್ತಪ್ರತಿಯಲ್ಲಿದ್ದ ಅಕ್ಕನ ಹಾಡುಗಳನ್ನು ಶ್ರದ್ಧೆ-ಆಸಕ್ತಿಗಳಿಂದ ಅಚ್ಚಿಗೆ ಸಿದ್ಧಪಡಿಸಿ, ನಾಡಿನ ಜನರಿಗೆ ಶೈಲಜಾ ಕೀರ್ತನೆಗಳು ಲಭ್ಯವಾಗುವಂತೆ ಮಾಡಿರುವರು.

'ವನಸುಮ ವಾಗ್ಗೇಯಕಾರ್ತಿ ಶೈಲಜಾ ರಚನೆಗಳು' ಎಂಬ ಹೆಸರಿನ ಈ ಗ್ರಂಥವನ್ನು ವಾಗ್ದೇವಿಕಲಾನಿಕೇತನದರು ೨೦೧೩ರಲ್ಲಿ ಪ್ರಕಟಿಸಿದ್ದಾರೆ. ೧೮೫ ಪುಟಗಳನ್ನೊಳಗೊಂಡ ಈ ಪುಸ್ತಕಕ್ಕೆ ನಾಂದಿ ತೋರಣವೆಂಬಂತೆ. ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು ವಿದ್ವತ್ಪೂರ್ಣ ಮುನ್ನುಡಿ ಬರೆದಿದ್ದಾರೆ.

ಶೈಲಜಾ ಅವರು ರಚಿಸಿರುವ ೧೬೩ ಕೀರ್ತನೆಗಳನ್ನು ರಾಗ-ತಾಳಗಳ ಮಾಹಿತಿಯೊಂದಿಗೆ ಮುದ್ರಿಸಲಾಗಿದೆ. ಸಾಂದರ್ಭಿಕ ಟಿಪ್ಪಣಿಗಳು ಹಾಗೂ ಹಾಡುಗಳ ರಚನಾ ದಿನಾಂಕಗಳನ್ನು ತಿಳಿಸಲಾಗಿದೆ.

ಶೈಲಜಾ ಅವರ ತಾಯಿ ವಾಗೀಶ್ವರೀಶಾಸ್ತ್ರೀ, ಸೋದರಿಯರಾದ ಅನ್ನಪೂರ್ಣ, ಗೀತಾ, ವಿಜಯಲಕ್ಷ್ಮಿ , ವೀಣಾ, ಸೋದರ ಶ್ರೀಕಂಠಮೂರ್ತಿ ಹಾಗೂ ಶೈಲಜಾ ಅವರ ಪುತ್ರಿಯರಾದ ಲಲಿತ ಮತ್ತು ಸವಿತಾ ಅವರುಗಳ ಮನದಾಳದ ಮಾತುಗಳು, ನುಡಿನಮನಗಳನ್ನೊಳಗೊಂಡಿದೆ ಈ ಪುಸ್ತಕ.

ಈ ಗ್ರಂಥವನ್ನು ೨೦೧೩ರ ಜನವರಿ ೧೦ರಂದು ಬೆಂಗಳೂರಿನ ಎನ್.ಆರ್. ಕಾಲೋನಿಯ ಬಿ.ಎಂ.ಶ್ರೀ. ಕಲಾಭವನದಲ್ಲಿ ನಡೆದ ಸಮಾರಂಭದಲ್ಲಿ ಲೋಕಾರ್ಪಣೆ ಮಾಡಲಾಯಿತು.

ಇದಕ್ಕೆ ಗಾನಭೂಷಣ-ಸಂಗೀತಕಲಾನಿಧಿ ವಿದ್ವಾನ್ ಆರ್. ಕೆ. ಪದ್ಮನಾಭ, ಕನ್ನಡ ಪ್ರಾಧ್ಯಾಪಕ, ಡಾ. ಅನಂತಪದ್ಮನಾಭರಾವ್, ಪ್ರೊ. ಜಿ. ಅಶ್ವತ್ಥನಾರಾಯಣ, ಮಾತೃಶ್ರೀ ವಾಗೀಶ್ವರಿಯವರ ಘನ ಉಪಸ್ಥಿತಿ ಸಾಕ್ಷಿಯಾಗಿತ್ತು.

*****

ವ್ಯಾಕರಣ ಸಂಗ್ರಹಂ

ನೀ. ಕೃ. ರಾಮಶೇಷನ್
ಚರವಾಣಿ : ೮೨೭೭೧೧೪೧೧೦

ಇಂದಿನ ಈ ಐಟಿ ಬಿಟಿ ಅತ್ಯಾಧುನಿಕ ಮೊಬೈಲ್ ಯುಗದ ಗದ್ದಲದ ನಡುವೆ ಗಾಢವಾದ ಆಲೋಚನೆ – ಆಲೋಢನೆ, ಸಾಹಿತ್ಯ, ಅದರಲ್ಲೂ ವ್ಯಾಕರಣದಂತಹ ಶಾಸ್ತ್ರಗ್ರಂಥ ಕುರಿತ ಚರ್ಚೆ, ಕಡಿಮೆ ಆಗುತ್ತಿದೆಯೇ ಎಂಬ ಅಳುಕು ವಿದ್ಯಾರ್ಥಿ ವೃಂದದಿಂದ ಹಿಡಿದು ಸಂಶೋಧಕರವರೆಗೆ ತೋರಿಬರುತ್ತಿದೆ ಎಂದು ಆ ಮಾರ್ಗದಲ್ಲಿ ಸಾಗುತ್ತಿರುವವರಿಗೆ ಸಹಜವಾಗಿಯೇ ಅನ್ನಿಸುತ್ತಿದೆ. ಸುಮಾರು ಸಾವಿರದ ಇನ್ನೂರೈವತ್ತು ವರ್ಷಕ್ಕೂ ಮೀರಿದ ಇತಿಹಾಸ ಉಳ್ಳ ಕನ್ನಡ ಸಾಹಿತ್ಯದ ಹರಹಿನಲ್ಲಿ ಶಾಸ್ತ್ರ-ಶಾಸ್ತ್ರೀಯ ಗ್ರಂಥಗಳದ್ದೆ ಒಂದು ಅಪೂರ್ವ ಕಾಣಿಕೆ (ದರ್ಶನ ಎಂಬರ್ಥದಲ್ಲಿ). ಬಹು ಹಿಂದಿನ ಹಳಗನ್ನಡ ಗ್ರಂಥ-ಅದರಲ್ಲಿಯೂ ವ್ಯಾಕರಣ, ಅಲಂಕಾರ, ಛಂದಸ್ಸು, ಇವುಗಳೆಂದರೆ ಮನಸ್ಸಿಗೆ ಮೊದಲು ಸ್ಫುರಿಸುವ ಗ್ರಂಥಗಳು-ಕೇಶಿರಾಜನ ಶಬ್ದಮಣಿದರ್ಪಣ, (ಇವನ್ನು ಅಚ್ಚುಕಟ್ಟಾಗಿ ಸಂಪಾದಿಸಿದವರಲ್ಲಿ ಡಾ. ಡಿ. ಎಲ್. ನರಸಿಂಹಚಾರ್,) ಅವರಿಗೆ ಸರಿಗೈ ಎಂಬಂತೆ ಧಾರವಾಡದ ಎಂ.ಎ. ಕಲಬುರ್ಗಿಯವರು, ಹಿಂದಿನ ಮದ್ರಾಸ್ ಪ್ರಾಂತ್ಯದ ಪಂಡಿತ ಶೇಷಯ್ಯಂಗಾರರು, ದಾಸರ ಸಾಹಿತ್ಯ ಹಾಗೂ ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀಯವರ ಸಂಪಾದನ ಗ್ರಂಥ ಸಂಪುಟ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾಲಯದ ಸಾಮಾನ್ಯರಿಗಾಗಿ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು, ಕರ್ನಾಟಕ ವಿ.ವಿಯ ಕನ್ನಡ ಅಧ್ಯಯನ ಕೇಂದ್ರ ಪ್ರಕಟಿಸಿರುವ ಗ್ರಂಥಗಳಲ್ಲಿ ಪ್ರಸ್ತಾಪಿತ ಆಗಿರುವ ಸಾಹಿತ್ಯ ಚರಿತ್ರೆ ಹೀಗೆ ಇದರೊಂದಿಗೆ ವಿದ್ಯಾರ್ಥಿವೃಂದ ಅಧ್ಯಾಪಕವೃಂದ ಇಬ್ಬರಿಗೂ ಉಪಯುಕ್ತವಾಗಿರುವ ಮೈಸೂರು ವಿವಿಯ ಅಮೂಲ್ಯ ಪ್ರಕಟಣೆ-ಕನ್ನಡ ಕೈಪಿಡಿ ಭಾಗ ೧-೮ ಶಾಸ್ತ್ರಗ್ರಂಥಗಳ ಬಗ್ಗೆ ವಿದ್ವಾಂಸರಾದ ಡಾ. ಎ. ಆರ್. ಕೃಷ್ಣಶಾಸ್ತ್ರಿ, ಟಿ. ಎಸ್. ವೆಂಕಣ್ಣಯ್ಯನವರು, ಬಿ. ಎಂ. ಶ್ರೀಯವರ ಬರಹಗಳು ಹೀಗೆ-ಇವುಗಳ ಜೊತೆಗೆ ಅಲಂಕಾರ-ಸಾಹಿತ್ಯ ಚರಿತ್ರೆಯ ಕರ್ತೃ ಇಮ್ಮಡಿ ನಾಗವರ್ಮನ ಕಾವ್ಯಾವಲೋಕನ, ಛಂದೋವಿಚಾರ, ಶಬ್ದಾನುಶಾಸನ- ಹೀಗೆ ಪಟ್ಟಿ ಮಾಡಬಹುದು.

ಹತ್ತೊಂಬತ್ತನೇ ಶತಕದಲ್ಲಿ ಮೂಡಿಬಂದಿರುವ ಅಪೂರ್ವ ವ್ಯಾಕರಣಗ್ರಂಥದ ಆ ಕೃತಿ, ಕರ್ತೃ, ಗ್ರಂಥದ ಉಪಯೋಗ, ಎಲ್ಲದರ ಬಗ್ಗೆ ಅಮೂಲ್ಯ ಅಂಶಗಳೊಡಗೂಡಿ ಪ್ರಕಟಗೊಂಡಿರುವ ವ್ಯಾಕರಣ ಗ್ರಂಥ "ಹಳಗನ್ನಡ ವ್ಯಾಕರಣ ಸಂಗ್ರಹಂ"-ದಿಟಕ್ಕೂ ಬಹು ಉಪಯುಕ್ತ ಕೃತಿ, ಶಾಸ್ತ್ರೀಯ ಸಂಶೋಧನೆ, ಪ್ರೊ. ಜಿ. ಅಶ್ವತ್ಥನಾರಾಯಣರ ನಾಲ್ಕು ದಶಕಗಳಿಗೂ ಮೀರಿದ ಸಾಹಿತ್ಯ ಭಾಷೆಯ ಅಧ್ಯಯನದ ಫಲವೆಂದು ತಿಳಿಯುತ್ತದೆ. ಹಾಗೆಯೇ ಈ ಗ್ರಂಥದ ಕರ್ತೃ – ಹೆಸರಘಟ್ಟದ ಹೊನ್ನಪ್ಪನವರ ಬಗ್ಗೆ-

ಕೃತಿಯ ಕುರಿತಂತೆ ಅಮೂಲ್ಯ ಸಂಶೋಧನೆ ಮಾಡಿರುವವರು ಇತಿಹಾಸ ಸಂಶೋಧಕರಾದ ವೈದ್ಯರೂ ಆಗಿರುವ ಸನ್ಮಾನ್ಯ ತುಮಕೂರು ಡಾ. ಬಿ. ನಂಜುಂಡಸ್ವಾಮಿಯವರು.

ಪ್ರೊ. ಅನಾಜಿ -ನಾವೆಲ್ಲ ಅಶ್ವತ್ಥನಾರಾಯಣ ಅವರನ್ನು ಪ್ರೀತಿಯಿಂದ ಕರೆಯುವುದು, ಅವರ ವಿದ್ವತ್ತು ವ್ಯಾಕರಣ ಗ್ರಂಥದ ಪುಟಪುಟಗಳ ಮೂಲಕವೂ ಅಭಿವ್ಯಕ್ತಗೊಳ್ಳುತ್ತದೆಂದರೆ ಉತ್ಪ್ರೇಕ್ಷೆಯೇನಿಲ್ಲ. ಹೆಸರಘಟ್ಟದ ವಿದ್ವಾಂಸ ಹೊನ್ನಪ್ಪನವರ ಕೃತಿಯನ್ನು ಕುರಿತು ಅಮೂಲ್ಯ ವಸ್ತುನಿಷ್ಠ ಮಾಹಿತಿ ದೊರಕಿಸಿದವರಿಗೂ, ಈ ಗ್ರಂಥಕ್ಕೆ ಪ್ರಕಟಣೆಯ ಬೆಳಕು ಕಾಣಿಸಿರುವವರಿಗೂ ನಮನಗಳು ಸಲ್ಲುತ್ತವೆ.

ಒಂದು ಸಹೃದಯ ನೋಟ

ಪ್ರಮುಖವಾಗಿ ಕನ್ನಡ ವ್ಯಾಕರಣವು ಕೇಶಿರಾಜನ "ಶಬ್ದಮಣಿದರ್ಪಣ"ದ ಆಧಾರದ ಮೇಲೆ ರಚಿತಗೊಂಡಿದೆ ಎನ್ನಬಹುದು. (ಕ್ರಿ.ಶ.೧೨೬೦) "ಶಬ್ದಮಣಿದರ್ಪಣ" ಹೆಸರೇ ಸೂಚಿಸುವಂತೆ ಶಬ್ದಗಳ ಮಣಿಗೆ "ದರ್ಪಣ" ಇದ್ದಂತೆ. ಶಬ್ದಮಣಿದರ್ಪಣಕ್ಕೆ ವ್ಯಾಖ್ಯಾನ ರಚಿಸಿರುವ ನಿಟ್ಟೂರು ನಂಜಯ್ಯ-ನಿಟ್ಟೂರು (ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ). ಈ ಗ್ರಂಥವು ಕನ್ನಡ ಭಾಷೆಯನ್ನು ಸವಿವರವಾಗಿ ಪರಿಚಯಿಸುತ್ತದೆ.

ಈಗ ನಮ್ಮ ಕಣ್ಮುಂದೆ ಹಿರಿಯ ಕನ್ನಡ ಪ್ರಾಧ್ಯಾಪಕರಾಗಿ ಭಾಷೆಯನ್ನು ತಿಳಿಯಬಲ್ಲವರಾದ. ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಒಂದು ವ್ಯಾಕರಣ ಸಂಗ್ರಹ ಗ್ರಂಥವನ್ನು ಆಸಕ್ತರಿಗೆ ವಿದ್ಯಾರ್ಥಿ-ವಿದ್ವಾಂಸರಿಗೆ ಸಾದರಪಡಿಸಿದ್ದಾರೆ. ಅದೇ "ವ್ಯಾಕರಣಸಂಗ್ರಹ" ಗ್ರಂಥದ ಮೂಲಲೇಖಕರು ಹೆಸರಘಟ್ಟದ ಹೊನ್ನಪ್ಪ. ಈ ಗ್ರಂಥ ಪ್ರಶ್ನೋತ್ತರ ರೂಪದಲ್ಲಿರುವಂಥದು.

ಪ್ರೊ. ಅನಾಜಿಯವರು ಈ ಗ್ರಂಥವನ್ನು ಶಾಸ್ತ್ರೀಯ ರೀತಿಯಲ್ಲಿ ಅಧ್ಯಯನ ಮಾಡಿ, ಸೂಕ್ತ ಸುಧಾರಣೆಗಳೊಂದಿಗೆ ಸಂಪಾದಿಸಿ, ಪ್ರಕಟಿಸಿರುವುದು ಅವರ ಖಚಿತ ವಿದ್ವತ್ತಿನ ಪ್ರತೀಕ ಎನ್ನಬಹುದು.

ಈಗಿನ ವೇಗದ ಅತ್ಯಾಧುನಿಕ ಪರಿಸರದಲ್ಲಿ ಹಿಂದಿನ ಪೀಳಿಗೆಯ ಕೊಡುಗೆಗಳನ್ನು ನಾವು ಮರೆತಿದ್ದೇವೆ ಎಂಬ ನೋವು ಸಹಜವಾಗಿಯೇ ಮರುಕಳಿಸುತ್ತದೆ. ಅಂತಹ ಕಟ್ಟು ಕಟ್ಟಿದ ವಿದ್ವಾಂಸರಲ್ಲಿ ಒಬ್ಬರು, ಮರೆತುಹೋಗುತ್ತಿರುವ ಹೆಸರಘಟ್ಟದ ಹೊನ್ನಪ್ಪನವರು. ಅವರ ಗ್ರಂಥಗಳು ಮೌಲಿಕವಾದವು.

ಇತಿಹಾಸ ಸಂಶೋಧಕರಾದ-ತಲಸ್ಪರ್ಶಿ ಅಧ್ಯಯನ ಮಾಡುವ ಸಾಹಿತಿಗಳಾಗಿರುವ ತುಮಕೂರಿನ- ಡಾ. ಬಿ. ನಂಜುಂಡಸ್ವಾಮಿಯವರು ಸಾಕಷ್ಟು ಓಡಾಡಿ ಸಂಶೋಧನೆಗೈದು ಹೆಸರಘಟ್ಟದ ಹೊನ್ನಪ್ಪನವರ ಬದುಕಿನ ಎಳೆಗಳು, ಮಾಹಿತಿಗಳನ್ನು, ಗ್ರಂಥಗಳನ್ನು ಪರಿಷ್ಕರಿಸಿ ಸಂಗ್ರಹಿಸಿದರು. ಆ ಪೈಕಿ 'ವ್ಯಾಕರಣ ಸಂಗ್ರಹಂ' ಕೃತಿಯನ್ನು ಪರಿಷ್ಕರಿಸಿ, ಸೂಕ್ತ ರೀತಿಯಲ್ಲಿ (ಪ್ರಶ್ನೋತ್ತರ ರೂಪವು) ಪ್ರಕಟಣೆಗೆ ಸಿದ್ಧಪಡಿಸಿದ್ದು ಪ್ರೊ. ಅಶ್ವತ್ಥನಾರಾಯಣ ಅವರ ಪರಿಶ್ರಮ, ವಿದ್ವತ್ತಿಗೆ ಸಾಕ್ಷಿ. ಹಾಗೆಯೇ ಅದನ್ನು ಪ್ರಕಟಿಸಿರುವ "ಪ್ರಿಯದರ್ಶಿನಿ ಪ್ರಕಾಶನ"ದವರಿಗೂ ವಂದಿಸಬೇಕು. ಏಕೆಂದರೆ, ಈಗಿನ ಐಟಿ/ಬಿಟಿ ಕಾಲದಲ್ಲಿ ಇಂತಹ ಪ್ರಯತ್ನ ಕೈಗೊಳ್ಳುವ ಸಹೃದಯರೂ ವಿರಳವೇ.

ಹೊನ್ನಪ್ಪನವರು (೧೮೩೪-೧೮೮೪) ಕೇವಲ ಐವತ್ತು ವರ್ಷ ಮಾತ್ರ ಬದುಕಿ, ೧೮೮೪ ರಲ್ಲಿ ಕಣ್ಮರೆಯಾದದ್ದು ದುರಾದೃಷ್ಟದ ಸಂಗತಿ. ಅವರ ಸಾಹಿತ್ಯ ನುಡಿ ಸೇವೆ ಕೂಡ ಗಮನಕ್ಕೆ ಬಂದಿದ್ದು, ಡಾ. ನಂಜುಂಡಸ್ವಾಮಿಯವರಿಂದ. ಹೊನ್ನಪ್ಪನವರು ಸ್ವತಃ ತಮ್ಮ ಸ್ವಪ್ರಯತ್ನದಿಂದ

ವಿದ್ಯೆಯನ್ನು ಆರ್ಜಿಸಿದರು, ವಿದ್ವತ್ತನ್ನು ಗಳಿಸಿದರು. "ಮುಂದೆಯೂ ಅವರು ಕೇವಲ ಶಾಲಾ ಉಪಾಧ್ಯಾಯರಾಗಿರಲಿಲ್ಲ; ಘನವಿದ್ವಾಂಸರಾಗಿದ್ದರು"

ಹೊನ್ನಪ್ಪನವರ "ವ್ಯಾಕರಣ ಸಂಗ್ರಹ" ಗ್ರಂಥದ ವೈಶಿಷ್ಟ್ಯ ಕುರಿತು ಕೇವಲ ಕಿರು ಪರಿಚಯ ಮಾಡುವ ಪ್ರಯತ್ನ ಮಾತ್ರ ಈ ಸಾಲುಗಳದ್ದು.

ಭಾಷೆಯನ್ನು ಸಂಪೂರ್ಣವಾಗಿ ಅರಿಯಬೇಕಾದರೆ ಆ ಭಾಷೆಯ ವ್ಯಾಕರಣದ ಅರಿವು ಅತ್ಯಗತ್ಯ. ಅಂಥ ಅಮೂಲ್ಯ ವ್ಯಾಕರಣ ಕೃತಿ-ಪ್ರಸ್ತುತ ವ್ಯಾಕರಣ ಸಂಗ್ರಹಂ-೧೩೦ ವರ್ಷಗಳ ಹಿಂದಿನ ಹಳಗನ್ನಡ ವ್ಯಾಕರಣ ಅದೂ, ಪ್ರಶ್ನೋತ್ತರ ರೂಪದಲ್ಲಿರುವಂಥ ಕೃತಿ.

ಈ ನಿಟ್ಟಿನಲ್ಲಿ "ಸಂಪಾದಕರ ಮಾತು" ವಿಭಾಗವನ್ನು ನಾವು ಓದಿಕೊಂಡರೆ, ವ್ಯಾಕರಣವೆಂದರೇನು, ಸ್ವರೂಪ ವಿವರ, ಹಳಗನ್ನಡ ವ್ಯಾಕರಣಗ್ರಂಥಗಳ ಕುರಿತ ಎಲ್ಲ ಮಾಹಿತಿ ದೊರೆಯುತ್ತದೆ. ಅದರ ಅಧ್ಯಯನ ಸುಲಭ, ಸಮಗ್ರ ಹಾಗೂ ಪರಿಪೂರ್ಣವೂ ಆಗುತ್ತದೆ.

ಮೊದಲೇ ತಿಳಿಸಿರುವಂತೆ, ಹೊನ್ನಪ್ಪನವರ ವ್ಯಾಕರಣ ಪ್ರಶ್ನೋತ್ತರ ರೂಪದಲ್ಲಿರುವುದು, ಒಂದು ವಿಶಿಷ್ಟತೆ. ಅವರು ೧೯ನೇ ಶತಮಾನಕ್ಕೆ ಸೇರಿದ ಕುತೂಹಲ ವಿಚಾರ. ನಾವು ಕ್ರಿ.ಶ ೧೯೨೦ ನೇ ಬಿ.ಮಲ್ಲಪ್ಪನವರ "ಶಬ್ದಾದರ್ಶ", ಡಾ. ಡಿ.ಎಲ್.ಎನ್. ಅವರ "ಶಬ್ದ ವಿಹಾರ", ತೀ. ನಂ. ಶ್ರೀಕಂಠಯ್ಯನವರ "ಕನ್ನಡ ಮಧ್ಯಮ ವ್ಯಾಕರಣ – ಇವು ಅನೇಕ ವರ್ಷ ಶಿಕ್ಷಕ-ವಿದ್ಯಾರ್ಥಿ ಸಮೂಹದ ಬಳಕೆಯಲ್ಲಿತ್ತೆಂಬುದು ತಿಳಿದಿರುವ ಸಂಗತಿ. ಸರಿ. ೧೯ನೆಯ ಶತಕದಲ್ಲಿ ಪ್ರಕಟವಾದ ಗ್ರಂಥಗಳು ಮುಖ್ಯವಾಗಿ ಶಾಲಾವಿದ್ಯಾರ್ಥಿಗಳಿಗಾಗಿ ಬೆಳಕು ಕಂಡಂಥವು.

ಹೊನ್ನಪ್ಪನವರು, ವಿಶೇಷತಃ ಆಗ ತಾನೇ ಆರಂಭವಾಗಿದ್ದ ಶಾಲಾ ಉಪಾಧ್ಯಾಯರು (ತರಬೇತಿ) ಟ್ರೈನಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೋಸುಗ ತಮ್ಮ "ವ್ಯಾಕರಣ ಸಂಗ್ರಹಂ" ರಚಿಸಿರುವುದೆಂಬುದೂ ಸ್ಪಷ್ಟ. ಜೊತೆಗೆ ಹೊನ್ನಪ್ಪನವರು ತಮ್ಮ ವ್ಯಾಕರಣ ಗ್ರಂಥಗಳಲ್ಲದೆ ಕಾವ್ಯಗಳ ಸಂಪಾದಕರಾಗಿ ೧೮೮೦ರಲ್ಲಿ ಹರಿಹರ ಕವಿಯ ಗಿರಿಜಾ ಕಲ್ಯಾಣವನ್ನು ಸಂಪಾದಿಸಿದ್ದಾರೆ. ಇದನ್ನು ಮಳವಳ್ಳಿ ಚಿಕ್ಕಗಿರಿಯಪ್ಪ ಎಂಬುವವರು ಪ್ರಕಟಿಸಿದ್ದಾರೆ.

ಪ್ರೊ. ಅಶ್ವತ್ಥನಾರಾಯಣ ಅವರು ತೌಲನಿಕ ಅಧ್ಯಯನ ಮಾಡುವವರಿಗೆ, ೧೯ನೆಯ ಶತಮಾನದ ಹಳಗನ್ನಡ ವ್ಯಾಕರಣಗಳ ಕೃತಿಯ ಪಟ್ಟಿಯನ್ನು ಒದಗಿಸಿದ್ದಾರೆ. ("ಕನ್ನಡದಲ್ಲಿ ವ್ಯಾಕರಣಗಳು" ಶೀರ್ಷಿಕೆಯಡಿಯಲ್ಲಿ ದಿ. ಹಾ.ಮಾ.ನಾಯಕರ ನೇತೃತ್ವದಲ್ಲಿ ಒಂದು ಪಿ.ಎಚ್.ಡಿ. ಪ್ರಬಂಧ ಪ್ರಕಟಣೆಗೊಂಡಿದೆ.) ವಿಶೇಷತಃ ಟ್ರೈನಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ನೀಡಿರುವ ಮುಂದೆ ನೀಡಿರುವ ಕೆಲವು ಸಂಗತಿಗಳು ಉಲ್ಲೇಖಾರ್ಹ.

- ಪ್ರಶ್ನೆ-ಉತ್ತರಗಳು ಒಂದೇ ಗಾತ್ರದ ಅಕ್ಷರಗಳಲ್ಲಿ ಅಚ್ಚಾಗಿದ್ದವು ಈಗ ಬೇರೆ ಬೇರೆ ಗಾತ್ರದ ಅಕ್ಷರಗಳಲ್ಲಿ ಅಚ್ಚಿಸಿದೆ
- ಉದಾಹರಣಂ, ಉದಹರಣಂ, ಉ-ಎಂದು ಲೇಖಕರು ಮೂರು ರೂಪ ಬಳಸಿದ್ದಾರೆ. ಎಲ್ಲ ಏಕರೂಪದಲ್ಲಿ ಉದಾಹರಣಂ ಎಂಬುದಾಗಿ ಬರೆಯಲಾಗಿದೆ.
- ಮುಖ್ಯವಾಗಿ ಕೇಶಿರಾಜನ ಶಬ್ದಮಣಿದರ್ಪಣವನ್ನು ಆಧಾರ ಗ್ರಂಥ ಎಂದಿಟ್ಟು-ಕೊಂಡಿದ್ದರೂ ತಮ್ಮದೇ ಆದ ಉದಾಹರಣೆಯ ಪದಗಳನ್ನು ಕೊಟ್ಟಿದ್ದಾರೆ.

- ರಾಮಸ್ವಾಮಿಶಾಸ್ತ್ರಿಗಳ ವಾಗ್ವಿಧಾಯಿನಿ, ಕೃಷ್ಣಮಾಚಾರ್ಯರ ವ್ಯಾಕರಣಗಳು ಕೂಡ ವ್ಯಾಕರಣ ಗ್ರಂಥಗಳು "ಪ್ರಶ್ನೋತ್ತರ" ಮಾದರಿಯಲ್ಲಿವೆ. ಅದೇ ಮಾದರಿಯನ್ನು ಹೊನ್ನಪ್ಪನವರೂ ಅನುಸರಿಸಿದ್ದಾರೆ. ಇವರು ಪ್ರಶ್ನೆ ವ್ಯಾಖ್ಯೆ-ಉದಾಹರಣೆ ಕ್ರಮವಾಗಿ ಎಲ್ಲೆಡೆ ಅನುಸರಿಸಿದ್ದಾರೆ.
- 'ಶಬ್ದಮಣಿದರ್ಪಣ'ದ ೨೧ ತತ್ಸಮ ಶಬ್ದಗಳನ್ನು ಹಾಗೆಯೇ ಉಲ್ಲೇಖಿಸಿದ್ದಲ್ಲಿ ಗ್ರಂಥದುದ್ದಕ್ಕೂ ತಮ್ಮದೇ ಆದ ಪದಗಳನ್ನು ಉದಾಹರಣೆಯಾಗಿ ಕೊಟ್ಟಿದ್ದಾರೆ.
- ಉದಾಹರಣೆಯಾಗಿ ಕಂದ, ವೃತ್ತಗಳ ಹಲವಾರು ವಾಕ್ಯಗಳನ್ನು ತಮ್ಮ ಗ್ರಂಥದುದ್ದಕ್ಕೂ ಅಚ್ಚುಮಾಡಿದ್ದಾರೆ. ಅವುಗಳನ್ನು ಆಯಾ ಛಂದಸ್ಸಿನ ಪಾದಗಳಿಗನುಸಾರ ನಾಲ್ಕು ಸಾಲುಗಳಲ್ಲಿ ನೀಡಿದ್ದಾರೆ.
- ಸಂಧಿ-ಸಮಾಸಗಳ ಕುರಿತ ಅಧ್ಯಾಯದಲ್ಲಿ ಸಂಸ್ಕೃತ ವ್ಯಾಕರಣಗಳನ್ನು ಗಮನಿಸಿದ್ದಾರೆ ಎಂಬುದನ್ನು ಗುರುತಿಸಿದೆ.

ಕನ್ನಡ ಸಂಧಿ-ಸಮಾಸಗಳು-ಸಂಸ್ಕೃತ ಸಂಧಿ ಸಮಾಸಗಳು ಎರಡು ವರ್ಗೀಕರಿಸಿಕೊಟ್ಟಿದ್ದಾರೆ. ಇದಕ್ಕೆ ಕಾರಣವನ್ನು ಪ್ರಶ್ನೆ ೧೬ ಕ್ಕೆ ಉತ್ತರವಾಗಿ ಹೀಗೆ ಹೇಳಿದ್ದಾರೆ " 'ಕವಿಗಳು ಸಂಸ್ಕೃತ ಕರ್ಣಾಟ ಭಾಷಾ ಮಿಶ್ರಣದಿಂದ ಕನ್ನಡ ಶಬ್ದಗಳಲ್ಲಿ ಪೇಳಿರ್ಪುದರಿಂ' ಕನ್ನಡ ಸಂಸ್ಕೃತ ಸಂಧಿಗಳೆಂದು ವರ್ಗೀಕರಿಸಿದೆ".

ವಿದ್ಯಾರ್ಥಿಗಳಿಗಂತೂ "ವ್ಯಾಕರಣ ಸಂಗ್ರಹಂ" ಗ್ರಂಥ ತುಂಬಾ ಉಪಯುಕ್ತ. ಇಲ್ಲಿ ಒಂಭತ್ತು ಅಧ್ಯಾಯಗಳಿವೆ ಎಂಬುದು ಗಮನೀಯ.

ಸಂಜ್ಞಾ-ಸಂಧಿ ಪ್ರಕರಣ, ನಾಮಪ್ರಕರಣ, ಸಮಾಸ ಪ್ರಕರಣ, ತದ್ಧಿತ, ಅವ್ಯಯ, ಆಖ್ಯಾತ, ಅಪಭ್ರಂಶ, ಪ್ರಯೋಗ ಪ್ರಕರಣಂ (ವಾಕ್ಯಾನ್ವಯ) ಹೀಗೆ ಎಲ್ಲವೂ ಅಭ್ಯಾಸಿಗಳಿಗೆ ಅನುಕೂಲ ಮಾಡಿಕೊಡುತ್ತದೆ.

ಬಿ. ನಂಜುಂಡಸ್ವಾಮಿ ಅವರು ಹೊನ್ನಪ್ಪನವರ ವಂಶಸ್ಥರನ್ನು ಪತ್ತೆಮಾಡಿ ಅವರಿಂದ "ವ್ಯಾಕರಣ ಸಂಗ್ರಹಂ" ಕೃತಿಯನ್ನು ಪ್ರತಿ ಮಾಡಿಕೊಂಡರು. ಇವರ "ಸಂಶೋಧನಾ ಪರಿಶ್ರಮ" ನಿಜಕ್ಕೂ ಪ್ರಶಂಸನೀಯ. ೧೫-೧೦-೨೦೦೭ರಲ್ಲಿ ನೆಲಮಂಗಲದಲ್ಲಿ ನಡೆದ ೨ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಹೊರತಂದ ಮಂಗಳಗಂಗಾ ಸ್ಮರಣ ಸಂಚಿಕೆಯಲ್ಲಿ ಹೊನ್ನಪ್ಪನವರ ಕನ್ನಡ ನುಡಿಸೇವೆ ಎಂಬ ಅಮೂಲ್ಯ ಲೇಖನ ಪ್ರಕಟಿಸಿದ್ದು. ಇದರಿಂದ ಮರೆತುಹೋಗಿದ್ದ ಕನ್ನಡ ವ್ಯಾಕರಣ ವಿದ್ವಾಂಸರೊಬ್ಬರು ಬೆಳಕಿಗೆ ಬರುವಂತಾದದ್ದು-ಪ್ರಶಂಸನೀಯ.

ಜೊತೆ ಜೊತೆಗೇ ಹೊನ್ನಪ್ಪನವರ ಅಂದಿನ ಭಾಷೆಯಲ್ಲಿರುವ ಉಪೋದ್ಘಾತ- (೨೮.೦೫.೮೫) ವನ್ನೂ ಇಲ್ಲಿ ನೀಡಿದ್ದಾರೆ. ಡಾ. ನಂಜುಂಡಸ್ವಾಮಿಯವರು ಹೊನ್ನಪ್ಪನವರ ಕುರಿತಂತೆ ಕಲೆಹಾಕಿದ ಮಾಹಿತಿ ಪಟ್ಟ ಶ್ರಮ ಅವರಲ್ಲಿ ಕರ್ತೃತ್ವ ಶಕ್ತಿಯನ್ನು ಮನದಟ್ಟು ಮಾಡಿಕೊಡುತ್ತದೆ.

*****

ರತ್ನಾಕರನ ಮೂರು ಶತಕಗಳು

ಡಾ. ಪದ್ಮಿನಿ ನಾಗರಾಜು
ಚರವಾಣಿ : ೯೮೪೪೧೮೭೫೦೦

ನೀನಾನೆಂಬರಿವಾಗೆ ಸಾಕು ಸಿರಿಯೇಂ ದಾರಿದ್ರ್ಯಮೇಂ ಗ್ರಾಮಮೇಂ ।
ಕಾನೇಂ ಪಾಲುಣಿಸೇಂ ಕದನ್ನದುಣೀಸೇಂ ನಿರ್ಬಂಧಮೇಂ ರಾಜ್ಯಮೇಂ ॥

ಈ ನಾನಾವಿಧಿಯೆಲ್ಲವುಂ ಕನಸಿವಂ ಕೊಂಡೇನೊ ನಿನ್ನೆನ್ನ ಸಂ ।
ಧಾನಂ ನಿತ್ಯಸುಖೈಕವಿನ್ನುಳಿದುವೇಂ? ರತ್ನಾಕರಾಧೀಶ್ವರಾ ॥ (ರತ್ನಾಕರ ಶತಕಂ-124)

ಜನ್ಮ ಸಾರ್ಥಕವಾಗುವ ಇಂತಹ ಮಾತುಗಳನ್ನು ಪ್ರೊ. ಜಿ. ಅಶ್ವತ್ಥನಾರಾಯಣರಿಗೆ ಹೋಲಿಸಿದರೆ ತಪ್ಪಾಗಲಾರದು. ತಮ್ಮ ತನು-ಮನವನ್ನು ಸಾಹಿತ್ಯಸೇವೆ, ಪ್ರಸಾರದಲ್ಲಿ ಅವರು ಸಾರ್ಥಕ್ಯವಾಗಿ ಕಳೆದಿದ್ದಾರೆ. ನಾನು ಅವರನ್ನು ಮೊದಲು ಭೇಟಿಯಾದದ್ದು ಡಾ. ಮದನಕೇಸರಿಯವರು ಅಯೋಜಿಸಿದ್ದ ಜೈನ ಕಾರ್ಯಕ್ರಮದಲ್ಲಿ. ಅದೆಷ್ಟು ಅದ್ಭುತವಾಗಿ ಅಂದು ಮಾತನಾಡಿದರು ಎಂದರೆ ಆ ಮಾತುಗಳು ಇಂದಿಗೂ ನನ್ನ ತಲೆಯಲ್ಲಿವೆ.

ನಂತರದಲ್ಲಿಯೂ ಅವರು ಅನೇಕ ಜೈನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ತಮ್ಮ ಪ್ರೌಢ ಪ್ರಬಂಧಗಳ ಮೂಲಕ ಹಾಗೂ ನಿರರ್ಗಳವಾಗಿ ವಿಷಯ ಮಂಡಿಸುವ ಮೂಲಕ ಜನಸಾಮಾನ್ಯರಿಗೂ ಅರ್ಥವಾಗುವಂತೆ ಉಪನ್ಯಾಸ ಮಾಡುತ್ತಿದ್ದರು. ಅಹಿಂಸೆ, ಜೈನಧರ್ಮ ವಿಶ್ವಧರ್ಮವಾಗಿರುವ ಬಗ್ಗೆ, ಜೈನಧರ್ಮದ ತತ್ವಗಳು, ಮಹಾವೀರರ ಬೋಧನೆಗಳು, ಹೀಗೆ ರಾಷ್ಟ್ರೀಯ ಅಂತರರಾಷ್ಟ್ರೀಯ ಕಾರ್ಯಕ್ರಮಗಳಲೆಲ್ಲಾ ಅವರ ಉಪನ್ಯಾಸವನ್ನು ಕೇಳುವ ಸೌಭಾಗ್ಯ ನನ್ನದು.

ಯಾವುದೇ ಸಭೆಗೆ ಉಪನ್ಯಾಸ ನೀಡಲು ಬರಲಿ ಅದಕ್ಕಾಗಿ ತಕ್ಕ ತಯಾರಿ ಮಾಡಿಕೊಂಡು ಬರುತ್ತಿದ್ದರು. ಸಣ್ಣ ಸಣ್ಣ ಚೀಟಿಗಳಲ್ಲಿ ವಿಷಯಗಳನ್ನು ಬರೆದುಕೊಂಡು ಬಂದು ಪ್ರಬುದ್ಧವಾಗಿ ಸಾಮಾನ್ಯ ಜನರಿಗೂ ತಿಳಿಯುವಂತೆ ವಿವರಿಸುತ್ತಿದ್ದರು. ಅವರ ಭಾಷಣ ಕೇಳುತ್ತಿದ್ದರೆ ಸಮಯ ಕಳೆಯುತ್ತಿದ್ದದ್ದೇ ತಿಳಿಯುತ್ತಿರಲಿಲ್ಲ.

ಸುರಾನ ಕಾಲೇಜಿನಲ್ಲಿ ಜೈನಾಲಜಿ ಡಿಪ್ಲೊಮೊ ಪ್ರಾರಂಭವಾದಾಗ ನಾನು ವಿದ್ಯಾರ್ಥಿನಿಯಾಗಿ ಸೇರಿಕೊಂಡೆ. ಹಿಂದೂ ಧರ್ಮ-ಜೈನಧರ್ಮದ ಬಗ್ಗೆ ತುಲನಾತ್ಮಕವಾಗಿ ಅನಾಜಿಯವರಂತೆ ಪಾಠ ಮಾಡಿದವರನ್ನು ನಾನು ನೋಡಲಿಲ್ಲ. ಅವರ ವಿದ್ವತ್‌ಪೂರ್ಣ ಹೋಲಿಕೆ, ವಿಷಯ ವಿವರಿಸುವಲ್ಲಿ ಅವರ ವಾದ ಇವೆಲ್ಲವೂ ನನ್ನನ್ನು ಸೆಳೆದಿವೆ. ಕಲಿಯಲು ಪ್ರೇರೇಪಿಸಿವೆ. ಅತ್ಯಂತ ಸಾತ್ವಿಕರಾದ, ಮೃದು ಹೃದಯಿಯಾದ ಅನಾಜಿ ಅವರ ವಿದ್ವತ್ತಿನ ಪ್ರಪಂಚ ದೊಡ್ಡದು.

ನಾನು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾದಾಗಲೂ ಅವರು ಪರಿಷತ್ತಿನ ಇತಿಹಾಸ, ಅನೇಕ ಸಾಹಿತಿಗಳ ಜೊತೆಯ ಅವರ ಒಡನಾಟದ ವಿವರಗಳನ್ನು ತಿಳಿಸುತ್ತಿದ್ದರು. ತಾವು ಗೌರವ ಕಾರ್ಯದರ್ಶಿಯಾದಾಗಿನ ಅನುಭವಗಳನ್ನು ನನ್ನೊಂದಿಗೆ ಹಂಚಿಕೊಳ್ಳುತ್ತಿದ್ದರು. ಅವರಲ್ಲಿರುವ ಅಂತಹ ಬಹುದೊಡ್ಡ ಮಾಹಿತಿಗಳನ್ನು ಸಂಗ್ರಹಿಸಬೇಕಾಗಿದೆ.

ಅವರೇ ಒಂದು ಬೃಹತ್ ಮಾಹಿತಿ ಕೋಶ. ಅವರ ಮನೆಯಲ್ಲಿರುವ ಪುಸ್ತಕಗಳ ಸಂಗ್ರಹ ನಿಜಕ್ಕೂ ಜ್ಞಾನದ ಗಣಿಯೆಂದರೆ ತಪ್ಪಾಗಲಾರದು. ಅದರೊಂದಿಗೆ ಅವರಿಗಿರುವ ನೆನಪಿನ ಶಕ್ತಿ! ಅವರು ಇಂತಹ ಪುಸ್ತಕ ಇದೇ ಸಾಲಿನಲ್ಲಿದೆ ಎಂದು ಇಂದಿಗೂ ತೆಗೆದುಕೊಡುವಷ್ಟರ ಮಟ್ಟಿಗೆ ತಮ್ಮ ಪುಸ್ತಕಗಳನ್ನು ಪ್ರೀತಿಸುತ್ತಾರೆ.

2023 ರಲ್ಲಿ ಅಣಕು ರಾಮನಾಥ ಅವರು ಪ್ರಕಟಿಸಿರುವ ಅನಾಜಿಯವರು ಅನುವಾದಿಸಿ ಸಂಪಾದಿಸಿರುವ ರತ್ನಾಕರ ಕವಿಯ ಮೂರು ಶತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಪುಸ್ತಕ ಕುರಿತು ಮಾತನಾಡಲು ಕರೆದಿದ್ದರು. ಅದೊಂದು ಸೌಭಾಗ್ಯವೆಂದೇ ಹೋಗಿದ್ದೆ. ಈ ಇಳಿ ವಯಸ್ಸಿನಲ್ಲಿಯೂ ತಪಸ್ಸಿನಂತೆ ಕುಳಿತು ಮೂರು ಶತಕಗಳಾದ ರತ್ನಾಕರ ಶತಕ, ಅಪರಾಜಿತೇಶ್ವರ ಶತಕ ಮತ್ತು ತ್ರಿಲೋಕಶತಕ ಈ ಮೂರು ಶತಕಗಳಿಗೆ ಮೂಲ ಪಠ್ಯಕ್ಕೆ ಅನುವಾದವನ್ನು ಟಿಪ್ಪಣಿ ಸಹಿತ ಮಾಡಿದ್ದಾರೆ. 248 ಪುಟಗಳ ಈ ಕೃತಿಯನ್ನು ಪಂಡಿತರತ್ನಂ ಎ. ಶಾಂತಿರಾಜಶಾಸ್ತ್ರಿ ಅವರಿಗೆ ಅರ್ಪಿಸಿದ್ದಾರೆ.

ಮೂಡುಬಿದರೆಯನ್ನು ತನ್ನ ನೆಲೆ ಮಾಡಿಕೊಂಡು ಹದಿನಾರನೆಯ ಶತಮಾನದಲ್ಲಿ ತನ್ನ ಕಾವ್ಯಗಳಲ್ಲಿ ಜಿನಾಗಮದ ಸಾರವನ್ನೂ ಹಾಗೂ ತ್ಯಾಗ ಭೋಗಗಳನ್ನು ಸಮಾನವಾಗಿ ಸ್ವೀಕರಿಸಿ ಅದನ್ನು ತನ್ನ ಕಾವ್ಯದ ಮೂಲಕ ಉನ್ನತೀಕರಿಸಿದ ಕೀರ್ತಿ ರತ್ನಾಕರನದ್ದು.

ಕನ್ನಡದ ಸಾಂಗತ್ಯ ಕವಿಗಳಲ್ಲಿ ಅಗ್ರಗಣ್ಯನಾದ ರತ್ನಾಕರವರ್ಣಿ ಭರತೇಶ ವೈಭವ, ಹಾಗೂ ರತ್ನಾಕರಾಧೀಶ್ವರ ಶತಕ, ಅಪರಾಜಿತೇಶ್ವರ ಶತಕ ಮತ್ತು ತ್ರಿಲೋಕ ಶತಕಗಳನ್ನು ರಚಿಸಿದ್ದಾನೆ. ಇವನಿಗೆ 'ಶೃಂಗಾರ ಕವಿ' ಎಂಬ ಬಿರುದೂ ಇತ್ತು. ತುಳು ನಾಡಿನವನಾದ ಇವನು ತೌಳವ ದೇಶದ ಭೈರರಸ ಒಡೆಯರ ಆಸ್ಥಾನದಲ್ಲಿ ಕವಿಯಾಗಿದ್ದ. ತನ್ನ ಸ್ವಂತ ವಿಚಾರವನ್ನು ಇವನು ಹಂಚಿಕೊಂಡಿಲ್ಲ. ಯೋಗಶಾಸ್ತ್ರದಲ್ಲೂ ಕಾವ್ಯಶಾಸ್ತ್ರದಷ್ಟೇ ಪರಿಣಿತಿ ಪಡೆದಿದ್ದ.

ಆಧ್ಯಾತ್ಮಗೀತದ ರಚನೆಗಳಾದ ಈ ಮೂರು ಶತಕಗಳು ಜೈನಾಗಮಗಳ ಸಾರಸ್ವರೂಪಗಳಾಗಿವೆ. ತನ್ನ ಪೂರ್ವ ಆಚಾರ್ಯರ ಪ್ರಾಕೃತ, ಸಂಸ್ಕೃತ ಶಾಸ್ತ್ರ ಗ್ರಂಥಗಳನ್ನು ರತ್ನಾಕರ ಆಳವಾಗಿ ಅಭ್ಯಾಸ ಮಾಡಿರುವಂತೆ ಕಂಡುಬರುತ್ತದೆ. ಅಲ್ಲಿರುವ ಕಠಿಣತೆಯನ್ನು ಕಳೆದು ಈತ ತನ್ನ ಕೃತಿಯಲ್ಲಿ ಅತ್ಯಂತ ಸರಳವಾಗಿ ಜನಸಾಮಾನ್ಯರಿಗೂ ತಿಳಿಯುವಂತೆ ಹೇಳಿದ್ದಾನೆ.

ಈ ಮೂರು ಶತಕಗಳನ್ನು ಮೊದಲಿಗೆ ಪಂಡಿತ ಎ. ಶಾಂತರಾಜಶಾಸ್ತ್ರಿಗಳು ಟೀಕೆಸಹಿತ ಪಾಠಾಂತರ ಮಾಡಿದ್ದರು. ನಂತರ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಇಂಜಿನಿಯರ್ ಆಗಿದ್ದ ಎ. ನಾಗರಾಜ್ ಅವರು ಈ ಶತಕಗಳನ್ನು ಗಮಕರೂಪದಲ್ಲಿ ಹಾಡುವ ಮೂಲಕ ಹಾಗೂ ಅವುಗಳ ತಾತ್ಪರ್ಯಗಳನ್ನು ಸಾಮಾನ್ಯ ಜನರಿಗೆ ತಲುಪಿಸುವ ಕೆಲಸ ಮಾಡಿದರು. ನಂತರದಲ್ಲಿ ಅವರು ರತ್ನಾಕರ ಹಾಗೂ ಅಪರಾಜಿತೇಶ್ವರ ಶತಕಗಳಿಗೆ ತಾತ್ಪರ್ಯವನ್ನು ಬರೆದು ಪ್ರಕಟಿಸಿದ್ದರು. ತ್ರಿಲೋಕ ಶತಕಕ್ಕೆ ಅವರು ಟೀಕೆಯನ್ನು ಬರೆದಿರಲಿಲ್ಲ. ಈ ಎಲ್ಲಾ ಕಾರಣದಿಂದ ರತ್ನಾಕರನ ಪ್ರಮುಖವಾದ ಈ ಮೂರು

ಶತಕಗಳಿಗೆ ಅನಾಜಿಯವರು ಅನುವಾದ-ಟಿಪ್ಪಣಿ ಬರೆಯುವ ಮೂಲಕ ಜನಸಾಮಾನ್ಯರಿಗೆ ಸರಳವಾಗಿ ರತ್ನಾಕರನ ಈ ಕೃತಿಗಳು ಸಿಗುವಂತೆ ಮಾಡಿದ್ದಾರೆ. ಅದಕ್ಕಾಗಿ ಅಭಿನಂದನೆಗಳು.

ರತ್ನಾಕರನ ಈ ಶತಕಗಳು ಕೇವಲ ಜೈನರು ಮಾತ್ರ ತಿಳಿಯುವ ಕೃತಿಯಲ್ಲ. ಇದರಲ್ಲಿರುವ ಸಾರ ಪ್ರತಿಯೊಬ್ಬರ ಬದುಕಿಗೂ ಅವಶ್ಯವಾದದ್ದು. ಉದಾಹರಣೆಗೆ,

ಉಂಬೂಟಂ ಮಿಗಿಲಾಗೆ ಯೇರುವ ಹಯಂ ಬೆಚ್ಚಲ್ಕೆ ನೀರ್ಮೂಗಿನೊ
ಳ್ತುಂಬಲ್ಪೋಗುತೆ ಮುಗ್ಗಿಯುಂ ಮರಣಮಕ್ಕುಂ ಜೀವಕೀ ದೇಹವೆ
ಷ್ಟಂ ಬಾಳ್ದಷ್ಟದು ಲಾಭವೀ ಕಿಡುವ ಮೈಯಂ ಕೊಟ್ಟು ನಿತ್ಯತ್ವವಾ
ದಿಂಬಂ ಧರ್ಮದೆ ಕೊಂಬವಂ ಚದುರನೈ ರತ್ನಾಕರಾಧೀಶ್ವರಾ ॥14॥

ಸಾವು ಹೇಗೆಲ್ಲಾ ಬರಬಹುದು ಎನ್ನುವುದನ್ನು ಮಾಡುವ ಊಟ ಅತಿಯಾದರೆ, ಹತ್ತುವ ಕುದುರೆ ಬೆದರಿದರೆ, ಮೂಗಿನಲ್ಲಿ ನೀರು ತುಂಬಿಕೊಂಡರೆ, ನಡೆಯುತ್ತಾ ಮುಗ್ಗರಿಸಿದರೂ ಸಾವು ಸಿದ್ಧ ಎನ್ನುವುದನ್ನು ಮೂಲದಷ್ಟೇ ಚನ್ನಾಗಿ ಅನಾಜಿ ಅವರು ಅನುವಾದಿಸಿದ್ದಾರೆ. ಇದು ಎಲ್ಲಾ ಧರ್ಮೀಯರು ಅರಿಯುವ ವಿಷಯವಾಗಿದೆ.

ಅಪರಾಜಿತೇಶ್ವರ ಶತಕದಲ್ಲಿ ಕವಿ ಆತ್ಮ ಹಾಗೂ ದೇಹದ ಬಗ್ಗೆ ಮಾತನಾಡುತ್ತಾನೆ.

ಪುಟವಿಡುವಲ್ಲಿ ಕಿಚ್ಚಿನುರಿಗಂಜಿದೊಡಾ ಕನಕಕ್ಕೆ ಕೂಡಿದಾ
ಕುಟಿಲತೆ ಪೋಕುಮೆ? ಮಲಕಲಂಕಮನೂದಿ ಕಳಲ್ಚಿ ಕಾಂತಿ ಸಂ
ಪುಟದೊಳಗಾತ್ಮನಂ ನಿಲಿಸಿ ನಿರ್ಮಲನಾಗುವೆನೆಂಬ ಭವ್ಯನು
ತ್ಕಟತಪದುಬ್ಬೆಗಳ್ಕಿದೊಡೆ ಸಿದ್ಧಿಪುದೆ? ಅಪರಾಜಿತೇಶ್ವರಾ ॥26॥

ಚಿನ್ನವನ್ನು ಪುಟಕ್ಕಿಡುವಾಗ ಬೆಂಕಿಯ ಉಷ್ಣತೆಗೆ ಹೆದರಿದರೆ ಆ ಬಂಗಾರಕ್ಕೆ ಸೇರಿದ ಕಲ್ಮಶ ಹೋಗದು; ಹಾಗೆಯೇ ಆತ್ಮಕಾಂತಿಯ ಪುಟಕ್ಕೆ ಹಾಕಿ ಕರ್ಮವೆಂಬ ಕಲ್ಮಶವನ್ನು ಕಳೆದುಕೊಂಡು, ನಿರ್ಮಲಾತ್ಮನಾಗುತ್ತೇನೆಂದು ನಿರ್ಧರಿಸಿದ ಭವ್ಯನು ಉತ್ಕಟವಾದ ತಪಸ್ಸಿನ ಕೋಟಲೆಗೆ ಹೆದರಿದರೆ ಸಿದ್ಧಿಯಾಗದು ಎಂಬ ಅನುವಾದ ಮೂಲ ಪದ್ಯಕ್ಕೆ ನ್ಯಾಯ ಒದಗಿಸುತ್ತದೆ.

ತ್ರಿಲೋಕ ಶತಕ ಲೋಕಾಕರವನ್ನು ಕುರಿತು ಮಾತನಾಡುತ್ತದೆ. ಇದನ್ನು ಅನುವಾದಿಸುವುದು ಸುಲಭ ಸಾಧ್ಯವಲ್ಲ. ಜೈನಧರ್ಮದ ಲೋಕಕಾರದ ಕಲ್ಪನೆ, ಹಿಂದೂಧರ್ಮದ ಕಲ್ಪನೆಗಿಂತಲೂ ಭಿನ್ನವಾಗಿದೆ. ಅದನ್ನು ಅನಾಜಿಯವರು ಸಮರ್ಥವಾಗಿ ಅನುವಾದಿಸಿದ್ದಾರೆ.

ಲೋಕದ ಸ್ವರೂಪವನ್ನು ತಿಳಿಸುತ್ತಲೇ, ತ್ರಸಜೀವಿಗಳು, ಸ್ಥಾವರ ಜೀವಿಗಳು, ಊರ್ಧ್ವಲೋಕ, ಭೂಲೋಕ, ಮಧ್ಯಮ ಲೋಕ, ಅಧೋಲೋಕ ಅಲ್ಲಿನ ಏಳು ನರಕಗಳ ಬಗ್ಗೆ ವಿವರಣೆ ನೀಡಲಾಗಿದೆ. ನರಕಲೋಕದ ಚಿತ್ರಣ ನೀಡುವಾಗ ಅಲ್ಲಿನ ಶಿಕ್ಷೆಯ ಬಗ್ಗೆ,

ಲೋಹದ ಪೆಣ್ಬುತ್ಥಳಿಯಂ
ಕಾಹೇರಿಸಿ ಕಾಸಿ ತಂದು ಪರಸತಿಯಿವಳೊಳ್
ಮೋಹಿಸುತಪ್ಪೆನುತಂ ಪಿಡಿ
ದಾ ಹಾದರದರಿಕೆವರ್ಗೆ ಪಿಡಿದಪ್ಪಿಸುವರ್ ॥18॥

ಕಬ್ಬಿಣದ ಸ್ತ್ರೀಗೊಂಬೆಯನ್ನು ಕಾಯಿಸಿ ಬಿಸಿಯೇರಿಸಿ ತಂದು ಇವಳು ಪರನಾರಿ, ಇವಳನ್ನು ಕಾಮಿಸುತ್ತಾ ಆಲಂಗಿಸು ಎಂದು ಹಿಡಿದು ಹಿಡಿದು ವ್ಯಭಿಚಾರಿಗಳಿಗೆ ಅಪ್ಪಿಸುತ್ತಾರೆ ಎಂಬ ಚಿತ್ರಣವನ್ನು ಅನಾಜಿ ಅವರು ಸಮರ್ಥವಾಗಿ ಅನುವಾದಿಸಿದ್ದಾರೆ.

ಹಾಲು ಅಪವಿತ್ರವಾದ ಕೆಚ್ಚಲಿನಲ್ಲಿದ್ದರೂ ಅದು ಅಮೃತ ಹೇಗೆಯೋ ಹಾಗೇ ಆತ್ಮನು ಅಪವಿತ್ರವಾದ ದೇಹದಲ್ಲಿದ್ದರೂ ಸುಪವಿತ್ರನೂ ಎನ್ನಿಸಿಕೊಳ್ಳುತ್ತಾನೆ ಎಂಬ ಅನುವಾದ ಮೂಲದಷ್ಟೇ ತಕ್ಕುದಾಗಿದೆ.

ಜೈನ ಸಿದ್ಧಾಂತ, ಲೋಕಾಕರ, ತತ್ವ ಇವುಗಳನ್ನು ಜೈನರಲ್ಲದವರಿಗೂ ಅರ್ಥ ಮಾಡಿಸಲು ಇಲ್ಲಿ ಕಠಿಣ ಶಬ್ಧಗಳಿಗೆ ಅರ್ಥ ಹಾಗೂ ಟಿಪ್ಪಣಿ ನೀಡುವ ಮೂಲಕ ಸರಳವಾಗಿ ಅರ್ಥ ಮಾಡಿಸಲು ಪ್ರಯತ್ನಿಸಿದ್ದಾರೆ. ಜೈನ ಪಾರಿಭಾಷಿಕ ಪದಕೋಶದ ಅವಶ್ಯಕತೆ ಬೇಕಿಲ್ಲದೆ ಇದನ್ನು ಅರ್ಥ ಮಾಡಿಕೊಳ್ಳಬಹುದು. ಉದಾಹರಣೆಗೆ ಷಡ್ದ್ರವ್ಯ, ಏಳು ತತ್ವ, ಪಂಚಕಲ್ಯಾಣ, ಶ್ರಾವಕ, ನಿರ್ಗ್ರಂಥ, ಆಹಾರದಾನ, ಅಷ್ಟಕರ್ಮ, ಅವಗಾಹತ್ವ.... ಹೀಗೆ ಅನೇಕ ಶಬ್ದಗಳನ್ನು ಯಾವುದೇ ಪದಕೋಶ ನೋಡದೆ ಅರ್ಥೈಸಿಕೊಳ್ಳಲು ಈ ಗ್ರಂಥ ಸಹಕಾರಿಯಾಗಿದೆ.

ಮಹಾಕವಿ ರತ್ನಾಕರವರ್ಣಿಯ ಶತಕತ್ರಯಗಳನ್ನು ಸರಳವಾಗಿ ಅನುವಾದಿಸಿ ಟಿಪ್ಪಣಿ ಮೂಲಕ ಜನಸಾಮಾನ್ಯರೂ ಅರ್ಥ ಮಾಡಿಕೊಳ್ಳುವಂತೆ ನೀಡಿರುವ ಅನಾಜಿ ಅವರ ವಿದ್ವತ್ತಿಗೆ ಶಿರಬಾಗುವೆ. ಜೊತೆಗೆ ಈ ಮೂರು ಶತಕಗಳನ್ನು ಪದ್ಯದ ಕ್ರಮದಲ್ಲಿ ಅಕಾರಾದಿಯಾಗಿ ಪರಿವಿಡಿಯಲ್ಲಿ ವಿಂಗಡಿಸಿರುವುದು ಓದುಗರಿಗೆ ಸುಲಿದ ಬಾಳೆಯ ಹಣ್ಣಿನಂತೆ ಮತ್ತಷ್ಟು ಸರಳವಾಗಿದೆ. ಅದಕ್ಕಾಗಿ ಅವರು ಅಭಿನಂದಾರ್ಹರು.

ಸರಳ, ಸಜ್ಜನ, ಬಗಲಿಗೊಂದು ಬಟ್ಟೆಯ ಬ್ಯಾಗೊಂದಿಗೆ ಎದುರಾಗುವ ಪ್ರೊ. ಜಿ. ಅಶ್ವತ್ಥನಾರಾಯಣರು ಎಂಬತ್ತು ವರ್ಷಗಳಲ್ಲಿ ನಾಡು-ನುಡಿಗೆ ಸಲ್ಲಿಸಿರುವ ಅವರ ಸೇವೆಯನ್ನು ಪರಿಗಣಿಸಿ "ಸಾಹಿತ್ಯ ಪರಿಚಾರಕ" ಅಭಿನಂದನಾ ಗ್ರಂಥ ತರುತ್ತಿರುವ ಈ ಹೊತ್ತಿನಲ್ಲಿ ಅನಾಜಿಯವರೇ ಸ್ವತಃ ರತ್ನಾಕರ ಮಹಾಕವಿಯ ಮೂರು ಶತಕಗಳು ಕೃತಿಯ ಬಗ್ಗೆ ಬರೆಯುವಂತೆ ತಿಳಿಸಿದ್ದು ನನ್ನ ಸೌಭಾಗ್ಯ ಎಂದು ತಿಳಿಯುತ್ತೇನೆ. ಅವರಿಗೆ ಜಿನಶಾಸನ ದೇವತೆಗಳು ಆರೋಗ್ಯ ಭಾಗ್ಯ ನೀಡಲೆಂದು ಪ್ರಾರ್ಥಿಸುವೆ.

******

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು –ಸಂಪುಟ ೭

ನಂ. ನಾಗಲಕ್ಷ್ಮಿ
ಚರವಾಣಿ : ೯೮೮೦೯೬೬೪೯೯

ಕನ್ನಡ ಸಾಹಿತ್ಯ ಪರಿಷತ್ತು ೧೯೧೫ ರಲ್ಲಿ ಅಸ್ತಿತ್ವಕ್ಕೆ ಬಂದಾರಭ್ಯ ನಾಡಿನುದ್ದಕ್ಕೂ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸುತ್ತಿದೆ. ನಾಡಿನ ಜನರ ಬದುಕಿನ ಬಹುಮುಖೀ ಆಯಾಮಗಳಿಗೆ ಅದು ತನ್ನ ಆಲೋಚನೆಗಳ, ಅಕ್ಷರಗಳ ಮತ್ತು ವೈವಿಧ್ಯಮಯ ಕ್ರಿಯೆಗಳ ಮೂಲಕ ಸ್ಪಂದಿಸುತ್ತಿದೆ. ಅದರಲ್ಲಿ ಇದುವರೆಗೆ ನೂರಾರು ಜನ ವಿದ್ವಾಂಸರ, ನಾಡು, ನುಡಿಯ ಅಭಿಮಾನಿಗಳ ಬೆಂಬಲದೊಂದಿಗೆ ಸರ್ಕಾರದ ಪ್ರೋತ್ಸಾಹವೂ ಸೇರಿ ಹಲವಾರು ಅಭಿವೃದ್ಧಿಯ ಕಾರ್ಯಗಳು ನಡೆಯುತ್ತಾ ಬಂದಿವೆ.

ಪರಿಷತ್ತು ಈ ನಿಟ್ಟಿನಲ್ಲಿ ಪ್ರತಿ ವರ್ಷ ಸಾಹಿತ್ಯ ಸಮ್ಮೇಳನಗಳನ್ನು ನಾಡಿನ ಬೇರೆ ಬೇರೆ ಸ್ಥಳಗಳಲ್ಲಿ ಆಯೋಜಿಸುತ್ತ, ಸಾಹಿತಿಗಳನ್ನು, ಸಾಹಿತ್ಯಾಭಿಮಾನಿಗಳನ್ನು, ಕನ್ನಡ ನುಡಿಬಂಧುಗಳನ್ನು ಒಂದೆಡೆ ಸೇರಿಸುತ್ತ, ಸಾಹಿತ್ಯಕ್ಷೇತ್ರದಲ್ಲಿ ಗಮನಾರ್ಹವೂ, ಮೌಲಿಕವೂ ಆದ ಕೊಡುಗೆಯನ್ನು ಕೊಟ್ಟ ಗಣ್ಯರನ್ನು ಗುರುತಿಸಿ, ಅವರಿಗೆ ಅಲ್ಲಿನ ಅಧ್ಯಕ್ಷರ ಗೌರವಸ್ಥಾನವನ್ನು ನೀಡುವ ಪರಿಪಾಠವನ್ನೂ ಅನುಸರಿಸುತ್ತ ಬರಲಾಗಿದೆ. ಮೂರ್ನಾಲ್ಕು ದಿನಗಳು ನಡೆಯುವ ಸಮ್ಮೇಳನವನ್ನು ಉದ್ಘಾಟಿಸುವ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಾಹಿತಿಯಾಗಿ ಕೇವಲ ಭಾಷೆಯ ಬಗೆಗೆ ಮಾತ್ರವಲ್ಲದೆ, ನಾಡಿನ ಏಳು, ಬೀಳುಗಳ ಕಡೆಗೂ ಗಮನ ಹರಿಸಿ, ಅವೆಲ್ಲದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಶಿಕ್ಷಣದಲ್ಲಿ ಮಾಧ್ಯಮದ ಕುರಿತು , ಗಡಿಸಮಸ್ಯೆ , ಜಲಸಮಸ್ಯೆಗೆ ಸಂಬಂಧಿಸಿದಂತೆ ಒಟ್ಟಾರೆಯಾಗಿ ನಾಡಿನ ಜನರ ಸರ್ವತೋಮುಖ ಅಭಿವೃದ್ಧಿಯ ಬಗೆಗೆ ಅವರ ವಿಚಾರಗಳು, ಕನಸುಗಳು, ಆಲೋಚನೆಗಳು ಎಲ್ಲವನ್ನೂ ಅವರ ಭಾಷಣವು ಒಳಗೊಂಡಿರುತ್ತದೆ. ಭವಿಷ್ಯದ ದಿನಗಳಲ್ಲಿ ನಾಡು ಆ ಎಲ್ಲ ವಿಷಯಗಳನ್ನು ಕುರಿತು ಯಾವ ದಿಕ್ಕಿನಲ್ಲಿ ಸಾಗಬೇಕು, ಏನೆಲ್ಲ ಸಾಧನೆಗಳು ನಡೆಯಬೇಕಾಗಿದೆ ಎಂಬ ಅಂಶಗಳೂ ಅವರ ಭಾಷಣದಲ್ಲಿ ಪ್ರಸ್ತಾಪಿತವಾಗಿರುತ್ತವೆ. ಇವೆಲ್ಲ ಮೊದಲ ಸಮ್ಮೇಳನದಿಂದಲೂ ಅನುಸರಿಸಿಕೊಂಡು ಬಂದ ಕ್ರಮವಾಗಿದೆ. ಕಾರ್ಯಗತ ಮಾಡಬೇಕಾದವರು ಅವೆಲ್ಲವನ್ನು ಗಂಭೀರವಾಗಿ ಪರಿಗಣಿಸಿ, ಪರಾಮರ್ಶಿಸಿ, ಪ್ರಾಮಾಣಿಕವಾಗಿ ಶ್ರಮಿಸಿದರೆ ಬಹುಪಾಲು ಸಮಸ್ಯೆಗಳು ಇಲ್ಲವಾಗುತ್ತವೆ.

'ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು' ಎಂಬ ಸಂಪುಟಗಳ ಪರಿಕಲ್ಪನೆ ರೂಪುಗೊಂಡದ್ದು ೧೯೭೦ ರಲ್ಲಿ. ಆಗ ಅಧ್ಯಕ್ಷರಾಗಿದ್ದ ನಾಡೋಜ ಜಿ. ನಾರಾಯಣರು ತ್ರೈವಾರ್ಷಿಕ ಯೋಜನೆಯ ಅಡಿಯಲ್ಲಿ ಸಂಪುಟಗಳನ್ನು ಹೊರತರುವ ನಿರ್ಧಾರವನ್ನು ತೆಗೆದುಕೊಂಡರು.

೧೯೭೦ ರಲ್ಲಿ ಮೊದಲ ಸಂಪುಟ ಪ್ರಕಟವಾಯಿತು. ನಂತರದಲ್ಲಿ ೨೦೧೫ ರವರೆಗೆ ನಡೆದ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳನ್ನು (೧೯೧೫-೨೦೧೫ ರವರೆಗೆ ನೂರು ವರ್ಷಗಳಲ್ಲಿ ೮೧ ಸಮ್ಮೇಳನಗಳು ನಡೆದಿವೆ.) ಒಳಗೊಂಡ ಏಳು ಸಂಪುಟಗಳು ಪ್ರಕಟವಾಗಿವೆ. ಸಮ್ಮೇಳನದ ಅಂಗವಾಗಿ ಅಧ್ಯಕ್ಷರ ಭಾಷಣದ ಹೊರತಾಗಿ ಹೊಸ ಕನ್ನಡ ಪುಸ್ತಕಗಳ ಪ್ರಕಟಣೆ, ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತು ನಾಡಿನ ಅನೇಕ ಕಡೆಗಳಿಂದ ಆಹ್ವಾನಿತರಾಗಿ ಬರುವ ವಿದ್ವಾಂಸರು ನಡೆಸುವ ವಿಚಾರಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಹಿತ್ಯದ ಜಾತ್ರೆಯಲ್ಲಿ ಸೇರಿರುವ ಕನ್ನಡಿಗರೆಲ್ಲರಿಗೆ ಭೂರಿಭೋಜನ ಎಲ್ಲವೂ ಮೂರ್ನಾಲ್ಕೂ ದಿನಗಳು ನಡೆಯುತ್ತವೆ. ಇವೆಲ್ಲದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಮೊದಲ ದಿನದ ಅಧ್ಯಕ್ಷರ ಭಾಷಣ. ಅದನ್ನು ಏಳನೇ ಸಂಪುಟದ ಸಂಪಾದಕರಾದ ಪ್ರೊ. ಜಿ. ಅಶ್ವತ್ಥನಾರಾಯಣ ಸ್ಪಷ್ಟವಾಗಿ ಗುರುತಿಸುತ್ತಾರೆ. 'ಈ ಭಾಷಣಗಳು ಕನ್ನಡ ಭಾಷಣಸಾಹಿತ್ಯ ಲೋಕದಲ್ಲಿ ಅಪೂರ್ವ ದಾಖಲೆಗಳಾಗಿವೆ. ನಮ್ಮ ನಾಡಿನ ಇತಿಹಾಸಾವಲೋಕನ, ಸಮಕಾಲೀನ ಕನ್ನಡ ಸಾಹಿತ್ಯದ ಬೆಳವಣಿಗೆ, ಕನ್ನಡಿಗರ ಸಮಸ್ಯೆ, ಕನ್ನಡ ಭಾಷೆಯ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳು, ಕನ್ನಡ ಸಾಹಿತ್ಯ ಪರಿಷತ್ತು ಮಾಡಬೇಕಾದ ಕಾರ್ಯಗಳು ಇತ್ಯಾದಿ ವಿಷಯಗಳ ಸಿಂಹಾವಲೋಕನವನ್ನು ಈ ಭಾಷಣ ಒಳಗೊಂಡಿರುತ್ತದೆ. ಇಲ್ಲಿ ಕನ್ನಡ ಭಾಷಾ ಬಳಕೆಯ ಕುರಿತು ಕಳಕಳಿಯಿದೆ. ಕನ್ನಡಿಗರೇ ಕನ್ನಡ ಭಾಷೆಯನ್ನು ವ್ಯವಹಾರದಲ್ಲಿ ಪ್ರೀತಿ, ಅಭಿಮಾನದಿಂದ ಬಳಸದಿರುವ ಬಗೆಗೆ ಖೇದವಿದೆ. ಅದು ಅಂದಿನಿಂದ ಇಂದಿನವರೆಗೂ ಎಲ್ಲ ಅಧ್ಯಕ್ಷರ ನುಡಿಗಳಲ್ಲಿ ವ್ಯಕ್ತವಾಗಿದೆ, ಆಗುತ್ತಲೇ ಇದೆ. ಅಷ್ಟೇ ಅಲ್ಲ, ಆ ಸಮಸ್ಯೆ ದಿನೇದಿನೇ ಹೆಚ್ಚುತ್ತಲೇ ಇದೆ.ಆದರೆ ಸಮ್ಮೇಳನದಲ್ಲಿ ಸಮಯಾಭಾವದಿಂದ ಸಮ್ಮೇಳನಾಧ್ಯಕ್ಷರು ತಮ್ಮ ಭಾಷಣದಲ್ಲಿನ ಈ ಎಲ್ಲ ಅಂಶಗಳನ್ನು ಪ್ರಸ್ತಾಪಿಸಲಾಗುವುದಿಲ್ಲ. (ಹೆಚ್ಚಿನ ಸಮ್ಮೇಳನಗಳಲ್ಲಿ ಆಗುವುದು ಇದೇ.) ನಾಡು, ನುಡಿಯ ಬಗೆಗೆ ಅವರ ವಿಚಾರಗಳು, ಸಮಸ್ಯೆಗಳ ಸುಧಾರಣೆಗಳ ಸೂಚನೆಗಳು, ಅವರ ವಿಶಾಲ ಜ್ಞಾನ, ಅಪಾರ ಅನುಭವದ ಚಿಂತನೆಗಳು ನಾಡು, ನುಡಿಗಾಗಿ ದುಡಿಯುವವರಿಗೆ, ಪರಿಷತ್ತಿಗೆ, ಸರ್ಕಾರಕ್ಕೆ, ಸಾರ್ವಜನಿಕರಿಗೆ ಆ ಭಾಷಣಗಳ ಮೂಲಕ ಮಾರ್ಗದರ್ಶಕವಾಗುತ್ತವೆ. ಆದುದರಿಂದಲೇ ಆ ಭಾಷಣಗಳ ಸಂಪುಟಗಳ ಪ್ರಕಟಣೆ ಅಗತ್ಯವಾಗಿರುತ್ತದೆ. ಅಂತಹ ಅಧ್ಯಕ್ಷ ಭಾಷಣಗಳ ಪ್ರತಿಗಳನ್ನು ಹಂಚುವುದರ ಮೂಲಕ, ಕನ್ನಡನುಡಿಯಲ್ಲಿ ಪ್ರಕಟಿಸುವುದಕ್ಕೆ ಮಾತ್ರವೇ ಸೀಮಿತವಾಗಕೂಡದು. ನಾಡಿನ ಓದುಗರಿಗೆ, ಸಾಹಿತಿಗಳಿಗೆ, ವಿದ್ಯಾರ್ಥಿಗಳಿಗೆ ಸದಾ ಕಾಲ ಪುಸ್ತಕರೂಪದಲ್ಲಿ ಲಭ್ಯವಾಗಬೇಕೆಂದು ಆಗ ಅಧ್ಯಕ್ಷರಾಗಿದ್ದ ಜಿ. ನಾರಾಯಣ ಗ್ರಂಥ ಪ್ರಕಟಣೆಗೆ ಮುಂದಾದರು. ರಂ.ಶ್ರೀ. ಮುಗಳಿ ಅವರ ಸಂಪಾದಕತ್ವದಲ್ಲಿ ಮೊದಲ ೩ ಸಂಪುಟಗಳು, ೪ ನೆಯದು ಪ್ರೊ. ಹಂಪನಾ ಅವರ ಸಂಪಾದಕತ್ವದಲ್ಲಿ, ೫ ನೆಯದು ಗೊ. ರು. ಚನ್ನಬಸಪ್ಪನವರಿಂದ, ೬ ನೆಯದನ್ನು ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ಸಂಪಾದಕತ್ವದಲ್ಲಿ ಪ್ರಕಟವಾದುವು'.

ಏಳನೆಯ ಸಂಪುಟವು (೭೨ ರಿಂದ ೮೧ ರ ವರೆಗೆ) ೨೦೧೬ ರಲ್ಲಿ ಪ್ರೊ. ಜಿ. ಅಶ್ವತ್ಥನಾರಾಯಣರ ಸಂಪಾದಕತ್ವದಲ್ಲಿ ಬಿಡುಗಡೆಯಾಯಿತು. ಪರಿಷತ್ತಿನ ಶತಮಾನೋತ್ಸವದಲ್ಲಿ ಪ್ರಕಟವಾದ ಈ ಸಂಪುಟದ ಸಂಪಾದಕತ್ವದ ಜವಾಬ್ದಾರಿಯೊಂದಿಗೆ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಪರಿಷತ್ತಿನ ೧೦೦ ವರ್ಷಗಳ ಇತಿಹಾಸದ ಗ್ರಂಥವನ್ನು ಬರೆಯುವ ಹೊಣೆಗಾರಿಕೆಯನ್ನೂ ನಿರ್ವಹಿಸಿದ್ದಾರೆ. ಅದುವರೆಗೆ ಪರಿಷತ್ತಿನ ಇತಿಹಾಸದ ಕುರಿತು ಸಮಗ್ರವಾದ ಒಂದು ಬೃಹತ್

ಗ್ರಂಥ ರಚಿತವಾಗಿರಲಿಲ್ಲ. ಏಳನೇ ಸಂಪುಟದ ಪ್ರಕಟಣೆಯೊಂದಿಗೆ ಪರಿಷತ್ತು ನೂರು ವರ್ಷಗಳಲ್ಲಿ ನಡೆಸಿದ ಎಲ್ಲ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು ಪೂರ್ಣವಾಗಿ ಪ್ರಕಟಗೊಂಡಂತಾಗಿತ್ತು. ಅದು ೨೦೦೬ ರಲ್ಲಿ ನಡೆದ ೭೨ ನೇ ಬೀದರ್ ಸಮ್ಮೇಳನದಿಂದ ೨೦೧೫ ರ ೮೧ ನೇ ಶ್ರವಣಬೆಳಗೊಳದ ಸಮ್ಮೇಳನದವರೆಗೆ ಹತ್ತು ಅಧ್ಯಕ್ಷರ ಭಾಷಣಗಳನ್ನು ಒಳಗೊಂಡಿದೆ. ಶಾಂತರಸ ಹೆಂಬೇರಾಳು, ಕೆ. ಎಸ್. ನಿಸಾರ್‌ಅಹಮದ್, ಎಲ್. ಎಸ್. ಶೇಷಗಿರಿರಾವ್, ಪ್ರೊ. ಎಲ್. ಬಸವರಾಜು ಡಾ. ಗೀತಾನಾಗಭೂಷಣ. ಪ್ರೊ. ಜಿ. ವೆಂಕಟಸುಬ್ಬಯ್ಯ. ಡಾ. ಸಿ. ಪಿ. ಕೃಷ್ಣಕುಮಾರ್. ಕೋ. ಚೆನ್ನಬಸಪ್ಪ. ಡಾ. ನಾ. ಡಿಸೋಜ. ಡಾ. ಸಿದ್ಧಲಿಂಗಯ್ಯ- ಎಲ್ಲರೂ ಸಮ್ಮೇಳನ ನಡೆದ ಪ್ರದೇಶಗಳಲ್ಲಿನ ಪ್ರಾದೇಶಿಕ ವೈಶಿಷ್ಟ್ಯಗಳ ಜೊತೆಗೆ ಅಲ್ಲಿನ ಸಮಸ್ಯೆಗಳತ್ತಲೂ ಗಮನ ಸೆಳೆದಿದ್ದಾರೆ. ಕನ್ನಡ ನುಡಿಸಂಪತ್ತಿನ ಕುರಿತು ದೀರ್ಘ ಹಿನ್ನೆಲೆಯನ್ನು ಹೆಮ್ಮೆಯಿಂದ, ಕೃತಜ್ಞತೆಯೊಂದಿಗೆ ಪ್ರಸ್ತಾಪಿಸಿದ್ದಾರೆ. ಅವುಗಳನ್ನು ಸಂಕ್ಷಿಪ್ತವಾಗಿ ಗಮನಿಸುವುದು ಅಗತ್ಯವಾಗಿದೆ.

ಬೀದರ್ ಸಮ್ಮೇಳನದಲ್ಲಿ ಶಾಂತರಸರು ತಮ್ಮ ಭಾಷಣದಲ್ಲಿ ಆ ಪ್ರದೇಶವನ್ನು ಅಲ್ಲಿನ ವಾಡಿಕೆಯಂತೆ 'ಧರಿನಾಡು'ಎಂದು ಸಂಬೋಧಿಸುತ್ತಲೇ ಉತ್ತರ ಕರ್ನಾಟಕದಲ್ಲಿ ಕನ್ನಡತನವನ್ನುಳಿಸಲು ನಡೆದ ಹೋರಾಟ, ಅಲ್ಲಿನ ಸಾಹಿತಿಗಳ ಸೃಷ್ಟಿಶೀಲನ ಸಾಮರ್ಥ್ಯ, ಶಿಷ್ಟ, ಜಾನಪದ ಸಂಪತ್ತು, ನೆಲ, ಜಲದ ಕುರಿತಾದ ಸಮಸ್ಯೆಗಳು, ಕನ್ನಡಮಾಧ್ಯಮ ಶಾಲೆಗಳು ಸದಾಕಾಲಕ್ಕೂ ಪ್ರೋತ್ಸಾಹದ ನಿರೀಕ್ಷೆಯಲ್ಲಿಯೇ ಇರಬೇಕಾದ ಅನಿವಾರ್ಯತೆ, ಸರ್ಕಾರೀ ಶಾಲೆಗಳ ಗುಣಮಟ್ಟದಲ್ಲಿ ಸುಧಾರಣೆ, ಮಹಿಳಾ ಸಾಕ್ಷರತೆ, ಪ್ರಾದೇಶಿಕ ಅಸಮಾನತೆ, ಗಡಿ ಸಮಸ್ಯೆ, ಮಹಾಜನ ವರದಿ ಜಾರಿಯಾಗದಿರುವುದು ಎಲ್ಲವನ್ನೂ ಪ್ರಸ್ತಾಪಿಸುತ್ತಾ ಆಗಬೇಕಾಗಿರುವ ಕಾರ್ಯಗಳ ಕುರಿತು ಜನರ, ಸರ್ಕಾರದ ಗಮನ ಸೆಳೆದು ಜಾಗೃತಿ ಮೂಡಿಸಲು ಯತ್ನಿಸಿದ್ದಾರೆ. ಮಹಿಳಾಶಿಕ್ಷಣಕ್ಕೆ ಪ್ರಾಧಾನ್ಯ ನೀಡುವಲ್ಲಿ ಸ್ಥಾಪಿತವಾದ ಬಿಜಾಪುರದ ಮಹಿಳಾವಿಶ್ವವಿದ್ಯಾಲಯದ ಹೊಸತನವಿಲ್ಲದ ಕಾರ್ಯವೈಖರಿಯನ್ನು ಕುರಿತು ಬೇಸರವನ್ನೂ ವ್ಯಕ್ತಪಡಿಸಿದ್ದಾರೆ. ಒಬ್ಬ ಪ್ರಜ್ಞಾವಂತ ಪ್ರಜೆಯಾಗಿ ನಾಡಿನ ಏಳುಬೀಳುಗಳ ಕುರಿತಾದ ಕಳಕಳಿ ಇಲ್ಲಿ ವ್ಯಕ್ತವಾಗಿದೆ.

ಶಿವಮೊಗ್ಗ ಸಮ್ಮೇಳನದ ಅಧ್ಯಕ್ಷರಾಗಿದ್ದ ನಿತ್ಯೋತ್ಸವದ ಕವಿ ಕೆ. ಎಸ್. ನಿಸಾರ್ ಅಹಮದ್ ತಾವು ಅತಿಯಾಗಿ ಪ್ರಭಾವಿತರಾದ ತಮ್ಮ ಪ್ರೀತಿಯ ಶಿವಮೊಗ್ಗದ, ಮಲೆನಾಡಿನ ಚೆಲುವಿನ ವರ್ಣನೆ ಮಾಡುತ್ತಲೇ, ನಾಡು, ನುಡಿಗಾಗಿ ಹಿರಿಯರು ಮಾಡಿದ ತ್ಯಾಗ, ಏಕೀಕರಣದ ಚಳುವಳಿ, ಕನ್ನಡ ನುಡಿಯ ಹಿರಿಮೆ, ಆಧುನಿಕ ಕನ್ನಡ ಸಾಹಿತ್ಯದ ಪ್ರಸ್ತಾಪದೊಂದಿಗೇ ಕವಿತಾ ರಚನೆಗೆ ಅಗತ್ಯವಾದ ಪ್ರತಿಭೆ, ವಿಜ್ಞಾನಜಗತ್ತಿನ ಮಹತ್ತ್ವ , ಸಾಹಿತ್ಯ ರಚನೆಯಲ್ಲಿ ಭಾಷಾಹಿಡಿತದ ಅಗತ್ಯವೇ ಮೊದಲಾದ ಸಲಹೆಗಳು, ಆಡಳಿತದಲ್ಲಿ ಕನ್ನಡದ ಬಳಕೆ ಬೇಕೆಂಬ ಆಗ್ರಹ, ಕನ್ನಡ ಶಾಸ್ತ್ರೀಯ ಭಾಷೆಯಾದರೂ ಇದುವರೆಗೂ ಒದಗದ ಸೌಲಭ್ಯಗಳು, ಗಡಿ ಸಮಸ್ಯೆ-ಇತ್ಯಾದಿ ಎಲ್ಲವನ್ನೂ ಪ್ರಸ್ತಾಪಿಸುತ್ತ ನಾಡು, ನುಡಿಯ ಹಿತಚಿಂತಕರು ತಾವೆಂಬುದನ್ನು ಸಾರಿದ್ದಾರೆ.

ಆಂಗ್ಲಭಾಷಾ ಪ್ರಾಧ್ಯಾಪಕರಾಗಿ, ಪ್ರಬುದ್ಧ ವಿಮರ್ಶಕರಾದ ಎಲ್. ಎಸ್. ಶೇಷಗಿರಿರಾವ್ ಉಡುಪಿಯಲ್ಲಿ ನಡೆದ ೭೪ನೇ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡದ ಸೇವೆಯನ್ನು ಮಾಡಿ ಹೆಸರಾದವರನ್ನು ಸ್ಮರಿಸುವುದರ ಜೊತೆಗೇ, ಎಲೆ ಮರೆಯ ಕಾಯಿಯಂತೆ ಉಳಿದುಹೋದವರನ್ನೂ ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ಶ್ರೇಷ್ಠ ಸಾಹಿತ್ಯದ ವ್ಯಾಖ್ಯೆಯನ್ನು ವಿವರಿಸುವುದರೊಂದಿಗೆ ಸಾಹಿತ್ಯ

ವಿಮರ್ಶೆಯಲ್ಲಿನ ಹೊಣೆಗಾರಿಕೆಯನ್ನೂ ಸ್ಪಷ್ಟಪಡಿಸಿದ್ದಾರೆ. ಮಕ್ಕಳ ಸಾಹಿತ್ಯ, ಮಹಿಳಾ ವ್ಯಂಗ್ಯ ಚಿತ್ರಕಾರರ ಕೊರತೆ, ಪರಂಪರೆಯ ರಕ್ಷಣೆಯ ಅಗತ್ಯ, ಸ್ತ್ರೀ ಸಂವೇದನೆ, ದಲಿತ ಸಾಹಿತ್ಯ, ಗ್ರಂಥಸಂಪಾದನೆಯ ಮಹತ್ವ, ಪುಸ್ತಕ ಪ್ರಾಧಿಕಾರದಲ್ಲಿ ಪುಸ್ತಕಗಳ ಗುಣಮಟ್ಟದ ಅಗತ್ಯ ಮುಂತಾದವುಗಳಲ್ಲದೆ, ರಾಜಧಾನಿಯಾಗಿ ಬೆಂಗಳೂರಿನ ಸ್ಥಿತಿಯನ್ನು ಕುರಿತೂ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಸಮಗ್ರ ಕರ್ನಾಟಕದ ಏಳಿಗೆಯ ಕುರಿತು, ಸಾಂಸ್ಕೃತಿಕ ಆರೋಗ್ಯದ ಬಗ್ಗೆ ಇಲ್ಲಿ ಅವರ ಕಾಳಜಿಯಿದೆ.

ಚಿತ್ರದುರ್ಗದಲ್ಲಿ ನಡೆದ ೭೫ ನೇ ಸಮ್ಮೇಳನದಲ್ಲಿ ಡಾ. ಎಲ್. ಬಸವರಾಜು ಅಧ್ಯಕ್ಷರಾಗಿದ್ದರೆ, ಗದಗದಲ್ಲಿ ೭೬ ನೇ ಸಮ್ಮೇಳನ ನಡೆದಾಗ ಗೀತಾ ನಾಗಭೂಷಣ ಅಧ್ಯಕ್ಷ ಸ್ಥಾನವನ್ನು ನಿರ್ವಹಿಸಿದ್ದರು. ಇಬ್ಬರೂ ಅಧ್ಯಕ್ಷರು ಕ್ರಮವಾಗಿ ಕನ್ನಡ ಸಾಹಿತ್ಯದ ಶ್ರೀಮಂತ ಇತಿಹಾಸವನ್ನು ತಮ್ಮ ತಮ್ಮ ಕ್ಷೇತ್ರಗಳಲ್ಲಿನ ವಿಶೇಷವೂ ಸೇರಿದಂತೆ ಸ್ಮರಿಸುತ್ತ, ಭಾಷೆಯನ್ನು ಉಳಿಸುವಲ್ಲಿ ಕನ್ನಡಿಗರ ಜವಾಬ್ದಾರಿಗಳನ್ನು ಒತ್ತಿ ಹೇಳಿದ್ದಾರೆ. ಎಲ್. ಬಸವರಾಜು ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಹತ್ತನೇ ಶತಮಾನದ ಹಿಂದಿನ ಮಾಹಿತಿಗಳ ಮೂಲಕ ವಿವರಿಸಿದ್ದಾರೆ. ಜನಸಾಮಾನ್ಯರ ಸಾಹಿತ್ಯಾಸಕ್ತಿಯನ್ನು ತಿಳಿಸುವ 'ಚತ್ತಾಣ, ಬೆದಂಡೆ' ಎಂಬ ಪ್ರಕಾರಗಳನ್ನು ಕುರಿತು ತಿಳಿಸಿದ್ದಾರೆ. ವಚನಕಾರ್ತಿಯರ ಹೋರಾಟವನ್ನು ಸ್ಮರಿಸಿದ್ದಾರೆ. ಗೀತಾ ನಾಗಭೂಷಣ ಕನ್ನಡ ಸಾಹಿತ್ಯದಲ್ಲಿನ ಬದಲಾವಣೆ, ತಂತ್ರಜ್ಞಾನದ ಬೆಳವಣಿಗೆ, ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಉಳಿದಿರುವ ದೇವದಾಸೀ ಪದ್ಧತಿ, ದಲಿತರ ಮೇಲಿನ ದೌರ್ಜನ್ಯ ಕೋಮುದ್ವೇಷದ ನಿವಾರಣೆ ಮುಂತಾದ ಹತ್ತಾರು ಸಮಸ್ಯೆಗಳ ಬಗೆಗೂ ಗಮನ ಸೆಳೆಯುತ್ತ ಗ್ರಾಮೀಣ ಜನರ ಕ್ಷೇಮದ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ.

೨೦೧೧ ರಲ್ಲಿ ಬೆಂಗಳೂರಿನಲ್ಲಿ ನಡೆದ ೭೭ ನೇ ಸಮ್ಮೇಳನ ಅನೇಕ ಕಾರಣಗಳಿಂದ ಮಹತ್ವದ್ದೆನಿಸಿದೆ. ಅಧ್ಯಕ್ಷರೆಂಬ ಗೌರವದ ಸ್ಥಾನವನ್ನು ಅಲಂಕರಿಸಿದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಆ ಪದವಿಯ ಅತ್ಯಂತ ಹಿರಿಯರೆನಿಸಿಕೊಂಡವರು. ಬಹು ಹಿಂದೆಯೇ ಅವರಿಗೆ ಸಲ್ಲಲೇಬೇಕಾಗಿದ್ದ ಆ ಗೌರವ ಅವರಿಗಿಂತ ವಯಸ್ಸಿನಲ್ಲಿಯೂ, ಸಾಧನೆಯಲ್ಲಿಯೂ, ಕನ್ನಡ ನುಡಿಸೇವೆಯಲ್ಲಿಯೂ ಕಿರಿಯರೆನಿಸಿಕೊಂಡಿದ್ದವರನೇಕರ ನಂತರದಲ್ಲಿ ನೀಡಲಾಯಿತೆನ್ನುವುದು ಎಲ್ಲರಿಗೂ ತಿಳಿದಿರುವ ಕಹಿಸತ್ಯವೇ. ಅವರ ಕಾರ್ಯಕ್ಷೇತ್ರವಾದ ಬೆಂಗಳೂರಿನಲ್ಲಿ ನಡೆದ ಸಮ್ಮೇಳನದಲ್ಲಿಯೇ ಅವರು ಅಧ್ಯಕ್ಷರಾದುದೂ ಒಂದು ವಿಶೇಷ. ಮೂರು ತಲೆಮಾರುಗಳ ವಿದ್ಯಾರ್ಥಿಗಳಿಗೆ ಪ್ರೀತಿಯ ಮೇಷ್ಟ್ರಾಗಿ, ಕನ್ನಡದ ನಿಘಂಟು ಬ್ರಹ್ಮರೆನಿಸಿ, ಭಾಷಾಶುದ್ಧಿಯ ಕಾಳಜಿಯ ಜೊತೆಗೇ ಅವರ ಅಧ್ಯಕ್ಷೀಯ ಭಾಷಣದಲ್ಲಿ ನೂರು ವರ್ಷಗಳಲ್ಲಿ ಆದ ಕನ್ನಡ ಸಾಹಿತ್ಯದ ಕೃಷಿಯನ್ನು ಗಮನಿಸಲಾಗಿದೆ. ಹಾಗೆಯೇ ನವೋದಯದ ಪ್ರಸ್ತಾಪ, ಹೆಚ್ಚುತ್ತಿರುವ ಆಂಗ್ಲಭಾಷೆಯ ಪ್ರಭಾವ, ಅಭಿಮಾನ, ಕನ್ನಡ ಸಾಹಿತ್ಯದ ಅವಹೇಳನ ಮುಂತಾದ ಅಹಿತಕಾರೀ ಬೆಳವಣಿಗೆಗಳ ಬಗ್ಗೆ ಆತಂಕ, ಜೊತೆಗೇ ಕೆಲವು ಸಕಾರಾತ್ಮಕ ಬೆಳವಣಿಗೆಗಳತ್ತಲೂ ಗಮನ ಸೆಳೆದಿದ್ದಾರೆ. ಸಾಹಿತ್ಯೇತರ ವಿಷಯದ ವಿದ್ಯಾರ್ಥಿಗಳ ಸಾಹಿತ್ಯ ರಚನೆ ಅವುಗಳಲ್ಲಿ ಒಂದು. ಹೊಸ ನಿಘಂಟುಗಳ ರಚನೆ ಮತ್ತು ಅನುವಾದಗಳ ಅಗತ್ಯವನ್ನು ಒತ್ತಿ ಹೇಳುತ್ತ, ವಿಶ್ವವಿದ್ಯಾನಿಲಯಗಳಲ್ಲಿ ತೌಲನಿಕ ಅಧ್ಯಯನ ಅವಶ್ಯವೆಂಬ ಮಹತ್ವದ ಸಲಹೆ ನೀಡಿದ್ದಾರೆ. ಗಡಿನಾಡು ಮತ್ತು ಹೊರನಾಡ ಕನ್ನಡಿಗರ ಸಮಾವೇಶ ಪ್ರತಿ ವರ್ಷ ಆಗಬೇಕೆಂದು ಹೇಳುತ್ತಲೇ, ಕೇಂದ್ರದ ಕಾರ್ಯಕ್ರಮಗಳು ಜಿಲ್ಲೆಗಳಿಗೂ ವ್ಯಾಪಿಸುವಂತಾಗಬೇಕೆಂಬ ಆಶಯವನ್ನೂ

ವ್ಯಕ್ತಪಡಿಸಿದ್ದಾರೆ. ಕನ್ನಡವನ್ನು ಶಾಸ್ತ್ರೀಯಭಾಷೆಯೆನ್ನದೆ 'ಅಭಿಜಾತಭಾಷೆ' ಅಥವಾ 'ಸಮೃದ್ಧ ಪ್ರಾಚೀನ ಭಾಷೆ'ಯೆಂದು ಕರೆಯಬೇಕೆಂಬ ಸಲಹೆಯನ್ನೂ ನೀಡುತ್ತಾ, ಪತ್ರಿಕಾಪ್ರಪಂಚದ ಸಾಮಾಜಿಕ ಹೊಣೆಗಾರಿಕೆಯ ಪ್ರಾಮಾಣಿಕ ನಿರ್ವಹಣೆಯ ಅಗತ್ಯವನ್ನೂ ಹೇಳಿದ್ದಾರೆ. ಕನ್ನಡನುಡಿಯ ಹಲವು ಕ್ಷೇತ್ರಗಳಲ್ಲಿ ಸುದೀರ್ಘ ಕಾಲ ಶ್ರಮಿಸಿದ ಪ್ರೊ. ಜಿ. ವಿ. ಯವರ ಅಧ್ಯಕ್ಷೀಯ ಭಾಷಣದ ವಿಚಾರಗಳು, ಸಲಹೆಗಳು ನಾಡು, ನುಡಿಯ ಸುಧಾರಿತ ಭವಿಷ್ಯದ ದಿನಗಳ ಆಶಯವನ್ನು ತೆರೆದಿಡುತ್ತವೆ.

ಸಂಪುಟದಲ್ಲಿ ಮುಂದೆ ಸಿ. ಪಿ. ಕೃಷ್ಣಕುಮಾರ್, ಕೋ. ಚೆನ್ನಬಸಪ್ಪ. ನಾ. ಡಿಸೋಜ ಮತ್ತು ಸಿದ್ಧಲಿಂಗಯ್ಯ ಕ್ರಮವಾಗಿ ೭೮, ೭೯, ೮೦ ಹಾಗೂ ೮೧ ನೇ ಸಮ್ಮೇಳನಗಳಲ್ಲಿ ಅಧ್ಯಕ್ಷರಾಗಿ ಮಾಡಿದ್ದ ಭಾಷಣಗಳನ್ನು ಸಂಪಾದಿಸಲಾಗಿದೆ. ಕನ್ನಡಶಾಲೆಗಳ ಮತ್ತು ಕನ್ನಡ ಮಾಧ್ಯಮದ ವಿಚಾರವನ್ನು ಎಲ್ಲರೂ ಹೇಳುತ್ತಲೇ ಬಂದಿದ್ದಾರೆ. ಸಿ.ಪಿ.ಕೆ.ಯವರು ಕರ್ನಾಟಕ ಏಕೀಕರಣವಾಗಿ ದಶಕ ದಶಕಗಳೇ ಉರುಳಿದ್ದರೂ ಕನ್ನಡಿಗರ, ಕನ್ನಡದ ಏಳಿಗೆ ಸಾಕಷ್ಟಾಗಿಲ್ಲವೆಂದು ವಿಷಾದಿಸುತ್ತ, ಅದಕ್ಕೆ ಕನ್ನಡಿಗರಲ್ಲಿ ಒಗ್ಗಟ್ಟಿನ ಅಭಾವವೇ ಕಾರಣವೆಂದಿದ್ದಾರೆ. ಕನ್ನಡ ಶಾಲೆಗಳ ಸ್ಥಿತಿಯ ಸುಧಾರಣೆ, ಸಮ್ಮೇಳನಗಳಲ್ಲಿ ಮಹಿಳೆಯರಿಗೆ, ದಲಿತರಿಗೆ ಹೆಚ್ಚಿನ ಅವಕಾಶ, ಶಾಸ್ತ್ರೀಯ ಭಾಷೆಗೆ ಸಲ್ಲಬೇಕಾದ ಬಹು ನಿರೀಕ್ಷಿತ ಸೌಲಭ್ಯಗಳು, ಉನ್ನತ ಶಿಕ್ಷಣದಲ್ಲಿ ಕನ್ನಡ ಪುಸ್ತಕಗಳ ರಚನೆ ಮುಂತಾದ ವಿಷಯಗಳನ್ನು ಪ್ರಸ್ತಾಪಿಸುತ್ತ, ಅಧ್ಯಕ್ಷರಿಗೆ ಒಂದು ವರ್ಷದಲ್ಲಿ ಒಂದು ನಿರ್ದಿಷ್ಟ ಜವಾಬ್ದಾರಿಯನ್ನು ಕೊಡಬೇಕೆಂಬ ಸಲಹೆ ನೀಡಿದ್ದಾರೆ. ಕೋ. ಚೆನ್ನಬಸಪ್ಪನವರು ಸಾಹಿತ್ಯಸಮ್ಮೇಳನದ ಅಗತ್ಯವನ್ನು ಪುಷ್ಟೀಕರಿಸುತ್ತ, ದುರ್ಬಲರ, ದಲಿತರ, ಶೋಷಿತರ ಪರ ದನಿಯೆತ್ತುವುದು ಸಾಹಿತಿಗಳ ಕರ್ತವ್ಯವೆನ್ನುತ್ತ, ಗಡಿ ಪ್ರದೇಶದ, ಹೊರನಾಡಿನ ಕನ್ನಡಿಗರಿಗೆ ಕನ್ನಡ ಪುಸ್ತಕಗಳ ಸೌಲಭ್ಯ ಒದಗಿಸುವತ್ತ ಗಮನ ಸೆಳೆದಿದ್ದಾರೆ. ಹಾಗೆಯೇ ಸಾಮಾಜಿಕ ಸಮಸ್ಯೆಗಳಾದ ಸ್ಥಳೀಯರಿಗೆ ಉದ್ಯೋಗಾವಕಾಶ, ನೆರೆ ರಾಜ್ಯಗಳೊಡನೆ ಸೌಹಾರ್ದದ ಸಂಬಂಧ ಮುಂತಾದ ಅಂಶಗಳನ್ನೂ ಪ್ರಸ್ತಾಪಿಸಿದ್ದಾರೆ.

ನಾ. ಡಿಸೋಜ ಗಡಿನಾಡಿನ, ಹೊರನಾಡಿನ ಕನ್ನಡಿಗರ ಸಮಸ್ಯೆಗಳು, ಪಶ್ಚಿಮಘಟ್ಟಗಳ ರಕ್ಷಣೆ, ವಿಶ್ವವಿದ್ಯಾಲಯಗಳಲ್ಲಿನ ಗುಂಪುಗಾರಿಕೆ, ರೈತರ ಸಮಸ್ಯೆ, ಸಮ್ಮೇಳನಗಳಲ್ಲಿ ತೆಗೆದುಕೊಳ್ಳುವ ನಿರ್ಣಯಗಳ ಅನುಷ್ಠಾನವಾಗದಿರುವುದು ಇತ್ಯಾದಿ ಹತ್ತಾರು ವಿಷಯಗಳನ್ನು ಪ್ರಸ್ತಾಪಿಸುವುದರೊಂದಿಗೆ ಕನ್ನಡದ ಹಿಂದಿನ ಮತ್ತು ಇಂದಿನ ಸಾಹಿತಿಗಳನ್ನು ಗೌರವದಿಂದ ಸ್ಮರಿಸಿದ್ದಾರೆ. ಆಗಬೇಕಾದ ಕಾರ್ಯಗಳ ಕುರಿತು ಅನೇಕ ಸಲಹೆಗಳನ್ನೂ ನೀಡಿದ್ದಾರೆ. ೮೧ ನೇ ಸಮ್ಮೇಳನದ ಅಧ್ಯಕ್ಷರಾಗಿದ್ದ ಸಿದ್ಧಲಿಂಗಯ್ಯನವರು ಕನ್ನಡ ಪುಸ್ತಕಗಳ ಪ್ರಕಟಣೆಗೆ ಸರ್ಕಾರದ ನೆರವಿನ ಅಗತ್ಯವನ್ನು ಹೇಳುತ್ತ, ಆಡಳಿತದಲ್ಲಿ ಕನ್ನಡದ ಅಗತ್ಯವನ್ನೂ ಹೇಳಿದ್ದಾರೆ. ಜೊತೆಗೇ ಗೋವಾಕನ್ನಡಿಗರ ಸಮಸ್ಯೆ, ಕನ್ನಡ ಕ್ರೈಸ್ತರ ವಲಸೆ ಸಮಸ್ಯೆ, ಕೆರೆಕಟ್ಟೆಗಳ ಸಂರಕ್ಷಣೆ, ರೈತರ ಸಮಸ್ಯೆ, ಗಿರಿಜನರ ರಕ್ಷಣೆ ಮುಂತಾದ ಅಂಶಗಳತ್ತಲೂ ಪ್ರಸ್ತಾಪಿಸುತ್ತ, ತಮ್ಮ ಸಾಮಾಜಿಕ ಕಾಳಜಿಯನ್ನು ತೋರಿದ್ದಾರೆ. ಹಿಂದೀ ಹೇರಿಕೆಯನ್ನು ವಿರೋಧಿಸುತ್ತಲೇ ೨೦೧೫ ನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನದ ಸಂಭ್ರಮದ ಗುರುತಾಗಿ 'ಕನ್ನಡವರ್ಷ'ವೆಂದು ಘೋಷಿಸುವ ಸಲಹೆಯನ್ನೂ ನೀಡಿದ್ದಾರೆ.

ಇಡೀ ಸಂಪುಟದಲ್ಲಿ ಕನ್ನಡಭಾಷೆಯ, ನಾಡಿನ, ಜನರ ಸಮಗ್ರ ಏಳಿಗೆಗಾಗಿ ಹಲವಾರು ಸಲಹೆ, ಸೂಚನೆಗಳಿವೆ. 'ಹಿಂದಣ ಹೆಜ್ಜೆಯನರಿತಲ್ಲದೆ ಮುಂದಣ ಹೆಜ್ಜೆಯನಿಡಲಾಗದು' ಎಂಬ ಮಾತಿನಂತೆ ನಾಡು, ನುಡಿಗಾಗಿ ಸೇವೆ ಸಲ್ಲಿಸಿದವರ ಸ್ಮರಣೆಯಿದೆ, ನಾಡಿನ ಸಂಪನ್ಮೂಲಗಳ ಬಗ್ಗೆ

ಅಭಿಮಾನವಿದೆ, ಕಿರಿಯರಿಗೆ ಉತ್ತಮ ಮಾಹಿತಿಗಳಿವೆ, ಸರ್ಕಾರವು ಕೈಗೊಳ್ಳಬೇಕಾದ ಕಾರ್ಯಗಳನ್ನು ಗಮನಕ್ಕೆ ತರಲಾಗಿದೆ, ಎಲ್ಲ ಹಿರಿಯರ ಅನುಭವದ, ಚಿಂತನೆಯ ನುಡಿಗಳು ಮಾರ್ಗಸೂಚಿಗಳಾಗಿ ದಾರಿ ತೋರುತ್ತವೆ. ಸಮ್ಮೇಳನದ ಅಧ್ಯಕ್ಷರು ನಾಡವರ ಜೀವನದಲ್ಲಿ, ಭಾಷೆಯಲ್ಲಿ ಆಗುತ್ತಿರುವ ಸ್ಥಿತ್ಯಂತರಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ, ಅವುಗಳತ್ತ ಎಲ್ಲರ ಗಮನ ಸೆಳೆಯುತ್ತಲೇ ತಮ್ಮ ಅನುಭವದ, ಜ್ಞಾನದ ಆಧಾರದಿಂದ ನೀಡುವ ಮಾರ್ಗಸೂಚೀ ಸಲಹೆಗಳು ಉಪಯುಕ್ತವಾಗುತ್ತವೆ. ಅನುಬಂಧದಲ್ಲಿ ೧೯೧೫ ರಿಂದ ೨೦೧೫ ರ ವರೆಗೆ ಪ್ರತಿ ಸಂಪುಟದ ವಿವರಗಳನ್ನೂ ಕೊಡಲಾಗಿದೆ. ಪ್ರೊ. ಜಿ. ಅಶ್ವತ್ಥನಾರಾಯಣರ ಸಂಪಾದಿತ ಸಂಪುಟವೂ ಸೇರಿದಂತೆ ಸಮ್ಮೇಳನದ ಅಧ್ಯಕ್ಷರ ಭಾಷಣಗಳ ಸಂಪುಟಗಳು ನಾಡು, ನುಡಿಯ ಅಭಿವೃದ್ಧಿಯ ಕಾರ್ಯಗಳನ್ನು ಕೈಗೊಳ್ಳುವಲ್ಲಿ ದಾರಿದೀಪಗಳಾಗುತ್ತವೆ.

*****

ರಾಸ ದರ್ಶನ

ಭಾರತೀ ಕಾಸರಗೋಡು
ಚರವಾಣಿ : ೯೮೮೬೩೭೯೭೩

ಸುಪ್ರಸಿದ್ಧ ಸಾಹಿತಿಗಳಾಗಿದ್ದ ನನ್ನ ಪೂಜ್ಯ ತಂದೆ ಸಮೇತನಹಳ್ಳಿ ರಾಮರಾಯರಿಗೆ ಸಾರ್ಥಕ ಎಂಭತ್ತು ವರ್ಷಗಳು ತುಂಬಿದಾಗ, ಸಹೃದಯರು ಅವರಿಗೆ ಅರ್ಪಿಸಿದ ಅಭಿನಂದನಾ ಗ್ರಂಥ 'ರಾಸದರ್ಶನ'. ಈ ಕಾರ್ಯಕ್ರಮ 1998ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವಿದ್ವಜ್ಜನರ ಸಮ್ಮುಖದಲ್ಲಿ ನೆರವೇರಿತು.

ಪುಸ್ತಕದ ಸಿದ್ಧತೆಗಳು 1995 ರಿಂದ ಆರಂಭವಾದವು. ಪುಸ್ತಕಕ್ಕೆ ಮೂವರು ಸಂಪಾದಕರನ್ನು ನೇಮಿಸಲಾಗಿತ್ತು. ವಿದ್ವಾಂಸರುಗಳಾದ ಪ್ರೊ. ಜಿ. ಅಶ್ವತ್ಥನಾರಾಯಣ, ಪ್ರೊ. ಎಸ್. ಶ್ರೀನಿವಾಸನ್ ಮತ್ತು ಇವರಿಬ್ಬರ ವಿಧೇಯ ಶಿಷ್ಯೆಯಾದ ನಾನು.

ಪುಸ್ತಕದ ಬಹುಪಾಲು ಕೆಲಸಗಳನ್ನು ಮಾಡಿದವರು ಗುರು ಅನಾಜಿ. ಈ ಗ್ರಂಥದ ಸೊಗಸು – ಸತ್ವಗಳ ಕೀರ್ತಿ ನಿಸ್ಸಂಶಯವಾಗಿಯೂ ನನ್ನ ಗುರುಗಳದೇ! 'ರಾಸದರ್ಶನ' ಎಂದು ಈ ಕೃತಿಗೆ ಅರ್ಥಪೂರ್ಣವಾಗಿ ಹೆಸರು ಕೊಟ್ಟರು. ಒಳಗಿನ ಅಧ್ಯಾಯಗಳನ್ನು ಅಚ್ಚುಕಟ್ಟಾಗಿ ವಿಂಗಡಿಸಿ ಆತ್ಮದರ್ಶನ, ವ್ಯಕ್ತಿ ದರ್ಶನ, ಮತ್ತು ಕೃತಿ ದರ್ಶನ ಎಂದು ಸಮರ್ಪಕವಾದ ಶೀರ್ಷಿಕೆಗಳನ್ನು ನೀಡಿದರು. '**ರಾಸ**' ಎಂಬುದು ನನ್ನ ತಂದೆಯವರ ಕಾವ್ಯನಾಮ. **ರಾಮರಾಯ ಸಮೇತನಹಳ್ಳಿ** ಎಂಬುದರ ಸಂಕ್ಷಿಪ್ತ ರೂಪ.

ಪ್ರೊ. ಅನಾಜಿ ಅವರ ಸಲಹೆಯಂತೆ ನನ್ನ ತಂದೆ 'ಆತ್ಮದರ್ಶನ' ಅಧ್ಯಾಯವನ್ನು ಬರೆದರು. ಓದುಗರಿಗೆ ಇದು ರಾಸರ ಜೀವನದ ಸ್ವ ಪರಿಚಯ. ಬಹುಮಟ್ಟಿಗೆ ಇದು ಈ ಹಿಂದೆ ಪ್ರಕಟವಾಗಿದ್ದ ಅವರ ಆತ್ಮಕಥನ 'ಕೋಟೆಮನೆ' ಗ್ರಂಥದ ಸಂಪಾದಿತ ರೂಪ.

'ವ್ಯಕ್ತಿ ದರ್ಶನ' ವಿಭಾಗದಲ್ಲಿ ರಾಸರನ್ನು ಹತ್ತಿರದಿಂದ ಬಲ್ಲ ಅನೇಕ ವಿದ್ವಾಂಸರು ಸಾಹಿತಿಗಳು ಆತ್ಮೀಯರು ಮತ್ತು ಅವರ ಕುಟುಂಬದ ಕೆಲವರು ತಾವು ಕಂಡಂತೆ ರಾಸರ ವ್ಯಕ್ತಿತ್ವದ ಬಗ್ಗೆ ಬರೆದಿದ್ದಾರೆ. ಪ್ರೊ. ಟಿ. ವಿ. ವೆಂಕಟಾಚಲ ಶಾಸ್ತ್ರಿ ಪ್ರೊ. ಅನಾಜಿ ಪ್ರೊ. ಎಸ್. ಶ್ರೀನಿವಾಸನ್ ಎನ್.ಕೆ. ಡಾ. ಎನ್. ಬಸವಾರಾಧ್ಯ ಖ್ಯಾತ ಗಮಕ ಕಲಾವಿದೆಯಾಗಿದ್ದ ಶಕುಂತಲಾ ಬಾಯಿ ಪಾಂಡುರಂಗರಾವ್ ದೇಜಗೌ ಮುಂತಾದವರ ಪ್ರಬುದ್ಧ ಮತ್ತು ಪ್ರಾಮಾಣಿಕ ಲೇಖನಗಳು ಪುಸ್ತಕದ ಶೋಭೆಯನ್ನು ಹೆಚ್ಚಿಸಿವೆ.

'ಕೃತಿ ದರ್ಶನ' ಅಧ್ಯಾಯದಲ್ಲಿ ರಾಸರು ರಚಿಸಿರುವ ಎಲ್ಲ ಮೂವತ್ತು ಗ್ರಂಥಗಳ ಅವಲೋಕನವನ್ನು ವಿವಿಧ ಸಾಹಿತಿಗಳು ಮಾಡಿದ್ದಾರೆ. ವಿದ್ವಾನ್ ಎನ್. ರಂಗನಾಥ ಶರ್ಮ

ಡಾ. ಎಂ. ಎ. ಜಯಚಂದ್ರ ಡಾ. ಪ್ರಧಾನ್ ಗುರುದತ್ ಪ್ರೊ. ದೊಡ್ಡ ರಂಗೇಗೌಡ ಪ್ರೊ. ಜಿ. ಬ್ರಹ್ಮಪ್ಪ

ಪ್ರೊ. ಟಿ. ಕೇಶವಭಟ್ಟ ಡಾ. ಎಚ್. ಎಸ್. ವೆಂಕಟೇಶಮೂರ್ತಿ ಮುಂತಾದ ಹಿರಿಯ ಸಾಹಿತಿಗಳ ಪ್ರೌಢ ಪ್ರಬಂಧಗಳು ಪ್ರಕಟವಾಗಿವೆ.

'ವ್ಯಕ್ತಿ ದರ್ಶನ' ಅಧ್ಯಾಯದ ಮೊತ್ತಮೊದಲಲ್ಲಿ ಹಿರಿಯ ಕವಿ ಪುತಿನ ಅವರ ಅಭಿನಂದನೆ ಮನೋಜ್ಞವಾಗಿ ಮೂಡಿಬಂದಿದೆ. ಒಂದು ರಮ್ಯವಾದ ಕವನವನ್ನೂ ಬರೆದು ಅದರ ಮೂಲಕ ತಮ್ಮ ಆತ್ಮೀಯ ಮಿತ್ರ ರಾಸರಿಗೆ ಪ್ರೀತಿಪೂರ್ವಕ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

"ಬಾಳಿನ ಬಂಡಿಯನೀತರ ತಾರೆಗೆ ಹೂಡುತ
ಚರಿಸುವ ಕವಿ ನೀ ಧನ್ಯ
ಅದೆ ಹೊಸದದೆ ಸವಿಯದೆ ಮನದುತ್ಸವವದೆ
ಶೋಕವಿಶೋಕವದೆ ಪುಣ್ಯ "

ಎನ್ನುವ ಸಾಲುಗಳು ರಮಣೀಯವಾಗಿವೆ ಮತ್ತು ರಾಸರ ಬಗ್ಗೆ ಪುತಿನ ಅವರ ಅಕಳಂಕ ಪ್ರೀತಿಯನ್ನು ಸೂಚಿಸುವಂತಿವೆ.

ಈ ಗ್ರಂಥದ ಅಭಿನಂದನಾ ಸಮಿತಿ ಪ್ರಸಿದ್ಧ ಗಣ್ಯ ವ್ಯಕ್ತಿಗಳನ್ನು ಹೊಂದಿರುವುದು ಒಂದು ಹೆಗ್ಗಳಿಕೆ. ಖ್ಯಾತ ನ್ಯಾಯಾಧೀಶರಾಗಿದ್ದ ನಿಟ್ಟೂರು ಶ್ರೀನಿವಾಸರಾವ್ ಅವರು ಸಮಿತಿಯ ಗೌರವಾಧ್ಯಕ್ಷರಾದರೆ, ನಾಡಿನ ಸುಪ್ರಸಿದ್ಧ ವೀಣಾ ವಾದಕರಾಗಿದ್ದ ಪದ್ಮಭೂಷಣ ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್ ಅವರು ಕಾರ್ಯಾಧ್ಯಕ್ಷರು. ಇನ್ನು ಉಪಾಧ್ಯಕ್ಷ ಪದವಿ ಅಸೀಮ ಕನ್ನಡ ಪ್ರೀತಿಯ ಮತ್ತು ಸದಾ ಕಾಲ ಕನ್ನಡಕ್ಕಾಗಿ ದುಡಿದ ಜಿ. ನಾರಾಯಣ ಅವರದು. ಸಮಿತಿಯ ಸದಸ್ಯರುಗಳಲ್ಲಿ ವಿದ್ವಾನ್ ರಂಗನಾಥ ಶರ್ಮ, ತಾಳ್ತಜೆ, ಕೇಶವ ಭಟ್ಟ, ವೀಣಾ ವಿದುಷಿ ತಿರುಮಲೆ ಶಾರದಾ, ಗರುಡನಗಿರಿ ನಾಗರಾಜ ಸಿ.ಕೆ. ನಾಗರಾಜ ರಾವ್ ಮುಂತಾದ ಗಣ್ಯರು ಇದ್ದಾರೆ. ಈ ಪ್ರಬುದ್ಧ ಸಮಿತಿ ರಾಮರಾಯರ ಸಾರ್ಥಕ ಜೀವನದ ಮತ್ತು ಸಮಾಜದಲ್ಲಿ ಅವರು ಗಳಿಸಿಕೊಂಡಿರುವ ಪ್ರೀತಿ ಅಭಿಮಾನಗಳ ದ್ಯೋತಕವಾಗಿದೆ. ಸಮಿತಿಯಲ್ಲಿರುವ ಎಲ್ಲ ಮಹನೀಯರು ರಾಮರಾಯರ ಬಗ್ಗೆ ಹೃತ್ಪೂರ್ವಕವಾಗಿ ಲೇಖನಗಳನ್ನು ಬರೆದಿದ್ದಾರೆ.

ರಾಸರ ಜೀವನ ಸಾಧನೆಗಳನ್ನು ಸಮಗ್ರವಾಗಿ ತೆರೆದಿಡುವ 'ರಾಸದರ್ಶನ' ಕನ್ನಡದ ವಿದ್ಯಾರ್ಥಿಗಳಿಗೆ ಆಕರ ಗ್ರಂಥವಾಗುವಂತೆ ಇದನ್ನು ಶಿಸ್ತುಬದ್ಧವಾಗಿ ರೂಪಿಸಲಾಗಿದೆ. ಆತ್ಮ ದರ್ಶನ ಮತ್ತು ವ್ಯಕ್ತಿ ದರ್ಶನ ಅಧ್ಯಾಯಗಳಲ್ಲಿ ರಾಸರ ಹೋರಾಟದ ಜೀವನ, ಅವರ ವ್ಯಕ್ತಿತ್ವದ ಸುಂದರ ಮುಖಗಳು, ಜೀವನ ಮೌಲ್ಯಗಳು ಪ್ರಕಟವಾಗಿವೆ.

'ಕೃತಿ ದರ್ಶನ' ಒಂದು ಪ್ರಮುಖ ಅಧ್ಯಾಯ. ರಾಸರ ಎಲ್ಲ ಕೃತಿಗಳ ವಿಮರ್ಶೆ ಇಲ್ಲಿದೆ. ಅವರ ಸಾಹಿತ್ಯ ಕೃತಿಗಳ ಬಗ್ಗೆ ನಿಬಂಧಗಳನ್ನು ಬರೆಯುವವರಿಗೆ ಒಂದೆಡೆ ಅವರ ಕೃತಿಗಳ ಸಮಗ್ರ ಪರಿಚಯ ಲಭ್ಯವಾಗಿದೆ.

ಮತ್ತೊಂದು ಸ್ವಾರಸ್ಯಕರ ಸಂಗತಿ ಎಂದರೆ ಗ್ರಂಥದಲ್ಲಿನ ಲೇಖನಗಳ ಕೆಳಗೆ ಡಿವಿಜಿ, ಡಿ. ಎಲ್. ನರಸಿಂಹಾಚಾರ್, ಜಿ. ವರದರಾಜ ರಾವ್, ಸಿ. ಕೆ. ವೆಂಕಟರಾಮಪ್ಪ, ಅಂಬಿಕಾತನಯದತ್ತ,

ಜಿ. ಪಿ. ರಾಜರತ್ನಂ, ವಿ. ಕೃ. ಗೋಕಾಕ್, ಕೆ. ವಿ. ಅಯ್ಯರ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಗೋವಿಂದ ಪೈ ಮುಂತಾದ ಹಲವಾರು ಸುಪ್ರಸಿದ್ಧ ಹಿರಿಯ ಸಾಹಿತಿಗಳು ರಾಸರಿಗೆ ಬರೆದಿದ್ದ ಪತ್ರಗಳ ಕೆಲವು ಸಾಲುಗಳನ್ನು ಪ್ರಕಟಿಸಲಾಗಿದೆ. ಇದು ಸಹ ರಾಸರ ವ್ಯಕ್ತಿತ್ವ ಮತ್ತು ಅವರ ಕೃತಿಗಳ ಪರಿಚಯವನ್ನು ಯಶಸ್ವಿಯಾಗಿ ಪ್ರತಿಬಿಂಬಿಸುತ್ತದೆ.

ವ್ಯಕ್ತಿ ದರ್ಶನ ಅಧ್ಯಾಯದಲ್ಲಿ ಹಲವಾರು ಹೃದಯಸ್ಪರ್ಶಿ ಪ್ರಸಂಗಗಳ ಸುಂದರ ನಿರೂಪಣೆಗಳಿವೆ. ತಮ್ಮ ಲೇಖನಕ್ಕೆ 'ಧೀರ ಗಂಭೀರ ಸುಂದರಮೂರ್ತಿ' ಎಂದು ಹೆಸರಿಸಿರುವ ನಾಡಿನ ಹಿರಿಯ ವಿದ್ವಾಂಸರಾದ ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ ಅವರು "ರಾಮರಾಯರಿಂದಾಗಿ ಅವರ ಹೆಸರಿನ ಸಮೇತನ ಹಳ್ಳಿಗೆ ಒಂದು ನೆಲೆ, ಒಂದು ಪ್ರಸಿದ್ಧಿ. ಹುಟ್ಟಿದ ಹಳ್ಳಿಯನ್ನು ಬೆಳಗಿದ ಹಿರಿಯರು ಅವರು." ಎಂದು ಮುಕ್ತವಾಗಿ ಪ್ರಶಂಸಿಸುತ್ತಾರೆ. ಪ್ರಸಿದ್ಧ ಕಾದಂಬರಿಕಾರ ರಘುಸುತ ಅವರು' ಕವಿಮನ್ಮಥ' ಅನ್ನುವ ಶೀರ್ಷಿಕೆಯಲ್ಲಿ ರಾಮರಾಯರ ಬಗೆಗಿನ ಗೌರವವನ್ನು ವ್ಯಕ್ತಪಡಿಸಿದ್ದಾರೆ. "ದೀರ್ಘ ದೃಢಕಾಯದ ದೇಹ, ಮನ್ಮಥನ ಅಪರವತಾರ! ನನಗವರು ಒಳ್ಳೆ he man ತರಹ ಕಂಡರು. ಓರ್ವ ಸಿನಿಮಾ ನಟನಂತೆ ಕಂಡುಬಂದ ಅವರು ಅಂದಿನ ಖ್ಯಾತ ಹಾಲಿವುಡ್ ನಟ ಜೆಫ್ ಛಾಡ್ಲರ್ ನನ್ನು ನೆನಪಿಗೆ ತರುವಂತಿದ್ದರು." ಎಂಬುದು ಅವರ ಆತ್ಮೀಯ ಬಣ್ಣನೆ.

ಪ್ರೊ. ಅನಾಜಿ ಅವರಂತು ರಾಸರನ್ನು ತುಂಬ ಹತ್ತಿರದಿಂದ ಬಲ್ಲವರು. ಅವರಲ್ಲಿ ತುಂಬು ಅಭಿಮಾನವನ್ನು ಉಳ್ಳವರು. ರಾಸರ ವ್ಯಕ್ತಿತ್ವದಲ್ಲಿ ತಾವು ಕಂಡಿದ್ದ ಸತ್ಯನಿಷ್ಠೆ ಪ್ರಾಮಾಣಿಕತೆ ಶಿಸ್ತು ಮುಂತಾದ ಮೌಲ್ಯಗಳನ್ನು ನಿಖರವಾಗಿ ಬಣ್ಣಿಸಿದ್ದಾರೆ.

"ಸಾಹಿತ್ಯ ಕೃಷಿಗೆ ಹಿತಕಾರಿಯಾದ ಯಾವುದೇ ಕಾವು ಇಲ್ಲದೆ ಕಾವೇರಿದ ಬದುಕಿನಲ್ಲಿಯೇ ಕಾವ್ಯ ಗಂಗೆಯನ್ನು ಹರಿಸುತ್ತಿರುವ ರಾಸರ ಪ್ರತಿಭೆಯನ್ನು ಕಂಡು ಬೆರಗಾದೆನು." ಎಂದು ಹೇಳುತ್ತಾರೆ ಪ್ರೊ. ಅನಾಜಿ.

ರಾಸರಲ್ಲಿ ಅಪರಿಮಿತ ಪ್ರೀತಿಯನ್ನು ತುಂಬಿಕೊಂಡಿದ್ದ ಎಚ್. ನಂಜೇಗೌಡ ಅವರ ಲೇಖನದಲ್ಲಿ ರಾಸರ ಬಗ್ಗೆ ಒಂದು ಪ್ರಮುಖ ಉಲ್ಲೇಖವಿದೆ. ಅದನ್ನು ಕನ್ನಡಿಗರಾದ ನಾವೆಲ್ಲರೂ, ಅದರಲ್ಲಿಯೂ ವಿಶೇಷವಾಗಿ ಇಂದಿನ ಯುವ ಜನತೆ, ಗಮನಿಸಬೇಕಾಗಿದೆ. ನಂಜೇಗೌಡರು ಹೀಗೆ ವಿವರಿಸುತ್ತಾರೆ –

"ರಾಮರಾಯರು ಆರೋಗ್ಯ ಇಲಾಖೆಯಲ್ಲಿ ತಮ್ಮ ಕರ್ತವ್ಯಗಳನ್ನು ಅತ್ಯಂತ ನಿಷ್ಠೆಯಿಂದ ನೆರವೇರಿಸುತ್ತಿದ್ದರು. ತಮ್ಮ ಬಿಡುವಿನ ವೇಳೆಯಲ್ಲಿ ತಾವು ಭೇಟಿಕೊಡುತ್ತಿದ್ದ ಗ್ರಾಮಗಳಲ್ಲಿ ಇರುವ ಹಳೆಯ ಶಾಸನಗಳು ವೀರಗಲ್ಲುಗಳು ದೇವಾಲಯಗಳು ಸ್ಮಾರಕಗಳು ಮುಂತಾದುವನ್ನು ಹುಡುಕಿಕೊಂಡು ಹೋಗಿ ಪರಿಶೀಲಿಸಿ ನಂತರ ಅವುಗಳ ಬಗ್ಗೆ ಗ್ರಾಮದ ಹಿರಿಯರ ಜೊತೆ ಚರ್ಚಿಸಿ ಟಿಪ್ಪಣಿಗಳನ್ನು ಮಾಡಿಕೊಳ್ಳುತ್ತಿದ್ದರು. ನನಗೆ ಇದು ಅಚ್ಚರಿ ಎನಿಸುತ್ತಿತ್ತು. ಒಂದು ಸಾರಿ ಅವರನ್ನು ಕೀಟಲೆಯಾಗಿ ಪ್ರಶ್ನಿಸಿದೆ – " ಈ ಹಳೆಯ ಕಲ್ಲು ಗುಂಡುಗಳ ಜೊತೆ ನಿಮಗೇನು ಸ್ವಾಮಿ ಮಾತುಕತೆ?"

ಗಂಭೀರ ಸ್ವಭಾವದ ರಾಮರಾಯರು ಶಾಂತ ಚಿತ್ತರಾಗಿ ವಿವರಿಸಿದರು –

"ಈ ಕಲ್ಲು ಗುಂಡುಗಳಲ್ಲಿಯೇ ನಮ್ಮ ಸಂಸ್ಕೃತಿ ಇತಿಹಾಸ ಎಲ್ಲವೂ ಅಡಗಿದೆ. ಬ್ರಿಟಿಷರ ಆಳ್ವಿಕೆಯಿಂದಾಗಿ ನಾವು ಯಾರೆಂಬುದನ್ನೇ ನಾವು ಮರೆತಿದ್ದೇವೆ. ಈ ಹಿಂದೆ ನಮ್ಮನ್ನು ಸಮರ್ಥವಾಗಿ

ಆಳಿದ ಶೂರ ರಾಜರು ಅವರ ರಾಜ್ಯ ಆಡಳಿತ ಸಂಸ್ಕೃತಿ ಸಾಧನೆ ಇವೆಲ್ಲವನ್ನೂ ಇವತ್ತು ಈ ಕಲ್ಲುಗಳು ನಮಗೆ ಹೇಳುತ್ತವೆ. ನಾನು ಮಾತ್ರವಲ್ಲ ಸ್ವಾಮಿ, ನಾವೆಲ್ಲರೂ ಮಾಡಬೇಕಾದ ಮುಖ್ಯ ಕರ್ತವ್ಯ ಇದು."

ಇಲಾಖೆಯಲ್ಲಿ ರಾಸರ ಮೇಲಧಿಕಾರಿಗಳಾಗಿದ್ದ ಡಾ. ಸಿ. ಅಚ್ಚುತನ್ ಅವರು "ಭವಿಷ್ಯ ವರವಲ್ಲ: ಅದೊಂದು ಸಾಧನೆ" ಎಂಬ ನಾಣ್ಣುಡಿ ಒಂದರಿಂದ ತಮ್ಮ ಲೇಖನವನ್ನು ಆರಂಭಿಸಿ ರಾಸರ ಬದುಕಿಗೆ ಈ ಮಾತು ಎಷ್ಟೊಂದು ಸಮರ್ಪಕವಾಗಿ ಅನ್ವಯಿಸುತ್ತದೆ ಎಂಬುದನ್ನು ವಿವರಿಸುತ್ತಾರೆ. ಇದಕ್ಕೆ ಪೂರಕವಾಗಿದೆ ಅವರ ಲೇಖನದ ಅರ್ಥಪೂರ್ಣ ಶೀರ್ಷಿಕೆ... 'ಬಹು ಸಮರ್ಥ ವ್ಯಕ್ತಿ'. ತಮ್ಮ ಆತ್ಮೀಯ ಲೇಖನದಲ್ಲಿ ಅಚ್ಚುತನ್ ಅವರು ಪ್ರಸ್ತಾಪಿಸುವ ಒಂದು ವಿಚಾರ ಮನಮುಟ್ಟುವಂತಿದೆ –

"ರಾಮರಾಯರು ಕರ್ತವ್ಯ ನಿರತರಾಗಿರುವಾಗ ಗ್ರಾಮೀಣ ಭಾಗದಲ್ಲಿ ಆರೋಗ್ಯದ ಬಗ್ಗೆ ತಿಳುವಳಿಕೆ ನೀಡಲು ಹಳ್ಳಿಗಳನ್ನು ಸುತ್ತಿದರು. ಮನೆ ಮನೆಗಳಿಗೆ ಹೋಗಿ ಗ್ರಾಮಸ್ಥರನ್ನು ಆರೋಗ್ಯದ ಬಗ್ಗೆ ಎಚ್ಚರಿಸಿದರು. ಆದರೆ ಆ ಮುಗ್ಧ ಜನರಿಗೆ ತಮ್ಮ ಆರೋಗ್ಯದ ಬಗ್ಗೆ ಇಷ್ಟೊಂದು ಕಾಳಜಿ ವಹಿಸುವ ಈ ಕರ್ತವ್ಯ ನಿರತ ವ್ಯಕ್ತಿ ಸ್ವತಃ ಓರ್ವ ಅಧ್ಯಯನಶೀಲ ವಿದ್ವಾಂಸರಾಗಿದ್ದರು ಎಂಬ ಅಂಶ ತಿಳಿದಾದರೂ ತಿಳಿದಿತ್ತೇ ಎಂಬುದು ನನ್ನ ವಿಸ್ಮಯ."

ಪುಸ್ತಕದ ಕಡೆಯ ಭಾಗದಲ್ಲಿ ರಾಸರ ವ್ಯಕ್ತಿತ್ವದ ಪ್ರಮುಖ ಘಟ್ಟಗಳು, ಸಂದ ಪ್ರಶಸ್ತಿಗಳು, ಪ್ರಕಟಿತ 30 ಪುಸ್ತಕಗಳ ವಿವರಗಳು (6,000 ಪುಟಗಳು) ಅಪ್ರಕಟಿತ ಹಸ್ತಪ್ರತಿಗಳ ಮಾಹಿತಿ (ಎರಡು ಸಾವಿರ ಪುಟಗಳು) ಈ ಗ್ರಂಥದ ಲೇಖಕರ ವಿಳಾಸಗಳು – ಇವೆಲ್ಲವನ್ನೂ ನೀಡಲಾಗಿದೆ.

ಸಮೇತನಹಳ್ಳಿ ರಾಮರಾಯರ ವ್ಯಕ್ತಿತ್ವ, ಸಾಹಿತ್ಯ ವಿವರ, ಅವರ ಕೃತಿಗಳ ವಿಮರ್ಶೆ, ಆತ್ಮದರ್ಶನ ವಿಭಾಗದಲ್ಲಿ ಸ್ವತಃ ರಾಸರು ನಿರೂಪಿಸಿರುವ ಅವರ ಪ್ರಾಮಾಣಿಕ ಸತ್ಯನಿಷ್ಠರ ಜೀವನ, ಇವೆಲ್ಲವೂ ಅಚ್ಚುಕಟ್ಟಾಗಿ ಸೇರ್ಪಡೆಯಾಗಿರುವ ಈ ಒಂದು ಮೌಲಿಕ ಗ್ರಂಥ ಆಸಕ್ತರಿಗೆ ಮತ್ತು ವಿದ್ಯಾರ್ಥಿಗಳಿಗೆ ಆಕರ ಗ್ರಂಥ ಸಹ ಆಗಿದೆ.

ಈ ಗ್ರಂಥದ ಸಂಪಾದಕರು ಮತ್ತು ಎಲ್ಲ ಲೇಖಕರ ಪ್ರೀತಿ ಪರಿಶ್ರಮಗಳಿಂದಾಗಿ ಅಂದವಾಗಿ ಮುದ್ರಣ ಗೊಂಡಿರುವ ಈ ಅಭಿನಂದನಾ ಗ್ರಂಥ ರಾಸದರ್ಶನ ಒಂದು ಯಶಸ್ವೀ ಪ್ರಕಟಣೆ.

******

ಉಪ್ಪಾರಳ್ಳಿ ರಾಮಪ್ಪಯ್ಯ ಕವಿಯ "ಗೀತಾರ್ಥ ಪ್ರಕಾಶಿಕೆ"

ಡಾ॥ ಎ.ವಿ. ಪ್ರಸನ್ನ
ಚರವಾಣಿ : ೯೪೪೮೦೦೦೮೩೦

ಪ್ರಖ್ಯಾತ ಕನ್ನಡ ಪ್ರಾಧ್ಯಾಪಕರೂ, ಸಂಪಾದಕರೂ, ಸಂಶೋಧಕರೂ ಆದ ಪ್ರೊ. ಜಿ. ಅಶ್ವತ್ಥ ನಾರಾಯಣ ಅವರು ಸಂಪಾದಿಸಿರುವ ಉಪ್ಪಾರಳ್ಳಿ ರಾಮಪ್ಪಯ್ಯ ಕವಿ ವಿರಚಿತವಾದ "ಗೀತಾರ್ಥ ಪ್ರಕಾಶಿಕೆ ಎಂಬ ಭಾಮಿನೀಷಟ್ಪದಿಯ ಕನ್ನಡ ಭಗವದ್ಗೀತೆಯನ್ನು ೨೦೨೨ರಲ್ಲಿ ಬೆಂಗಳೂರಿನ ಸ್ನೇಹಾ ಪ್ರಿಂಟರ್ಸ್, ಬೆಂಗಳೂರು-೭೨ ಇವರು ಪ್ರಕಟಿಸಿರುತ್ತಾರೆ.

ಈ ಕಾವ್ಯವು, ಒಟ್ಟು ೪೦೭ ಷಟ್ಪದಿಗಳನ್ನು ಒಳಗೊಂಡಿದೆ. ಮೊದಲೇ ತಿಳಿಸಿರುವಂತೆ ಈ ಕೃತಿಯ ಕವಿ ಉಪ್ಪಾರಳ್ಳಿ ರಾಮಪ್ಪಯ್ಯ, ಬೆಂಗಳೂರು ನಗರದ ಲಾಲ್ಬಾಗ್ ಸಮೀಪದ ಈಗಿನ ಮಾವಳ್ಳಿಪ್ರದೇಶದಲ್ಲಿ ವಿಲೀನವಾಗಿರುವ ಉಪ್ಪಾರಳ್ಳಿಯವರು. ಈ ಕಾವ್ಯದ ಕಾಲ ಕ್ರಿ.ಶ. ೧೮೦೦ ಇರಬಹುದು. ಈ ಕಾವ್ಯವು ಮೂಲ ಭಗವದ್ಗೀತೆಯಂತೆಯೇ ೧೮ ಅಧ್ಯಾಯಗಳನ್ನು ಒಳಗೊಂಡಿದೆ.

ಈ ಕಾವ್ಯವು ಮೊದಲು ದೊರಕಿರುವುದು ೧೮೬೫ ರಲ್ಲಿ. ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಸಂಪಾದಿಸಿ, ಮದರಾಸಿನ ಸರಸ್ವತೀ ವಿಲಾಸ ಪ್ರೆಸ್ಸಿನಲ್ಲಿ ಮುದ್ರಣವಾದ, ಕುಮಾರವ್ಯಾಸ ಭಾರತದಲ್ಲಿನ ಭೀಷ್ಮಪರ್ವದ ೩ನೆಯ ಸಂಧಿಯಲ್ಲಿ ಈ ಕಾವ್ಯವು ಮುದ್ರಣಗೊಂಡಿದೆ. ಆದರೆ ಅಲ್ಲಿ "ಬೆಂಗಳೂರಿನ ಲಾಲ್ಬಾಗ್ ಬಳಿಯಿರುವ ಉಪ್ಪಾರಳ್ಳಿಯ ರಾಮಪ್ಪಯ್ಯನು ರಚಿಸಿದ ಭಗವದ್ಗೀತೆ" ಎಂಬ ಶೀರ್ಷಿಕೆಯ ಅಡಿಯಲ್ಲಿಯೇ ಮುದ್ರಣಗೊಂಡಿದೆ. (ಇದು ಅನೌಚಿತ್ಯ). ಅನಂತರದ ಪ್ರಕಟಣೆಗಳಲ್ಲಿ ಮದ್ರಾಸ್ ಮುದ್ರಣದಲ್ಲಿದ್ದ ಈ ಪ್ರತ್ಯೇಕ ಶೀರ್ಷಿಕೆಯನ್ನು ಕೈ ಬಿಡಲಾಗಿದೆ. ೧೯೨೮ ರ ಅನಂತರ ಪ್ರಕಾಶನಗೊಂಡ ಪ್ರತಿಗಳಲ್ಲಿ ಸಂಪೂರ್ಣವಾಗಿ ಈ ಕಾವ್ಯವನ್ನು ಕೈ ಬಿಡಲಾಗಿದೆ ಎಂದರೆ ೧೮೬೫ ರಿಂದ ೧೯೨೮ ರವರೆಗೆ ಪ್ರಕಟವಾದ ಎಲ್ಲಾ ಪ್ರತಿಗಳಲ್ಲಿಯೂ ರಾಮಪ್ಪಯ್ಯನ ಗೀತಾರ್ಥ ಪ್ರಕಾಶಿಕೆಯೂ ಸೇರಿಹೋಗಿದ್ದು ೧೯೨೮ ರ ಅನಂತರ ಕೈ ಬಿಡಲಾಗಿದೆ.

ಮೇಲ್ಕಂಡ ಎಲ್ಲಾ ಮಾಹಿತಿಗಳನ್ನೂ ಸಂಪಾದಕನ ಬಿನ್ನಹದಲ್ಲಿ ನೀಡಲಾಗಿದೆ. ಇವುಗಳ ಬಗ್ಗೆ ಇನ್ನೂ ಕೆಲವು ವಿಚಾರಗಳನ್ನು ಪರಿಶೀಲಿಸಬೇಕಾಗಿದ್ದು, ಅವುಗಳಲ್ಲಿ ಮುಖ್ಯವಾದುದು ರಾಮಪ್ಪಯ್ಯನು ಗ್ರಂಥದಲ್ಲೆಲ್ಲೂ ತನ್ನ ಹೆಸರು, ತಂದೆ, ತಾಯಿ, ಊರು, ಕಾಲ, ದೇಶ ಇತ್ಯಾದಿಗಳೊಂದನ್ನೂ ಏಕೆ ಹೇಳಿಕೊಳ್ಳಲಿಲ್ಲವೆಂಬ ವಿಚಾರ. ಇದಕ್ಕೆ ಮುಖ್ಯವಾದ ಕಾರಣವೆಂದರೆ, ಈ ಕಾವ್ಯದ ವಸ್ತುವು ಮಹಾಭಾರತದ ಅಂತರ್ಗತವಾಗಿರುವ ವಿಷಯದಿಂದ ಕೂಡಿದ್ದು, ಭೀಷ್ಮ ಪರ್ವದ ಪ್ರಾರಂಭದಲ್ಲಿಯೇ ಬರುತ್ತದೆ. ಕುಮಾರವ್ಯಾಸ ಭಾರತದ ೩ನೆಯ ಸಂಧಿಯ ಕಡೆಯಲ್ಲಿ ರಾಮಪ್ಪಯ್ಯನ ಈ ಕಾವ್ಯವು ಸೇರಿಕೊಂಡಿದ್ದು, ಕಥೆಯ ನಡುವೆ ಬರುವುದರಿಂದ, ಕವಿಗೆ ತನ್ನ ಕಾವ್ಯದ ಕಥೆಯನ್ನು ದೇವತಾಸ್ತುತಿ, ಕವಿವಿಚಾರ ಇತ್ಯಾದಿಗಳನ್ನು ಹೇಳಿಕೊಳ್ಳಲು ಅವಕಾಶ ದೊರೆಯಲಿಲ್ಲ. ಹಾಗೆಯೇ ಈ ಕಾವ್ಯ ಮುಗಿದ

ಕೂಡಲೇ ಮಹಾಭಾರತದ ಕಥೆ ಮುಂದುವರಿಯುವುದಿದ್ದು, ಉಪಸಂಹಾರವೆಂಬ ಭಾಗವನ್ನು ಸೇರಿಸಿದ್ದಲ್ಲಿ ಔಚಿತ್ಯವೆನಿಸುವುದಿಲ್ಲ. ಹೀಗಾಗಿ ತನ್ನ ಕಾವ್ಯಾಂತದಲ್ಲಿ ಸಹ ತನ್ನ ವಿಚಾರಗಳನ್ನಾಗಲೀ ಫಲಶ್ರುತಿ-ಮಂಗಳ ಪದ್ಯಗಳನ್ನಾಗಲೀ ಹೇಳಿಕೊಳ್ಳಲಾಗಲಿಲ್ಲ.

ಈ ಕಾರಣದಿಂದಲೇ ಕುಮಾರವ್ಯಾಸಭಾರತದಲ್ಲಿ ಇದನ್ನು ಒಂದು ಸಂಧಿಯ ಅಂತ್ಯದಲ್ಲಿ ಸೇರ್ಪಡೆಗೊಳಿಸುವಾಗ, ಈ ಕಾವ್ಯದ ಶೀರ್ಷಿಕೆಯಲ್ಲಿಯೇ ತನ್ನ ಊರು ಮತ್ತು ಹೆಸರನ್ನು ಸೇರಿಸಿಕೊಂಡು, "ಉಪ್ಪಾರಳ್ಳಿ ರಾಮಪ್ಪಯ್ಯ ರಚಿತ ಗೀತಾರ್ಥ ಪ್ರಕಾಶಿಕೆ" ಎಂದು ನಮೂದಿಸಿರುತ್ತಾರೆ.

ಇದರಿಂದ ಪರ್ಯಾಯವಾಗಿ ತಿಳಿದುಬರುವ ಒಂದು ಅಂಶವೆಂದರೆ, ತನ್ನ ಈ ಕಾವ್ಯವನ್ನು ಕುಮಾರವ್ಯಾಸ ಭಾರತದ ಭಗವದ್ಗೀತಾ ಪ್ರಸಂಗದ ಅವಿಭಾಜ್ಯ ಅಂಗವಾಗಿ ರಚಿಸುವುದೇ ಕವಿಯ ಉದ್ದೇಶವಾಗಿರುವುದು.

ಕುಮಾರವ್ಯಾಸನು ಸುಮಾರು ೭೦ ಷಟ್ಪದಿಗಳಲ್ಲಿ ೧೮ ಅಧ್ಯಾಯಗಳ ಗೀತೆಯನ್ನು ಬಹುಸಮರ್ಥವಾಗಿ ಸಾರಸಂಗ್ರಹ ಮಾಡಿದ ಮೇಲೆ ಪುನಃ ಅದನ್ನು ಹೊಸತಾಗಿ ಪ್ರಾರಂಭಿಸಿ ವಿಸ್ತಾರವಾಗಿ ಹೇಳುವುದು ಉಚಿತವೆನಿಸುವುದಿಲ್ಲ.

ಸಂಪಾದಕರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಈ ಖಂಡಕಾವ್ಯದೊಂದಿಗೆ ಕುಮಾರವ್ಯಾಸನು ರಚಿಸಿರುವ ಈ ಪ್ರಸಂಗದ, ಭೀಷ್ಮಪರ್ವದ ೩ನೆಯ ಸಂಧಿಯ ೯೩ ಷಟ್ಪದಿಗಳನ್ನೂ ನೀಡಿ, ಅವುಗಳಿಗೆ ಗದ್ಯಾನುವಾದವನ್ನು ಒದಗಿಸಿರುವುದು ಬಹಳ ಉಪಯುಕ್ತವಾಗಿದೆ.

ಭಗವದ್ಗೀತೆಯ ಸಾರಸಂಗ್ರಹವನ್ನು ಕಡಿಮೆ ಪದ್ಯಗಳಲ್ಲಿ ಅಚ್ಚುಕಟ್ಟಾಗಿ ನೀಡಿರುವುದು ಇಲ್ಲಿನ ವಿಶೇಷ. ಯುದ್ಧಭೂಮಿಯ ನಡುವೆ, ಉಭಯ ಪಕ್ಷಗಳು ಯುದ್ಧಕ್ಕೆ ಅಣಿಯಾಗಿ ನಿಂತು ಉತ್ಸಾಹದಿಂದ ಯುದ್ಧ ನಿರೀಕ್ಷೆಯಲ್ಲಿರುವಾಗ ಎಷ್ಟು ಹೊತ್ತು ಉಪದೇಶಮಾಡಬಹುದೋ ಸುಮಾರು ಅಷ್ಟುಹೊತ್ತಿನಲ್ಲಿ ಕುಮಾರವ್ಯಾಸ, ಭಗವದ್ಗೀತಾ ಪ್ರಸಂಗವನ್ನು ಮುಗಿಸುವುದು Time Utility ದೃಷ್ಟಿಯಿಂದ ಬಹಳ ಪ್ರಜ್ಞಾಪೂರ್ವಕವಾದ ಪ್ರಯತ್ನವಾಗಿದೆ.

'ಗೀತಾರ್ಥ ಪ್ರಕಾಶಿಕೆ'ಯ ಎಲ್ಲಾ ೪೦೭ ಷಟ್ಪದಿಗಳ ಮತ್ತು ಕುಮಾರವ್ಯಾಸನ ಭಗವದ್ಗೀತಾ ಪ್ರಸಂಗದ ಎಲ್ಲಾ ೯೫ ಷಟ್ಪದಿಗಳ 'ಅ'ಕಾರಾದಿ ಪಟ್ಟಿಯನ್ನು ನೀಡಿ, ಪದ್ಯಗಳನ್ನು ಗುರುತಿಸಲು ಸಹಾಯ ಮಾಡಿದ್ದಾರೆ. ಗೀತಾರ್ಥ ಪ್ರಕಾಶಿಕೆಯ ಪ್ರತಿಯೊಂದು ಅಧ್ಯಾಯದ ಅನಂತರದಲ್ಲಿ, ಆ ಅಧ್ಯಾಯದ ತಾತ್ಪರ್ಯವನ್ನು ನೀಡಿರುವುದು ಅಭ್ಯಾಸಿಗಳಿಗೆ ಉಪಯುಕ್ತವಾಗಿದೆ.

ಇತ್ತೀಚಿನವರೆಗೂ ಪ್ರಕಟವಾಗಿರುವ ಕನ್ನಡ ಭಗವದ್ಗೀತಾ ಪದ್ಯಸಾಹಿತ್ಯಗಳ ಪಟ್ಟಿಯನ್ನು ನೀಡಿ, ಸಂಶೋಧಕರಿಗೆ ಉಪಕಾರ ಮಾಡಿದ್ದಾರೆ. ಈ ಪದ್ಯ ಸಾಹಿತ್ಯವು ವಿವಿಧ ಛಂದೋರೂಪಗಳಲ್ಲಿರುವುದನ್ನು ಗುರುತಿಸಿದ್ದಾರೆ. ಈ ಪಟ್ಟಿಯಲ್ಲಿ ಸುಮಾರು ೭೬ ಕವಿಗಳು ರಚಿಸಿರುವ ವಿವಧರೂಪದ ಪದ್ಯಗಳಿದ್ದು, ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಇವುಗಳನ್ನು ಹುಡುಕಲು ಬಹಳ ಶ್ರಮಪಟ್ಟಿದ್ದಾರೆ.

ಉಪ್ಪಾರಳ್ಳಿ ರಾಮಪ್ಪಯ್ಯನವರ ಈ ಕಾವ್ಯವನ್ನು ಮೊದಲಬಾರಿಗೆ ೧೮೮೭ ರಲ್ಲಿ, ಈ ೧೮ಪರ್ವಗಳನ್ನು ಭಾರತದ ಭೀಷ್ಮಪರ್ವದಲ್ಲಿ ಸೇರಿಸಿ, ಶ್ರೀ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಪ್ರಕಟಿಸಿದರು. ಅನಂತರದ ಕುಮಾರವ್ಯಾಸ ಭಾರತದ ಪ್ರಕಟಣೆಗಳಲ್ಲಿ ಈ ಕಾವ್ಯವನ್ನು ಸೇರಿಸಿ

ಮುದ್ರಿಸುವ ಪರಂಪರೆ ಪ್ರಾರಂಭವಾಗಿ, ಕೆಲವುಕಾಲ ಮುಂದುವರಿಯಿತು. ೧೯೨೮ ರವರೆಗೆ ಮುಂದುವರಿದ ಈ ಕ್ರಮವನ್ನು, ಇದು ಕುಮಾರವ್ಯಾಸನ ರಚನೆಯಲ್ಲವೆಂಬ ಸಕಾರಣದಿಂದ ಇದನ್ನು ಕೈಬಿಡಲಾಗಿರುವುದನ್ನು ಪ್ರೊ. ಅಶ್ವತ್ಥನಾರಾಯಣ ಅವರು ದಾಖಲಿಸಿದ್ದಾರೆ.'

ಇನ್ನು ಈ ಕಾವ್ಯವನ್ನು ಪರಿಶೀಲಿಸಿದಾಗ ಹೆಚ್ಚಿನ ಕಾವ್ಯಾಂಶಗಳಿಲ್ಲದೆ, ನೇರವಾಗಿ ವಿಷಯವನ್ನು ಹೇಳುತ್ತಾ ಹೋಗಿರುವುದನ್ನು ಕಾಣುತ್ತೇವೆ. ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಗಹನವಿಚಾರಗಳನ್ನು ಹೇಳುವಾಗ ಕಾವ್ಯಾಂಶಗಳು ಸಹಜವಾಗಿ ಗೌಣವಾಗುತ್ತವೆ. ಗಮಕಿಗಳು ವಾಚನ ವ್ಯಾಖ್ಯಾನಗಳ ಮೂಲಕ, ಈ ಕಾವ್ಯವನ್ನು ಜನಸಾಮಾನ್ಯರಿಗೆ ತಲುಪಿಸಿ, ಭಗವದ್ಗೀತೆಯ ಸಂದೇಶವನ್ನು ಸಾರಲಿ ಎಂಬುದು ಪ್ರೊ. ಜಿ. ಅಶ್ವತ್ಥನಾರಾಯಣರ ಆಶಯವಾಗಿದೆ. ಅವರ ಆಶಯ ಸಫಲವಾಗಲೆಂದು ಹಾರೈಸುತ್ತೇನೆ.

******

ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು

ಡಾ. ಟಿ.ಎನ್. ನಾಗರತ್ನ
ಚರವಾಣಿ : ೯೪೪೮೯೪೫೮೭೭

ಹೌದು. . . ಕನ್ನಡ ಸಾಹಿತ್ಯ-ಸಾಹಿತಿಗಳನ್ನು ಕುರಿತಂತೆ ಅವರೊಂದು ನಡೆದಾಡುವ ವಿಶ್ವಕೋಶ. ಯಾರ ಬಗ್ಗೆ ಕೇಳಿದರೂ ಅವರಿಗೆ ಸಂಬಂಧಿಸಿದಂತೆ 'ಅನಾಜಿ' ಅವರಿಂದ ನಮಗೆ ಒಂದು ಹೊಸ ವಿಷಯ ಸಿಕ್ಕುವುದು ಗ್ಯಾರಂಟಿ. ಅವರು ಆ ಬಗ್ಗೆ ತಮ್ಮಲ್ಲಿರುವ ಸರಕನ್ನು ಉತ್ಸಾಹದಿಂದ ನಗುನಗುತ್ತಾ ಬಿಚ್ಚಿಡುತ್ತಾರೆ ಕೂಡಾ. ತಮ್ಮಲ್ಲಿರುವ ಮಾಹಿತಿಯನ್ನು ಕೇಳುವವರಿಗೆ ಹೇಳುವ ಮೂಲಕ, ಲೇಖನದ ಮೂಲಕ ಅಥವಾ ಪುಸ್ತಕದ ಮೂಲಕ ಆಸಕ್ತರೊಂದಿಗೆ ಹಂಚಿಕೊಳ್ಳುವುದು ಅವರ ಪದ್ಧತಿ.

ಮೊನ್ನೆ ನನ್ನ ಕೆಲವು ಸ್ನೇಹಿತರು ನಮ್ಮ ಮನೆಗೆ ಬಂದಿದ್ದರು. ಹೀಗೆ ಮಾತಾಡ್ತಾ ಮಾತಾಡ್ತಾ ಮಾತು ಪ್ರೊ. ಜಿ. ಅಶ್ವತ್ಥನಾರಾಯಣರ (ಅನಾಜಿ) ಕಡೆ ಹೊರಳಿತು. ಅವರಲ್ಲೊಬ್ಬರು ಹೇಳಿದರು. 'ಮೇಡಂ ಸಾಮಾನ್ಯವಾಗಿ ಸಾಹಿತಿಗಳ, ಲೇಖಕರ ಮನೆಗಳಲ್ಲಿ ಒಂದು ಸಣ್ಣ ವೈಯಕ್ತಿಕ ಲೈಬ್ರರಿ ಇರುತ್ತೆ. ಆದರೆ ಅಶ್ವತ್ಥನಾರಾಯಣರು ಲೈಬ್ರರಿಯಲ್ಲೇ ಹೋಗಿ ಇದ್ದುಬಿಟ್ಟಿದ್ದಾರೆ. ಅಂದ್ರೆ ಅವರ ಮನೆಯೇ ಲೈಬ್ರರಿಯಾಗಿಬಿಟ್ಟಿದೆ. ಅವರ ಪುಸ್ತಕಪ್ರೀತಿಯನ್ನು ಹೋಗಿ ನೋಡಬೇಕು. ಮೇಡಂ. ವಿವಿಧ ಹಸ್ತಪ್ರತಿಗಳು, ವಿಭಿನ್ನ ಕಾವ್ಯಪ್ರಕಾರಗಳ ಹಳೆಯ-ಹೊಸ ಪುಸ್ತಕ ಪ್ರಕಟಣೆಗಳು, ಸಂಸ್ಕೃತ-ಕನ್ನಡ ಭಾಷೆಗಳ ಅಪರೂಪದ ಗ್ರಂಥಗಳು. ಒಂದೇ ಎರಡೇ. . . ಅಬ್ಬಾ. . .ಅಷ್ಟೇ ಅಲ್ಲ. ಅವೆಲ್ಲವುಗಳ ಸಾದ್ಯಂತ ಚರಿತ್ರೆ ಅವರ ನಾಲಗೆಯ ತುದಿಯಲ್ಲಿ ಇರುತ್ತೆ. . . ಅವರು ಅದನ್ನು ಹೇಳೋದೇ ಒಂದು ಸೊಗಸು ಅಂದ್ರು!"

ವಿದ್ಯೆ, ವಿದ್ವತ್ತು ಯಾರಲ್ಲಿಯೇ ಇರಲಿ-ವಯಸ್ಸಿನಲ್ಲಿ ಅವರಿಗಿಂತ ದೊಡ್ಡವರಾಗಿರಬಹುದು ಅಥವಾ ಚಿಕ್ಕವರಾಗಿರಬಹುದು. ಮುಕ್ತ ಮನಸ್ಸಿನಿಂದ ಅವರನ್ನು ಗೌರವಿಸುವುದಲ್ಲದೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಸಂಭ್ರಮಿಸುವ ಉದಾರಿ 'ಅನಾಜಿ'. ನನಗೆ ಅವರ ಪರಿಚಯವೇ ಇಲ್ಲದಿದ್ದಾಗ ಯಾವುದೋ ಒಂದು ಸಮಾರಂಭದಲ್ಲಿ ನನ್ನ ಗುರುಗಳಾದ ಡಾ. ಜಿ. ವರದರಾಜರಾಯರಿಂದ ನನ್ನ ಕಾರ್ಯವೈಖರಿ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಕೇಳಿದ್ದರಂತೆ. ಮೈಸೂರಿಗೆ ಬಂದಿದ್ದಾಗ ಮರೆಯದೆ ನಮ್ಮ ಮನೆ ಹುಡುಕಿಕೊಂಡು ಬಂದು ಅದನ್ನು ಹೇಳಿ, ಅಭಿನಂದಿಸಿ ಸಂತೋಷಪಟ್ಟರು!

'ಅನಾಜಿ'ಯವರ ಅಗಾಧ ನೆನಪಿನ ಶಕ್ತಿ ಅಚ್ಚರಿ ತರುವಂಥದು. ಇಂಥವರು ಇಂಥ ಸಂದರ್ಭದಲ್ಲಿ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದರು ಎಂದು ಎಷ್ಟೋ ವರ್ಷಗಳು ಕಳೆದಿದ್ದರೋ ಕುರ್ತೇಟಾಗಿ ಹೇಳಬಲ್ಲರು. ಅವರ ನೆನಪಿನ ಸುರುಳಿ ಬಿಚ್ಚುತ್ತಾ ಹೋದಂತೆ ಗಂಟೆಗಳು. ಓಡಿಹೋಗುತ್ತಿರುತ್ತವೆ. ನಾನು ಯಾವಾಗಲೂ ಅವರಿಗೆ ಹೇಳುವುದುಂಟು. 'ಸರ್. . . .ಈ ವಿಷಯಗಳನ್ನೆಲ್ಲ ಬರೆದಿಡಿ. ಈ

ಮಾಹಿತಿಗಳು ಬೇರೆಲ್ಲೂ ಸಿಗಲ್ಲ, ಅಚ್ಚು ಹಾಕಿಸೋಣ ಅಂತ' 'ಹೌದು. . .ಬರೀಬೇಕು. . .' ಎಂದು ನಕ್ಕುಬಿಡುತ್ತಾರೆ.

ಸರಳತೆ, ಸಜ್ಜನಿಕೆಗಳ ಸಾಕಾರಮೂರ್ತಿ, 'ಅನಾಜಿ ನಿಗರ್ವಿ. ಆದರೆ ಅಷ್ಟೇ ಛಲವಾದಿ ಕೂಡಾ ಮೂಲೋತ್ಪಾಟನೆ ಮಾಡಿದ ಚಾಣಕ್ಯನಂತೆ. ಯಾವುದಾದರೂ ಒಂದು ವಿಷಯದ ಬಗ್ಗೆ ಹೇಳಹೊರಟರೆ ಅದರ ಜಾತಕವನ್ನೇ ಜಾಲಾಡಿ ಅದರ ಇತಿಹಾಸವನ್ನೇ ನಮ್ಮ ಮುಂದಿಟ್ಟು ಬಿಡುತ್ತಾರೆ. ಮುಚ್ಚಿಟ್ಟು ಹಾರಿಸಿ, ತೇಲಿಸಿ ಹೇಳುವ 'ಕಲೆ' ಅವರಿಗೆ ಗೊತ್ತಿಲ್ಲ. ಈ ಮಾತಿಗೆ ಅವರ ಲೇಖನಗಳೇ ಸಾಕ್ಷಿ.

ಅನಾಜಿ ಅವರ ಸಾಹಿತ್ಯ ಪರಿಚಾರಿಕೆ ಬಹುಮುಖಿಯಾದುದು. ಗ್ರಂಥಸಂಪಾದನೆ, ವಚನಸಾಹಿತ್ಯ (ಲೇಖನಗಳು, ಉಪನ್ಯಾಸ ಮಾಲಿಕೆಗಳು), ಹಳಗನ್ನಡ ಕಾವ್ಯಗಳು, ಕನ್ನಡ ಭಾಷೆ, ಲಿಪಿಗಳ ಕಲಿಕಾವಿಧಾನ, ಶಬ್ದಕೋಶ ರಚನೆ- ಇವು ಅವರ ಆಡುಂಬೊಲ. ಕನ್ನಡ ಸಾಹಿತ್ಯ ದಿಗ್ಗಜರನ್ನು ಕುರಿತಂತೆ. ಗ್ರಂಥರಚನೆ, ಅವರೊಡನೆ ಕಳೆದ ರಸನಿಮಿಷಗಳ ದಾಖಲೆ ಕನ್ನಡಿಗರ ಮನಸ್ಸಿನಲ್ಲಿ ಉಳಿಯುವಂಥವು. ಅವರ ಸೇವೆ, ವಿದ್ವತ್ತುಗಳನ್ನು ಗುರುತಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಟಿ. ವಿ. ವೆಂಕಟಾಚಲಶಾಸ್ತ್ರೀ ವಿದ್ವತ್ ಪ್ರಶಸ್ತಿ ಮೊದಲಾದ ಅನೇಕ ಪ್ರಶಸ್ತಿಗಳು ಇವರನ್ನರಸಿ ಬಂದಿವೆ. ಅನೇಕರಿಗೆ ಮಾದರಿಯಾಗಬಲ್ಲ ಬದುಕು ವ್ಯಕ್ತಿತ್ವದ 'ಅನಾಜಿ' ಅವರು. 'ನೂರ್ಕಾಲ' ಬಾಳಲಿ ಎಂಬುದೇ ನಮ್ಮೆಲ್ಲರ ಹಾರೈಕೆ.

ಇನ್ನು ನನಗೆ ಅನಾಜಿ ಅವರನ್ನು ಕುರಿತ 'ಸಾಹಿತ್ಯ ಪರಿಚಾರಕ' ಅಭಿನಂದನ ಗ್ರಂಥಕ್ಕೆ ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು ಪುಸ್ತಕವನ್ನು ಕುರಿತು ಬರೆಯುವಂತೆ ಕೇಳಿದ್ದಾರೆ. ಸೊಗಸಾದ ಮುಖಪುಟ ಶ್ರೀರಾಮನ ಹಾಗೂ ಅವನನ್ನು ಸ್ತುತಿಸಿದ ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ, ಕನಕ ಹಾಗೂ ಪುರಂದರದಾಸರುಗಳ ಚಿತ್ರಗಳು ಪುಸ್ತಕದ ಹಿಂಬಂದಿಯ 'ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದ ಧೀರೋದಾತ್ತ ನಾಯಕ' ಚಿತ್ರ ಕಣ್ತುಂಬುತ್ತವೆ. ಪುಸ್ತಕವನ್ನು ನೋಡಿದ ಕೂಡಲೇ ಕೈಗೆತ್ತಿಕೊಳ್ಳಬೇಕೆನಿಸುತ್ತದೆ.

ಶ್ರೀಯುತ ಡಿ.ಎನ್.ವೆಂಕಟರಮಣಯ್ಯನವರು ಶ್ರೀರಾಮನವಮಿ ವೇಳೆಗೆ ಪ್ರಕಟಿಸುತ್ತ ಬಂದಿರುವ 'ಶ್ರೀರಾಮಗೀತಗುಚ್ಛ'ದಿಂದ ಪ್ರೇರಿತರಾಗಿ ಹದಿನಾರುವರ್ಷಗಳ ತಪಸ್ಸಿನ ಫಲವೇ ಎಂಬಂತೆ ಈ ಬೃಹತ್ ಸಂಪುಟ ಸಿದ್ಧವಾಗಿ ಪ್ರಕಟವಾಗಿದೆ. ಸಂಗೀತಗಾರರಿಗೆ, ಭಜನಾಸಕ್ತರಿಗೆ, ಯುವಜನರಿಗೆ, ಮಹಿಳೆಯರಿಗೆ ಓದಲು ಹಾಡಲು ಅನುಕೂಲವಾಗುತ್ತದೆಂಬ ಸದುದ್ಧೇಶ ಈ ಗ್ರಂಥದ ಹಿಂದಿದೆ. "ದೂರದ ಬೆಟ್ಟ ನುಣ್ಣಗೆ" ಎಂಬಂತೆ. ಸಂಗ್ರಹದ ಕೆಲಸ ತಾನೇ ಎಂದು ಭಾವಿಸಿಕೊಂಡು ಸಂಗ್ರಹಕ್ಕೆ ಸಂಪಾದನೆಗೆ ಕೈ ಹಾಕಿದ ಮೇಲೆ ಅದರ ಆಳ-ಅಗಲ ಅರಿವಾಗಿ ಬಹಳ ಶ್ರಮದಿಂದ ಕೀರ್ತನೆಗಳನ್ನು (ಆರಿಸಿ) ಸಂಗ್ರಹವನ್ನು ಸಿದ್ಧಪಡಿಸಿದ್ದೇನೆ. ೧೯೨೪ರ ಜನವರಿ ೨೨ರವೇಳೆಗೆ ಗ್ರಂಥ ಸಿದ್ಧವಾಗಬೇಕಾಗಿದ್ದ ಕಾರಣ ೧೯೦೦ನೇ ಇಸವಿಗೆ ಮುಂಚೆ ಹುಟ್ಟಿದ ಹರಿದಾಸರ ಕನ್ನಡ ಶ್ರೀರಾಮನ ಕೀರ್ತನೆಗಳು ಸಾವಿರಕ್ಕೂ ಹೆಚ್ಚಿಗೆ ಸಿಗುತ್ತವೆಂದು ತಿಳಿಯುತ್ತಲೇ ಆ ಪೈಕಿ ೫೦೦ ಕೀರ್ತನೆಗಳನ್ನು ಮಾತ್ರ ಸಂಗ್ರಹಿಸಿ ಸಂಪಾದಿಸಿ ಪ್ರಕಟಣೆಗೆ ಸಿದ್ಧಗೊಳಿಸಿರುವೆ" (ಪುಟ ೩) ಎಂಬ ಸಂಪಾದಕರ ಮಾತುಗಳಿಂದ ಅವರು ಪಟ್ಟ ಪಾಡು, ಶ್ರಮ, ಅವರಿಗಿದ್ದ ಪುಟಗಳ ಮಿತಿಯ, ಕಾಲಮಿತಿಯ ಒತ್ತಡಗಳನ್ನು ಊಹಿಸಿಕೊಳ್ಳಬಹುದು, ಇದೊಂದು ಸವಾಲಿನ ಕೆಲಸವೇ ಸರಿ.

ಇನ್ನು ಪುಸ್ತಕದ ಸಂಪಾದನೆಯಲ್ಲಿ ಅನುಸರಿಸಿರುವ, ಸಂಪಾದಕರೇ ಸ್ವತಃ ದಾಖಲಿಸಿರುವ ಕ್ರಮವನ್ನು ಕುರಿತು ಹೇಳುವುದಾದರೆ

(ಅ) ಚರಣಗಳ ಸಾಲುಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದ್ದುದ್ದನ್ನು ಸಂಪೂರ್ಣವಾಗಿ ಸರಿಪಡಿಸಲು ಸಾಧ್ಯವಾಗಿಲ್ಲ (ಕೀ . ೬೪ ಕೀ. ೧೭, ಕೀ. ೨೨೪, ಇತ್ಯಾದಿ)

(ಆ) ಪ್ರತಿಕೀರ್ತನೆಯ ಮೊದಲ ಸಾಲನ್ನು ದಪ್ಪಕ್ಷರಗಳಲ್ಲಿ ಕೀರ್ತನೆಯ ಶೀರ್ಷಿಕೆಯನ್ನಾಗಿ ಮಾಡಿದೆ; ಕೀರ್ತನೆಗಳ ಪರಿವಿಡಿಯಲ್ಲಿ ಕೊಟ್ಟಿರುವ ದಾಸರ ಅಂಕಿತ, ನಿಜನಾಮ, ಜೀವಿತ ಕಾಲಗಳ ವಿವರ ಗ್ರಂಥದ ಒಳಗೆ ಪ್ರತಿ ಕೀರ್ತನೆಯ ಶೀರ್ಷಿಕೆಯಡಿ ಪುನರುಕ್ತವಾಗಿದೆ. ಇವುಗಳ ಔಚಿತ್ಯ ತಿಳಿಯುತ್ತಿಲ್ಲ.

(ಇ) ಕೀರ್ತನೆಗಳ ಕಾಲಾನುಕ್ರಮದ ಜೋಡಣೆ ಪುಸ್ತಕದಲ್ಲಿ ಕಾಣಿಸುತ್ತಿಲ್ಲ (ಕೀ ೮೨, ಮೋಹನವಿರಲ, ೧೭೩೦, ಕೀ ೮೮, ವ್ಯಾಸವಿಠಲ, ೧೯೯೦, ಕೀ ೮೯, ಜಗನ್ನಾಥ ವಿಠಲಮ ೧೭೨೮, ಕೀ ೯೯-೧೦೩, ಸಂಬೋಧ, ೧೮೯೦ ಕೀ. ೧೦೬-೧೦೮, ಪ್ರಾಣೇಶವಿಠಲ, ೧೭೩೬ ಇತ್ಯಾದಿ) ಕಾಖಂಡಕಿ ಕೃಷ್ಣರಾಯರ ಕೀರ್ತನೆಗಳ ನಡುವೆ ತಿಪ್ಪಣಾರ್ಯರು (೧೯ನೆಯ) ತೂರಿ ಬಂದಿದ್ದಾರೆ. (ಕೀ.೭೫)

(ಈ) ಕೆಲವು ಕೀರ್ತನೆಗಳಿಗೆ ಪಲ್ಲವಿ, ಅನುಪಲ್ಲವಿಗಳಿಲ್ಲ, ಅಂಕಿತವೂ ಇಲ್ಲ; ಕೆಲವಕ್ಕೆ ಕೇವಲ ಒಂದು ಅಥವಾ ಎರಡು ನುಡಿಗಳಿವೆ. ಕೆಲವು ಕೀರ್ತನೆಗಳಲ್ಲಿ ನುಡಿಗಳು ಸಮಸಂಖ್ಯೆಯಲ್ಲಿವೆ. ಇಂತಹ ಕೀರ್ತನೆ ಪ್ರಕಾರದ ಮೂಲಕ ಲಕ್ಷಣಗಳೇ ಇಲ್ಲದ ಕೀರ್ತನೆಗಳು, ಕೀರ್ತನೆ ಪ್ರಕಾರದ ಅಪವಾದಗಳು ಎಂದು ಕೈ ಬಿಟ್ಟು ಒಟ್ಟಾರೆ ಗಮನಿಸಿದ ಸಾವಿರ ಶ್ರೀರಾಮನ ಕೀರ್ತನೆಗಳ ಪೈಕಿ ಇವೆಲ್ಲವೂ ಸರಿಯಾಗಿರುವಂಥವನ್ನು ಆಯ್ಕೆ ಮಾಡಬಹುದಿತ್ತು. (ಕೀ ೮೦, ಕೀ ೮೧, ಕೀ ೯೨, ಕೀ ೧೦೪, ಕೀ ೧೦೫, ಕೀ೧೨೯, ಕೀ ೧೪೨, ಕೀ ೧೫೫)

ಸಂಪಾದಕರೇ ಹೇಳಿರುವಂತೆ ಶ್ರೀರಾಮನ ೫೦೦ ಕೀರ್ತನೆಗಳನ್ನು ಸಂಗ್ರಹಿಸಿ, ಸಂಪಾದಿಸಿ ಮೊದಲ ಬಾರಿಗೆ ಕನ್ನಡದಲ್ಲಿ ಪ್ರಕಟಮಾಡಲಾಗುತ್ತಿದೆ. ಅಕ್ಷರಶಃ ಇದು ಸಾಹಸದ ಕೆಲಸ! ಒಂದು ಸಂಸ್ಥೆ ಅಥವಾ ಸಮಿತಿ ಮಾಡುವಂತಹ ಕೆಲಸವನ್ನು ಒಬ್ಬ ವ್ಯಕ್ತಿ ಕೈಗೆತ್ತಿಕೊಂಡು ಮಾಡಿ ಮುಗಿಸಿರುವುದು ಶ್ಲಾಘನೀಯ. ಅದರಲ್ಲೂ ಅಯೋಧ್ಯೆಯ ಶ್ರೀರಾಮಮಂದಿರದ ಉದ್ಘಾಟನೆಯ ನೆನಪಿಗೆ ಪ್ರಕಟಿಸಿರುವುದು ಸಂಪಾದಕರಿಗೆ ಮಾತ್ರವಲ್ಲ, ಸಮಸ್ತ ಸಾಹಿತ್ಯಾಸಕ್ತರಲ್ಲೂ ಶ್ರೀರಾಮನ ಭಕ್ತರಲ್ಲೂ ರೋಮಾಂಚನವನ್ನುಂಟುಮಾಡಿದೆ; ಧನ್ಯತಾಭಾವವನ್ನು ಮೂಡಿಸಿದೆ. ಒಪ್ಪಿಕೊಂಡ ಬೃಹತ್ ಕೆಲಸವನ್ನು ಕಾಲಮಿತಿಯೊಳಗೆ ಮಾಡಿ ಮುಗಿಸಿ 'ಸೈ' ಎನಿಸಿಕೊಂಡ ಸಂಪಾದಕರಿಗೆ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ.

******

ಹರಿದಾಸರು ಹಾಡಿದ ಶ್ರೀರಾಮರ ಕೀರ್ತನೆಗಳು

ಬೆ. ಗೊ. ರಮೇಶ್
ಚರವಾಣಿ : ೯೮೮೬೭೪೫೭೦೨

ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಸಂಪಾದಿಸಿರುವ ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು ಸಂಗೀತ ಕಲಾವಿದರಿಗೂ ಗಮಕ ಕಲಾವಿದರಿಗೂ ಜನ ಸಾಮಾನ್ಯರಿಗೂ ಒಂದು ಸಂತೃಪ್ತಿಯ ಕೊಡುಗೆ, ಇಂತಹ ಕೃತಿಯೊಂದನ್ನು ತರಬೇಕೆಂಬ ಆಲೋಚನೆ ಹೊಳದದ್ದೆ ಶ್ಲಾಘನೀಯ. ಕೃತಿ ಸಂಪಾದನೆಯಲ್ಲೂ ವೈಶಿಷ್ಟ್ಯತೆ ಇದ್ದು ಒಟ್ಟು 500 ಕೀರ್ತನೆಗಳು (ದೇವರ ನಾಮಗಳು) ಸಂಗ್ರಹಿಸಿರುವುದು ಮನೋಜ್ಞ ಆದರ್ಶ ಪುರುಷನೂ, ಮರ್ಯಾದಾ ಪುರುಷೋತ್ತಮನೂ ಆದ ಭಗವಾನ್ ಶ್ರೀರಾಮಚಂದ್ರನನ್ನು ಆಮೂಲಾಗ್ರವಾಗಿ ತಿಳಿಯಲು ಒಳ್ಳೆ ಪ್ರವೇಶ ಸಿಕ್ಕಂತಾಗಿದೆ. ಈಗ್ಗೆ ಮೂರು ನಾಲ್ಕು ದಶಕಗಳ ಹಿಂದೆ ರಾಮೋತ್ಸವ ಬಂತೆಂದರೆ ಇಡೀ ನಾಡಿನಲ್ಲಿ ಸಂಗೀತ ಕಾರ್ಯಕ್ರಮಗಳು ನಡೆಯುತ್ತಾ ಬಂದು ರಾಮನ ಕುರಿತಾದ ಕೀರ್ತನೆಗಳನ್ನು ಕಲಾವಿದರು ಹಾಡುತ್ತಿದ್ದರು. ಅಂತಹ ದಿನಗಳು ಈಗ ಇಲ್ಲ. ಇದೀಗ ಈ ಕೃತಿ ಮತ್ತೆ ಬೆಳಕು ಚೆಲ್ಲಿ ಕಲಾವಿದರು ಹಾಡಲು ಅವಕಾಶವಾದಲ್ಲಿ ಬಹುಶಃ ತ್ರೇತಾಯುಗ ಮರಳಿ ಬಂದಂತಾಗುತ್ತದೆ.

ಮಿಗಿಲಾಗಿ ಈ ಕೃತಿಯ ಪ್ರತಿ ಕೀರ್ತನೆಯಲ್ಲಿ ಬರೆದ ಹರಿದಾಸರ ಅಂಕಿತ, ಹರಿದಾಸರ ಹೆಸರು, ಅವರ ಕಾಲವನ್ನು ಕೊಟ್ಟಿರುವುದು ಎದ್ದು ಕಾಣುವ ವಿಷಯ. ಕಾಲಾನುಕ್ರಮಣಿಕೆಯಲ್ಲಿ ಕೃತಿಗಳನ್ನು ಮುದ್ರಿಸಿರುವುದು ಬರಹಗಾರರಿಗೆ, ಓದುಗರಿಗೆ ಸಹಾಯಕ.

ಮಹಿಳಾ ಹರಿದಾಸರ ಕೀರ್ತನೆಗಳನ್ನು, ಆಸೂರಿ ರಾಮಸ್ವಾಮಿ ಅಯ್ಯಂಗಾರ್, ಹೊಸಕೆರೆ ಚಿದಂಬರಯ್ಯ, ಆನವಟ್ಟಿ ರಾಮರಾಯರೇ ಮೊದಲಾದ ಕೆಲವು ಆಧುನಿಕ ಕಾಲದ ಹರಿದಾಸರ ಕೀರ್ತನೆಗಳನ್ನು ಸೇರಿಸಿರುವುದು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದೆ. ಇಲ್ಲಿನ ಎಷ್ಟೋ ಕೀರ್ತನೆಗಳನ್ನು ಕೇಳಿರದಿರಲೂ ಆಗಿದೆ ಹಾಗೂ ಆ ಕೀರ್ತನೆಗಳು ಲಭ್ಯವಾದುದು ಭಾಗ್ಯ.

ಪುಸ್ತಕವನ್ನು ವಿಶೇಷ ಭಕ್ತಿಯಿಂದ ಪ್ರಕಟಿಸಿರುವುದು ಎದ್ದು ಕಾಣುತ್ತದೆ. ಉತ್ತಮ ರಕ್ಷಾ ಪಟ, ತಪ್ಪಿಲ್ಲದ ಮುದ್ರಣ ಗಮನ ಸೆಳೆಯುತ್ತದೆ. ಸಂಪಾದಕರು, ಪ್ರಕಾಶಕರ ಶ್ರಮ ಸಾರ್ಥಕ. ಕೊನೆಯ ರಕ್ಷಾಪುಟದಲ್ಲಿ ಕಲಿಯುಗದಲ್ಲಿ ಪರಮಗತಿಯನ್ನು ಹೊಂದಲು ರಾಮನಾಮ ಬಿಟ್ಟರೆ ಬೇರೆ ಯಾವ ಉಪಾಯವೂ ಇಲ್ಲ ಎಂಬ ಅರ್ಥದ ವಾಕ್ಯ ಮನ ಸೆಳೆಯುತ್ತದೆ.

******

ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ ಜೀವನಚರಿತ್ರೆ

ಎಂ.ಕೆ. ಗೋಪಿನಾಥ್
ಚರವಾಣಿ : ೯೯೮೬೪೨೪೬೬೫

ಪ್ರೊಫೆಸರ್ ಜಿ. ಅಶ್ವತ್ಥನಾರಾಯಣ ಅವರಿಗೆ,

ಉಲುಚುಕಮ್ಮೆ ಪಂಗಡದವರದಾಗಲಿ, ಹೊಯ್ಸಳ ಕರ್ನಾಟಕ ಸಮುದಾಯದವರಾಗಲಿ, ಮುಲುಕುನಾಡು ಪಂಥೀಯರದಾಗಲಿ ಜೀವನ ಚರಿತ್ರೆಗಳನ್ನು ಅತ್ಯಂತ ಪ್ರೀತಿಯಿಂದ ಓದುವ ಹವ್ಯಾಸವುಳ್ಳ ನನಗೆ ನೀವು ಈಚೆಗೆ ಬರೆದಿರುವ 'ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ' ಪುಸ್ತಕದ ಓದು ಅಪೂರ್ವ ಸಂತೋಷವನ್ನು ಕೊಟ್ಟಿತು ಎಂಬುದನ್ನು, ನಿಮಗೆ ತಿಳಿಸಲು ಈ ಪತ್ರ. ಒಂದೇ ಮಾತಿನಲ್ಲಿ ಹೇಳಬೇಕಾದರೆ ನಿಮ್ಮ ಮಾಹಿತಿ ಸಂಗ್ರಹ ಸಾಮರ್ಥ್ಯವನ್ನು ನಾನು ಬೆರಗುಗಣ್ಣುಗಳಿಂದ ನೋಡುವಂತಾಗಿದೆ. ಈ ಪುಟ್ಟ ಪುಸ್ತಕ ಬೆಟ್ಟದಷ್ಟು ಮಾಹಿತಿ ಭರಿತವಾಗಿದೆ.

ಜೀವನ ನಿರ್ವಹಣೆಗಾಗಿ ಉಪಾಧ್ಯಾಯ ವೃತ್ತಿ ಹಿಡಿದು ಅದನ್ನು ದಕ್ಷತೆಯಿಂದ ನಿರ್ವಹಿಸಿ, ದಿನ ೧೪-೧೬ ಗಂಟೆಗಳ ಕಾಲವನ್ನು ಅಧ್ಯಯನ ಬರಹಗಳಿಗೆ ವಿನಿಯೋಗಿಸಿ, ಬರಹವೊಂದರೆ ವಿನಾ ಬೇರೊಂದು ಕಾಯಕವನ್ನು ಅರಿಯದ ಸಹಧರ್ಮಿಣಿ ತೀರಿಕೊಂಡ ಬಳಿಕ ಒಪ್ಪತ್ತು ಊಟ ಮಾಡುವ ವ್ರತ ಕೈಗೊಂಡ, ಅವಧೂತರಂತೆ ಇಡೀ ಬದುಕನ್ನು ಮುಗಿಸಿದ ಹೊಸಕೆರೆ ಚಿದಂಬರಯ್ಯನವರನ್ನು ಕುರಿತಹಾಗೆ ಒಂದು ಕಿರುಕೃತಿ ಕೂಡ ಈ ತನಕ ಲಭ್ಯವಿರಲಿಲ್ಲ ಎನ್ನುವುದು ವಿಷಾದದ ಸಂಗತಿಯಾದರೆ, ಆ ಅರಕೆಯನ್ನು ನೀವು ಬಹು ಅಚ್ಚುಕಟ್ಟಾಗಿ, ವಿಶಿಷ್ಟ ರೀತಿಯಲ್ಲಿ ತುಂಬಿಕೊಟ್ಟಿದ್ದೀರಿ ಎಂಬುದು ಸಂತಸದ ವಿಷಯ. ಈ ಬಗೆಗೆ ನಿಮಗೆ ಅಭಿನಂದನೆಗಳು ಸಲ್ಲಬೇಕು.

ಕೃತಿಯನ್ನು ನೀವು ಅತ್ಯುಕ್ತಿಗಳಿಲ್ಲದೆ, ವಸ್ತುನಿಷ್ಠವಾಗಿ ರಚಿಸಿದ್ದೀರಿ. ಉಪಶೀರ್ಷಿಕೆಗಳು ಓದುಗನ ಕೆಲಸವನ್ನು ಸುಲಭಗೊಳಿಸುತ್ತವೆ. ಎಲ್ಲದಕ್ಕಿಂತ ಹೆಚ್ಚಾಗಿ ನನ್ನ ಗಮನ ಸೆಳೆದ ಸಂಗತಿಯೆಂದರೆ ಚಿದಂಬರಯ್ಯನವರನ್ನು ಕುರಿತಂತೆ ನೀವು ನೀಡಿರುವ ಆಕರ ಸಾಹಿತ್ಯದ ಪಟ್ಟಿ, ಅದೇ ಮೂರು ಪುಟಗಳಷ್ಟು ಧೀರ್ಘವಾಗಿದೆ ಅಲ್ಲದೇ ಹೊಸಕೆರೆಯವರ ಆರು ಮಂದಿ ಬಂಧುಮಿತ್ರರನ್ನು ಸಂದರ್ಶಿಸಿದ್ದೀರಿ. ಚಿದಂಬರಯ್ಯನವರು ಆಧ್ಯಾತ್ಮಿಕ ಸಾಹಿತ್ಯ ರಚನೆಯತ್ತ ಮಾತ್ರ ಒಲವು ತೋರಿದರು ಎಂಬ ಅವಿಚಾರಪೂರ್ಣ ಆರೋಪವೊಂದು ಪ್ರಚಲಿತವಿತ್ತು. ಅವರು ಕಾದಂಬರಿ, ನಾಟಕ, ಜೀವನ ಚರಿತ್ರೆ, ಮೊದಲಾದ ಸಾಹಿತ್ಯ ಪ್ರಕಾರಗಳಲ್ಲೂ ಕೈ ಆಡಿಸಿದ್ದಾರೆಂಬುದು ನಿಮ್ಮ ಪುಸ್ತಕದ ಓದಿನಿಂದ ತಿಳಿದುಬರುತ್ತದೆ. ಸಾಹಿತ್ಯ ಚರಿತ್ರೆಯಲ್ಲಿ ಆಸಕ್ತರಾದ ಓದುಗರಿಗೆ ಈವರೆಗೆ ತಿಳಿದಿಲ್ಲದ ಎಷ್ಟೋ ಸಂಗತಿಗಳು ನಿಮ್ಮ ಕೃತಿಯಲ್ಲಿ ದಾಖಲಾಗಿವೆ.

ಬ್ರಾಹ್ಮಣ ವರ್ಗದ ಉಪಪಂಗಡಗಳಲ್ಲಿ ಒಂದಾದ ಉಲುಚುಕಮ್ಮೆ ಸಂಪ್ರದಾಯದವರ ಬಗೆಗೆ ಒಂದಿಷ್ಟು (೨ ಪುಟ) ವಿವರಗಳು ಕೃತಿಯಲ್ಲಿ ಅನುದಿಷ್ಟವಾಗಿ ಬಂದಿದೆ. ಇಂಥ ವಿವರಗಳನ್ನು ನೀಡುವುದು ಜಾತಿ ಚರಿತ್ರೆಯ ದೃಷ್ಟಿಯಿಂದ ಸ್ತುತ್ಯಕಾರ್ಯ. ಇದಕ್ಕಾಗಿ ನಿಮಗೆ ವಿಶೇಷ ಧನ್ಯವಾದ.

******

ಗೀತೆಯ ತಿರುಳು–ಎಂದ ದೇವರಕೊಂಡಪ್ಪ

ಎಂ. ದೇವರಕೊಂಡಪ್ಪ
ಚರವಾಣಿ : ೯೪೮೨೩೮೪೧೩೭

ಗೀತೆಯು ಮೈದಳೆಯುವುದಕ್ಕೆ ಅರ್ಜುನನ ವಿಷಾದವೇ ಕಾರಣ. ಇಲ್ಲಿ ವಿಷಾದ ಮುಖ್ಯ ಘಟನೆ. ವಿಷಾದವೆಂಬ ಪದ ೨೭ ನೇ ಶ್ಲೋಕದಲ್ಲಿ ಬಂದಿದೆ. ಆದರೆ ಅದು ಅರ್ಜುನನ ಬಾಯಿಂದ ಬಂದದ್ದಲ್ಲ. ಅರ್ಜುನನು ಮಾನಸಿಕ ಸಮತೋಲನವನ್ನು ಕಳೆದುಕೊಂಡಿದ್ದಾರೆ. ಮಮಕಾರಕ್ಕೆ ಒಳಗಾಗಿದ್ದಾನೆ. (ಶ್ಲೋಕ ೨೯–೩೨) ವೈರಾಗ್ಯವನ್ನು ತಳೆದಿದ್ದಾನೆ (ಶ್ಲೋಕ ೩೨–೩೪) ದುರ್ಯೋಧನಾದಿಗಳನ್ನು ಸಾಯಿಸಿದರೆ ಪಾಪಸಂಚಯವಾಗುತ್ತದೆಂಬ ಪಾಪ ಭೀತಿಗೆ ಒಳಗಾಗಿದ್ದಾನೆ. ಕೌರವರನ್ನು ಸಾಯಿಸಿದರೆ ಮಿತ್ರದ್ರೋಹವೆಸಗಿದಂತಾಗುತ್ತದೆ ಎಂದ ದ್ರೋಹ ಬುದ್ಧಿಯಿಂದ ಹೊರಗಾಗಿದ್ದಾನೆ.

ಯುದ್ಧವನ್ನು ಗೆದ್ದು ರಾಜ್ಯವಾಳಿದರೆ ಲೋಭಕ್ಕೆ ಒಳಗಾಗುತ್ತೇನೆ ಎಂಬ ತ್ಯಾಗಬುದ್ಧಿಯನ್ನು ಹೊಂದಿದ್ದಾನೆ. ಧರ್ಮ ಸಮ್ಮತವಾದ ಗುಣಗಳನ್ನು ಹೊಂದಿದ್ದಾನೆ. ಒಬ್ಬ ಶಿಷ್ಯನಿಗೆ, ಮುಮುಕ್ಷುವಿಗೆ ಇರಬೇಕಾದ ಗುಣಗಳೆಲ್ಲವೂ ಅವನಲ್ಲಿವೆ. ಅವನು ಅಧ್ಯಾತ್ಮ ಬೋಧೆಗೆ ಅರ್ಹನಾಗಿದ್ದಾನೆ. ಆದರೆ ದ್ವಂದ್ವದಲ್ಲಿ ಸಿಲುಕಿದ್ದಾನೆ. ಈ ಆಂದೋಲನದಿಂದ ಪಾರಾಗಲು ಅರ್ಜುನನು ಕೃಷ್ಣನನ್ನು ಆಶ್ರಯಿಸಿ ತಾನು ಶಿಷ್ಯ ತನಗೆ ಸರಿದಾರಿತೋರಬೇಕೆಂದು ಪ್ರಾರ್ಥಿಸುತ್ತಾನೆ. ಮುಂದೆ ಆತ್ಮಾನಾತ್ಮ ವಿವೇಕದಿಂದ ಗೀತೆ ಪ್ರಾರಂಭವಾಗುತ್ತದೆ.

ಶ್ರೀಮಾನ್ ಹೊಸಕೆರೆ ಚಿದಂಬರಯ್ಯನವರು, ಎಲ್ಲರಂತೆ ಗೀತೆಯನ್ನು ವಿಸ್ತಾರವಾಗಿ ಹೇಳಿ ಪಾಠಕರನ್ನು ಮತ್ತಷ್ಟು ಗೊಂದಲಕ್ಕೆ ಗುರಿಯಾಗಿಸದೆ, ಯಾವುದನ್ನೂ ತಿಳಿದರೆ ಎಲ್ಲವನ್ನೂ ತಿಳಿದಂತಾಗುತ್ತದೆಯೋ ಅಂತಹ ಅಂತರ್ಗತವಾಗಿರುವ ಸಾರವತ್ತಾದ ತಿರುಳಿನ ಭಾಗವನ್ನು ಪ್ರಜೆಗೆ ಬೋಧಿಸಿದ್ದಾರೆ. ಈ ತಿರುಳಿನ ಭಾಗವನ್ನು ಪ್ರಶ್ನೋತ್ತರ ರೂಪದಲ್ಲಿ ಹೇಳಿದ್ದಾರೆ. ಇಲ್ಲಿ ಅರ್ಜುನನು, ಕೃಷ್ಣನನ್ನು ಕೇಳಿದ ಪ್ರಶ್ನೆಗಳೇ ಅಲ್ಲದೇ, ಪಾಠಕರು, ಸಂದರ್ಭಾನುಸಾರ ಕೇಳಬಹುದಾದ ಪ್ರಶ್ನೆಗಳನ್ನು ಊಹಿಸಿ ಅವುಗಳಗೆ ಪರಿಹಾರ ಸೂಚಿಸಿದ್ದಾರೆ. ಗೀತೆಯನ್ನು ಓದಿ ಅಥವಾ ಆಲಿಸಿ ಬಾಹ್ಯದಲ್ಲಿ (ಹೊರನೋಟಕ್ಕೆ) ಉಂಟಾಗುವ ಪ್ರಶ್ನೆಗಳಲ್ಲ. ಭಗವದ್ಗೀತೆಯ ಆಳವಾಗಿ ಒಳಹೊಕ್ಕು, ತಿರುಳು ಭಾಗವನ್ನು ಶೋಧಿಸಿ ಅಲ್ಲಿ ಉಂಟಾಗುವ ಪ್ರಶ್ನೆಗಳು ಚಿದಂಬರಯ್ಯನವರ ಕೃತಿಯಲ್ಲಿ ಕಂಡು ಬರುವಂತಾದ್ದು. ಇದಕ್ಕೆ ನಿದರ್ಶನ, ಈ ಕೃತಿಯ ಎರಡನೇ ಪ್ರಶ್ನೆ.

ಗೀತೆಯಲ್ಲಿ ಕಂಡು ಬರುವ ಅರ್ಜುನನ ಪ್ರಶ್ನೆಗಳು ಸ್ಥೂಲರೂಪದ್ದು. ಆದರೆ ಚಿದಂಬರಯ್ಯನವರ ಪ್ರಶ್ನೆಗಳು ಸೂಕ್ಷ್ಮರೂಪದವು. ಈ ಪದ್ಯಗಳ ಪರಿಹಾರ, ಗೀತೆಯನ್ನು ಕಡೆದು ಬೆಣ್ಣೆ ತೆಗೆದ (ಆಳವಾದ ಅಧ್ಯಯನದಿಂದ ಸ್ಥಿರಪಡಿಸಿದ ತಿರುಳುಭಾಗ) ಸಾರವಂತ ತಿರುಳು, ಹೇಳಬೇಕಾದ ವಿಷಯವನ್ನು ಕೇಳುವವನಿಗೆ ಮನದಟ್ಟಾಗುವಂತೆ ಹೇಳುವ (ಬೋಧಿಸುವ) ಕಲೆ.

ಪ್ರಶ್ನೆ ೧೬ಕ್ಕೆ ಸಂಬಂಧ ಪಟ್ಟಂತೆ ಗೀತೆಯ ೪೦ನೇ ಶ್ಲೋಕದಲ್ಲಿ, ಫಲವನ್ನು ಕೊಡುವುದು ಕರ್ಮಮಾರ್ಗದ ಧರ್ಮ ಎಂದು ಹೇಳಿ, ವಿವೇಕದಿಂದ ಮಾಡಿದ ಕರ್ಮ ಯೋಗವು ಮಾತ್ರ, ಮಾನವನನ್ನು ಜನನ ಮರಣಗಳಿಂದ ಮುಕ್ತನನ್ನಾಗಿಸುತ್ತದೆ ಎಂದಿದೆ. ಚಿದಂಬರಯ್ಯನವರು ಇದನ್ನು ಸ್ಪಷ್ಟವಾಗಿ "ಇದನ್ನು ವಿವೇಕಿಗಳು ಮಾತ್ರ ಪಡೆಯುತ್ತಾರೆ" ಎಂದು ವಿಷಯದ ತಿರುಳನ್ನು ತಿಳಿಸಿದ್ದಾರೆ.

ಪ್ರಶ್ನೆ ೧೮ರ ಉತ್ತರ ಸೂತ್ರ ರೂಪದಿಂದ ಮೂಡಿ ಬಂದಿದೆ. "ಬಯಸಿದರೆ ಬಯಸಿದಷ್ಟು ಬರುತ್ತದೆ. ಬಯಸದಿದ್ದರೆ ಜ್ಞಾನವಾಗಿ ಸರ್ವಫಲಗಳೂ ಬಂದಂತಾಗುತ್ತದೆ" ಎಂದಿದ್ದಾರೆ. ಈ ಮಾತು ತಿರುಳೇನೋ ಹೌದು, ಆದರೆ ಪಾಠಕರಿಗೆ ಕಬ್ಬಿಣ ಕಡಲೆಯಾಗಬಹುದು. ವೇದಗಳಲ್ಲಿ ಹೇಳಿರುವ ಕಾಮ್ಯ ಕರ್ಮಗಳಿಂದ, ಫಲಗಳು ಸಿದ್ಧಿಸುತ್ತವೆ. ಆ ಫಲಗಳು ಹುಟ್ಟು ಸಾವಿನ ಸಂಸಾರವನ್ನು ಕಳೆಯುವುದಿಲ್ಲ. ನಿಷ್ಕಾಮ ಕರ್ಮ ಯೋಗದಿಂದ, ಆ ಕಾರ್ಯಗಳನ್ನು ಆಚರಿಸಿದಾಗ ಅದರಿಂದ ಲಭಿಸುವ ಫಲಗಳು ಸಾಮಾನ್ಯವಾಗಿ ಸುಬುದ್ಧಿಯನ್ನುಂಟು ಮಾಡಿ, ಮುಂದೆ ಜ್ಞಾನ ಉದಯವಾಗಿ, ಜ್ಞಾನದಿಂದ ಲಭಿಸುವ ಫಲಗಳು ಎಲ್ಲಾ ಸಾಮಾನ್ಯ ಫಲಗಳಿಗಿಂತ ಉತ್ತಮವಾದ ಫಲ ಅಂದರೆ ಮೋಕ್ಷಕ್ಕೆ ದಾರಿಯಾಗುತ್ತದೆ. ಇಷ್ಟೆಲ್ಲ ಅರ್ಥವನ್ನು ಶ್ರೀಯುತರು, ಎರಡು ಸಾಲಿನ ಉತ್ತರದಲ್ಲಿ ಅಡಗಿಸಿಟ್ಟಿದ್ದಾರೆ.

ಗೀತೆಯನ್ನು ಓದಿ ಮುಗಿಸಿದ ಜಿಜ್ಞಾಸುವಿಗೆ ತಾನು ಓದಿ ತಿಳಿದುದನ್ನು ವಿಮರ್ಶೆ ಮಾಡಲು, ಚಿದಂಬರಯ್ಯನವರ "ಗೀತೆಯ ತಿರುಳು" ಒರೆಗಲ್ಲು, ಗೀತೆಯ ತಿರುಳನ್ನೂ ಒಮ್ಮೆ ಓದಿದರೆ ತಾವು ಓದಿದ್ದೆಲ್ಲವೂ ಮನಸ್ಸಿಗೆ ಗೋಚರಿಸಿ, ಮತ್ತೆ ಗೀತೆಯನ್ನು ಓದಿದ ಅನುಭವವಾಗುತ್ತದೆ. ಅಲ್ಲದೇ ಅದರ ತಿರುಳಿನ ಭಾಗ ಸ್ಪಷ್ಟವಾಗುತ್ತದೆ. ಈ ಕೃತಿಯಲ್ಲಿ ಪ್ರಶ್ನೆಗಳು ಅದಕ್ಕೆ ಉತ್ತರಗಳೂ ಇರುವುದರಿಂದ, ಗೀತೆಯನ್ನು ಓದುವಾಗ ಅಥವಾ ಓದಿದ ನಂತರ 'ಗೀತೆಯ ತಿರುಳನ್ನು' ಓದಿದರೆ ಗೀತೆಯ ಅಂತರಾತ್ಮವೆಲ್ಲ ಗೋಚರವಾಗುತ್ತದೆ.

ಮಾನ್ಯ ಹೊಸಕೆರೆ ಚಿದಂಬರಯ್ಯನವರು ಶಾಲಾ ಮಾಸ್ತರು ಮಾತ್ರವಲ್ಲ. ಅವರು ನಾಡಿನ ಜನತೆಗೆ ಜ್ಞಾನ ಬೋಧೆ ಮಾಡಿದ ಮಹನೀಯರು. ಅವರ ಅನುಪಸ್ಥಿತಿಯಲ್ಲಿ ಅವರ ಕೃತಿಗಳು ಜನತೆಗೆ ಜ್ಞಾನ ಮಾರ್ಗವನ್ನು ತೋರುತ್ತಾ ಸಾಗಿವೆ.

ಗೀತೆಯಲ್ಲಿನ ಜ್ಞಾನ ಭಂಡಾರವನ್ನು ಶ್ರೀಮಾನ್ ಹೊಸಕೆರೆ ಚಿದಂಬರಯ್ಯನವರು, ಬೆಟ್ಟವನ್ನು ಕನ್ನಡಿಯಲ್ಲಿ ಹಿಡಿದಂತೆ, ಗೀತೆಯನ್ನು ತಮ್ಮ "ಗೀತೆಯ ತಿರುಳಿನಲ್ಲಿ ಹಿಡಿದಿಟ್ಟಿದ್ದಾರೆ. ಗೀತೆಯ ತಿರುಳಿನ ಆಕಾರ ಗಾತ್ರ ಚಿಕ್ಕದು, ಅದನ್ನು ತೆರೆದು ನೋಡಿ ಓದಿದವರಿಗೆ ಜ್ಞಾನ ಭಂಡಾರವೇ ತಮ್ಮೆದುರಿಗೆ ಇರುವಂತೆ ಗೋಚರಿಸುತ್ತದೆ.

ಇಂಥ ಅಮೂಲ್ಯವಾದ ಗ್ರಂಥರಾಜ ೭೦ ವರ್ಷಗಳಿಂದ ಮರೆಯಲ್ಲಿದ್ದು ಶ್ರೀಯುತರು ಡಾ॥ ಟಿ.ವಿ.ರಾಜು ಹಾಗೂ ಪ್ರೊ॥ ಅಶ್ವತ್ಥನಾರಾಯಣರವರ ನಿಸ್ವಾರ್ಥ ಸೇವೆಯಿಂದ ಮತ್ತೆ ಬೆಳಕು ಕಂಡಿದೆ. ಶ್ರೀಮಾನ್ ಪ್ರೊ॥ ಅಶ್ವತ್ಥನಾರಾಯಣರವರ ಶ್ರಮ ವಹಿಸಿ ಸಂಪಾದಿಸಿ ಸಿದ್ಧಗೊಳಿಸಿದ್ದಾರೆ. ಅವರ ಸಾಹಿತ್ಯಸೇವೆ ಅಪಾರವಾದುದು. ಅವರ ಜ್ಞಾನಭಂಡಾರ ದೊಡ್ಡದು. ಬಳಲಿಕೆಯನ್ನರಿಯದೆ ಕನ್ನಡ ಸಾರಸ್ವತ ಸೇವೆಯಲ್ಲಿ ನಿರತರಾಗಿರುವ ಅವರಿಗೆ ಆಯುರಾರೋಗ್ಯ ಉಂಟಾಗಲೆಂದು ಹಾರೈಸುತ್ತೇನೆ.

****

ಸುಲಭವಾಗಿಸಿದ ಲಿಪಿ ಕಲಿಕೆ : ಸುಲಭ ಕನ್ನಡ ಲಿಪಿ ಕಲಿಕೆ

ಸಂಧ್ಯಾ. ವಿ.
ಚರವಾಣಿ : ೯೯೮೬೧೬೪೮೯೦

'ಸುಲಭ ಕನ್ನಡ ಲಿಪಿ ಕಲಿಕೆ' ಇದೊಂದು ೪೮ ಪುಟಗಳ ಸಣ್ಣ ಪುಸ್ತಕ. ಇದನ್ನು ೧೯೯೮ರಲ್ಲಿ ಪ್ರೊ. ಅಶ್ವತ್ಥನಾರಾಯಣ ಅವರು ಕ್ಯಾಲಿಫೋರ್ನಿಯಾಗೆ ಹೋಗಿದ್ದಾಗ, ಅಲ್ಲಿನ ಕನ್ನಡ ಮನೆಮಾತಿನ ಮಕ್ಕಳಿಗೆ, ಕನ್ನಡ ಲಿಪಿ ಕಲಿಸಲೆಂದು ರಚಿಸಿದ್ದಾರೆ. ಇದನ್ನು India Literacy Project, California ದವರು ೨೦೦೦ ದಲ್ಲಿ ಪ್ರಕಾಶನ ಮಾಡಿದ್ದಾರೆ.


ಹೆಸರೇ ತಿಳಿಸುವಂತೆ ಸುಲಭವಾಗಿ ಕನ್ನಡ ಲಿಪಿಯನ್ನು ಕಲಿಸಲು ಇದು ಬಹಳ ಅನುಕೂಲಕರವಾಗಿದೆ. ವಿದೇಶದಲ್ಲಿರುವ ಕನ್ನಡ ಮನೆಮಾತಿನ ಮಕ್ಕಳಿಗಷ್ಟೇ ಅಲ್ಲದೆ, ಇಂದು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳಿಗೂ ಕೂಡ ಇದರ ಅಗತ್ಯವಿದೆ. ಮುನ್ನುಡಿಯಲ್ಲಿ ಪ್ರೊ.ಅನಾಜಿ ಅವರೇ ಹೇಳಿರುವಂತೆ ಇದನ್ನು ಕನ್ನಡ ಮಾತನಾಡಲು ಮಾತ್ರ ಬರುವ, ಓದಲು, ಬರೆಯಲು ಬರದಿರುವವರನ್ನು ಗಮನದಲ್ಲಿರಿಸಿಕೊಂಡು ರಚಿಸಲಾಗಿದೆ. ಕನ್ನಡ ಲಿಪಿ ಕಲಿಸುವಲ್ಲಿ ಬಳಸುವ ಅಕ್ಷರಮಾಲಾಪದ್ಧತಿ, ಪದಪದ್ಧತಿ, ವಾಕ್ಯಪದ್ಧತಿ, ಲಿಪಿವಿನ್ಯಾಸ ಪದ್ಧತಿ, ಚಿತ್ರಪದ್ಧತಿ ಎಂಬ ಹಲವಾರು ಪದ್ಧತಿಗಳನ್ನು ಸಮನ್ವಯಗೊಳಿಸಿದ್ದರೂ, ವಿಶಿಷ್ಟವಾಗಿ ಅಕ್ಷರಮಾಲಾಪದ್ಧತಿಗೆ ಹೆಚ್ಚು ಗಮನ ಹರಿಸಿ ಈ ಕಿರುಹೊತ್ತಿಗೆಯನ್ನು ರಚಿಸಲಾಗಿದೆ. ಇದು ಕನ್ನಡ ಓದಲು-ಬರೆಯಲು ಬಾರದ ಮಕ್ಕಳಿಗೆ ಲಿಪಿ ಕಲಿಸಲು ಸುಲಭ ಕೈಪಿಡಿಯಾಗಿದ್ದರೂ, ಕನ್ನಡ ಬಲ್ಲವರಿಗೂ ಕನ್ನಡ ವೈಶಿಷ್ಟ್ಯಗಳನ್ನು ಪರಿಚಯಿಸುತ್ತದೆ. ವಿನೋಬಾಭಾವೆ ಅವರು ಕನ್ನಡ ಲಿಪಿಯನ್ನು 'ಲಿಪಿಗಳ ರಾಣಿ' ಎಂದಿದ್ದಾರೆ. ಕನ್ನಡ ಲಿಪಿಗಳ ವಿನ್ಯಾಸವು ಬಳ್ಳಿಯ ರೀತಿಯಲ್ಲಿ ಬಳುಕಿರುವ ಅಂದವನ್ನು ಹಲವರು ಹಾಡಿ ಹೊಗಳಿದ್ದಾರೆ. ಇಲ್ಲಿ ಅವುಗಳ ವೈಶಿಷ್ಟ್ಯವನ್ನು ಗುರುತಿಸಿ, ವೈಜ್ಞಾನಿಕ ರೀತಿಯಲ್ಲಿ ವರ್ಗಗಳನ್ನು ಮಾಡಿ ತೋರಿಸಿದ್ದಾರೆ. ಇದು ಕಲಿಸುವ ಅಧ್ಯಾಪಕರಿಗೆ ಆಧಾರ ಗ್ರಂಥದ ರೂಪದಲ್ಲಿದೆ.

ಕಲಿಕೆಯ ಹಂತದ ವಿಭಾಗ:

ಅಕ್ಷರಗಳನ್ನು ಕಲಿಸುವುದರಲ್ಲಿ ಮೂರು ಮುಖ್ಯ ವಿಭಾಗಗಳನ್ನು ಮಾಡಿಕೊಂಡಿದ್ದಾರೆ. ಅದರಲ್ಲಿ, ಪ್ರತ್ಯೇಕ ಅಧ್ಯಾಯಗಳ ಮೂಲಕ ವಿವರವಾಗಿ ಕಲಿಕೆಯ ಕ್ರಮವನ್ನು ಪ್ರಾಯೋಗಿಕವಾಗಿ ತಿಳಿಸಿಕೊಟ್ಟಿದ್ದಾರೆ.


ಮೊದಲನೆಯ ವಿಭಾಗದಲ್ಲಿ ಕನ್ನಡ ವರ್ಣಮಾಲೆ, ಒತ್ತಕ್ಷರ ಹಾಗೂ ೧-೧೦ರ ವರೆಗಿನ ಕನ್ನಡ ವರ್ಣಮಾಲೆ ಹಾಗೂ ೧-೧೦ರ ವರೆಗಿನ ಅಂಕಿಗಳನ್ನು ಕೊಟ್ಟಿದ್ದಾರೆ. ವರ್ಣಮಾಲೆಯಲ್ಲಿ ನಾಲ್ಕು ಕಾಲಂಗಳಲ್ಲಿ, ಸಚಿತ್ರವಾಗಿ ಅಕ್ಷರಗಳನ್ನು ಗುರುತಿಸುವುದು, ಬರೆಯುವ ಕ್ರಮ, ಆಯಾ ಅಕ್ಷರಗಳಿಂದ


ಆರಂಭವಾಗುವ ವಸ್ತುಗಳ ಚಿತ್ರ, ಕ್ರಮವಾಗಿ 'ಅ' ಯಿಂದ ಆರಂಭವಾಗುವ ಪದಗಳನ್ನು ಕೊಡಲಾಗಿದೆ. ಇಲ್ಲಿ ಅಕ್ಷರಗಳನ್ನು ಹೇಗೆ ಆರಂಭಿಸಿ ಬರೆಯಬೇಕೆನ್ನುವುದನ್ನು directios ಮೂಲಕ ತೋರಿಸಿದ್ದಾರೆ. ಇದನ್ನು ಅ-ಳ ವರೆಗಲ್ಲದೆ, ಜ್ಞ, ಫ಼, ಙ ವಿಶೇಷ ಅಕ್ಷರಗಳನ್ನೂ ಸೇರಿಸಿದ್ದಾರೆ.



ಒತ್ತಕ್ಷರ: ಕಲಿಕೆಯ ಹಂತದಲ್ಲಿ ಕಾಗುಣಿತ ಹಾಗೂ ಒತ್ತಕ್ಷರಗಳು ಬಹಳ ಮುಖ್ಯ. ಕಲಿಸುವಾಗ ಗೊಂದಲ ರಹಿತವಾಗಿ ಹೇಳಿಕೊಡುವುದು ಬಹಳ ಮುಖ್ಯ. ಒತ್ತಕ್ಷರಗಳನ್ನು ನಾಲ್ಕು ವಿಭಾಗ ಮಾಡಿಕೊಂಡಿದ್ದಾರೆ.

ಕೆಲವು ಒತ್ತಕ್ಷರಗಳನ್ನು ಅದೇ ಅಕ್ಷರಗಳ ರೂಪದಲ್ಲಿಯೇ, ಸಣ್ಣದಾಗಿ ಬರೆಯಲಾಗುತ್ತದೆ. ಉದಾಹರಣೆಗೆ: ಜ್ಜ, ಬ್ಬ, ಟ್ಟ, ಖ್ಖ, ವ್ವ. ಮತ್ತೆ ಕೆಲವು ಅಕ್ಷರಗಳಿಗೆ, ತಲಕಟ್ಟನ್ನು ಮಾತ್ರ ತೆಗೆದು ಬಳಸಲಾಗುತ್ತದೆ. ಉದಾ: ಗ್ಗ, ಡ್ಡ, ದ್ದ, ಳ್ಳ, ಹ್ಹ, ಠ್ಠ ಮೊದಲಾದವು. ಇನ್ನು ಕೆಲವು ಅಕ್ಷರಗಳಿಗೆ ಅವುಗಳ ಬಿಂದುವಿನೊಂದಿಗೆ ತಲಕಟ್ಟನ್ನೂ (ರ) ತೆಗೆದು ಬಳಸಲಾಗುತ್ತದೆ. ಉದಾಹರಣೆಗೆ: ಕ್ಕ, ಚ್ಚ, ಪ್ಪ, ಸ್ಸ, ಮೊದಲಾದವು. ಆರು ಒತ್ತಕ್ಷರಗಳನ್ನು ಮಾತ್ರ ವಿಭಿನ್ನ ರೂಪದಲ್ಲಿ ಬಳಸಲಾಗುತ್ತದೆ. ಅವೆಂದರೆ, ಮ್ಮ, ನ್ನ, ತ್ತ, ರ್ರ. ಲ್ಲ, ಯ್ಯ ಈ ಒತ್ತಕ್ಷರಗಳಿಗೂ ಮೂಲ ಅಕ್ಷರಗಳಿಗೂ ಬಹಳ ವ್ಯತ್ಯಾಸಗಳಿವೆ. ಕಲಿಸುವವರು ಈ ಆರು ಅಕ್ಷರಗಳನ್ನು ನೆನಪಿಟ್ಟುಕೊಳ್ಳಲು 'ಮಂತ್ರಾಲಯ' ಎಂಬ ಸುಲಭ ಸೂತ್ರವನ್ನು ಕೊಟ್ಟಿದ್ದಾರೆ.





ಕನ್ನಡ ಅಂಕಿಗಳು: ಕನ್ನಡ ಅಂಕಿಗಳನ್ನು ಆರು ಕಾಲಂ ಗಳಲ್ಲಿ ಕೊಟ್ಟು ಸುಲಭವಾಗಿ ಕಲಿಸುವ ವಿಧಾನವನ್ನು ತಿಳಿಸಿಕೊಟ್ಟಿದ್ದಾರೆ. ಮೊದಲನೆಯ ಕಾಲಂನಲ್ಲಿ ಕನ್ನಡ ಅಂಕಿಗಳು, ಎರಡನೆಯ ಕಾಲಂನಲ್ಲಿ ಅಂಕಿಗಳನ್ನು ಬರೆಯುವ ವಿಧಾನ ದಿಕ್ಸೂಚಿಯೊಂದಿಗೆ, ಮೂರು ನಾಲ್ಕು ಐದನೆಯ ಕಾಲಂಗಳಲ್ಲಿ ತತ್ಸಮಾನ ಇಂಗ್ಲಿಷ್, ಹಿಂದಿ, ರೋಮನ್ ಅಂಕಿಗಳನ್ನು ಕೊಟ್ಟು ಕಡೆಯ ಕಾಲಂನಲ್ಲಿ ಸಂಖ್ಯೆಗಳ ಸಂಕೇತಗಳನ್ನು ಚಿತ್ರದಲ್ಲಿ ಕೊಡಲಾಗಿದೆ. ಉದಾಹರಣೆಗೆ ಒಂದು = ಸೂರ್ಯ, ಎರಡು = ಕಣ್ಣುಗಳು, ಮೂರು = ತ್ರಿಶೂಲ, ನಾಲ್ಕು= ದಿಕ್ಕುಗಳು, ಐದು = ಬೆರಳುಗಳು.. ಹೀಗೆ ಹತ್ತರವರೆಗೂ ನೀಡಲಾಗಿದೆ.

ಎರಡನೆಯ ವಿಭಾಗ: ಎರಡನೆಯ ವಿಭಾಗದಲ್ಲಿ ಕಾಗುಣಿತದ ಪರಿಚಯ ಮಾಡಿಕೊಟ್ಟಿದ್ದಾರೆ. ಇಲ್ಲಿ ಕ–ಳ ವರೆಗಿನ ಅಕ್ಷರಗಳಿಗೆ ಕಾಗುಣಿತಗಳನ್ನು ಏಳು ಪುಟಗಳಲ್ಲಿ ವಿಭಾಗ ಮಾಡಿಕೊಂಡು ಕಲಿಸುವ ಪ್ರಯತ್ನ ಬಹಳ ಸೂಕ್ತವಾಗಿ ಮಾಡಿದ್ದಾರೆ. ಈ ಏಳು ಪುಟಗಳಲ್ಲಿ ಪ್ರತ್ಯೇಕವಾಗಿ ಕ–ಳ ವ್ಯಂಜನಗಳಿಗೆ ಅ–ಆ, ಇ–ಈ, ಉ–ಊ, ಋ, ಎ–ಏ–ಐ, ಒ–ಓ–ಔ, ಅಂ–ಅಃ ಸ್ವರಗಳು ಸೇರಿದಾಗ ಮೂಡುವ ಗುಣಿತಾಕ್ಷರಗಳನ್ನು, ಪದಗಳ ಉದಾಹರಣೆಗಳೊಂದಿಗೆ ಕಲಿಸುವ ಪ್ರಯತ್ನ ವಿಶಿಷ್ಟವಾಗಿದೆ.

ಈ ಏಳು ಪುಟಗಳಲ್ಲಿಯೂ ಮೇಲ್ಭಾಗದ ಪಟ್ಟಿಕೆಯಲ್ಲಿ ಕ ಅಕ್ಷರದ ಉದಾಹರಣೆಯನ್ನು ಪ್ರತ್ಯೇಕವಾಗಿ ಕೊಡುತ್ತಾರೆ. ಅ–ಆ ಸ್ವರದ ಪಾಠ ಗಮನಿಸಿದಾಗ ಕ್ + ಅ = ಕ; ಕ್ + ಆ = ಕಾ ಇದನ್ನು ಮೊದಲ ಪಟ್ಟಿಕೆಯಲ್ಲಿ ನೀಡಿ, ನಂತರದ ಪಟ್ಟಿಕೆಯಲ್ಲಿ ಅ, ಆ ಸ್ವರದೊಂದಿಗೆ ವ್ಯಂಜನಗಳು ಸೇರಿ ಆಗಿರುವ ಪದಗಳ ಉದಾಹರಣೆಗಳನ್ನು ನೀಡಿದ್ದಾರೆ. ಆಹಾರ, ಟಪಾಲ್, ಕಾಗದ, ಗಾಣ, ಭಾರತ ವಾಚನ, ಮರದ ಗಾಣ, ಮಾವನ ಕಾಗದ. ಈ ಉದಾಹರಣೆಗಳಲ್ಲಿ ವ್ಯಂಜನ, ಅ ಮತ್ತು ಆ ಸೇರಿದ ಸ್ವರಗಳನ್ನು ಬಳಸಿಕೊಂಡ ಪದಗಳೊಂದಿಗೆ ಒಂದೆರಡು ಪದಗಳ ವಾಕ್ಯ ಮರದ ಗಾಣ, ಮಾವನ ಕಾಗದ, ರಾಮನಾಥ ಬಂದ ಮೊದಲಾದ ಉದಾಹರಣೆಗಳನ್ನೂ ಕೊಟ್ಟಿದ್ದಾರೆ.

ಪುಟದ ಕಡೆಯಲ್ಲಿ, ಆಯಾ ವ್ಯಂಜನ, ಅದರೊಂದಿಗೆ ಸ್ವರಗಳನ್ನು ಸೇರಿಸಿದಾಗ ಮೂಡುವ ಕಾಗುಣಿತಾಕ್ಷರಗಳನ್ನು ಕೊಟ್ಟಿದ್ದಾರೆ.

ಮೂರನೆಯ ವಿಭಾಗ:

ಕನ್ನಡ ಬರವಣಿಗೆಯಲ್ಲಿ ಕಾಗುಣಿತ, ಒತ್ತಕ್ಷರಗಳ ಕಲಿಕೆ ಬಹಳ ಮುಖ್ಯ. ಪ್ರಪಂಚದಾದ್ಯಂತ ಕಂಡುಬರುವ ವಿಭಿನ್ನ ಭಾಷೆಗಳಿಗೆ ಬಳಸುವ ಲಿಪಿಗಳಲ್ಲಿ ಚೈನಾ ಭಾಷೆಯ ಲಿಪಿಯು ಬಹಳ ಕಷ್ಟವಾದದ್ದೆಂದು ಹೇಳಲಾಗುತ್ತದೆ. ಪ್ರತಿಯೊಂದು ಉಚ್ಚಾರಣೆಗೂ ಅವರು ಚಿತ್ರ ಸಂಕೇತಗಳ ಮೂಲಕ ಬಳಸುವ ಸಾವಿರಾರು ಸಂಖ್ಯೆಯ ಅಕ್ಷರಗಳನ್ನು ನೆನಪಿಟ್ಟುಕೊಳ್ಳಬೇಕಾಗುತ್ತದೆ. ಕನ್ನಡದಲ್ಲಿಯೂ ಕೂಡ ಸ್ವರ-ವ್ಯಂಜನಗಳೊಂದಿಗೆ ಗುಣಿತಾಕ್ಷರ, ಸಜಾತಿ, ವಿಜಾತಿ ಒತ್ತಕ್ಷರಗಳನ್ನು ಪ್ರತ್ಯೇಕವಾಗಿ ಗಣನೆಗೆ ತೆಗೆದುಕೊಂಡರೆ, ಸಾವಿರಕ್ಕೂ ಮೀರಿದ ಅಕ್ಷರಗಳಾಗುತ್ತವೆ. ಆದರೆ, ಕನ್ನಡ ಲಿಪಿಯು ವೈಜ್ಞಾನಿಕ ರೀತಿಯ ರಚನೆ ಆಗಿರುವುದರಿಂದ, ಸ್ವರ-ವ್ಯಂಜನಾಕ್ಷರಗಳ ಕಲಿಕೆ ಪ್ರಧಾನವಾಗಿದೆ. ಆದರೂ, ಅವುಗಳಿಗೆ ಗುಣಿತಾಕ್ಷರ, ಒತ್ತಕ್ಷರಗಳನ್ನು ಸೇರಿಸಿಕೊಳ್ಳುವ ವಿಧಾನವನ್ನು ಸೂಕ್ತರೀತಿಯಲ್ಲಿ ಕಲಿಸುವುದು ಬಹಳ ಮುಖ್ಯ. ಈ ವಿಧಾನವನ್ನು ಪ್ರೊ. ಅಶ್ವತ್ಥನಾರಾಯಣ ಅವರು ಸುಲಭ, ಸರಳ ರೂಪದಲ್ಲಿ ತೋರಿಸಿಕೊಟ್ಟಿದ್ದಾರೆ.

ಮೂರನೆಯ ವಿಭಾಗದಲ್ಲಿ ಗುಣಿತಾಕ್ಷರಗಳೊಂದಿಗೆ ಒತ್ತಕ್ಷರಗಳನ್ನೂ ಸೇರಿಸಿ ಬಳಸುವ ಸರಳ ಕ್ರಮವನ್ನು ತಿಳಿಸಿಕೊಟ್ಟಿದ್ದಾರೆ. ಹತ್ತನೆಯ ಪುಟದಲ್ಲಿ ವಿಭಾಗಿಸಿಕೊಂಡಿರುವ ಒತ್ತಕ್ಷರಗಳ ಕ್ರಮದಲ್ಲಿಯೇ ಇಲ್ಲಿ ವಿವರವಾಗಿ ಹೇಳಿಕೊಡಲಾಗಿದೆ. ಮೊದಲು ಮೂಲ ಅಕ್ಷರಗಳನ್ನೇ ಹೋಲುವ ಒತ್ತಕ್ಷರ ಜ್ಜ, ಟ್ಟ, ಣ್ಣ ಮೊದಲಾದವುಗಳನ್ನು ಸಜಾತಿ, ವಿಜಾತಿ ಒತ್ತಕ್ಷರಗಳನ್ನು ಹೇಳಿಕೊಟ್ಟು, ನಂತರ ಮೂಲ ಅಕ್ಷರಗಳನ್ನೇ ಹೋಲುವ, ತಲಕಟ್ಟು ಮಾತ್ರ ಇರದ ಒತ್ತಕ್ಷರ ಗ್ಗ, ಡ್ಡ, ದ್ದ ಮೊದಲಾದ ಒತ್ತಕ್ಷರ, ಆನಂತರ ತಲಕಟ್ಟಿನೊಂದಿಗೆ ಬಿಂದುವನ್ನು ತೆಗೆದು ಬಳಸುವ ಒತ್ತಕ್ಷರ ಕ್ಕ, ಚ್ಚ, ಪ್ಪ ಮೊದಲಾದ ಒತ್ತಕ್ಷರ, ಕಡೆಯ ಭಾಗವಾಗಿ ವಿಭಿನ್ನ ರೂಪದಲ್ಲಿ ಬಳಸುವ ಮ್ಮ, ನ್ನ, ತ್ತ, ರ್ರ. ಲ್ಲ, ಯ್ಯ ಗಳಲ್ಲಿ ಸಜಾತಿ-ವಿಜಾತಿ ಒತ್ತಕ್ಷರಗಳ ಪದಗಳ, ಸಣ್ಣ ಪುಟ್ಟ ವಾಕ್ಯಗಳೊಂದಿಗೆ ಕಲಿಸಬಹುದಾದ ವಿಧಾನವನ್ನು ೨೬ ಪಾಠಗಳಲ್ಲಿ ವಿಭಾಗ ಮಾಡಿಕೊಂಡು ಕ್ರಮಬದ್ಧ ಕಲಿಕೆಯ ವಿಧಾನವನ್ನು ತಿಳಿಸಿಕೊಟ್ಟಿದ್ದಾರೆ.

ಇವುಗಳೊಂದಿಗೆ ಕಡೆಯಲ್ಲಿ ಪುಸ್ತಕದ ಒಳ ರಕ್ಷಾಕವಚದ ಭಾಗವನ್ನೂ ಬಳಸಿಕೊಂಡು, ಹಿಂದೆ ಬಾಯಿಪಾಠ ಕಲಿಕೆಯಲ್ಲಿ ಹೇಳಿಕೊಡುತ್ತಿದ್ದ ವಾರಗಳು, ತಿಂಗಳು, ಮಾಸ, ಋತುಗಳು, ತಿಥಿ-ಪಕ್ಷಗಳು, ಪ್ರಮುಖ ಹಬ್ಬಗಳು, ಸಮಯ, ಸಂವತ್ಸರಗಳ ಕೋಷ್ಟಗಳನ್ನು ನೀಡಿದ್ದಾರೆ. ಇವು ಬರವಣಿಗೆ, ಬಾಯಿಪಾಠ ಎರಡಕ್ಕೂ ಅನುಕೂಲವಾಗಿವೆ. ಹೊರ ರಕ್ಷಾಪುಟದಲ್ಲಿ ಸ್ವತಂತ್ರಪೂರ್ವ ನಾಡಗೀತೆ, ರಾಷ್ಟ್ರಗೀತೆಗಳನ್ನೂ ಕೊಟ್ಟಿದ್ದಾರೆ.

ವಿದೇಶದಲ್ಲಿರುವ ಕನ್ನಡ ಮನೆಮಾತಿನ ಮಕ್ಕಳ ಕಲಿಕೆಗೆ ಅನುಕೂಲವಾಗುವಂತಹ ಈ ಪುಸ್ತಕವನ್ನು ರಚಿಸಲಾಗಿದೆ. ಆದರೆ, ಪ್ರಸ್ತುತ ಕನ್ನಡ ನಾಡಿನ ಶಾಲೆಗಳಲ್ಲಿ ಕನ್ನಡ ಕಲಿಕೆಯನ್ನು ಎರಡನೆಯ ದರ್ಜೆಯಿಂದ ಮೂರನೆಯ ದರ್ಜೆಗೆ ಇಳಿಸುತ್ತಿರುವ ಶೋಚನೀಯ ಸಂದರ್ಭ ಎದುರಾಗಿದೆ. ಶಾಲೆಗಳಲ್ಲಿ ಇಂಗ್ಲಿಷ್ ಮೂಲಕ ಕನ್ನಡವನ್ನು ಕಲಿಸುವ ಸ್ಥಿತಿ ಬಂದೊದಗಿದೆ. ಸುಲಭ ಕನ್ನಡ ಲಿಪಿ ಕಲಿಕೆಯ ಈ ಪುಸ್ತಕವು ಇಲ್ಲಿನ ಪುಸ್ತಕ ಮಳಿಗೆಗಳಲ್ಲಿ ಲಭಿಸಿದಲ್ಲಿ ಆಸಕ್ತ ಪೋಷಕರು

ತಮ್ಮ ಮಕ್ಕಳಿಗೆ ಸುಲಭವಾಗಿ ಕನ್ನಡ ಕಲಿಸುವ ಕೈಪಿಡಿಯಂತಿರುವ ಈ ಪುಸ್ತಕ ಮರುಮುದ್ರಣ ಆಗುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಪ್ರೊ. ಅಶ್ವತ್ಥನಾರಾಯಣ ಅವರು ಈ ಪುಸ್ತಕವನ್ನು ಪರಿಷ್ಕರಿಸುವ ಕಾರ್ಯವನ್ನೂ ನಡೆಸುವ ಆಲೋಚನೆ ನಡೆಸಿದ್ದಾರೆ.

'ಆಳಾಗಬಲ್ಲವ ಅರಸನಾಗಬಲ್ಲ' ಎಂಬ ಗಾದೆ ಮಾತಿದೆ. ಸಣ್ಣಪುಟ್ಟ ವಿಚಾರಗಳನ್ನು, ಸೂಕ್ಷ್ಮತೆಗಳನ್ನು ಅರಿತವರು ಉತ್ತಮ ಆಡಳಿತಗಾರರಾಗುತ್ತಾರೆ. ಅದರಂತೆ, ಕನ್ನಡದ ಕಲಿಕೆಯ ಸೂಕ್ಷ್ಮತೆ, ಕಲಿಕೆಯ ತೊಡಕನ್ನು ಅರ್ಥಮಾಡಿಕೊಂಡವರಿಗೆ ಪರಿಹಾರ ಸೂಚಿಸುವ ಆಲೋಚನೆ ಮೂಡುತ್ತದೆ. ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಪಿ.ಎಚ್.ಡಿ ಸಂಪ್ರಬಂಧ ರಚಿಸುವವರಿಗೆ ಮಾರ್ಗದರ್ಶನ. ಮಾಡುವವರಾಗಿ, ಹಳಗನ್ನಡ, ನಡುಗನ್ನಡ ಗ್ರಂಥಗಳನ್ನು ಸಂಪಾದನೆ ಮಾಡುವ ಕಾರ್ಯ ನಿರ್ವಹಿಸಿದವರು, ಇಂತಹ ಬಾಲಬೋಧೆಗಳನ್ನು ಕುರಿತು ಸೂಕ್ಷ್ಮವಾಗಿ ಆಲೋಚಿಸಿ, ಉತ್ತಮ ಕಲಿಕೆಯ ಪುಸ್ತಕವನ್ನು ರಚಿಸುವುದು ಇಂತಹ ಅಪರೂಪದ ಗುರುಗಳಿಗೆ ಮಾತ್ರ ಸಾಧ್ಯ.

*****

ಸೌಂದರ್ಯ ಲಹರೀ ಸ್ತೋತ್ರ ದೀಪಿಕೆ

ಟೀಕೆ ಮತ್ತು ಪದ್ಯಾನುವಾದ

ಕೆ.ಪಿ. ರತ್ನಾಕರ ಭಟ್ಟ
ಚರವಾಣಿ : ೯೪೪೮೬೫೮೩೧೪

ಓಂಕಾರಪಂಜರಶುಕೀಂ ಉಪನಿಷದುದ್ಯಾನ ಕೇಳೀಕಲಕಂಠೀಮ್ ।
ಆಗಮವಿಪಿನ ಮಯೂರೀಂ ಆರ್ಯಾಮಂತರ್ವಿಭಾವಯೇ ಗೌರೀಮ್ ॥

ಓಂಕಾರ ಎಂಬುದು ಒಂದು ಆಕಾಶಬುಟ್ಟಿಯಂತಿರುವ ಅನೇಕ ತ್ರಿಕೋಣಾಕೃತಿಗಳ ಜೋಡಣೆಯ ಒಂದು ಪಂಜರ. ಅದರೊಳಗಿರುವ ಒಂದು ಗಿಣಿಯೇ ಸರ್ವಾಂತರ್ಯಾಮಿಯಾದ ಭಗವಚ್ಛಕ್ತಿ. ಉಪನಿಷತ್ತುಗಳೆಂಬ ಉದ್ಯಾನವನದಲ್ಲಿ ರಾಜ ಠೀವಿಯಿಂದ ಗಂಭೀರವಾಗಿ ಕ್ರೀಡೆಯಾಡುವ ಸಿಂಹಿಣಿಯೇ ಆ ಶಕ್ತಿ. ಆಗಮವೆಂಬ ವಿಪಿನ ಅಥವಾ ಕಾಡಿನಲ್ಲಿ ನಲಿಯುವ ನವಿಲು ಆ ಭಗವಚ್ಛಕ್ತಿ. ಆರ್ಯಾಂ ಎಂದರೆ ಅತ್ಯಂತ ಶ್ರೇಷ್ಠವಾದ, ಗೌರವಾನ್ವಿತವಾದ ಮತ್ತು ಜಗನ್ಮಾತೃ ಸ್ವರೂಪವಾದ ಗೌರೀ ದೇವಿಯೇ ನನ್ನ ಆಂತರ್ಯದಲ್ಲಿ ವಿಶೇಷವಾಗಿ ಆವಿರ್ಭವಿಸು ಎಂಬ ಪ್ರಾರ್ಥನೆಯೊಂದಿಗೆ ಈ ಪರಮ ಪವಿತ್ರವಾದ ಕಾರ್ಯವನ್ನು ಪ್ರ-ಆರಂಭಿಸುತ್ತಿದ್ದೇನೆ. ಆ ಭಗವಚ್ಛಕ್ತಿಯಿಂದಲೇ ಆಪ್ತಿ, ಉತ್ಕರ್ಷ ಹಾಗೂ ಮಾನ (ಅಕಾರ, ಉಕಾರ ಮತ್ತು ಮಕಾರ) ಅಥವಾ ವ್ಯಕ್ತಿಗಳ, ವಸ್ತುಗಳ ಹಾಗೂ ವಿಷಯಗಳ ರಚನೆ, ಬೆಳವಣಿಗೆ ಹಾಗೂ ಉಪಸಂಹಾರಗಳು ಆಗುವುದು. ಅದುವೇ ಓಂಕಾರ.

"ಚತುರ್ಥಮ್ ಮನ್ಯಂತೇ । ಸ ಆತ್ಮಾ । ಸ ವಿಜ್ಞೇಯಃ ।" ಎಂಬ ಉಪನಿಷದ್-ವಾಣಿಯಂತೆ, ಜಗತ್ತಿನಲ್ಲಿಯ ವ್ಯಕ್ತಿಗಳನ್ನಾಗಲೀ, ವಸ್ತುಗಳನ್ನಾಗಲೀ ಅಥವಾ ವಿಷಯಗಳನ್ನಾಗಲೀ ಪರಮಾತ್ಮಶಕ್ತಿಯು ಕರುಣಿಸಿರುವ ನಾಲ್ಕನೇ ದಿವ್ಯಚಕ್ಷುಸ್ಸಿನಿಂದಲೇ ದರ್ಶಿಸಿದಾಗ, ರಹಸ್ಯಾರ್ಥಗಳು ಗೋಚರಿಸುತ್ತವೆ! ಈ ನಿಟ್ಟಿನಲ್ಲಿ ನನ್ನ ಆತ್ಮೀಯರಾದ ಶ್ರೀಯುತ ಪ್ರೊ. ಜಿ. ಅಶ್ವತ್ಥನಾರಾಯಣ ಅವರು "ಸೌಂದರ್ಯಲಹರೀ ದೀಪಿಕೆ" ಎಂಬ ಶೀರ್ಷಿಕೆಯಲ್ಲಿ ಮೂಲ ಶ್ಲೋಕಗಳ ಸಂಗ್ರಹ, ಶ್ರೀಯುತ ಎಂ.ವಿ.ಸೀ. ಅವರ ಪದ್ಯಾನುವಾದದ ಸಹಿತ ಶ್ರೀಯುತ ಬಿ.ಎಸ್. ಕಪಿನೀಪತಯ್ಯನವರ ವ್ಯಾಖ್ಯಾನವನ್ನೂ ಸಂಪಾದಿಸಿ ಗ್ರಂಥ ರೂಪದಲ್ಲಿ ಲೋಕಾರ್ಪಣೆ ಮಾಡಿರುವುದು ಶ್ಲಾಘನೀಯ.

ಸಾಮಾನ್ಯವಾಗಿ ಸೌಂದರ್ಯ ಎಂದೊಡನೆಯೇ ಸಂಕುಚಿತ ದೃಷ್ಟಿಯ ಗಂಡಸರಿಗೆ, ಸ್ತ್ರೀಯರ ಶರೀರದ ಸೌಂದರ್ಯವನ್ನೇ ವಿವರಿಸಲಾಗಿದೆ ಎಂಬ ಅಭಿಪ್ರಾಯವು ಬರುವುದು ಸಹಜ. ಆದರೆ, ಪ್ರಕೃತಿಯಲ್ಲಿ ಸ್ತ್ರೀಯರ ಅಂಗಾಂಗಗಳ ನಿರ್ಮಾಣವೂ ಅತ್ಯದ್ಭುತವಲ್ಲವೇ? ಅದರ ಬಗ್ಗೆಯೇ

ತಪಸ್ಸೆಂಬಂತೆ ಚಿಂತಿಸುತ್ತಾ ಹೋದರೆ, ಆಗಲೂ ಅಗಾಧವಾದ ಜ್ಞಾನಪ್ರಾಪ್ತಿಯೇ ಆಗುವುದು! ಒಂದು ಹೆಣ್ಣಿನ ದೇಹವನ್ನು ತಯಾರಿಸುವ ನೋಡೋಣ! ರಕ್ತವನ್ನು ತಯಾರಿಸುವ ವಿಧಾನವನ್ನು ನೋಡೋಣ. ಹೀಗೆಯೇ ಸರ್ವವೂ ಅತ್ಯದ್ಭುತ ಮತ್ತು ಆಶ್ಚರ್ಯ! ಆದರೆ, ಸೌಂದರ್ಯ ಎಂದರೆ ಅಭಿವ್ಯಕ್ತವಾದ ರೂಪ ಅಷ್ಟೇ! ಶಕ್ತಿಯು ಅವ್ಯಕ್ತ. ಶಕ್ತಿಯ ಆಧಿಕ್ಯವೇ ಸೌಂದರ್ಯ! ಉದಾಹರಣೆಗೆ, ಸೂರ್ಯನಲ್ಲಿ ಅತ್ಯಧಿಕವಾದ ಶಕ್ತಿಯು ಇರುವುದರಿಂದ ಅವನ ಸುತ್ತಲೂ ಅಲ್ಪಶಕ್ತಿಯ ಗ್ರಹೋಪಗ್ರಹಗಳು ಪರಿಭ್ರಮಿಸುತ್ತಿವೆ -- "ಯಾವತ್ ವಿತ್ತ ಉಪ ಆರ್ಜನ ಸಕ್ತಃ । ತಾವತ್ ನಿಜ ಪರಿವಾರಃ ಆಸಕ್ತಃ ।" ಎಂದಂತೆ.

ಹೀಗೆ ಸರ್ವ ಸಮನ್ವಯ ದೃಷ್ಟಿಯಿಂದ ಅವಲೋಕಿಸಿದಾಗ, ಭಗವದಾರಾಧನಾ ಸಂಹಿತೆಗಳಾದ ಶ್ರೀ ಲಲಿತಾ ಸಹಸ್ರನಾಮ ಬೇರೆಯಲ್ಲ, ದುರ್ಗಾ ಸಪ್ತಶತಿಯು ಬೇರೆಯಲ್ಲ, ಶ್ರೀಮದ್ಭಗವದ್ಗೀತೆಯು ಬೇರೆಯಲ್ಲ, ವೇದಮಂತ್ರಗಳು, ಉಪನಿಷದ್ವಾಕ್ಯಗಳು ಬೇರೆಯಲ್ಲ. "ಏಕತ್ವಮನುಪಶ್ಯತಃ" ಎಂದಂತೆ, ಒಂದೇ ಅದ್ವೈತ ಪ್ರತಿಪಾದಕವಾದ ಶಕ್ತಿಯನ್ನೇ ವಿರಾಟ್ ರೂಪದ ಸಕಲ ಸಂಹಿತೆಗಳಲ್ಲೂ ಕಾಣಬಹುದಾಗಿದೆ.

ಶ್ರೀಯುತ ಅಶ್ವತ್ಥನಾರಾಯಣ ಅವರು ಸೌಂದರ್ಯ ಲಹರಿಯ ಮೇಲೆ ಬಂದಿರುವ ಮತ್ತು ಬರುತ್ತಿರುವ ಅನೇಕ ವ್ಯಾಖ್ಯಾನಗಳನ್ನು ಸಂಗ್ರಹಿಸಿದ್ದಾರೆ. ಈ ಸಂಹಿತೆಯನ್ನು ಪರಿಷ್ಕರಿಸಿ, ವಿದ್ವತ್ಪೂರ್ಣವಾದ ಪ್ರಸ್ತಾವನೆ, ಮೂಲಶ್ಲೋಕಗಳ ಪಾಠಾಂತರ, ಪದವಿಭಾಗ, ತಾತ್ಪರ್ಯ ಟಿಪ್ಪಣಿ, ಯಂತ್ರಾರಾಧನೆ, ಪದ್ಯಗಳ ಅಕಾರಾದಿ ಸಮಾನ ಶ್ಲೋಕಗಳ ಪಟ್ಟಿ, ಹಾಗೂ ಅನುಬಂಧಗಳೊಡನೆ, ವಾಚಕರ ಅನುಕೂಲಕ್ಕಾಗಿ ಲೋಕಾರ್ಪಣೆ ಮಾಡಿದ್ದಾರೆ. ಸೌಂದರ್ಯ ಲಹರೀ ಅಥವಾ ಇನ್ನಿತರ ಯಾವುದೇ ವೈದಿಕ ಸಾಹಿತ್ಯವಾದರೂ ಸೈ ನಾವು ಚಿಂತನೆಯಲ್ಲಿ ಆಳಕ್ಕಿಳಿದಷ್ಟೂ ಎತ್ತರಕ್ಕೇರಿರುತ್ತೇವೆ! ಅನೇಕ ವ್ಯಾಖ್ಯಾನಗಳು ಸಂಸ್ಕೃತ ಮತ್ತು ಇನ್ನಿತರ ಭಾಷೆಗಳಲ್ಲಿ ಬಂದಿರುವುದನ್ನೂ ಸಂಗ್ರಹ ಮಾಡಿ ತಿಳಿಸಿದ್ದಾರೆ. ಈ ಸಂಹಿತೆಯನ್ನು "ಸೌಂದರ್ಯ ಲಹರೀ ಸ್ತೋತ್ರ ಶತಕ" ಎಂದಿರುವುದರಿಂದ, ಕೆಲವೆಡೆ ೧೦೩ ಶೋಕಗಳನ್ನು ಅಳವಡಿಸಿದ್ದರೂ ಒಂದೇ ಶ್ಲೋಕದ ವ್ಯಾಖ್ಯಾನ ಸರ್ವ ಶ್ಲೋಕಗಳ ಅರ್ಥವನ್ನೂ ತೋರಬಲ್ಲದು! ಉದಾಹರಣೆಗೆ ಈ ಕೆಳಕಂಡ ಶ್ಲೋಕವನ್ನು ಅವಲೋಕಿಸೋಣ.

ಕ್ಷಿತೌ ಷಟ್-ಪಂಚಾಶತ್ ದ್ವಿ-ಸಮಧಿಕ್ ಪಾಂಚಾಶತ್ ಉದಕೇ
ಹುತಾಷೇ ದ್ವಾ-ಷಷ್ಟಿಃ ಚತುಃ+ಅಧಿಕ ಪಂಚಾಶತ್ ಅನಿಲೇ ।
ದಿವಿ ದ್ವಿ-ಷಟ್-ತ್ರಿಂಶತ್ ಮನಸಿ ಚ ಚತುಷಷ್ಟಿಃ ಇತಿ ಯೇ
ಮಯೂಖಾಃ ತೇಷಾಂ ಅಪಿ ಉಪರಿ ತವ ಪಾದಾಂಬುಜಯುಗಮ್ ॥

ಈ ಶ್ಲೋಕಕ್ಕೆ ಅನೇಕರು ವ್ಯಾಖ್ಯಾನವನ್ನು ಬರೆದಿದ್ದಾರೆ. ಆದರೆ, ಭಗವಂತನ ಪ್ರಕಾರ, ಎಲ್ಲವನ್ನೂ ದಿವ್ಯ ಚಕ್ಷುವಿನಿಂದಲೇ ನೋಡಿದಾಗ ಹೊಳೆಯುವ ಅರ್ಥವೇ ಸರಿ ಎನ್ನುವುದು. ಸಮಸ್ತ ವೈದಿಕ ಸಾಹಿತ್ಯವೂ ಮಾನವಕೋಟಿಗೇ ಇರುವುದರಿಂದ, ಎಲ್ಲವನ್ನೂ ಎಲ್ಲದಕ್ಕೂ ಹಾಗೂ ಮಾನವರ ಕುರಿತಾದ ಕುಂಡಲಿನೀ ಶಾಸ್ತ್ರಕ್ಕೂ ಸಮನ್ವಯ ಮಾಡುವುದು ಅನಿವಾರ್ಯವಾಗಿದೆ. ವೇದ ಮಂತ್ರಕ್ಕೆ ಸಮನ್ವಯ ಮಾಡಿದಾಗ, ಆತ್ಮನೇ ಆಕಾಶವಾಗಿ, ಪ್ರಾಣವಾಯುವಾಗಿ, ಅಗ್ನಿಯಾಗಿ, ವರುಣನಾಗಿ, ಭೂಮಿಯಾಗಿ ಹಾಗೂ ಭೂಮಿಯ ಮೇಲಿನ ಸಸ್ಯ, ಕ್ರಿಮಿ-ಕೀಟಗಳು, ಪಕ್ಷಿಗಳು, ಪ್ರಾಣಿಗಳು,

ಮಾನವ ಜೀವ ಮುಂತಾದ ವಿರಾಟ್ ರೂಪದಲ್ಲಿ ಸಂಭವಿಸಿದ್ದಾನೆ. ಇದುವೇ ಓಂ, ಶ್ರೀಂ, ಹ್ರೀಂ, ಕ್ಲೀಂ, ಐಮ್, ಲಂ ಇತ್ಯಾದಿ ಬೀಜಾಕ್ಷರಗಳು. ಮತ್ತೆ ಹಿಂದಕ್ಕೆ (ಸ್ಥೂಲದಿಂದ ಸೂಕ್ಷ್ಮಕ್ಕೆ) ಹೋಗುವ ಬೀಜಮಂತ್ರಾಕ್ಷರಗಳೇ ಗಾಯತ್ರೀ ಮಂತ್ರದ, ಓಂ ಭೂಃ, ಓಂ ಭುವಃ, ಇತ್ಯಾದಿ ಏಳು ಬೀಜಾಕ್ಷರಗಳು. ಈ ಪ್ರಕಾರದಲ್ಲಿ ಈ ಶ್ಲೋಕಾರ್ಥವನ್ನು ಸೂಕ್ಷ್ಮ ಬುದ್ಧಿಯಿಂದ ಗಮನಿಸಿದಲ್ಲಿ, ಭೂತತ್ತ್ವದಲ್ಲಿ ಕೇವಲ ೫೬ ಕಿರಣಸಾಹಸ್ರಗಳನ್ನೂ, ಜಲ ತತ್ತ್ವದಲ್ಲಿ ೫೬ + ೫೨ = ೧೦೮ ಕಿರಣಸಾಹಸ್ರಗಳನ್ನೂ, ಅನಲ ಅಥವಾ ಅಗ್ನಿತತ್ತ್ವದಲ್ಲಿ ೫೬ + ೫೨ + ೬೨ = ೧೭೦ ಕಿರಣಸಾಹಸ್ರವನ್ನೂ, ವಾಯುತತ್ತ್ವದಲ್ಲಿ ೫೬ + ೫೨ + ೬೨ + ೫೪ = ೨೨೪ ಕಿರಣ ಸಾಹಸ್ರಗಳನ್ನೂ, ಆಕಾಶತತ್ತ್ವದಲ್ಲಿ ೫೬ + ೫೨ + ೬೨ + ೫೪ + ೭೨ = ೨೯೬ ಕಿರಣಸಾಹಸ್ರಗಳನ್ನೂ ಹಾಗೂ ಮನಸ್ ತತ್ತ್ವದಲ್ಲಿ ೫೬ + ೫೨ + ೬೨ + ೫೪ + ೭೨ + ೬೪ = ೩೬೦ ಒಟ್ಟು ಕಿರಣಸಾಹಸ್ರಗಳನ್ನೂ ಪಸರಿಸುವ ಶಕ್ತಿ ಎನ್ನಲಾಗಿದೆ. ಭೂತತ್ತ್ವಕ್ಕೆ ಕಿರಣಗಳು ಅನೇಕ ಪದರಗಳನ್ನು ದಾಟಿ ಬರುವಷ್ಟರಲ್ಲಿ ಕೇವಲ ೫೬ ಆಗಿರುತ್ತದೆ ಎಂಬರ್ಥ. ಇದನ್ನು ಒಂದರ ಮೇಲೊಂದು ಪದರಗಳ ಕೂಲಿಂಗ್ ಗ್ಲಾಸ್ ಇಟ್ಟಂತೆ ಪರಿಕಲ್ಪನೆ ಮಾಡಿಕೊಂಡಾಗ ಸತ್ಯಾಂಶವು ಗೋಚರಿಸಬಲ್ಲದು. ಇದು ನಾರಾಯಣ ಸೂಕ್ತದಲ್ಲಿಯ ಮಂತ್ರಕ್ಕೂ ಸಮನ್ವಯವಾಗುತ್ತದೆ -- "ತಿರ್ಯಕ್ ಊರ್ಧ್ವಂ ಅಧಃ ಶಾಯೀ । ರಶ್ಮಯಃ ತಸ್ಯ ಸಂತತಃ । ಸಂ-ತಾಪಯತಿ ಸ್ವಂ ದೇಹಂ ಆಪಾದತಲ ಮಸ್ತಕಃ" ಎಂಬುವುದಾಗಿದೆ.

ಹಾಗೆಯೇ, ಈ ಸಂಹಿತೆಯನ್ನು ಶ್ರೀ ಭಗವತ್ಪಾದರು ರಚಿಸಿದರೇ? ಒಂದುವೇಳೆ ಹೌದಾದರೆ ಯಾವಾಗ ರಚಿಸಿದರು? ಇತ್ಯಾದಿ ಚರ್ಚೆಗಳು ನಡೆದಿವೆ. ಕೇವಲ ಚರ್ಚೆಯಲ್ಲೇ ಕಾಲವನ್ನು ವ್ಯರ್ಥ ಮಾಡುವುದಕ್ಕಿಂತಲೂ "ಬ್ರಹ್ಮ ತಲ್ಲಕ್ಷ್ಯಮುಚ್ಯತೇ" ಎಂದಂತೆ, ನಮ್ಮ ಲಕ್ಷ್ಯ ಅಥವಾ ಗುರಿಯು ಪ್ರಜ್ಞಾನದ ಕಡೆಗೇ ಇರಬೇಕೆನ್ನಲಾಗಿದೆ. ಈ ನಿಟ್ಟಿನಲ್ಲಿ ಪ್ರೊಫೆಸರ್. ಶ್ರೀಯುತ ಅಶ್ವತ್ಥನಾರಾಯಣ ಅವರು ಅದ್ಭುತವಾದ ಕಾರ್ಯವನ್ನೇ ಸಾಧಿಸಿದ್ದಾರೆ. ಪ್ರತಿಯೊಂದು ಶ್ಲೋಕದಲ್ಲೂ ಪದಚ್ಛೇದ, ಪ್ರತಿಪದದ ಅರ್ಥ, ಸಾರಾಂಶಾರ್ಥ, ಇತ್ಯಾದಿಗಳನ್ನು ಕೊಟ್ಟು ಸಾಮಾನ್ಯ ವಾಚಕರಿಗೂ ಸುಲಭ ಗ್ರಾಹ್ಯವಾಗಿಸಿದ್ದಾರೆ.

ಮೊದಲಿಗೆ ವಿಷಯಾನುಕ್ರಮಣಿಕೆ, ಕೊನೆಯಲ್ಲಿ ಅಕಾರಾದಿ ವಿಷಯಸೂಚೀ, ಇತ್ಯಾದಿ ಸರ್ವಾಲಂಕಾರಗಳೊಂದಿಗೆ ಕಾವ್ಯಕನ್ನಿಕೆಯನ್ನು ಅಲಂಕರಿಸಿ ಪರಮಾತ್ಮನಿಗೇ ಸಮರ್ಪಿಸಿದ್ದಾರೆ. ತನ್ಮೂಲಕ ಧನವಂತರಾಗಿದ್ದಾರೆ, ಧನ್ಯರಾಗಿದ್ದಾರೆ ಹಾಗೂ ಇನ್ನೂ ಮಹದೋತ್ಸಾಹಿಗಳಾಗಿ ಸಾಹಿತ್ಯ ಸೇವೆಯನ್ನು ಮಾಡುತ್ತಲೇ ಇದ್ದಾರೆ. ಇವರಿಗೆ ಬೆನ್ನೆಲುಬಿನಂತೆ, ಇವರ ಕುಟುಂಬ ವರ್ಗವೂ ಸಹಕಾರಿಯಾಗಿರುವುದರಿಂದ, ಅವರ ಪ್ರೋತ್ಸಾಹದಿಂದ, ಇನ್ನೂ ಅನೇಕಾನೇಕ ಸದ್ಗ್ರಂಥಗಳು ಕನ್ನಡ ನಾಡಿನಲ್ಲಿ ಉದಯವಾಗಲೆಂದು ಹಾರೈಸುತ್ತೇನೆ. ಅವರಿಗೆ ಮತ್ತು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಸಕಲ ರೀತಿಯಲ್ಲೂ ಆಯುರಾರೋಗ್ಯಾದಿ ಸಕಲೈಶ್ವರ್ಯಗಳನ್ನಿತ್ತು ಸಲಹಲೆಂದು ಪ್ರಾರ್ಥಿಸುತ್ತಿದ್ದೇನೆ. "ವರ್ಧತಾಮಭಿವರ್ಧತಾಮ್".

*****

ವಿದ್ಯಾಸಂಸ್ಥೆಗಳ ಸ್ಥಾಪಕರ ಕಥನ

ಬಿ.ಕೆ. ಗೋಪಣ್ಣ
ಚರವಾಣಿ : ೯೮೮೬೩೩೦೩೧೫

ಕನ್ನಡ ಸಾರಸ್ವತ ಲೋಕದಲ್ಲಿ ಅನಾಜಿ ಎಂದು ಚಿರಪರಿಚಿತವಾದವರೇ ಪ್ರೊ. ಜಿ. ಅಶ್ವತ್ಥನಾರಾಯಣ ಅವರು. ಕಳೆದ ಏಳು ದಶಕಗಳಿಂದ ಕನ್ನಡ ನಾಡು ನುಡಿ ಸೇವೆಯನ್ನು ಎಲೆಮರೆ ಕಾಯಿಯಂತೆ ಮಾಡುತ್ತಿದ್ದಾರೆ. ಕನ್ನಡ ಅಧ್ಯಾಪಕರಾಗಿ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಬೋಧಿಸುತ್ತಾ ಜನಪ್ರಿಯ ಪ್ರಾಧ್ಯಾಪಕ ವಿದ್ಯಾರ್ಥಿಗಳ ಮೆಚ್ಚುಗೆ ಪಡೆದಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡಿದ ಸಾವಿರಾರು ವಿದ್ಯಾರ್ಥಿಗಳು ಇಂದು ಉತ್ತಮ ವಿದ್ಯಾವಂತರಾಗಿರುವುದು ಮಾತ್ರವಲ್ಲದೆ ಉನ್ನತ ಹುದ್ದೆಗಳನ್ನು ಅಲಂಕರಿಸಿ ದೇಶವಿದೇಶಗಳಲ್ಲಿ ಗಣ್ಯಾತಿಗಣ್ಯರಾಗಿದ್ದಾರೆ. ಕನ್ನಡ ಸಾಹಿತ್ಯ, ಜೈನ ಸಾಹಿತ್ಯ, ದಾಸ ಸಾಹಿತ್ಯ ಮೊದಲಾದ ವಿಷಯಗಳ ಬಗ್ಗೆ ಸಾವಿರಾರು ಉಪನ್ಯಾಸಗಳನ್ನು ಮಾಡಿ ಉತ್ತಮ ವಾಗ್ಮಿಗಳು ಎನಿಸಿಕೊಂಡಿದ್ದಾರೆ. ಎಂ.ಎ., ಎಂ.ಫಿಲ್., ಪಿ.ಎಚ್.ಡಿ. ವಿದ್ಯಾರ್ಥಿಗಳಿಗೆ, ಕೆ.ಎ.ಎಸ್, ಐ.ಎ.ಎಸ್. ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಸರ್ಕಾರಿ ಅಧಿಕಾರಿಗಳಿಗೆ, ಸಿಬ್ಬಂದಿ ವರ್ಗದವರಿಗೆ ಆಡಳಿತ ಕನ್ನಡ ತರಬೇತಿ ಶಿಬಿರಗಳನ್ನು ಆಯೋಜಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ಧರ್ಮಸ್ಥಳ ಸಾಹಿತ್ಯ ಸಮ್ಮೇಳನದ ಯಶಸ್ಸಿನ ರೂವಾರಿಗಳಾಗಿದ್ದಾರೆ.

ವಿದ್ಯಾರ್ಥಿ ದೆಸೆಯಲ್ಲಿಯೇ ಹಲವಾರು ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಸಾಕಷ್ಟು ಬಹುಮಾನಗಳನ್ನು ಪಡೆದಿದ್ದಾರೆ. ಸಾಹಿತ್ಯ ಪರಿಷತ್ತಿನ ದಿಗ್ಗಜರ ಸಾಮೀಪ್ಯದಲ್ಲಿ ಬೆಳೆದು ಬಂದಿದ್ದಾರೆ. ಅನಕೃ, ರಾಮಮೂರ್ತಿ ಮೊದಲಾದವರ ಕನ್ನಡ ಚಳುವಳಿಯ ಆರಂಭಿಕ ಕಾರ್ಯಕರ್ತರಲ್ಲಿ ಒಬ್ಬರಾಗಿದ್ದಾರೆ. ಕಾಲೇಜು ಶಿಕ್ಷಣ ನಿರ್ದೇಶನಾಲಯ , ಸಾರ್ವಜನಿಕ ಶಿಕ್ಷಣ ಇಲಾಖೆ , ಕನ್ನಡ ಸಾಹಿತ್ಯ ಪರಿಷತ್ತು ಇತ್ಯಾದಿಗಳ ಪಠ್ಯಪುಸ್ತಕ ರಚನಾ ಕಾರ್ಯಗಾರಗಳಲ್ಲಿ ಸದಸ್ಯರಾಗಿ ಪಾಲ್ಗೊಂಡಿದ್ದಾರೆ. ಅಖಿಲ ಕರ್ನಾಟಕ ಮಕ್ಕಳ ಕೂಟದ ಮಕ್ಕಳ ಸಮ್ಮೇಳನಗಳನ್ನು ಆಯೋಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಹೀಗೆ ಅಧ್ಯಾಪನ, ಸಂಶೋಧನ, ಉಪನ್ಯಾಸ, ಹೋರಾಟಗಳ ಜೊತೆ ಜೊತೆ ನಲವತ್ತಕ್ಕೂ ಮಿಗಿಲಾಗಿ ಗ್ರಂಥಗಳನ್ನು ರಚಿಸಿದ್ದಾರೆ, ಸಿದ್ಧಪಡಿಸಿದ್ದಾರೆ ಹಾಗೂ ಸಂಪಾದಿಸಿದ್ದಾರೆ. ಆರ್.ವಿ. ಇನ್ಸಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸಂಸ್ಥೆಯ ಸಿಂಚನ ಕನ್ನಡ ವೇದಿಕೆಯ ಅಡಿಯಲ್ಲಿ ಬಿ ಎ ಪಾಂಡು ಸ್ಮೃತಿ ಗ್ರಂಥ ಮಾಲಿಕೆಯಲ್ಲಿ ಮುವ್ವತ್ತೊಂದು ಗ್ರಂಥಗಳನ್ನು ಸಂಪಾದಿಸಿದ್ದಾರೆ. ಇವುಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎರಡು ಗ್ರಂಥಗಳಿವೆ. 'ಶಿಷ್ಯರು ಕಂಡಂತೆ ಗುರುಗಳು' ಮತ್ತೊಂದು 'ವಿದ್ಯಾಸಂಸ್ಥೆಗಳ ಸ್ಥಾಪಕರ ಕಥನ'. ಶಿಷ್ಯರು ಕಂಡಂತೆ ಗುರುಗಳು ಗ್ರಂಥದಲ್ಲಿ ಮೂರು ತಲೆಮಾರಿನ

ಗುರು-ಶಿಷ್ಯರ ಬಾಂಧವ್ಯ ಎದ್ದು ಕಾಣುತ್ತದೆ. ಬಾಳಿಗೆ ಬೆಳಕಾಗುವ ವ್ಯಕ್ತಿತ್ವವನ್ನು ರೂಪಿಸುವ ಲೋಕೋಪಕಾರಿ ಕೆಲಸ ಮಾಡುವಂತೆ ಸ್ಫೂರ್ತಿ ತುಂಬುವ ಶಿಕ್ಷಕರನ್ನು ಇಲ್ಲಿ ನೋಡಬಹುದು. ಅವರ ಬೋಧನಾ ವಿಧಾನ, ಶಿಷ್ಯರ ಮೇಲೆ ಅದು ಬೀರಿದ ಪ್ರಭಾವ ಎಲ್ಲವೂ ಇಲ್ಲಿ ಕಂಡುಬರುತ್ತವೆ. ಗುರುಗಳ ಬಳಿ ಪಾರಂಗತರಾದ ಆ ರೀತಿಯ ಶಿಷ್ಯರೇ ತಮ್ಮ ತಮ್ಮ ಗುರುಗಳ ಬಗ್ಗೆ ಬರೆದ ಲೇಖನಗಳ ಸಂಗ್ರಹ ಇದಾಗಿದೆ. ತಮ್ಮ ಗುರುಗಳ ಮಾರ್ಗದರ್ಶನದಿಂದಲೇ ಜನ್ಮ ಪುನೀತರಾದ ಶಿಷ್ಯರ ಬಗೆ ಬಗೆಯ ನಿರೂಪಣೆಗಳು ಇಲ್ಲಿ ಕಾಣಸಿಗುತ್ತವೆ. "ಹೊಸ ಚಿಗುರು ಹಳೆಬೇರು ಕೂಡಿರಲು ಮರ ಸೊಬಗು" ಎನ್ನುವ ಡಿವಿಜಿಯವರ ಮಾತಿನಂತೆ ಹಳೆಯ ತಲೆಮಾರಿನ ಅಧ್ಯಾಪಕರ ಪಾಂಡಿತ್ಯ, ತಮ್ಮ ಶಿಷ್ಯರ ಬಗೆಗಿನ ಪ್ರೀತಿ ವಾತ್ಸಲ್ಯಗಳ ಮಮತೆಯ ಕುಡಿಯನ್ನು ಲೇಖನ ಬಿಂಬಿಸುತ್ತದೆ. ತಮ್ಮ ಗುರುಗಳಷ್ಟೇ ಮನೋ ವಾಂಛಲ್ಯವನ್ನು ಹೊಸ ತಲೆಮಾರಿನ ಗುರುಗಳಲ್ಲೂ ಕಾಣಬಹುದು ಎಂಬ ಅಂಶ ಇಲ್ಲಿಯ ಲೇಖನಗಳಿಂದ ಸ್ಪಷ್ಟವಾಗುತ್ತದೆ.

ವಿದ್ಯಾ ಸಂಸ್ಥೆಗಳ ಸಂಸ್ಥಾಪಕರ ಕಥನ 19 ಹಾಗೂ 20ನೇ ಶತಮಾನಗಳಲ್ಲಿ ಬೆಂಗಳೂರು ನಗರದಲ್ಲಿ ದೇಶಿಯ ಶಿಕ್ಷಣ ಪ್ರೇಮಿಗಳು , ಸಾಹಿತಿ ವಿದ್ವಾಂಸರು , ಸಮಾಜ ಸೇವಾ ಧುರಂಧರರಿಂದ ಶಿಕ್ಷಣ ಸಂಸ್ಥೆಗಳು ಸ್ಥಾಪಿತವಾದವು. ಹೀಗೆ ಪ್ರಾರಂಭವಾದ ಶಿಕ್ಷಣ ಸಂಸ್ಥೆಗಳ ಸ್ಥಾಪಕರು ತಮ್ಮ ವೈಯಕ್ತಿಕ ಜೀವನದ ಬಗ್ಗೆ ಚಿಂತಿಸಲಿಲ್ಲ. ಸಮಾಜದ ಯುವಜನ ಒಳ್ಳೆಯ ವಿದ್ಯಾವಂತರಾಗಿ ಸಮಾಜ ಹಾಗೂ ದೇಶಸೇವೆಯಲ್ಲಿ ನಿರತರಾಗಬೇಕು ಎಂಬ ಮಹದಾಸೆ ಅವರದಾಗಿತ್ತು. ಆ ಮಹನೀಯರ ನಿಷ್ಕಳಂಕ ಸ್ವಾರ್ಥರಹಿತ ಮನೋಭಾವ ಪರಿಶ್ರಮ ಆದರ್ಶಗಳು ಮುಂದಿನ ತಲೆಮಾರು ಅಕ್ಷರ ಶ್ರೀಮಂತವಾಗಲು ಕಾರಣವಾದವು. ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಹಾಗೂ ವಿದ್ಯಾ ಪ್ರಸಾರಕ್ಕೆಂದೇ ಅವರೆಲ್ಲ ತಮ್ಮ ಬಾಳನ್ನು ಅರ್ಪಿಸಿಕೊಂಡರು. ತಮ್ಮ ಕುಟುಂಬ ನಡೆಸುವುದೇ ಕಷ್ಟಸಾಧ್ಯವಾದರೂ ಅದನ್ನು ಲೆಕ್ಕಿಸದೆ, ಎದುರಾದ ತೊಂದರೆಗಳನ್ನು ನಿವಾರಿಸಿಕೊಂಡು ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ, ಅದರ ಬೆಳವಣಿಗೆಯೇ ತನ್ನ ಧ್ಯೇಯ ಎಂದು ಬಾಳಿದರು. ಆ ಮಹನೀಯರ ಜೀವನದ ಹೋರಾಟಗಳ ಕಿರು ಪರಿಚಯ ಮುಂದಿನ ಜನಾಂಗ ತಿಳಿಯಲಿ ಎಂಬುದೇ ಈ ಗ್ರಂಥದ ಪ್ರಮುಖ ಉದ್ದೇಶ. ಹೀಗಾಗಿ ಶಿಕ್ಷಣ ಸಂಸ್ಥೆಗಳ ಸ್ಥಾಪಕರ ಜೀವನ ಸಾಧನೆಗಳ ಯಶೋಗಾಥೆ ಇಂದಿನ ಯುವ ಜನಾಂಗಕ್ಕೆ ಸ್ಫೂರ್ತಿ, ಉತ್ಸಾಹ ತುಂಬಬೇಕು ಎಂಬುದು ಈ ಕೃತಿಯ ಆಶಯವಾಗಿದೆ. ಸಾಧಕರು ಶ್ರಮವಹಿಸಿ ಅಂದು ನೆಟ್ಟ ಶಿಕ್ಷಣ ಸಂಸ್ಥೆ ಎಂಬ ಸಸಿ ಇಂದು ಬೃಹದಾಕಾರವಾಗಿ ಬೆಳೆದು ಹಲವಾರು ಕುಟುಂಬಗಳಿಗೆ ಆಶ್ರಯ ನೀಡುತ್ತಿದೆ .

ಬಿಎ ಪಾಂಡು ಸ್ಮೃತಿ ಗ್ರಂಥಮಾಲೆಯ 31ನೆಯ ಪ್ರಕಟಣೆ 'ವಿದ್ಯಾಸಂಸ್ಥೆಗಳ ಸ್ಥಾಪಕರ ಕಥನ' ಕೃತಿಯಲ್ಲಿ ದೀರ್ಘವಾದ ಕ್ಷೇತ್ರಕಾರ್ಯ ಇರುವುದನ್ನು ಕಾಣಬಹುದು. ಬೆಂಗಳೂರು ನಗರದಲ್ಲಿನ ಸುಮಾರು ನೂರಕ್ಕೂ ಹೆಚ್ಚು ಶಾಲೆಗಳಿಗೆ ಭೇಟಿ ನೀಡಿ ಆ ಶಾಲೆಯ ಸ್ಥಾಪಕರ ಜೀವನದ ಹೋರಾಟಗಳ ಬಗ್ಗೆ ವಿವರಗಳನ್ನು ನೀಡುವಂತೆ ವಿನಂತಿಸಿ, ಅದನ್ನು ಪ್ರಕಟ ಮಾಡಬೇಕಾಗಿರುವ ಗ್ರಂಥದಲ್ಲಿ ಉಪಯೋಗಿಸಿಕೊಳ್ಳುವುದಾಗಿ ತಿಳಿಸಿ ಶಾಲಾ ಮುಖ್ಯಸ್ಥರು ಹಾಗೂ ಆಡಳಿತ ಮಂಡಳಿಯವರಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ಸಂದರ್ಶನ ಮಾಡುವಾಗ ಉತ್ತಮ ಪ್ರತಿಕ್ರಿಯೆ ಪಡೆದಿರುತ್ತಾರೆ. ಸಂದರ್ಶನಕ್ಕೆ ಬಂದವರನ್ನು ತುಂಬಾ ಗೌರವದಿಂದ ಬರ ಮಾಡಿಕೊಂಡಿರುತ್ತಾರೆ. ಶಾಲೆಗಳವರು ತಮ್ಮ ಸಂಸ್ಥೆಯ ಸ್ಥಾಪನೆ ಬೆಳವಣಿಗೆ ಈಗಿರುವ ಸ್ಥಿತಿಗತಿಗಳ ಬಗ್ಗೆ ಲೇಖನ ನೀಡುವ

ಭರವಸೆಯನ್ನು ನೀಡಿರುತ್ತಾರೆ. ಆದರೂ ಸಂಪಾದಕರ ಮನವಿಗೆ ಸ್ಪಂದಿಸಿ ಲೇಖನಗಳನ್ನು ನೀಡಿದ ಸಂಸ್ಥೆಗಳು ಕೇವಲ ಐವತ್ತಾರು ಶಿಕ್ಷಣ ಸಂಸ್ಥೆಗಳು ಮಾತ್ರ. ಹೀಗೆ ಬಂದ ಐವತ್ತಾರು ಶಿಕ್ಷಣ ಸಂಸ್ಥೆಗಳ ಕಥನವನ್ನು ಕಾಲಾನುಕ್ರಮದಲ್ಲಿ ಜೋಡಿಸಿ ಮುದ್ರಿಸಿ 29-3-24 ರಂದು ಲೋಕಾರ್ಪಣೆ ಮಾಡಿರುತ್ತಾರೆ.

ಈ ಕೃತಿಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪಿತವಾದ ಹನ್ನೆರಡು ಶಿಕ್ಷಣ ಸಂಸ್ಥೆಗಳ ಪ್ರಸ್ತಾಪವಿದೆ. ಈಚೆಗೆ ಸ್ಥಾಪಿತವಾದ ನಾಲ್ಕು ಶಿಕ್ಷಣ ಸಂಸ್ಥೆಗಳ ವಿವರವಿದೆ. ಪ್ರತಿ ಒಂದು ಸಂಸ್ಥೆಯ ಮನೆ ಹಾಗೂ ಬೆಳವಣಿಗೆಯ ಹಿಂದೆ ಒಂದೊಂದು ಸಾಹಸಮಯ ಗಾಥೆ ಇದೆ. ಒಂದಕ್ಕಿಂತಲೂ ಒಂದು ಮೇಲು ಎನ್ನುವ ಕಥಾ ಪ್ರಸಂಗಗಳನ್ನು ಸಾರುತ್ತವೆ. ಶ್ರೀ ಕಡ್ಡಾಯವಾಗಿ ಮಾಡಲೇಬೇಕಾಗಿದ್ದ ಪ್ರಾರ್ಥನೆಯನ್ನು ವಿರೋಧಿಸಿ ಆಚಾರ್ಯರು ಹೊರ ನಡೆದಾಗ ಅಲ್ಲಿ ವ್ಯಾಸಂಗ ಮಾಡುತ್ತಿದ್ದ 25 ಮಂದಿ ವಿದ್ಯಾರ್ಥಿಗಳು ಆಚಾರ್ಯರನ್ನು ಹಿಂಬಾಲಿಸಿ ಹೊರಬರುತ್ತಾರೆ. ಹಾಗೆ ಹಿಂದೆ ಬಂದ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕೆ ಅನುವಾಗಲು ಹೊಸ ಶಾಲೆ ಪ್ರಾರಂಭವಾದ ಬಗೆ ರೋಚಕವಾಗಿದೆ. ಬಡತನದಲ್ಲಿ ಜೀವನ ಸಾಗಿಸುವುದೇ ಕಷ್ಟವಾಗಿದ್ದು ಶಾಲೆಗೆ ಹೋಗಲು ಆಗದೇ ಇರುವ ಮಕ್ಕಳಿಗಾಗಿಯೇ ಹೊಸ ಶಾಲೆ ಸ್ಥಾಪಿತವಾದುದು, ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿಯೇ ಪ್ರತ್ಯೇಕ ಶಾಲೆ ಆರಂಭ, ತನ್ನ ಮಗನ ಸಾವಿನ ದುಃಖ ಮರೆಯಲೆಂದೇ ಶಾಲೆ ಸ್ಥಾಪಿಸಿ ಅಲ್ಲಿಗೆ ಬರುವ ಮಕ್ಕಳಲ್ಲಿ ನನ್ನ ಮಗನನ್ನು ನೋಡಿ ಸಂತೋಷ ಪಟ್ಟದ್ದು , ದಾಂಪತ್ಯ ಜೀವನ ಆರಂಭಿಸಿದ ಎರಡು ವರ್ಷಗಳಲ್ಲೇ ಜನ್ಮ ನೀಡಿದ ಮಗ, ಮದುವೆಯಾದ ಗಂಡ ಅಕಾಲ ಮರಣವನ್ನು ಅಪ್ಪಿದುದರಿಂದ ಉಂಟಾದ ದುಃಖ ಮರೆಯಲೆಂದೇ ಶಾಲೆಯೊಂದು ಪ್ರಾರಂಭವಾದುದು, ಗ್ರಾಮಾಂತರ ಪ್ರದೇಶದ ಬಡ ಮಧ್ಯಮ ವರ್ಗ, ವಿಶೇಷವಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲೆಂದೇ ಶಾಲೆಯ ಸ್ಥಾಪನೆ, ವಯಸ್ಸಿನ ಮಗನ ಅಕಾಲಿಕ ಮರಣದಿಂದ ನೊಂದು ಅವನ ನೆನಪಿನಲ್ಲಿ ಶಾಲೆ ಪ್ರಾರಂಭ, ತಮ್ಮ ಪುತ್ರನಿಗೆ ಕಾನ್ವೆಂಟ್ ಶಾಲೆಯಲ್ಲಿ ಅತಿಯಾದ ಶಿಸ್ತು ಹಿಂಸೆ ಕೊಡುವುದನ್ನು ಗಮನಿಸಿದ ತಂದೆ ಶಾಲೆಯ ಮುಖ್ಯಸ್ಥರನ್ನು ಪ್ರಶ್ನಿಸಿದಾಗ ಅವರಾಡಿದ ಮಾತುಗಳನ್ನು ಅರಗಿಸಿಕೊಳ್ಳಲು ಆಗದೆ ಹೊಸ ಶಾಲೆ ಪ್ರಾರಂಭ ಮಾಡಿದುದು – ಹೀಗೆ ಪ್ರತಿ ಒಂದು ಶಾಲೆಯ ಸ್ಥಾಪನೆಯ ಹಿಂದೆ ಒಂದೊಂದು ಮಹತ್ತರವಾದ ಕಾರಣವಿದೆ.

ಕೆಲವು ಶಾಲೆಗಳ ಸ್ಥಾಪನೆಯ ಹಿಂದೆ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೊತ್ತಿಸಿರುವ ಪ್ರಸಂಗಗಳಿವೆ. ಮಹಾತ್ಮ ಗಾಂಧೀಜಿಯವರ ಆದರ್ಶಗಳ ಛಾಪು ಮೂಡಿಸಿವೆ. ತಾವು ಸ್ಥಾಪಿಸಿದ ಶಾಲೆಯ ಶಿಕ್ಷಕರಿಗೆ ಸಂಬಳ ನೀಡಲು ದಾನಿಗಳ ಮನೆಮನೆಗೆ ಸೈಕಲ್ ಹತ್ತಿ ಓಡಾಡುವ, ಅದಕ್ಕಾಗಿ ತಮ್ಮ ಮನೆಯವರ ಒಡವೆಗಳನ್ನು ಅಡವಿಟ್ಟಿರುವ ಪ್ರಸಂಗಗಳು ಓದುಗರ ಮನ ಕರಗುವಂತೆ ಮಾಡುತ್ತವೆ. ಕೆಲವು ಶಾಲೆಗಳವರು ಕಟ್ಟಡ ನಿರ್ಮಾಣದಲ್ಲಿ ಎಲ್ಲಿಲ್ಲದ ಕಷ್ಟಗಳನ್ನು ಅನುಭವಿಸಿರುವ ವಿವರಗಳು ಇಲ್ಲಿವೆ. ಇವೆಲ್ಲ ಸಂಸ್ಥಾಪಕರ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ಬಯಕೆಯ ತೀವ್ರತೆಯನ್ನು ಬಣ್ಣಿಸುತ್ತವೆ. ಬೆರಳೆಣಿಕೆಯಷ್ಟು ಮಂದಿ ವಿದ್ಯಾರ್ಥಿಗಳಿಂದ ಆರಂಭವಾದ ಸಂಸ್ಥೆ ಇಂದು ಬೃಹತ್ತಾಗಿ ಬೆಳೆದು ವಿಶ್ವವಿದ್ಯಾನಿಲಯವಾಗಿರುವುದನ್ನು ಪುಸ್ತಕದಲ್ಲಿ ದಾಖಲಿಸಲಾಗಿದೆ. ಆ ಎಲ್ಲ ಸಾಧಕರ ಸಾಹಸ ಕಥನಗಳು ಖಂಡಿತವಾಗಿ ಯುವಜನಾಂಗದಲ್ಲಿ ಸ್ಫೂರ್ತಿ ತುಂಬುತ್ತವೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

****

ನಾ ಕಂಡಂತೆ ಹಿರಿಯ ಸಾಹಿತಿಗಳು

ಕೆ. ಎಸ್. ನರಸಿಂಗರಾವ್
ಚರವಾಣಿ : ೯೮೬೦೪೨೯೮೦

ಕನ್ನಡ ಸಾಹಿತ್ಯದಲ್ಲಿ ಬರಹಗಾರರ ಬದುಕನ್ನು ಕುರಿತ ವಿವರಗಳು ಜೀವನಚರಿತ್ರೆ, ಆತ್ಮಕಥನ, ವ್ಯಕ್ತಿಚಿತ್ರ ಮುಂತಾದ ಗದ್ಯಪ್ರಕಾರಗಳಲ್ಲಿ ಈಚೆಗೆ ಸಾಕಷ್ಟು ಬಂದಿವೆ. ಪಂಡಿತಮಾನ್ಯವಾದ ಹಿಂದಿನ ಕಾವ್ಯಗಳಲ್ಲಿ ಕವಿಗಳು ತಮ್ಮ ಸ್ವವಿಷಯದ ಬಗೆಗೆ ಸ್ವಲ್ಪ ಹೇಳಿಕೊಳ್ಳುವ ಸಂಪ್ರದಾಯವಿತ್ತು. ಆದರೂ ಇನ್ನೂ ಎಷ್ಟೋ ಕವಿಗಳ ಕೃತಿ, ಕಾಲ, ಜೀವನ ವಿಚಾರ ಪೂರ್ಣ ದೊರೆತಿರುವುದಿಲ್ಲ. ಅನಂತರದಲ್ಲಿ ಕವಿ, ಸಾಹಿತಿಗಳ ಕೌಟುಂಬಿಕ, ಸಾಮಾಜಿಕ, ವ್ಯಾವಹಾರಿಕ ಜೀವನವನ್ನು ಸರಿಸುಮಾರು ಒಂದು ಶತಮಾನದಿಂದೀಚೆಗೆ ಆತ್ಮಕಥೆಯಾಗಿಯೋ, ವ್ಯಕ್ತಿಚಿತ್ರಣವಾಗಿಯೋ ಕವಿ, ಸಹೃದಯರು ದಾಖಲಿಸುವ ಕಾರ್ಯ ನಡೆದಿದ್ದು ಇಂದು ಅದೊಂದು ಪ್ರತ್ಯೇಕ ವಿಶಿಷ್ಟ ಹೊಸ ಪ್ರಕಾರವೇ ಆಗಿದೆ. ಬರಹಗಾರರ ಬದುಕಿನ ನೋವು ನಲಿವುಗಳು, ಅಭಿರುಚಿ ಆಸಕ್ತಿಗಳು ಒಟ್ಟಿನಲ್ಲಿ ಅವರ ವ್ಯಕ್ತಿತ್ವ ಚಿತ್ರಣ ಓದುಗರ ಮನ ಸೂರೆಗೊಳ್ಳುವಂತಿದೆ. ಶಿವರಾಮ ಕಾರಂತರ ಮಿಂಚಿನ ಬಳ್ಳಿ ಪ್ರಕಾಶನ, 'ಹುಚ್ಚು ಮನಸ್ಸಿನ ಹತ್ತು ಮುಖಗಳು', ನವರತ್ನ ರಾಮರಾಯರ 'ಕೆಲವು ನೆನಪುಗಳು', ಮಾಸ್ತಿಯವರ 'ಭಾವ', ಕುವೆಂಪು ಅವರ 'ನೆನಪಿನ ದೋಣಿಯಲ್ಲಿ', ಎಸ್.ಎಲ್. ಭೈರಪ್ಪನವರ 'ಭಿತ್ತಿ' – ಹೀಗೆ ಸಾಕಷ್ಟು ಆತ್ಮಕಥನಗಳು ಹೊಸಗನ್ನಡ ಕಾಲದಲ್ಲಿ ಪ್ರಸಿದ್ಧ ಬರಹಗಾರರ ಬದುಕಿನ ವ್ಯಕ್ತಿಚಿತ್ರಗಳಿಗೆ ಒಂದು ರೀತಿ ನಾಂದಿ ಹಾಡಿದವು ಎನಿಸುತ್ತದೆ. ವಿರಳವಾಗಿದ್ದ ಒಂದು ಸಾಹಿತ್ಯಪ್ರಕಾರ ಈಗ ವೈವಿಧ್ಯತೆ, ವಾಸ್ತವತೆ, ರೋಚಕತೆಯಿಂದ ಕನ್ನಡದ ಅತ್ಯಪೂರ್ವ ಮೌಲಿಕ ದಾಖಲೆ ಎನ್ನುವಂತೆ ಮೂಡಿಬರುತ್ತಿರುವುದು ಆಶಾದಾಯಕ ಸಂಗತಿ. "ಕವಿ, ಕಾಲ, ಕಾವ್ಯ ವಿಚಾರ" ಎನ್ನುತ್ತಿದ್ದ ಕಾಲ ಈಗಿಲ್ಲ. ವಿದ್ಯುನ್ಮಾನದ ವೇಗದ ಈ ಯುಗದಲ್ಲಿ ದಿನಮಾನದಲ್ಲಿ ಬೆರಳ ತುದಿಯಲ್ಲಿ ಬೇಕಾದ ವಿವರ, ಮಾಹಿತಿ ದೊರೆಯುತ್ತಿದೆ. ಸುಮಾರು ೧೯೦೦ರ ಹಿಂದು ಮುಂದಿನ ಕಾಲ ಹೊಸಗನ್ನಡ ಸಾಹಿತ್ಯೋದಯದ ಪರ್ವಕಾಲ. ಪದ್ಯಗದ್ಯಗಳೆರಡೂ ಹೃದ್ಯವಾದ ಕಾಲ. ಸಾಹಿತ್ಯದಷ್ಟೇ ಸಾಹಿತಿಯ ಬದುಕು, ಬಹಳ ಮುಖ್ಯವೆಂಬ ವಿಚಾರ ಮುನ್ನೆಲೆಗೆ ಬಂದ ಕಾಲ, ಈಗ ಬಹುಮಟ್ಟಿಗೆ ಲೇಖಕರ ಜೀವನದ ವಿವರಗಳು ದೊರೆಯುತ್ತಿವೆ. ಪಾಶ್ಚಾತ್ಯರ ಪ್ರಭಾವವಿರಬಹುದು; ನಮ್ಮವರಲ್ಲಿನ ವಿವೇಕೋದಯವಿರಬಹುದು.

೧೯– ೨೦ನೇ ಶತಮಾನದ ಕನ್ನಡ ಸಾಹಿತ್ಯದಲ್ಲಿ ಅತ್ಯುತ್ಕೃಷ್ಟ ಸಾಹಿತ್ಯ ರಚನೆ, ಸಾಧನೆ ಮಾಡಿದ ಸಾಹಿತಿಗಳು, ವಿದ್ವಾಂಸರ ವಿಶಿಷ್ಟ ವ್ಯಕ್ತಿತ್ವ, ಕಷ್ಟವಿದ್ದರೂ ಸರಳ ಜೀವನ, ಕನ್ನಡ ಭಾಷಾಪ್ರೇಮ ಮೊದಲಾದ ಅವರ ಜೀವನ ಕುರಿತು ಕೆಲವು ಗ್ರಂಥಗಳು ಪ್ರಕಟವಾಗಿವೆ. ಹಿರಿಯರು – ಗೆಳೆಯರು, ಸಾಲುದೀಪಗಳು, ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶ, ವಿಷಯ ವಿಶ್ವಕೋಶ, ಉದಾರ ಚರಿತರು ಉದಾತ್ತ ಪ್ರಸಂಗಗಳು, ಪ್ರಬುದ್ಧ ಕರ್ನಾಟಕ, ಸಾಧನೆ ಕನ್ನಡ ಪರಿಷತ್ಪತ್ರಿಕೆ, ದಿನ, ವಾರ,

ಮಾಸಪತ್ರಿಕೆಗಳಲ್ಲಿನ ಲೇಖನಗಳು ಇನ್ನೂ ಅನೇಕ ಸ್ವಾರಸ್ಯಕರ ವ್ಯಕ್ತಿ ಚಿತ್ರಣವನ್ನು ಒಳಗೊಂಡ ಸಾಹಿತ್ಯ ಲಭ್ಯವಿದೆ. ಈ ಗುಂಪಿಗೇ ಸೇರುವ ಗಮನಾರ್ಹವಾದ ಕೃತಿಗಳು ಪ್ರೊ. ಜಿ. ಅಶ್ವತ್ಥನಾರಾಯಣ ಅವರು ರಚಿಸಿರುವ 'ಕನ್ನಡ ಸಾಹಿತ್ಯ ದಿಗ್ಗಜರು' ಮತ್ತು 'ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು'.

'ಕನ್ನಡ ಸಾಹಿತ್ಯ ದಿಗ್ಗಜರು' ಪ್ರೊ ಅನಾಜಿಯವರ ಮೊದಲ ವ್ಯಕ್ತಿ ಚಿತ್ರಗಳ ಸಂಕಲನ. ೧೨ ಜನ ಸಾಹಿತಿ, ವಿದ್ವಾಂಸರನ್ನು ಉದ್ಧೇಶಿಸಿ ಅವರು ಕನ್ನಡಕ್ಕೆ ನೀಡಿದ ಅಪೂರ್ವ ಕೊಡುಗೆಯನ್ನು ಸ್ಮರಿಸುವ ಲೇಖನಗಳು ಇಲ್ಲಿವೆ. ಲೇಖಕರು ಹೇಳುವಂತೆ ಇವರೆಲ್ಲ ೧೯ನೇ ಶತಮಾನದಲ್ಲಿ ಹುಟ್ಟಿ ೨೦ನೇ ಶತಮಾನದಲ್ಲಿ ಬದುಕಿ ಕನ್ನಡದ ಮೇಲ್ಮೆಗಾಗಿ ಅವಿರತ ಶ್ರಮವಹಿಸಿದವರು. ಹೊಸಗನ್ನಡ ಸಾಹಿತ್ಯೋದಯಕ್ಕೆ ಭದ್ರಬುನಾದಿ ಹಾಕಿದವರು. ಶ್ರೀ ಅನಾಜಿಯವರ ಎರಡನೆಯ ವ್ಯಕ್ತಿ ಚಿತ್ರಣದ ಕೃತಿ 'ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು'. ಇದು ಒಂದು ಬಗೆಯಲ್ಲಿ ಮೊದಲ ಕೃತಿಯ ಮುಂದುವರೆದ ಭಾಗವೇ ಎನ್ನಬಹುದು. ಓದುವ ಸಹೃದಯರು ರಚನೆಯ ಕ್ರಮದಂತೆ. ಈ ಎರಡೂ ಕೃತಿಗಳನ್ನು ಓದಿದರೆ ಇದೇ ಹೊಸ ಕನ್ನಡ ಸಾಹಿತ್ಯದ ಆರಂಭ ಕಾಲದ ಕವಿ, ನಾಡು ನುಡಿಯ ಕುರಿತ ಒಂದು ಸೂಕ್ಷ್ಮ ಚಿತ್ರ, ಪರಿಚಯ ಉಂಟಾಗುತ್ತದೆ. ಕಾಲಾನುಕ್ರಮದಲ್ಲಿ ಈ ಎರಡನೇ ಕೃತಿಯ ಗಣ್ಯರನ್ನು ಶ್ರೀ ಅನಾಜಿ ಸ್ವತಃ ಕಣ್ಣಾರೆ ಕಂಡು ಮಾತನಾಡಿಸಿ ಅವರ ಸಹವಾಸದ ಸವಿ ಅನುಭವಿಸಿ, ಅವರಿಂದ ಪ್ರೇರಣೆ ಪ್ರಭಾವಕ್ಕೆ ಒಳಗಾಗಿ ಅಂದಿನ ಕನ್ನಡ ಸಾಹಿತ್ಯದ ನಿಲುವು ಒಲವುಗಳು, ಬರಹದ ಸಂಯಮ, ಶಿಸ್ತು ಶ್ರದ್ಧೆಯ ಸುಂದರ ಚಿತ್ರಣ ಇಲ್ಲಿ ನೀಡಿದ್ದಾರೆ. ಇದೇ ಇಲ್ಲಿನ ವಿಶೇಷ.

ಹೊಸಗನ್ನಡದ ಅಧ್ಯಯನಕ್ಕಾಗಿ ಹಗಲು ರಾತ್ರಿ ದುಡಿದ ಮಹಾಮಹಿಮರಾದ ನವರತ್ನ ರಾಮರಾಯರು, ಎ.ಆರ್. ಕೃಷ್ಣಶಾಸ್ತ್ರಿಗಳು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದೇವುಡು ನರಸಿಂಹ ಶಾಸ್ತ್ರಿ, ಎಂ.ಆರ್. ಶ್ರೀನಿವಾಸ ಮೂರ್ತಿ, ವಿ.ಸೀತಾರಾಮಯ್ಯ, ಕುವೆಂಪು, ತೀ.ನಂ. ಶ್ರೀಕಂಠಯ್ಯ, ವಿನಾಯಕ ಕೃಷ್ಣಗೋಕಾಕ್, ಕೈವಾರ ರಾಜಾರಾವ್, ಡಾ. ಹೆಚ್.ಕೆ. ರಂಗನಾಥ್, ಡಿ. ಪದ್ಮನಾಭಶರ್ಮ–ಈ ೧೨ ಹಿರಿಯ ಚೈತನ್ಯಗಳ ಅತ್ಯಪೂರ್ವ ಜೀವನಚಿತ್ರ ಈ ಗ್ರಂಥದಲ್ಲಿದೆ. ಈ ಮಹನೀಯರನ್ನು ಕುರಿತಂತೆ ಪ್ರೊ. ಜಿ. ಅಶ್ವತ್ಥನಾರಾಯಣರು ವಿನಯ, ಗೌರವ, ಆತ್ಮೀಯ ಭಾವದ ತಮ್ಮ ಚಿಂತನೆ ಹರಿಸಿದ್ದಾರೆ. ಮುಂದೆ ಪ್ರಾಸಂಗಿಕವಾಗಿ ಕೆಲವನ್ನು ಪರಿಚಯಿಸಬಹುದು.

ಪ್ರೊ.ಅನಾಜಿಯವರಿಗೂ ಸಾಹಿತ್ಯ ಪರಿಷತ್ತಿಗೂ ಅವರ ವಿದ್ಯಾರ್ಥಿ ದೆಶೆಯಿಂದಲೂ ತಾಯಿ ಮಗುವಿನ ನಂಟು. ಮೇಲೆ ಹೇಳಿದ ಸಾಹಿತಿ, ವಿದ್ವಾಂಸರು ಸಾಧಾರಣವಾಗಿ ಸಾಹಿತ್ಯ ಪರಿಷತ್ತಿಗೆ ಬರುತ್ತಿದ್ದುದ್ದರಿಂದ ಅಲ್ಲಿ ಅವರನ್ನು ನೋಡುವ, ಮಾತನಾಡಿಸುವ ಅವರ ಸಾಹಿತ್ಯ ಸಂಗದ ಸದವಕಾಶ ಸದಭಿರುಚಿಯ ಕಾರಣವಾಗಿ ಶ್ರೀ ಅನಾಜಿಯವರಲ್ಲಿ ಸುಪ್ತವಾಗಿದ್ದ ಸಾಹಿತ್ಯಪರವಾದ ಆಸಕ್ತಿ ವೃದ್ಧಿಯಾಗಲು ಒಂದು ಗಾಢ ಪ್ರೇರಣೆ ನೀಡಿದೆ. ಪರಿಷತ್ತಿನ ಸಮೀಪದಲ್ಲೇ ವಾಸವಿದ್ದು, ಪರಿಷತ್ತಿನ ಪುಸ್ತಕ ಭಂಡಾರ, ವಾಚನಾಲಯದಲ್ಲಿನ ಓದು, ಸಾಹಿತಿಗಳ ಸಂಪರ್ಕದ ಪ್ರಭಾವ ಸುಮಾರು ೬೦ ವರ್ಷಗಳಿಗೂ ಹೆಚ್ಚು ಕಾಲದ್ದಾಗಿದೆ. ಉತ್ತಮ ಹವ್ಯಾಸದ ಫಲವಾಗಿ ಈ ಗ್ರಂಥದ ಪ್ರಾತಃಸ್ಮರಣೀಯರನ್ನು ಉದ್ದೇಶಿಸಿ ಅವರ ಕೈಯಿಂದ ವ್ಯಕ್ತಿಚಿತ್ರಗಳು ರಚಿತವಾಗಿವೆ. ಇಲ್ಲಿ ಮುಖ್ಯವಾದ ಮಾತು 'ನಾ ಕಂಡಂತೆ ಎನ್ನುವುದು. ಅಂದರೆ ಆ ಸಾಹಿತ್ಯೋಪಾಸಕರನ್ನು ಭೌತಿಕವಾಗಿ ಕಣ್ಣಾರೆ ಕಾಣುವುದು; ಮಾತ್ರವಲ್ಲ ನಿಕಟವರ್ತಿತನದಿಂದ ಅವರ ಆಂತರಂಗಿಕವಾದ ಸಹಜ ಮಾನವೀಯ ಸ್ವಭಾವಗಳ, ತನ್ನತನದ ಮಹಾವ್ಯಕ್ತಿವಿಶೇಷವನ್ನು ಮನಗಾಣುವುದು. ಇಂಥ ವಿದಗ್ಧರೊಡನೆಯ

ಸುಹೃತ್ ಪರಿಸರ ಎಲ್ಲರಿಗೂ ಸಿಗದು. ಹಾಗಾಗಿ ಇಲ್ಲಿನ ಒಂದೊಂದು ವ್ಯಕ್ತಿ ಚಿತ್ರಣವೂ ಅದರದೇ ಆದ ವೈಶಿಷ್ಟತೆಯ ಸೊಗಸಿನಿಂದ ಕೂಡಿದೆ. ಕಾರ್ಯಶ್ರದ್ಧೆ, ಆದರ್ಶವೇ ಮೊದಲಾದ ಮಾನವ ಸಹಜ ಗುಣಸ್ವಭಾವಗಳು ಇಲ್ಲಿನ ಸುಂದರ ನೈಜಪ್ರಸಂಗಗಳು ಸಹೃದಯರನ್ನು ಮರೆತು ಓದಿಸಿಕೊಂಡು ಹೋಗುವ ಸೊಗಸಿನಿಂದ ಮೂಡಿವೆ. ಈ ಮಹನೀಯರು ಪ್ರಾಮಾಣಿಕತೆ, ನಿಷ್ಠೆ, ಔದಾರ್ಯ, ಛಲ, ಸ್ನೇಹಪರತೆ, ಗೌರವ ಬುದ್ಧಿ, ಭಾಷಾಭಕ್ತಿ ಇತ್ಯಾದಿ ಗುಣಗಳಿಗೆ ಹೆಸರಾಗಿದ್ದವರು. ಒಬ್ಬೊಬ್ಬ ಖ್ಯಾತನಾಮರ ಹೆಸರಿನ ಮೊದಲು ಅವರ ಗುಣವಿಶೇಷ, ವ್ಯಕ್ತಿವಿಶಿಷ್ಟತೆ ಸೂಚಿಸುವ ಮಾತುಗಳನ್ನಿಟ್ಟು (ನಿದರ್ಶನಕ್ಕೆ –"ಆಡಳಿತ ಪ್ರವೀಣ–ಕಥಾ ಸಾಹಿತಿ ನವರತ್ನ ರಾಮರಾಯರು") ಪ್ರೊ. ಜಿ. ಅಶ್ವತ್ಥನಾರಾಯಣರು ಶಾಂತವಾಗಿ ಹರಿಯುವ ನದಿಯಂತೆ ಲಾಲಿತ್ಯದಿಂದ ಕೂಡಿದ ಮಧುರಾಭಿವ್ಯಕ್ತಿಯ ಶೈಲಿಯಲ್ಲಿ ವ್ಯಕ್ತಿ, ಪ್ರಸಂಗಗಳನ್ನು ಚಿತ್ರಿಸಿದ್ದಾರೆ.

ತಮ್ಮ ಆತ್ಮಕಥೆ 'ಕೆಲವು ನೆನಪುಗಳೂ' ಕೃತಿಯಿಂದ ಪ್ರಸಿದ್ಧರಾದ ಶ್ರೀ ನವರತ್ನ ರಾಮರಾಯರು ಬಹುಮುಖ ಪ್ರತಿಭಾವಂತರು. ಅವರು ಸಾಹಿತಿ, ವಿಮರ್ಶಕ, ರಸಿಕ, ಭಾಷಣಕಾರರು, ನಿಸ್ವಾರ್ಥ ಸಾರ್ವಜನಿಕ ಸೇವಾ ದುರಂಧರರು ಎಂದು ರಾಮರಾಯರ ಭವ್ಯವ್ಯಕ್ತಿತ್ವವನ್ನು ಕುರಿತು ಹೇಳಿರುವುದಲ್ಲದೇ, ಅವರ ಮನೆತನಕ್ಕೆ 'ನವರತ್ನ' ಎಂಬ ಬಿರುದು ಬಂದ ಬಗೆ, ರಾಜಾಜಿಯವರಿಗೂ ರಾಮರಾಯರಿಗೂ ಇದ್ದ ಸ್ನೇಹದ ಪರಿ, ಅದನ್ನು ಅವರು ಕಂಡಿದ್ದು, ಮಾಸ್ತಿಯವರನ್ನು ತಮ್ಮನಂತೆ ಕಾಣುತ್ತಿದ್ದ ಅವರ ಗುಣ; 'ಸುಬ್ಬಣ್ಣ' ಕಥೆ ಬರೆಯಲು ಪ್ರೇರಿಸಿದ್ದು ಮುಂತಾದ ಸಂಗತಿಗಳನ್ನು ಲೇಖಕರು ಕುತೂಹಲ ಮೂಡುವ ಹಾಗೆ ಹೇಳಿದ್ದಾರೆ.

ಕನ್ನಡದ ದ್ರೋಣಾಚಾರ್ಯರು–ಶಿಸ್ತಿನ ಶಿಕ್ಷಕರಾಗಿದ್ದ ಶ್ರೀ. ಎ. ಆರ್. ಕೃಷ್ಣಶಾಸ್ತ್ರೀ ಅವರನ್ನು ಕುರಿತು ಬಹಳಷ್ಟು ದೀರ್ಘವಾಗಿಯೇ ವ್ಯಕ್ತಿತ್ವ ಚಿತ್ರಣವಿದೆ. ಪರಿಷತ್ತಿನಲ್ಲಿ ಕೃಷ್ಣಶಾಸ್ತ್ರಿಯವರನ್ನು ಆಗಾಗ ನೋಡುತ್ತಿದ್ದ ಅನಾಜಿಯವರು ದತ್ತಿನಿಧಿಯಲ್ಲಿ ನಡೆಯುತ್ತಿದ್ದ ಸ್ಪರ್ಧೆಗಳು ಚರುಮು ನಿಂತಾಗ ಹುಡುಗುತನದಿಂದ ಅವರನ್ನು ಕಾರಣ ಕೇಳಲು ಹೋಗಿ ಅವರಿಂದ ಪೆಪ್ಪರಮೆಂಟನ್ನು ಪಡೆದು ಬಂದ ಪ್ರಸಂಗ ಲೇಖಕರ ನೆನಪಲ್ಲಿ ಉಳಿದು ಸಹಜವಾಗಿ ಚಿತ್ರಿತವಾಗಿದೆ. ಹಾಗೆಯೇ ಸೊಸೈಟಿಯಲ್ಲಿ ರೇಶನ್ನಾಗಿ ಕ್ಯೂ ನಿಂತ ಸಂದರ್ಭದಲ್ಲಿ ಕೃಷ್ಣಶಾಸ್ತ್ರಿಗಳು ಆಡಿದ ಮಾತು ಕೂಡ (ನಿಯಮ ಪಾಲಿಸಿದರೆ ಚಿಕ್ಕವರೂ ದೊಡ್ಡವರಾಗುತ್ತಾರೆ. ನಿಯಮಭಂಗ ಮಾಡಿದರೆ ದೊಡ್ಡವರೂ ಚಿಕ್ಕವರಾಗುತ್ತಾರೆ) ಉಪದೇಶಾಮೃತದಂತೆ ಅವರ ಮನಸ್ಸಿನಲ್ಲಿ ಉಳಿದಿದೆ. ವಚನಭಾರತ, ಕಥಾಮೃತ, ಬಂಕಿಮಚಂದ್ರ ಮುಂತಾದ ಹೆಸರಾದ ಕೃತಿಗಳ ಕರ್ತೃವಾದ ಎ.ಆರ್.ಕೃ. ಅವರು ಹೊಸಗನ್ನಡ ಸಾಹಿತ್ಯದ ಅಶ್ವಿನೀ ದೇವತೆ ಎಂಬ ಬಿರುದಾಂಕಿತರು. ಇನ್ನೊಬ್ಬ ಬಿರುದಾಂಕಿತರು ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರು ಈ ಇಬ್ಬರ ಸಾಹಿತ್ಯ ಸಾಧನೆ ಅತ್ಯಂತ ಮಹತ್ವಪೂರ್ಣವಾದುದು. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಎಲ್ಲ ಕಾಲಕ್ಕೂ ಉಳಿಯುವಂಥದು. ಪ್ರಬುದ್ಧ ಕರ್ಣಾಟಕದ ಹುಟ್ಟು ಮತ್ತು ಬೆಳವಣಿಗೆಗೆ ಮುಖ್ಯ ಕಾರಣಕರ್ತರಾದವರು ಎ.ಆರ್.ಕೃ. ಅವರು ಜೊತೆಗೆ ಪೂರ್ಣ ಸಹಕರಿಸಿದವರು ಟಿ. ಎಸ್. ವೆಂಕಣ್ಣಯ್ಯನವರು. ಪ್ರಬುದ್ಧ ಕರ್ಣಾಟಕದ ಬೆಳ್ಳಿ ಸಂಚಿಕೆಯಲ್ಲಿ ಮಾಸ್ತಿಯವರು "ನಮ್ಮ ಹೊಸ ಸಾಹಿತ್ಯದ ಅಶ್ವಿನೀ ದೇವತೆಗಳು" ಎಂಬ ಶೀರ್ಷಿಕೆಯಲ್ಲಿ ಈ ಇಬ್ಬರು ಹಿರಿಯರನ್ನು ಕುರಿತು ಆಡಿರುವ ಮಾತುಗಳನ್ನು ನೆನೆಯುವುದು ಇಲ್ಲಿ ಪ್ರಸ್ತುತ ಎನಿಸುತ್ತದೆ. "ವೆಂಕಣ್ಣಯ್ಯ ಕೃಷ್ಣಶಾಸ್ತ್ರಿಗಳ ಈ (ಪ್ರಬುದ್ಧಕರ್ಣಾಕದ) ಸಹಯೋಗವ್ಯವಸಾಯವನ್ನು ಎಷ್ಟು ಹೊಗಳಿದರೂ ಸಾಲದೆಂದು ನನ್ನ

ತಿಳುವಳಿಕೆ. ಸ್ವಭಾವದಿಂದ ಈ ಇಬ್ಬರು ಒಂದು ತೆರನಲ್ಲ. ಒಬ್ಬರು ಮೌನದಿಂದ ಒಬ್ಬರು ಮಾತಿನಿಂದ ಮನಸ್ಸನ್ನು ವ್ಯಕ್ತಪಡಿಸುವವರು. ಒಬ್ಬರು ಸೌಮ್ಯಮೂರ್ತಿ, ಮತ್ತೊಬ್ಬರು ಸಹಜವಾದ ರಸಭಾವಗಳಿಗೆ ಜೀವನದಲ್ಲಿ ಎಡೆಕೊಡುವವರು. ಒಬ್ಬರು ಸುಲಭವಾಗಿ ಹಗುರವಾಗಿ ಕೆಲಸ ನಡೆಸುವವರು. ಒಬ್ಬರು ಹಗಲಿರುಳೆನ್ನದೆ ಹೊತ್ತುಗೊತ್ತಿಲ್ಲದೆ ಮೈಮುರಿದು ದುಡಿಯುವವರು. ಸಾಮಾನ್ಯವಾಗಿ ಇಂತಹ ಇಬ್ಬರು ಇವರಂತೆ ಗೆಳೆಯರಾಗುವುದು ಅಪೂರ್ವವೆನ್ನಬೇಕು. ಆದರೆ ಕನ್ನಡದ ಪುಣ್ಯದಿಂದ ಇವರಿಬ್ಬರಿಗೂ ಚಿಕ್ಕಂದು ಜೊತೆಯಾಗಿ ಕನ್ನಡ ದೀಕ್ಷೆ ಬಂದಿತು. ಇಬ್ಬರು ಶುದ್ಧಚೇತನರು. ಇಬ್ಬರೂ ಋಜುಸ್ವಭಾವದವರು. ಇಬ್ಬರೂ ಕಾರ್ಯತತ್ಪರರು. ಇಬ್ಬರೂ ಸೇವಾನಿಷ್ಠರು... ಒಂದು ಗುರಿಯ ಸಾಧನೆಯಲ್ಲಿ ಈ ಎರಡು ಬಾಳು ಒಂದಾಗಿ ಬೆರೆಯಿತು. ಈ ಯಮಳಜೀವನ ಹೊಸಗನ್ನಡ ಅಶ್ವಿನೀದೇವತೆಯಾಯಿತು'' ಕನ್ನಡ ಸಾಹಿತ್ಯಲೋಕ ಕನ್ನಡಕ್ಕಾಗಿ ಮೊದಮೊದಲು ದುಡಿದವರು ಯಾರು ಎಂಬುದನ್ನು ಸ್ಮರಿಸುವುದು ಔಚಿತ್ಯಪೂರ್ಣವಾದುದು.

ಶಾಸ್ತ್ರಿಗಳು ಸಂಪಾದಕರಾಗಿದ್ದ ಕಾಲದಲ್ಲಿ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾದ ಕಾವ್ಯ, ಸಣ್ಣಕಥೆ, ಪ್ರಬಂಧ, ಸಂಶೋಧನ ಲೇಖನಗಳ ಸಂಖ್ಯೆಯನ್ನು ಪ್ರೊ. ಅನಾಜಿಯವರು ಉಲ್ಲೇಖಿಸಿ, ಎ.ಆರ್.ಕೃ ಅವರ ಸರಳವಾದ ಚೇತನ, ಶಿಸ್ತಿನ ಬದುಕನ್ನು ದೊಡ್ಡಗುಣವನ್ನು ಸವಿವರವಾಗಿ ನಾನಾ ಪ್ರಸಂಗಗಳಲ್ಲಿ ನಿರೂಪಿಸಿದ್ದಾರೆ.

'ಮಾಸ್ತಿ ನನ್ನ ಪಾಲಿಗೆ ಅಮೂಲ್ಯ ನೆನಪುಗಳ ಆಸ್ತಿ' ಎಂದು ಹಿರಿಯ ಮಾಸ್ತಿ ಅಯ್ಯಂಗಾರರ ಬಗ್ಗೆ ತಮ್ಮ ಅನುಭವದ ಸಂಗತಿ, ಘಟನೆಗಳನ್ನು ಪ್ರೊ. ಅನಾಜಿ ಹಂಚಿಕೊಂಡಿದ್ದಾರೆ. ಸ್ಕಾಲರ್ಷಿಪ್ ಹಣ ೫ ರೂ ತೆಗೆದುಕೊಂಡು ಪರಿಷತ್ತಿಗೆ ಸದಸ್ಯರಾಗಲು ಹೋದಾಗ ಚಿಕ್ಕ ವಯಸ್ಸೆಂದು ಕಾರ್ಯದರ್ಶಿ ನಿರಾಕರಿಸಲು ಕಾರ್ಯದರ್ಶಿ, ಅಲ್ಲೇ ಇದ್ದು ಗಮನಿಸಿದ ಅಧ್ಯಕ್ಷರಾಗಿದ್ದ ಮಾಸ್ತಿಯವರು ಕಾರ್ಯದರ್ಶಿಗೆ ಹೇಳಿ 'ಚಿಗುರುವ ಗಿಡಗಳನ್ನು ಬೆಳೆಸಬೇಕೆಂದು' ಅನಾಜಿಯವರಿಗೆ ಸದಸ್ಯತ್ವ ಕೊಡಿಸಿದರಂತೆ. ಇಂಥ ಸಂದರ್ಭಗಳನ್ನು ಮರೆಯಲು ಸಾಧ್ಯವೇ? ಕಾಲೇಜಿನ ಕರ್ಣಾಟಕ ಸಂಘದ ಉದ್ಘಾಟನೆಗೆ ಕರೆಯಲು ವಿದ್ಯಾರ್ಥಿನಿಯರು ಬಂದಾಗ ವಯೋಕಾರಣದಿಂದ ಮಾಸ್ತಿಯವರು ಒಪ್ಪದೇ ಇದ್ದಾಗ ವಿದ್ಯಾರ್ಥಿನಿಯೊಬ್ಬಳಿಗೆ ನಿರಾಶೆಯಾದದ್ದನ್ನು ಕಂಡು ಅವರು 'ಈ ವಯಸ್ಸು ಅರಳುವ ಹೂವಿನ ಕಾಲ ಬಾಡಬಾರದೂ ಮಗು' ಎಂದು ಸಾಂತ್ವನ ಹೇಳಿದ್ದನ್ನು ಸ್ಮರಿಸಿದ್ದಾರೆ. 'ಪರಿಷತ್ತಿಗೆ ದುಡಿದರೆ ಸಾಲದು; ತ್ಯಾಗ ಮಾಡಬೇಕು' ಎಂಬ ಧ್ಯೇಯ ಅವರದು. ಇಳಿವಯಸ್ಸಿನಲ್ಲೂ ನಗುನಗುತ್ತಾ ಸಂತಸ, ಲವಲವಿಕೆ, ಜೀವನ ಪ್ರೀತಿಯಿಂದ ನಾಟಕ ಬರೆಯುವ ಮಾಸ್ತಿಯವರ ಮನೋಭಾವ ಅನಾಜಿಯವರು ಗಮನಿಸಿದ್ದಾರೆ.

'ಕನ್ನಡ ಸೇವೆಯೇ ದೇವರ ಸೇವೆ'ಎಂದು ತಿಳಿದು ಹಾಗೆಯೇ ಬಾಳಿದ ಘನವಿದ್ವಾಂಸರೂ, ಮಕ್ಕಳ ಸಾಹಿತಿಯೂ ಆಗಿದ್ದ ದೇವುಡು ಲಕ್ಷ್ಮೀನರಸಿಂಹ ಶಾಸ್ತ್ರಿಗಳ ಸರ್ವಧರ್ಮ ಸಮಭಾವದ ಮಾನವೀಯತೆಯನ್ನು ಸಾರುವ ಪ್ರಸಂಗವನ್ನು ರಸಿಕರು ಓದಬೇಕು. ದೇವುಡು ಅವರ ಧಾರ್ಮಿಕ ಕಾದಂಬರಿಗಳು, ನೂರಕ್ಕೂ ಮಿಕ್ಕ ಮಕ್ಕಳ ಪುಸ್ತಕಗಳು, ಅವರ ಅಕ್ಷರ ಪ್ರಚಾರದ ಬಗೆಗೆ ಅನೇಕ ಮಾಹಿತಿ ನೋಡಿದ್ದಾರೆ.

ದೇಶಪ್ರೇಮ, ನಾಡುನುಡಿಗಳ ಪ್ರೇಮವೇ ಪ್ರಧಾನವಾಗಿ ಜಾತಿ, ಕುಲ ಸಂಕಲೆಗಳನ್ನು ಮೀರಿ ಸಾಹಿತ್ಯ ಸೃಷ್ಟಿಮಾಡಿದ ವಚನ ಸಾಹಿತಿ–ಆದರ್ಶ ಶಿಕ್ಷಕರಾಗಿದ್ದ ಎಂ. ಆರ್. ಶ್ರೀನಿವಾಸ

ಮೂರ್ತಿಯವರ ಬಾಳಿನ ಭವ್ಯಚಿತ್ರಣ ಈ ಕೃತಿಯಲ್ಲಿನ ಮತ್ತೊಂದು ವಿಶೇಷ. ಶ್ರೀಯುತರ ಉಪನ್ಯಾಸಗಳನ್ನು ಕೇಳಿರುವ ಶ್ರೀ ಅನಾಜಿಯವರು ವಚನಸಾಹಿತ್ಯ ವೀರಶೈವ ಗ್ರಂಥಗಳ ಬಗ್ಗೆ ಎಂ. ಆರ್. ಶ್ರೀ ಅವರು ಮಾತುಗಳನ್ನು ಕೇಳಿದರೆ ಅಲ್ಲಿಯ ಬಸವಣ್ಣನವರೇ ಮಾತನಾಡುತ್ತಿರುವರೇನೋ ಎನಿಸುತ್ತಿದ್ದುದನ್ನು ಮೆಲುಕು ಹಾಕಿದ್ದಾರೆ. ಎಂ. ಆರ್. ಶ್ರೀಯವರ ಕೃತಿಗಳಲ್ಲಿ 'ವಚನಧರ್ಮಸಾರ'ಕ್ಕೆ ದೊರೆತ ಪ್ರಸಿದ್ಧಿ ಅಭೂತಪೂರ್ವವಾದುದು. ಅಖಿಲ ಕರ್ಣಾಟಕ ವೀರಶೈವ ಮಹಾಸಭಾದವರು 'ವಚನಧರ್ಮಸಾರ' ಕೃತಿಯ ಮಹತ್ವವನ್ನು ಮನಗಂಡು ಶ್ರೀ. ಎಂ.ಆರ್. ಶ್ರೀಯವರನ್ನು ಸನ್ಮಾನಿಸಿದರೆಂದು ಕೇಳಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಒಮ್ಮೆ ಜೊತೆಯಲ್ಲಿ ಲೇಖಕರು ಹೋಗುತ್ತಿದ್ದಾಗ ಅವರ ಮಡದಿ ದಾರಿಯಲ್ಲಿ ಕರೆದರೂ ನೋಡದೆ ಹೋಗಿ ಮನೆಯಲ್ಲಿ ಪತ್ನಿಗೆ 'ಲೇ, ನಂಗೆ, ರಸ್ತೇಲಿ ಹೆಂಗಸರ ಕಡೆ ತಲೆ ಎತ್ತಿ ನೋಡುವ ಅಭ್ಯಾಸವಿಲ್ಲ ಕಣೆ,' ಎಂದಾಡಿದ ಮಾತನ್ನು ಹಾಸ್ಯದ ಮಾತಿನಂತೆ ತೋರಿದರೂ ಅವರ ಚಾರಿತ್ರವನ್ನು ಕೊಂಡಾಡಿದ್ದಾರೆ.

ಸರಳತೆಗೆ ಇನ್ನೊಂದು ಹೆಸರಾಗಿದ್ದ ವಿ. ಸೀತಾರಾಮಯ್ಯನವರು ಸರಳ ಸಾಹಿತಿ-ಸಜ್ಜನ ವಿದ್ವಾಂಸರಾಗಿದ್ದವರು. ಅವರ ಮಗ ಸತ್ಯನಾರಾಯಣ ಶ್ರೀ ಅನಾಜಿಯವರ ಸಹಪಾಠಿಯಾಗಿದ್ದು ಅವರಿಗೆ ವಿ.ಸೀ ಅವರ ಒಡನಾಟ ಸುಲಭವಾಗಿ ದೊರೆತಿತ್ತು. ಅವರು ವಿ.ಸೀ ಅವರ 'ಕಾದಿರುವಳು ಶಬರಿ' ಪಾಠ ಮಾಡುವಾಗ ಆದ ಒಂದು ಘಟನೆ, ವಿ.ಸೀ ಯವರಿಗೂ ಶಿವರಾಮ ಕಾರಂತರಿಗೂ ಇದ್ದ ಸ್ನೇಹದ ಗಾಢತೆ - ಬಟ್ಟೆ ಹೊಲಿಸಿಕೊಳ್ಳಲು ಕಾರಂತರು ವಿ.ಸೀ ಅವರಿಗೆ ಬಟ್ಟೆ ಕೊಂಡು ಹೊಲಿಗೆಯ ಬಿಲ್ಲನ್ನು ತಮಗೇ ಕಳಿಸಬೇಕೆಂದು ಚೀಟಿಯನ್ನು ಕಳಿಸಿದ ಪ್ರಸಂಗ, ವಿ.ಸೀ ಅವರ ಮನೆಯ ಹಿತ್ತಲಿನ ಹಲಸಿನ ಮರ ಕಡಿವ ಸಮಯದ ಅವರ ಮನಸ್ಥಿತಿ, ಅವರೊಡನೆ ಲೇಖಕರು ವಾಯುವಿಹಾರಕ್ಕೆ ಹೋಗುತ್ತಿದ್ದ ಸನ್ನಿವೇಶಗಳು, ಆಗ ಅವರನ್ನು ಪ್ರಶ್ನಿಸುತ್ತಿದ್ದ ಅನಾಜಿಯವರಿಗೆ ಅನೇಕ ವಿಷಯಗಳ ಬಗ್ಗೆ ವಿವರಿಸಿ ಹೇಳುತ್ತಿದ್ದ ವಿ.ಸೀಯವರ ಸ್ವಭಾವ ಎಲ್ಲವನ್ನೂ ಪ್ರಸ್ತುತ ವ್ಯಕ್ತಿ ಚಿತ್ರಣವನ್ನು ಓದಿಯೇ ಸಂತೋಷಿಸಬೇಕು. ವಿ.ಸೀ ಅವರ ಭಾವಚಿತ್ರವನ್ನಷ್ಟೇ ನೋಡಿದ್ದವರಿಗೆ ಅನಾಜಿಯವರ ಲೇಖನಿಯಿಂದ ಒಂದು ಸುಂದರ ರೇಖಾಚಿತ್ರವೇ ಮನದಲ್ಲಿ ಮೂಡುತ್ತದೆ.

ರಾಷ್ಟ್ರಕವಿ ಶ್ರೇಷ್ಠ ಸಾಹಿತಿ, ಚಿಂತಕರಾಗಿದ್ದ ಶ್ರೀ ಕುವೆಂಪುರವರನ್ನು ತಾವು ಎರಡು ಬಾರಿ ಭೇಟಿ ಮಾಡಿದ ಸಂದರ್ಭಗಳನ್ನು ಸ್ಮರಿಸಿದ್ದಾರೆ. ಕನ್ನಡ ಐಚ್ಛಿಕ ತೆಗೆದುಕೊಂಡು ಬಿ.ಎ. ಓದದೆ ಎಂ.ಎ. ಕನ್ನಡ ತರಗತಿಗೆ ಪ್ರವೇಶ ಕೋರಿ ಹೋದ ಒಂದು ಪ್ರಸಂಗ-ಆಗ ಕುವೆಂಪುರವರು 'ನಿಯಮವಿಲ್ಲ'ವೆಂದು ನಿರಾಕರಿಸಿದರು. ಆಗ ಕುವೆಂಪು ಅವರೊಡನೆ ವಾದಿಸಿದ್ದು ಅನಾಜಿ ಅವರ ಕನ್ನಡದ ಅದಮ್ಯ ಪ್ರೇಮಕ್ಕೆ ಸಾಕ್ಷಿಯಾಗಿದೆ. ಕುವೆಂಪು ಅವರ ಶಿಷ್ಯರಲ್ಲಿ ಒಬ್ಬರಾದ ಪ್ರೊ. ಎಸ್. ಶ್ರೀನಿವಾಸನ್ ಅವರನ್ನು ಕುರಿತೂ ಈ ವ್ಯಕ್ತಿ ಚಿತ್ರಣದಲ್ಲಿ ಶ್ರೀನಿವಾಸ್‌ರವರ ಅಗಾಧ ಸ್ಮೃತಿಶಕ್ತಿ, ವಿದ್ವಾಂಸತನ ಕುರಿತೂ ವ್ಯಕ್ತಿತ್ವ ಚಿತ್ರಿಸಿದ್ದಾರೆ. ಕುವೆಂಪುರವರ ಜೀವನಪಥ, ಸಾಹಿತ್ಯಪಥ ವಿವರವೂ ಇದೆ.

ಜನಪ್ರಿಯ ಹೊಸಗನ್ನಡದ ಕಾವ್ಯಮೀಮಾಂಸಕರೂ, ಸಹೃದಯ ಕವಿಗಳೂ, ಸರಳಜೀವಿಯೂ ಆಗಿದ್ದ ಪ್ರೊ. ತೀ. ನಂ. ಶ್ರೀಕಂಠಯ್ಯ ಅವರೊಡನೆ ಕೆಲವು ರಸಪ್ರಸಂಗಗಳು ಇಲ್ಲಿವೆ. ಕನ್ನಡದ ಆಚಾರ್ಯ ಕೃತಿ 'ಭಾರತೀಯ ಕಾವ್ಯಮೀಮಾಂಸೆ' 'ಕನ್ನಡ ಮಧ್ಯಮ ವ್ಯಾಕರಣ', 'ನಂಟರು' ಕೃತಿಗಳನ್ನು ಓದಿದವರಿಗೆ ತೀ.ನಂ.ಶ್ರೀ. ಅವರ ಶಾಸ್ತ್ರಶ್ರದ್ಧೆ, ವೈಚಾರಿಕ ಪ್ರಜ್ಞೆ ತಿಳಿಯುತ್ತದೆ. ಪರಿಷತ್ತಿನ ನಿಘಂಟು ಸಭೆಯ ಕಾರ್ಯಕಲಾಪಗಳಲ್ಲಿ ಕಿರಿಯರಾದ ಅನಾಜಿಯವರಿಗೆ ಭಾಗವಹಿಸಲು ಅವಕಾಶ

ಮಾಡಿಕೊಟ್ಟ ಪ್ರಸಂಗ, ಅಲ್ಲಿ ತಿಂಡಿ ತಿನ್ನುವ ವಿಚಾರಕ್ಕೆ ಅನಾಜಿಯವರು ಬೇಡ ಎಂದಾಗ, ತಾವೂ ತಿನ್ನುವುದಿಲ್ಲವೆಂದು ತಿನ್ನಲು ತೋರಿದ ತೀನಂಶ್ರೀಯವರ ಪುತ್ರವಾತ್ಸಲ್ಯ ಇಲ್ಲಿ ನೆನೆದಿದ್ದಾರೆ. ಇಂಥ ಸಂದರ್ಭಗಳು ವ್ಯಕ್ತಿಯೊಬ್ಬರ ಉದಾರ ಗುಣಕ್ಕೆ ಸಾಕ್ಷಿಯಾಗುತ್ತವೆ.

ಅಂತೆಯೇ ಆಡಳಿತ ಧುರೀಣ–ಸತ್ಯ ಸಾಹಿತಿ ಎಂದು ಬಿಂಬಿತರಾಗಿದ್ದ ವಿ. ಕೃ. ಗೋಕಾಕರಂತಹ ಧೀಮಂತ ಸಾಹಿತ್ಯ ದಿಗ್ಗಜರ ಸಹವಾಸವೂ ಅನಾಜಿಯವರಿಗೆ ದೊರೆತಿರುವುದು ಪುಣ್ಯ ವಿಶೇಷವೇ ಸರಿ. ನವ್ಯಕಾವ್ಯದ ಬಗೆಗೆ ತಾನು ಕೇಳಿದ ಪ್ರಶ್ನೆಗಳಿಗೆ ಸಮಾಧಾನ ಚಿತ್ತದಿಂದ ಗೋಕಾಕರು ಕೊಟ್ಟ ಉತ್ತರ"ಆ ಸಂಜೆ ಸ್ವಲ್ಪ ಹೊತ್ತಿನ ಮೇಲೆ ಕತ್ತಲಾಗಿ ಕಬ್ಬನ್ ಪಾರ್ಕಿನಲ್ಲಿ ದೀಪಗಳು ಹತ್ತಿಕೊಂಡವು. ನನ್ನ ಹೃದಯದಲ್ಲಿ ಕಾವ್ಯಾಂಧಕಾರದಲ್ಲಿ ಗೋಕಾಕ್ ಜ್ಯೋತಿ ಬೆಳಗಿತ್ತು" ಎಂಬ ಉದ್ಗಾರಕ್ಕೆ ಕಾರಣವಾಗಿದೆ. ಗೋಕಾಕರ ಭವ್ಯವ್ಯಕ್ತಿತ್ವದಂತೆ ಅವರ ಭವ್ಯ ಸಾಧನೆಯನ್ನು ಕುರಿತು ಕೊಂಡಾಡಿದ್ದಾರೆ.

ಇನ್ನು ಉಳಿದಂತೆ ಕನ್ನಡ ನಾಟಕಕಾರ–ಆಡಳಿತ ನಿರ್ವಾಹಕರಾಗಿದ್ದ ಕೈವಾರ ರಾಜಾರಾವ್, ಚತುರವಾಗ್ಮಿ–ನಾಟಕಕಾರರಾಗಿದ್ದ ಡಾ. ಹೆಚ್. ಕೆ. ರಂಗನಾಥ್ ಮತ್ತು ಪ್ರಸಿದ್ಧ ಜೈನ ವಿದ್ವಾಂಸರಾಗಿದ್ದ ಸಾಹಿತ್ಯಭೂಷಣ ಡಿ. ಪದ್ಮನಾಭ ಶರ್ಮ ಈ ಮಹನೀಯರ ಬಗ್ಗೆ ವಿಸ್ತಾರಭಯದಿಂದ ಪ್ರಸ್ತಾಪಿಸಿಲ್ಲ. ಎಲ್ಲರ ಉಡುಗೊರೆ, ಕಾಣಿಕೆ ಕನ್ನಡಕ್ಕೆ ಅತ್ಯಪೂರ್ವ ಎಂಬುದರಲ್ಲಿ ಅನುಮಾನವಿಲ್ಲ.

'ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು'–ಸಾಹಿತಿಗಳ ಹೃದಯದ ಒಳನೋಟಗಳನ್ನು, ವ್ಯಕ್ತಿವಿಶೇಷಗಳನ್ನು ಬಿಂಬಿಸುವ ರಸ ಪ್ರಸಂಗಗಳಿಂದ ಕೂಡಿ ಮನೋರಂಜಕವೂ, ಅಪರೂಪದ ಮಾಹಿತಿ ಮಹತ್ತೂ ಆಗಿ ಒಂದು ಯಶಸ್ವೀ ಕೃತಿಯಾಗಿದೆ. ದೀರ್ಘಕಾಲದ ವಿದ್ವತ್ ದಿಗ್ಗಜಗಳ ಸ್ನೇಹ ಹಾಗೂ ಭಾವ ಸಂಪರ್ಕದಿಂದ ಶ್ರೀ ಅನಾಜಿಯವರ ಸ್ವಾನುಭವ ಮೂಲದಿಂದ ಅವತರಿಸಿದ ಸಾರ್ಥಕ ಕೃತಿಯಾಗಿದೆ.

*****

ಭಕ್ತಿಗೀತಾವಳಿ (ಕೀರ್ತನ ಸಂಗ್ರಹ)

ಆರ್. ಕೆ. ಪದ್ಮನಾಭ
ಚರವಾಣಿ : ೯೪೪೮೫೭೪೮೯೪

ತಪೋವಿದ್ಯಾವಿರಕ್ತ್ಯಾದಿ ಸದ್ಗುಣಘಾಕರಾನಹಂ ।
ವಾದಿರಾಜಗುರೂನ್ ವಂದೇ ಹಯಗ್ರೀವ ದಯಾಶ್ರಯಾನ್ ॥

ಶ್ರೀವಾದಿರಾಜ ಗುರವೇ ನಮಃ

ಜ್ಞಾನ ಸಂಪನ್ನರಾದ ಮಾನ್ಯ ಚಿದಂಬರಯ್ಯನವರು ರಚಿಸಿರುವ ಕನ್ನಡ ಕೃತಿಮಾಲೆಯನ್ನು ನೋಡಿ ಬಹಳ ಸಂತೋಷವೂ ಆಯಿತು. ಹೆಮ್ಮೆಯೂ ಆಯಿತು. ೧೯೧೯ರಲ್ಲಿ ಅಂದರೆ ಸುಮಾರು ೯೩ ವರ್ಷಗಳ ಹಿಂದೆಯೇ ಶುದ್ಧ, ತಿಳಿ, ಸರಳ ಕನ್ನಡದಲ್ಲೇ ಕೃತಿ ರಚನೆ ಮಾಡಿರುವುದು ಬಹಳ ಪ್ರಶಂಸರ್ಹವಾದುದು. ಎಲ್ಲಾ ಕೃತಿಗಳನ್ನು ಹಾಡಲು ಅನುಕೂಲವಾಗುವಂತೆ, ಆಗ ಪ್ರಸಿದ್ಧವಾಗಿದ್ದ ಕೃತಿಗಳ ಅಥವಾ ಕೆಲವು ಪ್ರಸಿದ್ಧ ಹಾಡುಗಳ ಧಾಟಿಯನ್ನು ಕೊಟ್ಟು ಸಾಮಾನ್ಯರಿಗೂ ಈ ಕೃತಿಗುಚ್ಛ ತಲುಪುವಂತೆ ಮಹದುಪಕಾರ ಮಾಡಿದ್ದಾರೆ. ಒಟ್ಟು ೫೮ ರಾಗಗಳನ್ನು ಬಳಸಿಕೊಂಡು, ಅವುಗಳಲ್ಲಿ ದೇಶೀತೋಡಿ, ಧನಾಶ್ರೀ, ಹಿಂದೂಸ್ತಾನೀ ತೋಡಿ ಇಂತಹ ರಾಗಗಳನ್ನು ಸೇರಿಸಿಕೊಂಡಿರುವುದು ಇನ್ನೂ ಕುತೂಹಲಕಾರಿಯಾಗಿದೆ. ಹಿಂದೂಸ್ತಾನೀ ತೋಡಿ ಎಂದರೆ ನಮ್ಮ ಕರ್ನಾಟಕ ಪದ್ಧತಿಯ ಶುಭಪಂತುವರಾಳಿಯೂ ಅಥವಾ ಅದಕ್ಕೆ ವಿಭಿನ್ನವಾದ ಸ್ವರೂಪವಿರುವುದೋ ಎಂಬ ಚಿಂತನೆಗೆ ಗ್ರಾಸ ಕೊಟ್ಟಿದ್ದಾರೆ. ವಿದ್ವಾಂಸರಾದ ಚಿದಂಬರಯ್ಯನವರು, ಈ ಕೃತಿಗಳ ಸಾಹಿತ್ಯ ಬಹಳ ಸ್ವಾಭಾವಿಕವಾಗಿಯೇ ಗೇಯತ್ವವನ್ನು ಹೊಂದಿದೆ. ತಾಳಕ್ಕಾಗಿ ಸಾಹಿತ್ಯವನ್ನು ಎಲ್ಲೂ ತುರುಕಿದಂತೆ ಕಾಣಿಸುವುದಿಲ್ಲ. ಮಾನ್ಯರು ಶಾಸ್ತ್ರೀಯ ಸಂಗೀತವನ್ನು ನಿಯಮಬದ್ಧವಾಗಿ ಕಲಿಯದಿದ್ದರೂ ಬಹುಶಃ ಬಹಳ ಸ್ವಾಭಾವಿಕವಾಗಿಯೇ ಶಾಸ್ತ್ರೀಯ ಸಂಗೀತದ ಸೌಂದರ್ಯದ ಮಂಟಪವನ್ನು ತಮ್ಮ ಹೃದಯದಲ್ಲಿ ಸ್ಥಾಪನೆ ಮಾಡಿಕೊಂಡಿದ್ದಾರೆ. ಪಲ್ಲವಿ, ಅನುಪಲ್ಲವಿ, ಚರಣಗಳು ಕೇವಲ ಪದಗಳ ಕೂಟವಾಗದೇ, ಹಾಡಿಕೆಗೆ ಅನುಕೂಲವಾಗುವಂತೆ ಸೊಗಸಾಗಿ ರಚಿತವಾಗಿದೆ.

ಸರಸ್ವತಿ ಮನೋಹರಿ ರಾಗದ ಏನಿದಚ್ಚರಿಯೋ ಶ್ರೀಹರಿ ಎಂಬ ಕೃತಿ ಬಹಳ ಸೂಕ್ತವಾಗಿ ಈ ರಾಗಕ್ಕೆ ಹೊಂದಿಕೊಂಡಿದೆ. ಮುಕ್ಕಾಲು ಎಡಪಿನಿಂದ ಪ್ರಾರಂಭವಾಗುವ ಈ ಕೃತಿ ಕನ್ನಡ ಕೃತಿಗಳ ಸಂಪ್ರದಾಯದಲ್ಲಿ ಒಂದು ಹೊಸತನವನ್ನು ಸೃಷ್ಟಿಸಿದೆ. ತ್ಯಾಗರಾಜರ "ಎಂತವೇಡುಕೊಂದುರಾಘವ" ಕೃತಿಯ ಧಾಟಿಯಲ್ಲೋ ಇರುವ ಈ ಸಾಹಿತ್ಯದ ಸತ್ವಕ್ಕೂ ತ್ಯಾಗರಾಜರ ಸಾಹಿತ್ಯಕ್ಕೂ ಏನೂ ಸಂಬಂಧವಿರುವುದಿಲ್ಲ. ಧಾತುಮಾತ್ರ ತ್ಯಾಗರಾಜರ ಧಾಟಿ. ಮಾತು ಮಾತ್ರ ಚಿದಂಬರಯ್ಯನವರದೇ. ಹೀಗೆ ಹಲವಾರು ಕೃತಿಗಳು ಉದಾಹರಣೆ, ಬಂಗಾಳ ರಾಗದ "ಎಂಥ ದಯಾವಂತನೋ ನೀ",

ಪೂರ್ಣಚಂದ್ರಿಕೆ ರಾಗದ "ತಿಳಿಯುವದಾನದೋ", ಕುಂತವರಾಳಿರಾಗದ "ಶಿವಶಿವ" ಸೌರಾಷ್ಟ್ರ ರಾಗದ "ಶ್ರೀ ಗೌರಿ" ಶುದ್ಧ ಶಾಸ್ತ್ರೀಯ ಕೃತಿಗಳ ಧಾಟಿಯಲ್ಲಿ ರಚಿತವಾಗಿರುವುದು ಮಾನ್ಯ ಚಿದಂಬರಯ್ಯನವರ ಸಂಪ್ರದಾಯದ ಬದ್ಧತೆಗೆ ಕನ್ನಡಿ ಹಿಡಿದಂತಿದೆ. ಇಲ್ಲಿ ಮುದ್ರಿತವಾಗಿರುವ ೧೫೨ ಕೃತಿಗಳೂ ಪ್ರಬುದ್ಧವಾಗಿರುವ ರಚನೆಗಳೇ. ಇಂತಹ ಅಮೂಲ್ಯ ಕೃತಿರತ್ನ ಗುಚ್ಛವನ್ನು ಹೊಸಕೆರೆ ಚಿದಂಬರಯ್ಯ ಸಂಸ್ಕರಣ ಟ್ರಸ್ಟ್ ಬೆಂಗಳೂರು ಅವರು ಹೊರತಂದಿರುವುದಕ್ಕಾಗಿ ಎಲ್ಲಾ ಪದಾಧಿಕಾರಿಗಳೂ ಅಭಿನಂದಾರ್ಹರು. ಹೀಗೇ ವಿದ್ವಾಂಸರಾದ ಚಿದಂಬರರಿಂದ ಜ್ಞಾನ ಬತ್ತಳಿಕೆಯಲ್ಲಿ ಏನೇನು ಅಡಗಿದೆಯೋ, ಅವುಗಳೆಲ್ಲವೂ ಹೊರಬಂದು ಸಂಗೀತ ಮತ್ಯ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಲಿ ಎಂದು ಆಸೆಪಡುತ್ತೇನೆ. ಸಂಪಾದಕರ ನುಡಿಯಲ್ಲಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಬಹು ಸಮಗ್ರವಾಗಿ ಈ ಕೀರ್ತನೆಗಳನ್ನು ವಿಶ್ಲೇಷಿಸಿದ್ದಾರೆ ಎಂದ ಮೇಲೆ ಈ ರಚನೆಗಳಿಗೆ ಮೌಲ್ಯ ಇರಲೇಬೇಕು. ಜೊಳ್ಳು ರಚನೆಗಳನ್ನು ಮಾನ್ಯ "ಅಶ್ವತ್ಥನಾರಾಯಣ ಅವರು ಒಪ್ಪುವುರೇ ಅಲ್ಲ. ಹಾಗಾಗಿ ಅವರ ವಿಚಾರ, ವಿಶ್ಲೇಷಣೆ ಈ ಗ್ರಂಥಕ್ಕೆ ಮತ್ತಷ್ಟು ಮೌಲ್ಯವನ್ನು ತುಂಬಿದೆ ಎಂಬುದು ಸತ್ಯವೇ. ಈ ಗ್ರಂಥ ಕನ್ನಡ ಸಂಗೀತಾಸಕ್ತರ ಹಾಗೂ ಸಾಹಿತ್ಯಾಸಕ್ತರ ಮನೆ ಮನೆ ಮಾತಾಗುತ್ತದೆ'' ಎಂಬುದರಲ್ಲಿ ಸಂದೇಹವೇ ಇಲ್ಲ ಎಂಬುದು ನನ್ನ ಅಂತರಾಳದ ಅನಿಸಿಕೆ.

ಶುಭವಾಗಲಿ

*****

ಅನಾಜಿಯವರ ಸಂಪಾದನೆಯ ಅಚ್ಚುಕಟ್ಟುತನ ಮತ್ತು ನಿಷ್ಠೆಗೆ ಸಾಕ್ಷಿಯಾದ ಎಂ.ವಿ.ಸೀ ಜೀವನ ಚರಿತ್ರೆ-ಅನುವಾದ ಸಂಪುಟಗಳು

ಡಾ. ಆರ್. ಲಕ್ಷ್ಮೀನಾರಾಯಣ
ಚರವಾಣಿ : ೯೪೪೯೦೨೮೯೯೬

ಅನಾಜಿಯವರು ಪ್ರಕಾಂಡ ಪಂಡಿತ ಸಂಶೋಧಕ ಮತ್ತು ಪ್ರಾಧ್ಯಾಪಕ ದಿ. ಕಲ್ಬುರ್ಗಿಯವರ ಶಿಷ್ಯರು. ಅವರು ಸಂಶೋಧನೆ, ವಿಮರ್ಶೆ, ಗ್ರಂಥ ಸಂಪಾದನೆಗಳಲ್ಲಿ ತಮ್ಮ ಕೃತಿಗಳ ಮೂಲಕ ನಿಷ್ಣಾತಿಯನ್ನು ತೋರಿದವರು. ಅವರ ಶಿಷ್ಯರಾದ ಅನಾಜಿಯವರಿಗೂ ಗ್ರಂಥ ಸಂಪಾದನೆಯಲ್ಲಿ ಹೆಚ್ಚಿನ ಆಸಕ್ತಿ. ಶಂಕರಾಚಾರ್ಯರ ಸೌಂದರ್ಯ ಲಹರಿ, ಮಹಲಿಂಗರಂಗನ ಅನುಭವಾಮೃತ, ಹೊಸಕೆರೆ ಚಿದಂಬರಯ್ಯನವರ ಗೀತಾರ್ಥ ಚಂದ್ರಿಕೆ, ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ ರಘುವಂಶಚರಿತೆ ಹೀಗೆ ಹಲವು ಹತ್ತು ಗ್ರಂಥಗಳನ್ನು ಅಚ್ಚುಕಟ್ಟಾಗಿ ಸಂಪಾದಿಸಿರುವವರು. ಎಂ.ವಿ.ಸೀ. ಕವಿ, ಸಂಶೋಧಕ, ವಿಮರ್ಶಕ, ಕಥೆಗಾರ, ಕಾದಂಬರಿಕಾರ, ಪ್ರಬಂಧಕಾರ ಎಂದೆಲ್ಲ ಖ್ಯಾತರಾಗಿ ಹಲವಾರು ಗ್ರಂಥಗಳ ಬಳುವಳಿಯನ್ನು ನೀಡುವ ಮೂಲಕ ಕನ್ನಡದ ಕಣಜವನ್ನು ತುಂಬಿಕೊಟ್ಟವರು. ಎಂ.ವಿ.ಸೀ ಶತಮಾನೋತ್ಸವ ವರ್ಷದಲ್ಲಿ (2010) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಬಿ.ಎಂ.ಶ್ರೀ. ಪ್ರತಿಷ್ಠಾನದ ಸಹಯೋಗದೊಂದಿಗೆ. ಎಂ.ವಿ.ಸೀ. ಸಮಗ್ರ ಸಾಹಿತ್ಯ ಸಂಪುಟಗಳನ್ನು ಹೊರತಂದಿತು. ಆಗ ಎಂ.ವಿಸೀ ರಚಿಸಿದ ಜೀವನಚರಿತ್ರೆ ಮತ್ತು ಅನುವಾದ ಕೃತಿಗಳ ಎರಡು ಸಂಪುಟಗಳನ್ನು [(624 ಪುಟಗಳು. ಭಾಗ-1) (546 ಪುಟಗಳು. ಭಾಗ-2)] ಸಂಪಾದಿಸಿಕೊಡುವ ಹೊಣೆಗಾರಿಕೆ ಅನಾಜಿಯವರ ಮೇಲೆ ಬಿತ್ತು. ಅದನ್ನು ಒಪ್ಪಿಕೊಂಡು ಅತ್ಯಂತ ಸಮರ್ಪಕವಾಗಿ, ಅಚ್ಚುಕಟ್ಟಾಗಿ ಸಂಪಾದಿಸಿ ಅದಕ್ಕೆ ಉದ್ಬೋಧಕವಾದ 73 ಪುಟಗಳಷ್ಟು ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದು ಅಧ್ಯಯನಶೀಲರಿಗ ಮತ್ತು ಸಂಶೋಧಕರಿಗೆ ಉಪಕಾರ ಮಾಡಿದ್ದಾರೆ. ಅವರ ಕೆಲಸದ ಸಂಕ್ಷಿಪ್ತ ಸ್ವರೂಪವನ್ನು ಸ್ವಲ್ಪ ನೋಡೋಣ.

ವಾಸ್ತವವಾಗಿ ಮೊದಲ ಸಂಪುಟ ಪೂರ್ತಿಯಾಗಿ ಅನುವಾದ ಸಂಪುಟವೆನ್ನಬಹುದು. ಕಾರಣ ಇದರಲ್ಲಿರುವ 'ಏಳು ಇಪ್ಪಾರಿನ ಮನೆ' ಎಂಬುದು ನ್ಯಥೇನಿಯಲ್ ಹಾಥಾರ್ನ್ (1804-1864) ಅವರ ಇಂಗ್ಲಿಷ್ ಕಾದಂಬರಿಯ ಅನುವಾದವಾದರೆ 'ಜೂಡಿ- ಲಕ್ಷ್ಮಿ' ನಯೋಮಿ ಮಿಚಿಸನ್ ಇಂಗ್ಲಿಷಿನಲ್ಲಿ ಬರೆದಿರುವ ಕಾದಂಬರಿಯ ಅನುವಾದ. ಇನ್ನು ಎರಡನೆಯದಾದ ಜೀವನ ಚರಿತ್ರೆಯ ಸಂಪುಟ ಒಂದು ರೀತಿಯಲ್ಲಿ ಸಂಕೀರ್ಣ ಸಂಪುಟ ಎನ್ನಬಹುದು.

ಅಮೆರಿಕಾದ ಶ್ರೇಷ್ಠ ಕಥೆಗಾರ ಮತ್ತು ಕಾದಂಬರಿಕಾರ ನ್ಯಾಥಾನಿಯಲ್ ಹಾಥಾರ್ನ್ ಎಂ.ವಿ.ಸೀ. ಅವರ ಮೆಚ್ಚಿನ ಲೇಖಕ. ಅವನ ಕಥೆ ಕಾದಂಬರಿಗಳಿಂದ ಆಕರ್ಷಿತರಾದ

ಅವರು ಅವನ ಹೌಸ್ ಆಫ್ ದಿ ಸೆವೆನ್ ಗೇಬಲ್ಸ್ ಎಂಬ ಬರಹವನ್ನು "ಏಳು ಇಪ್ಪಾರಿನ ಮನೆ" ಎಂದು ಅನುವಾದಿಸಿದ್ದಾರೆ. ಹಾಥಾರ್ನ್ ಒಬ್ಬ ಪ್ಯೂರಿಟನ್ ಲೇಖಕ. ಇದು ಗತಕಾಲದ ಪಾಪಕಾರ್ಯಗಳನ್ನೂ ಅದರ ಪರಿಣಾಮಗಳನ್ನೂ ಚಿತ್ರಿಸುವ ಕಥೆ. ಈ ಕಥೆಯ ಮೂಲಕ ಹಾಥಾರ್ನ್ "ಒಂದು ತಲೆಮಾರು ಎಸಗಿದ ಅಪರಾಧ ಮುಂದಿನ ತಲೆಮಾರುಗಳಲ್ಲಿಯೂ ಸಾಗಿಬರುತ್ತದೆ. ತಾನು ಸಾಧಿಸಿದ ಪ್ರತಿಯೊಂದು ತಾತ್ಕಾಲಿಕ ಪ್ರಯೋಜನವನ್ನು ನೀಗಿಕೊಂಡು ಕಾಡುವ ಕೆಡುಕಿನ ಶಕ್ತಿಯಾಗಿ ಪರಿಣಮಿಸುತ್ತದೆ. ಅನೈತಿಕ ರೀತಿಯಲ್ಲಿ ಗಳಿಸಿದ ಆಸ್ತಿಯನ್ನು ತಾನೂ ತನ್ನ ಮುಂದಿನ ಪೀಳಿಗೆಯವರೂ ಜೀರ್ಣಿಸಿಕೊಳ್ಳುವುದು ಕಷ್ಟ" (ಎಂ.ವಿ.ಸೀ) ಎಂಬ ಸಂದೇಶವನ್ನು ಸಾರುತ್ತಾನೆ.

ಜೂಡಿ -ಲಕ್ಷ್ಮಿ ನಯೋಮಿ ಮಿಚಿಸನ್ (Naomi Mitchison) ಇಂಗ್ಲಿಷಿನಲ್ಲಿ ರಚಿಸಿರುವ ಕಾದಂಬರಿಯ ಕನ್ನಡ ರೂಪ. ವಿದೇಶಿಯೊಬ್ಬನು ಈ ಕಾದಂಬರಿಯ ಮೂಲಕ ಭಾರತೀಯ ಸಂಸ್ಕೃತಿಯನ್ನು ಚಿತ್ರಿಸಿರುವುದು ಇದರಲ್ಲಿ ಕಂಡುಬರುತ್ತದೆ. ಕುಟುಂಬವೊಂದರ ಕಥೆಯ ಜೊತೆಜೊತೆಗೇ ಭಾರತೀಯ ಬದುಕಿನ ವಾಸ್ತವ ಚಿತ್ರಣ ಕಾದಂಬರಿಯಲ್ಲಿದೆ. ಜೂಡಿ ಮತ್ತು ಲಕ್ಷ್ಮೀ ಇಬ್ಬರೂ ಅಕ್ಕ ಪಕ್ಕದಲ್ಲಿ ವಾಸಿಸುತ್ತಿದ್ದ ಕುಟುಂಬಗಳ ಹೆಣ್ಣು ಮಕ್ಕಳು. ಅವರಿಬ್ಬರೂ ಕ್ರಮವಾಗಿ ಪಾಶ್ಚಾತ್ಯ ಮತ್ತು ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಪಾತ್ರಗಳು.

ಸಂಪಾದಕ ಅನಾಜಿಯವರು ಪ್ರಸ್ತಾವನೆಯಲ್ಲಿ ಈ ಕಾದಂಬರಿಗಳ ಸಂಕ್ಷಿಪ್ತ ಕಥೆ ಮತ್ತು ಹಾಳತವಾದ ವಿಮರ್ಶೆಯನ್ನು ಒದಗಿಸಿದ್ದಾರೆ.

ಇನ್ನು ಎರಡನೇ ಸಂಪುಟವನ್ನು ಜೀವನ ಚರಿತ್ರೆ ಮತ್ತು ಅನುವಾದಿತ ಬರಹಗಳ ಒಂದು ಸಂಕೀರ್ಣ ಸಂಪುಟವೆನ್ನಬಹುದು. ಕಾರಣ ಇಲ್ಲಿಯ ಬರಹಗಳನ್ನು ಆರು ಗುಂಪುಗಳಾಗಿ ವಿಂಗಡಿಸಲಾಗಿದೆ. ಮೊದಲ ಗುಂಪಿನಲ್ಲಿ ಎಂ.ವಿ.ಸೀ ಅವರು ತಮ್ಮ ಸಾಹಿತ್ಯಕ ಬದುಕಿನ ಬಗ್ಗೆ ಬರೆದಿರುವ ಇಪ್ಪತ್ತೇಳು ಪುಟಗಳ "ನನ್ನ ಸಾಹಿತ್ಯ ಜೀವನ ಸ್ಮೃತಿಗಳು" ಎಂಬ ಬರಹದ ಜೊತೆಗೆ "ವಿದ್ಯಾರ್ಥಿಯಾಗಿ ನಾನು ಕಂಡಂತೆ" ಎಂಬ 11 ಪುಟಗಳ ಒಂದು ಕಿರು ಲೇಖನ ಸೇರಿದೆ. ಎರಡನೇ ಗುಂಪಿನಲ್ಲಿ 90 ಪುಟಗಳಲ್ಲಿ ರಚಿತವಾಗಿರುವ ಮಲೆಯಾಳಿ ಸಾಹಿತ್ಯದ ಹೆಸರಾಂತ ಬರಹಗಾರ ಎ. ಆರ್. ರವಿವರ್ಮನ ಜೀವನ ಚರಿತ್ರೆ ಇದೆ. ಇದನ್ನು ಎಂ.ವಿ.ಸೀ. ಇಂಗ್ಲಿಷ್ ನಿಂದ ಕನ್ನಡಿಸಿದ್ದಾರೆ, ಅನುವಾದ ಎಂದೆನಿಸದ ಹಾಗೆ ಸರಳವಾಗಿ ಸಹಜ ರೀತಿಯಲ್ಲಿ ಎಂ.ವಿ.ಸೀ ಕನ್ನಡಕ್ಕೆ ತಂದಿರುವ ಕೃತಿಯಿದು. ಸ್ವತಂತ್ರ ಕಥೆ ಕಾದಂಬರಿಗಳನ್ನು ಬರೆದ ಎಂ.ವಿ.ಸೀ ಅನುವಾದಿಸಿದ ಬೇರೆ ಬೇರೆ ಲೇಖಕರ ಒಟ್ಟು ಹದಿನಾಲ್ಕು ಕಥೆಗಳು ಮೂರನೇ ಗುಂಪಿನಲ್ಲಿವೆ. ಇದರಲ್ಲಿ ರಷ್ಯನ್ ಭಾಷೆಯ ಪ್ರಸಿದ್ಧ ಕಥೆಗಾರ ಪುಷ್ಕಿನ್‌ನ ಐದು ಕಥೆಗಳು, ಹಾಥಾರ್ನಿನ 7 ಕಥೆಗಳು, ಇನ್ನೆರಡು ಒಟ್ಟು 14 ಕಥೆಗಳು ಇಲ್ಲಿ ಸೇರಿವೆ.

ಇನ್ನು ಎಂ.ವಿ.ಸೀ ಯವರು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿದ ಲೇಖನಗಳು ನಾಲ್ಕು ಮತ್ತು ಐದನೇ ಭಾಗದಲ್ಲಿ ಸೇರಿವೆ. ಇದರಲ್ಲಿ ಅರ್ನಾಲ್ಡ್ ಬೇಕ್ನ "ಠಾಕೂರರು ಮತ್ತು ಪಾಶ್ಚತ್ಯ ಸಂಗೀತ" ಹಾಗೂ "ಮಳೆಬಿಲ್ಲು" ಎಂಬ ಲೇಖನಗಳು ಒಂದು ಬಗೆಯವಾದರೆ, 5ನೇ ಗುಂಪಿನಲ್ಲಿ 8 ಪ್ರಕರಣಗಳನ್ನೊಳಗೊಂಡ, ಅಕಾಶಯಾನಕ್ಕೆ ಸಂಬಂಧಿಸಿದ "ವಿಜ್ಞಾನ" ಎಂಬ ಶೀರ್ಷಿಕೆಯ

ಗ್ರಂಥದ ಅನುವಾದ ಸೇರಿದೆ. ಇಲ್ಲಿ 6ನೆಯ ಹಾಗೂ ಕೊನೆಯ ಗುಂಪಿನಲ್ಲಿ ಸೇರ್ಪಡೆಯಾಗಿರುವ ಬರಹವೆಂದರೆ ಶ್ರೀ ಶಂಕರಾಚಾರ್ಯರ "ಸೌಂದರ್ಯ ಲಹರಿ"ಯ ಕನ್ನಡ ಕಾವ್ಯಾನುವಾದ. ಇದೊಂದು ಸೃಜನಶೀಲ ಅನುವಾದ. ಒಟ್ಟು ಒಂದು ನೂರು ಪದ್ಯಗಳಿವೆ.

ಈ ಸಂಪುಟದಲ್ಲಿ ಸೇರಿರುವ ಎಲ್ಲ ಗುಂಪಿನ ಬರಹಗಳನ್ನು ಕುರಿತು ಅನಾಜಿಯವರು ತಮ್ಮ ಪ್ರಸ್ತಾವನೆಯಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ಅನಾಜಿಯವರ ಸುದೀರ್ಘ ಪ್ರಸ್ತಾವನೆಯ ವಿಶೇಷವೆಂದರೆ ಜೀವನ ಚರಿತ್ರೆಯ ಈ ಸಂಪುಟದಲ್ಲಿ ಸೇರ್ಪಡೆಯಾಗಿರುವ ಎಂ. ವಿ. ಸೀ ಅವರ "ಸಾಹಿತ್ಯ ಜೀವನ ಸ್ಮೃತಿಗಳು" ಮತ್ತು "ವಿದ್ಯಾರ್ಥಿಯಾಗಿ ನಾನು ಕಂಡಂತೆ" ಕುರಿತ ಬರಹಗಳ ಪ್ರಸ್ತಾಪ ಮತ್ತು ವಿಮರ್ಶೆ ಮಾತ್ರವಲ್ಲದೆ ಈ ಎರಡೂ ಸಂಪುಟಗಳಲ್ಲಿ ಸೇರ್ಪಡೆಯಾಗದೆ ಇರುವ ಅವರ "ಹಿರಿಯರು ಸಾಹಿತಿಗಳು, ಗೆಳೆಯರ ವ್ಯಕ್ತಿಚಿತ್ರ ಬರಹಗಳು, ಮಕ್ಕಳಿಗಾಗಿ ಬರೆದ ಪೌರಾಣಿಕ (ಯುಧಿಷ್ಠಿರ), ಸಾಹಿತ್ಯಕ ವ್ಯಕ್ತಿ ಚರಿತ್ರೆ (ರನ್ನ), ಪ್ರತಿಮಾಗೃಹ (ವ್ಯಕ್ತಿಚಿತ್ರಗಳು) ಗುರು-ಹಿರಿಯರು ಮತ್ತು ಗೆಳೆಯರು, ಕನ್ನಡ ವಿಶ್ವಕೋಶಕ್ಕೆ ಬರೆದ ವ್ಯಕ್ತಿ ಚಿತ್ರಗಳು, ಇತರ ಗ್ರಂಥಗಳಲ್ಲಿ ಬಂದ ವ್ಯಕ್ತಿಚಿತ್ರಗಳು, ವ್ಯಕ್ತಿಚಿತ್ರ ಮತ್ತು ಜೀವನ ಚರಿತ್ರೆ ಕುರಿತ ವಿಮರ್ಶಾ ಬರಹಗಳು, ರಾಮಕೃಷ್ಣ ಪರಮಹಂಸ ಇವೆಲ್ಲವುಗಳ ಬಗ್ಗೆ ವಿವರವಾಗಿ ಪ್ರಸ್ತಾಪಿಸಿ ಚರ್ಚಿಸಿದ್ದಾರೆ ಎಂಬುದು ಮುಖ್ಯವಾದ ಮಾತು. ಒಂದು ಕೆಲಸವನ್ನು ವಹಿಸಿಕೊಂಡರೆ, ಅದರಲ್ಲಿ ಯಾವ ಕೊರತೆಯೂ ಉಳಿಯಗೊಡದಂತೆ ಅದನ್ನು ಸಾರ್ಥಕವಾಗಿ ಕೊನೆಮುಟ್ಟಿಸುವುದು ಅನಾಜಿಯವರ ಸ್ವಭಾವ. ಅವರ ಈ ಅಪೂರ್ವ ಸ್ವಭಾವಕ್ಕೆ ತಕ್ಕಂತೆ ಜೀವನ ಚರಿತ್ರೆ-ಅನುವಾದದ ಎರಡೂ ಸಂಪುಟಗಳು ರೂಪುಗೊಂಡಿವೆ. ಅವರ ಅನನ್ಯವಾದ ಸಂಪಾದನಾ ನಿಷ್ಠೆ ಇಲ್ಲಿಯ ಪುಟಪುಟದಲ್ಲೂ ಕೆಲಸಮಾಡಿರುವುದನ್ನು ಮನಗಾಣಬಹುದು.

*****

“ನನಗೆ ಸಾಹಿತಿಗಳ ಸವಿನೆನಪುಗಳು ನಿಮಗೆ ರಸಪ್ರಸಂಗಗಳು”

ಎನ್. ರಾಮನಾಥ್.
ಚರವಾಣಿ : ೯೪೪೮೦೫೦೪೬೩

ಅಣುಕು ರಾಮನಾಥ್ ಹಾಸ್ಯಸಾಹಿತಿ
ಮರು ಮರು ಮೆಲುಕುಗಳಿಗೆ ಗ್ರಾಸ ಒದಗಿಸುವ ಶೇವಧಿ

ಇಟಲಿಯ ಫ್ಲಾರೆನ್ಸ್ ನಗರ. ಹದಿನಾಲ್ಕನೆಯ ಶತಮಾನದ ಪೂರ್ವಾರ್ಧ. ಜನಪ್ರಿಯ ಕವಿ, ಆಧ್ಯಾತ್ಮವಾದಿ ಡಾಂಟೆ ಎಂದಿನಂತೆ ತಮ್ಮ ದಂಡಿನೊಡನೆ ವಾಕಿಂಗ್ ಹೊರಟರು. ಸ್ವಲ್ಪ ದೂರ ಸಾಗುತ್ತಿದ್ದಂತೆ ಆವರೆಗೆ ಡಾಂಟೆ ಕಂಡಿರದಿದ್ದ ವ್ಯಕ್ತಿಯೊಬ್ಬನು ಎದುರು ದಿಕ್ಕಿನಿಂದ ಬರುತ್ತಾ. “ವಿಚ್ ಈಸ್ ದ ಬೆಸ್ಟ್ ಫುಡ್ ಇನ್ ದ ವರ್ಲ್ಡ್?” ಎಂದು ಕೇಳಿದ. “ಎಗ್” ಎಂದರು ಡಾಂಟೆ. ನಂತರ ಸುಮಾರು ಒಂದು ವರ್ಷದ ಬಳಿಕ ಇತ್ತಣಿಂದ ಅವರ ದಂಡು, ಅತ್ತಣಿಂದ ಆ ವ್ಯಕ್ತಿಯ ಮುಖಾಮುಖಿ. “ವಿತ್ ವಾಟ್?” ಎಂದ ವ್ಯಕ್ತಿ. “ವಿತ್ ಸಾಲ್ಟ್” ಎಂದರು ಡಾಂಟೆ. ವರ್ಷದ ಹಿಂದೆ ಕಂಡಿದ್ದ ವ್ಯಕ್ತಿ, ವಿಷಯ ಎರಡನ್ನೂ ಅವರು ಮರೆತಿರಲಿಲ್ಲ. ಇಂತಹ ಅಮೋಘ ಜ್ಞಾಪಕಶಕ್ತಿ ಇರುವ ವ್ಯಕ್ತಿಗಳು ಇಂದಿಗೂ ನಮ್ಮೊಡನಿದ್ದಾರೆಯೇ ಎಂದು ಯಾರಾದರೂ ಪ್ರಶ್ನಿಸಿದರೆ, ಅದಕ್ಕೆ ಪ್ರೊಫೆಸರ್. ಜಿ.ಅಶ್ವತ್ಥನಾರಾಯಣ ಎಂಬುದೇ ಉತ್ತರ. ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರ ನಂತರ ನನ್ನ ಜೀವನದಲ್ಲಿ ದೊರೆತ ಅತ್ಯುತ್ತಮ ‘ಮೆಮೊರಿ ಬ್ಯಾಂಕ್’ ಇವರು.

ಡಾಂಟೆಗೆ ಆಗ ಹೆಚ್ಚೆಂದರೆ ಐವತ್ತರ ಹರಯ. ಅಶ್ವತ್ಥನಾರಾಯಣರು ತಮ್ಮ ಜೀವನದ ಒಂಬತ್ತನೆಯ ದಶಕದಲ್ಲಿದ್ದಾರೆ. ಈಗಲೂ ಅವರು ಎಂದೋ ನಡೆದ ವಿಷಯಗಳನ್ನು ಕಣ್ಣಿಗೆ ಕಟ್ಟಿದಂತೆ ಬಣ್ಣಿಸಬಲ್ಲರು. ‘ವಯಸ್ಸಾಗುತ್ತಾ ಎಂದಿನದೋ ನೆನಪಿರುತ್ತದೆ. ನೆನ್ನೆ ಮೊನ್ನೆಯದು ಇರುವುದಿಲ್ಲ’ ಎಂದಿರೆ? ಅದಕ್ಕೂ ಇವರು ಅಪವಾದ. ಒಂದು ವಾರದ ಹಿಂದೆ ಹೋದ ಹೋಟೆಲಿನಲ್ಲಿ ಯಾವ ತಿಂಡಿ ಚೆನ್ನಾಗಿತ್ತು, ಏನು ಕೆಟ್ಟಿತ್ತು ಎಂದು ಕೂಡಲೇ ಹೇಳಬಲ್ಲರು. ಇವರ ಶಾರ್ಟ್ ಟರ್ಮ್ ಮೆಮೋರಿ ಮತ್ತು ಲಾಂಗ್ ಟರ್ಮ್ ಮೆಮೋರಿ ಎರಡೂ ಸುಸ್ಥಿತಿಯಲ್ಲಿದ್ದು ಎರಡೂ ನನಗೆ ಅಮೋಘ ಎನಿಸುತ್ತದೆ.

ಪ್ರಸ್ತುತ ಕೃತಿಯು ‘ನನಗೆ ಸಾಹಿತಿಗಳ ಸವಿ ನೆನಪುಗಳು’ ಎಂದಿದ್ದರೂ ಇದರಲ್ಲಿರುವವರು ಸಾಹಿತಿಗಳಷ್ಟೇ ಅಲ್ಲ. “ನಂಗೊತ್ತಿಲ್ಲದೇ ಅನಕೃ ಅವರ ಮನೆ” ಎಂದ ಆಟೋ ಡ್ರೈವರ್, ಹುರಿಗಾಳು ಪ್ರವೀಣೆ ವಾಸಂತಿ ಮೇಡಂ ಮೊದಲಾಗಿ ‘ಸಾಮಾನ್ಯರಲ್ಲಿ ಅಸಾಮಾನ್ಯರು’ ಸಹ ಸೇರಿದ್ದಾರೆ. ಪ್ರೊಫೆಸರ್ ಅಶ್ವತ್ಥನಾರಾಯಣರು (ಇನ್ನುಮುಂದೆ ಅನಾಜಿ ಎಂದೇ ಉಲ್ಲೇಖಿತ) ಗತಕಾಲದಲ್ಲಿ

ಸಾಹಿತ್ಯವು ಸಮಾಜವೆಂಬ ಏಣಿಯ ಕೆಳಪಡಿಯಿಂದ ಮೇಲ್ಪಡಿಯವರೆಗೂ ಪಸರಿಸಿದ್ದುದನ್ನು ಇಲ್ಲಿನ ಅನೇಕ ಸಂಗತಿಗಳ ಮೂಲಕ ನಮಗೆ ತಿಳಿಸಿಕೊಟ್ಟಿದ್ದಾರೆ. ಹೀಗಾಗಿ ಇದು ಸರಿಸುಮಾರು ಕಳೆದ ಶತಮಾನದ ಚಿತ್ರಣವನ್ನು ಕಟ್ಟಿಕೊಡಲು ಕೈಗೊಂಡಿರುವ ಸಾರ್ಥಕ ಪ್ರಯತ್ನವೆನ್ನಬಹುದು.

ವಿದ್ಯಾರ್ಥಿದೆಸೆಯಿಂದಲೇ ಅನಾಜಿಗೆ ಎರಡು ಆಸಕ್ತಿಗಳಿದ್ದವು-ಒಳ್ಳೆಯ ತಿನಿಸುಗಳು ಮತ್ತು ಸಾಹಿತ್ಯ. ಅವರು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳ ದತ್ತಿನಿಧಿಯಲ್ಲಿ ದೇವರನಾಮಗಳ ಸ್ಪರ್ಧೆಯೊಂದು ನಡೆಯುತ್ತಿತ್ತು ಮತ್ತು ಆ ಸಮಯದಲ್ಲಿ ಬಂದವರಿಗೆ ಚರ್ಪು ನೀಡುತ್ತಿದ್ದರು. ಕೆಲವು ದಿನಗಳ ನಂತರ ಚರ್ಪು ಕೊಡುವುದು ನಿಂತುಹೋಯಿತು. ಅನಾಜೀ ಸುಮ್ಮನಿರುವರಲ್ಲವಲ್ಲ! ಶಾಸ್ತ್ರಿಗಳ ಮನೆಗೆ ಹೋಗಿ 'ದತ್ತಿ ಹಣ ಹೆಚ್ಚಿಸಿ' ಎಂದಿದ್ದರು. ಹುಡುಗನಾಗಿದ್ದಾಗ ಆದ ಶಾಸ್ತ್ರಿಗಳ ಪರಿಚಯ ಮುಂದೆ ಅನೇಕ ವರ್ಷಗಳ ಕಾಲ ಮುಂದುವರಿಯಿತು. ಇವರು ಮೆಜಾರಿಟಿ ತಲುಪುವುದಕ್ಕೆ ಮುಂಚೆಯೇ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಮೇಜರ್ ಬೆಳವಣಿಗೆಗೆ ಕಾರಣರಾದರು. 'ನನಗೂ ಸದಸ್ಯತ್ವ ಕೊಡಿ' ಎಂದಾಗ ಪರಿಷತ್ತಿನವರು ನಿರಾಕರಿಸಿದರೆ, ಸದಸ್ಯತ್ವಕ್ಕೆ ಬೇಕಾದ್ದು ಭಾಷೆಯ ಬಗ್ಗೆ ಇರುವ ಆಸಕ್ತಿ. ವಯಸ್ಸಿನ ಲೆಕ್ಕವಿಲ್ಲವೆಂದು ವಾದ ಮಾಡಿ ಸದಸ್ಯರಾದವರು ಅನಾಜಿ.

ತಿನಿಸುಗಳು, ಊಟಕ್ಕೆ ಸಂಬಂಧಿತವಾಗಿ ಇಲ್ಲಿ ಉಲ್ಲೇಖವಾದ ಬರಹವಲ್ಲದೆ 'ತಿಂಡಿಯ ಪ್ರಮಾಣ ಊಟದಷ್ಟಿರಲಿ' 'ಉಪ್ಪಿನಕಾಯಿ ಮತ್ತು ಮಹಾವೀರ ಜಯಂತಿ', ಮೊದಲಾದ ರಸಪ್ರಸಂಗಗಳನ್ನು ರುಚಿಕಟ್ಟಾಗಿ ಮಂಡಿಸಿದ್ದಾರೆ. ಸಾಹಿತ್ಯ ರಸವಂತೂ ಈ ಸಂಕಲನದ ಪುಟಪುಟದಲ್ಲಿಯೂ ಹರಿಯುತ್ತಿದೆ. "ಪುಸ್ತಕಕ್ಕೆ ಮಹತ್ವವಿಲ್ಲದ ಮನೆಗೆ ನಾನು ಕಾಲಿಡಲಾರೆ" ಎಂದು ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ನುಡಿದಾಗ ಮನೆಯ ಮಾಲೀಕರು ಪ್ರತ್ಯೇಕ ಗ್ರಂಥಕೊಠಡಿಯನ್ನು ನಿರ್ಮಾಣ ಮಾಡುತ್ತೇನೆಂದು ವಾಗ್ದಾನ ಕೊಟ್ಟಮೇಲೆಯೇ ಗೃಹಪೂಜೆಗೆ ಆಗಮಿಸಿದ ಸಂಗತಿಯಿಂದ ಆರಂಭವಾಗಿ ಅನಾಜಿ ಗೀತಾಭ್ಯಾಸಿ ಆದ ಸನ್ನಿವೇಶ, ದೇವುಡು ಅವರು ನಡೆಸಿಕೊಟ್ಟ 'ಏಕಶ್ಲೋಕ ವ್ಯಾಖ್ಯಾನ' ಕಾರ್ಯಕ್ರಮ; 'ಪಥ್ಯ ಪುಸ್ತಕಕ್ಕೆ ತಿದ್ದೋಲೆ ಕಳುಹಿಸಿದ ಕವಿ' ಮೊದಲಾದವು ಸಾಹಿತಿಗಳು, ಸಾಹಿತ್ಯದ ವಿಶಿಷ್ಟತೆಗಳನ್ನು ಚೆನ್ನಾಗಿ ಕಟ್ಟಿಕೊಟ್ಟಿವೆ.

ಇತ್ತೀಚಿನ ದಿನಗಳಲ್ಲಿ ಸಾಹಿತ್ಯ ಪರಿಷತ್ತಿನ ಹುದ್ದೆಗಳನ್ನು ಸ್ವಂತ ಲಾಭಕ್ಕಾಗಿ ಬಳಸಿಕೊಳ್ಳುವುದು ಕಂಡುಬರುತ್ತಿದೆ. ಆದರೆ ಅನಾಜಿ ಕಂಡ ಕಾಲದ ಗತ್ತೇ ಬೇರೆ. ಪರಿಷತ್ತಿಗಾಗಿ ಸಾಕಷ್ಟು ತ್ಯಾಗಗಳನ್ನು ಮಾಡಿದ ಮಹಾನುಭಾವರ ಪರಂಪರೆಯನ್ನು ನೆನೆಯುತ್ತಾ, "ಪರಿಷತ್ತಿನ ನಿಯಮಗಳ ಪ್ರಕಾರ ಮಾಸ್ತಿಯವರಿಗೆ ಅಂದಿನ ಮೀಟಿಂಗಿಗೆ ಬಂದುದಕ್ಕೆ ಆಟೋ ಚಾರ್ಜ್ ಕೊಡಲು ಹೋದೆ. 'ನಾವು ಪರಿಷತ್ತಿಗೆ ಕೊಡಬೇಕು. ಪರಿಷತ್ತಿನಿಂದ ಪಡೆಯುವುದಿಲ್ಲ' ಎಂದರು ಮಾಸ್ತಿ" ಎಂದು ಅನಾಜಿ ನೆನೆದಿದ್ದಾರೆ. ಪ್ರೊಫೆಸರ್ ಜಿ.ವಿ. ಒಂದೆಡೆ ಬರೆಯುತ್ತಾ 'ಡಿಎಲ್‌ಎನ್ ನಿಘಂಟಿನ ಕೆಲಸವನ್ನು ಬೇಗ ಮುಗಿಸಬೇಕು ಎನ್ನುತ್ತಿದ್ದರು. ಆದರೆ ನಿಘಂಟೇ ಅವರನ್ನು ಬೇಗ ಮುಗಿಸಿಬಿಟ್ಟಿತ್ತು' ಎಂದು ಬರೆದಿದ್ದಾರೆ. ತೀವ್ರ ಅನಾರೋಗ್ಯದಲ್ಲಿಯೂ ಡಿಎಲ್‌ಎನ ಪರಿಷತ್ತಿನ ಎರಡು ಮಹಡಿಗಳನ್ನೇರಿ ಕ್ಲುಪ್ತ ಸಮಯಕ್ಕೆ ಹಾಜರಾಗುತ್ತಿದ್ದುದನ್ನು ಅವರ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಅಂತೆಯೇ ಕರ್ಪೂರ ಶ್ರೀನಿವಾಸರಾವ್ ಅಸ್ವಸ್ಥರಾಗಿದ್ದಾಗ ಅವರನ್ನು ಕಾರಿನಲ್ಲಿಯೇ ಕುಳ್ಳಿರಿಸಿ, ಕೈಗೆ ದಾರವನ್ನು ಕೊಟ್ಟು, ಆ

ದಾರದ ಮತ್ತೊಂದು ತುದಿಯನ್ನು ಪರಿಷತ್ತಿನ ಬಾಗಿಲಿಗೆ ಕಟ್ಟಿದ್ದು, ಇವರು ದಾರ ಎಳೆಯುವುದರ ಮೂಲಕ ಕನ್ನಡ ಸಾಹಿತ್ಯ ಪರಿಷತ್ತಿನ ಉದ್ಘಾಟನೆಯಾದುದನ್ನು ಅನಾಜಿ ಇಲ್ಲಿ ಸ್ಮರಿಸಿದ್ದಾರೆ.

ಪರಿಷತ್ತಿನ ವಿಷಯ ಉಲ್ಲೇಖಿಸಿರುವಾಗಲೇ ಎಂ.ಆರ್.ಶ್ರೀ ಮತ್ತು ಕರಿಯಣ್ಣರ ಉಲ್ಲೇಖವಾಗ-ಬೇಕಾದ್ದು ಸಮಂಜಸ. ಎಂ.ಆರ್.ಶ್ರೀ ಅಂದು ಕೊಂಚ ಮುಂಚೆ ಬಂದಿದ್ದರು. ಪರಿಷತ್ತಿನ ಕಸ ಗುಡಿಸಲು ನೇಮಿತರಾದವರು ಬರುವಷ್ಟರಲ್ಲಿ, ಕೆಲವು ಸಾಹಿತಿಗಳು ಆಗಮಿಸುವುದಕ್ಕೆ ಮುಂಚೆಯೇ ಕಸ ಬಳಿಯಲೆಂದು.' ಇದನ್ನು ಏಕೆಂದು ಸಿಬ್ಬಂದಿ ಕೇಳಿದಾಗ 'ಪರಿಷತ್ತಿಗೆ ನೀನು ಸಣ್ಣ ಜವಾನ, ನಾನು ದೊಡ್ಡ ಜವಾನ' ಎಂದು ನುಡಿದುದು ಅವರ ಸಂಸ್ಥಾಬದ್ಧತೆಯನ್ನು ಎತ್ತಿತೋರುತ್ತದೆ. ಕರಿಯಣ್ಣ ಪರಿಷತ್ತಿನ ಅಟೆಂಡರ್. "ಸಾರ್, ನಿಮ್ಮ ಸ್ನೇಹಿತರು ಬಂದಾಗ ಕಾಫಿ ತರಿಸುತ್ತೀರಿ. ನಮ್ಮ ಸ್ನೇಹಿತರು ಬಂದಾಗಲೂ ತರಿಸಬಹುದೇ?" ಎಂದು ಅನಾಜಿಯವರನ್ನು ಕರಿಯಣ್ಣ ಪ್ರಶ್ನಿಸಿದಾಗ ಮುಂದೇನಾಯಿತು? ಸಂಕಲನದಲ್ಲಿರುವ ಮೂವತ್ತೇಳನೆಯ ಪ್ರಸಂಗವನ್ನು ಓದಿ ತಿಳಿಯಿರಿ.

ಅನಾಜಿ ವಿನೋದಪ್ರಿಯರು ಎನ್ನುವುದಕ್ಕೆ ಈ ಸಂಕಲನದಲ್ಲಿರುವ 'ಕ್ರಾಪ್ ಇನ್ಶೂರೆನ್ಸ್ (ಬೆಳೆ, ಕೇಶಗಳೆಂಬ ಅರ್ಥದಲ್ಲಿ), 'ದಶಾಕ್ಷ ಎಂದರೆ. .', 'ನೀವು ಕೊಟ್ಟ ಬಿಡಿ ಮುತ್ತು. . ." ಮೊದಲಾದವು ಸಾಕ್ಷಿಯಾಗಿವೆ. ಸಾಹಿತಿಗಳ ಹೃದಯಸಂಪನ್ನತೆಯನ್ನು ಎತ್ತಿ ತೋರುವ ಅನೇಕ ದೃಷ್ಟಾಂತಗಳು ಇಲ್ಲಿವೆ. 'ಮರ ಕಡಿಯೋದಕ್ಕೆ ನೋಡಕ್ಕಾಗಲ್ಲ; ಆ ಸಮಯದಲ್ಲಿ ಮನೆಯಲ್ಲಿ ಇರಲ್ಲ' ಎಂದ ವಿ.ಸೀ., 'ಬಳಸಿದ್ದು ಚಿಕ್ಕ ಬೆಲ್ಲದಷ್ಟು, ಕೊಟ್ಟಿದ್ದು ದೊಡ್ಡ ಬೆಲ್ಲದಷ್ಟು' ಎಂಬ ಶೀರ್ಷಿಕೆಯ ಜಿ. ರಾಮಯ್ಯನವರನ್ನು ಕುರಿತಾದ ಲೇಖನಗಳು ಅಂತಹ ಲೇಖನಗಳ ಪೈಕಿ ಎರಡಷ್ಟೆ.

ಅನಾಜಿ ಸಾಹಿತ್ಯದ ಅಧ್ಯಯನ, ಸಾಹಿತಿಗಳೊಡನೆ ಒಡನಾಟದಿಂದ ಅಪಾರ ಅನುಭವಸಿರಿಯನ್ನು ಪಡೆದಿದ್ದಾರೆ. ಅವರ ಜೈನಧರ್ಮದ ಅಧ್ಯಯನ ಮತ್ತು ಅದ್ನು ಕುರಿತಾದ ಭಾಷಣಗಳು, ರಚಿಸಿದ ಕೃತಿಗಳು ಆ ನಿಟ್ಟಿನಲ್ಲಿ ಅವರನ್ನು ಅನನ್ಯವಾಗಿಸಿವೆ ಎಂದು ಈ ಸಂಕಲನದಲ್ಲಿರು ಕೆಲವು ಪ್ರಸಂಗಗಳು ತೋರ್ಪಡಿಸುತ್ತವೆ. ರಸ, ವಿರಸ, ಸರಸ, ಪರಿಸ್ಥಿತಿಗಳ ನಿಭಾವಣೆಗಳ ಪರಿ, ಭಾಷಾ ಕೌಶಲ, ಸಭಾಮರ್ಯಾದೆ, ವಿನೀತತೆ, ಅಪೂರ್ವ ಸಾಧನೆ, ಮುಂತಾದ ಅನೇಖ ಮುಲುಕು. ಮರುಮೆಲುಕುಗಳಿಗೆ ಗ್ರಾಸ ಒದಗಿಸುವ ಶೇವಧಿ ಈ ಕೃತಿ, ತಮ್ಮ ಎಂಬತ್ತೆಂಟರ ವಯಸ್ಸಿನಲ್ಲಿಯೂ ಲವಲವಿಕೆಯಿಂದ ಈ ಸಂಗತಿಗಳನ್ನು ಕಲೆಹಾಕಿ, ಕನ್ನಡ ಸಾಹಿತ್ಯಕ್ಕೆ ಉತ್ತಮವಾದ ಕೊಡುಗೆಯೊಂದನ್ನು ಕೊಡುಗೆ ನೀಡಿದ ಅನಾಜಿ ಸ್ತುತ್ಯರ್ಹರು.

******

"ವಾಣಿಜ್ಯ ಕನ್ನಡಕ್ಕೆ ಸಾಹಿತ್ಯ ಮತ್ತು ಸ್ಪರ್ಶ"

ಡಾ. ಎನ್. ರವಿ

೧೯೯೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು "ಹೊಸಗನ್ನಡ ವ್ಯಾಕರಣ, ಛಂದಸ್ಸು ಮತ್ತು ವ್ಯಾವಹಾರಿಕ ಕನ್ನಡ" ಎಂಬ ಪಠ್ಯ ಕೃತಿಯನ್ನು ಪ್ರಕಟಿಸಿತ್ತು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದವರು ಡಾ. ಸಾ.ಶಿ. ಮರುಳಸಿದ್ಧಯ್ಯನವರು.

ಸಾಹಿತ್ಯ ಪರಿಷತ್ತು ನಡೆಸುವ ಪ್ರವೇಶ, ಕಾವ, ಜಾಣ ಮತ್ತು ರನ್ನ ಪರೀಕ್ಷೆಗಳಿಗಾಗಿ ಪಠ್ಯ ವಿಷಯವನ್ನಾಧರಿಸಿದ ಪಠ್ಯಪುಸ್ತಕಗಳನ್ನು, ಅಧ್ಯಕ್ಷರ ಮಾರ್ಗದರ್ಶನದಲ್ಲಿ ರಚಿಸಿದ ಪಠ್ಯಪುಸ್ತಕ ಸಮಿತಿ, ಸುಮಾರು ಹದಿನಾಲ್ಕು ಪಠ್ಯಗಳನ್ನು ಸಂಪಾದಿಸಿತ್ತು.

ಅವುಗಳಲ್ಲಿ ಡಾ. ಟಿ.ಸಿ.ವಿ. ವೆಂಕಟಾಚಲ ಶಾಸ್ತ್ರಿ, ಡಾ. ಕೆ.ಆರ್. ಗಣೇಶ್ ಮತ್ತು ಪ್ರೊ. ಜಿ. ಅಶ್ವತ್ಥನಾರಾಯಣ ಅವರುಗಳು ಮೊದಲಿಗೆ ಪ್ರಸ್ತಾಪಿಸಿದ "ಹೊಸಗನ್ನಡ ವ್ಯಾಕರಣ, ಛಂದಸ್ಸು ಮತ್ತು ವ್ಯಾವಹಾರಿಕ ಕನ್ನಡ" ಎಂಬ ಕೃತಿಯನ್ನು "ಕನ್ನಡ ಜಾಣ" ಪರೀಕ್ಷೆಗೆ ಪಠ್ಯಪುಸ್ತಕವಾಗಿ ಸಿದ್ಧಪಡಿಸಿಕೊಟ್ಟಿದ್ದರು.

ಪ್ರಸ್ತುತ ಪಠ್ಯಪುಸ್ತಕದಲ್ಲಿ ಮೂರು ಭಾಗಗಳಿವೆ. ಅವುಗಳೆಂದರೆ ಹೊಸಗನ್ನಡ ವ್ಯಾಕರಣ, ಛಂದಸ್ಸು ಮತ್ತು ವ್ಯಾವಹಾರಿಕ ಕನ್ನಡ. ಈ ಲೇಖನದಲ್ಲಿ ಕೃತಿಯ ಮೂರನೇ ಭಾಗವಾದ, ಪ್ರೊ. ಅಶ್ವತ್ಥನಾರಾಯಣ ಅವರು ಸಂಗ್ರಹಿಸಿ ಸಂಪಾದಿಸಿರುವ, ವ್ಯಾವಹಾರಿಕ ಕನ್ನಡ ಪಠ್ಯಕೃತಿಯನ್ನು ಕುರಿತು ನನ್ನ ಅನಿಸಿಕೆಗಳನನು ಹಂಚಿಕೊಳ್ಳುತ್ತೇನೆ.

ಸುಮಾರು ೩೪ ವರ್ಷ ಪದವಿ ಕಾಲೇಜಿನಲ್ಲಿ ಕನ್ನಡ ಭಾಷೆಯ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿರುವ ನಾನು ನೇಮಕಗೊಂಡು ೧೯೯೧ ರಿಂದ ೨೦೦೪ರವರೆವಿಗೂ ವಾಣಿಜ್ಯ ಕನ್ನಡ ಪಠ್ಯವನ್ನು ಬೋಧಿಸಿದ್ದೇನೆ. ಆಗ ವಾರ್ಷಿಕ ಪರೀಕ್ಷೆಗಳನ್ನು ಅಂದಿನ ಅವಿಭಜಿತ ಬೆಂಗಳೂರು ವಿಶ್ವ-ವಿದ್ಯಾಲಯ ನಡೆಸುತ್ತಿತ್ತು. ಪದವಿಕಾಲೇಜುಗಳಲ್ಲಿ ಕಲಾ ವಿಭಾಗ, ವಿಜ್ಞಾನ ವಿಭಾಗ ಹಾಗೂ ವಾಣಿಜ್ಯ ವಿಭಾಗಗಳು ಮಾತ್ರ ಇದ್ದವು. ವಾಣಿಜ್ಯ ವಿಭಾಗದ ಮೊದಲ ಮತ್ತು ಎರಡನೇ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಪಠ್ಯಗಳನ್ನು ಬೋಧಿಸುತ್ತಿದ್ದರಿಂದ, ಅನಿವಾರ್ಯವಾಗಿ ಸಾಹಿತ್ಯ ಪಠ್ಯದೊಂದಿಗೆ ವಾಣಿಜ್ಯ ವಿದ್ಯಾರ್ಥಿಗಳಿಗೆ 'ವಾಣಿಜ್ಯ ಕನ್ನಡ ಅಥವಾ ವ್ಯಾವಹಾರಿಕ ಕನ್ನಡ'ವನ್ನು ಬೋಧಿಸಲೇಬೇಕಿತ್ತು.

ಮೂಲತಃ ನಾನು ಐಚ್ಛಿಕ ಕನ್ನಡ ಸಂಯೋಜಿತ ಕಲಾ ವಿಭಾಗದಲ್ಲಿ ಪದವಿ ಪಡೆದಿದ್ದರಿಂದ, ಪದವಿ ಕಾಲೇಜು ಕನ್ನಡ ಉಪನ್ಯಾಸಕರಾದ ಮೇಲೆ, ವಾಣಿಜ್ಯ ವಿದ್ಯಾರ್ಥಿಗಳಿಗೆ ವಾಣಿಜ್ಯ ಕನ್ನಡವನ್ನು ಹೇಳಿಕೊಡುವುದು ಹೊಸ ಅನುಭವ ಮತ್ತು ಸವಾಲಾಗಿತ್ತು.

ಆ ಸಂದರ್ಭದಲ್ಲಿ ಪಾಠ ಮಾಡಲು ಎಚ್ಚೆಸ್ಕೆಯವರ 'ವ್ಯಾವಹಾರಿಕ ಕನ್ನಡ', ಡಿ.ಟಿ. ರಂಗಸ್ವಾಮಿಯವರ 'ವ್ಯವಹಾರ ಕನ್ನಡ' ಎಂ. ಆರ್. ಲಕ್ಷ್ಮೀದೇವಿ ಮತ್ತು ಜಿ. ಅಬ್ದುಲ್ ಬಷೀರ್‌ರವರ 'ವಾಣಿಜ್ಯ ಕನ್ನಡ ಪರಿಚಯ', ಕೆ.ಎಂ. ಕೃಷ್ಣರಾವ್‌ರವರ 'ವಾಣಿಜ್ಯ ವಿಭಾಗ', ಸುರೇಶ್ ಪಾಟೀಲ್ ಮತ್ತು ಜಿ. ಎಸ್. ಶಾಮರಾವ್ ಅವರುಗಳು ಸಂಪಾದಿಸಿದ್ದ ವ್ಯಾವಹಾರಿಕ ದೀಪಿಕೆ' ಕೃತಿಗಳು ನನಗೆ ಆಕರ ಗ್ರಂಥಗಳಾಗಿದ್ದವು.

ಐಚ್ಛಿಕ ಕನ್ನಡ ವಿದ್ಯಾರ್ಥಿಯಾಗಿದ್ದ ನನಗೆ, ಸಾಹಿತ್ಯ ಬೋಧಿಸುವಾಗ ಇರುವ ಉತ್ಸಾಹ, ವ್ಯಾವಹಾರಿಕ ಕನ್ನಡ ಬೋಧಿಸುವಾಗ ಕಷ್ಟವಾಗುತ್ತಿತ್ತು, ನೀರಸ ಎನಿಸುತ್ತಿತ್ತು. ವಿದ್ಯಾರ್ಥಿಗಳು ಸಹ ನಿರುತ್ಸಾಹ ತೋರಿಸುತ್ತಿದ್ದರು. ಆದರೂ ಪಟ್ಟು ಬಿಡದೆ ಸಾಧ್ಯವಾದಷ್ಟು ರಂಜನೀಯವಾಗಿ ವಿದ್ಯಾರ್ಥಿಗಳನ್ನು ಪಠ್ಯದ ಕಡೆಗೆ ಸೆಳೆಯಲು ಹೆಣಗುತ್ತಿದ್ದೆ.

ಯಾವಾಗ ನನಗೆ ೧೯೯೭ರಲ್ಲಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ರಚಿಸಿದ್ದ ವ್ಯಾವಹಾರಿಕ ಕನ್ನಡ ಕೃತಿ ಕಣ್ಣಿಗೆ ಬಿದ್ದು ಪರಾಮರ್ಶಿಸಿದ ನಂತರ, ಪಾಠ ಮಾಡುವ. ವಾಣಿಜ್ಯ ಕನ್ನಡ ಬೋಧಿಸುವ ಉತ್ಸಾಹ ಮತ್ತು ಹುರುಪು ಹೆಚ್ಚಾಯಿತು. ಒಂದು ಕೃತಿ ತನ್ನ ಕ್ರಮವನ್ನು ಚೈತನ್ಯವನ್ನು "ಹೇಗೆ ? ಬದಲಾಯಿಸಿತು ಮತ್ತು ಉತ್ತೇಜಿಸಿತು" ಎಂಬ ಕುತೂಹಲಕಾರಿಯಾದ ಅಂಶಗಳು ಸಾಕಷ್ಟಿವೆ. ಆದರೆ ನಿಗದಿಪಡಿಸಿರುವ ಪುಟಗಳ ಮಿತಿಯಲ್ಲಿ ಕೆಲವು ಸಂಗತಿಗಳನ್ನು ಪ್ರಸ್ತಾಪಿಸುತ್ತೇನೆ.

ಸುಮಾರು ೬೦ ಪುಟಗಳ ವ್ಯಾಪ್ತಿಯಲ್ಲಿರುವ ಇವರ 'ವ್ಯಾವಹಾರಿಕ ಕನ್ನಡ' ಪಠ್ಯಕೃತಿಯಲ್ಲಿ ಮೂರು ಭಾಗಗಳಿವೆ. ಸರ್ಕಾರೀ ಪತ್ರಗಳು (ಭಾಗ-೧) ವಾಣಿಜ್ಯ ಪತ್ರಗಳು (ಭಾಗ-೨) ಸಾಮಾನ್ಯ ಪತ್ರಗಳು (ಭಾಗ-೩).

ಸರ್ಕಾರಿ ಪತ್ರಗಳಲ್ಲಿ ಕಛೇರಿ ಪತ್ರ, ಪತ್ರಗಳ ನೋಂದಣೀ, ಕಡತಗಳು, ಟಿಪ್ಪಣಿಗಳು, ವಿವಿಧ ಸರ್ಕಾರಿ ಪತ್ರಗಳು, ಸರ್ಕಾರದ ನಡವಳಿಗೆ, ಅಧಿಸೂಚನೆ, ಸುತ್ತೋಲೆ, ಪ್ರಕಟನಾ ಪತ್ರಗಳು, ವಿವರಣೆ, ಪ್ರಾಮುಖ್ಯತೆ ಮಾದರಿ ಇತ್ಯಾದಿ.

ವಾಣಿಜ್ಯಪತ್ರಗಳ ವಿಭಾಗದಲ್ಲಿ-ವಾಣಿಜ್ಯ ಕನ್ನಡದ ಸ್ವರೂಪ, ಪತ್ರ ವೈವಿಧ್ಯ ಮತ್ತು ಭಾಷೆ, ಉತ್ತಮ ವಾಣಿಜ್ಯ ಪತ್ರದ ಲಕ್ಷಣ ಮತ್ತು ಮಾದರಿ, ಪರಿಚಯ, ಉದ್ಯೋಗ ಪತ್ರಗಳು ಮತ್ತು ಅವುಗಳ ಮಾದರಿ, ಪ್ರಬಂಧ ರಚನೆ ಮತ್ತು ಗಾದೆಗಳ ವಿಸ್ತರಣೆ, ವರದಿಗಳ ತಯಾರಿಕೆ ಇತ್ಯಾದಿ ವಿಷಯಗಳಿವೆ.

ಮೂರನೇ ಭಾಗವಾದ ಸಾಮಾನ್ಯ ಪತ್ರಗಳ ವಿಭಾಗದಲ್ಲಿ ಕೌಟುಂಬಿಕ ಪತ್ರಗಳು, ಸಾಮಾಜಿಕ ಪತ್ರಗಳು, ಆಹ್ವಾನ ಪತ್ರಗಳು, ಇತ್ಯಾದಿ ಪತ್ರಗಳ ವಿವರಣೆ ಮತ್ತು ಮಾದರಿಗಳಿವೆ.

ಈವರೆವಿಗೂ ಕೃತಿಯಲ್ಲಿನ ವಿಷಯಗಳ ಕುರಿತು ಪರಿಚಯ ಮಾಡಲಾಯಿತು. ಈಗ ಲೇಖಕರ ಶೈಲಿ ಮತ್ತು ಅವರ ಬದುಕಿನ ಬರವಣಿಗೆಯ ಕ್ರಮವನ್ನು ಗಮನಿಸೋಣ.

ಆ ದಿನಗಳಲ್ಲಿ ಪದವಿ ಎರಡನೇ ವರ್ಷದ ವಾಣಿಜ್ಯ ಕನ್ನಡ ವಿದ್ಯಾರ್ಥಿಗಳಿಗೆ, ಬೋಧನೆ ಮಾಡಲು ಬೋಧಕರು ಪರಾಮರ್ಶಿಸುತ್ತಿದ್ದ, ಕೆಲವು ಕೃತಿಗಳ ಹೆಸರನ್ನು ಈಗಾಗಲೇ ಹೇಳಿದ್ದೇನೆ. ಆ ಪಠ್ಯಗಳು ಬೋಧಕನಿಗೆ ಮತ್ತು ವಿದ್ಯಾರ್ಥಿಗಳಿಗೆ ಗ್ರಹಿಸಲು ಅನುಕೂಲಕರವಾಗಿದ್ದರೂ, ಎಲ್ಲೋ ಒಂದು ಕಡೆ ಶುದ್ಧ ನೀರಿನ ಶೈಲಿ ಮತ್ತು ನಿಗದಿತ ಚೌಕಟ್ಟಿನ ವಿನ್ಯಾಸದೊಳಗೆ ಇದ್ದ ಕಾರಣ ಉಪನ್ಯಾಸಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಬೋಧಿಸಲು ಮತ್ತು ಓದಲು ಉತ್ಸಾಹ ಬರುತ್ತಿರಲಿಲ್ಲ.

ಆದರೆ ಈ ಕೊರತೆಯನ್ನು ಪ್ರೊ. ಜಿ. ಅಶ್ವತ್ಥನಾರಾಯಣರ ವ್ಯಾವಹಾರಿಕ ಕನ್ನಡ ಸಾಹಿತ್ಯ ನೀಗಿಸಿತು. ಈ ಪಠ್ಯ ಮತ್ತು ಪರಿಷತ್ತು 'ಜಾಣ' ಪರೀಕ್ಷೆಗೆ ನಿಗದಿ ಮಾಡಿದ್ದರೂ, ನಮ್ಮಂತಹ ಪದವಿ ಕಾಲೇಜಿನ ಉಪನ್ಯಾಸಕರಿಗೂ ಮತ್ತು ವಾಣಿಜ್ಯ ಕನ್ನಡ ವಿದ್ಯಾರ್ಥಿಗಳಿಗೂ ಉಪಯೋಗ ಮತ್ತು ಉತ್ತೇಜನಕಾರಿಯಾಗಿತ್ತು. ನಾನಂತೂ ಪ್ರಮುಖವಾಗಿ ಇವರ ಪುಸ್ತಕವನ್ನೇ ಆಧಾರವಾಗಿಟ್ಟುಕೊಂಡು ಬೋಧಿಸಲು ಆರಂಭಿಸಿದೆ. ವಿದ್ಯಾರ್ಥಿಗಳಲ್ಲಿ ಈ ಪುಸ್ತಕವನ್ನೇ ಹೆಚ್ಚು ಗಮನಿಸಲು ಸೂಚಿಸಿದ್ದೆ.

ಶ್ರೀಯುತ ಅಶ್ವತ್ಥನಾರಾಯಣರ ಮಾತು ಮತ್ತು ಬರಹ ಎರಡೂ ಒಂದೇ ರೀತಿ. ವೇದಿಕೆಯ ಮೇಲೆ ಅವರು ನಿರರ್ಗಳವಾಗಿ ಹಾಗೂ ನಿರಂತರವಾಗಿ ತಮ್ಮ ವಾಗ್ಝರಿಯನ್ನು ಹರಿಸುತ್ತಾರೆ. ಪದಗಳಿಗೆ ತಡಕಾಡುವುದಿಲ್ಲ. ಪ್ರಾಸಗಳು ನಲಿಯುತ್ತವೆ. ಕವಿಗಳ ಸಾಲುಗಳೂ ಮತ್ತು ನುಡಿಗಟ್ಟುಗಳು ವಿಜೃಂಭಿಸುತ್ತವೆ. ಇವರ ಮಾತಿನಲ್ಲಿ ಕನ್ನಡವನ್ನು ಹೇಳುವುದೇ ಒಂದು ಸೊಗಸು. ಅದೇ ರೀತಿ ಬರಹವೂ ಕನ್ನಡ ಶಾಸ್ತ್ರೀಯ ಮತ್ತು ತಾಂತ್ರಿಕ ಪದಗಳ ಬಳಕೆ ಮತ್ತು ವಾಕ್ಯ ರಚನೆಯನ್ನು ಬಯಸುವ ವ್ಯಾವಹಾರಿಕ ಕನ್ನಡದಂತಹ ಕೃತಿಗೆ ಶಾಸ್ತ್ರೀಯ ಶೈಲಿಯ ಜೊತೆಗೆ ಕಾವ್ಯಾತ್ಮಕ ಸ್ಪರ್ಶವೂ ದಕ್ಕಿದೆ. ಇದೇ ಇದರ ಯಶಸ್ಸು. ಹೀಗಾಗಿಯೇ ಬೋಧಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸರಾಗವಾಗಿ ಮತ್ತು ಖುಷಿಯಿಂದ ಓದಿಸಿಕೊಂಡು ಹೋಗುತ್ತದೆ. ಇದನ್ನು ನಾನು ಸ್ವತಃ ಅನುಭವಿಸಿದ್ದೇನೆ.

ಇವರ ಶೈಲಿ ಕಡೆ ಗಮನಹರಿಸೋಣ. ವ್ಯಾವಹಾರಿಕ ಪತ್ರ ಮತ್ತು ಟಿಪ್ಪಣಿ ಸಂಬಂಧವನ್ನು ಹೇಳುವಾಗ "ವ್ಯಾವಹಾರಿಕ ಪತ್ರಗಳೂ ಬಿಡಿಬಿಡಿಯ ಮಣಿಗಳಾದರೆ, ಟಿಪ್ಪಣಿಗಳು ಅವುಗಳನ್ನು ಪೋಣಿಸುವ ಹಾರವಿದ್ದಂತೆ" ಎಂದು ನಿರೂಪಿಸುವ ಸಾಲು (ಪುಟ ಸಂಖ್ಯೆ ೬-೭) ಮನಸೆಳೆಯುತ್ತದೆ. 'ಕಾಂಪಿಟೆಂಟ್ ಅಥಾರಿಟಿ' ಎಂಬ ಆಂಗ್ಲ ಪದಕ್ಕೆ 'ಸಕ್ಷಮಾಧಿಕಾರಿ' ಎಂಬ ಸಶಕ್ತ ಪದ ಬಳಸುತ್ತಾರೆ. ಅದೇ ರೀತಿ ಕಮ್ಯೂನಿಕೇಷನ್‌ಗೆ 'ಸಂವಾರ್ತೆ'ಎನ್ನುತ್ತಾರೆ.

ಇವರ ಬರಹ-ಸರಾಗ, ಸುಲಲಿತ, ಸ್ಪಷ್ಟ, ಸಂಕ್ಷಿಪ್ತ. ಸಾಂಧರ್ಬಿಕ ಹಾಗೂ ಸಮಗ್ರ ಎನ್ನಬಹುದು. ಅನುಭವ ಶೀಲ ಹಾಗೂ ಕೌಶಲ್ಯ ಪೂರ್ಣ ದಕ್ಷ ಅಧಿಕಾರಿ, ಬೋಧನಾನುಭವ ಇರುವ ಅತ್ಯುತ್ತಮ ಅಧ್ಯಾಪಕ ಹಾಗೂ ಸದಭಿರುಚಿಯ ಸಾಹಿತ್ಯಾಸಕ್ತ- ಈ ಮೂರು ಮುಖಗಳ ಸಮ್ಮಿಶ್ರಣ ವ್ಯಕ್ತಿತ್ವ ಕೃತಿಯ ಬರಹದಲ್ಲಿ ಕಾಣಿಸುತ್ತದೆ.

ಕೆಲವು ಪಾರಿಭಾಷಿಕ ಪದಗಳು ಕೇಳುವ ಧ್ವನಿ ಒಂದಾದರೆ, ಅವರ ಸಾಮಾಜಿಕ ಅರ್ಥ ಬೇರೆಯೇ ಇರುತ್ತದೆ. ಕೆಲವು ಪದಗಳು ಒಂದೇ ಅರ್ಥವನ್ನು ಕೊಟ್ಟರೂ, ಸನ್ನಿವೇಶಕ್ಕೆ ತಕ್ಕಂತೆ ಅರ್ಥ ಬದಲಾಯಿಸುತ್ತವೆ. ಮೂಲತಃ ಇವರು ಭಾಷಾ ಪಂಡಿತರಾಗಿದ್ದರಿಂದ ಇವುಗಳನ್ನೆಲ್ಲ ಪ್ರತ್ಯೇಕವಾಗಿ ಮನಮುಟ್ಟುವಂತೆ ಅದರ ಒಳ ಮತ್ತು ಹೊರ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಸುತ್ತಾರೆ. ನಿದರ್ಶನವಾಗಿ- ಅಧಿಸೂಚನೆ, ಜ್ಞಾಪನೆ, ಸುತ್ತೋಲೆ ನೆನಪೋಲೆ ಇತ್ಯಾದಿ ಪಾರಿಭಾಷಿಕ ಪದಗಳನ್ನು ಸೂಚಿಸಬಹುದು.

ಈ ಕೃತಿಯಲ್ಲಿ ಇತರೆ ಪಠ್ಯಗಳಲ್ಲಿ ಇಲ್ಲದ ಹೆಚ್ಚುವರಿ ಪತ್ರಗಳ ಪ್ರಸ್ತಾಪವೂ ಇದೆ. ನ್ಯಾಯಾಲಯದ ಪ್ರಕಟಣೆಗಳು, ಚುನಾವಣಾ ಪ್ರಕಟಣೆ, ಭೂ ಸ್ವಾಧೀನ ಪ್ರಕ್ರಿಯ ಮುಂತಾದ ಪ್ರಕಟಣೆಗಳು.

ಇವರು ಬಳಸುವ ವಾಕ್ಯರಚನೆ ಆಸಕ್ತಿ ಹಾಗು ಜ್ಞಾನದಾಯಕ. "ಭಾಷೆ ಬಳಕೆಯಿಂದ ಆದಿ ಮಾನವನಾಗಿದ್ದವನು ಅಣು ಮಾನವನಾಗಿದ್ದಾನೆ. ಎಲೆ ಗುಡಿಸಲಿನಂದ ಬಹು ಅಂತಸ್ತುಗಳವರೆಗೆ, ಪತ್ರ ಎನ್ನುವುದು ಎಂದು ಹೃದಯಗಳ ಮನಗಳ ನಡುವೆ ನಿರ್ಮಿಸಿದ ಭಾವಸೇತು, ವ್ಯಕ್ತಿಗಳ

ಮನೋಮಂದಿರದ ನಡುವೆ ತೆರೆದ ಕಿಟಕಿ" ಇಂತಹ ವಾಕ್ಯರಚನೆಗಳು ಕೃತಿಯ ಉದ್ದಕ್ಕೂ ಹರಡಿಕೊಂಡಿವೆ.

ವಾಣಿಜ್ಯ ಹಾಗೂ ಆಡಳಿತ ಕ್ಷೇತ್ರಗಳಲ್ಲಿ ಬಳಸುವ ಶಾಸ್ತ್ರೀಯ ಸ್ವರೂಪದ ಭಾಷೆ ವ್ಯಾವಹಾರಿಕ ಕನ್ನಡಕ್ಕೆ ಅಗತ್ಯ. ಇವರದು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶಾಸ್ತ್ರೀಯ ಸ್ವರೂಪದೊಂದಿಗೆ, "ಭಾವೋಪಯೋಗಿ" ಮಿಶ್ರಿತವಾಗಿರುವುದರಿಂದ, ಕೃತಿ ಎಲ್ಲಾ ರೀತಿಯ ಓದುಗರಿಗೂ ಸುಲಲಿತವಾಗಿ ಓದಿಸಿಕೊಳ್ಳುತ್ತದೆ.

ಸ್ವತಃ ಲೇಖಕರು, ವ್ಯಾವಹಾರಿಕ ಕನ್ನಡ ಪತ್ರಗಳ ಭಾಷೆ ಹೇಗಿರಬೇಕೆಂಬ ನಿಲುವನ್ನು ಒಂದು ರೂಪಕದ ಮೂಲಕ ವಿವರಿಸಿದ್ದಾರೆ. "ಕವಿಗಳದ್ದು- ಜೋಗದ ಜಲಪಾತದಂತಹ ನಿಸರ್ಗಶಕ್ತಿಯ ಅಭಿವ್ಯಕ್ತಿ, ವ್ಯವಹಾರವು ನಮ್ಮ ಅನುಕೂಲಕ್ಕೆ ನಾವು ನಿರ್ಮಿಸಿಕೊಂಡ ನೀರಾವರಿ ಜಲಾಶಯ ಯೋಜನೆಯ ಬಳಕೆ ಮಾರ್ಗ. ಆದ್ದರಿಂದ ಸಾರ್ವಜನಿಕರಿಗೆ ಅರ್ಥವಾಗುವ ಸರಳ ಆದರೆ ಆಡಳಿತ-ವಾಣಿಜ್ಯ ಕ್ಷೇತ್ರದ ಸೂಕ್ತವಾದ ಒಂದು 'ಸ್ಟ್ಯಾಂಡರ್ಡ್' ಭಾಷೆಯನ್ನು ಬಳಸುವುದು ಅಗತ್ಯ". ಈ ನಿಲುವನ್ನು ಸಮರ್ಥವಾಗಿಯೇ ಲೇಖಕರು ಕೃತಿಯ ಮೂಲಕ ಅನಾವರಣ ಮಾಡಿದ್ದಾರೆ.

ಕೃತಿಗೆ ಒಂದು ಐತಿಹಾಸಿಕ ಪ್ರಜ್ಞೆಯೂ ಇದೆ. ಲೇಖಕರು- ಭಾಷಾ ವಿಜ್ಞಾನಿಗಳು, ಬರಹಗಾರರು ಜೊತೆಗೆ ಹಲವು ಸಂಘ ಸಂಸ್ಥೆಗಳಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡವರು. ಹೀಗಾಗಿಯೇ ಇವರು ಪತ್ರಗಳ ಮಾದರಿ ಬರೆಯುವಾಗ ಕನ್ನಡ ಸಾಹಿತ್ಯ ಪರಿಷತ್ತು, ಸಂಸ್ಕೃತಿ ಇಲಾಖೆ, ಆಕಾಶವಾಣಿ, ದೂರದರ್ಶನ ಕೇಂದ್ರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಪುಸ್ತಕ ಪ್ರಾಧಿಕಾರ, ಗ್ರಂಥಾಲಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆಯ ನಾಟಕ ಅಕಾಡೆಮಿ, ಸಾಹಿತ್ಯ ಅಕಾಡೆಮಿ ಹೀಗೆ ನಾಡಿನ ಎಲ್ಲಾ ಪ್ರಾತಿನಿಧಿಕ ಸಂಸ್ಥೆಗಳ ಹೆಸರುಗಳು ಸಾಲುಸಾಲಾಗಿ ಕಾಣಿಸುವುದು ಆಸಕ್ತಿದಾಯಕ. ಸಂಸ್ಥೆಗಳೊಂದಿಗೆ ಸಾಹಿತಿಗಳ ಹಾಗೂ ಸಂಸ್ಕೃತಿ ಚಿಂತಕರ ಹೆಸರುಗಳು ಕೂಡಿ ಬರುತ್ತವೆ. ಕುವೆಂಪು, ಬೇಂದ್ರೆ, ಗೋವಿಂದಪೈ, ಸಿದ್ಧವನಹಳ್ಳಿ ಕೃಷ್ಣಶರ್ಮ, ಎಚ್ಚೆಸ್ಕೆ, ಎ.ಆರ್.ಕೃ, ಜಿ.ಪಿ.ರಾಜರತ್ನಂ, ಜಿ.ವಿ. ನಾರಾಯಣ, ನಿಸಾರ್ ಅಹಮದ್ ಮುಂತಾದವರು ಕಾಣಿಸಿಕೊಳ್ಳುತ್ತಾರೆ.

ನೀರು, ಸೊಳ್ಳೆ, ಕಸ, ಧೂಳು, ಪರಿಸರಪ್ರಜ್ಞೆ ಸ್ವಚ್ಛತೆ, ದಲಿತ ವಿದ್ಯಾರ್ಥಿಗಳ ಹಾಸ್ಟೆಲ್ ಸಮಸ್ಯೆ ಮುಂತಾದ ಸಾಮಾಜಿಕ ವಿಷಯಗಳು ಪತ್ರಗಳ ಒಡಲಲ್ಲಿ ಮೂಡುತ್ತಿವೆ. ಇವೆಲ್ಲವೂ ಔಚಿತ್ಯ ಮತ್ತು ಸಹಜತೆಯಿಂದ ಬಂದಿರುವುದರಿಂದ ಕೃತಿಗೆ ಪರೋಕ್ಷವಾಗಿ ಸಾಹಿತ್ಯಕ, ಸಾಮಾಜಿಕ, ಐತಿಹಾಸಿಕ ಆಯಾಮಗಳು ದೊರೆತಿರುವುದು-ವ್ಯಾವಹಾರಿಕ ಕನ್ನಡ ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ.

ವಾಣಿಜ್ಯ ಪತ್ರದಲ್ಲಿ ಗ್ರಾಹಕರು ಸರಕುಗಳ ಕೋರಿಕೆ ಸಲ್ಲಿಸುವಾಗ, ಅಲಂಕಾರಿಕ ಭಾಷೆ ಬಳಸಬಾರದು ಎಂದು ಹೇಳುವ ಉದಾಹರಣೆಗೆ – "ಸಿನಿಮಾ ತಾರೆಯರು ಬಳಸುವ ದೀರ್ಘಕಾಲ ಬಾಳಿಕೆ ಬರುವ ನಯನಮನೋಹರ ವರ್ಣದ ಯುವಕ ಯುವತಿಯರು ಪ್ರೀತಿಸುವ ವಿದೇಶಗಳಲ್ಲೂ ಜನಪ್ರಿಯವಾಗಿರುವ, ವೃದ್ಧರೂ ಕಂಡರೆ ಬಿಡದಿರುವ, ಊರ್ವಶಿ ಸೋಪಿನ ೪೦ ಪ್ಯಾಕೆಟ್ ಕಳಿಸಿ" ಎಂದು ಹೇಳುತ್ತಲೇ ಯುವ ಓದುಗ ವಿದ್ಯಾರ್ಥಿಗಳ ಮನಸ್ಸನ್ನು ಖುಷಿಗೊಳಿಸುತ್ತಾರೆ (ಪುಟ ೧೨೨) ಹೀಗೆ ಹೇಳಬಾರದು ಎಂದು ಹೇಳುವುದನ್ನೂ ಕೂಡ, ಸುಂದರ ಉಪಮೆಗಳ ಮೂಲಕ ಹೇಳುವುದು, ಕವಿಯ ಕ್ರಿಯಾಶೀಲ ಹಾಸ್ಯ ಪ್ರಜ್ಞೆಗೆ ಸಾಕ್ಷಿಯಾಗಿದೆ.

ನಾಡಿನ ಸಾಹಿತಿ-ಚಿಂತಕರ ಹಲವು ಸಂಗತಿಗಳು ಇವರ ಪತ್ರಗಳಲ್ಲಿ ಮತ್ತು ವಿವರಣೆಯಲ್ಲಿ ನಿದರ್ಶನವಾಗಿ ಕಾಣಸಿಗುತ್ತವೆ. "ಗೋವಿಂದ ಪೈ ಅವರು ಪತ್ರಗಳನ್ನು ಬರೆಯಲು ನೇರಳೆ ಬಣ್ಣದ ಶಾಯಿಯನ್ನೇ ಬಳಸುತ್ತಿದ್ದರು" (ಪುಟ ೧೧೨), ಸರ್ವಜ್ಞ, ರಾಜರತ್ನಂ, ಡಿವಿಜಿಯವರ ಕವಿತೆಯ ಸಾಲುಗಳು ಹಾದು ಹೋಗುತ್ತವೆ. ಹೀಗೆ ವ್ಯಾವಹಾರಿಕ ಕನ್ನಡ ಪತ್ರ ಓದುವ ವಾಣಿಜ್ಯ ವಿದ್ಯಾರ್ಥಿಗಳಲ್ಲಿ ಪಠ್ಯದೊಂದಿಗೆ ಸಾಂಸ್ಕೃತಿಕ ಸಂಗತಿಗಳನ್ನು ಬೆಸೆಯಲು ಯತ್ನಿಸಿದ್ದಾರೆ.

ಪ್ರಬಂಧ ರಚನೆ ಮತ್ತು ಗಾದೆಗಳ ವಿಸ್ತರಣೆ ಕುರಿತು ಹೇಳುವಾಗ, ಗಂಭೀರ ಹಾಗೂ ಬದ್ಧತೆಯಿಂದ ವಿವರಿಸುತ್ತಾರೆ. ಗಾದೆಯನ್ನು ಕುರಿತು ಅವರು ಹೇಳುವ ರೂಪಕ ವಾಕ್ಯಗಳೂ, 'ಆಕೆಯನ್ನು ಕನ್ನಡಿಯಲ್ಲಿ ಕಾಣಿಸಿದಂತೆ, ಬಾಲ ಮುರುಳಿಯ ಬಾಯಲ್ಲಿ ಬ್ರಹ್ಮಾಂಡ' ಮತ್ತಷ್ಟು ಮುದಗೊಳಿಸುತ್ತದೆ.

ಇವರ ಈ ಕೃತಿಭಾಗ ಕೇವಲ ಪದವಿ ಹಂತದಲ್ಲಿ, ಪರೀಕ್ಷೆಗೆ ಸಿದ್ಧವಾಗುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಪಠ್ಯವಾಗದೆ, ಹೊಸದಾಗಿ ಬರವಣಿಗೆ ಅಭ್ಯಾಸ ಮಾಡುವ ಯಾರಿಗಾದರೂ, ಒಳ್ಳೆಯ ಆಕರ ಗ್ರಂಥವಾಗುತ್ತದೆ. ಪತ್ರ ಬರೆಯುವ ವಿಧಾನ, ವರದಿ ತಯಾರಿಸುವ ಮಾದರಿ, ಪ್ರಬಂಧ ರಚನೆ, ಗಾದೆಗಳ ವಿಸ್ತರಣೆ ಇವೆಲ್ಲವೂ ಕಲಿಕಾ ಹಂತದ ಬರಹಗಾರರಿಗೆ ಮಾದರಿ ಪಠ್ಯವಾಗಿದೆ.

ಕೌಟುಂಬಿಕ ಪತ್ರಗಳು-ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ, ಇಂದಿನ ನವಪೀಳಿಗೆಗೆ ಅವಶ್ಯಕವಾಗಿ ಗಮನಿಸಬೇಕಾದ ಅಧ್ಯಯನ ಯೋಗ್ಯ ಭಾಗವಾಗಿದೆ.

ಮೇಲ್ನೋಟಕ್ಕೆ ಈ ಕೃತಿಯಲ್ಲಿ ಬರುವ ವ್ಯಾವಹಾರಿಕ ಪತ್ರಗಳು, ಮಾದರಿಗಾಗಿ ಇದ್ದರೂ ಕೂಡ, ಯಾಂತ್ರಿಕ ಶೈಲಿಯಲ್ಲಿರದೆ, ಜೀವಂತ ಮತ್ತು ಕ್ರಿಯಾತ್ಮಕವಾಗಿರುವುದು ಗಮನೀಯ ಅಂಶ.

ವೈಯಕ್ತಿಕವಾಗಿ ಈ ಪಠ್ಯವನ್ನು ವಿದ್ಯಾರ್ಥಿಗಳಿಗಾಗಿ ರೂಪಿಸಿದ ಪಠ್ಯ ಎಂದು ಭಾವಿಸದೆ. ಐತಿಹಾಸಿಕವಾಗಿ ನಮ್ಮ ನಾಡಿನ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ದಾಖಲೆಯ ಪಠ್ಯಕೃತಿ ಎಂದೇ ಭಾವಿಸುತ್ತೇನೆ.

ಈ ಎಲ್ಲವೂ ಲೇಖಕರು ಪ್ರಜ್ಞಾಪೂರ್ವಕವಾಗಿ ಆಸ್ಪದ ಮಾಡಿರುವುದಿಲ್ಲ. ವ್ಯಾವಹಾರಿಕ ಕನ್ನಡ ಪುಸ್ತಕ ಸಿದ್ಧಪಡಿಸುವ ಔಚಿತ್ಯತೆ ಇದ್ದರೂ, ಬದ್ಧತೆ ಇರುವ ಲೇಖಕರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ತಮ್ಮ ಅನುಭವ ಹಾಗೂ ಆಸಕ್ತಿಯಿಂದಾಗಿ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಶ ನೀಡಿದ್ದಾರೆ. ಹೀಗಾಗಿ ಇದು ವಾಣಿಜ್ಯ ಕನ್ನಡದ ಪಠ್ಯವಾಗದೆ, ಸಾಂಸ್ಕೃತಿಕ ವಾಣಿಜ್ಯ ಕನ್ನಡದ ಪತ್ರವಾಗಿದೆ. ಇವರ ಉತ್ತಮ ಗುಣಮಟ್ಟದ ವಾಣಿಜ್ಯ ಸಾಂಸ್ಕೃತಿಕ ಪಠ್ಯ ನೀಡಿದ ಲೇಖಕರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳೊಂದಿಗೆ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

*****

ಮಹಲಿಂಗರಂಗ ಕವಿಯ ಅನುಭವಾಮೃತ ಕಾವ್ಯ

ಎಸ್. ಆರ್. ರಾಮಸ್ವಾಮಿ

[ಮಹಲಿಂಗರಂಗ ಕವಿಯ 'ಅನುಭವಾಮೃತ' ಕಾವ್ಯ (ಹೊಸಕೆರೆ ಚಿದಂಬರಯ್ಯನವರ ಟೀಕಾ ಸಹಿತ), ಸಂಪಾದಕರು ಮತ್ತು ಅನುವಾದಕರು: ಪ್ರೊ॥ ಜಿ. ಅಶ್ವತ್ಥನಾರಾಯಣ, ಪ್ರಕಾಶಕರು: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ೫೭೭ ೨೧೧ (ಹಾಸನ ಹೊಳೆನರಸೀಪುರ ಜಿಲ್ಲೆ). ಬೆಂಗಳೂರಿನಲ್ಲಿ ಪ್ರಾಪ್ತಿಸ್ಥಾನ: ಅಧ್ಯಾತ್ಮ ಪ್ರಕಾಶ ಶಾಖಾ ಕಾರ್ಯಾಲಯ, ನಂ. ೬೮ (ಹೊಸ ನಂ. ೬), ಎ.ಪಿ.ಕೆ. ರಸ್ತೆ, ೨ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು ೫೬೦ ೦೨೮, ಪುಟಗಳು: ೫೨+೬೩೨, ಬೆಲೆ: ರೂ. ೩೦೦. ಮುದ್ರಣ: ೨೦೧೨]

ವೇದಾಂತದರ್ಶನದ ಆಧಾರಗ್ರಂಥಗಳು ಇರುವುದು ಸಂಸ್ಕೃತದಲ್ಲಿ. ಪೂರ್ಣವಾಗಿ ಶಾಸ್ತ್ರೀಯ ರೂಪದ್ದಾದ ಆಧಾರಗ್ರಂಥಗಳಲ್ಲದೆ ಮುಖ್ಯ: ದಾರ್ಶನಿಕ ಪ್ರಮೇಯಗಳನ್ನು ಸುಲಭ ಗ್ರಾಹ್ಯಗೊಳಿಸುವ ದೃಷ್ಟಿಯಿಂದ ರಚನೆಗೊಂಡ ಗ್ರಂಥಗಳೂ ವಿಪುಲವಾಗಿವೆ. ಈ ಎರಡನೇ ವರ್ಗದ ಕೃತಿಗಳಿಗೆ, 'ಪ್ರಕರಣ ಗ್ರಂಥಗಳು' ಎಂಬ ಪರಿಭಾಷೆ ರೂಢವಾಗಿದೆ. ಇವಲ್ಲದೆ ದೇಶಭಾಷೆಗಳಲ್ಲಿಯೂ'' ವೇದಾಂತ ಪ್ರತಿಪಾದಕ ಗ್ರಂಥಗಳು ಹೇರಳವಾಗಿವೆ. ಹೀಗೆ ಜಟಿಲ ದಾರ್ಶನಿಕ ತತ್ತ್ವಗಳನ್ನು ಸಾಮಾನ್ಯರಿಗೆ ಸರಳ ಭಾಷಾಮಾಧ್ಯಮದ ಮೂಲಕ ಲಭ್ಯವಾಗಿಸಬೇಕೆಂಬ ಶ್ರದ್ಧೆಯು ವಿದ್ವದ್ವರ್ಗದಲ್ಲಿ ದೀರ್ಘಕಾಲದಿಂದ ಮುಂದುವರಿದಿದೆ.

ದೇಶಭಾಷೆಯ ವೇದಾಂತಪ್ರಸಾರ ಸಾಹಿತ್ಯ ದಲ್ಲಿ ಹಲವು ಪ್ರಕಾರಗಳಿವೆ. ಸಂಸ್ಕೃತದಲ್ಲಿದ್ದಂತೆ ಕೆಲವು ಗದ್ಯರೂಪದಲ್ಲಿಯೂ ಕೆಲವು ಪದ್ಯರೂಪ ದಲ್ಲಿಯೂ ಇರುತ್ತವೆ. ಕೆಲವು ದಾರ್ಶನಿಕ ಪರಿಷ್ಕಾರಕ್ಕೆ ಪ್ರಾಧಾನ್ಯ ನೀಡಿದರೆ ಕೆಲವು ವಿಶದೀಕರಣಕ್ಕೆ ಹೆಚ್ಚಿನ ಗಮನ ಹರಿಸಿರುತ್ತವೆ. ಕನ್ನಡದಲ್ಲಿ ಈ ರೀತಿಯ ವಾಙ್ಮಯ ಹುಲುಸಾಗಿದೆ.

ಕರ್ನಾಟಕದ ವೇದಾಂತಾಸಕ್ತ ವಲಯಗಳಲ್ಲಿ ಎರಡು ಪ್ರಮುಖ ಧಾರೆಗಳು ಇವೆ. ಒಂದು ಧಾರೆಯು ಶಾಸ್ತ್ರನಿಷ್ಠ ಅನುಸಂಧಾನಕ್ಕೆ ಬದ್ಧವಾದುದು. ಇದನ್ನು ಪ್ರಧಾನವಾಗಿ ಸಂಸ್ಕೃತ ಮಹಾವಿದ್ಯಾಲಯಗಳಲ್ಲಿಯೂ ವಿವಿಧ ಸಂಪ್ರದಾಯಗಳ ಗುರುಪೀಠಗಳಲ್ಲಿಯೂ ಕಾಣಬಹುದು. ಇನ್ನೊಂದು ಧಾರೆಯು ಯಾವುದೇ ಪ್ರತ್ಯೇಕ ಸಂಪ್ರದಾಯಗಳಿಂದ ಅತೀತವಾದ ಅಧ್ಯಾತ್ಮಸಾಧನಾಸಕ್ತ ವಲಯಗಳಲ್ಲಿ ಪ್ರಚಲಿತವಾಗಿದೆ. ಈ ಎರಡನೇ ಧಾರೆಯು ತತ್ತ್ವಪದಗಳು ಮೊದಲಾದ ದೇಸೀ ವಾಙ್ಮಯದ ಮಾಧ್ಯಮದಲ್ಲಿ ಜೀವಂತವಾಗಿದೆ. ಈ ಎರಡೂ ನೂರಾರು ವರ್ಷಗಳಿಂದ ಧಾರೆಗಳು ನಿರಂತರವಾಗಿ ಸಾಗಿಬಂದಿವೆ. ಈ ಪ್ರಸ್ಥಾನಗಳು ಭಿನ್ನವಾದರೂ ಪರಸ್ಪರ ವಿರೋಧಿಗಳಲ್ಲ. ಶಾಸ್ತ್ರೀಯ ದಾರ್ಶನಿಕ ವಾಙ್ಮಯದಿಂದ ಅನುಭಾವಿ ವಾಙ್ಮಯವು ಧಾರಾಳವಾಗಿ ಎರವಲು ಪಡೆದಿದೆ; ಹಲವು ಕೃತಿಗಳಂತೂ ಶಿಷ್ಟ ವೇದಾಂತ ಪರಂಪರೆಯನ್ನು ಆಡುಭಾಷೆಯಲ್ಲಿ ಪರಿಚಯ ಮಾಡಿಕೊಡುವ

ಆಶಯದಿಂದಲೇ ರಚನೆಗೊಂಡಿವೆ. ಈ ಕಾರಣದಿಂದಾಗಿ ಶಾಸ್ತ್ರಾಭ್ಯಾಸಿಗಳಿಗೂ ಈ ದೇಸೀ ಗ್ರಂಥಗಳು ಉಪಕಾರಕಗಳೇ ಆಗಿವೆ. ಸಾಮಾನ್ಯರ ಪಾಲಿಗಂತೂ ಈ ದೇಸೀ ಕೃತಿಗಳು ವರದಾನವೇ ಆಗಿವೆ ಮತ್ತು ಸಾಂಪ್ರದಾಯಿಕ ಅಧ್ಯಯನಕ್ಕೆ ಉತ್ತಮ ಪ್ರವೇಶಿಕೆಗಳೂ ಆಗಿವೆ. ಈ ವರ್ಗದ ಕೃತಿಗಳಲ್ಲಿ ಹಲವು ಅವುಗಳ ಸಮಗ್ರತೆಯ ಕಾರಣದಿಂದ ವಿಷಯ ಅತಿಶಯ ಜನಾದರಣೆಗೆ ಪಾತ್ರವಾಗಿವೆ. ಇಂತಹ ಹತ್ತಾರು ಜನಪ್ರಿಯ ಕೃತಿಗಳಲ್ಲಿ ಅತ್ಯಂತ ಪ್ರಸಿದ್ಧವಾದವು ನಿಜಗುಣರ ಕೃತಿಗಳು, ಮಹಲಿಂಗರಂಗ ಕವಿಯ 'ಅನುಭವಾಮೃತ', ಶಂಕರಾನಂದ ಯೋಗೀಶ್ವರರೆಂಬವರ ಕೃತಿಗಳು (೧೯ನೇ ಶತಮಾನದ ಉತ್ತರಾರ್ಧ). (ಶಂಕರಾನಂದರಾದರೋ ಮಹಲಿಂಗರಂಗಯತಿಯ ಶಿಷ್ಯರೇ ಆಗಿದ್ದವರು.)

ಈ ಕೃತಿಗಳು ಜನಸಾಮಾನ್ಯರ ಮಟ್ಟದಲ್ಲಿ ಕಾರಣ ಮಾತ್ರವಲ್ಲದೆ ವಿದ್ವದ್ವಲಯಗಳಲ್ಲಿಯೂ ಆದರಣೆ ಪಡೆದುಕೊಂಡಿವೆ. ಇದಕ್ಕೆ ಒಂದು ಕಾರಣವೆಂದರೆ ಜಟಿಲ ಸಂಸ್ಕೃತ ಶಾಸ್ತ್ರಗ್ರಂಥಗಳಲ್ಲಿ ನಾಲ್ಕಾರೆಡೆಗಳಲ್ಲಿ ಚೆದರಿರುವ ಪ್ರಮುಖ ವೇದಾಂತಪ್ರಮೇಯಗಳನ್ನು ಈ ಪರಿಚಯ ಗ್ರಂಥಗಳು ಸರಳವಾಗಿ ಏಕತ್ರ ಸಂಕಲಿಸಿ ಕೊಟ್ಟಿರುವುದು. ಮೂಲ ಸಿದ್ಧಾಂತಗಳಿಗೆ ಸಮೀಪಸ್ಥವಾದ ಆದರೆ ಸುಲಭಗ್ರಾಹ್ಯವೂ ಆದ ನಿರೂಪಣೆ ಇವುಗಳ ವೈಶಿಷ್ಟ್ಯ . ಅಲ್ಲದೆ ನೆನಪಿನಲ್ಲಿಟ್ಟುಕೊಳ್ಳಲು ಅನುವಾಗುವಂತೆ ಛಂದೋಬದ್ಧವಾಗಿಯೂ ಇರುವುದು ಇವುಗಳ ಮತ್ತೊಂದು ಸೌಲಭ್ಯ. 'ಅನುಭವಾಮೃತ' ಕಾವ್ಯದ ಪ್ರಯೋಜಕತೆ ಎಷ್ಟು ಅಧಿಕ ಪ್ರಮಾಣದ್ದೆಂದರೆ ಅದು ಸಂಸ್ಕೃತಕ್ಕೂ ತರ್ಜುಮೆಯಾಗಿ ಪ್ರಕಾಶನಗೊಂಡಿತ್ತು. ಸಂಸ್ಕೃತದ ಪ್ರೌಢ ದರ್ಶನಗ್ರಂಥಗಳಿಗೆ ಇರುವಂತೆ 'ಅನುಭವಾಮೃತ' ಕಾವ್ಯಕ್ಕೆ 'ತಾತ್ಪರ್ಯ ನಿರ್ಣಯ' ಎಂಬ ವ್ಯಾಖ್ಯಾನವೂ – ೧೮೭೪ರಲ್ಲಿ ಪ್ರಕಟಗೊಂಡಿದೆ.

ಸಾಮಾನ್ಯ ಗ್ರಹಿಕೆಯಂತೆ ಮಹಲಿಂಗರಂಗ ಕವಿಯು ೧೭ನೇ ಶತಮಾನದ ಉತ್ತರಾರ್ಧದಲ್ಲಿ ಇದ್ದವನು. ವಂಶೀಯವಾಗಿ ಉತ್ತರಕರ್ನಾಟಕ ಭಾಗಕ್ಕೆ ಸೇರಿದ್ದರೂ ಮಹಲಿಂಗರಂಗನು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಪ್ರಾಂತದಲ್ಲಿ ನೆಲೆಗೊಂಡಿದ್ದಿರಬೇಕು. ಜೀವನದ ಕೊನೆದಿನಗಳಲ್ಲಿ ಮಹಲಿಂಗರಂಗನು ಸಂನ್ಯಾಸದೀಕ್ಷೆ ಪಡೆದು 'ಸದಾನಂದ' ಎಂಬ ಹೆಸರನ್ನು ಧರಿಸಿದ್ದಂತೆ ತೋರುತ್ತದೆ. ಕವಿಯು ಶ್ರೀಶೈಲದ (ಆಂಧ್ರದ ಕರ್ನೂಲು ಜಿಲ್ಲೆ) ಮಲ್ಲಿಕಾರ್ಜುನನ ಉಪಾಸನೆಯ ಪರಂಪರೆಗೆ ಸೇರಿದವನೆಂದೂ ಸಹಜಾನಂದರೆಂಬವರ ಶಿಷ್ಯನಾಗಿದ್ದವನೆಂದೂ ಗ್ರಂಥಸ್ಥ ಪದ್ಯಗಳಲ್ಲಿಯೆ ಉಕ್ತವಾಗಿದೆ.

ಮೈಸೂರು ಭಾಗದಲ್ಲಿ ಸ್ವಲ್ಪಮಟ್ಟಿನ ಮುದ್ರಣಸೌಲಭ್ಯ ಏರ್ಪಟ್ಟ ಅಲ್ಪಕಾಲದಲ್ಲಿಯೆ (೧೮೪೦) 'ಅನುಭವಾಮೃತ' ಮೈಸೂರು ಅರಮನೆಯ ಕಲ್ಲಚ್ಚಿನ ಮುದ್ರಣಾಲಯದಲ್ಲಿ ಅಚ್ಚಾಗಿ ಪ್ರಕಾಶನಗೊಂಡಿತೆಂಬುದು ಈ ಗ್ರಂಥಕ್ಕೆ ಎಷ್ಟು ಬೇಡಿಕೆ ಇದ್ದಿತೆಂಬುದನ್ನು ಸೂಚಿಸುತ್ತದೆ.

'ಅನುಭವಾಮೃತ' ಕಾವ್ಯವನ್ನು ಮೂಲದಲ್ಲಿ ಓದದವರಿಗೂ ಸುಪರಿಚಿತವಾಗಿರುವ ಪದ್ಯ ಇದು:

ಸುಲಿದ ಬಾಳೆಯ ಹಣ್ಣಿನಂದದ,
ಕಳೆದ ಸಿಗುರಿನ ಕಬ್ಬಿನಂದದ
ಉಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ

ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ? ಸಂಸ್ಕೃತದಲಿನ್ನೇನು! ।

ಇಡೀ ಕನ್ನಡ ವಾಙ್ಮಯದಲ್ಲಿ ಕನ್ನಡ ಭಾಷೆಯ ಉಪಾದೇಯತೆಯನ್ನು ಎತ್ತಿಹಿಡಿದಿರುವ ಪದ್ಯಗಳಲ್ಲಿ ಈ ಪದ್ಯದಷ್ಟು ಜನಪ್ರಿಯವಾಗಿರುವುದು ಬಹುಶಃ ಬೇರೆ ಇರಲಾರದು. ಈ ಪದ್ಯದ ರಚಯಿತನು ಯಾರೆಂದು ಅರಿವಿಲ್ಲದ ಅಸಂಖ್ಯ ಮಂದಿಗೂ ಕಂಠಸ್ಥವಾಗಿರುತ್ತದೆ ಇದು. ಆಧುನಿಕ ಕಾಲದಲ್ಲಿ ಕನ್ನಡದ ಪರವಾದ ಅಭಿಯಾನಗಳು ಗರಿಗೆದರಿದುದು ಈಗ್ಗೆ ೧೩-೧೪ ದಶಕಗಳ ಹಿಂದೆಯಷ್ಟೆ. ಅದಕ್ಕೆ ಮುನ್ನೂರು ವರ್ಷಗಳಷ್ಟು ಹಿಂದೆಯೇ ಮಹಲಿಂಗರಂಗ ಕವಿಯು ಇಂತಹ ಅಸೀಮ ಕನ್ನಡಪ್ರೇಮವನ್ನು ಮೆರೆದಿರುವುದು, ಪ್ರಶಂಸಾವಹವಾಗಿದೆ. ಹಾಗೆ ನೋಡಿದರೆ ಕವಿಗೆ ಸಂಸ್ಕೃತದ ಬಗೆಗೆ ದುರ್ಲಕ್ಷ್ಯವಿದ್ದಿತೆಂದೇನೂ ಭಾವಿಸಲು ಕಾರಣವಿಲ್ಲ. 'ಅನುಭವಾಮೃತ'ದ ಆಕರಸಾಮಗ್ರಿ ಎಲ್ಲವೂ ಸಂಸ್ಕೃತಮೂಲದಿಂದ ಸಂಗ್ರಹಿಸಿದುದೇ. ಆದರೂ ವೇದಾಂತಶಾಸ್ತ್ರದಂತಹ ಜೀವನಾಧಾರ. ವಾಙ್ಮಯವನ್ನು ಕನ್ನಡವನ್ನಷ್ಟೆ ಬಲ್ಲ ಸಾಮಾನ್ಯರಿಗೂ ಲಭ್ಯವಾಗಿಸಬೇಕೆಂಬ ಮಹದಾಕಾಂಕ್ಷೆಯಿಂದ ಈ ಕೃತಿಯು ಕನ್ನಡದಲ್ಲಿ ಗ್ರಥಿತವಾಯಿತು. ಕವಿಯ ಆವಾಹನೆ ಇದು :

ಅಖಿಲವೇದಾಂತಾರ್ಥವನು ನಾ
ಯುಕುತಿಯಲಿ ಸಂಗ್ರಹಿಸಿ ಪೇಳುವೆ
ಸಕಲರಿಗೆ ತಿಳಿವಂತೆ ಸುಲಭೋಪಾಯದಿಂದೊಲಿದು ।
ಶುಕಮುನೀಶ್ವರನಂತೆ ನೀವಾ
ಸಕತಿಯಲಿ ನೆರೆ ತಿಳಿದು ನಿಜವಹ
ಮುಕುತಿಸುಖಸಾಮ್ರಾಜ್ಯಪದದಲಿ ನಿಂದು ಸುಖಿಯಾಗಿ ॥

ಹನ್ನೊಂದು ಅಧ್ಯಾಯಗಳಲ್ಲಿ ಎಂಟು ನೂರು ಪದ್ಯಗಳಲ್ಲಿ ಅಳವಡಿಸಲ್ಪಟ್ಟಿರುವ ಇಡೀ ಕಾವ್ಯವು ಲಾಲಿತ್ಯಪೂರ್ಣವಾಗಿದ್ದು ಅತ್ಯಂತ ಸರಳವಾದ ಪದಶಯ್ಯೆಯಲ್ಲಿ ನಿರ್ಮಿತವಾಗಿದೆ. ಮೂಲವಿಷಯದ ಮೇಲೆ ಪ್ರಭುತ್ವವಿದ್ದವರಿಗೆ ಮಾತ್ರ ಶಕ್ಯವಾಗುವಂಥದು ಇಂತಹ ಸರಳತೆ.

(೧) ಅಧಿಕಾರ ಲಕ್ಷಣ, (೨) ವೈರಾಗ್ಯ ಪ್ರಕರಣ, (೩) 'ತ್ವಂ' ಪದಾರ್ಥ ಶೋಧನೆ. (೪) 'ತತ್' ಪದಾರ್ಥ ಶೋಧನೆ, (೫) 'ಅಸಿ' ಪದಾರ್ಥ ನಿರ್ಣಯ, (೬) ಸಪ್ತಭೂಮಿಕೆಗಳ ಅಭ್ಯಾಸ. (೭) ಪರಮಾತ್ಮ ಪದ ನಿರೂಪಣ, (೮) ಮಾಯಾ ಮಿಥ್ಯಾತ್ವ ಪ್ರಕರಣ, (೯) ಜೀವತ್ರಯ ವಿಚಾರ, (೧೦) ಜೀವನ್ಮುಕ್ತಿ ನಿರೂಪಣ. (೧೧) ನಿರ್ಗುಣಾರಾಧರನೆಯ ನಿರ್ಣಯ; ವಿಂಗಡಣೆಯಾಗಿರುವ ಹೀಗೆ ವಿಷಯವಿಭಾಗಗಳ ಅಡಿಯಲ್ಲಿ ಇಡೀ ವೇದಾಂತ ಶಾಸ್ತ್ರದ ಮೂಲಪ್ರಮೇಯಗಳನ್ನು ವ್ಯವಸ್ಥಿತವಾಗಿ ವಿವರಿಸಲಾಗಿದೆ.

ಸಾಮಾನ್ಯವಾಗಿ 'ಶಾಸ್ತ್ರಕಾವ್ಯ'ಗಳಲ್ಲಿ ಭಾಷೆಯ ಸೊಗಸಾಗಲಿ ನಿರೂಪಣೆಯ ಆಕರ್ಷಣೆಯಾಗಲಿ ಇರಲೇಬೇಕೆಂಬ ನಿರೀಕ್ಷೆಯೇನೂ ಇರುವುದಿಲ್ಲ; ಮಂಡನೆಯ ಶಾಸ್ತ್ರನಿಷ್ಠೆಗೆ ಮಹತ್ತ್ವವಿರುತ್ತದೆ. 'ಅನುಭವಾ ಮೃತ' ಕಾವ್ಯವಾದರೋ ಎಲ್ಲಿಯೂ ಶುಷ್ಕವೆನಿಸದೆ ವಾಚನೀಯತೆಯನ್ನೂ ಲವಲವಿಕೆಯನ್ನೂ ಮಾಧುರ್ಯವನ್ನೂ ಉಳಿಸಿಕೊಂಡಿದೆ. ಉದಾಹರಣೆಗೆ: ವೇದಾಂತದ ಮೂಲಪ್ರಮೇಯಗಳಲ್ಲೊಂದಾದ ಅವಸ್ಥಾತ್ರಯ ಸಾಕ್ಷಿತ್ವವನ್ನು ಹೀಗೆ ಸರಳ ನುಡಿಗಟ್ಟಿನಲ್ಲಿ ನಿರೂಪಿಸಲಾಗಿದೆ:

ಕನಸಿನೊಳು ಕನಸಾಗಿ, ಬುದ್ಧಿಯ
ನೆನಹಿನೊಳು ನೆನಹಾಗಿ, ನಿದ್ರೆಯ
ಘನಸುಖದಿ ಸುಖವಾಗವಸ್ಥೆಗಳಾಗುಹೋಗಿನಲಿ।
ತನಯ ಕೇಳ್ತತ್ಸಾಕ್ಷಿಯಾಗಿಯೆ
ಮನವಚನಗಳಿಗರಿಯಲಳವಡ
ದನುಪಮ ಪರಂಜ್ಯೋತಿಯೇ ನೀನೆಂದು ನಿಶ್ಚಯಿಸು ॥

ವಿಷಯದ ಗಾಂಭೀರ್ಯವೂ ನಿರೂಪಣೆ ಸರಳತೆಯೂ ಹೀಗೆ ಗ್ರಂಥದುದ್ದಕ್ಕೂ ಮಿಳಿತ-ವಾಗಿರುವುದನ್ನು ಕಾಣುತ್ತೇವೆ.

ಶಾಸ್ತ್ರಪರಿಭಾಷೆಯನ್ನೇ ಬಳಸಿ 'ಮಾಯೆ'ಯ ಸ್ವರೂಪವನ್ನೂ ನಿರಸನವನ್ನೂ ನಿರಸನವನ್ನೂ ನಿರೂಪಿಸಿರುವುದು ರೋಚಕವೂ ಚಮತ್ಕಾರಪೂರ್ಣವೂ ಆಗಿದೆ:

ಎಲೆಲೆ ಮಾಯಾದೇವಿ, ಎನ್ನನು
ಬಳಲಿಸುವೆ ಹೋಗೆನಲು ಬ್ರಹ್ಮವ
ದೆಲೆ ವಿಭುವೆ, ನೀ ಪೂರ್ಣನಾಗಿರೆ ಹೋಗಲೆಡೆಯೆಲ್ಲಿ?
ತಿಳಿದು ನೋಡಲು ರಜ್ಜು ಭುಜಗನ
ವೊಲು ಕಣಾ ನಿನ್ನಲ್ಲಿ ಕಲ್ಪಿತ;
ಹೊಳೆವುತಳಿವುತಲಿರ್ಪುದೆನಗದು ಸಹಜವಾಗಿಹುದು ॥

ಹೀಗೆ ವೇದಾಂತದರ್ಶನದ ಪ್ರಸರಣ, ಮೌಲ್ಯವಂತ ಸಾಹಿತ್ಯಾನುಸಂಧಾನ – ಈ ಎರಡೂ ನೆಲೆಗಳಲ್ಲಿ ಮಹತ್ತ್ವದ ಸ್ಥಾನವನ್ನು ಪಡೆದುಕೊಂಡಿರುವ ಮಹಲಿಂಗರಂಗ ಕವಿಯ 'ಅನುಭವಾಮೃತ' ಕಾವ್ಯವು ಸದಾ ಆಸಕ್ತರಿಗೆ ಲಭ್ಯವಾಗಿ ಇರಬೇಕಾದದ್ದು ಅವಶ್ಯವಿದೆ. ೧೯ನೇ ಶತಮಾನದಲ್ಲಿಯೂ ೨೦ನೇ ಶತಮಾನದ ಪೂರ್ವಾರ್ಧದಲ್ಲಿಯೂ ಈ ಗ್ರಂಥವು ಹಲವು ಬಾರಿ ಪುನರ್ಮುದ್ರಣಗೊಂಡಿತ್ತು. ಸರಣಿಯಲ್ಲಿ ಕಟ್ಟಕಡೆಯದೆಂದರೆ ೧೯೨೫ ರಲ್ಲಿ ಒಮ್ಮೆ, ೧೯೩೬ ರಲ್ಲಿ ಒಮ್ಮೆ, ೧೯೫೦ ರಲ್ಲಿ ಒಮ್ಮೆ ಖ್ಯಾತ ವೇದಾಂತ ಲೇಖಕ ಹೊಸಕೆರೆ ಚಿದಂಬರಯ್ಯನವರು – ಅಗತ್ಯ ವಿವರಣೆಗಳು, ಟಿಪ್ಪಣಿಗಳು, ಪಾಠಾಂತರ ಸೂಚನೆಗಳು, ಕಠಿಣ ಶಬ್ದಾರ್ಥ – ಈ ಪರಿಕರಗಳೊಡನೆ ತುಂಬಾ ಅಚ್ಚುಕಟ್ಟಾಗಿ ಹೊರತಂದ ಆವೃತ್ತಿ. ಆವೃತ್ತಿಯನ್ನು ಸಿದ್ಧಪಡಿಸುವುದಕ್ಕೆ ಪ್ರೇರಣೆ ನೀಡಿದವರು ಹಾಗೂ ಗ್ರಂಥಲೇಖನದಲ್ಲಿ ಉದ್ದಕ್ಕೂ ಮಾರ್ಗದರ್ಶನ ಮಾಡಿದವರು ಹೊಳೆನರಸೀಪುರದ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳು (ಅವರ ಪೂರ್ವಾಶ್ರಮದಲ್ಲಿ ಎಂದರೆ ಅವರು ಇನ್ನೂ 'ವೈ. ಸುಬ್ಬರಾಯರು' ಆಗಿದ್ದಾಗ). ಹಿನ್ನೆಲೆಯನ್ನು ಗಮನಿಸುವಾಗ ಗ್ರಂಥದ ಈ ಆವೃತ್ತಿಯ ಗುಣವತ್ತತೆಯು ನಿರ್ವಿವಾದವಾಗಿದೆ. ಚಿದಂಬರಯ್ಯನವರು ಈ ೧೯೩೮ ರಲ್ಲಿ ದೈವಾಧೀನರಾದರು. ಅವರು ಪರಿಷ್ಕರಿಸಿದ್ದ. ೧೯೩೬ರ ಆವೃತ್ತಿಯೇ ಯಥಾವತ್ತಾಗಿ ೧೯೫೦ರಲ್ಲಿ ಪುನರ್ಮುದ್ರಣಗೊಂಡಾಗ ಶ್ರೀಗಳು ವಿರಾಜಮಾನರಿದ್ದರು. (ಬ್ರಹ್ಮಕ್ಯ ೧೯೭೫).

ದುರ್ದೈವವೆಂದರೆ ೧೯೫೦ ರಿಂದ ಈಚಿನ ೬೦ ವರ್ಷಗಳಲ್ಲಿ ಈ ಅಮೂಲ್ಯ ಗ್ರಂಥವನ್ನು ಪುನಃ ಪ್ರಕಟಿಸಲು ಯಾವ ಪ್ರಕಾಶಕರೂ ಉತ್ಸಾಹಿಸದಿದ್ದುದು. ಇದು ಖೇದಕರವಾಗಿರುವಂತೆ

ಆಶ್ಚರ್ಯಕರವೂ ಆಗಿದೆ. ಏಕೆಂದರೆ ವೇದಾಂತಶಾಸ್ತ್ರ ಪರಿಚಯವನ್ನು ಇಷ್ಟು ಸಮಗ್ರವಾಗಿಯೂ ಪರಿಷ್ಕಾರಪೂರ್ಣವಾಗಿಯೂ ಮನೋಹರವಾಗಿಯೂ ಮಾಡಿಕೊಡುವ ಪದ್ಯಗ್ರಂಥ ಕನ್ನಡ ವಾಙ್ಮಯದಲ್ಲಿ ಬೇರೆ ಇಲ್ಲ..

ಈ ದೊಡ್ಡ ಕೊರತೆಯನ್ನು ಇದೀಗ ನೀಗಿಸಿರುವುದು ಅಧ್ಯಾತ್ಮಪ್ರಕಾಶ ಕಾರ್ಯಾಲಯ. ಈ ಹೊಸ ಆವೃತ್ತಿಯ ಸಂಪಾದನದ ಹೊಣೆ ಹೊತ್ತು ಶ್ಲಾಘ್ಯವಾಗಿ ನಿರ್ವಹಿಸಿರುವವರು, ಗಣ್ಯ ಕನ್ನಡ ಲೇಖಕ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು: ಕನ್ನಡ ತರಬೇತಿ ಶಿಬಿರಗಳನ್ನು ನಡೆಸಿರುವವರು, ಕನ್ನಡ ಕಲಿಕೆ ಪಾಠ್ಯಗಳನ್ನು ರಚಿಸಿರುವವರು; 'ಜ್ಞಾನವಂತರಾಗಿ, ಜಾಗರೂಕರಾಗಿ', 'ದೇವುಡು ನರಸಿಂಹಶಾಸ್ತ್ರೀ',. 'ಉತ್ತಮ ಕ್ಷಮಾಧರ್ಮ' ಮೊದಲಾದ ಗ್ರಂಥಗಳ ಲೇಖಕರು; ವಿಜಯದಾಸರ ಕೀರ್ತನೆಗಳು, ದೇವರ ದಾಸಿಮಯ್ಯನ ವಚನಗಳು ಮೊದಲಾದವುಗಳ ಸಂಪಾದನ ಮಾಡಿರುವವರು; ಬೋಧಕರಾಗಿಯೂ ಸಂಘಟಕರಾಗಿಯೂ ಉತ್ತಮ ವಾಗ್ಮಿಯಾಗಿಯೂ ಹೆಸರಾದವರು.

ಹಿಂದಿನ ಆವೃತ್ತಿಯಲ್ಲಿ ಇಲ್ಲದ ಹಲವಾರು ಹೊಸ ಪರಿಕರಗಳ ಸೇರ್ಪಡೆಯಿಂದ ಪ್ರೊ॥ ಅಶ್ವತ್ಥನಾರಾಯಣ ಅವರು ಈ ಹೊಸ ಆವೃತ್ತಿಯನ್ನು ಹೆಚ್ಚು. ಸಮೃದ್ಧಗೊಳಿಸಿದ್ದಾರೆ. ಹೀಗೆ ಉಪಯುಕ್ತವಾದ ಹೊಸ ಅಂಶಗಳಲ್ಲಿ ಗಮನ ಸೆಳೆಯುವವು ಇವು:

(೧) ಹಿಂದಿನ ಆವೃತ್ತಿಯಲ್ಲಿ ಪ್ರತಿ ಪದ್ಯಕ್ಕೆ ಸಂಬಂಧಿಸಿದಂತೆ ಕಠಿಣ ಮತ್ತು ಪಾರಿಭಾಷಿಕ ಪದಪ್ರಯೋಗಗಳ ಅರ್ಥವಿವರಣೆಯನ್ನು ಮತ್ತು ಶಾಸ್ತ್ರೀಯ ಅಂಶಗಳ ವಿವರಣಾತ್ಮಕ ಟಿಪ್ಪಣಿಗಳನ್ನು ಕೊಡಲಾಗಿತ್ತು, ಈ ಹೊಸ ಆವೃತ್ತಿಯಲ್ಲಿ ಶಬ್ದಾರ್ಥಗಳ ಜೊತೆಗೆ ಪ್ರತಿಪದ್ಯಕ್ಕೆ ಧಾರೆಯಾಗಿ ಗದ್ಯರೂಪದ ಅನುವಾದ-ತಾತ್ಪರ್ಯವನ್ನೂ ಕೊಡಲಾಗಿದೆ.

(೨) ಹಿಂದಿನ ಆವೃತ್ತಿಯಲ್ಲಿ ಶಬ್ದಾರ್ಥ, ಪಾಠಾಂತರ, ನಿರ್ದೇಶನ, ಟಿಪ್ಪಣಿ, ವಿವರಣೆಗಳನ್ನು ಒಟ್ಟೊಟ್ಟಿಗೆ ಕೊಡಲಾಗಿತ್ತು, ಈ ಹೊಸ ಆವೃತ್ತಿಯಲ್ಲಿ ಪರಿಕರಗಳನ್ನು ಬೇರೆಬೇರೆಯಾಗಿ ಕೊಡಲಾಗಿದೆ.

(೩) ಹಿಂದಿನ ಆವೃತ್ತಿಯಲ್ಲಿ (ಪ್ರಾಯಶಃ ಆಗ ಅನಗತ್ಯವೆಂದು ಭಾವಿಸಿ) ನೀಡದಿದ್ದ ಪದ್ಯಾರ್ಥಗಳನ್ನೂ ಶಬ್ದಾರ್ಥಗಳನ್ನೂ ಸೇರಿಸಿ ಸಮಗ್ರಗೊಳಿಸಲಾಗಿದೆ.

(೪) ಹಿಂದಿನ ಆವೃತ್ತಿಯಲ್ಲಿ ಪ್ರತ್ಯೇಕ ಅನುಬಂಧವಾಗಿ ಕೊಡಲಾಗಿದ್ದ ಪೂರ್ವ ಕಥೆಗಳನ್ನು ಅವುಗಳ ಉಲ್ಲೇಖವಿರುವ ಪದ್ಯಗಳೊಡನೆಯೇ ನೀಡಲಾಗಿದೆ.

(೫) ಹೊಸಕೆರೆ ಚಿದಂಬರಯ್ಯ ಅವರ ಜೀವನದ ಸಂಕ್ಷಿಪ್ತ ಪರಿಚಯವನ್ನು ಸೇರಿಸಲಾಗಿದೆ.

(೬) ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳ ಮತ್ತು ಚಿದಂಬರಯ್ಯನವರ ಘನಿಷ್ಠ ಒಡನಾಟದ ವಿವರಗಳನ್ನು ಶ್ರೀಗಳವರ ಆತ್ಮಚರಿತ್ರೆಯ ಉದ್ಧೃತದ ಮೂಲಕ ತಿಳಿಸಲಾಗಿದೆ.

(೭) ಪದ್ಯಗಳಿಗೆ ಆಧಾರವಾದ ಮೂಲಶ್ರುತ್ಯಾದಿ ಉಲ್ಲೇಖಗಳನ್ನು ಸವಿವರವಾಗಿ ಪ್ರತ್ಯೇಕ ಅನುಬಂಧವಾಗಿ ಕೊಡಲಾಗಿದೆ.

(೮) ಪದ್ಯಗಳ ಮೊದಲ ಸಾಲುಗಳ ಅಕಾರಾದಿ ಸೂಚಿ, 'ಕನ್ನಡದಲ್ಲಿ ಅನುಭವಾಮೃತ ಸಾಹಿತ್ಯ' ಎಂಬ ಆಕರಸೂಚಿ, ಪದ್ಯಸಂಖ್ಯೆಯೊಡಗೂಡಿದ ಮುಖ್ಯಪದಸೂಚಿ ಈ

ಅನುಬಂಧಗಳನ್ನು ವ್ಯವಸ್ಥಿತವಾಗಿ ಕೊಟ್ಟಿರುವುದು ಅಭ್ಯಾಸಿಗಳಿಗೆ ಪ್ರಯೋಜನಕರ-ವಾಗಿದೆ.

ಹೀಗೆ ಎಲ್ಲ ದೃಷ್ಟಿಗಳಿಂದಲೂ ಶ್ರೇಷ್ಠಮಟ್ಟದ ವಿನ್ಯಾಸಕ್ಕೆ ಪ್ರೊ ಗ್ರಂಥಸಂಪಾದನ ಅಶ್ವತ್ಥನಾರಾಯಣ ಅವರ ಹೊಸ ಆವೃತ್ತಿಯ ಮಾದರಿಯಾಗಿದೆ. ಇಷ್ಟು ಮೇಲ್ಮಟ್ಟದ ಪರಿಷ್ಕಾರ ಶ್ರದ್ಧೆ ಈಚಿನ ದಿನಗಳಲ್ಲಿ ವಿರಳವಾಗಿದೆ. ಈ ಶ್ರಮಪೂರ್ವಕ ಸಾಧನೆಗಾಗಿ ಅವರಿಗೆ ಕೃತಜ್ಞತೆಯೂ ಅಶ್ವತ್ಥನಾರಾಯಣ ಅಭಿನಂದನೆಯೂ ಸಲ್ಲುತ್ತವೆ.

ಒಂದು ಗೌಣವಿವರವನ್ನು ಪ್ರಸ್ತಾವಿಸಬಹುದು.

ಚಿದಂಬರಯ್ಯನವರ ಆವೃತ್ತಿಯಲ್ಲಿ ಗ್ರಂಥದ ಅಂತ್ಯದಲ್ಲಿ ಕೆಳಗೆ ಕಂಡ ಮೂರು ಮಂಗಲಪದ್ಯಗಳನ್ನು ಸೇರಿಸಲಾಗಿತ್ತು:

ಪರಮಪಾವನನಿರ್ವಿಕಾರ ।
ಸುರಿತತೇಜೋಮಯನ, ವಿಮಲಾ
ಕರನ, ವಿಶ್ವಾಧಾರಸಾಕ್ಷಿಯ, ಯೋಗರೂಪನನು
ನಿರುಪಮಾನಂದೈಕಯೋಗಿ ।
ಶ್ವರನ, ಯೋಗಧ್ಯಾನನಿಷ್ಠನ, ।
ಗುರುಪರಮನವ್ಯಯನ ಪದವನು ಧ್ಯಾನಿಸುವನೊಲಿದು ॥ ೧ ॥

ಅನುಭವಾಮೃತವನ್ನು ಪೇಳಿದ
ವಿನುತಪಾವನಯೋಗಮೂರ್ತಿಯ
ನನುಪಮಾನಂದೈಕಸುಖಮಯನಾತ್ಮರತಿಮಯನ ।
ಚಿನುಮಯನ, ಸಚಿತರೂಪದ
ಘನತೆಯನು ತೋರಿಸಿದ ಪರತರ
ದನುಪಮಾನಂದೈಕರಂಗನ ನೆನೆವುದನವರತ ॥ ೨ ॥

ತತ್ತ್ವಮಸಿವಾಕ್ಯಾರ್ಥವನು ಪರ
ತತ್ತ್ವದಿರವನು ಸಕಲಯೋಗ
ಸ್ಫೂರ್ತಿಯಹ ಪದಸಮಾಧಿಯ ಮನನದಿರವುಗಳ ।
ಸತ್ಯವತ ಪರಮಾತ್ಮಪದವನು ।
ಮಿಥ್ಯಭೇದವನಳಿವ ತೆರನನು ।
ವಿಸ್ತರಿಸಿ ಹೇಳಿದ ಮಹಾತ್ಮಗೆ ಜಯತು ಜಯ ಜಯತು ॥ ೩ ॥

'ಶ್ರೀ ಮಹಲಿಂಗರಂಗನಿಗೆ ಮಂಗಲ' ಎಂಬ ಶೀರ್ಷಿಕೆಯಡಿಯಲ್ಲಿ ಪದ್ಯಗಳನ್ನು ಮುದ್ರಿಸಲಾಗಿತ್ತು. ಈ ಪದ್ಯಗಳು 'ಕೆಲವು ಕೈಬರಹದ ಪುಸ್ತಕಗಳ ಕೊನೆಯಲ್ಲಿದ್ದದ್ದು' ಎಂಬ ಸೂಚನೆಯನ್ನೂ ಚಿದಂಬರಯ್ಯನವರು ಕೊಟ್ಟಿದ್ದರು.

ಈಗಿನ ಆವೃತ್ತಿಯಲ್ಲಿ. ಈ ಮೂರು ಪದ್ಯಗಳನ್ನು ಸಂಪಾದಕರು ಅವು ಕವಿಕೃತ ಅಲ್ಲ ಎಂಬ ಕಾರಣ ನೀಡಿ ಕೈಬಿಟ್ಟಿದ್ದಾರೆ.

ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ನಿವೇದಿಸಬೇಕಾಗಿದೆ. ಕವಿಕೃತವಲ್ಲದ ಈ ಪದ್ಯಗಳನ್ನು ಚಿದಂಬರಯ್ಯನವರು ತಮ್ಮ ಆವೃತ್ತಿಯಲ್ಲಿ ಸೇರಿಸಿದ್ದುದಕ್ಕೆ ಸಮರ್ಥನೆ ಇಲ್ಲದಿಲ್ಲ.

ಇಂತಹ ಕೃತಿಗಳನ್ನು ಕೇವಲ ಸಾಹಿತ್ಯಕೃತಿಗಳಾಗಿ ಪರಿಗಣಿಸದೆ ಪಾರಾಯಣ ಗ್ರಂಥಗಳಾಗಿಯೂ ಬಳಸುವ ರೂಢಿಯು ಶ್ರದ್ಧಾವಂತ ವಲಯದಲ್ಲಿ ಪ್ರಚಲಿತವಿದೆ. ಹಾಗೆ ಪ್ರತಿಯೊಂದು ಪಾರಾಯಣ ಅವಧಿಯನ್ನು ಒಂದೋ ಹಲವೋ ಮಂಗಲಪದ್ಯಗಳೊಡನೆ ಮುಗಿಸುವ ಸಂಪ್ರದಾಯ ಇದೆ. ಹಲವೊಮ್ಮೆ ಪಾರಾಯಣದ ಕೃತಿಗೆ ಆರತಿಯನ್ನು ಬೆಳಗಲಾಗುತ್ತದೆ. ಈ ಮಂಗಲ ಹಾಗೂ ಆರತ್ರಿಕ ಪದ್ಯಗಳು ಫಲಶ್ರುತಿಯನ್ನೂ ಒಳಗೊಂಡಿರುತ್ತವೆ. ಹಲವು ಸಂದರ್ಭಗಳಲ್ಲಿ (ಉದಾಹರಣೆಗೆ ಕುಮಾರವ್ಯಾಸ ಭಾರತ ವಾಚನ ಮಾಡುವಾಗ) ಆಯಾ ಕವಿಯದೇ ಪದ್ಯಗಳನ್ನು ಮಂಗಲಸೂಚಕವಾಗಿ ಬಳಸಲಾಗುತ್ತದೆ. ಇನ್ನು ಹಲವು ಸಂದರ್ಭಗಳಲ್ಲಿ ಆಯಾ ಸಂಪ್ರದಾಯದ ಯಾರೋ ಅನುಯಾಯಿಗಳು ರಚಿಸಿದ ಪದ್ಯಗಳನ್ನು ಮಂಗಲಸೂಚಕವಾಗಿ ಬಳಸಲಾಗುತ್ತದೆ. ಉದಾಹರಣೆಗೆ: ಸಮರ್ಥರಾಮದಾಸರ 'ಮನಾಚೀ ಶ್ಲೋಕ'ಗಳ ಪಾರಾಯಣದ ಪ್ರತಿ ಗೋಷ್ಠಿಯನ್ನೂ

ವೇದಾಂಚೆ ಜೇ ಗುಹ್ಯ ಶಾಸ್ತ್ರಾಂಚೆ ಜೇ ಸಾರ
ಪ್ರಾಕೃತ ಶಬ್ದಾಮಾಜಿ ಕೇಲಾ ವಿಸ್ತಾರ ।
ಕರ್ಮ ಉಪಾಸನಾ ಜ್ಞಾನ ಗಂಭೀರ
ಜ್ಯಾಚ್ಯಾ ಮನನ ಮಾತೇ ಆತ್ಮಾ ಗೋಚರ ॥

ಎಂದು ಆರಂಭವಾಗುವ 'ಮನೋಬೋಧ' ಆರತಿಯೊಡನೆ ಮುಗಿಸಬೇಕೆಂಬ ನಿಯಮವಿದೆ. ಅಂತೆಯೇ ಶ್ರೀಸಮರ್ಥರ 'ದಾಸಬೋಧ' ಗ್ರಂಥದ ಪ್ರತಿ ಪಾರಾಯಣಗೋಷ್ಠಿಯನ್ನೂ

ಯೋ ಜಾತೋ ಮರುದಂತಜೋ ಕ್ಷಿತಿತಲೇ
ಸಂಶೋಧನಾಯನ್ ಸಜ್ಜನಾನ್ ।

ಸೋಽಯಂ ಮುಕ್ತಿಕರಃ ಕ್ಷಿತ್ ವಿಜಯತೇ
ಶ್ರೀರಾಮದಾಸೋ ಗುರುಃ ।

– ಎಂಬ 'ದಾಸಬೋಧ ನಮನ'ದಿಂದ ಮುಕ್ತಾಯಗೊಳಿಸಬೇಕೆಂಬ ಕಟ್ಟಳೆ ಇದೆ.

ಈ ಪಾರಂಪರಿಕ ಸತ್ಸಂಗ–ಸಂಪ್ರದಾಯದ ಹಿನ್ನೆಲೆಯಲ್ಲಿ ಹೊಸಕೆರೆ ಚಿದಂಬರಯ್ಯನವರು ತಮ್ಮ ಆವೃತ್ತಿಯಲ್ಲಿ ಮೇಲೆ ಉದ್ಧರಿಸಿರುವ ಮಂಗಲಪದ್ಯಗಳನ್ನು ಅಂತ್ಯದಲ್ಲಿ ಸೇರಿಸಿದ್ದರೆಂದು ಊಹಿಸುವುದು ನಿರಾಧಾರವಾಗದು.

ಅದು ಹೇಗಾದರಿರಲಿ, ಆರು ದಶಕಗಳಿಂದ ದುರ್ಲಭವಾಗಿದ್ದ ಮಹಲಿಂಗರಂಗ ಕವಿಯ 'ಅನುಭವಾಮೃತ'ವನ್ನು ಈಗಿನ ಪೀಳಿಗೆಗೆ ಹೆಚ್ಚಿನ ಉಪಯುಕ್ತ ಪರಿಕರಗಳೊಡನೆ ಸಮೃದ್ಧಗೊಳಿಸಿ ಲಭ್ಯವಾಗಿಸಿರುವುದಕ್ಕಾಗಿ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರೂ ಪ್ರಕಾಶಕರಾದ ಅಧ್ಯಾತ್ಮ ಪ್ರಕಾಶ ಕಾರ್ಯಾಲಯ ಸಂಚಾಲಕರೂ ಸರ್ವಥಾ ಅಭಿವಂದ್ಯರಾಗಿದ್ದಾರೆ.

****

ಬುಕ್ಕಾಂಬುಧಿ ಪ್ರಾದೇಶಿಕ ಶಬ್ದಕೋಶ

ಜಿ. ವಿ. ಅರುಣ

ಚರವಾಣಿ : ೯೪೮೩೫೪೯೮೩೨

ಜನವರಿ 8, 2024ರಲ್ಲಿ ನಡೆದ ಒಂದು ಸಾಂಸ್ಕೃತಿಕ ಸಮಾರಂಭ, “**ನಮ್ಮ ನಿಮ್ಮ ಸಂಭ್ರಮ**”ದಲ್ಲಿ ಒಬ್ಬ ಮುಖ್ಯ ಅತಿಥಿಯಾಗಿ ಭಾಗವಹಿಸುವ ಸದವಕಾಶ ನನಗೆ ಒದಗಿತ್ತು. ಅದು ಅಮೆರಿಕದಿಂದ ಬಂದಿದ್ದ ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿ ಅವರ 99ನೇ ಹುಟ್ಟುಹಬ್ಬದ ಆಚರಣೆಯ ಕಾರ್ಯಕ್ರಮ. ಆ ಕಾರ್ಯಕ್ರಮವನ್ನು ರೂಪಿಸಿದ್ದು ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿ ಅವರ ಸಮೀಪ ಬಂಧುಗಳಾದ ಡಾ॥ ಬಿ. ವಿ. ರಾಜಾರಾಂ ಹಾಗು ಬುಕ್ಕಾಂಬುಧಿ ಮನೆತನದ ಬಂಧುಗಳು. ಮುಖ್ಯ ಅತಿಥಿಯಾಗಿ ನನ್ನ ಕಾರ್ಯವು ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿ ಅವರು ಸಂಕಲಿಸಿದ್ದ ‘**ಬುಕ್ಕಾಂಬುಧಿ ಪ್ರಾದೇಶಿಕ ಕನ್ನಡ – ಇಂಗ್ಲಿಷ್ ಶಬ್ದಕೋಶ**’ ಗ್ರಂಥವನ್ನು ಲೋಕಾರ್ಪಣೆ ಮಾಡುವುದು. ಇದನ್ನು ಓದಿದ ತಕ್ಷಣ ನಿಮಗೆ “ಗೋಕುಲಾಷ್ಟಮಿಗೂ ... ಏನು ಸಂಬಂಧ” ಎನ್ನಿಸಿರಬಹುದು.

ಬಾದರಾಯಣ ಸಂಬಂಧ :

ಅದೇನೆಂದು ತಿಳಿಯುವ ಮೊದಲು ಕೆಲವು ವಿಚಾರಗಳ ಬಗ್ಗೆ ನಿಮ್ಮ ಗಮನವನ್ನು ಸೆಳೆಯಬೇಕು. ಬುಕ್ಕಾಂಬುಧಿಯ ಬಂಧುಗಳಿಗೆ ನನ್ನ ತಂದೆಯವರ ಮೇಲೆ, ನಮ್ಮ ಕುಟುಂಬದ ಮೇಲೆ ಅಸೀಮ ಪ್ರೀತಿ ವಿಶ್ವಾಸ ಗೌರವಗಳಿದ್ದವು; ಈಗಲೂ ಇವೆ. ಅವರ ಈ ಪ್ರೀತಿಯ ಸಿಂಚನದ ಒಂದೆರಡು ಹನಿಗಳು ನನ್ನ ಮೇಲು ಬಿದ್ದ ಪರಿಣಾಮವೇ ನಾನು ಅಂದು ಆ ಕಾರ್ಯಕ್ರಮದಲ್ಲಿ ಪಾಲುಗೊಳ್ಳಲು ಕಾರಣ. ಇದರ ಜೊತೆಗೆ ಶ್ರೀ ಬಿ. ವಿ. ರಾಜಾರಾಂ ಅವರು ನನಗೆ ತಿಳಿಸಿದಂತೆ, ಬಾದರಾಯಣ ಸಂಬಂಧವೂ ಇದೆ! ಶತಾಯುಷಿಗಳಾಗಿದ್ದು, ನಿಘಂಟುಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವರು ನಮ್ಮ ತಂದೆ. ಅದೇ ರೀತಿ ಶತಾಯುಷಿಯಾಗುವ ಹೊಸ್ತಿಲಿನಲ್ಲಿರುವ, ‘ಬುಕ್ಕಾಂಬುಧಿ ಪ್ರಾದೇಶಿಕ ಶಬ್ದಕೋಶ’ವನ್ನು ರಚಿಸಿರುವ ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿಯವರು ಶ್ರೀ ರಾಜಾರಾಂ ಅವರ ಚಿಕ್ಕಪ್ಪ. ಇದೇ ಬಾದರಾಯಣ ಸಂಬಂಧ! ಹಾಗಾಗಿ ಈ ಪುಸ್ತಕ ಲೋಕಾರ್ಪಣೆಗೆ ನನಗೆ ಆಹ್ವಾನವಿತ್ತು.

ಶಬ್ದ ಹಾಗೂ ಅರ್ಥ:

ಪ್ರತಿಶಬ್ದಕ್ಕೂ ಒಂದು ಅಥವಾ ಹೆಚ್ಚಿನ ಅರ್ಥಗಳು ಇರಬಹುದು. ಶಬ್ದ ಹಾಗೂ ಅರ್ಥಗಳೆರಡು ಒಂದಕ್ಕೆ ಒಂದು ಹೊಂದಿಕೊಂಡಂತೆ ಇರುತ್ತವೆ. ಮಹಾಕವಿ ಕಾಳಿದಾಸನು ಶಬ್ದ ಅಂದರೆ ವಾಕ್ ಮತ್ತು ಅರ್ಥಗಳನ್ನು ಪಾರ್ವತಿ – ಪರಮೇಶ್ವರರಿಗೆ ಹೋಲಿಸಿ, ವಾಗರ್ಥಗಳು ಅವರಂತೆ ಅನ್ಯೋನ್ಯವಾಗಿರುತ್ತವೆ ಎಂದು ಸುಂದರವಾಗಿ, ಕಾವ್ಯಮಯವಾಗಿ ತಿಳಿಸಿದ್ದಾನೆ. ವಾಕ್ ಮತ್ತು ಅರ್ಥ ವಾಗರ್ಥ:

ವಾಗರ್ಥಾವಿವ ಸಂಪೃಕ್ತೌ ವಾಗರ್ಥಃ ಪ್ರತಿಪತ್ತಯೇ
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ॥

ಮಾನ್ಯ ಡಿವಿಜಿಯವರು ಇದಕ್ಕೆ ಬೇರೆಯ ಒಂದು ದರ್ಶನವನ್ನೇ ಮಾಡಿಸುತ್ತಾರೆ. ಅವರು ಹೇಳುವುದು 'ಶಬ್ದಕ್ಕೆ ಅರ್ಥ ಕೋಶದಿಂದ; ಭಾವಕ್ಕೆ ಅರ್ಥ ಹೃದಯದಿಂದ' ಎಂದು. ಮಸಾಲೆದೋಸೆಗೆ ಅರ್ಥ 'ಒಂದು ತಿಂಡಿ' ಎಂದು ಕೋಶದಲ್ಲಿ ಕೊಡುತ್ತಾರೆ. ವಿದ್ಯಾರ್ಥಿ ಭವನದ ಮಸಾಲೆ ದೋಸೆ ಬಗ್ಗೆ ನೆನೆಸಿಕೊಂಡಾಗ ಹುಲಿ ಬಣ್ಣದ ಬಿಸಿ ದೋಸೆಯ ಮೇಲೆ ಕರಗುತ್ತಿರುವ ಬೆಣ್ಣೆಯ ಚಿತ್ರ ಮನದಲ್ಲಿ ಮೂಡಿ, ಬಾಯಲ್ಲಿ ನೀರೂರುತ್ತಲ್ಲ ಅದಕ್ಕೆ ಕಾರಣ ನಮಗೆ ಹೃದ್ಯವಾಗುವ ಭಾವದ ಅರ್ಥದಿಂದ.

ಕನ್ನಡನಾಡಿನಲ್ಲಿ ಇರುವ ಬೇರೆಬೇರೆಯ ಕನ್ನಡಗಳು :

ಸುಮಾರು 800 ವರ್ಷಗಳ ಹಿಂದೆಯೇ ಶ್ರೀವಿಜಯನು ರಚಿಸಿದ ಕನ್ನಡ ಮೊಟ್ಟಮೊದಲನೆಯ ವ್ಯಾಕರಣ – ಲಕ್ಷಣ ಗ್ರಂಥ **ಕವಿರಾಜಮಾರ್ಗ**. ಈ ಶಾಸ್ತ್ರಗ್ರಂಥದಲ್ಲಿ ನಮ್ಮ ಕನ್ನಡನಾಡಿನಲ್ಲಿ '**ಕನ್ನಡಂಗಳ್**' ಅಂದರೆ ಬೇರೆ ಬೇರೆಯ ಕನ್ನಡಗಳು ಇವೆ ಎಂದು ದಾಖಲಿಸಿದ್ದಾನೆ. ನಮ್ಮ ರಾಜ್ಯದಲ್ಲಿ ಸುಮಾರು ಪ್ರತಿ ನೂರು ಕಿಲೋಮೀಟರ್ ದೂರದಲ್ಲಿ ಕನ್ನಡವನ್ನು ಮಾತನಾಡುವ ರೀತಿ ಬದಲಾಗುತ್ತಾ ಹೋಗುತ್ತದೆ. ಅಲ್ಲದೆ ಹವ್ಯಕ, ಕುಂದಾಪ್ರ, ಅರೆಭಾಷೆ ಮುಂತಾದ ಅನೇಕ ಉಪಭಾಷೆಗಳು ಕನ್ನಡಕ್ಕೆ ಇವೆ. ಆದ್ದರಿಂದ ಪ್ರಾದೇಶಿಕವಾಗಿ ವಿಶಿಷ್ಟವಾದ ಶಬ್ದಗಳು ಉಪಯೋಗದಲ್ಲಿವೆ. ಇವನ್ನು ಉಪಯೋಗಿಸುವವರ ಸಂಖ್ಯೆ ಕ್ಷೀಣಿಸಿದಂತೆ ಆ ವಿಶಿಷ್ಟ ಶಬ್ದಗಳನ್ನು ನಾವು ಕಳೆದುಕೊಳ್ಳುತ್ತೇವೆ. ಈ ದೃಷ್ಟಿಯಿಂದ ಬುಕ್ಕಾಂಬುಧಿಯ ಸುತ್ತಮುತ್ತ ಸುಮಾರು ಒಂದು ಶತಮಾನದ ಹಿಂದೆ ಉಪಯೋಗವಾಗುತ್ತಿದ್ದ ಶಬ್ದಗಳನ್ನು ಕಲೆಹಾಕಿ ಒಂದು ಸ್ತುತ್ಯ ಕಾರ್ಯವನ್ನು 99 ವಸಂತಗಳನ್ನು ಪೂರೈಸಿರುವ ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿಯವರು ಮಾಡಿದ್ದಾರೆ. ಹಾಗಾಗಿ ನಾವೆಲ್ಲರೂ ಅವರಿಗೆ ಕೃತಜ್ಞರಾಗಿರಬೇಕು. ನಾವೆಲ್ಲ ಬೆಂಗಳೂರನ್ನು ಸೇರಿ ನಮ್ಮ ಮನೆತನದ ಹಿರಿಯರು ಆಡುತ್ತಿದ್ದ ಶಬ್ದಗಳನ್ನು ಮರೆತು ಭ್ರಷ್ಟರಾಗಿ ಹೋಗಿದ್ದೇವೆ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಅತಿ ದೊಡ್ಡ ಕೆರೆ ಎಂದರೆ ಐತಿಹಾಸಿಕವಾಗಿ ಪ್ರಸಿದ್ಧವಾಗಿರುವ ಬುಕ್ಕಾಂಬುಧಿ ಕೆರೆ. ವಿಜಯನಗರ ಸಾಮ್ರಾಜ್ಯದ ಅರಸನಾಗಿದ್ದ ಬುಕ್ಕರಾಯನ ಹೆಸರಿನಲ್ಲಿ ಅದನ್ನು ಸಾಮಾನ್ಯ ಶಕೆ 1600ರ ಸುಮಾರಿಗೆ ನಿರ್ಮಿಸಿದ್ದು. ಆ ಕೆರೆಯಿಂದಾಗಿ ಊರಿಗೆ ಅದೇ ಹೆಸರು – ಬುಕ್ಕರಾಯನ ಅಂಬುಧಿ. ಸುಮಾರು ನಾಲ್ಕು ಸಾವಿರ ಜನಸಂಖ್ಯೆಯಿದ್ದ ಆ ಊರಿನಲ್ಲೇ ಶ್ರೀ ಕೃಷ್ಣಮೂರ್ತಿಯವರು ಹುಟ್ಟಿದ್ದು, ಬೆಳೆದಿದ್ದು. ಆ ಊರಿನ ಘಾಸಲೆಯಲ್ಲಿ ಒಂದು ಶತಮಾನದ ಹಿಂದೆ ಉಪಯೋಗವಾಗುತ್ತಿದ್ದ ವಿಶಿಷ್ಟವಾದ ಕನ್ನಡ ಶಬ್ದಗಳನ್ನು ಈಗಿನ ಜನರು ಉಪಯೋಗಿಸದೆ ಇರುವುದನ್ನು ಅವರು ಗಮನಿಸಿದರು. ಅಂಥ ಅನೇಕ ಶಬ್ದಗಳ, ಆಡುಮಾತುಗಳ ಜೊತೆಗೆ ಹಲವು ಸಾಂಸ್ಕೃತಿಕ, ಸಾಂಪ್ರದಾಯಿಕ ಇಲ್ಲವೇ ಸಾಮಾಜಿಕ ಆಚರಣೆಗಳು ಸೇರಿಕೊಂಡಿದ್ದವು. ಅವುಗಳು ಕೂಡ ಈಗ ಜನರ ಮನಸ್ಸಿನಿಂದ ಮಾಯವಾಗುವ ಕುರುಹನ್ನು ತೋರುತ್ತಿದ್ದವು. ಸುಮಾರು ಎರಡು ದಶಕಗಳಿಂದ ಅಮೇರಿಕವಾಸಿಗಳಾದ ಅವರು ಇಲ್ಲಿಗೆ ಬಂದಾಗಲೆಲ್ಲಾ ಇದರ ಅನುಭವ ಅವರಿಗೆ ಆಗುತ್ತಿತ್ತು. ಈ ಹಿನ್ನೆಲೆಯಲ್ಲಿ ಅವುಗಳು ಸಂಪೂರ್ಣವಾಗಿ ಮರೆಯಾಗುವುದಕ್ಕೆ ಮುಂಚೆ ಅವುಗಳನ್ನು ದಾಖಲಿಸುವುದು ಒಳ್ಳೆಯದು ಎಂದು ಅವರಿಗೆ ಮನವರಿಕೆಯಾಯಿತು. ಹಾಗಾಗಿ ತಮ್ಮ ಈ ಮಾಗಿದ

ವಯಸ್ಸಿನಲ್ಲಿ ಶ್ರೀ ಬುಕ್ಕಾಂಬುದಿ ಕೃಷ್ಣಮೂರ್ತಿಯವರು ತಮ್ಮ ನೆನಪಿನಿಂದ ಅವುಗಳನ್ನು ದಾಖಲಿಸಲು ನಿರ್ಧರಿಸಿ, ಕಾರ್ಯಪ್ರವರ್ತರಾದರು. ಅದೊಂದು ಶ್ಲಾಘನೀಯ ಕೆಲಸವಾಗಿ ಹೊರಹೊಮ್ಮಿತು. ಈ ಶಬ್ದಗಳು, ಆಡುಮಾತುಗಳು ಅವುಗಳ ಬಳಕೆಯ ಸಂದರ್ಭ ಹಾಗೂ ಅವನ್ನು ಯಾವ ಅರ್ಥದಲ್ಲಿ ಬಳಸಲಾಗುತ್ತಿತ್ತು ಎಂಬುದನ್ನು ನಿರ್ಧರಿಸಿ ದಾಖಲಿಸುವುದರ ಹಿಂದೆ ಶ್ರೀ ಬುಕ್ಕಾಂಬುದಿ ಕೃಷ್ಣಮೂರ್ತಿಯವರ ಮನಸ್ಸು, ಹೃದಯಗಳೆರಡೂ ಕೆಲಸ ಮಾಡಿವೆ.

ಶಬ್ದಕೋಶದ ಪ್ರಮುಖ ಅಂಶಗಳು :

ಈ ಶಬ್ದಕೋಶದಲ್ಲಿ ಎರಡು ಪ್ರಮುಖ ಅಂಶಗಳಿವೆ. ಮೊದಲನೆಯದು ಶಬ್ದಗಳಿಗೆ ಇಂಗ್ಲಿಷಿನಲ್ಲಿ ಕೂಡ ವಿವರಗಳನ್ನು ಕೊಟ್ಟಿರುವುದು. ಇದು ಹೊರದೇಶಗಳಲ್ಲಿ ಹುಟ್ಟಿಬೆಳೆದ, ಕನ್ನಡ ಬಾರದ, ಮುಂದಿನ ಪೀಳಿಗೆಗೆ ಉಪಯುಕ್ತವಾಗಿದೆ. ಎರಡನೆಯದು ಈ ವಿವರಗಳ ಜೊತೆಗೆ ಅನೇಕ ಕಡೆಗಳಲ್ಲಿ ಸೂಕ್ತ ಚಿತ್ರಗಳನ್ನು ಕೊಟ್ಟು ಆ ಪದ ಅಥವಾ ಪದಪುಂಜವು ಅರ್ಥವಾಗಲು ಸಹಾಯ ಮಾಡಿಕೊಟ್ಟಿರುವುದು. ಉದಾಹರಣೆಗೆ ಬಳಪದ ಕಲ್ಲಿನಿಂದ ತಯಾರಿಸಿದ, ಹಿಂದೆ ಅಡಿಗೆಮನೆಯಲ್ಲಿ ಉಪಯೋಗಿಸುತ್ತಿದ್ದಂಥ ವಸ್ತು **ಕಲಸೋರೆ, ಕಲ್ಲುಮರಿಗೆ;** ಆ ಮುಖ್ಯ ಉಲ್ಲೇಖದ ಕೆಳಗೆ ಅದರ ಚಿತ್ರವನ್ನು ನೀಡಿದ್ದಾರೆ. ಇದು ಅವುಗಳನ್ನು ಕಂಡಿರದ ಇಂದಿನ ಜನಾಂಗದವರಿಗೆ ಆ ಶಬ್ದವನ್ನು ಗ್ರಹಿಸಲು ಸಹಾಯಮಾಡುತ್ತದೆ. ಹಾಗಾಗಿ ಇದೊಂದು ವಿಶೇಷವಾದ ಡಿಕ್ಷನರಿ.

ಈ ಕೋಶದಲ್ಲಿ ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿಯವರು ತಮ್ಮ ಊರಿನಲ್ಲಿ ಜನರು ಆಡುತ್ತಿದ್ದ ಶಬ್ದಗಳನ್ನು ಪಟ್ಟಿ ಮಾಡಿ ಅದಕ್ಕೆ ಎನ್ಸೈಕ್ಲೋಪಿಡಿಯ ಮಾದರಿಯಲ್ಲಿ ವಿವರಣಾತ್ಮಕ ಅರ್ಥವನ್ನು ಕೊಟ್ಟಿದ್ದಾರೆ. ಜೊತೆಗೆ ಆ ಪದವನ್ನು ಅಂದಿನ ಕಾಲದಲ್ಲಿ ಹೇಗೆ ಬಳಸುತ್ತಿದ್ದರು ಎಂಬುದಕ್ಕೆ ವಾಕ್ಯಗಳ ರೂಪದಲ್ಲಿ ಒಂದೆರಡು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಇಲ್ಲಿ ನೀಡಿರುವ ಉದಾಹರಣೆಗಳಲ್ಲಿ ಅನೇಕ ಕಡೆ ಅಂತಹ ವಾಕ್ಯಗಳಲ್ಲಿ ಗ್ರಾಮ್ಯ ಭಾಷೆಯು ನುಸುಳಿದೆ. ಅದು ಆ ಪದವು ಉಪಯೋಗವಾಗುತ್ತಿದ್ದ ಪರಿಸರವನ್ನು ನಮಗೆ ಸೂಚಿಸುತ್ತದೆ. ಇವೆಲ್ಲವನ್ನು ಅವರೇ ಇಂಗ್ಲಿಷಿಗೆ ಭಾಷಾಂತರಿಸಿ ಕೊಟ್ಟಿದ್ದಾರೆ. ಅನೇಕ ಕಡೆಗಳಲ್ಲಿ ಈ ಉದಾಹರಣೆಗಳಲ್ಲಿ ಹಿಂದೆ ಉಪಯೋಗವಾಗುತ್ತಿದ್ದಂಥ ಮನೆಮದ್ದುಗಳ ಪರಿಚಯವು ಕಂಡುಬರುತ್ತದೆ. ಉದಾಹರಣೆಗೆ:

1. ಆಣಿ ಎಂಬ ಶಬ್ದವನ್ನು ನೋಡೋಣ. ಅದಕ್ಕೆ **ಕಲ್ಲೊತ್ತು** ಅಥವಾ **ಕಾರ್ನ್** ಎಂದು ನಾವು ಕರೆಯುತ್ತೇವೆ. ಆ ಶಬ್ದಕ್ಕೆ ನೀಡಿರುವ ಉದಾಹರಣೆ ಹೀಗಿದೆ: ಬಲಗಾಲಿನ ಅಂಗಾಲಲ್ಲಿ ಆಣಿ ಬೆಳೆದೈತೆ, ರಾತ್ರಿ ಎಕ್ಕದ ಹಾಲು ಹಾಕು ಮೆತ್ತಗಾಗುತ್ತೆ. (ಪು 59)
2. **ತಂಗಳು** ಎಂಬ ಶಬ್ದದ ಉದಾಹರಣೆ ಹೀಗಿದೆ : ತಂಗಳನ್ನಕ್ಕೆ ಮೊಸರು ಹಾಕಿ ಕಲಸಿ, ಕಾದ ಬೆಣಚುಕಲ್ಲನ್ನು ಸ್ವಲ್ಪ ಹೊತ್ತು ಅದರ ಒಳಗೆ ಇಟ್ಟು, ಸ್ವಲ್ಪ ಸಮಯದ ನಂತರ ತಿಂದರೆ ಆರೋಗ್ಯಕ್ಕೆ ಒಳ್ಳೆಯದು. (ಪು 289)
3. ಗೌರಿ ಗಣೇಶನ ಹಬ್ಬಗಳಲ್ಲಿ ಮಂಟಪವನ್ನು ಅಲಂಕಾರ ಮಾಡಿ, ಗೆಜ್ಜೆವಸ್ತ್ರ ಇಟ್ಟು ಪೂಜೆ ಮಾಡುತ್ತೇವೆ. ಹಾಗಿದ್ದರೆ '**ಗುನ್ನಂಪಟ್ಟೆ**' ಅಂದರೆ ಏನು ಗೊತ್ತಾ? ಅದಕ್ಕೆ ವರ್ತಿಕಾಗದ, ಚಿನ್ನಾರಿ ಕಾಗದ, ಬಣ್ಣದ ಅಲ್ಯೂಮಿನಿಯಂ ರೇಕು ಮುಂತಾದ ಹೆಸರುಗಳಲ್ಲಿ ನಾವು ಕರೆಯುತ್ತೇವೆ.

4. ಒಣಗಿಸಿದ **ತಂಗಡಿ ಹೂವೆ**ನಿಂದ ಟೀ ಮಾಡಿ ಕುಡಿಯಬಹುದು ಎಂದು ಎಷ್ಟು ಜನಕ್ಕೆ ಗೊತ್ತು? ತಂಗಡಿ ಹೂ ಎಷ್ಟು ಜನಕ್ಕೆ ಗೊತ್ತು?

ಉತ್ತಮ ಅಂಶ:

ನಾನು ಈ ಕೋಶದಲ್ಲಿ ಗಮನಿಸಿದ ಮತ್ತೊಂದು ಪ್ರಮುಖ ಅಂಶ ಎಂದರೆ ಬೇಕಾದ ಕಡೆಗಳಲ್ಲಿ, ಶಬ್ದಗಳಿಗೆ ವಿವರಣಾತ್ಮಕವಾಗಿ ಅನೇಕ ಉದಾಹರಣೆಗಳನ್ನು ನೀಡಿರುವುದು. ಅವು ಹಿಂದೆ ಬುಕ್ಕಾಂಬುಧಿಯ ಪರಿಸರದಲ್ಲಿದ್ದ ಉತ್ತಮ ಪದ್ಧತಿಗಳನ್ನು ನಮ್ಮ ಮುಂದೆ ಅನಾವರಣ ಮಾಡುತ್ತವೆ. ಅವು ಇಂದು ಸಂಪೂರ್ಣವಾಗಿ ಮರೆಯಾಗಿಲ್ಲದೆ ಇದ್ದರೂ ಆ ಹಾದಿಯಲ್ಲಿವೆ. ನಾವು ಎಚ್ಚೆತ್ತುಕೊಳ್ಳಬೇಕು.

'**ಹಣ್ಣುಮಾಡು**' ಶಬ್ದಕ್ಕೆ '**ಅಡೆಹಾಕು ನೋಡಿ**' ಎಂದು ಕೊಟ್ಟಿದ್ದಾರೆ. 'ಅಡೆಹಾಕು' ಶಬ್ದವನ್ನು ನೋಡಿದರೆ ಅಲ್ಲಿ ಮಾವಿನ ಕಾಯಿಯನ್ನು ಹಣ್ಣು ಮಾಡುವ ಬಗ್ಗೆ ವಿವರಗಳನ್ನು ತಿಳಿಸಿ, ಉದಾಹರಣೆಗೆ ನೀಡಿರುವ ವಾಕ್ಯ ಇದು: '**ಮಾವಿನ ಕಾಯಿ ಅಡೆ ಹಾಕಿದೆ. ಮುಂದಿನ ವಾರ ಬಾ, ಹಣ್ಣು ಕೊಡ್ತೇನೆ.**'

'**ಮುಂದಿನ ವಾರ ಬಾ ಹಣ್ಣು ಕೊಡ್ತೇನೆ**' ಎಂದು ಆ ಕಾಲದಲ್ಲಿ ಹೇಳುತ್ತಿದ್ದರು. ಅಂದಿನ ಜನರಿಗೆ ಹಂಚಿಕೊಂಡು ತಿನ್ನುವ ಬುದ್ಧಿ ಇತ್ತು; ಅವರು ಸ್ವಾರ್ಥರಾಹಿತ್ಯದಲ್ಲಿ ಸುಖವನ್ನು ಕಾಣುತ್ತಿದ್ದರು. ಇಂದು ನಾವು ಸ್ವಾರ್ಥಿಗಳಾಗಿ, ನಮ್ಮ ಮಕ್ಕಳನ್ನು ಸ್ವಾರ್ಥಿಗಳನ್ನಾಗಿ ಮಾಡುತ್ತಿದ್ದೇವೆಯೇ? ಯೋಚಿಸಬೇಕು. ಹಂಚಿಕೊಂಡು ತಿನ್ನುವುದನ್ನು ರೂಡಿಸಿಕೊಂಡರೆ ಮನೆಗಳು ಒಡೆಯುವುದು ತಪ್ಪುತ್ತದೆ. ಆಸ್ತಿಹಂಚಿಕೆಯಂಥ ವಿಚಾರಗಳು ಕ್ಷುಲ್ಲಕ ವಿಚಾರಗಳಾಗಿ ಬಾಂಧವ್ಯ ಗಟ್ಟಿಯಾಗುವತ್ತ ಮನಸ್ಸು ಹರಿಯುತ್ತದೆ.

ಬುಕ್ಕಾಂಬುಧಿಯವರೆಲ್ಲ, ಈ ಬುಕ್ಕಾಂಬುಧಿ ಪ್ರಾದೇಶಿಕ ಶಬ್ದಕೋಶವನ್ನು ತೆರೆದು ನೋಡುವುದು, ನಿಮಗೆ ಯಾವುದೋ ಪದಕ್ಕೆ ವಿವರಣೆ ಬೇಕು ಎನ್ನುವಾಗಲ್ಲ. ಪಾರಾಯಣ ಗ್ರಂಥದಂತೆ, ಓದುಬರಹ ಬರುವ ಮನೆಯವರೆಲ್ಲ ಒಮ್ಮೆ ಪೂರ್ತಿ ಓದಿಬಿಡಬೇಕು. ಅನಂತರ ಅಲ್ಲಿರುವ ಪದಗಳನ್ನು, ಪದಪುಂಜಗಳನ್ನು ನಿಮ್ಮ ಮಾತಿನಲ್ಲಿ ಉಪಯೋಗಿಸಿ. ಆಗ ನಿಮ್ಮ ಬುಕ್ಕಾಂಬುಧಿ ಪ್ರಾದೇಶಿಕತೆಯ ಸೊಗಡು ನಿಮ್ಮಲ್ಲಿ ಭದ್ರವಾಗಿ ಉಳಿದುಕೊಳ್ಳುತ್ತದೆ. ದಯವಿಟ್ಟು ಹಾಗೆ ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಮುಂದಿನ ಮುದ್ರಣಕ್ಕೆ ಮುನ್ನ :

ಈ ಪ್ರಾದೇಶಿಕ ಶಬ್ದಕೋಶದ ಹಿಂದಿರುವ ಉದ್ದೇಶ ಈಗ ಸ್ಪಷ್ಟವಾಗಿದೆ. ಇದನ್ನು ಅಭ್ಯಾಸ ಮಾಡಿದಾಗ, ಈ ಕೋಶದಲ್ಲಿ ಉಲ್ಲೇಖಗೊಂಡಿರುವ ಅನೇಕ ಶಬ್ದಗಳನ್ನು ಮುಖ್ಯ ಉಲ್ಲೇಖಗಳನ್ನಾಗಿ ಮಾಡಿ ಅವುಗಳಿಗೆ ವಿವರಣೆಗಳನ್ನು ಕೊಡಬಹುದು ಎನ್ನುವುದು ಗೋಚರವಾಗುತ್ತದೆ. ಹಾಗಾಗಿ ಇದು ಮತ್ತೊಂದು ಮುದ್ರಣವನ್ನು ಕಾಣುವ ಸಾಧ್ಯತೆಯೂ ಇದೆ. ಆ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬಹುದು ಎಂಬುದು ನನ್ನ ಅನಿಸಿಕೆ. ಅವುಗಳನ್ನು ಈ ಕೆಳಗೆ ಪಟ್ಟಿ ಮಾಡಿದ್ದೇನೆ:

1. ಪ್ರತಿ ಮುಖ್ಯ ಉಲ್ಲೇಖಗಳಿಗೆ ವಿವರಣೆಯನ್ನು ಕನ್ನಡದಲ್ಲಿ ಹಾಗೂ ಇಂಗ್ಲಿಷಿನಲ್ಲಿ ಕೊಟ್ಟ ಅನಂತರ ಕೆಳಗೆ ಮೂರು ನಕ್ಷತ್ರಗಳನ್ನು (***) ಹಾಕಿ ಆ ಭಾಗ ಮುಗಿಯಿತು

ಎಂದು ಸೂಚಿಸಲಾಗಿದೆ. ಇದರ ಅವಶ್ಯಕತೆ ಇಲ್ಲ. ಏಕೆಂದರೆ ಇಂಗ್ಲಿಷ್ ಭಾಷೆಯ ವಿವರಣೆಯ ಅನಂತರ, ಮುಂದಿನ ಮುಖ್ಯ ಉಲ್ಲೇಖವು ಕನ್ನಡದಲ್ಲಿ ದಪ್ಪ ಅಕ್ಷರಗಳಿಂದ ಪ್ರಾರಂಭವಾಗುತ್ತದೆ. ಇದನ್ನು ಬಹಳ ಸುಲಭವಾಗಿ ಗ್ರಹಿಸಬಹುದು. ಈ ಪುಸ್ತಕದಲ್ಲಿ ಕೊಟ್ಟಿರುವ ಎಲ್ಲ ಮೂರು ನಕ್ಷತ್ರಗಳನ್ನು ತೆಗೆದುಹಾಕಿದರೆ ಪುಸ್ತಕದ ಗಾತ್ರವು ಸುಮಾರು 40 ಪುಟಗಳಷ್ಟು ಕಡಿಮೆಯಾಗುತ್ತದೆ!

2. ಮುಖ್ಯ ಉಲ್ಲೇಖಗಳಿಗೆ ನೀಡುವ ವಿವರಣೆಯನ್ನು 'ಸೂತ್ರೀಕರಣ' ಎನ್ನುತ್ತಾರೆ. ಇಲ್ಲಿ ಈ ಕೋಶದ ಹಿನ್ನೆಲೆಗೆ ತಕ್ಕಂತೆ ಅದನ್ನು ಚೆನ್ನಾಗಿ ಮಾಡಿದ್ದಾರೆ. ಅದರ ಕೊನೆಯ ಸಾಲಿನಲ್ಲಿ ಹೆಚ್ಚಿನ ವಿವರಣೆಗೆ 'ನೋಡಿ' ಎಂದು ಕೆಲವು ಪದಗಳನ್ನು ಸೂಚಿಸಿದ್ದಾರೆ. ಅಲ್ಲಿಗೆ ಹೋಗಿ ನೋಡಿದರೆ ನಮಗೆ ಹೆಚ್ಚಿನ ಮಾಹಿತಿಗಳು ಸಿಗಬೇಕು. ಆದರೆ ಅನೇಕ ಕಡೆಗಳಲ್ಲಿ ಆ ಪದಗಳನ್ನು ಹುಡುಕಿದರೆ ಅವುಗಳು ದಾಖಲೆಯೇ ಆಗಿಲ್ಲ!

   ಉದಾಹರಣೆಗೆ: 1) ಪುಟ 603ರಲ್ಲಿ **ಹೊಂಡ** ಎಂಬ ಪದದ ಕೆಳಗೆ, ನೋಡಿ ಎಂದು **ರಾಡಿ** ಎಂಬ ಪದವನ್ನು ಸೂಚಿಸಿದ್ದಾರೆ. ಆದರೆ **ರಾಡಿ** ಪದವನ್ನು ದಾಖಲಿಸಿಲ್ಲ.

   2) ಪುಟ 602ರಲ್ಲಿ **ಹೆರಿಗೆ** ಎಂಬ ಪದದ ಕೆಳಗೆ, ನೋಡಿ ಎಂದು **ಶುಭಸ್ನಾನ** ಎಂಬ ಪದವನ್ನು ಸೂಚಿಸಿದ್ದಾರೆ. ಆದರೆ ಶುಭಸ್ನಾನ ಪದವನ್ನು ದಾಖಲಿಸಿಲ್ಲ.

3. ಈ ಕೋಶದಲ್ಲಿ ಹಲವುಕಡೆ ವಿವರಣೆಗೆ ಪೂರಕವಾಗಿ ಚಿತ್ರಗಳನ್ನು ನೀಡಿದ್ದಾರೆ. ಆದರೆ ಕೆಲವುಕಡೆ ಸಮರ್ಪಕವಾದ ಚಿತ್ರಗಳನ್ನು ಕೊಟ್ಟಿಲ್ಲ. ಉದಾಹರಣೆಗೆ **ಪಾತಾಳಗರಡಿ** (ಪುಟ 308) ನೀಡಿರುವ ಚಿತ್ರವೂ ಹಡಗಿನ ಲಂಗರಿನ ಚಿತ್ರ (Anchor of a ship). ಸರಿಯಾದ ಪಾತಾಳಗರಡಿಯ ಚಿತ್ರವನ್ನು ಅಲ್ಲಿ ನೀಡಬೇಕಿತ್ತು. ಇವುಗಳನ್ನು ಮತ್ತೊಮ್ಮೆ ಪರಿಶೀಲಿಸಬೇಕು.

ಮುಂದಿನ ಕೃತಿ :

ಕೊನೆಯದಾಗಿ ತೊಂಬತ್ತೊಂಬತ್ತನೆಯ ಹುಟ್ಟುಹಬ್ಬದಂದು ತಮ್ಮ ಮೂರು ಪುಸ್ತಕಗಳನ್ನು ಲೋಕಾರ್ಪಣೆ ಮಾಡಿರುವ ಬುಕ್ಕಾಂಬುಧಿ ಕೃಷ್ಣಮೂರ್ತಿಯವರು ತಮ್ಮ 100ನೇ ವರ್ಷಕ್ಕೆ ಯಾವ ಪುಸ್ತಕ ತರಬಹುದು ಎಂಬ ಬಗ್ಗೆ ನನಗೆ ಸಿಕ್ಕಿರುವ ಸೂಚನೆಯನ್ನು ನಿಮ್ಮ ಗಮನಕ್ಕೆ ತರುತ್ತೇನೆ.

ಈ ಶಬ್ದಕೋಶದಲ್ಲಿ "**ಬ್ರಾಹ್ಮಣರ ಬೈಗುಳ**" ಎನ್ನುವುದಕ್ಕೆ ಪುಟ 459ರಲ್ಲಿ ಒಂದು ಪುಟದಷ್ಟು ವಿವರಗಳನ್ನು ನೀಡಿದ್ದಾರೆ. ಜೊತೆಗೆ ಹತ್ತು ಬೈಗುಳಗಳನ್ನು ಹೆಸರಿಸಿ ಅವುಗಳ ವಿವರವನ್ನು ಅಲ್ಲಲ್ಲಿ ನೀಡಿದ್ದಾರೆ. ಅಲ್ಲಿ ಅವರು ನೀಡಿರುವ ಸೂಚನೆ ಇದು: "**ಗಂಡು ಮಕ್ಕಳನ್ನು ಬೈದಷ್ಟು ಹೆಣ್ಣು ಮಕ್ಕಳನ್ನು ಬೈಯುವುದಿಲ್ಲ. ಆದರೆ ಗಂಡಸರಿಗಿಂತ ಹೆಂಗಸರು ಬೈದಾಡುವುದು ಜಾಸ್ತಿ!**"

ಇದನ್ನು ಓದಿದ ತಕ್ಷಣ 'ಹೆಂಗಸರ ಬೈಗುಳ'ದಲ್ಲಿ ಏನು ನೀಡಿದ್ದಾರೆ ಎಂದು ಓದಲು ವೇಗವಾಗಿ ಕೋಶವನ್ನು ತಿರುಗಿಸಿದೆ. ಆದರೆ ಆ ಪದಪುಂಜವೇ ಅಲ್ಲೆಲ್ಲೂ ಸಿಕ್ಕಲಿಲ್ಲ. ಯಾಕೆ ಎಂದು ಸ್ವಲ್ಪ ಹೊತ್ತು ಯೋಚಿಸಿದೆ. ಈಗಾಗಲೇ ಆರುನೂರು ಪುಟಗಳನ್ನು ಮೀರಿರುವ ಈ ಕೋಶದಲ್ಲಿ ಅವನ್ನೆಲ್ಲಾ ಸೇರಿಸಿದರೆ ಸಾವಿರ ಪುಟಗಳು ದಾಟಬಹುದು ಎನ್ನಿಸಿರಬೇಕು. ಹಾಗಾಗಿ ಅದನ್ನು ಬೇರೆಯ ಪುಸ್ತಕವಾಗಿ ಬರೆಯಲು ಕೃಷ್ಣಮೂರ್ತಿಯವರು ಬಹುಶಃ ಯೋಚಿಸಿರಬೇಕು. ಹೇಗೂ ಈ ಹುಳವನ್ನು ನಾನೇ ಅವರ ತಲೆಗೆ ಬಿಟ್ಟಿದ್ದೇನೆ. ಕಾದು ನೋಡೋಣ!

ಪ್ರೀತ್ಯಾದರಗಳಿಂದ ಈ ಪುಸ್ತಕದ ಲೋಕಾರ್ಪಣೆಯ ಕೀರ್ತಿಯನ್ನು ನನಗಿತ್ತ ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿ ಹಾಗು ಡಾ।। ಬಿ ವಿ ರಾಜಾರಾಂ ಅವರಿಗೆ ಅನಂತ ನಮಸ್ಕಾರಗಳು.

ಇಂದಿನ ಪರಿಸ್ಥಿತಿಯಲ್ಲಿ ಈ ಕೋಶದ ನಿರ್ಮಾಣ ಸಾಧ್ಯವಿದ್ದದ್ದು ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿ ಅವರೊಬ್ಬರಿಗೆ ಮಾತ್ರ. ತಮ್ಮ ತೊಂಬತ್ತೊಂಬತ್ತನೆಯ ವಯಸ್ಸಿನಲ್ಲಿ, ದೂರದ ಅಮೆರಿಕದಲ್ಲಿ ಕುಳಿತು, ಇಂಥ ಸಾಂಸ್ಕೃತಿಕ ದಾಖಲೆಯನ್ನು ಯಶಸ್ವಿಯಾಗಿ ಮಾಡಿರುವ ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿಯವರ ಕಾರ್ಯವನ್ನು ಶ್ಲಾಘಿಸಲು ನನ್ನ ಬಳಿ ಶಬ್ದಗಳೇ ಇಲ್ಲ; ನಾವು ಅವರಿಗೆ ಕೈ ಮುಗಿದು ಕೃತಜ್ಞತೆಗಳನ್ನು ತಿಳಿಸಬಹುದು ಅಷ್ಟೆ. ಈ ಕಾರ್ಯದಲ್ಲಿ ಅಗತ್ಯವಾಗಿದ್ದ ಒಂದು ಶಾಸ್ತ್ರೀಯ ಶಿಸ್ತಿನ ರೂಪವನ್ನು ನೀಡಲು ವಿದ್ವಾಂಸರಾದ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿಯವರಿಗೆ ನೆರವಾಗಿದ್ದಾರೆ. ಈ ಸಹಾಯಕ್ಕೆ ಅವರಿಗೂ ಅಭಿನಂದನೆಗಳು.

ಕನ್ನಡ ಭಾಷೆಯಲ್ಲಿ '**ಬುಕ್ಕಾಂಬುಧಿ ಪ್ರಾದೇಶಿಕ ಶಬ್ದಕೋಶವು**' ಒಂದು ವಿಶಿಷ್ಟ ಪ್ರಾದೇಶಿಕ ಶಬ್ದಕೋಶವಾಗಿ ಹೊರಹೊಮ್ಮಿದೆ. ಇದರ ಬೆಳಕಿನಲ್ಲಿ ಸ್ಫೂರ್ತಿಯನ್ನು ಪಡೆದು, ಇತರ ಪ್ರಾದೇಶಿಕ ಶಬ್ದಕೋಶಗಳ ರಚನೆಗೆ ಆಸಕ್ತ ಸ್ಥಳವಂದಿಗರು ತೊಡಗಿಕೊಳ್ಳಲಿ ಎಂದು ಹಾರೈಸುತ್ತೇನೆ.

ಬುಕ್ಕಾಂಬುಧಿ ಪ್ರಾದೇಶಿಕ ಕನ್ನಡ ಇಂಗ್ಲೀಷ್ ಶಬ್ದಕೋಶ

(ಸಚಿತ್ರ ಸೋದಾಹರಣ ಸಾಮಾಜಿಕ ವಿವರಣೆಗಳೊಂದಿಗೆ)

ಸಂಪಾದಕರು : ಬುಕ್ಕಾಂಬುಧಿ ಕೃಷ್ಣಮೂರ್ತಿ; ಸಹಸಂಪಾದಕರು : ಪ್ರೊ. ಜಿ. ಅಶ್ವತ್ಥನಾರಾಯಣ

ಪ್ರಕಾಶಕರು : ಮಹಾದಾನಂದ ಪ್ರಕಾಶನ ಜಯನಗರ ಬೆಂಗಳೂರು 560 041.

ಮೊಬೈಲ್ ಸಂಖ್ಯೆ : 9845930412

ಪ್ರಕಟಣೆಯ ವರ್ಷ 2023 ; ಪುಟಗಳು: xxxii + 636; ಬೆಲೆ : ₹ 750/–

ರಘುಕುಲಚರಿತಂ

ಡಾ. ವೇಣೀಮಾಧವಶಾಸ್ತ್ರೀ ಬಿ. ಜೋಶಿ

ಹೃದ್ಯೇತಿಹಾಸ-ರಮಣೀಯ-ಕಥಾಭಿರಾಢ್ಯಂ
ವಾಗ್ವೇಭಿವೊಶ್ಚ ಮಧುರಂ ಮೃದುಭಾವರಮ್ಯಮ್।
ಪೀಯೂಷ-ಸತ್ತ್ವಕ ವಿತಾರಸೆ-ದಾಯಕಂ ತಂ
ವಂಶಂ ರಘೋಶ್ವ ಕವಿರತ್ನಕೃತಂ ಭಾಜೇಹಮ್॥

ಪ್ರೊ. ಜಿ. ಅಶ್ವತ್ಥನಾರಾಯಣರು ಕನ್ನಡ ಸಾಹಿತ್ಯ ಸರಸ್ವತಿಯ ನಿತ್ಯೋಪಾಸಕರಾಗಿ ಸಾರ್ಥಕ ಜೀವನವನ್ನು ನಡೆಸಿದ ಉದಗ್ರ ವ್ಯಕ್ತಿಗಳೆಂದೇ ಹೇಳಬೇಕು. ಕನ್ನಡ ನುಡಿಯಲ್ಲಿ ನಿರಂತರ ಸೇವೆ ಸಲ್ಲಿಸುತ್ತಾ ಕನ್ನಡನಾಡಿನ ವಿದ್ಯಾರ್ಥಿಗಳಿಗೆ ಕನ್ನಡದ ಸಿರಿಗಂಧವನ್ನು ಮುಟ್ಟಿಸುವುದಕ್ಕೆ ಸತತ ಪ್ರಯತ್ನ ಮಾಡಿ ಅನೇಕಾನೇಕ ಕನ್ನಡ ಪಠ್ಯಪುಸ್ತಕಗಳನ್ನು ರಚಿಸಿ ಪಠ್ಯಪುಸ್ತಕ ಪಿತಾಮಹರೆಂದೇ ಆಗಿದ್ದಾರೆ. ಕಾವ್ಯ ಸಾಹಿತ್ಯ, ಗದ್ಯ ಸಾಹಿತ್ಯ, ದಾಸಸಾಹಿತ್ಯ, ವಚನಸಾಹಿತ್ಯ, ಶಬ್ದಕೋಶ ಮುಂತಾದ ಕನ್ನಡದ ಎಲ್ಲ ದಿಗಂತಗಳಲ್ಲಿಯೂ ತಮ್ಮ ಗ್ರಂಥರಚನಾ ಸೇವೆಯನ್ನು ಸಲ್ಲಿಸಿ, ಆಡುಮುಟ್ಟದ ಗಿಡವಿಲ್ಲ. ಇವರು ಮುಟ್ಟದ ಕನ್ನಡ ಕೃತಿ ಇಲ್ಲ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ ಎಂದರೆ ತಪ್ಪಾಗಲಾರದು. ಇವರು ತಮ್ಮ ಅಮೂಲ್ಯ ಕೃತಿಗಳಿಂದ ಕನ್ನಡದ ದಿಗ್ಗಜರನ್ನು ಕನ್ನಡಿಗರಿಗೆ ಪರಿಚಯಿಸಿದ ವಿದ್ವದ್ದಿಗ್ಗಜರೇ ಆಗಿ ವಿಶ್ರುತರಾಗಿದ್ದಾರೆ. ಸಾಹಿತ್ಯ ರಚನೆಯ ಯಶೋಗಾಥೆಯಿಂದ ಮೆರೆಯುವ ಇವರ ಜೀವನವು ಪರಿಪೂರ್ಣವೂ ಸಫಲವೂ ಆಗಿದೆ ಎನ್ನಬಹುದು. ಹೀಗೆ, ಕನ್ನಡನಾಡಿನ ಸಾಹಿತ್ಯ ಕ್ಷೇತ್ರದ ಹೆಮ್ಮೆಯ ಧೀಮಂತ ವಿಮರ್ಶಕರಾದ ಇವರು ಸರ್ವತೋಮುಖರಾಗಿ ಅಭಿನಂದನೀಯರಾಗಿದ್ದಾರೆ ಎಂಬಲ್ಲಿ ಎರಡು ಮಾತಿಲ್ಲ.

ಕನ್ನಡ ಮತ್ತು ಸಂಸ್ಕೃತದಲ್ಲಿ ಉದ್ದಾಮ ಪಂಡಿತರಾಗಿದ್ದ ಶ್ರೀ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ತಮ್ಮ ಅಮೋಘ ಪ್ರತಿಭೆಯಿಂದ ೬೦ಕ್ಕೂ ಹೆಚ್ಚು ಅನುವಾದ ಕೃತಿಗಳು ಹಾಗೂ ಸ್ವತಂತ್ರ ಗ್ರಂಥಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡ ನಾಡಿನ ದಿಗಂತದಲ್ಲಿ ವಿಶ್ರುತರಾದ ಶಾಸ್ತ್ರಿಗಳು ರಚಿಸಿದ ಕಾಳಿದಾಸನ ರಘುವಂಶದ ಗದ್ಯಾನುವಾದ (ರಘುಕುಲ ಚರಿತಂ)ದ ಸಂಪಾದಕರಾಗಿ ಜಿ. ಅಶ್ವತ್ಥನಾರಾಯಣರು ತಮ್ಮ ಸಂಪಾದಕೀಯ ಪೀಠಿಕೆ (ಪ್ರಸ್ತಾವನೆ)ಯಲ್ಲಿ ಪಂಡಿತ ಪ್ರವರರಾದ ಶಾಸ್ತ್ರಿಗಳ ಅಪಾರ ವಿದ್ವತ್ತು, ಗಾಂಭೀರ್ಯದಿಂದ ಮೆರೆಯುವ ಸ್ವಭಾವ, ಸಾರ್ಥಕ ಜೀವನ, ಶಿಕ್ಷಣ, ಸಾಹಿತ್ಯ ರಚನೆ, ಕಾವ್ಯ ಪ್ರತಿಭೆ, ಕುಟುಂಬವಾತಾವರಣ, ಮುಂತಾದ ಪ್ರಾಂಶು ಘಟಕಗಳಾದ ಸಮಲಂಕೃತವಾದ ಭವ್ಯ ವ್ಯಕ್ತಿತ್ವವು ಓದುಗರ ಕಣ್ಣುಮುಂದೆ ಬಂದು ನಿಲ್ಲುವಂತೆ ಚಿತ್ರಿಸಿದ್ದಾರೆ.

ಆಗಿನ ಗಣನೀಯ ಸಾಹಿತಿಗಳ ಸಾಲುಗಳಲ್ಲಿ ಶಾಸ್ತ್ರಿಗಳವರ ಸ್ಥಾನಮಾನ ಹೇಗಿತ್ತು ಎಂಬುದನ್ನು ಸಂಪಾದಕರು ಶ್ರೀಯುತ ಶ್ರೀನಿವಾಸ ಹಾವನೂರರ ಮಾತಿನಲ್ಲಿ ಮನೋಜ್ಞವಾಗಿ ಹೀಗೆ ಉಲ್ಲೇಖಿಸಿದ್ದಾರೆ–

''ಇತ್ತ ಹೊಸ ಶಿಕ್ಷಣದ ಪರಿಣಾಮವಾಗಿ ಸಾಮಾನ್ಯ ಮಟ್ಟದ ವಾಚನಾಭಿರುಚಿಯನ್ನು ಬೆಳೆಸಿಕೊಂಡ ಕನ್ನಡಿಗರ ಸಂಖ್ಯೆ ಭರದಿಂದ ಹೆಚ್ಚುತ್ತಲಿದ್ದಿತು... ಹೀಗೆ ಚಾಮರಾಜ ಒಡೆಯರ ಕಾಲದಲ್ಲಿದ್ದ ಸಂಸ್ಕೃತ ಕನ್ನಡ ಪಂಡಿತರು ಸಾಮಾನ್ಯ ಮಟ್ಟದ ವಾಚಕರನ್ನು ಗಮನದಲ್ಲಿಟ್ಟುಕೊಂಡು ಸುಲಭ ಸಾಹಿತ್ಯವನ್ನು ರಚಿಸುವ ಪ್ರವೃತ್ತಿಯುಳ್ಳವರಾಗಿದ್ದನ್ನು ನಾವು ಕಾಣುತ್ತೇವೆ... ಇಂಥ ವಿದ್ವಾಂಸರು, ಶಾಲೆ, ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಮುಂದಿನ ಪೀಳಿಗೆಯವರಲ್ಲಿ ಕನ್ನಡ ಪ್ರೇಮವನ್ನು ಬೆಳೆಸುತ್ತ ಕನ್ನಡ ಭಾಷೆಯ ಪರಿಶುದ್ಧತೆಯನ್ನು ಕಾಯ್ದುಕೊಳ್ಳುವ ವಿಚಾರದಲ್ಲಿ ಶ್ರದ್ಧೆಯಿಂದ ಕೆಲಸ ಮಾಡಿದ್ದಾರೆ.''

ಈ ಮಾತುಗಳು ಹೆಚ್ಚಿಗೆ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳಿಗೆ ಅನ್ವಯವಾಗುತ್ತದೆ. ಹಾವನೂರರು ಉಲ್ಲೇಖಿಸಿರುವ ಸಾಹಿತಿಗಳಲ್ಲಿ ಹೆಚ್ಚು ಕೆಲಸ ಮಾಡಿ ಹೆಚ್ಚು ಕೃತಿಗಳನ್ನು ರಚಿಸಿರುವವರಲ್ಲಿ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಗಣ್ಯರಾಗಿದ್ದಾರೆ. ಅವರು ರಚಿಸಿದ ಕೃತಿಗಳ ಪಟ್ಟಿಯನ್ನು ಗಮನಿಸಿದರೆ ಅವುಗಳ ಆಳ ವಿಸ್ತಾರ ವೈವಿಧ್ಯತೆಗಳನ್ನು ಅರಿಯಬಹುದಾಗಿದೆ. ದೊಡ್ಡ ಬೆಲೆಯವರ ಸಮಗ್ರ ಕೃತಿಗಳನ್ನು ಕಲೆ ಹಾಕಿ ಅಧ್ಯಯನ ಮಾಡಿದರೆ ಕನ್ನಡಕ್ಕೆ ಅವರು ಸಲ್ಲಿಸಿದ ವಿಶಿಷ್ಟ ಸೇವೆ ವೇದ್ಯವಾಗುತ್ತದೆ. ಈ ಶತಮಾನದ ಪ್ರಾರಂಭದಲ್ಲಿ ಕನ್ನಡ ಗದ್ಯದಲ್ಲಿ ನಾವೀನ್ಯ ತಂದು ಜನಪ್ರಿಯಗೊಳಿಸಿದವರಲ್ಲಿ ದೊಡ್ಡಬೆಲೆಯವರೂ ಒಬ್ಬರು ಮತ್ತು ಆ ಕಾಲದ ಗಣ್ಯವಿದ್ವಾಂಸರಲ್ಲಿ ಒಬ್ಬರಾಗಿದ್ದು ಸಾರ್ವಜನಿಕರಂಗದಲ್ಲಿ ಪ್ರಸಿದ್ಧಿ ಪಡೆದಿದ್ದರು'' ಸಂಪಾದಕರ ಈ ಮಾತು ಶಾಸ್ತ್ರಿಗಳವರ ಸಾಧನೆಗೆ ಚಿಕ್ಕ ಕನ್ನಡಿಯಂತಿದೆ.

ಸಂಸ್ಕೃತ ಕ್ಷೇತ್ರದ ಮೇರುಕೃತಿಗಳಾದ ಕಾಳಿದಾಸನ ರಚನೆಗಳನ್ನು ಕನ್ನಡಕ್ಕೆ ತರಬೇಕೆಂಬ ಸತ್ಸಂಕಲ್ಪವನ್ನು ಹುಟ್ಟುಹಾಕಿದ ನಾರಾಯಣಶಾಸ್ತ್ರಿಗಳ ಬಗ್ಗೆ ''ಕನ್ನಡಕ್ಕೆ ಕಾಳಿದಾಸನನ್ನು ತಂದ ವಿದ್ವಾಂಸರಲ್ಲಿ ಇವರು ಅಗ್ರಗಣ್ಯರು'' ಎಂಬ ಸಂಪಾದಕರ ಮಾತು ಸರಿಯೇ ಇದೆ. ನೂರು ವರುಷಗಳ ನಂತರ 'ರಘುಕುಲ ಚರಿತಂ' ಇದನ್ನು ಮೂರನೆಯ ಮುದ್ರಣ ಮಾಡಿಸಿ ಜನಸಾಮಾನ್ಯರಿಗೆ ಇಂತಹದೊಂದು ಪ್ರವರ್ಹ ಕೃತಿಯನ್ನು ಪರಿಚಯಿಸಿ ಮಹೋಪಕಾರ ಮಾಡಿದ್ದಾರೆ. ಕನ್ನಡದಲ್ಲಿ ಇಂತಹ ಅನುವಾದದ ವರೇಣ್ಯಕೃತಿಯೊಂದಿದೆ ಎಂಬುದನ್ನು ತೋರಿಸಿಕೊಟ್ಟ ಮಾನ್ಯ ಸಂಪಾದಕರಿಗೆ ಕನ್ನಡಿಗರು ಎಷ್ಟು ಕೃತಜ್ಞತೆಗಳನ್ನು ಸಲ್ಲಿಸಿದರೂ ಕಡಿಮೆ ಎಂದೆನಿಸುತ್ತದೆ.

೨೦ನೇ ಶತಮಾನದ ವರೆಗೆ ಕಾಳಿದಾಸನ ಎಲ್ಲ ಗ್ರಂಥಗಳನ್ನು ಅನುವಾದ ಮಾಡಿದ ಕೋವಿದ ತಜ್ಞರು ಇರಲಿಲ್ಲ. ಅದಕ್ಕೆ ಸರಿಯಾದ ಕಾರಣವನ್ನು ಅರ್ಘ್ಯರಾದ ಸಂಪಾದಕರು ಎ.ಆರ್. ಕೃಷ್ಣಶಾಸ್ತ್ರಿಗಳವರ ಮಾತಿನಲ್ಲಿ ಸೂಚಿಸಿದ್ದಾರೆ. ''...ಆದರೆ ಅವನ ಕಾವ್ಯಗಳನ್ನಾಗಲಿ ನಾಟಕಗಳನ್ನಾಗಲಿ ಸಮಗ್ರವಾಗಿ ಕನ್ನಡಿಸಬೇಕೆಂಬ ಯೋಚನೆ ಇವರಾರಿಗೂ ಬಂದಹಾಗಿಲ್ಲ. ಪ್ರಾಯಶಃ ಇದಕ್ಕೊಂದು ದೊಡ್ಡ ಕಾರಣವೆಂದರೆ ಹಿಂದಿನ ಕವಿಗಳು ಮತ್ತು ವಿದ್ಯಾಂತರೆನಿಸಿಕೊಂಡವರು ಎಲ್ಲರೂ ಸಾಮಾನ್ಯವಾಗಿ ಸಂಸ್ಕೃತವನ್ನು ತಿಳಿದಿದ್ದು ಕಾಳಿದಾಸನ ಕಾವ್ಯನಾಟಕಗಳನ್ನು ಮೂಲದಲ್ಲಿಯೇ ಓದುತ್ತಿದ್ದರು.'' ''ಹೀಗಾಗಿ ಸಮಗ್ರ ಕಾಳಿದಾಸನ ಕಾವ್ಯ ಅನುವಾದದ ಮೂಲಕ ಕನ್ನಡಕ್ಕೆ ಬರಲು ೧೯ನೇ ಶತಮಾನದವರೆಗೆ ಹೊಸಗನ್ನಡದ ಕಾಲದವರೆಗೆ ಕಾಯಬೇಕಾಯಿತು.'' ಎಂಬುದು ಎಲ್ಲ ವಿಮರ್ಶಕರು ಒಪ್ಪುವ ಮಾತಾಗಿದೆ. ಹಿರಿಯ ಧೀಮಂತ ಅನುವಾದಕರಾಗಿದ್ದ ಬಸವಪ್ಪಶಾಸ್ತ್ರಿಗಳು, ಅಯ್ಯಾಶಾಸ್ತ್ರಿಗಳು, ಧೋಂಡೋ ನರಸಿಂಹರಾಯರು ಮುಂತಾದ ಸೂರಿಶಿರೋಮಣಿಗಳು ಕಾಳಿದಾಸನ ನಾಟಕಗಳನ್ನು ನಾಟಕ ರೂಪದಲ್ಲಿಯೇ (ಗದ್ಯ ಪದ್ಯ ಸಮೇತ) ಅನುವಾದಿಸಿದರು. ಆದರೆ ೨೦ನೇ

ಶತಮಾನದಲ್ಲಿ ಮಹಾಕಾವ್ಯವನ್ನು ಸಮಗ್ರವಾಗಿ ಗದ್ಯಾನುವಾದ ಮಾಡಿದ ಮೊದಲಿಗರು ಎಂದರೆ ದೊಡ್ಡ ಬೆಲೆ ನಾರಾಯಣಶಾಸ್ತ್ರಿಗಳು. ಇದನ್ನೇ ಮಾನ್ಯ ಸಂಪಾದಕರು ಹೀಗೆ ಹೇಳಿದ್ದಾರೆ. ''ಅವರಷ್ಟೇ (ಶ್ರೀ ಬಸವಪ್ಪಶಾಸ್ತ್ರಿಗಳಷ್ಟೇ) ಪ್ರತಿಭಾವಂತರಾಗಿ ಸಂಸ್ಕೃತ ಕಾವ್ಯ, ಶಾಸ್ತ್ರ, ಸ್ತೋತ್ರ ಗ್ರಂಥಗಳ ನೇರ ಅನುವಾದ, ಸ್ವತಂತ್ರಾನುವಾದ, ಗದ್ಯಾನುವಾದ, ಸಂಗ್ರಹಾನುವಾದ ಮಾಡಿದ ಖ್ಯಾತ ಉಭಯ ಭಾಷಾ ವಿದ್ವಾಂಸರ ಪೈಕಿ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಒಬ್ಬರು'' ವರೇಣ್ಯ ಸಂಪಾದಕರ ಈ ಮಾತಿನಲ್ಲಿ ಶಾಸ್ತ್ರಿಗಳ ಸಾಧನೆ. ಸಾಲುದೀಪಗಳು ಅಡಗಿ ನಿಂತಿವೆ.

ಅನುವಾದ ಕಾರ್ಯ ಬಹಳ ಸುಲಭ ಎಂಬ ವಿಚಾರ ಅನೇಕರ ಮನದಾಳದಲ್ಲಿ ಮನೆ ಮಾಡಿಯಾಗಿದೆ. ಮೂಲ ಗ್ರಂಥದ ಪದಪುಂಜಗಳ ಸ್ವಾರಸ್ಯಕ್ಕೆ ಧಕ್ಕೆಯಾಗದಂತೆ ಅದೇ ಅರ್ಥದ ಚೌಕಟ್ಟಿನಲ್ಲಿ ಮನೋಜ್ಞವಾದ ಅನುವಾದ ಮಾಡುವದು ಬಹಳ ಕಷ್ಟ. ಸ್ವತಂತ್ರವಾಗಿ ಅದೇ ವಿಷಯದ ಮೇಲೆ ಬರೆಯಬಹುದು. ಆದರೆ ಕವಿಯ ಭಾವನೆಗಳಿಗೆ ವ್ಯತ್ಯಾಸ ಬರದಂತೆ ಅನುವಾದಿಸುವುದು ಕಷ್ಟಸಾಧ್ಯ. ಅದರಲ್ಲಿಯೂ ಪದ್ಯಗಳಲ್ಲಿ ಅನುವಾದಿಸುವದು ಇನ್ನು ಕಷ್ಟ. ಇಂತಹ ಸ್ಥಿತಿಯಲ್ಲಿ ಶಾಸ್ತ್ರಿಗಳು ಮನೋರಮ ಪದಪ್ರಯೋಗಗಳಿಂದ ಕವಿವರ್ಯನ ಭಾವನೆಗಳಿಗೆ ಹೆಚ್ಚು ಪೋಷಕವಾಗುವಂತಹ ಅನುವಾದ ಬರೆದು ಓದುಗರಿಗೆ ಸದ್ಯಃ ಪರನಿರ್ವೃತಿ ಉಂಟಾಗುವಂತೆ ಮಾಡಿ ಮಹೋಪಕಾರ ಮಾಡಿದ್ದಾರೆ.

ಸೂರಿವರರಾದ ಎ.ಆರ್. ಕೃಷ್ಣಶಾಸ್ತ್ರಿಗಳು (ಯಾವುದೇ) ಅನುವಾದದ ಬಗ್ಗೆ ಹೇಳುವ ಮಾತನ್ನು ಉಲ್ಲೇಖಿಸಿ ಸಂಪಾದಕರು ಅನುವಾದದ ಬಗ್ಗೆ ಹೆಚ್ಚು ಹೇಳದೆ ಹಿಂದೆ ಸರಿದುಬಿಟ್ಟಿದ್ದಾರೆ. ಅನುವಾದ ಹೀಗಿರಬೇಕು–''ಮೂಲವನ್ನು ಓದಬಲ್ಲ ಪ್ರಾಪ್ತಿ ಎಲ್ಲರಿಗೂ ಇರುವದಿಲ್ಲ. ಅಂಥವರು ಭಾಷಾಂತರದಿಂದ ಆದಷ್ಟು ತೃಪ್ತಿ ಹೊಂದಬೇಕು, ಸಂತೋಷ ಪಡೆಯಬೇಕು. ಉತ್ತಮ ಭಾಷಾಂತರಕಾರರು ಎರಡು ಭಾಷೆಗಳಲ್ಲೂ ಪಂಡಿತರಾಗಿದ್ದು, ರಸಿಕರಾಗಿದ್ದು ಅವುಗಳ ಜೀವಾಳವನ್ನು ಅರಿತವರಾಗಿದ್ದು, ಮೂಲದ ಬಣ್ಣ ಛಾಯೆ ಕಾಂತಿ ಕೆಡದಂತೆ ಅಥವಾ ಆದಷ್ಟು ಹೆಚ್ಚು ಪ್ರಮಾಣ ಭಾಷಾಂತರದಲ್ಲಿಯೂ ಬರುವಂತೆ ತರಬಲ್ಲವರಾಗಿರಬೇಕು'' ಎಂದು ಹೇಳಿ ಪ್ರಾಜ್ಞ ಸಂಪಾದಕರು ಇದಕ್ಕೆ ಜ್ವಲಂತ ಉದಾಹರಣೆಯಾದ ಶ್ರೇಷ್ಠ ಅನುವಾದ ಕೃತಿಯು ದೊಡ್ಡಬೆಲೆ ಶಾಸ್ತ್ರಿಗಳ ಈ 'ರಘುಕುಲ ಚರಿತೆ' ಇದೆ ಎಂಬುದನ್ನು ಕೈಯೆತ್ತಿ ಸಾರಿ ಹೇಳಿದ್ದಾರೆ. ಮೇಲಿನ ಎಲ್ಲ ಪ್ರಾಗ್ರಹರ ಅಂಶಗಳಿಂದ ಸಮಲಂಕೃತವಾದ ಅವರ ಅನುವಾದವು ಅನಿತರ ಸಾಧಾರಣವೆಂದೇ ಹೇಳಬಹುದಾಗಿದೆ. ಅಂತೆಯೇ ಇದಕ್ಕೆ ಯಶಸ್ವೀ ಅನುವಾದ ಎಂದು ಕರೆದದ್ದು ಸಾರ್ಥಕವೇ ಇದೆ.

ಬುಧವರೇಣ್ಯರಾದ ಶಾಸ್ತ್ರಿಗಳ ರಘುವಂಶದ ಅನುವಾದದಲ್ಲಿ ಪರಿಪಕ್ವವಾದ ಸ್ವಾರಸ್ಯವನ್ನು ಕಾಣಬಹುದಾಗಿದೆ. ಕಾಳಿದಾಸನ್ನು ರಘುವಂಶದಲ್ಲಿ ತನ್ನ ಪ್ರತಿಭೆಯ ಸಾರಸರ್ವಸ್ವವನ್ನೇ ಧಾರೆ ಎರೆದಂತೆ ಅನುವಾದ ರಚನೆಯಲ್ಲಿ ಶಾಸ್ತ್ರಿಗಳೂ ಕೂಡ. ತಮ್ಮ ಪ್ರಗಲ್ಭ ಪಾಂಡಿತ್ಯವನ್ನು ಸೂರೆ ಮಾಡಿದ್ದಾರೆ. ಅಂತೆಯೇ ಅವರ ಈ 'ರಘುಕುಲ ಚರಿತಂ' ಗ್ರಂಥವು, ಅನುವಾದ ಕೃತಿಗಳಲ್ಲಿಯೇ ಪರಾರ್ಧ್ಯ ಕೃತಿಯಾಗಿ ಹೊರಹೊಮ್ಮಿದೆ.

ಕಾಳಿದಾಸನ ರಘು ವಂಶದ ಮೊದಲನೆಯ ಸರ್ಗದ ಪ್ರಾರಂಭದಲ್ಲಿಯೇ ಇರುವ

ಮಂದಃ ಕವಿಯಶಃಪ್ರಾರ್ಥೀ ಗಮಿಷ್ಯಾಮ್ಯುಪಹಾಸ್ಯತಾಂ।

ಪ್ರಾಂಶುಲಭ್ಯೇ ಫಲೇ ಮೋಹಾದುದ್ಬಾಹುರಿವ ವಾಮನಃ ॥

ಇದರ ಗದ್ಯಾನುವಾದದ ಸೊಬಗನ್ನು ಶಾಸ್ತ್ರಿಗಳ ರಸವತ್ತಾದ ಕನ್ನಡದಲ್ಲಿ ಹೀಗೆ ನೋಡಬಹುದು–

''ಈ ಮಹಾಕಾರ್ಯವನ್ನು ಮಹಾಕವಿಗಳು ಮಾಡಬೇಕು, ಅಲ್ಪಬುದ್ಧಿಯುಳ್ಳ ಈ ನಾನು–ಅವರ ಹೆಸರುವಾಸಿಯನ್ನು ಗಳಿಸಬೇಕೆಂದು ಬಯಸಿ ಕೈ ಹಾಕುತ್ತಿರುವುದನ್ನು ನೋಡಿದರೆ ಎತ್ತರವಾದ ಮನುಷ್ಯನ ಕೈಗೆ ಸಿಕ್ಕಬಹುದಾಗಿರುವ ಗಿಡದಲ್ಲಿನ ಹಣ್ಣಿಗೆ ಆಶೆಪಟ್ಟು ಕೈಯನ್ನೆತ್ತಿದ ಗುಜ್ಜಾರಿಯಂತೆ ಜನರ ನಗೆಗೀಡಾಗುವವೆಂದು ಕಾಣಬರುತ್ತಿದೆ.''

ಎರಡನೆಯ ಸರ್ಗದಲ್ಲಿ ಸಿಂಹ ಮತ್ತು ದೀಲೀಪರಾಜನ ನಡುವಿನ ಸಂಭಾಷಣೆಯಲ್ಲಿ ಪ್ರಸಿದ್ಧವಾದ

ಕ್ಷತಾತ್ ಕಿಲ ತ್ರಾಯ ತ ಇತ್ಯುದಗ್ರಃ
ಕ್ಷತ್ರಸ್ಯ ಶಬ್ದೋ ಭುವನೇಷು ರೂಢಃ ।
ರಾಜ್ಯೇನ ಕಿಂ ದದ್ವಿಪರೀತವೃತ್ತೇಃ
ಪ್ರಾಣೈರುಪಕ್ರೋಶ ಮಲೀಮಸೈರ್ವಾ ॥

ಇದರ ಅನುವಾದ ಹೀಗಿದೆ–''ಎಲೈ ಪಂಚಾನನನೆ! ಮೊರೆ ಹೊಕ್ಕವರನ್ನು ಗಾಯಪಡದಂತೆ ಕಾಪಿಡುವವನು ಎಂಬ ಅರ್ಥದಿಂದಲ್ಲದೇ ಲೋಕದಲ್ಲಿ ಉದಾತ್ತವಾದ ಕ್ಷತ್ರ ಶಬ್ದವು ಬಳಕೆಗೆ ಬಂದಿದೆ? ಅದಕ್ಕೆ ತಲೆ ಕೆಳಗಾದ ನಡತೆಯಲ್ಲಿರುವ ನನಗೆ ಸಾಮ್ರಾಜ್ಯದಿಂದಾಗಲಿ ಜಿಹಾಸೆಗೊಳಗಾಗಿ ಮಲಿನಗಳೆನಿಸಿದ ಹರಣಗಳಿಂದಾಗಲಿ ಉಪಯೋಗವೇನು? ಜಾತಿಧರ್ಮವನ್ನು ತೊರೆಯುವಕ್ಕಿಂತಲೂ ಜೀವವನ್ನು ತೊರೆಯುವದು ಮೇಲಲ್ಲವೆ.''

ರಘುವಂಶದ ಆರನೇ ಸರ್ಗದ ಕೊನೆಯ ಶ್ಲೋಕದಲ್ಲಿ ಅಜಮಹಾರಾಜನಿಗೆ ಇಂದುಮತಿಯ ವರಮಾಲೆ ಹಾಕಿದ ಮೇಲೆ ಒಂದೆಡೆಗೆ ವರಮಹಾಜನರು ಸಂತಸದಿಂದ ನಲಿದಾಡುವಾಗ ಇನ್ನೊಂದೆಡೆಗೆ ವರಮಾಲೆ ಸಿಗದೆ ನಿರಾಶೆಗೊಂಡ ರಾಜರ ಸಾಲು ಹೇಗಿತ್ತೆಂಬುದನ್ನು ವರ್ಣಿಸುವ ಶ್ಲೋಕದ ಮನೋಹರವಾದ ಅನುವಾದವು ಹೇಗಿದೆ ಎಂಬುದನ್ನು ನೋಡಬಹುದು.

ಪ್ರಮುದಿತ ವರಪಕ್ಷಮೇ ಕತಸ್ತತ್
ಕ್ಷಿತಿ ಪತಿಮಂಡಲಮನ್ಯತೊ ವಿತಾನಂ।
ಉಷನೆ ಸರ ಇವ ಪ್ರಫುಲ್ಲಪದ್ಮಂ
ಕುಮುದವನ ಪ್ರತಿಪನ್ನನಿದ್ರ ಮಾಸೀತ್ ॥

''ಆ ವೇಳೆಯೊಳಗೆ ಹರ್ಷಪರವಶರಾದ ಗಂಡಿನ ಕಡೆಯವರು ಒಂದು ಕಡೆಯಲ್ಲಿಯೂ ಕನ್ನೆಯು ಕರಗತವಾಗದೆ ಕೈಮೀರಿ ಹೋದುದರಿಂದ ಬೆಪ್ಪಾದ ಭೂಪಾಲರ ಗುಂಪು ಮತ್ತೊಂದು ಕಡೆಯಲ್ಲಿಯೂ ಇರುತ್ತಿದ್ದರೆ, ಆ ಕಲ್ಯಾಣ ಸಭಾ ಮಂಟಪವು ಮುಂಜಾನೆಯಲ್ಲಿ–ಒಂದು ಕಡೆ ಅರಳುತ್ತಲಿರುವ ತಾವರೆಯ ಸಾಲನ್ನು, ಮತ್ತೊಂದು ಕಡೆ ಮುಗಿಯುತ್ತಲಿರುವ ಕುಮುದಗಳ ಗುಂಪನ್ನೂ ಒಳಗೊಂಡಿರುವ ಸರೋವರದಂತೆ ಕಂಗೊಳಿಸುತ್ತಲಿದ್ದಿತು.''

೧೪ನೆಯ ಸರ್ಗದಲ್ಲಿ ಶ್ರೀರಾಮಚಂದ್ರನು ಸರಿಯಾದ ಕಾರಣವಿಲ್ಲದೆ ಸೀತೆಯನ್ನು ತೊರೆದಾಗ ಅಡವಿಯಲ್ಲಿ ಅವಳು ನಾನಾ ತರಹದಿ ವಿಲಾಪ ಮಾಡುತ್ತಿರುವಾಗ ಪ್ರಚೇತಸ ಮುನಿಯ ಮಗನಾದ ವಾಲ್ಮೀಕಿ ಮಹರ್ಷಿಯು ಬಂದು ಅವಳನ್ನು ಸಂತೈಸುವ ರೀತಿಯನ್ನು ಕವಿಯು ಹೀಗೆ ಬಣ್ಣಿಸುತ್ತಾನೆ–

ಉತ್ಖಾತ ಲೋಕತ್ರಯ ಕಂಟಕೇಽಪಿ
ಸತ್ಯಪ್ರತಿಜ್ಞೇ ಪ್ಯವಿ ಖತ್ತನೇಽಪಿ
ಟ್ವಾಂ ಪ್ರತ್ಯಕಸ್ಮಾತ್ ಕಲುಷಪ್ರವೃತ್ತೌ
ಅಸ್ತ್ಯೆವ ಮನ್ಯುರ್ಭರತಾಗ್ರಜೇ ಮೇ॥ (೧೪-೭೩)

ಇದರ ಅನುವಾದ ಸ್ವಾರಸ್ಯವನ್ನು ಶಾಸ್ತ್ರಗಳ ಪದಗಳಲ್ಲಿ ಹೇಗಿದೆ ನೋಡಬಹುದು-

''ಪತಿಯು ತೊರೆದ ಸತಿಯವರಿಗೆ ಪಿತೃಗೃಹವೇ ಶರಣಲ್ಲವೆ? ಮೂಲೋಕದ ಮುಳ್ಳನ್ನು ಕಿತ್ತೆಸೆದವನೂ ಸತ್ಯಸಂಧನೂ, ತನ್ನನ್ನು ತಾನು ಹೊಗಳಿಕೊಳ್ಳದವನೂ ಆಗಿ, ನನಗೆ ಪ್ರೀತಿಪಾತ್ರನೆನಿಸಿದ್ದರೂ, ನಿನ್ನ ವಿಷಯದಲ್ಲಿ ಅನ್ಯರ ಲೋಕಾಪವಾದದಿಂದ ಮಲಿನ ಮನಸ್ಸಿನವನಾಗಿ, ನಿಂದಿತವಾದ ಕೆಲಸವನ್ನು ಮಾಡಿದುದರಿಂದ ಭರತಾಗ್ರಜನಲ್ಲಿ ನನಗೆ ಖಂಡಿತವಾಗಿಯೂ ಆಗ್ರಹ ಉಂಟು.''

ಇಂತಹ ಅನುವಾದಗಳಲ್ಲಿ ಸತ್ತ್ವಭೂಮಿಷ್ಠವಾದ ಪದ ಪ್ರಯೋಗಗಳ ಮನೋಜ್ಞತೆಯನ್ನು ಕಾಣಬಹುದಾಗಿದೆ.

ಕಾಲಿದಾಸನ ರಘು ವಂಶಕಾವ್ಯವು ಒಂದು ಪರಿಪೂರ್ಣ ಮಹಾಕಾವ್ಯ. ಆದರೆ ಇಲ್ಲಿ ನಾಯಕ ಯಾರೆಂಬುದನ್ನು ನಿರ್ಣಯಿಸುವದು ಸ್ವಲ್ಪ ಕಠಿಣವೆನಿಸಿದರೂ ರಾಮನನ್ನು ನಾಯಕನೆಂದು ಪರಿಗಣಿಸಬಹುದಾಗಿದೆ ಎಂಬ ತಮ್ಮ ನಿಲುವನ್ನು ಮಾನ್ಯ ಸಂಪಾದಕರು ಸರಿಯಾಗಿ ಸಮರ್ಥಿಸಿ-ಕೊಂಡಿದ್ದಾರೆ. ರಘುರಾಜ ಒಬ್ಬನೆ ನಾಯಕನಲ್ಲ ಆ ವಂಶದಲ್ಲಿ ಬರುವ ರಾಜರುಗಳ ಗುಣಗಳಿಂದ ಸಮಾಕರ್ಷಿತನಾಗಿ ಕಾಳಿದಾಸನು ಈ ಕಾವ್ಯವನ್ನು ಬರೆದನೆಂದು ಅವನ ಹೇಳಿಕೆಯನ್ನೇ ಸಂಪಾದಕರು ಉಲ್ಲೇಖಿಸಿದ್ದಾರೆ-

``ತದ್ಗುಣೈಃ ಕರ್ಣಮಾಗತ್ಯ ಚಾಪಲಾಯ ಫಲೋದಿತಃ''

ರಘುವಂಶದ ಧೀರೋದಾತ್ತ ಪುರುಷರ ಗುಣಗಳು. ನನ್ನನ್ನು ಈ ಕಾವ್ಯ ಬರೆಯಲು ಪ್ರಚೋದಿಸಿದವು. ಎಂದು ಮನೋಜ್ಞವಾಗಿ ಅವನ ತಾತ್ಪರ್ಯವನ್ನು ತಿಳಿಪಡಿಸಿದ್ದಾರೆ.

ಅಲಂಕಾರ ಶಾಸ್ತ್ರಿಯಾದ ವಿಶ್ವನಾಥನು ತನ್ನ ಸಾಹಿತ್ಯ ದರ್ಪಣದಲ್ಲಿ

ಏಕವಂಶಭವ್ವಾ ಭೂಪಾಃ ಕುಲಜಾ ಬಹವೋಽಪಿವಾ ।
ಸದ್ವಂಶಃ ಕ್ಷತ್ರಿಮೋ ವಾಪಿ ಧೀರೋದಾತ್ತ ಗುಣಾನ್ವಿತಿಃ ॥

ಕುಲೀನನಾದ ವ್ಯಕ್ತಿ ಅಥವಾ ವಿಶೇಷವಾಗಿ ಕ್ಷತ್ರಿಯನಾಗಿದ್ದು ಧೀರೋದಾತ್ತ ಗುಣಗಳಿಂದ ಕೂಡಿರಬೇಕು. ಅಥವಾ ಒಂದೇ ವಂಶದ ಅನೇಕ ರಾಜರು, ಸದ್ವಂಶ ಸಂಭೂತರಾದ ಬಹುಜನರು ನಾಯಕರಾಗಿರಬಹುದು ಎಂದು ಮಹಾಕಾವ್ಯದ ಲಕ್ಷಗಳನ್ನು ನಾಯಕರು ಆಗಿರಬಹುದು. ಆದರೆ ಸಂಪಾದಕರು ರಾಮಚಂದ್ರನೇ ನಾಯಕನಾಗಿರಬಹುದು. ಏಕೆಂದರೆ ಶ್ರೀರಾಮ ಚರಿತೆಯನ್ನು ೧೮ ಸರ್ಗಗಳ ಪೈಕಿ ೬ ಸರ್ಗಗಳಲ್ಲಿ ವರ್ಣಿಸಲಾಗಿದೆ. ಬೇರೆ ಯಾವ ಸೂರ್ಯವಂಶದ ನಾಯಕನನ್ನು ಇಲ್ಲಿ ಅಷ್ಟೊಂದು ದೀರ್ಘವಾಗಿ ವರ್ಣಿಸಿಲ್ಲ. ಆದ್ದರಿಂದ ರಾಮನನ್ನೇ ನಾಯಕನನ್ನಾಗಿ ಪರಿಗಣಿಸುವುದು

ಉಚಿತವೆಂದು ಸಂಪಾದಕರು ಚನ್ನಾಗಿ ಸಮರ್ಥಿಸಿದ್ದಾರೆ. ಅಲ್ಲದೆ, ದೀಲೀಪ, ರಘು, ಅಜ, ರಾಮ ಈ ನಾಲ್ಕು ನಾಯಕರೂ ಜೀವನದ ಮೌಲ್ಯಗಳಿಗೆ ಸಾಕ್ಷಿಯಾಗಿದ್ದಾರೆ ಎಂಬ ಮಾತನ್ನು ಹೇಳಿದ್ದಾರೆ. ದಿಲೀಪನಿಂದ ಹಿಡಿದು ಅಗ್ನಿವರ್ಣನನವರೆಗೆ ಸುಮಾರು ೨೮ ರಾಜರ ಸುದೀರ್ಘ ಪಟ್ಟಿಯನ್ನೇ ಕೊಟ್ಟು ಅವರ ಸಂಕ್ಷಿಪ್ತ ಚರಿತೆಯು ಯಾವ ಯಾವ ಶ್ಲೋಕಗಳಲ್ಲಿ ಬಂದಿದೆ ಎಂಬುದನ್ನು ಸಹ ತೋರಿಸಿದ್ದಾರೆ.

ಕವಿಕುಲ ಗುರು ಎಂದೇ ದಿಗಂತ ವಿಶ್ರುತನಾದ ಕಾಲಿದಾಸನ ರಘುವಂಶದ ರಮಣೀಯ ಅಂಶಗಳನ್ನು ಯಾವ ಅನುವಾದದಲ್ಲಿಯೂ ತರಲು ಸಾಧ್ಯವಿಲ್ಲವೆಂಬ ಮಾತನ್ನು ಮುಕ್ತ ಮನಸ್ಸಿನಿಂದ ಎಲ್ಲರೂ ಒಪ್ಪಲೇಬೇಕು ಎಂಬ ಅನಿಸಿಕೆಯನ್ನು ಸಂಪಾದಕರು, ಗ್ರಂಥದ ಆಳಕ್ಕೆ ಹೋಗಿ ವಿಮರ್ಶಿಸುತ್ತಾರೆ. ಯಾವ ರೀತಿಯಲ್ಲಿ ರಘುವಂಶ ಮಹಾಕಾವ್ಯವು ಒಂದು ಪರಿಪೂರ್ಣ ಕಾವ್ಯವಾಗಿದೆ ಎಂಬುದನ್ನು ತಮ್ಮದೇ ಆದ ಉದಗ್ರ ಶೈಲಿಯಲ್ಲಿ ಹೀಗೆ ಪ್ರತಿಪಾದಿಸುತ್ತಾರೆ–

''ಕಾವ್ಯ ಸೌಂದರ್ಯದಲ್ಲಿ ವರ್ಣನೆಗಳಲ್ಲಿ ಕಥಾಸಂವಿಧಾನದಲ್ಲಿ ಪದವಿನ್ಯಾಸದಲ್ಲಿ ಅಕ್ಷರ ಸಂಯೋಜನೆಯಲ್ಲಿ ಕಾಳಿದಾಸನ ಪ್ರತಿಭಾ ಉತ್ತುಂಗತೆಯನ್ನು ರಘು ವಂಶದಲ್ಲಿ ನಿಚ್ಚಳವಾಗಿ ಕಾಣುತ್ತೇವೆ. ಇವುಗಳನ್ನು ಯಾವುದೇ ಅನುವಾದದಲ್ಲಿ ತರಲು ಸಾಧ್ಯವಿಲ್ಲ. ಉದಾಹರಣೆಗೆ ರಘುವಂಶದ ಪ್ರಾರಂಭ ಶ್ಲೋಕದಲ್ಲಿ... ವಾಗರ್ಥಗಳ ಅವಿನಾಭಾವ ಸಂಬಂಧವನ್ನು ಅಕ್ಷರ ವಿನ್ಯಾಸದಲ್ಲೂ ಕವಿ ಸೂಚಿಸಿದ್ದಾನೆ. ಸಂಪೃಕ್ತೌ ಪ್ರತಿಪತ್ತಯೇ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ಪದಗಳಲ್ಲಿ ಪಕಾರ ಬಳಕೆಯಾಗಿದೆ. ಎರಡು ತುಟಿಗಳ ಸಂಸ್ಪರ್ಶವಿಲ್ಲದೆ ಪಕಾರವನ್ನು ಉಚ್ಚರಿಸಲಾಗದು. ವಾಗರ್ಥಗಳು ಪಾರ್ವತೀ ಪರಮೇಶ್ವರರನ್ನು ಪ–ಕಾರದಿಂದ ಒಂದಾದವರು. ಜೋಡಿಯಾದವರು, ಅವಿಭಾಜ್ಯರು ಎಂಬುದನ್ನು ಚಮತ್ಕಾರಕವಾಗಿ ರಸಪೂರ್ಣವಾಗಿ ಕಾಳಿದಾಸ ಚಿತ್ರಿಸಿದ್ದಾನೆ. ಹೀಗೆ ಸಮಸ್ತ ದೃಷ್ಟಿಯಲ್ಲೂ ಸಂಪೂರ್ಣ ಲಕ್ಷಣಕಾವ್ಯ ರಘುವಂಶ ಕಾವ್ಯವಾಗಿದೆ.''

''ಕನ್ನಡ ಮಾರ್ಗಕವಿಗಳ ಧೋರಣೆ ಮತ್ತು ಕಾಳಿದಾಸನ ಧಾರ್ಮಿಕ ವಿಚಾರಸರಣಿ ಇವುಗಳನ್ನು ವಿಮರ್ಶಿಸಿ ಕನ್ನಡ ಕವಿಗಳು ಏನೇ ಆದರೂ ಕಾಳಿದಾಸನ ನವೋದಿತ ಪ್ರತಿಭೆಗೆ ತಮ್ಮ ಗೌರವ ತೋರಿಸುತ್ತಾರೆ'' ಎಂಬ ಡಾ. ಶ್ರೀ ರಾಮಭಟ್ಟರ ವಿಮರ್ಶೆಯನ್ನು ಪರ್ಯಾಯವಾಗಿ ಒಪ್ಪಿಕೊಂಡರೂ ಗೌರವ ಸಮರ್ಪಣೆಗೆ ಕಡಿಮೆ ಮಾಡಿರುವುದಿಲ್ಲ.

'ಉಪಮಾ ಕಾಲಿದಾಸಸ್ಯ' ಎಂಬಂತೆ ಉಪಮೆಯನ್ನು ಬಳಸುವಲ್ಲಿ ಕಾಳಿದಾಸ ಸಿದ್ಧಹಸ್ತ. ಅವನ ಸಾವಿರಾರು ಉಪಮೆಗಳಲ್ಲಿ ಅರ್ಧದಷ್ಟು ರಘುವಂಶ ಒಂದರಲ್ಲಿಯೆ ಇವೆ ಎಂಬುದನ್ನು ಸಂಪಾದಕರು ಎತ್ತಿ ತೋರಿಸಿದ್ದಾರೆ. ''ರಘು ವಂಶ ಕಾವ್ಯಕ್ಕೆ ಹಲವಾರು ವೈಶಿಷ್ಟ್ಯಗಳಿವೆ. ಕಾಳಿದಾಸನ ಶ್ರೇಷ್ಠ ಕಾವ್ಯಕಲೆ ಎಂಬುದು ಒಂದು ಹೆಗ್ಗಳಿಕೆ, ಮತ್ತು ಅವನು ಉಪಮಾಕವಿ ಎಂಬ ಅಗ್ಗಳಿಕೆಗೆ ರಘುವಂಶ ಕಾವ್ಯ ಆಕರವಾಗಿದೆ ಎಂದರೆ ತಪ್ಪಿಲ್ಲ'' ಅಂತೆಯೇ ಇದನ್ನು ೧೧೧೧ (ಭಾರತೀಯ ಸಾಹಿತ್ಯದ ಉತ್ಕೃಷ್ಟ ಪ್ರತೀಕ) ಎಂದೇ ಮುಕ್ತಕಂಠದಿಂದ ಪಾಶ್ಚಿಮಾತ್ಯ ವಿದ್ವಾಂಸರೂ ಸಹ ಹೊಗಳುತ್ತಾರೆ.

ಕಾಳಿದಾಸರ ಉಪಮೆಗಳು ಅನುಪಮವೆಂದೇ ಹೇಳಬೇಕು. ಅಂತೆಯೇ ಅವನನ್ನು ಸಂಪಾದಕರು ದೀಪಶಿಖಾ ಕಾಳಿದಾಸ ಎಂದೇ ಪ್ರಶಂಸಿಸುತ್ತಾರೆ. ಆರನೇ ಸರ್ಗದಲ್ಲಿ ಇಂದುಮತಿಯು ಸ್ವಯಂವರದ ಸಮಾವೇಶದಲ್ಲಿ ವರಮಾಲೆಯನ್ನು ಹಿಡಿದುಕೊಂಡು ಒಬ್ಬೊಬ್ಬರಾಗಿ ರಾಜರನ್ನು ನಿರಾಕರಿಸುತ್ತಾ

ಮುಂದೆ ಮುಂದೆ ಹೋದಾಗ ಹಿಂದೆ ಹಿಂದೆ ಉಳಿದ ರಾಜರ ಮುಖಗಳು- ದೀಪವನ್ನು ಹಿಡಿದು ರಾಜಮಾರ್ಗದಲ್ಲಿ ಹೋಗುತ್ತಿರುವಾಗ ಮುಂದೆ ಮುಂದೆ ಹೋದಂತೆ ಹಿಂದಿನ ಮುಖಗಳು ಕಪ್ಪಾಗಿ ಕಳೆಗುಂದಿದಂಥವುಗಳಾದಂತೆ ಕಳೆ ಇಲ್ಲದವುಗಳಾದವು.

ಸಂಚಾರಿಣೀ ದೀಪಶಿಖೇವ ರಾತ್ರೌ
ಯಂ ಯಂ ವ್ಯತೀಯಾಯ ಪತಿಂವರಾಸಾ ।
ನರೇಂದ್ರ ಮಾರ್ಗಾಟ್ಟ ಇವ ಪ್ರಪೇದೇ
ವಿವರ್ಣಭಾವಂ ಸಸ ಭೂಮಿಪಾಲಃ ॥ (೬-೬೭)

ಅದೇ ರೀತಿ ೮ನೆಯ ಸರ್ಗದಲ್ಲಿ ನಾರದ ಮಹರ್ಷಿಯ ವೀಣೆಗೆ ಹಾಕಿದ ಮಾಲೆಯು ಬಿದ್ದೊಡನೆ ಇಂದುಮತಿಯು ನೆಲಕ್ಕೆ ಬೀಳತೊಡಗಿದಳು. ಅವಳನ್ನು ಹಿಡಿದುಕೊಳ್ಳುತ್ತಿದ್ದಂತೆಯೆ ಅವನು ಬಿದ್ದನು. ದೀಪದ ತೈಲ ಬಿಂದು ಕೆಳಗೆ ಬೀಳುವಾಗ ದೀಪದ ಕಿಡಿಯನ್ನೂ ಕೆಳಗೆ ಕೆಡುವುತ್ತಿದೆ ಎಂಬ ಮನೋಜ್ಞ ಉಪಮೆಯು ಸದ್ಯಃ ಪರನಿರ್ವೃತಿಯನ್ನು ತರುತ್ತದೆ ಎಂಬಲ್ಲಿ ಸಂಶಯವಿಲ್ಲ. (ನನು ತೈಲನಿಕ್ಷೇಪ ಬಿಂದು ನಾ ಸಹ ದೀಪಾರ್ಚಿರುಪೊತೆ ಮೇದಿನೀಂ-೮೩೮)

ಅಜವಿಲಾಪದ ಪ್ರಸಂಗದಲ್ಲಿ-ನನ್ನ ದುರ್ದೈವವೆಂಬ ಸಿಡಿಲಿನಿಂದ ಗಿಡಕ್ಕೆ ಹಬ್ಬದ ಬಳ್ಳಿಯು ನಶಿಸಿಹೋಯಿತೆ ಹೊರತು ಆಸರೆಯಾಗಿದ್ದ ಗಿಡಕ್ಕೆ ಏನೂ ಆಗಲಿಲ್ಲವಲ್ಲ.

ಅಥವಾ ಮಮ ಭಾಗ್ಯ ವಿಪ್ಲವಾತ್
ಅಶನಿಃ ಕಲ್ಪಿತ ವಕ್ಷ ಸೋಽಚಿರಾತ್ ।
ಯದನೇನ ತರುರ್ನಪಾತಿತಃ
ಕ್ಷಪಿತಾ ದದ್ವಿಟಪಾಶ್ರಿತಾ ಲತಾ ॥ (೮-೪೭)

ಇಂತಹ ಉಪಮೆಗಳನ್ನು ಎಷ್ಟು ಉದಾಹರಿಸಿದರೂ ಕಡಿಮೆಯೇ. ಸಂಪಾದಕರು ಇಂತಹ ಉಪಮೆಗಳನ್ನು ಸುದೀರ್ಘವಾಗಿ ವಿಶ್ಲೇಷಣೆ ಮಾಡಿಯೇ ಮೇಲೆ ಹೇಳಿದಂತೆ ಕಾಳಿದಾಸನಿಗೆ ಉಪಮಾ ಕವಿ ಎಂದು ಕರೆದಿದ್ದಾರೆ. ರಘುವಂಶದ ೧೯ ಸರ್ಗದ ಸಮಗ್ರ ಕಥಾಸಂದರ್ಭಗಳನ್ನು ಬಹಳ ಸಂಕ್ಷಿಪ್ತವಾಗಿ ಸಂಪಾದಕರು ಉಲ್ಲೇಖಿಸಿ ಓದುಗರಿಗೆ ಗ್ರಂಥದ ರೂಪರೇಖೆಗಳನ್ನು ಒದಗಿಸಿದ್ದಾರೆ.

ಕಾಳಿದಾಸನ ಕಾಲದ ಬಗ್ಗೆ ಹೆಚ್ಚು ಚರ್ಚೆ ಮಾಡದೆ ಕ್ರಿ.ಶ. ೪ನೇ ಶತಮಾನ, ವಿಕ್ರಮಾದಿತ್ಯನ ಆಸ್ಥಾನಕವಿ ಎಂದು ನಿರ್ಣಯಿಸಿದ್ದಾರೆ. ಕಾಳಿದಾಸನ ಕಾಲದ ಚರ್ಚೆಗಿಳಿದರೆ ಒಂದು ದಡಕ್ಕೆ ಬರುವುದೇ ಕಠಿಣ. ಮಹಾಕಾವ್ಯ ಬರೆದ ಕಾಳಿದಾಸ ಬೇರೆ, ಖಂಡಕಾವ್ಯ ಬರೆದವನು ಬೇರೆ, ನಾಟಕಗಳನ್ನು ಬರೆದವನು ಬೇರೆ ಎಂದೂ ಕೆಲವರ ಅನಿಸಿಕೆ ಇದೆ. ಅಲ್ಲದೆ ೪ನೇ ಶತಮಾನದ ವಿಕ್ರಮಾದಿತ್ಯನ ಆಸ್ಥಾನಕವಿಯಾಗಿದ್ದನು ಅಥವಾ ಸಮುದ್ರಗುಪ್ತನ ಸಮಕಾಲೀನ ಕವಿ ಮುಂತಾಗಿ ಅವನ ಕಾಲವು ಹೊಯ್ದಾಡುತ್ತಿರುವಾಗ ನಿರ್ಣಯ ಮಾಡುವುದು ಕಠಿಣ. ಆದರೆ ಇತ್ತೀಚಿನ ಶೋಧಗಳಿಂದ ಬಹುದಾದಿ ಸಮ್ಮತವಾದ ಕ್ರಿ.ಪೂ. ೧ನೇ ಶತಮಾನ ಎಂಬ ನಿರ್ಣಯವು ಸಮಂಜಸ ಎನಿಸುತ್ತದೆ. ಹೆಚ್ಚಿನ ಸಂಶೋಧನೆಗಳಿಂದ ಕಾಲನಿರ್ಣಯವಾಗಬೇಕಾಗಿದೆ.

ಕಾಳಿದಾಸನ ಜನ್ಮಸ್ಥಳದ ಬಗ್ಗೆಯೂ ಸಂಪಾದಕರು ಅನೇಕ ಮತಗಳನ್ನು ಚರ್ಚಿಸಿ ಕೊನೆಗೆ ಕಾಶ್ಮೀರ ಇವನ ಜನ್ಮಭೂಮಿ ಇರಬಹುದೆಂಬ ಮತವನ್ನು ಉಲ್ಲೇಖಿಸಿದ್ದಾರೆ. ಖಚಿತವಾಗಿ ಅವನ ಜನ್ಮಭೂಮಿಯನ್ನು ನಿರ್ಣಯಿಸುವುದು ಅಸಾಧ್ಯವೇ. ಆದರೂ ಉತ್ತರ ಭಾರತ ಎಂಬುದು ನಿಶ್ಚಿತ.

ಮೇಘದೂತದಲ್ಲಿ ಮೇಘಕ್ಕೆ ದಾರಿಯನ್ನು ಸೂಚಿಸುತ್ತಾ ಸರಳ ಮಾರ್ಗವನ್ನು ಬಿಟ್ಟು ಉಜ್ಜಯನಿಗೆ ತಿರುಗಿ ಬಂದು (ವಕ್ರಃ ಪಂಥಾಃ) ಅದರ ವೈಭವವನ್ನು ಕಂಡುಕೊಂಡು ಮತ್ತೆ ನಿನ್ನ ದಾರಿಯನ್ನು ಹಿಡಿ ಎಂದು ಹೇಳಿರುವುದರಿಂದ ಅವನ ಜನ್ಮಭೂಮಿ ಉಜ್ಜಯನಿ ಇರಬಹುದೆಂದು ಬಹಳ ವಿದ್ವಾಂಸರ ಅಭಿಪ್ರಾಯಗಳೂ ಇವೆ. ಅಲ್ಲಿರುವ ಕಾಳಿಕಾ ಮಂದಿರದಲ್ಲಿಯೇ ಅವನು ಅನುಗ್ರಹ ಪಡೆದನೆಂದು ಹೇಳುತ್ತಾರೆ. ಸಂಪಾದಕರು ಅನವಶ್ಯಕವಾದ ಅನಿಶ್ಚಿತವಾದ ಇಂತಹ ಗೊಂದಲಮಯ ವಾದಗಳನ್ನು ವಿಮರ್ಶಿಸಲು ಹೋಗಲಿಲ್ಲ. ಆದರೆ ಒಂದು ಸಂಗತಿಯಂತೂ ನಿಶ್ಚಿತ. ಏನೆಂದರೆ ಭೋಜರಾಜ ೧೧ನೇ ಶತಮಾನದವನು ಕಾಳಿದಾಸನು ಕ್ರಿ.ಶ. ಪೂರ್ವಜನು. ಇವರನ್ನು ಜೋಡಿಸುವುದು ತೀರ ಅಸಂಗತ. (ಕವಿರತ್ನ ಕಾಳಿದಾಸ ಕನ್ನಡ ಸಿನಿಮಾದಲ್ಲಿ ಭೋಜರಾಜನ ಆಸ್ಥಾನಕವಿಯನ್ನಾಗಿ ಚಿತ್ರಿಸಿದ್ದು ಸಂಪೂರ್ಣ ಕಾಲ್ಪನಿಕ. ಭೋಜಪ್ರಬಂಧ ಗ್ರಂಥ ಸು. ೧೭ನೇ ಶತಮಾನದ್ದು. ಈ ಗ್ರಂಥದಲ್ಲಿ ಕವಿಯು ಕೇವಲ ಸುಂದರವಾದ ಕಾವ್ಯರಚನೆಗೆ ಅವಕಾಶ ಕಲ್ಪಿಸಿಕೊಂಡಿದ್ದಾನೆ ಅಷ್ಟೆ. ಭಾರವಿ, ದಂಡಿ, ಬಾಣ, ಶ್ರೀಹರ್ಷ ಕಾಳಿದಾಸ ಎಲ್ಲಾ ಭಿನ್ನ ಭಿನ್ನ ಕಾಲದಲ್ಲಿದ್ದವರನ್ನು ಒಟ್ಟಿಗೆ ಕೂಡಿಸಿದ್ದಾನೆ. ಕವಿಗಳ ಕಾಲ ದೃಷ್ಟಿಯಿಂದ ಇದು ಅಪ್ರಾಮಾಣಿಕವೇ ಆಗಿದೆ.)

ಕಾಳಿದಾಸನ ಜೀವನದ ಬಗ್ಗೆ ಕಾಲ್ಪನಿಕ ಕಥೆಗಳು ಬಹಳಷ್ಟು ಪ್ರಚಲಿತವಾಗಿರುತ್ತಿವೆ. ಅವನು ಕುರಿ ಕಾಯುವವನೆಂದೇ ಸಿನಿಮಾದ ಕಥಾವಸ್ತುವಿನಿಂದ ರೂಪಿಸಲಾಗಿದೆ. ಆದರೆ ಶ್ರೀ ಸಂಪಾದಕರು ಸೂಚಿಸುವಂತೆ ಅವನು ವೈದಿಕ ಮನೆತನದವನಾಗಿದ್ದು ದಡ್ಡನಾಗಿದ್ದ. ಯಾವುದೋ ಕಾರಣದಿಂದ ಪರಿವರ್ತನೆಯಾಗುವ ದೈವ ಬಲದಿಂದ ಕಾಲಿಕಾಮಾತೆಯ ಕೃಪೆಗೆ ಪಾತ್ರನಾಗಿ ಪ್ರತಿಭೆಯನ್ನು ಪಡೆದು ವೇದಶಾಸ್ತ್ರಗಳ ಅಧ್ಯಯನ ಮಾಡಿ ಕಾವ್ಯ ಬರೆದನೆಂಬುದನ್ನು ನಂಬಬಹುದು. ಕುರಿ ಕಾಯುವ ಮನೆಯವನಾಗಿದ್ದರೆ ವೇದಶಾಸ್ತ್ರಗಳ ಅಧ್ಯಯನಕ್ಕೆ ಅವಕಾಶವಿರಲಿಲ್ಲ. (ಕಾಳಿಕಾದೇವಿಯಿಂದ ಪ್ರಚಂಡ ಬುದ್ಧಿಶಕ್ತಿಯನ್ನು ಪಡೆದ ಎಂಬುದು ಸತ್ಯ.) ಮೇಲಾಗಿ ಶಾಕುಂತಲದಲ್ಲಿ ವೇದದ ಒಂದು ಋಕ್ಕನ್ನು ಬರೆಯುತ್ತಾನೆ (ನಾಲ್ಕನೇ ಅಂಕದಲ್ಲಿ) ವೈದಿಕೇತರ ಮನೆತನದವನಾಗಿದ್ದರೆ ವೇದದ ಮಂತ್ರವನ್ನು ಬರೆಯಲು ಅವಕಾಶವಿರುತ್ತಿರಲಿಲ್ಲ. ಅಲ್ಲದೆ ಕೆಲವು ವ್ಯಾಕರಣ ನಿಯಮಗಳಿಗೆ ವ್ಯತ್ಯಾಸ ಬರುವ ಪ್ರಯೋಗಗಳನ್ನು ನೋಡುತ್ತೇವೆ. ಕಾಳಿಕಾದೇವಿಯ ಪರಿಪೂರ್ಣ ಅನುಗ್ರಹವಷ್ಟೇ ಇದ್ದಿದ್ದರೆ (ಕಾಳಿದಾಸ ಸಿನೀಮಾದಲ್ಲಿ ತೋರಿಸಿದಂತೆ) ಈ ದೋಷಗಳಿಗೆ ಅವಕಾಶವಿರುತ್ತಿರಲಿಲ್ಲ. ಆದ್ದರಿಂದ ಅವನು ವೈದಿಕ ಮನೆತನದವನಾಗಿದ್ದು ಪರಿಶ್ರಮದಿಂದ ಅಧ್ಯಯನ ಮಾಡಿ ಕಾಳಿಕಾದೇವಿಯ ಕೃಪೆಯನ್ನು ಬಳಸಿಕೊಂಡು ಕೃತಿಗಳನ್ನು ರಚಿಸಿದನೆಂದು ಹೇಳಬೇಕಾಗುತ್ತದೆ. ಏನೇ ಆದರೂ ಜನಜನಿತವಾದ ಕಥೆಯಂತೆ ಕಾಲಿಕಾದೇವಿಯ ಅನುಗ್ರಹಕ್ಕೆ ಕಾರಣೀಭೂತವಾದ ರಾಜಕುಮಾರಿಯ ಜೊತೆಗೆ ವಿವಾಹವಾದ ಪ್ರಸಂಗವನ್ನು ಹೇಗೋ ಸ್ವೀಕರಿಸಬಹುದು. ಸಂಪಾದಕರು ಕಾಲಿಕಾದೇವಿಯ ಕಾಲಿದಾಸನ ನಾಲಿಗೆಯ ಮೇಲೆ ''ಅಸ್ತಿ ಕಶ್ಚಿತ್ ವಾಗ್ವಿಶೇಷಃ'' ಎಂದು ಬರೆದಳೆಂದು ಉಲ್ಲೇಖಿಸಿದ್ದಾರೆ. ಆದೆರ ಕೆಲವು ವದಂತಿಗಳ ಪ್ರಕಾರ ಐಂ ಹ್ರೀ ಇತ್ಯಾದಿ ಬೀಜಾಕ್ಷರಗಳನ್ನು ಬರೆದಳು. ಅದರ ಶಕ್ತಿಯಿಂದ ಪಾಂಡಿತ್ಯ ಸಂಪಾದಿಸಿ ರಾಜಕುಮಾರಿಯ ಹತ್ತಿರ ಬಂದಾಗ ಅವಳು ಈ ಪ್ರಶ್ನೆ ಕೇಳಿದಳು–''ಏನಾದರೂ ವಾಣಿಯ ವಿಶೇಷವಿದೆಯೋ'' (ಅಸ್ತಿ ಕಶ್ಚಿತ್ ವಾಗ್ವಿಶೇಷಃ?) ಆಗ ಆ ಶಬ್ದಗಳನ್ನೇ ಪ್ರಾರಂಭದಲ್ಲಿಟ್ಟು ಕುಮಾರ ಸಂಭವ, ರಘುವಂಶ, ಮೇಘದೂತ ಬರೆದನೆಂದು ಜನಶ್ರುತಿ ಇದೆ. ಆದರೆ ಇಂತಹ ಕಿಂವದಂತಿಗಳಿಗೆ ಸರಿಯಾದ ಯಾವ ಹಿನ್ನೆಲೆ ಮುನ್ನೆಲೆ ಇರುವದಿಲ್ಲ. ಏನೇ ಆದರೂ ಅವನ ಜೀವನ ಚರಿತೆಯ ಬಗ್ಗೆ ಪ್ರಸಿದ್ಧವಾದ ಜನಶ್ರುತಿಗಳನ್ನು ಉಲ್ಲೇಖಿಸಿದ್ದಾರೆ.

ಗ್ರಂಥ ಸಂಪಾದನೆಯ ವಿಚಾರದಲ್ಲಿ ಅನುವಾದದ ವೈಶಿಷ್ಟ್ಯ ತೋರಿಸುವ ೨೦ಕ್ಕೂ ಹೆಚ್ಚು ಪ್ರಾಗ್ರಹರಾಂಶಗಳನ್ನು ಎತ್ತಿ ತೋರಿಸಿದ್ದಾರೆ. ಪ್ರತಿಯೊಂದು ಅಧ್ಯಾಯಕ್ಕೂ ಒಂದೊಂದು ಶೀರ್ಷಿಕೆ, ಕಥಾಸಾರದ ಪದ್ಯ, ಸರ್ಗಗಳಿಗೆ ಅಧ್ಯಾಯ ಎಂಬ ಹೆಸರು, ಶಾಸ್ತ್ರಿಗಳವರ ಗ್ರಂಥಗಳ ಪಟ್ಟಿ, ಅವರ ಜೀವನ, ಟಿಪ್ಪಣಿ ಭಾಗ, ದೇಸಿಪದಗಳ ಬಳಕೆ, ಶ್ಲೋಕಗಳ ಪರಸ್ಪರ ಸಂಬಂಧ (ಮೇಲೆ ಉಲ್ಲೇಖಿಸಿದ ಶ್ಲೋಕಗಳ ಅನುವಾದದಲ್ಲಿ ಇವರು ಸೂಚಿಸಿದ ಸಂಬಂಧವನ್ನು ಕಾಣಬಹುದು), ಕ್ರಿಯಾವಾಚಕ ರೂಪಗಳು, ಪಾರಿಭಾಷಿಕ ಪದಗಳ ಬಳಕೆ, ಮುಂತಾದವುಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ವಿವರಣೆಗಳನ್ನು ಚೊಕ್ಕಟವಾಗಿ ನೀಡಿ ಅನುವಾದ ಗ್ರಂಥದ ಅಮೂಲಾಗ್ರ ವಿಶ್ಲೇಷಣೆ ಮಾಡುವಲ್ಲಿ ಸಂಪಾದಕರು ಸಂಪೂರ್ಣ ಯಶಸ್ವಿಗಳಾಗಿದ್ದಾರೆ.

ಸಂಸ್ಕೃತ ಸೂರಿಗಳ ಅಗ್ರಪಂಕ್ತಿಗೋ ಸೇರುವ ಶ್ರೇಷ್ಠ ಟೀಕಾಕಾರನಾದ ಕೋಲಾಚಲ ಮಲ್ಲಿನಾಥನ ವ್ಯಾಖ್ಯಾನವನ್ನು ಅನುವಾದಕರು ಬಳಸಿಕೊಂಡಿರುವುದನ್ನು ಸಂಪಾದಕರು ಸ್ಪಷ್ಟೋಕ್ತಿಯಲ್ಲಿ ಸೂಚಿಸಿದ್ದಾರೆ. ಹಳೆಗನ್ನಡದ ಪದಗಳು ಹೊಸಗನ್ನಡದ ಶೈಲಿ, ಕ್ರಿಯಾಪದದ ಪ್ರಯೋಗಗಳ ವಿಶೇಷತೆ ಮುಂತಾದವುಗಳನ್ನು ಹೆಕ್ಕಿ ತೋರಿಸಿದ್ದಾರೆ. ಕೆಲವು ಪಾರಿಭಾಷಿಕ ಪದಗಳನ್ನು ಅನುವಾದಕರು ಅನುವಾದದಲ್ಲಿ ಹಾಗೆ ಉಳಿಸಿಕೊಂಡಿದ್ದನ್ನು ಕೂಡ (ಅಂತೇಷ್ಟಿ, ಔರ್ಧ್ವದೇಹಿಕ ಕರ್ಮ) ತೋರಿಸಿದ್ದಾರೆ, ಅಲೀಢ ಎಂಬ ಶರಸಂಧಾನದ ಭಂಗಿಯನ್ನು ವಿವರವಾಗಿ ಅನುವಾದಿಸಿದ್ದನ್ನು ನೇರ ನುಡಿಗಳಲ್ಲಿ ತೋರಿಸಿದ್ದಾರೆ–''ಬಲಗಾಲಿನ ಮಂಡಿಯನ್ನು ಮುಂದಕ್ಕೆ ನೀಡಿ ಎಡಗಾಲನ್ನು ಹಿಂದಕ್ಕೆ ಸರಿಸಿ, ಮಂಡಿಯನ್ನು ತಗ್ಗಿಸಿ ಬಲ್ಲಾಳು ಕಾಳಗದಲ್ಲಿ ನಿಲ್ಲುವ ಅತೀಢ ಎಂಬ ಮೋಡಿಯ (ಭಂಗಿಯ) ಒಡಲಿನಿಂದ ಪಿನಾಕಪಾಣಿಯಂತೆ ಬೆಡಗುಗೊಂಡು ನಿಂತನು'' ಎಂದು ಸಂಪಾದಕರು ಇಂತಹ ರಮಣೀಯ ಅಂಶಗಳನ್ನು ಹುಡುಕಿ ಹುಡುಕಿ ಉಲ್ಲೇಖಿಸಿದ್ದಾರೆ. ಇದು ಕುಮಾರ ಸಂಭವದಲ್ಲಿ ಶಿವನಿಗೆ ಪುಷ್ಪಬಾಣ ಬಿಡಲು ಸಿದ್ಧನಾದ ಕಾಮದೇವನ ಶರಸಂಧಾನದ ಶೈಲಿಯನ್ನು ನೆನಪಿಗೆ ತರುತ್ತದೆ–

ಸ ದಕ್ಷಿಣಾಪಾಂಗ–ನಿವಿಷ್ಟಮುಷ್ಟಿಂ
ನತಾಂಸ ಮಾಕುಂಚಿತ ಸವ್ಯಪಾದಮ್ ।
ದದರ್ಶ ಚಕ್ರೀಕೃತ ಚಾರುಚಾಪಂ
ಪ್ರಹರ್ತುಮಭ್ಯುದ್ಯತ ಮಾತ್ಮಯೋನಿಂ ॥

ಇಲ್ಲಿಯೂ ಶರಸಂಧಾನದ ಅದೇ ತರಹದ ಭಂಗಿಯನ್ನು ವರ್ಣಿಸಲಾಗಿದೆ.

ಕೆಲವು ಶೃಂಗಾರಪೂರ್ಣವಾದ ಶ್ಲೋಕಗಳ ಅನುವಾದವು ಮುಜುಗರವನ್ನುಂಟು ಮಾಡಬಹುದೆಂದು ಅವುಗಳ ಅನುವಾದವನ್ನು ಶಾಸ್ತ್ರಿಗಳು ಕೈ ಬಿಟ್ಟಿರುವ ವಿಷಯವನ್ನು ಸಂಪಾದಕರು ಸರಿಯಾಗಿ ಊಹಿಸಿದ್ದಾರೆ. ಸಂಪಾದಕರ ಅಧ್ಯಯನ ಎಷ್ಟು ಆಳವಾಗಿದೆ ಎಂಬುದು ಅಚ್ಚರಿಯನ್ನುಂಟುಮಾಡುತ್ತದೆ.

ಹೀಗೆ ಮನೋಜ್ಞವಾದ ಅನುವಾದವನ್ನು ತಂತು ಸಂತಾನನ್ಯಾಯದಂತೆ ವಿಶ್ಲೇಷಣ ಮಾಡಿ ವಿಶಾಲವಾದ ಸಾಗರದ ಆಳಿನಲ್ಲಿ ಅನರ್ಘ್ಯರತ್ನಗಳನ್ನು ಹುಡುಕಿ ತೆಗೆದಂತೆ ವಿಶಿಷ್ಟ ಮಂಜುಲಾಂಶಗಳನ್ನು ಎತ್ತಿ ತೋರಿಸುವಲ್ಲಿ ಶ್ರೀ ಸಂಪಾದಕರು ಸಮರ್ಥರಾಗಿದ್ದಾರೆ. ಅನುವಾದಕರಾದ ಶಾಸ್ತ್ರಿಗಳ ಭವ್ಯ ವ್ಯಕ್ತಿತ್ವದ

ಬಗ್ಗೆ ಬರೆಯುತ್ತಾ-ಅವರು ಉದ್ದಕ್ಕೆ ಎತ್ತರವಾಗಿದ್ದರು. ಪೇಟಾ ಧರಿಸೆ ಶಾಲು ಹೊದೆಯುತ್ತಿದ್ದರು ಮುಂತಾದ ಗಾಂಭೀರ್ಯಯುತವಾದ ಪರಾರ್ಥ್ಯ ವ್ಯಕ್ತಿತ್ವದ ಉದಗ್ರಾಂಶಗಳನ್ನು ಓದಿದರೆ ಅವರ ಛಾಯಾಚಿತ್ರವನ್ನು ನೋಡುವ ಅವಶ್ಯಕತೆಯೇ ಇಲ್ಲವೇನೋ ಎಂದೆನಿಸುತ್ತದೆ. ಶಾಸ್ತ್ರಿಗಳು ಒಂದು ವೇಳೆ ಈ ವಿಮರ್ಶೆಯ ರಾಶಿಯನ್ನು ನೋಡಿದ್ದರೆ ಅವರಿಗೆ ಇಷ್ಟೆಲ್ಲ ಪ್ರಾಗ್ರಹರಾಂಶಗಳು ತಮ್ಮ ಅನುವಾದದಲ್ಲಿದೆ ಎಂಬುದನ್ನು ನೋಡಿ ಆಶ್ಚರ್ಯ ಪಡುತ್ತಿದ್ದರೋ ಏನೋ!

ದೊಡ್ಡಬೆಲೆ ಶಾಸ್ತ್ರಿಗಳ ಜೀವನ ಚರಿತ್ರೆಯ ಅಂಶಗಳನ್ನು ಚನ್ನಾಗಿ ವಿಂಗಡಿಸಿ ಇಲ್ಲಿ ನೀಡುವಾಗ ಸಂಪಾದಕರು ಬಹಳ ಶ್ರಮಪಟ್ಟು ಅವರ ಸಂಬಂಧಿಕರನ್ನು ಶಿಷ್ಯರನ್ನು ಸಂಪರ್ಕಿಸಿ ಸಾಹಸ ಕೃತ್ಯವನ್ನೇ ಮಾಡಿದಂತಾಗಿದೆ.. ದೂರದ ಬಂಧುಗಳನ್ನು ಪ್ರತ್ಯಕ್ಷವಾಗಿ ಭೆಟ್ಟಿಯಾಗಿ ವಿಷಯಗಳನ್ನು ಶೋಧಿಸಿ ಸಂಗ್ರಹಿಸಿ ಕೊಟ್ಟಿದ್ದಾರೆ. ಶಾಸ್ತ್ರಿಗಳು ಪ್ರಗಲ್ಭಪಾಂಡಿತ್ಯ ಹೊಂದಿದ ಅಧ್ಯಾಪಕರಾಗಿದ್ದರೆಂಬುದನ್ನು ಅವರ ಶಿಷ್ಯರಿಂದ ತಿಳಿಯಬಹುದಾಗಿದೆ ಎಂದು ವಿ. ಸೀತಾರಾಮಯ್ಯನವರ ಅಭಿಮತವನ್ನು ಹೀಗೆ ಉಲ್ಲೇಖಿಸಿದ್ದಾರೆ-''ನನ್ನ ಅನುಭವದಲ್ಲಿ ಆವರೆಗೂ ಸಿಕ್ಕಿದ್ದ ಕನ್ನಡ ಅಧ್ಯಾಪಕರಲ್ಲಿ ಜಯರಾಮ ವೆಂಕಟಾಚಾರ್ಯರು, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ವಿಶೇಷವಾಗಿ ಶಕ್ತಿಯುಳ್ಳ ಉಪಾಧ್ಯಾಯರು ಧೀಮಂತರು.''

ಶಾಸ್ತ್ರಿಗಳು ಜ್ಯೋತಿಷ್ಯಶಾಸ್ತ್ರದಲ್ಲಿ ಉದ್ದಾಮ ಪಂಡಿತರಾಗಿದ್ದರು. ಅಂತೆಯೇ ತಮ್ಮ ಮೊಮ್ಮಗ ರಾಮಶೇಷ ಶಾಸ್ತ್ರಿಯು ಹೆಚ್ಚುದಿನ ಬದುಕುವುದಿಲ್ಲವೆಂಬುದನ್ನು ಎಲ್ಲರಿಗೂ ಹೇಳಿದ್ದರಂತೆ. ತಾವು ಕೂಡಾ ಮೈಸೂರು ದಸರಾ ಆಸ್ಥಾನಕ್ಕೆ ಹೋದಾಗ ''ಇದು ಪ್ರಾಯಃ ದಸರೆಯಲ್ಲಿ ಕೊನೆಯದಾಗಿ ತಮ್ಮ ದರುಶನವೆಂದೆನಿಸುತ್ತದೆ'' ಎಂದು ಹೇಳಿದ್ದರಂತೆ ಅದರಂತೆಯೇ ಅದು ಸಂಭವಿಸಿತು. ಸಾಯುವುದಕ್ಕೂ ಮುಂಚೆಯೇ ಬ್ಯಾಂಕಿನಿಂದ ಹಣ ತೆಗೆಸಿದರು. ಡಾಕ್ಟರಿಗೆ ತಮ್ಮ ಮನೆಗೆ (ನಮ್ಮ ಮನೆಯವರು) ಯಾರಾದರೂ ಕರೆದರೆ ನಮ್ಮ ಮನೆಗೆ ತಾವು ಬರುವ ಅವಶ್ಯಕತೆ ಇಲ್ಲವೆಂದು ತಿಳಿಸಿದ್ದರು. ಸ್ಮಶಾನದಲ್ಲಿಯೂ ''ಮುಂದಿನ ವಾರ ನಮ್ಮ ಜನ ಬಂದರೆ ಸಹಕರಿಸು'' ಎಂದು ಮೇಲ್ವಿಚಾರಕನಿಗೆ ಹೇಳಿದ್ದರು. ತನ್ನ ದೇಹವನ್ನು ಕಿಡಕಿ ಒಡೆದು ಹೊರಗೆ ಒಯ್ಯಿರಿ ಎಂದು ಹೇಳಿದ್ದರಂತೆ. ಇಂತಹ ಅನೇಕಾನೇಕ ಸೂಕ್ಷ್ಮ ವಿಷಯಗಳನ್ನು ನಿರೂಪಿಸಿ, ಸಂಪಾದಕರು ಅವರ ವ್ಯಕ್ತಿತ್ವ, ಘನತೆ ಪಾಂಡಿತ್ಯ, ಶಾಸ್ತ್ರೀಯ ಜ್ಞಾನ ಮುಂತಾದ ಪ್ರಾಗ್ರ ಗುಣಗಳು ಓದುಗರ ಕಣ್ಣುಮುಂದೆ ನಿಲ್ಲುವಂತೆ ಮಾಡಿದ್ದಾರೆ.

ಶಾಸ್ತ್ರಿಗಳು ನಿಪುಣ ಅನುವಾದಕರು, ಶ್ರೇಷ್ಠ ಟೀಕಾಕಾರರು ಎಂಬುದನ್ನು ಸಪ್ರಮಾಣವಾಗಿ ನಿರೂಪಿಸಿದ್ದಾರೆ. ಪ್ರಾಜ್ಞ ಟಿಪ್ಪಣಿಗಳನ್ನು ಬರೆದಿದ್ದಾರೆ. ವಿದ್ಯಾರ್ಥಿಗಳಿಗಾಗಿ ಜ್ಞಾನಪ್ರಕಾಶ ಕೊಡುವ ಪ್ರಖರ ದೀಪವೂ ಆಗಿದ್ದರು. ಬಾಲ ಸಾಹಿತ್ಯದಲ್ಲಿಯೂ ಅವರ ಕೊಡುಗೆ ಅಪಾರವೆಂಬುದನ್ನು ಸಂಪಾದಕರು ನೀಡಿದ ಗ್ರಂಥಗಳ ಪಟ್ಟಿಯಿಂದ ತಿಳಿದು ಬರುತ್ತಿದೆ. ಪುಸ್ತಕಗಳ ಪಟ್ಟಿಯಲ್ಲಿ ಆಯಾ ಗ್ರಂಥಗಳ ಅಗ್ರಿಮಾಂಶಗಳನ್ನು ಉಲ್ಲೇಖಿಸಿದ್ದಾರೆ. ಹಿತೋಕ್ತಿ, ಚಿಕ್ಕಕಥೆಗಳು ಕವಿತೆಗಳು ಮುಂತಾದ ಪುಟ್ಟ ಪುಟ್ಟ ಗ್ರಂಥಗಳನ್ನು ರಚಿಸಿ ಬಾಲಕರಿಗೆ ಭಾರತೀಯ ಸಂಸ್ಕೃತಿಯ ಪರಿಚಯ ನೀಡುವ, ಸಂಸ್ಕಾರ ಕೊಡುವ ಉಪಕಾರ ಮಾಡಿದ್ದಾರೆ. ಅವರು ಕೇವಲ ಗದ್ಯ ಅಷ್ಟೇ ಅಲ್ಲ ಪದ್ಯಗಳನ್ನು ರಚಿಸಿ ತಮ್ಮ ಪ್ರತಿಭೆಗೆ ನಿದರ್ಶನ ಕೊಟ್ಟಿದ್ದಾರೆ. ಅವರು ಅದ್ವೈತ ವೇದಾಂತದಲ್ಲಿ ಘನವಿದ್ವಾಂಸರಾಗಿದ್ದರೂ ಉಳಿದ ಪ್ರಸ್ಥಾನಗಳನ್ನು ಬೇರೆ ಧರ್ಮೀಯರನ್ನು ಅವರ ಗ್ರಂಥಗಳನ್ನು ಅಷ್ಟೇ ಗೌರವದಿಂದ ಕಾಣುತ್ತಿದ್ದರು

ಎಂಬುದನ್ನು, ಅವರು ರಾಘವೇಂದ್ರ ಸ್ತೋತ್ರ, ಮುಕುಂದಮಾಲಾ ಸ್ತೋತ್ರ ಮುಂತಾದವುಗಳಿಗೆ ವಿವರಣೆ, ಟೀಕೆಗಳನ್ನು ರಚಿಸಿ ತಮ್ಮ ವಿಶಾಲ ಮನೋಭಾವನೆಯನ್ನು ತೋರಿಸಿದ್ದಾರೆ ಎಂಬುದನ್ನು ಶ್ರೀ ಅಶ್ವತ್ಥನಾರಾಯಣರು ವಿವಿಧ ರೀತಿಯಲ್ಲಿ ಸಮರ್ಥಿಸಿದ್ದಾರೆ.

''ದೊಡ್ಡಬೆಲೆ ಅವರ ಅನುವಾದದ ವೈಶಿಷ್ಟ್ಯವೆಂದರೆ ಉಳಿದವರಂತೆ ಶ್ಲೋಕಗಳನ್ನು ಬಿಡಿ ಬಿಡಿಯಾಗಿ ಅನುವಾದಿಸಿಲ್ಲ. ಹಿಂದಿನ ಶ್ಲೋಕಕ್ಕೂ ಮುಂದಿನ ಶ್ಲೋಕಾನುವಾದಕ್ಕೂ ಸಂಬಂಧವಿರುವಂತೆ ಸಣ್ಣ ವಿವರಣೆಗಳನ್ನು (ಅವತರಣಿಕೆ) ಸೇರಿಸಿ ಶ್ಲೋಕಾನುವಾದ ಮಾಡುತ್ತಾರೆ. (ಮೇಲೆ ಉದಾಹರಿಸಿದ ಅನುವಾದ ಶ್ಲೋಕಗಳ ಅನುವಾದದಲ್ಲಿ ಈ ರೋಚಕ ಅಂಶವನ್ನು ಕಾಣಬಹುದು) ಹೀಗಾಗಿ ಓದುಗರಿಗೆ ಕಾದಂಬರಿಯಂತೆ ಉದ್ದಕ್ಕೂ ಓದಿಸಿಕೊಂಡು ಹೋಗುತ್ತದೆ ಎಂದು ಸಂಪಾದಕರು ಹೇಳಿ-ಇದು ಶಾಸ್ತ್ರಿಗಳ ಅನುವಾದದ ಮುಂಜುಲಾಂಶ ಎಂದು ಅದನ್ನು ಸಪ್ರಮಾಣವಾಗಿ ತೋರಿಸಿದ್ದಾರೆ. ಇದೇ, ಓದುಗರಿಗೆ ಮುಂದೆ ಮುಂದೆ ಓದಬೇಕೆಂಬ ಕುತೂಹಲವನ್ನು ಹುಟ್ಟಿಸುವ, ಸಂಪೂರ್ಣ ಕಥೆಯ ಅಥವಾ ಘಟನೆಯ ಪರಿಪೂರ್ಣ ಕಲ್ಪನೆಯನ್ನು ಕೊಡುವ ಕೊಂಡಿಯಾಗಿದೆ ಎನ್ನಬಹುದು.

ದೊಡ್ಡಬೆಲೆ ಶಾಸ್ತ್ರಿಗಳ ಬಗ್ಗೆ ಬರೆದ ಸಂಪಾದಕರ ನುಡಿಗೂ ದೊಡ್ಡಬೆಲೆ ಇದೆ ಎಂದಷ್ಟೇ ಅಲ್ಲ ಬೆಲೆ ಇಲ್ಲದ ಅಮೂಲ್ಯ ಸಂಪಾದಿತ ಕೃತಿಯಾಗಿದೆ ಎನ್ನಬಹುದು. ಶ್ರೀ ಅಶ್ವತ್ಥನಾರಾಯಣರ ಸಂಶೋಧನಾ ಪ್ರವೃತ್ತಿ ಅನ್ವೇಷಣೆಯ ಸರಣಿಯು ಓದುಗರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತದೆ. ಇದನ್ನೇ ಇನ್ನೂ ಸ್ವಲ್ಪ ಬೆಳೆಸಿಬಿಟ್ಟರೆ ಪಿಎಚ್.ಡಿ. ಮಹಾಪ್ರಬಂಧವೇ ಆಗುತ್ತದೆ. ೬೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಶಾಸ್ತ್ರಿಗಳು ಇಷ್ಟೆಲ್ಲ ಸಾಹಿತ್ಯ ಸೇವೆ ಸಲ್ಲಿಸಿದ್ದರೂ ೧೦೦ ವರುಷಗಳವರೆಗೆ ಮರೆತ ವಿದ್ವಾಂಸರಾಗಿದ್ದಾರೆ ಎಂದು ಸಂಪಾದಕರು ಬೇಸರದಿಂದ ಹೇಳುತ್ತಾರೆ. ಆದರೂ ಅವರ ಪರಿಚಯದ ಅನೂನಕಾಂಶಗಳನ್ನು ಅನುವಾದ ಗ್ರಂಥದ (ರಘು ಕುಲಚರಿತಂ) ಸಂಪಾದಕೀಯದಲ್ಲಿ ವಿವರಿಸಿ ಅವರ ಹೆಸರು ಅಜರಾಮರವಾಗುವಂತೆ ಮಾಡಿದ ಪ್ರೊ. ಜಿ. ಅಶ್ವತ್ಥನಾರಾಯಣರು ಅಭಿವಂದನೀಯರು ಅಭಿನಂದನೀಯರೂ ಆಗಿದ್ದಾರೆ ಎಂಬಲ್ಲಿ ಎರಡೂ ಮಾತಿಲ್ಲ.

ವಿಜಿತ ಬಿರುದರಾಶಿಃ ಪ್ರಾಜ್ಯಸಾಹಿತ್ಯಸಿಂಧೌ
ಸದಯಹೃದಯ ಬಿದ್ವತ್ತಲ್ಲಜಃ ಪ್ರೌಢಶ್ವೇತ್ಯಾಂ ।
ವಿವಿಧ ವಿಷಯ ದೀಪ್ತಗ್ರಂಥರತ್ನಾನ್ಯಸಿತ್ವಾ
ಜಯತಿ ಪರಮಧೀರೋಽಶ್ವತ್ಥನಾರಾಯಣಾರ್ಯಃ ॥

******

ಕನ್ನಡದ ಅಪರೂಪದ 'ಬುಕ್ಕಾಂಬುಧಿ ಕನ್ನಡ-ಇಂಗ್ಲಿಷ್ ಪ್ರಾದೇಶಿಕ ಪದಕೋಶ'

ಡಾ. ಸುಂಕಂ ಗೋವರ್ಧನ
ಚರವಾಣಿ : ೯೫೩೫೭೬೨೪೬೪

ನಮ್ಮ ವಿದ್ವತ್ ಪರಂಪರೆಯ ಅಪರೂಪದ ಕೊಂಡಿಯಾಗಿರುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಸಾಹಿತ್ಯ ಮತ್ತು ಸಂಶೋಧನೆಯ ನಾನಾ ಪ್ರಕಾರಗಳಲ್ಲಿ ತಮ್ಮನ್ನು ತಾವು ನಿರಂತರವಾಗಿ ತೊಡಗಿಸಿಕೊಂಡವರು. ಅಪಾರವಾದ ಓದು ಹಾಗೂ ವ್ಯಾಪಕವಾದ ವಿದ್ವತ್ತಿನ ಮೂಲಕ ನಾಡಿನೆಲ್ಲೆಡೆ ಬಹುಶ್ರುತರು. ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಅಧ್ಯಾಪಕರಾಗಿ ಮೂರು ದಶಕಗಳಷ್ಟು ಕಾಲ ಪದವಿ ವಿದ್ಯಾರ್ಥಿಗಳಿಗೆ ಕನ್ನಡ ದೀಕ್ಷೆ ನೀಡಿದವರು. ಹಳಗನ್ನಡ ತರಗತಿಗಳ ಮೂಲಕ ಹಳಗನ್ನಡದ ಪಠ್ಯಗಳನ್ನು ಸರಾಗವಾಗಿ ನೀರು ಕುಡಿಯುವಂತೆ ಪಾಠ ಮಾಡುವವರು. ಹಾಗೇ ಅರ್ಥಸ್ಫುರಣವನ್ನು ಮಾಡಿಸುವವರು. ನಾಡಿನಾದ್ಯಂತ ಕನ್ನಡದ ಅಸ್ಮಿತೆಯ ಹಲವು ಮುಖಗಳನ್ನು ತಮ್ಮ ಅಸ್ಖಲಿತ ಭಾಷಣಗಳ ಮೂಲಕ ಪಸರಿಸಿದವರು. ಕನ್ನಡ ಪರವಾದ ಚಳವಳಿಗಳಲ್ಲಿ ಮೊದಲಿನಿಂದಲೂ ತೊಡಗಿಸಿಕೊಂಡವರು. ನಾಡಿನ ಬಹುಮುಖ್ಯವಾದ ವಿದ್ವತ್ ಸಂಸ್ಥೆಗಳ ಸದಸ್ಯರಾಗಿ ಅವುಗಳ ಅಭಿವೃದ್ಧಿಗೆ ಬಹುವಾಗಿ ಶ್ರಮಿಸಿದವರು. ತಾವು ಸಾಹಿತ್ಯ ಸಂಶೋಧನೆಯ ಯಾವುದೇ ಪ್ರಕಾರದಲ್ಲಿ ಕೆಲಸ ಮಾಡಲೀ ಆ ಪ್ರಕಾರದ ಅದುವರೆಗಿನ ಕ್ಷಿತಿಜವನ್ನು ವಿಸ್ತರಿಸುವಷ್ಟು ಸಮರ್ಥರು. ಇನ್ನೇನು ಎರಡು ಮೂರು ವರ್ಷಗಳಿಗೆ ತೊಂಬತ್ತು ವರ್ಷಗಳಿಗೆ ಏರಲಿರುವ ನಮ್ಮ ಗುರುಗಳಿಗೆ **ಸಾಹಿತ್ಯ ಪರಿಚಾರಕ** ಎಂಬ ಗೌರವ ಗ್ರಂಥವನ್ನು ಅರ್ಪಿಸುತ್ತಿರುವ ಈ ಶುಭ ಸಂದರ್ಭದಲ್ಲಿ ಅವರು ಮಾಡಿರುವ ಸಾಹಿತ್ಯ ಸೇವೆಯಲ್ಲಿ ಕೇವಲ ಒಂದು ಕೃತಿಯನ್ನು ಕುರಿತು ಪರಿಚಯ ಮಾಡುವ ಯೋಗ ನನಗೆ ಬಂದಿದೆ. ಅದು **ಬುಕ್ಕಾಂಬುಧಿ ಪ್ರಾದೇಶಿಕ ಪದಕೋಶ**. ಈ ಕೃತಿಯ ವಿಶೇಷತೆಯನ್ನು ಹಾಗೂ ಪ್ರಸ್ತುತತೆಯನ್ನು ಅರ್ಥ ಮಾಡಿಕೊಳ್ಳುವುದು ಈ ಲೇಖನದ ಉದ್ದೇಶವಾಗಿದೆ.

ಬುಕ್ಕಾಂಬುಧಿ ಕೃಷ್ಣಮೂರ್ತಿ

ಕನ್ನಡದ ಅಪರೂಪದ ಪ್ರಾದೇಶಿಕ ಕೋಶವಾದ '**ಬುಕ್ಕಾಂಬುಧಿ ಪ್ರಾದೇಶಿಕ ಕೋಶ**'ದ ಮೂಲಕರ್ತೃ ಬುಕ್ಕಾಂಬುಧಿ ಕೃಷ್ಣಮೂರ್ತಿ ಅವರು. ಇವರು ೧೯೨೬ರ ಜನವರಿ ೮ರಂದು ಜನಿಸಿದವರು. ಮೈಸೂರು, ಚಿಕ್ಕಮಗಳೂರು, ಬೆಂಗಳೂರಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿದ ಇವರು ೧೯೪೫ರಲ್ಲಿ ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಕಾಫಿಬೋರ್ಡಿನಲ್ಲಿ ಕೆಲಸಕ್ಕೆ ಸೇರಿದರು. ಚಿಕ್ಕಮಗಳೂರು, ಬಾಳೇಹೊನ್ನೂರುಗಳಲ್ಲಿ ಇವರು ಕಾರ್ಯನಿರ್ವಹಿಸಿದ ಅವಧಿಯಲ್ಲಿ ಅನೇಕ ಸುಧಾರಣೆಗಳಾದವು. ೧೯೮೪ರಲ್ಲಿ ವೃತ್ತಿಯಿಂದ ನಿವೃತ್ತರಾದರು. ಇವರ ಧರ್ಮಪತ್ನಿಯ ಅಗಲಿಕೆಯ ನಂತರ ಜಯನಗರದ

ತಮ್ಮ ಮನೆಯಲ್ಲಿರದೇ ೧೯೭೭ರಲ್ಲಿ ಅಮೇರಿಕಾಗೆ ತೆರಳಿ ಅಲ್ಲಿಯೇ ತಮ್ಮ ಮಗಳೊಂದಿಗೆ ವಾಸ ಮಾಡುತ್ತಿದ್ದಾರೆ. ಇನ್ನೇನು ಶತಾಯುಷಿಗಳಾಗಲಿರುವ ಬುಕ್ಕಾಂಬುಧಿ ಕೃಷ್ಣಮೂರ್ತಿಯವರು ತಮ್ಮನ್ನು ತಾವು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿಸಿಕೊಂಡವರು. ಮೂರು ದಶಕಗಳಿಂದ ಅಮೇರಿಕೆಯಲ್ಲಿದ್ದರೂ ಸುಮ್ಮನೇ ಕೂತವರಲ್ಲ. ಇಂದಿಗೂ ಅವರು ವೃತ್ತಿಯಲ್ಲಿ ನಿರತರು. ನಿವೃತ್ತರಲ್ಲ.

ಪ್ರತೀವರ್ಷವೂ ಒಂದಿಲ್ಲ ಒಂದು ಸಾಹಿತ್ಯಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಬಂದಿದ್ದಾರೆ. ಅವರು ಬೆಂಗಳೂರಿಗೆ ಬಂದರು ಎಂದರೆ ಯಾವುದಾದರೂ ಒಂದು ಸಾಹಿತ್ಯಕ ಕೃತಿಯನ್ನು ಜೊತೆಗೆ ತಂದಿದ್ದಾರೆ ಎನ್ನುವಷ್ಟು ಅವರು ಬರವಣಿಗೆಗೆ ಮನಸೋತುಹೋಗಿದ್ದಾರೆ. ಸೃಜನಶೀಲ ಸಾಹಿತ್ಯದಲ್ಲಿ ಅಪಾರವಾದ ಕೆಲಸವನ್ನು ಮಾಡಿದ್ದಾರೆ. ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ ಪ್ರಕಾರಗಳಲ್ಲಿ ಸಾಹಿತ್ಯ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಪ್ರಕಟಿತ ಕೃತಿಗಳು 'ಚಿಕ್ಕಮಗಳೂರು ವೆಂಕಟರಮಣ ಭಾಗವತರು', ಕೃತಿ ಅವರ ತಂದೆಯವರ ಬಗೆಗಿನ ಕೃತಿಯಾಗಿದೆ. ತಮ್ಮ ವಂಶದವರು ಎಷ್ಟೆಲ್ಲಾ ಕೆಲಸಗಳನ್ನು ಮಾಡಿದ್ದಾರೆ ಎಂದು ಮುಂದಿನ ಪೀಳಿಗೆಯವರಿಗೆ ತಿಳಿಯಲಿ ಎಂಬ ಘನ ಉದ್ದೇಶದಿಂದ ಈ ಕೃತಿಯನ್ನು ರಚಿಸಿದ್ದಾರೆ. ಇದರ ಜೊತೆಗೆ 'ನನ್ನ ವಿದೇಶ ಪ್ರವಾಸ', 'ನಮ್ಮೂರಿನ ಕಿರುಪ್ರಸಂಗಗಳ ಮಾಲೆ', 'ನಾನು ನಡೆದುಬಂದ ಹಾದಿ', 'ಪ್ರವಾಸಗಳ ಕಂತೆ' (ಇಂಗ್ಲಿಷಿನಲ್ಲಿ), 'ನನ್ನ ಒಡನಾಟದ ವ್ಯಕ್ತಿಗಳು', 'ನೆನಪಿಸಿಕೊಂಡ ವಿನೋದ ಪ್ರಸಂಗಗಳು'

ಅವರು ಮೂಲತಃ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಪ್ರಾಂತ್ಯದ ಬುಕ್ಕಾಂಬುಧಿಯವರು. ತಮ್ಮ ಬಾಲ್ಯದ ಬಹುಮುಖ್ಯ ಭಾಗವನ್ನು ಅವರು ಇಲ್ಲಿ ಕಳೆದರು. ಚಿಕ್ಕಮಗಳೂರು ಮಲೆನಾಡಿನ ಹೆಬ್ಬಾಗಿಲು. ಬಯಲು ಪ್ರದೇಶ ಮತ್ತು ಮಲೆನಾಡಿನ ಸಂಧಿ ಈ ಪ್ರದೇಶ. ಅದರಿಂದ ಇಲ್ಲಿನ ಭಾಷೆಗೆ ಒಂದು ಸೊಗಸು ತನ್ನಿಂದ ತಾನೇ ಮೂಡಿದೆ. ಇಲ್ಲಿ ಬಳಸಲಾಗುವ ಪ್ರತೀ ಪದಾರ್ಥಗಳೂ ತನ್ನ ವೈಶೇಷಿಕ ವಿನ್ಯಾಸದೊಂದಿಗೆ ತನ್ನ ಅಧಿಕೃತ ಅಸ್ತಿತ್ವವನ್ನು ಸಂಪಾದಿಸಿಕೊಂಡಿದೆ. ಹಾಗಾಗಿ ಈ ಪ್ರದೇಶದ ಪದಗಳು ಶಬ್ದಕೋಶದಲ್ಲಿ ದಾಖಲಾಗಬೇಕಾಗಿರುವುದು ಅತ್ಯಂತ ಅವಶ್ಯಕವಾಗಿರುತ್ತದೆ. ಹಾಗೆ ನೋಡಿದರೆ ಪ್ರತೀ ಪ್ರದೇಶವು ಹೀಗೆ ತನ್ನಲ್ಲಿ ಅಂತಹ ಅದ್ಭುತವಾದ ಪದ ಭಂಡಾರವನ್ನು ಹೊಂದಿರುತ್ತದೆ. ಆದರೆ ಅವುಗಳಿಗೆ ಪದಕೋಶಗಳ ಭಾಗ್ಯ ದೊರಕುವುದು ಇಂತಹ ದಕ್ಷ ವ್ಯಕ್ತಿಗಳಿಂದ ಮಾತ್ರ. ಕೃಷ್ಣಮೂರ್ತಿ ಅವರು ತಮ್ಮ ಹಳ್ಳಿಗಾಡಿನಲ್ಲಿ ಉಪಯೋಗಿಸುತ್ತಿದ್ದ ಪದಗಳನ್ನು ಆಗಾಗ್ಗೆ ಮೆಲಕು ಹಾಕಬೇಕೆಂದು ಬಯಸಿ, ಒಂದೊಂದನ್ನೂ ಜ್ಞಾಪಕಕ್ಕೆ ಬಂದ ಹಾಗೆ ಅವುಗಳನ್ನು ಬರೆದುಕೊಳ್ಳುತ್ತಾ ಬಂದಿದ್ದರು. ಎಷ್ಟೋ ವಸ್ತುಗಳ ಹೆಸರುಗಳು, ಆಚರಣೆಗಳು ಸ್ವತಃ ತಮ್ಮ ಮಕ್ಕಳಿಗೆ ಗೊತ್ತಾಗುತ್ತಿಲ್ಲವಲ್ಲ. ಅಂದಮೇಲೆ ಮುಂದಿನ ಪೀಳಿಗೆಗೆ ಇವುಗಳನ್ನು ತಿಳಿಸಿ ಹೇಳುವ ಜವಾಬ್ದಾರಿ ಯಾರಿಗಿದೆ ಎಂದು ಯೋಚಿಸಿ ಈ ಪದಕೋಶವನ್ನು ಅವರು ಸಿದ್ಧಪಡಿಸಿದ್ದಾರೆ.

ಅವರೇ ಹೇಳುವಂತೆ "ನಮ್ಮೂರಿನ ವೃತ್ತಿಕಾರರ ಮನೆತನಗಳಲ್ಲಿ ಧಾರ್ಮಿಕ ಆಚಾರ ವಿಚಾರಗಳಿಗೆ ಸಂಬಂಧಿಸಿದಂತೆ ವೃತ್ತಿಗೆ ಸೇರಿದ ಅನೇಕ ಪದಗಳು ಬಳಕೆಯಲ್ಲಿವೆ. ಆ ಪೈಕಿ ಬಾಲ್ಯದಲ್ಲಿ ನಾನು ನಮ್ಮೂರಿನಲ್ಲಿ, ಸುತ್ತಮುತ್ತಲ ಜನರು ನಿತ್ಯಜೀವನದಲ್ಲಿ ಬಳಸುತ್ತಿದ್ದ ಶಬ್ದಗಳನ್ನು, ಅವರ ಜೀವನ ವಿಧಾನಗಳನ್ನು, ಆಚರಣೆಗಳನ್ನು ನನಗೆ ತಿಳಿದಮಟ್ಟಿಗೆ ಈ ಕೋಶದಲ್ಲಿ ವಿವರಣೆಸಹಿತ ಕೊಟ್ಟಿದ್ದೇನೆ. ಇಲ್ಲಿ ಬಿಟ್ಟು ಹೋದ ಶಬ್ದಗಳನ್ನೂ ಮತ್ತು ಇಲ್ಲಿ ಕೊಟ್ಟಿರುವ ವಿವರಣೆಯಲ್ಲಿ, ಆಚರಣೆಯ ವಿಧಾನಗಳನ್ನು ತಿಳಿಸಿರುವುದರಲ್ಲಿ ತಪ್ಪುಗಳಿದ್ದರೆ, ಅವುಗಳನ್ನೂ ವಿದ್ವಾಂಸರು, ಭಾಷಾತಜ್ಞರು, ನಮ್ಮ

ಊರಿನ ಬೇರೆಬೇರೆ ವೃತ್ತಿಜನರು. ಹಿರಿಯರು ನನ್ನ ಗಮನಕ್ಕೆ ತಂದರೆ ಕೃತಜ್ಞತೆಯಿಂದ ಈ ಕೋಶದ ಮುಂದಿನ ಆವೃತ್ತಿಯಲ್ಲಿ ಅಳವಡಿಸುತ್ತೇನೆ'' ಎಂದು ಹೇಳಿರುವುದು ಅವರ ವಿನಯವಂತಿಕೆಯ ಉತ್ತಮ ಉದಾಹರಣೆಯಾಗಿದೆ.

ಅಸ್ತಿಪಂಜರವನ್ನು ಸಶರೀರವಾಗಿಸಿದ ಅನಾಜಿ

ಇಂತಹ ತಮ್ಮ ಪ್ರದೇಶದ ಪದಗಳನ್ನು ಸಂಗ್ರಹಿಸಿ ಅವುಗಳ ವಿವರಣೆಯನ್ನು ಬರೆದಿರುವ ಕೋಶವನ್ನು ಕೃಷ್ಣಮೂರ್ತಿಯವರು ಎಂದಿನಂತೆ ಪ್ರೊ. ಅಶ್ವತ್ಥನಾರಾಯಣ ಜಿ (ಇನ್ನು ಮುಂದೆ ಅನಾಜಿ ಎಂದು ಉಲ್ಲೇಖಿಸಲಾಗುತ್ತದೆ) ಅವರಿಗೆ ತೋರಿಸಿದ್ದಾರೆ. ಅನಾಜಿಯವರ ಕೈಗೆ ಯಾವುದಾದರೂ ಹಸ್ತಪ್ರತಿ ಸಿಕ್ಕರೆ ಅದು ಅಂತಿಮವಾಗಿ ಎಷ್ಟು ಅಚ್ಚುಕಟ್ಟಾಗಿ ರೂಪುಗೊಳ್ಳಬೇಕೋ ಹಾಗೆ ಅದನ್ನು ಅವರು ಮರು ರೂಪಿಸುತ್ತಾರೆ. ಕೇವಲ ಅಸ್ತಿಪಂಜರವಾಗಿದ್ದ ಈ ಶಬ್ದಕೋಶವನ್ನು ಸರ್ವಾಂಗ ಸುಂದರ ಕನ್ನಿಕೆಯನ್ನಾಗಿ ರೂಪಿಸಲು ಅನಾಜಿಯವರು ಅಪಾರವಾಗಿ ಶ್ರಮಿಸಿದ್ದಾರೆ. ಹಾಗಾಗಿ ಕೃಷ್ಣಮೂರ್ತಿಯವರು ಸಂಪಾದಕರು ಎಂದು ಇಬ್ಬರ ಹೆಸರನ್ನೂ ಹಾಕೋಣ ಎಂದು ಸೂಚಿಸಿದರಂತೆ. ಆದರೂ ಮೂಲ ಲೇಖಕರಿಗೆ, ಪದಸಂಗ್ರಹಕಾರರಿಗೆ ಸರಿಯಾದ ಬೆಲೆಯನ್ನು ನೀಡಬೇಕೆಂದು ಬುಕ್ಕಾಂಬುಧಿ ಕೃಷ್ಣಮೂರ್ತಿಯವರ ಹೆಸರಿಗೆ ಸಂಪಾದಕರು ಎಂದು ಸೇರಿಸಿ ತಮ್ಮ ಹೆಸರಿಗೆ ಸಹ ಸಂಪಾದಕರು ಎಂದು ಉಲ್ಲೇಖಿಸುವ ಮೂಲಕ ತಮ್ಮ ಕರ್ತೃತ್ವ ಶಕ್ತಿ ಹಾಗೂ ಸೌಜನ್ಯವನ್ನು ಮೆರೆದಿದ್ದಾರೆ.

ಒಟ್ಟಿನಲ್ಲಿ ಬುಕ್ಕಾಂಬುಧಿ ಕೃಷ್ಣಮೂರ್ತಿ ಹಾಗೂ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಂದ ಕನ್ನಡಕ್ಕೆ ಲಭ್ಯವಾಗಿರುವ **ಬುಕ್ಕಾಂಬುಧಿ ಪ್ರಾದೇಶಿಕ ನಿಘಂಟನ್ನು** ಅದರ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವುದು ನಮಗೆ ಮುಖ್ಯವಾಗುತ್ತದೆ.

ನಿಘಂಟುಗಳ ಪ್ರವೇಶ

ಕನ್ನಡದಲ್ಲಿ ಪ್ರಾದೇಶಿಕ ನಿಘಂಟುಗಳ ಕೊರತೆ ದೊಡ್ಡದಾಗಿ ಕಾಣುತ್ತದೆ. ನಿಘಂಟು ಶಾಸ್ತ್ರದಲ್ಲಿ ಅಪಾರವಾದ ಸಾಧನೆಯನ್ನು ಪ್ರಾಚೀನ ಕಾಲಘಟ್ಟದಿಂದ ಮಾಡಿಕೊಂಡು ಬಂದಿರುವ ಕನ್ನಡ ವಾಙ್ಮಯವು ಹತ್ತು ಹಲವು ರೀತಿಯಲ್ಲಿ ತನ್ನ ಬಾಹುಗಳನ್ನು ವಿಸ್ತರಿಸಿಕೊಂಡು ಬಂದಿದೆ. ದ್ವಿಭಾಷಾ ನಿಘಂಟುಗಳು, ಬಹುಭಾಷಾ ನಿಘಂಟುಗಳು, ಪ್ರತ್ಯೇಕವಾಗಿ ಕವಿಯನ್ನೇ ಕುರಿತಾದ ಕೋಶಗಳು, ಪ್ರಕೋಶಗಳು, ಪಾರಿಭಾಷಿಕ ಪದಕೋಶಗಳು, ಸಾಂಸ್ಕೃತಿಕ ಪದಕೋಶಗಳು, ಧಾರ್ಮಿಕ ಹಾಗೂ ಪೌರಾಣಿಕ ಪದಕೋಶಗಳು, ಸಂಖ್ಯಾ ನಿಘಂಟುಗಳು, ಜಾನಪದ ಕೋಶಗಳು, ನಿಘಂಟುಗಳು, ವೃತ್ತಿಪದಕೋಶಗಳು, ಹೀಗೆ ನಾನಾ ವಿಧವಾದ ಕೋಶಗಳು ಕನ್ನಡದ ಅಸ್ಮಿತೆಯನ್ನು ವಿಸ್ತರಿಸಿದೆ.

ಜಾನಪದ ಕೋಶಗಳು, ವೃತ್ತಿಪದಕೋಶಗಳು, ಸಾಂಸ್ಕೃತಿಕ ಪದಕೋಶಗಳು ಹಾಗೂ ಪ್ರಾದೇಶಿಕ ಪದಕೋಶಗಳು ಒಂದು ಜೀವನ ವಿಧಾನವನ್ನು ಹಾಗೂ ಪ್ರಾದೇಶಿಕ ಶ್ರೀಮಂತಿಕೆಯನ್ನು ನಮಗೆ ಕಟ್ಟಿಕೊಡುತ್ತದೆ. ಜನ ಬದುಕುವ ಮಾದರಿಗಳನ್ನು ಇದು ಕಾಲಕಾಲಕ್ಕೆ ಮುಂದುವರೆಸುವ ಮೂಲಕ ಸಂಸ್ಕೃತಿಯ ಪ್ರವಾಹವನ್ನು ಮುಂದಿನ ತಲೆಮಾರುಗಳಿಗೆ ಪ್ರವಹಿಸುತ್ತದೆ. ಇದು ನಿರಂತರವಾಗಿ ಕಾಲದಿಂದ ಕಾಲಕ್ಕೆ ತನ್ನ ಅರ್ಥ ವ್ಯಾಪ್ತಿಯನ್ನು ಕುಗ್ಗಿಸಿಕೊಳ್ಳುವ ಸಂಭವ ಹೆಚ್ಚಾಗಿರುತ್ತದೆ. ಹಾಗಾಗಿ ಅದನ್ನು ಎಷ್ಟು ಸಾಧ್ಯವೋ ಅಷ್ಟು ಮೊದಲು ಅದನ್ನು ದಾಖಲಿಸಬೇಕಾದ ಅವಶ್ಯಕತೆ ಇರುತ್ತದೆ.

ಇಲ್ಲದೇ ಹೋದರೆ ಪದಗಳು ಭ್ರಷ್ಟಗೊಂಡು ರೂಪಾಂತರಗೊಂಡು ಅದರ ನಿಖರವಾದ ಪದ ನಿಷ್ಪತ್ತಿಯೂ ದೊರಕದಂತೆ ಪಲ್ಲಟಗೊಳ್ಳುವ ಸಂಭವವೂ ಇರುತ್ತದೆ.

ಪದಗಳನ್ನು ನಿಘಂಟುಗಳ ಆಧಾರದ ಮೇಲೆ ಹುಡುಕಿ ನೋಡಿ ತಿಳಿದುಕೊಳ್ಳುವುದಕ್ಕಿಂತ ಜನಬಳಕೆಯಿಂದಲೇ ಹೆಕ್ಕಿ ತೆಗೆಯುವುದು ಅಧಿಕೃತತೆಯನ್ನು ಹೆಚ್ಚಿಸುತ್ತದೆ. ಜನ ಬಳಕೆಯ ನುಡಿಗಳಿಗೆ ಜೀವಂತಿಕೆ ಇರುತ್ತದೆ. ಹಾಗೂ ಅರ್ಥ ವಿಸ್ತರಣದ ಸಾಧ್ಯತೆಗಳೂ ಹೆಚ್ಚಾಗಿರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಈ **ಬುಕ್ಕಾಂಬುಧಿ ಪ್ರಾದೇಶಿಕ ಪದಕೋಶ**ದ ಪ್ರಾಮುಖ್ಯತೆ ನಮಗೆ ಎದ್ದು ಕಾಣುತ್ತದೆ.

ಪ್ರಾದೇಶಿಕ ಪದಕೋಶಗಳ ಇತಿಹಾಸವನ್ನು ತಿಳಿಯುವುದಾದರೆ, ಮೊದಲಿಗೆ ಕೆಲವು ವೃತ್ತಿಪದಕೋಶಗಳನ್ನು ಗಮನಿಸೋಣ. ಇದರಿಂದ ಪ್ರತಿಯೊಂದು ವೃತ್ತಿಯೂ ತನ್ನ ವೃತ್ತಿಯ ಸಂದರ್ಭದಲ್ಲಿ ಬಳಸುವ ಪದಾರ್ಥಗಳಿಂದ ಹಿಡಿದು ಅದನ್ನು ಮಾರುಕಟ್ಟೆಗೆ ಮುಟ್ಟಿಸುವವರೆಗೆ ಉಪಯೋಗಿಸುವ ಶಬ್ದಸಂಪತ್ತನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರದೇಶದಿಂದ ಪ್ರದೇಶಕ್ಕೆ ಇದು ವಿಭಿನ್ನವಾಗಿರುವಂತೆ ವೃತ್ತಿಯಿಂದ ವೃತ್ತಿಗೆ ವಿಭಿನ್ನತೆಯಿರುತ್ತದೆ. ಇವೆಲ್ಲವೂ ಜಾನಪದದ ಉಪ ಉತ್ಪನ್ನಗಳಾಗಿರುವಂತೆಯೇ ವಿಶಿಷ್ಟ ಪದಕೋಶಗಳಿಗೆ ಕಾರಣವಾಗುತ್ತದೆ. ಕನ್ನಡದಲ್ಲಿ ಒಂದು ಶತಮಾನಕ್ಕೆ ಮುನ್ನ ಈ ಪದಕೋಶಗಳನ್ನು ಸಂಪಾದಿಸಿದ್ದರೆ ಇದರ ವ್ಯಾಪಕತೆ ಇನ್ನೂ ಹೆಚ್ಚಾಗಿರುತ್ತಿತ್ತು. ಆದರೂ ಕೆಲವು ಪ್ರಯೋಗಗಳು ಕನ್ನಡದಲ್ಲಿ ನಡೆದಿವೆ. ೨೦೦ ೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಬಸವರಾಜ ಕುಂಚನೂರು ಅವರು ಹೊರತಂದ '**ಕುಂಬಾರಿಕೆ ವೃತ್ತಿ ಪದಕೋಶ**' ಎಸ್.ಎಸ್. ಅಂಗಡಿಯವರ '**ಕುಂಬಾರಿಕೆ ವೃತ್ತಿ ಪದಕೋಶ**', ಸಾಂಬಮೂರ್ತಿ ಅವರ '**ನೇಕಾರ ವೃತ್ತಿ ಪದಕೋಶ**', ಡಿ. ಪಾಂಡುರಂಗ ಬಾಬು ಅವರ '**ಪಾಂಚಾಳ ವೃತ್ತಿಪದಕೋಶ**', ಅಶೋಕ ಕುಮಾರ ರೆಂಜೇರ ಅವರ '**ವಿವಿಧ ವೃತ್ತಿ ಪದಕೋಶ**', ಎಸ್. ಎಸ್. ಅಂಗಡಿ ಅವರ '**ಸಂಕೀರ್ಣ ವೃತ್ತಿ ಪದಕೋಶ**'ಗಳು ಇಂತಹ ಪ್ರಾದೇಶಿಕತೆಯನ್ನು ಎತ್ತಿಹಿಡಿದ ಕೆಲವು ಪದಕೋಶಗಳಾಗಿವೆ.

ಸಾಂಸ್ಕೃತಿಕ ಪದಕೋಶಗಳೂ ಕೂಡ ಹೀಗೆ ಪ್ರಾದೇಶಿಕವಾದ ಕೋಶಗಳೇ ಆಗಿದ್ದರೂ ಅದು ನಿಗಧಿತವಾದ ಉದ್ದೇಶವನ್ನು ಮಾತ್ರ ಹೊಂದಿರುತ್ತದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮೂಲಕ ೨೦೦೦ದಲ್ಲಿ ಮಂಜುನಾಥ ಬೇವಿನಕಟ್ಟೆಯವರು '**ಮೈಲಾರಲಿಂಗ**' ಸಾಂಸ್ಕೃತಿಕ ಪದಕೋಶವನ್ನು ಹಾಗೂ ವೆಂಕಟೇಶ ಇಂದ್ವಾಡಿಯವರು '**ನೀಲಗಾರರು**' ಪದಕೋಶವನ್ನು ತಂದಿದ್ದಾರೆ. ೨೦೦೧ರಲ್ಲಿ ಸ.ಚಿ.ರಮೇಶ ಅವರು '**ಬೇಟೆ–ಸಾಂಸ್ಕೃತಿಕ ಪದಕೋಶ**'ವನ್ನು ಹೊರತಂದಿದ್ದಾರೆ.

ಹಾಗೆ ನೋಡಿದರೆ, ಕನ್ನಡದಲ್ಲಿರುವ ಪ್ರಾದೇಶಿಕ ನಿಘಂಟುಗಳಿಗೆ ಅತೀ ಹೆಚ್ಚಿನ ಕೊಡುಗೆಯನ್ನು ನೀಡಿರುವವರು ಹವ್ಯಕರು. ಇವರಂತೆ ಕೊಡವರು ಮತ್ತು ಕುಂದಗನ್ನಡಿಗರು. ಇವರನ್ನು ಹೊರತುಪಡಿಸಿದರೆ ಹೊರಗಿನವರ ಪದಕೋಶಗಳು ತುಂಬಾ ಕಡಿಮೆ. ಟಿ. ಕೇಶವಭಟ್ಟರ **ಹವ್ಯಕ ಪದ ಸಂಚಯ**, ಎಂ.ಮರಿಯಪ್ಪ ಭಟ್ಟರು ಶಾರದಾ ಜಯ ಗೋವಿಂದ ಅವರೊಡನೆ ಕೂಡಿ ತಯಾರಿಸಿದ **ಹವ್ಯಕ ಇಂಗ್ಲಿಷ್ ನಿಘಂಟು**, ಬೆಂಗಳೂರಿನ ಅಖಿಲ ಹವ್ಯಕ ಮಹಾಸಭೆಯ ಹವ್ಯಕ ಅಧ್ಯಯನ ಕೇಂದ್ರವು ೨೦೦೫ರಲ್ಲಿ ಹೊರತಂದ '**ನುಡಿ ಸಂಸ್ಕೃತಿ' ಎಂಬ ಹವ್ಯಕ ಪಡೆನುಡಿ ಕೋಶ** ವಿಶೇಷವಾದದ್ದು. ಕನ್ನಡದ ಯಾವ ಪ್ರಾದೇಶಿಕ ಉಪಭಾಷೆಯಲ್ಲಿಯೂ ಇಂತಹ ಪಡೆನುಡಿ ಕೋಶ ಬಂದಿಲ್ಲ ಅಷ್ಟು ಸೊಗಸಾಗಿದೆ ಈ ನಿಘಂಟು.

ಇನ್ನು ಐ.ಮಾ.ಮುತ್ತಣ್ಣ ಅವರು ಸಿದ್ಧಪಡಿಸಿರುವ **ಕೊಡವ-ಕನ್ನಡ ನಿಘಂಟು** ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ೧೯೮೩ ರಲ್ಲಿ ಹೊರಬಂದಿತು. ಕನ್ನಡ ನಾಡಿನ ಅತ್ಯಂತ ಮುಖ್ಯವಾದ ಉಪಪ್ರಭೇದದ ಭಾಷೆಗಳಲ್ಲಿ ಕೊಡವ ನುಡಿಗೆ ವಿಶೇಷವಾದ ಬೆಲೆಯಿದೆ. ಹಾಗಾಗಿ ಈ ನಿಘಂಟು ಅತ್ಯುತ್ತಮವಾದ ನಿಘಂಟಾಗಿದೆ. ಇದನ್ನೇ ವಿಸ್ತರಿಸಿ ಮುತ್ತಣ್ಣನವರು ೧೯೮೮ರಲ್ಲಿ ಬೆಂಗಳೂರಿನ ಕೊಡವ ಸಮಾಜದ ವತಿಯಿಂದ **ಕೊಡವ ನುಡಿ ಅರ್ಥಕೋಶ ಮತ್ತು ಸಂಸ್ಕೃತಿ ಅಧ್ಯಯನ**ದಂತಹ ಅಪರೂಪದ ಕೃತಿಯನ್ನು ಹೊರತಂದರು. ಇವುಗಳು ಅತ್ಯುತ್ತಮವಾದ ಪ್ರಾದೇಶಿಕ ಕೋಶಗಳಾಗಿವೆ.

ಹವ್ಯಕರು ಹಾಗೂ ಕೊಡವರ ಜೊತೆಗೆ ಪೈಪೋಟಿ ಬಿದ್ದಂತೆ ಪದಕೋಶವನ್ನು ನಿರ್ಮಿಸಿದವರು ಕುಂದಗನ್ನಡದವರು. ಉಡುಪಿ ಜಿಲ್ಲೆಯ ಕೋಟೇಶ್ವರದ ಎನ್.ಆರ್.ಎ.ಎಮ್.ಹೆಚ್. ಪ್ರಕಾಶನದಿಂದ ೨೦೦೦ ರಲ್ಲಿ ಕುಂಭಾಸಿ ವಿಶ್ವಂಬರ ಉಪಾಧ್ಯಾಯರು **ಕುಂದಗನ್ನಡ ಶಬ್ದನಿಧಿ** ಶಬ್ದಕೋಶವನ್ನು ಹೊರತಂದರು. ಮಂಗಳೂರಿನ ಕಂಕ್ಯಡಿಯ ಪಾರಂಪಳ್ಳಿ ಪ್ರಕಾಶನದಿಂದ ಪಾ.ನ. ಮಯ್ಯರವರ **ಕ್ವಾಟ(ಕೋಟೆ)- ಕುಂದಾಪುರ ಪ್ರದೇಶದ ಚಾಟೂಕ್ತಿಗಳು, ಚಾಟೂಕ್ತಿ ನಿಘಂಟು** ಪುಸ್ತಕವನ್ನು ಹೊರತಂದರು. ಈ ಎರಡೂ ಕೋಶಗಳು ಉಡುಪಿ ಜಿಲ್ಲೆಯ ಕೋಟ ಮತ್ತು ಅದಕ್ಕೆ ಹತ್ತಿರವಾಗಿರುವ ಕುಂದಾಪುರದ ಭಾಗದಲ್ಲಿ ಬಳಕೆಯಲ್ಲಿರುವ ಸ್ಥಳೀಯ ಉಪಭಾಷೆಯ ಪ್ರಭೇದವಾದ ಕುಂದಗನ್ನಡ ಭಾಷೆಯ ಸಮರ್ಥ ದಾಖಲೀಕರಣವಾಗಿದೆ. ಶಿವರಾಮ ಕಾರಂತರ ಕಾದಂಬರಿಗಳನ್ನು ಓದಿದವರಿಗೆ ಕೋಟ ಕನ್ನಡದ ಪರಿಚಯ ಇದ್ದೇ ಇರುತ್ತದೆ. ಆ ವಿಶಿಷ್ಟ ಪದಗಳಿಗೆ ಅರ್ಥವನ್ನು ಹೇಳುವ ಮೂಲಕ ಕನ್ನಡ ನಿಘಂಟು ಪರಂಪರೆಗೆ ಒಂದು ನಿಘಂಟು ಅಪೂರ್ವ ಕೊಡುಗೆಯನ್ನು ನೀಡಿದರೆ ಇನ್ನೊಂದು ನಿಘಂಟು ಕುಂದಾಪುರದ ವಿಶಿಷ್ಟ ಕುಂದಗನ್ನಡವನ್ನು ಪರಿಚಯಿಸುತ್ತದೆ.

ಈ ಹವ್ಯಕ, ಕೊಡವ ಹಾಗೂ ಕುಂದಗನ್ನಡ ನುಡಿಗಳು ಪ್ರಾದೇಶಿಕ ಭಾಷೆಗಳಾಗಿರುವಂತೆ ಉಪಭಾಷೆಗಳೂ ಕೂಡ ಆಗಿರುವುದು ವಿಶೇಷವಾದ ಸಂಗತಿಯಾಗಿದೆ. ಹಾಗಾಗಿ ಇದನ್ನು ನಾವಿಲ್ಲಿ ಪರಿಗಣಿಸದೇ ಕೂಡ ಹೋಗಬಹುದು. ಆದರೆ ಆ ಪ್ರಾದೇಶಿಕ ಭಾಷೆಗಳನ್ನು ವಿಶಿಷ್ಟವಾಗಿ ಅರ್ಥ ಮಾಡಿಕೊಳ್ಳಲು ಈ ನಿಘಂಟುಗಳು ಹೆಚ್ಚು ಸಹಕಾರಿಯಾಗುತ್ತದೆ.

ಇದರ ಜೊತೆಗೆ ಉಲ್ಲೇಖಿಸಲೇಬೇಕಾದ ಇನ್ನೊಂದು ನಿಘಂಟು **ಮಲೆನಾಡಿನ ಸಾಂಸ್ಕೃತಿಕ ಪದಕೋಶ.** ಮಲೆನಾಡಿನ ಜಾನಪದದ ಬಗ್ಗೆ ವಿಶೇಷವಾಗಿ ಅಧ್ಯಯನ ಮಾಡಿರುವ ಅಂಬಳಿಕೆ ಹಿರಿಯಣ್ಣನವರು ಸಿದ್ಧಪಡಿಸಿರುವ ಈ ಕೋಶವು ಲಿಖಿತ ಹಾಗೂ ವಿಸ್ತೃತ ಕ್ಷೇತ್ರಕಾರ್ಯದ ಆಧಾರದಲ್ಲಿ ಒಂದು ನಿರ್ದಿಷ್ಟ ಪ್ರದೇಶದ ಪದಗಳಿಗಾಗಿ ರೂಪುಗೊಂಡ ವಿಶಿಷ್ಟವಾದ ಪದಕೋಶವಾಗಿದೆ. ಮಲೆನಾಡಿಗೇ ವಿಶಿಷ್ಟವಾದ ಸಾಂಸ್ಕೃತಿಕ ಪದಾವಳಿಗಳನ್ನು ಇಲ್ಲಿ ಕಲೆಹಾಕಲಾಗಿದೆ. ೨೦೧೪ ರಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಹೊರತಂದಿರುವ ವೇಣಾಕ್ಷಿ ಎಸ್.ಡಿ. ಸಂಪಾದನೆಯ **ಮಲೆನಾಡ ನುಡಿಕೋಶ**ವು ಮಲೆನಾಡು ಪ್ರಾಂತ್ಯದಲ್ಲಿ ಬಳಕೆಯಲ್ಲಿರುವ ಪದಗಳನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ಸುಲಭ ಕನ್ನಡದಲ್ಲಿ ಅರ್ಥ ಹೇಳಿರುವ ನಿಘಂಟಾಗಿದೆ.

ಇದನ್ನು ಹೊರತುಪಡಿಸಿದರೆ ನಮಗೆ ಎರಡು ನಿಘಂಟುಗಳು ಪ್ರಾದೇಶಿಕ ನಿಘಂಟುಗಳಿಗೆ ಉತ್ತಮ ಉದಾಹರಣೆಯಾಗಿದೆ. ೧೯೮೪ರಲ್ಲಿ ಕೆ.ಹೆಚ್. ಸೂರ್ಯನಾರಾಯಣ ಹಂದೆಯವರು ರೂಪಿಸಿದ 'ಬಂಧಣಗಾಣದ ಶಬ್ದ ಸಂಪತ್ತು' ವಿಶೇಷವಾದದ್ದು. ಕೂಟಮತಸ್ಥ ಬ್ರಾಹ್ಮಣರ ಜಗತ್ತಿನ ಶಬ್ದಗಳನ್ನು ಈ ಕೋಶವು ಕಟ್ಟಿಕೊಡುತ್ತದೆ. ಕನ್ನಡದ ಆಡುನುಡಿಯಲ್ಲಿ ಬಳಕೆಯಿದ್ದು ಅದುವರೆಗೆ

ಗ್ರಂಥಸ್ಥವಾಗದ ಪದಗಳನ್ನು ಪರಿಚಯಿಸಿದ ಕೀರ್ತಿ ಈ ಕೃತಿಗಿದೆ. ಜೊತೆಗೆ ಉಡುಪಿಯ ಎಂ.ಜಿ.ಎಂ. ಕಾಲೇಜಿನ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದ ವತಿಯಿಂದ ೧೯೯೭ ರಲ್ಲಿ ಮುದೇನೂರು ಸಂಗಣ್ಣನವರು ಹೊರತಂದ ಚಿಗಟೇರಿ ಪದಕೋಶ ಪ್ರಾದೇಶಿಕ ಪದಕೋಶಗಳಲ್ಲಿಯೇ ಅನುಪಮವಾದುದು. ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿಯಲ್ಲಿ ಬಳಸುವ ವಿಶಿಷ್ಟವಾದ ಪದಗಳು ಈ ಕೋಶದಲ್ಲಿ ಸ್ಥಾನವನ್ನು ಪಡೆದುಕೊಂಡಿವೆ. ಸುಮಾರು ೯೦೦೦ ಪದಗಳನ್ನು ಈ ಪ್ರದೇಶದಲ್ಲಿ ಹೆಕ್ಕಿ ತೆಗೆದ ನಿಘಂಟಿದು.

ಬುಕ್ಕಾಂಬುಧಿ ಪ್ರಾದೇಶಿಕ ಪದಕೋಶ

ಆದರೆ ಈ ಮೇಲೆ ಹೇಳಿದ ಯಾವ ನಿಘಂಟೂ ಕೂಡ ವಿವರಣಾತ್ಮಕವಾದ ಸಚಿತ್ರ ಸೋದಾಹರಣವಾದ ಸಾಮಾಜಿಕ ವಿವರಣೆಗಳನ್ನು ಹೊಂದಿಲ್ಲ. ಈ ಕೋಶವು ಆ ಎಲ್ಲಾ ಗುಣಲಕ್ಷಣಗಳನ್ನು ಒಳಗೊಂಡಿರುವುದರಿಂದ ಈ ಪದಕೋಶಕ್ಕೆ ವಿಶಿಷ್ಟವಾದ ಬೆಲೆಯಿದೆ. ಈ ಕೃತಿಯನ್ನು ಕುರಿತು ಅನಾಜಿಯವರು ಹೇಳಿರುವ ಈ ಕೆಳಗಿನ ಮಾತುಗಳು ಈ ಕೃತಿಗೆ ಸೂತ್ರರೂಪವಾಗಿವೆ.

"ಕನ್ನಡದಲ್ಲಿ ಹತ್ತಾರು ಬಗೆ ಬಗೆಯ ಪದಕೋಶಗಳಿವೆ ನಿಜ. ಆದರೆ ಸಚಿತ್ರ ಸೋದಾಹರಣೆಯ ಪ್ರಾದೇಶಿಕ ಸಾಮಾಜಿಕ ಪದಕೋಶಗಳಿಲ್ಲ. ಚಿಗಟೇರಿ ಶಬ್ದಕೋಶವೊಂದು ನನ್ನ ಗಮನಕ್ಕೆ ಬಂದಿದೆ. ಇನ್ನು ಜಾನಪದಕೋಶಗಳು ಕೆಲವು ಪ್ರಕಟವಾಗಿವೆ. ಅವುಗಳು ನಿರ್ದಿಷ್ಟ ಪ್ರದೇಶದ ಆಚಾರವಿಚಾರಗಳನ್ನು ತಿಳಿಸಲು ಸೀಮಿತವಾಗಿಲ್ಲ. ಇನ್ನು ಕನ್ನಡ ಪದಕೋಶಗಳಲ್ಲಿ ಸಾಂದರ್ಭಿಕವಾಗಿ ಆಡುಮಾತುಗಳು, ಗ್ರಾಮ್ಯಪ್ರಯೋಗಗಳು, ರೂಢಿಯ ನುಡಿಗಳು, ನುಡಿಗಟ್ಟುಗಳು, ಗಾದೆಗಳು ಉದಾಹರಣೆಯಾಗಿ ಬಂದಿವೆ. ಆದರೆ ಸಮಗ್ರವಾಗಿ, ಪ್ರತ್ಯೇಕವಾಗಿ ಬಂದಿಲ್ಲ. ಅದು ಆ ಪದಕೋಶಗಳ ಉದ್ದೇಶವೂ ಅಲ್ಲ.

ಒಂದು ಪ್ರದೇಶದ ಜನರ ಆಡುಭಾಷೆಯ ಪದಗಳನ್ನೂ, ಆ ಮೂಲಕ ಅಲ್ಲಿಯ ಜನರ ಆಚಾರ, ವಿಚಾರ, ಸಂಪ್ರದಾಯ ನುಡಿಗಟ್ಟುಗಳನ್ನೂ ವಿಶೇಷವಾಗಿ ಮಧ್ಯಮವರ್ಗದವರ (ಬ್ರಾಹ್ಮಣವರ್ಗದವರ) ನಡೆನುಡಿಗಳನ್ನು ತಿಳಿಸುವ ಪ್ರಯತ್ನದ ಸಚಿತ್ರ – ಸೋದಾಹರಣ ಪದವಿವರಣೆಗಳ ಸಾಮಾಜಿಕ ಪದಕೋಶ ಎಂದರೆ ನನಗೆ ತಿಳಿದಮಟ್ಟಿಗೆ ಕನ್ನಡ–ಇಂಗ್ಲೀಷ್‌ನಲ್ಲಿ ಇದೇ ಮೊದಲನೆಯದು ಎಂದು ಹೇಳಿದರೆ ತಪ್ಪಾಗದು.

ಈ ಪದಕೋಶವನ್ನು ಅಕಾರಾದಿಯಾಗಿ ರಚಿಸಿದೆ. ಪರಿಷತ್ತಿನ ನಿಘಂಟಿನ ಅಕಾರಾದಿಕ್ರಮವನ್ನು ಇಲ್ಲಿ ಅನುಸರಿಸಿದೆ. ಏಕೆಂದರೆ ಕನ್ನಡದ ನಿಘಂಟುಗಳಲ್ಲಿ ಹಲವುರೀತಿಯ ಅಕಾರಾದಿಕ್ರಮಗಳನ್ನು ಅನುಸರಿಸಲಾಗಿದೆ. ಉದಾಹರಣೆಗೆ ಅನುಸ್ವಾರ ವಿಸರ್ಗದ ಪದಗಳನ್ನು ಇಲ್ಲಿ ಮೊದಲಿಗೆ ಕೊಟ್ಟರೆ ಕೆಲವು ಕನ್ನಡ ನಿಘಂಟುಗಳಲ್ಲಿ ಸ್ವರಪದಗಳ ಆಕಾರದ ಕೊನೆಯಲ್ಲಿ ಕೊಡಲಾಗಿದೆ.

ಅನುನಾಸಿಕ ವರ್ಣಗಳನ್ನೊಳಗೊಂಡ ಪದರೂಪಗಳು ಕೆಲವು ನಿಘಂಟುಗಳಲ್ಲಿದ್ದರೆ (ನಿಬನ್ಧ, ಕಂನಡ ಇತ್ಯಾದಿ) ಸೊನ್ನೆಬಳಕೆ ಅನೇಕ ನಿಘಂಟುಗಳಲ್ಲಿವೆ. ಈ ಬಗ್ಗೆ ಹೆಚ್ಚಿನ ವಿಚಾರ ಪ್ರಸ್ತಾಪ ಇಲ್ಲಿ ಅನಗತ್ಯ. ಒಟ್ಟಿನಲ್ಲಿ ಪರಿಷತ್ತಿನ ನಿಘಂಟಿನ ಕ್ರಮ ಎಲ್ಲರಿಗೂ ಆದರ್ಶಪ್ರಾಯವಾಗಿದೆ ಎಂದಷ್ಟೇ ಹೇಳಬಹುದು ಮತ್ತು ಶಾಸ್ತ್ರೀಯವಾಗಿದೆ.

ಈ ಪದಕೋಶದಲ್ಲಿ ಬಳಸಿದ ಶಬ್ದಗಳಿಗೆ ಬೇರೆ ಪ್ರದೇಶಗಳಲ್ಲಿ ಬೇರೆ ಶಬ್ದಗಳಿದ್ದರೆ ಅವುಗಳನ್ನು ಸಮಾನಪದಗಳು ಎಂದು ಕೊಟ್ಟಿದೆ. ಉಚ್ಚಾರಣಾ ವ್ಯತ್ಯಾಸದಿಂದ ಪದಗಳನ್ನು ಭಿನ್ನರೂಪಗಳು ಎಂದು

ಸೂಚಿಸಿದೆ. ಪದಗಳಲ್ಲಿ ಎಷ್ಟೋ ಪದಗಳಿಗೆ ಬೇರೆ ಬೇರೆ ಅರ್ಥಗಳು, ಆಚರಣೆಗಳು ಇದ್ದರೂ ಇಲ್ಲಿ ಈ ಪ್ರದೇಶದಲ್ಲಿರುವ ಆಚರಣೆ, ಅರ್ಥಗಳನ್ನು ಮಾತ್ರ ಕೊಟ್ಟಿದೆ.

ಓದುಗರ ಅನುಕೂಲಕ್ಕಾಗಿ ಪ್ರಾರಂಭದಲ್ಲಿ ಅಕಾರಾದಿಪದಪಟ್ಟಿ ಮತ್ತು ಪದಸಂಖ್ಯೆ ಕೊಟ್ಟಿದೆ. ಪದದ ಉಲ್ಲೇಖಕ್ಕೆ ಮತ್ತು ಪದ ಗುರುತಿಸಲು ಈ ಸಂಖ್ಯೆ ನೆರವಾಗುತ್ತದೆ. ಅನೇಕ ವಸ್ತುಗಳು ದಿನಬಳಕೆಯಲ್ಲಿ ಈಗ ಕಣ್ಮರೆಯಾಗಿವೆ: ರಾಗಿಕಲ್ಲು, ಗಾಣ, ನೀರೆತ್ತುವ ಏತ, ಒತ್ತುಸೇವಿಗೆಯಂತ್ರ ಇತ್ಯಾದಿ. ಇಂತಹವನ್ನು ಅರ್ಥಮಾಡಿಕೊಳ್ಳಲು ನೂರಾರು ಚಿತ್ರಗಳನ್ನು ಸೇರಿಸಿ ಈ ಪದಕೋಶವನ್ನು ಸಚಿತ್ರಗೊಳಿಸಲಾಗಿದೆ.

ಪ್ರತಿಪದಕ್ಕೂ ಉದಾಹರಣೆ ವಾಕ್ಯಗಳನ್ನು ಕೊಡುವುದರ ಮೂಲಕ ಅರ್ಥವನ್ನು ಅಧಿಕೃತ-ಗೊಳಿಸಲಾಗಿದೆ. ಅನೇಕ ಆಚರಣೆಗಳ ವಿವರಣೆಗಳಲ್ಲಿ ಅನೇಕರಿಗೆ ಭೇದ ಕಾಣಬಹುದು. ಭಿನ್ನ ಆಚರಣೆ ಕಾಣಬಹುದು. ಉದಾಹರಣೆಗೆ ಮದುವೆಯ ಶಾಸ್ತ್ರದ ಆಚರಣೆಗಳು ಬುಕ್ಕಾಂಬುಧಿಯಲ್ಲಿಯೇ ಬೇರೆ. ಬೇರೆ ಮತಸ್ಥರಲ್ಲಿ, ಕುಲದವರಲ್ಲಿ ಬೇರೆಬೇರೆ ರೀತಿ ಇದೆ. ಇಲ್ಲಿ ವಿಶೇಷವಾಗಿ ಮಧ್ಯಮವರ್ಗದ ಬ್ರಾಹ್ಮಣರಲ್ಲಿ ಕಂಡುಬರುವ ಆಚರಣೆಗಳನ್ನು ಅನುಭವದ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಸ್ಥಳೀಯ ಆಚರಣೆಗಳ ಕೋಶ ಇದಾಗಿದೆ. ಇತರ ಪ್ರದೇಶಗಳ ಆಚಾರ ವಿಚಾರಗಳ ಅಧ್ಯಯನ ಮಾಡುವ ಸಾಮಾಜಿಕ ಶಾಸ್ತ್ರದ ಅಧ್ಯಯನಕಾರರಿಗೆ ಈ ವಿವರಗಳು ಉಪಯುಕ್ತವಾಗಿವೆ"

ಈ ಕೋಶವು ಅನುಭವದ ಆಧಾರದಲ್ಲಿ ರೂಪುಗೊಂಡ ಕೃತಿ. ಇದಕ್ಕೆ ನಿಜವಾದ ಆಕರ ಪದಕಾರರ ನೆನಪಿನ ಶಕ್ತಿ. ಒಂದು ಶತಮಾನವನ್ನು ಕಂಡ ಅಪರೂಪದ ನುಡಿಜಾಣೆಗನ ನೆನಪಿನ ಕೋಶದಿಂದ ಹೆಕ್ಕಿ ತೆಗೆದ ಪದಗಳಿವು. ಈ ಕೋಶವನ್ನು ಅಕಾರಾದಿಯಾಗಿ ಸಿದ್ಧಪಡಿಸಿರುವುದರಿಂದ ಇದನ್ನು ಸುಲಭವಾಗಿ ಬಳಸಬಹುದು. ಈ ಕೋಶದ ವಿಶೇಷತೆಯೆಂದರೆ ಇದು ದ್ವಿಭಾಷಿಕ ನಿಘಂಟಾಗಿದೆ. ಕೇವಲ ಕನ್ನಡಿಗರು ಮಾತ್ರ ಓದಿ ಸುಖಿಸಬಹುದಾದ ಕೃತಿ ಇದಲ್ಲ. ಬದಲಿಗೆ ವಿಶ್ವದ ಸಾಮಾಜಿಕ ಅಧ್ಯಯನ ಮಾಡುವ ಸಂಶೋಧಕರಿಗೆ ಹಾಗೂ ಶಬ್ದಕೋಶಗಳನ್ನು ಸಿದ್ಧಪಡಿಸುವವರಿಗೆ ಇದೊಂದು ಮಾದರಿ ಗ್ರಂಥವಾಗಿದೆ. ಆದರೆ ಅದನ್ನು ಮುಖಪುಟದಲ್ಲಿ ಸ್ಪಷ್ಟವಾಗಿ ತೋರಿಸಿಲ್ಲ. ಅದನ್ನು ಪರಿಷ್ಕರಿಸಿಕೊಂಡರೆ ವಿಶ್ವದ ಆಸಕ್ತರಿಗೆ ಕೃತಿಯನ್ನು ತಲುಪಿಸಬಹುದು. ಮೊದಲಿಗೆ ಲಿಪ್ಯಂತರ ಪಟ್ಟಿಯನ್ನು ನೀಡಲಾಗಿದೆ. ಇದರಿಂದ ಕೃತಿಯನ್ನು ಓದುವವರು ನಿಖರವಾದ ಉಚ್ಚಾರವನ್ನು ಗಮನಿಸಬಹುದು. ನಂತರ ಈ ಪದಕೋಶದಲ್ಲಿ ಉಪಯೋಗಿಸಲಾದ ಅಷ್ಟೂ ಪದಗಳ ಅಕಾರಾದಿ ಪಟ್ಟಿಯನ್ನು ಒದಗಿಸಿದ್ದಾರೆ. ಇದರಿಂದ ೧೧೦೬ ಪದಗಳನ್ನು ಈ ಕೋಶವು ವಿವರಿಸುತ್ತದೆ ಎಂದು ಸುಲಭವಾಗಿ ತಿಳಿಯಬಹುದು.

ಇಲ್ಲಿಂದ ನೇರವಾಗಿ ಈ ಪದಕೋಶವು ಅಧಿಕೃತವಾಗಿ ಆರಂಭವಾಗುತ್ತದೆ. ಅಂಕಣ ಎನ್ನುವ ಪದದಿಂದ ಆರಂಭವಾಗಿ ಹೋರಿ ಎನ್ನುವ ಪದಕ್ಕೆ ಈ ಪದಕೋಶವು ಅಂತ್ಯಗೊಳ್ಳುತ್ತದೆ. ಉದಾಹರಣೆಗೆ ಈ ಪದಕೋಶದ ಕೆಲವು ಪದಗಳನ್ನು ಮಾತ್ರ ಇಲ್ಲಿ ಪರಿಚಯಿಸಲಾಗಿದೆ. ಅವುಗಳನ್ನು ತಿಳಿಯುವುದರ ಮೂಲಕ ಈ ನಿಘಂಟು ಎಷ್ಟು ಪರಿಣಾಮಕಾರಿಯಾಗಿ ಮೂಡಿಬಂದಿದೆ ಎಂದು ತಿಳಿದುಕೊಳ್ಳಬಹುದು. (ಇಲ್ಲಿ ಇಂಗ್ಲೀಷಿನ ಭಾಗವನ್ನು ನೀಡಿಲ್ಲ. ಇದು ಬಹುತೇಕ ಇದರ ನಿಖರವಾದ ಅನುವಾದವೇ ಆಗಿದೆ. ಈ ಅನುವಾದವನ್ನು ಸ್ವತಃ ಲೇಖಕರೇ ಮಾಡಿರುವುದರಿಂದ ಅಧಿಕೃತತೆ ಇಲ್ಲಿದೆ.)

೭೭. ಅರವಟ್ಟಿಗೆ: ಬಹಳ ಹಿಂದಿನ ಕಾಲದಲ್ಲಿ, ಊರಿಂದ ಊರಿಗೆ ಹೋಗಲು ಬಸ್ಸಿನ ಸೌಕರ್ಯವಿರಲಿಲ್ಲ. ಕಾಲು ನಡಿಗೆಯಲ್ಲೇ ಪ್ರಯಾಣ ಮಾಡಬೇಕಿತ್ತು. ಅಕ್ಕಪಕ್ಕದ ಹಳ್ಳಿಯವರು ರಸ್ತೆಯ ಪಕ್ಕದಲ್ಲಿ ತೆಂಗಿನ ಸೋಗೆಯಿಂದ ಚಪ್ಪರವನ್ನು ಕಟ್ಟಿ, ದಾರಿಹೋಕರಿಗೆ ನೀರು, ಮಜ್ಜಿಗೆ, ಕಬ್ಬಿನಹಾಲು ಕೊಡುತ್ತಿದ್ದರು. ಅಂತಹ ಚಪ್ಪರಕ್ಕೆ ಅರವಟ್ಟಿಗೆ ಎಂದು ಹೆಸರು.

ಕರ್ನಾಟಕದಲ್ಲಿನ ಹಿರೇಮಗಳೂರಿನಲ್ಲಿ ಪ್ರತಿವರ್ಷವೂ ರಥೋತ್ಸವ ಆಗುತ್ತಿತ್ತು. ಚಿಕ್ಕಮಗಳೂರಿನಿಂದ ಹಿರೇಮಗಳೂರಿಗೆ ಹೋಗುವಾಗ (ಕೇವಲ ಎರಡು ಮೈಲಿ ಪ್ರಯಾಣ) ದಾರಿಯುದ್ದಕ್ಕೂ ಅರವಟ್ಟಿಗೆಗಳನ್ನು ಕಟ್ಟುತ್ತಿದ್ದರು. ಬರುವವರೆಲ್ಲರಿಗೂ ನೀರು ಮಜ್ಜಿಗೆಯನ್ನು ಕೊಟ್ಟರೇ ಅವರ ಮನಸ್ಸಿಗೆ ಸಮಾಧಾನ.

ಸಾಮಾನ್ಯವಾಗಿ ರಥೋತ್ಸವದ ವೇಳೆಯಲ್ಲಿ ಎಲ್ಲ ಊರುಗಳಲ್ಲೂ ಅರವಟ್ಟಿಗೆಗಳನ್ನು ರಥೋತ್ಸವದ ಮಾರ್ಗದಲ್ಲಿ, ದೇವಸ್ಥಾನದ ಫಾಸಲೆಯಲ್ಲಿ ದಾನಿಗಳು, ಭಕ್ತರು ಏರ್ಪಡಿಸುತ್ತಾರೆ. ಬೆಂಗಳೂರಿನ ಕರಗದ ವೇಳೆ ಏರ್ಪಡಿಸುವ ಅರವಟ್ಟಿಗೆಗಳು ರಾತ್ರಿಯಲ್ಲಾ ಪಾನಕ-ಕೋಸುಂಬರಿ ಇತ್ಯಾದಿ ವಿತರಣೆ ಮಾಡುತ್ತವೆ. ಉಳಿದಕಡೆ ಹಗಲಲ್ಲಿ ಅರವಟ್ಟಿಗೆಗಳನ್ನು ಏರ್ಪಡಿಸುತ್ತಾರೆ.

ಉದಾ: ಸಾಹುಕಾರ್ ಶೀನಪ್ಪನವರ ಮನೆತನದವರು ನಮ್ಮೂರಿನ ರಥೋತ್ಸವ ಕಾಲದಲ್ಲಿ ಹತ್ತಾರು ವರ್ಷಗಳಿಂದ ಅರವಟ್ಟಿಗೆ ನಡೆಸುತ್ತಿದ್ದಾರೆ.

೧೫೪. ಎಡೆ ಮಾಡು: ಮನೆಯಲ್ಲಿ ನಡೆಸುವ ಮದುವೆ, ಮುಂಜಿ ಮುಂತಾದ ಶುಭ ಕಾರ್ಯಗಳಿಗೆ ಮುಂಚಿತವಾಗಿ ಇಬ್ಬರು ದಾಸಯ್ಯಗಳನ್ನು ಕರೆದು ಅವರಿಗೆ ಊಟಕ್ಕೆ ಬಡಿಸುವುದನ್ನು ಎಡೆ ಮಾಡುವುದು ಎನ್ನುವ ಪದ ರೂಢಿಯಾಗಿದೆ. ದೇವರಿಗೆ ನೈವೇದ್ಯಕ್ಕಿಡುವುದನ್ನೂ ಎಡೆ ಮಾಡುವುದು ಎಂದೇ ಹೇಳುತ್ತಾರೆ. ಮನೆಗೆ ಯಾರಾದರೂ ಸ್ವಾಮಿಗಳನ್ನು ಆಮಂತ್ರಿಸಿದಾಗ ಅವರಿಗೆ ಎಡೆಮಾಡುತ್ತಾರೆ. ಅಮಾವಾಸ್ಯೆ ಮುಂತಾದ ವಿಶೇಷದಿನಗಳಲ್ಲಿ ಎಡೆ ಇಕ್ಕುವುದು ಕೆಲವು ಮನೆತನಗಳಲ್ಲಿ ಆಚರಿಸಿಕೊಂಡು ಬಂದಿರುವ ಪದ್ಧತಿ. ಆ ದಿನ ಮನೆಯವರೆಲ್ಲರು ಬಹಳ ನೇಮದಿಂದ ನಡೆದುಕೊಳ್ಳುತ್ತಾರೆ.

ಉದಾ: ನಾಳೆ ಅಮಾವಾಸ್ಯೆ ಎಡೆ ಇಕ್ಕಬೇಕು.

ಉದಾ: ನಾಳೆ ಹುಣ್ಣಿಮೆ. ಸೋಮೇಶ್ವರ ದೇವಸ್ಥಾನಕ್ಕೆ ಎಡೆ ಮಾಡಿ ಕಳಿಸ್ಬೇಕು.

೨೫೨. ಕಾರಣೆಸಾರಣೆ: ಕಾರಣೆ ಕುಂಕುಮದ ಹಾಗೆಯೇ ಚಂದ್ರ ಒಂದು ವಿಧವಾದ ಕೆಂಪು ಹಳದಿ ಮಿಶ್ರಿತವಾದ ಬಣ್ಣ. ಚಂದ್ರವನ್ನು ಒಂದು ತೊಟ್ಟು ಹಾಲಿನೊಂದಿಗೆ ಬೆರೆಸಿ, ಗೋಡೆಗೆ ಸುಣ್ಣ ಹಚ್ಚಿದ ನಂತರ, ನೆಲದಿಂದ ಒಂದು ಅಡಿ ಎತ್ತರದಲ್ಲಿ ಉದ್ದಕ್ಕೂ ಆ ಬಣ್ಣವನ್ನು ಗೆರೆಯಾಗಿ ಎಳೆಯುತ್ತಾರೆ. ಅದಕ್ಕೆ ಕಾರಣೆ ಎಂದು ಹೆಸರು. ಹಳ್ಳಿಗಾಡಿನಲ್ಲಿ ಇದು ಸರ್ವೇಸಾಮಾನ್ಯ. ಸಾರಣೆ ಎಂದರೆ ನೆಲಸಾರಿಸುವುದು.

ಉದಾ: ಹಬ್ಬ ಬಂತು, ಮನೆಗೆ ಕಾರಣೆಸಾರಣೆ ಮಾಡಬೇಕು.

೩೧೬. ಕೊಪ್ಪರಿಗೆ: ಕೊಪ್ಪರಿಗೆ ಕಬ್ಬಿಣದಿಂದ ತಯಾರಿಸಿದ. ೧೦-೧೫ ಅಡಿ ಸುತ್ತಳತೆಯುಳ್ಳ, ದೊಡ್ಡ ಬಾಣಲೆ. ಇದರೊಳಕ್ಕೆ ಕಬ್ಬಿನಹಾಲನ್ನು ಹಾಕಿ ಕಾಯಿಸುತ್ತಾರೆ. ಅದರ ಒಲೆ ಮಣ್ಣಿನಿಂದ ಮಾಡಿರುವುದು. ಒಲೆಗೆ ಮರದ ಸೌದೆಗಳನ್ನು ಉಪಯೋಗಿಸುತ್ತಾರೆ. ಸುಮಾರು ೨೦-೩೦ ಕೊಡದಷ್ಟು

ಕಬ್ಬಿನ ಹಾಲನ್ನು ಹಾಕಬೇಕು. ಚೆನ್ನಾಗಿ ಕಾಯಿಸಿದ ನಂತರ, ಹಾಲಿನಲ್ಲಿದ್ದ ನೀರಿನ ಅಂಶವೆಲ್ಲ ಹೋಗಿ, ಬೆಲ್ಲದ ಪಾಕವಾಗುತ್ತೆ. ನಂತರ ಸ್ವಲ್ಪ ಸುಣ್ಣವನ್ನು ಬೆರೆಸುತ್ತಾರೆ. ಒಂದು ಹದಕ್ಕೆ ಬಂದ ನಂತರ ಆ ಪಾಕವನ್ನು ಮರದ ಅಚ್ಚುಗಳಿಗೆ ಹೊಯ್ದು ಆರಿದ ಮೇಲೆ ಬೆಲ್ಲವನ್ನು ಹೊರಕ್ಕೆ ತೆಗೆಯುತ್ತಾರೆ. ಕೆಲವು ಹಳ್ಳಿಗಳಲ್ಲಿ ಅಚ್ಚುಗಳಿಗೆ ಹಾಕದೆ, ಉಂಡೆಯಂತೆ ಬೆಲ್ಲವನ್ನು ಕಟ್ಟುತ್ತಾರೆ. ಅದನ್ನು ಉಂಡೆ ಬೆಲ್ಲ ಎಂದೆ ಕರೆಯುತ್ತಾರೆ. ಸುಣ್ಣದ ಅಂಶ ಸ್ವಲ್ಪ ಹೆಚ್ಚಾದರೆ ಬೆಲ್ಲದ ಬಣ್ಣ ಕಪ್ಪಾಗುತ್ತೆ. ಬಣ್ಣ ಕಪ್ಪಾದರೂ ಬೆಲ್ಲ ಹೆಚ್ಚು ದಿನ ಇಟ್ಟರೂ ಕೆಡುವುದಿಲ್ಲ. ಸುಣ್ಣದ ಅಂಶ ಕಮ್ಮಿಯಾದಾಗ ನೋಡಲು ಬೆಲ್ಲ ಚೆನ್ನಾಗಿರುತ್ತೆ. ಹೆಚ್ಚು ದಿನಗಳಾದ ನಂತರ ಗಟ್ಟಿಯಾಗಿರುವ ಬೆಲ್ಲ ನೀರು ನೀರಾಗಿ ಉಪಯೋಗಕ್ಕೆ ಬರುವುದಿಲ್ಲ. ರಾಗಿರೊಟ್ಟಿಯನ್ನು ಜೋನಿಬೆಲ್ಲದೊಂದಿಗೆ ತಿಂದರೆ ಬಹಳ ರುಚಿ.

ಉದಾ: ನಮ್ಮೂರು ಆಲೆಮನೆಗಳಲ್ಲಿ ತುಂಬಾ ಹಳೆಯದಾದ ಕೊಪ್ಪರಿಗೆಗಳಿವೆ.

ನೋಡಿ: ಜೋನಿಬೆಲ್ಲ, ಅಚ್ಚುಬೆಲ್ಲ, ಕಾಫಿಬೆಲ್ಲ, ಕಡಾಯಿ, ಉಜ್ಜುಬೇಲ

೩೧೭. **ಕೊರಕಲು:** ಹಳ್ಳಿಯ ರಸ್ತೆಗಳಲ್ಲಿ ಊರಿಂದೂರಿಗೆ ಹೋಗುವಾಗ ಕೆಲವು ಕಡೆ ನೀರು ಹರಿದು ರಸ್ತೆ ಕೊರಕಲು ಬಿದ್ದಿರುತ್ತೆ. ಹಳ್ಳವಾಗಿರುತ್ತೆ. ಅಂತಹಕಡೆ ಇಬ್ಬರು ಗಾಡಿಯ ಮೂಕಿಹಿಡಿದು ಹಿಂದಕ್ಕೆ ಎಳೆಯಬೇಕು, ಇನ್ನಿಬ್ಬರು ಹಿಂದಿನಿಂದ ಗಾಡಿಯ ಚಕ್ರವನ್ನು ಮುಂದಕ್ಕೆ ದಬ್ಬಬೇಕು. ಆ ಜಾಗಕ್ಕೆ ಕೊರಕಲು ಎಂದು ಹೇಳುತ್ತಾರೆ.

ಉದಾ: ಹುಷಾರಾಗಿ ಗಾಡಿಬಿಡು. ಮುಂದೆ ಕೊರಕಲಿದೆ.

೩೧೮. **ಕೊರಡು:** ನೋಡಿ: ಮರಹೊಡೆಯುವುದು

೫೬೫. **ದಮಡಿ:** ಹಿಂದಿನ ಕಾಲದಲ್ಲಿ ರುಪಾಯಿ, ಆಣೆ, ಕಾಸುಗಳಿದ್ದ ಕಾಲದಲ್ಲಿ ಚಲಾವಣೆಯಲ್ಲಿದ್ದ ಒಂದು ನಾಣ್ಯವೇ ದಮಡಿ. ದಮಡಿ ಒಂದು ಸಣ್ಣ ನಾಣ್ಯವಾಗಿತ್ತು. ಒಂದು ಗಂಡಾ ಎಂದರೆ ನಾಲ್ಕು ದಮಡಿ, ಒಂದು ದಮಡಿಗೆ ನಾಲ್ಕು ಟೋಲಿ. ಖಂಜರಿಯ ತರಹ ಚಿಕ್ಕ ತಮಟೆಯಂತೆ ಇರುವ ಚರ್ಮದ ವಾದ್ಯಕ್ಕೂ ದಮಡಿ ಎನ್ನುತ್ತಾರೆ. ಭಜನೆಯಾಗುವಾಗ ದಮಡಿಯನ್ನು ಬಳಸುತ್ತಾರೆ.

ಉದಾ: ನೀನು ಇಂಗೇ ಕೆಟ್ಟ ಕೆಲಸ ಮಾಡ್ತಿರು. ಒಂದು ದಮಡಿಯೂ ಕೈಯ್ಯಾಗೆ ಉಳಿಯಾಕಿಲ್ಲ. ನನ್ನ ದಮಡಿ ನಾನು ಖರ್ಚು ಮಾಡೋಕೆ ನಿಂದೇನಲಾ ಹಂಗು (ಗಾದೆ)

ಪದರೂಪ: ದಮ್ಮಡಿ, ದಂಬ್ಳಿ (ದಮಡಿ)

೬೭೩. **ಪಾರೀಖತ್ತು:** ಒಂದು ಮನೆತನದಲ್ಲಿ ಅಣ್ಣ-ತಮ್ಮಂದಿರಿಗೆ ಮನಸ್ತಾಪವಾಗಿ ಬೇರೆ ಬೇರೆಯಾದಾಗ ಹಿರಿಯರು ಮಾಡಿಟ್ಟಿರುವ ಆಸ್ತಿಯನ್ನು ಭಾಗ ಮಾಡಿಕೊಳ್ಳುವುದಕ್ಕೆ ಪಾರೀಖತ್ತು ಎನ್ನುತ್ತಾರೆ. ಹಳ್ಳಿಯ ಮುಖ್ಯಸ್ಥರು, ಶ್ಯಾನುಭೋಗರು ಒಂದು ಕಡೆ ಸೇರಿ ಪತ್ರ ಮುಖೇನ ಆಸ್ತಿಯನ್ನು ಅವರವರ ಹೆಸರಿಗೆ ಬರೆದು ತಿಳಿಯಪಡಿಸುತ್ತಾರೆ.

ಉದಾ: ನಾಳೆ ಶಾನುಭೋಗರು ರಾಮಯ್ಯನೋರ ಆಸ್ತಿನೆಲ್ಲ ಮಕ್ಕಳಿಗೆ ಪಾರೀಖತ್ತು ಮಾಡ್ತಾರೆ.

೯೪೭. **ಸಕ್ಕರೆಗುತ್ತಿ:** ಅಕ್ಕಿ, ರಾಗಿ ಮುಂತಾದ ಧಾನ್ಯಗಳ ಮೂಟೆಯನ್ನು ಬಿಚ್ಚದೆ ಪರೀಕ್ಷೆ ಮಾಡುವುದಕ್ಕೆ ಉಪಯೋಗಿಸುವ ಸಾಧನಕ್ಕೆ ಸಕ್ಕರೆಗುತ್ತಿ ಎನ್ನುತ್ತಾರೆ. ಮರದ ಹಿಡಿಗೆ ಸುಮಾರು ಒಂದು ಅಡಿ. ಉದ್ದದ ಕಬ್ಬಿಣದ ತಗಡನ್ನು ಕೊಳವೆಯಾಕಾರದಲ್ಲಿ ಸೆಕ್ಕಿಸುತ್ತಾರೆ. ಸಕ್ಕರೆಗುತ್ತಿಯನ್ನು ಮೂಟೆಗೆ ಚುಚ್ಚಿ ತಿರುಗಿಸಿ ಎಳೆದರೆ ಒಂದು ಬೊಗಸೆಯಷ್ಟು ಧಾನ್ಯ ಹೊರಕ್ಕೆ ಬರುತ್ತೆ.

ಉದಾ: ಸಕ್ಕರೆ ಗುತ್ತಿಹಾಕಿ ನೋಡಿ ರಾಗಿ ಹೇಗಿದೆ ಹೇಳು ರಾಮಪ್ಪಾ.

೧೦೩೩. **ಹೋರಿ:** ಪ್ರಾಣಿಗಳಲ್ಲಿ ೩ ಜಾತಿಗಳಿವೆ. ಗಂಡು, ಹೆಣ್ಣು. ಎರಡು ಲಿಂಗ ವ್ಯತ್ಯಾಸವಿಲ್ಲದ ಸಂತಾನಕ್ಕೆ ಬಳಸುವ ವಿಶಿಷ್ಟ ಗಂಡನ್ನು ಹೋರಿ, ಕೋಣ ಎನ್ನುತ್ತಾರೆ. ಬುಕ್ಕಾಂಬುಧಿ ಪಕ್ಕದಲ್ಲಿರುವ ಅಜ್ಜಂಪುರದ ಪ್ರಾಣಿಗಳ ಆಸ್ಪತ್ರೆಯಲ್ಲಿ ಹೋರಿಯನ್ನು ಇಟ್ಟಿದ್ದರು. ಕರು ಹಾಕದೇ ಇರುವ ಹಸುವನ್ನು ತೆಗೆದುಕೊಂಡು ಹೋಗಿ ಹೋರಿ ಹಾಯಿಸಿಕೊಂಡು ಬರುತ್ತಿದ್ದರು.

ಉದಾ; ಹಸು, ಎತ್ತು, ಗೂಳಿ, ಹೋರಿ, ಹೆಣ್ಣೆಮ್ಮೆ, ಗಂಡೆಮ್ಮೆ, ಕೋಣ ಎಂಬ ವರ್ಗೀಕರಣ ಕಾಣುತ್ತೇವೆ.

ನೋಡಿ; ಮಣಕ, ಗೂಳಿ

ಒಂದೇ ಪದಕ್ಕೆ ಇಂತಹ ವಿವರಣೆ ವಿಶೇಷವಾದದ್ದು. ಇದರಲ್ಲಿ ಅನೇಕ ವಿವರಣೆಗಳನ್ನು ಸೇರಿಸಿದ್ದಾರೆ. ಕೆಲವು ಸುಲಭವಾಗಿ ಅರ್ಥ ಆಗುವ ಪದಗಳು ಎನಿಸಿದರೂ ಅವುಗಳಲ್ಲಿರುವ ವಿಶೇಷತೆಯನ್ನು ಓದಿಯೇ ಸವಿಯಬೇಕು. ಪ್ರತೀ ಪ್ರಯೋಗಕ್ಕೂ ಪ್ರಯೋಗಗಳ ಉದಾಹರಣೆಗಳನ್ನು ನೀಡಿದ್ದಾರೆ. ಇದು ಗೊಂದಲವಿಲ್ಲದೇ ಅರ್ಥವನ್ನು ಸಂವಹನ ಮಾಡುತ್ತದೆ. ಕೆಲವೆಡೆ ಇದೇ ಪದಗಳಿಗೆ ಇರುವ ಮತ್ತೊಂದು ಪದಗಳಲ್ಲಿ ವಿವರಣೆಗಳನ್ನು ನೀಡಿದ್ದರೆ ಅದನ್ನು ನೋಡುವಂತೆ ಸಲಹೆ ಮಾಡಿರುತ್ತಾರೆ. ಕೆಲವೆಡೆ ಹೆಚ್ಚಿನ ಮಾಹಿತಿಗಳನ್ನು ಸೇರಿಸಬೇಕಾದ ಪಕ್ಷದಲ್ಲಿ ಹಾಗೆಯೂ ಮಾಡಲಾಗಿದೆ. ಕೆಲವೆಡೆ ಅದಕ್ಕಿರುವ ಇನ್ನಿತರ ಪದರೂಪಗಳನ್ನು ಕೂಡ ನೀಡಲಾಗಿದೆ. ಹೀಗೆ ದೀರ್ಘವಾದ ವಿವರಣೆಗಳೊಂದಿಗೆ ಈ ಕೋಶವು ನಮ್ಮಲ್ಲಿ ಆತ್ಮೀಯವಾಗಿ ಇಳಿದುಹೋಗುತ್ತದೆ.

ಇದಕ್ಕಿಂತ ಮುಖ್ಯವಾದ ಒಂದು ಮಾತನ್ನು ಇಲ್ಲಿ ಹೇಳಬೇಕು. ಈ ಪದಕೋಶಗಳಲ್ಲಿರುವ ಅನೇಕ ಪದಗಳಿಗೆ ಸೂಕ್ತವಾದ ಚಿತ್ರಗಳನ್ನು ನೀಡಿರುವುದು ಈ ಕೋಶದ ಬಹೂಪಯೋಗಗಳಲ್ಲಿ ಒಂದಾಗಿದೆ. ಎಷ್ಟೇ ವಿವರಣೆಗಳಿದ್ದರೂ ಅರ್ಥವಾಗದ ಕೆಲವೊಂದು ಪದಗಳು ಇಲ್ಲಿನ ಚಿತ್ರಗಳನ್ನು ನೋಡಿದ ತಕ್ಷಣ ಅರ್ಥವಾಗಿ ಬಿಡುತ್ತವೆ. ಇದು ಈ ಕೋಶದ ಬಹಳಮುಖ್ಯವಾದ ಅಂಶವಾಗಿದೆ. ಈ ಪ್ರಯೋಗವನ್ನು ಮಾಡಿ ಜನಪ್ರಿಯರಾದವರು ಕಸ್ತೂರಿ ಕೋಶವನ್ನು ತಯಾರಿಸಿದ ಪಂಡಿತ ಕವಲಿಯವರು.

ಕೊನೆಗೆ ಬುಕ್ಕಾಂಬುಧಿಯ ನಕ್ಷೆ, ಬುಕ್ಕಾಂಬುಧಿ ಊರಿನ ಪರಿಚಯ, ಬುಕ್ಕಾಂಬುಧಿ ಕೃಷ್ಣಮೂರ್ತಿಯವರ ಜೀವನಪಥ, ಪ್ರಕಟಿತ ಕೃತಿಗಳ ಪಟ್ಟಿ, ಅವರ ಕೃತಿಗಳ ಬಗ್ಗೆ ಗಣ್ಯರ ಅಭಿಪ್ರಾಯಗಳು ಕೂಡ ಸಂಕಲಿತಗೊಂಡಿವೆ. ಈ ಕೃತಿಯ ಮೊದಲ ಮುದ್ರಣದಲ್ಲಿ ಕೇವಲ ಕನ್ನಡದಲ್ಲಿ ಮಾತ್ರ ವಿವರಣೆಗಳಿದ್ದವು. ಇದನ್ನು ಪರಿಷ್ಕರಿಸಿ, ಇನ್ನೂ ವಿಸ್ತರಿಸಿ, ಇಂಗ್ಲಿಷಿನ ಅನುವಾದ ಮತ್ತು ವಿವರಣಗಳನ್ನೂ ಸೇರಿಸಿ ಇದೀಗ ೨೦೨೫ ರಲ್ಲಿ ಸದೃಢವಾಗಿ ಹೊರತಂದಿದ್ದಾರೆ. ಈ ಕೃತಿಯನ್ನು ನಾಡಿನ ಗಣ್ಯ ಪ್ರಕಾಶನ ಸಂಸ್ಥೆಯಾದ ಬೆಂಗಳೂರಿನ ರಾಜಾಜಿನಗರದ ಸುಹಾಸ್ ಗ್ರಾಫಿಕ್ಸ್‌ನವರು ಮುದ್ರಣದ ಜವಾಬ್ದಾರಿಯ ಜೊತೆಗೆ ಪ್ರಕಾಶನವನ್ನು ಕೂಡ ಮಾಡಿದ್ದಾರೆ. ಆದರೆ ಮುಖಪುಟದಲ್ಲಿ ಇದೊಂದು ದ್ವಿಭಾಷಾ ನಿಘಂಟು ಎನ್ನುವುದನ್ನು ಮುನ್ನಲೆಗೆ ತರುವ ಜರೂರು ಇದೆ.

ಅನಾಜಿ ಮತ್ತು ನಿಘಂಟುಗಳ ಸಂಬಂಧ

ಅನಾಜಿಯವರು ಇನ್ನೂ ವಿದ್ಯಾರ್ಥಿಯಾಗಿದ್ದಾಗಿನಿಂದಲೇ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಕಛೇರಿಯ ಜೊತೆಗೆ ಸಂಪರ್ಕವನ್ನು ಸಾಧಿಸಿದವರು. ಹಿರಿಯ ದಿಗ್ಗಜರನ್ನು ನಿಘಂಟು ಕಛೇರಿಯಲ್ಲಿ

ಕಂಡು ಅವರೊಡನೆ ಚರ್ಚೆ ಮಾಡಿದವರು. ಪರಿಷತ್ತಿನಲ್ಲಿ ಪ್ರತೀ ತಿಂಗಳೂ ನಿಘಂಟು ಕಛೇರಿ ಸಭೆಗಳು ನಡೆಯುತ್ತಿದ್ದವು. ಕನ್ನಡದ ಉದ್ಧಾಮ ಸಾಹಿತಿಗಳು, ಪಂಡಿತರು, ಸಂಶೋಧಕರು ಈ ಸಭೆಯಲ್ಲಿ ಭಾಗವಹಿಸಿ ಚರ್ಚಿಸುತ್ತಿದ್ದರು. ಆಗ ಚೈನಾ ಯುದ್ಧ ನಡೆಯುತ್ತಿದ್ದಾಗ ಹೀಗೆ ಪದಗಳನ್ನು ಹೆಕ್ಕಿ ತೆಗೆಯುವ ಕಾಯಕಕ್ಕೆ ಇಂತಿಷ್ಟು ದುಡ್ಡು ಎಂದು ನಿಗದಿ ಮಾಡಿ ಪದಗಳನ್ನು ಹೆಕ್ಕುವ ಕೆಲಸ ಮಾಡುತ್ತಾ ಹಣ ಪೋಲು ಮಾಡುತ್ತಿದ್ದಾರೆ ಎಂದು ಹುಡುಗರಾದ ಅನಾಜಿಯವರಿಗೆ ಅನ್ನಿಸಿತು. ಒಮ್ಮೆ ಅನಾಜಿಯವರು ಸಭೆಯಲ್ಲಿ ಹೀಗೆ ಯುದ್ಧ ನಡೆಯುತ್ತಿರುವಾಗ ಹೀಗೆ ಹಣ ಪೋಲು ಮಾಡುತ್ತಿರುವ ಬಗ್ಗೆ ಆಕ್ಷೇಪಣೆ ಎತ್ತಿ ಕೂಗಾಡಿದರಂತೆ. ಆಗ ಹಿರಿಯ ವಿದ್ವಾಂಸರಾದ ತೀನಂಶ್ರೀಯವರು ಇವರ ಬಳಿಗೆ ಬಂದು ನಿಮಗೆ ನಾವು ಮಾಡುತ್ತಿರುವ ಕೆಲಸ ಅರ್ಥ ಆಗಿಲ್ಲ. ನೀವೇ ಬಂದು ಈ ಸಭೆಯಲ್ಲಿ ಕೂತು ಅದನ್ನು ಅರ್ಥ ಮಾಡಿಕೊಳ್ಳಿರಿ ಎಂದರಂತೆ. ಆಗ ಪರಿಷತ್ತಿನ ಅಧ್ಯಕ್ಷರು ಇದನ್ನು ವಿರೋಧಿಸಿ ಇಂತಹ ಪುಂಡಪೋಕರಿಗಳಿಗೆ ಈ ರೀತಿಯ ಅವಕಾಶವನ್ನು ಕೊಡುವುದು ಬೇಡ ಎಂದರಂತೆ. ಆಗ ಪರಿಷತ್ತಿಗೆ ನೀವು ಅಧ್ಯಕ್ಷರಿರಬಹುದು, ಆದರೆ ನಿಘಂಟು ಸಮಿತಿಗೆ ನಾನು ಅಧ್ಯಕ್ಷನಿದ್ದೇನೆ. ನಾನು ಈ ಹುಡುಗನಿಗೆ ಸಭೆಯಲ್ಲಿ ಕುಳಿತು ನಿಘಂಟಿನ ಬಗ್ಗೆ ತಿಳಿದುಕೊಳ್ಳಲು ಅವಕಾಶವನ್ನು ನೀಡುತ್ತಿದ್ದೇನೆ ಎಂದು ದೊಡ್ಡ ಮನಸ್ಸು ತೋರಿದರಂತೆ.

ಮುಂದೆ ನಿಘಂಟಿನ ಅವಶ್ಯಕತೆಯನ್ನು ಹಾಗೂ ಅದರ ವೈಶಿಷ್ಟ್ಯತೆಯನ್ನು ಅರ್ಥ ಮಾಡಿಕೊಂಡ ಅನಾಜಿಯವರು ಸುಮಾರು ಏಳು ದಶಕಗಳಷ್ಟು ದೀರ್ಘ ಕಾಲ ಪರಿಷತ್ತಿನ ಜೊತೆ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಹಾಗಾಗಿಯೇ ಪರಿಷತ್ತಿನ ಬಗ್ಗೆ ಅತ್ಯಂತ ದೀರ್ಘವಾಗಿ ಬರೆಯುವುದು ಇವರಿಗೆ ಸಾಧ್ಯವಾಯಿತು. ಕೆಲವು ಕಾಲ ಇವರು ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದ್ದಿದೆ. ಇವತ್ತೂ ಕೂಡ ಮಾತನಾಡುವಾಗ, ಇಡೀ ಪ್ರಪಂಚದಲ್ಲಿ ಅತ್ಯಂತ ವೈಜ್ಞಾನಿಕವಾಗಿ ಹಾಗೂ ಅಧಿಕೃತವಾಗಿ ತಯಾರಿಸಿದ ನಿಘಂಟು ಎಂದರೆ ಪರಿಷತ್ತಿನ ಎಂಟು ಸಂಪುಟಗಳ ಕನ್ನಡ ಕನ್ನಡ ನಿಘಂಟು ಎಂದು ಕಡ್ಡಿ ತುಂಡು ಮಾಡುವಂತೆ ಅಭಿಮಾನದಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅವರ ಮೊದಲ ಆದ್ಯತೆ ಕನ್ನಡ ನಿಘಂಟು ಎನ್ನುವುದು ಅವರ ದೃಢವಾದ ನಂಬಿಕೆ.

ಹಾಗಾಗಿಯೇ ಶಬ್ದಕೋಶಗಳನ್ನು ಕುರಿತು ಅವರು ಅನೇಕ ಲೇಖನಗಳನ್ನು ಬರೆದಿರಬಹುದು. ಆದರೆ ಅದರಲ್ಲಿ ಕೆಲವು ಲೇಖನಗಳು ನನಗೆ ಈಗ ನೆನಪಿಗೆ ಬರುತ್ತಿವೆ. ಶಿವರಾಮ ಕಾರಂತರ ಸಿರಿಗನ್ನಡ ಶಬ್ದಕೋಶವನ್ನು ಕುರಿತು ಅನಾಜಿಯವರು ಬರೆದ ಲೇಖನ ಒಳ್ಳೆಯ ಮಾಹಿತಿಯನ್ನು ಒದಗಿಸುತ್ತದೆ. ಶ್ರೀರಂಗನಾಥ ಶರ್ಮ ಅವರ ಅಭಿನಂದನಾ ಗ್ರಂಥದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಬರೆದಿರುವ ಶ್ರೀಚಾಮುಂಡಿಕಾ ಲಘು ನಿಘಂಟುವನ್ನು ಕುರಿತು ಬರೆದಿರುವ ಲೇಖನ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ ಸಂಗತಿಗಳನ್ನು ತಿಳಿಸುತ್ತದೆ. ಸ.ಸ.ಮಾಳವಾಡರ ಪ್ರಧಾನ ಸಂಪಾದಕತ್ವದಲ್ಲಿ ಕ.ವೆಂ. ರಾಜಗೋಪಾಲ ಹಾಗೂ ಟಿ. ಕೇಶವಭಟ್ಟರು ಸಿದ್ಧಪಡಿಸಿದ ಕನ್ನಡ ಕಾವ್ಯ ಪದಮಂಜರಿ ಪದಕೋಶದ ಬಗ್ಗೆ ಅನಾಜಿಯವರ ಲೇಖನ ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ. ಈ ಕೃತಿಯ ಪರಿಷ್ಕಾರ ಕಾರ್ಯ ಹೇಗೆ ಮಾಡಬಹುದು ಎಂದು ಇದರಲ್ಲಿ ಬಹಳ ವಿಸ್ತೃತವಾಗಿ ಚರ್ಚಿಸಿದ್ದಾರೆ. ಅನಾಜಿಯವರ ಸಂಗ್ರಹದಲ್ಲಿ ನೂರಾರು ಅಪರೂಪದ ನಿಘಂಟುಗಳು ಇವೆ.

ನಿಘಂಟುಗಳ ಬಗ್ಗೆ ಮಾತನಾಡುವಾಗ ಒಂದು ವಿಷಯವನ್ನು ಹೆಚ್ಚುವರಿಯಾಗಿ ನಾವು ಸೇರಿಸಲೇಬೇಕು. ಅದು ಅವರು ಸಿದ್ಧಪಡಿಸುತ್ತಿರುವ ಕನ್ನಡದ ಅತ್ಯಂತ ಮಹತ್ವದ ಕೊಡುಗೆಯಾಗುವ

'ಭಗವದ್ಗೀತಾ ಶಬ್ಧಕೋಶ'. ಇದಿನ್ನೂ ಹಸ್ತಪ್ರತಿಯ ರೂಪದಲ್ಲಿದೆ. ಇದಿನ್ನೂ ಪೂರ್ಣಗೊಂಡು ಮುದ್ರಣಕ್ಕೆ ಸಿದ್ಧಗೊಳ್ಳಬೇಕಾಗಿದೆ.

ಈ ಕೋಶದಲ್ಲಿ ಭಗವದ್ಗೀತೆಯಲ್ಲಿರುವ ಪ್ರತಿಯೊಂದು ಶಬ್ದವನ್ನೂ ಅಕಾರಾದಿಯಾಗಿ ಸೇರಿಸಿದ್ದಾರೆ. ಈ ಪದವು ಎಷ್ಟು ಸಲ ಪ್ರಯೋಗವಾಗಿದೆ. ಯಾವ ಅಧ್ಯಾಯದ ಯಾವ ಪದ್ಯದಲ್ಲಿ ಅದು ಪ್ರಯೋಗಗೊಂಡಿದೆ ಎಂದು ನಿಖರವಾಗಿ ಸೂಚಿಸಿದ್ದಾರೆ. ಅದಕ್ಕಾಗಿ ಅವರು ಅವ್ಯಯಗಳನ್ನೂ, ಕ್ರಿಯಾಪದಗಳನ್ನು, ಸರ್ವನಾಮಗಳನ್ನೂ ಬಿಟ್ಟಿಲ್ಲ. ಅವೆಲ್ಲವನ್ನೂ ಸೇರಿಸಿದ್ದಾರೆ. ಪ್ರತೀ ಪದವು ಬೇರೆ ಬೇರೆ ಪ್ರಯೋಗಗಳಲ್ಲಿ ಬೇರೆ ಬೇರೆ ಅರ್ಥಗಳನ್ನು ಹೊಂದಿದ್ದರೆ ಅದನ್ನೂ ಸೇರಿಸಿದ್ದಾರೆ. ಒಟ್ಟಿನಲ್ಲಿ ಭಗವದ್ಗೀತೆಯನ್ನು ಅರ್ಥ ಮಾಡಿಕೊಳ್ಳಲು ಈ ಕೋಶವೊಂದು ಅತ್ಯುತ್ತಮವಾದ ಆಕರವಾಗಿದೆ. ಕೊನೆಯಲ್ಲಿ ಅನೇಕ ಅನುಬಂಧಗಳನ್ನು ನೀಡಿದ್ದಾರೆ. ಭಗವದ್ಗೀತೆಯಲ್ಲಿ ಉಲ್ಲೇಖಿತವಾಗಿರುವ ವ್ಯಕ್ತಿಗಳು, ಸ್ಥಳಗಳು, ಘಟನೆಗಳ ಅನುಬಂಧಗಳು ಕೂಡ. ಒಂದು ಪದ ಎಷ್ಟು ಬಾರಿ ಪ್ರಯೋಗವಾಗಿದೆ. ಹಾಗೂ ಎಲ್ಲೆಲ್ಲಿ ಎಂದು ಖಚಿತವಾಗಿ ತಿಳಿಸಿದ್ದಾರೆ. ಜೊತೆಗೆ ಈ ಕೃತಿಯ ವಿಶೇಷ ಎಂದರೆ ಭಗವದ್ಗೀತೆಯ ಇದುವರೆಗಿನ ಅವತರಣಿಕೆಗಳು ಹಾಗೂ ಅನುವಾದಗಳು ಮುಂತಾದ ಕೃತಿಕೋಶವೂ ಇದೆ. ಇದು ನಿಜಕ್ಕೂ ಪ್ರಕಟಗೊಂಡು ಕನ್ನಡ ನಿಘಂಟು ಲೋಕವನ್ನು ಹಾಗೂ ಭಗವದ್ಗೀತಾ ಅಧ್ಯಯನ ಪ್ರಪಂಚನ್ನು ವಿಸ್ತರಿಸುವುದರಲ್ಲಿ ಎರಡು ಮಾತಿಲ್ಲ.

******

ರಾಜಪಥ

ಡಾ ॥ ಗೌರೀಶ
ಚರವಾಣಿ : ೯೩೯೩೮೭೧೭೩೮

ಅನಾಜಿಯವರ ಕನ್ನಡ ಸಾಹಿತ್ಯ ಕೃಷಿಯು ಜೀವನೋಲ್ಲಾಸ ಹಾಗೂ ಮನೋವಿಕಸನದ ಗುರಿಯೊಂದಿಗೆ ಸಾರಸ್ವತಲೋಕದ ಸಿರಿ ತುಂಬಿಸಿದ ಅರ್ಥಪೂರ್ಣ ದುಡಿಮೆಯಾಗಿದೆ. ಭಾಷೆಯನ್ನು ಬಳಕೆಯಲ್ಲಿ ಬೆಳೆಸಿದ್ದು, ಸಾಹಿತ್ಯದಲ್ಲಿ ಸಂಸ್ಕರಿಸಿದ್ದು, ಗ್ರಂಥಗಳಲ್ಲಿ ಸಂಪಾದಿಸಿದ್ದು ಹಾಗೂ ಮಾತಿನಲ್ಲಿ ಮೆರೆಸಿದ್ದು ಇವರ ಕನ್ನಡ ಬದುಕಿನ ರಥಚಕ್ರದ ನಾಲ್ಕು ಗಾಲಿಗಳೇ ಸರಿ. ಬರವಣಿಗೆ ಎಂದರೆ ಶಬ್ದ ಭಂಡಾರ ಹಾಗೂ ವಿಷಯ ಪಾಂಡಿತ್ಯದ ಪ್ರದರ್ಶನಕ್ಕೆ ಸೀಮಿತವಾಗಿರದೆ, ಉದ್ದೇಶದ ಸಾರ ಓದುಗನ ಕಡೆಗೆ ಹರಿವಾಗಿರಬೇಕು ಎಂಬುದು ಈ ಕನ್ನಡ ಪರಿಚಾರಕನ ಕೃತಿಗಳಲ್ಲಿ ಪರಿಚಯವಾಗುತ್ತದೆ. ಸ್ವರಚನೆ, ವ್ಯಾಖ್ಯಾನ, ವಿಮರ್ಶೆ, ಹಸ್ತಪ್ರತಿ ಸಂಪಾದನೆ, ಶಬ್ದಕೋಶ, ವಿದ್ವತ್ಪೂರ್ಣ ಗ್ರಂಥ ಪರಿಷ್ಕರಣೆ, ವ್ಯಕ್ತಿ ವ್ಯಕ್ತಿತ್ವ ಪರಿಚಯ ಕೃತಿ, ಲಭ್ಯವಿಲ್ಲದ ಅಪರೂಪದ ಪುಸ್ತಕಗಳ ಮರು ಸಂಪಾದನೆ, ಅನುವಾದ ಹಾಗೂ ವಿಭಿನ್ನ ಪ್ರಕಾರದ ಕೃತಿಗಳ ಸಂಪಾದಕತ್ವ ಹೀಗೆ ಅನಾಜಿಯವರು ಸಾಹಿತ್ಯ ಪ್ರಪಂಚದ ಬಹುಮುಖಿ ವಾಮನರೂಪಿ ವಿರಾಟ್ ವ್ಯಾಪಿ ಎಂದರೆ ಉತ್ಪ್ರೇಕ್ಷೆ ಆಗಲಾರದು. ಅವರ ಅಕ್ಷರ ಜೋಳಿಗೆಯಿಂದ ಆರಿಸಿದ ಅವರೇ ಜಾಲಾಡಿದ ಲೇಖನಗಳ ಗುಚ್ಛವು ಪುಸ್ತಕ ರೂಪ ಪಡೆದ ಪಯಣದ ಅನುಭವವನ್ನು ಭಟ್ಟಿ ಇಳಿಸುವುದು ನನ್ನ ಲೇಖನದ ಮುಖ್ಯ ವಿಷಯ.

“ರಾಜಪಥ” ಶಿಕ್ಷಣತಜ್ಞರಾದ ಡಾ. ಟಿ. ವಿ. ರಾಜುರವರಿಗೆ ಅವರ ವಿದ್ಯಾರ್ಥಿಗಳು, ಸ್ನೇಹಿತರು, ಹಿತೈಷಿಗಳು, ಗಣ್ಯರು ಹಾಗೂ ಅಭಿಮಾನಿಗಳು ಅರ್ಪಿಸಿದ ಅಭಿನಂದನಾ ಕೃತಿ. ಹಲವರು ಬರೆದ ಲೇಖನಗಳನ್ನು ಪುಸ್ತಕದಲ್ಲಿ ಹೆಣೆದದ್ದು ಬಗಲು ಚೀಲದ ಕನ್ನಡ ಫಕೀರ. ರಾಜು ಮೇಷ್ಟ್ರ 70ರ ಸಂಭ್ರಮಕ್ಕೆ ಗೌರವ ಗ್ರಂಥವನ್ನು ಸಮರ್ಪಿಸಬೇಕು ಎನ್ನುವ ಆರಂಭಿಕ ಆಲೋಚನೆಯಿಂದ ಗ್ರಂಥ ಲೋಕಾರ್ಪಣೆ ಆಗುವವರೆಗೂ ಪ್ರೊಫೆಸರ್ ಅಶ್ವತ್ಥನಾರಾಯಣರವರದ್ದೇ ಮಾರ್ಗದರ್ಶನ, ಉಸ್ತುವಾರಿ ಹಾಗೂ ಪರಿಷ್ಕರಣೆ. ಪುಸ್ತಕದ ಸ್ವರೂಪ, ಲೇಖನಗಳ ವಿಷಯವ್ಯಾಪ್ತಿ, ಬರಹ ಹಾಗೂ ಬರಹಗಾರರಲ್ಲಿ ವಿಭಿನ್ನತೆ, ವಿನ್ಯಾಸ ಹಾಗೂ ಮುದ್ರಣ ಎಲ್ಲವೂ ಅವರ ಕಲ್ಪನೆಯಲ್ಲೇ ಅನಾವರಣಗೊಂಡಿದ್ದು. ಆಹ್ವಾನಿಸಿ ಸಂಗ್ರಹಿಸಿದ ಎಲ್ಲಾ 37 ಕನ್ನಡ ಲೇಖನಗಳನ್ನು ಕೂಲಂಕುಶವಾಗಿ ಓದಿ ಪರಿಶೀಲಿಸಿ, ತಿದ್ದಿ ತೀಡಿ ಪರಿಷ್ಕರಿಸಿ, ಭಾವಾರ್ಥಕ್ಕೆ ಮೆರಗು ಹಚ್ಚಿ ಹದಗೊಳಿಸಿ ಹಾಗೂ ವ್ಯಕ್ತಿತ್ವ ಚಿತ್ರಣ ಸ್ಫುಟವಾಗಿ ಮೂಡುವಂತೆ ಜೋಡಿಸಿ ಗ್ರಂಥ ಸಂಪನ್ನಗೊಳಿಸುವಲ್ಲಿ ಅನಾಜಿಯವರ ಅನುಭವ, ವಿದ್ವತ್ತು, ಕೌಶಲ್ಯ ಹಾಗೂ ಸೃಜನಶೀಲತೆ ಮೈತಳೆದಿತ್ತು. ಎಂಬತ್ತು ದಾಟಿದ ಪ್ರಯಾಸದ ಪರಿವೇ ಇಲ್ಲದೆ ಹೊತ್ತಿಗೆಯ ಕೆಲಸದಲ್ಲಿ ಅವರಿಗಿದ್ದ ಆಸ್ಥೆ, ತುಡಿತ, ಕಾರ್ಯತತ್ಪರತೆ ಹಾಗೂ

ತನ್ಮಯತೆಯನ್ನು ನೋಡಿ ನಲವತ್ತರಲ್ಲೇ ಆಯಾಸಗೊಂಡಿರುವ ನನಗೆ ನಾಚಿಕೆ ತರಿಸಿದ್ದು ಸುಳ್ಳಲ್ಲ. ಒಟ್ಟಾರೆ ರಾಜು ಸರ್ ರವರ ವ್ಯಕ್ತಿ ಹಾಗೂ ವ್ಯಕ್ತಿತ್ವದ ಪೂರ್ಣ ಪರಿಚಯವಾಗುವಂತೆ ಪ್ರತೀ ಲೇಖನದ ಹೂರಣಕ್ಕೆ ತಕ್ಕಂತೆ ಶೀರ್ಷಿಕೆಯನ್ನು ಸರಿಪಡಿಸುವಾಗ ಒಂದು ಕಡೆ ಟಿವಿಆರ್ ರವರ ವಿಶ್ವರೂಪ ದರ್ಶನವಾದರೆ ಇನ್ನೊಂದು ಕಡೆ ಅನಾಜಿಯವರ ಶಬ್ದ ಭಂಡಾರದ ಅಶ್ವತ್ಥಾಕೃತಿ ದರ್ಶನವಾಗಿತ್ತು. ಅಷ್ಟೂ ಲೇಖನಗಳ ಪರಿಷ್ಕರಣೆ ಮುಗಿದ ಮೇಲೆ ಗ್ರಂಥ ಸ್ವರೂಪ ಏನಿರಬೇಕು? ಮುಖಪುಟ ವಿನ್ಯಾಸ ಹೇಗಿರಬೇಕು? ಮುದ್ರಣ ಹೇಗಾಗಬೇಕು? ಹೀಗೆ ತಮ್ಮ ಅನುಭವದ ಬತ್ತಳಿಕೆಯಿಂದ ಒಂದೊಂದೇ ಕೆಲಸವನ್ನು ಅಚ್ಚುಕಟ್ಟಾಗಿ ನಮ್ಮ ಯುವ ತಂಡದಿಂದ ಮಾಡಿಸುತ್ತಿದ್ದದ್ದು ಯಾವಾಗಲೂ ನೆನಪಿರುತ್ತದೆ. ಗೂಗ್ಲಿ ಎಂದರೆ ಗೌರವ ಗ್ರಂಥದ ಶೀರ್ಷಿಕೆ - "ರಾಜಪಥ" - ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗಳಿಂದ ಠೀವಿ ಹೊತ್ತ ರಾಜುರವರು ನಡೆದು ಬಂದ ವಿನಯಪೂರ್ವಕ ಜೀವನದ ಹಾದಿ. ಅನಾಜಿಯವರೇ ಗೌರವದಿಂದ ಪ್ರೀತಿಯಿಂದ ನಾಮಕರಣ ಮಾಡಿ ಸಮರ್ಥನೆಯನ್ನೂ ನೀಡಿದ್ದರು.

ಪುಟಗಟ್ಟಲೆ ಅಕ್ಷರವನ್ನು ಗಂಟೆಗಟ್ಟಲೆ ಒಂದೇ ನೋಟದಲ್ಲಿ ಓದಿ ಅರ್ಥೈಸಿಕೊಂಡು ತಿದ್ದಿ ಟಿಪ್ಪಣಿ ಬರೆಯುವ ಅನಾಜಿಯವರ ಸಾಮರ್ಥ್ಯಕಂಡು ಬೆರಗಿನಿಂದ ಅಸೂಯೆಪಟ್ಟಿದ್ದೆ. ಇದು ಅವರ ಉತ್ಸಾಹದ ಸಾಹಸವೋ ! ಓದುವ ಗೀಳಿನ ಪರಾಕಾಷ್ಠೆಯೋ ! ಅಗಣಿತ ಕಾರ್ಯಕ್ಷಮತೆಯೋ! ಸಹನೆಯ ಹಠಯೋಗವೋ! ಒಂದೂ ಅರ್ಥವಾಗದೆ "ಅಬ್ಬಾ ನಾರಾಯಣ!" ಎಂದು ಹೇಳಿಕೊಳ್ಳುತ್ತಾ ಮನಸಾರೆ ತಲೆಬಾಗುತ್ತಿದ್ದೆ. ಅವರ ಮನೆಗೆ ಹೋದರೆ ಮೊದಲು ಒಂದು ಲೋಟ ಬಾದಾಮಿ ಹಾಲು, ಎರಡು ಮೆಚ್ಚುಗೆಯ ಮಾತು, ಒಂದೆರಡು ಸ್ಫೂರ್ತಿದಾಯಕ ಉವಾಚ, ಗ್ರಂಥದ ಬಗ್ಗೆ ವಿಮರ್ಶಾತ್ಮಕ ಹತ್ತಾರು ವಿಷಯಗಳ ವಿನಿಮಯ, ಆಮೇಲೆ ಅವರ ಲೋಕಸಂಗ್ರಹದ ನೂರಾರು ವಿಚಾರ-ಸಂಗತಿಗಳ ಅನುಭವಾಮೃತ. ಹೀಗೆ ಅವರೊಂದಿಗೆ ಕಳೆದ ಸಮಯದಲ್ಲಿ ನಮ್ಮ ಜ್ಞಾನ ಸಂಪುಟಕ್ಕೂ ಜೀವನಕ್ಕೂ ಕೂಡಿಸಿಕೊಂಡಿದ್ದು ಬಹಳಷ್ಟಿದೆ. ಕಿರಿಯರನ್ನು ಅರ್ಥಮಾಡಿಕೊಂಡು ಅವರ ಮನಸ್ಥಿತಿಗೆ ಹೊಂದಿಕೊಂಡು ಆಗಾಗ ದೂರವಾಣಿ ಮಾಡಿ "ಎಲ್ಲಿಗೆ ಬಂತು ಪುಸ್ತಕದ ಕೆಲಸ" ಎಂದು ಕೇಳುತ್ತಾ ಜ್ಞಾಪಿಸಿ ಇದ್ದ ಸಮಯದ ಬಗ್ಗೆ ಎಚ್ಚರಿಸಿ ಹುರಿದುಂಬಿಸುತ್ತಿದ್ದ ಅನಾಜಿಯವರ ಹಿರಿತನಕ್ಕೆ ಉಘೇ ಉಘೇ ಅನ್ನಲೇಬೇಕು.

ಪ್ರೊಫೆಸರ್ ಅಶ್ವತ್ಥನಾರಾಯಣರೊಂದಿಗೆ "ಕನ್ನಡ ಸಿಂಚನ ವೇದಿಕೆ"ಯಲ್ಲಿ ಕೆಲಸ ಮಾಡಿದ್ದು ನನ್ನ ಸಾಹಿತ್ಯಾಸಕ್ತ ಪಯಣದ ಬಹುಮುಖ್ಯ ಮಜಲು ಎಂದೇ ನಾನು ಭಾವಿಸುತ್ತೇನೆ. ಅಲ್ಲಿನ ಪ್ರಕಟಣೆಗಳು ಬಹುಮುಖಿ, ಬಹುರೂಪಿ ಹಾಗೂ ಬಹು ವಿಷಯವಸ್ತು ಆಧಾರಿತ. ಯಾವುದೇ ಪ್ರಕಾರದ ಗ್ರಂಥವಾಗಿರಲಿ ಹಾಗೂ ಯಾವುದೇ ವಿಷಯದ ಬಗ್ಗೆಯಾಗಲಿ ಅನಾಜಿಯವರು ತಮ್ಮ ಸಂಪಾದಕತ್ವದ ಪರಿಷ್ಕರಣೆಯ ಕೆಲಸವನ್ನು ಅಚ್ಚುಕಟ್ಟಾಗಿ ಸಮಯಕ್ಕೆ ಸರಿಯಾಗಿ ಮಾಡುತ್ತಿದ್ದನ್ನು ಮರೆಯಲು ಸಾಧ್ಯವಿಲ್ಲ. ಬರವಣಿಗೆಯೆ ಇರಲಿ ಭಾಷಣವೇ ಇರಲಿ "ವಿಷಯ ಹಾಗೂ ಸಂದರ್ಭಕ್ಕೆ ತಕ್ಕಂತೆ ಭಾಷೆಯ ಪ್ರಯೋಗ" ಅವರಿಂದ ಕಲಿಯಲೇಬೇಕಾದ ಕೌಶಲ್ಯ. ಈ ಬಡಮೇಷ್ಟ್ರು (ಅವರೇ ಹೇಳಿಕೊಳ್ಳುವಂತೆ) ತಮ್ಮ ಉಪನ್ಯಾಸಗಳಲ್ಲಿ ಭಾಷಾ ಶ್ರೀಮಂತಿಕೆ, ಅರ್ಥ ಶ್ರೀಮಂತಿಕೆ ಹಾಗೂ ವಿಚಾರ ಶ್ರೀಮಂತಿಕೆಯಿಂದ ಶ್ರೋತ್ರುಗಳ ಮನಮುಟ್ಟುತ್ತಿದ್ದದ್ದು ನನ್ನಂತವನಿಗೆ ಒಂದು ಪಾಠವೇ ಸರಿ. ಅನಾಜಿಯವರ ಮಾತೆಂದರೆ ತ್ರಾಸವಿಲ್ಲದ ಪ್ರಾಸ, ಲಘು ಹಾಸ್ಯ, ಘನ ವಿಚಾರ, ಪದಗಳೊಂದಿಗಿನ ಆಟ, ಸಾಹಿತಿಕ ಕಚಗುಳಿ ಹಾಗೂ ಅನುಭವ ಕಥಾನಕದ ರಸಪಾಕ. "ನಿಮ್ಮ ನಿರೂಪಣೆ ಚೆನ್ನಾಗಿತ್ತು"

ಎಂದು ನನಗೆ ಮೆಚ್ಚುಗೆಯ ಮಾತನ್ನು ಹೇಳುವ ಅವರ ಸಂಸ್ಕೃತಿಯ ಭಾಗವಾದ ಸೌಜನ್ಯ ನನ್ನ ಜಂಬಕ್ಕೆ ಇಂಬು ಕೊಡುತ್ತಿತ್ತು. ಅವರ ಭಾಷಣದಲ್ಲಿ ನನ್ನ ನಿರೂಪಣೆಯೊಂದಿಗಿನ ಸರಸ ನಾನು ಯಾವಾಗಲೂ ಹೆಮ್ಮೆಯಿಂದ ಮೆಲುಕು ಹಾಕುತ್ತೇನೆ. ಅವರೊಂದಿಗಿನ ಹಲವು ವರ್ಷಗಳ ಒಡನಾಟದಿಂದ ಸಾಕಷ್ಟು ಕಲಿತಿದ್ದೇನೆ ಕಲಿಯುತ್ತಿದ್ದೇನೆ. ಸರಳ ಬದುಕಿನೊಂದಿಗೆ ನಾನೊಬ್ಬ ಸಾಹಿತ್ಯದ ಪರಿಚಾರಕ ಎಂದು ವಿನಯದಿಂದ ಹೇಳಿಕೊಳ್ಳುವ ಅನಾಜಿ ಎಂಬ ಕನ್ನಡ ವಿಶ್ವವಿದ್ಯಾಲಯಕ್ಕೆ ಶರಣು ಶರಣಾರ್ಥಿ.

ಅಶ್ವಥನಾರಾಯಣ ಅಂದರೆ ಸುಮ್ಮನೆಯಲ್ಲ
ಅವರ ಅಕ್ಷರದಕ್ಕರೆಯ ಸವಿ ಬಲ್ಲವರೇ ಬಲ್ಲ
ಅನಾಜಿಯ-ಸರಸ್ವತ್ತಮ್ಮನ ಕೊಡ ತುಳುಕೋದೇ ಇಲ್ಲ
ತುಂಬೈತೆ ಸಾಹಿತ್ಯಝುರಿಯ ಸೊಗಡಿನ ಜೇನು ಬೆಲ್ಲ **– ಡಾ. ಗೌರೀಶ್**

*****

ವಿಜಯದಾಸರ ಕೀರ್ತನೆಗಳು ಹಾಗೂ ಉಗಾಭೋಗಗಳು (೨ ಭಾಗಗಳು)

ಎಂ. ಆರ್. ಲಕ್ಷ್ಮೀದೇವಿ
ಚರವಾಣಿ - ೯೪೮೧೮೮೦೦೦೨೩

ಕನ್ನಡದ ವಿಜಯದಾಸರ ಸಮಗ್ರ ಕೀರ್ತನ ಸಂಗ್ರಹ ವಚನ ಸಾಹಿತ್ಯ ಮತ್ತು ದಾಸಸಾಹಿತ್ಯಗಳು ವಿಶ್ವಸಾಹಿತ್ಯಕ್ಕೆ ನೀಡಿದ ಅಪೂರ್ವ ಕೊಡುಗೆಗಳಾಗಿವೆ. ''ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್'' ಎಂದು ಹೆಸರಾಂತ ಈ ಸಾಹಿತ್ಯ ಪ್ರಕಾರಗಳು 'ಜನರಿಂದ ಜನರಿಗಾಗಿ ರಚಿತವಾದ ಸಾಹಿತ್ಯ ಪ್ರಕಾರಗಳಾಗಿವೆ. ಶರಣರು ದಾಸರು ದೈವಾನುಗ್ರಹದಿಂದ ಜನತೆಗೆ ನೀಡಿದ ಅಪೂರ್ವ ಸಾಹಿತ್ಯವೇ ವಚನ ಹಾಗೂ ದಾಸಸಾಹಿತ್ಯ. ಈ ಶರಣ ಹಾಗೂ ದಾಸ ಸಾಹಿತ್ಯ ನಿರ್ಮಾತೃಗಳು ಕೇವಲ ಒಬ್ಬರಲ್ಲ-ಇಬ್ಬರಲ್ಲ ನೂರಾರು ಜನರು. ಅವರದೇ ಆದ ಶರಣ-ದಾಸ ಪರಂಪರೆ ಕನ್ನಡ ನಾಡಿನಾದ್ಯಂತ ಇಂದಿಗೂ ಮುಂದುವರಿದಿದೆ.

ದಾಸಸಾಹಿತ್ಯದಲ್ಲಿ ರಚಿತವಾದ ಕೀರ್ತನೆಗಳು ಹಾಗೂ ಉಗಾಭೋಗಗಳು ಹರಿದಾಸರು ಕುಳಿತು ಬರೆದ ಸಾಹಿತ್ಯವಲ್ಲ. ಅವು ಆಯಾ ಸಂದರ್ಭಗಳಿಗೆ ತಕ್ಕಂತೆ ನಿರ್ಮಿತವಾದ ಆಶುಕವಿತೆಗಳಾಗಿವೆ. ಹಾಗಾಗಿ ಅವು ಎಷ್ಟು ಪ್ರಮಾಣದಲ್ಲಿ ರಚಿತವಾಗಿವೆ ಎನ್ನುವುದಕ್ಕೆ ಸ್ಪಷ್ಟರೂಪ ಸಿಗುವುದಿಲ್ಲ. ಆದರೂ ಸಹ ಸಂಶೋಧಕರು, ವಿದ್ವಾಂಸರು ಶ್ರಮವಹಿಸಿ ಲಿಖಿತ ಹರಿದಾಸ ಸಾಹಿತ್ಯವನ್ನು ಆಧರಿಸಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ೧೯೯೫ರಲ್ಲಿ ''ಸಮಗ್ರ ದಾಸಸಾಹಿತ್ಯ"ವನ್ನು ಜನಸಾಮಾನ್ಯರಿಗಾಗಿ ಪ್ರಕಟಿಸಿದರು. ೧೪೬ ದಾಸರ ೧೬೦೦೦ಕ್ಕಿಂತಲೂ ಮಿಗಿಲಾದ ಕೀರ್ತನೆ, ಉಗಾಭೋಗ, ಸುಳಾದಿ ಹಾಗೂ ಇತರ ಪ್ರಕಾರದ ಕೀರ್ತನ ಸಾಹಿತ್ಯವನ್ನೊಳಗೊಂಡ ೫೦ ಸಂಪುಟಗಳ ರಚನೆ. ಶ್ರೀ ದಿ. ಶ್ರೀನಿವಾಸ ಹಾವನೂರ ಮತ್ತು ಇತರ ಹರಿದಾಸ ವಿದ್ವಾಂಸರನ್ನು ಒಳಗೊಂಡ ಸಮಿತಿಯಿಂದ ಪ್ರಕಟವಾಯಿತು.

ಮೊದಲ ಮುದ್ರಣದ ಪ್ರತಿಗಳೆಲ್ಲ ಅತ್ಯಂತ ಜನಪ್ರಿಯವಾಗಿ ಅತಿ ಶೀಘ್ರದಲ್ಲಿ ಖರ್ಚಾಗಿ, ಜನತೆಯಿಂದ ಮರುಮುದ್ರಣಕ್ಕೆ ಬೇಡಿಕೆ ಬರುತ್ತಿತ್ತು. ಹಾಗಾಗಿ ೨೦೨೨ ರಲ್ಲಿ ಸರ್ಕಾರ ಮರುಮುದ್ರಣಕ್ಕೆ ನಿರ್ಧರಿಸಿತು. ವಚನ ಸಾಹಿತ್ಯ ಪಿತಾಮಹ ಡಾ. ಫ. ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಯಪುರ ಸಂಸ್ಥೆ ಮರುಮುದ್ರಣದ ಹೊಣೆ ಹೊತ್ತಿದೆ. ಹಿಂದೆ ಪ್ರಕಟವಾದ ೫೦ ಸಂಪುಟಗಳ ಯಥಾವತ್ತಾದ ಮರುಮುದ್ರಣದ ಜೊತೆಗೆ ಆ ವೇಳೆಗೆ ಅಪ್ರಕಟವಾದ ಎಂದರೆ ೫೦ ಸಂಪುಟಗಳಲ್ಲಿ ಸೇರಿರದ ಕೀರ್ತನ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಒಟ್ಟು ೬೫ ಸಂಪುಟಗಳಲ್ಲಿ ಪ್ರಕಟಿಸಲು ನಿರ್ಧರಿಸಿತು.

ಈ ನಿರ್ಧಾರದ ಅಂಗವಾಗಿ ಶ್ರೀ ವಿಜಯದಾಸರ ಸಮಗ್ರ ಕೀರ್ತನೆ ಮತ್ತು ಉಗಾಭೋಗಗಳನ್ನು ಅನಾಜಿ ಅವರು ಸಂಪಾದಿಸಿಕೊಟ್ಟಿದ್ದಾರೆ. ಮೊದಲ ಮುದ್ರಣದಲ್ಲಿ ೫೪೦ ಕೀರ್ತನೆಗಳನ್ನು ೭೭ ಉಗಾಭೋಗಗಳನ್ನು ಸಂಗ್ರಹಿಸಿ, ಸಂಪಾದಿಸಿ ಎರಡನೇ ಮುದ್ರಣಕ್ಕೆ (೨೦೨೬) ೧೫೧ ಕೀರ್ತನೆಗಳನ್ನು ೨೨ ಉಗಾಭೋಗಗಳನ್ನು ಸೇರಿಸಿ ಒಟ್ಟು ೬೯೧ ಕೀರ್ತನೆಗಳನ್ನು ೧೦೨ ಉಗಾಭೋಗಗಳನ್ನು ಸಿದ್ಧಪಡಿಸಿ ಕೊಟ್ಟಿದ್ದಾರೆ. ಶ್ರೀ ವಿಜಯದಾಸರ ದಾಸಸಾಹಿತ್ಯದ ಕೀರ್ತನ-ಉಗಾಭೋಗಗಳ ಬೃಹತ್ ಸಂಗ್ರಹಗಳಲ್ಲಿ ಇದೊಂದು ಗಮನಾರ್ಹ ಪ್ರಕಟನೆಯಾಗಿದೆ.

ಪ್ರೊ. ಜಿ. ಅಶ್ವತ್ಥನಾರಾಯಣ ಅವರು ದಾಸಸಾಹಿತ್ಯದ ಹಲವಾರು ಹರಿದಾಸರ ಕೀರ್ತನ ಸಾಹಿತ್ಯವನ್ನು ಸಂಪಾದಿಸಿ, ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಆ ಪೈಕಿ 'ಹೊಸಕೆರೆ ಚಿದಂಬರಯ್ಯನವರ ಸಮಗ್ರ ಕೀರ್ತನೆಗಳು', 'ಕೆಲ್ಲಂಗೆರೆ ತಿಮ್ಮಪ್ಪದಾಸರ ಕೀರ್ತನೆಗಳು' ಮತ್ತು 'ಪ್ರಸನ್ನ ಶ್ರೀನಿವಾಸದಾಸರ ಕೀರ್ತನೆಗಳು', '೫೦೦ ಶ್ರೀರಾಮನ ಕೀರ್ತನೆಗಳ ಸಂಗ್ರಹ' ಇತ್ಯಾದಿ ಹಲವಾರು ಕೀರ್ತನ ಸಾಹಿತ್ಯ ಸಂಗ್ರಹಗಳನ್ನು ಸಂಪಾದಿಸಿ, ಪರಿಷ್ಕರಿಸಿ ಕನ್ನಡಕ್ಕೆ ಕೊಟ್ಟಿದ್ದಾರೆ.

ಪ್ರಕೃತ ''ಶ್ರೀ ವಿಜಯದಾಸರ ಸಮಗ್ರ ಕೀರ್ತನೆಗಳು ಮತ್ತು ಉಗಾಭೋಗಗಳು'' ಗ್ರಂಥವನ್ನು ಕುರಿತು ಕೆಲವು ಮಾತುಗಳನ್ನು ಹೇಳುತ್ತಿದ್ದೇನೆ.

ಜನಪ್ರಿಯ ಹರಿದಾಸರಾದ ಪುರಂದರ, ಕನಕ, ವಿಜಯದಾಸರ ಕೀರ್ತನೆಗಳು ಜನಬಳಕೆಯಲ್ಲಿದ್ದು, ನಾನಾ ಪಾಠಾಂತರಗಳು ಕೀರ್ತನೆಗಳಲ್ಲಿ ಕಾಣಿಸಿಕೊಂಡಿವೆ. ಅವುಗಳಲ್ಲಿ ಸೂಕ್ತವಾದ ಪಾಠವನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಕೀರ್ತನೆಗಳ ಅರ್ಥಸ್ವಾರಸ್ಯ ತಿಳಿಯಲು ನೆರವಾಗುವಂತೆ ಕಠಿಣ ಶಬ್ದಾರ್ಥ, ಟಿಪ್ಪಣಿಗಳನ್ನು ಕೊಡಲಾಗಿದೆ.

ದಾಸಸಾಹಿತ್ಯದ ಸಮಕಾಲೀನ ಬದುಕನ್ನು ಒಳಗೊಂಡ ಸಾಹಿತ್ಯ. ದಾಸರ ಕಾಲದ ಎಷ್ಟೋ ಪದಗಳ ಅರ್ಥ ಇಂದು ತಿಳಿಯುತ್ತಿಲ್ಲ. ಅಂಥವುಗಳನ್ನು ಪ್ರಶ್ನಾರ್ಥಕ ಚಿಹ್ನೆಯಿಂದ ಗುರುತಿಸಿದ್ದಾರೆ. ಇದು ಸಂಪಾದಕರ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ. ಮುಂಡಿಗೆಗಳನ್ನು ಅರ್ಥೈಸುವುದು ಸುಲಭವಲ್ಲ. ಹಾಗಾಗಿ ಅವುಗಳ ಅರ್ಥವಿವರಣೆ ಭಿನ್ನವಾಗಿರುತ್ತದೆ. ಸರ್ವಸಮ್ಮತ ಸಂಗತಿಗಳನ್ನು ಆಧರಿಸಿ ಸರಳ ರೀತಿಯಲ್ಲಿ ಅರ್ಥವನ್ನು ನಿರೂಪಿಸಿದ್ದಾರೆ.

ಮಧ್ವ ಸಿದ್ಧಾಂತದ ಹಿನ್ನೆಲೆಯಲ್ಲಿ ತಾರತಮ್ಯ ವಿಷಯಾನುಸಾರ ಯತಿಕಕ್ಷೆ ಮತ್ತು ದಾಸಕಕ್ಷೆ ಪದ್ಧತಿಯಲ್ಲಿ ಕೀರ್ತನೆಗಳನ್ನು ಕೊಟ್ಟಿದ್ದಾರೆ. ಕೀರ್ತನೆಗಳನ್ನು ಗುರುತಿಸಲು ಶೀರ್ಷಿಕೆಗಳು ಮುಖ್ಯ. ಕೇವಲ ಕ್ರಮಸಂಖ್ಯೆಗಳನ್ನು ಕೊಡುವುದು ಸೂಕ್ತವಲ್ಲ. ಪರಿವಿಡಿಯಲ್ಲಿ ಕೀರ್ತನೆಗಳ ಮೊದಲ ಸಾಲನ್ನು ಶೀರ್ಷಿಕೆಯಾಗಿ ಪ್ರತಿ ಕೀರ್ತನೆಗೂ ಗುರುತಿಸಲಾಗಿದೆ. ಆದರೆ, ಕೀರ್ತನೆಯ ಮೇಲ್ಭಾಗದಲ್ಲಿ ಕ್ರಮಸಂಖ್ಯೆ ಮಾತ್ರ ಇದೆ. ಶೀರ್ಷಿಕೆ ಇಲ್ಲ. ಇನ್ನು ಕೆಲವರು ತಮ್ಮ ಪ್ರಕಟನೆಗಳಲ್ಲಿ ತಾಳ-ರಾಗಗಳ ಹೆಸರನ್ನು ಕೊಟ್ಟಿದ್ದಾರೆ. ನಿಜಕ್ಕೂ ಇದು ಉಪಯುಕ್ತ ಮಾಹಿತಿಯಾಗಿದೆ. ಸಂಗೀತಗಾರರಿಗೆ ಕೇವಲ ಕೀರ್ತನೆಗಳನ್ನು ಮಾತ್ರ ಕೊಟ್ಟರೆ, ಹಾಡುವವರು ವಿದ್ವಾಂಸರನ್ನು ಕೇಳಿ ರಾಗಗಳನ್ನು ಅಳವಡಿಸಿಕೊಳ್ಳಬೇಕಾಗುವ ಶ್ರಮ ತಪ್ಪುತ್ತದೆ.

ಸಾಮಾನ್ಯವಾಗಿ ಶಬ್ದಾರ್ಥಗಳ ಟಿಪ್ಪಣಿಗಳನ್ನು ಅನುಬಂಧವಾಗಿ ಗ್ರಂಥದ ಕೊನೆಯಲ್ಲಿ ಕೊಟ್ಟಿರುತ್ತಾರೆ. ಆದರೆ, ಇದು ಹೆಚ್ಚು ಉಪಯುಕ್ತವಲ್ಲ. ಅರ್ಥ ವಿವರಣೆಗಾಗಿ ಪ್ರತಿಬಾರಿಯೂ ಪುಟ

ತಿರುವಬೇಕಾಗುತ್ತದೆ. ಎಷ್ಟೋ ಕಡೆ ಶಬ್ದಾರ್ಥಗಳಿಗೆ ವಿವರಣೆ ಇರುವುದಿಲ್ಲ. ಅದು ಅನುಬಂಧ ನೋಡಿದಾಗ ತಿಳಿಯುತ್ತದೆ. ಆದಕಾರಣ ಓದುಗರಿಗೆ ಉಪಯುಕ್ತವಾಗುವಂತೆ ಆಯಾ ಕೀರ್ತನೆಗಳ ಅಡಿಯಲ್ಲೇ ಶಬ್ದಾರ್ಥ-ಟಿಪ್ಪಣಿ ನೀಡುವುದು ಒಳ್ಳೆಯ ಪದ್ಧತಿ. ಮುಂದಿನ ಮುದ್ರಣದಲ್ಲಿ ಈ ಅಂಶವನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ.

ಇನ್ನು ಉಗಾಭೋಗಗಳನ್ನು ಕುರಿತು ಒಂದು ಮಾತನ್ನು ಹೇಳಬೇಕು. ಹರಿದಾಸ ಸಾಹಿತ್ಯದಲ್ಲಿ ಕೀರ್ತನೆ-ಸುಳಾದಿ-ಉಗಾಭೋಗಗಳೆಂದು ಮೂರು ಪ್ರಧಾನ ಪ್ರಭೇದಗಳನ್ನು ಕಾಣಬಹುದು. ವಿಜಯದಾಸರು ಕೀರ್ತನೆಗಳಿಗಿಂತ ಹೆಚ್ಚಾಗಿ ಸುಳಾದಿಗಳನ್ನು ರಚಿಸಿ ''ಸುಳಾದಿದಾಸ''ರೆಂದೇ ಪ್ರಖ್ಯಾತರಾಗಿದ್ದಾರೆ. ಗಾತ್ರದಲ್ಲಿ ಸುಳಾದಿಗಳಿಗಿಂತ ಕೀರ್ತನೆ, ಕೀರ್ತನೆಗಳಿಗಿಂತ ಉಗಾಭೋಗ ಚಿಕ್ಕದು. ದಾಸಸಾಹಿತ್ಯದಲ್ಲಿ ಸುಳಾದಿ, ಕೀರ್ತನೆಗಳಿಗಿಂತಲೂ ಉಗಾಭೋಗಗಳ ಸಂಖ್ಯೆ ಕಡಿಮೆ. ಉಗಾಭೋಗಗಳನ್ನು ಗೇಯ ಪ್ರಕಾರಕ್ಕೂ, ಕೀರ್ತನೆ-ಸುಳಾದಿಗಳನ್ನು ಛಂದೋಬದ್ಧ ಹಾಡುಗಬ್ಬಗಳ ಪ್ರಕಾರಕ್ಕೂ ಸೇರಿಸುವುದುಂಟು. ವಿಜಯದಾಸರ ಉಗಾಭೋಗಗಳು ಕಡಿಮೆ ಸಂಖ್ಯೆಯಲ್ಲಿದ್ದರೂ ವೈವಿಧ್ಯಮಯವಾಗಿವೆ. ಅವರ ಉಗಾಭೋಗಗಳಲ್ಲಿ ಸಾಮಾಜಿಕ, ಐತಿಹಾಸಿಕ ದೃಷ್ಟಾಂತಗಳಿವೆ. ಭಕ್ತನ ಜೀವನದ ಘಟನೆಗಳ ನಿರೂಪಣೆ ಇದೆ. ಸಂಖ್ಯಾವಾಚಕ ಮುಂಡಿಗೆಗಳಿವೆ. ಸ್ಮರಣ ಭಕ್ತಿಯ ಉಗಾಭೋಗಗಳೂ ಲೋಕನೀತಿ ಹೇಳುವಂಥ ಉಗಾಭೋಗಗಳೂ ಇವೆ. ವಿಜಯದಾಸರು ರಚಿಸಿರುವ ಉಗಾಭೋಗಗಳಲ್ಲಿ ಕೆಲವಾದರೂ ಕನ್ನಡದ ಶ್ರೇಷ್ಠ ಉಗಾಭೋಗಗಳ ಸಾಲಿಗೆ ಸೇರುತ್ತವೆ ಎನ್ನಬಹುದು. ಸಂಪಾದಕರಾದ ಶ್ರೀ ಅಶ್ವತ್ಥನಾರಾಯಣ ಅವರು ೧೦೨ ಉಗಾಭೋಗಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಇದೇನು ಕಡಿಮೆ ಕೊಡುಗೆ ಏನಲ್ಲ. ಉಗಾಭೋಗಗಳನ್ನು ಕುರಿತು ವಿಸ್ತಾರವಾದ ಪೀಠಿಕೆಯನ್ನು ಕೊಟ್ಟಿರುವುದು ಗಮನಾರ್ಹವಾಗಿದೆ.

ಪ್ರಸಿದ್ಧ ದಾಸಸಾಹಿತಿಗಳಾದ ದಿ. ಪ್ರೊ. ಕೆ. ಗೋಕುಲನಾಥ ಅವರು ಸುಳಾದಿಗಳನ್ನು ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಕೀರ್ತನೆ, ಉಗಾಭೋಗಗಳನ್ನು, ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಿಸಿ, ಸಂಪಾದಿಸಿ ಕೊಟ್ಟು ಕನ್ನಡ ದಾಸಸಾಹಿತ್ಯಕ್ಕೆ ಶ್ರೀ ವಿಜಯದಾಸರ ಕೊಡುಗೆ ಪುರಂದರದಾಸರ ನಂತರ ಗಣನೀಯ ಪ್ರಮಾಣದ್ದೆಂದು ಈ ಮೂಲಕ ತೋರಿಸಿಕೊಟ್ಟಿದ್ದಾರೆ ಎಂದು ಹೇಳಲಡ್ಡಿಯಿಲ್ಲ.

*****

ಕನ್ನಡಕ್ಕೆ ಅಪರೂಪದ ಕೃತಿ ಬರಲು ಕಾರಣರಾಗಿರುವ ಅನಾಜಿ (ಜೈಮುನಿರಾವ್ ಜೀವನಚರಿತ್ರೆ)

- ರಾ.ನಂ. ಚಂದ್ರಶೇಖರ

ಕನ್ನಡ ಪ್ರಾಧ್ಯಾಪಕರಾಗಿದ್ದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಸಂಶೋಧಕ, ಸಾಹಿತಿ, ಪ್ರಚಂಡ ವಾಗ್ಮಿ, ಕನ್ನಡ ಪರಿಚಾರಕ ಒಂದೇ ಮಾತನಲ್ಲಿ ಹೇಳುವುದಾದರೆ, ಸಾಂಸ್ಕೃತಿಕ ರಂಗದ 'ಆಲ್ ರೌಂಡರ್'. ಹೀಗೆ ಹಲವು ಕ್ಷೇತ್ರಗಳಲ್ಲಿ ಕೈಯಾಡಿಸಿರುವ ಅನಾಜಿ ವ್ಯಕ್ತಿತ್ವವನ್ನು ಒಂದು ಚೌಕಟ್ಟಿಗೆ ನಿಲುಕುವುದಲ್ಲ. ಕನ್ನಡ ಕಾರ್ಯಕರ್ತನಾಗಿ ಅವರ ಕೆಲಸಗಳನ್ನು ದೂರದಿಂದ ಗಮನಿಸಿದ್ದೇನೆ. ಆದರೆ, ಅವರೊಡನೆ ಕೆಲಸ ಮಾಡಿಲ್ಲ. ಹಾಗಂದ ಮಾತ್ರಕ್ಕೆ ಅವರು ಮಾಡಿರುವ ಕನ್ನಡ ಕೆಲಸಗಳ ಪರಿಚಯವಿಲ್ಲ ಎನ್ನಲಾಗದು.

ಕನ್ನಡಗರ ಕೋಟೆ ಎಂದು ಕನ್ನಡಾಭಿಮಾನಿಗಳು ಕರೆಯುತ್ತಿದ್ದ ಚಾಮರಾಜಪೇಟೆಯಲ್ಲಿ ಬಾಲ್ಯದಿಂದ ಬೆಳೆದ ಅಶ್ವತ್ಥನಾರಾಯಣರಿಗೆ ಬಾಲಕರಾಗಿದ್ದಾಗಲೆ ಬಡಾವಣೆಯಲ್ಲಿದ್ದ ಹಿರಿಯ ಸಾಹಿತಿಗಳಾದ ವಿ.ಸೀ, ಎಂ.ಆರ್.ಶ್ರೀ ಪರಿಚಯವಿತ್ತಂತೆ. ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದ ಬಗ್ಗೆ ಅವರೊಡನೆ ಮಾತನಾಡಿದರೆ ತಿಳಿಯುತ್ತದೆ. ವಿದ್ಯಾರ್ಥಿಯಾಗಿದ್ದಾಗಲೇ ಸರ್ಕ್ಯುಲೇಟಿಂಗ್ ಲೈಬ್ರರಿ ನಡೆಸಿ ಕನ್ನಡ ಪರಿಚಾರಿಕೆ ಮಾಡಿದವರು. ಗ್ರಂಥಾಲಯದಲ್ಲಿದ್ದ ಎಲ್ಲ ಪುಸ್ತಕಗಳನ್ನೂ ಓದಿ ಅಶ್ವತ್ಥನಾರಾಯಣ ಅವರು ಸಾಹಿತ್ಯಾಸಕ್ತರ ಗಮನ ಸೆಳೆದಿದ್ದರು. ಅ.ನ.ಕೃ ನೇತೃತ್ವದಲ್ಲಿ ಆರಂಭವಾದ ಕನ್ನಡ ಚಳವಳಿಯ ಕಾಲದಲ್ಲಿ ಕಾರ್ಯಕರ್ತರಾಗಿದ್ದರು ಎಂದು ನಮ್ಮೊಡನೆ ಕನ್ನಡ ಚಳವಳಿಯಲ್ಲಿ ಸಕ್ರಿಯರಾಗಿದ್ದ ಬೆ.ರ. ರಂಗರಾಜು ಹೇಳುತ್ತಿದ್ದರು. ಅನಕೃ ಅವರಿಂದ ಸ್ಫೂರ್ತಿ ಪಡೆದು ಕನ್ನಡ ಕಾರ್ಯಕರ್ತರು ತಮ್ಮ ಹೆಸರನ್ನು ಹಾಗೇ ಬದಲಿಸಿಕೊಳ್ಳುವ ಪ್ರವೃತ್ತಿ ೧೯೫೦-೭೦ರ ದಶಕದಲ್ಲಿತ್ತು. ಅಂತಹ ನೂರಾರು ಹೆಸರು ಹೇಳಬಹುದು. ಹಾಗೆ ಪ್ರಭಾವಿತರಾದವರಲ್ಲಿ ನಾನು ಒಬ್ಬ. ಆದರೆ, ಅನಕೃ ಅವರ ನೇರ ಸಂಪರ್ಕದಲ್ಲಿದ್ದ ಜಿ. ಅಶ್ವತ್ಥನಾರಾಯಣ ತಮ್ಮ ಹೆಸರಿನ ಅಕ್ಷರಗಳನ್ನು ಮೊದಲು ಬಳಸಿ, ನಂತರ ತಮ್ಮ ಇನಿಶಿಯಲ್ನ ಅಂತ್ಯದಲ್ಲಿ ಇಂಗ್ಲಿಷ್ ಅಕ್ಷರವನ್ನು ಸೇರಿಸಿ 'ಅನಾಜಿ' ಆಗಿ ಕನ್ನಡ ಕಾರ್ಯಕರ್ತರ ಗಮನ ಸೆಳೆದು ವಿಭಿನ್ನರಾಗಿದ್ದರು ಎಂದು ಬೆ.ರ. ಹೇಳುತ್ತಿದ್ದರು. ನಾನು ಬಿ.ಶಿವಮೂರ್ತಿ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದ ಕಾಲದಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಪರ್ಕದಲ್ಲಿದ್ದೇನೆ. ಅನಾಜಿ ಆ ಕಾಲಕ್ಕೆ ಸಕ್ರಿಯರಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ವಲಯದಲ್ಲಿ ಚಿರಪರಿಚಿತರಾಗಿದ್ದರು. ಎಷ್ಟೋ ಕನ್ನಡಾಭಿಮಾನಿಗಳು ಇವರ ಪ್ರಾಸಬದ್ಧ ವಾಗ್ಝರಿಗೆ ಮಾರು ಹೋಗಿದ್ದರು. ಒಮ್ಮೆ ಅನಾಜಿ ಮಧುರ ಚೆನ್ನರ ಬಗ್ಗೆ ಮಾತನಾಡುವಾಗ 'ಮಧುರ ಚೆನ್ನರ ಅನ್ವರ್ಥನಾಮದಂತೆ ಅವರ ಬದುಕು ಮಧುರ, ಅವರ ಸಾಹಿತ್ಯ/ಕಾವ್ಯ ಚೆನ್ನ' ಎಂದು ಹೇಳಿದ್ದು

ನನ್ನ ಸ್ಮೃತಿ ಪಟಲದಲ್ಲಿ ಇಂದಿಗೂ ಉಳಿದಿದೆ. ಇಂತಹ ಪ್ರಾಸಬದ್ಧ ಮಾತುಗಳಿಂದ ಪ್ರಭಾವಿತರಾಗಿ ಅನುಕರಿಸುತ್ತಿದ್ದವರನ್ನು ನಾನು ಕಂಡಿದ್ದೇನೆ.

ಅನಾಜಿ ಅವರು ಪರಿಷತ್ತಿನ ಕಾರ್ಯದರ್ಶಿಯಾಗಿದ್ದಾಗಿನಿಂದ ನನಗೆ ಪರಿಚಯ. ಆದರೆ ಹೆಚ್ಚು ಮಾತನಾಡಿಸುವ ಸಂದರ್ಭ ಬಂದಿರಲಿಲ್ಲ. ಸೈಕಲ್ ಸುಬ್ಬರಾವ್ ಎಂದು ಪ್ರಸಿದ್ಧರಾಗಿದ್ದ ೧೯೬೨ರಲ್ಲಿ ಅ.ನ.ಕೃ. ಮತ್ತು ಮ. ರಾಮಮೂರ್ತಿ ನೇತೃತ್ವದ ಆರಂಭವಾದ 'ಕರ್ನಾಟಕ ಸಂಯುಕ್ತ ರಂಗ'ದ ಸಹ ಕಾರ್ಯದರ್ಶಿಯಾಗಿದ್ದ ಕನ್ನಡ ಸಾಹಿತ್ಯ ಕುಟೀರದ ಎಂ.ವಿ ಸುಬ್ಬರಾವ್ ಇವರು, ಪ್ರೊ. ಅಶ್ವತ್ಥನಾರಾಯಣ ಹಳೆಯ ಕನ್ನಡ ಕಾರ್ಯಕರ್ತರಿಗೆ ಅನಾಜಿ, ಅನ.ಕೃ. ಅವರು ಮಾಡಿದ ಚಳವಳಿಗಳಲ್ಲಿ ಪಾಲ್ಗೊಂಡವರು. ಹಲವು ಹಿರಿಯರನ್ನು ಹತ್ತಿರದಿಂದ ಬಲ್ಲವರು ಎಂದು ಪ್ರೊ. ಜಿ. ಅಶ್ವತ್ಥನಾರಾಯಣ ಅವರನ್ನು ಪರಿಚಯಿಸಿದರು. ಅಂದು ಇವರಿಬ್ಬರು ಅ.ನ.ಕೃ. ಅವರ ಕನ್ನಡ ಚಳವಳಿ, ಹಿರಿಯ ಸಾಹಿತಿಗಳ ಒಡನಾಟ ಹೀಗೆ ಹಲವು ವಿಚಾರಗಳ ಬಗ್ಗೆ ಆಡಿದ ಮಾತುಗಳಿಂದ ಸುಬ್ಬರಾಯರಲ್ಲಿ ಅರವತ್ತರ ದಶಕದ ಕನ್ನಡ ಕೆಲಸಗಳ ಮಾಹಿತಿ ಇರುವುದು ಸ್ಪಷ್ಟವಾಯಿತು. ಆ ಹೊತ್ತಿಗಾಗಲೇ ಕನ್ನಡ ಚಳವಳಿಯ ಇತಿಹಾಸ ಬರೆಯುವ ಸಿದ್ಧತೆಯಲ್ಲಿದ್ದ ನಾನು, ಸುಬ್ಬರಾವ್ ಅವರಿಗೆ ವಿಷಯ ತಿಳಿಸಿ ಕನ್ನಡ ಹೋರಾಟಗಳ ದಾಖಲೆ ಕೊಡುವಂತೆ ಕೋರಿದೆ. ಸುಬ್ಬರಾಯರು ತಮ್ಮ ಮನೆ ವಿಳಾಸ ನೀಡಿ ಮನೆಗೆ ಬನ್ನಿ ಎಂದರು. ಮನೆಗ ಹೋದಾಗ ಅವರು ಮಾಡಿದ ಕೆಲಸಗಳನ್ನು ವಿವರಿಸಿ, ಊಟ ಹಾಕಿ, ತಮ್ಮಲ್ಲಿರುವ ದಾಖಲೆ ತೋರಿಸಿದರೆ ಹೊರತು ಕೊಡಲಿಲ್ಲ. ಅದರಿಂದ ಕನ್ನಡಕ್ಕೆ ಸಂಬಂಧಿಸಿದ ಕೆಲವು ಮಹತ್ವದ ಘಟನೆಗಳು ದಾಖಲಾಗಲಿಲ್ಲ. ಅವರೊಡನೆಯೇ ಆ ದಾಖಲೆಗಳು ಕಣ್ಮರೆಯಾದವು.

ಆದಕ್ಕೆ ವಿರುದ್ಧವಾಗಿ ಜಿ. ಅಶ್ವತ್ಥನಾರಾಯಣ ಯಾರೇ ಹೊಸಬರು ಸಾಹಿತ್ಯದ ಕೆಲಸ ಮಾಡುತ್ತಿದ್ದಾರೆಂದರೆ ತಮ್ಮ ನೆನಪಿನ ಆಗರದಲ್ಲಿರುವ ಎಲ್ಲ ಮಾಹಿತಿಯನ್ನು ನೀಡುತ್ತಾರೆ. ಹೆಚ್ಚಿನ ಮಾಹಿತಿ ಎಲ್ಲಿ ಸಿಗುತ್ತದೆ ಎಂದು ತಿಳಿಸುತ್ತಾರೆ. ಯಾರೇ ಅಗಲಿ ಅವರನ್ನು ಯಾವುದೇ ವಿಷಯವನ್ನು ಕುರಿತು ಕೇಳಿದರೆ ತಮಗೆ ತಿಳಿದಿರುವುದನ್ನು ಹಂಚಿಕೊಳ್ಳುತ್ತಾರೆ. ಇಂತಹ ವ್ಯಕ್ತಿಗಳ ಸಹಜವಾಗಿ ಇಷ್ಟವಾಗುತ್ತಾರೆ. ಇವರು ಇನ್ನಷ್ಟು ನಿಕಟವಾದದ್ದು ಅವರ ಮನೆಯ ಸಮೀಪವಿದ್ದ ನನ್ನ ದೊಡ್ಡ ಹಿತೈಷಿಯಾಗಿದ್ದ, ಅಪರೂಪದ ಲೇಖಕ, ಕನ್ನಡ ಕಟ್ಟಾಳು ದಿವಂಗತ ಎಂ.ಕೆ. ಗೋಪಿನಾಥ್ ಅವರಿಂದ. ಅಶ್ವತ್ಥನಾರಾಯಣ ಅವರ ಗ್ರಂಥ ಸಂಗ್ರಹ ನೋಡಿ ಮೂಕ ವಿಸ್ಮಿತನಾಗಿದ್ದೆ. ಹತ್ತಾರು ಆವೃತ್ತಿ ಮಹಾಭಾರತ, ರಾಮಾಯಣಗಳೇ ಇವೆ. ಕನ್ನಡದ ವಿಚಾರ ಬಂದಾಗ ನೀವು ನೆನಪಾಗುತ್ತೀರಾ ಎಂದು ಆಗಾಗ ಹೇಳುತ್ತಾರೆ. ಅದು ಅವರ ದೊಡ್ಡತನ. ಸುಮಾರು ೨೦ ವರ್ಷಗಳ ಹಿಂದೆ ಕರ್ಮವೀರದಲ್ಲಿ ನಾನು ಬರೆದ 'ಕನ್ನಡ ವೀರ ಸೇನಾನಿ ಮ. ರಾಮಮೂರ್ತಿ' ಲೇಖನ ಪ್ರಕಟವಾಗಿತ್ತು. ಲೇಖನ ಪ್ರಕಟವಾದ ನಂತರ ಅಶ್ವತ್ಥನಾರಾಯಣ, ರಾಮಮೂರ್ತಿ ಬಗ್ಗೆ ನಿಮ್ಮ ಲೇಖನ ಗಮನಿಸಿದೆ. ಚೆನ್ನಾಗಿ ಬರೆದಿದ್ದೀರಿ ಎಂದರು. ನಮ್ಮ ಮನೆಗೆ ಸಮೀಪವೇ ಇದ್ದರು. ಎಂದು ರಾಮಮೂರ್ತಿಯವರ ದಿನಚರಿ, ಕನ್ನಡ ಕಾರ್ಯಕರ್ತರನ್ನು ಹೇಗೆ ಕಾಣುತ್ತಿದ್ದರು ಮುಂತಾದ ಸಂಗತಿಗಳನ್ನು ಗಮನಕ್ಕೆ ತಂದು ಮುಂದೆ ಬರೆಯುವಾಗ ಇದನ್ನು ಸೇರಿಸಿ ಎಂದರು. ಹೀಗೆ ಒಮ್ಮೆ ವಿಶ್ವೇಶ್ವರಪುರದ ಸಜ್ಜನರಾವ್ ರಾವ್ ವೃತ್ತದಲ್ಲಿ ಸಿಕ್ಕಾಗ ಸಜ್ಜನರಾವ್ ಅವರ ಸಮಾಜಮುಖಿ ಕೆಲಸವನ್ನು ಹೇಳಿ ಅವರು ಸುಬ್ರಹ್ಮಣ್ಯ ದೇವಸ್ಥಾನ ಕಟ್ಟಿಸಿದ್ದು, ದೇವಸ್ಥಾನದ ಬಾಗಿಲನ್ನು ಮಾಡಿದವರು ಅಗ್ರಹಾರ

ದಾಸರಹಳ್ಳಿಯ ಜೈಮುನಿ ರಾವ್ ವೃತ್ತ ಇದೆಯಲ್ಲ ಆ ಜೈಮುನಿ ರಾವ್ ಎಂದು ತಿಳಿಸಿದರು. ಕೆಲವು ವರ್ಷಗಳ ನಂತರ ಜೈಮುನಿರಾವ್ ಬಗ್ಗೆ ಇವರು ಮಾರ್ಗದರ್ಶನ ಮಾಡಿ ಪುಸ್ತಕ ಬರೆಸಿದರು. ನನಗೆ ಆ ಪುಸ್ತಕವನ್ನು ಕೊಟ್ಟು ನಿಮ್ಮ ಅಭಿಪ್ರಾಯ ತಿಳಿಸಿ. ಯಾವುದಾದರೂ ಪತ್ರಿಕೆಯಲ್ಲಿ ಬಂದರೆ, ಕೆಲಸ ಮಾಡಿದವರಿಗೆ ಉತ್ಸಾಹ ಹೆಚ್ಚುತ್ತದೆ ಎಂದರು. ನಾನು ಆ ಪುಸ್ತಕವನ್ನು ಅರ್ಧ ಓದಿ ಎಲ್ಲಿಯೋ ಕಳೆದುಕೊಂಡೆ. ಅಶ್ವತ್ಥನಾರಾಯಣ ಇಂತಹ ಅಪರೂಪದ ಹಲವು ಪುಸ್ತಕಗಳು ಬರಲು ಕಾರಣರಾಗಿದ್ದಾರೆ. ವೈರುಧ್ಯವೆಂದರೆ ಅವರು ಮಾತ್ರ ಹೆಚ್ಚು ಬರೆದಿಲ್ಲ.

ಪ್ರೊ. ಅಶ್ವತ್ಥನಾರಾಯಣ ಅವರ ಸಾಮರ್ಥ್ಯದ ಬಗ್ಗೆ ತಕ್ಷಣಕ್ಕೆ ನೆನಪಿಗೆ ಬಂದ ಒಂದು ಘಟನೆ ಇಲ್ಲ ಉಲ್ಲೇಖಿಸಬೇಕು. ೯೦ರ ದಶಕದಲ್ಲಿ ಮಂಡ್ಯದಲ್ಲಿ ಸಾಹಿತ್ಯ ಸಮ್ಮೇಳನ ನಡೆಯಿತು. ಚದುರಂಗ ಸಮ್ಮೇಳನದ ಅಧ್ಯಕ್ಷರಾಗಿದ್ದರು. ನಾನು ಪರಿಷತ್ತಿನ ಸಂಚಾಲಕನಾಗಿದ್ದೆ. ಸಾಹಿತ್ಯ ಗೋಷ್ಠಿಯಲ್ಲಿ ಪಾಲ್ಗೊಳ್ಳಬೇಕಿದ್ದ ಇಬ್ಬರು ಉಪನ್ಯಾಸಕರು ಬಂದಿರಲಿಲ್ಲ. ಸಂಘಟಕರಿಗೆ ಏನು ಮಾಡುವುದು ಎಂಬ ಸಂದಿಗ್ಧ. ಪರಿಷತ್ತಿನ ಅಧ್ಯಕ್ಷರಾಗಿದ್ದ ಗೊ.ರು. ಚನ್ನಬಸಪ್ಪನವನರು 'ಪ್ರೊ. ಜಿ. ಅಶ್ವತ್ಥನಾರಾಯಣ ಸಮ್ಮೇಳನಕ್ಕೆ ಬಂದಿದ್ದಾರೆ ಅವರನ್ನು ಕಂಡು ವಿಷಯ ತಿಳಿಸಿ ವಿಷಯ ಮಂಡಿಸಲು ಮನವಿ ಮಾಡಿ' ಎಂದರು. ನಾನು ಅಶ್ವತ್ಥನಾರಾಯಣ ಅವರನ್ನು ಕಂಡು ನೇರವಾಗಿ ಪರಿಸ್ಥಿತಿ ವಿವರಿಸಿ ಮನವಿ ಮಾಡಿದೆ. ಮನವಿಗೆ ಸ್ಪಂದಿಸಿ ಗೋಷ್ಠಿಯಲ್ಲಿ ಅದ್ಭುತವಾಗಿ ವಿಷಯ ಮಂಡಿಸಿದರು. ಇವರ ಮಾತುಕೇಳಿ ಮಾತನಾಡಬೇಕಿದ್ದವರು ಬರದಿದ್ದುದು ಒಳ್ಳೆಯದಾಯಿತು ಎಂದವರು ಹಲವರು. ಇವರು ಹಲವು ನೆಲೆಯಲ್ಲಿ ಕನ್ನಡ ಕೆಲಸ ಮಾಡಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆ ಕನ್ನಡ ಆಡಳಿತ ಭಾಷೆ ಬಗ್ಗೆ ನಡೆಸಿದ ಶಿಬಿರಗಳ ನಿರ್ದೇಶಕರಾಗಿ, ಐ.ಎ.ಎಸ್., ಕೆ.ಎ.ಎಸ್. ತರಗತಿಗಳಿಗೆ ಕನ್ನಡ ಮಾರ್ಗದರ್ಶಕರಾಗಿದ್ದಾರೆ. ಕನ್ನಡ ಪರ ಆದೇಶಗಳನ್ನು ಸಂಕಲಿಸಿದ್ದಾರೆ. ಆದರೆ, ಗೋಕಾಕ್ ಚಳವಳಿ ಮತ್ತು ಆನಂತರ ನಡೆದ ಯಾವ ಚಳವಳಿಯಲ್ಲೂ ಇವರು ಪಾಲ್ಗೊಂಡಿಲ್ಲ. ನಾನು ಇವರೊಡನೆ ಒಂದೆರಡು ಸಂದರ್ಭಗಳಲ್ಲಿ ವೇದಿಕೆ ಹಂಚಿಕೊಂಡಿರುವುದು, ರೇಡಿಯೋ ಚರ್ಚೆಯಲ್ಲಿ ಪಾಲ್ಗೊಂಡಿದ್ದು ಬಿಟ್ಟರೆ ಹೆಚ್ಚಿನ ಮಟ್ಟದಲ್ಲಿ ತೊಡಗಿಕೊಳ್ಳಲು ಆಗಿಲ್ಲ. ನಾನು ಇವರಿಂದ ಯಾವ ಮಾಹಿತಿಯನ್ನು ಪಡೆದಿಲ್ಲ. ಆದರೆ, ಇವರು ರಚಿಸಿರುವ 'ಕರಡಚ್ಚು ತಿದ್ದುವಿಕೆ ಮತ್ತು ಕನ್ನಡ ಭಾಷೆ' ಎಂಬ ಪುಸ್ತಕವನ್ನು ಓದಿ ಉಪಕೃತನಾಗಿದ್ದೇನೆ. ಅಶ್ವತ್ಥನಾರಾಯಣ ಅವರಿಗೆ ಎಲ್ಲರಿಗೂ ತಿಳಿದಿರುವಂತೆ ಅಗಾಧ ನೆನಪಿನ ಶಕ್ತಿಯಿದೆ, ಕನ್ನಡ ಸಾಂಸ್ಕೃತಿಕ ಲೋಕದ ದಿಗ್ಗಜರ ಪರಿಚಯ ಭಾಗ್ಯವೂ ಇತ್ತು. ಇವರ ಒಡನಾಟ, ಅನುಭವಗಳನ್ನು ದಾಖಲಿಸುವ ಕೆಲಸವಾದರೆ 'ಕನ್ನಡ ಸಾಂಸ್ಕೃತಿಕ ಇತಿಹಾಸ'ಕ್ಕೆ ದೊಡ್ಡ ಕೊಡುಗೆಯಾಗಬಲ್ಲದು. ಮಾತು ಬರಹದ ಶತ್ರು ಎಂದು ಹೇಳುತ್ತಾರೆ. ಪ್ರೊ. ಅಶ್ವತ್ಥನಾರಾಯಣ ಅವರ ವಿಚಾರದಲ್ಲಿ ಅದ ನಿಜ. ಅದನ್ನು ಮನಗಂಡು ಯಾರಾದರೂ ಅವರ ಅನುಭವವನ್ನು ದಾಖಲಿಸುವ ಕೆಲಸ ಮಾಡಲು ಈ ಅಭಿನಂದನ ಕಾರ್ಯ ನಾಂದಿಯಾಗಲಿ ಎಂದು ಆಶಿಸುತ್ತೇನೆ.

******

ಗಿಡಮರಬಳ್ಳಿಗಳ ನೀತಿಕಥೆಗಳು

ಆರ್. ವತ್ಸಲ
ಚರವಾಣಿ : ೮೭೯೨೬೯೫೪೫೮

ಮಕ್ಕಳ ಸಾಹಿತ್ಯವು ಒಂದು ಭಾಷೆಯ ಭವಿಷ್ಯದ ಬುನಾದಿ. ಕನ್ನಡದಲ್ಲಿ ಪಂಜೆ ಮಂಗೇಶರಾಯರು, ಜಿ.ಪಿ. ರಾಜರತ್ನಂ, ಕುವೆಂಪು ಅಂತಹ ದಿಗ್ಗಜರಿಂದ ಆರಂಭವಾದ ಮಕ್ಕಳ ಸಾಹಿತ್ಯವು ಇಂದು ತಂತ್ರಜ್ಞಾನ ಮತ್ತು ಬದಲಾದ ಸಾಮಾಜಿಕ ಸನ್ನಿವೇಶಕ್ಕೆ ತಕ್ಕಂತೆ ಹೊಸ ರೂಪವನ್ನು ಪಡೆದುಕೊಳ್ಳುತ್ತಲೇ ಬಂದಿದೆ. ಕೇವಲ ಉಪದೇಶ ನೀಡುವುದಕ್ಕಿಂತ ಹೆಚ್ಚಾಗಿ, ಮಕ್ಕಳ ಕುತೂಹಲವನ್ನು ಕೆರಳಿಸುವ ಮತ್ತು ಅವರ ವ್ಯಕ್ತಿತ್ವವನ್ನು ರೂಪಿಸುವಂತಹ ಕತೆಗಳನ್ನು ಹೇಳುವುದು ಬಹಳ ಮುಖ್ಯವಾದುದು.

ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಕಥನ ಸಾಹಿತ್ಯಕ್ಕೆ ಅತ್ಯಂತ ಶ್ರೀಮಂತವಾದ ಮತ್ತು ಸುದೀರ್ಘವಾದ ಪರಂಪರೆಯೇ ಇದೆ. ಮಕ್ಕಳ ಮನಸ್ಸನ್ನು ಅರಿತು, ಅವರಿಗೆ ಮೌಲ್ಯಗಳನ್ನು ಮತ್ತು ಮನರಂಜನೆಯನ್ನು ನೀಡುವ ಉದ್ದೇಶದಿಂದ ಈ ಸಾಹಿತ್ಯ ಬೆಳೆದು ಬಂದಿದೆ. ಲಿಖಿತ ಸಾಹಿತ್ಯ ಆರಂಭವಾಗುವ ಮೊದಲೇ ಅಜ್ಜಿ ಹೇಳುವ ಕಥೆಗಳು, ಪ್ರಾಣಿ-ಪಕ್ಷಿಗಳ ಕಥೆಗಳು ಮತ್ತು ಜನಪದ ಕಥೆಗಳ ಮೂಲಕ ಮಕ್ಕಳ ಸಾಹಿತ್ಯ ಜೀವಂತವಾಗಿತ್ತು. 'ಪಂಚತಂತ್ರ' ಮತ್ತು 'ಜಾತಕ ಕಥೆಗಳು' ಈ ಪರಂಪರೆಯ ಬೆನ್ನೆಲುಬಾಗಿವೆ. ಇಲ್ಲಿ ಪ್ರಾಣಿಗಳು ಮನುಷ್ಯರಂತೆ ಮಾತನಾಡುವುದು ಮಕ್ಕಳ ಕಲ್ಪನಾ ಲೋಕವನ್ನು ವಿಸ್ತರಿಸಿತು.

ಹಿಂದೆ ಮಕ್ಕಳ ಸಾಹಿತ್ಯವೆಂದರೆ ಪ್ರಾಣಿ-ಪಕ್ಷಿಗಳ ಕಥೆಗಳು ಅಥವಾ ಪುರಾಣದ ಕಥೆಗಳೇ ಹೆಚ್ಚಾಗಿದ್ದವು. ಆದರೆ ಇಂದು ವಿಜ್ಞಾನ ಮತ್ತು ಪರಿಸರ, ಬಾಹ್ಯಾಕಾಶ, ಪರಿಸರ ಸಂರಕ್ಷಣೆ ಮತ್ತು ಹವಾಮಾನ ಬದಲಾವಣೆಯಂತಹ ವಿಷಯಗಳು ಕಥೆಗಳ ರೂಪದಲ್ಲಿ ಬರುತ್ತಿವೆ. ಕತೆಗಳನ್ನು ಯಾವ ಬಗೆಯಲ್ಲಿ ಹೆಣೆದರೆ ಪರಿಣಾಮಕಾರಿಯಾಗಬಹುದು ಎಂಬ ಪರಿಕಲ್ಪನೆ ಲೇಖಕನಿಗೆ ಬಹಳ ಮುಖ್ಯವಾದ ಅಂಶವಾಗಿರುತ್ತದೆ. ಮಕ್ಕಳ ಕತೆಗಳು ಸರಳವಾಗಿರಬೇಕು, ಆಕರ್ಷಕವಾಗಿರಬೇಕು ಮತ್ತು ಮಗುವಿನ ವಯಸ್ಸಿಗೆ ತಕ್ಕಂತೆ ಇರಬೇಕು. ಉತ್ತಮ ಕಥನ ಸಾಹಿತ್ಯವು ಮಗುವಿನ ವ್ಯಕ್ತಿತ್ವ ರೂಪಿಸುವಲ್ಲಿ ಪ್ರಬಲ ಅಸ್ತ್ರವೆಂದರೆ ತಪ್ಪಾಗಲಾರದು.

ಮಕ್ಕಳ ಸಾಹಿತ್ಯದಲ್ಲಿ ಕಥನ ಸಾಹಿತ್ಯವು ಅತ್ಯಂತ ಪ್ರಮುಖವಾದ ಸ್ಥಾನವನ್ನು ಹೊಂದಿದೆ. ಕೇವಲ ಮನೋರಂಜನೆಗಾಗಿ ಮಾತ್ರವಲ್ಲದೆ, ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ದೊಡ್ಡ ಪಾತ್ರವನ್ನೇ ವಹಿಸಿದೆ. ಏಕೆಂದರೆ ಕಥೆಗಳ ಮೂಲಕ ಮಕ್ಕಳಿಗೆ ಹೊಸ ಪದಗಳ ಪರಿಚಯವಾಗುತ್ತದೆ. ವಾಕ್ಯ ರಚನೆ, ಭಾಷೆಯ ಸೊಗಡು ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ರೀತಿ ಅವರಿಗೆ ಸುಲಭವಾಗಿ ಅರ್ಥವಾಗುತ್ತದೆ. ಜೊತೆಗೆ ಕತೆಗಳಲ್ಲಿನ ನೀತಿಗಳು ಮನಸ್ಸಿನಲ್ಲಿ ಉಳಿಯುತ್ತವೆ.

ಪ್ರೊ. ಜಿ. ಅಶ್ವತ್ಥನಾರಾಯಣ ಅವರು ೨೦೧೫ ರಲ್ಲಿ ಪ್ರಕಟವಾಗುತ್ತಿದ್ದ 'ಮಕ್ಕಳ ಮಲ್ಲಾರ' ಎಂಬ ಪತ್ರಿಕೆಯಲ್ಲಿ ಮಕ್ಕಳಿಗಾಗಿ ನೀತಿಕತೆಗಳನ್ನೂ ಸಹ ಬರೆದಿದ್ದಾರೆ. ಅದು 'ಗಿಡ ಮರ ಬಳ್ಳಿಯ ನೀತಿಕತೆಗಳು' ಎನ್ನುವ ಶೀರ್ಷಿಕೆಯಡಿಯಲ್ಲಿ ಪುಸ್ತಕವೂ ಆಗಿದೆ. ಈ ಮೂಲಕ ಅವರು ಮಕ್ಕಳ ಕಥನಸಾಹಿತ್ಯಕ್ಕೂ ಅನುರೂಪ ಕೊಡುಗೆ ನೀಡಿದ್ದಾರೆ. ಸಾಂಸ್ಕೃತಿಕ ಪರಿಸರದ ಸಮೃದ್ಧತೆಯಲ್ಲಿ,

ಮೌಲ್ಯಗಳ ರಸವತ್ತಾದ ಕತೆಯುಳ್ಳ ಈ ಹೊತ್ತಿಗೆ ವಿಶಿಷ್ಟ ಸರಣಿಯದ್ದು. ಕತೆಗಳು ಸರಳ ಭಾಷೆಯಲ್ಲಿ ಸಂವೇದನಾಶೀಲವಾಗಿದ್ದು ಗಿಡ ಮರ ಬಳ್ಳಿಯ ಮೂಲಕ ಕತೆಗಳನ್ನು ಪ್ರಸ್ತುತಪಡಿಸುವ ರೀತಿ ಇದೇ ಮೊದಲೇನೋ....! 'ಸಸ್ಯಗಳಿಗೂ ಜೀವವಿದೆ, ಸಂವಹನ ಶಕ್ತಿ ಇದೆ' ಎಂಬ ವಿಜ್ಞಾನ ನಮಗೆಲ್ಲಾ ತಿಳಿದೇ ಇದೆ. ಅವುಗಳೂ ಮಾತನಾಡುವುದಾಗಿದ್ದರೆ ಬಹುಶ ಮನುಷ್ಯ ಕಾಡು ಅಳಿಸುವ ಕೆಲಸ ಮಾಡುತ್ತಿರಲಿಲ್ಲ. ಪರಿಸರ ಮಾನವನ ಕಿವಿ ಹಿಂಡಿ ಬುದ್ದಿ ಹೇಳುತ್ತಿತ್ತೇನೋ...!

ಅ.ನಾ.ಜಿ.ಯವರ ಈ 'ಗಿಡಮರ ಬಳ್ಳಿಯ' ಕತೆಗಳು ಮೌಲ್ಯದ ಬುತ್ತಿಯೇ ಆಗಿವೆ. ಮೊದಲನೆಯ ಕತೆಯಲ್ಲಿ ದ್ರಾಕ್ಷಿ ಹಣ್ಣಿನ ಕತೆ ಇದೆ. ಹಕ್ಕಿಯೊಂದು ದ್ರಾಕ್ಷಿ ಹಣ್ಣನ್ನು ತಿನ್ನಲು ಬಂದು, 'ದ್ರಾಕ್ಷಿ ಹಣ್ಣನ್ನು ಒಂದೊಂದೇ ಕಿತ್ತು ತಿನ್ನಬೇಕು, ಇಡೀ ಗೊಂಚಲೇ ಒಂದು ಹಣ್ಣಾಗಿದ್ದರೆ ಚೆನ್ನಾಗಿತ್ತು' ಎಂದುಕೊಂಡು, ದ್ರಾಕ್ಷಿಯ ಬಳ್ಳಿಯನ್ನೇ, 'ನೀನೇಕೆ ಗೊಂಚಲು ಗೊಂಚಲು ಗೊಂಚಲಾಗಿ ಹಣ್ಣು ಬಿಡುವೆ" ಎಂದು ಕೇಳಿತು. ದ್ರಾಕ್ಷಿಯ ಬಳ್ಳಿ 'ಗೊಂಚಲಾಗಿ ಹಣ್ಣು ಬಿಟ್ಟ ಉದ್ದೇಶ ಎಲ್ಲರೂ ಹಂಚಿ ತಿನ್ನಲಿ ಎಂಬುದು' ಎಂದಿತು. ಅದೇ ತೆರನಾಗಿ ಸೇಬಿನ ಹಣ್ಣನ್ನು ಕಂಡು ಇದೇಕೆ ಗೊಂಚಲಾಗಿರುವುದಿಲ್ಲ ಎಂಬ ಪ್ರಶ್ನೆ ಬಂದಿತು. ಆಗ 'ಸೇಬು, ತಾನು ದಪ್ಪನಾಗಿ, ಇಡಿಯಾಗಿ ರುಚಿಯಾಗಿರುವುದು ದಾನಕ್ಕಾಗಿ" ಎಂದಿತು. ಈ ಕತೆಯಲ್ಲಿ ಹಂಚಿ ತಿನ್ನುವ ಸುಖವನ್ನು, ದಾನದ ಬಗೆಗಿನ ಸಾರ್ಥಕತೆಯನ್ನು ಮಕ್ಕಳಿಗೆ ಹೇಳಿದ ರೀತಿ ಚೆನ್ನಾಗಿದೆ. ಕತೆಯಲ್ಲಿ ಪಾತ್ರಗಳನ್ನು ಉಪಮೆಯಲ್ಲಿ ಹೇಳುವುದಕ್ಕಿಂತ, ಪಾತ್ರವೇ ರೂಪಕವಾಗುವುದು ವಿಶೇಷ. ಇಲ್ಲಿ ಹಣ್ಣುಗಳೇ ನೀತಿಯನ್ನು ಹೇಳಿರುವುದರಿಂದ ಮಕ್ಕಳು ಹಣ್ಣನ್ನು ನೋಡಿದಾಗಲೆಲ್ಲಾ ಆ ಮೌಲ್ಯದ ಮಾತುಗಳನ್ನು ನೆನೆಯುತ್ತಾರೆ.

ಎರಡನೆಯದು 'ಹೂವಿನಗಿಡ ಮತ್ತು ಕಡ್ಡಿಬೇಲಿ' ಬಹಳ ಚಂದದ ಕತೆ. ಸೌಂದರ್ಯದ ಬಗ್ಗೆ ಗರ್ವಪಡುವ ಹೂಗಿಡ, ಬೇಲಿಯನ್ನು ಕಂಡು ಮುಳ್ಳು, ಕೊಳಕು ಬಣ್ಣ, ವಕ್ರವೆಂದೆಲ್ಲಾ ಆಡಿಕೊಳ್ಳುತ್ತದೆ. ಇದನ್ನು ಕೇಳಿಸಿಕೊಂಡ ಓತಿಕ್ಯಾತ 'ಮುಳ್ಳು ಬೇಲಿ ವಕ್ರವಾಗಿದ್ದರೂ ನಿನ್ನನ್ನು ಕಾಯುವಲ್ಲಿ ತನ್ನ ಸೇವೆಯನ್ನು ಮುಡುಪಾಗಿಸಿದೆ. ಇಲ್ಲದಿದ್ದರೆ ನಿನ್ನನ್ನು ದನ, ಕರು, ಆಡು ಬಂದು ಮೇಯುತ್ತಿದ್ದವು' ಎಂದು ಹೇಳುತ್ತಾ 'ಸೌಂದರ್ಯ- ಆಕರ್ಷಣೆ ಮುಖ್ಯವಲ್ಲ, ತ್ಯಾಗ ಮುಖ್ಯ' ಎನ್ನುತ್ತದೆ. ಈ ಕತೆಯ ಮುಖೇನ ಉದಾತ್ತವಾದ ಸಂದೇಶವನ್ನು ಮಕ್ಕಳಲ್ಲಿ ಬಿತ್ತಲು ಪ್ರಯತ್ನಿಸಿದೆ.

ಇನ್ನೊಂದು ಕತೆಯಲ್ಲಿ 'ಹಿರಿಯ ಸೇಬಿನಮರದ ಮಿತಿಮೀರಿದ ಉದಾರತೆಯಿಂದ ಹೇಗೆ ಅವನತಿ ಹೊಂದಿತು' ಎಂಬುದಾಗಿದೆ. ತಾನು ಹಿರಿಯನೆಂಬ ಗರ್ವದಿಂದ, ಅತಿಯಾದ ಉದಾರತೆಯಿಂದ ವರ್ತಿಸುತ್ತಿದ್ದ ಸೇಬಿನಮರ ಇತರೆ ಸೇಬು ಮರಗಳ ಜಾಣನುಡಿಯನ್ನು ಆಲಿಸುವುದಿಲ್ಲ. ಅವು 'ನೀನು ಜೇನುಗಳಿಗೆ ಅತಿಯಾಗಿ ಗೂಡು ಕಟ್ಟಲು ಅವಕಾಶ ಕೊಡಬೇಡ ಎಂಬ ಜಾಣ ನುಡಿಯನ್ನು ಹೇಳಿದವು. ಅದನ್ನು ಧಿಕ್ಕರಿಸಿ ಕೊನೆಗೆ ತಾನೇ ಅವನತಿ ಹೊಂದುತ್ತದೆ. ಒಳ್ಳೆಯದೂ ಅತಿಯಾಗಬಾರದೆಂಬ ಸಂದೇಶ ಸೂಕ್ತವಾದದ್ದು.

"ಜಗನ್ಮೋಹಿನಿ ಮರ" ಎಂಬ ಕತೆಯಲ್ಲಿ ನದಿಯ ಹೊಟ್ಟೆಕಿಚ್ಚಿನಿಂದ ಸುಂದರ ಹೂಮರಗಿಡಗಳ ತೋಟವೇ ಹಾಳಾಗುತ್ತದೆ. ಹೊಟ್ಟೆಕಿಚ್ಚಿನ ತಾಪ ಎಷ್ಟು ಅಪಾಯಕಾರಿ ಎಂಬುದನ್ನು ಸೂಚ್ಯವಾಗಿ ಕತೆ ವಿವರಿಸಿದೆ. ನದಿಯೇ ಪಾತ್ರವಾಗಿರುವುದು ಮಕ್ಕಳಲ್ಲಿ ಕುತೂಹಲ ಮೂಡಿಸುತ್ತದೆ.

ಮತ್ತೊಂದು ಕತೆ 'ತುಳಸಿಯ ವಿನಯ'ದಲ್ಲಿ ಎಲೆಗಳ ಬಗೆಗಿನ ಉಪಯೋಗಗಳ ಜೊತೆಗೆ, ಅವುಗಳ ಶ್ರೇಷ್ಠತೆಯ ಬಗೆಗಿನ ಅಹಂ ಅನ್ನು ಮುನಿ ಹೇಗೆ ವಿವರಿಸುತ್ತಾನೆಂಬುದು ಇಲ್ಲಿ ಮುಖ್ಯವಾದದ್ದು. ವೀಳ್ಯದೆಲೆ, ಬಾಳೆ ಎಲೆ, ಮಾವಿನ ಎಲೆ ಎಲ್ಲವನ್ನೂ ಬಳಸಿ ಬಿಸಾಡುವುದೇ ಆದರೆ, ಮನೆಯ ಮುಂದೆ ಮೌನಿಯಾಗಿ ನಿಂತು ಧ್ಯಾನಿಸುವ ತುಳಸಿಯನ್ನು ಪೂಜಿಸುತ್ತಾರೆಂಬ ಮೌಲ್ವಿಕ

ನೀತಿ ಮಕ್ಕಳಲ್ಲಿ ಹೆಚ್ಚಿನ ಅರಿವನ್ನು ಮೂಡಿಸುವಂತಿದೆ.

ಬಿದಿರನ್ನು ನಾವೆಲ್ಲರೂ ಕಾಡಿನಲ್ಲಿ ನೋಡಿಯೇ ಇರುತ್ತೇವೆ. ನಿತ್ಯ ಬಳಕೆಯಲ್ಲೂ ಸಾಕಷ್ಟು ಬಿದಿರಿನ ವಸ್ತುಗಳನ್ನು ಬಳಸುತ್ತೇವೆ. ಆದರೆ ಅ.ನಾ.ಜಿ.ಯವರು ಬಿದಿರಿನಲ್ಲೂ ಒಂದು ನೀತಿ ಪಾಠ ಹುಡುಕಿರುವುದು ಸೋಜಿಗವೇ ಸರಿ. ಶಿಷ್ಯನೊಬ್ಬ ಬಿದಿರನ್ನು ದ್ವೇಷಿಸುತ್ತಿದ್ದ. ಗುರುಗಳು ಅವನಿಗೆ ಪಾಠಕಲಿಸಲು ಆಶ್ರಮದಲ್ಲಿ ಇದ್ದ ಎಲ್ಲ ಬಗೆಯ ಬಿದಿರಿನ ವಸ್ತುಗಳನ್ನು ನಿಲ್ಲಿಸಿದರು. ಇದರ ಪರಿಣಾಮ ಹೂ ತರುವ ಬುಟ್ಟಿಯ ಬದಲು ಕೊಡ, ಬಿದಿರಿನ ಮೊರದ ಬದಲು ಕಂಚಿನ ಮೊರ ಬಳಸಿದಾಗ ಕೆಲಸದ ಹೊರೆ ಹೆಚ್ಚಿತು. ಇದರಿಂದ ಇತರೆ ಸಹಪಾಠಿಗಳು ಅವನನ್ನೇ ದೂಷಿಸಲಾರಂಭಿಸಿದರು. ಆಗ ಆ ಶಿಷ್ಯೋತ್ತಮನಿಗೆ ತನ್ನ ತಪ್ಪಿನ ಅರಿವಾಗಿ ಬಿದಿರಿನ ಮಹತ್ವವೂ ತಿಳಿಯಿತು.

'ಅಸೂಯೆ ಮನುಷ್ಯ ಮಾತ್ರನಿಗಲ್ಲದೆ ಮರಗಿಡಕ್ಕೂ ಇದೆ' ಎಂಬುದನ್ನು ಹೇಳುವ ಕತೆಯೂ ವೈವಿಧ್ಯಮಯ ಚಿಂತನೆಯನ್ನು ಒಳಗೊಂಡಿದೆ. ಮರಗಿಡಗಳು ತಮ್ಮೊಳಗೆ ಹೋಲಿಕೆ ಮಾಡಿಕೊಂಡು ಕರುಬುತ್ತಿರುತ್ತವೆ. ಆದರೆ ತಾಯಿ ಮಕ್ಕಳ ಮನೋಧರ್ಮ, ದೈಹಿಕ ಸಾಮರ್ಥ್ಯವನ್ನು ಅರಿತು ಊಟ ಬಡಿಸಿದ ರೀತಿ ಕಂಡು ''ಪ್ರಕೃತಿಯಲ್ಲಿ ದೇವರು ಬೇರೆ ಬೇರೆ ಉದ್ದೇಶಗಳಿಗಾಗಿ ಬೇರೆ ಬೇರೆ ರೀತಿ ಮಟ್ಟ ಮತ್ತು ಗಾತ್ರದಲ್ಲಿ ಸೃಷ್ಟಿಸಿದ್ದಾನೆ'' ಎಂಬ ಸತ್ಯ ಅರಿಯುತ್ತವೆ. ಎಂಥಹ ಸತ್ವಯುತ ಮೌಲ್ಯವಿದು. ಮಕ್ಕಳಲ್ಲಿನ ಕೀಳರಿಮೆ ತೊಡೆದು ಹಾಕಲು ಪ್ರಕೃತಿಯನ್ನೇ ಉದಾಹರಿಸಿದ ರೀತಿ ಶ್ಲಾಘನೀಯ.

''ದುಷ್ಟರ ಮಾತು ದುರ್ಬುದ್ಧಿಗೆ ಕಾರಣ, ಶಿಷ್ಟರ ಮಾತು ಸದ್ಬುದ್ಧಿಗೆ ಕಾರಣ'' ಎಂಬ ಸಜ್ಜನ ಗುಣವನ್ನು ಒಂದು ಸೂಕ್ತ ಉದಾಹರಣೆಯ ಮೂಲಕ ಅರುಹಿರುವುದು ಅತ್ಯಂತ ಕುತೂಹಲಭರಿತವೂ, ಸೂಕ್ತವೂ ಆಗಿದೆ. 'ಕಾಲ್ಚೆಂಡೇ ದುಷ್ಟರ ಮಾತನ್ನು ಕೇಳಬೇಡ' ಎಂಬ ಕತೆಯಲ್ಲಿ ಅ.ನಾ.ಜಿ.ಯವರು ಕಾಲ್ಚೆಂಡಿನ ಮುಖೇನ ದುಷ್ಟರ ಮಾತನ್ನು ಕೇಳಿ ಹಾಳಾಗುವ ಬಗೆ ಬಹಳ ಚೆಂದವಿದೆ. ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಎಂಬ ಸೂಕ್ತಿಯನ್ನು ಸೊಗಸಾಗಿ ಕತೆಯ ಮೂಲಕ ಅನಾವರಣಗೊಳಿಸಿದ್ದಾರೆ.

ಇಂತಹ ಹಲವಾರು ಕತೆಗಳು ಗಿಡ ಮರ ಬಳ್ಳಿ ಎಂಬ ಈ ಹೊತ್ತಿಗೆಯಲ್ಲಿವೆ. ಮಕ್ಕಳ ಮನೋವೃತ್ತಿಯನ್ನು ಆರೋಗ್ಯಕರವಾಗಿಡಲು ಇಂತಹ ಹಲವಾರು ಕತೆಗಳು ಉಪಯುಕ್ತ. ಈ ಕೃತಿಯ ಬಹುದೊಡ್ಡ ವಿಶೇಷವೆಂದರೆ ಇಲ್ಲಿನ ಪಾತ್ರಗಳು. ಸಸ್ಯಗಳಿಗೂ ಜೀವವಿದೆ, ಸಂವಹನ ಶಕ್ತಿಯಿದೆ ಎಂಬ ವೈಜ್ಞಾನಿಕ ಸತ್ಯವನ್ನು ಲೇಖಕರು ಇಲ್ಲಿ ಕಥಾರೂಪಕ್ಕೆ ತಂದಿದ್ದಾರೆ. ಇಲ್ಲಿ ಗಿಡ, ಮರ, ಬಳ್ಳಿಗಳೇ ಕಥೆಯ ನಾಯಕರಾಗಿ ಮಕ್ಕಳೊಂದಿಗೆ ಸಂವಹನ ನಡೆಸುತ್ತವೆ. ಇದು ಮಕ್ಕಳಲ್ಲಿ ಪರಿಸರದ ಬಗ್ಗೆ ಅಪಾರ ಪ್ರೀತಿ ಮತ್ತು ಗೌರವವನ್ನು ಮೂಡಿಸಲು ಸಹಕಾರಿಯಾಗಿದೆ. ಈ ಸಂಕಲನದ ಪ್ರತಿಯೊಂದು ಕಥೆಯೂ ಒಂದೊಂದು ಜೀವನ ಪಾಠವನ್ನು ಬಹಳ ಲಲಿತವಾಗಿ ಬೋಧಿಸುತ್ತವೆ. ಇಲ್ಲಿರುವ ಅಷ್ಟೂ ಕಥೆಗಳೂ ಅದ್ಭುತವಾಗಿವೆ. ಅಲ್ಲದೆ ಅ.ನಾ.ಜಿ.ಯವರ ಭಾಷೆ ಸರಳವಾಗಿರುವುದರಿಂದ ಮಕ್ಕಳ ಮನೋಮಟ್ಟಕ್ಕೆ ಸರಳವಾಗಿ ತಲುಪಬಲ್ಲುದು. ಇಲ್ಲಿಯ ಎಲ್ಲಾ ಕತೆಗಳು ಸಂವೇದನಾಶೀಲವಾಗಿರುವುದಲ್ಲದೆ, ನೇರವಾಗಿ ಮಕ್ಕಳ ಮನಸ್ಸನ್ನು ಮುಟ್ಟುತ್ತದೆ ಮಬುದರಲ್ಲಿ ಯಾವ ಸಂದೇಹವೂ ಇಲ್ಲ.

ಒಟ್ಟಾರೆ, ನಮ್ಮ ಸುತ್ತಲಿನ ಸಸ್ಯಗಳ ಉಪಯುಕ್ತತೆ ಮತ್ತು ಅವುಗಳ ಹಿಂದಿರುವ ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವ ಈ ಕಥಾ ಸಂಕಲನ ಮಕ್ಕಳ ಪಾಲಿನ ಅಮೃತದಂತಿದೆ.

****

ಕನ್ನಡ ಸಾಹಿತ್ಯ ದಿಗ್ಗಜರು - ಒಂದು ಪಕ್ಷಿನೋಟ

–ಪ್ರೊ ಎಸ್. ಬಿಳಿಗಿರಿ ವಾಸನ್
ಚರವಾಣಿ : ೯೦೩೬೬೧೨೪೮೮

ಪ್ರೊ. ಜಿ. ಅಶ್ವತ್ಥನಾರಾಯಣ ಅವರು ರಚಿಸಿರುವ 'ಕನ್ನಡ ಸಾಹಿತ್ಯ ದಿಗ್ಗಜರು' (ಆರ್.ವಿ.ಐ.ಎಂ.ನ 'ಸಿಂಚನ' ಕನ್ನಡ ವೇದಿಕೆಯ ಪ್ರಕಟಣೆ) ಎಂಬ ಕೃತಿಯು ಜೂನ್ ೭, ೨೦೧೪ರಂದು ಲೋಕಾರ್ಪಣೆಯಾಯಿತು.

'ಕನ್ನಡ ಸಾಹಿತ್ಯ ದಿಗ್ಗಜರು' ಕೃತಿಯು ಉತ್ತಮ ವಿನ್ಯಾಸದೊಂದಿಗೆ ಮೂಡಿಬಂದಿರುವ ಕೃತಿ. ೧೯ನೆಯ ಶತಮಾನದಲ್ಲಿ ಜನಿಸಿ ಅಪೂರ್ವ ಕನ್ನಡ ಸೇವೆ ಮಾಡಿದ ಹೊಸಗನ್ನಡದ ಉದಯ ಕಾಲದ ಪುಣ್ಯ ಪುರುಷರ ವ್ಯಕ್ತಿತ್ವ ಮೂಡಿಸುವ ರೇಖಾಚಿತ್ರದಂತೆ ಕೆಲವು ವಿಶಿಷ್ಟ ಮುಖಗಳ ಕಿರು ಪರಿಚಯವನ್ನು ನೀಡಿದ್ದು, ಜೀವನ ಚರಿತ್ರೆಯಾಗದೆ, ವ್ಯಕ್ತಿಚಿತ್ರದಲ್ಲೂ ಪುಟ್ಟ ವ್ಯಕ್ತಿಚಿತ್ರವಾಗಿ ೧೯೨ ಪುಟಗಳಲ್ಲಿ ವ್ಯಾಪಿಸಿಕೊಂಡಿದೆ.

ಈ ಗ್ರಂಥದಲ್ಲಿ ೧೨ ಜನ ಕನ್ನಡ ಪುಣ್ಯ ಪುರುಷರ ಪರಿಚಯವಿದೆ. ಅವರೆಂದರೆ ಮಹಾಕವಿ ಗುರು ಟಿ.ಎಸ್. ವೆಂಕಣ್ಣಯ್ಯ, ಕನ್ನಡ ದ್ರೋಣಾಚಾರ ಎ.ಆರ್. ಕೃಷ್ಣಶಾಸ್ತ್ರಿ, ಮೊದಲ ರಾಷ್ಟ್ರಕವಿ ಎಂ. ಗೋವಿಂದ ಪೈ, ಕನ್ನಡ ಸಂರಕ್ಷಕ ಡೆಪ್ಯುಟಿ ಚೆನ್ನಬಸಪ್ಪ, ಗ್ರೀಕ್ ಪಂಡಿತ ಕ.ವೆಂ. ರಾಘವಾಚಾರ್, ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ, ದಿವ್ಯ ಕೀರ್ತನಕಾರ ಹುಯಿಲಗೋಳ ನಾರಾಯಣರಾಯರು, ಕನ್ನಡ ನ್ಯಾಯಾಧೀಶ ಶ್ರೀಕಂಠೇಶಗೌಡ, ಘನ ವಿದ್ವಾಂಸ ದೇವುಡು ನರಸಿಂಹಶಾಸ್ತ್ರೀ, ಶ್ರೇಷ್ಠ ಕತೆಗಾರ ಕೆರೂರು ವಾಸುದೇವಾಚಾರ್ಯ, ದೇಶಭಕ್ತ ಸಾಹಿತಿ ದ.ಕೃ. ಭಾರದ್ವಾಜ, ಕನ್ನಡ ನುಡಿ ಸೇವಕ ವಿದ್ವಾನ್ ಬಾಲಸರಸ್ವತಿ, ಈ ಎಲ್ಲರ ಪರಿಚಯವನ್ನು ಕುರಿತು ಲೇಖಕರು ವಿವರವಾಗಿ ಹೇಳಿದ್ದಾರೆ. ಆದರೆ ಲೇಖನ ಬಾಹುಳ್ಯದ ಭಯದಿಂದ ಒಂದೆರಡು ಸಂಗತಿಗಳನ್ನು ಈ ಗ್ರಂಥ ಹೇಗಿದೆ ಎಂಬುದನ್ನು ತಿಳಿಸಲು ಇಚ್ಚಿಸುತ್ತೇನೆ.

'ಮಹಾಕವಿಯ ಗುರು ಟಿ.ಎಸ್. ವೆಂಕಣ್ಣಯ್ಯ' ಎಂಬ ಲೇಖನದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಪ್ರಿಯ ಗುರುಗಳಾಗಿದ್ದ ವೆಂಕಣ್ಣಯ್ಯನವರೇ ಹೇಳಿರುವಂತೆ 'ಕನ್ನಡ ಸಾಹಿತ್ಯ ನಂದನವನದಲ್ಲಿ ಕವಿಗಳನ್ನು ಬೆಳೆಸುವ ಕನ್ನಡ ತೋಟದ ಮಾಲಿ ನಾ ಅಷ್ಟೇ, ನಾನೇ ಮಹಾವೃಕ್ಷವಲ್ಲ' ಎಂದಿರುವ ಅವರು ಸಾಹಿತ್ಯ ನಿರ್ಮಾಣ ಮಾಡಿದ್ದಕ್ಕಿ ಸಾಹಿತಿಗಳ ನಿರ್ಮಾಣ ಮಾಡಿದ್ದೇ ಹೆಚ್ಚು. ಅವರು ಬರೆದುದು ಕಡಿಮೆಯಾದರ ಗಾತ್ರದಲ್ಲಿ, ಸತ್ವದಲ್ಲಿ ಹಿರಿದು, ಸ್ಫೂರ್ತಿದಾಯಕವಾದದ್ದು.

ವೆಂಕಣ್ಣಯ್ಯನವರು ಗುಪ್ತದಾನಿಗಳು, ಕೀರ್ತಿ ಕಾಮನೆಯಿಲ್ಲದವರು, ಪಾಂಡಿತ್ಯದ ಶಿಕ್ಷಕ ವೃತ್ತಿಯಲ್ಲಿ, ವಿದ್ಯಾರ್ಥಿ ಜನಪ್ರಿಯತೆಯಲ್ಲಿ, ಅವರ ಸರಿಸಮಾನರು ಸಿಗಬಹುದು. ಆದರೆ ಕನ್ನಡ ಸಾಹಿತಿಗಳನ್ನು ಬೆಳೆಸುವಲ್ಲಿ, ಮಾನವೀಯ ಗುಣಗಳನ್ನು ಮೆರೆಸುವವರಲ್ಲಿ ಅವರಂತೆ ಯಾರೂ ಇಲ್ಲ. ಅವರು ವಿಶೇಷ ವಾಗ್ಮಿಗಳು. ವಿ.ಸೀ.ಯವರು ಹೇಳಿದ ಅವರದು ಒಂದು ಮನುಷ್ಯ ದೇಹವಲ್ಲ, ಒಂದು ಉಸಿರು, ಒಂದು ಜೀವಗುಣ ಒಂದು ಬೆಳಕು, ಒಂದು ಪರಿಮಳ, ದೇವತಾ ಮನುಷ್ಯರು ಎಂಬ ಅಂಶವನ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಕುವೆಂಪು ಅವರ ಇನ್ನೊಬ್ಬ ಗುರುಗಳಾದ 'ಕನ್ನಡ ದ್ರೋಣಾಚಾರ್ಯ ಎ. ಆರ್. ಕೃಷ್ಣಶಾಸ್ತ್ರಿ' ಎಂಬ ಲೇಖನದಲ್ಲಿ ಎ.ಆರ್.ಕೃ., ಅವರನ್ನು ಕುರಿತು ಹೇಳುತ್ತ ಗುಂಡಿನೇಟಿನಂತಹ ಕನ್ನಡದ ಸಿಡಿಲು ನುಡಿಗಳು, ಸಿಂಹ ಘರ್ಜನೆ, ರಣಘೋಷ ನಿರ್ಭೀತರಾಗಿ ಎನ್ನ ನುಡಿ ಟಾಠಾಡಾಢಾಣ ಎಂಬ ಭೀಮವಾಕ್ಕು, ವೀರಯೋಧ ವಾಣಿ, ಗಂಡುಗಲಿ ಕನ್ನಡಿಗನ ದಿಟ್ಟಗಟ್ಟಿ ನುಡಿಗಳು, ಒಂದಲ್ಲ, ಎರಡಲ್ಲ ನೂರಾರು 'ಮಾತೃಭಾಷೆಯಲ್ಲಿ ಕಲಿತದ್ದೇ ಮೈಹತ್ತುವುದು, ಬರೆದದ್ದೇ ನಿಲ್ಲುವುದು. ಪರಭಾಷೆಯಲ್ಲಿ ಯಾರು ಎಷ್ಟೇ ಪಂಡಿತರಾಗಿ ಏನೇ ಬರೆಯಲಿ ಅದು ವ್ಯರ್ಥ' ಎಂದು ಸಾರಿದ್ದಾರೆ. ಹೀಗೆ ಅವರ ಗಂಡುವಾಣಿಯನ್ನು ತಿಳಿಸಿದ್ದಾರೆ.

ಅನಂತರ 'ಕನ್ನಡದ ಮೊದಲ ರಾಷ್ಟ್ರಕವಿ ಗೋವಿಂದ ಪೈ' ಎಂಬಲ್ಲಿ ಗೋವಿಂದ ಪೈಗಳನ್ನು ವರ್ಣಿಸುತ್ತಾ 'ಭಾರಿ ಪೊದೆ ಮೀಸೆಯ, ಗಂಡು ಮುಖದ, ಹೊಳಪುಗಣ್ಣುಗಳ, ಕೆದರಿದ ತಲೆಯ, ಸಿಂಹಮುಖದ ವ್ಯಕ್ತಿಚಿತ್ರ'ವನ್ನು ಕಟ್ಟಿಕೊಟ್ಟಿದ್ದಾರೆ. ಇಪ್ಪತ್ತೆರಡಕ್ಕೂ ಹೆಚ್ಚು ಭಾಷೆಗಳನ್ನು ಅರಿತಿರುವುದಷ್ಟೇ ಅಲ್ಲದೆ ಓದು, ಬರಹ, ಮಾತು ಬಲ್ಲವರಾಗಿದ್ದರು.

ಸಂಶೋಧಕರೂ, ಬಹುಭಾಷಾ ತಜ್ಞ ಇತಿಹಾಸಜ್ಞ ಕವಿ, ನಾಟಕಕಾರ, ಸಜ್ಜನ ಶಿರೋಮಣಿ, ಜೈನ, ಬೌದ್ಧ ಸಾಹಿತ್ಯ ವಿಶಾರದ, ಜಪಾನಿ, ಪಾಲಿ, ಬಂಗಾಲಿ ಕೃತಿಗಳ ಅನುವಾದಕರಾಗಿ ನಾಡಿನ ಜನತೆಯ ಹೃದಯಾಂಗಣದಲ್ಲಿ ಸದಾ ಬೆಳಗುತ್ತಿರುವ ನಂದದ ಆನಂದದ ನಂದಾದೀಪ 'ಬೆಳ್ಳಿ ಮೀಸೆಯ ಮಗು'ವನ್ನು ವರ್ಣಿಸುತ್ತಾ ಕಣ್ಮುಂದೆ ತಂದು ನಿಲ್ಲಿಸಿದ್ದಾರೆ.

ಐತಿಹಾಸಿಕ ಮಹತ್ವದ ಚಿತ್ರಣವೆಂದರೆ ಈ ಗ್ರಂಥದಲ್ಲಿ 'ಕನ್ನಡ ಸಂರಕ್ಷಕ ಡೆಪ್ಯುಟಿ ಚೆನ್ನಬಸಪ್ಪ ಅವರದು. ಒಂದು ಕಾಲದಲ್ಲಿ ಕನ್ನಡ ಶಿಕ್ಷಣಕ್ಕಾಗಿ, ಕನ್ನಡ ಸಾಹಿತ್ಯ, ಕನ್ನಡ ಭಾಷೆಗೆ, ಶುದ್ಧ ಕನ್ನಡ ಆಡಳಿತಕ್ಕೆ ತನು ಮನ ಧನ ಮೀಸಲಿಟ್ಟು ಕನ್ನಡದ ಹುಲಿಯೆನಿಸಿದವರು ಕನ್ನಡ ಡೆಪ್ಯುಟಿ ಚೆನ್ನಬಸಪ್ಪನವರು. ಒಳ್ಳೆಯ ವಾಗ್ಮಿಗಳಾಗಿದ್ದರು, ಉಚ್ಚ ಧ್ವನಿಯ ಎತ್ತರವಾದ ಬಲವಾದ ಮೈಕಟ್ಟಿನ ತೇಜಃಪುಂಜವಾದ ಮುಖಮುದ್ರೆಯಿಂದ ಮಾರ್ಮಿಕವಾಗಿ ಮಾತನಾಡುತ್ತಿದ್ದ ಕಂಚಿನ ನಾದದ ಅವರ ನುಡಿಗಳು ಜನರನ್ನು ಸ್ತಬ್ಧಗೊಳಿಸುತ್ತಿದ್ದವು. ಕೇಳಿದವರು ಮಂತ್ರಮುಗ್ಧರಾಗುತ್ತಿದ್ದರು.

ಚೆನ್ನಬಸಪ್ಪನವರು ಸಾಹಿತಿಗಳನ್ನು ರೂಪುಗೊಳಿಸಿದ್ದಲ್ಲದೆ ತಾವೇ ಸ್ವತಃ ಸಾಹಿತಿಗಳಾಗಿದ್ದರು. ಕನ್ನಡದಲ್ಲಿ ಷೇಕ್ಸ್‌ಪಿಯರನ್ನು ತಂದ ಮೊದಲಿಗರು. ಶಿಕ್ಷಣ ರಂಗದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ ನಾಡಿನ ಸೇವೆ ಸಲ್ಲಿಸಿ ಕನ್ನಡ ಸಂರಕ್ಷಕರಾದ ಡೆಪ್ಯುಟಿ ಚೆನ್ನಬಸಪ್ಪನವರು ಉತ್ತರ ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಿ ಬೆಳೆಸಿದ ಪುಣ್ಯಪುರುಷರು, ನಿತ್ಯಸ್ಮರಣೀಯರು.

'ಗ್ರೀಕ್ ಪಂಡಿತ ಕ.ವೆಂ. ರಾಘವಾಚಾರ್ ಅವರ ಬಗೆಗಿನ ಲೇಖನದಲ್ಲಿ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ಹೇಳಿರುವಂತೆ "ಶುದ್ಧ ಖಾದಿಯ ಒರಟು ಉಡುಗೆ, ಎಲ್ಲರನ್ನೂ ಮೀರಿಸುವ ಚುರುಕು ನಡಿಗೆ ಎದುರುಗೊಂಡವರನ್ನೂ ಎದುರು ಬಿದ್ದವರನ್ನೂ ಸಮಭಾವದಿಂದ ಸ್ವಾಗತಿಸುವ ರೇಗುಚಹರೆ, ತೀಕ್ಷ್ಣ ನೋಟ, ಕೊಂಚ ಹೊತ್ತಿನಲ್ಲಿ ಕರುಳು ಚುರುಕೆನ್ನುವ ಕೋಮಲಾಂತಃಕರಣ, ಭಾಷಾತಜ್ಞತೆ, ಹಳಗನ್ನಡ ಪ್ರಯೋಗಪಟುತ್ವ, ಪೂರ್ವ ಪಶ್ಚಿಮ ಸಾಹಿತ್ಯ ಪ್ರೇಮ, ಗ್ರೀಕ್ ಭಾಷಾ ಸಾಹಿತ್ಯ ಅವಗಾಹಿತ್ವ ನಿಘಂಟು ನಿರ್ಮಾಣ ಕ್ಷಮತ್ವ–ಹೀಗೆ ಪಾಂಡಿತ್ಯ ಪರಿಷ್ಕಾರಗಳು, ಹಬ್ಬ ಹುಣ್ಣಿಮೆಯಂದು ಆಪ್ತೇಷ್ಟರಿಗೆ ಆಮಂತ್ರಣ, ಅಗ್ರದೆಲೆಯ ಭೂರಿ ಭೋಜನ, ಸ್ನೇಹ ಸಜ್ಜನಿಕೆಗಳ ಹಿತಮಿತ ಸಲ್ಲಾಪ–ಸಿಡಿದಲ್ಲಿ ಖಂಡತುಂಡಾದ ವಾಗ್ವಾದ. ಭುಜವೊಡ್ಡಿ ಸೈಯೆಂದು ಸೆಡ್ಡು ಹೊಡೆದರೆ ತಿಕ್ಕಿ ತೀಡುವ ಜಗಳಗಂಟಿತನದ ಜಾಗರ ಇಲ್ಲವೇ ತೆಪ್ಪಗೆ ತನ್ನಲ್ಲೇ ಆತ್ಮಾರಾಮವಾಗಿರುವ ಒಂಟಿಗತನದ ಅಜಗರ, ಸ್ನೇಹ ವ್ಯವಹಾರ ಎರಡರಲ್ಲೂ ನಾರಿಕೇಳಪಾಕ, ಪರಿಸ್ಥಿತಿ ಬಿಗಡಾಯಿಸಿದಾಗ ಅಷ್ಟಿಷ್ಟು ಹೊಂದಿಕೊಳ್ಳೋಣವೆಂಬ ಭಾವ. ಒಟ್ಟಿನಲ್ಲಿ ಅವರದು "ಸಿಡಿಲನ್ನ ಸಿಂಗದನ್ನಂ ವ್ಯಕ್ತಿತ್ವ" ಎಂಬ ವರ್ಣನೆ ಬರುತ್ತದೆ. ಭಾರತದ ಭಾಷೆಗಳಲ್ಲೇ ಮೊದಲ ಬಾರಿಗೆ ಕನ್ನಡಕ್ಕೆ ನೇರವಾಗಿ ಗ್ರೀಕ್ ನಾಟಕ ಸಾಹಿತ್ಯವನ್ನು ಗ್ರೀಕಿನಿಂದ ನೇರವಾಗಿ ಕನ್ನಡಕ್ಕೆ ತಂದವರು; ಗೋವಿಂದ ಪೈ ನಂತರದ ಮಹಾಪುರುಷರು.

'ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ'ನವರು ನಮ್ಮ ಜನ ಮರೆತ ಘನವಿದ್ವಾಂಸ ಸಾಹಿತಿಗಳಲ್ಲಿ ಒಬ್ಬರು. ಕಾರಂತರಂತೆ ನಾಟಕ, ಕಥೆ, ಕಾದಂಬರಿ, ವೇದಾಂತ, ಅನುವಾದ ಟೀಕೆ, ಜೀವನಚರಿತ್ರೆ, ಕೀರ್ತನೆ, ಹರಿಕಥೆ, ವಿಮರ್ಶೆ, ಕಾವ್ಯ, ಕವನ, ಶಿಕ್ಷಣ, ಪ್ರಬಂಧ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ೮೦ಕ್ಕೂ ಹೆಚ್ಚು ಗ್ರಂಥಗಳನ್ನೂ, ನೂರಾರು ಲೇಖನಗಳನ್ನು ರಚಿಸಿ ಪ್ರಕಟಿಸಿದ ಸಾಹಿತ್ಯ ಸವ್ಯಸಾಚಿಗಳು, ಕನ್ನಡದಲ್ಲಿ ಸಾಹಿತ್ಯ ಗ್ರಂಥಗಳನ್ನು ಅಧಿಕವಾಗಿ ಬರೆದವರಲ್ಲಿ ಮೊದಲನೆಯವರು. ಚಿದಂಬರಯ್ಯನವರ ಸಾಹಿತ್ಯ ಸೇವೆಯನ್ನು ಪರಿಗಣಿಸಿ ಮೆಚ್ಚಿ ಧಾರವಾಡದ ವಿದ್ವತ್ ಸಭೆಯಲ್ಲಿ ಇವರಿಗೆ 'ಕರ್ನಾಟಕ ಕವಿರತ್ನ' ಎಂಬ ಬಿರುದನ್ನಿತ್ತು ಗೌರವಿಸಿದರು. ಅಂತಹ ಅಪೂರ್ವ ಸಾಹಿತಿಗಳನ್ನು ಪರಿಚಯಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠ ಗ್ರಂಥಗಳನ್ನು ರಚಿಸಿ, ಹೊಸಗನ್ನಡ ಗದ್ಯಕ್ಕೆ ವಿಶೇಷ ಕೊಡುಗೆಗಳನ್ನಿತ್ತು, ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ವಿದ್ವಾಂಸರೊಡನೆ ಸೈ ಎನಿಸಿಕೊಂಡು ಸಾತ್ವಿಕ ಜೀವನ ನಡೆಸಿದ ಪ್ರೈಮರಿ ಶಾಲಾ ಮಾಸ್ತರು, ಅದ್ವಿತೀಯ ವಿದ್ವಾಂಸ, ಸಾಹಿತಿ, ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯನವರು ತಮ್ಮ ಸಾಹಿತ್ಯ ಸೇವೆಯಿಂದ ಇಂದಿಗೂ ಸ್ಫೂರ್ತಿ ಮೂರ್ತಿಗಳಾಗಿದ್ದಾರೆ.

ವರಕವಿ ಡಾ॥ ದ.ರಾ. ಬೇಂದ್ರೆಯವರ ಗುರುಗಳೂ, ಗದುಗಿನ ವೀರ ನಾರಾಯಣನ ಪರಮಭಕ್ತರೂ, ಕುಮಾರವ್ಯಾಸನಲ್ಲಿರುವ ಅಪಾರ ಭಕ್ತಿಯಿಂದ ಕುಮಾರವ್ಯಾಸ ಭಾರತವನ್ನು ಕಂಠಗತ, ಹೃದ್ಗತ ಮಾಡಿಕೊಂಡಿದ್ದವರೂ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ನಾಡಗೀತೆಯನ್ನು ರಚಿಸಿದವರೂ ಸುಮಧುರವಾದ ಈ ನಾಡಗೀತೆಯನ್ನು ಕೇಳಿದ ಮಹಾತ್ಮಾಗಾಂಧಿಯವರಿಂದ ಅಭಿನಂದಿಸಲ್ಪಟ್ಟವರೂ ಸಾಹಿತಿಗಳೂ ದೇಶಪ್ರೇಮಿಗಳೂ ನಾಟಕಕಾರರೂ ನಾಟಕ ಗೀತಕಾರರೂ ಆಗಿದ್ದ ದಿವ್ಯಕೀರ್ತನಕಾರ ಹುಯಿಲಗೋಳ ನಾರಾಯಣರಾಯರ ಅಪೂರ್ವ ಚಿತ್ರಣ ಇಲ್ಲಿ ಸೊಗಸಾಗಿ ಬಂದಿದೆ.

ಹಾಸ್ಯ ಸಾಹಿತಿ, ಪ್ರಸಿದ್ಧ ನಾಟಕಕಾರರಾಗಿ, ಕಾದಂಬರಿಕಾರರಾಗಿ, ವಕೀಲರೂ, ನ್ಯಾಯಾಧೀಶರೂ ಆಗಿದ್ದು, ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಹೊಂದಿದ್ದು, ೨೦ನೆಯ ಶತಮಾನದ ಪ್ರಾರಂಭದಲ್ಲಿ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತಂದ ಅಧಿಕಾರಿಗಳಾಗಿ, ಅಗ್ರಗಣ್ಯರಾಗಿದ್ದ ಶ್ರೀಕಂಠೇಗೌಡರು ರಾರಾಜಿಸಿದ್ದಾರೆ.

ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಪ್ರಿಯ ಶಿಷ್ಯರೂ ಕನ್ನಡ ಸಾಹಿತಿಗಳಾದ ಡಾ॥ ವಿ.ಸೀ. ಅವರ ಸಹಪಾಠಿಗಳೂ ಸಾಹಿತ್ಯ ವೇದಾಂತಗಳಲ್ಲಿ, ಕನ್ನಡ, ತೆಲುಗು, ಇಂಗ್ಲಿಷ್, ಸಂಸ್ಕೃತಗಳಲ್ಲಿ ಪಂಡಿತರೂ ಶಿಕ್ಷಣ ತಜ್ಞರೂ ಮಕ್ಕಳ ಪ್ರೇಮಿಗಳೂ ಆದರ್ಶ ಅಧ್ಯಾಪಕರೂ ತುಂಬು ಸಂಸಾರದ ಸದ್ಗೃಹಸ್ಥರೂ ಸರ್ವ ಸೋದರಭಾವ, ಹೃದಯ ವೈಶಾಲ್ಯ, ಮನುಜಕುಲ ಒಂದೇ ಕುಲವೆಂಬ ದೇಶಾಚಾರ, ಕುಲಾಚಾರಗಳನ್ನು ಮೀರಿದ ಮಾನವೀಯ ಸ್ವಭಾವದವರಾಗಿದ್ದು, ಒಂದು ರೀತಿಯಲ್ಲಿ ವಿಶ್ವಮಾನವರು. ಘನವಿದ್ವಾಂಸ ದೇವುಡು ನರಸಿಂಹಶಾಸ್ತ್ರಿಗಳು ವಿರಾಜಿಸಿದ್ದಾರೆ.

ಸಾರಸ್ವತ ಲೋಕದಲ್ಲಿ, ಸಾಹಿತ್ಯ ಲೋಕದಲ್ಲಿ ಶ್ರೀನಿವಾಸಸುತ, ಬಾಗಿಲುಕೋಟೆಯ ಆಚಾರ್ಯರು ಕಾವ್ಯನಾಮಗಳಿಂದ ಸಾಹಿತ್ಯ ಸೇವೆಯನ್ನು ಪ್ರಾರಂಭಿಸಿದವರೂ ಸ್ನೇಹಿತರ ವಲಯದಲ್ಲಿ "ಬಾಗಿಲುಕೋಟೆಯ ಶಾಲಿಗ್ರಾಮ;" ಎಂದು ವಿನೋದಕ್ಕೆ ಪಕ್ಕಾಗಿದ್ದವರು, "ಕನ್ನಡದ ವಾಲ್ಟರ್ ಸ್ಕಾಟ್" ಎಂಬ ಕೀರ್ತಿಭಾಜನರೂ ಪ್ರಸಿದ್ಧ ವಕೀಲರೂ ಸಾಹಿತ್ಯ ಪ್ರೇಮಿಗಳೂ ಆಗಿದ್ದ ಶ್ರೇಷ್ಠ ಕತೆಗಾರ ಕೆರೂರು ವಾಸುದೇವಾಚಾರ್ಯರ ವೃತ್ತಾಂತವಿದೆ.

ದ.ಕೃ. ಭಾರದ್ವಾಜರು ಎಂದೊಡನೆ ನೆನಪಾಗುವುದು ಅವರ ಇಂಗ್ಲಿಷ್ ಕನ್ನಡ ನಿಘಂಟು. ನಮ್ಮ ತಾತನವರ ಕಾಲದಿಂದ ನಮ್ಮವರಗೆ ಎಲ್ಲರೂ ಬಳಸಿದ ನಿಘಂಟು ಅದು. ಅವರದು ಬಹುಮುಖ ಪ್ರತಿಭೆ. ಆಯುರ್ವೇದ ಪ್ರವೀಣರು; ಮಕ್ಕಳ ಪುಸ್ತಕ, ಪತ್ರಿಕೆ ಸಂಪಾದಕರು, ರಂಗಭೂಮಿ ಪತ್ರಿಕೆ ಪ್ರಾರಂಭಿಸಿದವರು, ಹಿಂದಿ ಪ್ರಚಾರಕರು, ಗಾಂಧಿ ಭಕ್ತರು, ಗಾಂಧೀ ಸಾಹಿತ್ಯ ರಚನಕಾರರು, ಹಾಸ್ಯಗಾರರು, ಪುಸ್ತಕ ಸಂಗ್ರಹಕಾರರು, ಸಮಾಜ ಸುಧಾರಕರು; ಮೊದಲ ಬಾರಿಗೆ ದಾಂಪತ್ಯ ವಿಜ್ಞಾನ, ಆಹಾರ ವಿಜ್ಞಾನ, ಸಂತಾನ ವಿಜ್ಞಾನ ಮುಂತಾದ ಕೃತಿಗಳನ್ನು ಕನ್ನಡಕ್ಕೆ ತಂದವರು. ಬಹುಭಾಷಾ ವಿಶಾರದರು, ಬಹುಮುಖ ಪ್ರತಿಭೆಯ ಸಾಹಿತಿ, ವಿದ್ವಾಂಸರು, ಕಲಾವಿದರು, ದೇಶಭಕ್ತ ಸಾಹಿತಿ ದ.ಕೃ. ಭಾರದ್ವಾಜ ಅವರನ್ನು ಮೊದಲ ಬಾರಿಗೆ ವಿಶಿಷ್ಟ ರೀತಿಯಲ್ಲಿ ಪರಿಚಯಿಸಿದ್ದಾರೆ.

ಈ ಗ್ರಂಥದಲ್ಲಿ ಕೊನೆಯ ಲೇಖನವಾದರೂ ಮಹತ್ವಪೂರ್ಣ ಅಪರೂಪದ ಲೇಖನ ಬಾಲ ಸರಸ್ವತಿಯವರನ್ನು ಕುರಿತದ್ದು. ಬಾಲಸರಸ್ವತಿಯವರು ಅಸಾಧ್ಯರಲ್ಲಿ ಅಸಾಧ್ಯ ಪುರುಷರು. ಡಿ.ವಿ.ಜಿ.ಯವರು ವರ್ಣಿಸಿರುವಂತೆ "ಆಳು ಗಿಡ್ಡೆಂದೇ ಹೇಳಬೇಕು, ದಪ್ಪವೂ ಅಲ್ಲ, ಬಣ್ಣ ಎಣ್ಣೆಗೆಂಪು, ಸೊಗಸಾಗಿ ಬಾಚಿ ಪೋದಿ ಮಾಡಿದ ಗಡ್ಡ, ತಲೆ ತುಂಬಾ ಕೂದಲು, ಬೈತಲೆ ತೀಡಿ ಹಾಕಿದ ಎಣ್ಣೆಗಂಟು, ಹಣೆಯಲ್ಲಿ ದಮಡಿ ಅಗಲದ ಕುಂಕುಮದ ಬೊಟ್ಟು" ಇರುವ 'ವಿದ್ವಾನ್ ಬಾಲ ಸರಸ್ವತಿ' ಕಾವ್ಯನಾಮದ ನರಹರಿ ಆಚಾರ್ಯರು. ಬೆಂಗಳೂರಿನ ಆಚಾರ್ಯ ಪಾಠಶಾಲೆಯನ್ನು ಸ್ಥಾಪಿಸಿದವರು, ನರ್ಸರಿ ಶಿಕ್ಷಣ ಶಾಲೆಯನ್ನು ಮೊದಲು ನಡೆಸಿದವರು, ಸಂಸ್ಕೃತದಲ್ಲಿ ಬೈಬಲ್ ಬರೆದವರು, ಬಂಗಾಳಕ್ಕೆ ಹೋಗಿ ಬಂಗಾಳಿ ಭಾಷೆಯನ್ನು ಕಲಿತವರು, ಡಿ.ವಿ.ಜಿ.ಯವರಿಗೆ ಸಂಸ್ಕೃತ ಹೇಳಿಕೊಟ್ಟವರು.

ಸ್ವತಂತ್ರ ವೃತ್ತಿಯ ಸಾಹಿತಿ, ಮೈಕಳ ಶಿಕ್ಷಕ, ಅನುವಾದಕ, ವಾಗ್ವಿಶಾರದ, ಸಂಸ್ಕೃತ ಪಂಡಿತವರೇಣ್ಯ ಳಂಕ್ಕೂ ಹೆಚ್ಚು ಪತ್ತೇದಾರಿ ಕಾದಂಬರಿಗಳನ್ನು ರಚಿಸಿದ ಮಹಾನ್ ಸಾಹಿತಿ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪತ್ತೇದಾರಿ ಕಾದಂಬರಿಗಳ ಇತಿಹಾಸ ಸೃಷ್ಟಿಸಿ, ಬಂಗಾಳಿಯಿಂದ ಅನುವಾದ ಮಾಡಿ, ಕನ್ನಡ ಸಿರಿ ಹೆಚ್ಚಿಸಿ, ಸಂಸ್ಕೃತ ಸೌರಭವನ್ನು ಎಲ್ಲೆಡೆ ಬೀರಿ, ಕನ್ನಡದ ಓದುಗರಿಗೆ ತಮ್ಮ ಕೃತಿಗಳಿಂದ ಅಜರಾಮರರಾಗಿ ವಿದ್ವಾಂಸ ಬಾಲ ಸರಸ್ವತಿಯವರು ಇಂದಿಗೂ ಮರೆಯಲಾಗದ, ಮರೆಯಬಾರದ ಸಾಹಿತಿ ವಿದ್ವಾಂಸರಾಗಿದ್ದಾರೆ.

ಹೀಗೆ ಅಪೂರ್ವ ವ್ಯಕ್ತಿಗಳ ಅಸಾಧ್ಯ ಸಾಧನೆಗಳನ್ನು ಅನಾಜಿಯವರು ಈ ಗ್ರಂಥದಲ್ಲಿ ನಿರೂಪಿಸಿದ್ದಾರೆ. ಒಂದು ಕಾಲದಲ್ಲಿ ಕನ್ನಡದ ಅಧ್ವರ್ಯುಗಳಾಗಿ ಕಾಯಾ ವಾಚಾ ಮನಸಾ ಕನ್ನಡವನ್ನು ಉಳಿಸಿ ಬೆಳೆಸಿದಂತಹ ಕನ್ನಡದ ದಿಗ್ಗಜರು, ಇಂದಿನ ಕನ್ನಡಿಗರಿಗೆ ಅಪರೂಪವಾಗಿ, ಅಶರೀರಗಳಾಗಿ, ಅದೃಶ್ಯರಾಗಿ, ಅಪರಿಚಿತರಾಗಿರುವವರನ್ನು

ಇಂದಿನ ಕನ್ನಡಿಗರಿಗೆ ಪರಿಚಯಿಸುವಂತಹ ಅಮೋಘವಾದ ಕಾರ್ಯವು ಈ ಕೃತಿಯಿಂದಾಗಿದೆ. ಗ್ರಂಥಕರ್ತರಾದ ಪ್ರೊ। ಜಿ. ಅಶ್ವತ್ಥನಾರಾಯಣ ಅವರ ಶೈಲಿ ಅತ್ಯಂತ ಹೃದ್ಯವಾಗಿದ್ದು, ಸುಲಭವಾಗಿ ಓದಿಸಿಕೊಂಡು ಹೋಗುತ್ತದೆ. ಸದ್ದುಗದ್ದಲವಿಲ್ಲದೆ ಕೀರ್ತಿ ಕಾಮಿಗಳಾಗದೆ, ವನಸುಮವು ಸೌರಭವನ್ನು ಸೂಸುವಂತೆ ಕನ್ನಡದ ಸೌರಭವನ್ನು ಸೂಸುತ್ತಾ ಕನ್ನಡ ಸಾಹಿತ್ಯದ ಪರಿಚಾರಕರಾಗಿ ಕೈಂಕರ್ಯವನ್ನು ಸಲ್ಲಿಸುತ್ತಿದ್ದಾರೆ. ಅವರಿಂದ ಇನ್ನೂ ಉತ್ತಮ ಕೃತಿಗಳು ಕನ್ನಡದ ಸಹೃದಯರಿಗೆ ದೊರೆಯುವಂತಾಗಲೆಂದು ಆಶಿಸುತ್ತೇನೆ. ಈ ಗ್ರಂಥವನ್ನು ಓದಿದವರು ಭಾಗ್ಯಶಾಲಿಗಳು, ಪುಣ್ಯಮೂರ್ತಿಗಳು, ಆನಂದಪುರುಷರು, ಓದದವರ ಬಗ್ಗೆ ನಾನೇನೂ ಹೇಳುವುದಿಲ್ಲ.

******

ಹೊಸಕೆರೆ ಚಿದಂಬರಯ್ಯನವರ ಜೀವನ ಚರಿತ್ರೆ

ಡಾ. ಕಾಂತಾಪುರ ಸುರೇಶ್
ಚರವಾಣಿ : ೯೮೪೪೩೮೩೧೮೦

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ೩೦ ವರ್ಷಗಳ ಕಾಲ ಪದವಿ ತರಗತಿಯ ವಿದ್ಯಾರ್ಥಿಗಳಿಗೆ ಕನ್ನಡ ಬೋಧಿಸಿರುವ ಪ್ರೊ. ಜಿ. ಅಶ್ವತ್ಥನಾರಾಯಣರು ಅಪಾರ ಶಿಷ್ಯ ಬಳಗವನ್ನು ಹೊಂದಿರುವವರು. ಹಳಗನ್ನಡ ಕಾವ್ಯದಲ್ಲಿ ಹೆಚ್ಚು ಪಾಂಡಿತ್ಯ ಹೊಂದಿರುವ ಇವರು ಸಾವಿರಾರು ಉಪನ್ಯಾಸಗಳನ್ನು ನಾಡಿನಾದ್ಯಂತ ನೀಡಿದವರು. ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿದ ಹಲವಾರು ಸಾಧಕರನ್ನು ಕುರಿತು ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಅಂತಹ ಪ್ರಯತ್ನದ ಪ್ರತಿಫಲವೇ ಈ ಕೃತಿ. ಜನಾಂಗದ ಹಿನ್ನೆಲೆಯುಳ್ಳ ಹಲವಾರು ಸಂಘ ಸಂಸ್ಥೆಗಳು ತಮ್ಮ ಸಮುದಾಯದ ಮಹನೀಯರನ್ನು ಪರಿಚಯಿಸುವ ಹಂಬಲ ಹೊಂದಿರುತ್ತವೆ. ಈ ಸದಾಶಯದೊಂದಿಗೆ ಪ್ರಕಟವಾದ ಕೃತಿಗಳ ಸಾಲಿಗೆ ಇದು ಸೇರುತ್ತದೆ. ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ಜನಿಸಿದ ಚಿದಂಬರಯ್ಯನವರ ಬಹುಮುಖ ವ್ಯಕ್ತಿತ್ವ ಅನಾವರಣಗೊಂಡಿರುವುದು ಇಲ್ಲಿ ಗಮನಿಸಬೇಕಾದ ಸಂಗತಿ. ಎಲೆಮರೆಯ ಕಾಯಿಯಾಗಿ ತಮ್ಮ ಪಾಡಿಗೆ ತಾವು ಇದ್ದು ಬಿಡುವವರು. ಸಮಾಜದ ಮುಖ್ಯವಾಹಿನಿಗೆ ಬರಬೇಕಾದ್ದು ಅನಿವಾರ್ಯ. ಚಿದಂಬರಯ್ಯನವರ ಜನನ, ಕುಟುಂಬ ಜೀವನ ಮತ್ತು ವ್ಯಕ್ತಿತ್ವವನ್ನು ಪರಿಚಯಿಸುತ್ತ ಇವರ ಅಭಿರುಚಿಗಳನ್ನು, ಸಂಪ್ರದಾಯಗಳನ್ನು, ಮಕ್ಕಳ ಮೇಲಿನ ಪ್ರೀತಿಯನ್ನು ಲೇಖಕರು ವಿಶ್ಲೇಷಿಸಿದ್ದಾರೆ. ಗ್ರಂಥ ಪ್ರಕಟಣೆಯ ಸಂದರ್ಭದ ನಿಲುವುಗಳನ್ನು ತಿಳಿಸಿದ್ದಾರೆ. ಚಿದಂಬರಯ್ಯನವರ ಪುಸ್ತಕ ಪ್ರೀತಿ, ಪುಸ್ತಕ ಪ್ರಕಟಿಸಲು ಅವರು ಕೊಟ್ಟ ಸಹಕಾರ ಹಾಗೂ ಕೆಲವು ಪ್ರಕಾಶಕರ ಧೋರಣೆಗಳನ್ನು ಹೊರಹಾಕಿದ್ದಾರೆ.

ಕನ್ನಡ ಸಾಹಿತ್ಯ ರಂಗದಲ್ಲಿ ತಂದೆ-ಮಕ್ಕಳಿಬ್ಬರೂ ಸಾಹಿತಿಗಳಾಗಿ ಗುರುತಿಸಿಕೊಂಡ ಹಲವರ ಸಾಲಿಗೆ, ಚಿದಂಬರಯ್ಯ ಹಾಗೂ ಅವರ ಮೂರನೆಯ ಮಗ ಅನಂತಮೂರ್ತಿ ಶಾಸ್ತ್ರಿಯವರನ್ನು ಸೇರಿಸಿರುವುದು ಸ್ವಾಗತಾರ್ಹ ಸಂಗತಿ. ಇವರು ಸಂಸ್ಕೃತ ವಿದ್ವತ್ ಪ್ರವೀಣರಾಗಿದ್ದು, ಸಾಧನೆಯ ವಿವರಗಳನ್ನು ಕಲೆಹಾಕಿದ್ದಾರೆ. ಚಿದಂಬರಯ್ಯನವರ ಬಾಲ್ಯ ಮತ್ತು ವಿದ್ಯಾಭ್ಯಾಸದ ಬಗ್ಗೆ ಚರ್ಚಿಸುತ್ತ ಚಿಕ್ಕಂದಿನಿಂದಲೇ ಪದ್ಯರಚನೆಯಲ್ಲಿ ತೊಡಗಿಸಿಕೊಂಡ ರೀತಿ, ಸ್ವ ಪ್ರಯತ್ನದಿಂದಲೇ ಕನ್ನಡ, ಸಂಸ್ಕೃತ, ಮರಾಠಿ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದುಕೊಂಡ ಬಗೆಯನ್ನು ತಿಳಿಸಿದ್ದಾರೆ. ಬೆಂಗಳೂರಿನ ಗಾಂಧಿ ಮೈದಾನದಲ್ಲಿ ಭಾಷಣಗಳನ್ನು ಕೇಳಲು ಬರುತ್ತಿದ್ದ ಚಿದಂಬರಯ್ಯನವರ ದೇಶಾಭಿಮಾನದ ಬಗ್ಗೆ ಅ.ನ.ಕೃ.ರವರು ತಮ್ಮ ಆತ್ಮಕಥೆ ಬರಹಗಾರನ ಬದುಕು ಗ್ರಂಥದಲ್ಲಿ ದಾಖಲಿಸಿರುವ ವಿಚಾರವನ್ನು ಉಲ್ಲೇಖಿಸಿದ್ದಾರೆ. 'ಸುಶಿಲಾ ಪರಿಣಯ' ನಾಟಕದ ಪದ್ಯಗಳ ಹಿನ್ನೆಲೆಯಲ್ಲಿ ಇವರ ಪಾಂಡಿತ್ಯವನ್ನು

ಗುರುತಿಸಿದ್ದಾರೆ. ಬಸವಪ್ಪ ಶಾಸ್ತ್ರೀಗಳ ಕೃತಿಗಳ ಪ್ರಭಾವಕ್ಕೆ ಒಳಗಾಗಿರುವ ಅಂಶವನ್ನು ಚರ್ಚಿಸಿದ್ದಾರೆ.

ಆದರ್ಶ ಶಿಕ್ಷಕರಾಗಿ ಚಿದಂಬರಯ್ಯನವರ ಕಾರ್ಯಕ್ಷಮತೆಯನ್ನು ತೆರೆದಿಟ್ಟಿದ್ದಾರೆ. ಸುಬ್ಬರಾಯರಿಗೆ ಇವರು ಕೊಟ್ಟ ಸಹಕಾರವನ್ನು ಗುರುತಿಸಿದ್ದಾರೆ. ಸುಬ್ಬರಾಯರಿಗೆ ಹೇಗೆ ಚಿದಂಬರಯ್ಯರ ಸಹವಾಸದಿಂದ ಕನ್ನಡ ಅಭ್ಯಾಸದಲ್ಲಿ ಆಸಕ್ತಿ ಹುಟ್ಟಿತೋ ಹಾಗೆಯೇ ಚಿದಂಬರಯ್ಯರಿಗೆ ಸುಬ್ಬರಾಯರಿಂದ ಸಂಸ್ಕೃತ ಗ್ರಂಥಗಳ ಅಭ್ಯಾಸದ ಗೀಳು ಹೆಚ್ಚಾಯಿತೆಂದು ಅಭಿಪ್ರಾಯಪಟ್ಟಿದ್ದಾರೆ. ಒಬ್ಬರು ಮತ್ತೊಬ್ಬರಿಗೆ ಸಹಕರಿಸಿದಾಗ ಆಗುವ ಲಾಭಗಳನ್ನು ಈ ಘಟನೆಯಿಂದ ತಿಳಿಯಬಹುದಾಗಿದೆ. ಚಿದಂಬರಯ್ಯನವರು ಕಡೂರಿನಲ್ಲಿ ಶಿಕ್ಷಕರಾಗಿದ್ದಾಗ ಉಪಾಧ್ಯಾಯರ ಸಂಘವನ್ನು ಕಟ್ಟಿಕೊಂಡು ಮಾಡಿದ ಚಟುವಟಿಕೆಗಳನ್ನು ಕುರಿತು ಮಾಹಿತಿ ನೀಡಿದ್ದಾರೆ. ಒಬ್ಬ ಕ್ರಿಯಾಶೀಲ ಶಿಕ್ಷಕನಿಂದ ವಿದ್ಯಾರ್ಥಿ ಸಮುದಾಯಕ್ಕೆ ಆಗುವ ಪ್ರಯೋಜನಗಳನ್ನು ಬಿಚ್ಚಿಟ್ಟಿದ್ದಾರೆ.

ದಾವಣಗೆರೆಯಲ್ಲಿ ಚಿದಂಬರಯ್ಯನವರು ಹಾಗೂ ಸುಬ್ಬರಾಯರು ಒಟ್ಟಾಗಿ ಕಾರ್ಯನಿರ್ವಹಿಸುವ ಸಂದರ್ಭ ಒದಗಿ ಬಂದದ್ದು ಗಮನಿಸಬೇಕಾದ ಸಂಗತಿ. ಸ್ನೇಹಿತರಿಬ್ಬರು ಅನ್ಯೋನ್ಯತೆಯಿಂದ ಕಾರ್ಯನಿರ್ವಹಿಸುವಾಗ ಸಿಗುವ ಸಂತೃಪ್ತಿ, ಕಾರ್ಯದ ಯಶಸ್ಸು ತಮ್ಮ ಬೆಳವಣಿಗೆಗೆ ಪೂರಕವಾದ ಪರಿಸರ ನಿರ್ಮಾಣವಾಗುವ ಬಗೆಯನ್ನು ಗುರುತಿಸಿದ್ದಾರೆ. ಚಿದಂಬರಯ್ಯರಿಗೆ ಕುರ್ತುಕೋಟಿ ಭಾಗವತರ ಪರಿಚಯವಾದ್ದರಿಂದ ಅವರು ಸಂಭ್ರಮಿಸಿದ ರೀತಿಯನ್ನು ತಿಳಿಸಿದ್ದಾರೆ. ಕರ್ನಾಟಕ ಏಕೀಕರಣ ಚಳುವಳಿ ಮತ್ತು ಸ್ವಾತಂತ್ರ್ಯ ಹೋರಾಟಗಳಲ್ಲಿ ತಮ್ಮ ಬರಹಗಳ ಮೂಲಕ ತೋರಿದ ದೇಶಾಭಿಮಾನವನ್ನು ವಿಶ್ಲೇಷಿಸಿದ್ದಾರೆ. ಧಾರವಾಡದಲ್ಲಿ ಆಲೂರು ವೆಂಕಟರಾಯರು ೧೯೦೭ರಲ್ಲಿ ಆರಂಭಿಸಿದ ರಾಷ್ಟ್ರೀಯ ಶಾಲೆಯಲ್ಲಿ ಸಲ್ಲಿಸಿದ ಸೇವೆಯನ್ನು ತಿಳಿಸಿದ್ದಾರೆ. ಚಿದಂಬರಯ್ಯನವರ, ಧಾರ್ಮಿಕ ಶಿಕ್ಷಣದಲ್ಲಿ ಭಾರತದಲ್ಲಿ ಹಿಂದೆ ಆಗಿ ಹೋದ ಧಾರ್ಮಿಕ ಸತ್ಪುರುಷರು ಹಾಗೂ ರಾಷ್ಟ್ರೀಯ ವೀರ ಪುರುಷರ ಚರಿತ್ರೆಯ ಅಂಶಗಳನ್ನು ಕೇಳಿ ವಿದ್ಯಾರ್ಥಿಗಳು ಪ್ರಭಾವಿತರಾದರು ಎಂದು ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ೧೯೧೯ರಲ್ಲಿ ನಡೆದ ಕೀರ್ತನಕಾರರ ಸಮ್ಮೇಳನದಲ್ಲಿ ಭಾಗವಹಿಸುವ ಮೂಲಕ 'ಕೀರ್ತನ ಕಂಠಾಭರಣ' ವೆಂಬ ಹರಿಕಥೆಗಳ ಗ್ರಂಥ ರಚಿಸಲು ಸಾಧ್ಯವಾದ ಬಗೆಯನ್ನು ವಿಶ್ಲೇಷಿಸಿದ್ದಾರೆ. ೧೯೧೭ರಲ್ಲಿ ಅರಸೀಕೆರೆಯಲ್ಲಿ ರಾಮೋತ್ಸವ ಕಾರ್ಯಕ್ರಮದಲ್ಲಿ ಆಧ್ಯಾತ್ಮ ರಾಮಾಯಣವನ್ನು ಹೇಳುತ್ತಿದ್ದರೆಂಬ ಸಂಗತಿಯನ್ನು ತಿಳಿಸಿದ್ದಾರೆ. ಚಿದಂಬರಯ್ಯನವರಿಗಿದ್ದ ದೈವಭಕ್ತಿಯ ಬಗೆಗೆ ಚರ್ಚಿಸಿದ್ದಾರೆ. ಅವರ ಜಪ-ತಪಗಳ ವಿಚಾರವನ್ನು ವಿಶ್ಲೇಷಿಸಿದ್ದಾರೆ. ವಿರೂಪಾಕ್ಷ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ "ಕರ್ಣಾಟಕ ಕವಿರತ್ನ" ಎಂಬ ಬಿರುದನ್ನು ವಿದ್ವಾಂಸರು ಚಿದಂಬರಯ್ಯನವರಿಗೆ ನೀಡಿದ ಸಂಗತಿಯನ್ನು ಕಲೆ ಹಾಕಿದ್ದಾರೆ. ಚಿದಂಬರಯ್ಯರವರು ಯೋಗಾಭ್ಯಾಸವನ್ನು ಮಾಡುತ್ತಿದ್ದರು ಎಂಬ ಅಂಶ ಈ ಕೃತಿಯಲ್ಲಿ ದೊರೆಯುತ್ತದೆ. ಬೆಂಗಳೂರಿನ ಶಂಕರ ಮಠದ ಗುಹೆಯಲ್ಲಿ ಕೆಲವು ಕಾಲ ತಪಸ್ಸು ಮಾಡಿದ್ದರೆಂಬ ವಿಷಯದ ಮೇಲೆ ಬೆಳಕು ಚೆಲ್ಲಿದ್ದಾರೆ. ಒಮ್ಮೆ ಪ್ರಾಣಾಯಾಮ ಸಾಧನೆ ಮಾಡುತ್ತಿದ್ದಾಗ ಅವರಿಗಾದ ಅನಾಹುತವನ್ನು ಚಿತ್ರಿಸಿದ್ದಾರೆ. "ಕನ್ನಡ ನುಡಿ"ಯಲ್ಲಿ ಡಿ.ಕೆ. ಭಾರದ್ವಾಜರು ಬರೆದಿರುವ ಲೇಖನದಲ್ಲಿ ಚಿದಂಬರಯ್ಯರವರು ಜುಟ್ಟು ಬಿಡಲು ಕಾರಣವನ್ನು ಹೇಳಿಕೊಂಡಿರುವ ವಿಚಾರವನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. "ತಲೆಯನ್ನು ನುಣ್ಣಗೆ ಮಾಡಿಕೊಂಡಿದ್ದರೂ ಮನಸ್ಸನ್ನು ನುಣ್ಣಗೆ ಮಾಡಿಕೊಳ್ಳದೆ ಇರುವ ಸನ್ಯಾಸಿಗಳೇ ಬಹಳವಾಗಿ ಕಂಡಿದ್ದರಿಂದ ಅವರ ಗುಂಪಿಗೆ ಸೇರುವುದಕ್ಕೆ

ಇಷ್ಟವಿಲ್ಲದೆ ಜುಟ್ಟನ್ನು ಬಿಟ್ಟುಕೊಂಡಿದ್ದಾರೆ". ಸನ್ಯಾಸಿಯ ಕರ್ಮವು ಗೃಹಸ್ಥನ ಕರ್ಮಕ್ಕಿಂತ ಬೇರೆ ಜಾತಿಯದೆಂಬ ತಿಳುವಳಿಕೆಯ ಜೊತೆಗೆ ವಿಭಿನ್ನವಾಗಿ ಗುರುತಿಸಿಕೊಳ್ಳುವ ಹಂಬಲವಿರುವುದು ಕಾಣುತ್ತದೆ. ವಿಚಾರವಾದಿಗಳೂ ಆಗಿದ್ದ ಚಿದಂಬರಯ್ಯರವರು ಸ್ವಾಮಿಗಳ ಪಾದಪೂಜೆಯನ್ನು ನಾಣ್ಯಗಳಿಂದ ಮಾಡುವುದು ಸರಿಯಲ್ಲ. ಗಂಧಪುಷ್ಪಗಳಿಂದ ಮಾತ್ರ ಮಾಡಬೇಕೆಂದು ಅಭಿಪ್ರಾಯ ಪಡುತ್ತಿದ್ದರೆಂಬ ಚಿಂತನೆಯು ಅವರ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುತ್ತದೆ. ತಮ್ಮ ೬೯ನೇ ವಯಸ್ಸಿನಲ್ಲಿ ನಿಧನರಾದ ಚಿದಂಬರಯ್ಯನವರ ಬಗ್ಗೆ ನಾಡಿನ ಹಲವಾರು ಗಣ್ಯರ ಅಭಿಪ್ರಾಯಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

ಕಾವ್ಯ, ಕಾದಂಬರಿ, ಧಾರ್ಮಿಕ ಗ್ರಂಥಗಳು, ಜೀವನಚರಿತ್ರೆ, ಕೀರ್ತನ ಸಾಹಿತ್ಯ, ನಾಟಕಗಳು ಒಳಗೊಂಡಂತೆ ೭೫ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ ಚಿದಂಬರಯ್ಯರವರ ಕೃತಿಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಅವರು ಬರೆದ ಲೇಖನಗಳ ವಿವರ ನೀಡಿದ್ದಾರೆ. ಕನ್ನಡ ನಾಡಿನ ಹಿರಿಯ ಚೇತನ ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯರವರ ಜೀವನಚರಿತ್ರೆಯನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಕೊಟ್ಟಿರುವ ಲೇಖಕರ ಪ್ರಯತ್ನ ಸ್ವಾಗತಾರ್ಹವಾದುದು. ಮತ್ತೊಬ್ಬರಿಗೆ ಮಾದರಿಯಾಗುವಂತಹದು.

****

ಅನಾಜಿ ಮಾಡಿರುವ 'ಕಬ್ಬಿಗರ ಕಾವಂ' ಕೃತಿಯ ಸಂಪಾದನೆ

– ಡಾ. ಕೆ. ಆರ್. ಗಣೇಶ
ಚರವಾಣಿ : ೯೮೪೫೮೨೪೪೫೩

ಆಂಡಯ್ಯ ಕವಿಯ 'ಕಬ್ಬಿಗರ ಕಾವಂ' ಕೃತಿಯನ್ನು ೧೮೯೩ ರಲ್ಲಿ, ನಾಲ್ಕು ಹಸ್ತಪ್ರತಿಗಳ ಸಹಾಯದಿಂದ, ಮೊದಲು ಸಂಪಾದಿಸಿ ಪ್ರಕಟಿಸಿದವರು ಶ್ರೀ ಎಸ್. ಜಿ. ನರಸಿಂಹಾಚಾರ್ ಮತ್ತು ಎಂ. ಎ. ರಾಮಾನುಜಯ್ಯಂಗಾರ್ ಅವರು. ೧೯೮೬ ರಲ್ಲಿ ಇದರ ಮರುಮುದ್ರಣವಾಯಿತು.

೧೯೩೦ ರಲ್ಲಿ ಎಂ.ಎ. ರಾಮಾನುಜಯ್ಯಂಗಾರ್ ಅವರೊಬ್ಬರೇ ವಿಸ್ತಾರವಾದ ಮುನ್ನುಡಿಯೊಂದಿಗೆ ಆ ಕೃತಿಯನ್ನು ಪ್ರಕಟಿಸಿದರು. ಅಲ್ಲಿ ಅವರು ಪಾಠಾಂತರಗಳನ್ನೂ ನೀಡಿದ್ದಾರೆ. ಕೆಲವು ಹಸ್ತಪ್ರತಿಗಳ ಸಹಾಯದಿಂದ, ಅಚ್ಚುಕಟ್ಟಾಗಿ, ಪಾಠಾಂತರಗಳೊಂದಿಗೆ, ಪದ್ಯಗಳ ಅಕಾರಾದಿ ಮತ್ತು ಅರ್ಥಕೋಶಗಳೊಂದಿಗೆ, ೧೯೬೪ ರಲ್ಲಿ ದೇ. ಜವರೇಗೌಡ ಅವರು 'ಕಬ್ಬಿಗರ ಕಾವಂ' ಅನ್ನು ಸಂಪಾದನೆ ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಆರ್. ವಿ. ಕುಲಕರ್ಣಿ ಅವರು, ಗದ್ಯಾನುವಾದದೊಂದಿಗೆ ೧೯೭೬ ರಲ್ಲಿ, 'ಕಬ್ಬಿಗರ ಕಾವಂ' ಅನ್ನು ಪ್ರಕಟಿಸಿದ್ದಾರೆ. ಎಸ್. ಎಸ್. ಕೋ.ತಿ.ನ. ಅವರು 'ಕಬ್ಬಿಗರ ಕಾವಂ' ಅನ್ನು ಪಾಠಾಂತರಗಳನ್ನು ನೀಡಿ, ೧೯೭೮ ರಲ್ಲಿ ಪ್ರಕಟಿಸಿದರು. ಡಾ. ಪಿ.ವಿ. ನಾರಾಯಣ ಅವರು, ೨೦೦೬ ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ 'ಶಾಂತಿನಾಥ – ಆಂಡಯ್ಯ' ಸಂಪುಟದಲ್ಲಿ, 'ಕಬ್ಬಿಗರ ಕಾವಂ' ಅನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ಈಗ ಪ್ರೊ. ಜಿ. ಅಶ್ವತ್ಥನಾರಾಯಣ ಅವರ 'ಕಬ್ಬಿಗರ ಕಾವಂ' ಕೃತಿಯ ಸಂಪಾದನೆ ಸಿದ್ಧವಾಗಿದೆ. ಸೊಗಸಾದ ಪೀಠಿಕೆಯಲ್ಲಿ ಅಶ್ವತ್ಥನಾರಾಯಣ ಅವರು, ಕವಿಯ ಹೆಸರು, ಕೃತಿಯ ಹೆಸರು, ಅವನ ಕಾಲ, ಕೃತಿಯ ವೈಶಿಷ್ಟ್ಯಗಳನ್ನು ಅತ್ಯಂತ ಸಮರ್ಥವಾಗಿ ನಿರೂಪಿಸಿದ್ದಾರೆ. ಆಂಡಯ್ಯನ ಪ್ರತಿಯೊಂದು ಪದ್ಯಗಳನ್ನೂ ಅನ್ವಯಾನುಸಾರವಾಗಿ ಬಿಡಿಸಿ, ಅರ್ಥ ನೀಡಿ, ಗದ್ಯಾನುವಾದವನ್ನು ನೀಡಿದ್ದಾರೆ. ಇವುಗಳೊಂದಿಗೆ ಆಯಾ ಪದ್ಯಗಳಲ್ಲಿರುವ ವಿಶೇಷ ಪದಗಳು ಮತ್ತು ಅವುಗಳ ವಿವಿಧ ರೂಪಗಳು (ಹಳಗನ್ನಡ ಮತ್ತು ಹೊಸಗನ್ನಡದ ರೂಪಗಳು), ಆಂಡಯ್ಯನು ಬಳಸಿರುವ ತದ್ಭವಗಳಿಗೆ ಇರುವ ತತ್ಸಮ ರೂಪಗಳನ್ನೂ ನೀಡಿದ್ದಾರೆ. ಕಠಿಣಪದಗಳ ಅರ್ಥಗಳು, ಸಮಾಸ ಪದಗಳು, ವ್ಯಾಕರಣ ವಿಶೇಷಗಳು ಇದ್ದಾಗ ಅವುಗಳನ್ನೂ ಸೇರಿಸಿ, ಹಿಂದೆ ಎಂದೂ ಪ್ರಕಟವಾಗದ ರೀತಿಯಲ್ಲಿ ವಿವರಣೆಗಳನ್ನು ಅಚ್ಚುಕಟ್ಟಾಗಿ ನೀಡಿದ್ದಾರೆ. ಎಲ್ಲಾ ಪಾಠಾಂತರಗಳನ್ನೂ ಅಶ್ವತ್ಥನಾರಾಯಣ ಅವರು ನೀಡಿಲ್ಲ. ಚರ್ಚೆಗೆ ಕಾರಣವಾಗಬಹುದಾದ ಪಾಠಾಂತರಗಳನ್ನು ಮಾತ್ರ ಕೊಟ್ಟು ಅವುಗಳ ಬಗ್ಗೆ ಚರ್ಚಿಸಿದ್ದಾರೆ. ಕೆಲವೊಂದು ಕಡೆ ಎರಡೆರಡು ಪದ್ಯಗಳನ್ನು ಒಟ್ಟಿಗೇ ಓದಿಕೊಳ್ಳಬೇಕಾದ ಅಗತ್ಯ ಬಿದ್ದಾಗ

ಆ ಪದ್ಯವನ್ನು ತನ್ನ ಹಿಂದಿನ ಪದ್ಯದ ಅಥವಾ ಗದ್ಯಭಾಗದ ಮುಂದುವರಿಕೆಯಾಗಿ ಓದಬೇಕಾಗುತ್ತದೆ. ಇಂಥವುಗಳನ್ನು ಅಶ್ವತ್ಥನಾರಾಯಣ ಅವರು ಸೂಕ್ಷ್ಮವಾಗಿ ಗುರುತಿಸಿ ಅವುಗಳಿಗೆ ಒಟ್ಟಿಗೇ ಅನ್ವಯಾರ್ಥ ಮತ್ತು ಗದ್ಯಾನುವಾದಗಳನ್ನು ನೀಡಿದ್ದಾರೆ.

ಶಿಥಿಲದ್ವಿತ್ವಗಳೇನಾದರೂ ಇದ್ದರೆ ಅವುಗಳನ್ನು ಪದ್ಯಗಳಲ್ಲಿ * ಚಿಹ್ನೆಯ ಮೂಲಕ ತೋರಿಸಿದ್ದಾರೆ. ಪದ್ಯದ ಜೊತೆಯಲ್ಲಿ ಅವರು ನೀಡಿರುವ ಕಠಿಣ ಪದಗಳ ಅರ್ಥ ಎಲ್ಲಾ ರೀತಿಯಲ್ಲೂ ಸಮರ್ಪಕವಾಗಿ ತೋರುತ್ತದೆ. ಪದಗಳಿಗೆ ಅರ್ಥ ಹೇಳಲು ಸಾಧ್ಯವಿಲ್ಲದೇ ಹೋದಾಗ ಅವರು ತೋರಿಸಿರುವ ಎಚ್ಚರ ಸಮರ್ಥವಾಗಿದೆ. ಅವರು ಹೇಳಿರುವ ಸಮಾಸ ಪದಗಳು, ಪದಗಳ ರೂಪ ಹಾಗೂ ವ್ಯಾಕರಣದ ವಿಚಾರಗಳು ಅನುಕರಣೀಯವಾಗಿವೆ.

ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಕೃತಿಯನ್ನು ಸಂಪಾದಿಸಿರುವ ರೀತಿ, ಅವರು ನೀಡಿರುವ ವಿವರಗಳು ಒಂದು ಮಾದರಿಯಾಗಿ, ಹಳಗನ್ನಡ ಕೃತಿಗಳನ್ನು ಅಭ್ಯಾಸ ಮಾಡುವವರಿಗೆ ಕೈದೀವಿಗೆಯಂತಿದೆ. ಶಬ್ದಗಳಿಗೆ ವ್ಯಾಖ್ಯಾನ ಮಾಡುವಾಗ, ಟಿ. ವಿ. ವೆಂಕಟಾಚಲಶಾಸ್ತ್ರೀ, ಎಂ.ಎ. ರಾಮಾನುಜಯ್ಯಂಗಾರ್, ಎಸ್.ಎಸ್. ಕೋ.ತಿ.ನ., ದೇ. ಜವರೇಗೌಡ, ಆರ್. ವಿ. ಕುಲಕರ್ಣಿ ಮತ್ತು ರಂ.ಶ್ರೀ. ಮುಗಳಿ ಅವರ ವ್ಯಾಖ್ಯಾನಗಳನ್ನು ಬಳಸಿಕೊಂಡಿದ್ದಾರೆ. ಕೇಶಿರಾಜನ ಶಬ್ದಮಣಿದರ್ಪಣದ ಆಧಾರಗಳನ್ನು ಅಶ್ವತ್ಥನಾರಾಯಣ ಅವರು ಬಳಸಿಕೊಂಡಿರುವ ರೀತಿಯನ್ನು ನೋಡಿದರೆ, ಕನ್ನಡ ವ್ಯಾಕರಣ ಪರಂಪರೆಯ ಬಗ್ಗೆ ಅವರಿಗೆ ಇರುವ ಅಸಾಧಾರಣ ಜ್ಞಾನದ ಅರಿವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಹಳಗನ್ನಡವನ್ನು ಅಭ್ಯಾಸ ಮಾಡಬೇಕೆಂದು ಆಸೆ ಇರುವವರಿಗೆ, ಅವರು ವಾಸಮಾಡುವ ಸ್ಥಳದ ಕಾರಣದಿಂದ ಅಥವಾ ಅಭ್ಯಾಸ ಮಾಡಲು ಸಿಗುವ ಸಮಯದ ಅನನುಕೂಲದಿಂದ ತೊಂದರೆಗಳಾಗುತ್ತವೆ. ಇವುಗಳಲ್ಲದೆ ಅಭ್ಯಾಸಕ್ಕೆ ಬೇಕಾದ ಮೂಲಸೌಕರ್ಯಗಳು ಮತ್ತು ಪಾಠ ಮಾಡುವ ವಿದ್ವಾಂಸರ ಕೊರತೆಯೂ ಇರುತ್ತದೆ. ಅಂಥವರಿಗೆ, ಅಶ್ವತ್ಥನಾರಾಯಣ ಅವರು 'ಕಬ್ಬಿಗರ ಕಾವಂ' ಅನ್ನು ಸಂಪಾದಿಸಿರುವ ಹೊಸ ರೀತಿ ಅತ್ಯಗತ್ಯವಾಗಿ ಬೇಕಾಗುತ್ತದೆ. ಮೊದಲಿನಿಂದ ಕೊನೆಯವರೆಗೆ ಹಂತ-ಹಂತವಾಗಿ ಕಾವ್ಯಭಾಗಗಳನ್ನು ಬರೆದು ಅಭ್ಯಸಿಸಬೇಕಾದ ರೀತಿಯನ್ನು ಪ್ರೊ.ಜಿ. ಅಶ್ವತ್ಥನಾರಾಯಣ ಅವರು ತೋರಿಸಿಕೊಟ್ಟಿದ್ದಾರೆ.

****

ಕುಟುಂಬ

ನಾ ಕಂಡಂತೆ ನಮ್ಮ ತಂದೆ

ಡಾ॥ ಕ್ಷಮಾ ಅಶ್ವತ್ಥ
ಚರವಾಣಿ : +೧(೩೦೧)೪೫೨-೨೫೯೪

೨೭ ವರ್ಷಗಳಿಂದ ಅಮೇರಿಕಾದಲ್ಲಿ ವಾಸವಾಗಿರುವ ನನಗೆ ಜೀವನ ಹಲವಾರು ಅನುಭವಗಳನ್ನು ಪಾಠಗಳನ್ನು ಕಲಿಸಿದೆ. ಈ ಅನುಭವಗಳು ನನ್ನ ಜೀವನದ ದೃಷ್ಟಿಕೋನವನ್ನು ಹಲವಾರು ರೀತಿಗಳಲ್ಲಿ ಬೆಳೆಸಿದೆ, ಬದಲಾಯಿಸಿದೆ! ನನ್ನ ಅಂತರಾತ್ಮದ ಶಕ್ತಿ, ಚೈತನ್ಯಕ್ಕೆ ಮೂಲತಃ ಕಾರಣವಾದ, ನನ್ನ ಶಕ್ತಿ ದೌರ್ಬಲ್ಯಗಳನ್ನು ಚೆನ್ನಾಗಿ ಅರಿತವರಾದವರಲ್ಲಿ, ಎಲ್ಲರಿಗೂ ಮುಂದಾಗಿ ಪ್ರಮುಖವಾಗಿ, ನನ್ನ ತಂದೆ ತಾಯಿ. ಅವರು ನೀಡಿದ ಜೀವನ, ಶಕ್ತಿ, ಬೆಂಬಲ ನಂಬಿಕೆ ಇಂದು ನನ್ನ ಜೀವನದ ಅಡಿಪಾಯವಾಗಿ, ವಿಶಾಲವಾಗಿ ಬೆಳೆದಿದೆ.

ಯಾವುದೇ ಕಾರ್ಯ ಮಾಡುವ ಮೊದಲು ತಾಯಿಯ ಆಶೀರ್ವಾದ ಮುಖ್ಯ. ಈ ಪ್ರಬಂಧ ಅಣ್ಣನಿಗೆ ಸಮರ್ಪಿತ! ಆದರೂ, ನನ್ನ ಜೀವನದ ಎರಡು ತಪ್ಪಗವಲುಗಳಾಗಿರುವ ನನ್ನ ಅಮ್ಮ - ಅಣ್ಣ, ಒಬ್ಬರಿಲ್ಲದೆ ಇನ್ನೊಬ್ಬರು ಅಪೂರ್ಣ ಎನ್ನುವುದು ನನ್ನ ನಂಬಿಕೆ. ಆದ್ದರಿಂದ 'ನಾ ಕಂಡಂತೆ ಅಣ್ಣ'ನ ಸಂಪೂರ್ಣ ವರ್ಣನೆ, ಅಮ್ಮನಿಲ್ಲದೆ ಇರುವುದು ನ್ಯಾಯ ಸಮ್ಮತವಲ್ಲ. ಅಣ್ಣನ ಪ್ರತಿ ಹೆಜ್ಜೆಯಲ್ಲೂ, ಅಮ್ಮನ ಪ್ರೀತಿ, ವಿಶ್ವಾಸ, ಒಡನಾಟ, ಹೋರಾಟ, ಬೆಂಬಲ, ನಂಬಿಕೆ ಮತ್ತು ಆತ್ಮವಿಶ್ವಾಸ ಕಾಣಿಸಿಕೊಳ್ಳುತ್ತದೆ.

ಅಣ್ಣನ ಕೆಲಸದ ವರ್ಗಾವಣೆಯ ಕಾಲದಿಂದ ಪುಸ್ತಕ ಸಂಗ್ರಹದ ವ್ಯವಸ್ಥೆಯ ಅನುಕೂಲ ಸ್ವೀಕಾರ, ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯಾಸಕ್ತಿಯಲ್ಲಿ ಜೊತೆ ಜೊತೆಯಾಗಿ, ಕೆಲವೊಮ್ಮೆ ಸಹಭಾಗಿಯಾಗಿ, ಕೆಲವೊಮ್ಮೆ ತೆರೆಮರೆಯಲ್ಲಿ ತನ್ನ ಪ್ರೀತಿ ಬೆಂಬಲವನ್ನು ತೋರಿಸುತ್ತಾ, ತನ್ನ ಜೀವನದ ಮೈಲಿಗಲ್ಲುಗಳನ್ನು ಆಶಯಗಳನ್ನು ಪಕ್ಕದಲ್ಲಿಟ್ಟು, ನನ್ನ ಮತ್ತು ಅಣ್ಣನ ಬೆಳವಣಿಗೆಯಲ್ಲೇ ಸಂತೋಷಪಡುವ, ನನ್ನ ಸಾಹಿತಿ ಅಮ್ಮನಿಗೆ ನನ್ನ ಅನಂತಾನಂತ ಪ್ರಣಾಮಗಳು.

ಮೊದಲೇ ಹೇಳಿದಂತೆಯೇ ೨೭ ವರ್ಷಗಳು ಸಾಕಷ್ಟು ಪರಿಣಾಮವನ್ನು ನನ್ನ ಮೇಲೆ ಬೀರಿದೆ. ಇದರಲ್ಲಿ ಕನ್ನಡದ ಬರವಣಿಗೆ, ಭಾಷೆಯ ಪ್ರೇಮ ಕೂಡ ಪ್ರಮುಖವಾದದ್ದು. ಇಷ್ಟು ವರುಷಗಳಲ್ಲಿ, ಅಲ್ಲಿ ಇಲ್ಲಿ ಸ್ವಲ್ಪ ಬರೆದಿದ್ದರೂ, ಈ ಪ್ರಬಂಧವೇ ನನ್ನ ಮೊದಲ ದೊಡ್ಡ ಬರವಣಿಗೆ, ದಿನನಿತ್ಯದ ಇಲ್ಲಿನ (ಅಮೇರಿಕೆಯ) ಇಂಗ್ಲಿಷ್ ಭಾಷೆಯ ಬಳಸುವಿಕೆ ನನ್ನ ಜೀವನದ ಎಲ್ಲಾ ಅಂಶಗಳಲ್ಲಿ ಬೇರೂರಿದೆ. ಶ್ರೀ ಟಿ.ವಿ. ರಾಜುರವರು ಅಣ್ಣನ ಅಭಿನಂದನಾ ಗ್ರಂಥದ ಬಗ್ಗೆ ಹೇಳಿ, ಪ್ರಬಂಧದ ಆಹ್ವಾನವನ್ನು ಕಳುಹಿಸಿದಾಗ ನನ್ನಲ್ಲಿ ಎಲ್ಲಿಲ್ಲದ ಉತ್ಸಾಹ-ಭಯ ಎರಡೂ ಮೂಡಿತು. ಅಣ್ಣನ

ಸಾಹಿತ್ಯಾಭಿರುಚಿಯನ್ನು ಬಹಳ ಹತ್ತಿರದಿಂದ ನೋಡಿರುವ ನಾನು, ನನ್ನ ಪಾಲನೆಯ ಪ್ರತಿಯೊಂದು ಹಂತದಲ್ಲೂ ಅಣ್ಣನ ಕನ್ನಡಾಭಿಮಾನವನ್ನು ನನ್ನ ಜೀವನದ ಪ್ರತಿಯೊಂದು ಅಂಶದಲ್ಲೂ ಬೇರೂರಿರುವ ಕನ್ನಡತನದ ಆಸ್ವಾದವನ್ನು ಜನರೊಂದಿಗೆ ಹಂಚಿಕೊಳ್ಳುವ ಅವಕಾಶ ಉತ್ಸಾಹ ತಂದಿತು. ಆದರೆ, ಬಹಳ ವರ್ಷಗಳ ಮೇಲೆ ಹೇಗೆ ಕನ್ನಡದಲ್ಲಿ ಬರೆಯುವುದು? ಅದೂ ಇಬ್ಬರು ಕನ್ನಡ ಸಾಹಿತಿಗಳ ಮಗಳಾಗಿ ಎಲ್ಲಿ ಕುಂದು ಬರುವುದೋ ಎಂಬ ಭಯವನ್ನೂ ಹುಟ್ಟಿಸಿತು. ಆದ್ದರಿಂದ ಇಂಗ್ಲಿಷ್-ಕನ್ನಡ ಎರಡರಲ್ಲೂ ಬರೆದು, ಕನ್ನಡದ ಪ್ರಬಂಧವನ್ನು ಮಾತ್ರ ಅಮ್ಮ-ಅಣ್ಣನಿಗೆ ಹೇಳದೆಯೇ, ಟಿ.ವಿ. ರಾಜುರವರಿಗೆ ಕಳುಹಿಸುವ ನಿರ್ಧಾರ ಮಾಡಿ, ಇದು ಅಣ್ಣನಿಗೆ ನನ್ನ ಕಡೆಯಿಂದ ಅಚ್ಚರಿ ಮೂಡಿಸಲು ಬರೆಯುತ್ತಿದ್ದೇನೆ.

ಒಬ್ಬ ತಂದೆಯ ಪ್ರೀತಿ ಹಲವಾರು ರೀತಿಯಲ್ಲಿ ಪ್ರಕಟವಾಗುತ್ತದೆ. ಆದರೆ ಒಬ್ಬ ಹೆಣ್ಣುಮಗಳು ತಂದೆಗೆ, ಒಂದು ರೀತಿಯ ವಿಶೇಷ ಪ್ರೀತಿ, ಅವಳ ಮೇಲಿನ ಹೆಮ್ಮೆ. ಅವಳ ಮೇಲಿನ ಅಪ್ರತಿಮ ಆತ್ಮವಿಶ್ವಾಸ, ಎಲ್ಲ ತಂದೆಯಂದಿರಿಗೂ ಬರುವುದಿಲ್ಲ. ಈ ಮನೋಭಾವದ ಹಿಂದೆ ಒಂದು ರೀತಿಯ ನಂಬಿಕೆ ಅಡಗಿದೆ. ನನ್ನ ಅಣ್ಣನಲ್ಲಿನ ಈ ಮನೋಭಾವ ಮಗಳಾಗಿ ನಾನು ಹಲವಾರು ಸನ್ನಿವೇಶಗಳಲ್ಲಿ ನೋಡಿದ್ದೇನೆ.

ಒಬ್ಬಳೇ ಮಗಳಾಗಿರುವ ನನಗೆ ಎಲ್ಲಾ ತರಹದ ಸಕಲ ಸೌಕರ್ಯಗಳನ್ನು ನೀಡಿರುವ ನನ್ನ ತಂದೆ ತಾಯಿ ಮುಖ್ಯವಾಗಿ ಒಂದು ಹೆಣ್ಣುಮಗಳಿಗೆ ಯಾವ ರೀತಿಯ ಅಡೆತಡೆಯ, ಅನುಭವವನ್ನೂ ಕೊಡದೆ, ಅವಳ ಜವಾಬ್ದಾರಿಯನ್ನು ಅರಿತು ಅವರಳ ಮುಗಿಲೆತ್ತರದ ಆಶಯಗಳನ್ನು ಸಾಧಿಸುವುದರಲ್ಲಿ ಬೆಂಬಲ ನೀಡಿದವರು. ಇದರಲ್ಲಿ ತಾಯಿಯ ಪಾತ್ರ ಎಷ್ಟು ಮುಖ್ಯವೋ ಅದಕ್ಕಿಂತ ಮಿಗಿಲಾಗಿ ತಂದೆಯ ವಿಶ್ವಾಸ, ಬೆಂಬಲವೂ ಮುಖ್ಯ.

ನನ್ನ ಅಣ್ಣ, ಯಾವಾಗಲೂ ಈ ಒಂದು ಮಾತನ್ನು ಹೇಳುವುದು ನನ್ನ ಮನದಲ್ಲಿ ಅಚ್ಚುಹಾಕಿದೆ. ಹಲವಾರು ಸ್ನೇಹಿತರು, ನಮ್ಮ ತಂದೆತಾಯಿಗಳ ಸಹೋದ್ಯೋಗಿಗಳು ನಮ್ಮ ಮನೆಗೆ ಬರುತ್ತಿದ್ದರು. ಇದರಲ್ಲಿ ಕೆಲವರ ಪ್ರಶ್ನೆ "ಓ ನಿಮಗೆ ಒಬ್ಬಳೇ ಮಗಳೇ ? ಮಗನಿಲ್ಲವೇ?" ಎಂದಿರುತ್ತಿತ್ತು. ಅದಕ್ಕೆ ಥಟ್ಟನೆ ನನ್ನಣ್ಣ ಒಂದೇ ಒಂದು ನಿಮಿಷವೂ ಹಿಂಜರಿಯದೇ "ನಮಗೆ" "ಮಗಳ"ಲ್ಲಿಯೇ "ಮಗ"ನೂ ಇದ್ದಾನೆ. ಆದ್ದರಿಂದ ನಮಗೆ ಯಾವ ಗಂಡು ಮಗನ ಅವಶ್ಯಕತೆ ಇಲ್ಲ" ಎಂದು ಉತ್ತರಿಸುತ್ತಿದ್ದರು. ಇಷ್ಟು ವರುಷಗಳ ಮೇಲೂ ಇದೇ ಉತ್ತರ! ಈ ರೀತಿಯ ಕಡುನಂಬಿಕೆ, ಒಬ್ಬ ಹೆಣ್ಣುಮಗಳಿಗೆ, ಬೇರೆಲ್ಲಾ ಸವಲತ್ತು ಐಷಾರಾಮಿಗಳಿಗಿಂತಾ ಅಮೂಲ್ಯವಾದದ್ದು.

ಇಂಥ ವಾತಾವರಣದಲ್ಲಿ ಬೆಳೆದ ನನಗೆ, ಪ್ರಪಂಚದಲ್ಲಿ ಹೆಣ್ಣುಗಂಡುಗಳ ತಾರತಮ್ಯ ಕಂಡರೆ ಆಶ್ಚರ್ಯವಾಗುತ್ತಿತ್ತು. ಒಬ್ಬ ಮಗಳಿಗೆ ತಾಯಿಯ ಸ್ಥೈರ್ಯ, ದಿಟ್ಟತನ ಸ್ವಾಭಾವಿಕವಾಗಿ ಬರುತ್ತದೆ. ಆದರೆ ತಂದೆಯ ಈ ಮನೋಭಾವ, ಪ್ರೀತಿ, ಬೆಂಬಲ ಮತ್ತು ವಿಶ್ವಾಸ, ವಿಶೇಷವಾದದ್ದು. ಅಮೂಲ್ಯವಾದದ್ದು.

"ನಾ ಕಂಡಂತೆ ನನ್ನ ಅಣ್ಣ" ಎನ್ನುವ ಒಂದು ಕಾಲ್ಪನಿಕ ಪುಸ್ತಕವನ್ನು ನನ್ನ ಹೃದಯದಲ್ಲಿ ಎಂದೋ ಬರೆದಿದ್ದೇನೆ. ವರುಷಗಳು ಉರುಳುತ್ತಿದ್ದಂತೆ ಈ ಕಾಲ್ಪನಿಕ ಪುಸ್ತಕವೂ ಅಣ್ಣನ ವಯಸ್ಸಿನ ಜೊತೆಯೇ ನನ್ನ ಮನಸ್ಸಿನಲ್ಲಿ ಹಲವಾರು ರೂಪ ತಾಳುತ್ತದೆ.

ಬೆಳೆಯುತ್ತಿರುವ ಕಾಲದಲ್ಲಿ, ನನ್ನ ಅಣ್ಣ ನನ್ನ ಜೀವನದ ಮೊದಲ ಕಥೆಗಾರ. ಪ್ರತಿ ರಾತ್ರಿ, ನನ್ನ ಅಣ್ಣ ಹಲವಾರು ಜನಜನಿತ ಕತೆಗಳಲ್ಲದೇ, ಹಲವಾರು ಥಟ್ಟನೆ ಮೂಡಿಸಿದ ಕಾಲ್ಪನಿಕ ಕತೆಗಳ ಲಾಲಿ ಹೇಳುತ್ತಿದ್ದರು. ಈ ಕಾಲ್ಪನಿಕ ಕತೆಗಳಲ್ಲಿ ನಿಜ ಜೀವನದ ಯಾವುದೇ ಪ್ರಾಯೋಗಿಕ ಅನ್ವಯಗಳು ಸ್ವಲ್ಪವೂ ಇರುತ್ತಿರಲಿಲ್ಲ! ಆದರೆ ಬೆಳಯುತ್ತಿರುವ ನನ್ನ ಮುಗ್ಧ ಮನಸ್ಸಿನಲ್ಲಿ, "ಜೀವನದಲ್ಲಿ ಕಲ್ಪನೆಗಳಿಗೆ ಮಿತಿಯೇ ಇಲ್ಲ" ಎಂಬ ಅನುಭವವನ್ನು ರೂಪಿಸಿತು. ದೊಡ್ಡವಳಾಗುತ್ತಾ ಈ ಕಥೆಗಳಲ್ಲಿ ಆಸಕ್ತಿ ಕಡಿಮೆ ಆಗುತ್ತಾ ಬಂದಿತು. ಆದರೆ ಈ ಕಥೆಗಳು ಒಂದು ರೀತಿ ಸೃಜನಶೀಲತೆಯ ಅಡಿಪಾಯವನ್ನು ಹಾಕಿತು. ಇತ್ತೀಚೆಗೆ ಒಂದು ವೈಜ್ಞಾನಿಕ ಲೇಖನದಲ್ಲಿ ಜೀವನದ ಪ್ರಮುಖ ಅಂಶಗಳಲ್ಲಿ ಸೃಜನಶೀಲತೆಯ ಪ್ರಾಮುಖ್ಯತೆಯ ಬಗ್ಗೆ ಓದಿ, ನನ್ನ ಅಣ್ಣನ ಕಾಲ್ಪನಿಕ ಕಥೆಗಳ ಪರಿಣಾಮ ನನ್ನ ಮೇಲೆ ವ್ಯರ್ಥವಾಗಿಲ್ಲ ಎಂದು ಅನ್ನಿಸಿತು. ಅಣ್ಣನಿಗೆ ಹೇಗೋ ಇದರ ಧನಾತ್ಮಕ ಪರಿಣಾಮ, ಮಕ್ಕಳ ಬೆಳವಣಿಗೆಯಲ್ಲಿನ ಪ್ರಾಮುಖ್ಯತೆಯ ಅರಿವು ಇದ್ದಿತು. ಈ ಕಥೆಗಳ ಸಾರ ನನ್ನ ಎಲ್ಲಾ ಸೋದರ ಸಂಬಂಧಿಗಳ ಮೇಲೂ ಪರಿಣಾಮ ಬೀರಿದೆ.

ಈ ಕಥೆಗಳು ಬರೀ ಕಥೆಯಾಗಿ ಇರುವುದಲ್ಲ. ಕಥೆಗಳನ್ನು ಕೇಳುವಾಗ ಬರುವ ನನ್ನ ಪ್ರಶ್ನೆಗಳು, ಒಮ್ಮೊಮ್ಮೆ ನನ್ನ ಅಚ್ಚುಮೆಚ್ಚಿನ ಕತೆಗಳನ್ನು ಹಲವಾರು ಬಾರಿ ಹೇಳಿಸಿ, ಅಣ್ಣನ ವರ್ಗಾವಣೆಯ ಸಮಯದಲ್ಲಿ ಅಣ್ಣನ ತೀವ್ರವಾದ ಅನುಪಸ್ಥಿತಿಯ ಭಾವನೆ, ಅಣ್ಣನ ಮೇಲಿನ ನನ್ನ ಸ್ನೇಹ ಪ್ರೀತಿಯನ್ನು ಗಟ್ಟಿಗೊಳಿಸಲು ಬುನಾದಿ ಹಾಕಿದವು.

ಈ ವರ್ಗಾವಣೆಯ ದಿನಗಳ ನೋವು. ಅನುಪಸ್ಥಿತಿಯನ್ನು ಹೇಗೋ ಅರಿತ ನನ್ನ ಅಣ್ಣ, ಹಿಂದಿರುಗುವಾಗ ದಾರಿಯಲ್ಲಿನ ಆನೇ ಬಡಾವಣೆ, ಐಯ್ಯಂಗಾರ್ ಬೇಕರಿಯಿಂದ, ನನ್ನ ಅಚ್ಚುಮೆಚ್ಚಿನ ಕಪ್ ಕೇಕ್ ಹಿಡಿದು ಬರುವಾಗ ನನ್ನ ಉತ್ಸಾಹಕ್ಕೆ ಎಣೆಯೇ ಇರುತ್ತಿರಲಿಲ್ಲ. ಟಿ.ವಿ. ಅಷ್ಟು ಜನಜನಿತ ಕಾರ್ಯಕ್ರಮಗಳನ್ನು ಇನ್ನೂ ಪ್ರಸಾರ ಮಾಡುತ್ತಿರದ ಕಾಲ! ನನ್ನ ಅಣ್ಣನ ಕಥೆಗಳೇ ನನ್ನ ಮನೋರಂಜನೆ, ಅಣ್ಣನೇ ನನ್ನ ಆಪ್ತ ಸ್ನೇಹಿತ!

ಅಣ್ಣನ ಪುಸ್ತಕ ಭಂಡಾರದಲ್ಲಿ ಅತ್ಯಂತ ಅಮೂಲ್ಯವಾದ ಪುಸ್ತಕಗಳು, ಚಿಕ್ಕವಳಾಗಿದ್ದಾಗ, ನನಗೂ ನನ್ನ ಎಲ್ಲಾ ಸೋದರ ಸಂಬಂಧಿಗಳಿಗೂ, ಹಾತೊರೆದು ಕಾಯುವ, ಓದುವ ತವಕವನ್ನು ಹುಟ್ಟಿಸಿತು.ಹಲವಾರು, ಮಕ್ಕಳ ಸಾಹಿತ್ಯದ ಪುಸ್ತಕಗಳು, ಅನುಪಮಾ ನಿರಂಜನವರ ಸಂಕಲನ, ಶಿವರಾಮ ಕಾರಂತರ ಲೇಖನಗಳು, ಜೊತೆಗೆ ಚಂದಮಾಮ, ಬಾಲಮಿತ್ರ, tinkle ನಂತಹ ಜನಜನಿತ ಪುಸ್ತಕಗಳೊಂದಿಗೆ ಬೆಳೆದಂಥ ಹೆಮ್ಮೆ ನನ್ನದು!

ಅಣ್ಣ ಪ್ರೀತಿ ವಿಶ್ವಾಸದ ಚಿಹ್ನೆ ಬರೀ ಪುಸ್ತಕ ಕೊಡಿಸುವುದಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ನನ್ನ ಜತೆಗೆ ಯಾರೂ ಆಟವಾಡಲೂ ಇಲ್ಲದಿದ್ದಾಗ ನನ್ನ ಜೊತೆಯಲ್ಲಿ chess, carom board ಮತ್ತು puzzles ಮಾಡುತ್ತಿದ್ದರು. ನನ್ನ ಜೀವನದ ಗುರಿ ಆಗ ಏನಾದರೂ ಮಾಡಿ ಅಣ್ಣನನ್ನು ಸೋಲಿಸುವುದು. ಆದರೆ ಅಣ್ಣ ಮಗಳೆಂಬ ಮಮಕಾರದಿಂದ ಯಾವ ಆಟವನ್ನು ಸುಲಭವಾಗಿ ಗೆಲ್ಲಲು ಬಿಡುತ್ತಿರಲಿಲ್ಲ! ಆಗ ನನಗೆ ಅನುಭವವಾದದ್ದು ಅಣ್ಣನ ಆಟದಲ್ಲಿನ ಉತ್ಸಾಹ ಮತ್ತು ಸ್ಪರ್ಧಾತ್ಮಕ ಮನೋಭಾವ. ಈ ಪ್ರಸಂಗ ನನ್ನ ಜೀವನದಲ್ಲಿ ಒಂದು ಅತ್ಯಮೂಲ್ಯವಾದ ಪಾಠ ಕಲಿಸಿತು. ಗೆಲುವು ಸುಲಭವಲ್ಲ, ಪರಿಶ್ರಮದ ಜೊತೆಗೆ ಯೋಜನೆ, ಚಿಂತನೆಯೂ ಮುಖ್ಯವಾಗಿರುವುದೆಂದು. ಈ ಹಲವಾರು ಸನ್ನಿವೇಶಗಳು, ಅಣ್ಣನ ಸಹಯೋಗ, ಸ್ನೇಹ, ಪ್ರೀತಿ ವಿಶ್ವಾಸಗಳನ್ನು ಬೆಳೆಸಿತು. ತಂದೆ

ಎನ್ನುವ ಗೌರವವಿದ್ದರೂ, ಭಯವಿಲ್ಲದೇ, ಮುಕ್ತವಾಗಿ ಮಾತನಾಡುವ ಆತ್ಮವಿಶ್ವಾಸ ಬೆಳೆಯಲು ದಾರಿದೀಪವಾಗಿತ್ತು. ಈ ರೀತಿಯ ತಂದೆ ಮಗಳ ಸಂಬಂಧ ಒಂದು ರೀತಿ ಮಗಳಿಗೆ ಉಡುಗೊರೆ!

ಅನಾಜಿಯನ್ನು ಬಹಳ ಚೆನ್ನಾಗಿ ಬಲ್ಲವರು ಅವರ ಸಾಹಿತ್ಯಾಸಕ್ತಿ, ಪುಸ್ತಕ ಸಂಗ್ರಹದ ಪ್ರೇಮವನ್ನು ಅರಿಯುತ್ತಿದ್ದಾರೆ. ಅಣ್ಣನ ಕನ್ನಡ ಪಾಠ ಮಾಡುವ ಉತ್ಸಾಹ, ಕನ್ನಡ ಸಾಹಿತ್ಯಕ್ಕೆ ರಾತ್ರಿ-ಹಗಲೂ ಎನ್ನದೇ ಪರಿಶ್ರಮಿಸುವ ಅಣ್ಣನ ಸಾಹಿತ್ಯಾಸಕ್ತಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಯಾರೇ ಸಹಾಯ ಕೋರಿ ಬಂದರೂ ಇಲ್ಲ ಎನ್ನದೆಯೇ ತನ್ನ ಪ್ರಾಮಾಣಿಕವಾದ ಸಹಾಯ ನೀಡುವ ಮನೋವೃತ್ತಿ- ಇವೆಲ್ಲಾ ತಿಳಿದಿದ್ದಾರೆ. ನನ್ನ ಚಿಕ್ಕಂದಿನ ಅನುಭವ ಮನೆಯಲ್ಲಿ ಯಾರಾದರೂ ಯಾವಾಗಲೂ ಸಾಹಿತ್ಯಾವಲೋಕನಕ್ಕಾಗಲಿ, ಯಾವುದೇ ಸಾಹಿತ್ಯ ಸಲಹೆಗಾಗಲೀ ಬರುತ್ತಲೇ ಇರುತ್ತಿದ್ದರು. ಈ ರೀತಿಯ ಸಾಹಿತ್ಯದ ವಾತಾವರಣದಲ್ಲಿ ಬೆಳೆದ ನನಗೆ ವಿದೇಶಕ್ಕೆ ಬಂದಾಗ ಒಂದು ರೀತಿಯ culture shock ಆಗಿತ್ತು. ಅಮೇರಿಕೆ ಕಾರುಗಳು, ರಸ್ತೆಗಳು, ಜನ ಇದ್ಯಾವುದೂ ಅಲ್ಲ. ನನ್ನ ಮನಸ್ಸಿನಲ್ಲಿ culture ಎನ್ನುವುದು ಅಮ್ಮ, ಅಣ್ಣನ ಜೊತೆಗಿನ ಊಟದ ಸಮಯದ, ಸಾಹಿತ್ಯ ಚರ್ಚೆಯ ಅನುಭವ! ಆದರೆ ಅಮೇರಿಕಾದಲ್ಲಿ ಇದು ಅಲಭ್ಯ! ಅದೇ ಹಲವಾರು ಬಾರಿ ಅಮ್ಮ ಅಣ್ಣ ಇಲ್ಲಿಗೆ ಬಂದಾಗ ಒಂದು ರೀತಿ ಆ ಕಳೆದುಹೋದ ರಸಾನುಭವ ತಿರುಗಿಬರುತ್ತಿತ್ತು. ಅಣ್ಣನ ನಿರರ್ಗಳವಾದ ಮಂಕುತಿಮ್ಮನ ಕಗ್ಗದ "ರಾಗಮಾಲಿಕೆ", ನಾನು ಅಣ್ಣ walk ಹೋದಾಗ ರಂಗೇರುತ್ತಿತ್ತು! ಮನೆಯ ಹಾಲಿನಲ್ಲಿ ಅಣ್ಣನ ಬರಹಗಳ ಕಾಗದಗಳು, ಬೆಂಗಳೂರಿನಿಂದ ತಂದ ಪುಸ್ತಕದ ಕಂತೆ, ಹೊಸ ಬರವಣಿಗೆಯ ಚರ್ಚೆ, ಎಲ್ಲಾ ಅಮೇರಿಕೆಯಲ್ಲಿ ಪುಟ್ಟ ಬೆಂಗಳೂರಿನ ನನ್ನ ತಾಯಿ ಮನೆಯ ಅನುಭವ ತರುತ್ತಿತ್ತು.

ಇದರೊಟ್ಟಿಗೆ, ನನ್ನ ಮಕ್ಕಳಿಗೆ ಕನ್ನಡ ಕಲಿಸುವುದರಲ್ಲಿ ತಲ್ಲೀನರಾಗಿ ಹೋಗುವ ಹಾದಿಯ ಹೂಗಳ ಬಣ್ಣವನ್ನು ಕನ್ನಡದಲ್ಲಿ ಹೇಳುತ್ತಾ ಮೊಮ್ಮಕ್ಕಳ ಗಮನವನ್ನು ಅವರಿಗೆ ತಿಳಿಯದಂತೆ ಕನ್ನಡದ ಕಡೆಗೆ ಸೆಳೆದ ಜಾಣ ತಾತ!

ಆದರೆ ಮಗಳ ಜೊತೆ, ಕನ್ನಡ ಬರೆಯುವಿಕೆಯಲ್ಲಿ ಕಟ್ಟುನಿಟ್ಟು! ಯಾವುದೇ ಬೇರೆ ವಿಷಯದಲ್ಲಿ ಯಾವ ರೀತಿಯ ಕಟ್ಟುಪಾಡು ಹಾಕುತ್ತಿರಲಿಲ್ಲ. ಆದರೆ ಕನ್ನಡ ಅಕ್ಷರಾಭ್ಯಾಸದಲ್ಲಿ ಯಾವ ರಾಜಿಯೂ ಇರಲಿಲ್ಲ. ಅಕ್ಷರಾಭ್ಯಾಸದಲ್ಲಿ ಸೊಟ್ಟ ಒತ್ತಕ್ಷರದ ತಪ್ಪುಗಳು ಇವೆಲ್ಲವನ್ನು ಕೂಲಂಕಷವಾಗಿ ನೋಡಿ, ತಿದ್ದಿ, ಮತ್ತೆ ಮತ್ತೆ ಅಭ್ಯಾಸ ಮಾಡಲು ಕೊಟ್ಟು, ಒಮ್ಮೊಮ್ಮೆ ಓಡಿ ಹೋಗುವ ನೆಪಮಾಡಲು, ನನ್ನನ್ನು ಹಿಡಿದು ಕೂಡಿಸಿ ಬರೆಸುತ್ತಿದ್ದುದು ನಾನು ಇನ್ನೂ ಮರೆತಿಲ್ಲ. ಆದರೆ ಮೊಮ್ಮಕ್ಕಳಲ್ಲಿ ಯಾವ ಕಟ್ಟುಪಾಡೂ ಇಲ್ಲದೇ, ಅವರ ಪ್ರೀತಿಯ ತಾತನಾಗಿ, ಬೆರೆಯುತ್ತಿರುವ ಅಣ್ಣನನ್ನು ನೋಡಿ ಹಲವಾರು ಸಲ ಬೆರಗಾಗಿದ್ದೇನೆ.

ಚಿಕ್ಕವಳಿದ್ದಾಗ ಈ ರೀತಿಯ ಶಿಸ್ತಿನ, ಸಂಸ್ಕಾರದ, ಕನ್ನಡಾಭಿಮಾನ, ಅದರ ಪ್ರಾಮುಖ್ಯತೆಯ ಅರಿವು ಇರಲಿಲ್ಲ. ಆದರೆ ೨೭ ವರುಷಗಳು ಭಾರತದಿಂದ ಹೊರಗಿದ್ದು ವೃತ್ತಿ ಜೀವನದಲ್ಲಿ ದಿನನಿತ್ಯದ ಉಪಯೋಗದಲ್ಲಿ ಕನ್ನಡ ಇಲ್ಲದಿದ್ದರೂ, ಇನ್ನು ನನ್ನ ಕನ್ನಡ ಲಿಪಿ, ಸರಳವಾಗಿ ಬರೆಯುವ ಅಭ್ಯಾಸ, ನನ್ನ ಅಡುಗೆ ಮನೆಯ ಡಬ್ಬಿಗಳ ಸಾಮಾನುಗಳು ಮೇಲಿನ ಕನ್ನಡದ ಹೆಸರುಗಳು, ನನ್ನ ಮಕ್ಕಳಿಗೆ ಒಂದು ರೀತಿ ನನ್ನ ಮೂಲಕ ಕನ್ನಡದ ಕಂಪನ್ನು ಬೀರುವ ಬುನಾದಿ ಹಾಕಿದ್ದಾರೆ. ಬರವಣಿಗೆ ಎನ್ನುವುದು ಅಭ್ಯಾಸದಿಂದ, ಆಸಕ್ತಿಯಿಂದ ಬೆಳೆಯುವಂತಹ ಕಲೆ. ಈಗಿನ ಕಂಪ್ಯೂಟರ್ ಮತ್ತು ಎ.ಐ.ಗಳ ಬಳಕೆಯಿಂದ ಕೈ ಬರಹ ತೀರಾ ಕಮ್ಮಿ ಆಗಿರುವುದು ಒಂದು ರೀತಿ ಮನುಷ್ಯನ ಜನ್ಮಜಾತ

ಪ್ರತಿಭೆಯ ಅವಹೇಳನ ಎನ್ನಬಹುದು. ನನ್ನ ವೃತ್ತಿ ಜೀವನದಲ್ಲಿ ಈ ತಂತ್ರಜ್ಞಾನವನ್ನು ದಿನಿನಿತ್ಯ ಬಳಸಿದರೂ, ಕೈ ಬರಹದಲ್ಲಿನ ಒಂದು ರೀತಿಯ ಸ್ವಭಾವತಃ ಶಾಂತಿ, ಊಹಾ ಜಗತ್ತು, ಭಿತ್ತಿಸುವ ರೀತಿ, ಅಕ್ಷರಗಳ ಸರಳ ಏರು ತಗ್ಗುಗಳು ಪೆನ್ನಿನ ನಯವಾದ ಪಯಣ, ಬರವಣಿಗೆಗೆ ಜೀವತುಂಬುವ ಆನಂದ, ಇವೆಲ್ಲವೂ ಅಣ್ಣನ ಸುಂದರ ಕೈ ಬರಹದ ಪ್ರಭಾವದ ಅನುಭವ, ನನಗೆ ಸ್ಫೂರ್ತಿ!

ನಾ ಕಂಡಂತೆ ನನ್ನ ಅಣ್ಣ ಒಬ್ಬ ಸರಳ ವ್ಯಕ್ತಿ. ಉಡುಪು ತೊಡಪುಗಳಲ್ಲಿ ಆಗಲಿ, ವಾಹನಗಳಲ್ಲಾಗಲಿ , ಆಧುನಿಕ ತಂತ್ರಜ್ಞಾನದಲ್ಲಾಗಲೀ ಯಾವುದೇ ಇತರ ವಿಷಯಗಳಲ್ಲಾಗಲೀ ಆಸಕ್ತಿ ಇಲ್ಲದೇ, ತನ್ನ ಇಡೀ ಜೀವನವನ್ನು ಸಾಹಿತ್ಯಾಸಕ್ತಿಯಲ್ಲೇ ಅದೂ ಕನ್ನಡಕ್ಕೆ ಮೀಸಲಿಟ್ಟಿರುವ ವ್ಯಕ್ತಿ. ಈ ರೀತಿಯ ಮನೋಭಾವದವರು ಈಗಿನ ಜೀವನದಲ್ಲಿ, ಬದುಕಿ ಬಾಳಿ ಅಭಿವೃದ್ಧಿ ಹೊಂದಬೇಕಾದರೆ, ಅವರ ಹಿಂದಿನ ಬೆಂಬಲ ಮತ್ತು ಶಕ್ತಿ ಬಲಶಾಲಿಯಾಗಿರುವಂತಹದು. ಈ ಶಕ್ತಿ ನನ್ನ ಅಮ್ಮ. ಅಮ್ಮ-ಅಣ್ಣರಿಬ್ಬರ ಸಾಹಿತ್ಯಾಸಕ್ತಿ ಅವರ ಒಂದು ರೀತಿಯ ಅಪೂರ್ವವಾದ ಸಂಬಂಧ ಬರಿ ಗಂಡಹೆಂಡರಿಗಿಂತ ಮಿಗಿಲಾಗಿ ಇಬ್ಬರು ಸಾಹಿತಿಗಳ ಸ್ನೇಹಿತರ ಸಂಬಂಧ. ಈ ಆಧುನಿಕ ಜೀವನದಲ್ಲಿ ಇಂಥಹ ಸಾಮಾನ್ಯವಾದ ನಿಗರ್ವಿ ವ್ಯಕ್ತಿತ್ವವನ್ನು ಅವರ ಪ್ರತಿಭೆಯನ್ನು ಅರಿತವರು ಕೆಲವರು ಮಾತ್ರ.

ಇದರಲ್ಲಿ ಒಬ್ಬರು, ೨೭ ವರುಷಗಳು ಜೊತೆ ಜೊತೆಯಲ್ಲಿ ನಡೆದು ಬಂದಿರುವ, ನನ್ನ ಪತಿ ಜಯರಾಂ ಮತ್ತು ನನ್ನ ಮಕ್ಕಳು. ಮಾವನ ಸರಳತೆಗೆ ಸರಿಸಾಟಿಯಾಗಿ, ತಾತನ ಸಾಹಿತ್ಯದ, ಕನ್ನಡ ಪಾಂಡಿತ್ಯವನ್ನು ಅರಿತ ನನ್ನ ಜೀವಸಂಗಮ.

ಅದಿತ್ಯನ ಕನ್ನಡ ಕಲಿಸುವಿಕೆಯಿಂದ ಅಮೋಘಾಳ ಸಂಗೀತ ಕಲಿಯುವಿಕೆಯನ್ನು ಪ್ರೋತ್ಸಾಹಿಸುತ್ತಾ, ಪ್ರತಿಯೊಂದು ಬಾರಿಯ ವಾಟ್ಸಾಪ್ ಸಂಭಾಷಣೆಗಳಲ್ಲಿ, ಅವರಿಬ್ಬರ ಬೆಳವಣಿಗೆಯಲ್ಲಿ ಆನಂದ ಪಡುತ್ತಾ ಹಾಗೆಯೇ ಅವರೊಡನೆ ಕನ್ನಡದಲ್ಲಿ ಮಾತನಾಡುತ್ತಾ ಅವರಿಬ್ಬರಿಗೆ ಕನ್ನಡದ ಸಹಜ ಸಂಭಾಷಣೆಯನ್ನು ಪರಿಚಯಿಸುತ್ತಾ ಅವರನ್ನು ಅವರ ಪ್ರತಿಭೆಯನ್ನು ಪರೋಕ್ಷವಾಗಿ ಬೆಳೆಸುತ್ತಾ ಬಂದಿರುವ ಪ್ರೀತಿಯ ತಾತ, ನನ್ನ ಅಣ್ಣ.

ಬರೀ ಮೊಮ್ಮಕ್ಕಳಿಗಲ್ಲದೇ, ತನ್ನ ಅಳಿಯನಲ್ಲಿಯೂ ಒಂದು ಅನನ್ಯವಾದ ಒಡನಾಟ, ಸಲಿಗೆ ಬೆಳೆಸುತ್ತಾ ಬಂದು ೨೦೦೬ರ ಅಕ್ಕ ಸಮ್ಮೇಳನದ ಸಮಯದಲ್ಲಿ ಹಲವಾರು ಕಡೆಗಳಿಗೆ ಅಳಿಯನ ಜೊತೆಯಲ್ಲಿ ಓಡಾಡಿ, ಅವರಿಗೂ ಕನ್ನಡದ ಸಣ್ಣ ಸಣ್ಣ ಪಾಠಗಳನ್ನು ಮಾಡುತ್ತಾ ತನ್ನ ಕನ್ನಡಾಭಿಮಾನದ ಹುಮ್ಮಸ್ಸನ್ನು ಹಂಚಿ, ನನ್ನ ಸಂಸಾರದ ಎರಡು ವಿಶಿಷ್ಟವಾದ ಬುನಾದಿಯಲ್ಲಿ ಅಮ್ಮನ ಜೊತೆ ಸಮನಾಗಿ ನಿಂತಿರುವ ನನ್ನ ಅಣ್ಣ, ನಮ್ಮ ಮನೆಯಲ್ಲಿನ ಜೀವತಂತು.

ಕನ್ನಡ ಸಾಹಿತಿಯ ಅಣ್ಣನ ಬದುಕಿನ ಪ್ರತಿಯೊಂದು ಅಧ್ಯಾಯವನ್ನು ಹೆಣೆಯುವ ಶಕ್ತಿಯುತವಾದ ನೂಲು. ಅವರ ಜೀವನದ ಪ್ರತಿಯೊಂದು ಅಧ್ಯಾಯದಲ್ಲೂ ಹೆಣೆದ ಈ ನೇಯ್ಗೆಯನ್ನು ಗೌರವಿಸುತ್ತಾ ಅಣ್ಣನ ಈ ಪರಂಪರೆಯನ್ನು, ಕನ್ನಡದ ಮೇಲಿನ ಪ್ರೀತಿ ವಿಶ್ವಾಸವನ್ನು ಗೌರವಿಸುತ್ತ, ನಾನು ನನ್ನ ಸಂಸಾರ ಅಣ್ಣನಿಗೆ, ಅಣ್ಣ ಅಮ್ಮನ ಸಾಹಿತ್ಯ ಸಂಬಂಧಕ್ಕೆ, ನಮಗೆ ನೀಡಿದ ಅಪಾರ ಸಾಹಿತ್ಯಾಸಕ್ತಿಯ ಉಡುಗೊರೆಗೆ ಸದಾ ಚಿರಋಣಿ.

*****

My unwavering strength legacy and a friend

Dr. Kshama Aswath.
Transformational leader,
Biotech Professional, Entrepreneur
Mobile : +1(301)452-2594

"Behind every child who believes in themselves is a parent who believed first." A quote that's close to my heart, because I've lived it. I am incredibly blessed to be one of those in this world who has two strong, loving parents standing by my side, every step of my way, always believing in me, even before I believed in myself. In my Amma, I found my truest friend, the one who listens with her heart, celebrates my joys, stands by me through every up and down, and gently guides me through life. She is not just my mother, but my life coach, offering strength, wisdom, and unconditional love in every step of my journey. In my Anna, I found an unwavering presence, my teacher, my philosopher, and my mentor; someone who believed in me long before I even knew how to believe in myself. Even today, he often reminds me, "In Magalu, we have Maga as well, we never felt the need to crave for a son or another child. You are both to us." Those words have stayed with me not just as comfort, but as a compass. They have shaped how I've raised my children, how I move through the world, and how I show up in my relationships and career. His belief in me became the foundation! continue to stand on. To the world, I may have been "just a girl" but in his eyes, I was capable, powerful, and without limits, not despite being a daughter, but because of it. From very early on, he made sure I knew that.

In our home, the motto was simple but profound: "No books left behind." I grew up living it, in all aspects of my life. My childhood was filled with colorful the pages my of Tinkle, Champak, Chandamama, Balamitra, Misha, and many others. I remember Anna bringing Tinkle at its biweekly release - a prized possession of my childhood! A price so enticing, not just to me but to all my cousins as well, that led to

fighting over who gets the first dibs at it. He was also the chikkappa that brought these fun filled books to all kids in our family and from whom many of them have heard great stories growing up. Amma introduced me to literature through her songs she sang me at bedtime that was K.S.Narasimha swamy, Bendre, Puthina, Kuvempu etc.,'s collections, while Anna introduced to me to the works of many authors like Dr. Shivaram Karantharu and Dr. Anupama Niranjana but also to them in person! Those memories of growing up reading these books, meeting literary personalities are something I always cherish! Anna truly planted in me the seeds of joy in reading, in kannada literature and writing. Anna was also my toughest competitor when it came to carrom board and chess. I lost countless matches to him, often ending in tears, arguments, and dramatic exits. But no matter how many times I lost, Anna never failed to offer me a rematch. In those simple moments, he was quietly teaching me one of life's greatest lessons: resilience and hardwork with strategy. He, let me lose with grace, win with humility, and most importantly, learn through experience. At the time, it just felt like a game. But now I see, those battles across the board were life lessons in disguise, lessons that stayed with me long after the last pawn was pocketed or the king was toppled.

As I entered my college years and stepped into the fascinating world of Applied Botany, he introduced me to the works of B.G.L. Swamy, which captivated me, and Nadkarni's Materia Medica found a permanent place on my desk, a book I consulted like a trusted guide. My Carnatic music journey was deeply enriched by many books Anna provided for me on music annotations, Dasara Keerthanegalu, and heartfelt discussions about Dasa Sahitya and Vachana Sahitya. Those conversations weren't just about music, they were about philosophy and devotion. One vivid memory etched in my heart is of him sitting at the dining table, I was required to practice my Carnatic music lessons - one sarale varase practiced, at a time! His eyes would remain on the board, but his ears missed nothing. That moment, so ordinary, yet so layered with love, discipline, and care, speaks volumes of how he wove music and devotion into the fabric of my everyday life. Anna had a quiet mission to imbibe in me a deep appreciation for all things Kannada: its literature, culture, and art and he succeeded, not just through books, but by experience. I remember attending numerous dramas, dance dramas, and classical music concerts at Ravindra Kalakshetra and Town Hall with Anna - moments that built the cultural fabric of my childhood and even today, I look back on them with deep affection and gratitude - they were more than outings; they were windows into art, tradition, and the bond we shared.

Welcoming his son-in-law into his family was marked by a special gift! A book about true essence marriage that Anna gave us on our wedding day and in meticulously and lovingly crafting our wedding invitation with his flowery flow of words. Through this thoughtful gesture, he made it clear that he wasn't just welcoming a son-in-law, but entrusting a legacy. In marrying me, Jayaram wasn't only gaining a partner, but he was also stepping into a rich heritage of literature, values, and wisdom that Anna and Amma holds dear.

Even after I moved to the U.S., our conversations, once over telephone and now on WhatsApp , always returned/s to books about books Anna edited, books he authored, books that captivated and inspired him, his projects on Bhagavad Geethe, Soundarya Lahiri and many more in the making. His high school prize - a cherished bhagavadgeethe book by Vinobha, made its way to me. I read it often and now share its pages with my family. No conversation with Anna ever passes without him recalling a memory involving a literary figure be it D.V.G., Maasti, or another stalwart, often tied to some incident from his own life. These weren't just name-drops, but living memories he carries with pride and joy, and shares with the same spark every single time.

People often asked me, when I had newly migrated to the U.S., about my "culture shock." Honestly, my biggest culture shock wasn't food, language, or lifestyle- it was mostly not living in a vibrant library anymore and not having literary discussions at the dinner table. During my many years of graduate studies in the U.S., and in the face of life's many challenges both personal and professional, I found myself reaching for something deeper, more spiritual, and more grounding. And it was during that time that Anna reintroduced me to Mankuthimmana Kagga and the Bhagavad Gita in more detail. It wasn't that I hadn't heard of them before but the real journey of understanding them, of walking through their meanings, began when Anna Amma were visiting us in the U.S. I vividly remember our walks around the block Anna walking beside me, reciting Mankuthimmana Kagga aloud, verse after verse, explaining each line's essence with clarity and reverence. He would pause to highlight the poetic style and layered wisdom, and in doing so, helped me to see life through a new lens. What was meant to be just a walk around the block became a lengthy spiritual dialogue that continued into the home.

Anna's contribution to Kannada literature goes far beyond his published works or his role as a professor. It lives in the generous ways he mentored, not only his own students but also countless Ph.D. candidates, often without any formal credit. But perhaps his most personal and enduring contribution has been the way he passed on

that love for Kannada to his grandchildren. When Anna and Amma came to visit and help, when Amogha was born, Anna made the most of Aditya's after- school hours. With patience and joy, he taught him Kannada so effectively that Aditya could read and write the language fluently at a young age. Their drives to and from daycare became mini language lessons, layered with stories, songs, and rhythmic repetitions. I can still hear Anna saying, "Bili Hoovu Mara, Kempu Hoovu Mara," with kids repeating after him in their sweet, eager voice. His unwavering love for his granddaughter Amogha was something truly special. It often felt as though he was reliving my own babyhood through her - with the same affection, delight, and wonder in his eyes and as always, gently nudging her to speak in Kannada with a sparkle in his voice. Every English sentence from them, was instantly followed by its Kannada translation, not as a correction, but as an invitation. An invitation to connect with his roots, with his language, with something deeper than words. Even today it isn't just language he is passing on; it is belonging, identity, and love wrapped in every syllable.

You see, this isn't about a hobby or a mindset - collecting books or being passionate about Kannada. For Anna it's far deeper. It's about depth of knowledge, and a lifelong pursuit of growth in literature, in spirituality, and in his life's experiences. That's what makes my Anna so unique. Many may not understand this truly. I myself have had passionate discussions with him about what comes next- about the future of his precious collection. But over time, I've come to realize something very important: his books, and his relationship with literature, are not just what he loves - they are who he is. It is the soul of his identity. The quiet thread that weaves through every chapter of his life and in honoring that, I honor all that he's built. It is my legacy now and I intend to do right by him.

Through this commemorative book, I sincerely thank the Vinaya Foundation for honoring Anna and permanently etching his legacy and contributions to Kannada literature.

*****

ಹುಟ್ಟಾ ಕನ್ನಡಾಭಿಮಾನಿ

ಜಯರಾಂ ಕೃಷ್ಣಪ್ಪ
ಚರವಾಣಿ : +೧- ೩೦೧-೪೫೨-೨೫೮೭

ಕನ್ನಡ ಪ್ರೇಮಿಗಳು ಬೇರೆ ಬೇರೆ ರೂಪಗಳಲ್ಲಿ ಬರುತ್ತಾರೆ. ಕೆಲವರಿಗೆ ಕನ್ನಡ ಸಿನಿಮಾಗಳು ಇಷ್ಟ, ಕೆಲವರಿಗೆ ಕನ್ನಡ ಸಿನಿಮಾ ಹಾಡುಗಳು, ಕೆಲವರಿಗೆ ಕನ್ನಡ ಜಾನಪದ ಗೀತೆಗಳು ಮತ್ತು ಕೆಲವರಿಗೆ ಕನ್ನಡ ಸಾಹಿತ್ಯ ಇಷ್ಟ. ನನ್ನ ಮಾವ ಮೇಲಿನ ಎಲ್ಲವೂ ಇಷ್ಟ ಆದರೆ ಅವರು ವಿಭಿನ್ನ ರೀತಿಯ ಕನ್ನಡ ಪ್ರೇಮಿ. ಅವರು ಕನ್ನಡ ಭಾಷೆಯನ್ನು ಮತ್ತು ಕನ್ನಡಕ್ಕೆ ಕೊಡುಗೆ ನೀಡುವ ಪ್ರತಿಯೊಬ್ಬರನ್ನು ಪ್ರೀತಿಸುತ್ತಾರೆ. ಅವರು ನಿರಂತರವಾಗಿ ಎಲ್ಲರಲ್ಲೂ ಕನ್ನಡದ ಸಾರವನ್ನು ತುಂಬಲು ಪ್ರಯತ್ನಿಸುತ್ತಾರೆ.

ನಾನು ಪ್ರೊ. ಅಶ್ವತ್ಥನಾರಾಯಣ ಅವರ ಪರಿಚಯವಾದದ್ದು ಅವರ ಮಗಳು ಕ್ಷಮಾ ಅವರನ್ನು ಮದುವೆಯಾದಾಗ. ನಾನು ಕ್ಷಮಾ ಅವರ ಕುಟುಂಬದೊಂದಿಗೆ ಹೆಚ್ಚು ಸಮಯ ಕಳೆಯಲಿಲ್ಲ ಆದರೆ ಅವರು ಸಂಗ್ರಹಿಸಿದ ಪುಸ್ತಕಗಳ ಸಂಖ್ಯೆಯಿಂದ ನನಗೆ ಆಶ್ಚರ್ಯವಾಯಿತು. ಈ ಪುಸ್ತಕಗಳು ಕೇವಲ ಪ್ರದರ್ಶನಕ್ಕಾಗಿ ಮಾತ್ರವಲ್ಲ, ಅವರು ತಮ್ಮ ಲೇಖನಗಳು, ಪುಸ್ತಕಗಳು, ಉಲ್ಲೇಖಗಳು ಮತ್ತು ಭಾಷಣಗಳಿಗಾಗಿ ಎಲ್ಲಾ ಪುಸ್ತಕಗಳನ್ನು ಉಲ್ಲೇಖಿಸುತ್ತಾರೆ ಮತ್ತು ಬಳಸುತ್ತಾರೆ ಎಂದು ನನಗೆ ಶೀಘ್ರದಲ್ಲೇ ತಿಳಿದುಬಂದಿತು.

2003 ರಲ್ಲಿ ಅವರು ನಮ್ಮ ಮನೆಗೆ ಬಂದು 6 ತಿಂಗಳು ನಮ್ಮೊಂದಿಗೆ ಇದ್ದಾಗ ನನಗೆ ಅವರ ಪರಿಚಯವಾಯಿತು. ಕ್ಷಮಾಳ ತಂದೆ ಮತ್ತು ತಾಯಿ ನಮ್ಮ ಮನೆಗೆ ಬಂದಾಗ, ನನ್ನ ಮಾವ ಮಕ್ಕಳಿಗೆ ಕನ್ನಡ ಕಲಿಸುವ ಕೆಲಸವನ್ನು ಮುಂದುವರಿಸಲು ಬಯಸಿದ್ದರಿಂದ ಬಹಳಷ್ಟು ಪುಸ್ತಕಗಳನ್ನು ತಂದರು. ನಾವು ಅವರ ಕೋಣೆಯಲ್ಲಿ ಒಂದು ಮೇಜು, ಆರಾಮದಾಯಕ ಕುರ್ಚಿ ಮತ್ತು ಶೆಲ್ಫ್‌ಗಾಗಿ ವ್ಯವಸ್ಥೆ ಮಾಡಿದೆವು. ನನ್ನ ಮಾವ ದಿನ ಇಡೀ ಕಾರ್ಯನಿರತರಾಗಿರುತ್ತಿದ್ದರು. ಅವರು ಯಾವಾಗಲೂ ಓದಲು ಅಥವಾ ಅವರ ಕಥೆಗಳನ್ನು ಬರೆಯಲು ಒಂದು ಪುಸ್ತಕವನ್ನು ಇಟ್ಟುಕೊಂಡಿರುತ್ತಿದ್ದರು ಎಂದು ನನಗೆ ನೆನಪಿದೆ.

ನಾನು ನನ್ನ ಮಾವನೊಂದಿಗೆ ಹೆಚ್ಚು ಹೆಚ್ಚು ಮಾತುಕತೆ ನಡೆಸುತ್ತಿದ್ದಂತೆ, ಅವರಲ್ಲಿದ್ದ ಕನ್ನಡ ಭಾಷೆಯ ಆಳ ಮತ್ತು ಕನ್ನಡ ಭಾಷೆಯ ಮೇಲಿನ ಅವರ ಹಿಡಿತವನ್ನು ನಾನು ಅರಿತುಕೊಳ್ಳಲು ಪ್ರಾರಂಭಿಸಿದೆ. ಕನ್ನಡ ಸಾಹಿತ್ಯ ಲೋಕದ ಶ್ರೇಷ್ಠ ಕೊಡುಗೆದಾರರೊಂದಿಗೆ ಅವರು ತಮ್ಮ ಜೀವನದಲ್ಲಿ ಹೊಂದಿದ್ದ ಬಾಂಧವ್ಯವನ್ನು ಕಂಡು ನಾನು ಆಶ್ಚರ್ಯಚಕಿತನಾದೆ. ಕನ್ನಡ ಸಾಹಿತ್ಯ ಜಗತ್ತಿನ ಈ ಪ್ರತಿಭಾನ್ವಿತರೊಂದಿಗೆ ಅವರು ಸಂಬಂದ ಹೊಂದಿದ್ದರು. ಅವರಿಗೆ ಸಂಬಂಧಿಸಿದ ಈ ಕಥೆಗಳನ್ನು ಇತ್ತೀಚೆಗೆ ನಡೆದಂತೆ ವಿವರವಾಗಿ ಹೇಳುತ್ತಿದ್ದರು. ನಾವು ಮಾಡಿದ ಪ್ರತಿಯೊಂದು ಪ್ರವಾಸದಲ್ಲೂ ಈ ಘಟನೆಗಳನ್ನು ಸ್ವಾರಸ್ಯವಾಗಿ ವರ್ಣಿಸುತ್ತಿದ್ದರು.

ಪ್ರೊಫೆಸರ್ ಅಶ್ವತ್ಥನಾರಾಯಣ ಅವರು ನಮ್ಮನ್ನು ಭೇಟಿ ಮಾಡುತ್ತಿದ್ದಾರೆಂದು ಅವರ ಕೆಲವು ವಿದ್ಯಾರ್ಥಿಗಳು ತಿಳಿದ ತಕ್ಷಣ, ಅವರೆಲ್ಲರೂ ಅವರನ್ನು ಭೇಟಿ ಮಾಡಲು ನಮ್ಮ ಸಮುದಾಯದ ಇತರ ಕನ್ನಡ ಪ್ರೇಮಿಗಳಿಗೆ ಪರಿಚಯಿಸಿದರು. ಶೀಘ್ರದಲ್ಲೇ ಅವರನ್ನು ಭಾಷಣಗಳನ್ನು ನೀಡಲು ಆಹ್ವಾನಿಸಲಾಯಿತು, ಕೆಲವರು ತಮ್ಮ ಪುಸ್ತಕಗಳನ್ನು ಪರಿಶೀಲಿಸಲು ಕೇಳಿಕೊಂಡರು ಮತ್ತು ಕೆಲವು ಯುವ ಕನ್ನಡ ಲೇಖಕರು ಅವರ ಸಲಹೆಯನ್ನು ಕೇಳಿದರು. ಅವರ ಕಾರಣದಿಂದಾಗಿ ನಾವು ಅನೇಕ ಜನರನ್ನು ಭೇಟಿಯಾದೆವು ಮತ್ತು ನಮಗೆ ಇನ್ನೂ ಹತ್ತಿರವಿರುವ ಅನೇಕ ಕನ್ನಡ ಪ್ರೇಮಿಗಳಿಗೆ ಹತ್ತಿರವಾದೆವು.

ಅವರು ಎಲ್ಲಾ ಚಟುವಟಿಕೆಗಳಲ್ಲಿ ನಿರತರಾಗಿದ್ದರೂ, ಅವರು ಇನ್ನೂ ಕನ್ನಡ ಬೋಧನೆಯನ್ನು ಕುರಿತಾದ ತಮ್ಮ ಪುಸ್ತಕಗಳಲ್ಲಿ ಕೆಲಸ ಮಾಡುತ್ತಿದ್ದರು. ನಮ್ಮಂತಹ ಪೋಷಕರು ತಮ್ಮ ಮಕ್ಕಳಿಗೆ ಕಲಿಸಲು ಅವರು ಈ ಪುಸ್ತಕವನ್ನು ಬರೆಯುತ್ತಿದ್ದಾರೆಂದು ನನಗೆ ತಿಳಿದಿರಲಿಲ್ಲ. ಅವರ ಬೋಧನೆಗಳಿಂದಾಗಿ ನಮ್ಮ ಮಕ್ಕಳು ಕನ್ನಡವನ್ನು ಮಾತನಾಡಬಹುದು, ಓದಬಹುದು ಮತ್ತು ಬರೆಯಬಹುದು. ಕನ್ನಡ ಬೋಧನೆಯಲ್ಲಿ ಅವರ ಅನುಭವ ಮತ್ತು ಕನ್ನಡ ಭಾಷೆಯಲ್ಲಿ ಅವರ ಜ್ಞಾನವು ಅಪಾರ.

ನನ್ನ ಮಾವನೊಂದಿಗೆ ನಾನು ತಿಳಿದಂತೆ ಕಳೆದ 27 ವರ್ಷಗಳಿಂದ ಅವರು ಕನ್ನಡಕ್ಕೆ ಕೊಡುಗೆ ನೀಡುತ್ತಲೇ ಇರುತ್ತಾರೆ, ಕನ್ನಡಕ್ಕೆ ಕೊಡುಗೆ ನೀಡಲು ಬಯಸುವವರಿಗೆ ಅವರು ಸಹಾಯ ಮಾಡುತ್ತಾರೆ ಮತ್ತು ಕೇಳಿದಾಗಲೂ ಕನ್ನಡದ ಬಗ್ಗೆ ಸಲಹೆ ನೀಡುವುದನ್ನು ನಿಲ್ಲಿಸಿಲ್ಲ.

ಕನ್ನಡಕ್ಕೆ ನಿಸ್ವಾರ್ಥವಾಗಿ ಕೊಡುಗೆ ನೀಡಿದ ಅವರಂತಹ ವ್ಯಕ್ತಿಯನ್ನು ನಾನು ಎಲ್ಲೂ ನೋಡಿಲ್ಲ. ಅವರು ಅದ್ಭುತ ವ್ಯಕ್ತಿ, ಪತಿ, ತಂದೆ, ಮಾವ, ಸ್ನೇಹಿತ ಮತ್ತು ಅಜ್ಜ ಎಲ್ಲವೂ ಆಗಿದ್ದಾರೆ. ಅವರ ಬಗ್ಗೆ ಗೌರವಗ್ರಂಥವನ್ನು ಹೊರತರುತ್ತಿರುವುದು ತುಂಬಾ ಸಂತಸದ ಸಂಗತಿ. ಈ ಸಂತಸದ ಸಂದರ್ಭದಲ್ಲಿ ಅವರಿಗೆ ಶುಭಕೋರುತ್ತೇನೆ.

******

My Grand Father Kannada Teaching Master

Aditya K. Bangalore
Mobile : +1(443)718-1208

I believe that my grandfather has given me one of the greatest gifts that I could receive as a Kannadiga born and raised outside of India: a deep understanding and appreciation for the language and culture that my family belongs to. Since I was a child, my grandfather's passion for Kannada has deeply influenced my upbringing. Through his patient Kannada teaching - from helping me repeat simple words to guiding me in forming complex sentences - he has constantly encouraged me to actively engage with the language. Although I didn't fully understand it as a child - the countless repetitions in writing the Kannada alphabets, in speaking Kannada by identifying everyday objects in Kannada, learning to converse fluently with my grandparents - all have had a profound and lasting impact on me. They have shaped not only my language skills, but my connections to my roots in India, specifically to Karnataka, and most importantly, to my own family.

Without his guidance and inspiration, I would not have such deep and meaningful ties to the city of Bangalore, to my extended relatives in India and other Kannadigas that I have met in the US. I truly believe Kannada has been the thread that has woven all these connections together, for me. I hope to continue his impact on my life through next generations, as I aspire to raise my future children with the same appreciation for our culture, language and history that my grandfather has instilled in me since my childhood.

Not only has my Tata's way of Kannada teachings impacted me profoundly, but his deep passion for his craft has also shaped me, in how I approach my own work and future legacy. As an engineer, it is my aspiration to build out a fruitful career in technology and continue to maintain passion for my craft well beyond my career's official retirement date, just as my grandfather has done. His dedication and persistence towards writing and scholarship has taught me to love learning and the pursuit of

knowledge as a lifelong journey and not just, the one that ends with retirement. His joy for learning has been an inspiration to me throughout my academic and professional career, and it is my hope that just like his, my own career will have an inspiring and positive impact on society, that extends far beyond my lifetime.

With this honor bestowed upon him, my heart is filled with immense joy, not just because I come from such a rich literary heritage, but because I am the grandson of two extraordinary Kannada literary legacies whose words and values continue to shape who I am, even today. I can think of no one in my life more deserving of this honor than my grandfather, my Tata, and I am extremely proud to say that I am his grandson, and I look forward to many more years of learning from him.

******

My Taata Greatest inspiration

Amogha S. Bangalore

Mobile : +914438129184

Growing up in America, I can proudly say that my Tata has been one of the greatest inspirations for me in many ways. I've always admired his Kannada knowledge, determination to share and spread the beauty of this language, and above all, his remarkable love for us! Since I was a little kid, he has always made sure I was learning more Kannada each day whether it was through day to day spoken words or through his stories. I remember even as a young child, every single conversation with him would steer towards short, impromptu contextual Kannada lessons and how his face would light when I sang a Kannada song. When I was younger, I found it tedious and wasn't appreciative enough to take these Kannada lessons to heart, but now as I have stepped into college years, I better value my culture and language and I appreciate more, his guidance and enjoy conversing in Kannada with him and Ajji, frequently over WhatsApp. Over time, I've realized that his every effort was to instill in me the same love for Kannada that he carries, so that I could one day pass it on to my children. He has always put Kannada at the center of his love for our family, and it has become an important part of who I am, along the way. I have come to realize his contributions to Kannada literature and his unwavering passion for the language. Seeing many of his books on our mom's bookshelf, has inspired me to be able to read and understand all his literary works, some day. I am eternally dedicated and as loving as my grateful that I have the privilege to learn from someone so driven, knowledgeable,

What I deeply admire about my Tata, is the way his literary impact extends far beyond our family, touching so many lives across the Bangalore community. Another unique aspect of my Tata, I have noticed, is the way his passion for the language is felt through to everyone he meets. Our family friends, who know Tata, always say such great things about him and his works, whenever we meet and it makes me feel like I belong to a celebrity family! Something else very important about him I would really want to mention is how his compassion and altruism for his family resonates. I don't

think there has ever been a time I have heard him say "no" to me or to my brother. Whenever I visit India, and if idli isn't on the menu (Ajji's idlis are my personal favorite by the way!). he doesn't hesitate to walk a few streets away, navigating the busy morning traffic, to his favorite nearby idli hotel, returning with hot, freshly made idlis, especially for me, to add to the breakfast menu at home. He knows idlis are my all-time favorite food, topped off with Ajji's homemade thuppa, and he never wants me to miss it, not even once, while I am with him at Bangalore. Since I was young, he has always gone above and beyond for me. It is in these small, loving moments that I realize just how truly lucky I am to have such a caring and loving Tata - My tata!

I see his love for our family most in the way my mom speaks about him. She has inherited his passion for language and always looks up to him for any books in Kannada she may need. The stories she shares proudly with us, of her growing up in a living library, surrounded by literature, Tata's stories and her dinner time discussions with both Tata and Ajji, goes to show how strong of a role model they are for her! Having both grandparents so deeply rooted in the literary world, and learning from them both, I can only hope that one day I grow into someone as well- rounded and inspirational as they are to me.

I have personally witnessed dedication and curiosity in the way Tata works, even when he visits us! and I strive to nurture that same passion within myself, so that one day, I too can write and articulate as well as he does and become an author. I am very proud to say that my grandfather is one of a kind, as he inspires me, every day, to be more motivated, passionate in whatever I do, and most importantly to be kind.

As a granddaughter I am so humbled and grateful to be able to write a few lines in celebration of this well- deserved recognition for my Tata. I'm incredibly proud to have such a dedicated, hardworking, inspirational, literary personality for a loving grandfather and in my eyes, no one could be more deserving of this recognition!

******

ನನ್ನ ಬಾಳ ಸಖನೊಡನೆ ಅರ್ಧಶತಮಾನ

ಎಂ.ಆರ್. ಲಕ್ಷ್ಮೀದೇವಿ
ಚರವಾಣಿ : ೯೪೪೮೧೪೮೦೦೦೨೩

"ಏನಿಹುದೋ ಎಂತಿಹುದೋ ಸಂಸಾರಸಾರ!
ಕಂಡವರು ಯಾರದರ ಅಂತಃಪಾರ?
ಹೃದಯ ಸಂಪುಟದಲ್ಲಿ ಒಲವ-ಲೆಕ್ಕಣಿಕೆ
ಮಾಡಿ ಬರೆಯಲೊ ಹುಡುಗ ನಿನ್ನ ಒಕ್ಕಣಿಕೆ" **– (ದ.ರಾ.ಬೇಂದ್ರೆ)**

"ಅನಾಜಿ" ಎಂದೇ ಸಾರ್ವಜನಿಕವಾಗಿ ಪರಿಚಿತರಾಗಿರುವ "ಶ್ರೀ ಜಿ. ಅಶ್ವತ್ಥನಾರಾಯಣ" ಅವರು ನಮ್ಮ ಮನೆಯವರು ಹಾಗೂ ನಮ್ಮ ಬಂಧು ವರ್ಗದವರಲ್ಲಿ "ಸಾಹಿತಿ"ಗಳೆಂದೇ ಆತ್ಮೀಯರಾಗಿದ್ದಾರೆ. ಇವರ ಪರಿಚಯ ನಮ್ಮ ಮನೆಯವರಿಗಾಗಲಿ ನನಗಾಗಲಿ ಇಂದು ನಿನ್ನೆಯದಲ್ಲ-ಅಂತೆಯೇ ವಿವಾಹಾನಂತರವೂ ಅಲ್ಲ. ಅಂದಿನ "ಮೈಸೂರ್ ಬ್ಯಾಂಕ್"-ಇಂದಿನ (State Bank of Mysore)ನಲ್ಲಿ ಹಿರಿಯ ಲೆಖ್ಖಾಧಿಕಾರಿ (Senior Accountant) ಆಗಿ ಕೆಲಸ ಮಾಡುತ್ತಿದ್ದ ನಮ್ಮ ತಂದೆ ದಿ॥ ಎಂ.ಆರ್. ರಾಮರಾವ್ ಅವರು, ಬೆಂಗಳೂರಿಗೆ ಬರುವ ಮೊದಲು ಚೆನ್ನಪಟ್ಟಣದ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಚೆನ್ನಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿದ ನಾನು-ನನ್ನ ತಮ್ಮ "ಮಾಧವಮೂರ್ತಿ" ಇಬ್ಬರೂ ಹೆಚ್ಚಿನ ವ್ಯಾಸಂಗಕ್ಕಾಗಿ, ಚೆನ್ನಪಟ್ಟಣದಲ್ಲಿ ಕಾಲೇಜಿರಲಿಲ್ಲವಾದ ಕಾರಣದಿಂದಾಗಿ, ಮಂಡ್ಯ ಕಾಲೇಜಿಗೆ ರೈಲಿನಲ್ಲಿ ಹೋಗಿ ಬರುತ್ತಿದ್ದೆವು. ಅಂದಿನ ಎರಡು ವರ್ಷಗಳ ಇಂಟರ್‌ಮೀಡಿಯೆಟ್ ಪರೀಕ್ಷೆ ಮುಗಿಸಿದ ನಂತರ, ಡಿಗ್ರಿ ವಿದ್ಯಾಭ್ಯಾಸವನ್ನು ಮುಂದುವರಿಸಲು ಮೈಸೂರು ಅಥವಾ ಬೆಂಗಳೂರಿಗೆ ಹೋಗಬೇಕಾಗಿತ್ತು. ನಮ್ಮ ತಂದೆಗೆ, ಬಡ್ತಿ ನೀಡಿ, ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆ ಎದುರಿಗಿದ್ದ ಬ್ಯಾಂಕಿನ ಕೋಟೆ ಶಾಖೆಗೆ (Fort Branch) ವರ್ಗವಾಯಿತು.

ನಮ್ಮ ತಂದೆಯ ಸೇವಾವಧಿಯ ಬಹುಪಾಲು ವರ್ಷಗಳು ವರ್ಗಾವಣೆಯಲ್ಲೇ ಕಳೆದಿತ್ತು. ಚಿತ್ರದುರ್ಗ, ಹಾಸನ, ಸಕಲೇಶಪುರ, ದಾವಣಗೆರೆ, ಮೈಸೂರು ಹೀಗೆ ಹಲವಾರು ಊರುಗಳನ್ನು ಸುತ್ತಿ, ಈಗ ಕೊನೆಗೆ ಚೆನ್ನಪಟ್ಟಣಕ್ಕೆ ಬಂದಿದ್ದರು. ಆದರೆ, ಈಗ ಈ ವರ್ಗಾವಣೆ ಬೇರೆಲ್ಲ ವರ್ಗಾವಣೆಗಳಿಗಿಂತ ವಿಭಿನ್ನವಾಗಿದ್ದು, ಒಂದು ರೀತಿಯಲ್ಲಿ ವರವಾಗಿತ್ತು. ಈಗ ವರ್ಗವಾಗಿದ್ದ ಬೆಂಗಳೂರಿನ ಶಾಖೆ, ವಾಣೀವಿಲಾಸ ಆಸ್ಪತ್ರೆಯ ಎದುರಿಗೇ ಇರುವ, ಫೋರ್ಟ್ ಬ್ರಾಂಚ್ ಶಾಖೆಯ

ಆಫೀಸಿನ ಹಿಂಬದಿಯಲ್ಲೇ, ಆಫೀಸಿಗೆ ಹೊಂದಿಕೊಂಡಂತೆ ಕ್ವಾರ್ಟರ್ಸ್ ಇತ್ತು. ಬಾಡಿಗೆ ಇಲ್ಲದೇ, ನೀರು ವಿದ್ಯುತ್ ಇತ್ಯಾದಿಗಳ ಸೌಕರ್ಯವಿದ್ದು, ಸಿಟಿ ಮಾರ್ಕೆಟ್‌ಗೆ ಅತಿ ಸಮೀಪವಿದ್ದು, ಬಸ್ ಸೌಕರ್ಯವಿದ್ದ ಮನೆ ಸಿಕ್ಕಿದ್ದು ನಮಗೆ ನಿಧಿ ಸಿಕ್ಕಂತಾಯಿತು. ತುಂಬಾ ಆತ್ಮೀಯರಾಗಿ ಹೊಂದಿಕೊಂಡಿದ್ದ ಸ್ನೇಹಿತರನ್ನು ಬಿಟ್ಟು, ಬೆಂಗಳೂರಿಗೆ ಬರಲು ನಮಗೆಲ್ಲರಿಗೂ ದುಃಖವಾದರೂ, ಮಕ್ಕಳ ಮುಂದಿನ ವಿದ್ಯಾಭ್ಯಾಸದ ದೃಷ್ಟಿಯಿಂದ ಅದು ಅನಿವಾರ್ಯವಾಗಿತ್ತು.

ಹೀಗೆ, ಕೋಟೆ ಶಾಖೆಯ ಔಟ್‌ಹೌಸ್‌ಗೆ ೧೯೬೦ ರ ವೇಳೆಗೆ ನಮ್ಮ ಕುಟುಂಬವೆಲ್ಲವೂ ಬಂದು ನೆಲೆಸಿದವು. ಆಗ ನಮ್ಮ ಮನೆಗೆ ಸಮೀಪವಿದ್ದ "ಕನ್ನಡ ಸಾಹಿತ್ಯ ಪರಿಷತ್ತು" ಹಾಗೂ "ಮಕ್ಕಳ ಕೂಟ"ಗಳ ಸಂಪರ್ಕ ನಮಗೆಲ್ಲರಿಗೂ ಒದಗಿ ಬಂದಿತ್ತು.

ಮೈಸೂರಿನಲ್ಲಿ ಸಬ್‌ರಿಜಿಸ್ಟ್ರಾರ್ ಆಗಿದ್ದ ನಮ್ಮ ತಾತ ದಿ॥ ರಾಘವೇಂದ್ರರಾಯರು, ಡಾ॥ ಆನಿಬೆಸಂಟ್ ಅವರ ಪಟ್ಟ ಶಿಷ್ಯರಾಗಿದ್ದರು. ಅವರು ಮದರಾಸಿನಲ್ಲಿ ಸ್ಥಾಪಿಸಿದ ಥಿಯೋಸಾಫಿಕಲ್ ಸೊಸೈಟಿಯ (Theosophical Society) ಪ್ರಭಾವಕ್ಕೆ ಒಳಗಾಗಿದ್ದು, ಲೇಖನಗಳನ್ನು ಬರೆಯುತ್ತಿದ್ದರು. ಅಲ್ಲದೇ ಸಾಹಿತ್ಯಾಭಿಮಾನಿಗಳೂ, ಪ್ರಗತಿಶೀಲ ಮನೋಭಾವದವರೂ ಆಗಿದ್ದರು. ಇಂಥ ಒಂದು ಪರಿಸರದಲ್ಲಿ ಬೆಳೆದು ಬಂದ ನಮ್ಮ ತಂದೆಯವರಿಗೆ ಸಾಹಿತ್ಯ ಪರಿಷತ್ತು, ಮಕ್ಕಳಕೂಟದ ಆಟದ ಮೈದಾನ ಬಹಳ ಹಿಡಿಸಿತ್ತು. ಸಂಜೆಯ ವೇಳೆ ನನ್ನ ಚಿಕ್ಕ ತಮ್ಮ ಬಾಬು, ಇತರ ತಂಗಿಯರನ್ನು ಮಕ್ಕಳಕೂಟದಲ್ಲಿ ಆಟವಾಡಲು ಬಿಟ್ಟು, ತಾವು ಪರಿಷತ್ತಿಗೆ ಹೋಗಿ, ಅಲ್ಲಿ ವಾಚನಾಲಯದಲ್ಲಿ ಪತ್ರಿಕೆಗಳನ್ನು ಓದುವುದರೊಂದಿಗೆ, ಅಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದರು. ಅವರಿಗೆ ಆಫೀಸಿನ ಕೆಲಸದ ಒತ್ತಡದಿಂದ ಬರಲಾಗದ ದಿನ, ನಮ್ಮ ತಮ್ಮ ತಂಗಿಯರು ತಾವೇ ಗುಂಪಾಗಿ ಹೋಗಿ ಬರುತ್ತಿದ್ದರು. ಆಗ ಈಗಿನಂತೆ ಟ್ರಾಫಿಕ್ ಭಯವಿರಲಿಲ್ಲ.

ಈ ಸಂದರ್ಭದಲ್ಲಿ ನಮ್ಮ ತಂದೆಯವರು ಕಣ್ಣಿಗೆ ಬಿದ್ದವರು ಅನಾಜಿ ಅರ್ಥಾತ್ ಸಾಹಿತಿ ಜಿ. ಅಶ್ವತ್ಥನಾರಾಯಣ ಅವರು. "ಸಾಹಿತಿ" ಎನ್ನುವುದು ನಮ್ಮ ಮನೆಯವರು ಅವರಿಗೆ ಇಟ್ಟ ಹೆಸರು. (ಇದು ಇಂದಿಗೂ ಚಾಲ್ತಿಯಲ್ಲಿದೆ). ಅವರು ಮಕ್ಕಳನ್ನು ಮಾತನಾಡಿಸುವ, ಕಥೆ ಹೇಳುವ, ಬಾಲ ಜಗತ್ತಿನ ಕಥೆಗಳ ಮೂಲಕ ಮಕ್ಕಳನ್ನು ಸೆಳೆಯುತ್ತಿದ್ದ ರೀತಿ ಅವರಿಗೆ ತುಂಬಾ ಮೆಚ್ಚುಗೆಯಾಗಿತ್ತು. ಅದಲ್ಲದೇ, ಮಧ್ಯೆ ಮಧ್ಯೆ ಆ ಪರಿಸರದಲ್ಲೇ ಓದುತ್ತಾ, ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದ ಅವರ ಸಾಹಿತ್ಯಕ ಚಟುವಟಿಕೆಗಳು ನಮ್ಮ ತಂದೆಯವರ ಮನ ಸೆಳೆಯಿತು. ಮಕ್ಕಳೊಂದಿಗೆ ಈ ಹುಡುಗನನ್ನೂ ಮನೆಗೆ ಕರೆತರುತ್ತಿದ್ದರು. ಯಾವಾಗಲೂ ಪುಸ್ತಕ, ಸಾಹಿತ್ಯ, ವಿಚಾರ-ವಿಮರ್ಶೆಗಳೆಂದೇ ಮಾತನಾಡುತ್ತಿದ್ದ ಈ ದಟ್ಟವಾದ ಗುಂಗುರು ಕೂದಲಿನ, ಹೊಳಪುಗಣ್ಣಿನ, ದಪ್ಪ ಮೀಸೆಯ ಹುಡುಗ ಅಚ್ಚುಮೆಚ್ಚಾಗಿದ್ದ. ಮನೆಯವರಿಗೆಲ್ಲಾ ಚಿರಪರಿಚಿತವಾಗಿದ್ದ "ಚಲ್ತಿಕಾನಾಮ್ ಗಾಡಿ" ಎಂದು ನಾವೆಲ್ಲಾ ಹೆಸರಿಟ್ಟಿದ್ದ ಒಂದು ಸೈಕಲ್ಲಿನಲ್ಲಿ ಅದಕ್ಕೆ ಹೊಂದಿಸಿದ್ದ ಒಂದು ಬಿದಿರಿನ ಬುಟ್ಟಿ, ಅದರ ತುಂಬಾ ಪುಸ್ತಕಗಳು, ಬಿಳಿಯ ಪೈಜಾಮ, ಚಪ್ಪಲಿ ಧರಿಸಿದ "ಸಾಹಿತಿ"ಗಳು ಮನೆಯವರಿಗೆಲ್ಲಾ ಮೆಚ್ಚಿನ ವ್ಯಕ್ತಿಯಾಗಿದ್ದರು.

ಮನೆಯಲ್ಲಿ ಮಾಡುತ್ತಿದ್ದ ಯಾವ ತಿಂಡಿಯನ್ನಾಗಲಿ 'ಈ ಹುಡುಗ'ನಿಗಾಗಿ ಒಂದು ಪಾಲು ತೆಗೆದಿರಿಸುತ್ತಿದ್ದರು ನಮ್ಮ ತಾಯಿಗೆ ಪುಸ್ತಕಗಳನ್ನು ಓದಲು ತಂದು ಕೊಡುತ್ತಿದ್ದರು. ಚಿಕ್ಕಬಳ್ಳಾಪುರದಲ್ಲಿ

ಅಂದಿನ ಕಾಲದ ಹೆಸರಾಂತ ಲಾಯರ್ ಆಗಿದ್ದ ದಿ॥ಸೂರ್ಯನಾರಾಯಣರಾವ್ ಅವರ ಅಚ್ಚುಮೆಚ್ಚಿನ ಮಗಳಾಗಿದ್ದ ನಮ್ಮ ತಾಯಿ, ಹಳೆಯ ಕಾಲದವರಾದರೂ, ವಿಚಾರವಂತರೂ, ಓದು-ಬರಹ ಬಲ್ಲವರು ಆಗಿದ್ದು, ಯಾವುದೇ ಕಂದಾಚಾರಗಳಿಗೆ ಬಲಿಬಿದ್ದವರಾಗಿರಲಿಲ್ಲ. 'ಈ ಹುಡುಗ ತಂದು ಕೊಡುವ ಪುಸ್ತಕಗಳನ್ನು ಓದಿ "ಸಾಹಿತಿಗಳೇ ನೀವು ಕೊಟ್ಟ ಪುಸ್ತಕ ಮುಗಿಯಿತು. ಬೇರೊಂದು ತಂದುಕೊಡಿ" ಎಂದು ಕೇಳುವದಲ್ಲದೇ, ತಾವು ಓದಿದ ಪುಸ್ತಕಗಳ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದರು. ಹೀಗೆ ತಮ್ಮ ತಂಗಿಯರಿಗೆ ಕಥೆ ಹೇಳುವ, ಆಟವಾಡಿಸುವ, ತಂದೆಯವರೊಂದಿಗೆ ಗಹನ ವಿಚಾರಗಳನ್ನು ಕುರಿತು ಚರ್ಚಿಸುವ-ವಿಶ್ಲೇಷಿಸುವ "ಬುದ್ಧಿವಂತ ಹುಡಗ"ನಾಗಿ ಅಚ್ಚುಮೆಚ್ಚಾಗಿದ್ದರು.

ಈ ಮಧ್ಯೆ ನಮ್ಮ ತಂದೆಯವರು, ಅಂದಿನ "ಹೌಸಿಂಗ್ ಬೋರ್ಡ್" ನವರು, ಮಧ್ಯಮವರ್ಗದವರಿಗಾಗಿ ತಿಂಗಳು ತಿಂಗಳಿನ ಕಂತಿನ ಮೇಲೆ ವಿತರಿಸುತ್ತಿದ್ದ ಮನೆಯೊಂದನ್ನು, ಜಯನಗರದ 'ಟಿ' ಬ್ಲಾಕಿನಲ್ಲಿ ಕೊಂಡು ಕೊಂಡರು. ಆನಂತರ, ನಮ್ಮ ಕುಟುಂಬ ಜಯನಗರದ, ನಾಲ್ಕನೇ 'ಟಿ'ಬ್ಲಾಕಿನ, ನಾವು ವಾಸಿಸುತ್ತಿರುವ ಮನೆ 'ಬದರೀನಿವಾಸ'ಕ್ಕೆ ಬಂದಿತು. ಇಲ್ಲಿಂದ ಮುಂದೆ, ನಮಗೆ ಮಕ್ಕಳಕೂಟದ ಸಂಪರ್ಕ ಕಡಿದುಹೋದರೂ, ಸಾಹಿತಿಗಳ ಸಂಪರ್ಕ ಕಡಿದು ಹೋಗಲಿಲ್ಲ.

("A trip of Thousand miles Starts With a Single Step) ಎಂಬ ಆಂಗ್ಲ ನಾಣ್ನುಡಿಯಂತೆ, ಅನಾಜಿ ಅವರ ಕನ್ನಡ ಎಂ.ಎ. ಕನಸು, ಅದು ದಾಪುಗಾಲಿಡುತ್ತಾ ಸಾಗಿದ ರೀತಿಯೇ ಒಂದು ಸಾಹಸಗಾಥೆ, ಅನಾಜಿ ಅವರು ಎಸ್.ಎಸ್.ಎಲ್.ಸಿ. ಮುಗಿಸಿದ ನಂತರ, ಅವರ ಇಷ್ಟಕ್ಕೆ ವಿರುದ್ಧವಾದರೂ, ಅವರ ಮನೆಯವರು ಮಾತನ್ನು ಮೀರಲಾರದೆ, ಎಸ್.ಜೆ.ಪಿ.ಯಲ್ಲಿ ಮೂರು ವರ್ಷಗಳ ಮೆಕಾನಿಕಲ್ ಇಂಜಿನೀರಿಂಗ್ ಅನ್ನು ಮುಗಿಸಿದರು. ಅನಂತರ, ಅಂದಿನ ಕಾಲದಲ್ಲಿ ಪ್ರಸಿದ್ಧವಾಗಿದ್ದ ಹೆಚ್.ಎಮ್.ಟಿ.ಯಲ್ಲಿ ಕೆಲಸ ಸಿಕ್ಕರೂ, ಮನೆಯವರು ವಿರೋಧದ ನಡುವೆಯೂ ನಿರಾಕರಿಸಿ, ಕನ್ನಡ ಎಂ.ಎ. ಕನಸು ಕಾಣುತ್ತಾ, ಸರ್ಕಾರಿ ಕಲಾ ಕಾಲೇಜಿನಲ್ಲಿ ಪಿಯುಸಿ ಮುಗಿಸಿದರು.

ಮುಂದೆ ಎ.ಪಿ.ಎಸ್. ಕಾಲೇಜಿನ ಬೆಳಗಿನ ಕಾಲೇಜಿನಲ್ಲಿ, ಮೂರು ವರ್ಷಗಳ ಬಿ.ಎ. ಮುಗಿಸಿ, ಕನ್ನಡ ಎಂ.ಎ. ಸೇರಲು ಅರ್ಜಿ ಸಲ್ಲಿಸಿದಾಗ ಆಘಾತ ಕಾದಿತ್ತು. ಇವರ ವ್ಯಾಸಂಗದ ಯಾವ ಹಂತದಲ್ಲಿಯೂ ಕನ್ನಡವನ್ನೇ ಓದಿರದಿದ್ದ, ದ್ವಿತೀಯ ಭಾಷೆಯಾಗಿ ಸಂಸ್ಕತ ವ್ಯಾಸಂಗ ಮಾಡಿದ್ದ ಇವರಿಗೆ ಯಾವ ಯೂನಿವರ್ಸಿಟಿಯಲ್ಲೂ ಕನ್ನಡ ಎಂ.ಎ.ಗೆ ಪ್ರವೇಶ ದೊರೆಯಲಿಲ್ಲ. ಆದರೂ 'ಛಲದಂಕಮಲ್ಲ'ನಂತೆ ಹೇಗಾದರೂ ಕನ್ನಡ ಎಂ.ಎ. ಮಾಡಲೇಬೇಕೆಂಬ ಹಠದಿಂದ ಬೆಂಗಳೂರು ವಿಶ್ವವಿದ್ಯಾಲಯಲದಲ್ಲಿ ಸಮಜಾಶಾಸ್ತ್ರ ಎಂ.ಎ.ಗೆ ಸೇರಿದರು. ಕಾರಣ ಏನೆಂದರೆ ಒಂದು ಎಂ.ಎ. ಡಿಗ್ರಿ ಇದ್ದರೆ, ಬೇರೆ ಯಾವುದೇ ವಿಷಯದಲ್ಲಾಗಲೀ ಎಂ.ಎ. ಮಾಡುವ ಅವಕಾಶ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇತ್ತು. ಹಾಗಾಗಿ ಸಮಾಜಶಾಸ್ತ್ರದ ಎಂ.ಎ. ನಂತರ ಕರ್ನಾಟಕ ಯುನಿವರ್ಸಿಟಿಯಲ್ಲಿ ಎಂ.ಎ. ಪ್ರವೇಶ ಪಡೆಯಲು ದಿ. ಅ.ನ.ಕೃ. ಅವರು ನೀಡಿದ್ದ ಶಿಫಾರಸು ಪತ್ರ ಚೆನ್ನಾಗಿ ಕೆಲಸ ಮಾಡಿತ್ತು. ಹಿಂದೆ ಅ.ನ.ಕೃ. ಮತ್ತು ಮ. ರಾಮಮೂರ್ತಿ ಅವರೊಂದಿಗೆ ಕನ್ನಡ ಚಳುವಳಿಯಲ್ಲಿ ಭಾಗವಹಿಸಿ, ಅವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಅದು ಅವರ ಕನ್ನಡ ಎಂ.ಎ. ಕನಸನ್ನು ನನಸಾಗಿಸುವಲ್ಲಿ ನೆರವಾಯಿತು. ಕನ್ನಡ. ಎಂ.ಎ. ಯೊಂದಿಗೆ, ಎಪಿಗ್ರಾಫಿ ಡಿಪ್ಲೋಮಾ ಸಂಜೆ ತರಗತಿಗೆ ಸೇರಿ ಅದನ್ನು ಪಾಸು ಮಾಡಿದರು. ಈ ಡಿಪ್ಲೋಮಾಗಾಗಿ ಅವರಿಗೆ ದೊರಕಿದ

ನೂರಾರು ರೂಗಳ ಸ್ಕಾಲರ್‌ಶಿಪ್ ಹಣದಲ್ಲಿ ಶಾಸನ ಶಾಸ್ತ್ರ ಡಿಪ್ಲೋಮಾದ ಅದಲ್ಲದೇ, ಅನಾಜಿ ಅವರು ಎ.ಪಿ.ಎಸ್. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲಿ, ಅವರಿಗೆ ಉಪನ್ಯಾಸಕರಾಗಿದ್ದು ದಿ. ಪ್ರೊ. ದಾಸೇಗೌಡರು ಮತ್ತು ದಿ. ಪ್ರೊ. ಎ.ಪಿ. ಕೃಷ್ಣರಾವ್ ಅವರು ನೀಡಿದ ಪ್ರೋತ್ಸಾಹ, ಸಹಾಯ ಅನನ್ಯ-ಅಪಾರ.

ಧಾರವಾಡದಿಂದ ಬೆಂಗಳೂರಿಗೆ ಬಂದಾಗ ತಪ್ಪದೇ ನಮ್ಮ ಮನೆಗೆ ಭೇಟಿ ನೀಡುತ್ತಿದ್ದರು. ಆಗೆಲ್ಲ ನಮ್ಮ ಮನೆಯವರೆಲ್ಲರೂ "ಸಾಹಿತಿ" ಬಂದಿದ್ದಾರೆಂದು ಸಂಭ್ರಮಿಸುತ್ತಿದ್ದರು. ನಮ್ಮ ತಾಯಿಯವರ ಊಟೋಪಚಾರಗಳೊಂದಿಗೆ, ಸಾಹಿತಿಗಳು ತಾವು ಓದಿದ ಹೊಸ ಪುಸ್ತಕಗಳ ಬಗ್ಗೆ, ಕಾಲೇಜಿನ ಅನುಭವಗಳ ಬಗ್ಗೆ-ಮಾಹಿತಿ ನೀಡುತ್ತಿದ್ದರು.

ಈ ವೇಳೆಗೆ ನನ್ನ ಬಿ.ಎ. ವ್ಯಾಸಂಗ ಮುಗಿದಿದ್ದು, ಅನಂತರ ವಿಶ್ವೇಶ್ವರಪುರಂನಲ್ಲಿ ಅಂದು ಹೆಸರಾಂತ "ಮಹಾರಾಷ್ಟ್ರ ಮಹಿಳಾ ವಿದ್ಯಾಲಯ" ದ ಹೈಸ್ಕೂಲಿನಲ್ಲಿ ಮೂರು ವರ್ಷಗಳು, ಅನಂತರ ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಎರಡು ವರ್ಷಗಳು ಟ್ಯೂಟರ್ ಆಗಿ ಕೆಲಸ ಮಾಡಿದೆ. (ಅಂದಿನ ಕಾಲದಲ್ಲಿ ಬಿ.ಎ./ಬಿ.ಎಸ್ಸಿ.ಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದವರನ್ನು ಟ್ಯೂಟರ್/ಡೆಮಾನ್‌ಸ್ಟ್ರೇಟರ್ ಎಂದು ನೇಮಕಾತಿ ಮಾಡಿಕೊಳ್ಳುತ್ತಿದ್ದರು) ಈ ಅವಧಿಯಲ್ಲಿ ನಾನು ಖಾಸಗಿಯಾಗಿ ಶಿವಾಜಿ ಯೂನಿವರ್ಸಿಟಿಯಲ್ಲಿ ಕನ್ನಡ ಎಂ.ಎ. ಯನ್ನು ಪ್ರಥಮ ದರ್ಜೆಯಲ್ಲಿ ಪಾಸುಮಾಡಿ ಎನ್.ಆರ್. ಕಾಲೋನಿಯಲ್ಲಿರುವ ಎ.ಪಿ.ಎಸ್. ಕಾಲೇಜಿನಲ್ಲಿ ಖಾಯಂ ಉಪನ್ಯಾಸಕಿಯಾಗಿ ಸೇರಿದೆ.

ನನ್ನ ಎಂ.ಎ. ವ್ಯಾಸಂಗದ ಸಂದರ್ಭದಲ್ಲಿ ಬಸವನಗುಡಿ ನ್ಯಾಷನಲ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ದಿ|| ಪ್ರೊ. ಎಮ್.ಎಸ್. ವೆಂಕಟರಾವ್ ಮತ್ತು ಪ್ರೊ. ಅ.ರಾ. ಮಿತ್ರ ಅವರು ನೀಡಿದ ಮಾರ್ಗದರ್ಶನ ಅಮೂಲ್ಯವಾದುದು.

ಈ ವೇಳೆಗೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಮುಗಿಸಿದ್ದ ಸಾಹಿತಿಗಳೂ, ಬೆಂಗಳೂರಿನ ದಯಾನಂದ ಕಾಲೇಜಿನ ಅಧ್ಯಾಪಕರಾಗಿ ಸೇರಿದರು. ಆ ಸಮಯದಲ್ಲಿ ಸರ್ಕಾರದ ಕೆ.ಪಿ.ಎಸ್.ಸಿ. ಆಯ್ಕೆಯಲ್ಲಿ ಉತ್ತೀರ್ಣರಾಗಿ, ಸರ್ಕಾರಿ ಖಾಯಂ ಅಧ್ಯಾಪಕರಾಗಿ, ಮಂಡ್ಯ ಸರ್ಕಾರಿ ಕಾಲೇಜಿಗೆ ಸೇರಿದರು.

ಮಂಡ್ಯ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾದ ದಿ|| ಪ್ರೊ. ಶ್ರೀನಿವಾಸನ್ ಅವರ ಮನೆಯ ಹಿಂದೆ ಇದ್ದು ಸಣ್ಣ ಮನೆಯಲ್ಲಿ (Out house) ಇವರ ವಾಸ್ತವ್ಯವಿತ್ತು. ಇವರೊಂದಿಗೆ ಪ್ರೊ|| ಜಯಚಂದ್ರ ಅವರೊಂದಿಗೆ ಮತ್ತಿಬ್ಬರು ಅಧ್ಯಾಪಕರು ಕನ್ನಡ ವಿಭಾಗದಲ್ಲಿದ್ದರು. ಇವರೆಲ್ಲರೂ ಅನ್ಯೋನ್ಯವಾಗಿ ಒಂದು ಕುಟುಂಬದಂತೆ ಇದ್ದರು. ಆದರೆ 'ಖಂಡಿತವಾಗಿ ಲೋಕ ವಿರೋಧಿ' ಎಂಬಂತೆ ಪರೀಕ್ಷೆಯಲ್ಲಿ ಅನಾಮತ್ತಾಗಿ ಚೀಟಿಗಳನ್ನು ಇಟ್ಟುಕೊಂಡು ಕಾಪಿ ಮಾಡುತ್ತಿದ್ದ ಪ್ರಭಾವೀ ವಿದ್ಯಾರ್ಥಿಯೊಬ್ಬನನ್ನು ಹಿಡಿದು ಮುಖ್ಯ ಪರೀಕ್ಷಕರಿಗೆ ಒಪ್ಪಿಸಿದ ಕಾರಣ, ಅಂದಿನ ಸಂಜೆ ಎಂದಿನಂತೆ ಅನಾಜಿ ಅವರು ಪ್ರೊ. ಶ್ರೀನಿವಾಸನ್, ಜಯಚಂದ್ರ ಅವರೊಂದಿಗೆ ವಾಕ್ ಹೋಗುತ್ತಿದ್ದಾಗ ಲಾರಿಯಲ್ಲಿ ಬಂದ ಒಂದು ಗುಂಪು, ಇವರ ಮೇಲೆ ಕೈ ಬ್ಲೇಡಿನಿಂದ, ನಡು ರಸ್ತೆಯಲ್ಲೇ ಹಲ್ಲೆ ಮಾಡಿದರು. ಗಾಯಗೊಂಡು ರಕ್ತ ಸುರಿಯುತ್ತಿದ್ದ ಅನಾಜಿ ಅವರನ್ನು ಶ್ರೀನಿವಾಸನ್ ಮತ್ತು ಜಯಚಂದ್ರ ಅವರು ಮನೆಗೆ ಕರೆತಂದು ಶುಶ್ರೂಷೆ ಮಾಡಿದರು.

ಈ ಘಟನೆ ಅಂದಿನ "ಪ್ರಜಾವಾಣಿ" ''ಸುಧಾ''ಗಳಲ್ಲಿ ಪ್ರಕಟವಾಯಿತು. ಅದರ ಪರಿಣಾಮ ಕಾಲೇಜಿನ ನಿರ್ದೇಶಕರೇ ನೇರವಾಗಿ ಕಾಲೇಜಿಗೆ ಬಂದು ವಿಚಾರಣೆ ನಡೆಸಿದವರಾದರೂ, ತಪ್ಪಿತಸ್ಥರಿಗೆ ಶಿಕ್ಷೆಯಾಗುವ ಬದಲು, ಅನಾಜಿ ಅವರಿಗೆ ಹಾಸನದ ಸರ್ಕಾರಿ ಕಾಲೇಜಿಗೆ ವರ್ಗಾವಣೆಯಾಯಿತು. ಎರಡು ವರ್ಷಗಳ ನಂತರ ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿಗೆ ವರ್ಗವಾಗಿ ಬಂದರು.

ಹೀಗೆ ಬೆಂಗಳೂರಿಗೆ ವರ್ಗವಾಗಿ ಬಂದನಂತರ ಮತ್ತೆ 'ಸಾಹಿತಿ'ಗಳ ಒಡನಾಟ ನಮ್ಮ ಮನೆಯವರೊಂದಿಗೆ ಬೆರೆಯಿತು. ಈ ವೇಳೆಗೆ ನನ್ನ ಮೂವರು ತಂಗಿಯರಿಗೆ ಮದುವೆಯಾಗಿ, ಕೊನೆಯವಳ ನಿಶ್ಚಿತಾರ್ಥವು ನೆರವೇರುವ ಹಂತದಲ್ಲಿತ್ತು. ಈ ವೇಳೆಗೆ ನಮ್ಮಿಬ್ಬರ ವಿದ್ಯಾಭ್ಯಾಸ-ಉದ್ಯೋಗ ಎರಡೂ ಒಂದು ಹಂತಕ್ಕೆ ತಲುಪಿತ್ತು. "ನನಗೂ ನಿನಗೂ ಅಂಟಿದ ನಂಟನು ಬಲ್ಲವರಾದರೆ ಪ್ರೇಮಸಖೀ" ಎಂಬಂತೆ, ಸಾಹಿತಿಗಳು ಮತ್ತು ನನ್ನ ವಿವಾಹದ ಪ್ರಸ್ತಾಪವು ನಮ್ಮಿಂದಲೇ ಬಂದು, ಅದಕ್ಕೆ ನಮ್ಮ ಮನೆಯವರ ಪೂರ್ಣ ಸಮ್ಮತಿಯೂ ದೊರೆಯಿತು. ಆದರೆ 'ಅನಾಜಿ' ಅವರ ಮನೆಯವರು ತಮ್ಮದೇ ಆದ ಕೆಲವು ಕಾರಣಗಳನ್ನೊಡ್ಡಿ ಈ ಮದುವೆಗೆ ಸಮ್ಮತಿಸಲಿಲ್ಲ. ಅನಿವಾರ್ಯವಾಗಿ 'ಅನಾಜಿ'ಅವರ ಕುಟುಂಬದವರ ಗೈರು ಹಾಜರಿಯಲ್ಲಿ, ನಮ್ಮ ಪರಿಮಿತ ಪರಿವಾರ ಹಾಗೂ ಅನಾಜಿ ಅವರ ಕೆಲವು ಹಿತೈಷಿಗಳ ಸಮ್ಮುಖದಲ್ಲಿ ಸರಳವಾಗಿ, ಆದರೆ ಶಾಸ್ತ್ರೋಕ್ತವಾಗಿ ೧೯೭೬ರ ನವೆಂಬರ್, ೨ನೇ ತಾರೀಖಿನಂದು, ಮಾಗಡಿಯ ಛತ್ರವೊಂದರಲ್ಲಿ ನೆರವೇರಿತು.

ಮದುವೆಯ ನಂತರ, ನಮ್ಮ ಕಾಲೇಜಿನ ಸಮೀಪವಾಗಿದ್ದ ತ್ಯಾಗರಾಜನಗರದ ಬಾಡಿಗೆ ಮನೆಯೊಂದರಲ್ಲಿ ನಮ್ಮ ಗೃಹಸ್ಥಜೀವನ ಆರಂಭವಾಯಿತು. ನಮ್ಮ ಮದುವೆಯ ೨ ವರ್ಷಗಳ ನಂತರ ೧೯೭೮ ನವೆಂಬರ್ ಒಂದನೇ ತಾರೀಖು ಅಂದರೆ ಕನ್ನಡ ರಾಜ್ಯೋತ್ಸವ ದಿನದಂದು ನಮ್ಮ ಮಗಳು ಜನಿಸಿದಳು. ಅದೇ ದಿನ ಅನಾಜಿ ಅವರು ಬರೆದ ಜೈನಧರ್ಮವನ್ನು ಕುರಿತ ''ಉತ್ತಮ ಕ್ಷಮಾಧರ್ಮ'' ಎಂಬ ಪುಸ್ತಕದ ಬಿಡುಗಡೆಯ ಸಮಾರಂಭವಿತ್ತು. ಆ ವಿಶೇಷ ದಿನದಂದು ಜನಿಸಿದ ನಮ್ಮ ಮಗಳಿಗೆ "ಕ್ಷಮಾ" ಎಂದು ನಾಮಕರಣ ಮಾಡಿದೆವು. ಈ ಸಂದರ್ಭದಲ್ಲಿ ಇವರಿಗೆ ಹಾಸನಕ್ಕೆ ವರ್ಗವಾದ ಕಾರಣದಿಂದ, ಕಾಲೇಜಿನ ಕೆಲಸದ ಮಧ್ಯೆ ಮಗುವನ್ನು ಒಬ್ಬಳೇ ನೋಡಿಕೊಳ್ಳಲು ಕಷ್ಟವಾಗಿ, 'ಡೇ ಕೇರ್' ನಲ್ಲಿ ಬಿಡಲು ಇಷ್ಟವಿಲ್ಲದೆ, ಮಹಾಲಕ್ಷ್ಮೀ ಲೇ ಔಟ್‌ನಲ್ಲಿ ವಾಸಿಸುತ್ತಿದ್ದ ನಮ್ಮ ಅಕ್ಕನ ಮನೆಗೆ ಒಂದು ವರ್ಷದವರೆಗೆ ಬಿಟ್ಟಿದ್ದೆವು.

ನಮ್ಮ ಮಗಳಿಗೆ ಸುಮಾರು ಎರಡು ವರ್ಷಗಳಿರಬಹುದು. ಈ ವೇಳೆಗೆ ಮೊಮ್ಮಗಳ ಮೇಲಿನ ವಾತ್ಸಲ್ಯ ಉಕ್ಕಿ ಹರಿದು, ಅವಳಪ್ಪನ ಜೊತೆಯಲ್ಲಿ 'ಅಜ್ಜಿಮನೆಗೆ' ಹೋಗಿ ಬರುತ್ತಿದ್ದಳು. ಚಿಕ್ಕಮಕ್ಕಳಿಲ್ಲದ ಆ ಮನೆಯಲ್ಲಿ ಅಚ್ಚುಮೆಚ್ಚಾದಳು.

''ಸಿಂಹಾವಲೋಕನ ಕ್ರಮದಿಂದ ವೀಕ್ಷಿಸುವೆನ್..'' ಎಂದು ತನ್ನ ತನ್ನ 'ಗದಾಯುದ್ಧ' ಕಾವ್ಯದ ಪ್ರಾರಂಭದಲ್ಲಿ ಹೇಳುವಂತೆ, ನಮ್ಮ ಬದುಕಿನ ಕೆಲವು ಘಟ್ಟಗಳ ಸಿಂಹಾವಲೋಖನ ಮಾಡಿದಾಗ ನನಗೆ ಈ ಕೆಲವು ಪ್ರಸಂಗಗಳು ಪ್ರಧಾನವಾಗಿ ಕಾಣಿಸುತ್ತದೆ.

ರಾಜಾಜಿನಗರದಲ್ಲಿರುವ "ಕುಮಾರವ್ಯಾಸ ಮಂಟಪದಲ್ಲಿ ದಿ. ರಾಜಾರಾಮರ ನೇತೃತ್ವದಲ್ಲಿ ನಡೆಯುತ್ತಿದ್ದ ಕುಮಾರವ್ಯಾಸನ ಕಾವ್ಯದ ಪಾತ್ರ ಪರಿಚಯ, 'ಮಹಾವೀರ ಮಿಷನ್' ಜೈನಸಂಸ್ಥೆ ನಡೆಸುತ್ತಿದ್ದ ''ಜೈನ ಸಾಹಿತ್ಯ ಪರಿಚಯ'', ಹೆಚ್.ಎ.ಎಲ್. ಕನ್ನಡ ಸಂಘದವರು ಏರ್ಪಡಿಸುತ್ತಿದ್ದ

'ಕನ್ನಡ ಸಾಹಿತ್ಯ ಪರಿಚಯ' ಕಾರ್ಯಕ್ರಮ, ಆಕಾಶವಾಣಿ ಕಾರ್ಯಕ್ರಮಗಳಲ್ಲಿ ನಮ್ಮಿಬ್ಬರ ಭಾಗವಹಿಸುವುಕೆ ಇಂದಿಗೂ ನೆನಪಿನಲ್ಲಿ ಉಳಿಯುವಂಥವು. ದೂರದರ್ಶನದ ಹಾವಳಿ ಇಲ್ಲದ ಅಂದು ನಮ್ಮಿಬ್ಬರ ಕಾರ್ಯಕ್ರಮಕ್ಕೆ ನೆರೆಯುತ್ತಿದ್ದ ಮಂದಿ ಇಂದಿಗೂ ರೋಮಾಂಚನಕಾರಿ.

೨೫೦೦ ನೇ ಮಹಾವೀರ ಜಯಂತಿ ಸಂದರ್ಭಧಲ್ಲಿ ಕರ್ನಾಟಕದಾದ್ಯಂತ ಮೆರವಣಿಗೆಯಲ್ಲಿ ಧರ್ಮಚಕ್ರರಥವಿಹಾರದ ಸಂದರ್ಭದಲ್ಲಿ ಹಾಸನ, ಸಕಲೇಶಪುರ, ತುಮಕೂರುಗಳಲ್ಲಿ ಜೈನಗ್ರಂಥಗಳ ವಿಶೇಷ ಉಪನ್ಯಾಸ ನೀಡಲು ಇಬ್ಬರೂ ಜೊತೆಯಾಗಿ ಹೋಗುತ್ತಿದ್ದೆವು. ಆದರೆ ಅನಾಜಿ ಅವರು ಆ ರಥಚಕ್ರದ ಯಾತ್ರಾ ಕಾರ್ಯಕ್ರಮದಲ್ಲಿ ಹೆಚ್ಚು ಕಮ್ಮಿ ಇಡೀ ಕರ್ನಾಟಕವನ್ನೇ ಸುತ್ತಿದರು. ಹೀಗೆ ಓದು, ಬರಹ, ಭಾಷಣ-ವ್ಯಾಖ್ಯಾನ, ಕಾವ್ಯ-ಪಠನ ಇವುಗಳ ಮಧ್ಯೆ ಸಮಯ ಸರಿದುದೇ ಗಮನಕ್ಕೆ ಬರಲಿಲ್ಲ.

ಹೀಗಿರುವಾಗ ಒಮ್ಮೆ ಅನಿರೀಕ್ಷಿತವಾಗಿ ಪ್ರೊ. ಕಮಲಾ ಹಂಪನಾ ಹಾಗೂ ಪ್ರೊ. ಹಂಪನಾ ದಂಪತಿಗಳು ನಮ್ಮ ಮನೆಗೆ ಬಂದು, ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲಿರುವ ಹಂಪನಾ ಅವರಿಗೆ ಸಾಹಿತ್ಯ ಪರಿಷತ್ತಿನ ವಿದ್ಯಮಾನಗಳನ್ನು ಚೆನ್ನಾಗಿಬಲ್ಲ ಅಶ್ವತ್ಥನ ಸಹಕಾರ ಅತ್ಯಗತ್ಯವೆಂದು ಕೇಳಿಕೊಂಡರು. ಪ್ರೊ.ಕಮಲಾ ಹಂಪನಾ ಅವರು ನಾನು ಮಹಾರಾಣಿ ಕಾಲೇಜಿನಲ್ಲಿ ಬಿ.ಎ. ಓದುತ್ತಿದ್ದಾಗ ನನಗೆ ಅಧ್ಯಾಪಕಿಯಾಗಿದ್ದರು 'ಅಶ್ವತ್ಥನ ನೆಚ್ಚಿನ ಪರಿಷತ್ತನ್ನು ಅಭಿವೃದ್ಧಿಪಡಿಸಲು ಹಮ್ಮಿಕೊಂಡಿರುವ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಲು ಅವನಂಥ ಕಾರ್ಯಕರ್ತನ ಅವಶ್ಯಕತೆ ಇದೆಯೆಂದೂ, ಹಾಗಾಗಿ ಚುನಾವಣೆ ಮುಗಿಯುವವರೆಗೂ ತಮ್ಮೊಂದಿಗಿದ್ದು ಸಹಕರಿಸಬೇಕೆಂದು ಕೇಳಿಕೊಂಡರು. ಸಾಹಿತ್ಯ ಪರಿಷತ್ತು ಕನ್ನಡದ ಕೆಲಸವೆಂದರೆ ಆದಿಶೇಷನಂತೆ ಸಹಸ್ರ ಹೆಡೆಗಳನ್ನಾಡಿಸುವ ಇವರಿಗೆ ಸ್ವರ್ಗವೇ ಸಿಕ್ಕಂತಾಯಿತು.

ಮುಂದೆ, ಚುನಾವಣೆಯಲ್ಲಿ ಗೆದ್ದು ಹಂಪನಾ ಅವರು ಅಧ್ಯಕ್ಷರಾದರು. ಅನಾಜಿ ಮತ್ತು ದಿ॥ ಪ್ರೊ. ಡಿ. ಲಿಂಗಯ್ಯ ಇವರಿಬ್ಬರೂ ಗೌರವ ಕಾರ್ಯದರ್ಶಿಗಳಾಗಿ ನೇಮಕವಾದರು. ಸುಮಾರು ಒಂದೂವರೆ ವರ್ಷಗಳ ಕಾಲ ಗೌರವ ಕಾರ್ಯದರ್ಶಿಯಾಗಿ ಬೆಳಿಗ್ಗೆ ಸಂಜೆ ರಜಾದಿನಗಳನ್ನೆದೆ ಅಲ್ಲಿನ ಕೆಲಸ ಕಾರ್ಯಗಳಲ್ಲಿ ಮಗ್ನರಾದರು. ಈ ಅವಧಿಯಲ್ಲಿ ಧರ್ಮಸ್ಥದಲ್ಲಿ ಅದ್ದೂರಿಯಾಗಿ ಸಾಹಿತ್ಯ ಸಮ್ಮೇಳನ ನಡೆಯಿತು.

ಹೀಗಿರುವಾಗ, ಕಾರ್ಯದರ್ಶಿಯಾಗಿ ಕೆಲಸ ಮಾಡಲು ಅನುಮತಿ ಪತ್ರವನ್ನು ಹಿರಿಯ ಅಧಿಕಾರಿಗಳಿಂದ ಪಡೆದಿದ್ದರೂ, ಅನಿರೀಕ್ಷಿತವಾಗಿ ಅನಾಜಿ ಅವರಿಗೆ ಹಾಸನಕ್ಕೆ ವರ್ಗವಾಯಿತು. ವರ್ಗವನ್ನು ಹೇಗಾದರೂ ತಾನು ರದ್ದುಪಡಿಸಲು ಪ್ರಯತ್ನಿಸುವುದಾಗಿ ಅಧ್ಯಕ್ಷರು ಹೇಳಿದರಾದರೂ, ವರ್ಗಾವಣೆ ರದ್ದಾಗಲಿಲ್ಲ. ಹಾಗಾಗಿ ಪೂರ್ಣಾವಧಿಯ ಕಾರ್ಯದರ್ಶಿಗಳಾಗಿ ಕೆಲಸ ಮಾಡಲಾಗಲಿಲ್ಲ. ಹಾಸನಕ್ಕೆ ತೆರಳಿದರು.

ಅಲ್ಲಿಂದ ಮುಂದಿನ ದಿನಗಳಲ್ಲಿ ಒಂದೆರಡು ಬಾರಿ ನಮ್ಮ ಸ್ವಂತ ಪ್ರಯತ್ನದಿಂದ ಬೆಂಗಳೂರಿನ ವಿಜ್ಞಾನ ಕಾಲೇಜು ಮತ್ತು ಮಹಾರಾಣಿ ಕಲಾ ಕಾಲೇಜಿಗೆ ವರ್ಗವಾಗಿ ಬಂದರೂ ಅವು ಅಲ್ಪ ಕಾಲಾವಧಿಯದಾಗಿತ್ತು. ಮತ್ತೆ ಹಾಸನ, ಕೊಳ್ಳೇಗಾಲ, ಮಾಗಡಿಗಳೆಂದು, ಕೊನೆಗೆ ನಿವೃತ್ತರಾಗುವವರೆಗೂ ಓಡಾಟಗಳಲ್ಲಿಯೇ ಕಳೆಯಿತು.

ಹೀಗೆ ಪದೇ ಪದೇ ವರ್ಗಾವಣೆಗೊಳ್ಳುವುದನ್ನು ನೋಡಿದ ನಮ್ಮ ತಂದೆಯವರು, ನಮಗೆ ಒಂದು ಸಲಹೆಯನ್ನು ಕೊಟ್ಟರು. ಒಬ್ಬಳೇ ಕಾಲೇಜಿಗೆ ಹೋಗಿ ಬಂದು, ಚಿಕ್ಕ ಮಗುವನ್ನು ನೋಡಿಕೊಳ್ಳುವುದು ಅಷ್ಟು ಸುಲಭದ ಕೆಲಸವಲ್ಲ. ಹಾಗಾಗಿ ತಮ್ಮ ಮನೆಯ ಮೇಲೆ ಮಹಡಿ ಕಟ್ಟಿಕೊಂಡು, ಅವರಲ್ಲಿಗೇ ಬರುವಂತೆಯೂ, ಅದಕ್ಕೆ ಬೇಕಾದ ದಾಖಲೆಗಳನ್ನು ನೀಡುವುದಾಗಿಯೂ ಹೇಳಿದರು. ಆ ಸಲಹೆ ನಮಗೆ ಸೂಕ್ತವಾಗಿ ಕಂಡು, ಅದರಂತೆಯೇ ಮಹಡಿಯನ್ನು ಕಟ್ಟಿಕೊಂಡು ಈಗ ನಾವು ವಾಸವಿರುವ ಜಯನಗರದ ಮನೆಗೆ ಬಂದೆವು.

ಅನಾಜಿ ಅವರು ಕೊಳ್ಳೇಗಾಲದಲ್ಲಿ ಸುಮಾರು ವರ್ಷಗಳಿದ್ದರು. ಅವರ ಸಹೋದ್ಯೋಗಿಗಳೆಲ್ಲರ ಪರಿಚಯ ನನಗೆ ಚೆನ್ನಾಗಿ ಆಗಿತ್ತು. ಕೆಲಸದ ನಿಮಿತ್ತ ಬೆಂಗಳೂರಿಗೆ ಬಂದಾಗ, ಕೆಲವರು ನಮ್ಮ ಮನೆಯಲ್ಲೇ ತಂಗುತ್ತಿದ್ದರು. ಅದರಲ್ಲಿ ಕಾಮರ್ಸ್ ಅಧ್ಯಾಪಕರಾಗಿದ್ದ ದಿ॥ ಕೃಷ್ಣಮೂರ್ತಿಯವರ ಕಣ್ಣಿನ ಆಪರೇಷನ್‌ಗಾಗಿ, ಅವರ ಮನೆಯವರಾರೂ ಬೆಂಗಳೂರಿನಲ್ಲಿ ಇಲ್ಲದ ಕಾರಣ, ನಮ್ಮ ಮನೆಯಲ್ಲೇ ಹಲವಾರು ದಿನಗಳು ತಂಗಿದ್ದರು. ಆಗೆಲ್ಲ ನನಗೆ ಒಂದು ರೀತಿಯ ಸಂಭ್ರಮ-ಸಂತಸ.

ಆದರೆ ಕೊಳ್ಳೇಗಾಲವೆಂದರೆ ಈಗಲೂ ಒಂದು ಪ್ರಸಂಗ ನನ್ನನ್ನು ಬಾಧಿಸುತ್ತದೆ. ಅಂದಿನ ಕೊಳ್ಳೇಗಾಲದಲ್ಲಿ ಒಳ್ಳೆಯ ಊಟತಿಂಡಿಗಳ ಹೋಟೆಲ್ಲುಗಳು ಇರಲಿಲ್ಲ. ವಾಸ್ತವ್ಯ ಹೂಡಲು ರೂಮುಗಳ ಅಭಾವವಿತ್ತು. ಹಾಗಾಗಿ ಅನಾಜಿ ಅವರು, ಅವರು ಇತರ ಕೆಲವು ಸಹೋದ್ಯೋಗಿಗಳೊಂದಿಗೆ ಖಾಲಿ ಇದ್ದ ಎನ್.ಜಿ.ಓ. ಅಸೋಸಿಯೇಷನ್‌ನಲ್ಲಿ ಇವರ ಜೊತೆ ತಂಗಿದ್ದರು. ಜೊತೆಗಾರರು ತಾವು ಇಸ್ಪೀಟ್ ಆಡಲು ತೊಂದರೆಯಾಗದಿರಲು ಅನಾಜಿ ಅವರಿಗೆ ಒಂದು ಕೋಣೆಯನ್ನು ಕೊಟ್ಟು ಉಳಿದವರು ಹಾಲ್‌ನಲ್ಲಿ ಮಲಗುತ್ತಿದ್ದರು. ಪ್ರವಾಸಿ ಮಂದಿರದ ಅಡಿಗೆಯವನ ಮನೆಯಲ್ಲಿ ಅನಾಜಿ ಅವರು ಊಟ ಮಾಡುತ್ತಿದ್ದರು. ಆಗಿನ ಅವರ ಪ್ರಿನ್ಸಿಪಾಲ್ (ಸುಬ್ರಹ್ಮಣ್ಯ) ಆಗಿದ್ದವರಿಗೆ ಹೈಶುಗರ್ ಇದ್ದು ಊಟಕ್ಕಾಗಿ ತುಂಬಾ ಕಷ್ಟಪಡುತ್ತಿದ್ದರು. ಪ್ರತಿ ಶನಿವಾರ ಅವರ ಊರಿಗೆ ಹೋಗಿ ಬರಲು ಸಾಧ್ಯವಾಗದೆ, ಅವರು ಬಹಳ ಪ್ರಯಾಸ ಪಡುತ್ತಿದ್ದರು. ಪ್ರತಿವಾರವೂ ಬೆಂಗಳೂರಿಗೆ ಬಂದು ಹೋಗುತ್ತಿದ್ದ ಅನಾಜಿ ಅವರೊಂದಿಗೆ ಸೋಮವಾರ ಬೆಳಿಗ್ಗೆ ಹಿಂದಿರುಗುವಾಗ ಪ್ರತಿವಾರವೂ ತಪ್ಪದೇ ಒಂದು ವಾರಕ್ಕಾಗುವಷ್ಟು ಚಪಾತಿಗಳನ್ನು ಅವರಿಗಾಗಿ ಮಾಡಿ ಕಳುಹಿಸುತ್ತಿದ್ದೆ.

ಒಮ್ಮೆ ಚಪಾತಿಯನ್ನು ಪ್ಯಾಕ್ ಮಾಡಿ ಅದನ್ನು ಪ್ರತಿದಿನದಂತೆ ಊಟದ ಮೇಜಿನ ಮೇಲಿಟ್ಟು, ಅಡಿಗೆ ಮನೆಯಲ್ಲಿ ಕಾರ್ಯಮಗ್ನಳಾಗಿದ್ದ ನಾನು, ಅಲ್ಲಿಂದಲೇ ಕೂಗಿ ಚಪಾತಿ ಪ್ಯಾಕನ್ನು ತೆಗೆದುಕೊಳ್ಳುಂತೆ ಹೇಳಿದೆ. ಅವರು ಹೋದ ನಂತರ, ನನ್ನ ಕೆಲಸ ಮುಗಿಸಿ ಹೊರಬಂದು ನೋಡಿದಾಗ, ಊಟದ ಮೇಜಿನ ಮೇಲೆ ಚಪಾತಿ ಪ್ಯಾಕೆಟ್ ಸಪ್ಪಗೆ ಕೂತಿತ್ತು. ಗಾಬರಿಯಿಂದ ಗಡಿಯಾರ ನೋಡಿದಾಗ, ಆಗಲೇ ೭.೩೦ ಆಗಿತ್ತು. ಮಗಳನ್ನು ಗಡಬಡಿಸಿ, ಸ್ಕೂಲಿಗೆ ಕಳುಹಿಸಲು ಕೆಳಗಿನ ಮನೆಯವರಿಗೆ ಹೇಳಿ, ಒಂದೇ ಉಸಿರಿಗೆ ರಿಕ್ಷಾದಲ್ಲಿ, ಚಪಾತಿ ಪ್ಯಾಕೆಟ್ ಸಮೇತ ಬಸ್‌ಸ್ಟ್ಯಾಂಡ್‌ಗೆ ಬಂದೆ. ಗಡಬಡಿಸಿ, ರಿಕ್ಷಾ ಇಳಿಯುವಷ್ಟರಲ್ಲಿ ನನ್ನ ಕಣ್ಣೆದುರಿಗೆ ಕೊಳ್ಳೇಗಾಲದ ಬಸ್ಸು ಹೊರಟಿತ್ತು. ನಾನು ಕೈ ಬೀಸಿ ಕೂಗಿದರೂ ನಿಲ್ಲಲಿಲ್ಲ. ಒಮ್ಮೆಲೇ ನನ್ನ ಶಕ್ತಿ ಕುಂದಿ ಅಲ್ಲೇ ಕುಸಿತು ಕುಳಿತೆ. ನನ್ನ ಪ್ರಯತ್ನ ಮೀರಿ ಕಣ್ಣೀರು ಸುರಿಯಲಾರಂಭಿಸಿತು. ಕಾಲೇಜಿಗೆ ಬಂದ ಕೂಡಲೇ, “ಅಶ್ವತ್ಥನಾರಾಯಣ ಬಂದಿರಾ?” ಎಂಬ ಮಾತಿನೊಂದಿಗೆ ಚಪಾತಿ ಪ್ಯಾಕೆಟ್‌ನ ನಿರೀಕ್ಷೆಯಲ್ಲಿರುತ್ತಿದ್ದ ಅವರಿಗೆ ಎಂಥಾ ಆಘಾತವಾಗಿರಬಹುದೆಂಬ

ಊಹೆಯಿಂದ ನನ್ನ ಮನಸ್ಸು ಪದೇ ಪದೇ ಚುಚ್ಚುತ್ತಿತ್ತು. ಊರಿಗೆ ಹೊರಟಾಗ ಒಮ್ಮೆ ಹೊರಗೆ ಬಂದ ನೋಡದ ನನ್ನ ಮೇಲೇ ನನಗೆ ಕೋಪವುಕ್ಕುತ್ತಿತ್ತು. ಈ ಆಘಾತವನ್ನೆದುರಿಸಲಾರದೆ ಕಾಲೇಜಿಗೆ ರಜೆ ಹಾಕಿ, ಬಿಕ್ಕಿ ಬಿಕ್ಕಿ ಅತ್ತಿದ್ದೆ ಅತ್ತಿದ್ದು. ಸಾಮಾನ್ಯವಾಗಿ ಯಾವುದಕ್ಕೂ ಕಣ್ಣೀರು ಸುರಿಸದ ನಾನು ಕಣ್ಣೀರಿನ ಕೋಡಿ ಹರಿಸಿದೆ. ಇದು ನನ್ನ ಜೀವನದಲ್ಲಿ ಮರೆಯಲಾಗದ ಪ್ರಸಂಗ.

ಕೊಳ್ಳೇಗಾಲದಲ್ಲಿ ವಾಸ್ತವ್ಯಕ್ಕೆ ಸರಿಯಾದ ಕೊಠಡಿ, ಊಟ-ತಿಂಡಿಗಳಿಗೆ ಅಭಾವ ಹೀಗೆ ಹಲವಾರು ಕೊರತೆಗಳಿದ್ದರೂ ಅಲ್ಲಿನ ಜನ ಒಳ್ಳೆಯವರು-ಸ್ನೇಹ ಜೀವಿಗಳು. ಅಲ್ಲಿಗೆ ಹೋದಾಗ ಮೊದಲು ಪರಿಚಯವಾದದ್ದು ಶರಣ ಸನ್ಯಾಸಿ ಪಿ. ಬಸವಣ್ಣ ಅವರು. ಸನ್ಯಾಸ ಸ್ವೀಕಾರ ಮಾಡುವ ಮೊದಲು ಅವರು ಸುಪ್ರಸಿದ್ಧ ಅಡ್ವೋಕೇಟ್ ಆಗಿದ್ದು ವೇದ-ಉಪನಿಷತ್ತು-ವೀರಶೈವ ಸಾಹಿತ್ಯ-ಲಾಗೆ ಸಂಬಂಧಿಸಿದ ಪುಸ್ತಕಗಳು-ಮೊದಲಾದ ಗ್ರಂಥಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದರು. ಅವರೊಂದಿಗೆ ಸಂಭಾಷಿಸುವುದೇ ಒಂದು ಜಗತ್ತನ್ನು ತೆರೆದಿಟ್ಟಂತೆ ಎಂದು ಹೇಳುತ್ತಿದ್ದ ಅನಾಜಿ ಅವರಿಗೆ, ಅವರ ಸ್ನೇಹ ಒಂದು ವರವಾಗಿ ಪರಿಣಮಿಸಿತ್ತು. ಹಲವಾರು ಬಾರಿ ನಮ್ಮ ಮನೆಗೂ ಭೇಟಿ ನೀಡಿದ್ದು ಆ ಸನ್ಯಾಸಿಗಳ ಭೇಟಿ - ಸಂಭಾಷಣೆಯೇ ಒಂದು ಅಪೂರ್ವ ಕ್ಷಣಗಳಾಗಿದ್ದವು. ಐದು ವರ್ಷಗಳಿಗೂ ಮೀರಿ ಕೊಳ್ಳೇಗಾಲದಲ್ಲಿದ್ದು ಅನಾಜಿ ಅವರಿಗೆ ಈ ಸನ್ಯಾಸಿಗಳ ಬಾಂಧವ್ಯ, ಹುರುಪನ್ನು ತಂದಂತಾಗಿತ್ತು.

ಈ ವೇಳೆಗೆ ನಮ್ಮ ಏಕೈಕ ಪುತ್ರಿ ಕ್ಷಮಾಳ ಪ್ರಾಥಮಿಕ ಹಾಗೂ ಹೈಸ್ಕೂಲುಗಳ ವ್ಯಾಸಂಗವು ಮುಗಿದು, ಎನ್‌ಎಮ್‌ಕೆಆರ್‌ವಿ ಮಹಿಳಾ ಕಾಲೇಜಿನಲ್ಲಿ (Applied Botany) ಅಪ್ಲೈಡ್ ಬಾಟನಿಯಲ್ಲಿ ಎಮ್.ಎಸ್ಸಿ.(M.Sc) ಮುಗಿಸುವ ಹಂತಕ್ಕೆ ಬಂದಿದ್ದಳು. ಅವಳು ಶಾಲಾ-ಕಾಲೇಜಿನ ದಿನಗಳಲ್ಲಿ ಒಳ್ಳೆಯ ಹಾಕಿ ಆಟಗಾರಳಾಗಿದ್ದಳು. ಅಲ್ಲದೇ ಒಳ್ಳೆಯ ಚರ್ಚಾಪಟುವಾಗಿದ್ದು, ಅನೇಕ ಬಹುಮಾನಗಳನ್ನು ಪಡೆದಿದ್ದಳು. ಒಮ್ಮೆ ಅವಳ ಕಾಲೇಜಿನ ತರಗತಿಯಲ್ಲಿ ಕನ್ನಡ ಸಾಹಿತ್ಯದ ಪ್ರಸ್ತಾಪ ಬಂದಾಗ, ಇವಳು ಹಲವಾರು ಕನ್ನಡ ಸಾಹಿತ್ಯ ಕೃತಿಗಳನು ಉದಾಹರಿಸಿದಳಂತೆ! ಆಗ ಅವಳ ಅಧ್ಯಾಪಕರೊಬ್ಬರೂ "ಇಷ್ಟು ವಯಸ್ಸಿಗೆ ಇಷ್ಟೆಲ್ಲಾ ಪುಸ್ತಕಗಳನ್ನು ಹೇಗೆ ಓದಿದ್ದೀಯಾ?" ಎಂದು ಕೇಳಿದರಂತೆ. ಆಗ ಅವಳು "ನಮ್ಮ ಮನೆಯಲ್ಲಿ ನಮ್ಮ ತಂದೆ-ತಾಯಿಯರಿಬ್ಬರ ನಡುವೆ ನಡೆಯುವ ಸಾಹಿತ್ಯ ಸಲ್ಲಾಪದ ಪ್ರಭಾವ" ಎಂದು ಉತ್ತರಿಸಿದಳಂತೆ! ಎನ್.ಎಮ್.ಕೆ.ಆರ್.ವಿ. ಕಾಲೇಜಿನಲ್ಲಿ "Best Student of the Year" ಪ್ರಶಸ್ತಿ ಪಡೆದು, ಎಂ.ಎಸ್ಸಿ.ಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾದಳು.

ಮಗಳು ಕ್ಷಮಾ ಪ್ರಥಮ ಎಂ.ಎಸ್ಸಿ.ಯಲ್ಲಿದ್ದಾಗ, ಅನಾಜಿ ಅವರ ಅಣ್ಣನ ಮಗನ ವಿವಾಹ ನಿಶ್ಚಯವಾಗಿತ್ತು. ಆ ವಧುವಿನ ತಮ್ಮ, ಉನ್ನತ ವಿದ್ಯಾಭ್ಯಾಸಕ್ಕಾಗಿ ಅಮೇರಿಕೆಗೆ ತೆರಳುವವನಾಗಿದ್ದ. ಅವರ ತಂದೆ ಮಗನಿಗೆ ಮದುವೆ ಮಾಡಿಯೇ ಕಳುಹಿಸಬೇಕೆಂಬ ತವಕದಲ್ಲಿದ್ದರು. ಈ ಸಂದರ್ಭದಲ್ಲಿ ಮದುವೆಯ ಮನೆಯಲ್ಲಿ ಉತ್ಸಾಹದ ಚಿಲುಮೆಯಂತೆ ಓಡಾಡಿಕೊಂಡಿದ್ದ ಕ್ಷಮಾ, ಅವರ ಮನೆಯವರೆಲ್ಲರಿಗೂ ಮೆಚ್ಚುಗೆಯಾದಳು. ಆದರೆ ಆಗತಾನೇ ಎರಡನೇ ವರ್ಷ ಎಂ.ಎಸ್ಸಿ.ಗೆ ಕಾಲಿಟ್ಟಿದ್ದ, ಅವಳ ವ್ಯಾಸಂಗವು ಮುಗಿಯುವವರೆಗೆ ಕಾಯುವುದು ಅನಿವಾರ್ಯವಾಗಿತ್ತು. ಆದರೆ ಅವಳ ಅಂತಿಮ ವರ್ಷದ ಪರೀಕ್ಷೆ ನಡೆಯುತ್ತಿರುವಾಗಲೇ, ಲಗ್ನ ಕೂಡಿ ಬಂದು ವಿವಾಹ ನೆರವೇರಿತು. ಅಮೇರಿಕಾಗೆ ತೆರಳಿದ ನಂತರ ಅಲ್ಲಿ ಅವಳು ಉನ್ನತ ವಿದ್ಯಾಭ್ಯಾಸ ಮುಂದುವರೆಸಿ,

ಯೂನಿವರ್ಸಿಟಿಯ ಸ್ಕಾಲರ್‌ಶಿಪ್ ಪಡೆದು, ಡಾಕ್ಟರೇಟ್ ಪದವಿ ಪಡೆದು, ಮುಂದೆ ವಿಜ್ಞಾನಿಯಾಗಿ ಉದ್ಯೋಗ ಕ್ಷೇತ್ರದಲ್ಲಿ ಕಾಲಿಟ್ಟಳು.

ಮುಂದೆ, ನಮ್ಮ ನಿಜವಾದ ನಿವೃತ್ತ ಜೀವನ ಪ್ರಾರಂಭವಾಯಿತು. ಅಜ್ಜಿ-ತಾತರಾಗುವ ಸನ್ನಿವೇಶ ಒದಗಿ ಬಂದು, ಅದಕ್ಕಾಗಿ ೨೦೦೩ ಮತ್ತು ೨೦೦೬ರಲ್ಲಿ ಎರಡು ಬಾರಿ, ಮುಂದೆ ೨೦೦೯ ಅವಳ ಮಹಾಪ್ರಬಂಧ ಮಂಡನೆಯ ಸಂದರ್ಭ, ೨೦೧೪ ಯಾವ ಜವಾಬ್ದಾರಿಯೂ ಇಲ್ಲದೇ ಆರಾಮವಾಗಿ ಕಾಲ ಕಳೆಯಲು ಹೀಗೆ ನಾಲ್ಕು ಬಾರಿ ಅಮೆರಿಕೆಯ ಪ್ರವಾಸ ಕೈಗೊಳ್ಳಬೇಕಾಯಿತು.

೨೦೦೩ರಲ್ಲಿ ಮೊದಲಬಾರಿಗೆ ಅಮೆರಿಕೆಯ ಮೇರಿಲ್ಯಾಂಡ್‌ನ ಕೊಲಂಬಿಯಾಗೆ ಹೋದಾಗ, ಆನಂದದ ಲಹರಿಯಾಗಿ ಮನೆತುಂಬಿ-ಮನತುಂಬಿ ಬಂದ ಮೊಮ್ಮಗನ ಆಗಮನ ಸಂಭ್ರಮವನ್ನು ತಂದಿತ್ತು. ಆದರೆ, ಈ ಸಂದರ್ಭದಲ್ಲಿ, ರಾಜಕೀಯ, ಧಾರ್ಮಿಕ, ಸಾಮಾಜಿಕ ವಿಚಾರಗಳನ್ನು ಕುರಿತ ಚರ್ಚೆಗಳಲ್ಲಿ, ನನ್ನೊಂದಿಗೆ ಸರಿಸಮಾನ-ವಯಸ್ಕರಂತೆ ಚರ್ಚಿಸುತ್ತಿದ್ದ ನಮ್ಮ ತಂದೆಯವರ ಅನಿರೀಕ್ಷಿತ ನಿಧನ, ಅದೂ ನಾವೂ ಭಾರತದಿಂದ ಬಹುದೂರ ಇರಬೇಕಾದ ಸನ್ನಿವೇಶ ನಮ್ಮಿಬ್ಬರಲ್ಲಿಯೂ ಮರೆಯಲಾರದ ನೋವನ್ನು ತಂದಿತು. ಈ ವೇಳೆಗಾಗಲೇ ನಮ್ಮ ತಾಯಿಯವರು ಈ ಜಗತ್ತಿನಿಂದ ನಿರ್ಗಮಿಸಿ ಐದು ವರ್ಷಗಳು ಕಳೆದಿತ್ತು. ನಮ್ಮ ಅಳಿಯಂದಿರು “ಬೇಕಾದರೆ ಬೆಂಗಳೂರಿಗೆ ಹೋಗಿ ಬನ್ನಿ, ಇಲ್ಲಿ ನಾನು ನೋಡಿಕೊಳ್ಳುತ್ತೇನೆ” ಎಂದು ಸಾಂತ್ವನ ಹೇಳಿದರಾದರೂ, ‘ಲಚ್ಚೀ..’ ಎಂದು ಕೂಗಿ ಕರೆಯುತ್ತಿದ್ದ ವಾತ್ಸಲ್ಯದ ಮೂರ್ತಿಯ ಅಸ್ತಿತ್ವವೇ ಬರಿದಾಗಿರುವಾಗ, ಇಲ್ಲಿಗೆ ಬಂದು ಏನು ಮಾಡಬೇಕು ಎನ್ನುವ ವೈರಾಗ್ಯಭಾವ, ತಂದೆಯಿಲ್ಲದೆ ಬರಿದಾದ ಮನೆಗೆ ಬರಲೊಪ್ಪಲಿಲ್ಲ.

ಅಮೇರಿಕೆಯಲ್ಲಿ ಹೊಸದಾಗ ಮನೆಕಟ್ಟಿಕೊಂಡು ಬಂದಿದ್ದ ನಮ್ಮ ಮಗಳ ಮನೆಯ ಎದುರು ಸಾಲಿನಲ್ಲಿ ಒಬ್ಬ ಕನ್ನಡಿಗನ್ನುಳಿದು, ಉಳಿದೆಲ್ಲ ಬೇರೆ ಭಾಷೆಗಳ ಭಾರತೀಯರೂ ಇದ್ದರು. ಇವಳ ಮನೆಯ ಹಿಂದಿನ ಸಾಲಿನಲ್ಲಿ ಆಂಧ್ರಪ್ರದೇಶದ ತೆಲುಗುಭಾಷಿಕರೊಬ್ಬರು ಅನಾಜಿ ಅವರಿಗೆ ಆಪ್ತರಾದರು. ಅವರು ಬಿಡುವಿನ ವೇಳೆ, ಶನಿವಾರ, ಭಾನುವಾರಗಳ ರಜಾದಿನಗಳಂದು ಇವರೊಂದಿಗೆ ಭಗವದ್ಗೀತೆ, ರಾಮಾಯಣ, ಮಹಾಭಾರತಗಳ ಬಗ್ಗೆ ತೆಲುಗಿನಲ್ಲಿ ಚರ್ಚಿಸುತ್ತಿದ್ದರು. ನಾಲ್ಕು ಬಾರಿ ನಾವು ಅಮೇರಿಕಾಗೆ ಹೋದಾಗಲೂ ಅನಾಜಿ ಅವರ ಆಗಮನವನ್ನು ಅವರು ಸಂಭ್ರಮಿಸುತ್ತಿದ್ದರು. ಅವರೊಂದಿಗೆ ಸಂಭಾಷಿಸಲು-ಚರ್ಚಿಸಲು ಸಾಹಿತ್ಯ ಸಲ್ಲಾಪಗಳಿಗೆ ಒಂದು ಕುರಿ ಸಿಕ್ಕಿತಲ್ಲಾ ಎಂಬ ಸಮಾಧಾನ ನಮಗೆ.

ಎರಡನೇ ಬಾರಿ ೨೦೦೬ರಲ್ಲಿ ಅಮೇರಿಕಾಗೆ ಹೋದಾಗ, ಅಲ್ಲಿ ಬಾಲ್ಟಿಮೋರ್‌ನಲ್ಲಿ ಕನ್ನಡ ಕಾವೇರಿ ಕೂಟದವರು ಏರ್ಪಡಿಸಿದ್ದ ‘ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ’ದಲ್ಲಿ ಸಕ್ರಿಯವಾಗಿ ಭಾಗವಹಿಸುವ ಅವಕಾಶವನ್ನು ತಂದಿತು. ಹಿಂದೆ ಅನಾಜಿ ಅವರು ಬೆಂಗಳೂರಿನ ವಿಜ್ಞಾನ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾಗ, ಇವರ ಶಿಷ್ಯನಾಗಿದ್ದು, ಈಗ ಅಮೇರಿಕೆಯಲ್ಲಿ, ದೊಡ್ಡ ಹುದ್ದೆಯಲ್ಲಿದ್ದು, “ಅಕ್ಕ ಸಂಸ್ಥೆ”ಯ ಅಧ್ಯಕ್ಷರಾಗಿದ್ದ ಶ್ರೀ ಸುರೇಶ್ ರಾಮಚಂದ್ರ ಅವರ, ಅಲ್ಲಿನ ಸುಪ್ರಸಿದ್ಧ ‘ಶಿವವಿಷ್ಣು ದೇವಾಲಯ’ದಲ್ಲಿ ಆಕಸ್ಮಿಕವಾಗಿ ಭೇಟಿಯಾಯಿತು. ಈ ಆಕಸ್ಮಿಕ ಭೇಟಿಯಿಂದ ಸಂತಸಗೊಂಡ ಶ್ರೀ ಸುರೇಶ್ ಅವರು ಆಗ ನಡೆಯಲ್ಲಿದ್ದ ವಿಶ್ವಕನ್ನಡ ಸಮ್ಮೇಳನದ ಕಾರ್ಯಕ್ರಮಗಳಿಗೆ ಅನಾಜಿ ಅವರ ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳುವ ಉತ್ಸಾಹವನ್ನು ತೋರಿ, ಅವರನ್ನು ಕೇಂದ್ರ

ಸಮಿತಿಯ ಸದಸ್ಯರನ್ನಾಗಿ ಮಾಡಿಕೊಂಡರು. ಈ ಮೂಲಕ ನಾವುಗಳು ಸಮ್ಮೇಳನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಒಂದು ಸುಸಂದರ್ಭವನ್ನು ಒದಗಿಸಿಕೊಟ್ಟರು. ನಾವಿಬ್ಬರೂ ಕೆಲವು ಗೋಷ್ಠಿಗಳಲ್ಲಿ ಭಾಗವಹಿಸಿದ್ದಲ್ಲದೇ ಅನಾಜಿ ಅವರು ಸಮ್ಮೇಳನದ ವಿಶೇಷ ಸಂಚಿಕೆಯ ಸಂಪಾದಕ ಸಮಿತಿಯಲ್ಲಿ ಭಾಗವಹಿಸುವಂತಾಯಿತು. ಹಲವಾರು ಗೋಷ್ಠಿಗಳನ್ನು ನಿರ್ವಹಿಸಿದರು.

ಈ ಸಂದರ್ಭದಲ್ಲಿ ನಮಗೆ ಪರಿಚಯವಾದವರು "ಭೂಮಿಕಾ" ಕನ್ನಡ ಸಂಸ್ಥೆಯ ಸ್ಥಾಪಕರೂ, ನಿರ್ವಾಹಕರೂ ಆಗಿದ್ದ 'ವಿಜಯ ಕುಲಕರ್ಣಿ' ದಂಪತಿಗಳು. ಮುಂದಿನ ದಿನಗಳಲ್ಲಿ ನಾವು ಅಮೇರಿಕಾಗೆ ಹೋದಾಗಲೆಲ್ಲಾ ನಮ್ಮನ್ನು ಪ್ರೀತಿವಿಶ್ವಾಸಗಳಿಂದ ಕಂಡು, ಆ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ನಾವಿಬ್ಬರೂ ಭಾಗವಹಿಸುವಂತೆ ಮಾಡಿದರು.

ಸಮ್ಮೇಳನದ ಸಮಯದಲ್ಲಿ ಕನ್ನಡಾಭಿಮಾನಿಗಳಾದ ಶ್ರೀಮತಿ ಮತ್ತು ಶ್ರೀ ಜಯಾನಾಗೇಂದ್ರ ಅವರ ಪರಿಚಯವಾಯಿತು. ಅವರಿಂದಾಗಿ ಬಾಲ್ಟಿಮೋರ್ ಕನ್ನಡ ಸಮ್ಮೇಳನದಲ್ಲಿ ಕುಟುಂಬ ಸಮೇತರಾಗಿ ನಾವು ಭಾಗವಹಿಸಲು ಅನುವು ಮಾಡಿಕೊಟ್ಟರು. ಅವರ ಸ್ನೇಹ ಇಂದಿಗೂ ಮುಂದುವರಿದಿದ್ದು, ಬೆಂಗಳೂರಿಗೆ ಅವರು ಬಂದಾಗಲೆಲ್ಲಾ ಅವರ ಭೇಟಿ-ಹರಟೆ ಸಂತಸವನ್ನು ತರುತ್ತದೆ. ಬಹಳ ಹಿಂದೆ ಬೆಂಗಳೂರಿನ ಕನ್ನಡ ಚರ್ಚಾಸ್ಪರ್ಧೆಗಳಲ್ಲಿ ಸ್ಪರ್ಧಿಯಾಗಿ ಭಾಗವಹಿಸಿದ್ದ ಶ್ರೀ ನಟರಾಜ್ ಅವರ ಭೇಟಿ ಸಮ್ಮೇಳನದಲ್ಲಾಗಿದ್ದು, ಅವರ ಸ್ನೇಹ ಮತ್ತೆ ಮುಂದುವರಿಯುವಂತಾಯಿತು. ಬೆಂಗಳೂರಿನಲ್ಲಿ ಕನ್ನಡಾಭಿಮಾನಿಗಳು ಇರುವುದು ಸಹಜ-ಅಷ್ಟೇ ಸಾಮಾನ್ಯ, ಆದರೆ ಕನ್ನಡದ ವಾತಾವರಣಕ್ಕಿಂತ ವಿಭಿನ್ನ ಸಂಸ್ಕೃತಿ ವಾತಾವರಣಗಳಲ್ಲಿ ಕನ್ನಡದ ಬಗ್ಗೆ ಇಷ್ಟು ಅಭಿಮಾನ ಗೌರವಾದರಗಳನ್ನು ಉಳಿಸಿಕೊಂಡು ಬಂದಿರುವುದು ನಿಜಕ್ಕೂ ಶ್ಲಾಘನೀಯ.

ಹೀಗೆ ಮೊಮ್ಮಗಳ ಆಗಮನದೊಂದಿಗೆ, ಸಮ್ಮೇಳನದ ಕಾರ್ಯಚಟುವಟಿಕೆಗಳೂ ಸೇರಿ ಎರಡನೇ ಬಾರಿಯ ಅಮೇರಿಕೆಯ ಪ್ರವಾಸ ಅತ್ಯಂತ ಉಲ್ಲಾಸಕಾರಿಯಾಗಿತ್ತು. ಮುಂದೆ ೨೦೧೮ರಲ್ಲಿ ಮಗಳ ಸಂಶೋಧನಾ ಪ್ರಬಂದ ಸಲ್ಲಿಕೆ ಸಂದರ್ಭದಲ್ಲಿ ಮತ್ತೆ ೨೦೨೪ ರಲ್ಲಿ ಯಾವ ಜವಾಬ್ದಾರಿಗಳೂ ಇಲ್ಲದೇ ಆರಾಮವಾಗಿ ಕಾಲ ಕಳೆಯಲು ಅಮೇರಿಕಾಗೆ ಬಂದೆವು. ಈ ವೇಳೆಗಾಗಲೇ ಸ್ವಲ್ಪ ದೊಡ್ಡವರಾಗಿದ್ದ ಮೊಮ್ಮಕ್ಕಳ ಒಡನಾಟ ನಮಗೆ ಸಂತಸ ತಂದಿತ್ತು. ಆ ವೇಳೆಗೆ ಆರು ವರ್ಷದವನಾಗಿದ್ದ ಮೊಮ್ಮಗನಿಗೆ ಕೂತಲ್ಲಿ ನಿಂತಲ್ಲಿ ಕನ್ನಡ ಪಾಠ ಮಾಡುತ್ತಾ, ಅವನಿಗೆ ಚೆನ್ನಾಗಿ ಕನ್ನಡ ಕಲಿಸಿದರು. ಹತ್ತಿರದಲ್ಲೇ ಇದ್ದ ಶಾಲೆಗೆ ಅವನನ್ನು ಬಿಡುವಾಗ ಹಿಂದಿರುಗಿ ಕರೆತರುವಾಗಲೆಲ್ಲಾ "ಇದು ಹಸಿರು ಎಲೆ" "ಇದು ಕೆಂಪು ಹೂ", "ಇದು ಕಪ್ಪು ನೆಲ", "ಹಸಿವಾಗಿದೆ", "ಊಟ ಹಾಕು", "ತಿಂಡಿ ತಿನ್ನುತ್ತೇನೆ", "ಕಾಫಿ-ಹಾಲು-ನೀರು ಕುಡಿಯುತ್ತೇನೆ". . . ಇತ್ಯಾದಿಯಾಗಿ ದಿನನಿತ್ಯದ ವ್ಯವಹಾರದಲ್ಲಿ ಸಂಭಾಷಣೆಯಲ್ಲಿ ಕನ್ನಡ ಕಲಿಸಿದರು. ಮೊಮ್ಮಗನಿಗೆ ಕನ್ನಡ ಸಂಭಾಷಣೆಯನ್ನು ಹೇಳಿಕೊಡುವುದರ ಮೂಲಕ ಅವನಿಗೆ ಕನ್ನಡ ಓದಲು ಬರೆಯಲು ಕಲಿಸಿದರೂ ಈ ಸಂದರ್ಭದಲ್ಲಿ ಅವನು ಓದುತ್ತಿದ್ದ ಹಾವರ್ಡ್ ಕೌಂಟಿ ಶಾಲೆಯಲ್ಲಿ, ಶನಿವಾರ-ಭಾನುವಾರಗಳಂದು, "ವಿವೇಕ ಸಂಪದ"ದ ಆಶ್ರಯದಲ್ಲಿ ಮಕ್ಕಳಿಗೆ ಕನ್ನಡ ಕಲಿಸುತ್ತಿದ್ದ "ಶಾಂತಿ ಮೇಡಂ" ಪರಿಚಯವಾಗಿ ಅಲ್ಲಿ ಹುಡುಗರಿಗೆ ಮಾತ್ರವಲ್ಲ, ಪಾಠ ಮಾಡುವ ಶಿಕ್ಷಕರಿಗೂ, ಸೋದಾಹರಣವಾಗಿ ಕನ್ನಡ ಕಲಿಸುವುದನ್ನು ತಿಳಿಸಿಕೊಟ್ಟರು.

ಮೊದಲಿನಿಂದಲೂ ಕಲಿಕೆಯಲ್ಲಿ ಮುಂದಿದ್ದ ಮೊಮ್ಮಗ "ಆದಿತ್ಯ", ಹಾರ್ವರ್ಡ್ ಕೌಂಟಿ ಶಾಲೆಯಲ್ಲಿ ಪ್ರಾರಂಭಿಕ ಶಿಕ್ಷಣವನ್ನು ಕರಾಟೆಯೊಂದಿಗೆ ಕಲಿತು, ಮುಂದೆ ಅವರು ವರ್ಜೀನಿಯಾಗೆ ಸ್ಥಳಾಂತರಗೊಂಡ ನಂತರ, ಅಲ್ಲಿನ ಹೈಸ್ಕೂಲಿನಲ್ಲಿ Valedictorian ಆಗಿ ತೇರ್ಗಡೆ ಹೊಂದಿದನು; ಮುಂದೆ ಕಾಲೇಜಿನ ಶಿಕ್ಷಣದಲ್ಲಿ 'ಬೋಯಿಂಗ್ ಏರ್‌ವೇಸ್' ಅವರ ಮೆರಿಟ್ ಸ್ಕಾಲರ್‌ಶಿಪ್ ಪಡೆದು, ಎಲೆಕ್ಟ್ರಿಕಲ್ (Electrical) ಇಂಜಿನೀರಿಂಗ್ ಡಿಗ್ರಿಯನ್ನು ಮೆರಿಟ್‌ನಲ್ಲಿ ಮುಗಿಸಿದನು. ಅನಂತರ ಕ್ಯಾಲಿಫೋರ್ನಿಯಾದ ಬೋಯಿಂಗ್‌ನಲ್ಲಿ ಉದ್ಯೋಗದೊಂದಿಗೆ, ಅವರ ಎಂ.ಎಸ್. ಡಿಗ್ರಿಯನ್ನು ಮುಂದುವರಿಸಿದ್ದಾನೆ. ಕರಾಟೆಯಲ್ಲಿ ಬ್ಲಾಕ್‌ಬೆಲ್ಟ್ ವೀರ; ಇಷ್ಟಾದರೂ ಈಗಲೂ ಅವರು ನಮ್ಮೊಂದಿಗೆ ಕನ್ನಡದಲ್ಲಿ ಸಂಭಾಷಿಸುತ್ತಾನೆ. ಸಣ್ಣ-ಪುಟ್ಟ ಪತ್ರ ಬರೆಯುತ್ತಾನೆ. ಇದು ಅವನ ತಾತನ ಕನ್ನಡ ಪ್ರಭಾವ.

ಇನ್ನು ಮೊಮ್ಮಗಳು 'ಅಮೋಘಾ'ಳಿಗೆ ಇವಳ ಅಣ್ಣನಷ್ಟು ಕನ್ನಡ ಬರವಣಿಗೆ ತಿಳಿಯದಿದ್ದರೂ, ನಮ್ಮೊಂದಿಗೆ ಕನ್ನಡದಲ್ಲೇ ಸಂಭಾಷಿಸುತ್ತಾಳೆ. ನಾವೇ ಕೆಲವೊಮ್ಮೆ, "ಇಂಗ್ಲೀಷಿನಲ್ಲೇ ಹೇಳು, ಪರವಾಗಿಲ್ಲ" ಎಂದರೂ, ಮಾತು ನಿಲ್ಲಿಸಿ, ಕನ್ನಡ ಪದಕ್ಕಾಗಿ ತಡಕಾಡಿ, ನಿಧಾನವಾಗಿ ಕನ್ನಡದಲ್ಲೇ ಮಾತನಾಡುತ್ತಾಳೆ. ಈಗ ಮೂರನೇ ಸೆಮಿಸ್ಟರ್ ವಿದ್ಯಾರ್ಥಿನಿಯಾದ ಅವಳು ಒಳ್ಳೆಯ ಬರಹಗಾರ್ತಿ-ಇಂಗ್ಲಿಷ್ ಕವಯಿತ್ರಿ. ಅವಳು ಕೊಲಂಬಿಯಾದ ಹಾವರ್ಡ್ ಕೌಂಟಿ ಶಾಲೆಯಲ್ಲಿ, ಮಿಡಲ್ ಸ್ಕೂಲಿನಲ್ಲಿ ಓದುತ್ತಿರುವಾಗಲೇ ಕಥೆ, ಕವಿತೆಗಳನ್ನು ಬರೆಯುತ್ತಿದ್ದಳು. ಮೇರಿಲ್ಯಾಂಡ್ ಸ್ಟೇಟ್‌ನವರು Young authors competition ಏರ್ಪಡಿಸಿದ್ದರು. ಆ ಸ್ಪರ್ಧೆಯಲ್ಲಿ ಅಲ್ಲೇ ಎಲಿಮೆಂಟರಿ ಶಾಲೆಯಲ್ಲಿ ಓದುತ್ತಿದ್ದ ಅವಳು, ಆಯ್ಕೆಯಾಗಿ Young authors poetry section ನಲ್ಲಿ ಮೊದಲಿಗಳಾಗಿ ಮೇರಿಲ್ಯಾಂಡ್ ಸ್ಟೇಟ್‌ಗೇ "Young author" ಎಂಬ ಬಹುಮಾನ ಪಡೆದಿದ್ದಳು. ಸಂತೋಷ, ಬೇಸರ, ಕನಸು ಮೊದಲಾದ ಭಾವಗಳನ್ನು ತನ್ನ ಬರವಣಿಗೆಯಲ್ಲಿ ಬಿಂಬಿಸುವ ಅವಳ ಪ್ರಪ್ರಥಮ ಓದುಗಳೂ ವಿಮರ್ಶಕರೂ ನಾನೇ, ಕನ್ನಡದ ಬರಹಗಳಲ್ಲಿದ ಕಾರಣ ತಾತನಿಗೆ ತೋರಿಸಲು ಹಿಂದೇಟು.

ಅಮೆರಿಕೆಯ ಪ್ರವಾಸದಲ್ಲಿ ನನಗೆ ಬಹಳ ನೆನಪಾಗುವ ಸಂಗತಿ ಎಂದರೆ ಮಗಳೊಂದಿಗೆ ಕಾರಿನಲ್ಲಿ ಸಂಚರಿಸುತ್ತಿದ್ದ ಸಂದರ್ಭಗಳಲ್ಲಿ ಮನೆಯ ಬಳಿ ಕಾಡು ದಾರಿ ಒಂದಿತ್ತು. ಅವಳ ಮನೆಯಿಂದ ಹೊರಗಡೆ ಎಲ್ಲಿಗೆ ಹೋಗಬೇಕಾದರೂ ಆ ರಸ್ತೆಯಲ್ಲೇ ಹಾದು ಹೋಗಬೇಕಾಗಿತ್ತು. ಅಂಕುಡೊಂಕಾದರೂ (ನಮ್ಮ ಬೆಂಗಳೂರಿನ ಹಳ್ಳಿಗುಂಡಿಗಳಂತಲ್ಲದೇ) ಹಳ್ಳ ತಿಟ್ಟುಗಳಿಲ್ಲದೇ ಹೆಬ್ಬಾವಿನಂತೆ ಹರಡಿಕೊಂಡಿದ್ದ ರಸ್ತೆ. ಆ ರಸ್ತೆಯ ಇಕ್ಕೆಲಗಳಲ್ಲೂ ಮುಗಿಲೆತ್ತರಕ್ಕೆ ಬೆಳೆದಿದ್ದ ಮರಗಳು, ಮರಗಳ ಮಧ್ಯೆ ತೂರಿಬರುತ್ತಿದ್ದ ಚಂದ್ರನ ಬೆಳಕು. ಕೆಲವೊಮ್ಮೆ ಕೈಗೆ ಸಿಕ್ಕಿ ಬಿಡುವನೋ ಎಂಬಂತೆ ಹತ್ತಿರವೇ ಬಂದಂತೆ ಕಾಣುತ್ತಿದ್ದ ಚಂದ್ರ ಮನಸೆಳೆಯುವಂತಿತ್ತು. ಆವಾಗಲೆಲ್ಲಾ ನನಗೆ "Last Ride together"ಎಂಬ ಆಂಗ್ಲಕವಿ ರಾಬರ್ಟ್ ಬ್ರೌನಿಂಗ್‌ನ ಕವನ ನೆನಪಿಗೆ ಬರುತ್ತಿತ್ತು.

ನಾವು ನಾಲ್ಕು ಬಾರಿ ಅಮೇರಿಕೆಯ ಪ್ರವಾಸವನ್ನು ಕೈಗೊಂಡಾಗ ಅಲ್ಲಿನ ಹಲವಾರು ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸುವ ಅವಕಾಶ ಒದಗಿ ಬಂದಿತ್ತು. ನ್ಯೂಯಾರ್ಕ್ನ ಹೆಸರಾಂತ "ಸ್ಟಾಚೂ ಆಫ್ ಲಿಬರ್ಟಿ", "ಟೈಮ್ ಸ್ಕ್ವೇರ್" ರಾತ್ರಿವೇಳೆ ಕಿನ್ನರ ಲೋಕವನ್ನೇ ನಾಚಿಸುವಂತೆ ಕಂಗೊಳಿಸುವ ನ್ಯೂಯಾರ್ಕ್ ಸಿಟಿ, ಬಣ್ಣಬಣ್ಣದ ದೀಪಗಳ ಪ್ರಭೆಯಲ್ಲಿ ಕಾಮನ ಬಿಲ್ಲಿನಂತೆ ವರ್ಣರಂಜಿತವಾದ

ಲೋಕವನ್ನೇ ಸೃಷ್ಟಿಸಿದಂತೆ ಎತ್ತರದಿಂದ ಧುಮ್ಮಿಕ್ಕುವ ನಯಾಗರಾ ಜಲಪಾತ, ವರ್ಜೀನಿಯಾ ಸ್ಟೇಟ್‌ನಲ್ಲಿರುವ ಸುಪ್ರಸಿದ್ಧ ಲೂರೆ ಕ್ಯಾವರಿನ್ಸ್ ಗುಹೆ (Luray Caverins) ಅಲ್ಲಿಗೆ ಹೋಗುವ ದಾರಿಯಲ್ಲಿ ಒಂದೆಡೆ ಪರ್ವತಶ್ರೇಣಿ ಮತ್ತೊಂದೆಡೆ ಹರಡಿರುವ ದಟ್ಟವಾದ ಕಾಡುದಾರಿ, ಕಾಡಿನ ಮೌನದ ನಡುವೆ ಕೇಳಿಬರುವ ಹಕ್ಕಿಯ ಚಿಲಿಪಿಲಿನಾದದೊಂದಿಗೆ ಬೆರೆತ ಕಾರಿನ ಶಬ್ಧ- ಇವುಗಳ ನಡುವಿನ ಪಯಣವೇ ಒಂದು ವಿಶಿಷ್ಟ ಅನುಭವವನ್ನು ನೀಡುತ್ತಿತ್ತು.

ಅಮೆರಿಕೆಯ ಪಶ್ಚಿಮಭಾಗದಲ್ಲಿರುವ ಪ್ರಸಿದ್ಧ ಶಿವ-ವಿಷ್ಣು ದೇವಾಲಯ, ಅಮೇರಿಕೆಯ ರಾಜಧಾನಿ ವಾಷಿಂಗ್‌ಟನ್ ಡಿ.ಸಿ.ಯಲ್ಲಿರುವ ಸುಪ್ರಸಿದ್ಧ ಲೈಬ್ರರಿ, ಪಿಟ್ಸ್‌ಬರ್ಗ್ ಶ್ರೀನಿವಾಸ ಟೆಂಪಲ್, ಶ್ಯಾನನ್‌ಡೋವಾ ನ್ಯಾಷನಲ್ ಪಾರ್ಕ್ ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳು ನಮ್ಮಿಬ್ಬರ ಮನಸೂರೆಗೊಂಡವು. ಆದರೆ ನಮ್ಮ ಮನೆಯವರಿಗೆ ಅಮೇರಿಕಾದ ನ್ಯಾಷನಲ್ ಲೈಬ್ರರಿ ನೋಡಲು ನಾಲ್ಕು ಬಾರಿ ಅಮೇರಿಕಾ ಪ್ರವಾಸದಲ್ಲೂ ಸಂದರ್ಭ ಕೂಡಿ ಬರಲಿಲ್ಲ, ಅದನ್ನು ನೋಡುವ ಆಸೆ ಅವರಿಗಿತ್ತು.

ಆದರೆ, ಇವೆಲ್ಲಕ್ಕಿಂತಲೂ ಮೆಚ್ಚುಗೆಗೆ ಪಾತ್ರವಾದ ನಮ್ಮ ಕಾರ್ಪೋರೇಷನ್ ಶಾಲೆಗಳಿಗೆ ಸಮಾನವಾದ ಕೌಂಟಿಸ್ಕೂಲ್ ಮತ್ತು ಕೌಂಟಿ ಲೈಬ್ರರಿ.

ಬೇಸಿಗೆ ರಜೆ ಮುಗಿದು ಪುನಃ ಶಾಲೆಗಳು ಪ್ರಾರಂಭವಾಗುವ ಸಂದರ್ಭದಲ್ಲಿ "Open House" ಎಂಬ ಹೆಸರಿನಲ್ಲಿ ಅಲ್ಲಿ ಕೌಂಟಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ತಂದೆ-ತಾಯಿಗಳಲ್ಲದೆ, ಅಜ್ಜ-ಅಜ್ಜಿಯರಿಗೂ ಆ ದಿನದಂದು ಶಾಲೆಯ ಒಳಗಡೆ ಪ್ರವೇಶವಿರುತ್ತದೆ. ಮೂಲತಃ ಶಿಕ್ಷಕರಾದ ನಮ್ಮಿಬ್ಬರಿಗೂ ಈ "ಉಚಿತ ಶಿಕ್ಷಣ ಶಾಲೆಗಳು" ಹೇಗಿರಬಹುದೆಂಬ ಕುತೂಹಲವಿತ್ತು. ಶಾಲೆಯ ಒಳಗೆ ಪ್ರವೇಶಿಸುತ್ತಿದ್ದಂತೆಯೇ ಒಂದೆಡೆ ಅವರ Rain coat ನಿಲುವಂಗಿ, ಇತ್ಯಾದಿಗಳನ್ನು ನೇತು ಹಾಕಲು ಹ್ಯಾಂಗರ್‌ಗಳು, ಊಟದ ಡಬ್ಬಿಗಳನ್ನು ಇಡಲು ಅಚ್ಚುಕಟ್ಟಾಗಿ ಜೋಡಿಸಿದ್ದು, Rack ಗಳು ಶಾಲೆಯ ಒಳಗಡೆ ಮಕ್ಕಳ ಮನಸ್ಸಿಗೆ ಅನುಗುಣವಾಗಿ ಸಿದ್ಧಪಡಿಸಿದ ಪೀಠೋಪಕರಣಗಳು, ಕಾಲಮಾನಕ್ಕೆ ತಕ್ಕಂತೆ, ಅಲ್ಲಿನ ಸುತ್ತಲೂ ಗೋಡೆಗಳಲ್ಲಿ ಜೋಡಿಸಿಟ್ಟಿದ್ದು ಬಣ್ಣಬಣ್ಣದ ಚಿತ್ರಗಳಿದ್ದ ಪುಸ್ತಕಗಳು, ಇದಲ್ಲದೆ ಒಳಾಂಗಣದಲ್ಲಿ ಒಂದು ದೊಡ್ಡ ಲೈಬ್ರರಿ, ಆಕರ್ಷಕವಾಗಿ ಜೋಡಿಸಿಟ್ಟ ಪುಸ್ತಕಗಳು, ಊಟ ಮಾಡಲು ವಿಶಾಲವಾದ ಮೇಜು-ಕುರ್ಚಿಗಳಿಂದ ಸುಸಜ್ಜಿತವಾದ ಊಟದ ಮನೆ, ಶಾಲೆಯ ಬ್ಯಾಗನ್ನು ಇಡಲು ನಿರ್ಮಿಸಿದ್ದ ಕಪಾಟುಗಳು, ಬೆಳಕು-ಗಾಳಿಗಳಿಂದ ಆಹ್ಲಾದವನ್ನುಂಟುಮಾಡುತ್ತಿದ್ದ ಶಾಲೆಯ ಆವರಣ, ಶಿಕ್ಷಕ-ಶಿಕ್ಷಿಯರ ಸಮೂಹ ನಮ್ಮನ್ನು ನಿಬ್ಬೆರಗಾಗಿಸಿತು. ಇದು ಕೇವಲ ಸರ್ಕಾರದ ಉಚಿತ ಶಿಕ್ಷಣ ಶಾಲೆಗಳ ಸ್ಥಿತಿ-ಗತಿಗಳೆಂದು ನೋಡಿದಾಗ-ತಿಳಿದಾಗ, ನಮ್ಮ ಸರ್ಕಾರಿ ಹಾಗೂ ಕಾರ್ಪೋರೇಷನ್ ಶಾಲೆಗಳ ದುಃಸ್ಥಿತಿ ನೆನೆದು ಮನಸ್ಸು ಒಂದೆಡೆ ಮುದುಡಿತು. ಮತ್ತೊಂದೆಡೆ ಸರ್ಕಾರದ ನಿರ್ಲಕ್ಷ್ಯಕ್ಕೆ ಸಿಡಿದೆದ್ದಿತು.

ನಮಗಿಬ್ಬರಿಗೂ ಬಹಳ ಮೆಚ್ಚುಗೆಯಾದ ಮತ್ತೊಂದು ಪ್ರದೇಶವೆಂದರೆ ಅದು "ಕೌಂಟಿ ಲೈಬ್ರರಿ". ಕೌಂಟಿ ಎಂದರೆ ಕಾರ್ಪೋರೇಷನ್ ವಾರ್ಡ್‌ಗೆ ಸಮಾನವಾದದ್ದು, ಇಲ್ಲಿ ಸ್ಥಳೀಯ ಲೈಬ್ರರಿ ಅದೊಂದು ಸುಂದರ, ಚೇತೋಹಾರಿಯಾದ ಮನಸ್ಸನ್ನು ವಿಕಸಿತಗೊಳಿಸುವ ಅಪೂರ್ವ ತಾಣ, ಅಮೇರಿಕನ್-ನಿವಾಸಿಗಳಲ್ಲದೆ, ನಮ್ಮಂತೆ ವೀಕ್ಷಣೆಗಾಗಿ ತೆರಳಿದ ತಾತ್ಕಾಲಿಕ ನಿವಾಸಿಗಳಿಗೂ ಅದರ ಉಪಯೋಗ ಲಭ್ಯ. ಪಾಸ್‌ಪೋರ್ಟ್, ವೀಸಾಗಳನ್ನು ತೋರಿಸಿ, ಅಲ್ಲಿನ ಲೈಬ್ರರಿಯ ಉಪಯೋಗ

ಪಡೆಯಬಹುದು. ಒಳಗೆ ಕುಳಿತು ಓದಲೂ, ಮನೆಗೆ ತಂದು ಓದಲೂ ಅವಕಾಶವಿದೆ. ಪ್ರವೇಶ ದ್ವಾರದಲ್ಲಿರುವ ಕಂಪ್ಯೂಟರ್ ಬಳಸಿ, ನಮಗೆ ಬೇಕಾದ ಪುಸ್ತಕಗಳಿರುವ rack ಗಳಲ್ಲಿನ ಪುಸ್ತಕಗಳನ್ನು ಸುಲಭವಾಗಿ ಪಡೆಯಬಹುದು. ಜೊತೆಯಲ್ಲಿ ಮಕ್ಕಳಿದ್ದರೆ, ಅಲ್ಲಿ ಒಂದು ಕೊಠಡಿಯಲ್ಲಿ ಮಕ್ಕಳನ್ನು ಆಟವಾಡಿಸಲು, ಕತೆ ಹೇಳಿ ಅವರನ್ನು ರಮಿಸಲು, ಅವರಿಗಾಗಿ ಒಂದಿಬ್ಬರು ಶಿಕ್ಷಕರಿರುತ್ತಾರೆ. ಪುಸ್ತಕಗಳೊಂದಿಗೆ ಮಕ್ಕಳ ಆಟಿಕೆಗಳನ್ನು ಮನಗೆ ಕೊಂಡೊಯ್ದು, ಮಾರನೆಯ ದಿನ ಹಿಂದಿರುಗಿಸುವ ಅವಕಾಶವೂ ಇದೆ. ಅಲ್ಲದೇ ರಾತ್ರಿವೇಳೆಯೂ ಲೈಬ್ರೆರಿಗೆ ತೆರಳಿ ಅಲ್ಲಿರುವ ಬಾಕ್ಸ್‌ನಲ್ಲಿ ಪುಸ್ತಕಗಳನ್ನು ಹಿಂದಿರುಗಿಸಬಹುದು. ಒಂದು ಸಲಕ್ಕೆ ಐದಾರು ಪುಸ್ತಕಗಳನ್ನು ಕೊಡುತ್ತಿದ್ದರು.

ನಾನು ಚಿತ್ರಿಸುತ್ತಿರುವ ಕೌಂಟಿ ಶಾಲೆ ಹಾಗು ಕೌಂಟಿ ಲೈಬ್ರರಿಗಳ ಚಿತ್ರಣ ಈಗ್ಗೆ ಹದಿನೈದು ವರ್ಷಗಳ ಹಿಂದಿನ ಚಿತ್ರಣ ಹಾಗೂ ನಾವು ವೀಕ್ಷಿಸಿದ ಮೇರಿಲ್ಯಾಂಡ್‌ನ ಒಂದು ಪ್ರದೇಶದ ಚಿತ್ರಣವಷ್ಟೇ.

ನಮ್ಮಿಬ್ಬರಿಗೂ ಮೆಚ್ಚುಗೆಯಾದ ಕೌಂಟಿ ಲೈಬ್ರರಿಯ ಸದಾಪಯೋಗ ನಮ್ಮಿಬ್ಬರಿಗೂ ನಮ್ಮದೇ ಆದ ರೀತಿಯಲ್ಲಿ ಆಯಿತು. ಮಕ್ಕಳ ಪುಸ್ತಕ, ಭಾಷಾಕಲಿಕೆ, ಭಾಷಾಶಾಸ್ತ್ರ ಇತ್ಯಾದಿಗಳು ಅನಾಜಿ ಅವರ ಹಸಿವನ್ನು ತಣಿಸಲು ಸಾಧ್ಯವಾಯಿತು.

ಹಲವಾರು ಇಂಗ್ಲಿಷ್ ಕ್ಲಾಸಿಕಲ್ ಪುಸ್ತಕಗಳನ್ನು ಓದಿದ್ದ ನನಗೆ, ಇತ್ತೀಚಿನ, ಬೆಂಗಳೂರಿನಲ್ಲಿ ನನಗೆ ಅಲಭ್ಯವಾಗಿದ್ದು ಕೆಲವು ಸುಪ್ರಸಿದ್ಧ ಲೀಗಲ್ ಹಾಗೂ ಮೆಡಿಕಲ್ ತ್ರಿಲ್ಲರ್ ನಾವೆಲ್‌ಗಳನ್ನು ಓದಲು ಅನುಕೂಲವಾಯಿತು.

ಮನೆಯಲ್ಲಿ ಅನಾಜಿ ಅವರಿಗಾಗಿಯೇ ಮೀಸಲಾಗಿಟ್ಟ ಕೋಣೆಯಲ್ಲಿ ಅವರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿತ್ತು. ಈಗಲೂ ಇವರಿಗಾಗಿ ಮೀಸಲಿಟ್ಟ ಕೊಠಡಿಯಲ್ಲಿ ಅನಾಜಿ ಅವರು ಅರ್ಧಂಬರ್ಧ ಬರೆದಿರುವ ಬರವಣಿಗೆಗಳು, ಸ್ಟೇಷನರಿ ಸಾಮಗ್ರಿಗಳ ಜೆರಾಕ್ಸ್ ಪ್ರತಿಗಳು ಇವರ ದಾರಿಯನ್ನು ಕಾಯುತ್ತಿವೆ. ನಮ್ಮ ಮಗಳ ಸಂಸಾರದ ತಾಳ್ಮೆಗೆ ಸಾಕ್ಷಿಯಾಗಿವೆ.

ನಮ್ಮಲ್ಲಿ ಕೆಲವು ವಿಚಾರಗಳಲ್ಲಿ ಮತಭೇದವಿದ್ದರೂ, ಮತಿಭೇಧವಿಲ್ಲ, "Paralell Lines Never Meet" ಎಂಬ ಇಂಗ್ಲೀಷ್ ನಾಣ್ನುಡಿಯಂತೆ, ಕೆಲವು ವಿಷಯಗಳಲ್ಲಿ ಭಿನ್ನಭಿನ್ನ ದೃಷ್ಟಿಕೋನಗಳಿದ್ದರೂ "Let us agree to disagree" ಎಂಬ ಸೂತ್ರಕ್ಕೆ ಬದ್ಧರಾಗಿರುವ ನಮ್ಮಲ್ಲಿ ವೈಮನಸ್ಯವಿಲ್ಲ. ಒಂದು ನಿರ್ದಿಷ್ಟ ಗುರಿಯನ್ನು ತಲುಪಬೇಕಾದರೆ, ರೈಲು ವಿರುದ್ಧಗತಿಯಲ್ಲಿರುವ ಹಳಿಗಳ ಮೇಲೆ ಸಾಗಿದರೂ, ಅವೆರಡರ ಗುರಿ ಒಂದೆ. ಆ ಗುರಿ ಮುಟ್ಟಬೇಕಾದರೆ ವಿರುದ್ಧ ಗತಿಯ ಹಳಿಗಳ ಮೇಲೇ ಸಾಗಬೇಕು. ಒಬ್ಬರನ್ನು ಮೆಚ್ಚಿಸಬೇಕೆಂದು ಮತ್ತೊಬ್ಬರು ತಮ್ಮ ಭಾವನೆ-ಅಭಿಪ್ರಾಯಗಳನ್ನು ಮುಚ್ಚಿಡಬೇಕಾಗಿಲ್ಲ. ಮುಕ್ತವಾಗಿ ತೆರೆದಿಟ್ಟು, ಅದನ್ನು ಸ್ವೀಕರಿಸುವ ಔದಾರ್ಯ ವಿದ್ಯಾವಂತರಾದ ನಮ್ಮಲ್ಲಿರಬೇಕೆಂಬುದು ನಮ್ಮಿಬ್ಬರ ಅಭಿಪ್ರಾಯ. ಹಾಗಾಗಿ "ಸೌಟು ಪಾತ್ರೆ ಹಿಡಿಯದೊಂದಗ್ಗಳಿಕೆ" ಎಂಬ ಅವರ ವೀರ ಶಪಥವನ್ನು ನಾನು ಚ್ಯುತಿಗೊಳಿಸಲು ಹೋಗಿಲ್ಲ.

ಊಟ-ತಿಂಡಿ ನಿದ್ರೆ ನೀರಡಿಕೆ ಯಾವುದಕ್ಕೂ ಒಂದು ನಿಗದಿತ ಸಮಯವನ್ನು ಮೀಸಲಿಡದೆ, ರಾತ್ರಿ ಹನ್ನೆರಡು, ಒಂದು ಗಂಟೆಯಾದರೂ, ಏನನ್ನಾದರೂ ಓದುವಲ್ಲಿ ಇಲ್ಲವೇ ಬರೆಯುವಲ್ಲಿ ನಿರತರಾಗಿರುವ ಅವರು ಸಮಯದ ಕಾಲಾಳಲ್ಲ-ಸಮಯವೇ ಇವರ ಕಾಲಾಳು'.

ಬೆಂಗಳೂರಿನಲ್ಲಿ ನನಗಿಷ್ಟವಾದ ಯಾವುದೇ ರಾಜಕೀಯ ಮುತ್ಸದ್ಧಿಯ ಭಾಷಣಕ್ಕೆಂದು ನಾನು ಹೋಗಬಯಸಿದರೆ, ಸುರಿಯುತ್ತಿರುವ ಮಳೆಯಲ್ಲಿ ಭಾಷಣವನ್ನಾಲಿಸಲು ತೊಂದರೆಯಾಗದಂತೆ, ನನಗೆ ಕೊಡೆ ಹಿಡಿದು ನಿಲ್ಲುತ್ತಾರೆ. ಆ ಭಾಷಣ ಕಾರ್ಯಕ್ರಮ ನಮ್ಮ ಮನೆಯಿಂದ ದೂರವಿದ್ದಲ್ಲಿ, ಒಂದಕ್ಕೆ ಮೂರುಪಟ್ಟು ಬಾಡಿಗೆ ತೆತ್ತು ರಿಕ್ಷಾದಲ್ಲಿ ನನ್ನನ್ನು ಕರೆದೊಯ್ಯುತ್ತಾರೆ. ಆದರೆ, ಭಾಷಣದ ಉದ್ದಕ್ಕೂ ಸಭಿಕರ ಸಂಭ್ರಮ, ಉತ್ಸಾಹ, ಕರತಾಡನ, ಕೇಕೆಗಳಿಗೆ ಜಗ್ಗದೆ ತಾವು ಪುಸ್ತಕವನ್ನೋದುವುದರಲ್ಲಿ ಮಗ್ನರಾಗುವ 'ಅನಾಜಿ' ಅವರ ಸಹೃದಯತೆಗೆ ಕೃತಜ್ಞತೆಯಿಂದ ನನ್ನ ಮನ ಮಿಡಿಯುತ್ತದೆ.

ಭಗವಂತ ಸರ್ವಾಂತರ್ಯಾಮಿಯಾಗಿ ನಮ್ಮ ಮನೆಯಲ್ಲಿ ಸರಸ್ವತಿ ರೂಪದಲ್ಲಿದ್ದಾನೆ. ಅಡುಗೆ ಮನೆ ಸ್ನಾನದ ಮನೆಯೊಂದನ್ನುಳಿದು ಎಲ್ಲ ಕಡೆ ವ್ಯಾಪಿಸಿದ್ದಾನೆ ಅರ್ಥಾತ್ ಮನೆ ತುಂಬ ಪುಸ್ತಕಗಳಿವೆ.

ಲೇಖಕನಿಗೆ ಸಲ್ಲಿಸುವ ಗೌರವವೆಂದರೆ ಅವನು ಬರೆದ ಪುಸ್ತಕವನ್ನು ಓದಿ ಮೆಚ್ಚಿಕೊಳ್ಳುವುದಷ್ಟೇ ಅಲ್ಲ, ಅವನು ಬರೆದ ಪುಸ್ತಕವನ್ನು "ಕೊಂಡು" ಅನಂತರ ಕೊಂಡಾಡುವುದು ಎಂಬ ಅವರ ದೃಢನಿಶ್ಚಯದಿಂದಾಗಿ, ನಮ್ಮ ಮನೆಯಲ್ಲಿ ಪುಸ್ತಕದ ಸಾಮ್ರಾಜ್ಯವೇ ನಿರ್ಮಾಣವಾಗಿದೆ. ಮಾರ್ಗದರ್ಶನಕ್ಕಾಗಿ ಬರುವ ಹಲವಾರು ಅಭ್ಯರ್ಥಿಗಳ ವಿಷಯಕ್ಕೆ ಸಂಬಂಧಿಸಿದಂತೆ ಆಧಾರ ಗ್ರಂಥಗಳ ಸಂಗ್ರಹವೇ ನಮ್ಮಲ್ಲಿದೆ. ಬೆಳಿಗ್ಗೆ ಎದ್ದ ಕೂಡಲೇ ಅವರು ಕನ್ನಡ ದಿನಪತ್ರಿಕೆಗಳನ್ನೂ ಓದುವಾಗ, ಪತ್ರಿಕೆಯ ಮೊದಲ ಪುಟದಲ್ಲಿ ಬಂದಿರುವ ಬಿಸಿಬಿಸಿ ರಾಜಕೀಯ ವಿಷಯಗಳು ಅವರ ಕಣ್ಣಿಗೆ ಬೀಳುವುದೇ ಇಲ್ಲ. ಕನ್ನಡಕ್ಕೆ ಸಂಬಂಧಿಸಿದ ಸಭೆ-ಸಮಾರಂಭಗಳು, ಸಾದರ ಸ್ವೀಕಾರ, ಪುಸ್ತಕಲೋಕ ಇತ್ಯಾದಿಗಳ ಅವಲೋಕನದ ನಂತರ ನನ್ನ ಸಮಾಧಾನಕ್ಕಾಗಿ ರಾಜಕೀಯ ವಿಷಯಗಳ ಬಗ್ಗೆ ಒಂದೆರಡು ಮಾತನ್ನಾಡುತ್ತಾರೆ.

ಇವರು ಹೋಗುವ ಯಾವುದೇ ಸಭೆ-ಸಮಾರಂಭಗಳಲ್ಲಿ ನೀಡುವ ವಾಹನ ವೆಚ್ಚವಾಗಲಿ-ಇಲ್ಲವೇ ಸಂಭಾವನೆಯಾಗಲಿ ಅವು ಪುಸ್ತಕರೂಪದಲ್ಲಿ ನಮ್ಮ ಮನೆಯಲ್ಲಿ ಪ್ರತ್ಯಕ್ಷವಾಗುತ್ತದೆ. ಒಮ್ಮೊಮ್ಮೆ ತಾವು ಬಯಸಿದ ಪುಸ್ತಕ ಕೊಳ್ಳಲು ಆ ಹಣ ಸಾಲದಾದಾಗ ಅವರ ಗಳಿಕೆಯ ಹಣ ಮೀಸಲಾಗಿರುತ್ತದೆ. ಯಾವುದೇ ಸಂಸ್ಥೆಗೆ ಉಪನ್ಯಾಸ ನೀಡಲು ಹೋದರೂ, ಆ ಸಂಸ್ಥೆಯ ಸದಸ್ಯತ್ವ ಅಂತೆಯೇ ಆ ಸಂಸ್ಥೆಯ ವಾರ/ದಿನ/ಇಲ್ಲವೇ ಮಾಸ ಪತ್ರಿಕೆಗಳ ಸುರಿಮಳೆಯೇ ನಮ್ಮಲ್ಲಿರುತ್ತದೆ. ಈ ಸಂದರ್ಭದಲ್ಲಿ ನನಗೆ ಕುವೆಂಪು ಅವರ 'ರಾಮಾಯಣ ದರ್ಶನಂ'ನ ಒಂದು ಮಾತು ನೆನಪಿಗೆ ಬರುತ್ತದೆ. "ಆವುದಾಗಲಿ ನೆಪಂ ಫಲದಾಯಕಂ ತಪಂ"- ಈ ಮಾತು ಅನಾಜಿ ಅವರಿಗೆ "ಆವುದಾಗಲಿ ನೆಪಂ ಫಲದಾಯಿಕಂ ಪುಸ್ತಕಂ" ಎಂಬುದಾಗಿ ಸ್ವತಂತ್ರ ಗ್ರಂಥಗಳಿಗಿಂತ ಸಂಪಾದಿತ ಗ್ರಂಥಗಳೇ ಇವರ ಬರಹಗಳಲ್ಲಿ ಎದ್ದು ಕಾಣುತ್ತದೆ, ಕಾರಣ ನಮ್ಮ ಸಂಸ್ಕೃತಿ-ಅಸ್ಮಿತೆಗಳ ಪ್ರತಿರೂಪವಾಗಿರುವ ನಮ್ಮ ಹಳೆಗನ್ನಡ ಕೃತಿಗಳನ್ನು ಕಾಪಿಟ್ಟುಕೊಳ್ಳುವುದು. ಅಂತೆಯೇ ಮುಂದಿನ ಪೀಳಿಗೆಗೂ ಅದರ ರಸದೌತಣವನ್ನು ನೀಡುವುದು.

ಅವರಿಗಿರುವ ಪುಸ್ತಕದ ಗೀಳು ಅವರ ಜೀವನದ ಉಸಿರು, ಉತ್ಸಾಹ, ಚೈತನ್ಯ, ನಿದ್ರೆ-ನೀರಡಿಕೆ, ಉಡುಪು-ತೊಡಪು ಹೀಗೆ ಅವೇ ಅವರ ಸಮಸ್ತ ಆಸ್ತಿ. ನಮ್ಮ ಹಳೆಯ ಕತೆಗಳಲ್ಲಿ ಬರುವ ರಾಜಕುಮಾರನ ಜೀವ ಎಲ್ಲಿದೆ ಎಂದರೆ "ಏಳು ಸುತ್ತಿನ ಕೋಟೆ ಅಲ್ಲೊಂದು ಸರೋವರ, ಅದರ ಬಳಿ ಒಂದು ಉದ್ಯಾನವನ, ಅಲ್ಲೊಂದು ಮರ, ಅಲ್ಲೊಂದು ಪಂಜರ. . ." ಹೀಗೆ ಸಾಗುವ ಕತೆಯಂತೆ,

ಅನಾಜಿ ಅವರ ಉಸಿರು ಎಲ್ಲಿದೆ ಎಂದರೆ ಅವರು ಸಂಗ್ರಹಿಸಿರುವ ಒಂದೊಂದು ಪುಸ್ತಕದಲ್ಲಿಯೂ ಇದೆ. ಇವರ ಪುಸ್ತಕ (ಹೊಟ್ಟೆ) ಬಾಕತನಕದ ಎದುರು ಸೋತು ಹಿಮ್ಮೆಟ್ಟಿದ್ದೇನೆ. ನನಗೂ ಸಾಹಿತ್ಯದ ಹಸಿವಿದ್ದರೂ, ಈ ಪ್ರಮಾಣದ್ದಲ್ಲ! ಅವರ ಸಾಹಿತ್ಯಾಕಾಂಕ್ಷೆಯನ್ನು ಬೆಂಬಲಿಸಿ, ಒಂದು ಒರೆಯಲ್ಲಿ ಎರಡು ಕತ್ತಿಗಳಿರಬಾರದೆಂದು ನಿರ್ಧರಿಸಿ, ಅವರ ಮಹತ್ವಾಕಾಂಕ್ಷೆಗೆ ಪೂರಕವಾಗಿರಬೇಕೇ ಮಾರಕವಾಗಿರಬಾರದೆಂದು ನಿರ್ಧರಿಸಿ ಅವರ ಬರವಣಿಗೆಗೆ ಪೂರಕವಾಗಿ ನಿಂತೆ.

ನಮ್ಮ ಮನೆಯ ಪುಸ್ತಕಗಳಿಗೆ ಕಾಲಿದೆ. ಅದು ನಮ್ಮ ಮನೆಯ ೧೦*೨೦ ವಿಸ್ತೀರ್ಣದ ಗರಾಜನ್ನು ಎಷ್ಟರಮಟ್ಟಿಗೆ ಆವರಿಸಿದೆ ಎಂದರೆ ಮೇಲ್ಛಾವಣಿಯ ಎತ್ತರಕ್ಕೂ ಮೀರಿ, ಅಷ್ಟು ವಿಸ್ತೀರ್ಣಕ್ಕೂ ಹರಡಿ, ಓಡಾಡುವ ಜಾಗವನ್ನು ಕಿರಿದಾಗಿಸಿದೆ. ಪುಸ್ತಕಗಳನ್ನು ವಿಭಾಗಿಸಿ, ಜೋಡಿಸಿರುವ ಆ ಶೇಖರಣೆಯಲ್ಲಿ ಸಾಮಾನ್ಯರಿಗೆ ಪುಸ್ತಕವನ್ನು ಪತ್ತೆ ಹಚ್ಚುವುದೇ ಸಾಹಸದ. ಯಾವುದಾದರೂ ಪುಸ್ತಕಬೇಕೆಂದರೆ, ಆ ಪುಸ್ತಕ ವಿಭಾಗಕ್ಕೆ ತೆರಳಿ, ತಟ್ ಎಂದು ಆ ಪುಸ್ತಕವನ್ನು ತೆಗೆದಿಡುವ ಅವರ ನೆನಪಿನ ಶಕ್ತಿ ಅಸಾಧಾರಣವಾದುದು.

ನಮ್ಮ ಮನೆಯ ಗರಾಜಿನ ದಿಡ್ಡಿ ಬಾಗಿಲಿನಿಂದ ಪ್ರವೇಶಿಸುವ ಪುಸ್ತಕಗಳಿಗೆ ಕೈಕಾಲುಗಳಿವೆ ಅವಕ್ಕೆ ಯಾರ ಭಯವೂ ಇಲ್ಲ. ಮಹಡಿಯ ಮೆಟ್ಟಿಲನ್ನು ಬಿಡದೆ ಆವರಿಸಿ, ಮೇಲೆ ಬಂದು ಹೊರಗಿನ ಕೋಣೆಯನ್ನು ಸಂಪೂರ್ಣವಾಗಿ ಆಕ್ರಮಿಸಿ, ಕೊನೆಗೆ ಹಾಲನ್ನು, ಮಲಗುವ ಕೋಣೆಗಳಲ್ಲೂ ತನ್ನ ಸಾಮ್ರಾಜ್ಯ ಸ್ಥಾಪಿಸಿ, ಇದ್ದ ಬದ್ದ ಮೇಜು, ಕುರ್ಚಿಗಳನ್ನು ತುಂಬಿಕೊಂಡು, ನಿಲ್ಲಲು ಕೂರಲು ಸ್ಥಳವಿಲ್ಲದೇ, ಕೊನೆಗೆ ನಾವು ಊಟ-ಮಾಡುವ ಮೇಜನ್ನು ಆವರಿಸಿದೆ. ದೇವರ ಮನೆಯಲ್ಲೂ ತನ್ನ ಆಧಿಪತ್ಯವನ್ನು ಸ್ಥಾಪಿಸಿರುವ ಪುಸ್ತಕ ಸಾಮ್ರಾಜ್ಯ ಅಡುಗೆ ಮನೆ-ಸ್ನಾನಗೃಹವನ್ನು ಆಕ್ರಮಿಸಲು ಸಾಧ್ಯವಿಲ್ಲದೇ ದುಗುಡದಲ್ಲಿವೆ. ಅವರು ಸರ್ವಿಸ್ಸಿಗೆ ಸೇರಿದಾಗಿನಿಂದಲೂ ಬರೆದಿರುವ ಡೈರಿಗಳು, ಕಾಗದ ಪತ್ರಗಳು, ಮ್ಯಾಗಜಿನ್‌ಗಳು, ಆಹ್ವಾನಪತ್ರಿಕೆಗಳು ಸಮ್ರಾಟನ ಆಡಳಿತದಲ್ಲಿ ಸುರಕ್ಷಿತವಾಗಿವೆ. ಅವುಗಳಿಗೆ ಸಾಮ್ರಾಜ್ಞಿಯ ಭಯ ಲವಲೇಶವೂ ಇಲ್ಲ.

ನಾವು ಎನ್.ಆರ್. ಕಾಲೋನಿಯ ಮನೆಯಲ್ಲಿದ್ದಾಗ ಇವರನ್ನು ಜನ ಗುರುತಿಸುತ್ತಿದ್ದ ರೀತಿ ಎಂದರೆ "ಬಸ್ಸಿಗೆ ಕಾಯುವಾಗಲೂ, ಬಸ್ಸಿನಲ್ಲಿಯೂ ಪುಸ್ತಕ ಓದುತ್ತಿರುವ ವ್ಯಕ್ತಿ" ಎಂದು. ನನ್ನ ಇದುವರೆಗಿನ ಬದುಕಿನಲ್ಲಿ ಅನಾಜಿ ಅವರು ಬಸ್ಸಿನಲ್ಲಾಗಲಿ, ವಿಮಾನ-ವಿಮಾನ ನಿಲ್ದಾಣದಲ್ಲಾಗಲಿ, ಕೊನೆಗೆ ಆರೋಗ್ಯ ತಪಾಸಣೆಗಾಗಿ ವೈದ್ಯರಿಗಾಗಿ ಕಾಯುವ ಸಂದರ್ಭದಲ್ಲಾಗಲ್ಲೀ ಯಾವುದಾದರೊಂದು ಪುಸ್ತಕವನ್ನು ಓದದಿರುವ ಏಕೈಕ ಸನ್ನಿವೇಶವೇ ನನ್ನ ಇಷ್ಟು ದಿನಗಳ ಬದುಕಿನಲ್ಲಿ ಕಂಡಿದ್ದೇ ಇಲ್ಲ. ಒಂದು ವೇಳೆ ನನ್ನ ದುಗುಡವನ್ನಾಲಿಸಿದ ಭಗವಂತನು ನನಗೆ ಸಾಕ್ಷಾತ್ಕಾರವಾಗಿ "ಭಕ್ತಳೇ, ನಿನಗೆ ಏನು ವರ ಬೇಕು?" ಎಂದು ಕೇಳಿದರೆ, "ಪುಸ್ತಕದ ಮಂಪರಿನಿಂದ ಇವರನ್ನು ಕಾಪಾಡು" ಎಂದು ಬೇಡಿದರೆ, ಅದಕ್ಕೆ ಅವನು ಕೊಡುವ ಉತ್ತರ "ನನ್ನ ಸೃಷ್ಟಿಯಲ್ಲಿ ಅಸಾಧ್ಯವಾದುದನ್ನು ನೀನು ಕೇಳುತ್ತಿರುವೆ. ಸೃಷ್ಟಿಸುವುದಷ್ಟೇ ನನ್ನ ಕೆಲಸ, ಉಳಿದುದು ನಿಮ್ಮ ಕರ್ಮಕ್ಕೆ ಬಿಟ್ಟಿದ್ದು. ಈ ವಿಷಯದಲ್ಲಿ ನಾನು ಅಸಹಾಯಕ" ಎಂದು ನುಣುಚಿಕೊಳ್ಳುತ್ತಾನೆ. "Nero was fiddling when Rome was burning (ಸಾಮ್ರಾಜ್ಯ ಹೊತ್ತಿ ಉರಿಯುತ್ತಿದ್ದರೆ ನೀರೋ ಚಕ್ರವರ್ತಿ ಪಿಟೀಲು ಬಾರಿಸುತ್ತಿದ್ದ) ಎಂಬ ಗಾದೆ ಮಾತು ಇವರಿಗೆ ಅನ್ವಯವಾಗುತ್ತದೆ.

ಒಂದು ಹೊಸಪುಸ್ತಕ ನಮ್ಮ ಮನೆಗೆ ಬಂತೆಂದರೆ ಅದನ್ನು ಸ್ವಾಗತಿಸುವ ರೀತಿಯೇ ವಿಶಿಷ್ಟತೆರನಾದದ್ದು. ಅದಕ್ಕೆ ಹೊಸ ಬಟ್ಟೆ ಉಡಿಸಿ (ರಟ್ಟು ಹಾಕಿ), ಶೃಂಗರಿಸಿ, ಅದಕ್ಕೊಂದು ನಾಮಕರಣ ಮಾಡಿ(ಅದಕ್ಕೆ ಒಂದು ನಂಬರ್ ಕೊಟ್ಟು), ಅದರ ಕುಲಗೋತ್ರಗಳನ್ನು ಸಂಕ್ಷೇಪವಾಗಿ ರಿಜಿಸ್ಟರ್‌ನಲ್ಲಿ ನಮೂದಿಸಿ ಅದನ್ನು ಕೊಂಡದ್ದೇ? ಕೊಡುಗೆಯೇ? ಎಂದು ನಮೂದಿಸಿ, ಅನಂತರ ಅದನ್ನು ಆಸೀನಗೊಳಿಸುವುದು ಅವರ ಪ್ರಿಯವಾದ ಕೆಲಸ. ಸೃಷ್ಟಿಕರ್ತ ಬ್ರಹ್ಮನೇ ಒಂದು ವೇಳೆ ಅಡ್ಡಿಪಡಿಸಿದರೂ ತಡೆಯಲು ಸಾಧ್ಯವಿಲ್ಲ. "ನನಗಾಗಿ ನಾನು ಕೊಂಡ ಪುಸ್ತಕ, ಬೇರೊಬ್ಬರಿಗಾಗಿ ಅಲ್ಲ. ಅದಕ್ಕೆ ರಟ್ಟು ಹಾಕದೇ ಮಾಸಲು ಬಿಡಲು ನನಗೆ ಮನಸ್ಸಿನಲ್ಲಿ, ಅವು ನನ್ನ ಮಕ್ಕಳಿದ್ದಂತೆ" ಎಂದು ಅಭಿಮಾನದಿಂದ ಅವರು ಉತ್ತರಿಸುವಾಗ ನಾನು ಅವರ ಪುಸ್ತಕ ಪ್ರೇಮಕ್ಕೆ ಮಾತು ಸೋತು ಮೂಕಳಾಗುತ್ತೇನೆ. ಆದರೂ ನನ್ನನ್ನು ಸದಾ ಕಾಡುತ್ತಿರುವ ಸಮಸ್ಯೆ ಎಂದರೆ "ನಮ್ಮ ನಂತರ ಈ ಪುಸ್ತಕದ ಗತಿ ಏನು? ಮಕ್ಕಳಿಗಿಂತಲೂ ಪ್ರೀತಿಯಿಂದ ಪೋಷಿಸಿಕೊಂಡು ಬಂದಿರುವ ಈ ಪುಸ್ತಕ ಸಂತಾನದ ಭವಿಷ್ಯವೇನು?'' ಎಂಬ ವಿಚಾರ.

ಯಾವ ಬರವಣಿಗೆಯನ್ನಾಗಲಿ (ಜೆರಾಕ್ಸ್) ಮಾಡಿಸದೆ ಇರುವುದಿಲ್ಲ. ನಮ್ಮ ಮನೆಯ ಬಳಿ ಇರುವ ಜೆರಾಕ್ಸ್ ಅಂಗಡಿ ಹಾಗೂ ನಾಲ್ಕನೇ ಬ್ಲಾಕಿನಲ್ಲಿರುವ ಸ್ಟೇಷನರಿ ಅಂಗಡಿಯವರಿಗೆ ಇವರ ಪೆನ್ಷನ್ನಿನ ಸಿಂಹಪಾಲು ಮೀಸಲು– ಮಗಳು ಕಳುಹಿಸುವ ಸ್ಟೇಷನರಿ ಸಾಮಾನುಗಳನ್ನು ಬಳಸುವುದರ ಜತೆಗೆ,

ಗ್ರಂಥ ಸಂಪಾದನಾ ಕಾರ್ಯ ಇವರಿಗೆ ಇಷ್ಟವಾದ ಕೆಲಸ. ಹಳೆಗನ್ನಡ ಸಂಪಾದನಾ ಕಾರ್ಯ ಕೈಗೊಂಡರೆ, 'ಪಾತಾಳಗರಡಿ'ಯಂತೆ ಶೋಧನಾ ಕಾರ್ಯ ನಡೆಸುತ್ತಾರೆ. ಹಿರಿಯರು–ಕಿರಿಯರು, ಸಹೋದ್ಯೋಗಿಗಳು, ಸಹಚರರು–ಯಾರನ್ನಾಗಲಿ ಅವರನನು ಕಂಡು, ಅವರಿಂದ ಸಿಗಬಹುದಾದ ಮಾಹಿತಿ ಸಂಗ್ರಹಿಸಿ, ನಂತರ ಅವನ್ನು ತಮ್ಮ ವಿಚಾರದ ತಕ್ಕಡಿಯಲ್ಲಿ ತೂಗಿ ನೋಡಿದ ಅನಂತರ ಬರವಣಿಗೆಗೆ ಇಳಿಯುತ್ತಾರೆ. ಹಾಗಾಗಿ, ಇವರು ಕೈಗೊಂಡಿರುವ ಹಲವಾರು ಪುಸ್ತಕಗಳು ಪೂರ್ಣಗೊಳ್ಳದೇ, ಇವರ ದಾರಿಯನು ಕಾಯುತ್ತಾ ರಾಶಿರಾಶಿಯಾಗಿ ಕುಳಿತಿವೆ. ನಾನು ಒಂದನ್ನು ಮುಗಿಸಿ ಮತ್ತೊಂದನ್ನು ಪ್ರಾರಂಭಿಸಿ ಎಂದರೆ ಅದು ಸಾಧ್ಯವಿಲ್ಲ. ಒಂದ ಶೋಧ ಕಾರ್ಯ ಮಾಡುವಾಗ ಮತ್ತೊಂದ ಮೂಲ ಸಿಗುತ್ತದೆ. ಆಗ ಅದನ್ನು ನೋಡಲೇ ಬೇಕಾಗುತ್ತದೆ. ಹಾಗೆ ನೋಡದೆ ಹೋದರೆ, ಸುಮ್ಮನೆ ಹತ್ತಾರು ಪುಸ್ತಕಗಳು ಏರುವುದೇ ಹೊರತು ಮೂಲ ಉದ್ಧೇಶ ನೆರವೇರುವುದಿಲ್ಲ" ಎಂಬ ಮಾತು ನಿಜವಾದರೂ ಅದು "ಕ್ಲಿಷ್ಟವಾದ ಕೆಲಸ, ಸಮಯ ನುಂಗುವ ರಾಕ್ಷಸ ಕೆಲಸ ಹರ್ಕುಲಸ್ ಟಾಸ್ಕ್'' ಎನ್ನುವುದು ನನ್ನ ಅಭಿಪ್ರಾಯ.

ಅನಾಜಿ ಅವರು ಸರ್ಕಾರದ ಕೆಲಸದಿಂದ ನಿವೃತ್ತರಾದರೂ. ತಮ್ಮ ದೈನಂದಿನ ಸಾಹಿತ್ಯಾಭಿಮಾನ ಮತ್ತು ಕಾರ್ಯ ಚಟುವಟಿಕೆಗಳಿಂದ ನಿವೃತ್ತರಾಗಲಿಲ್ಲ. ಮೊದಲಾದರೂ ಒಂದು ಗೊತ್ತು ಪಡಿಸಿದ ಸಮಯದ ಮಿತಿ ಇತ್ತು. ಈಗ ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲೂ ಬಿಡುವಿಲ್ಲದ ಕಾರ್ಯಕ್ರಮಗಳು ಈ ದಿನಗಳಲ್ಲಿ ಸರ್ಕಾರದ ಅಧಿಕಾರಿ–ಸಿಬ್ಬಂದಿ ವರ್ಗದವರಿಗೆ ಕನ್ನಡ ಸಂಸ್ಕೃತಿ ಇಲಾಖೆಯವರು ಏರ್ಪಡಿಸಿದ್ದ ಆಡಳಿತ ಕನ್ನಡ ಶಿಬಿರದ ಕಾರ್ಯಕ್ರಮ, ನಮ್ಮ ಮನೆಗೆ ಸಮೀಪವಿರುವ ಬಿ.ಇ.ಎಸ್. ಕಾಲೇಜಿನವರು ಐ.ಎ.ಎಸ್., ಐ.ಪಿ.ಎಸ್. ವಿದ್ಯಾರ್ಥಿಗಳಿಗಾಗಿ ನಡೆಸುತ್ತಿದ್ದ ತರಗತಿಗಳಿಗೆ ಕನ್ನಡವನ್ನು

ಬೋಧಿಸುವ ಕೆಲಸ ಇವರಿಗೆ ಸಂತಸ ತಂದಿತ್ತು. ಕಾಲೇಜು ನಿಗದಿಪಡಿಸದ ಅವಧಿಯಲ್ಲಿ ಪಠ್ಯಕ್ರಮವು ಮುಗಿಯದಿದ್ದರೆ, ನಮ್ಮ ಮನೆಯಲ್ಲೇ ತರಗತಿಗಳನ್ನು ಮುಂದುವರಿಸಿದ್ದೂ ಇದೆ. ಅಂತಹ ಒಂದು ಬ್ಯಾಚ್‌ನಲ್ಲಿ ಇಂದಿನ ಸುಪ್ರಸಿದ್ಧ, ನಿಷ್ಠಾವಂತ ಐ.ಪಿ.ಎಸ್ ಅಧಿಕಾರಿ ಎನಿಸಿದ ಶ್ರೀ ರವಿಕಾಂತೇ ಗೌಡರು ಮತ್ತು ಅವರ ಮಿತ್ರರು ಒಂದು ನಿದರ್ಶನವಾಗಿದ್ದಾರೆ.

ಇದಲ್ಲದೆ ಇವರ ಸ್ನೇಹಿತರಾಗಿದ್ದ ಪ್ರಸಿದ್ಧ ಆಡಿಟರ್ ಸಾಹಿತ್ಯಾರಾಧಕರೂ ಆಗಿದ್ದು ದಿ॥ ಕೇಶವಮೂರ್ತಿ ಅವರ ಮನೆಯಲ್ಲಿ ಪ್ರತಿವಾರವೂ ತಪ್ಪದೇ ನಡೆಸುತ್ತಿದ್ದ ಹಳೆಗನ್ನಡ, ಕಾವ್ಯ ಕೃತಿಗಳ ಪೂರ್ಣ ಪರಿಚಯ ಕಾರ್ಯಕ್ರಮಗಳಲ್ಲದೇ ಬಿ.ಎಂ.ಶ್ರೀ.ಯವರು ನಡೆಸುತ್ತಿದ್ದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಅನಧಿಕೃತವಾಗಿ ಬರುತ್ತಿದ್ದ ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡುತ್ತಿದ್ದು ಸಲಹೆ-ಸೂಚನೆ, ತಿದ್ದುಪಡಿಗಳು, ವೇಳೆಯ ಪರಿವೇ ಇಲ್ಲದೇ ನಿರಂತರವಾಗಿ ನಡೆಸುತ್ತಿದ್ದ ಸಾಹಿತ್ಯಕೃತಿಗಳ ಅಭ್ಯಾಸ ಈ ಗಡಿಬಿಡಿಯ ಮಧ್ಯೆ ಸಾಗುತ್ತಿದ್ದ ಅವರ ಬರವಣಿಗೆ ಉಸಿರುಗಟ್ಟಿಸುತ್ತದೆ. ಈ ಸೇವಾಕಾಯಕ ಈಗಲೂ ನಿಂತಿಲ್ಲ.

ಯಾರೇ ಆಗಲಿ ತಾವು ಬರೆದ ಪುಸ್ತಕವನ್ನಾಗಲೀ, ಪ್ರಬಂಧವನ್ನಾಗಲೀ, 'ಒಮ್ಮೆ ಪರಿಶೀಲಿಸಿ ಇಲ್ಲವೇ' ಒಂದು ಮುನ್ನುಡಿ ಬರೆದು ಕೊಡಿ ಎಂದು ತಮ್ಮ ಬರಹದ ಪ್ರತಿಯನ್ನು ನೀಡಿದರೆ, ಅದರ ಬಗ್ಗೆ ಅವರು ಬರೀ ಕಣ್ಣಾಡಿಸುತ್ತಿರಲಿಲ್ಲ-ಅದರ ಕರುಳನ್ನಾಡಿಸುತ್ತಾರೆ. ಆ ಬರವಣಿಗೆಯಲ್ಲಿ ಯಾವುದಾದರೂ ವಿಷಯ ತಪ್ಪಾಗಿಯೋ ಇಲ್ಲವೇ ನಿರ್ದಿಷ್ಟವಾಗಿಲ್ಲದೇ, ಬರೀ ಹೇಳಿಕೆಯಾಗಿದ್ದರೆ, ಅದಕ್ಕೆ ಸಂಬಂಧಿಸಿದ ಗ್ರಂಥಗಳನ್ನು ತಡಕಾಡಿ, ಶ್ರಮಪಟ್ಟು ಅದರ ಮೂಲರೂಪವನ್ನು ಕಂಡುಹಿಡಿಯುವವರೆಗೂ ಅದರ ತಡಕಾಟ ನಿಲ್ಲುವದಿಲ್ಲ. ನಾನೇನಾದರೂ "ಯಾಕಿಷ್ಟು ತಲೆ ಕೆಡಿಸಿಕೊಳ್ಳುತ್ತೀರಿ? ಅದನ್ನು ಬರೆದವರಿಗೇ ಅದರ ಮೂಲವನ್ನು ಸರಿಯಾಗಿ ಶೋಧಿಸುವಂತೆ ಹೇಳಿ" ಎಂದರೆ ಅಷ್ಟಕ್ಕೇ ಸುಮ್ಮನಾಗುವ ಜೀವವೇ ಅಲ್ಲ. "ನನ್ನ ಬಳಿ ಅವರು ನಂಬಿಕೆಯಿಟ್ಟು ಬಂದಿದ್ದಾರೆ. ನಾನು ಅವರಿಗೆ ಹಾಗೆ ಮಾಡಬಾರದು" ಎಂದು ನನ್ನ ಮಾತನ್ನು ತಳ್ಳಿಹಾಕುತ್ತಾರೆ.

ಅನಾಜಿ ಅವರ ಕನ್ನಡ ಪ್ರೇಮ, ಇವರ ಭಾಷಣ, ಬರವಣಿಗೆ, ನಿರೂಪಣೆಗಳು, ಕೇವಲ ವಿದ್ಯಾವಂತರಿಗಷ್ಟೇ ಮೀಸಲಾಗಿಲ್ಲ. ಓದು ಬರಹ ಬಾರದ ನಮ್ಮ ಮನೆಗೆಲಸದವರಿಗೆ ಕ್ನನಡ ಕಲಿಸುವುದರಲ್ಲಿಯೂ, ತೊಡಗಿಕೊಂಡಿದೆ. ನಮ್ಮ ಮನೆಗೆಲಸ ಮಾಡುತ್ತಿದ್ದ ಹುಡುಗಿ "ರೂಪಿಣಿ" ಅವಳಿಗೆ ತಮಿಳನ್ನು ಬಿಟ್ಟು ಓದಲು-ಬರೆಯಲು ಬರುತ್ತಿರಲಿಲ್ಲ. ನಮ್ಮ ಮನೆಯ ಕೆಲಸದ ಅವಧಿ ಕಡಿತಗೊಳಿಸಿ, ಹಠತೊಟ್ಟು ಆ ಹುಡುಗಿಗೆ ಓದಲು ಬರೆಯಲು ಕಲಿಸಿದರು. ಇದರ ಪರಿಣಾಮ ಆ ಹುಡುಗಿಗೆ ಒಂದು ಕಾರ್ಖಾನೆಯಲ್ಲಿ ಕೆಲಸ ಸಿಕ್ಕಿತು. ಅವಳ ನಂತರ ಬಂದು 'ಸರಸ್ವತಿ'ಗೆ ಕನ್ನಡದ ಜೊತೆಗೆ ಲೆಕ್ಕವನ್ನು ಕಲಿಸಿದರು. ಈಗ ಕೆಲಸ ಮಾಡುತ್ತಿರುವವಳು ವಯಸ್ಸಿನಲ್ಲಿ ಹಿರಿಯಳಾಗಿ, ಮನೆಯ ಜವಾಬ್ದಾರಿ ಇರುವ ಕಾರಣ, ಅವಳಿಗೆ ಸಾಮಾನ್ಯ ಲೆಕ್ಕವನ್ನು ಮಾತ್ರ ಕಲಿಸಿದರು. ಇದಲ್ಲದೇ ನಮ್ಮ ಮನೆಯ ಎದುರಿಗಿರುವ ಫ್ಲಾಟ್‌ನ ವಾಚ್‌ಮನ್‌ಗೆ (ಕಾವಲುಗಾರ), ಕೆಲಸವಿಲ್ಲದೇ ಸುಮ್ಮನೆ ಕುಳಿತಿರುವ ವೇಳೆ, ಸಮಯ ವ್ಯರ್ಥಮಾಡದೆ ಅಕ್ಷರ ಕಲಿಯಬೇಕೆಂದು ತಿಳಿ ಹೇಳಿ, ಅವನಿಗೆ ಕನ್ನಡ ಓದಿ ಬರೆಯಲು ಕಲಿಸಿದರು. ಅವನು ಬೇರೊಂದು ಒಳ್ಳೆಯ ಕೆಲಸ ಹಿಡಿದು, ಇಲ್ಲಿನ ಕೆಲಸ ಬಿಟ್ಟ, "ಹೀಗೆ ಪರೋಪಕಾರಿ ಪಾಪಣ್ಣ"ನ ಕಾರ್ಯ ಮುಂದುವರಿಯುತ್ತಲೇ ಇದೆ. "ಹೀಗೆ ಬಂದವರಿಗೆಲ್ಲಾ

ಪಾಠ ಕಲಿಸುತ್ತಿದ್ದರೆ, ನಮ್ಮ ಮನೆಯ ಕೆಲಸದ ಗತಿ ಏನು?'' ಎಂದು ಪ್ರಶ್ನಿಸಿದರು. ಉತ್ತರಿಸಿದೆ ರೂಮಿನ ಕಡೆ ಹೆಜ್ಜೆ ಹಾಕುತ್ತಾರೆ.

ನನ್ನನ್ನು 'ನೀವು ಏಕೆ ಬರವಣಿಗೆ ನಿಲ್ಲಿಸಿದ್ದೀರಿ'ಎಂದು ಪ್ರಶ್ನಿಸಿದವರಿಗೆ ನನ್ನ ಉತ್ತರ ''ಊರಿಗೆ ಊರೇ ಹಸೆಯಲಿ ನಿಂತರೆ, ಆರತಿ ಬೆಳಗಲು ಜನವೆಲ್ಲಿ? ಎಲ್ಲಾ ಹಾಡುವ ಬಾಯೇ ಆದರೆ ಚಪ್ಪಾಳೆಗೆ ಜನವೆಲ್ಲಿ?'' (ಕೆ.ಎಸ್.ನ)

ಒಮ್ಮೊಮ್ಮೆ ಅನಾಜಿ ಅವರ ಮಿತಿಮೀರಿದ ಸಾಮಾಜಿಕ-ಸಾಹಿತ್ಯಿಕ ಕಳಕಳಿ, ಹಳೆಗನ್ನಡ ಗ್ರಂಥಗಳ ಪುನುರುತ್ಥಾನ, ಅಪೂರ್ವ ಗ್ರಂಥಗಳ ಸಂಗ್ರಹಣೆ, ತನ್ನತನವನ್ನೇ ಲೆಕ್ಕಿಸದೆ ಸಾಹಿತ್ಯಾಸಕ್ತರಿಗೆ ನೆರವಾಗುವ ತವಕ, ಸುಳಿವು ಸೂಕ್ಷ್ಮತೆಗಳ ಬಗ್ಗೆ ತಲೆ ಕೆಡಿಸಿಕೊಳ್ಳದ ಜಡ ಸ್ವಭಾವ, ತನ್ನತನವನ್ನೇ ಲೆಕ್ಕಿಸದೆ ನೆರವು ನೀಡುವ ಔದಾರ್ಯ-ಇತ್ಯಾದಿ ಗುಣಗಳು (ಸ್ವಭಾವ) ನನ್ನಲ್ಲಿ ನಿರಾಸೆಯನ್ನು ತರಿಸುವುದಾದರೂ, ಅಂಥ ಸಂದರ್ಭಗಳಲ್ಲಿ ಸಾಂತ್ವನ ನೀಡುವುದು ಬೇಂದ್ರೆಯವರು ಕವನದ ಸಾಲುಗಳು:

ಹುಸಿನಗುವ ಬಂದೇವ ನಸುನಗುತ ಬಾಳೋಣ
ತುಸುನಗುತ ತೆರಳೋಣ
ಬಡನೂರು ವರುಷಾನ ಹರುಷಾದಿ ಕಳೆಯೋಣ
ಯಾಕಾರೆ ಕೆರಳೋಣ – (ದ.ರಾ.ಬೇಂದ್ರೆ-ಗರಿ)

ನನ್ನ ದೃಷ್ಟಿಯಲ್ಲಿ ಅನೇಕ ಕನ್ನಡ ಸಾಹಿತಿಗಳು ''ಬೀದಿ ದೀಪ''ಗಳಿದ್ದಂತೆ. ಅವರ ಗೃಹಿಣಿಯರು 'ಮನೆಯೇ ನಂದಾವೀಪವಿದಂತೆ' ರಸ್ತೆಯ ದೀಪಗಳು ಮನೆಯಾಚೆಯ ಪ್ರದೇಶದಲ್ಲಿ ಬೆಳಕು ನೀಡುತ್ತವೆ. 'ಮನೆಯ ನಂದಾದೀಪ' ದೇವರ ಮನೆಯನ್ನು ಬೆಳಗುತ್ತಾ, ಉಳಿದ ಕೋಣೆಗಳಲ್ಲೂ ದೀಪ ಬೆಳಗಲು ನೆರವಾಗುತ್ತದೆ.

ಶ್ರೀಲಕ್ಷ್ಮೀನಾರಾಯಣ್ ಅವರ ''ನಿರ್ಮಾಣ್ ಶೆಲ್ಟರ್ಸ್'' ಸಂಸ್ಥೆ ನೀಡುತ್ತಿದ್ದ 'ಪುರಂದರ ಪ್ರಶಸ್ತಿ', ಅ.ನ.ಕೃ. ಪ್ರತಿಷ್ಠಾನ ನೀಡುತ್ತಿದ್ದ ''ಅ.ನ.ಕೃ. ಪ್ರಶಸ್ತಿ''ಗಳ ಸಂಚಾಲಕರಾಗಿ-ಕಾರ್ಯ ನಿರ್ವಹಿಸುತ್ತಿದ್ದರು. ಆ ಪ್ರಶಸ್ತಿಗಳನ್ನು ಕಾರ್ಯನಿರ್ವಾಹಕರಾಗಿದ್ದ ಇವರೇ ಬರೆದು ವಾಚಿಸುತ್ತಿದ್ದರು. ಪ್ರಶಸ್ತಿ-ಪತ್ರಗಳನ್ನು ಬರೆಯುವಲ್ಲಿ ಇವರು ಮಾಡುತ್ತಿದ್ದ ಕ್ಷೇತ್ರ-ನಿರ್ವಾಹಣಾಕಾರ್ಯ ಯಾವ ಸಂಶೋಧನಾ ವಿದ್ಯಾರ್ಥಿಗಿಂತಲೂ ಕಡಿಮೆ ಇರುತ್ತಿರಲಿಲ್ಲ. ಇವರ ನಿರ್ಗಮನದ ನಂತರ ಆ ಸಂಸ್ಥೆಗಳು ಪ್ರಶಸ್ತಿ ಪ್ರಧಾನ ಕಾರ್ಯಕ್ರಮಗಳು ಮೊದಲಿನ ಆಕರ್ಷಣೆ ವೈಭವವನ್ನು ಕಳೆದುಕೊಂಡವು.

ಮುಂದೆ ಫಲ್ಗುಣ ಅವರ 'ಹೊಂಬಾಳೆ ಕಲಾರಂಗದಲ್ಲಿ' 'ಕವಿದನಿ-೨೫' ಕಾರ್ಯಕ್ರಮಗಳಲ್ಲಿ ಕಾವ್ಯಪರಿಚಯ ಹಾಗೂ ಸಾಹಿತ್ಯ ರಚನೆಯಲ್ಲಿ ಹಲವಾರು ವರ್ಷಗಳು ತೊಡಗಿಕೊಂಡಿದ್ದರು. ಮುಂದೆ ರಾಷ್ಟ್ರೀಯ ವಿದ್ಯಾಲಯದ ಎಂ.ಬಿ.ಎ. ಕಾಲೇಜಿನ ನಿರ್ದೇಶಕರಾದ ಡಾ॥ ಟಿ.ವಿ. ರಾಜು ಅವರು, ತಮ್ಮ ಸಂಸ್ಥೆಯ 'ಸಿಂಚನ' ಕನ್ನಡ ವೇದಿಕೆಯ ಮೂಲಕ ಕನ್ನಡ ಪುಸ್ತಕಗಳನ್ನು ಪ್ರಕಟಿಸುತ್ತಿದ್ದರು. ಪ್ರಾರಂಭದ ವರ್ಷಗಳಲ್ಲಿ ಸಂಪಾದಕರಾಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀನಿವಾಸರಾಜು ಅವರು ನಿಧನರಾದ ನಂತರ, ಡಾ॥ ಟಿ.ವಿ. ರಾಜು ಅವರ ಕೋರಿಕೆಯಂತೆ ಮುಂದಿನ ಪ್ರಕಟನೆಗಳಿಗೆ ಸಂಪಾದಕರಾಗಿ, ೨೫ ಕ್ಕೂ ಹೆಚ್ಚಿನ ಗ್ರಂಥಗಳನ್ನು ಸಂಪಾದಿಸಿದ್ದಾರೆ-ಈಗಲೂ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇದಲ್ಲದೇ ಡಾ॥ಟಿ.ವಿರಾಜು ಅವರ 'ವಿನಯ್ ಫೌಂಡೇಶನ್' ಶಿಕ್ಷಣ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿದ ಶಿಕ್ಷಕರು, ವಿದ್ವಾಂಸರು ಮತ್ತು ಕಲಾವಿದರಿಗೆ 'ಪ್ರಶಸ್ತಿಗಳನ್ನು' ನೀಡುತ್ತಾರೆ. ಆ ಪ್ರಶಸ್ತಿ ಪತ್ರ ರಚಕರು, ಕಾರ್ಯಕ್ರಮದ ಅಧ್ಯಕ್ಷರು ಆಗಿ ಕಾರ್ಯನಿರ್ವಹಿಸುವುದು ಇವರ ಸೇವೆಯಾಗಿದೆ.

ಹೀಗೆ ಅನಾಜಿ ಅವರು ಸರ್ಕಾರಿ ಸೇವೆಯಿಂದ ನಿವೃತ್ತರಾದರೂ, ಸಾಹಿತ್ಯಿಕ ಕ್ಷೇತ್ರದಲ್ಲಿ ಪ್ರವೃತ್ತರಾಗಿದ್ದಾರೆ. ಇವರ ಕ್ಷೇತ್ರಕಾರ್ಯಕ್ಕೆ 'ನಿವೃತ್ತಿ' ಎಂಬ ಪದ ಅರ್ಥವನ್ನೇ ಕಳೆದುಕೊಂಡಿದೆ.

ಹಿರಿಯರಿಗೆ ಹಿರಿಯರಾಗಿ, ಕಿರಿಯರಿಗೆ ಕಿರಿಯರಾಗಿ ಕಾರ್ಯ ನಿರ್ವಹಿಸುತ್ತಿರುವ ಇವರ ಕಾರ್ಯಕ್ಷೇತ್ರಕ್ಕೆ ವಿಶ್ರಾಂತಿಯೇ ಇಲ್ಲ. ಇನ್ನೂ ಅರ್ಧದಲ್ಲಿಯೇ ನಿಲ್ಲಿಸಿರುವ ಇವರ ಹಲವಾರು ಬರಹಗಳು ಇವರ ದಾರಿ ಕಾಯುತ್ತಾ ಕುಳಿತಿವೆ. ಇವುಗಳಿಗೆ ಮುಕ್ತಿ ದೊರೆಯುವವರೆಗೂ, ನಮ್ಮ ಮನೆಯ 'ಡೈನಿಂಗ್ ಟೇಬಲ್' ಖಾಲಿಯಾಗುವುದಿಲ್ಲ. ಅಂತೆಯೇ ನನ್ನ ಗೊಣಗಾಟ ತಪ್ಪುವುದಿಲ್ಲ. ಅವರ ಮೌನವ್ರತ ಭಂಗವಾಗುವುದಿಲ್ಲ. ಇಂಥಾ ಒಂದು ಸನ್ನಿವೇಶದಲ್ಲಿ ನನ್ನ ನೆನಪಿಗೆ ಬರುವ ಈ ಕವನದ ಸಾಲುಗಳು, ನನ್ನ ಗೊಣಗಾಟಕ್ಕೆ ಬ್ರೇಕ್ ಹಾಕುತ್ತದೆ.

ಜಗವೊಮದು ಬಂದರೀ ಜೀವ ಸಾಗರದಲ್ಲಿ
ಹಡಗುಗಳು ಐತಂದು ನಿಲ್ಲುವವರು ದಿನದಿನವು
ವಿಧವಿಧದ ಜನರಿಹರು ತೆರತೆರದ ಭಾವಗಳು
ಕ್ಷಣಕಾಲ ಸಂಧಿಸುತ ಮೆರೆವುದಿಲ್ಲಿ
ನಾಲ್ಕುದಿನಗಳ ಜೀವ, ಒಂದಿರಾಳ ಪ್ರೇಮ
ಮುಂದೆಲ್ಲಿಗೋ ಪಯಣ ಎಂದೋ ಮಿಲನ

ಈ ನಾಲ್ಕು ದಿನಗಳ ಬದುಕಿನಲ್ಲಿ ಸಿಹಿ-ಕಹಿ, ನೋವು-ನಲಿವು, ಸಿಟ್ಟು -ಸೆಡವು, ಸುಖ-ದುಃಖ, ಹೀಗೆ ನಾನಾ ವಿಧದ ಬಣ್ಣದ ಬದುಕಿನ ಸ್ತರಗಳಲ್ಲಿ ಸಾಹಿತಿಗಳೊಂದಿಗೆ ಕಳೆದ ಮತ್ತು ಕಳೆಯುತ್ತಿರುವ ದಿನಗಳು ಅನುಪಮ-ಅವಿಸ್ಮರಣೀಯ ಅಜರಾಮರ.

******

ನಮ್ಮೆಲ್ಲರ ಮೆಚ್ಚಿನ "ಮಕ್ಕಳಕೂಟದ ಸಾಹಿತಿ"

ಶ್ರೀಮತಿ ಶಮಾರಾಘವೇಂದ್ರ
ಚರವಾಣಿ : ೭೪೧೧೩೬೭೭೧೪

ಸಾಹಿತಿಗಳೆಂದೇ ನಮ್ಮಲ್ಲಿ ಚಿರಪರಿಚಿತರಾಗಿರುವ ನನ್ನ "ಭಾವ" (ನನ್ನ ಅಕ್ಕ ಲಕ್ಷ್ಮೀದೇವಿಯವರ ಪತಿ) ಅವರ ಪರಿಚಯ ಇಂದು ನಿನ್ನೆಯದಲ್ಲ. ನಾವಿನ್ನೂ ಪ್ರೈಮರಿಶಾಲೆಯಲ್ಲಿ ಓದುತ್ತಿರುವಾಗಲೇ, ನನ್ನ ಅಕ್ಕ, ತಂಗಿ ಹಾಗೂ ತಮ್ಮಂದಿರಿಗೆ "ಮಕ್ಕಳಕೂಟದ ಮೇಷ್ಟ್ರ"ರಾಗಿ ಪರಿಚಿತರು-ಮಾತ್ರವಲ್ಲ ಆತ್ಮೀಯರೂ ಹೌದು! ನಮ್ಮ ಬ್ಯಾಂಕಿನ ಮನೆಗೆ ಸಮೀಪವಿದ್ದ 'ಮಕ್ಕಳ ಕೂಟ' ನಮ್ಮೆಲ್ಲರ ಮೆಚ್ಚಿನ ತಾಣವಾಗಿತ್ತು. ಆಟ-ಆಟದಲ್ಲಿಯೇ ಪಾಠ, ಪಾಠದಲ್ಲಿಯೇ ನೀತಿ, ನೀತಿಯಲ್ಲಿಯೇ ಕತೆಗಾರಿಗೆ, ಕತೆಗಾರಿಕೆಯಲ್ಲೇ ಒಂದು ಹೊಸ ಜಗತ್ತನ್ನು ನಿರ್ಮಿಸಿ ತೋರಿಸುವ ಅವರ ಕತೆಗಾರಿಕೆ ನಮಗೆ ಈಗಲೂ ನೆನಪಿನಲ್ಲಿ ಉಳಿದಿದೆ.

ಒಂದು ಪರದೇಸೀ ಬ್ಯಾಗ್ ನೇತುಹಾಕಿಕೊಂಡು, ಬಿಳಿಯ ಪಾಯಿಜಾಮಾ, ಚಪ್ಪಲಿ, ಚೌಕನೆ ಬಿದಿರಿನ ಬುಟ್ಟಿಯನ್ನು ಹೊಂದಿದ್ದ ಒಂದು 'ಡಕೋಟಾ ಸೈಕಲ್' ನೊಂದಿಗೆ ಬರುತ್ತಿದ್ದರು. ಅವರ ಬರುವಿಕೆಯನ್ನೇ ಕಾಯುತ್ತಿದ್ದ ನಾವೆಲ್ಲರೂ, ಜೋರಾಗಿ ಕೂಗಿ ಕೈಚಪ್ಪಾಳೆಯೊಂದಿಗೆ ಅವರನ್ನು ಸ್ವಾಗತಿಸುತ್ತಿದ್ದೆವು. ಕಾರಣ ಅವರ ಬ್ಯಾಗಿನಲ್ಲಿರುತ್ತಿದ್ದ ಚಾಕೋಲೇಟ್, ತಮ್ಮ ಬ್ಯಾಗನ್ನು ಮಕ್ಕಳೆಲ್ಲರ ಎದುರಿಗೆ ಕೊಡವಿ ಹಂಚುತ್ತಿದ್ದ ಚಾಕೋಲೇಟ್ ನಮಗೆಲ್ಲರಿಗೂ ಖುಷಿ ತುಂಬಿತ್ತು. "ಹೋ" ಎಂಬ ಕೂಗಿನೊಂದಿಗೆ ಚಾಕೋಲೇಟ್ ಸವಿಯುತ್ತಾ, ಬಣ್ಣಬಣ್ಣವಾಗಿ ಬಿತ್ತರಿಸುತ್ತಿದ್ದ ಅವರ ಕತೆ ಕೇಳಲು ಸಜ್ಜಾಗಿ ಕುಳಿತುಕೊಳ್ಳುತ್ತಿದ್ದೆವು. ಅದ್ಭುತ ವರ್ಣನೆಗಳೊಂದಿಗೆ ಬಿತ್ತರಿಸುತ್ತಿದ್ದ ಮಕ್ಕಳ ಕತೆಗಳು ಚಾಕೋಲೇಟಿನ ಸವಿಯೊಂದಿಗೆ ನಮ್ಮ ಉತ್ಸಾಹವನ್ನು ಇಮ್ಮಡಿಸುತ್ತಿದ್ದವು.

ಸಾಹಿತಿಗಳೊಂದಿಗೆ ಯಾವಾಗಲೂ ಇರುತ್ತಿದ್ದ ಅವರ ಸ್ನೇಹಿತರಾದ ಹಿರಣ್ಣಯ್ಯ, ಕೃಷ್ಣಮೂರ್ತಿ ಮತ್ತು ನರಸಿಂಹನ್ ಅವರುಗಳು ಒಂದು ಗುಂಪಾಗಿ, ಮಕ್ಕಳಕೂಟಕ್ಕೆ ಬರುತ್ತಿದ್ದ ಮಕ್ಕಳೊಂದಿಗೆ ಸ್ಪಂದಿಸುತ್ತಿದ್ದ ರೀತಿ ಅಪೂರ್ವ!

ಅನಾಜಿ ಅವರಿಗೆ 'ಸಾಹಿತಿ'ಗಳೆಂದು ನಾಮಕರಣ ಮಾಡಿದ್ದು ನನ್ನ ಅಕ್ಕ-ತಂಗಿ, ಅಣ್ಣ-ತಮ್ಮಂದಿರು ಸೇರಿದ ವಿಶೇಷಕೂಟದಲ್ಲಿ. ಇವರೊಂದಿಗೆ ನಮ್ಮ ಮನೆಯವರಿಗೆ ಚಿರಪರಿಚತರಾಗಿದ್ದು ಆಗೊಮ್ಮೆ ಈಗೊಮ್ಮೆ ನಮ್ಮ ಮನೆಗೂ ಬರುತ್ತಿದ್ದರು. ಮಕ್ಕಳಕೂಟದ ಈ "ಮಿತ್ರಕೂಟ" ನಮ್ಮ ಮನೆಗೆ ಬಂದರೆ, ನಮಗೆಲ್ಲರಿಗೂ ಸಡಗರ-ಸಂಭ್ರಮ, ನಮ್ಮ ತಂದೆ-ತಾಯಿಯವರೊಂದಿಗೆ, ನಮ್ಮ ಮನೆಯವರೆಲ್ಲರೂ ಅವರನ್ನು ಪ್ರೀತ್ಯಾದರಗಳಿಂದ ತಿಂಡಿ-ತಿನಿಸುಗಳನ್ನು ಕೊಟ್ಟು ಸತ್ಕರಿಸುತ್ತಿದ್ದೆವು.

ಅವರಲ್ಲಿ ಕೃಷ್ಣಮೂರ್ತಿ, ಹಿರಣ್ಣಯ್ಯ ಅವರು ನಮ್ಮನ್ನು ಆಟವಾಡಿಸುವುದರಲ್ಲಿ ನಿಷ್ಣಾತರಾಗಿದ್ದರು. ಮಕ್ಕಳೊಂದಿಗೆ ಮಕ್ಕಳಾಗಿ, ಹಿರಿಯರೊಂದಿಗೆ ಹಿರಿಯರಾಗಿ ಅವರು ನಡೆದುಕೊಳ್ಳುತ್ತಿದ್ದ ರೀತಿ, ಈಗ ನೆನಸಿಕೊಂಡರೇ ಸೋಜಿಗವೆನಿಸುತ್ತಿದೆ.

ಆಟವಾಡುವಾಗ ಮಕ್ಕಳಿಗೆ ಪೆಟ್ಟಾದರೆ ಅಥವಾ ಆಟದಲ್ಲಿ ಸೋತಾಗ ಅವಮಾನದಿಂದ ಅಳುತ್ತಿದ್ದರೆ ಇಲ್ಲವೇ ಆಟದಲ್ಲಿ ತಾವೇ ಗೆದ್ದೆವೆಂದು ಬೀಗುತ್ತಿದ್ದರೆ ಇಲ್ಲವೇ ತಮಗೆ ಆಟದಲ್ಲಿ ಯಜಮಾನಿಕೆಯ ಪಟ್ಟ ಸಿಗದಿದ್ದರೆ-ಹೀಗೆ ನಾನಾ ಕಾರಣಗಳಿಂದ ಅಲ್ಲಿಗೆ ಬರುತ್ತಿದ್ದ ಮಕ್ಕಳಲ್ಲಿ ಅಸಮಾಧಾನ, ಅತೃಪ್ತಿ ಕಂಡು ಬಂದಾಗ ಮಕ್ಕಳೆಲ್ಲರನ್ನೂ ಒಟ್ಟಾಗಿ ಸೇರಿಸಿ, ಕಥೆ ಹೇಳುವುದರ ಮೂಲಕ, ಅವರ ಅಸಮಾಧಾನ ಹೋಗಲಾಡಿಸಿ, ಸಂತಸದಿಂದ ನಕ್ಕು ನಲಿಯುವಂತೆ ಕತೆಯನ್ನು ನಿರೂಪಿಸುವ ಕಲೆಗಾರಿಕೆ ಮೆಚ್ಚುವಂಥದು. ಈ ಕಥಾಮೃತಕ್ಕಾಗಿ ನಾವೆಲ್ಲರೂ ಕಾಯುತ್ತಿದೆವು. ಆ ಕಥೆಯನ್ನು ಕೇಳುತ್ತಾ, ನಕ್ಕು ನಲಿಯುವುದಷ್ಟೇ ಅಲ್ಲ, ಅದರೊಂದಿಗೆ ಭಯ-ಭೀತಿ ಸಾಹಸಗಳು ನಮ್ಮ ಪಾಲಿಗೆ ಅದ್ಭುತ ಚಿತ್ರಣಗಳಾಗಿ, ಆ ಕತೆಗಳಲ್ಲಿ ನಾವೂ ನಮಗಿಷ್ಟವಾದ ಒಂದು ಪಾತ್ರವಾಗಿ ಆನಂದಿಸುತ್ತಿದ್ದೆವು.

ಹಾಸ್ಯ ಮಿಶ್ರಿತ ಮಾತು, ಪದ ಬಳಕೆಯಲ್ಲಿ ತೋರುತ್ತಿದ್ದ ಚಾಣಾಕ್ಷತನ, ಮಾತನಾಡುವ ಸಂದರ್ಭದಲ್ಲಿ ಅಪ್ರಯತ್ನಪೂರಕವಾಗು ನುಗ್ಗಿ ಬರುತ್ತಿದ್ದ ಪದಪುಂಜಗಳು, ಪ್ರಾಸಪೂರ್ಣ ಮಾತುಗಾರಿಕೆ, ದೊಡ್ಡವರು ಚಿಕ್ಕವರೆನ್ನದೆ ಎಲ್ಲರೊಡನೆಯೂ ಸಮನಾಗಿ ಬೆರೆಯುತ್ತಿದ್ದ ಸರಳ ಸ್ವಭಾವದ ಸರಳ ವ್ಯಕ್ತಿತ್ವ ನಾವು ಮಾತ್ರವಲ್ಲದೇ ಅಲ್ಲಿಗೆ ಬರುತ್ತಿದ್ದ ಎಲ್ಲರೂ ಸಾಹಿತಿಗಳನ್ನು ಮೆಚ್ಚುತ್ತಿದ್ದರು.

"ಭೂಮಿ ಗುಂಡಾಗಿದೆ" ಎನ್ನುವಂತೆ ಯಾವುದೇ ವಿಷಯವನ್ನಾದರೂ ಕುರಿತು ಮಾತನಾಡುತ್ತಿದ್ದರು. ಕೊನೆಗೆ ಕನ್ನಡದ ಬಗ್ಗೆ, ಕನ್ನಡದ ಹಿರಿಮೆಯ ಬಗ್ಗೆ ಪ್ರಾಸಬದ್ಧವಾಗಿ, ನಿರರ್ಗಳವಾಗಿ, ಕೇಳುಗರ ಬೇಕು ಬೇಡಗಳ ಬಗ್ಗೆ ಪರಿಗಣನೆಯಿಲ್ಲದೆ ಏಕಪ್ರಕಾರವಾಗಿ ಮಾತನಾಡುತ್ತಿದ್ದ ಇವರಿಗೆ ನಮ್ಮ ಮನೆಯಲ್ಲಿ ನಾವೆಲ್ಲರೂ ಇಟ್ಟ ಹೆಸರೇ "ಸಾಹಿತಿ". ಅದೇ ಇಂದಿಗೂ ನಮ್ಮ ಮನೆಯವರ ಬಂಧುವರ್ಗದವರ ಬಳಕೆಯ ಪದವಾಗಿದೆ.

ನಮ್ಮ ಮನೆಯವರೊಂದಿಗೆ ಹೀಗೆ ಹತ್ತಾರು ವರ್ಷಗಳ ಕಾಲ ಒಡನಾಟವಿದ್ದರೂ, ಅವರು ನಮ್ಮ "ಭಾವ"ನಾಗಿ ಬರುವ ಕನಸೂ ನಮ್ಮಲ್ಲಿ ಯಾರಿಗೂ ಇರಲಿಲ್ಲ. ಹೀಗೆ ಅದು ನನಸಾಗಿ ಬಂದಾಗ ಅದು ನಮಗೆಲ್ಲರಿಗೂ ಅನಿರೀಕ್ಷಿತವಾದರೂ ಆಘಾತಕಾರಿ ಆಗಿರಲಿಲ್ಲ. ಸಾಹಸಭೀಮನಂತೆ ಹಲವಾರು ಅಡೆ-ತಡೆಗಳ ಮಧ್ಯೆಯು ತನ್ನ ನಿರ್ದಿಷ್ಟಗುರಿಯನ್ನು ಮುಟ್ಟಿದ 'ಸಾಹಿತಿ'ಗಳ ಬಗ್ಗೆ ನಮ್ಮ ಮನೆಯವರೆಲ್ಲರ ಮೆಚ್ಚುಗೆ ಗಳಿಸಿತ್ತು. ಆದರೆ, ಹೀಗೊಂದು ದಿನ ನಮ್ಮ ತವರಿಗೆ ಅಳಿಯನಾಗಿ, ನಮ್ಮೆಲ್ಲರ 'ಭಾವ'ನಾಗಿ ಬರಬಹುದೆನ್ನುವ ಕಲ್ಪನೆ, ಬಹುಶಃ ನಮ್ಮ ಅಕ್ಕನಲ್ಲಿಯೂ ಇರಲಾರದು. ಅಂತೂ ಕೊನೆಗೊಮ್ಮೆ ಕಿರಿಯರಾದ ನಮ್ಮೆಲ್ಲರ ವಿವಾಹದನಂತರದಲ್ಲಿ ಅವರಿಬ್ಬರ ವಿವಾಹ ಸದ್ದುಗದ್ದಲವಿಲ್ಲದೆ, ಸರಳವಾಗಿ ನೆರವೇರಿ, ನಮ್ಮೆಲ್ಲರ ಮೆಚ್ಚಿನ 'ಭಾವ'ನಾಗಿ, ನಮ್ಮ ಮನೆ ಸೇರಿದ್ದು, ಸಂತಸದ ವಿಷಯವೇ ಸರಿ, ನಮ್ಮ ತಾಯಿಗೆ ಬೇಕಾದ ಪುಸ್ತಕಗಳನ್ನು ತಂದುಕೊಡುವ, ಅದರ ಬಗ್ಗೆ ಚರ್ಚಿಸುವ ಅಳಿಯ. ನಮ್ಮ ತಂದೆಯವರೊಂದಿಗೆ ವೇದಾಂತದ ಬಗ್ಗೆ ಗಾಢವಾಗಿ ಚಿಂತನೆಗೊಳಗಾಗುವ, 'ಅಳಿಯ' ಎನ್ನುವುದಕ್ಕಿಂತಲೂ, ನಮ್ಮ ಮನೆಯವರ ಆತ್ಮೀಯ ಗೆಳೆಯನಂತಿರುವ ಸಾಹಿತಿ ಅವರಿಗೆ ಸಲ್ಲುತ್ತಿರುವ ಈ ಗೌರವಗ್ರಂಥ ಸಮರ್ಪಣೆಗೆ ಈ ಕಿರುಬರಹ ಪುಟ್ಟಕಾಣಿಕೆ, ಈ ಗ್ರಂಥ ಸಮರ್ಪಣೆ ನಮ್ಮೆಲ್ಲರ ಹೆಮ್ಮೆಯ ಸಂಗತಿ.

****

ನನ್ನ ಭಾವ "ಸಾಹಿತಿ"

ಬದರೀನಾಥ್ ಆರ್.
ಚರವಾಣಿ: ೭೪೮೨೦೩೦೨೭೬

ನಾನು ಬದರೀನಾಥ್, 'ಸಾಹಿತಿ' ಅರ್ಥಾತ್ 'ಅನಾಜಿ' ಅವರ ಭಾವಮೈದುನ ಎಂದರೆ ಅವರ ಪತ್ನಿ 'ಲಕ್ಷ್ಮೀದೇವಿ' ಅವರ ಕೊನೆಯ ತಮ್ಮ. ಮನೆಯಲ್ಲಿ ಎಲ್ಲರಿಗಿಂತಲೂ ಕಿರಿಯನಾದ ನನ್ನನ್ನು ಮುದ್ದಿನಿಂದ 'ಬಾಬು' ಎಂದು ಕರೆಯುವುದು ವಾಡಿಕೆ. ನಾನು ಈ ಬರಹವನ್ನು ಪ್ರಾರಂಭಿಸುವ ಮೊದಲು ಒಂದು ಮಾತನ್ನು ಸ್ಪಷ್ಟಪಡಿಸಬಯಸುತ್ತೇನೆ. ನಾನು ಕಾಮರ್ಸ್ ವಿದ್ಯಾರ್ಥಿಯಾಗಿದ್ದು 'ಷಾಹಿ ಎಕ್ಸ್‌ಪೋರ್ಟ್ಸ್' ಕಂಪನಿಯಲ್ಲಿ 'ಜನರಲ್ ಮ್ಯಾನೇಜರ್' ಆಗಿ ಕಾರ್ಯ ನಿರ್ವಹಿಸಿ, ಈಗ ನಿವೃತ್ತನಾಗಿದ್ದೇನೆ. ದೀರ್ಘಕಾಲದ ನನ್ನ ಸೇವಾವಧಿಯಲ್ಲಿ ಲೆಕ್ಕ ಪತ್ರ, ಹಣಕಾಸಿನ ವ್ಯವಹಾರ, ಕೋರ್ಟು, ಕಛೇರಿ ಇತ್ಯಾದಿ ಕೆಲಸ ಕಾರ್ಯಗಳಲ್ಲಿ ಕಾಲ ಕಳೆದ ನನಗೆ ಸಾಹಿತ್ಯಾಭಿಮಾನವಿದ್ದರೂ ಸಾಹಿತ್ಯದ ಕಡೆ ಗಮನ ಕೊಡಲು ಅವಕಾಶವಿರಲಿಲ್ಲ. ಆದರೂ ಈಗ ಅಭಿಮಾನದಿಂದ, ನನಗೆ ತೋಚಿದ ಎರಡು ಮಾತುಗಳನ್ನು ಬರೆಯುತ್ತಿದ್ದೇನೆ.

ನಾನು ಮಕ್ಕಳ ಕೂಟಕ್ಕೆ ಆಟವಾಡಲು ನನ್ನ ಅಕ್ಕಂದಿರೊಂದಿಗೆ ಹೋಗುತ್ತಿದ್ದರೂ ಅದಾವ ನೆನಪುಗಳೂ ನನ್ನಲ್ಲಿ ಅಷ್ಟಾಗಿ ಉಳಿದಿಲ್ಲ. ಅವರು ನಮ್ಮ ಮನೆಗೆ ಬಂದು ಹೋಗುತ್ತಿದ್ದುದು ನನ್ನ ನೆನಪಿನಲ್ಲಿ ಮಸುಕು ಮಸುಕಾಗಿ ಉಳಿದಿದೆ. ಅವರು ಕೊಡುತ್ತಿದ್ದ ಚಾಕೊಲೇಟ್, ಚಂದಮಾಮ ಬಾಲಜಗತ್ತು ಪತ್ರಿಕೆಗಳನ್ನು ತೋರಿಸಿ ಕಥೆ ಹೇಳುತ್ತಿದ್ದುದು ಪ್ರಮುಖವಾಗಿ ನನ್ನ ನೆನಪಿನಂಗಳದಲ್ಲಿ ಉಳಿದಿರುವ ಸಂಗತಿಗಳು. ನನ್ನ ಓದು-ಬರಹ-ಕಾಲೇಜು ಇತ್ಯಾದಿಗಳ ಮಧ್ಯೆ ನನಗೆ ಅವರು ನಮ್ಮ ಮನೆಗೆ ಬಂದು ಹೋಗುತ್ತಿದ್ದುದು, ಪುಸ್ತಕಗಳ ಓದು-ಬರಹ ಇತ್ಯಾದಿಗಳು ಆಗ ನನಗೆ ಅಷ್ಟಾಗಿ ಅರಿವಿಗೆ ಬಂದಿರಲಿಲ್ಲ. ಈಗ ನಮಗೆ ಭಾವನಾಗಿ ಒಡನಾಟಕ್ಕೆ ಬಂದಾಗಿನಿಂದ ಅವರ ಅದಮ್ಯ ಕನ್ನಡ ಆಸಕ್ತಿ ಅರಿವಿಗೆ ಬಂದಿದೆ. ಯಾವುದೇ ಒಂದು ಇಂಗ್ಲೀಷ್ ಪದ ಬಳಸಿದರೆ ಒಂದು ಕ್ಷಣವೂ ತಡಮಾಡದೆ ಅದರ ಕನ್ನಡ ಪರ್ಯಾಯ ಪದವನ್ನು ಉಚ್ಚರಿಸುವ ಅವರ ಭಾಷಾ ಪಾಂಡಿತ್ಯ ನಿಬ್ಬೆರಗಾಗಿಸುವಂಥದು.

ಅವರ ವ್ಯಕ್ತಿತ್ವದಲ್ಲಿ ನನಗೆ ಕಂಡು ಬಂದ ಕೆಲವು ಅಂಶಗಳನ್ನು ಇಲ್ಲಿ ತೆರದಿಡಬಯಸುತ್ತೇನೆ.

ಭಾಷಾಭಿಮಾನ, ಸಾಹಿತ್ಯಾಸಕ್ತಿ, ಸಾಹಿತ್ಯ ಪ್ರಚಾರ, ಸಾಹಿತ್ಯಾಸಕ್ತರಾಗಿ ಬರುವವರಿಗೆ ನೀಡುವ ಮಾರ್ಗದರ್ಶನ, ಸಲಹೆ ಸೂಚನೆಗಳು ಮೆಚ್ಚುವಂಥವು. ಆದರೆ ಮತ್ತದೇ ಸಂದರ್ಭದಲ್ಲಿ ನಮ್ಮ ಬದುಕಿನ ಬವಣೆಗಳನ್ನು ಗಮನಿಸದೆ ಆದರ್ಶ ಜಗತ್ತಿನಲ್ಲಿ ನಿರತರಾಗಿರುವುದು ಎಷ್ಟು ಸರಿ? ಇದು ನನಗೆ

ಇವರೊಬ್ಬರ ಬಗ್ಗೆ ಬಂದಿರುವ ಅನಿಸಿಕೆ ಅಲ್ಲ, ಹತ್ತಾರು ಪ್ರಸಿದ್ಧ ಲೇಖಕರ ಜೀವನ ವೃತ್ತಾಂತವನ್ನು ಅರಿತಾಗ ಬಂದಿರುವ ಅನಿಸಿಕೆ. ಇದಕ್ಕೆ ಉತ್ತರ 'ಆತ್ಮತೃಪ್ತಿ' ಎಂದು ಹೇಳಬಹುದಾದರೂ ಆತ್ಮತೃಪ್ತಿಯೇ ಜೀವನದ ಬೇಕು ಬೇಡಗಳನ್ನು ಪೂರೈಸುವುದಿಲ್ಲವಷ್ಟೇ. ಆದರ್ಶ ಜಗತ್ತಿನ ಬಣ್ಣದ ಲೋಕ ವರ್ಣರಂಜಿತವಾಗಿದ್ದರೂ ವರ್ಗರಂಜಿತವಲ್ಲ. ಕಾರ್ಖಾನೆಯಲ್ಲಿ ತಯಾರಾಗುವ ವರ್ಣರಂಜಿತವಾದ, ಹೃನ್ಮನಗಳನ್ನು ಸೆಳೆಯುವ, ವಿವಿಧ ವಿನ್ಯಾಸಗಳ ಆಕರ್ಷಣೀಯವಾದ ಉಡುಪುಗಳನ್ನು ಕಂಡಾಗ ಆಗುವ ಆನಂದವೇ ಬೇರೆ. ವ್ಯಾಪಾರೀಕರಣದ ದೃಷ್ಟಿಯಿಂದ ಸಿಗುವ ತೃಪ್ತಿಯೇ ಬೇರೆ. ಹಾಗೆ ಬದುಕಿನಲ್ಲಿ ಆದರ್ಶದ ಬೆನ್ನು ಹತ್ತಿ ಹೋದವರ ಕೀರ್ತಿ ಅಪಾರವಾದರೂ, ಅವರ ಬದುಕಿನ ಸುತ್ತ ಬರುವ ವ್ಯಕ್ತಿಗಳ ತ್ಯಾಗವೂ ಅಪಾರವಾದುದು. ಕನ್ನಡದ ಒಂದು ಪದವಿಗಾಗಿ ಅದಮ್ಯ ಹೋರಾಟ ನಡೆಸಿದ ವ್ಯಕ್ತಿಗೆ ಜಗತ್ತಿನ ಇತರ ಎಲ್ಲ ಆಸೆ-ಆಮಿಷಗಳು ನಗಣ್ಯ. ಆಸ್ತಿ-ಅಂತಸ್ತು, ಗೌರವ-ಅಗೌರವ, ವೇಷ-ಭೂಷಣ, ಇದಾವುದನ್ನೂ ಗಮನಿಸದೆ ಕಣ್ಣುಪಟ್ಟಿ ಕಟ್ಟಿದ ಕುದುರೆಯಂತೆ ಏಕಮುಖಿಯಾಗಿ ಕನ್ನಡ-ಕನ್ನಡ ಸಾಹಿತ್ಯದ ಕಡೆ ಓಡುವ ಇವರ ಬದುಕಿನ ಗುರಿ ಯಾರ ಅಂಕೆಗೂ ನಿಲುಕುವಂಥದಲ್ಲ. ಅವರ ಬದುಕು ಒಂದು ತೆರೆದ ಪುಸ್ತಕ. ಅಲ್ಲಿ ಯಾವ ಒಳಹರಿವಿಗೂ ಜಾಗವಿಲ್ಲ. ಅವರ ನರನಾಡಿಗಳ ಕಣ ಕಣವೂ 'ಕನ್ನಡ' 'ಕನ್ನಡ' ಎಂದೇ ಮಿಡಿಯುವಂಥದ್ದು. ಇದಕ್ಕೆ ಉದಾಹರಣೆಯೆಂದರೆ ಅವರು ಕನ್ನಡ ಎಂ.ಎ. ಮುಗಿಸಿ ಬೆಂಗಳೂರಿಗೆ ಹಿಂದಿರುಗಿದಾಗ ಅವರೊಂದಿಗೆ ಒಂದು ದೊಡ್ಡ ಲಗೇಜ್ ಬಂದಿತು. ಅದು ಕನ್ನಡ ಪುಸ್ತಕಗಳ ಸಂಗ್ರಹ!

ಅವರ ಎಲ್ಲಾ ವಹಿವಾಟುಗಳನ್ನು ನೋಡಿಕೊಳ್ಳುವ ನನಗೆ ಕಂಡು ಬಂದುದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಷ್ಟು ಉತ್ತುಂಗದಲ್ಲಿದ್ದಾರೋ, ಅಷ್ಟೆ ದೈನಂದಿನ ಸಂಬಂಧಿಸಿದ ವಹಿವಾಟುಗಳಲ್ಲಿ ಆಸಕ್ತಿ ಶೂನ್ಯ. ಪೂಜೆ ಪುನಸ್ಕಾರ, ದೇವತಾ ದರ್ಶನ, ಆಚರಣೆಗಳಲ್ಲಿ ವೈಯಕ್ತಿಕವಾಗಿ ಆಸಕ್ತಿ ತೋರದ ಅವರು, ಬೇರೆಯವರ ಆಚರಣೆಗಳನ್ನು ಪ್ರೋತ್ಸಾಹಿಸುತ್ತಾರೆ. 'ಅಗರ'ದಲ್ಲಿ ಪ್ರತಿಷ್ಠಾಪಿಸಿದ 'ರಾಯರ ಮಠಕ್ಕೆ ಪೂಜಾವಿಧಿಗಳಿಗೆ ಬೇಕಾದ ನೀರಿಗೆ ಅಭಾವವಿದೆ. ಬೋರ್‌ವೆಲ್ ನಿರ್ಮಾಣ ನಿರ್ವಹಣೆಗೆ ಹಣದ ಕೊರತೆ ಇದೆ ಎಂದು ತಿಳಿದು ಬಂದಾಗ ಅದಕ್ಕಾಗಿ ಕೂಡಲೆ ಒಂದು ಲಕ್ಷದ ಚೆಕ್ ನೀಡಿದರು. ಬಿ.ಎಂ.ಶ್ರೀ. ಸಂಸ್ಥೆಯ ಪುಸ್ತಕ ಭಂಡಾರದಲ್ಲಿನ ನವರಾತ್ರಿಯಲ್ಲಿ ನಡೆಯುವ ಸರಸ್ವತಿ ಪೂಜೆಗಾಗಿ ಈ ಎರಡು ಲಕ್ಷ ರೂ.ಗಳ ದತ್ತಿ ನೀಡಿದ್ದಾರೆ. ಮಕ್ಕಳ ಕೂಟ ಆಶುಭಾಷಣ ಸ್ಪರ್ಧೆ ಹಾಗೂ ಉಕ್ತಲೇಖನ ಸ್ಪರ್ಧೆಗಳಿಗೆ ಬಹುಮಾನ ನೀಡಲು ಮೊಮ್ಮಕ್ಕಳ ಹೆಸರಿನಲ್ಲಿ ದತ್ತಿ ಇಟ್ಟಿದ್ದಾರೆ. ಇವರು ದಾಸಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿರುವುದು ನನಗೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಇವರು ಸಂಗ್ರಹಿಸಿದ ವಿಜಯದಾಸರ ಸಮಗ್ರ ಕೀರ್ತನೆಗಳನ್ನು (70ಕ್ಕೂ ಹೆಚ್ಚು ಮತ್ತು ಉಗಾಭೋಗಗಳನ್ನು) ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಎರಡು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ.

ಮಾಧ್ವಸಿದ್ಧಾಂತವನ್ನು ಕೀರ್ತನೆಗಳಲ್ಲಿ ಅದ್ವಿತೀಯವಾಗಿ ರಚಿಸಿರುವ ಪ್ರಸನ್ನ ಶ್ರೀನಿವಾಸದಾಸರ ಸಮಗ್ರ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇದಲ್ಲದೆ ಇದುವರೆಗೆ ಪ್ರಕಟವಾಗದಿದ್ದ ಕೆಲ್ಲಂಗೆರೆ ತಿಮ್ಮಪ್ಪದಾಸರ ಕೀರ್ತನೆಗಳ ಸಂಗ್ರಹವನ್ನು, ಹೊಸಕೆರೆ ಚಿದಂಬರಯ್ಯನವರ ಕೀರ್ತನೆಗಳನ್ನು, ಹರಿದಾಸ ಸೌರಭವೆಂಬ ವಿವಿಧ ದಾಸರ ಕೀರ್ತನೆಗಳ ಸಂಗ್ರಹ, ವಿಶ್ವಸಾಹಿತ್ಯಕ್ಕೆ ಕೊಡುಗೆ ಎನಿಸಿದ ಹರಿದಾಸರ ಕೀರ್ತನೆಗಳ ಸಂಗ್ರಹವಾದ ಹರಿದಾಸರ ಸಮಾಜಮುಖಿ ಕೀರ್ತನೆಗಳನ್ನು (ಭಾಗ 4) ಸಂಪಾದಿಸಿದ್ದಾರೆ.

ಇತ್ತೀಚೆಗೆ ಅಯೋಧ್ಯೆ ರಾಮಮಂದಿರ ಸ್ಥಾಪನೆ ಸಂದರ್ಭದಲ್ಲಿ ಕನ್ನಡದಲ್ಲಿ ಶ್ರೀಪಾದರಾಜರಿಂದ ಗುರು ಗೋವಿಂದವಿಠಲರವರೆಗೆ 60ಕ್ಕೂ ಮೀರಿದ ಹರಿದಾಸರು ರಚಿಸಿದ 500 ಶ್ರೀರಾಮ ಕೀರ್ತನೆಗಳನ್ನು ಸಿದ್ಧಪಡಿಸಿ ಜಯರಾಮ ಸೇವಾಮಂಡಳಿ ಮೂಲಕ ಪ್ರಕಟಿಸಿದ್ದಾರೆ. ಕನ್ನಡದ ಇಷ್ಟೊಂದು ಶ್ರೀ ರಾಮನ ಕೀರ್ತನೆಗಳ ಬೃಹತ್ ಸಂಗ್ರಹ ಪ್ರಕಟವಾಗಿರುವುದು ಇದೊಂದೇ ಆಗಿದೆ.

ಇವರ ದಾಸ ಸಾಹಿತ್ಯ ಸೇವೆಗಾಗಿ ಗುರು ಗೋವಿಂದ ವಿಠಲದಾಸರ ಪ್ರಶಸ್ತಿ, ಪರಿಮಳ ಬಳಗದವರ ಸ್ವರ್ಣ ಮಹೋತ್ಸವ ಪ್ರಶಸ್ತಿ, ಸಾಹಿತ್ಯ ಸೌರಭ ಪ್ರಶಸ್ತಿ ದೊರೆತಿದೆ.

ಅಧ್ಯಾಪಕರ ವೃತ್ತಿಯಿಂದ ನಿವೃತ್ತರಾಗಿ ಮೂರು ದಶಕಗಳಾದರೂ, ಈಗಲೂ ನಿರಂತರವಾಗಿ ಸಂಶೋಧಕರಿಗೆ ಮಾರ್ಗದರ್ಶನ ಮಾಡುವ, ಸಾರ್ವಜನಿಕವಾಗಿ ಉಪನ್ಯಾಸ ನೀಡುವ ಹೊಸ ಗ್ರಂಥಗಳನ್ನು ಕೊಂಡು ಓದುವ, ಯುವಕರನ್ನು ನಾಚಿಸುವ ಅವರ ಆಸಕ್ತಿಯನ್ನು ಕಂಡರೆ ಅಚ್ಚರಿ ಎನಿಸುತ್ತಿದೆ. ನಮ್ಮ ಮೆಚ್ಚಿನ ಸಾಹಿತಿಗೆ (ಭಾವನವರಿಗೆ) ಇನ್ನೂ ಹೆಚ್ಚು ಹೆಚ್ಚು ಕನ್ನಡಸೇವೆ ಮಾಡುವ ಸೌಭಾಗ್ಯವನ್ನು ಭಗವಂತನು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ನಮ್ಮ ಭಾವನವರ ದಾಸ ಸಾಹಿತ್ಯದ ಸೇವೆಯನ್ನು ನೆನೆಯುವ ಸಂಧರ್ಭದಲ್ಲಿ ನಮ್ಮಕ್ಕ (ಲಚ್ಚು) ಲಕ್ಷ್ಮೀದೇವಿ ರಚಿಸಿದ ದಾಸಸಾಹಿತ್ಯ ಕೃತಿಗಳು ಕನ್ನಡದಲ್ಲಿ ಪ್ರಸಿದ್ಧ ಕೃತಿಗಳಾಗಿವೆ. ಅಜ್ಞಾತ ಕವಿಯತ್ರಿಯರು ಕೃತಿ (ಆ ಪ್ರಸಿದ್ಧ ಹರಿದಾಸಿಯರ ವ್ಯಕ್ತಿ ಚಿತ್ರಗಳು)ಯನ್ನು ಕನ್ನಡದ ಮೊಟ್ಟ ಮೊದಲನೇ ಹರಿದಾಸಿ ಗಲಗಲಿ ಅವ್ವ ಅವರ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಇದಲ್ಲದೆ ಅನೇಕ ಲೇಖನಗಳನ್ನು ಹರಿದಾಸ ಸಾಹಿತ್ಯದ ಬಗ್ಗೆ ಬರೆದಿದ್ದಾರೆ. ಹೀಗಾಗಿ ನನ್ನ ಅಕ್ಕ ಭಾವ ಸಾಹಿತ್ಯ ದಂಪತಿಗಳಾಗಿರುವುದು ನನಗೆ ಹೆಮ್ಮೆಯ ವಿಷಯವಾಗಿದೆ.

******

ಅಚ್ಚುಮೆಚ್ಚಿನ ಸಾಹಿತಿ

ಗೀತಾ ಬದರೀನಾಥ್
ಚರವಾಣಿ : ೯೪೪೯೦ ೦೨೪೪೪

'ನಾನು ಗೀತಾ', ಅನಾಜಿ ಅವರ ಪತ್ನಿ ಶ್ರೀಮತಿ ಎಂ.ಆರ್. ಲಕ್ಷ್ಮೀದೇವಿಯವರ ಕೊನೆಯ ತಮ್ಮ ಬದರಿನಾಥ್ ಅವರನ್ನ ಮದುವೆಯಾಗಿ, ಜಯನಗರದ ನಮ್ಮ ಮಾವನ ಮನೆಗೆ ಬಂದೆ. ನಮ್ಮ ಮನೆಯ ಮಹಡಿಯಲ್ಲಿ ನನ್ನ ಅತ್ತಿಗೆ ಲಕ್ಷ್ಮೀದೇವಿಯವರ ಸಂಸಾರ ವಾಸವಾಗಿತ್ತು. ನಾನು ಮದುವೆಯಾಗಿ ಈ ಮನೆಗೆ ಬಂದ ದಿನದಿಂದಲೂ ನಾನು ಗಮನಿಸುತ್ತಿದ್ದ ವಿಷಯವೆಂದರೆ, ಈ ಮನೆ ಅಳಿಯನಾಗಿದ್ದರೂ ಸಾಹಿತಿಗಳ ನಡವಳಿಕೆ 'ಅಳಿಯನ ರೀತಿಯಾಗಿರದೆ, ಒಬ್ಬ ಅತ್ಯಾಪ್ತ ಗೆಳೆಯನಂತಿತ್ತು. ನಮ್ಮ ಅತ್ತೆಮಾವ, ಅತ್ತಿಗೆಯಂದಿರು, ಭಾವನವರೇ ಮೊದಲಾದವರೊಂದಿಗೆ ಸಲಿಗೆಯಿಂದ ಬೆರೆಯುತ್ತಿದ್ದ ರೀತಿ, ಮಾತುಕತೆಗಳಲ್ಲಿ ಕಂಡುಬರುತ್ತಿದ್ದ ಆತ್ಮೀಯತೆಯ ನನಗೆ ಒಂದು ರೀತಿ ಅಚ್ಚರಿಯನ್ನುಂಟು ಮಾಡುತ್ತಿತ್ತು. ಇದು ಹೇಗೆ ಸಾಧ್ಯ? ಎಂಬ ಪ್ರಶ್ನೆ ನನ್ನಲ್ಲಿ ಹಲವಾರು ಬಾರಿ ಉಂಟಾಗುತ್ತಿತ್ತು. ಆದರೆ ಪ್ರಶ್ನಿಸುವಷ್ಟು ಧೈರವಾಗಲಿ, ಸಲಿಗೆಯಾಗಲಿ ಆಗಿನ್ನೂ ಹೊಸದಾಗಿ ಮದುವೆಯಾಗಿ ಬಂದಿದ್ದ ನನಗಿರಲಿಲ್ಲ. ಕ್ರಮೇಣ ಆ ಮನೆಯವರಲ್ಲಿ ಒಬ್ಬಳಾಗಿ ಹೊಂದಿಕೊಂಡ ನನಗೆ ಸಾಹಿತಿಗಳ ಒಡನಾಟ ಹತ್ತಿರವಾಗುತ್ತಿದಂತೆ, ಅವರ ಒಡನಾಟದ ಸಲಿಗೆ-ಸ್ನೇಹ ವಿಶ್ವಾಸಗಳ ವಿಷಯದ ಅರಿವಾಯಿತು.

ಹೊಸದಾಗಿ ಬಂದ ನನ್ನನ್ನು ಸಾಹಿತಿಗಳು ಎಷ್ಟೋ ವರ್ಷಗಳ ಪರಿಚಯವಿದ್ದಂತೆ ಮಾತನಾಡುತ್ತಿದ್ದರು. ಮನೆಯರೊಂದಿಗೆ ಬೆರೆತು ಒಂದಾಗಿ ಹೊಂದಿಕೊಳ್ಳುತ್ತಿದ್ದ ನನಗೆ ಅವರ ಮಾತಿನ ಚಕಮಕಿ, ಹಾಸ್ಯ ಮಿಶ್ರಿತ ಮಾತುಗಾರಿಕೆ, ಏನೇ ಮಾತನಾಡಿದರೂ ಅದಕ್ಕೆ ಹೊಂದುವಂತೆ ಪ್ರಾಸಬದ್ಧವಾಗಿ ಮಾತನಾಡುವ ಅತಿ ನಿಂತಲ್ಲಿಯೇ ಚುಟುಕ ಪದಗಳನ್ನು ಬಿತ್ತರಿಸುತ್ತಿದ್ದ ನನಗೂ ಮೈ ಚಳಿ ಬಿಟ್ಟು ಅವರೊಂದಿಗೆ ಎಲ್ಲರಂತೆ ಸಲಿಗೆಯಿಂದ ಮಾತನಾಡುವ ಧೈರ್ಯ ಬಂದಿತು.

ನನ್ನ ತವರು ಮನೆಯವರು ಲಾಲ್‌ಬಾಗ್ ಸಮೀಪದ ಚಿಕ್ಕ ಮಾವಳ್ಳಿಯಲ್ಲಿ ವಾಸವಿದ್ದರು. ನಮ್ಮ ತಂದೆ ದಿ॥ ಪಾಂಡುರಂಗ ವಿಠಲ ಅವರು ದೇಶಾಭಿಮಾನಿಗಳಾಗಿದ್ದು ಕಾಂಗ್ರೆಸ್ 'ಇಂದಿರಾ ಕಾಂಗ್ರೆಸ್ ಎಂದು ಇಬ್ಬಾಗವಾಗುವ ಮುನ್ನ ಹೆಸರಾಂತ ಹೋರಾಟಗಾರರಲ್ಲಿ ದೊರೆಸ್ವಾಮಿ, ವಿ.ಆರ್. ನಾಯ್ಡು, ಕೃಷ್ಣ ಅಯ್ಯರ್, ನಿಜಲಿಂಗಪ್ಪ ಮೊದಲಾದವರೊಂಡೆಗೆ ರಾಷ್ಟ್ರ ಕೈಂಕರ್ಯದಲ್ಲಿ ನಿರತರಾಗಿದ್ದರು. 'ಮಾವಳ್ಳಿ' ಎಂಬ ಹೆಸರನ್ನು ಕೇಳುತ್ತಿದ್ದಂತೆಯೇ ಮಾವಳ್ಳಿಯ ಇತಿಹಾಸವನ್ನು ಅಲ್ಲಿ ವಾಸಿಸುತ್ತಿದ್ದ ಕನ್ನಡ ಬರಹಗಾರರ ಪಟ್ಟಿಯನ್ನೇ ನನ್ನ ಮುಂದೆ ತೆರೆದಿಟ್ಟರು. ಫೋರ್ಟ್ ಹೈಸ್ಕೂಲಿನಲ್ಲಿ ಮೇಷ್ಟ್ರಾಗಿದ್ದ ಕನ್ನಡ ಅಧ್ಯಾಪಕರಾದ ಪಂಡಿತ್ ಕೆ. ಪಟ್ಟಾಭಿರಾಮಯ್ಯ ಭಗವದ್ಗೀತೆಯನ್ನು ಕನ್ನಡ ಷಟ್ಪದಿಯಲ್ಲಿ

ಸೊಗಸಾಗಿ ಬರೆದಿದ್ದ "ಉಪ್ಪಾರಹಳ್ಳಿ ರಾಮಪ್ಪ, ಕನ್ನಡದ ಸುಪ್ರಸಿದ್ದ ಕವಿ ನಿಸ್ಸಾರ್ ಅಹಮದ್ ಹೀಗೆ ಹಲವಾರು ಪ್ರಸಿದ್ಧ ವ್ಯಕ್ತಿಗಳನ್ನು ಹೆಸರಿಸಿ, ಮಾವಳ್ಳಿಯ ಮೂಲನಿವಾಸಿಯಾಗಿದ್ದ ನನ್ನನ್ನು ದಂಗು ಬಡಿಸಿದ್ದರು. ಇತ್ತೀಚೆಗೆ ಬಂದ ಮಾವಳ್ಳಿ ರಾಮು ಎಂಬುವವರು ಬರೆದ 'ಮಾವಳ್ಳಿ ಇತಿಹಾಸ" ಎಂಬ ಪುಸ್ತಕಕ್ಕೆ ಮೂಲನಿವಾಸಿಯಾಗಿದ್ದ ನನಗಿಂತಲು ಹೆಚ್ಚಿನ ಮಾಹಿತಿಯನ್ನು ನೀಡಿದ್ದು, ಅವರ 'ಕ್ಷೇತ್ರಕಾರ್ಯ' ಆಸಕ್ತಿಗೆ ಒಂದು ಸಣ್ಣ ಉದಾಹರಣೆ ಅಷ್ಟೆ. -

ಜಯನಗರ 'ಟಿ' ಬ್ಲಾಕ್‌ನ ಮನೆಯನ್ನು ಸೇರಿ ಒಂದಾಗುತಿದ್ದಂತೆಯೇ, ಸಾಹಿತಿಗಳ ಸಂಪರ್ಕ ಸೇತುವೆ ಚೆನ್ನಾಗಿ ಬೆಸೆದುಕೊಂಡಿತ್ತು. ಯಾವುದೇ ಮದುವೆ, ಮುಂಜಿ, ನಾಮಕರಣವೇ ಮೊದಲಾದ ಯಾವ ಸಮಾರಂಭಗಳು ನಡೆದರೂ ಅವರಿಂದ ಶುಭಾಶಯ, ಅಭಿನಂದನೆಗಳು ಅವರಿಂದಲೇ ಬರೆಸಿಕೊಳ್ಳುವುದಲ್ಲಿ ನನಗೆ ಉತ್ಸಾಹ, ಆ ಅವರ ಆ ಪ್ರಾಸಭರಿತ ಶುಭಾಶಯ ಪತ್ರವಿಲ್ಲದೆ ಕಾರ್ಯಕ್ರಮಕ್ಕೆ ಹೋಗುತ್ತಿರಲಿಲ್ಲ.

ನನಗೆ ಮಾತ್ರವಲ್ಲದೇ ನನ್ನ ತವರಿನವರಿಗೂ ಹೆಸರಾಂತ ಗಾಯಕಿ-ಗಮಕಿ ಆಗಿರುವ ನನ್ನ ಚಿಕ್ಕಮ್ಮ ಕಮಲ ಶ್ರೀನಿವಾಸ್ ಅವರಿಗೂ ಇವರ ಮಾತು, ಇವರು ನೀಡುತ್ತಿದ್ದ ಸಾಹಿತ್ಯ ನಿರ್ದೇಶನ ಅಚ್ಚುಮೆಚ್ಚಾಗಿತ್ತು 'ಸಾಹಿತಿ ಚಿಕ್ಕಪ್ಪ' ಎಂದೇ ನಮ್ಮ ಮನೆಯಲ್ಲಿ ಎಲ್ಲರಿಗೂ ಚಿರಪರಿಚಿತರಾಗಿದ್ದು, ಕಥೆಗಳನ್ನು ಹೇಳಿ ಮಕ್ಕಳನ್ನು ಸಂತಸಗೊಳಿಸುತ್ತಿದ್ದು ಮನೆಯಲ್ಲಿ ಏನೇ ಸಮಾರಂಭವಾದರೂ ಮಕ್ಕಳ ಗುಂಪಿನಲ್ಲೇ ಬೆರೆತು ಆನಂದಿಸುತ್ತಿದ್ದ ಇವರ ರೀತಿಯೇ ವಿಶಿಷ್ಟವಾದದ್ದು.

ಅವರು ಹೇಳುತ್ತಿದ್ದ ಒಂದು ಸಂಗತಿ ಈಗ ನೆನಪಿಗೆ ಬರುತ್ತದೆ. ಪರಿಚಿತರ ಮನೆಗಳ ಸಮಾರಂಭಗಳಿಗೆ ಹೋದಾಗ ಅಲ್ಲಿ ಮಕ್ಕಳೊಡನೆ ಆಟವಾಡುತ್ತಾ ಹರಟೆ ಹೊಡೆಯುತ್ತ ಅವರ ಜೊತೆ ಊಟಕ್ಕೆ ಕೂಡುತ್ತಿದ್ದರು. ದೊಡ್ಡವರ ಸಾಲಿಗೆ ಬಂದು ಕೂಡಿ ಎಂದರೆ ಬಂದು ಕೂರುತ್ತಿರಲಿಲ್ಲ. ಇಲ್ಲೇ ಕೂಡಲು ನನಗೆ ಇಷ್ಟ ಎನ್ನುತ್ತಿದ್ದರು. ಗುಟ್ಟು ಏನೆಂದರೆ ಮಕ್ಕಳ ಸಾಲಿಗೆ ಲಾಡು ಮೈಸೂರು ಪಾಕು ಮುಂತಾದ ಸಿಹಿ ಭಕ್ಷ್ಯಗಳನ್ನು ಬಡಿಸುವಾಗ ಚೂರು ಮಾಡಿ ಬಡಿಸುತ್ತಿದ್ದರು. ಇವರು ಎಲ್ಲಾ ಮಕ್ಕಳಿಗೂ ಮುರಿಯದೆ ಚೂರು ಮಾಡದೆ ಬಡಿಸಿ ಎಂದು ಹೇಳಿ ಬಡಿಸುವಂತೆ ಮಾಡುತ್ತಿದ್ದರು. ನಮಗಿಂತ ಮಕ್ಕಳಿಗೆ ಸಿಹಿ ಕಂಡರೆ ಆಸೆ. ಅವರು ತಿಂದು ಆನಂದ ಪಟ್ಟರೆ ಅದೇ ನಿಜವಾದ ಸಂತೋಷ. ಅದಕ್ಕೆ ಅವರು ಮದುವೆ ಮನೆಗಳಲ್ಲಿ ಮಕ್ಕಳೊಡನೆ ಊಟಕ್ಕೆ ಕೂಡುತ್ತಿದ್ದರು.

ನಮ್ಮ ಅತ್ತಿಗೆ ಮನೆಗೆ ಬಂದಾಗಲೆಲ್ಲಾ ಅವರನ್ನು ಕಾಣುವುದು ಮಾತಾಡುವುದೇ ನನಗೊಂದು ಹಬ್ಬ.

******

My Beloved Chikkappa

Anil B.P. Rao

Mobile : 9980834815

It gives me immense pride to write a few words about my Chikappa, who has led an inspiring life dedicated to education and literature. Having retired as the Professor of Kannada, he leaves behind a legacy of wisdom, compassion, and an unwavering commitment to nurturing young minds. Beyond his role as an educator my Chikkappa has been a guiding light-an embodiment of humility, intellect, and dedication. His passion for Kannada literature continues to resonate through his writings and this book, which reflects his lifelong pursuit of knowledge and cultural enrichment. As a Kannada lecturer, he not only taught the beauty of the language but also instilled in his students a deep respect for its culture and heritage. His passion for Kannada literature, his scholarly depth, and his ability to connect with students made him one of the most respected educators in the academic community.

His contribution to the field of education and Kannada literature continues to inspire many, and this book stands as a testament to his lifelong dedication to learning, teaching, and enriching our language.

With deep respect and admiration,

ANIL B.P. Rao

ನಾನು ಕಂಡಂತೆ ನನ್ನ ಸಾಹಿತಿ ಚಿಕ್ಕಪ್ಪ

ಅವಿನಾಶ್ ಜಿ.
ಚರವಾಣಿ : ೯೪೪೪೦೦೮೯೮೪೪೮

ನಾನು ಅವಿನಾಶ್ – ಕ್ಷಮಾಳ ದೊಡ್ಡಮ್ಮನ ಮಗ, ನಮ್ಮ ತಾಯಿ "ಉಷಾ ಗೋಪಾಲ್ ರಾವ್' ಹಾಗೂ ಕ್ಷಮಾಳ ತಾಯಿ ಇಬ್ಬರೂ ಅಕ್ಕ ತಂಗಿಯರು. ವಯಸ್ಸಿನಲ್ಲಿ ನಮ್ಮ ತಾಯಿ ದೊಡ್ಡವರು ಹಾಗೂ ನನಗೆ ಸಾಹಿತಿಗಳು ತಾಯಿ ಸಂಬಂಧ ಚಿಕ್ಕಪ್ಪನಾಗಬೇಕು. ಒಂದು ದೃಷ್ಟಿಯಿಂದ ನನಗೆ ಅವರು ಚಿಕ್ಕಪ್ಪನೇ ಸರಿ. ನನ್ನ ಓದು ಬರಹ, ಆಟ–ಪಾಠ, ಕಥೆ ಹೇಳುವಿಕೆ ಎಲ್ಲದಕ್ಕೂ ಜೊತೆಯಾಗಿರುತ್ತಿದ್ದರು. ಮಕ್ಕಳ ಪುಸ್ತಕಗಳು, ಬಾಲಮಿತ್ರ, ಗೊಂಬೆ ಮನೆ, ಚಂದಮಾಮ ಈ ಮೂರು ಮಕ್ಕಳ ಪತ್ರಿಕೆಗಳನ್ನು ತೋರಿಸಿ ಕಥೆ ಹೇಳುತ್ತಿದ್ದರು.

"ಕ್ಷಮಾ" ಇನ್ನೂ ಮೂರು ತಿಂಗಳ ಮಗುವಾಗಿರುವಾಗಲೇ ನಮ್ಮ ಮನೆಗೆ "ಪುಟ್ಟ ತಂಗಿ" ಯಾಗಿ ಬಂದಳು. ಆಗ ನಾನಿನ್ನೂ ಪ್ರೈಮರಿ (ಒಂದೋ ಎರಡೋ ನೆನಪಿಲ್ಲ) ಶಾಲೆಯಲ್ಲಿ ಓದುತ್ತಿದ್ದೆ. ನಮ್ಮ ಮನೆಗೆ "ಪುಟ್ಟ ತಂಗಿ" ಬಂದಿದ್ದು ನನಗೆ ಸಂಭ್ರಮ ತಂದಿತ್ತು. ಶಾಲೆ ಬಿಟ್ಟ ಕೂಡಲೇ ಓಡಿ ಬಂದು ಅವಳನ್ನು ಆಟವಾಡಿಸುತ್ತಿದ್ದೆ. ಕೆಲವೊಮ್ಮೆ ಅಮ್ಮ ಅವಳಿಗೆ ಹಾಲು ಕುಡಿಸಲು Feeding bottle ತಂದರೆ ನಾನೇ ಅವಳಿಗೆ ಕುಡಿಸುತ್ತಿದ್ದೆ. ಅವಳು ಅತ್ತಾಗ ಪಕ್ಕದಲ್ಲೇ ಕೂತು "Twinkle Twinkle little star" ಎಂದು ಶಾಲೆಯಲ್ಲಿ ಕಲಿತ ಪದ್ಯಗಳನ್ನು ರಾಗವಾಗಿ ಹಾಡುತ್ತಿದ್ದೆ. ಅಮ್ಮ ಅವಳಿಗೆ ಬಟ್ಟೆ ಹಾಕಿ ಪೌಡರ್ ಹಚ್ಚಿ, ಕಣ್ಣಿಗೆ ಕಪ್ಪಿಟ್ಟು, ಹಣೆಗೆ ಚುಕ್ಕೆ ಇಟ್ಟು, ದೃಷ್ಟಿಬೊಟ್ಟು ಇಟ್ಟು ಅಲಂಕರಿಸಿದಾಗ ಚಪ್ಪಾಳೆ ತಟ್ಟುತ್ತಿದ್ದೆ. ಎಷ್ಟೋ ವೇಳೆ ನಾನು ಶಾಲೆಯಿಂದ ಬಂದ ಕೂಡಲೇ ನನ್ನನ್ನು ನೋಡಿ ಕಣ್ಣಗಲಿಸಿ ಎರಡೂ ಕೈಗಳನ್ನು ಮೇಲಕ್ಕೆತ್ತುತ್ತಾ ನಗುತ್ತಿದ್ದಳು. ಹೀಗೆ ನಮ್ಮ ಮನೆಯ ಪುಟ್ಟ ಕಂದಮ್ಮನಾಗಿ ನನ್ನ "ಪ್ರೀತಿಯ ತಂಗಿ"ಯಾಗಿ ಬೆಳೆಯುತ್ತಿದ್ದ ದಿನಗಳಲ್ಲಿ ಭಾನುವಾರದ ರಜೆಯ ದಿನ ಚಿಕ್ಕಪ್ಪ–ಚಿಕ್ಕಮ್ಮ ಇಬ್ಬರ ಆಗಮನ ನನ್ನ ಸಂತಸವನ್ನು ಇಮ್ಮಡಿಗೊಳಿಸುತ್ತಿತ್ತು. ಏಕೆಂದರೆ ನಮ್ಮ ಸಾಹಿತಿ ಚಿಕ್ಕಪ್ಪ, ಬೇರೆ ಊರಿನಲ್ಲಿ ಕೆಲಸ ಮಾಡುತ್ತಿದ್ದರು. ಆಗ ನಮ್ಮ ಚಿಕ್ಕಮ್ಮ ಒಬ್ಬರೇ ತಮ್ಮ ಕಾಲೇಜಿನ ಕೆಲಸದ ನಡುವೆ ಈ ಪುಟ್ಟ ಕಂದಮ್ಮನನ್ನು ನೋಡಿಕೊಳ್ಳುವುದು ಕಷ್ಟವಾಗಿತ್ತು. ಹಾಗಾಗಿ ಪುಟ್ಟ ಮಗುವನ್ನು ನಮ್ಮ ತಾಯಿಯ ಮಡಿಲಿಗೆ ಒಪ್ಪಿಸಿದ್ದರು.

ಮಗಳನ್ನು ನೋಡಲು ಬರುತ್ತಿದ್ದ "ಸಾಹಿತಿ ಚಿಕ್ಕಪ್ಪ" ಚಾಕೊಲೇಟ್, ಬಿಸ್ಕತ್ತು, ಬಣ್ಣ ಬಣ್ಣದ ಮಕ್ಕಳ ಪುಸ್ತಕವನ್ನು ತರುತ್ತಿದ್ದುದು ನನ್ನ ಸಂಭ್ರಮವನ್ನು ಇಮ್ಮಡಿಗೊಳಿಸುತ್ತಿತ್ತು. ಆ ನನ್ನ ಪುಟ್ಟ ತಂಗಿಯೊಡನೆ ಹೀಗೆ ಒಂದು ವರ್ಷ ಕಳೆದ ನಂತರ ಅವಳು ತವರಿಗೆ ಮರಳಿದ ದಿನಗಳಲ್ಲಿ ನಾನು ಒಂಟಿ ಎನಿಸಿ ಅತ್ತದ್ದೇ ಅತ್ತದ್ದು.

ಮುಂದೆ ನನ್ನ ತಂದೆ ದಿ. ಗೋಪಾಲ್ ರಾವ್ ಅವರು ತಮಿಳುನಾಡಿನ "ವೃದ್ಧಾಚಲಂ" ನಲ್ಲಿ ಒಂದು ಸಣ್ಣ ಕಾರ್ಖಾನೆಯನ್ನು ಪ್ರಾರಂಭಿಸಿದಾಗ, ಪ್ರಾರಂಭಿಕ ದಿನಗಳಲ್ಲಿ ನಾನು ಅಜ್ಜಿಯ ಮನೆಗೆ ವಲಸೆ ಬಂದು ಅಲ್ಲೇ ಹತ್ತಿರದಲ್ಲಿದ್ದ "ಹೋಲಿ ಕ್ರೈಸ್ಟ್‌ಶಾಲೆಗೆ ಸೇರಿದೆ. ನನ್ನೊಂದಿಗೆ ಕ್ಷಮಾಳು ಅದೇ ಶಾಲೆಗೆ ಸೇರಿದಳು. ಆಗೆಲ್ಲಾ ನಮಗೆ "ಸಾಹಿತಿ ಚಿಕ್ಕಪ್ಪನೊಂದಿಗಿನ ಸಲಿಗೆ ಹೆಚ್ಚಾಗಿ ಬೆಳೆಯಿತು. ಶನಿವಾರ, ಭಾನುವಾರ ರಜಾದಿನಗಳಲ್ಲಿ ಬೆಂಗಳೂರಿನ ಜಯನಗರದ ಮನೆಗೆ ಬರುತ್ತಿದ್ದರೂ ನಾನು ಕೆಳಗಿನ ಅಜ್ಜಿ ಮನೆಯಲ್ಲಿರುತ್ತಿದ್ದೆ. ಹಾಗಾಗಿ ನನಗೆ ಕ್ಷಮಾ-ಚಿಕ್ಕಪ್ಪನೊಂದಿಗೆ ಹೆಚ್ಚು ಹೆಚ್ಚು ಬೆರೆಯಲು ಸಾಧ್ಯವಾಯಿತು.

ಆಟದ ಸಮಯದಲ್ಲಿ ತಮಾಷೆಯಿಂದಿರುತ್ತಿದ್ದ ಚಿಕ್ಕಪ್ಪ, ಪಾಠ-ಊಟದ ಸಮಯದಲ್ಲಿ ಶಿಸ್ತಿನ ಸಿಪಾಯಿಯಾಗಿರುತ್ತಿದ್ದರು. ಒಂದಕ್ಷರ ಸೊಟ್ಟವಾದರೆ, ಕಾಗುಣಿತ ತಪ್ಪಾಗಿ ಬರೆದರೆ, ಅವರು ಎಂದೂ ಬಯ್ಯುತ್ತಿರಲಿಲ್ಲ. ಬದಲಾಗಿ ಶಿಸ್ತಿನಿಂದ ಆ ತಪ್ಪನ್ನು ಹತ್ತಾರು ಬಾರಿ ಬಾಯಲ್ಲಿ ತಿದ್ದಿ ಹೇಳಿ, ಆ ತಿದ್ದುವಿಕೆ ತಲೆಯಲ್ಲಿ ನಾಟುವಂತೆ ಮಾಡುತ್ತಿದ್ದರು. ಮಗ್ಗಿಯನ್ನು ಕಲಿತು ತಪ್ಪಿಲ್ಲದ ಹೇಳಿದಾಗ ಏನಾದರೊಂದು ಆಟಿಕೆಯ ಬಹುಮಾನ ಸಿದ್ಧವಾಗಿರುತ್ತಿತ್ತು. ಬರೀ ಪಾಠವಷ್ಟೇ ಅವರ ಕೆಲಸವಾಗಿರಲಿಲ್ಲ... ಕಣ್ಣರಳಿಸುತ್ತಾ, ಬಾಯಿ ಸೊಟ್ಟ ಮಾಡುತ್ತಾ ಕೈಗಳನ್ನು ವಿಚಿತ್ರ ರೀತಿಯಲ್ಲಿ ತಿರುಗಿಸುತ್ತಾ, ರಾಕ್ಷಸನ ಕಥೆಯನ್ನು ಹೇಳುತ್ತಾ ಹೋದಾಗ ನಿಬ್ಬೆರಗಾಗಿ ಅವರನ್ನೇ ಗಾಬರಿಯಿಂದ ನೋಡುತ್ತಿದ್ದಾಗ, ಆ ರಾಕ್ಷಸನ ಸಂಹಾರ ವಾಣಿ ಕೇಳಿಸಿ, ನಾವೆಲ್ಲರೂ ಸಂಭ್ರಮಿಸುವಂತ ಮಾಡುತ್ತಿದ್ದರು. ನಾನು ಮತ್ತು ನನ್ನ ದೊಡ್ಡಮ್ಮ-ಚಿಕ್ಕಮ್ಮನ ಮಕ್ಕಳು ಕೂಗಿ ಕೈಚಪ್ಪಾಳೆ ತಟ್ಟಿ ಆನಂದಿಸುತ್ತಿದ್ದರ ಅವರೂ ನಮ್ಮೊಡನ ಸಂಭ್ರಮಿಸುತ್ತಿದ್ದರು.

ಅವರ ಒಂದು ವಿಶೇಷತೆ ಏನೆಂದರೆ, ಅವರು ಯಾವುದೇ ಹಬ್ಬ ಇನ್ನಿತರ ಸಮಾರಂಭವಿರಲಿ, ದೊಡ್ಡವರೊಡನೆ ಊಟಕ್ಕೆ ಕೂಡುತ್ತಿರಲಿಲ್ಲ. ಮಕ್ಕಳ ಮಧ್ಯದಲ್ಲೇ ಕೂತು ಮಕ್ಕಳಿಗೆ ಇಷ್ಟವಾದ ಖಾದ್ಯವನ್ನು ಬಡಿಸುವಂತೆ ನೋಡಿಕೊಳ್ಳುತ್ತಾ ಆನಂದಿಸುತ್ತಿದ್ದ ರೀತಿಯೇ ವಿಶಿಷ್ಟವಾಗಿರುತ್ತಿತ್ತು.

ಆಟದಲ್ಲಿಯೇ ಪಾಠ, ಪಾಠದಲ್ಲಿಯೇ ನೋಟ, ನೋಟದಲ್ಲಿಯೇ ಒಂದು ಸುಂದರ ಜಗತ್ತನ್ನು ನಿರ್ಮಿಸಿ ತೋರಿಸುವ ಅವರ ತಂತ್ರಗಾರಿಕೆ ನಮ್ಮೆಲ್ಲರ ಮೆಚ್ಚುಗೆ ಗಳಿಸಿತ್ತು. ಪುಸ್ತಕವನ್ನು ಹರಿಯುವುದಾಗಲೀ, ಅದನ್ನು ಶಿಸ್ತಿನಿಂದ ಒಂದೆಡೆ ಇಡದೆ, ಬೇಕಾಬಿಟ್ಟಿಯಾಗಿ ಎಸೆದರೆ, ಅಡ್ಡಾದಿಡ್ಡಿಯಾಗಿ ಇಟ್ಟರೆ, ಆಗಿನ ಅವರ ಸ್ವರೂಪವೇ ಬೇರೆಯಾಗಿರುತ್ತಿತ್ತು.

ಈ ಮಧ್ಯೆ ನಮ್ಮ ತಂದೆಯವರ ಫ್ಯಾಕ್ಟರಿ ಒಂದು ನೆಲೆಗೆ ಬಂದಾಗ, ನಾನು "ಅಜ್ಜಿಮನೆ" ಮತ್ತು ಚಿಕ್ಕಪ್ಪನ ಸಹವಾಸ ತೊರೆದು ತಮಿಳುನಾಡಿನ 'ವೃದ್ಧಾಚಲಂ'ಗೆ ವಲಸೆ ಹೋಗಬೇಕಾಯಿತು. ಒಲ್ಲದ ಮನಸ್ಸಿನಿಂದ "ಸಾಹಿತಿ ಚಿಕ್ಕಪ್ಪನ ಒಡನಾಟದಿಂದ ದೂರವಾಗಬೇಕಾಯಿತು".

ಆದರೂ ರಜಾ ದಿನಗಳಲ್ಲಿ ನಮ್ಮೂರಿನ ಮನೆಗೆ ಕ್ಷಮಾಳೊಂದಿಗೆ ಬರುತ್ತಿದ್ದ ಸಾಹಿತಿ ಚಿಕ್ಕಪ್ಪ - ಚಿಕ್ಕಮ್ಮನ ದಾರಿ ಕಾಯುತ್ತಿದ್ದ ನನಗೆ ಅವರು ನಿರಾಸೆ ಮಾಡುತ್ತಿರಲಿಲ್ಲ. ನಾಲ್ಕನೇ ತರಗತಿ ಮುಗಿಸಿದ್ದ ನಾನು ಐದನೇ ತರಗತಿಯಿಂದ ತಮಿಳನ್ನು ಓದಲು-ಬರೆಯಲು ಕಲಿಯಬೇಕಾಯಿತು. ಕಲಿತ ಕನ್ನಡ ದೂರವಾಗಲಾರಂಭಿಸಿ, ಸುತ್ತಮುತ್ತ, ಶಾಲೆ, ಆಟದ ಮೈದಾನ, ಸಿನಿಮಾ, ನಾಟಕ ಎಲ್ಲಿ ನೋಡಿದರೂ ತಮಿಳಿನ ವಾತಾವರಣದಲ್ಲಿ ಬೆಳೆಯಬೇಕಾದ ನನಗೆ "ಸಾಹಿತಿ ಚಿಕ್ಕಪ್ಪ ನಂತಹವರ ಅಮೃತ ಸಹವಾಸ

ದೂರವಾಗಿ, ನನ್ನ ಎಸ್.ಎಸ್.ಎಲ್.ಸಿ. ಮುಗಿಸಿ ಬೆಂಗಳೂರಿಗೆ ಪುನಃ ಹಿಂದಿರುಗುವಷ್ಟರಲ್ಲಿ ನನ್ನ ಮೇಲೆ ತಮಿಳಿನ ಪ್ರಭಾವ ಹೆಚ್ಚಾಗಿಬಿಟ್ಟಿತ್ತು''.

ಆದರೆ ಕನ್ನಡದ ಕಲಿ, ವೀರ ಕೇಸರಿ, ಕನ್ನಡದ ಶಿಸ್ತು ಬದ್ಧ ಸಿಪಾಯಿ ಸಾಹಿತಿ ಚಿಕ್ಕಪ್ಪನ ಮಡಿಲಿಗೆ ಮತ್ತೊಮ್ಮೆ ಬಿದ್ದೆನೆಂದರೆ ಅವರು ಸುಮ್ಮನೆ ಬಿಡುವರೇ? ಸಮಯ ಸಿಕ್ಕಾಗಲೆಲ್ಲಾ ಅಮೃತ ವರ್ಷಿಣಿ ಕನ್ನಡಮ್ಮನ ಮಡಿಲಿಗೆ ನನ್ನನ್ನು ಒಪ್ಪಿಸಲು ಅವರು ಪಟ್ಟ ಪರಿಶ್ರಮ ಅಷ್ಟಿಷ್ಟಲ್ಲ.

ನಮ್ಮ ತಂದೆ ಹಾಗೂ ಸಾಹಿತಿ ಚಿಕ್ಕಪ್ಪನ ಬಾಂಧವ್ಯ ಅನುಪಮವಾದದ್ದು. ಸಮಯ ಸಿಕ್ಕಾಗಲೆಲ್ಲಾ ಇಬ್ಬರೂ ಒಬ್ಬರನ್ನೊಬ್ಬರು ಬಿಟ್ಟಿರುತ್ತಿರಲಿಲ್ಲ. ನಮ್ಮ ಚಿಕ್ಕಮ್ಮ - ಲಚ್ಚಕ್ಕರನ್ನು ಪದೇ ಪದೇ ಕಾಫಿ ಕೇಳಿ ಪೀಡಿಸುತ್ತಿದ್ದುದು ಇಬ್ಬರಿಗೂ ಖುಷಿ ಸಂಗತಿ. ನಮ್ಮ ತಂದೆಗೆ ಸಾಹಿತ್ಯಾಸಕ್ತಿ ಇಲ್ಲದಿದ್ದರೂ, ಈ ಸಾಹಿತ್ಯಾರಾಧಕರ ಬಾಂಧವ್ಯ ಹೇಗೆ ಒಗ್ಗೂಡಿತೋ ಊಹಿಸಲೂ ಅಸಾಧ್ಯ. ಇನ್ನು ನಮ್ಮ ತಾಯಿಯಂತೂ ಸಾಹಿತಿಗಳ ಪರಮಭಕ್ತರು. ನಮ್ಮಮ್ಮನವರಿಗೆ ಇಷ್ಟವಾದ ಪುಸ್ತಕಗಳನ್ನು ಒದಗಿಸುವುದರಲ್ಲಿ ಚಿಕ್ಕಪ್ಪ ನಿಸ್ಸಿಮರು. ಹಾಗೆ ನಮ್ಮ ತಾಯಿಯೂ ಸಹ ಸಾಹಿತಿಗಳಿಗೆ ಇಷ್ಟವಾದ ರುಚಿಕರ ವೈವಿಧ್ಯಮಯ ಖಾದ್ಯಗಳನ್ನು ತಯಾರಿಸಿ ಕೊಡುತ್ತಿದ್ದರು. ನಮ್ಮ ತಂದೆ ತಾಯಿ ಇಂದು ಬದುಕಿದ್ದಿದ್ದರೆ ಅವರಿಗೆ ಆಗುತ್ತಿದ್ದ ಖುಷಿಯೇ ವಿಶೇಷವಾಗಿರುತ್ತಿತ್ತು.

ವೈದ್ಯಕೀಯ ವಿದ್ಯಾರ್ಥಿನಿಯಾದ ನನ್ನ ಮಗಳು "ಅನಘಾಳಿಗೆ ಕೆಲವು ಕನ್ನಡದ ಪುಸ್ತಕಗಳನ್ನು ಪರಿಚಯಿಸುತ್ತಾ. ವಿಧಾನ ಸೌಧದಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿರುವ ನನ್ನ ಪತ್ನಿ ಪ್ರತಿಭಾಳಿಗೆ ಅವಳ ನೆಚ್ಚಿನ "ಹರಿಕಥಾಮೃತಸಾರ" ಗ್ರಂಥವನ್ನು ನೀಡಿ ಅದರ ಬಗ್ಗೆ ಬರೆದಿರುವ ಟೀಕೆ ಟಿಪ್ಪಣಿಗಳನ್ನು ಪರಿಚಯ ಮಾಡಿಸುತ್ತಾ, ನಡುನಡುವೆ ಅವಳ ಭಕ್ತಿ ಕುಸುಮಾಂಜಲಿಯನ್ನು ಆಸ್ವಾದಿಸುತ್ತಾ, ವಿಶೇಷವಾಗಿ ನನ್ನನ್ನು ರೇಗಿಸುತ್ತಾ, ಈಗಲೂ ದೊಡ್ಡವರೊಂದಿಗೆ ದೊಡ್ಡವರಾಗಿ, ಮಕ್ಕಳೊಂದಿಗೆ ಮಗುವಿನಂತೆ, ಅವರ ವಯಸ್ಸಿನ ಆಸಕ್ತಿಗೆ ತಕ್ಕಂತೆ ಪ್ರಾಸಬದ್ಧವಾಗಿ ಮಾತನಾಡುತ್ತಾ ರಂಜಿಸುವ ನಮ್ಮ ಸಾಹಿತಿ ಚಿಕ್ಕಪ್ಪ ನಮಗೆಲ್ಲಾ ನೆಚ್ಚಿನ-ಮೆಚ್ಚಿನ ಚಿಕ್ಕಪ್ಪ, ಅವರ ಈ ಸನ್ಮಾನ ಗ್ರಂಥದಲ್ಲಿ ನನ್ನ "ಅಣು" ಮಾತ್ರ ಸೇವೆಯನ್ನು ಸಲ್ಲಿಸಲು ಅವಕಾಶ ನೀಡಿದ್ದಕ್ಕೆ ನಾನು ಚಿರಋಣಿ.

******

ನನಗೂ ಚಿಕ್ಕಪ್ಪ

ಕೆ.ಆರ್. ಪ್ರತಿಭಾ
ಚರವಾಣಿ : ೮೯೫೧೦೯೮೪೮

ನನಗೆ ನಮ್ಮ ಚಿಕ್ಕಪ್ಪ - ಶ್ರೀಯುತ ಅನಾಜಿಯವರ ಪರಿಚಯವಾದದ್ದು 1998 ರಲ್ಲಿ. ಚಿಕ್ಕಪ್ಪ ಎಂದರೆ ನನ್ನ ಪತಿ ಶ್ರೀ ಅವಿನಾಶ್ ಅವರ ಚಿಕ್ಕಪ್ಪ, ಆದರೆ ನನ್ನನ್ನು ಎಂದಿಗೂ ತಮ್ಮ ಮನೆಯ ಸೊಸೆ ಎಂದು ಕಾಣದೆ, ಮಗಳಂತೆ ಕಂಡಿದ್ದರಿಂದ ಅವರು ನನಗೂ ಸಹ ಚಿಕ್ಕಪ್ಪ ಆಗಿಬಿಟ್ಟರು.

ಚಿಕ್ಕಪ್ಪ ಎಂದರೆ ಪುಸ್ತಕದಿಂದಲೇ ನನಗೆ ಪರಿಚಯವಾಗಿದ್ದು. ನಮ್ಮ ತಂದೆ, ಅಣ್ಣ, ಅತ್ತಿಗೆ ಇವರೆಲ್ಲರ ಜೊತೆ ಮೊದಲ ಬಾರಿಗೆ ಇವರ ಮನೆಗೆ ಬಂದಾಗ, ಮೊದಲ ಆಕರ್ಷಣೆ ಇವರ ಮನೆಯಲ್ಲಿರುವ ಗ್ರಂಥಾಲಯ. ಚಿಕ್ಕಪ್ಪ ನಮ್ಮೆಲ್ಲರಿಗೂ ಇವರ ಗ್ರಂಥಾಲಯದ ಪರಿಚಯ ಮಾಡಿಸಿದ್ದರು. ಅಷ್ಟೊಂದು ಪುಸ್ತಕಗಳನ್ನು ಒಂದು ಮನೆಯಲ್ಲಿ ಕಂಡಿದ್ದು ಅದೇ ಮೊದಲು. ನಾನು ಈ ಬಗ್ಗೆ ನನ್ನ ಎಲ್ಲ ಪರಿಚಿತರಿಗೆ, ನೆಂಟರಿಗೆ ಹೆಮ್ಮೆಯಿಂದ ತಿಳಿಸಿದ್ದೆ. ಈಗಲೂ ಸಹ ನನ್ನ ಎಲ್ಲ ಸಹೋದ್ಯೋಗಿಗಳಿಗೆ ಇವರ ಗ್ರಂಥಾಲಯದ ಬಗ್ಗೆ ಸದಾ ಹೇಳುತ್ತಿರುತ್ತೇನೆ. ಇವರ ಗ್ರಂಥಾಲಯದಲ್ಲಿ ಎಲ್ಲ ರೀತಿಯ ಪುಸ್ತಕಗಳೂ ಇವೆ. ರಾಮಾಯಣ, ಮಹಾಭಾರತ, ಭಗವದ್ಗೀತೆ, ದಾಸ ಸಾಹಿತ್ಯ, ವಚನ ಸಾಹಿತ್ಯ, ಕಾದಂಬರಿಗಳು, ಎಲ್ಲಾ ವರ್ಗದ ಪಠ್ಯಪುಸ್ತಕಗಳು, ಅತ್ಯಂತ ಹಳೆಯ ಅಂದರೆ ಶತಮಾನಗಳಷ್ಟು ಹಳೆಯ ಪುಸ್ತಕಗಳನ್ನೂ ಸಹ ಜೋಪಾನ ಮಾಡಿ ಸಂಗ್ರಹಿಸಿದ್ದಾರೆ.

ಚಿಕ್ಕಪ್ಪನವರ ಸರಳತೆ, ಸಹೃದಯತೆ ಹೇಗೆಂದರೆ, ಅವರು ಎಲ್ಲರ ಜೊತೆ ಸುಲಭವಾಗಿ ಬೆರೆಯುತ್ತಾರೆ. ಮಕ್ಕಳು, ದೊಡ್ಡವರು, ಹೆಂಗಸರು, ಗಂಡಸರು, ಬಡವರು, ಶ್ರೀಮಂತರು, ಬುದ್ಧಿವಂತರು, ಅಲ್ಪ ಜ್ಞಾನಿಗಳು ಎಂಬ ಯಾವುದೇ ಭೇದವಿಲ್ಲ. ಇವೆಲ್ಲವೂ ಅವರಿಗೆ ಸಹಜವೇ ಸರಿ. ಈ ರೀತಿಯ ನಡವಳಿಕೆ ನಾವು ಪುಸ್ತಕಗಳಲ್ಲಿ ಓದಬಹುದೇ ವಿನಃ ಪ್ರತ್ಯಕ್ಷವಾಗಿ ಕಾಣುವುದು ಅತ್ಯಂತ ವಿರಳ.

ನಾನು ಕಂಡ ಹಾಗೆ ಚಿಕ್ಕಪ್ಪ, ಅವರ ಮಾವ-ಅತ್ತೆಯವರನ್ನು ತಮ್ಮ ಸ್ವಂತ ತಂದೆ ತಾಯಿಯಂತೆ ಹಾಗೂ ನಾದಿನಿ-ಭಾವ ಮೈದುನಂದರರನ್ನು ತಮ್ಮ ಒಡಹುಟ್ಟಿದವರಂತೆ ಕಾಣುತ್ತಾರೆ. ಎಲ್ಲರೂ ಅವರಿಗೆ ಸಮಾನರು. ಅವರು ಸದಾ ಹಸನ್ಮುಖಿ ಮತ್ತು ಸ್ನೇಹಮಯಿ. ನಮ್ಮ ಮಾವನವರಾದ ದಿ॥ ಗೋಪಾಲ್ ರಾವ್ ರವರಿಗೆ ಚಿಕ್ಕಪ್ಪ ಅತ್ಯಂತ ಪ್ರೀತಿಪಾತ್ರ ವ್ಯಕ್ತಿ. ಯಾವುದೇ ಕಾರ್ಯಕ್ರಮಕ್ಕೆ ಚಿಕ್ಕಪ್ಪ ಬರುತ್ತಾರೆ ಎಂದು ತಿಳಿದರೆ, ತಾವು ಅಲ್ಲಿಗೆ ಬರಲು ಸುಲಭವಾಗಿ ಮತ್ತು ಖುಷಿಯಿಂದ ಒಪ್ಪುತ್ತಿದ್ದರು.

ಚಿಕ್ಕಪ್ಪನವರಿಗೆ ಇರುವ ಕನ್ನಡ ಭಾಷೆಯ ಅಭಿಮಾನವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಯಾವುದೇ ಮದುವೆ, ನಾಮಕರಣ ಇತ್ಯಾದಿ ಸಂದರ್ಭಗಳಲ್ಲಿ ಎಲ್ಲರ ಜೊತೆ ಮಾತನಾಡಿ,

ಉಭಯಕುಶಲೋಪರಿಯ ನಂತರ ಅವರ ಕೈಯಲ್ಲಿ ಪುಸ್ತಕವಿದ್ದೇ ಇರುತ್ತದೆ. ಅವರ ಪ್ರಪಂಚವೇ ಪುಸ್ತಕ ಮತ್ತು ಅವರ ಉಸಿರಿನಂತೆ ಪುಸ್ತಕ ಅವರ ಒಡನಾಡಿ. ಒಟ್ಟಿನಲ್ಲಿ ಅನಾಜಿ ಇದರ ಸಮಾನಂತರ ಪದ "ಪುಸ್ತಕ".

ಚಿಕ್ಕಪ್ಪನವರ ಮನೆಗೆ ಭೇಟಿ ನೀಡಿದಾಗಲೆಲ್ಲಾ, ನಮ್ಮ ಲಕ್ಷ್ಮೀದೇವಿ ಚಿಕ್ಕಮ್ಮನವರ ಜೊತೆ ನಾನು ಹೆಚ್ಚು ಮಾತನಾಡುತ್ತಿದ್ದರೂ, ಕನ್ನಡ ಪುಸ್ತಕಗಳು ನನ್ನ ಗಮನ ಸೆಳೆಯುವಂತೆ ಮಾಡುವ ನಮ್ಮ ಚಿಕ್ಕಪ್ಪನವರನ್ನು ನಾನು ಯಾವಾಗಲೂ ಯಾವುದಾದರೊಂದು ಪುಸ್ತಕ ಬರೆಯುವ, ವಿಮರ್ಶೆ ಮಾಡುವ, ಸಂಕಲನ ಕಾರ್ಯ, ಪುಸ್ತಕಗಳ ಕರಡು ಪ್ರತಿ ತಿದ್ದುವ ಮುಂತಾದ ಕೆಲಸಗಳನ್ನು ಮಾಡುತ್ತಿರುವಂತೆಯೇ ಕಾಣುವುದು.

ನನಗೆ ದಾಸ ಸಾಹಿತ್ಯದಲ್ಲಿ ಹೆಚ್ಚು ಆಸಕ್ತಿ. ಯಾವುದೇ ಹೊಸ ದೇವರ ನಾಮ ಕಲಿತಾಗ ಅದರ ಕಠಿಣ ಪದಗಳ ಅರ್ಥ, ಸಾಹಿತ್ಯದ ನಿಗೂಢತೆ ಬಗ್ಗೆ ಚಿಕ್ಕಪ್ಪ ಅರ್ಥವಾಗುವಂತೆ ತಿಳಿಸಿ ಹೇಳುತ್ತಾರೆ. ನನಗೆ ಹರಿಕಥಾಮೃತಸಾರದಲ್ಲಿ ಹೆಚ್ಚು ಒಲವಿರುವುದನ್ನು ಗಮನಿಸಿ, ನನಗೆ ಸುಲಭವಾಗಿ ಅರ್ಥವಾಗುವಂತೆ ಶ್ರೀ ಪದ್ಮನಾಭಾಚಾರ್ಯರವರು ರಚಿಸಿರುವ ಗ್ರಂಥವನ್ನು ನೀಡಿದ್ದಾರೆ. ಈಗಲೂ ಯಾವುದೇ ಅನುಮಾನ ಬಂದಲ್ಲಿ ಆ ಗ್ರಂಥದಿಂದ ಅರ್ಥೈಸಲು ಸಹಾಯವಾಗುತ್ತದೆ. ಶ್ರೀ ಪುರಂದರ ದಾಸರು, ವಿಜಯದಾಸರು ರಚಿಸಿರುವ ದೇವರನಾಮಗಳ ಪುಸ್ತಕಗಳನ್ನು ನೀಡಿ ನನಗೆ ಹೆಚ್ಚು ಹೆಚ್ಚು ದೇವರನಾಮಗಳನ್ನು ಕಲಿಯಲು ಉತ್ತೇಜಿಸಿದ್ದಾರೆ. ಇದಲ್ಲದೆ, ಶ್ರೀ ಎಸ್.ಎಲ್. ಭೈರಪ್ಪ ರವರ ಕಾದಂಬರಿಗಳನ್ನು ನನಗೆ ಓದಲು ನೀಡಿ, ಓದುವ ಹವ್ಯಾಸ ಬೆಳೆಯುವಂತೆ ಮಾಡಿದ್ದಾರೆ. ಇವರ ಗ್ರಂಥಾಲಯದಲ್ಲಿ ನಾನು ನನ್ನ ಮೊದಲನೇ ತರಗತಿಯಲ್ಲಿ ಓದಿದ ಕನ್ನಡ ಪುಸ್ತಕವಿತ್ತು. ಒಮ್ಮೆ ಅದನ್ನು ಕಂಡ ನನಗೆ ಅತ್ಯಂತ ಸಂತೋಷವಾಗಿ, ಪುಸ್ತಕದ ಪ್ರತಿಯನ್ನು ನನ್ನ ಎಲ್ಲ ಸ್ನೇಹಿತರಿಗೂ ಹಂಚಿದ್ದೆ. ಆ ದಿನ ನನಗೆ ದೂರವಾಣಿ ಮೂಲಕ ಬಹಳಷ್ಟು ಜನ ಮಾತನಾಡಿ ಹಳೆಯ ನೆನಪುಗಳೊಂದಿಗೆ ನಮ್ಮ ಗುರುಗಳ ಸ್ಮರಣೆ, ನನ್ನ ತವರೂರು ಶ್ರೀನಿವಾಸಪುರ, ಅಲ್ಲಿನ ಶಾಲೆಯ ಬಗ್ಗೆ ಮೆಲುಕು ಹಾಕುವಂತೆ ಆಗಿತ್ತು. ಈ ರೀತಿಯ ಸಂದರ್ಭಗಳು ಜೀವನದಲ್ಲಿ ನಡೆಯುವಂತೆ ಮಾಡಿದ ಚಿಕ್ಕಪ್ಪನವರಿಗೆ ನಾನು ಅತ್ಯಂತ ಚಿರಋಣಿ.

ಒಟ್ಟಿನಲ್ಲಿ ಚಿಕ್ಕಪ್ಪ ನನಗೆ ಸುಮಾರು 27 ವರ್ಷಗಳಿಂದ ಪರಿಚಯವಿದ್ದಾರೆ. ಮೊದಲ ದಿನ ಅವರ ವ್ಯಕ್ತಿತ್ವ ಹೇಗೆ ಇತ್ತೋ ಈಗಲೂ ಅದೇ ಸರಳತೆ, ಸಹೃದಯತೆ, ಸದಾ ಹಸನ್ಮುಖಿ–ಸ್ನೇಹಮಯಿ ವ್ಯಕ್ತಿತ್ವ, ಅದೇ ರೀತಿಯ ಅಧ್ಯಯನ ಆಸಕ್ತಿ ಅವರಲ್ಲಿ ಇರುವುದು ಅತ್ಯಂತ ಆಶ್ಚರ್ಯವಾಗುತ್ತದೆ. ಇವರ ಈ ಗುಣಗಳು ನಮಗೆಲ್ಲಾ ಸ್ಫೂರ್ತಿದಾಯಕ. ಭಗವಂತ ನಮ್ಮ ಚಿಕ್ಕಪ್ಪ, ಚಿಕ್ಕಮ್ಮ ಮತ್ತು ಅವರ ಮಗಳು ಕ್ಷಮಾರವರ ಕುಟುಂಬಕ್ಕೆ ಆಶೀರ್ವದಿಸಲಿ ಎಂದು ಆಶಿಸುವ.

*****

"ನನ್ನ ಅಕ್ಕ ಭಾವ ಇಬ್ಬರೂ ಸಾಹಿತಿಗಳೇ"

ಪದ್ಮಜಾ ಸತ್ಯನಾರಾಯಣ

ಚರವಾಣಿ : ೭೭೭೬-೦೭೫-೫೭೮೨

ನಾನು ಪದ್ಮಜಾ ಸತ್ಯನಾರಾಯಣ, ನಿವೃತ್ತ ಬ್ಯಾಂಕ್ ಅಧಿಕಾರಿ. ನಮ್ಮೆಲ್ಲರ ಪ್ರೀತಿಯ ತಂದೆಯ ಸ್ಥಾನದ ಭಾವಾಜಿ ಸಾಹಿತಿ-ಜಿ. ಅಶ್ವತ್ಥನಾರಾಯಣ, ಅಂದರೆ ಅವರ ಪ್ರೀತಿಯ ಸಾಹಿತಿ ಪತ್ನಿ ಲಕ್ಷ್ಮೀದೇವಿ (ಲಚ್ಚಕ್ಕ), ನನ್ನ ಅಕ್ಕ ಅಂತ ಬಹಳ ಹೆಮ್ಮೆ ಆಗುತ್ತೆ.

ನಮ್ಮ ಮನೆಯಲ್ಲಿ ನಾನು ಇವರೆಲ್ಲರಿಗಿಂತ ಚಿಕ್ಕವಳು. ನಾನು ಮೊದಲ ಸಲ ನಮ್ಮ ಸಾಹಿತಿ ಭಾವಾಜಿನ ನೋಡಿದಾಗ, ಇವರೇನಪ್ಪ, ಹೀಗೆ ಜೋಳಿಗೆ ಚೀಲ, ಹೆಗಲಿಗೆ ಇಳಿಸಿ, ಒಂದಷ್ಟು ಪುಸ್ತಕ ಹಿಡಿದು ಬರುತ್ತಾರೆ ಅಂತ ಇದ್ದೆ. ಇವರ ಬಗ್ಗೆ ನನಗೆ ಸರಿಯಾಗಿ ಪರಿಚಯ ಇರಲಿಲ್ಲ.

ನನ್ನ ಅಕ್ಕ ಸಾಹಿತಿ, ವಾಗ್ಮಿ, ಧೈರ್ಯವಂತೆ. ಝಾನ್ಸಿರಾಣಿ, ವಾಗ್ವಾದದಲ್ಲಿ ಗೆಲ್ಲೋ ಜಾಣೆಗೆ ಗಂಡನಾಗಬೇಕಾದರೆ ಇವರೂ ಇನ್ನೂ ಒಂದು ಕೈ ಮುಂದೆ ಇರಬೇಕು ಅಂತ ಅನಿಸಿದ್ದು ನಿಜ. ಆಗಿನ್ನೂ ನಾನು ಶಾಲೆಯಲ್ಲಿ ಓದುತ್ತಿದ್ದೆ.

ಇವರು ಬಹಳ ಆದರ್ಶ ದಂಪತಿಗಳು. ಇವರ ಮದುವೆ ಬಹಳ ಸರಳವಾಗಿ ಮಾಗಡಿ ರಂಗನಾಥನ ಸನ್ನಿಧಿಯಲ್ಲಿ ಅಚ್ಚುಕಟ್ಟಾಗಿ, ಶಾಸ್ತ್ರೋಕ್ತವಾಗಿ ಗುರುಹಿರಿಯರ ಸಮಕ್ಷಮ ನಡೆಯಿತು. ಹಾ... ನೆನಪಿಗೆ ಬಂತು, ನಾನೇ ಇವರ ಮದುವೆಗೆ ಕಳಶಗಿತ್ತಿ. ಸಂಭ್ರಮವೋ ಸಂಭ್ರಮ.

ಒಟ್ಟಿನಲ್ಲಿ ಇವರಿಬ್ಬರು ನನ್ನ ಮೆಚ್ಚಿನ ಅಕ್ಕ ಭಾವ, ನಾನು ಇವರ ಚಿಕ್ಕಮ್ಮನ ಮಗಳಾಗಿದ್ದರೂ. ನನ್ನ ಸ್ವಂತ ಅಕ್ಕ ಭಾವರಂತಿದ್ದಾರೆ.

ಇವರು ಮಾತನಾಡುವುದೇ ಪ್ರಾಸಬದ್ಧವಾಗಿ, ರಸಭರಿತವಾಗಿ, ನಮ್ಮ ಅಕ್ಕನ ಕುವೆಂಪು ರಾಮಾಯಣ ಕೇಳಬೇಕು, ನಿರರ್ಗಳವಾಗಿ ತಾಯಿ ಶಾರದೆ ಹರಿದು ಬರುತ್ತಾಳೆ. ನಕಾರಾತ್ಮಕ ಪಾತ್ರಗಳು ಹೇಗೆ ಸಕಾರಾತ್ಮಕ ಆಗುತ್ತವೆ. ನಮ್ಮ ಭಾವನವರೂ ಏನೂ ಕಮ್ಮಿಯಿಲ್ಲ. ತಾಯಿ ಶಾರದೆ, ನಾಟ್ಯ ಸರಸ್ವತಿ ಆಗುತ್ತಾಳೆ, ಇವರ ಭಾಷಣಕ್ಕೆ ನಿಂತರೆ.

ತಾಯಿ ಶಾರದೆಯ ದಯೆಯಿಂದ ಇವರ ಸಾಹಿತ್ಯ ಸೇವೆ ಹೀಗೇ ನಿರಂತರವಾಗಿ ಸಾಗಲಿ ಶ್ರೀಹರಿಯು ಇವರಿಬ್ಬರಿಗೂ ಆಯುರೋಗ್ಯ ನೆಮ್ಮದಿ, ಸುಖ ಸಂಪತ್ತು ಕೊಟ್ಟು, ಸಂತೋಷವಾಗಿ ನಮ್ಮ ಅಕ್ಕ ಭಾವರಾಗಿ ಇರಲಿ ಎಂದು ಕನ್ನಡಾಂಬೆಯನ್ನು ಭಕ್ತಿಯಿಂದ ಕೇಳಿಕೊಳ್ಳುತ್ತಿದ್ದೇನೆ.

******

ಸಾಹಿತ್ಯ ರಂಗದಲ್ಲೇ ಮಹಾನುಭಾವ-ಭಾವ

ಜಾನಕಿ ಶ್ರೀನಿವಾಸ್, ಎಂ.ಎ
ಚರವಾಣಿ : ೮೦೮೮೪೪೪೮೪೪೮೮

ಎಂದರೋ ಮಹಾನುಭಾವಲು ಅಂದರಿಕಿ ವಂದನಮುಲು

ನಾದಬ್ರಹ್ಮ ಶ್ರೀ ತ್ಯಾಗರಾಜಸ್ವಾಮಿಯವರು ತಮ್ಮ ಪಂಚರತ್ನ ಕೀರ್ತನೆಗಳಲ್ಲಿ 'ಶ್ರೀ'ರಾಗದಲ್ಲಿ ರಚಿಸಿರುವ ಐದನೆಯ ಕೃತಿಯ ಆರಂಭದ ಸಾಲುಗಳು ಇಂದು ನಮ್ಮ ಲೇಖನದ ಕೇಂದ್ರ ಬಿಂದು, ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ಅಕ್ಷರಶಃ ಒಪ್ಪುತ್ತದೆ.

ಇವರು ವಿದ್ವತ್ತಿನ ಗಣಿ, ತುಂಬಿದ ಕೊಡ, ಸಾಹಿತ್ಯ, ಸಂಸ್ಕೃತಿಗಳ ಸಾಗರ, ಕನ್ನಡಾಂಬೆಯ ಹೆಮ್ಮೆಯ ಕುವರ. ಇಂತಹ ವ್ಯಕ್ತಿತ್ವವನ್ನು ಹೊಂದಿರುವ ಇವರು ಮಹಾನುಭಾವರೇ ಸರಿ. ಇವರಿಗೆ ವಂದನೆಗಳನ್ನು ಸಲ್ಲಿಸುವ ಸೌಭಾಗ್ಯ ಸಿಕ್ಕಿರುವುದೇ ನಮಗೆ ಸಿಕ್ಕ ಸುವರ್ಣಾವಕಾಶ.

ಅನಾಜಿ ಅವರ ಹೆಸರಿನಲ್ಲೇ ಇರುವ ಅತ್ಯಂತ ಮಹತ್ವವುಳ್ಳ, ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಒದಗಿಸುವ, ಎಲ್ಲರಿಗೂ ಆಶ್ರಯ ನೀಡುವ ವಿಶಾಲ ವೃಕ್ಷ, ಅಶ್ವತ್ಥವೃಕ್ಷದಂತೆ ಇವರ ವ್ಯಕ್ತಿತ್ವ. ಸಾಹಿತ್ಯ ಕ್ಷೇತ್ರದಲ್ಲಾಗಲಿ, "ವಚನಸಾಹಿತ್ಯ, ದಾಸ ಸಾಹಿತ್ಯ, ಜೈನ ಸಾಹಿತ್ಯ, ಸೌಂದರ್ಯ ಲಹರಿ, ಹಳೆಗನ್ನಡ, ಸಂಪಾದನ ಕಾರ್ಯ, ಸಂಗ್ರಹ ಕಾರ್ಯ ಹೀಗೆ ಅಶ್ವತ್ಥ ವೃಕ್ಷದಂತೆ ಇವರ ಪ್ರತಿಭಾ ಭಂಡಾರ ವಿಶೇಷವಾದದ್ದು ಹಾಗೂ ವಿಶಿಷ್ಟವಾದದ್ದು''.

ಪ್ರೊಫೆಸರ್ ಅವರು ನನ್ನ ಹಿರಿಯ ಸೋದರಮಾವ ಎಂ.ಆರ್. ರಾಮರಾಯರ ಅಳಿಯ. ಹಾಗಾಗಿ ನಾನು ಇವರಿಗೆ ವರಸೆಯಲ್ಲಿ ನಾದಿನಿ. ನಮ್ಮ ಯಜಮಾನರ ಹಿರಿಯ ಸೋದರಮಾನವ ಮಗ ಬಿ.ಎಸ್. ರಾಮರಾವ್ ಅವರು ಅನಾಜಿ ಅವರ ಆಪ್ತ ಗೆಳೆಯರು, ಬಾಲ್ಯ ಸ್ನೇಹಿತರು.

ಪ್ರಶಸ್ತಿಗಳ ಸರದಾರ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಗುತ್ತಿಗೆದಾರ, ಮೃದುಭಾಷಿ, ಎಲ್ಲರೂ ಬೆಳೆಯಬೇಕೆಂಬ ಹಪಹಪಿ, ತಾಳ್ಮೆಯ ಪ್ರತಿರೂಪ, ಹುರಿದುಂಬಿಸುವ ಕಲೆ, ಪುಸ್ತಕ ಭಂಡಾರವನ್ನು ವಿಸ್ತರಿಸುತ್ತಲೇ ಇರುವ ಪುಸ್ತಕಾಸಕ್ತ. ಇವರು ಸಾಹಿತ್ಯ ಕ್ಷೇತ್ರದಲ್ಲಿ ನೀಡಿದ, ನೀಡುತ್ತಿರುವ ಕೊಡುಗೆ, ಅವರಿಗೆ ಸಂದ ಪ್ರಶಸ್ತಿಗಳು ನಿಜಕ್ಕೂ ಹೆಮ್ಮೆ ಪಡುವ ಸಂಗತಿ.

ನಾನು ಈಗ ಸುಮಾರು ಐವತ್ತು ವರುಷಗಳಿಂದ ಗೋವಾದಲ್ಲಿ ನೆಲೆಸಿದ್ದೇನೆ. ಹಾಗಾಗಿ ಪ್ರೊಫೆಸರ್ ಅವರನ್ನು ಭೇಟಿ ಮಾಡುತ್ತಿದ್ದುದ್ದು ಅಪರೂಪವಾಗಿ. ಆದರೆ ಲಕ್ಷ್ಮೀದೇವಿಯವರು ನಮ್ಮ ನೆಚ್ಚಿನ ಮಾವನ ಮಗಳು. ಅವರ ಒಡನಾಟ ತುಂಬಾ ಇತ್ತು ಬಾಲ್ಯದಲ್ಲಿ. ಅದರಲ್ಲಿ ನಮ್ಮ ತಂದೆಯವರು ಸಣ್ಣಕತೆಗಾರ ಕೆ. ಗೋಪಾಲಕೃಷ್ಣರಾಯರು ಬದುಕಿದ್ದಾಗ ಸಾಹಿತ್ಯಾಸಕ್ತೆ ಸಾಹಿತ್ಯಪ್ರೇಮಿ ಕನ್ನಡ ಭಾಷೆ

ಉಪನ್ಯಾಸಕಿ ಲಕ್ಷ್ಮೀದೇವಿ ಆಗಾಗ ನಮ್ಮ ಮನೆಗೆ ಬರುವ ವಾಡಿಕೆ ಇತ್ತು. ಅದರಲ್ಲೂ ಅವರು ಎ.ಪಿ.ಎಸ್. ಕಾಲೇಜಿನಲ್ಲಿ ಕೆಲಸ ಮಾಡುವಾಗ, ಸಮಯ ಸಿಕ್ಕಾಗ ಒಮ್ಮೊಮ್ಮೆ ತಮ್ಮ ಸೋದರತ್ತೆಯನ್ನು ಕಾಣಲು, ನಮ್ಮ ತಂದೆಯವರೊಂದಿಗೆ ಸಾಹಿತ್ಯದ ಬಗ್ಗೆ ಚರ್ಚಿಸುತ್ತಿದ್ದ ನೆನಪು. ನಾನು ವಿಜಯಾ ಕಾಲೇಜಿನಲ್ಲಿ ಕನ್ನಡ ಆನರ್ಸ್ ಓದುವಾಗ ನನ್ನ ತಂದೆಯವರಿರಲಿಲ್ಲ. ಆಗ ಲಕ್ಷ್ಮೀದೇವಿಯವರು ನನಗೆ ತುಂಬಾ ನೆರವು ನೀಡಿ, ಪ್ರೋತ್ಸಾಹಿಸಿದ್ದಾರೆ. ನಮ್ಮ ತಂದೆಯವರ ಅರವತ್ತನೇ ವರುಷದ ಹುಟ್ಟುಹಬ್ಬದ ಮರುದಿನವೇ ನಮ್ಮ ತಂದೆಯವರು ತೀರಿಕೊಂಡಾಗ ಈ ಎರಡೂ ಸಂದರ್ಭಗಳಲ್ಲಿ 'ಪ್ರಜಾಮತ' ಪತ್ರಿಕೆಯಲ್ಲಿ ದೀರ್ಘ ಲೇಖನಗಳನ್ನು ಬರೆದಿದ್ದಾರೆ. ಇಂದೂ ಆ ಎರಡೂ ಪತ್ರಿಕೆಗಳ ಪ್ರತಿ ನನ್ನ ಬಳಿ ಇದೆ.

ಅನಾಜಿ ಅವರು ಸಾಹಿತ್ಯಾಸಕ್ತರಿಗೆ ಎಷ್ಟು ವಿಧಗಳಲ್ಲಿ ನೆರವು ನೀಡುತ್ತಾರೆ, ಹುರಿದುಂಬಿಸುತ್ತಾರೆ ಅದು ಯಶಸ್ಸನ್ನು ಕಾಣುವವರೆಗೂ ಹೆಜ್ಜೆ ಹೆಜ್ಜೆಗೂ ನೆರವು ನೀಡುತ್ತಾ ಅದು ಯಶಸ್ವಿ ಆದಾಗ ಅವರು ಪಡುವ ಹೆಮ್ಮೆ ನಿಜಕ್ಕೂ ಸೋಜಿಗ ಪಡುವಂಥದ್ದು. ಇದರ ಅನುಭವ ಸ್ವತಃ ಸಾಹಿತ್ಯಾಭಿಮಾನಿ, ಸಾಹಿತ್ಯದ ವಿದ್ಯಾರ್ಥಿನಿ, ಸಾಹಿತಿಗಳ ಮಗಳಾದ ನನ್ನ ಅನುಭವವೆಂಬುದು ನನಗೆ ಹೆಮ್ಮೆಯ ಗರಿ ಮೂಡಿಸಿದೆ.

೧೯೬೦ ರಿಂದ ೧೯೭೬ರವರೆಗೆ ಇದ್ದ ನಮ್ಮ ತಂದೆಯವರ ಪುಸ್ತಕಗಳ, ಲೇಖನಗಳ ಹುಡುಕಾಟಕ್ಕೆ 'ಓಂಕಾರ' ಹಾಕಿದವರು (೨೦೧೦) ನೆರವು ನೀಡಿ, ಮಾರ್ಗದರ್ಶಕರಾಗಿ, ವಿಶೇಷ ನೆರವು ನೀಡಿದ್ದರ ಫಲವೇ ೨೦೧೧ ರಿಂದ ೨೦೧೫ ರವರೆಗೆ ಈ ಅವಧಿಯಲ್ಲಿ ನಮ್ಮ ತಂದೆಯವರು ಗತಿಸಿ ಐವತ್ತು ವರುಷಗಳ ನಂತರ, ಅವರ ಎಲ್ಲಾ ಸಾಹಿತ್ಯ ಪ್ರಕಾರಗಳು, ಸಣ್ಣಕತೆ, ಪ್ರಬಂಧ ನಾಟಕ ಗೀತೆಗಳು, ಜೊತೆಗೆ ಅವರ ಗೀತೆಗಳ ಧ್ವನಿಸುರುಳಿ, ಆಂಗ್ಲ ಭಾಷೆಗೆ ಭಾಷಾಂತರಗೊಂಡ ಸಣ್ಣಕತೆಗಳ ಸಂಗ್ರಹ, ಹಾಗೂ ಅವರನ್ನು ನೆನೆದು, ಸಂಪಾದಿಸಿದ ಲೇಖನಗಳು, ಪುಸ್ತಕ 'ಮಾಸದ ನೆನಪು' ಇಷ್ಟೂ ಬೆಳಕಿಗೆ ಬಂದದ್ದು ಮುಖ್ಯವಾಗಿ ಪ್ರೊ. ಜಿ. ಅಶ್ವತ್ಥನಾರಾಯಣ ಹಾಗೂ ಹಿರಿಯ ಸಾಹಿತಿಗಳು, ನನ್ನ ನೆಚ್ಚಿನ ಗುರುಗಳು ಮತ್ತು ಬಹಳ ವರ್ಷಗಳ ಹಿಂದೆ ಸುಮಾರು ಮೂವತ್ತು ವರುಷಗಳ ಹಿಂದೆ ಹಾ.ಮಾ.ನಾಯಕ್ ಅವರು ಹೇಳಿದ ಕಿವಿಮಾತು ''ಈ ಸಂಗ್ರಹದ ಕೆಲಸವನ್ನು ಗೋಕ್ರೃ ಅವರ ಮಗಳಾಗಿ ನೀವೇ ಮಾಡಬೇಕು'' ಎಂಬುದು.

ಎಷ್ಟೋ ವೇಳೆ ದಾರಿಗಳನ್ನು ತೋರಿಸುವ ಮಾರ್ಗದರ್ಶನ ಸಿಗುತ್ತದೆ. ಆದರೆ ಕಾಣುವ ಹಲವಾರು ಮಾರ್ಗಗಳಲ್ಲಿ ಯಾವ ಮಾರ್ಗದಲ್ಲಿ ನಡೆಯಬೇಕೆಂಬುದನ್ನು ಯಾವ ಮಾರ್ಗದಲ್ಲಿ ಯಾವ ರೀತಿಯಲ್ಲಿ ನಡೆದರೆ ನಮ್ಮ ಗುರಿಯನ್ನು ಮುಟ್ಟಬಹುದೆಂಬುದನ್ನು ನನಗೆ ತಿಳಿಸಿಕೊಟ್ಟವರು ನಮ್ಮ ನೆಚ್ಚಿನ ಲಕ್ಷ್ಮೀದೇವಿಯವರ ಪತಿ, ಪ್ರೊ. ಜಿ. ಅಶ್ವತ್ಥನಾರಾಯಣ ಎಂಬುದರಲ್ಲಿ ಎರಡು ಮಾತಿಲ್ಲ. ನಿಜಕ್ಕೂ ಇವರು ''ಕನ್ನಡಸ ಪರಿಚಾರಿಕ'' ಎಂಬುದು ಹೆಗ್ಗಳಿಕೆಯ ವಿಷಯ.

ಎಂದರೋ ಮಹಾನುಭಾವುಲು, ಅಂದರಿಕಿ ವಂದನಮುಲು.

******

ನನ್ನ ಓದಿಗೆ ಪ್ರೋತ್ಸಾಹಕರು

ವೀಣಾ
ಚರವಾಣಿ : ೮೭೯೨೧೯೪೪೪೧

ಅಶ್ವತ್ಥನಾರಾಯಣ ಅವರ ಅಳಿಯ ''ಜಯರಾಂ'' ಅವರ ಹಿರಿಯಕ್ಕ. ನನ್ನ ತಮ್ಮನ ಮದುವೆಯ ನಂತರ, ನಮ್ಮ ಬಾಂಧವ್ಯ ಬೆಳೆದು ಬಂದಿತು. ಆದರೂ, ನನ್ನ ಮತ್ತು ಅಶ್ವತ್ಥನಾರಾಯಣ ಅವರ ಸಂಬಂಧಕ್ಕೆ ಈ ಮದುವೆ ಒಂದು ನೆಪಮಾತ್ರವೆಂದು ಹೇಳಬಹುದು. ಕ್ಷಮಾಳ ಮದುವೆಯಾಗಿ ಅವಳು ನನ್ನ ತಮ್ಮನೊಂದಿಗೆ ಅಮೇರಿಕಾಕ್ಕೆ ತೆರಳಿದರೂ, ನಮ್ಮ ತಾಯಿ ಮತ್ತು ನಾನು ಆಗಾಗ್ಗೆ ಅಶ್ವತ್ಥನಾರಾಯಣ ಅವರ ಮನೆಗೆ ಬರುತ್ತಿದ್ದೆವು – ಅವರ ಸಹ ನಮ್ಮಲ್ಲಿಗೆ ಬಂದು ಹೋಗುತ್ತಿದ್ದರು. ಅಶ್ವತ್ಥನಾರಾಯಣ ಅವರೊಂದಿಗೆ ಮಾತನಾಡಲು ನಮ್ಮ ತಾಯಿಗೂ ಬಹಳ ಇಷ್ಟ. ಯಾವುದೇ ಸಂಸಾರದ ವಿಷಯಗಳನ್ನು ಪ್ರಸ್ತಾಪಿಸದೆ, ಕೇವಲ ಪುಸ್ತಕ, ಅವುಗಳ ಸೊಗಸು, ಅದರಲ್ಲಿನ ಸಾರವನ್ನು ಕುರಿತು ಮಾತನಾಡುತ್ತಿದ್ದ ಅವರೊಂದಿಗಿನ ಸಂಬಂಧ ಅದು ಕೇವಲ 'ಬೀಗರ' ಸಂಬಂಧವಾಗಿ ಉಳಿದಿರಲಿಲ್ಲ. ಒಳ್ಳೆ ಸ್ನೇಹಿತರಂತೆ, ಸಲೀಸಾಗಿ, ಯಾವ ಹಮ್ಮುಬಿಮ್ಮುಗಳಿಲ್ಲದೆ ಸಂಭಾಷಿಸುತ್ತಿದ್ದ ರೀತಿ ನಮ್ಮ ತಾಯಿಯವರನ್ನು ಆಕರ್ಷಿಸಿತ್ತು. ಅವರ ಜೊತೆಯಾಗಿ ಬರುತ್ತಿದ್ದ ನನ್ನನ್ನೂ ಸಹ.

ನಮ್ಮ ತಾಯಿಯ ಕಾಲಾನಂತರವೂ ನಮ್ಮ ಸ್ನೇಹ ಸಂಬಂಧ ಹೀಗೇ ಮುಂದುವರಿದಿದೆ. ಕನ್ನಡ ಭಾಗವತ, (ಸಂಸ್ಕೃತ–ಕನ್ನಡ) ಪತ್ರಿಕೆಯ ವಿಶೇಷಾಂಕಗಳು, ಕನ್ನಡ ಕಲಿಕೆಯ ಪುಸ್ತಕಗಳು ವ್ಯಾಕರಣ ಇತ್ಯಾದಿ ಪುಸ್ತಕಗಳನ್ನು ಕೊಟ್ಟು, ನನ್ನ ಓದುವಿಕೆಗೆ ಸಹಾಯ ಮಾಡಿದ್ದಾರೆ. ಈಗಲೂ ನನಗಾಗಿ ಕನ್ನಡದ ಹಲವಾರು ಮಾಸಪತ್ರಿಕೆಗಳನ್ನು ತೆಗೆದಿಟ್ಟು, ನನ್ನ ಮಗ ಮಹೇಶನ ಕೈಯಲ್ಲಿ ನನಗೆ ಕಳುಹಿಸುತ್ತಾರೆ. ನನ್ನ ಓದಿಗೆ ಪ್ರೋತ್ಸಾಹಕರು ಯಾರೇ ಆಗಲಿ ಕನ್ನಡ ಓದುಗರನ್ನು ಪ್ರೋತ್ಸಾಹಿಸುವುದು, ಅವರಿಗೆ ಓದಲು ಪುಸ್ತಕಗಳನ್ನು ಕೊಟ್ಟು ಹುರಿದುಂಬಿಸುವುದು. ಅವರ ವಿಶೇಷಗುಣ, ಈ ವಿಶಿಷ್ಟಗುಣವೇ ನಮ್ಮಿಬ್ಬರ ಕುಟುಂಬದ ಬಾಂಧವ್ಯವನ್ನು ಬೆಸೆಯಲು ಮುಖ್ಯಕಾರಣ.

****

ಸಾಹಿತ್ಯಾಭಿಮಾನಿಗಳಿಗೆ ಕೈಮರ

ಸರಸ್ವತಿ ನಾಗರಾಜ್
ಚರವಾಣಿ : ೯೮೪೪೮೭೪೩೫೫

ಗ್ರಂಥ ಸಂಪಾದಕರೂ, ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಜ್ಞಾನಿಗಳೂ ಆದ ಮಾನ್ಯ ಶ್ರೀ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಅನೇಕ ಗ್ರಂಥಗಳನ್ನು ಅಪ್ಪಟ ಕನ್ನಡಕ್ಕೆ ಅನುವಾದ ಮಾಡಿ ಜನ ಸಾಮಾನ್ಯರೂ ಓದಿ ಸಂತೋಷಪಡುವಂತೆ ಅನುಕೂಲ ಮಾಡಿರುತ್ತಾರೆ. ಅನೇಕ ಪದವಿಗಳನ್ನು ಪಡೆದಿರುವರ ಎಸ್.ಜೆ. ಪಾಲಿಟೆಕ್ನಿಕ್‌ನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ ಗಳಿಸಿರುವ ಇವರು ವಿವಿಧ ಸರ್ಕಾರಿ ಪದವಿ ಕಾಲೇಜುಗಳಲ್ಲಿ 30 ವರ್ಷಗಳ ಕಾಲ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಸಮಾಜ ಶಾಸ್ತ್ರ ಎಂ.ಎ., ಕನ್ನಡ ಎಂ.ಎ., ಶಾಸನಶಾಸ್ತ್ರ ಡಿಪ್ಲೊಮಾ, ಭಾಷಾ ಶಾಸ್ತ್ರ ಡಿಪ್ಲೊಮಾ ಗಳಿಸಿರುವ ಇವರು ಹೆಚ್. ಗುಂಡಪ್ಪನವರು ಮತ್ತು ಶ್ರೀಮತಿ ಜಾನಕಮ್ಮ ದಂಪತಿಗಳ ಪುತ್ರರಾಗಿ ಬೆಂಗಳೂರಿನಲ್ಲಿ ಜನಿಸಿದರು. ನಮ್ಮ ಅತ್ತೆಯವರಾದ ಶ್ರೀಮತಿ ಸೀತಮ್ಮನವರ ಸಹೋದರ ಎಂದು ಹೇಳಲು ಬಹಳ ಹೆಮ್ಮೆ ಎನಿಸುತ್ತದೆ.

ಇವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸೇವೆಸಲ್ಲಿಸಿ ಸಮಾಜಕ್ಕೆ ಬಹಳ ಉಪಕಾರ ಮಾಡಿದ್ದಾರೆ. ಐ.ಎ.ಎಸ್., ಕೆ.ಎ.ಎಸ್. ವಿದ್ಯಾರ್ಥಿಗಳಿಗೆ ಕನ್ನಡ ಶಿಕ್ಷಣ ನೀಡಿರುತ್ತಾರೆ. ಸರ್ಕಾರಿ ಅಧಿಕಾರಿಗಳಿಗೆ ಅಡಳಿತ, ಕನ್ನಡ ಶಿಬಿರಗಳನ್ನು ನಡೆಸಿದ್ದಾರೆ. ವಿದೇಶದಲ್ಲೂ ಇವರ ಕೊಡುಗೆ ಅಪಾರವಾಗಿದೆ. ಅಮೇರಿಕದ ಮೇರಿಲ್ಯಾಂಡ್ ನಲ್ಲಿ ಕನ್ನಡಿಗರ ಮಕ್ಕಳಿಗೆ ಕನ್ನಡ ಕಲಿಸಿರುತ್ತಾರೆ. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ದೇವುಡು ಪ್ರತಿಷ್ಠಾನ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿ, ಪಲಷತ್ತಿನ 100 ವರ್ಷಗಳ ಇತಿಹಾಸವನ್ನು ರಚಿಸಿರುತ್ತಾರೆ.

ಕರ್ನಾಟಕದಲ್ಲಿ ಬೇರೆ ಭಾಷೆಗಳಿಗೆ ಮುತುವರ್ಜಿ ವಹಿಸಿ, ಕನ್ನಡದ ಮಹತ್ವವೇನು, ಅದರ ಹಿಲಮೆ ಎಷ್ಟು ಎನ್ನುವುದನ್ನು ತಿಳಿದಿರದ ಜನರಿಗೆ ತಿಳಿಸಿದ್ದಾರೆ. ಪ್ರಪಂಚದ ಮೂಲೆ ಮೂಲೆಗಳಲ್ಲೂ ವ್ಯವಹಾರ ಜ್ಞಾನ ಬೆಳೆಸಿಕೊಳ್ಳಲು ಕನ್ನಡ ಭಾಷೆ ಹೆಚ್ಚು ಮುಖ್ಯವೆಂಬುದನ್ನು ತಿಳಿಯಪಡಿಸಿದ್ದಾರೆ. ಅ.ನ.ಕೃ ಅವರ ಕನ್ನಡ ಚಳವಳಿಯಲ್ಲಿ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬರಾಗಿ ದುಡಿದಿದ್ದಾರೆ. ಕರ್ನಾಟಕಾದ್ಯಂತ ಸಾವಿರಾರು ಉಪನ್ಯಾಸಗಳನ್ನು ನೀಡಿರುತ್ತಾರೆ.

ಆಚಾರ್ಯತ್ರಯರ ಭಾಷ್ಯಗಳು ಇತರ ಭಾಷ್ಯಕಾರರ ಗ್ರಂಥಗಳು ಮೂಲ ಮತ್ತು ಅನ್ವಯ ತಾತ್ಪರ್ಯಗಳುಳ್ಳ ಗ್ರಂಥಗಳು, ವಿಮರ್ಶಾಗದ್ಯಗ್ರಂಥಗಳು ಪ್ರಕಟವಾಗಿವೆ. ಗೀತೆಯನ್ನು ಉಪನ್ಯಾಸಗಳ ಮೂಲಕ ಪ್ರಚಾರ ಮಾಡಿ ನಾಡಿನ ಜನತೆಯಲ್ಲಿ ಗೀತಾ ಜಾಗೃತಿ ಬೆಳೆಸಿರುವ ಹೊಸಕೆರೆ ಚಿದಂಬರಯ್ಯನವರೇ ಮುಂತಾದವರ ಮಹತ್ವವನ್ನು ಜನತೆಗೆ ತಿಳಿಯಪಡಿಸಿದ್ದಾರೆ.

ಹೆಸರಾಂತ ಸಾಹಿತಿಗಳಾದ ಪಂಪ, ರನ್ನ, ಕುವೆಂಪು, ಡಿ.ವಿ.ಜಿ, ದ.ರಾ.ಬೇಂದ್ರೆ ಇನ್ನೂ ಮುಂತಾದ ಅನೇಕ ಕವಿಗಳ ಗ್ರಂಥಗಳನ್ನು ಸಂಕಲಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಜ್ಞಾನ ಎಲ್ಲಾ ಜನರಿಗೂ ಕೊಡುಗೆಯಾಗಿರುವುದು ಗುರುತಿಸಿ, ಗೌರವ, ಸನ್ಮಾನಗಳನ್ನು ಸಲ್ಲಿಸಿ ಪ್ರಶಸ್ತಿಗಳನ್ನು ನೀಡಿರುತ್ತಾರೆ. ಇಷ್ಟು ಜ್ಞಾನಿಗಳೂ ಸರಸ್ವತಿ ವಿದ್ಯಾದೇವತೆಯ ಪುತ್ರರೆನಿಸಿದರೂ ಸರಳ ಹಾಗೂ ಸೌಜನ್ಯಶೀಲರಾದ ವ್ಯಕ್ತಿ ಶ್ರೀ ಪ್ರೊ. ಜಿ. ಅಶ್ವತ್ಥನಾರಾಯಣ ರವರ ಬಗ್ಗೆ ನಮ್ಮೆಲ್ಲಲಿಗೂ ಅಪಾರವಾದ ಅಭಿಮಾನ ಹಾಗೂ ಹೆಮ್ಮೆ ಅನಿಸುತ್ತದೆ.

ಆದಿಶಂಕರಾಚಾರ್ಯರು ರಚಿಸಿರುವ, ಸೌಂದರ್ಯಲಹರಿಯನ್ನು ಹಿರಿಯ ಸಾಹಿತಿಗಳಿಂದ ರಚಿತವಾದ, ಮೂಲ ಮತ್ತು ಅನ್ವಯ, ತಾತ್ಪರ್ಯಗಳನ್ನು ಹಾಗೂ ಯಂತ್ರಾರಾಧನೆಯ ಪ್ರಯೋಜನವನ್ನು ಲಲಿತಾಮಾತೆಯ ಮಹಿಮೆಯನ್ನು ಪಾರಾಯಣ ಮಾಡುವ ಭಕ್ತವೃಂದಕ್ಕೆ ಅಪಾರ ಸಹಾಯವಾಗುವಂತೆ ಮಾಡಿರುತ್ತಾರೆ. ಇದಲ್ಲದೆ, ವೇದಗಳು, ಉಪನಿಷತ್ತುಗಳು, ಜ್ಯೋತಿಷ್ಯ ಮುಂತಾದವುಗಳನ್ನು ಪ್ರಾಚೀನ ಗ್ರಂಥಗಳಿಂದ ಮಾಹಿತಿ ಸಂಗ್ರಹಿಸಿ ವೈಜ್ಞಾನಿಕ ವೈಚಾರಿಕತೆಯನ್ನು ಸಮಾಜಕ್ಕೆ ಕೊಡುಗೆ ನೀಡಿರುತ್ತಾರೆ. ಜೈನ, ಬೌದ್ಧ ಶಾಸನಗಳು ಯಾರಿಗೂ ಸಿಗದೆ ಕಣ್ಮರೆಯಾಗಿರುವುದನ್ನು ಹೊರತಂದು ಪ್ರಪಂಚಕ್ಕೆ ತಿಳಿಯುವಂತೆ ಮಾಡಿರುತ್ತಾರೆ. ಇವರಿಗೆ ನಾನು ಎಷ್ಟು ಕೃತಜ್ಞತೆಯನ್ನು ತೋರಿದರೂ ಕಡಿಮೆ ಎನಿಸುತ್ತದೆ.

ಕೊನೆಯದಾಗಿ ಹೇಳುವುದೇನೆಂದರೆ, ಸುಭಾಷಿತದಲ್ಲಿ ಹೇಳುವಂತೆ, "ವಿದ್ಯಾನಾಮ್ ನರಸ್ಯ ರೂಪಮಧಿಕಂ, ಪ್ರಚ್ಛನ್ನ ಗುಪ್ತಂ ಧನಂ, ವಿದ್ಯಾ ಭೋಗಕರೀ, ಯಶಃ ಸುಖಕರೀ, ವಿದ್ಯಾ ಗುರೂಣಾಂ ಗುರುಃ ವಿದ್ಯಾ ರಾಜಸುಪೂಜ್ಯತೇ ನಹಿ ಧನಂ, ವಿದ್ಯಾ ಪರಾದೇವತಾ, ವಿದ್ಯಾವಿಹೀನಃ ಪಶುಃ'' ಎನ್ನುವಂತೆ, ಇವರಲ್ಲಿ ಅಡಗಿರುವ ಜ್ಞಾನ ಭಂಡಾರವು, ''ಪ್ರಚ್ಛನ್ನ ಗುಪ್ತ ಧನಂ'' ಎಂದರೆ ಅಡಗಿಸಿಟ್ಟ ನಿಧಿಯಂತೆ ವಿದ್ಯಾ ನಿಧಿಯು ಅಡಗಿದೆ. ಇಂತಹ ಮಹನೀಯರಿಂದ ಲೋಕಕ್ಕೆ ಅಪಾರ ಕೊಡುಗೆಯಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಇಂತಹ ಮಹನೀಯರಿಗೆ ನನ್ನ ಅನಂತಾನಂತ ನಮಸ್ಕಾರಗಳು.

ಲೋಕಾ ಸಮಸ್ತಾ ಸುಖಿನೋಭವಂತು ! ಸಮಸ್ತ ಸನ್ನಂಗಳಾನಿ ಭವಂತು !!

****

ನಮ್ಮ ಚಿಕ್ಕಪ್ಪ

ಮಂಜುನಾಥ ರಾಮಯ್ಯ
ಚರವಾಣಿ : ೯೮೪೫೩೦೧೬೦೧೬

ಒಂದು ಕೊಂಬೆಯು ಬಾಡಲಿನ್ನೊಂದು ಚಿಗುರುವುದು । ಸಂದಿಹುದು ಚಿರನವತೆಯಶ್ವತ್ಥ-ಮರಕೆ ॥ ಎಂದೆಂದುಮಂತಿರುವುದೀ ವಿಶ್ವವೃಕ್ಷವದ । ರೊಂದು ರೆಂಬೆಯೊ ನೀನು – ಮಂಕುತಿಮ್ಮ

ಅಶ್ವತ್ಥಮರದ ಒಂದು ಕೊಂಬೆ ಒಣಗಿದರೆ ಮತ್ತೊಂದು ಚಿಗುರುತ್ತದೆ. ಹೇಗೆ ಆ ಮರವು ತನ್ನ ಚಿರನೂತನತೆಯನ್ನು ಕಾಪಾಡಿಕೊಳ್ಳುತ್ತದೋ, ಹಾಗೆಯೇ ನಮ್ಮ ಚಿಕ್ಕಪ್ಪ ಪ್ರೊಫೆಸರ್ ಜಿ ಅಶ್ವತ್ಥನಾರಾಯಣ ಅವರು ಒಂದು ಸೇವೆಯ ನಂತರ ಮತ್ತೊಂದು ಸೇವೆಯನ್ನು ನಿರಂತರವಾಗಿ ಕನ್ನಡವೆಂಬ ವಿಶ್ವ ವೃಕ್ಷಕ್ಕೆ ಮಾಡುತ್ತಾ ಚಿರನೂತನ ಅಮೂಲ್ಯ ಕಾಣಿಕೆಗಳನ್ನು ಭಾಷೆಗೆ ಅರ್ಪಿಸಿದ್ದಾರೆ.. ಅವರು ತನು ಮನ ಧನಗಳನ್ನು ಅರ್ಪಿಸಿ. ಅರ್ಪಣಾ ಮನೋಭಾವದಿಂದ, ಕನ್ನಡ ಭಾಷೆಯ ಸೇವೆಯನ್ನು ಯಾವುದೇ ಪ್ರಚಾರವಿಲ್ಲದೆ ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ.

ಅನಾಜಿ (ಅಶ್ವತ್ಥನಾರಾಯಣ ಜಿ.) ಇವರ ಅಂಕಿತನಾಮ. ನನ್ನ ಪ್ರಕಾರ. **'ಅನಾಜಿ'** ಅಂದರೆ **''ಅನರ್ಘ್ಯಕನ್ನಡ ನಾಡಿನ ಜಿತೇಂದ್ರ''**

ಶ್ರೀಯುತರು ಬಹಳ ಸರಳ ವ್ಯಕ್ತಿ. ಯಾವುದೇ ಆಡಂಬರವಿಲ್ಲದ. ಜೀವನ ಮತ್ತು ವ್ಯಕ್ತಿತ್ವ. ಇವರಿಂದ ಕೇವಲ ಕನ್ನಡ ಪಾಠವಲ್ಲದೆ ಜೀವನದ ಪಾಠಗಳನ್ನು ಹಲವಾರು ಕಲಿಯಬಹುದು.

ಜಪಾನಿಯರ ಇಕಿಗೈ ಜೀವನದ ಸೂತ್ರದಂತೆ ಇವರು ಯಾವತ್ತೂ ನಿವೃತ್ತಿಯನ್ನು ಹೊಂದಲಿಲ್ಲ ಮತ್ತು ವಿಶ್ರಾಂತಿಯನ್ನು ಪಡೆಯಲಿಲ್ಲ. ಕನ್ನಡ ಭಾಷೆಯ ಹಲವಾರು ಸೇವೆಯನ್ನು ನಿರಂತರವಾಗಿ ಮಾಡುತ್ತ ತಮ್ಮನ್ನು ಕನ್ನಡ ಭಾಷೆಯ ಸೇವೆ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಸರಳತೆ , ನಿಸ್ವಾರ್ಥ ಸೇವೆ. ಕಾಯಕವೇ ಕೈಲಾಸ, ಉತ್ಸಾಹ ಮತ್ತು ಮುಂತಾದ ಗುಣಗಳನ್ನು ಇವರಿಂದ ನಾವು ಕಲಿಯಬಹುದು.

ಇವರನ್ನು ನಡೆದಾಡುವ ಜ್ಞಾನ ಭಂಡಾರವೆಂದೇ ಹೇಳಬಹುದು. ಕನ್ನಡ ಭಾಷೆ. ಸಂಗೀತ, ಕರ್ನಾಟಕ ಶಾಸ್ತ್ರೀಯ ಸಂಗೀತ. ದಾಸ ಸಾಹಿತ್ಯ. ಜೈನ. ಸಾಹಿತ್ಯ. ವಚನ ಸಾಹಿತ್ಯ. ಧರ್ಮ ಶಾಸ್ತ್ರ. ಹೀಗೆ ಹಲವಾರು ವಿಷಯಗಳಲ್ಲಿ ಇವರು ಅಪಾರವಾದ ವಿದ್ವತ್ತನ್ನು ಪಡೆದಿದ್ದಾರೆ. ಈ ಎಲ್ಲ ವಿಷಯಗಳಲ್ಲೂ ಆಳವಾಗಿ ಅಭ್ಯಾಸವನ್ನು ಮಾಡಿ ಹಲವಾರು ಗ್ರಂಥಗಳನ್ನು ಕೂಡ ರಚಿಸಿದ್ದಾರೆ. ಇವರು ನೀಡುವ. ಉಪನ್ಯಾಸಗಳಿಗೆ ಜನರು ಕಾತುರರಾಗಿದ್ದು ದೇಶ ವಿದೇಶಗಳಿಂದ ಭಾಗವಹಿಸುತ್ತಿದ್ದರು.

ನಾನು ಬಾಲ್ಯದಿಂದಲೂ ಇವರೊಂದಿಗೆ ಆಡಿ ನಲಿದು. ಕಲಿತಿದ್ದೇನೆ. ಚಿಕ್ಕಪ್ಪನ ಮನೆಯಲ್ಲಿ ಹಲವಾರು ದಿನಗಳನ್ನು ಬೇಸಿಗೆ ರಜೆಯಲ್ಲಿ ಕಳೆದಿದ್ದೇವೆ. ಅದೊಂದು ಅವಿಸ್ಮರಣೀಯ ಅನುಭವ.

ಇವರು ನಮ್ಮನ್ನು ಹಲವಾರು ಜಾಗಗಳಿಗೆ, ಪ್ರೇಕ್ಷಣೀಯ ಸ್ಥಳಗಳಿಗೆ ಕರೆದು ಹೋಗುತ್ತಿದ್ದರು. ದಾರಿಯುದ್ದಕ್ಕೂ. ಕಥೆಗಳು. ಜಾಗಗಳ ಬಗ್ಗೆ ಪರಿಚಯ, ಹಾಸ್ಯ ಪ್ರಸಂಗಗಳು. ಹೀಗೆ ನಡಿಗೆಯಲ್ಲೇ ರಸದೌತನ ನಮಗೆ. ಪ್ರತಿ ರಾತ್ರಿಯೂ ಇವರು ನಮಗೆ ಮಲಗುವ ಮುಂಚೆ ಡಾಕ್ಟರ್ ಅನುಪಮ ನಿರಂಜನ ಅವರ ದಿನಕ್ಕೊಂದು ಕಥೆಗಳು ಎಂಬ ಕೃತಿಯಿಂದ ಒಂದು ಕಥೆಯನ್ನು ಹೇಳುತ್ತಿದ್ದರು. ಅವರು ಕಥೆ ಹೇಳುವ ಶೈಲಿ. ಕಥೆ ಹೇಳುವ. ರೀತಿ ನಮ್ಮೆಲ್ಲರಿಗೂ ಒಂದು ರೋಮಾಂಚನ ಅನುಭವವನ್ನು ಕೊಡುತ್ತಿತ್ತು. ಇವರ ಮನೆಯಲ್ಲಿ ಇವರ ಜೊತೆ ಇರುವುದು, ಓಡಾಡುವುದು ಒಂದು. ಅಮೂಲ್ಯವಾದ ಅನುಭವ. ನಾನು ಕೂಡ ಇವರಿಂದ ಪ್ರೇರಿತನಾಗಿ ಹಲವಾರು ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದೇನೆ. ಕೆಲವು ಕಡೆ ಇವರೇ ಮುಖ್ಯ ಅತಿಥಿಗಳಾಗಿ ಬಂದಿದ್ದು, ಇವರ ಕೈಯಲ್ಲೇ ಬಹುಮಾನವನ್ನು ಪಡೆದಿರುತ್ತೇನೆ.

ಇವರು ಕನ್ನಡವನ್ನು ಮಗುವಿನಿಂದ ಸಂಶೋಧನಾ ವಿದ್ಯಾರ್ಥಿಗಳವರೆಗೆ ಸುಲಭವಾಗಿ ಹೇಳಿ ಕೊಡುತ್ತಾರೆ. ಹಲವಾರು ಸಾಹಿತಿಗಳು, ವಿವಿಧ ಕ್ಷೇತ್ರದ ಗಣ್ಯ ವ್ಯಕ್ತಿಗಳು ಕನ್ನಡದ ಬಗೆಗಿನ ತಮ್ಮ ಸಂದೇಹಗಳನ್ನು ಇವರ ಇವರೊಂದಿಗೆ ಪರಿಹರಿಸಿಕೊಳ್ಳುತ್ತಿದ್ದರು. ಇವರು ಕನ್ನಡವನ್ನು. ಕನ್ನಡ ಗೊತ್ತಿಲ್ಲದವರಿಗೂ ಕೂಡ ಬಹಳ ಸುಲಭವಾಗಿ ಹೇಳಿಕೊಡುತ್ತಿದ್ದರು. ಇಲ್ಲಿ ಒಂದು. ನಿದರ್ಶನವನ್ನು ಹೇಳಲೇಬೇಕು. ಇವರ ಮನೆಗೆ ಸಹಾಯಕ್ಕಾಗಿ ಸೇರಿದ ವ್ಯಕ್ತಿಯೊಬ್ಬರು. ವ್ಯಕ್ತಿಯೊಬ್ಬರಿಗೆ ಕನ್ನಡವೇ ಬರುತ್ತಿರಲಿಲ್ಲ. ಅವರಿಗೆ ಕೆಲಸದ ನಂತರ ಕನ್ನಡವನ್ನು ಕಲಿಸಿ ಕಳಿಸಿ. ಕೆಲವೇ ತಿಂಗಳಲ್ಲಿ ಅವರು ನಿರರ್ಗಳವಾಗಿ ಮಾತನಾಡುವುದು ಮತ್ತು ಬರೆಯುವುದನ್ನು ಕಲಿತರು.. ಅದಾದ ನಂತರ ಕೆಲವೇ ತಿಂಗಳಲ್ಲಿ ಕನ್ನಡ. ಕ್ಷೇತ್ರದಲ್ಲಿ ಕೆಲಸಕ್ಕೂ ಸೇರಿದರು. ಇದು ಇವರು. ಎಷ್ಟು ಸುಲಭವಾಗಿ ಹೇಳಿಕೊಡುತ್ತಿದ್ದರು ಮತ್ತು ಭಾಷೆಯನ್ನು ಎಲ್ಲರಿಗೂ ಕಲಿಸುವ ಉತ್ಸಾಹವನ್ನು ತೋರಿಸುತ್ತದೆ.

ಶ್ರೀಯುತರ ಸೇವೆಗೆ ಆಧಾರ ಸ್ಥಂಭವಾಗಿ ನಿಂತ ನಮ್ಮ ಚಿಕ್ಕಮ್ಮ ಪ್ರೊಫೆಸರ್ ಎಂ. ಆರ್. ಲಕ್ಷ್ಮೀದೇವಿ ಅವರಿಗೂ ಕೂಡ. ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇವರು ಕೂಡ ಹಲವಾರು ಪುಸ್ತಕಗಳನ್ನು ಬರೆದು ಹಲವಾರು ಉಪನ್ಯಾಸಕರಾಗಿ ಹಲವಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ಮಾಡಿ ಕನ್ನಡದ ಸೇವೆಯನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ. .

ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ! ಹೊಸ ಯುಕ್ತಿ ಹಳೆ ತತ್ವದಿ ಒಡಗೂಡೆ ಧರ್ಮ; ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ! ಜಸವು ಜನಜೀವನಕೆ– ಮಂಕುತಿಮ್ಮ – ಎಂಬ ಮಂಕುತಿಮ್ಮನ ಕಗ್ಗದಂತೆ ಇವರ ಕನ್ನಡ ಭಾಷೆಯ ಸೇವೆ ನಿರಂತರವಾಗಿ ನಡೆಯಲಿ ಮತ್ತು ಯುವ ಪೀಳಿಗೆಗೆ ಇವರ ಮಾರ್ಗದರ್ಶನ ಸದಾ ಸಿಗಲಿ. ಎಂದು ಹಾರೈಸುತ್ತಾ. ಈ ಲೇಖನವನ್ನು ಮುಗಿಸುತ್ತಿದ್ದೇನೆ.

*****

ಇವರಿಗೆ ಸಾಹಿತ್ಯವೇ ಉಸಿರು

ಆರ್. ಶಂಕರ್
ಚರವಾಣಿ : ೯೮೪೫೬೯೧೦೩೦

ಕೋಟೆ ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಯಲ್ಲಿ ಓದುವಾಗ ಎದುರುಗಡೆ ಇದ್ದ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ನಡೆಯುವ ಭಾಷಣಗಳು, ವಿಚಾರಗೋಷ್ಠಿಗಳು ಅಶ್ವತ್ಥನಾರಾಯಣರವರನ್ನು ಆಕರ್ಷಿಸಿತ್ತು. ಅಲ್ಲಿ ಬರುವ ಪ್ರಸಿದ್ಧ ಸಾಹಿತಿಗಳ ಭೇಟಿ, ಒಡನಾಟ, ಚರ್ಚೆ ಅವರಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಅಪಾರ ಒಲವು ಬೆಳೆಸಿತು. ಈ ವಯಸ್ಸಿನಲ್ಲಿಯೂ ಅವರ ಕನ್ನಡ ಸಾಹಿತ್ಯ ಪ್ರೇಮ ಎಂತಹ ತರುಣ ಸಾಹಿತಿಗಳನ್ನು ನಾಚಿಸುವಂತಹದು.

ಪುಸ್ತಕ ಬರೆಯಲು ಎಲ್ಲಾ ಸಿದ್ಧತೆ ಮಾಡಿ ಕುಳಿತರೆ, ಹಸ್ತ ಪ್ರತಿಗಳನ್ನು ತಿದ್ದಲು ಕುಳಿತರೆ, ಲೇಖನಗಳನ್ನು ಬರೆಯಲು ಕುಳಿತರೆ, ಅವರು ಒಂದು ಹೊಸ ಪ್ರಪಂಚವನ್ನೇ ಪ್ರವೇಶಿಸುತ್ತಾರೆ. ಈ ವಿಷಯದಲ್ಲಿ ಅವರಿಗಿರುವ ಅಪಾರ ಜ್ಞಾನ, ಕೆಲಸದಲ್ಲಿ ತಲ್ಲೀನತೆ, ನಿರಂತರವಾಗಿ ಗಂಟೆಗಳನ್ನು, ದಿನಗಳನ್ನು ಲೆಕ್ಕಿಸದೇ ದುಡಿಯುವ ಪರಿ ನನ್ನನ್ನು ಹಲವು ಬಾರಿ ಅಚ್ಚರಿಗೊಳಿಸಿದೆ. ಆದ್ದರಿಂದಲೇ ಅವರ ಸಾಹಿತಿ ಮಡದಿ ಶ್ರೀಮತಿ ಲಕ್ಷ್ಮೀದೇವಿ ಇವರ ಸಾಹಿತ್ಯ ಪ್ರೇಮವನ್ನು ಯಾವ ಅಸೂಯೆಯೂ ಇಲ್ಲದೇ ಎರಡನೇ ಪತ್ನಿಗೆ ಹೋಲಿಸುತ್ತಾರೆ.

ಬೇಸಿಗೆ ರಜೆ ಬಂದರೆ ನಮಗೆಲ್ಲಾ ಹಲವಾರು ವಿಷಯಗಳ ಪುಸ್ತಕಗಳನ್ನು ಓದಲು ಕೊಟ್ಟು ಸಾಹಿತ್ಯ ಅಭಿರುಚಿಯನ್ನು ನನ್ನಲ್ಲಿ ಮತ್ತು ನನ್ನ ತಮ್ಮಂದಿರಲ್ಲಿ ಬೆಳೆಸಿದ್ದಾರೆ. ಅವರ ಜೊತೆಯ ಸಂವಾದ ಜ್ಞಾನವಲ್ಲದೇ ನಗೆಯ ಬುಗ್ಗೆಯನ್ನು ಹರಿಸುತ್ತದೆ. ಅವರ ಮನೆಯ ಗ್ರಂಥ ಭಂಡಾರ ಒಂದು ದೊಡ್ಡ ಜ್ಞಾನ ಭಂಡಾರ, ಅವರ ಮನೆ ಮತ್ತು ಮನ ಎರಡೂ ಅಮೂಲ್ಯವಾದ ಕನ್ನಡ ಗ್ರಂಥಾಲಯಗಳು.

ಶ್ರೀ ಅಶ್ವತ್ಥನಾರಾಯಣರವರು ಅತ್ಯಂತ ಶಿಸ್ತಿನ ಪ್ರಾಧ್ಯಾಪಕರೂ ಹೌದು. ಎಷ್ಟೇ ಕಿರಿಕಿರಿ, ಒತ್ತಡ ಇದ್ದರೂ ಅವರು ತಮ್ಮ strictness ನಲ್ಲಿ ಎಂದೂ ರಾಜಿ ಮಾಡಿಕೊಳ್ಳಲಿಲ್ಲ, ಕೊನ Total Kannada Media ದ YouTube Channel ನಲ್ಲಿ ನಾ ಕಂಡ ಸಾಹಿತಿಗಳು ಎಂಬ ಹಲವು ವೀಡಿಯೋಗಳು ಲಭ್ಯವಿದೆ.

ಶ್ರೀ ಅಶ್ವತ್ಥನಾರಾಯಣ ರವರಿಗೆ ಇನ್ನಷ್ಟು ಸುದೀರ್ಘ ಕನ್ನಡ ಸಾಹಿತ್ಯ ಸೇವೆ ನೀಡಲು, ಭಗವಂತನು ಅವರಿಗೆ ಆರೋಗ್ಯ ನೆಮ್ಮದಿ, ಉತ್ಸಾಹ, ಶಕ್ತಿ ನೀಡಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

*****

ಸಂದರ್ಶನ

[illegible]

[illegible]

[illegible]

> [illegible]

[illegible]

[illegible]

[illegible]

ಅನಾಜಿ ಸಂದರ್ಶನ-1
ಪುಸ್ತಕ ಭಂಡಾರ

ಸಂದರ್ಶನಕಾರರು : **ಎಂ.ಕೆ. ಗೋಪೀನಾಥ್**

ಗೋ. - ನೀವು ಪುಸ್ತಕ ಸಂಗ್ರಹಕ್ಕೆ ಕೈಹಚ್ಚಿದ್ದು ಹೇಗೆ ?

ಅನಾಜಿ - ನಾನು ಹೇಳಿ ಕೇಳಿ ಕನ್ನಡ ಮೇಷ್ಟ್ರು ಚೆನ್ನಾಗಿ ಪಾಠ ಹೇಳಿ ಸೈ ಅನಿಸಿಕೋಬೇಕು ಎಂಬ ಆಸೆಯಿದ್ದ ಮೇಷ್ಟ್ರು, ಕಾಲೇಜಿನಲ್ಲಿ ಪಾಠ ಸಿದ್ಧತೆಯಿಲ್ಲದೆ ಹೋಗುತ್ತಿರಲಿಲ್ಲ. ಪಾಠದ ವಿಷಯಕ್ಕೆ ಪೂರಕವಾಗಿ ಲಭ್ಯವಿರುವ ಎಲ್ಲ ಕೃತಿಗಳನ್ನೂ .. ಓದಬೇಕೆಂಬ ಗೀಳು ನನ್ನದು. ಹಾಗಾಗಿ ಯಾವ ಪಾಠ ಹೇಳುವ ವೃತ್ತಿಯಿಂದ ನನಗೆ ಸಂಬಳ ಬರುತ್ತಿದೆಯೋ ಆ ಸಂಬಳದ ಒಂದು ಗಣ್ಯ ಭಾಗವನ್ನು ಪುಸ್ತಕಗಳ ಮೇಲೆ ಹಾಕಬೇಕೆಂಬುದು ನನ್ನ ವ್ರತವಾಯಿತು. ಅಲ್ಲದೆ ಯಾವುದೋ ಒಂದು ಪುಸ್ತಕ ಬೇಕಾದಾಗ ಅದನ್ನು ಹುಡುಕಿಕೊಂಡು ಹೋಗುವುದು ಮತ್ತು ಸಿಕ್ಕರೆ ಕೊಳ್ಳುವುದು ನನ್ನ ಜಾಯಮಾನ. ನನ್ನ ಸರ್ವಿಸ್‌ನಲ್ಲಿ ಪಾಠ ಹೇಳಲು ಕಾಲೇಜಿನ ಪುಸ್ತಕ ಭಂಡಾರದಿಂದ ಪಠ್ಯಪುಸ್ತಕ ತಂದಿಲ್ಲ. ಕೊಳ್ಳಲು. ಸಿಗದ ಪುಸ್ತಕಗಳಿಗಷ್ಟೆ ಪುಸ್ತಕ ಭಂಡಾರ ಬಳಸಿದ್ದೇನೆ.

ಗೋ. - ನಿಮ್ಮ ಭಂಡಾರದಲ್ಲಿ ಪುಸ್ತಕ ಕಥೆ-ಕಾದಂಬರಿಗಳು ಅಷ್ಟಾಗಿ ಕಾಣುವುದಿಲ್ಲ ಇದಕ್ಕೇನಾದರೂ ಕಾರಣವುಂಟೆ ?

ಅನಾಜಿ - ಕಥೆ-ಕಾದಂಬರಿಗಳು ಇಲ್ಲವೇ ಇಲ್ಲವೆಂದಲ್ಲ. ಆದರೆ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಐತಿಹಾಸಿಕ ಮಹತ್ವವುಳ್ಳಂತವನ್ನು ಮತ್ತು ನನಗೆ ಬೇಕು ಎನ್ನಿಸಿದ್ದನ್ನು ಮಾತ್ರ ಸಂಗ್ರಹಿಸಿದ್ದೇನೆ. ಉದಾಹರಣೆಗೆ 'ಗ್ರಾಮಾಯಣ', 'ದುರ್ಗಾಸ್ತಮಾನ', 'ಸಂಸ್ಕಾರ', 'ನಟಸಾರ್ವಭೌಮ' ಮುಂತಾದವು ನನ್ನಲ್ಲಿವೆ. ಅಚ್ಚಾಗಿ ಬಂದಿರುವ ಬರುತ್ತಿರುವ ಎಲ್ಲ ಕಾದಂಬರಿಗಳು ಕಥಾಸಂಗ್ರಹಗಳು ನನ್ನಲ್ಲಿಲ್ಲ; ಅವುಗಳ ಅಗತ್ಯ ನನಗೆ ಬಂದಿಲ್ಲ.

ಗೋ. - ಪುಸ್ತಕ ಸಂಗ್ರಹದ ವಿಚಾರದಲ್ಲಿ ನೀವು ಒಂದು ನೀತಿಯನ್ನು ಯಾವುದಾದರೂ ಅನುಸರಿಸುತ್ತೀರೇನು ?

ಅನಾಜಿ - ಖಂಡಿತವಾಗಿ ಅನುಸರಿಸುತ್ತೇನೆ. ಪುಸ್ತಕಗಳು ಸಾಹಿತ್ಯಕವಾಗಿ ಶ್ರೇಷ್ಠ ಮಟ್ಟದವೇ ಆಗಿರಬೇಕು; ಗ್ರಂಥಗಳಾಗಿರಬೇಕಲ್ಲದೆ ಪ್ರಮಾಣಭೂತ ಅಪೂರ್ವದವೂ ಆಗಿರಬೇಕು.

ಗೋ. - ಇಂಗ್ಲಿಷ್ ಪುಸ್ತಕಗಳ ಸಂಖ್ಯೆ ಗಣನೀಯವಾಗಿಲ್ಲ, ಅಲ್ಲವೆ?

ಅನಾಜಿ – ಹಾಗೇನಿಲ್ಲ. ಕನ್ನಡ ಸಾಹಿತ್ಯದ ಅಭ್ಯಾಸಕ್ಕೆ ಪೂರಕವಾಗುವ ಅನೇಕ ಇಂಗ್ಲಿಷ್ ಭಾಷೆಯ ಪುಸ್ತಕಗಳೂ ನನ್ನಲ್ಲಿವೆ.

ಗೋ. – ಪುಸ್ತಕಗಳನ್ನು ಕಳೆದುಕೊಳ್ಳುವ ಅನುಭವವಾಗಿದೆಯೆ?

ಅನಾಜಿ – ಹಾಗೆ ಕಳೆದುಕೊಂಡ ಪುಸ್ತಕಗಳ ಸಂಖ್ಯೆಯೇ ಹತ್ತಿರ ಹತ್ತಿರ ನಾನ್ನೂರನ್ನು ಮುಟ್ಟುತ್ತದೆ.

ಗೋ. – ನಿಮ್ಮಲ್ಲಿರುವ ಪುಸ್ತಕಗಳಲ್ಲಿ ಯಾವ ಪ್ರಕಾರಕ್ಕೆ ಸೇರಿದವು ಹೆಚ್ಚಾಗಿದೆ?

ಅನಾಜಿ – ಪರಾಮರ್ಶನ (Reference) ಗ್ರಂಥಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಅವುಗಳಲ್ಲಿ ಬಹುಭಾಗ ನಿಘಂಟುಗಳು ಮತ್ತು ಸಾಹಿತ್ಯ ಚರಿತ್ರೆಗೆ ಸಂಬಂದಪಟ್ಟವು. ಅಲಂಕಾರ ಶಾಸ್ತ್ರ ಛಂದಸ್ಸು, ವ್ಯಾಕರಣ– ಇತ್ಯಾದಿಗಳಿಗೆ ಸೇರಿದ ಗ್ರಂಥಗಳ ಪಾಲು ದೊಡ್ಡದು. ಅಭಿನಂದನ ಗ್ರಂಥಗಳೂ ಸಾಕಷ್ಟಿವೆ. ನಿಘಂಟುಗಳ ಸಂಖ್ಯೆಯೇ ನೂರನ್ನು ಮೀರುತ್ತದೆ ಸಂಗ್ರಹವೂ ಪೂರ್ಣವಲ್ಲ. ಹಾಗಾಗಿ ನಾನು. ಅಚ್ಚಾದ ಕನ್ನಡ ಮಹಾಪ್ರಬಂಧಗಳೂ ಸಾಕಷ್ಟುಂಟು.

ಗೋ. – ನಿಮ್ಮ ಹಾಗೆಯೇ ಪುಸ್ತಕ ಸಂಗ್ರಹಿಸಿರುವವರು ನಿಮ್ಮ ಗಮನಕ್ಕೆ ಬಂದಿದ್ದಾರೆಯೇ ?

ಅನಾಜಿ – ದೊಡ್ಡ ಪ್ರಮಾಣದ ಪುಸ್ತಕ ಸಂಗ್ರಹವಿರುವುದು ನನ್ನೊಬ್ಬನಲ್ಲೇ ಅಲ್ಲ. ಹರಿಹರಪ್ರಿಯ ಈ ನಿಟ್ಟಿನಲ್ಲಿ ಶ್ಲಾಘನೀಯ ಕೆಲಸ ಮಾಡಿದ್ದಾರೆ. ಶ್ರೀನಿವಾಸ ಹಾವನೂರರ ಬಳಿ ಗಣನೀಯ ಸಂಖ್ಯೆಯ ಅಪೂರ್ವ ಪುಸ್ತಕಗಳಿವೆ. ಹಂ. ಪ ನಾಗರಾಜಯ್ಯನವರ ಪುಸ್ತಕ ಭಂಡಾರ ಸಣ್ಣದೇನಲ್ಲ. ಹೀಗೆ ಇನ್ನೂ ಅನೇಕರಲ್ಲಿ ಶ್ರೇಷ್ಠ ಗ್ರಂಥ ಸಂಗ್ರಹಗಳಿವೆ.

ಗೋ. – ಇಷ್ಟೆಲ್ಲಾ ಆದ ಮೇಲೂ ನೀವು ಆಗೊಮ್ಮೆ ಈಗೊಮ್ಮೆ ಸ್ನೇಹಿತರಿಂದ ಪುಸ್ತಕಗಳನ್ನು ಎರವಲು ತರಬೇಕಾದ ಸಂದರ್ಭ ಬಂದಿದೆಯೇ?

ಅನಾಜಿ – ಎಷ್ಟೋ ಸಲ ಬಂದಿದೆ. ಯಾರ ಪುಸ್ತಕ ಸಂಗ್ರಹವೂ ಪೂರ್ಣವಲ್ಲ. ನಾನು ಬೇಕಾದಷ್ಟು ಪುಸ್ತಕಗಳನ್ನು ತಂದುಕೊಂಡಿದ್ದೇನೆ. ಹಾಗೆ ತಂದ ಪುಸ್ತಕಗಳನ್ನು ಅನ್ಯರಿಗೆ ಎರವಲು ಕೊಡುವುದಿಲ್ಲ ; ಕಳೆಯುವುದಿಲ್ಲ; ಮತ್ತು ವಿಳಂಬವಾಗಿಯಾದರೂ ಹಿಂತಿರುಗಿಸುತ್ತೇನೆ.

****

ಅನಾಜಿ ಸಂದರ್ಶನ-2

ವಿದ್ಯಾರ್ಥಿ ಜೀವನ

ಸಂದರ್ಶನಕಾರರು : **ಎಸ್. ಎಲ್. ಮಂಜುನಾಥ್**
ಚರವಾಣಿ : ೯೪೪೮೦೬೮೩೨೮

ಪ್ರಶ್ನೆ : ಕೋಟೆ ಮಾಧ್ಯಮಿಕ ಶಾಲೆ, ಕೋಟೆ ಹೈಸ್ಕೂಲುಗಳಲ್ಲಿ ಓದಿ ಎಲ್.ಎಸ್. ಮತ್ತು ಎಸ್.ಎಸ್.ಎಲ್.ಸಿ. ಪಾಸು ಮಾಡಿದ ಶಿಕ್ಷಣದ ಕಾಲ ನನ್ನ ಜೀವನದಲ್ಲೇ ಅದೃಷ್ಟದ ಕಾಲ ಎನ್ನುತ್ತೀರಿ ಏಕೆ?

ಉತ್ತರ : ನಿಜ. ಪ್ರತಿಯೊಬ್ಬರ ಜೀವನದಲ್ಲಿ ಎಸ್.ಎಸ್.ಎಲ್.ಸಿ.ವರೆಗಿನ ಓದು ಮಹತ್ವ ಪೂರ್ಣವಾದುದು. ಬೆಳೆ ಮೊಳಕೆಯಲ್ಲಿ ನೋಡು ಎಂಬಂತೆ ನಾನು ಓದಿದ ಶಾಲೆಗಳೆರಡು ಕನ್ನಡ ಸಾಹಿತ್ಯ ಪರಿಷತ್ತಿನ ಪಕ್ಕದಲ್ಲಿ ಎಂದರೆ ಕೆಲವೇ ನೂರಡಿಗಳ ದೂರದಲ್ಲಿತ್ತು. ಅಲ್ಲಿ ನಾಟಕ ಭಾಷಣಗಳು ಕನ್ನಡದ ಪ್ರಸಿದ್ಧ ಸಾಹಿತಿ-ಕಲಾವಿದರಿಂದ ನಡೆಯುತ್ತಿತ್ತು. ಕನ್ನಡದ ಪ್ರಸಿದ್ಧ ಸಾಹಿತಿಗಳು-ವಿದ್ವಾಂಸರು, ವಿ.ಸೀ., ಮಾಸ್ತಿ, ಎಂ.ಆರ್.ಶ್ರೀ, ಕೆ. ಎಸ್. ನರಸಿಂಹಸ್ವಾಮಿ, ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿ, ಮಧುಗಿರಿ ವಾಸುದೇವರಾವ್ (ಪಾರ್ಸಿಪಂಡಿತ) ಆರ್. ಕಲ್ಯಾಣಮ್ಮ ಇನ್ನೂ ಅನೇಕರು ಪರಿಷತ್ತಿನ ಅಂಗಳದಲ್ಲಿ ದಿನಾ ಸಂಜೆ ಸಿಗುತ್ತಿದ್ದರು. ಶಾಲೆ ವೇಳೆ ಬಿಟ್ಟರೆ ನನ್ನ ಕಾಲವೆಲ್ಲ ಈ ಪರಿಷತ್ತಿನಲ್ಲಿ ಭಾಷಣಗಳನ್ನು ಕೇಳುವುದು, ನಾಟಕ ನೋಡುವುದು, ಪರಿಷತ್ತಿನ ಲೈಬ್ರರಿ ಸರಸ್ವತೀ ಭಂಡಾರದಲ್ಲಿ ಮಕ್ಕಳ ಪುಸ್ತಕಗಳನ್ನು ದಿನಪತ್ರಿಕೆಗಳನ್ನು ಓದುವುದು ದಿನಚರಿ ಆಗಿತ್ತು. ರಜೆದಿನಗಳಲ್ಲಿ ಶಾಲಾ ಮೈದಾನದಲ್ಲಿ ಕ್ರಿಕೆಟ್ ಫುಟ್ಬಾಲ್ ಆಡುವುದು, ಶಂಕರಮಠದ ಎದುರು ಕಲ್ಲುಬಂಡೆಗಳ ಕುರುಚಲುಗಿಡಗಳ ವಿಶಾಲ ಪ್ರದೇಶದಲ್ಲಿ ಅಲೆದಾಡುವುದು, ಆಟವಾಡುವುದು ಹವ್ಯಾಸವಾಗಿತ್ತು. ನಿಶ್ಚಿಂತೆಯ ನೆಮ್ಮದಿಯ ಯಾವ ಯೋಚನೆಯೂ ಇಲ್ಲದೆ ಕಾಲ ಕಳೆದ ಬಾಲ್ಯದ ದಿನಗಳವು.

ಬೇಸಿಗೆ ರಜೆಯಲ್ಲಿ ರಾಮೋತ್ಸವ ಕಾರ್ಯಕ್ರಮಗಳು ಬೀದಿ ಬೀದಿಗಳಲ್ಲಿ ೩, ೪, ೫, ೬ನೇ ರಸ್ತೆಗಳಲ್ಲಿ ರಾಮೇಶ್ವರ ದೇವಸ್ಥಾನದಲ್ಲಿ ಹರಿಕಥೆ ಸಂಗೀತ ಕಚೇರಿಗಳು ಅದ್ಭುತವಾಗಿ ನಡೆಯುತ್ತಿದ್ದವು. ಅವೆಲ್ಲಕ್ಕೂ ತಪ್ಪದೆ ಹಾಜರಾಗಿ ಬೇಸಿಗೆ ರಜಾ ಕಳೆಯುತ್ತಿತ್ತು.

ರಸ್ತೆ ರಸ್ತೆಯಲ್ಲೂ ಕಾಮನಹಬ್ಬ ಆಚರಿಸುತ್ತಿದ್ದೆವು. ಹುಡುಗರೆಲ್ಲ ಸೇರಿ ಕಾಮಣ್ಣ ಕಟ್ಟಿಗೆ, ಭೀಮಣ್ಣ ಬೆರಣಿ, ಅಡಿಕೆಗೋಟು ಎಕ್ಕಡದೇಟು... ಎಂದೆಲ್ಲಾ ಕೂಗುತ್ತಾ ಎಲ್ಲರ

ಮನೆಯಿಂದ ಹಳೆ ಮರದ ಸಾಮಾನು, ಕಟ್ಟಿಗೆ ಒಣಗಿದ ಗರಿ ಮುಂತಾದವನ್ನು ವಸೂಲಿ ಮಾಡಿ ಯಾರದೋ ಮನೆಯ ಕಾಂಪೌಂಡಿನಲ್ಲಿ ಗುಡಿಗೆ ಹಾಕಿ ಕಾಮಹಬ್ಬದ ದಿನ ಬಿದಿಯ ಬದಿಯಲ್ಲಿ ಸುಟ್ಟು ಹಬ್ಬ ಆಚರಿಸುತ್ತಿದ್ದೆವು. ಆ ಬೆಂಕಿಯ ಸುತ್ತಲೂ ಬಾಯಿ ಬಡಿದುಕೊಂಡು ಕೂಗುತ್ತಾ ಸುತ್ತುವ ದೃಶ್ಯ ಈಗಲೂ ಚೆನ್ನಾಗಿ ನೆನಪಿದೆ.

ಪ್ರಶ್ನೆ : **ಕೋಟೆ ಹೈಸ್ಕೂಲಿನ ವಿದ್ಯಾಭ್ಯಾಸದ ನೆನಪುಗಳು ಯಾವುವು?**

ಉತ್ತರ : ಹೈಸ್ಕೂಲು ಓದುವ ಕಾಲಕ್ಕೆ ಹದಿವಯಸ್ಸು (ಟೀನ್ ಏಜ್ ೧೩-೧೯) ವಿವೇಕ ಅರಳುವ ಕಾಲ. ನಮ್ಮ ಸಾಹಿತ್ಯದ ಬದುಕು ಪ್ರಾರಂಭವಾದ ಕಾಲ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎಂ. ಆರ್. ಶ್ರೀ ಅಧ್ಯಕ್ಷರಾಗಿದ್ದ ಕಾಲ ಛಾಯಾ ಕಲಾವಿದರು ಕವಿ ಕಲಾವಿದರು ಪರ್ವತವಾಣಿ, ಕೈಲಾಸಂ ಗುಂಡಣ್ಣ ಮೊದಲಾದವರ ನಾಟಕಗಳನ್ನು ಪರಿಷತ್ತಿನಲ್ಲಿ ಆಡುತ್ತಿದ್ದ ಕಾಲ ಛಾಯಾ, ವೀರಕೇಸರಿ, ಕಿಂಡಿ, ವಾರ್ತಾ, ವಿಶ್ವಕರ್ನಾಟಕ, ತಾಯಿನಾಡು, ಪ್ರಜಾಮತ ಇತ್ಯಾದಿ ಪತ್ರಿಕೆಗಳು ಪ್ರಕಟವಾಗುತ್ತಿದ್ದ ಕಾಲ ಪರಿಷತ್ತಿನಲ್ಲಿ ನಾಟಕಗಳನ್ನು ನೋಡುವುದು, ಭಾಷಣಗಳನ್ನು ಕೇಳುವುದು. ಪತ್ರಿಕೆಗಳನ್ನು ವಾಚನಾಲಯದಲ್ಲಿ ಓದುವುದೇ ಸಂಜೆ ದಿನಚರಿ ಆಗಿತ್ತು. ಶಾಲೆಯ ರಜಾದಿನಗಳಲ್ಲಿ ಕ್ರಿಕೆಟ್ ಆಟದಲ್ಲಿ ಮಾತ್ರ ಆಸಕ್ತಿ ಇದ್ದು ಸಿಲ್ವರ್ ಜ್ಯೂಬಿಲಿ ಟೂರ್ನಮೆಂಟ್ ಎಂಬ ಅಂತರ ಹೈಸ್ಕೂಲ್ ಪಂದ್ಯಗಳಿಗೆ ಸ್ಕೋರರ್ ಆಗಿ ಕೆಲಸ ಮಾಡಿದೆ. ಆ ಸಂಸ್ಥೆಯ ಅಧ್ಯಕ್ಷರು ನಮ್ಮ ಶಾಲೆಯ ಅಧ್ಯಕ್ಷರಾಗಿದ್ದರು. ಅವರು ಅವಕಾಶ ಕಲ್ಪಿಸಿದ್ದರು. ನಮಗೆ ಭರ್ಜರಿ ಸಿಹಿ ಖಾರ ತಿಂಡಿಗಳು ಕೊಡಿಸುತ್ತಿದ್ದರು. ಅದೇ ನಮ್ಮ ಆಕರ್ಷಣೆ ಆಗಿತ್ತು.

ಪ್ರಶ್ನೆ : **ನಿಮ್ಮ ಹೈಸ್ಕೂಲಿನ ಓದಿನ ಕಾಲದಲ್ಲಿ ಸಾಹಿತ್ಯಾಸಕ್ತಿ ಮೂಡಿದ್ದು ಹೇಗೆ?**

ಉತ್ತರ : ನಾನು ಪೋರ್ಟ್ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಘನ ವಿದ್ವಾಂಸರು ಸಾಹಿತಿಗಳು ಅಧ್ಯಾಪಕರಾಗಿದ್ದರು. ಶಾಲೆಯ ವಿದ್ಯಾರ್ಥಿಗಳನ್ನು ಹಸಿರುಮನೆ, ಕೆಂಪು ಮನೆ, ನೀಲಿ ಮನೆ, ಹಳದಿ ಎಂದು ಗುಂಪು ಮಾಡಿ ಸಾಹಿತ್ಯ ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದರು. ಜೈನ ವಿದ್ವಾಂಸರಾದ ಡಿ. ಪದ್ಮನಾಭ ಶರ್ಮರು ಬಹು ಭಾಷಾ ವಿದ್ವಾಂಸರಾದ ಪಠ್ಯಪುಸ್ತಕಗಳನ್ನು ಪದ್ಯಗಳನ್ನು ಬರೆಯುತ್ತಿದ್ದೆ. ಪಂಡಿತ ಪಟ್ಟಾಭಿರಾಮಯ್ಯ, ತರಾಸುಗೆ ಗುರುಗಳಾಗಿದ್ದ ಡಿ. ವಿ. ಶೇಷಗಿರಿರಾವ್, ಮೊದಲಾದವರು ಬೋಧಕರಾಗಿದ್ದರು. ಆಗ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯನವರು ನಮ್ಮ ಶಾಲೆಗೆ ಬಂದು ವಿದ್ಯಾರ್ಥಿಗಳಿಗೆ ಪಾಠ ಮಾಡಿದ್ದರು. ನಾನು ಅಂತರ ಹೈಸ್ಕೂಲ್ ಡಿಬೇಟುಗಳಲ್ಲಿ ಭಾಗವಹಿಸಿದ್ದ ಡಿಬೇಟರ್ ಆಗಿದ್ದೆ. ನಮ್ಮ ಶಿಕ್ಷಕರು ನಮ್ಮನ್ನು ಚರ್ಚಾಕೂಟಕ್ಕೆ ತಯಾರಿ ಮಾಡಿ ಕಳಿಸುತ್ತಿದ್ದರು. ನಮ್ಮಲ್ಲಿ ಸಾಹಿತ್ಯ ಪ್ರೇಮ ಹುಟ್ಟಿದ್ದೇ ಹೈಸ್ಕೂಲಿನ ಶೈಕ್ಷಣಿಕ ಚಟುವಟಿಕೆಗಳು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮ, ಲೈಬ್ರರಿ ಓದಿನಿಂದ.

ಪ್ರಶ್ನೆ : **ಪಾಲಿಟೆಕ್ನಿಕ್ ಶಿಕ್ಷಣದ ಕಾಲದಲ್ಲಿ ನಡೆದ ವಿಶೇಷ ಸಂಗತಿಗಳಾವುವು?**

ಉತ್ತರ : ಹೌದು. ಇದೆ. ಎಸ್. ಜೆ. ಪಾಲಿಟೆಕ್‌ನಲ್ಲಿ ಓದುತ್ತಿದ್ದಾಗ ಇನ್ಸ್ಟ್ರುಮೆಂಟ್ ಮೆಕಾನಿಕ್ಸ್ ನನ್ನ ಅಭ್ಯಾಸದ ವಿಷಯ. ಆ ವಿಭಾಗದ ಅಧ್ಯಾಪಕ ಸೀತಾಪತಿ ಎಂಬುವರು ಪ್ರಸಿದ್ಧ ಸಿನಿಮಾ ಸಂಗೀತ ನಿರ್ದೇಶಕರಾದ ಜಿ. ಕೆ. ವೆಂಕಟೇಶ್ ಅವರ ಅಣ್ಣ. ಅಣ್ಣನನ್ನು ನೋಡಲು ಅವರ

ಮನೆಗೆ ಬಂದಾಗಲೆಲ್ಲ ಅವರು ಸಂಯೋಜಿಸಿದ ಸಂಗೀತ ಹಾಡುಗಳನ್ನು ಅವರಿಂದಲೇ ಕೇಳುತ್ತಿದ್ದೆ. ಹೇಗೆಂದರೆ ನಮ್ಮ ಅಧ್ಯಾಪಕರಾದ ಸೀತಾಪತಿ ಅವರ ಮಗನಿಗೆ ಕನ್ನಡ ಪಾಠ ಹೇಳುತ್ತಿದ್ದೆ. ಶಾಲೆಯಲ್ಲಿ ವಿದ್ಯಾರ್ಥಿ ಮನೆಯಲ್ಲಿ ಮೇಷ್ಟ್ರು ಆಗಿದ್ದೆ.

ಇನ್ನೊಂದು ಮುಖ್ಯ ಸಂಗತಿ ಎಂದರೆ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಹಲವಾರು ಬಾರಿ ಭೇಟಿ ಮಾಡಿ ವಾದ-ಚರ್ಚೆಯನ್ನು ಅವರೊಂದಿಗೆ ಮಾಡಲು ಪಾಲಿಟೆಕ್ನಿಕ್‌ನಲ್ಲಿ ಸಿಕ್ಕಿದ್ದು. ಕನ್ನಂಬಾಡಿ ಕಟ್ಟೆ ಕಟ್ಟುವಾಗ ಅವರ ಜತೆ ಕೆಲಸ ಮಾಡಿದ ಕಪನೀಪತಿ ಭಟ್ಟ ಅವರು ಪಾಲಿಟೆಕ್ನಿಕ್ನ ಪ್ರಿನ್ಸಿಪಾಲರಾಗಿದ್ದರು. ಅವರಿಬ್ಬರೂ ಕೇವಲ ಅಧಿಕಾರಿ-ನೌಕರ ಸಂಬಂಧಿಗಳಷ್ಟೇ ಆಗಿರಲಿಲ್ಲ. ಪರಸ್ಪರ ಪರಮ ಮಿತ್ರರಾಗಿದ್ದರು. ಆತ್ಮೀಯರಾಗಿದ್ದರು. ಅವರು ಕರೆದಾಗಲೆಲ್ಲ ತಾನೇ ಸ್ಥಾಪಿಸಿದ ಸಂಸ್ಥೆಯ ಮೇಲಿನ ಪ್ರೀತಿಯಿಂದ ಬರುತ್ತಿದ್ದರು. ಯಾರಾದರೂ ವಿದ್ಯಾರ್ಥಿ ಏನಾದರೂ ಸಣ್ಣಪುಟ್ಟ ಸಾಧನೆ ಮಾಡಿದರೆ ವಾರ್ಷಿಕೋತ್ಸವ ಇತ್ಯಾದಿ ಸಮಾರಂಭಗಳಿಗೆ ಪದೇ ಪದೇ ವಿಶ್ವೇಶ್ವರಯ್ಯನವರು ಬರುತ್ತಿದ್ದರು. ಆಗ ನಮಗೆಲ್ಲಾ ಅವರ ಭೇಟಿ ಲಭ್ಯವಾಗುತ್ತಿತ್ತು.

ಒಮ್ಮೆ ನಿಮಗೆ ಕಾರಿದೆ, ನಿವೃತ್ತಿಯ ಸಕಾಲಕ್ಕೆ ನಿಮಿಷ ವ್ಯತ್ಯಾಸವಿಲ್ಲದೆ ಎಲ್ಲ ಕಡೆ ಹಾಜರಾಗುತ್ತೀರಿ. ನಮಗೆ ಸೈಕಲ್ಲೂ ಇಲ್ಲ. ಮನೆಯಲ್ಲಿ ವೇಳೆಗೆ ಸರಿಯಾಗಿ ಊಟ ಹಾಕುವುದಿಲ್ಲ. ಮಣ್ಣಿನ ರಸ್ತೆ ಅಡೆತಡೆಗಳು ಇತ್ಯಾದಿ ವಾದಗಳನ್ನು ಬಾಲಿಶವಾಗಿ (ನಾವು ವಿದ್ಯಾರ್ಥಿಗಳಲ್ಲವೇ?) ಮಾಡಿದೆವು. ಅದಕ್ಕೆ ಅವರು ಒಂದೇ ಮಾತು ಹೇಳಿದರು. ಶಾಂತವಾಗಿ ನಮ್ಮೆಲ್ಲರ ಮಾತು ಕೇಳಿದ ಮೇಲೆ 'ಸಮಯಕ್ಕೆ ಸರಿಯಾಗಿ ಬರಲಾಗದಿದ್ದರೆ ಸಾಕಷ್ಟು ಮುಂಚೆಯೇ ಬನ್ನಿ, ಲೇಟಾಗುವುದಿಲ್ಲ' ಎಂದರು. ನಾವೆಲ್ಲ ಸಂತೆಗೆ ಮುಂಚೆ ಗಂಟು ಕಳ್ಳರು ಸೇರಿದರು ಎಂಬಂತೆ ಶಾಲೆ ಬಾಗಿಲು ತೆಗೆಯುವ ಮುಂಚೆಯೇ ಹಾಜರಾಗುವುದನ್ನು ಅಭ್ಯಾಸ ಮಾಡಿಕೊಂಡೆವು. ಇದು ಅಭ್ಯಾಸವಾಗಿ ಸಾರ್ವಜನಿಕ ಜೀವನದಲ್ಲಿ ಕಳೆದ ೫೦ ವರ್ಷಗಳಲ್ಲಿ ತರಗತಿ ಪಾಠಕ್ಕಾಗಲಿ ಗೋಷ್ಠಿಗಳಿಗಾಗಲಿ ಭಾಷಣಗಳಿಗಾಗಲಿ ಯಾವುದೇ ಕಾರ್ಯಕ್ರಮಕ್ಕೆ ತಡವಾಗಿ ಹೋಗಿಲ್ಲ. ಬೇರೆ ಊರಿಗೆ ಭಾಷಣಗಳಿಗೆ ಹೋದಾಗ ಹಿಂದಿನ ದಿನವೇ ಆ ಊರಿಗೆ ಹೋಗುತ್ತೇವೆ. ವಿಶ್ವೇಶ್ವರಯ್ಯರಿಂದ ಕಲಿತ ಜೀವನಪಾಠ ಒಂದು ಶಿಸ್ತನ್ನು ಕಲಿಸಿದೆ.

ಪ್ರಶ್ನೆ : ಡಿಗ್ರಿ ತರಗತಿಗಳಲ್ಲಿ ಓದುವಾಗ ಮರೆಯಲಾಗದ ಸಂಗತಿ ಏನಾದರೂ ಇದೆಯೇ? ನೀವು ಚರ್ಚಾಪಟುಗಳು ಹೇಗಾದಿರಿ?

ಉತ್ತರ : ಹೌದು. ಎ.ಪಿ.ಎಸ್. ಕಾಲೇಜಿನಲ್ಲಿ ಬೆಳಗಿನ ಕಾಲೇಜಲ್ಲಿ ಓದಿದೆ. ಆಗತಾನೇ ಉದ್ಯೋಗಿಗಳಿಗಾಗಿ ಬೆಳಗಿನ ಕಾಲೇಜು ಪ್ರಾರಂಭವಾಗಿತ್ತು. ಮಧ್ಯಾಹ್ನ ಸಂಜೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳನ್ನು ನೋಡುತ್ತಾ ವಿ.ಸೀ., ಕೆ.ಎಸ್.ನ. ಮೋಟಗಾನಹಳ್ಳಿ, ಡಿ.ಎಲ್.ಎನ್., ತೀ.ನಂ.ಶ್ರೀ ಮೊದಲಾದ ವಿದ್ವಾಂಸರ ಸಾಹಿತಿಗಳ ಪರಿಚಯ ಮಾಡಿಕೊಂಡೆ. ಆ ಸಂದರ್ಭದಲ್ಲಿ ನನ್ನ ಮಿತ್ರ ಸುಬ್ಬರಾವ್ ಮೂಲಕ ಅನಕೃ ಪರಿಚಯವಾಗಿ ಅನಕೃ-ರಾಮಮೂರ್ತಿ ಕನ್ನಡ ಚಳವಳಿಯ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬನಾದೆ. ಅನಕೃ ಪ್ರಭಾವಕ್ಕೆ ಒಳಗಾಗಿ ಬದುಕಿನ ಪಾಠ ಕಲಿತಿದ್ದೇನೆ.

ಆ ಕಾಲದಲ್ಲಿ ಕನ್ನಡ ಚರ್ಚಾಕೂಟಗಳು ಎಲ್ಲಾ ಕಾಲೇಜುಗಳಲ್ಲಿ ಅದ್ದೂರಿಯಾಗಿ ನಡೆಯುತ್ತಿತ್ತು. ಕೇವಲ ಕಾಲೇಜು ಕಾರ್ಯಕ್ರಮಗಳಾಗಿರಲಿಲ್ಲ. ಸಾರ್ವಜನಿಕ ಕಾರ್ಯಕ್ರಮಗಳಾಗಿದ್ದವು. ಕಾಲೇಜಿನ ಸಭಾಂಗಣಗಳಲ್ಲಿ ಚರ್ಚಾಕೂಟಗಳು ನಡೆಯುತ್ತಿದ್ದವು. ವಿದ್ಯಾರ್ಥಿ ತಂದೆ-ತಾಯಿಗಳು ಸ್ನೇಹಿತರು ಎಲ್ಲರೂ ಬರುತ್ತಿದ್ದರು. ಹೈಸ್ಕೂಲಿನಲ್ಲೂ ಕನ್ನಡ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದ ನಾನು ಅಂತರ ಕಾಲೇಜು ಚರ್ಚಾಕೂಟಗಳಲ್ಲಿ ಪರಿಷತ್ತು ನಡೆಸಿದ ಭಾಷಣ ಕಲಾ ತರಗತಿ (೧ ವರ್ಷದ ಶಿಬಿರ) ಗಳಿಗೆ ಹಾಜರಾದೆ. ಕನ್ನಡ ಚಳವಳಿಯ ಸಭೆಗಳಲ್ಲಿ ಭಾಷಣಗಳನ್ನು ಮಾಡಿದೆ. ಹೀಗಾಗಿ ಚರ್ಚಾಪಟು ವಾಗ್ಮಿ ಆಗಿ ಎಂ.ಎ. ವ್ಯಾಂಸಗ ಕಾಲದಲ್ಲೂ ಅನೇಕ ಚರ್ಚಾಕೂಟಗಳಲ್ಲಿ ಪಾರಿತೋಷಕಗಳನ್ನು ಪಡೆದೆ. ಒಂದು ಗೋಣಿಚೀಲದಷ್ಟು ಕಪ್ಪುಗಳು ಬಹುಮಾನವಾಗಿ ಬಂದಿವೆ.

ಪ್ರಶ್ನೆ : ಕ.ವಿ.ವಿ.ದ ಸ್ನಾತಕೋತ್ತರ ಪದವಿಗಾಗಿ ಓದುವ ಕಾಲದ ವಿಶೇಷ ಸಂಗತಿಗಳಿವೆಯೇ?

ಉತ್ತರ : ಇದೆ. ಸಮಾಜಶಾಸ್ತ್ರ ಎಂ.ಎ. ಸೆಂಟ್ರಲ್ ಕಾಲೇಜಿನಲ್ಲಿ ಮಾಡುವಾಗ ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಾರಂಭವಾಗಿ ಬೆಂ.ವಿ.ವಿ.ದ ಮೊದಲ ತಂಡದ ವಿದ್ಯಾರ್ಥಿಯಾದೆ. ಸರ್ವಪಲ್ಲಿ ರಾಧಾಕೃಷ್ಣರು ಮೊದಲ ಘಟಿಕೋತ್ಸವಕ್ಕೆ ಬಂದಿದ್ದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಧಾರವಾಡದಲ್ಲಿ ವಿದ್ಯಾರ್ಥಿ ಆಗಿದ್ದಾಗ ಬೇಂದ್ರೆ, ಶಂಬಾ ಜೋಶಿ, ಕಣವಿ, ಮೊದಲಾದ ಸಾಹಿತಿಗಳ ನಿಕಟ ಪರಿಚಯ ಆಯಿತು. ಬೇಂದ್ರೆ ಅವರ ೭೦ನೇ ವರ್ಷದ ಸಮಾರಂಭವನ್ನು ವಿದ್ಯಾವರ್ಧಕ ಸಂಘದಲ್ಲಿ ನಡೆದಾಗ ಒಂದು ರೂಪಾಯಿ ನೋಟಿನ ಬಿಳಿ ಭಾಗದಲ್ಲಿ ಚುಟುಕು ಬರೆದು ಅರ್ಪಿಸಿದೆ. ಅದು ಈಗಲೂ ಬೇಂದ್ರೆ ಸಂಗ್ರಹದಲ್ಲಿದೆ. ಆ ಸಭೆಗೆ ಕೇವಲ ೧೦-೧೫ ಮಂದಿ ಇದ್ದರು. ಎಲ್ಲರೂ ಸಾಹಿತಿಗಳೇ ಆಗಿದ್ದರು. ನಾನೊಬ್ಬನೇ ವಿದ್ಯಾರ್ಥಿ ಎಲ್ಲರೂ ಕವಿತಾ ಕಾಣಿಕೆ ಅರ್ಪಿಸಿದ್ದರು. ನೀವು ಒಬ್ಬರೇ ಏನಾದರೂ ಬರೆದೋದಿರೋದು ಎಂದರು. ವರದರಾಜ ಹುಯಿಲಗೋಳರು ಕಾರ್ಯದರ್ಶಿಗಳು. ನಾನು ಆಕಸ್ಮಿಕವಾಗ ಆ ಸಭೆಗೆ ಹೋಗಿದ್ದೆ. ಕಾರ್ಯಕ್ರಮ ಮೊದಲು ತಿಳಿದಿರಲಿಲ್ಲ. ಆಗ ನನ್ನ ಸಹಪಾಠಿ ಗುರುಲಿಂಗ ಕಾಪಸೆ ಅವರಿಂದ ಖಾಲಿ ಕಾಗದ ಇರಲಿಲ್ಲ. ರೂಪಾಯಿ ನೋಟಿನ ಮೇಲೆ ಚುಟುಕ ಬರೆದು ಬೇಂದ್ರೆಗೆ ಅರ್ಪಿಸಿದೆ. ಬೇಂದ್ರೆ ಇಡೀ ಭಾಷಣವನ್ನು 'ಅಶ್ವತ್ಥ' ಎಂಬ ನನ್ನ ಹೆಸರಿನ ಬಗ್ಗೆಯೇ ಮಾತಾಡಿದರು.

ಮಿತ್ರರಾದ ಶಂಬಾ ಜೋಶಿ ಅವರ ಕರ್ನಾಟಕ ಸಂಸ್ಕೃತಿಯ ಗ್ರಂಥಕ್ಕೆ ವಿಸ್ತಾರ ಸೂಚಿ ಮಾಡಿಕೊಟ್ಟೆ. ನನಗೆ ಅಧ್ಯಾಪಕರಾಗಿದ್ದ ಬಿ. ಎಸ್. ಕುಲಕರ್ಣಿ ಅವರ ಮಹಾಪ್ರಬಂಧವನ್ನು ವಿವಿಧ ಬಣ್ಣದ ಶಾಯಿಯಲ್ಲಿ ಬರೆದುಕೊಟ್ಟೆ. ನನ್ನ ಸುಂದರ ಬರಹವನ್ನು ಅವರು ಮೆಚ್ಚಿಕೊಂಡಿದ್ದರು.

ಕಾಲೇಜಿನ ಸಂಜೆ ವೇಳೆ ಚರಿತ್ರೆ ವಿಭಾಗದಿಂದ ನಡೆಯುತ್ತಿದ್ದ ಶಾಸನಶಾಸ್ತ್ರ ಡಿಪ್ಲೊಮಾಗೆ ಸೇರಿದೆ. ಡಾ. ಪಿ. ಬಿ. ದೇಸಾಯಿ, ಶ್ರೀನಿವಾಸ, ಬಾರಾಗೋಪಾಲ್, ದೀಕ್ಷಿತ್ ಮೊದಲಾದ ವಿದ್ವಾಂಸರು ಶಾಸನತಜ್ಞರು ಪಾಠ ಹೇಳಿದರು. ಅವರೆಲ್ಲರ ಶಿಷ್ಯ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಅದರ ಫಲವಾಗಿ ಹಾಸನದಲ್ಲಿ ಅಧ್ಯಾಪಕನಾದಾಗ ವಿದ್ಯಾರ್ಥಿಗಳನ್ನೆಲ್ಲಾ

ಶ್ರವಣ ಬೆಳಗೊಳಕ್ಕೆ ಕರೆದುಕೊಂಡು ಎಲ್ಲಾ ಶಾಸನಗಳನ್ನು ಲೀಲಾಜಾಲವಾಗಿ ಓದಿ ಹೇಳಿದೆ. ಅರ್ಥ ವಿವರಿಸಿದೆ.

ಪ್ರಶ್ನೆ : ನಿಮ್ಮನ್ನು ಈಗಿನ ವಿದ್ಯಾರ್ಥಿ ವೃಂದಕ್ಕೆ ಪರಿಚಯಿಸಬೇಕು, ಏಕೆಂದರೆ ಹಿಂದಿನ ತಲೆಮಾರಿನ ಆದರ್ಶ ಅಧ್ಯಾಪಕರ ಸಾಲಿಗೆ ಸೇರುವ ಇಂದಿನ ಅಧ್ಯಾಪಕರಾಗಿದ್ದೀರಿ. ಈಗಿನ ತಲೆಮಾರಿನವರಿಗೆ ಪರಂಪರೆ ತಿಳಿದಿಲ್ಲ. ಹಿಂದಿನ ಅಧ್ಯಾಪಕರ ಪ್ರತಿಭೆ ಪಾಂಡಿತ್ಯ ಅನುಭವ ಗೊತ್ತಿಲ್ಲ. ಆದ್ದರಿಂದ ನಿಮ್ಮ ಸಂದರ್ಶನದ ಮೂಲಕ ಯುವ ಜನಾಂಗಕ್ಕೆ ಮಾರ್ಗದರ್ಶನ ದೊರೆಯುತ್ತದೆ ಎಂದು ಭಾವಿಸಿದ್ದೇನೆ. ಅಲ್ಲವೇ?

ಉತ್ತರ : ನೀವು ಹೇಳಿದ ಕಾರಣಗಳಿಗಾಗಿ ನನ್ನನ್ನೇ ಸಂದರ್ಶಿಸಬೇಕಿಲ್ಲ. ಎಷ್ಟೋ ಜನ ಮೇಷ್ಟ್ರುಗಳು ನನಗಿಂತ ಹೆಚ್ಚಿನ ಅನುಭವ ಪ್ರತಿಭೆ ವ್ಯಾಸಂಗ, ವಾಗ್ಝರಿ, ಪದವಿ ಪ್ರಶಸ್ತಿ ಪ್ರಸಿದ್ಧಿ ಘನತೆ ವಿದ್ಯಾರ್ಹತೆ ಪಡೆದವರಿದ್ದಾರೆ. ಅಂಥವರನ್ನು ಸಂದರ್ಶಿಸಿದರೆ ನಿಮ್ಮ ಉದ್ದೇಶ ನರವೇರಬಹುದು. ನಾನು ಒಬ್ಬ ಸಾಮಾನ್ಯ ಕನ್ನಡ ಅಧ್ಯಾಪಕ. ಆದರೆ, ಪ್ರಾಮಾಣಿಕವಾಗಿ ಅಧ್ಯಾಪನದಲ್ಲಿ ತೊಡಗಿದ್ದೇನೆ ಅಷ್ಟೆ. ವಿದ್ಯಾರ್ಥಿಗಳಿಗೆ ತೃಪ್ತಿ, ನನಗೆ ಸಾರ್ಥಕತೆ ಸ್ವಲ್ಪಮಟ್ಟಿಗೆ ಕೊಟ್ಟಿರಬಹುದು. ನನ್ನ ಪಾಠಬೋಧೆ ಅಷ್ಟೆ. ಬಸವಣ್ಣನವರು ಹೇಳುವಂತೆ ಈ ವಿಚಾರದಲ್ಲಿ ನನಗಿಂತ ಕಿರಿಯರಿಲ್ಲ, ಉಳಿದ ಎಷ್ಟೋ ಅಧ್ಯಾಪಕರಿಗಿಂತ ಹೆಚ್ಚು ಕಾಲ ಸುಮಾರು ೭೦ ವರ್ಷಗಳಿಂದ ಪಾಠ ಹೇಳುತ್ತಿದ್ದೇನೆ. ಅಷ್ಟೇ ಇಂದೂ ಸಹ ನಿವೃತ್ತನಾದರೂ ಉಚಿತವಾಗಿ ಮಾರ್ಗದರ್ಶನದ ಪಾಠಗಳನ್ನು ಹೇಳುತ್ತಿದ್ದೇನೆ ಅಷ್ಟೆ.

ಇಂದಿಗೂ ನಾನು ಓದುಗ, ಅಭ್ಯಾಸಿಗ, ಕೇಳಲು ಬಂದವರಿಗೆ ತಿಳಿದಿದ್ದನ್ನು ಪ್ರೀತಿಯಿಂದ ತಿಳಿಸುವ ಕಾಯಕವಷ್ಟೆ ನನ್ನದು.

ಪ್ರಶ್ನೆ : ನೀವು ಮೂಲತಃ ಕನ್ನಡ ಅಧ್ಯಾಪಕರು. ನಿಮ್ಮ ಪಾಠದ ವೈಖರಿ ವಿದ್ಯಾರ್ಥಿಗಳ ಮೇಲೆ ಬೀರಿದ ಪ್ರಭಾವ ತಿಳಿಸುತ್ತೀರಾ?

ಜಿ. ಪಿ. ರಾಜರತ್ನಂ, ವೆಂಕಟರಾಮಪ್ಪ, ಎಂ.ವಿ.ಸೀ., ವಿ.ಸೀ. ಮುಂತಾದ ಪ್ರತಿಭಾವಂತ ಅಧ್ಯಾಪಕರ ಪಾಠ ಕೇಳಿ ಆನಂದಿಸಿದವನು ನಾನು. ಅವರ ಪಾಠವೈಖರಿ ನನ್ನ ಆದರ್ಶ ಅದರಲ್ಲೂ ನನಗಷ್ಟೇ ಅಲ್ಲ ಎಲ್ಲರಿಗೂ ಆದರ್ಶ. ಕನ್ನಡ ಮೇಷ್ಟ್ರು ಎಂದರೆ ಜಿ.ಪಿ. ರಾಜರತ್ನಂ, ನರ್ಸರಿ ಮಕ್ಕಳಿಂದ ಹಿಡಿದು ಎಂ.ಎ. ತರಗತಿಗಳವರೆಗೆ ಪಾಠ ಮಾಡಿದ ಮೇಷ್ಟ್ರು ಅವರು. ಪರಿಪೂರ್ಣ ಮಾಸ್ತರ, ಹೀಗಾಗಿ ನಾನು ಅಧ್ಯಾಪಕನಾದಾಗ ಇವರೆಲ್ಲ ನನ್ನ ಕಣ್ಣ ಮುಂದಿದ್ದರು.

ಇನ್ನೊಂದು ಸಂಗತಿ ಎಂದರೆ ನಾನು ಅಧ್ಯಾಪಕನಾದುದ್ದು ಮೊಟ್ಟ ಮೊದಲಿಗೆ ಸಂಜೆ ಕಾಲೇಜಿನಲ್ಲಿ. ಅಲ್ಲಿದ್ದವರೆಲ್ಲಾ ನನಗಿಂತ ಹಿರಿಯರು. ಅನುಭವಿಗಳು, ತಿಳಿದವರು. ಯಾವುದೋ ಕಾರಣದಿಂದ ವಿದ್ಯಾರ್ಥಿಗಳಾಗಿ ಬಂದವರು ಉದ್ಯೋಗದಲ್ಲಿ ಉನ್ನತಾಧಿಕಾರಿಗಳಾಗಿದ್ದು ಇಲ್ಲಿ ಬರುವವರು, ಕಲಾವಿದರು, ನೌಕರರು, ಗೃಹಿಣಿಯರು– ಎಲ್ಲ ಬಗೆ ಜನರೂ ವಿದ್ಯಾರ್ಥಿಗಳಾಗಿದ್ದರು. ಅವರೆಲ್ಲರ ಮುಂದೆ ನಾನು ಒಂದರ್ಥದಲ್ಲಿ ಬಚ್ಚಾ ಆಗಿದ್ದೆ. ಇನ್ನು ನನ್ನ ಸಾದಾ ಉಡುಪು, ಬಗಲು ಚೀಲ, ಚಪ್ಪಲಿ ಕಾಲು , ಕೈಗಡಿಯಾರ ಇಲ್ಲದ ಬರಿ ಕೈ ಮಾಸ್ತರ ಆಗಿದ್ದೆ. ಅವರಿಗಿಂತ ಜಾಸ್ತಿ ಓದಿದ್ದೆ ಅನ್ನುವುದೇ ನನ್ನ ಏಕೈಕ ಬಂಡವಾಳ ಆಗಿತ್ತು.

ಅಲ್ಲಿಯ ಅನುಭವ ನನ್ನನ್ನು ಒಳ್ಳೆಯ ಅಧ್ಯಾಪಕನನ್ನಾಗಿ ಮಾಡಿತು. ಸರ್ಕಾರಿ ಕಾಲೇಜುಗಳಲ್ಲಿ ವಿವಿಧ ರೀತಿ ಅನುಭವಗಳಾದವು. ಹೀಗಾಗಿ ಸಾಕಷ್ಟು ಒಳ್ಳೆಯ ಪಾಠ ಮಾಡುವ ಮೇಷ್ಟ್ರು ಆದೆ.

ನಾನು ಪಾಠ ಮಾಡಿದ್ದು ವಿದ್ಯಾರ್ಥಿಗಳಿಗೆ ತೃಪ್ತಿ ತಂದಿದೆ ಎನ್ನಲು ಸಾಕ್ಷಿ ಸಾವಿರಾರು ವಿದ್ಯಾರ್ಥಿಗಳು ನನ್ನನ್ನು ಗುರುತಿಸುವುದು. ನಾನು ಪಾಠ ಮಾಡಿದ ಪಠ್ಯದಿಂದ. ಅರ್ಧ ಶತಮಾನದ ಹಿಂದಿನ ವಿದ್ಯಾರ್ಥಿಗಳು ನನಗಿಂತ ಹೆಚ್ಚು ಓದಿ ಉನ್ನತ ಸ್ಥಾನ ಗಳಿಸಿದರೂ ನನ್ನನ್ನು ಮೀರಿಸಿದ್ದರೂ ನೀವೇ ನಮಗೆ ಆದರ್ಶ ಇಂದಿಗೂ ಎನ್ನುತ್ತಾರೆ. ಇದು ನನಗೆ ಸಂತೋಷ ತರುವ ವಿಷಯವಾಗಿದೆ. ಪೂರ್ಣಸಿದ್ಧತೆಯಿಂದ ಅಪಾರ ಓದಿನಿಂದ ಪಾಠ ಮಾಡಿದ್ದರಿಂದ ಆದರ್ಶ ಅಧ್ಯಾಪಕರ ಮಾದರಿ ಅನುಸರಿಸಿದ್ದರಿಂದ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರಿದ್ದೇನೆ ಎಂದು ತಿಳಿದಿದ್ದೇನೆ. ಅಭ್ಯಾಸದಲ್ಲಿ ಇಂದಿಗೂ ನಾನು ಮೇಷ್ಟ್ರೇನೆ.

ಪ್ರಶ್ನೆ : ನೀವು ಕೇವಲ ಕಾಲೇಜು ಮೇಷ್ಟ್ರು ಆಗಿರಲಿಲ್ಲ. ಬೇರೆ ಬೇರೆ ರಂಗಗಳಲ್ಲೂ ಅಧ್ಯಾಪಕರಾಗಿದ್ದೀರಿ ಹೌದೆ? ವಿವರಿಸುತ್ತೀರಾ?

ಉತ್ತರ : ಹೌದು. ನಾನು ಬಾಳಿನುದ್ದಕ್ಕೂ ಅಧ್ಯಾಪಕನಾದವನು. ಈಗಲೂ ನಿವೃತ್ತನಾದರೂ ಮಾರ್ಗದರ್ಶನ ಮಾಡುವ ಅಧ್ಯಾಪಕನಾಗಿದ್ದೇನೆ. ಐ.ಎ.ಎಸ್., ಕೆ.ಎ.ಎಸ್. ಎಂ.ಎ. ವಿದ್ಯಾರ್ಥಿಗಳಿಗೆ ಪಾಠ ಹೇಳಿದ್ದೇನೆ. ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಹಳಗನ್ನಡ ತರಗತಿಗಳಲ್ಲಿ ಬೋಧಿಸಿದ್ದೇನೆ. ಸಂಸ್ಕೃತಿ ಇಲಾಖೆ ನಡೆಸುತ್ತಿದ್ದ ಸರ್ಕಾರಿ ಅಧಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಸಾಪ್ತಾಹಿಕ ಆಡಳಿತ ಕನ್ನಡ ಶಿಬಿರಗಳನ್ನು ನಾನು ಪ್ರಧಾನ್ ಗುರುದತ್ ಪ್ರಾರಂಭಿಸಿ ನೂರಾರು ಶಿಬಿರ ನಡೆಸಿದ್ದೇನೆ. ಅಮೆರಿಕೆಯಲ್ಲಿ ನಮ್ಮ ಮಗಳು ಕ್ಷಮಾ ಇದ್ದಾಳೆ. ಅಲ್ಲಿದ್ದಾಗ ಅಮೇರಿಕೆಯ ಕನ್ನಡ ಮಕ್ಕಳಿಗೆ ನನ್ನ ಮೊಮ್ಮಗನಿಗೆ ಕನ್ನಡ ಕಲಿಸಿದ್ದೇನೆ. ನಮ್ಮ ಮನೆ ಕೆಲಸಕ್ಕೆ ಬಂದಾಕೆಗೆ ಕನ್ನಡ ಕಲಿಸಿದ್ದೇನೆ. ಕನ್ನಡ ಕಲಿಸುವುದು ಓದುವುದು ಬರೆಯುವುದು ನನ್ನ ಅಭ್ಯಾಸ, ಹವ್ಯಾಸ ಆಸಕ್ತಿ ವೃತ್ತಿ.

ಪ್ರಶ್ನೆ : ಕೇವಲ ಶಾಲಾ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ್ದಲ್ಲದೆ ಅನೇಕ ಪ್ರವಚನ ಮಾಲಿಕೆ ಭಾಷಣ ಮಾಲೆ ನಡೆಸಿಕೊಟ್ಟಿದ್ದೀರಿ ಹೌದೆ?

ಉತ್ತರ : ಹೌದು. ಆಕಾಶವಾಣಿ ಎಫ್.ಎಂ. ರೇಡಿಯೋ ಜ್ಞಾನಜ್ಯೋತಿ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಕಣ್ಮಣಿಗಳು ಎಂಬ ಮಾಲಿಕೆಯಲ್ಲಿ ನಾಡಿನ ಪ್ರಸಿದ್ಧ ಸಾಹಿತಿ ವಿದ್ವಾಂಸರ ಜೀವನ ಕೃತಿ ಪರಿಚಯ ಭಾಷಣ ತಿಳಿಸಿದ್ದೆ. ಕೇಶವಮೂರ್ತಿ-ಸುಬ್ಬರಾವ್ ಎಂಬುವರ ನೇತೃತ್ವದಲ್ಲಿ ಮನೆಯಲ್ಲಿ ಸಂಜೆ ವಾರಕ್ಕೊಮ್ಮೆ ಉಪನ್ಯಾಸದಂತೆ ರಾಮಾಯಣ ದರ್ಶನಂ–ಆದಿಪುರಾಣ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ ಮುಂತಾದ ಮಹಾಕಾವ್ಯಗಳನ್ನು ಪರಿಚಯಿಸಿದ್ದೇನೆ. ಗಮಕ ವಾಚನಗಳಿಗೆ ವ್ಯಾಖ್ಯಾನಿಸಿದ್ದೇನೆ.

ಕನ್ನಡ ಅಧ್ಯಾಪಕನಾದರೆ, ಸದಾ ಕನ್ನಡ ಓದು ಬರಹ ಮಾತು ಒಟ್ಟು ಕನ್ನಡಿಗನಾಗಿರುವುದು.

ಪ್ರಶ್ನೆ : ನೀವು ಕೇವಲ ಕನ್ನಡ ಅಧ್ಯಾಪಕರಷ್ಟೆ ಅಲ್ಲ, ಸಂಘ ಸಂಸ್ಥೆಗಳಲ್ಲ ಸೇವೆ ಸಲ್ಲಿಸಿದ್ದೀರಿ. ಆ ಬಗ್ಗೆ ಹೇಳುವುದೇನಿದೆ?

ಉತ್ತರ : ಕನ್ನಡ ಅಧ್ಯಾಪಕರ ಹೊಣೆ ಕೇವಲ ಶಾಲೆ ಕಾಲೇಜುಗಳಲ್ಲಿ ಪಾಠ ಮಾಡಿ ಸಂಬಳ ಪಡೆಯುವುದಷ್ಟೆ ಅಲ್ಲ. ಬೇರೆ ನೈತಿಕ ಹೊಣೆಗಾರಿಕೆಗಳಿವೆ. ಸಾರ್ವಜನಿಕರಿಗೆ,

ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಕ್ಕೆ ಹೋಗುವ ಹೊಣೆ ಇದೆ. ಅದಕ್ಕಾಗಿ ನಾಡಿನ ನಾನಾ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಸಾವಿರಾರು ಉಪನ್ಯಾಸಗಳನ್ನು ನೀಡಿದ್ದೇನೆ. ನಾವು ಗಳಿಸದ ಜ್ಞಾನವನ್ನು ಪ್ರಸಾರ ಮಾಡದಿದ್ದರೆ ಬ್ರಹ್ಮರಾಕ್ಷಸ ಜನ್ಮ ತಳೆಯುತ್ತೇವೆ ಎಂದು ಶಾಸ್ತ್ರಗಳು ಸಾರುತ್ತವೆ.

ಶಾಲಾ ಕಾಲೇಜುಗಳಲ್ಲಿಯ ಪಠ್ಯೇತರ ಚಟುವಟಿಕೆಗಳಲ್ಲೇ ಅನೇಕ ಅಧ್ಯಾಪಕರು ಭಾಗವಹಿಸುವುದಿಲ್ಲ. ಇನ್ನು ಊರಿನಲ್ಲಿ ನಾಡಿನಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾತನಾಡುವ ಅಧ್ಯಾಪಕರು ಹೆಚ್ಚಾಗಿಲ್ಲ.

ಗ್ರಾಮಾಂತರ ಜಿಲ್ಲೆಗಳಲ್ಲಿ ಹಾಸನ, ಕೊಳ್ಳೇಗಾಲ, ಮಾಗಡಿ ಮುಂತಾದೆಡೆ ಊರಿಗೆಲ್ಲಾ ಒಬ್ಬಳೇ ಪದ್ಮಾವತಿ ಎಂಬಂತೆ ಹಳ್ಳಿಗಳ ಶಾಲಾ ಕಾಲೇಜು ಕಾರ್ಯಕ್ರಮಗಳಿಗೆ ನಾನೊಬ್ಬನೇ ಹೋಗುತ್ತಿದ್ದೆ. ಕಾಲೇಜಿನಲ್ಲಿ ಮಾತಾಡಬಲ್ಲ ಮಾಸ್ತರರು ೨೦ ಜನಕ್ಕೂ ಹೆಚ್ಚಾಗಿದ್ದರು. ಶಾಲಾ ಕಾಲೇಜು ಪಾಠದ ವೇಳೆ ಆದಮೇಲೆ ಟ್ಯೂಷನ್ ಮನೆಪಾಠ ಅಧ್ಯಾಪಕರೇ ಹೆಚ್ಚು. ಅದರಲ್ಲೂ ವಾಣಿಜ್ಯ ವಿಜ್ಞಾನ ವಿಷಯಗಳ ಅಧ್ಯಾಪಕರಲ್ಲಿ ಸಾರ್ವಜನಿಕ ಉಪನ್ಯಾಸಕ್ಕೆ ಬರುವವರು ವಿರಳ.

ಅಧ್ಯಾಪಕ ಕಾಲೇಜು ಅಧ್ಯಾಪಕ, ಊರಿನ ಅಧ್ಯಾಪಕ ಅಷ್ಟೆ. ರಾಜ್ಯದ ಅಧ್ಯಾಪಕ, ರಾಷ್ಟ್ರದ ಅಧ್ಯಾಪಕ ಆಗಬೇಕು. ಸರ್ವಪಲ್ಲಿ ರಾಧಾಕೃಷ್ಣನ್ನರ ಹಾಗೆ. ನನ್ನ ಮಿತ್ರ ಸಹೋದ್ಯೋಗಿ ಟಿ.ವಿ. ರಾಜು, ನಾಗರಾಜ್ ಹಾಗೆ ಗುರುರಾಜ ಕರ್ಜಗಿ ಹಾಗೆ ಇನ್ನೂ ಅನೇಕರಿದ್ದಾರೆ. ಸದ್ಯಕ್ಕೆ ನೆನಪಾದವರು ಇವರಷ್ಟೆ.

ಪ್ರಶ್ನೆ : ಹಂಪಿ ವಿಶ್ವವಿದ್ಯಾಲಯದಲ್ಲಿ ೬ ಜನ ಎಂ.ಫಿಲ್. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದಿರಿ. ಅನಧಿಕೃತವಾಗಿ ಹಲವಾರು ಮಂದಿ ಪಿ.ಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದೀರಿ. ಇಂದಿನ ವಿದ್ಯಾರ್ಥಿ ಸಂಶೋಧಕರ ಬಗ್ಗೆ ಏನು ಹೇಳುವಿರಿ?

ಉತ್ತರ : ಯುಜಿಸಿ ನಿಯಮಾವಳಿ ಜಾರಿಗೆ ಬಂದು ಪಿ.ಎಚ್.ಡಿ ಪದವಿಗಳು ಕಾಸಿಗೊಂದು ಕೊಸರಿಗೊಂದು ಆಗಿವೆ. ನಿವೃತ್ತ ಪ್ರಾಧ್ಯಾಪಕರು ಪ್ರೊ. ಟಿ.ವಿ. ವೆಂಕಟಾಚಲಶಾಸ್ತ್ರಿ, ಹಂಪನಾ, ಅ.ರಾ.ಮಿತ್ರ ಅಂತವರು ನಿವೃತ್ತರಾಗಿದ್ದಾರೆ ಎಂಬ ಕಾರಣದಿಂದ ಪಿ.ಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಲು ಅವಕಾಶಗಳಿಲ್ಲವಾಗಿದೆ. ಬಚ್ಚಾ ವಿದ್ಯಾರ್ಥಿಗಳಲ್ಲಿ ಕೇವಲ ಪಿ.ಎಚ್.ಡಿ. ಪಡೆದಿದ್ದಾರೆ. ಅಧ್ಯಾಪಕರಾಗಿದ್ದಾರೆ ಎಂಬ ಕಾರಣಕ್ಕೆ ಮಾರ್ಗದರ್ಶಕರಾಗಿದ್ದಾರೆ. ಇದು ನಾಡಿನ ದುರ್ದೈವ ನಿವೃತ್ತ ಹಿರಿಯ ವಿದ್ವಾಂಸರ ಪ್ರಾಧ್ಯಾಪಕರ ಸೇವೆ ಸಂಶೋಧಕ ವಿದ್ಯಾರ್ಥಿಗಳಿಗೆ ದೊರಕುವಂತೆ ಸರ್ಕಾರ ಯುಜಿಸಿ ನಿಯಮ ಬದಲಿಸಬೇಕು.

ಪ್ರಶ್ನೆ : ನಿಮ್ಮನ್ನು ನಿಮ್ಮ ಹಿರಿಯ ತಲೆಮಾರಿನ ಸಾಹಿತಿಗಳು ಬೆಳೆಸಿದಂತೆ ನೀವು ಯಾರನ್ನಾದರೂ ಬೆಳೆಸಿದ್ದೀರಾ?

ಉತ್ತರ : ಸಾಹಿತಿಗಳನ್ನು ಬೆಳೆಸಲು ಆಗದು. ಪ್ರೋತ್ಸಾಹಿಸಬಹುದು. ಅವರ ಪ್ರತಿಭೆ ವಿಕಾಸಕ್ಕೆ ನೆರವಾಗಬಹುದು. ಯುವಕರು ಬರೆದಾಗ ತೋರಿಸಿದಾಗ ಆಸಕ್ತಿಯಿಂದ ಅವರ ಬರಹಗಳನ್ನು ತಿದ್ದಬೇಕು. ಶ್ರೇಷ್ಠ ಕೃತಿಗಳ ಪರಿಚಯ ಮಾಡಿಸಿ ಉತ್ತಮ ಲೇಖಕರಾಗಲು ಮಾರ್ಗದರ್ಶನ ಮಾಡಬೇಕು ಆ ಕೆಲಸವನ್ನು ಸಾಧ್ಯವಿದ್ದಷ್ಟು ನಾನು ಮಾಡಿದ್ದೇನೆ.

ಇಂದಿನ ಸಂಶೋಧಕ ವಿದ್ಯಾರ್ಥಿಗಳು ಮೈ ಬಗ್ಗಿಸಲು ಶ್ರಮಪಡಲು ಕ್ಷೇತ್ರಕಾರ್ಯ ಮಾಡಲು ಪುಸ್ತಕ ಕೊಳ್ಳಲು ಸತಾತಾಭ್ಯಾಸ ಮಾಡಲು ಸಿದ್ಧರಿಲ್ಲ. ಇದು ನನ್ನ ಅನಿಸಿಕೆ ಅನುಭವ.

ಬಿ.ಎಂ.ಶ್ರೀ. ಅವರ ಕಾಲದಲ್ಲಿ ಅವರ ವಿದ್ಯಾರ್ಥಿಗಳೆಲ್ಲ ಕನ್ನಡ ಸಾಹಿತಿಗಳಾಗಿದ್ದಾರೆ. ತೀ.ನಂ.ಶ್ರೀ., ಡಿ.ಎಲ್.ಎನ್. ವಿದ್ಯಾರ್ಥಿಗಳಲ್ಲಿ ಎಷ್ಟೋ ಜನ ವಿದ್ವಾಂಸರಾಗಿದ್ದಾರೆ. ಆದರೆ ಅಂಥ ವಿದ್ವಾಂಸರು ಅಧ್ಯಾಪಕರು ಇಂದಿನ ತಲೆಮಾರಿನಲ್ಲಿ ಅಪರೂಪ.

ಪ್ರತಿಭೆ ಪಾಂಡಿತ್ಯ ಕಷ್ಟಪಟ್ಟು ಹತ್ತಾರು ವರ್ಷಗಳ ಪರಿಶ್ರಮದಿಂದ ಬರುತ್ತದೆ. ಕುವೆಂಪು ರಾಮಾಯಣ ದರ್ಶನ ಪಡೆಯ ಹಲವಾರು ವರ್ಷ ಅಧ್ಯಯನ, ವೇಳೆ, ಶ್ರಮಪಟ್ಟಿದ್ದಾರೆ. ಒಂದೆರಡು ತಿಂಗಳಲ್ಲಿ ತಯಾರಾದ ಕೃತಿ ಅಲ್ಲ. ಸಾಹಿತ್ಯ ಕಾರ್ಖಾನೆಯ ಪ್ರತಿಭೆ, ಪಾಂಡಿತ್ಯ, ಪರಿಶ್ರಮಗಳ ಸಂಗಮ ಕುವೆಂಪು ಮಹಾಕಾವ್ಯ ರಾಮಯಣ ದರ್ಶನ.

ಪ್ರಶ್ನೆ : ಗ್ರಂಥ ಸಂಪಾದನೆ ನಿಮ್ಮ ಆಸಕ್ತಿ ಕ್ಷೇತ್ರಗಳಲ್ಲಿ ಒಂದಾಗಿದೆ. ಅದರಲ್ಲಿ ನಿಮಗೆದುರಾದ ಸವಾಲುಗಳೇನು? ನಿಮ್ಮ ಕೃಷಿ ಏನು?

ಉತ್ತರ : ಪ್ರಾಚೀನ ಹಸ್ತಪ್ರತಿ, ತಾಳೆಗರಿ ಕಾಗದ ಪ್ರತಿಗಳಿಂದ ಗ್ರಂಥ ಸಂಪಾದನೆ ಮಾಡಲು ವಿದ್ವಾಂಸರಾಗಿರಬೇಕು. ನಾನು ಅಂಥಾ ಘನ ವಿದ್ವಾಂಸ ಅಲ್ಲ. ಅಚ್ಚಾದ ಪ್ರಾಚೀನ ಕೃತಿಗಳಲ್ಲಿ ನನ್ನ ಆಸಕ್ತಿ. ಹಳೆಯ ತಲೆಮಾರಿನ ವಿದ್ವಾಂಸರ ಗ್ರಂಥಗಳ ಅಧ್ಯಯನ ನನ್ನ ಆಸಕ್ತಿ.

ಹೊಸಕೆರೆ ಚಿದಂಬರಯ್ಯ, ಮಹಲಿಂಗರಂಗನ ಅನುಭವಾಮೃತ ಕಪಿನೀಪತಿ ಭಟ್ಟರ ಸೌಂದರ್ಯ ಲಹರಿ ಟೀಕೆ, ಉಪ್ಪಾರಳ್ಳಿ ರಾಮಪ್ಪನವರ ಭಗವದ್ಗೀತೆ, ರತ್ನಾಕರನ ಶತಕಗಳು ಇವೇ ಕೆಲವಾರು ಟೀಕಾಗ್ರಂಥಗಳನ್ನು ಸಂಪಾದಿಸಿದ್ದೇನೆ. ಹಿಂದಿನವರ ಪಾಂಡಿತ್ಯ ಕಂಡು ಬೆರಗಾಗಿದ್ದೇನೆ.

ಅಂಥ ಗ್ರಂಥಗಳು ಬೇಕಾದಷ್ಟಿವೆ. ಪರಿಷ್ಕರಿಸಿ ಪ್ರಕಟಿಸುವ ಕೆಲಸ ಅಗಾಧವಾಗಿದೆ. ನಮ್ಮಲ್ಲಿ ಅನೇಕರು ಆ ಕಡೆ ಮನಸ್ಸು ಮಾಡುತ್ತಿಲ್ಲ. ಅಧಿಕ ಪರಿಶ್ರಮ, ಅಧಿಕ ಕಾಲ ವಿನಿಯೋಗಿಸಲು ಪ್ರತಿಫಲ ರಹಿತ ಕಾರ್ಯವಾದರೂ ಕನ್ನಡ ಭಾಷೆ ಸಾಹಿತ್ಯಗಳಿಗೆ ಶೋಭೆ ತರುವ ಕೆಲಸಕ್ಕೆ ಮನಸ್ಸು ಕೊಡುತ್ತಿಲ್ಲ.

ಹಳಗನ್ನಡ ಕೃತಿಗಳ ಬಗ್ಗೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯದ ಬಗ್ಗೆ ಪರಿಶೋಧನೆ ಮಾಡಬಲ್ಲ ಪಂಡಿತರು ಹಿಂದಿನ ಕಾಲದಲ್ಲಿ ಇದ್ದಂತೆ ಈ ಕಾಲದಲ್ಲಿ ಅತ್ಯಲ್ಪ ಸಂಖ್ಯೆಯಲ್ಲಿದ್ದಾಗ ಅಂಥವರ ಸಂಖ್ಯೆಯನ್ನು ಬೆಳೆಸಲು ಇಂದಿನ ಶಿಕ್ಷಣ ತಜ್ಞರು ಚಿಂತಿಸಬೇಕಾಗಿದೆ.

ಈ ಕ್ಷೇತ್ರದಲ್ಲಿ ಯುವಕ ಸಾಹಿತಿಗಳು ವಿದ್ವಾಂಸರು ಮುಂದೆ ಬರದಿರಲು ಲಾಭದ ಹಿಂದೆ ಹೊರಟಿದ್ದಾರೆ. ಕೀರ್ತಿಗಾಗಿ ಪ್ರಶಸ್ತಿಗಾಗಿ ಹಾತೊರೆಯುತ್ತಾರೆ. ಇದು ಮುಖ್ಯ ಕಾರಣಗಳಲ್ಲಿ ಒಂದು.

****

ಅನಾಜಿ ಸಂದರ್ಶನ ೩

ಮಕ್ಕಳ ಸಾಹಿತ್ಯ

ಸಂದರ್ಶನಕಾರರು : ಜಿ. ಪಿ. ರಾಮಣ್ಣ

ಪ್ರಶ್ನೆ : **ಮಕ್ಕಳ ಸಾಹಿತಿಯೂ ನೀವು ಆಗಿದ್ದೀರಿ. ಬಹಳ ಜನಕ್ಕೆ ತಿಳಿದಿಲ್ಲ ನೀವು ಮಕ್ಕಳ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಏನು?**

ಉತ್ತರ : ಒಳ್ಳೆಯ ಪ್ರಶ್ನೆ ಕೇಳಿದ್ದೀರಿ. ನಾನು ಸಾಹಿತ್ಯ ಲೋಕಕ್ಕೆ ಬಂದಿದ್ದೇ ಟಿ.ಎಂ.ಆರ್. ಸ್ವಾಮಿ, ಪಂಜೆ, ಹೊಯ್ಸಳ, ಜಿ.ಪಿ. ರಾಜರತ್ನಂ, ಶಾಂತರಾಜಯ್ಯ, ದೇವುಡು ಮೊದಲಾದವರ ಮಕ್ಕಳ ಸಾಹಿತ್ಯ ಓದಿ ಸಾಹಿತ್ಯ ರಚನೆಗೆ ಕಾಲಿಟ್ಟೆನು.

ಸಾಹಿತ್ಯ ಪರಿಷತ್ತಿನಲ್ಲಿ ಸದಾ ಓದಿನಲ್ಲಿ ಕಾಲ ಕಳೆಯುತ್ತಿದ್ದಾಗ ಅಲ್ಲಿ ಶಿವರಾಮ ಕಾರಂತರರ ಬಾಲಪ್ರಪಂಚ ಮತ್ತು ಮೀ ಇಂಗ್ಲಿಷ್ ಸಾಹಿತಿಯ ಚಿಲ್ಡ್ರನ್ಸ್ ಎನ್ಸೈಕ್ಲೋಪಿಡಿಯಾ ಓದಿ ಪ್ರಭಾವಿತನಾದೆನು.

ನನ್ನ ಸಾಹಿತ್ಯ ಮಾರ್ಗದರ್ಶಕರಾಗಿದ್ದ ಕಟ್ಟೆ ನಾಗರಾಜ್ ಅವರು ಪರಿಷತ್ತಿನ ಪುಸ್ತಕ ಭಂಡಾರಿಗಳಾಗಿದ್ದವರು. ಅನಂತರ ವಾರಪತ್ರಿಕೆಯ ಸಂಪಾದಕರಾದಾಗ ನನ್ನ ಮಕ್ಕಳ ಸಾಹಿತ್ಯದ ಕಥೆಗಳನ್ನು ಮಕ್ಕಳ ಶಿಕ್ಷಣವನ್ನು ಕುರಿತ ಬರಹಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದರು. ಅನಂತರ ಮಕ್ಕಳ ಕೂಟದಲ್ಲಿ ಆರ್. ಕಲ್ಯಾಣಮ್ಮ ಕೆ.ಟಿ. ಬನಶಂಕರಮ್ಮ ಜತೆ ಸೇರಿ ಬಾಲಜಗತ್ ಎಂಬ ಮಕ್ಕಳಿಗೆ ಕಥೆಗಳನ್ನು ದಿನಾ ಸಂಜೆ ಹೇಳುವ ಮತ್ತು ಆಕಾಶವಾಣಿ ಬಾಲಜಗತ್ತೆ ಮಕ್ಕಳ ಕೂಟದ ಮಕ್ಕಳ ಕಾರ್ಯಕ್ರಮಕ್ಕೆ ಕಥೆ ಪದ್ಯ ನಾಟಕ ನೀಡುವ ಕೆಲಸ ಮಾಡಿದೆ. ಈ ನಡುವೆ ಮಕ್ಕಳ ಸಾಹಿತಿಗಳಾದ ವೆಂಕಟಕೃಷ್ಣಪ್ಪ, ದೇವುಡು, ಜಿ.ಪಿ. ರಾಜರತ್ನಂ, ಹೊಯ್ಸಳ, ಶಾಂತರಾಜಯ್ಯ, ಪರಿಮಳ ಶ್ರೀನಿವಾಸಮೂರ್ತಿ, ಎಂ.ಆರ್. ಶ್ರೀ. ಬಿ.ಶ್ರೀ. ಪಾಂಡುರಂಗರಾವ್ ಮುಂತಾದ ಮಕ್ಕಳ ಸಾಹಿತಿಗಳ ನಿಕಟ ಪರಿಚಯವಾಗಿ ಅವರ ಸಾಹಿತ್ಯ ಓದಿ ಅವರೊಡನೆ ಮಾತುಕಥೆಯಾಡಿ ಮಕ್ಕಳ ಸಾಹಿತ್ಯದ ಅಧ್ಯಯನಕ್ಕೆ ತೊಡಗಿದೆ.

ಪ್ರಶ್ನೆ : **ಮಕ್ಕಳ ಸಾಹಿತ್ಯ ಸೇವೆಯ ಜತೆಗೆ ಶಿಕ್ಷಣ ರಂಗದಲ್ಲೂ ಸಾಕಷ್ಟು ಸೇವೆ ಸಲ್ಲಿಸಿದ್ದೀರಿ ಎಂದು ಕೇಳಿದ್ದೇನೆ. ಶಿಕ್ಷಣ ರಂಗದಲ್ಲಿ ತರಬೇತಿ ನೀಡುವಲ್ಲಿ ನೀವು ಮಾಡಿರುವ ಸೇವೆ ಬಗ್ಗೆ ಸ್ವಲ್ಪ ತಿಳಿಸುವಿರಾ?**

ಉತ್ತರ : ನಿಜ ನಾನು ಕೇವಲ ಮಕ್ಕಳ ಸಾಹಿತಿ ಅಷ್ಟೇ ಅಲ್ಲ. ಮಕ್ಕಳ ಶಿಕ್ಷಕನೂ ಹೌದು. ಸಾಮಾನ್ಯವಾಗಿ ಮಕ್ಕಳ ಸಾಹಿತಿಗಳು ಬಹುಪಾಲು ಮಕ್ಕಳ ಶಿಕ್ಷಕರೂ ಆಗಿರುತ್ತಾರೆ. ಹೊಯ್ಸಳ, ರಾಜರತ್ನಂ, ಪಂಜೆ, ದೇವುಡು, ಕುಮಾರಸ್ವಾಮಿ, ಪರಿಮಳ ಮೊದಲಾದವರೆಲ್ಲ ಮಕ್ಕಳ ಸಾಹಿತಿಗಳೂ ಹೌದು. ಮಕ್ಕಳ ಶಿಕ್ಷಕರೂ ಹೌದು. ಆದರೆ ನಾನು ವೃತ್ತಿಯಲ್ಲಿ ಅವರಂತೆ ಮಕ್ಕಳ ಶಿಕ್ಷಕನಾಗಿರಲಿಲ್ಲ. ವಿದ್ಯಾರ್ಥಿಗಳಿಗೆ ಕಾಲೇಜು ಅಧ್ಯಾಪಕನಾಗಿ ಸೇವೆ ಸಲ್ಲಿಸಿದೆ.

ಮಕ್ಕಳ ಶಾಲಾ ಶಿಕ್ಷಕರು ಮಕ್ಕಳ ಒಡನಾಟದೊಂದಿಗೆ ಇದ್ದು ಅನುಭವ ತಿಳಿವಳಿಕೆ ಪ್ರತಿಭೆಗಳಿಂದ ಮಕ್ಕಳಿಗಾಗಿ ಕಥೆ ಪದ್ಯ ನಾಟಕ ಇತ್ಯಾದಿ ರಚಿಸಿದಾಗ ಅವು ಸತ್ವಪೂರ್ಣವಾಗಿರುತ್ತದೆ. ನಿಜವಾದ ಮಕ್ಕಳ ಸಾಹಿತ್ಯ ಆಗಿರುತ್ತದೆ. ಮಕ್ಕಳ ಶಿಕ್ಷಕರಾಗದಿದ್ದವರು ರಚಿಸಿರುವ ಮಕ್ಕಳ ಸಾಹಿತ್ಯದಲ್ಲಿ ಮಕ್ಕಳಿಗೆ ಸೂಕ್ತವಾದ ಭಾಷೆ, ಪದ ಪ್ರಯೋಗ ಅಷ್ಟಾಗಿ ಇರುವುದಿಲ್ಲ. ಮಕ್ಕಳನ್ನು ಆಕರ್ಷಿಸುವುದೂ ಅಪರೂಪ.

ಇಂದು ಎಲ್.ಕೆ.ಜಿ., ಯು.ಕೆ.ಜಿ. ತರಗತಿಗಳು ಶಿಕ್ಷಣ ಪದ್ಧತಿಯಲ್ಲಿ ಜಾರಿಗೆ ಬಂದಿವೆ. ಈ ಮುಂಚೆ ಶಿಶುವಿಹಾರಗಳು ಮಕ್ಕಳಿಗೆ ಆಟಪಾಟವಾಡಿಸುವ ಸಂಸ್ಥೆಗಳು ಅಲ್ಲೊಂದು ಇಲ್ಲೊಂದು ಇದ್ದವು. ಕೆ. ಟಿ. ಬನಶಂಕರಮ್ಮನವರ ಅಶೋಕ ಶಿಶುವಿಹಾರ, ಇಂದಿರಮ್ಮನವರ ಮಲ್ಲೇಶ್ವರಂ ಶಿಶುವಿಹಾರ, ಸುಂದರಮ್ಮ ಶ್ರೀನಿವಾಸಶಾಸ್ತ್ರಿ ಅವರ ಹಿಮಾಂಶು ಶಿಶುವಿಹಾರ, ಮಕ್ಕಳ ಪುಸ್ತಕದ ಬಿ. ಅಶ್ವತ್ಥನಾರಾಯಣರಾಯರ ಬಾಲಮಂದಿರ ಮುಂತಾದ ಕೆಲವೇ ಸಂಸ್ಥೆಗಳು ಚಿಕ್ಕ ಮಕ್ಕಳಿಗೆ ಯೋಗ್ಯ ರೀತಿ ಶಿಕ್ಷಣವನ್ನು (ಮಾಂಟೊಸೋರಿ ಪದ್ಧತಿಗಳ ಹಿನ್ನೆಲೆಯಲ್ಲಿ) ನೀಡುತ್ತಿದ್ದವು. ಆದರೆ ಬೆಂಗಳೂರಿನ ನಾನಾ ಕಡೆ ಷೆಡ್ಡುಗಳಲ್ಲಿ ಮನೆಗಳಲ್ಲಿ ಚಿಕ್ಕಮಕ್ಕಳನ್ನು ಬಾಯಿಗೆ ಬಂದಂತೆ ನೋಡಿಕೊಳ್ಳುತ್ತಿದ್ದ ಶಿಶುಮಂದಿರಗಳು, ಸಾಕಷ್ಟು ಇದ್ದವು. ಚಿಕ್ಕ ಮಕ್ಕಳೆಂಬ ಕರುಗಳ ಕೊಟ್ಟಿಗೆಗಳಾಗಿದ್ದವು.

ಇಂಥ ಸಂದರ್ಭದಲ್ಲಿ ಭಾರತ ಮಾತಾ ವಿದ್ಯಾಮಂದಿರದ ಗೋಪಾಲಕೃಷ್ಣಯ್ಯಂಗಾರ್, ಸುಬ್ಬರಾಮಯ್ಯ ಎಂಬ ಶಾಲಾ ಇನ್ಸ್ಪೆಕ್ಟರ್ ಹೆಚ್.ಎಸ್. ದೊರೆಸ್ವಾಮಿ ಮತ್ತು ಕೆ.ಟಿ. ಬನಶಂಕರಮ್ಮ, ಇಂದಿರಮ್ಮ ಶ್ರೀನಿವಾಸಶಾಸ್ತ್ರಿ, ಬಿ. ಶ್ರೀ ಪಾಂಡುರಂಗರಾವ್ ನಾನು ಎಲ್ಲರೂ ಸೇರಿ ೧೫ ದಿನಗಳ ಶಿಶುವಿಹಾರ ಶಿಕ್ಷಣ ಶಿಬಿರವನ್ನು ಬೆಂಗಳೂರು ಸಂಸ್ಕೃತ ಕಾಲೇಜಿನಲ್ಲಿ ಶಿಶುವಿಹಾರಗಳ ಅಧ್ಯಾಪಕರಿಗಾಗಿ ನಡೆಸಿದೆವು. ಭಾಗವಹಿಸಿದ ಅಧ್ಯಾಪಕರಿಗೆ ಪ್ರಶಸ್ತಿ ಪತ್ರ ನೀಡಿದೆವು.

ಈ ಶಿಬಿರದಿಂದ ಶಿಶುವಿಹಾರದ ಅಧ್ಯಾಪಕರಿಗೆ ದೊರೆತ ತರಬೇತಿಯನ್ನು ನೋಡಿದ ಸರ್ಕಾರದವರು ಜಿ.ಬಿ. ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಅದರ ವರದಿ ಆಧಾರದ ಮೇಲೆ ಎಲ್.ಕೆ.ಜಿ., ಯು.ಕೆ.ಜಿ. ಶಿಕ್ಷಣ ಪದ್ಧತಿ ಜಾರಿಗೆ ತಂದರು.

ಈ ಪ್ರಯತ್ನದಲ್ಲಿ ಶಕ್ತಿ ಮೀರಿ ದುಡಿದ ಹೆಮ್ಮೆ ನನಗಿದೆ.

ಅನೇಕ ತರಬೇತಿ ಶಿಬಿರಗಳಿಗೆ ಹೋಗಿದ್ದೇನೆ. ನೂರಾರು ಶಾಲಾ ಅಧ್ಯಾಪಕರ ಸಭೆಗಳಲ್ಲಿ ಅಧ್ಯಾಪಕರ ಪಾಠ ಬೋಧನೆಯ ಉಪನ್ಯಾಸಗಳನ್ನು ಮಾಡಿದ್ದೇನೆ. ಈ ಪೈಕಿ ನೆನಪಿರುವ ಪ್ರಸಂಗ ಎಂದರೆ ಎಸ್.ಎಲ್.ಬಿ.ಟಿ. ಸಂಸ್ಥೆ ಶಿವರಾಮ ಕಾರಂತರ ಮಾರ್ಗದರ್ಶನದಲ್ಲಿ ವುಡ್ಲ್ಯಾಂಡ್ ಹೋಟೆಲಿನಲ್ಲಿ ಒಂದು ವಾರದ ಕಾಲ ಶಾಲಾ ಶಿಕ್ಷಕರಿಗಾಗಿ ಒಂದು ತರಬೇತಿ ಸಾಹಿತ್ಯ ಶಿಬಿರ ಏರ್ಪಡಿಸಿದ್ದರು. ಮಕ್ಕಳ ಸಾಹಿತ್ಯ ಹೇಗಿರಬೇಕು ಎಂಬುದು

ಆ ಶಿಬಿರದ ಗುರಿಯಾಗಿತ್ತು. ಪುಸ್ತಕದ ಲೇಖಕ, ಚಿತ್ರಗಾರ, ಮುದ್ರಕ, ಪ್ರಕಾಶಕರನ್ನು ಕುರಿತು ಕಾರಂತರು ಅದ್ಭುತವಾಗಿ ಮಾರ್ಗದರ್ಶನ ಮಾಡಿದರು. ನಾನು ಅವರಿಂದ ಆ ಶಿಬಿರದಲ್ಲಿ ಸಾಕಷ್ಟು ವಿಷಯ ಕಲಿತೆ.

ಪ್ರಶ್ನೆ : ನಿಮ್ಮ ಮಕ್ಕಳ ಸಾಹಿತ್ಯ ಕೃತಿಗಳಾವುವು? ಅವುಗಳು ಬರೆದ ಸಂದರ್ಭಗಳು ಹೇಗೆ ಒದಗಿಬಂದವು?

ಉತ್ತರ : ಮೊದಲೇ ಹೇಳಿದಂತೆ ಜನಪ್ರಗತಿಯಲ್ಲಿ ಹಲವಾರು ಮಕ್ಕಳ ಕಥೆಗಳನ್ನು ಬರೆದೆ. ಮಕ್ಕಳ ಕೂಟದಲ್ಲಿ ಮಕ್ಕಳಿಗೆ ಹೊಸ ಹೊಸ ಮಕ್ಕಳ ಕಥೆಗಳನ್ನು ಹೇಳುತ್ತಾ ಬಂದೆ. ಹತ್ತಾರು ವರ್ಷಗಳ ಕೆಳಗೆ ನನ್ನ ಬಾಲಜಗತ್ತಿನ ಕಾರ್ಯಕ್ರಮದಲ್ಲಿ ಮಕ್ಕಳ ಕಥೆಗಳನ್ನು ಕೇಳಿದ ಬಾಲಕರು ಇಂದು ದೊಡ್ಡವರಾಗಿ ಮಕ್ಕಳಕೂಟದ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ವೆಂಕಟಾಚಲ, ಯೋಗಿ ರಮೇಶ ಮುಂತಾದವರು ಮಕ್ಕಳಕೂಟದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕಾರ್ಯಕ್ರಮಗಳ ವ್ಯವಸ್ಥಾಪಕರಾಗಿದ್ದಾರೆ.

ಬಾಲಜಗತ್ತಿನ ಕಾರ್ಯಕ್ರಮಗಳ ಮಕ್ಕಳ ಕಥಾಸ್ಪರ್ಧೆಗೆ ದೇವುಡು ಪಂಚತಂತ್ರದ ಕಥೆಗಳನ್ನು ಆಯ್ಕೆ ಮಾಡಿ ಪ್ರಾಥಮಿಕ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೆ ತಕ್ಕಂತೆ ಆಯ್ಕೆ ಮಾಡಿ ಪ್ರಕಟಿಸಿದ್ದೇನೆ. ಮಕ್ಕಳಿಗೆ ಓದುಬರಹ ಕಲಿಸುವ ಸುಲಭ ಕನ್ನಡ ಲಿಪಿ ಕಲಿಕೆ ಬಾಲಬೋಧೆ ಬರೆದಿದ್ದೇನೆ.

ಪ್ರಶ್ನೆ : ಅಧ್ಯಾಪಕರಾಗಿ ಸರ್ಕಾರಿ ಕಾಲೇಜುಗಳಲ್ಲಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ೩೦ ವರ್ಷ ಪಾಠ ಮಾಡಿದ್ದೀರಿ. ಈ ಅವಧಿಯಲ್ಲಿ ಮರೆಯಲಾಗದ ಅನುಭವಗಳು ನಿಮ್ಮಲ್ಲಿ ಕೆಲವನ್ನು ತಿಳಿಸುವಿರಾ?

ಉತ್ತರ : ಖಂಡಿತವಾಗಿ. ನಾನು ಎಂ.ಎ. ಆದಮೇಲೆ ಅಧ್ಯಾಪಕನಾಗಿ ಹಗಲು ಪಿಯುಸಿ ಕಾಲೇಜಿನಲ್ಲಿ ಸಂಜೆ ಉದ್ಯೋಗಿಗಳಿಗಾಗಿ ಡಿಗ್ರಿ ಕಾಲೇಜಿನಲ್ಲಿ ಅಧ್ಯಾಪಕನಾದೆ. ಡಿಗ್ರಿ ಕಾಲೇಜಿನಲ್ಲಿ ಅಧ್ಯಾಪಕನಾದೆ. ಡಿಗ್ರಿ ಕಾಲೇಜಿನಲ್ಲಿ ಎಂ.ಎ. ಆದ ಒಂದೇ ಕಾರಣದಿಂದ ಮೇಷ್ಟ್ರು ಆಗಿದ್ದೆ. ಎಲ್ಲ ವಿಚಾರಗಳಲ್ಲಿ ವೇಷಭೂಷಣ, ಅನುಭವ ಸಂಪಾದನೆ, ವಯಸ್ಸು ಕಲಾನೈಪುಣ್ಯ ಓದುಗಾರಿಕೆ ಮೊದಲಾದವುಗಳಲ್ಲಿ ಅವರೇ ಹಿರಿಯರಾಗಿದ್ದರು. ನಾನು ಪಾಠ ಹೇಳಿದೆ ಎನ್ನುವುದಕ್ಕಿಂತ ಅವರಿಂದ ಪಾಠ ಕಲಿತೆ.

ಸಂಜೆ ಕಾಲೇಜಿನಲ್ಲಿ ಕುವೆಂಪು ಚಂದ್ರಹಾಸ ಪಾಠ ಮಾಡುವಾಗ ಒಬ್ಬ ವಿದ್ಯಾರ್ಥಿ ನಾರದರು ಕುಂತಳನಗರಕ್ಕೆ ಬಂದಿದ್ದು ರಾತ್ರಿ ಬೆಳಗಲ್ಲ ಎಂದು ವಾದಿಸಿದ ಅವರ ತಂದೆ ದೊಡ್ಡ ವಿದ್ವಾಂಸರಾಗಿದ್ದರು. ಮಾಲವಿಕಾಗ್ನಿ ಮಿತ್ರ ಕಾಳಿದಾಸನ ನಾಟಕ ಪಾಠ ಮಾಡುವಾಗ ತ್ರಿಪತಾಕಾ ಹಸ್ತ ಎಂದರೆ ಏನು ಎಂದು ವಿವರಣೆ ನೀಡಿದರು. ಅದು ಹಾಗಲ್ಲ ಹೀಗೆ ಎಂದು ನರ್ತಕಿಯಾಗಿದ್ದ ವಿದ್ಯಾರ್ಥಿನಿ ಸಮಯ ಹಾಕಿದಳು. ಇಸ್ಪೀಟ್ ಆಟದ ಪ್ರಬಂಧವೊಂದನ್ನು ಪಾಠ ಮಾಡಬೇಕಾಗಿ ಬಂದಾಗ ನನಗೆ ಇಸ್ಪೀಟಾಟ ಪರಿಚಯವಿಲ್ಲ. ಆ ಪಾಠವನ್ನು ನೀವೇ ಓದಿಕೊಳ್ಳಿ ಎಂದರೆ ನಾವು ಹೇಳಿಕೊಡುತ್ತೇವೆ ಬನ್ನಿ ಸಾರ್ ಎಂದು ಕೆಲವು ವಿದ್ಯಾರ್ಥಿಗಳು ಹೀಗೆ ನಾನಾ ತರಹದ ಅನುಭವವಾಗಿ ಚೆನ್ನಾಗಿ ಅಧ್ಯಯನ

ಮಾಡಿ ಪಾಠ ಹೇಳಬೇಕೆಂದು ನಿರ್ಧರಿಸಿದೆ. ಒಂದು ವಿಷಯಕ್ಕೆ ಸಂಬಂಧಿಸಿದ ಎಲ್ಲ ಪುಸ್ತಕಗಳನ್ನು ಕೊಂಡು ಓದಲು ಶುರುಮಾಡಿದೆ. ಹೀಗಾಗಿ ೨೫೦೦೦ ಪುಸ್ತಕಗಳ ಸಂಗ್ರಹ ಆಯಿತು. ನಾನು ಮಾಡಿದ ಪಾಠದಿಂದ ವಿದ್ಯಾರ್ಥಿಗಳು ಇಂದು ನನ್ನನ್ನು ಗೌರವಿಸುವರು.

ಮಾಗಡಿ ಸರ್ಕಾರಿ ಕಾಲೇಜಿನಲ್ಲಿದ್ದಾಗ ಬೆಳಿಗ್ಗೆ ೧ನೇ ತರಗತಿ ಪಾಠ ಇತ್ತು ಅಷ್ಟೆ. ಪ್ರತಿದಿನ ಮಧ್ಯಾಹ್ನ ಜಯಸಿಂಹ ಎಂಬ ಮಿತ್ರರು ಕುಟುಂಬ ಯೋಜನಾಧಿಕಾರಿ ಆಗಿದ್ದರು. ಅವರ ಜತೆ ಹಳ್ಳಿ ಹಳ್ಳಿಗೆ ಹೋಗಿ ಜನಜಾಗೃತಿ ಉಪನ್ಯಾಸಗಳನ್ನು ಮಾಡಿ ಲೋಕಾನುಭವ ಪಡೆದ ಮಾಗಡಿಯ ಎಲ್ಲ ಹಳ್ಳಿಗಳ ಪರಿಚಯವಾಯಿತು.

ಹಾಸನದಲ್ಲಿ ನಗರದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡೆ. ಜನಮಿತ್ರ ಪತ್ರಿಕೆ ಸಂಪಾದಕರು ನಿಕಟಮಿತ್ರರಾಗಿ ಹಾಸನದ ಸಜ್ಜನರ ಸಾಹಿತಿಗಳ ಗಾಢ ಸಂಪರ್ಕ ಉಂಟಾಯಿತು. ಕೇವಲ ಕಾಲೇಜು ಮೇಷ್ಟ್ರಾಗಿ ಉಳಿಯದೆ ಹಾಸನದ ಜನಪ್ರಿಯ ಭಾಷಣಕಾರನಾಗಿದ್ದೆ. ಮಂಡ್ಯ ಕೊಳ್ಳೇಗಾಲಗಳಲ್ಲಿ ಅನೇಕ ವಿಶಿಷ್ಟ ಅನುಭವಗಳಾದವು. ಎಲ್ಲ ಅಧ್ಯಾಪಕರಲ್ಲೂ ಅವರದೇ ಆದ ವಿಶಿಷ್ಟ ಅನುಭವಗಳಿವೆ. ಪ್ರತಿಭೆ ಪಾಂಡಿತ್ಯಗಳಿವೆ. ನನ್ನಲ್ಲಿ ಅಂಥ ವಿಶೇಷಗಳೇನಿಲ್ಲ. ಕೆಲವು ಸಾಮಾನ್ಯ ಅನುಭವಗಳಷ್ಟೆ ಆಗಿವೆ.

ಪ್ರಶ್ನೆ : ನೀವು ಚಿಕ್ಕ ಮಕ್ಕಳಿಂದ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸರ್ಕಾರಿ ಅಧಿಕಾರಿಗಳಿಗೆ ಅಧ್ಯಾಪಕರಿಗೆ ಪಾಠ ಹೇಳಿದ್ದೀರಿ. ಮಕ್ಕಳಿಗೆ ಪಾಠ ಹೇಳಿದ ಅನುಭವವನ್ನು ಸ್ವಲ್ಪ ತಿಳಿಸುವಿರಾ?

ಉತ್ತರ : ಮಕ್ಕಳಿಗೆ ಕಥೆ ಹೇಳುವುದು ಹಾಡು ಕಲಿಸುವುದು, ಅಭಿನಯ ಮಾಡಿಸುವುದು, ಕನ್ನಡ ಕಲಿಸುವುದು, ಚಿತ್ರಕಲೆ ಮುಂತಾದ ಕುಶಲ ಕಲೆ ಕಲಿಸುವುದು ಮೊದಲಾದವುಗಳಿಗೆ ಪ್ರತ್ಯೇಕ ಪ್ರತಿಭೆ ಶಿಕ್ಷಣ ಇರಬೇಕಾಗುತ್ತದೆ. ಎಲ್ಲವನ್ನು ಒಬ್ಬರೇ ಮಾಡುವುದು ಅಪರೂಪ. ನಾನು ಮಕ್ಕಳಿಗೆ ಕಥೆ ಹೇಳುವುದು, ಕನ್ನಡ ಓದುಬರಹ ಕಲಿಸುವುದು, ಮಕ್ಕಳಿಗಾಗಿ ಬರೆಯುವುದು ಇವುಗಳಲ್ಲಿ ನನ್ನ ಆಸಕ್ತಿ ಸೇವೆ ಇದೆ. ನಿಮ್ಮ ಪರಂಪರಾ ಸಂಸ್ಥೆ ಏರ್ಪಡಿಸುವ ಶಾಲಾ ಮಕ್ಕಳಿಗೆ ಕಥಾಕಲಿಕೆ ಕಾರ್ಯಕ್ರಮಗಳಲ್ಲಿ ಪ್ರಾರಂಭಿಸಿದಾಗ ನಾನೆ ಮಕ್ಕಳಿಗೆ ಕಥೆ ಹೇಳಿದ್ದು ನಿಮಗೆ ನೆನಪಿರಬೇಕು. ಇಂದು ಮಕ್ಕಳಿಗೆ ಕಥೆ ಹೇಳುವ ಅಜ್ಜಿ ಹಾಗೂ ಅಮ್ಮಂದಿರೂ ಅಪರೂಪವಾಗುತ್ತಿದ್ದಾರೆ. ಇಂಥ ಕಾಲದಲ್ಲಿ ಮಕ್ಕಳಿಗೆ ಕಥೆ ಹೇಳುವ ಕಾರ್ಯಕ್ರಮ ನಡೆಸುತ್ತಿರುವ ನೀವು ಅಭಿನಂದನೀಯರು.

****

ಪ್ರೊ. ಜಿ. ಅಶ್ವತ್ಥನಾರಾಯಣ ಜೀವನ ವಿವರಗಳು

ಸಂಸ್ಥೆಗಳಲ್ಲಿ ಸೇವೆ

* ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಂ ಶ್ರೀ ಮುಗಳಿ ಅವರ ಅವಧಿಯಲ್ಲಿ ಡಿಗ್ರಿ ಪಠ್ಯಗಳ ಭಾಷಾ ತಜ್ಞರಾಗಿ ಪರಿಶೀಲಕ.
* ಪಿ.ಯು.ಸಿ. ಪಠ್ಯಪುಸ್ತಕ ಮಂಡಳಿ, ಕನ್ನಡ ಸಾಹಿತ್ಯ ಪರಿಷತ್ತಿನ ಪಠ್ಯಪುಸ್ತಕ ಸಮಿತಿ, ಮಹಾವೀರಸಂಸ್ಥೆ ಮುಂತಾದ ಸಮಿತಿಗಳ ಪಠ್ಯರಚನಾ ಸಮಿತಿ ಸದಸ್ಯ ಮತ್ತು ಪಠ್ಯಗಳ ರಚನೆ.
* ಕನ್ನಡ ಸಂಸ್ಕೃತಿ ಇಲಾಖೆಯ ಸಮಗ್ರ ದಾಸಸಾಹಿತ್ಯದ ೫೦ ಸಂಪುಟಗಳ ಪರಿಶೀಲನೆ ಮತ್ತು ಮುದ್ರಣ ಕಾರ್ಯದ ಸಂಚಾಲಕ ಸಮಿತಿ ಸದಸ್ಯ.
* ಗಮಕಕಲಾ ಪರಿಷತ್ತಿನ ಪಠ್ಯಯೋಜನೆ ಮತ್ತು ತರಗತಿಗಳ ವ್ಯವಸ್ಥಾಪಕ ಮತ್ತು ಸಂಘಟಕ.
* ಕನ್ನಡ ಸಂಸ್ಕೃತಿ ಇಲಾಖೆಯ ಆಡಳಿತ ಕನ್ನಡ ಶಿಬಿರಗಳ ನಿರ್ದೇಶಕ.
* ಐ.ಎ.ಎಸ್. ಕೆ.ಎ.ಎಸ್. ತರಗತಿಗಳಿಗೆ ಕನ್ನಡ ಮಾರ್ಗದರ್ಶಕ.
* ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ, ದೇವುಡು ಪ್ರತಿಷ್ಠಾನ, ಕರ್ನಾಟಕ ಗಾನಕಲಾ ಪರಿಷತ್ತು ಗಮಕಕಲಾ ಪರಿಷತ್ತಿನ ಸ್ಥಾಪಕ ಸದಸ್ಯ.
* ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ೬ ಜನರಿಗೆ ಎಂ.ಫಿಲ್ ಪದವಿ ಶಿಕ್ಷಣಕ್ಕೆ ಮಾರ್ಗದರ್ಶನ.
* ನಾಡಿನಾದ್ಯಂತ ಉಪನ್ಯಾಸಗಳು, ಅ.ನ.ಕೃ-ರಾಮಮೂರ್ತಿ ಪ್ರಾರಂಭಿಸಿದ ಕನ್ನಡ ಚಳುವಳಿಯ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬ.

ಪ್ರಶಸ್ತಿಗಳು

* ಕುವೆಂಪುಶ್ರೀ ಪ್ರಶಸ್ತಿ (೨೦೦೪)
* ಗುರುಗೋವಿಂದವಿಠಲ ದಾಸಸಾಹಿತ್ಯ ಪ್ರಶಸ್ತಿ (೨೦೦೭)
* ಕನ್ನಡಶ್ರೀ ಪ್ರಶಸ್ತಿ (೨೦೦೮)
* ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ (೨೦೧೧)
* ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿ (೨೦೧೨)
* ಸುಮಾ ವಸಂತ ಸಾಹಿತ್ಯ ಪ್ರಶಸ್ತಿ (೨೦೧೨)
* ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೨೦೧೩)
* ಟಿ.ವಿ. ವೆಂಕಟಾಚಲ ಶಾಸ್ತ್ರೀ ವಿದ್ವತ್ ಪ್ರಶಸ್ತಿ ೨೦೨೩
* ಕನ್ನಡ ಸಾಹಿತ್ಯ ಪರಿಷತ್ತು.
* ನಾಡಪ್ರಭು ಕೆಂಪೇಗೌಡ ಪ್ರಶಸ್ತಿ-೨೦೨೫, ಬಿಬಿಎಂಪಿ
* ವಿನಯಶ್ರೀ ಪ್ರಶಸ್ತಿ (೨೦೧೭)
* ಪರಿಮಳ ಪ್ರಶಸ್ತಿ (೨೦೨೫)

ಗ್ರಂಥ ರಚನೆ ಮತ್ತು ಸಂಪಾದನೆ

೧೯೭೬-೨೦೦೦

* ಉತ್ತಮ ಕ್ಷಮಾ (ಜೈನ ಧರ್ಮ) ೧೯೭೬
* ಜಾಗರೂಕರಾಗಿ ಜಾಣರಾಗಿ (ಸೂಕ್ತಿಗಳು) ೧೯೭೬
* ರತ್ನಕರಂಡಕ ಶ್ರಾವಣಾಚಾರ (ಜೈನ ಧರ್ಮ) ೧೯೭೬
* ರಾಸದರ್ಶನ (ಗೌರವ ಗ್ರಂಥ) ೧೯೯೮
* ದೇವುಡು ವಿಚಾರಧಾರಾ ಶತಕ ೧೯೮೦ (ಸೂಕ್ತಿ ಸಂಗ್ರಹ)
* ಜೇಡರ ದಾಸಿಮಯ್ಯನ ವಚನಗಳು ೧೯೮೦ (ಸೂಕ್ತಿ ಸಂಗ್ರಹ)
* ದೇವುಡು ನರಸಿಂಹಶಾಸ್ತ್ರಿ (ಜೀವನ ಚರಿತ್ರೆ) ೨೦೦೦
* ಸುಲಭ ಕನ್ನಡ ಲಿಪಿ ಕಲಿಕೆ (ಭಾಷೆ) ೨೦೦೦

೨೦೦೦-೨೦೧೦

* ವಿಜಯದಾಸರ ಕೀರ್ತನೆಗಳು ಭಾಗ-೧ ೨೦೦೩
* ವಿಜಯದಾಸರ ಕೀರ್ತನೆಗಳು ಭಾಗ-೨ ೨೦೦೩
* ಪ್ರಸನ್ನ ಶ್ರೀನಿವಾಸದಾಸರ ಸಮಗ್ರ ಕೀರ್ತನೆಗಳು ೨೦೦೩
* ಕೆಲ್ಲಂಗೆರೆ ತಿಮ್ಮಪ್ಪದಾಸರ ಕೀರ್ತನೆಗಳು ೨೦೦೭
* ಹು. ಮ. ರಾಮಾರಾಧ್ಯ (ಜೀವನ ಚರಿತ್ರೆ) ೨೦೦೮
* ಫ.ಗು. ಹಳಕಟ್ಟಿ (ಜೀವನಚರಿತ್ರೆ) ೨೦೦೯
* ವ್ಯಾವಹಾರಿಕ ಕನ್ನಡ (ಭಾಷೆ) ೨೦೦೯
* ಸೌಜನ್ಯ ಮತ್ತು ಸಂಸ್ಕೃತಿ (ಪ್ರಬಂಧಗಳು) ೨೦೦೯
* ಶಿಷ್ಯರು ಕಂಡಂತೆ ಗುರುಗಳು (ವ್ಯಕ್ತಿ ಚಿತ್ರಗಳು) ೨೦೦೯
* ಭರತ ಖಂಡದ ಜೀವ ಜ್ಯೋತಿಗಳು (ಜೀವನ ಚರಿತ್ರೆ) ೨೦೧೦
* ಶಂಕರಾಚಾರ್ಯ ಸ್ತೋತ್ರಮಾಲೆ (ಸ್ತೋತ್ರ) ೨೦೧೦
* ವಿದ್ಯಾರ್ಥಿಗಳಿಗಾಗಿ ರಗ್ಗಡ ವಿದ್ಯೆಗಳು (ಸಂಗ್ರಹ) ೨೦೧೦

೨೦೧೧-೨೦೨೦

* ಹೊಸಕೆರೆ ಚಿದಂಬರಯ್ಯ (ಜೀವನ ಚರಿತ್ರೆ) ೨೦೧೦
* ಕಲ್ಯಾಣ ಸಿರಿ (ವಿಶೇಷ ಸಂಚಿಕೆ) ೨೦೧೨
* ದಾಸಗಾನ ಸೌರಭ (ಕೀರ್ತನೆಗಳು) ೨೦೧೨
* ಭಕ್ತಿ ಗೀತಾವಳಿ (ಕೀರ್ತನೆಗಳು) ೨೦೧೨
* ಶೈಲಜಾ ಕೀರ್ತನೆಗಳು ೨೦೧೨
* ಎಂ ವಿ ಸೀ ಜೀವನ ಚರಿತ್ರೆ ಭಾಗ-೧ ೨೦೧೩
* ಎಂ ವಿ ಸೀ ಜೀವನ ಚರಿತ್ರೆ ಭಾಗ-೨ ೨೦೧೩
* ಕನ್ನಡ ಸಾಹಿತ್ಯ ದಿಗ್ಗಜರು (ವ್ಯಕ್ತಿ ಚಿತ್ರಗಳು) ೨೦೧೪
* ಅಭಾಕಸಾ ಸಮ್ಮೇಳನಾಧ್ಯಕ್ಷರ ಭಾಷಣಗಳು ೨೦೧೬
* ಸೌಂದರ್ಯ ಲಹರೀ ಸ್ತೋತ್ರ ದೀಪಿಕೆ ೨೦೧೬
* ಸೌಂದರ್ಯ ಲಹರೀ ಸ್ತೋತ್ರ ದರ್ಪಣ ೨೦೧೭
* ತಂದೆ ಪುರಂದರ ವಿಠಲರ ಕೀರ್ತನೆಗಳು ೨೦೧೭

* ಕರಡಚ್ಚು ತಿದ್ದುವಿಕೆ ಮತ್ತು ಕನ್ನಡ ಭಾಷೆ ೨೦೧೭
* ಕನ್ನಡ ಸಾಹಿತ್ಯ ಪರಿಷತ್ತು-೧೦೦ ೨೦೧೫

೨೦೨೧-೨೦೨೬

* ಹರಿದಾಸರ ಸಮಾಜಮುಖಿ ಕೀರ್ತನೆಗಳು (ಭಾಗ-೪) ೨೦೨೧೪
* ನಾ ಕಂಡಂತೆ ಹಿರಿಯ ಸಾಹಿತಿಗಳು (ವ್ಯಕ್ತಿ ಚಿತ್ರ) ೨೦೨೨
* ರಘುಕುಲ ಚರಿತ (ಅನುವಾದ) ೨೦೨೨
* ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥಪ್ರಕಾಶಿಕೆ ೨೦೨೨
* ರತ್ನಾಕರನ ಮೂರು ಶತಕಗಳು (ಅನುವಾದ) ೨೦೨೩
* ಪ್ರಾಚೀನ ಕನ್ನಡ ಸಾಹಿತ್ಯಗಳು ೨೦೨೩
* ವಿದ್ಯಾಸಂಸ್ಥೆಗಳ ಸಂಸ್ಥಾಪಕರ ಕಥನ ೨೦೨೪
* ಮಕ್ಕಳ ಕೈಗೀತೆ (ಭಗವದ್ಗೀತೆ) ೨೦೨೪
* ಗೀತೆಯ ತಿರುಳು (ಗೀತೆ) ೨೦೨೪
* ರಾಜಪಥ (ಗೌರವ ಗ್ರಂಥ) ೨೦೨೪
* ಹರಿದಾಸರು ಹಾಡಿದ ಶ್ರೀರಾಮನ ಕೀರ್ತನೆಗಳು ೨೦೨೪
* ವ್ಯಾಕರಣ ಸಂಗ್ರಹ (ವ್ಯಾಕರಣ) ೨೦೨೫
* ಗಿಡಮರಬಳ್ಳಿಗಳ ನೀತಿ ಕಥೆಗಳು (ಮಕ್ಕಳ ಸಾಹಿತ್ಯ) ೨೦೨೬
* ನನಗೆ ಸಾಹಿತಿಗಳ ಸವಿ ನೆನಪುಗಳು ನಿಮಗೆ ರಸಪ್ರಸಂಗ ೨೦೨೬
* ಕುಮಾರವ್ಯಾಸ ಭಾರತದ ಸೂಕ್ತಿಗಳು (ಸೂಕ್ತಿ ಸಂಗ್ರಹ) ೨೦೨೬



1ನೇ ಸಾಲು : ಶ್ರೀಯುತರಾದ ರಾಮ್‌ನಾಥ್, ಬಿ.ಶಂಕರಲಿಂಗೇಗೌಡ, ಡಾ॥ ಟಿ.ಆರ್. ಅನಂತರಾಮು, ಡಾ॥ ಟಿ.ಎ. ಬಾಲಕೃಷ್ಣ, ಡಾ॥ ಪೂಡೇ ಪಿ ಕೃಷ್ಣ, ಪರಮಪೂಜ್ಯ ಸ್ವಾಮಿ ವೀರೇಶಾನಂದ ಸರಸ್ವತಿ, ಡಾ. ಕೆ. ಶೇಷಮೂರ್ತಿ, ಡಾ॥ ಗುರುಮೂರ್ತಿ, ಬಿ.ಕೆ ಗೋಪಣ್ಣ, ಡಾ॥ ಟಿ.ವಿ ರಾಜು
2ನೇ ಸಾಲು : ಡಾ. ವಿ ಗಾಯತ್ರಿ, ಶ್ರೀಮತಿ ಜಮುನಾ ರಮೇಶ್, ಶ್ರೀ ಟಿ.ಜಿ ನರಸಿಂಹ ಮೂರ್ತಿ, ಶ್ರೀ ಎಸ್. ಬಿಳಿಗಿರಿವಾಸನ್, ಶ್ರೀ ಜಿ.ಎನ್. ನರಸಿಂಹಮೂರ್ತಿ, ಶ್ರೀ ಜಿ.ಪಿ ರಾಮಣ್ಣ, ಶ್ರೀ ಫಲ್ಗುಣ, ಶ್ರೀ ಮುರಳಿ ಮೋಹನ್, ಡಾ॥ ಶೀಲಾದೇವಿ ಮಳಿಮಠ್, ಡಾ॥ ರುಕ್ಮಿಣಿ ರಘುರಾಂ, ಡಾ॥ ಕ್ಷಮಾ ಅಶ್ವತ್
3ನೇ ಸಾಲು : ಶ್ರೀಯುತರಾದ ಬಿ.ಕೆ. ನಾಗೇಶ್, ಡಾ॥ ಶಾಂತರಾಜು, ಚಂದ್ರಶೇಖರ ನಾಡೂರ್, ಡಾ॥ ಎಸ್.ಎಲ್ ಮಂಜುನಾಥ್, ಡಾ॥ ಗೌರೀಶ್, ರವಿಶಂಕರ್, ಕರಣ್‌ಕುಮಾರ್, ಸುರೇಶ್

ಅಭಿನಂದನಾ ಮತ್ತು ಸಂಪಾದಕ ಸಮಿತಿ



ಕುಳಿತಿರುವವರು : ಶ್ರೀಯುತರಾದ ಬಿ.ಶಂಕರಲಿಂಗೇಗೌಡ, ಬಿ.ಕೆ ಗೋಪಣ್ಣ, ಡಾ॥ ಟಿ.ಎ. ಬಾಲಕೃಷ್ಣ, ಡಾ॥ ವೂಡೇ ಪಿ ಕೃಷ್ಣ, ಪರಮಪೂಜ್ಯ ಸ್ವಾಮಿ ವೀರೇಶಾನಂದ ಸರಸ್ವತಿ, ಡಾ॥ ಟಿ.ವಿ ರಾಜು, ಟಿ.ಜಿ ನರಸಿಂಹಮೂರ್ತಿ, ಜಿ.ಎನ್. ನರಸಿಂಹಮೂರ್ತಿ
ನಿಂತಿರುವವರು : ಶ್ರೀಯುತರಾದ ಎಸ್. ಬಿಳಿಗಿರಿವಾಸನ್, ಡಾ॥ ಎಸ್.ಎಲ್ ಮಂಜುನಾಥ್, ಡಾ॥ ಶಾಂತರಾಜು, ಡಾ॥ ಗೌರೀಶ್, ಚಂದ್ರಶೇಖರ ನಾದುರ್

ಸಂಪಾದಕ ಸಮಿತಿ



ಕುಳಿತಿರುವವರು : ಡಾ॥ ವಿ ಗಾಯತ್ರಿ, ಅನುಕು ರಾಮ್‌ನಾಥ್, ಡಾ ॥ ಟಿ.ಆರ್ ಅನಂತ ರಾಮು, ಡಾ॥ ಟಿ.ಎ ಬಾಲಕೃಷ್ಣ, ಡಾ॥ ವೂಡೇ ಪಿ ಕೃಷ್ಣ, ಪರಮಪೂಜ್ಯ ಸ್ವಾಮಿ ವೀರೇಶಾನಂದ ಸರಸ್ವತಿ, ಡಾ॥ ಕೆ. ಶೇಷಮೂರ್ತಿ, ಡಾ॥ ಗುರುಮೂರ್ತಿ, ಡಾ॥ ಟಿ.ವಿ ರಾಜು, ಬಿ.ಕೆ ಗೋಪಣ್ಣ

ನಿಂತಿರುವವರು : ಶ್ರೀಯುತರಾದ ಸುರೇಶ್, ಕರಣ್ ಕುಮಾರ್, ಬಿ.ಕೆ ನಾಗೇಶ್, ಜಿ.ಪಿ ರಾಮಣ್ಣ, ಪಾಲ್ಗುಣ, ರವಿಶಂಕರ್, ಮುರಳಿ ಮೋಹನ್, ಶ್ರೀಮತಿ ಶೀಲಾದೇವಿ ಮಳಿಮಠ್ , ಡಾ॥ ರುಕ್ಮಿಣಿ ರಘುರಾಮ್, ಶ್ರೀಮತಿ ಜಮುನಾ ರಮೇಶ್ ಹಾಗೂ ಡಾ॥ ಕ್ಷಮ

ಅಭಿನಂದನಾ ಸಮಿತಿ

ಅನಾಜಿಮನೆ ನೋಟಗಳು



ಮನೆಯ ಮುಂದೆ ಅನಾಜಿ




ಅನಾಜಿ ಅವರ ತಾಯಿತಂದೆ (ಹೆಚ್.ಗುಂಡಪ್ಪ, ಜಿ.ಜಾನಕಮ್ಮ)



ಎಂ. ಆರ್ ಲಕ್ಷ್ಮೀದೇವಿ ಅವರ ತಾಯಿ ತಂದೆ
(ಸಾವಿತ್ರಮ್ಮ, ಎಂ.ಆರ್ ರಾಮರಾವ್)




ಅನಾಜಿದಂಪತಿಗಳು ಮನೆ ಅಂಗಳದಲ್ಲಿ



ಆದಿತ್ಯ ಕುಮಾರ್ ಮೊಮ್ಮಗ, ಜಯರಾಂ ಕೃಷ್ಣಪ್ಪ ಅಳಿಯ, ಕ್ಷಮಾ ಅಶ್ವತ್ಥ್ ಮಗಳು, ಅಮೋಘಶ್ರೀ ಮೊಮ್ಮಗಳು



ಪುಸ್ತಕಗಳ ಸಂಗ್ರಹ ಅಂದು




ಬರಹದಲ್ಲಿ ನಿರತ ಅನಾಜಿ



ಪುಸ್ತಕ ಸಂಗ್ರಹ ಇಂದು


ಅನಾಜಿ ಪುಸ್ತಕಭಂಡಾರದಲ್ಲಿ



ಪುಸ್ತಕ ಭಂಡಾರ



ಅನಾಜಿ ದಂಪತಿಗಳು ಪುಸ್ತಕಭಂಡಾರದಲ್ಲಿ



ಅನಾಜಿ ಗ್ರಂಥಸಂಗ್ರಹದಲ್ಲಿ ಡಾ.ಆರ್. ಲಕ್ಷ್ಮೀದೇವಿ



ಅಮೇರಿಕಾ ಮೇರಿಲ್ಯಾಂಡಿನಲ್ಲಿ ಮೊಮ್ಮಗಳು ಅಮೋಘ ಜೊತೆ ವಾಕಿಂಗ್



ಅಮೇರಿಕಾದಲ್ಲಿ ಮೊಮ್ಮಗ ಆದಿತ್ಯನ ಜೊತೆ ದೀಪಾವಳಿ



ಅಮೇರಿಕಾದ ಬಾಲ್ಟಿಮೋರ್ ಅಕ್ಕಸಮ್ಮೇಳನಕ್ಕೆ ಆಹ್ವಾನಿತ ಸಾಹಿತಿಗಳು



ಅಮೇರಿಕಾದ ಬಾಲ್ಟಿಮೋರ್ ಅಕ್ಕಸಮ್ಮೇಳನಕ್ಕೆ ಆಹ್ವಾನಿತರಾದ ಅನಾಜಿಕುಟುಂಬ



ಅಮೇರಿಕಾದಲ್ಲಿ 4ನೇ ಅಕ್ಕ ಸಮ್ಮೇಳನದಲ್ಲಿ ಪುಸ್ತಕ ಪರಿಚಯ
ಅನಾಜೆಯಿಂದ ಸೋಮಯಾಜಿ ವಿಶ್ವೇಶ್ವರಭಟ್ ಕುಳಿತಿದ್ದಾರೆ



ಅಮೇರಿಕಾದ ಬಾಲ್ಟಿಮೋರ್‌ನಲ್ಲಿ ನಡೆದ ಅಕ್ಕಸಮ್ಮೇಳನದಲ್ಲಿ
ಪುಸ್ತಕ ಪರಿಚಯ ಗೋಷ್ಠಿಯಲ್ಲಿ ಎಂ.ಆರ್ ಲಕ್ಷ್ಮೀದೇವಿ ಅವರಿಂದ ದಾಸಸಾಹಿತ್ಯ ಕೃತಿಪರಿಚಯ



ಅಮೆರಿಕಾ ಅಕ್ಕಸಮ್ಮೇಳನ ಸಮಿತಿಗಳು



ಅಕ್ಕಸಮ್ಮೇಳನದ ಕಾರ್ಯಕ್ರಮ ಸಮಿತಿಗಳು





4ನೇ ಅಕ್ಕಸಮ್ಮೇಳನ ಅಮೆರಿಕಾದ ಬಾಲ್ಟಿಮೋರ್ ಸಾಹಿತ್ಯಗೋಷ್ಠಿ
ಭಾಗವಹಿಸಿದವರು (ಎಡದಿಂದ ಬಲಕ್ಕೆ)
ಪ್ರೊ.ಜಿ. ಅಶ್ವತ್ಥನಾರಾಯಣ, ಜಿ.ಎಸ್ ಅಮೂರ್, ಚನ್ನವೀರ ಕಣವಿ
ಚಂದ್ರಶೇಖರ ಪಾಟೀಲ್, ಎಸ್.ಎಲ್ ಭೈರಪ್ಪ, ಅರಾಮಿತ್ರ, ಲಕ್ಷ್ಮೀನಾರಾಯಣಭಟ್



ಅಕ್ಕ ಸಮ್ಮೇಳನಕ್ಕೆ ಆಗಮನ


ಅನಾಜಿರಚಿತ ಪುಸ್ತಕಗಳು















ಅನಾಜಿರಚಿತ ಪುಸ್ತಕಗಳು

















ಅನಾಜಿರಚಿತ ಪುಸ್ತಕಗಳು

















ಅನಾಜಿರಚಿತ ಪುಸ್ತಕಗಳು
















ಅನಾಜಿರಚಿತ ಪುಸ್ತಕಗಳು


















ಅನಾಜಿರಚಿತ ಪುಸ್ತಕಗಳು












ಸನ್ಮಾನ ಮತ್ತು ಪ್ರಶಸ್ತಿಗಳು



ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯ ಪ್ರಶಸ್ತಿ



ಕ.ಸಾ.ಪ 100 ಗ್ರಂಥರಚನೆಯ ನೆನಪಿನ ಕಾಣಿಕೆ



80ನೇ ಕನ್ನಡ ಸಾಹಿತ್ಯ ಸಮ್ಮೇಳನದಿಂದ ಸನ್ಮಾನ



ಜೆ.ಪಿ ರಾಮಣ್ಣ ಗೆಳೆಯರ ಬಳಗದಿಂದ ಸನ್ಮಾನ

ಸನ್ಮಾನ ಮತ್ತು ಪ್ರಶಸ್ತಿಗಳು

ಕಸಾಪ ಶತಮಾನೋತ್ಸವ ಸ್ಮರಣಿಕ



ಎಚ್.ಎ.ಎಲ್ ನಾಡಹಬ್ಬ ಪ್ರಶಸ್ತಿ



ಶ್ರೀ ವಾದಿರಾಜ ಪ್ರಶಸ್ತಿ






ನಾಡಿನ ಸಂಸ್ಥೆಗಳು ಸಮರ್ಪಿಸಿದ ಪ್ರಶಸ್ತಿಗಳು

ಸನ್ಮಾನ ಮತ್ತು ಪ್ರಶಸ್ತಿಗಳು



ಮುಖ್ಯಮಂತ್ರಿಗಳಿಂದ ಅನಾಜಿ ರಚಿತ
ಕನ್ನಡ ಸಾಹಿತ್ಯ ಪರಿಷತ್ತು -100 ಬಿಡುಗಡೆ



ಕಸಾಪದಲ್ಲಿ ಪ್ರಶಸ್ತಿ ನೀಡಿದ ಸಭೆ ಪ್ರಾರಂಭಕ್ಕೆ ಮುನ್ನ
ಹಂಪನಾ, ಅನಾಜಿ, ಟಿ.ವಿ.ವೆಂ



ಪರಿಮಳಗೆಳೆಯರ ಬಳಗದ ಪ್ರಶಸ್ತಿ ಪ್ರದಾನ



ಸಾಹಿತ್ಯ ಸೌರಭ ಪ್ರಶಸ್ತಿ ಪ್ರದಾನ

ಸನ್ಮಾನ ಮತ್ತು ಪ್ರಶಸ್ತಿಗಳು



ಸಾಹಿತ್ಯ ಅಕಾಡೆಮಿಯಿಂದ ಸನ್ಮಾನ



ಗುರುಗೋವಿಂದ ವಿಠ್ಠಲಪ್ರಶಸ್ತಿ ಪ್ರದಾನ

ಕವಿದನಿ ಕಾರ್ಯಕ್ರಮ ಪ್ರಶಸ್ತಿ





ಕವಿದನಿ ಕಾರ್ಯಕ್ರಮಗಳಿಗೆ ಸಾಹಿತ್ಯ
ಸಂಯೋಜನೆಗಾಗಿ ಪ್ರಶಸ್ತಿ ಪ್ರದಾನ



ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸನ್ಮಾನ

ಸನ್ಮಾನ ಮತ್ತು ಪ್ರಶಸ್ತಿಗಳು



ಸಾಹಿತ್ಯ ಸೌರಭ ಪ್ರಶಸ್ತಿ ಪ್ರದಾನ 2025



ಸಮಾರಂಭದ ಅಧ್ಯಕ್ಷತೆಗಾಗಿ ಸನ್ಮಾನ–ವಿನಯ್ ಫೌಂಡೇಷನ್ನಿನ ಸಮಾರಂಭ



ಬೆಂಗಳೂರು ಕ್ರೆಡಿಟ್ ಕೋ
ಆಪರೇಟಿವ್ ಸೊಸೈಟಿ.
ಅಧ್ಯಕ್ಷರಾದ ಶ್ರೀಕಂಠಯ್ಯನವರಿಂದ
ಅನಾಜಿ ಅವರಿಗೆ ಸನ್ಮಾನ
ಪ್ರತಿಭಾವಂತ ವಿದ್ಯಾರ್ಥಿಗಳಿಗೆ
ಪುರಸ್ಕಾರ ಸಮಾರಂಭ



ಸನಾತನ ಕಲಾಕ್ಷೇತ್ರದ ನರ್ತನ
ಕಾರ್ಯಕ್ರಮದ ಅಧ್ಯಕ್ಷತೆ



ಸನಾತನ ಕಲಾಕ್ಷೇತ್ರದಲ್ಲಿ
ಪ್ರಸಿದ್ಧ ನರ್ತಕರಾದ
ಸತ್ಯನಾರಾಯಣರಾಜು
ಅವರಿಗೆ ಸನ್ಮಾನ ಮಾಡಿದಾಗ
ಸಭಾಧ್ಯಕ್ಷತೆ ವಹಿಸಿದಾಗ
ತೆಗೆದ ಚಿತ್ರ

ಸನ್ಮಾನ ಮತ್ತು ಪ್ರಶಸ್ತಿಗಳು



ಆನಕೃ ಪ್ರಶಸ್ತಿ ಸಮಾರಂಭ



ವಿನಯಶ್ರೀ ಪ್ರಶಸ್ತಿ 2017



ಕನ್ನಡ ಸೇವೆಗೆ ಅಭಿನಂದನಾ ಪತ್ರ



ನಾಡ ಪ್ರಭು ಕೆಂಪೇಗೌಡ ಪ್ರಶಸ್ತಿ


ಸನ್ಮಾನ ಮತ್ತು ಪ್ರಶಸ್ತಿಗಳು



80ನೇ ಕಸಾಪ ಸಮ್ಮೇಳನ ಸನ್ಮಾನ ಫಲಕ



ಕರ್ನಾಟಕ ಸಾಹಿತ್ಯ ಆಕಾಡೆಮಿ ಪ್ರಶಸ್ತಿ 2012



ಕನ್ನಡ ಸಾಹಿತ್ಯ ಪರಿಷತ್ತು ಗ್ರಂಥ ಪ್ರಶಸ್ತಿ



ತ್ಯಾಗರಾಜ ಕೋ-ಅಪರೇಟಿವ್ ಬ್ಯಾಂಕ್
ವಜ್ರಮಹೋತ್ಸವದ ಪ್ರಶಸ್ತಿ

ಸನ್ಮಾನ ಮತ್ತು ಪ್ರಶಸ್ತಿಗಳು



ಕುವೆಂಪು ಶ್ರೀ ಪ್ರಶಸ್ತಿ ಪತ್ರ

ನಾಡಪ್ರಭು ಕೆಂಪೇಗೌಡ ಪ್ರಶಸ್ತಿ 2025





ಸಾಹಿತ್ಯ ಸೌರಭ ಪ್ರಶಸ್ತಿ

ಕಾರ್ಯಕ್ರಮಗಳು

27.2.89 ಮಾಹಾರಾಣಿ ವಿಜ್ಞಾನ ಕಾಲೇಜಿನ ಅಧ್ಯಾಪಕ ಸಂಘ ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕ ಜಿ.ಎಸ್. ಸಿದ್ದಲಿಂಗಯ್ಯ ನವರನ್ನು ಅನಾಜಿ ಕಾರ್ಯಕ್ರಮದ ಸಭಾಂಗಣಕ್ಕೆ ಕರೆತಾರುತ್ತಿದ್ದಾರೆ.



ಮಾಹಾರಾಣಿ ಕಾಲೇಜಿನ ಕಾರ್ಯಕ್ರಮಕ್ಕೆ
ಜಿ.ಎಸ್. ಸಿದ್ದಲಿಂಗಯ್ಯ ನವರನ್ನು ಆಗಮನ



24.9.2015 ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವದ
ಸಮಾರಂಭದಲ್ಲಿ ಚಿಮೂ ಜೊತೆ ಭಾಗವಹಿಸಿದಾಗ ತೆಗೆದ ಚಿತ್ರ



ಟಿ.ವಿ ವೆಂಗೆ ಸನ್ಮಾನ ಕರ್ನಾಟಕ ಶತಯುಷಿಗಳ ಗ್ರಂಥ ಬಿಡುಗಡೆ



ಜಿ.ಎಸ್.ಎಸ್‌ಗೆ ಅಭಿವಂದನೆ ರಾಷ್ಟ್ರಕವಿ ಪ್ರಶಸ್ತಿ ಬಂದಾಗ



ಶಿವರಾಮ್ ಕಾರಂತ ವೇದಿಕೆ ಕಾರ್ಯಕ್ರಮ ಉದ್ಘಾಟನೆ



ಕವಿದನಿ ಕಾರ್ಯಕ್ರಮ ಸಮಿತಿ

ಕಾರ್ಯಕ್ರಮಗಳು



12.11.1982ರಲ್ಲಿ ಮಹಾರಾಣಿ ಕಲಾ ಕಾಲೇಜಿನ ವಿದ್ಯಾರ್ಥಿಸಂಘ
ಮುಕ್ತ ಕನ್ನಡ ಸಂಘದ ಆಶ್ರಯದಲ್ಲಿ ನಡೆದ ಕನ್ನಡ ರಾಜ್ಯೋತ್ಸವ
ಕುಳಿತಿರುವವರು : ಪ್ರಿನ್ಸಿಪಾಲ್ ಸುಶೀಲಸಂಗ್
ಅತಿಥಿ : ಎಚ್.ವಿ. ಸಾವಿತ್ರಮ್ಮ (ಕಾದಂಬರಿಕಾರ್ತಿ)
ನಾಡಿಗೇರ್ ಕೃಷ್ಣರಾವ್ (ಹಾಸ್ಯಸಾಹಿತಿ)
ಶೀಲಾ ಮಳಿಮಠ್ (ಕನ್ನಡ ಸಂಘದ ಅಧ್ಯಕ್ಷರು)
ಸಂಚಾಲಕರಾದ ಜಿ.ಅಶ್ವತ್ಥನಾರಾಯಣರ ಸ್ವಾಗತ ಭಾಷಣ

10.03.1983ರಂದು ಬೆಂಗಳೂರು ಮಹಾರಾಣಿ ಕಲಾ ಕಾಲೇಜಿನಲ್ಲಿ
ಕನ್ನಡ ಸಂಘದ ವಾರ್ಷಿಕ ಸಮಾರಂಭದಲ್ಲಿ ಕನ್ನಡ ಸಂಘದ ಅಧ್ಯಕ್ಷಿಣಿ
ಶೀಲಾಮಳಿಮಠ್ ಸ್ವಾಗತ ಕೋರುತ್ತಿರುವುದು
ಎಡದಿಂದ ಬಲಕ್ಕೆ ರಾಜಲಕ್ಷ್ಮಿ (ಕನ್ನಡ ಸಂಘದ ಕಾರ್ಯದರ್ಶಿನಿ)
ಎಂ.ಕೆ. ಇಂದಿರಾ (ಕಾದಂಬರಿಗಾರ್ತಿ), ಸುಶೀಲಾ ಸಿಂಗ್ (ಪ್ರಿನ್ಸಿಪಾಲ್),
(ಮುಖ್ಯ ಅತಿಥಿ), ಅರಾಮಿತ್ರ (ಕನ್ನಡ ವಿಭಾಗದ ಮುಖ್ಯಸ್ಥರು),
ಜಿ. ಅಶ್ವತ್ಥನಾರಾಯಣ (ನಿರೂಪಣೆ)





ಬೆಂಗಳೂರು ಮಹಾರಾಣಿ ಕಲಾ ಕಾಲೇಜಿನ ಕನ್ನಡ ಸಂಘದ
ವಾರ್ಷಿಕ ಸಮಾರಂಭ 10.3.1983
ಕನ್ನಡ ರೀಡರ್ ಆಗಿ ಬಡ್ತಿಹೊಂದಿದ, ಕನ್ನಡ ಸಂಘದ ಸಂಚಾಲಕ
ಶ್ರೀ ಜಿ.ಅಶ್ವತ್ಥನಾರಾಯಣ ಅವರಿಗೆ ಕನ್ನಡ ಸಂಘದ ಪರವಾಗಿ
ಮುಖ್ಯ ಅತಿಥಿ ಪುತಿನ ಅವರು ಗ್ರಂಥ ಕಾಣಿಕೆ ಅರ್ಪಿಸುತ್ತಿರುವುದು

ಕೊಳ್ಳೆಗಾಲದ ಶ್ರೀಮಹದೇಶ್ವರಸ್ವಾಮಿ ಕಾಲೇಜಿನ
ಕರ್ನಾಟಕ ಸಂಘದ ಸಮಿತಿ
ಪ್ರೊ.ಜಿ. ಅಶ್ವತ್ಥನಾರಾಯಣ (ಕರ್ನಾಟಕ ಸಂಘದ ಅಧ್ಯಕ್ಷರು)
ಸುಬ್ರಹ್ಮಣ್ಯಂ (ಪ್ರಿನ್ಸಿಪಾಲರು ಸಂಘದ ಪೋಷಕರು) ಮತ್ತು
ಸದಸ್ಯರು ಶ್ರೀಮತಿ ಶೋಭಾ, ಸಿದ್ಧರಾಜು, ಬಸವರಾಜು ಅಧ್ಯಾಪಕರು.
07.03.1984



ಕಾರ್ಯಕ್ರಮಗಳು




ವಿವಿ ಪುರಂನಲ್ಲಿ ರಾಮೋತ್ಸವದಲ್ಲಿ ಉಪನ್ಯಾಸ






ಅನಾಜಿಗೆ 60 ವರ್ಷದ ಷೇರುದಾರನೆಂದು ಸನ್ಮಾನ



ಬಿ.ಎಂ ಶ್ರೀ ಗೆ ನಮನ



ಡಾ. ಎಸ್. ರಂಗನಾಥ್ ಅವರ ಕರ್ನಾಟಕದಶತಾಯುಷಿಗಳು ಗ್ರಂಥದ ಬಿಡುಗಡೆ ಸಮಾರಂಭದಲ್ಲಿ ಟಿ.ವಿ.ವೆಂ ಅವರಿಗೆ ಗೌರವಾರ್ಪಣೆ ಅನಾಜಿ, ಟಿ.ವಿ.ವೆಂಶಾಸ್ತ್ರಿ, ಮಹೇಶ್ ಜೋಶಿ ಇದ್ದಾರೆ



ಕವಿ ದೊಡ್ಡರಂಗೇಗೌಡರಿಂದ ದೀಪೋಜ್ವಲನ ಕಾರ್ಯಕ್ರಮ
ಉದಯಭಾನು ಕಲಾ ಸಂಘದ ಕಾರ್ಯಕ್ರಮ

ಕಾರ್ಯಕ್ರಮಗಳು



ವೆಂಕಟರಮಣಯ್ಯನವರು ಸಜ್ಜನರಾವ್ ಸರ್ಕಲ್‌ನಲ್ಲಿ ಏರ್ಪಡಿಸಿದ
ಧ್ವಜಾರೋಹಣ ಸಮಾರಂಭದ ಚಿತ್ರ ಧ್ವಜಕಂಬದಬಳಿ
ವೆಂಕಟರಮಣಯ್ಯನವರೊಂದಿಗೆ ಅನಾಜಿ ಇದ್ದಾರೆ.



ನಟ ಶ್ರೀಧರ್ ಸನ್ಮಾನ ಸಮಾರಂಭ



ಗೋಪಣ್ಣ ವಿರಚಿತ ದಾರಿದೀಪ ಪುಸ್ತಕಬಿಡುಗಡೆ ಸಮಾರಂಭ
ಎಡದಿಂದಿಂದ ಬಲಕ್ಕೆ : ಗೋಪಣ್ಣ, ಅನಾಜಿ, ಸಾಶಿಮರುಳಯ್ಯ (ಸಾಹಿತಿ),
ಮಂಗಲಾಪ್ರಿಯದರ್ಶಿನಿ (ಲೇಖಕಿ), ಹೆಚ್.ಎಸ್ ಶೈಲಜಾ (ಗೋಪಣ್ಣನವರ ಪತ್ನಿ)




ವ್ಯವಸ್ಥಾಪಕ ಅನಾಜಿಗೆ ಅನಕೃಪುತ್ರ ಗೌತಮರಿಂದ ಗೌರವಾರ್ಪಣೆ



ನಿಟ್ಟೂರು ಗ್ರಂಥ ರಚನೆಗೆ ಸಂದರ್ಶನ ಸಮಿತಿ
ಅನಾಜಿ ಹೆಚ್.ಕೆ.ರಂಗನಾಥ್, ಪ್ರಾಣೇಶ್, ಎಂ.ಎಚ್. ಕೃಷ್ಣಯ್ಯ



ಪರಿಷತ್ತಿನ ಅಧ್ಯಕ್ಷರಿಂದ ಅನಾಜಿ ರಚಿತ
ಕನ್ನಡ ಸಾಹಿತ್ಯ ಪರಿಷತ್ತು –100 ಬಿಡುಗಡೆ



ಅನಾಜಿ ಅವರನ್ನು ಕುರಿತು...

"ಪ್ರೊ. ಜಿ. ಅಶ್ವತ್ಥನಾರಾಯಣ ಅವರೊಂದಿಗೆ
ಕಳೆದ ಸಮಯವು ನನ್ನ ಬದುಕಿನಲ್ಲಿ ಸಾಧಕರ ಕ್ಷಣಗಳಷ್ಟೇ
ಅಲ್ಲದೆ ನನಗದು ಧನ್ಯತೆಯನ್ನಿತ್ತಿದೆ"

- ಪೂಜ್ಯ ಸ್ವಾಮಿ ವೀರೇಶಾನಂದ ಸರಸ್ವತಿ

"ಜಿ. ಅಶ್ವತ್ಥನಾರಾಯಣ ಅವರ ಸಂಶೋಧನಾ ಪ್ರವೃತ್ತಿ ನನಗೆ ಬಹಳ
ಮೆಚ್ಚುಗೆಯಾದುದು. ಯಾವುದೇ ವಿಷಯವನ್ನು ಕೈಗೆತ್ತಿಕೊಂಡರೂ
ಅದರ ಆಳ ಅಗಲಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸುವ
ಅವರ ಶೈಲಿ ವಿಶಿಷ್ಟವಾದುದು."

- ನಾಡೋಜ ಡಾ. ಪ್ರದೇ ಪಿ. ಕೃಷ್ಣ.

"ತನ್ನ ಸಂಪರ್ಕಕ್ಕೆ ಬಂದವರ ಜ್ಞಾನವನ್ನು ಹೆಚ್ಚಿಸುವ ಮಹತ್ತರವಾದ
ಗುಣ ಅವನಲ್ಲಿದೆ. ಈ ಗುಣವನ್ನು ನಾನು ಬೇರಾರಲ್ಲೂ ಕಂಡಿಲ್ಲ"

- ಅ. ರಾ. ಮಿತ್ರ

"ಅನಾಜಿ ಅವರ ಕಾಯಕ ಬತ್ತದೆ ನಿರಂತರವಾಗಿ ಇದುವರೆಗೂ
ಉಳಿದಿರುವುದಕ್ಕೆ ಅವರ ಅಧ್ಯಯನದ ತನ್ಮಯತೆ ಮುಖ್ಯ ಕಾರಣ"

- ಹಂಪನಾ

"ಭಗವಂತ ಸರ್ವಾಂತರ್ಯಾಮಿಯಾಗಿ ನಮ್ಮ ಮನೆಯಲ್ಲಿ ಗ್ರಂಥ ಸರಸ್ವತಿ
ರೂಪದಲ್ಲಿದ್ದಾನೆ. ಅಡಿಗೆಮನೆ, ಸ್ನಾನದ ಮನೆಯೊಂದನ್ನು
ಉಳಿದು ಎಲ್ಲ ಕಡೆ ವ್ಯಾಪಿಸಿದ್ದಾನೆ"

- ಎಂ. ಆರ್. ಲಕ್ಷ್ಮೀದೇವಿ.

"ಬಿಂಕ-ಬಿಗುಮಾನಗಳ ಬಿಸಿಯೆ ಸೋಕದ ತಂಪು ಕೊಂಕು
ಕೊಸರಾಟವಿಲ್ಲದ ಕಾಳಜಿ ತನ್ನದೆಂಬುವ ಹಮ್ಮುಬಿಮ್ಮುಗಳ
ಕಹಳೆಯ ಎಂದಿಗೂ ಊದದ ಸಹೃದಯ ಶ್ರೋತೃ"

- ಶತಾವಧಾನಿ ಡಾ. ಆರ್. ಗಣೇಶ್.

"ನವೋದಯ ಕಾಲದ ವಿದ್ವಾಂಸರು ಹೇಗಿರುತ್ತಿದ್ದರು ಎಂಬ ಕಲ್ಪನೆ
ಮಾಡಬೇಕಾದರೆ ಜಿ. ಅಶ್ವತ್ಥನಾರಾಯಣರ ಸಹವಾಸ ಮಾಡಿದರೆ ಸಾಕು"

- ಜಿ. ಬಿ. ಹರೀಶ್.

ಪ್ರಕಾಶಕರು
ಪ್ರೊ. ಜಿ. ಅಶ್ವತ್ಥನಾರಾಯಣ ಅಭಿನಂದನಾ ಸಮಿತಿ, ಬೆಂಗಳೂರು